ಮಾನ್ಯತಾ ಸಂಸ್ಥೆ
ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್
ಬೇಂದ್ರೆಭವನ. ಸಾಧನಕೇರಿ. ಧಾರವಾಡ

ಪಾ.ವೆಂ.ಆಚಾರ್ಯರ ಬದುಕು ಬರೆಹ - ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕಿ
ಸರ್ವಮಂಗಳಾ ಪಿ.ಆರ್.

ಮಾರ್ಗದರ್ಶಕರು
ಡಾ. ಶ್ಯಾಮಸುಂದರ ಬಿದರಕುಂದಿ
ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್
ಬೇಂದ್ರೆಭವನ. ಸಾಧನಕೇರಿ. ಧಾರವಾಡ

ಕನ್ನಡ ವಿಶ್ವವಿದ್ಯಾಲಯ
ಹಂಪಿ. ವಿದ್ಯಾರಣ್ಯ-೫೮೩೨೭೬
೨೦೧೪

ಮಾನ್ಯತಾ ಸಂಸ್ಥೆ

ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್

ಬೇಂದ್ರೆಭವನ, ಸಾಧನಕೇರಿ, ಧಾರವಾಡ

ಪಾ.ವೆಂ.ಆಚಾರ್ಯರ ಬದುಕು ಬರೆಹ – ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕಿ

ಸರ್ವಮಂಗಳಾ ಪಿ.ಆರ್.

ಮಾರ್ಗದರ್ಶಕರು

ಡಾ. ಶ್ಯಾಮಸುಂದರ ಬಿದರಕುಂದಿ
ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್
ಬೇಂದ್ರೆಭವನ, ಸಾಧನಕೇರಿ, ಧಾರವಾಡ

ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ–೫೮೩೨೭೬
೨೦೧೪

ಪ್ರಮಾಣ ಪತ್ರ

ಸರ್ವಮಂಗಳಾ ಪಿ.ಆರ್. ಇವರು ನನ್ನ ಮಾರ್ಗದರ್ಶನದಲ್ಲಿ **ಪಾ.ವೆಂ. ಆಚಾರ್ಯರ ಬದುಕು ಬರೆಹ ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಪ್ರಸ್ತುತ ಮಹಾಪ್ರಬಂಧವನ್ನು ಪಿ.ಹೆಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದು, ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಸಾಧನಕೇರಿ, ಧಾರವಾಡ ಮಾನ್ಯತಾ ಸಂಸ್ಥೆಯ ಮೂಲಕ ಹಂಪೆ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧ ಮೂಲ ಸಂಶೋಧನ ಕೃತಿಯಾಗಿದ್ದು ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ಶ್ಯಾಮಸುಂದರ ಬಿದರಕುಂದಿ)
ಅಧ್ಯಕ್ಷರು,
ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್,
ಸಾಧನಕೇರಿ, ಧಾರವಾಡ.

ಸ್ಥಳ: ಧಾರವಾಡ
ದಿನಾಂಕ: ೧.೧೦.೨೦೧೪

ಘೋಷಣಾ ಪತ್ರ

ಪಾ.ವೆಂ. ಆಚಾರ್ಯರ ಬದುಕು ಬರೆಹ ಒಂದು ಅಧ್ಯಯನ ಎಂಬ ಶೀರ್ಷಿಕೆಯ ಪ್ರಸ್ತುತ ಮಹಾಪ್ರಬಂಧವನ್ನು ಪಿ.ಹೆಚ್.ಡಿ. ಪದವಿಗಾಗಿ ಡಾ.ಶ್ಯಾಮಸುಂದರ ಬಿದರಕುಂದಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಸಾಧನಕೇರಿ, ಧಾರವಾಡ ಮಾನ್ಯತಾ ಸಂಸ್ಥೆಯ ಮೂಲಕ ಹಂಪೆ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ.


ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

ಸರ್ವಮಂಗಳ

(ಸರ್ವಮಂಗಳಾ ಪಿ.ಆರ್.)

ಸ್ಥಳ: ಧಾರವಾಡ

ದಿನಾಂಕ: ೮.೧೦.೨೦೧೪



ಪಾಡಿಗಾರು ವೆಂಕಟರಮಣ ಆಚಾರ್ಯ

ಜನನ: ೬-೨-೧೯೧೫ ಮರಣ: ೫-೫-೧೯೯೨

ಪರಿವಿಡಿ

ಅಧ್ಯಾಯ-೧

ಭೂಮಿಕೆ: ಅಧ್ಯಯನದ ಅವಶ್ಯಕತೆ, ವ್ಯಾಪ್ತಿ, ವಿಧಾನ ಮತ್ತು ಸಮೀಕ್ಷೆ

ಕವಿ ಪಾ.ವೆಂ., ಪಾ.ವೆಂ.ಆಚಾರ್ಯ (ಪಿ.ವಿ. ಆಚಾರ್ಯ), ಕಸ್ತೂರಿಯ ಆಚಾರ್ಯ ಎಂಬ ಹೆಸರುಗಳಿಂದ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ೫-೬ ಮತ್ತು ೭ನೇಯ ದಶಕದಲ್ಲಿ ಪ್ರಸಿದ್ಧಿ ಪಡೆದ ಪಾಡಿಗಾರು ವೆಂಕಟರಮಣ ಆಚಾರ್ಯ (೧೯೧೫-೧೯೯೨) ಒಬ್ಬ ಪ್ರೌಢ ಲೇಖಕ, ಕವಿ ಮತ್ತು ಮುಖ್ಯವಾಗಿ ಬಹುಶ್ರುತತ್ವದ ಪತ್ರಕರ್ತನಾಗಿ ೫೦-೮೦ನೆಯ ದಶಕಗಳಲ್ಲಿ ಮಾಡಿದ ಸಾಧನೆ ಉಲ್ಲೇಖಾರ್ಹವಾಗಿದೆ. ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಮೆಟ್ರಿಕ್‌ವರೆಗೆ ಮಾತ್ರ ಶಿಕ್ಷಣ ಪಡೆದಿದ್ದ ಇವರು ತಮ್ಮ ಉದ್ಯೋಗ ಜೀವನದ ಮೊದಲ ಭಾಗದಲ್ಲಿ ಲೆಕ್ಕಿಗನಾಗಿ, ಕಾರಕೂನನಾಗಿ, ಹೋಟೆಲ್ ಬಿಲ್‌ರೈಟರ್‌ನಾಗಿ ಕೆಲಸಗಳನ್ನು ಅವಲಂಬಿಸಬೇಕಾಯಿತು. ಪರಕೀಯರ ವಿರುದ್ಧ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಜರುಗುತ್ತಿದ್ದುದಲ್ಲದೇ, ಜಗತ್ತಿನಾದ್ಯಂತ ಅಶಾಂತತೆ, ಅವ್ಯವಸ್ಥೆ ತಲೆದೋರಿದ್ದ ೩೦-೪೦ರ ದಶಕಗಳಲ್ಲಿ ಯಾವುದೇ ಪ್ರತಿಭಾವಂತ ವ್ಯಕ್ತಿ ಸ್ವತಂತ್ರವಾಗಿ ಬೆಳೆಯುವುದು ಕಠಿಣವಿತ್ತು. ಉಡುಪಿಯ ಧಾರ್ಮಿಕ, ಸಾಂಪ್ರದಾಯಿಕ ಪರಿಸರದಲ್ಲಿ ಇವರು ತಾರುಣ್ಯದ ಕಾಲವನ್ನು ಸಂಸ್ಕೃತ, ಇಂಗ್ಲೀಷ್ ಗ್ರಂಥಗಳನ್ನು ಓದುವ, ಮನನ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಸಿಕೊಳ್ಳುತ್ತ, ಲೇಖಕನಾಗಿಯೇ ಬದುಕುವ ಹಂಬಲವನ್ನು ಇಟ್ಟುಕೊಂಡರು. ಅಂದರೆ ತಮಗೆ ಅನಾಯಾಸವಾಗಿ ಸಿಗುವಂತಿದ್ದ ಪೌರೋಹಿತ್ಯವೃತ್ತಿಯಿಂದ ವಿಮುಖರಾಗಿ ಆಧುನಿಕ ಚಲನಶೀಲ ಮನೋವೃತ್ತಿಯನ್ನು ಪಾ.ವೆಂ. ಬೆಳೆಸಿಕೊಂಡರು. ಇವರ ಸ್ವಾಧ್ಯಾಯ ಪ್ರಯತ್ನಗಳ ಫಲವಾಗಿ ಲೇಖಕ ಮತ್ತು ಕವಿಯಾಗಿ ಆಗಿನ **ನವಯುಗ, ಸುಬೋಧಿನಿ, ಕೃಷ್ಣಸೂಕ್ತಿ, ರಾಷ್ಟ್ರಬಂಧು ಕಂಠೀರವ, ನವಶಕ್ತಿ, ನವಯುಗ, ಅಂತರಂಗ, ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ, ಧುರೀಣ** ಪತ್ರಿಕೆಗಳಿಗಾಗಿ ಬರೆಯಲಾರಂಭಿಸಿ ಅವು ಕ್ರಮೇಣ ಪ್ರಕಟವಾದಂತೆ ಇವರಲ್ಲಿ ತನ್ನದು ಸಾಹಿತ್ಯ ಜೀವನಮಾರ್ಗ ಎಂಬುದು ಮನದಟ್ಟಾಯಿತು.

ಪಾ.ವೆಂ. ಅವರು ಸಾಹಿತ್ಯ ರಚನೆಯೊಂದನ್ನು ಅಲಂಬಿಸಿ ತಮ್ಮ ಸಂಸಾರರಥ ಎಳೆಯುವಂತಿರಲಿಲ್ಲ. ಮುಂದೆ ೧೯೪೭ರಲ್ಲಿ ಹುಬ್ಬಳ್ಳಿಗೆ ಬಂದು **ಲೋಕಶಿಕ್ಷಣ ಟ್ರಸ್ಟ್‌ನ ಸಂಯುಕ್ತ ಕರ್ನಾಟಕ** ಪತ್ರಿಕೆಗೆ ಸೇರಿದಾಗ ಇವರ ಬರೆಹವ್ಯವಸಾಯಕ್ಕೆ ಸರಿಯಾದ ನೆಲೆ ಸಿಕ್ಕಿತು. ಪತ್ರಿಕೆಯ ಮುದ್ರಣಾಲಯದ ವ್ಯವಸ್ಥಾಪಕ ಹುದ್ದೆಯಲ್ಲಿ ಇದ್ದರೂ ಇವರ

ಓದು, ಬರಹಗಳು ಹವ್ಯಾಸವಾಗಿ ಮುಂದುವರಿದವು. ಸ್ವಾಧ್ಯಾಯ ಬೆಳೆಯಿತು. ಪಾ.ವೆಂ ಅವರಿಗೆ ಬಹುಭಾಷಾ ಪರಿಣತಿ ಮತ್ತು ಸಂಸ್ಕೃತ ನುಡಿಯು ಮನೋಗತ ತಂದೆಯವರಿಂದಾಗಿ ಮನೆಯಿಂದಲೇ ಕರಗತವಾಗಿತ್ತು. ಇಂಗ್ಲೀಷ್‌ನ ವ್ಯಾಪಕ ಓದಿನಿಂದ ಇವರ ಚಿಂತನ ಪ್ರವೃತ್ತಿಗೆ ಹೊಸ ಚಾಲನೆ ದೊರಕಿತು. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾದ ಪರೀಕ್ಷೆಗಳನ್ನು ಪಾಸಾಗಿದ್ದರಿಂದ **ರಾಷ್ಟ್ರಭಾಷಾ** ಪ್ರವೀಣರಾದರು. ಬಂಗಾಳಿಯನ್ನು ಸ್ವತಃ ಓದಿ ಕಲಿತರು. ಇವೆಲ್ಲ ಭಾಷೆಯ ಕೃತಿಗಳನ್ನು ಓದುವ ಇವರ ಹವ್ಯಾಸ ವ್ಯಾಪಕವಾಗಿತ್ತು; ಆಳವೂ–ಎತ್ತರದ್ದೂ ಆಗಿತ್ತು. ಹೀಗೆ ಪುಸ್ತಕಗಳಿಂದ ಸಾಹಿತ್ಯ ಜ್ಞಾನ, ಭಾಷಾಜ್ಞಾನ ಮತ್ತು ಸಾಮಾಜಿಕ–ರಾಜಕೀಯ ಜ್ಞಾನಗಳನ್ನು ಸಂಗ್ರಹಿಸುತ್ತಾ ಪಾ.ವೆಂ ಒಬ್ಬ ಸ್ವಯಂ ಸಂಪನ್ಮೂಲ ವ್ಯಕ್ತಿಯಾಗಿ ಬೆಳೆದರು. ತನ್ನ ವ್ಯಕ್ತಿನಾಮವನ್ನೂ ಸೂಚಿಸದೆ ಅವರು **ಸಂಯುಕ್ತ ಕರ್ನಾಟಕ, ಕರ್ಮವೀರ**ಗಳಿಗೆ ಬರೆದುದು ನಾನಾ ನಮೂನೆಯ ಅಸಂಖ್ಯ ಲೇಖನಗಳನ್ನು. ಯಾವುದೇ ಸಂಚಿಕೆಯ ವಿಶೇಷ ಪುರವಣಿ ಹೊರತರುವ ಸಂದರ್ಭವಿದ್ದಾಗ ಅದು ಪಿ.ವಿ. ಆಚಾರ್ಯರ ಹೊಣೆ ಎಂಬುದು ಸಂಪಾದಕ ಮಂಡಳಿಯಲ್ಲಿ ಪ್ರಚಲಿತವಿತ್ತು. ಸ್ವಭಾವದಿಂದ ಮೌನಿ ಆಚಾರ್ಯರು ಹೆಸರು, ಪ್ರಸಿದ್ಧ ಪ್ರತಿಫಲಗಳ ಆಸೆಯನ್ನೂ ನೀಗಿಕೊಂಡಿದ್ದರು. ಅವರನ್ನು ಗೌರವದಿಂದಲೊ ಸಲುಗೆಯಿಂದಲೊ ಪತ್ರಿಕಾಲಯದ ಹಿರಿಯರು, ಕಿರಿಯರು, ಸರ್ವಜ್ಞಾಚಾರ್ಯ ಎಂದೇ ಎನ್ನುತ್ತಿದ್ದರು. ಇದಕ್ಕೆ ಅವರು ನಿರ್ಲಿಪ್ತರಾಗಿ ಪ್ರತಿಕ್ರಿಯಿಸುತ್ತಾ ತಮ್ಮ ಪತ್ರಿಕಾ ವ್ಯವಸಾಯವನ್ನು ನಿಷ್ಕಾಮಕರ್ಮ ಎಂಬಂತೆ ನಡೆಸುತ್ತಿದ್ದರು. ಆಚಾರ್ಯರ ಈ ಅಪ್ರಸಿದ್ಧ ಸಾಧನೆಗೆ ಪೂರಕ ಎಂಬಂತೆ ೧೯೫೬ರಲ್ಲಿ ಲೋಕಶಿಕ್ಷಣಟ್ರಸ್ಟ್ ಕಸ್ತೂರಿ ಡೈಜೆಸ್ಟ್‌ನ್ನು ಹೊರತರುವಾಗ ಪಿ.ವಿ. ಆಚಾರ್ಯರನ್ನು ಸಹಸಂಪಾದಕರೆಂದು ನೇಮಿಸಿತು. ಆಚಾರ್ಯರಿಗೆ ಈ ಹೊಣೆ ಎಷ್ಟೂ ಹೊರೆಯಾಗದೆ ಒಂದು ಹೂ ಎತ್ತಿದಂತೆ ಅದನ್ನು ಲೀಲಾಜಾಲವಾಗಿ ನಿರ್ವಹಿಸಿದರು. ಆ ಮುಂದಿನ ೧೮ ವರ್ಷಗಳ ತನಕ ಹೆಸರಿಗೆ ಅದೇ ಹುದ್ದೆಯಲ್ಲಿ ಕೆಲಸ ಮಾಡಿದರಾದರೂ ವಾಸ್ತವವಾಗಿ ಅವರು **ಕಸ್ತೂರಿ**ಯ ಸರ್ವಸಂಪಾದಕನ ಹೊಣೆಯನ್ನೆ ನಿರ್ವಹಿಸಿದರು. ಇದು ಆಚಾರ್ಯರ ವ್ಯಕ್ತಿ ಮತ್ತು ವ್ಯಕ್ತಿ ಜೀವನದ ಮಹತ್ವದ ಕಾಲ. ಅವರು **ಕಸ್ತೂರಿ ಆಚಾರ್ಯ** ಎಂದು ಅನ್ವರ್ಥಕ ನಾಮದಿಂದ ಪ್ರಸಿದ್ಧರಾದುದು ಅವರ ಅಸಾಧಾರಣ ಬೌದ್ಧಿಕಶ್ರಮ, ಸಮಯಪ್ರಜ್ಞೆ ಮತ್ತು ವೈಯಕ್ತಿಕ ಸಾಧನೆಗಳಿಂದ. ಕರ್ನಾಟಕದ ಪತ್ರಿಕೋದ್ಯಮದಲ್ಲಿ ಕಸ್ತೂರಿ ಒಂದು ಅಪೂರ್ವ ಡೈಜೆಸ್ಟ್ ಆಗಿ ಪಡೆದ ಜನಪ್ರಿಯತೆ, ಉಳಿಸಿಕೊಂಡ ಮೇಲ್ಮಟ್ಟದ ಗುಣಶೀಲತೆ ಇಂದಿಗೂ ಒಂದು ದಾಖಲೆ. ಅದನ್ನು ಆ ಮಟ್ಟದಲ್ಲಿ ಉಳಿಸಿ ಬೆಳೆಸುವ ಸಂಕಲ್ಪ ಮತ್ತು ಸಿದ್ಧಿ ಪಾ.ವೆಂ ಅವರ ಜೀವನದ ಸಾರ್ಥಕತೆಯ ಭಾಗವಾಗಿದೆ. ಅವರ ಈ ಸಾಧನೆಯ ಬಗ್ಗೆ ಬೇರೆ ಬೇರೆ ನಿಟ್ಟಿನಿಂದ ವಿವರಿಸಿ ಹೇಳುವುದು ನನ್ನ ಈ ಅಧ್ಯಯನದ ಮುಖ್ಯ ಗುರಿ.

ಪಾ.ವೆಂ ಆಚಾರ್ಯರು ಪತ್ರಿಕೋದ್ಯೋಗಕ್ಕೆಂದೇ ಹುಟ್ಟಿದ ಲೇಖಕರು. ದಿನಪತ್ರಿಕೆ, ವಾರಪತ್ರಿಕೆ ಮತ್ತು ಕಸ್ತೂರಿಗಳಿಗಾಗಿ ಅವರು ಬರೆದ ಲೇಖನಗಳು ಸಾಂದರ್ಭಿಕವೂ ಆಗಿವೆ, ಸ್ವತಂತ್ರವೂ ಆಗಿವೆ. ಅವರ ಗದ್ಯ ಸಾಹಿತ್ಯ ರಚನೆ **ರಷ್ಯಾದ ರಾಜ್ಯಕ್ರಾಂತಿ** ಎಂಬ ಪುಸ್ತಕದಿಂದ ಆರಂಭವಾಯಿತು. ಮೂಲತಃ ಕವಿ ಹೃದಯದ ಅವರು ಕಾವ್ಯ, ಕಥೆಗಳನ್ನೂ ಬರೆದಿದ್ದಾರೆ. ವಿಮರ್ಶೆ, ಚಿಂತನ, ಪ್ರಬಂಧಗಳನ್ನೂ ರಚಿಸಿದ್ದಾರೆ. ಸ್ವಭಾವತಃ ಹಾಸ್ಯಪ್ರಜ್ಞೆಯ ಅವರು ವ್ಯಂಗ್ಯ-ವಿಡಂಬನ ನೋಟದ ಹರಟೆ-ನಗೆ ಲೇಖನಗಳನ್ನು ನೂರಾರು ಬರೆದಿದ್ದಾರೆ. ಈ ವಿಷಯದಲ್ಲಿ ಅವರು **ಲಾಂಗೂಲಾಚಾರ್ಯ**ರಾಗಿ ಓದುಗ ವರ್ಗಕ್ಕೆ ಪ್ರಿಯರೂ ಆಗಿದ್ದಾರೆ. ಅವರ ಬರಹಗಳು ಕನ್ನಡಕ್ಕೆ ವಿಶೇಷ ಮತ್ತು ವೈವಿಧ್ಯಮಯ ವಸ್ತು, ವಿಚಾರಶೈಲಿಯನ್ನು ಕೊಟ್ಟಿವೆ. ಅವರ ಈ ಸ್ವತಂತ್ರ ಸಾಹಿತ್ಯ ಅವರ ಪ್ರತಿಭೆ-ಪರಿಶ್ರಮಗಳ ಬರೆಹಗಾರನ **ಸವ್ಯಸಾಚಿತ್ವವನ್ನು** ಪ್ರಕಟಪಡಿಸುವಂತಿವೆ.

ಪಾ.ವೆಂ. ಅವರು ಅನುಭವದಿಂದ ಭಾಷಾತಜ್ಞರೂ ಆಗಿದ್ದಾರೆ. ಸ್ವಾತಂತ್ರ್ಯಪೂರ್ವದ ನವೋದಯ ಸಂಪ್ರದಾಯ, ರಾಷ್ಟ್ರೀಯ ಚಳವಳಿಕಾರರ ಪ್ರಗತಿಶೀಲ ಸಾಹಿತ್ಯ, ಸ್ವಾತಂತ್ರ್ಯೋತ್ತರದ ನವ್ಯಸಾಹಿತ್ಯ ಹಾಗೂ ಅದನ್ನು ಅನುಸರಿಸಿ ಬಂದ ಸಾಮಾಜಿಕ ಪ್ರಜ್ಞೆಯ ಬಂಡಾಯ-ದಲಿತ ಸಾಹಿತ್ಯ ಪ್ರವೃತ್ತಿಗಳೊಂದಿಗೆ ಪಾ.ವೆಂ. ಅವರದು ನಿಕಟ ಸಂಬಂಧ. ಅವರ ದೇಹಕ್ಕೆ ವಯಸ್ಸು ಆಗುತ್ತಿತ್ತೇ ಹೊರತು ಅವರ ಮನಸ್ಸು ಎಂದೂ ಮುದಿಯಾಗಲಿಲ್ಲ; ವಿಚಾರವಂತಿಕೆಯಂತೂ ಜಡವಾಗಲಿಲ್ಲ. ಸಾವಿನ ಹಿಂದಿನ ದಿನದವರೆಗೂ ಪತ್ರಿಕೆಗಳಿಗಾಗಿ ಬರೆಯುತ್ತಿದ್ದರು. ಅವರ ಈ ಸಾಹಿತ್ಯದ ಸಾಧನೆಯನ್ನು ಪ್ರಜ್ಞಾವಂತರ ವಲಯ ವಿರಳವಾಗಿ ಗುರುತಿಸಿದೆ; ಸಾಂದರ್ಭಿಕವಾಗಿ ಮನ್ನಿಸಿದೆ. ಅವರಿಗೆ ಕೊನೆಗಾಲದಲ್ಲಿ ರಾಷ್ಟ್ರಮಟ್ಟದ ಪ್ರತಿಷ್ಠಿತ **ಗೊಯೆಂಕ ಪ್ರಶಸ್ತಿ** (೧೯೯೨) ಬಂದದ್ದು ಒಂದು ಔಚಿತ್ತ್ಯಪೂರ್ಣ ಮನ್ನಣೆಗಳಲ್ಲಿ ಒಂದು.

ಪಾ.ವೆಂ. ಅಂಥ ಮೌಲಿಕ ಬರಹಗಾರನ ಬಗ್ಗೆ ಇಡಿಯಾಗಿ ಅಧ್ಯಯನ ಮಾಡುವುದು ಮತ್ತು ಅವರ ಮಹತ್ವವನ್ನು ಸಾಹಿತ್ಯ-ಸಂಸ್ಕೃತಿಯ ಸಂದರ್ಭದಲ್ಲಿ ಗುರುತಿಸುವುದು ನನ್ನ ಮಹಾಪ್ರಬಂಧದ ಉದ್ದೇಶ. ಪಾ.ವೆಂ. ಎಂಬ ವ್ಯಕ್ತಿ ಮತ್ತು ಲೇಖಕನು, ತಾನೊಂದು ಅನ್ಯೋನ್ಯವಾದ ಘಟಕವೆಂದು ಗುರುತಿಸಿಕೊಳ್ಳುತ್ತ ಇಪ್ಪತ್ತನೆಯ ಶತಮಾನದ ಕನ್ನಡ ಪತ್ರಿಕಾಸಾಹಿತ್ಯದ ನಿರ್ಮಾಣದಲ್ಲಿ ತೊಡಗಿ ತನ್ನ ಹೆಜ್ಜೆ ಗುರುತುಗಳನ್ನು ತೋರಿಸಿ ಕನ್ನಡವನ್ನು ಧನ್ಯಗೊಳಿಸಿದ್ದಾನೆ. ಕನ್ನಡದ ಪ್ರಮುಖ ಪತ್ರಿಕಾ ಭಾಷೆಗೆ ಪಾವೆಂ ಅವರು ಕೊಟ್ಟಿರುವ ಹೊಸತನ ಮತ್ತು ಸಮರ್ಪಕತೆ ಅಭ್ಯಸನೀಯವಾದ ಅಂಶವಾಗಿದೆ. ಹೊಸಗನ್ನಡದ ಪತ್ರಿಕಾ ರೂಪಶಿಲ್ಪಿಗಳಲ್ಲಿ ಇವರು ನಮಗೆ ಪ್ರಮುಖರಾಗಿ ಕಾಣುತ್ತಾರೆ. ಇವರ ಜೀವನ ಮತ್ತು ವ್ಯಕ್ತಿತ್ವ ಪರಸ್ಪರ ಉಲ್ಲೇಖನೀಯವಾಗಿದೆ ಎಂಬುದೇ ನನ್ನ ಈ ಅಧ್ಯಯನ ಪ್ರಬಂಧದ ವಸ್ತು-ಪ್ರತಿಪಾದನೆ.

ಪಾ.ವೆಂ ಆಚಾರ್ಯರ ೫ ದಶಕಗಳ (೧೯೪೨-೧೯೯೨) ಕೃತಿಗಳನ್ನು ಸ್ಥೂಲವಾಗಿ ಹೀಗೆ ವಿಭಾಗಿಸಬಹುದು.

ಅ) ಪಾವೆಂ ಸಾಹಿತ್ಯದ ವ್ಯಾಪ್ತಿ

೧) ಗದ್ಯ ಸಾಹಿತ್ಯ, ೨) ಕಥಾ ಸಾಹಿತ್ಯ

ಆ) ವಿಮರ್ಶೆ ಸಾಹಿತ್ಯ

ಇ) ಚಿಂತನಪರ/ವೈಚಾರಿಕ ಸಾಹಿತ್ಯ

ಈ) ವಿನೋದ ಸಾಹಿತ್ಯ

ಉ) ಚರಿತ್ರೆ ಮತ್ತು ವ್ಯಕ್ತಿಚಿತ್ರ (Penpectures)

ಊ) ವೈವಿಧ್ಯಮಯ ಸಾಂದರ್ಭಿಕ (ಪತ್ರಿಕಾ) ಸಾಹಿತ್ಯ

ಋ) ಅನುವಾದ ಕೃತಿಗಳು

೨) ಪದ್ಯ ಸಾಹಿತ್ಯ: ಮೂರು ಕನ್ನಡ ಕವನ ಸಂಕಲನಗಳು ಹಾಗೂ ಒಂದು ತುಳು ಕವನ ಸಂಕಲನ.

೩) ಪದಪರಂಪರೆ (wordlore) **ವಿವೇಚನಾ ಕೃತಿ:** ಇವು ಪುಸ್ತಕ ರೂಪದಲ್ಲಿಯ ಪ್ರಥಮ ಆವೃತ್ತಿಯ ಕೃತಿಗಳು. ಅವರ ಮರಣಾನಂತರ ಡಾ. ಶ್ರೀನಿವಾಸ ಹಾವನೂರರು ಪಾ.ವೆಂ. ಕೃತಿಗಳನ್ನು ತಮ್ಮದೆ ಆದ ರೀತಿಯಲ್ಲಿ ವಿಂಗಡಿಸಿ ಸಂಪಾದಿಸಿ ಮರುಮುದ್ರಣದ ರೂಪ ಕೊಟ್ಟರು. ಅವು ೧೨ ಪುಸ್ತಕಗಳಾಗಿವೆ.

೧) ಪಾ.ವೆಂ ಅವರ ಜೀವಿತಾವಧಿಯಲ್ಲಿ ಬಂದ ಕೃತಿಗಳು (೧೯೯೨) ರವರೆಗೆ

೧. ರಷ್ಯಾದ ರಾಜ್ಯ ಕ್ರಾಂತಿ	೧೯೪೩
೨. ವಾಸನಾ (ಬಂಗಾಳಿಕೃತಿಯ ಅನುವಾದ)	೧೯೫೦
೩. ನವನೀರದ (ಮೊದಲನೆಯ ಕವನ ಸಂಕಲನ)	೧೯೫೨
೪. ಪ್ರಹಾರ (ನಗೆಬರಹ)	೧೯೬೫
೫. ಸ್ವತಂತ್ರ ಭಾರತ (ಚಿಂತನ ಬರಹಗಳು)	೧೯೭೫
೬. ಲೋಕದ ಡೊಂಕು (ಹರಟೆಗಳು)	೧೯೭೬
೭. ವಿಪರೀತ (ನಗೆಬರಹಗಳು)	೧೯೭೭
೮. ಕೆಲವು ಪದ್ಯಗಳು (೨ನೆಯ ಕವನ ಸಂಕಲನ)	೧೯೭೮
೯. ಮಾನವ ಪ್ರವೃತ್ತಿ ಮತ್ತು ಮೌಲ್ಯಗಳು (ಚಿಂತನ ಬರಹ)	೧೯೮೦
೧೦. ಬಯ್ಯಮಲ್ಲಿಗೆ (ತುಳು ಕವನ ಸಂಕಲನ)	೧೯೮೧
೧೧. ಡಾ. ಪಾ.ವೆಂ. ಕಂಡಂತೆ ಶಂಬಾ (ವಿಚಾರ ವಿಶ್ಲೇಶಣೆ)	೧೯೮೫
೧೨. ಸುಭಾಷಿತ ಚಮತ್ಕಾರ (ಸಂಸ್ಕೃತದ ಅನುವಾದ)	೧೯೮೬
೧೩. ವಕ್ರದೃಷ್ಟಿ (ನಗೆಬರಹಗಳು)	೧೯೯೦
೧೪. ಪದಾರ್ಥ ಚಿಂತಾಮಣಿ (ಪದಪರಂಪರೆಯ ಅಧ್ಯಯನ)	೧೯೯೧
೧೫. ಮಂಜೂಷ (ರಾಜಕೀಯ ಚಿಂತನ)	೧೯೯೨

೨. ಪಾವೆಂ ಮರಣೋತ್ತರದಲ್ಲಿ ಡಾ. ಶ್ರೀನಿವಾಸ ಹಾವನೂರರ ಸಂಪಾದನೆಯಲ್ಲಿ ಬಂದ ಕೃತಿಗಳು:

೧.	ಪದಾರ್ಥ ಚಿಂತಾಮಣಿ (ಮರುಮುದ್ರಣ)	೧೯೯೮
೨.	ಆಯ್ದ ಲಲಿತ ಪ್ರಬಂಧಗಳು	೨೦೦೦
೩.	ಉಡುಪಿಯ ಪರಿಸರದಲ್ಲಿ ಪಾ.ವೆಂ. ಆಚಾರ್ಯರು	೨೦೦೧
೪.	ಆಯ್ದ ನಗೆಬರಹಗಳು	೨೦೦೨
೫.	ಇವರೇ ಲಾಂಗೂಲಾಚಾರ್ಯರು	೨೦೦೨
೬.	ಪಾ.ವೆಂ. ಕಂಡಂತೆ ಚಿತ್ರ ವಿಚಿತ್ರ ಜಗತ್ತು	೨೦೦೨
೭.	ಬ್ರಾಹ್ಮಣರೇನು ಮಾಡಬೇಕು ಹಾಗೂ ಇತರ ಚಿಂತನಪರ ಪ್ರಬಂಧಗಳು	೨೦೦೨
೮.	ವಿಜ್ಞಾನ ವಿಸ್ಮಯ	೨೦೦೨
೯.	ಓದುಗರೊಡನೆ ಹರಟೆಗಳು	೨೦೦೩
೧೦.	ಖ್ಯಾತಿವೆತ್ತ ಭಾರತೀಯರು	೨೦೦೩
೧೧.	ಜಗದ್ವಿಖ್ಯಾತರು	೨೦೦೩
೧೨.	ಹೊಸಗನ್ನಡದ ಹಿರಿಯರು	೨೦೦೩
೧೩.	ಬಯ್ಯಮಲ್ಲಿಗೆ (ತುಳು ಕವನಗಳು ಮರು ಮುದ್ರಣ)	೨೦೦೧
೧೪.	ಹಿಂದೂ ಮುಸ್ಲಿಂ ಮತ್ತು ಇತರ ಕತೆಗಳು	೨೦೦೨
೧೫.	ಹೌಸಿಂಗ್ ಕಾಲೊನಿ (ಸಮಸ್ತ ಪದ್ಯಗಳು ೧೯೫೨–೧೯೯೨)	೨೦೦೨

ಇನ್ನೊಂದು ವಿಶೇಷವೆಂದರೆ ಕಸ್ತೂರಿಯಲ್ಲಿ ಬಿಡಿ ಬಿಡಿಯಾಗಿ ಆಗಾಗ ಪ್ರಕಟಗೊಂಡ ಹಲವು ಮಹತ್ವದ ಮತ್ತು ಸಾಹಿತ್ಯ ಗುಣವುಳ್ಳ ಲೇಖನಗಳನ್ನು ಹಾವನೂರರು ಎತ್ತಿಕೊಂಡು ಪುಸ್ತಕರೂಪದಲ್ಲಿ ಅಳವಡಿಸಿದ್ದಾರೆ. ಹೀಗೆ ಪಾ.ವೆಂ ಸಾಹಿತ್ಯ ಹೆಚ್ಚು ಮಟ್ಟಿಗೆ ಸಮಗ್ರವಾಗಿ ಓದಲು ಮತ್ತು ಅಧ್ಯಯನ ಮಾಡಲು ಸಿದ್ಧಸಾಮಗ್ರಿಯಾಗಿ ದೊರಕುತ್ತಿದೆ. ಇವೆಲ್ಲವನ್ನು ಕೂಲಂಕುಶ ಗಮನಿಸಿ ಪಾ.ವೆಂ. ಸಾಹಿತ್ಯ ಸಾಧನೆಯನ್ನು ವಿಷಯಾನುಗುಣವಾಗಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಪಾ.ವೆಂ. ಅವರು ೧೯೯೨ರಲ್ಲಿ ತೀರಿಕೊಂಡರು; ಆದರೆ ಅವರ ಕೃತಿಗಳು, ಅವರ ಕುರಿತ ಸ್ಮೃತಿಗಳು ತೀರಿಕೊಳ್ಳುವಂಥವಲ್ಲ. ಅವುಗಳನ್ನು ಬಲ್ಲಿದರು ನೆನಪಿಟ್ಟು ಆಸಕ್ತಿವಹಿಸಿ ತಿಳಿಯುತ್ತಾರೆ, ಮತ್ತೆ ಮತ್ತೆ ಓದುತ್ತಾರೆ. ಇದರ ಜತೆಗೇ, ಪಾವೆಂ ಅವರು ತಮ್ಮ ಜೀವಿತವನ್ನು ಪತ್ರಿಕಾ ಸಾಹಿತ್ಯಕ್ಕೆ ಮೀಸಲಿಟ್ಟು ವೃತ್ತಿ ಜೀವನವನ್ನು ಕಟ್ಟಿಕೊಂಡ ಚರಿತೆಯು ಅವರ ಬರಹ ಜೀವನವನ್ನು ಅನುಪಮ ರೀತಿಯಲ್ಲಿ ಬೆಳೆಸಿದೆ; ಬೆಳಗಿದೆ. ಅವರ ಜೀವನದ ಈ ಅನುಬಂಧದ ಪರಿಯನ್ನು ಅಧ್ಯಯನಕ್ಕೆ ಒಳಪಡಿಸಿ ಪ್ರಬಂಧವನ್ನು ಸಾದರಪಡಿಸುತ್ತಿದ್ದೇನೆ. ಪಾ.ವೆಂ ಅವರ ಜೀವನ ಮತ್ತು ಸಾಹಿತ್ಯವನ್ನು ಸಮಗ್ರವಾಗಿ

ಅಧ್ಯಯನಕ್ಕೆ ಆರಿಸಿಕೊಂಡು ನಾನು ಮಹಾಪ್ರಬಂಧವನ್ನು ರಚಿಸಲು ಅನುಸರಿಸಿದ ವಿಧಾನ ಹೀಗಿದೆ.

ಪಾ.ವೆಂ. ಅವರನ್ನು ಕಾಣುವ, ಮಾತಾಡಿಸುವ ಅವಕಾಶ ನನಗೆಂದೂ ಬರಲಿಲ್ಲ. ಹೀಗಾಗಿ ಅವರ ಜೀವನ ಕುರಿತು ನಾನು ಅವರನ್ನು ಬಲ್ಲ ನಿಕಟವರ್ತಿಗಳನ್ನು ಬೇರೆ ಬೇರೆ ಕಡೆಗಳಲ್ಲಿ ಸಂದರ್ಶಿಸಿ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ. ಪಾ.ವೆಂ. ಅವರ ಸ್ವಭಾವ, ಪ್ರವೃತ್ತಿ, ವ್ಯಕ್ತಿತ್ವ, ಉದ್ಯೋಗಜೀವನ, ಅವರು ಹೊಂದಿದ ಗೆಳೆತನ-ಕೌಟುಂಬಿಕ ಬಾಂಧವ್ಯ; ತಳೆದ ಜೀವನ ದೃಷ್ಟಿ - ಈ ಅಂಶಗಳನ್ನು ನಾನು ಸಂಗ್ರಹಿಸಲು ೧) ಅವರ ಪತ್ನಿ ಶ್ರೀಮತಿ ಲಕ್ಷ್ಮೀ ೨) ಅವರ ಮಕ್ಕಳು ಮುರಳೀಧರ ಆಚಾರ್ ಹುಬ್ಬಳ್ಳಿ, ಪ್ರೊ. ರಾಧಾಕೃಷ್ಣ ಆಚಾರ್ಯ ಉಡುಪಿ; ಅವರ ನಿಕಟ ಪರಿಚಯವನ್ನು ಹೊಂದಿದ್ದ ಶ್ಯಾಮಸುಂದರ ಬಿದರಕುಂದಿ ಹುಬ್ಬಳ್ಳಿ, ಕೆ.ವಿ.ಪೈ ಹುಬ್ಬಳ್ಳಿ, ದಿ॥ ಶ್ರೀನಿವಾಸ ಹಾವನೂರ, ಬೆಂಗಳೂರು, ಗೋಪಾಲವಾಜಪೆಯಿ, ಬೆಂಗಳೂರು, ನಾ.ಮೊಗಸಾಲೆ, ಕಾಂತಾವರ, ಶ್ರೀಕಾಂತ ಮಳಗಿ, ದಿ॥ ಅರುಣನಾರಾಯಣ ಹುಬ್ಬಳ್ಳಿ - ಇವರೆಲ್ಲರನ್ನು ಭೆಟ್ಟಿಯಾಗಿ, ಮಾತಾಡಿಸಿ, ಅಧಿಕೃತ ಮಾಹಿತಿಗಳನ್ನಲ್ಲದೆ ಪಾ.ವೆಂ. ವ್ಯಕ್ತಿತ್ವದ ಹಲವಾರು ಅಂಶಗಳನ್ನು ಅವರಿಂದ ಸಂಗ್ರಹಿಸಿದ್ದೇನೆ; ಪ್ರಬಂಧದಲ್ಲಿ ಸೂಕ್ತ ರೀತಿಯಲ್ಲಿ ಅಳವಡಿಸಿದ್ದೇನೆ.

ಗೆಳೆಯರ ಹಾಗೂ ಸಹೋದ್ಯೋಗಿಗಳ ಕಣ್ಣಲ್ಲಿ ಪಾ.ವೆಂ. ಹೇಗೆ ಕಾಣುತ್ತಾರೆಂಬುದಕ್ಕೆ ಜಿ.ಟಿ. ನಾರಾಯಣರಾಯರ ಪತ್ರಗಳು, ಲೇಖನಗಳು ಉದಾಹರಣೆಗೆ-

ಪಾವೆಂ ಪೆಸರ್ ಕೇಳಿ ಬಲ್ಲೆಯೇಂ ? ಪರಿಶುದ್ಧ
ಜೀವನಕೆ ತಾಣವನ್, ಕರ್ತವ್ಯ ಮೇರವನ್
ಸೇವಾಪರಾಯಣನ್ ಪರಗುಣೋತ್ತೇಜಕನ್
ಭಾವ ಪ್ರಪಂಚದಾ ಮಾಂತ್ರಿಕನ್ - ಅತ್ರಿಸೂನು

ಹೆರಿಂಜೆ ಕೃಷ್ಣಭಟ್, ಉಡುಪಿ, ಜಯಂತ ಕಾಯ್ಕಿಣಿ, ಬೆಂಗಳೂರು, ದಿ॥ ಡಾ. ರಾಮಚಂದ್ರದೇವ, ಬಂಟವಾಳ, ದಿ॥ ಶ್ರೀನಿವಾಸ ತೋಫಖಾನೆ, ಹುಬ್ಬಳ್ಳಿ, ಬನ್ನಂಜೆ ಗೋವಿಂದಾಚಾರ್ಯ, ಮುರಳೀಧರ ಉಪಾಧ್ಯ ಹಿರಿಯಡ್ಕ, ಶಿವಾನಂದ ಜೋಶಿ, ಹುಬ್ಬಳ್ಳಿ -ಇವರೆಲ್ಲರಿಂದ ಕೇಳಿಕೊಂಡ ಮಾತುಗಳು ಮತ್ತು ಓದಿಕೊಂಡ ಬರಹಗಳನ್ನೂ ನನ್ನ ಈ ಪ್ರಬಂಧಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದೇನೆ.

ಸಮೀಕ್ಷೆ: ಈವರೆಗೆ ಪಾ.ವೆಂ. ಕುರಿತು ಬಂದ ಕೃತಿಗಳು ಮತ್ತು ಬಿಡಿಲೇಖನಗಳು.

೪) ಪಾ.ವೆಂ. ಕುರಿತು ಬಂದ ಕೃತಿಗಳು

೧. ಶ್ರೀ ಪಾಡಿಗಾರು ವೆಂಕಟರಮಣ ಆಚಾರ್ಯರ ಸನ್ಮಾನ ಸಂಚಿಕೆ - (ಸಂ.) ಜಿ.ಎಸ್.ಭಟ್ಟ, ೧೯೭೭.

೨. ಉಡುಪಿಯ ಪರಿಸರದಲ್ಲಿ ಪಾ.ವೆಂ. ಆಚಾರ್ಯರು- (ಸಂ.) ಶ್ರೀನಿವಾಸ ಹಾವನೂರ, ೨೦೦೧.

೩. ಹೊಸಗನ್ನಡದ ಹಿರಿಯರು - ೨೦೦೩- (ಸಂ.) ಶ್ರೀನಿವಾಸ ಹಾವನೂರ, ೨೦೦೧.

೪. ಪತ್ರಕರ್ತರ ಆಚಾರ್ಯ–ಲೇ. ಶ್ರೀ ಹಾವನೂರ,೨೦೦೮.
೫. 'ಪ್ರಪಂಚ'ದ ಪಾಪು 'ಕಸ್ತೂರಿ'ಯ ಪಾ.ವೆಂ.–ಲೇ. ಶಿವಾನಂದ ಜೋಶಿ, ೨೦೧೦, ಹುಬ್ಬಳ್ಳಿ.

ಈ ಐದು ಕೃತಿಗಳಲ್ಲಿ ವ್ಯಕ್ತವಾದ ಪಾ.ವೆಂ ಅವರ ವ್ಯಕ್ತಿತ್ವ ಮತ್ತು ಅವರ ಜೀವನ ಹಾಗೂ ನಡೆಸಿದ ವೃತ್ತಿ ಸಾಧನೆಯ ವಿವಿಧ ಅಂಶಗಳು ಅಧ್ಯಯನಕ್ಕೆ ಆಕರವಾಗಿವೆ. ಇದುವರೆಗೆ ಪಾ.ವೆಂ. ಕುರಿತು ಬಂದ ಕೃತಿಗಳು ಮತ್ತು ಅಲ್ಲಲ್ಲಿ ಪ್ರಕಟಿತಗೊಂಡ ಬಿಡಿ ಲೇಖನಗಳು.

ಶ್ರೀ ಪಾಡಿಗಾರು ವೆಂಕಟರಮಣ ಆಚಾರ್ಯರಿಗೆ ೧೦–೦೯–೧೯೭೭ರಲ್ಲಿ ಅವರ ಮಿತ್ರವರ್ಗ ಮೈಸೂರಿನಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು. ಈ ಸಮಾರಂಭದ ನೆನಪಿಗಾಗಿ ಸನ್ಮಾನ ಸಂಚಿಕೆಯನ್ನು ಹೊರತಂದರು. ಪಾ.ವೆಂ. ಅವರ ಆತ್ಮೀಯ ಗೆಳೆಯರ ವರ್ಗ ಪಾ.ವೆಂ. ಅವರ ವಿವಿಧ ಮುಖಗಳ ವ್ಯಕ್ತಿತ್ವವನ್ನು, ಸಾಧನೆಯನ್ನು ಅವರ ಬರಹ ವೈವಿಧ್ಯತೆಯನ್ನು ಇಲ್ಲಿ ಚಿತ್ರಿಸಿದ್ದಾರೆ.

ಶಂಬಾ ಜೋಶಿ, ಹ.ರಾ. ಪುರೋಹಿತರು, ಆತ್ಮೀಯ ಸ್ನೇಹಿತ ಬಿ.ಎಚ್. ಶ್ರೀಧರ ನಾ.ಮೊಗಸಾಲೆ, ಕಲಾವಿದ ತಿಪ್ಪೆಸ್ವಾಮಿ, ಸಿದ್ಧಲಿಂಗಪಟ್ಟಣಶೆಟ್ಟಿ, ಯು.ಆರ್. ಅನಂತಮೂರ್ತಿ, ಹಾ.ಮಾ. ನಾಯಕ, ಕು.ಶಿ. ಹರಿದಾಸ ಭಟ್ಟ, ಮಾಧವ ಮಹಿಷಿ ಗೋಪಾಲಕೃಷ್ಣ ಅಡಿಗ, ಎಸ್.ಎಲ್. ಬೈರಪ್ಪ, ಜಿ.ಟಿ.ನಾ. ಎಲ್ಲ ಆತ್ಮೀಯರು ಪಾ.ವೆಂ. ಅವರ ವ್ಯಕ್ತಿ ಚಿತ್ರ ಸಾಧನೆಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಉಡುಪಿಯ ಪರಿಸರದಲ್ಲಿ ಪಾ.ವೆಂ.: ಇಲ್ಲಿ ಪಾ.ವೆಂ. ಅವರು ಎಳವೆಯಲ್ಲಿ ತವರೂರಿನಲ್ಲಿ ೨೫ ವರ್ಷಗಳವರೆಗೆ ಕಳೆದ ದಿನಗಳು ನಂತರ ಹುಬ್ಬಳ್ಳಿಯಲ್ಲಿ ಕುಟುಂಬ ಸಮೇತ ಹಲವಾರು ದಶಕಗಳು ಕಳೆದರು. ನಿವೃತ್ತರಾದನಂತರ ಉಡುಪಿಯ ನಿರಂತರ ಸಂಬಂಧಗಳು ಇದ್ದವು. ಹಾಗಾಗಿ ಪಾ.ವೆಂ. ಇಲ್ಲಿಗೆ ಸಂಬಂಧಿಸಿದ ಲೇಖನ ಈ ಅವಧಿಯಲ್ಲಿ ಬರೆದವು ಆಗಿದೆ.

ಇಲ್ಲಿರುವ ಲೇಖನಗಳು ಕೃಷ್ಣ ಮಠದ ಪರಿಸರ, ಉಡುಪಿಯ ಗಣ್ಯವ್ಯಕ್ತಿಗಳ ವ್ಯಕ್ತಿ ಚಿತ್ರ, ಶಬ್ದವಿಹಾರ ಹಾಗೂ ನೆನಹುಗಳು ಎಂಬ ವಿಭಾಗವಿದೆ. ಇಲ್ಲಿ ಮಹತ್ವವಾದ ಅಂಶ ೧೯೨೦ ರಿಂದ ೧೯೭೦ ಈ ಅರ್ಧಶತಮಾನಾವಧಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಜೀವನದ ಚಿತ್ರಣವಿದೆ. ಇದು ಗಣ್ಯರ ವ್ಯಕ್ತಿ ಚಿತ್ರದಲ್ಲಿ ಮೂಡಿ ಬಂದಿದೆ. ಉಡುಪಿಯ ಪತ್ರಿಕೋದ್ಯಮ, ಪಾ.ವೆಂ. ಅವರ ಆತ್ಮಕಥನ, ಬದಲಾವಣೆಗೊಂಡ ಉಡುಪಿಯ ಯುವ ಜನತೆ ಬದುಕು ಪಾ.ವೆಂ. ಅವರು ತುಳು ಸಮ್ಮೇಳಾನಾಧ್ಯಕ್ಷರ ನುಡಿಗಳು ೫೦ ದಶಕದ ಕಾಲ ಖಂಡದ ಸ್ಥಿತಿಗತಿಗಳಿಗೆ ಕೈಗನ್ನಡಿಯಂತಿದೆ.

ಹೊಸ ಗನ್ನಡದ ಹಿರಿಯರು: ಈ ಕೃತಿ ವ್ಯಕ್ತಿ, ಚಿತ್ರ ಮತ್ತು ವಸ್ತು ಪ್ರಬಂಧಗಳ ಸಾಲಿನಲ್ಲಿ ನಿಲ್ಲುತ್ತವೆ. ೧೯೫೧ ರಿಂದ ೧೯೮೨ರ ಕಾಲಮಾನದಲ್ಲಿ ರಚಿತವಾದ

ಮೂವತ್ತೇಳು ಲೇಖನಗಳಿವೆ. ಇದರಲ್ಲಿ ಎರಡು ವಿಭಾಗಗಳಿದ್ದು, ಮೊದಲ ಭಾಗದಲ್ಲಿ ಹೊಸ ಗನ್ನಡದ ಹಲವಾರು ವ್ಯಕ್ತಿಗಳ ಪರಿಚಯ ಮತ್ತು ಅವರ ಸಾಹಿತ್ಯ ರಚನೆಯ ಬಗ್ಗೆ 'ಕ್ಷ' ಕಿರಣದ ನೋಟವಿದೆ. ಎರಡನೇಯ ವಿಭಾಗದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಯ ವಿವರಗಳಿವೆ. ಪಾ.ವೆಂ. ಪೂರ್ಣಾವಧಿಯ ಪತ್ರಿಕೋದ್ಯಮಿಯಾಗಿರುವುದರಿಂದ ಆ ವಲಯದ ನಾಲ್ಕಾರು ಹಿರಿಯರ, ಸಹದ್ಯೋಗಿಗಳ ಪರಿಚಯವನ್ನು ಇಲ್ಲಿ ಮಾಡಿದ್ದಾರೆ. ಪತ್ರಿಕೋದ್ಯಮದ ಬಗ್ಗೆಯೂ ತಮ್ಮ ವಿಚಾರ ಧಾರೆಯನ್ನು ಹರಿಸಿದ್ದಾರೆ.

ಪತ್ರಕರ್ತರ ಆಚಾರ್ಯ ಪಾ.ವೆಂ.: ಪಾ.ವೆಂ. ಅವರ ಬದುಕು ಬರಹಗಳ ಒಂದು ಸ್ಥೂಲ ನೋಟವನ್ನು ಶ್ರೀನಿವಾಸ ಹಾವನೂರರು ಸಂಕ್ಷಿಪ್ತವಾಗಿ ಪರಿಚಯಿಸಿದ ಕೃತಿ ಇದು.

'ಪ್ರಪಂಚದ ಪಾಪು', ಕಸ್ತೂರಿಯ ಪಾ.ವೆಂ.: ಇಲ್ಲಿ ಪಾ.ವೆಂ. ಅವರೊಡನೆ ಸಹದ್ಯೋಗಿಯಾಗಿದ್ದ ಶಿವಾನಂದ ಜೋಶಿಯವರು ಪಾ.ವೆಂ. ಅವರ ಆತ್ಮ ಚರಿತ್ರೆಯ ಬಗ್ಗೆ ಬರೆದಿದ್ದಾರೆ. ಉಡುಪಿಯನ್ನೊಳಗೊಂಡ ದಕ್ಷಿಣಕನ್ನಡ ಪ್ರದೇಶವು ಪಾ.ವೆಂ. ಅವರ ಮರಣದ ನಂತರ ಮಾರ್ಚ ೧೯೯೨ರಲ್ಲಿ ಅವರ ಕೃತಿಗಳನ್ನು ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಹಿರಿಯ ಪತ್ರಕರ್ತ, ಪಾ.ವೆಂ. ನಿಕಟವರ್ತಿ ಬನ್ನಂಜೆ ರಾಮಾಚಾರ್ಯರು ಪಾ.ವೆಂ. ಸಂಸ್ಕರಣೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಾಹಿತ್ಯ ಅಕಾಡಮಿ ಮತ್ತು ರಾಷ್ಟ್ರಕವಿ ಗೋವಿಂದ ಪೈ ಸಂಶೋಧಕ ಕೇಂದ್ರಗಳ ಜಂಟಿ ಆಶ್ರಯದಲ್ಲಿ (ಸಂಕಿರಣದ ವಿಚಾರಗಳು ಯಾವುದು ಪ್ರಕಟಗೊಂಡಿಲ್ಲ). ಈ ಕಾರ್ಯಕ್ರಮ ನೆರವೇರಿತ್ತು.

ಇತರ ಬಿಡಿ ಲೇಖನಗಳು: ಜಿ.ಯಸ್. ಉಪಾಧ್ಯರವರು ಹೌಸಿಂಗ್ ಕಾಲನಿ (ಸಮಸ್ತ ಕವಿತೆಗಳು), ಕೆ.ನರಸಿಂಹ ಮೂರ್ತಿಯವರ **ಸಮ್ಮುಖ** ವಿಚಾರ ಲೇಖನದಲ್ಲಿ ಬರೆದ ಪಾ.ವೆಂ. **ಪದಾರ್ಥ ಚಿಂತಾಮಣಿ** ಎಂಬ ಲೇಖನ, ಸಂಯುಕ್ತ ಸಂಭ್ರಮ ಸಂಚಿಕೆಯಲ್ಲಿ ಕಸ್ತೂರಿ ಸಂಪಾದಕ ಅರುಣನಾರಾಯಣ ಬರೆದ ಲೇಖನ **ಕನ್ನಡದ ಕಂಪನ್ನು ಬೀರಿದ ಕಸ್ತೂರಿ,** ಸುಗುಣಮಾಲಾದಲ್ಲಿ ಶ್ರೀಶ ಬಲ್ಲಾಳರು ಪಾ.ವೆಂ. ಸಮಸ್ತ ಕೃತಿಯ ಕುರಿತ ಕಿರು ಲೇಖನ. ನ್ಯೂಜರ್ಸಿ ಕನ್ನಡ ಸಾಹಿತ್ಯ ರಂಗದವರು ಬರೆದ **ನಗೆಗನ್ನಡಂ ಗೆಲ್ಗೆ** ಎನ್ನುವ ಕೃತಿಯಲ್ಲಿ ನಳಿನಿಮಯ್ಯರವರು ಬರೆದ 'ಪಾ.ವೆಂ. ಆಚಾರ್ಯ ಪಾಂಡಿತ್ಯ ಪೂರ್ಣ ಹರಟೆಗಳು' ಎನ್ನುವ ಲೇಖನ ಅವರ ಲಲಿತ ಪ್ರಬಂಧಗಳ ಮೇಲೆ ಇಣಕು ನೋಟ ಬೀರುತ್ತದೆ. **ಪದಾರ್ಥ ಚಿಂತಾಮಣಿ** ಕೃತಿ ಬಿಡುಗಡೆಯ ಸಂದರ್ಭದಲ್ಲಿ, ಬನ್ನಂಜೆ ಗೋವಿಂದಾಚಾರ್ಯ, ಮುರಳೀಧರ ಉಪಾದ್ಯ, ಕು.ಶಿ. ಹರಿದಾಸ ಭಟ್ಟ, ಹಾ.ಮಾ. ನಾಯಕ, ಪಾಟೀಲ ಪುಟ್ಟಪ್ಪ, ರತ್ನಾಕರ ಶೆಟ್ಟಿ, ಅನೇಕ ಹಿರಿಯ ವ್ಯಕ್ತಿಗಳಿಂದ ಪತ್ರಿಕೆಯಲ್ಲಿ ಬಂದ ಲೇಖನಗಳು ಪಾ.ವೆಂ. ಅವರು ಭಾಷಾಶಾಸ್ತ್ರಜ್ಞರಾಗಿ ಕನ್ನಡದಲ್ಲಿ ಗುರುತಿಸಿಕೊಂಡ ರೀತಿಯನ್ನು ತಿಳಿಸುತ್ತದೆ. ಪತ್ರಿಕೋದ್ಯಮದಲ್ಲಿನ ಉತ್ಕೃಷ್ಟತೆಗಾಗಿ ನೀಡುವ ಬಿ.ಡಿ. ಗೊಯೆಂಕಾ ಪ್ರಶಸ್ತಿ ಪಾ.ವೆಂ.

ಪಡೆದ ಸಂದರ್ಭದಲ್ಲಿ ನಾಡಿನ ಗಣ್ಯರ ಅಭಿನಂದನಾ ಲೇಖನಗಳು, ಪಾ.ವೆಂ. ಸಂಪಾದಕರಾಗಿ, ಅಂಕಣ ಬರಹಗಾರರಾಗಿ ದೀರ್ಘಕಾಲದಿಂದ ಸಲ್ಲಿಸಿರುವ ಸೇವೆಯ ಬಗ್ಗೆ ಮತ್ತು **ಕಸ್ತೂರಿ** ಮಾಸಿಕದ ಸಂಪಾದಕರಾಗಿ ಕನ್ನಡದ ಗದ್ಯಕ್ಕೆ ಹೊಸ ಆಯಾಮ ನೀಡಿರುವ ಕುರಿತು ಈ ಲೇಖನಗಳು ಬೆಳಕು ಚೆಲ್ಲುತ್ತವೆ.

೧೯೯೨ ಮೇ ೫ ರಂದು ಪಾ.ವೆಂ. ನಿಧನರಾದಾಗ ಪಾ.ವೆಂ. ಅಭಿಮಾನಿಗಳು ಬರೆದ ಶ್ರದ್ಧಾಂಜಲಿ ಲೇಖನಗಳು ಪತ್ರಿಕೋದ್ಯಮ ಪ್ರಪಂಚದ ಅಪೂರ್ವ ವ್ಯಕ್ತಿಯಾಗಿ ಪಾ.ವೆಂ. ನಡೆದು ಬಂದ ಗತಿಸ್ಥಿತಿಗಳ ಬಗೆಗಿನ ವಿವರ, ಉದ್ಯೋಗವನ್ನು ಗಂಭೀರವಾಗಿ ಪರಿಗಣಿಸಿ ನಿರಂತರ ಅಧ್ಯಯನದೊಂದಿಗೆ ಜ್ಞಾನ ಕುತೂಹಲಿಗಳಾಗಿ ಬೆಳೆದಿರುವುದರ ಮಿಂಚಿನ ನೋಟವನ್ನು ಇಲ್ಲಿಯ ಲೇಖನಗಳಲ್ಲಿ ಕಾಣಬಹುದು.

'Pa vam Acharya-life and contribution to Kannada Journalism' ಗುರುರಾಜ ಪಣಿಯಾಡಿಯವರ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತುತಪಡಿಸಿರುವ ಎಂ.ಫಿಲ್. ಪ್ರಬಂಧ (೨೦೦೩-೨೦೦೪) ಕನ್ನಡದಲ್ಲಿ ಪತ್ರಿಕೆಗಳು ಹೇಗಿರಬೇಕೆಂದು **ಕಸ್ತೂರಿ** ಡೈಜೆಸ್ಟ್‌ನ ಮೂಲಕ ಪ್ರಥಮವಾಗಿ ತಿಳಿಸಿಕೊಟ್ಟ ಮೇಲ್ನೋಟದ ಮಾಹಿತಿಗಳು ಇಲ್ಲಿ ವ್ಯಕ್ತವಾಗಿದೆ.

ಎಲ್ಲ ಪತ್ರಿಕೆಯಲ್ಲಿ ಪಾ.ವೆಂ. ಕುರಿತ ಲೇಖನಗಳು, ತರಂಗ, ತುಷಾರ, ಸುಧಾ, ಸುಗುಣಮಾಲಾ ಪತ್ರಿಕೆಯಲ್ಲಿ ಪ್ರಕಟಗೊಂಡ ಬರಹಗಳು, ಶಂಬಾಜೋಶಿ, ಜಿ.ಟಿ.ನಾ. ಇತರ ಮಿತ್ರರೊಂದಿಗಿದ್ದ ಆತ್ಮೀಯ ಪತ್ರ ಲೇಖನಗಳು. ಪಾ.ವೆಂ. ಬದುಕು ಬರಹಕ್ಕೆ ಅಧಿಕೃತ ಮಾಹಿತಿಯಾಗಿ ವ್ಯಕ್ತಿತ್ವದ ಮಹತ್ವದ ಅಂಶಗಳನ್ನು ಸಂಗ್ರಹಿಸಿ ಸಮರ್ಪಕ ರೀತಿಯಲ್ಲಿ ಈ ಪ್ರಬಂಧದಲ್ಲಿ ರೂಪಿಸಿದ್ದೇನೆ.

ಪಾ.ವೆಂ. ಕೃತಿಗಳನ್ನು ಅಧ್ಯಯನ ಮಾಡಿ ಅವುಗಳ ಪ್ರಾಥಮಿಕ ಪರಿಚಯ, ವಿಶೇಷತೆ ಹಾಗೂ ಸಮಕಾಲೀನ ಬರಹಗಾರರೊಂದಿಗೆ ಅವರನ್ನು ಹೋಲಿಕೆ ಮಾಡುತ್ತಾ ಸ್ಥೂಲವಾಗಿ ಅವುಗಳ ಸ್ಥಾನವನ್ನು ನಿರ್ದೇಶಿಸುವ ರೀತಿಯಲ್ಲಿ ಈ ಪ್ರಬಂಧದ ರಚನೆಯಾಗಿದೆ. ಇದಕ್ಕಾಗಿ ಅವರ ಪ್ರತಿಯೊಂದು ಕೃತಿಯನ್ನು ಆಕರವಾಗಿ ಸಂಗ್ರಹಿಸಿದ್ದೇನೆ.

ಪಾ.ವೆಂ. ಅವರು ೧೮ ವರ್ಷಗಳ ಕಾಲ ಕಸ್ತೂರಿಯ ಸಂಪಾದಕರಾಗಿ ಮಾಡಿದ ಕಾರ್ಯವನ್ನು ಗ್ರಹಿಸಲು **ಕಸ್ತೂರಿ**ಯ ೧೯೫೬-೧೯೭೫ರ ಕಾಲದ ೨೨೦ ಸಂಚಿಕೆಗಳನ್ನೂ ಆಕರವಾಗಿ ಗಮನಿಸಿದ್ದೇನೆ. ಪತ್ರಿಕೆಯ ವಿನ್ಯಾಸ, ಮುದ್ರಣ, ಸಂಪಾದಕನ ಕೌಶಲ ಮತ್ತು ಪ್ರಕಟಣಾ ರೀತಿಯಲ್ಲಿ ಅವರು ತೋರಿಸಿದ ವಿಶೇಷತೆ ಹಾಗೂ ಓದುಗರೊಡನೆ, ಲೇಖಕರೊಡನೆ ಅವರು ಇಟ್ಟುಕೊಂಡ ಸಂಬಂಧಗಳನ್ನು ಕೂಲಂಕುಶ ಗಮನಿಸಿ ಉದಾಹರಣೆಗಳೊಂದಿಗೆ ವಿವರಿಸಿದ್ದೇನೆ.

ಅಧ್ಯಾಯ – ೨

ಪಾ.ವೆಂ. ಅವರ ಬದುಕು ೧೯೧೫ ರಿಂದ ೧೯೯೨

ಅ. ಜನನ, ಬಾಲ್ಯ, ವಿದ್ಯಾರ್ಥಿಯಾಗಿ ಪಾ.ವೆಂ.

ಆ. ವೃತ್ತಿಯ ಆಯ್ಕೆ ಬರಹಗಾರ, ಕವಿ, ನಂತರ ಪತ್ರಿಕೋದ್ಯಮ ಪ್ರವೇಶ

ಇ. ರೂಪಿಸಿಕೊಂಡ ಮನೋಧರ್ಮ, ಸಾಂಸಾರಿಕ ವ್ಯಕ್ತಿಯಾಗಿ ಪಾ.ವೆಂ.

ಈ. ಪಾ.ವೆಂ. ದಿನಚರಿ – ಪಾ.ವೆಂ. ಅವರ ಆತ್ಮಕಥೆ

ಉ. ಪಾ.ವೆಂ. ಒಟ್ಟು ನೋಟ

ಕರ್ನಾಟಕದ ಉಡುಪಿ ಕಡೆಗೋಲು ಕೃಷ್ಣನ ಆಗರವೆಂದು ಪ್ರಸಿದ್ಧ ಚಿಕ್ಕದಾದರೂ ಚೊಕ್ಕ ಹೆಸರು. ಹೆಸರಿನ ಲಾಲಿತ್ಯ, ಊರಿಗೂ ಇದೆ. ಮಾಧ್ವಮತದ ಕೇಂದ್ರವಾಗಿ, ಧಾರ್ಮಿಕ ರಂಗದಲ್ಲಿ ಸ್ಥಾನ ಪಡೆದಿದೆ. ಉಡುಪಿಯ ಶ್ರೀಕೃಷ್ಣ ಆಸ್ತಿಕ ಜನಸ್ತೋಮದ ಆರಾಧ್ಯ ಮೂರ್ತಿಯಾಗಿದ್ದಾನೆ. ಪುರಾಣ ಕಾಲದ ನಂತರದ ಏಳುನೂರು ವರ್ಷಗಳ ಇತಿಹಾಸವನ್ನು ಇಂದಿನವರೆಗೂ ಬೆಳಸುತ್ತಲೇ ಬಂದಿದೆ. ಎಲ್ಲ ವಿಧದ ಅರ್ವಾಚೀನ ವಿದ್ಯೆಗಳಿಗೆ ಕೇಂದ್ರವೆನಿಸಿದೆ. ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ರಂಗದಲ್ಲೂ ಅಪೂರ್ವ ಬೆಡಗಿನಿಂದ ಬೆಳಗಿದ ಸಾರ್ಥ್ಯಕ್ಯ ಈ ಊರಿಗಿದೆ.

ಪಾ.ವೆಂ. ಆಚಾರ್ಯರ ಹಿರಿಯ ಮನೆತನ ಬಾಳಿದ ಊರು ಉಡುಪಿಯಿಂದ ೧೩ಮೈಲು ದಕ್ಷಿಣಕ್ಕಿರುವ ಕೋಲ್ಯ. ನಂತರ ಅವರ ಮುತ್ತಜ್ಜನವರು ಉಡುಪಿಯ ಬಳಿ ಪಾಡಿಗಾರು ಎಂಬ ಊರಿನಲ್ಲಿ ಬಂದು ನೆಲೆಸಿದ್ದರು. ಅಜ್ಜ ಪಾಡಿಗಾರು ಮಧ್ವಚಾರ್ಯ, ಅಜ್ಜಿ ಶ್ರೀದೇವಿ. ಪಾ.ವೆಂ. ಅವರ ತಂದೆ ಪಾಡಿಗಾರು ಲಕ್ಷ್ಮೀನಾರಾಯಣ ಆಚಾರ್ಯ, ತಾಯಿ ಸೀತಮ್ಮ. ಇವರ ತವರು ಮನೆ ಪಾಡಿಗಾರು. ಇವರಿಗೆ ೪ ಜನ ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ, ಉಭಯ ಕುಲಗಳು ವಿದ್ವಾಂಸರ ಮನೆತನಗಳು. ಶ್ರೀಮಂತಿಕೆಯ ಮನೆತನವಲ್ಲದಿದ್ದರೂ ಆರ್ಥಿಕ ಪರಿಸ್ಥಿತಿ ಉತ್ತಮ ರೀತಿಯಲ್ಲೇ ಇತ್ತು. ಸದಾಚಾರ ಸಂಪನ್ನರು. ಆ ಕಾಲಕ್ಕೆ ಹೆಚ್ಚು ಬ್ರಾಹ್ಮಣ ಮನೆತನಗಳು ಮಠಗಳ ಆಶ್ರಯದಲ್ಲಿದ್ದವು, ಅವರ ಉಭಯ ಕುಲಗಳು ಮಠಗಳ ಆಶ್ರಯದಲ್ಲಿದ್ದವು.

ಪಾ.ವೆಂ. ಅವರ ಹಿರಿಯ ಮನೆತನ ತಲೆಮಾರುಗಳಿಂದ ಸಂಸ್ಕೃತ ವಿದ್ಯಾವಂತ ಮನೆತನ. ಪಾ.ವೆಂ. ಅವರ ತಂದೆಯವರು ಸಂಸ್ಕೃತ, ಕನ್ನಡ ವಿದ್ವಾಂಸರಾಗಿದ್ದರು. ವೇದ ಅಧ್ಯಯನ ಪಾರಂಗತರು. ಋಗ್ವೇದದ ಎಂಟು ಅಷ್ಟಕಗಳನ್ನು ಪುಸ್ತಕದ ನೆರವಿಲ್ಲದೆ ಪಠಿಸಬಲ್ಲವರಾಗಿದ್ದರು. ತಮ್ಮ ಜೀವನವನ್ನು ವೈದಿಕ ವಿದ್ಯೆಗೆ ಮೀಸಲಾಗಿಡದೆ ಯಕ್ಷಗಾನ, ನಾಟಕ, ಹರಿಕಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ ಕುಲದ ಪರಂಪರೆಯನ್ನು ಮುರಿದು ಅಂದಿನ ಕಾಲದ ಸಂಪ್ರದಾಯ ಬದ್ಧ ಸಾಮಾಜಿಕ ಸ್ಥಿತಿಗತಿಗಳಿಗೆ ವಿರುದ್ಧವಾಗಿ ಹೆಣ್ಣು ಮಕ್ಕಳಿಗೆ ಓದು, ಬರಹ, ಸಂಗೀತವನ್ನು ಕಲಿಸಿದ್ದರು. ಯಕ್ಷಗಾನ, ನಾಟಕ, ಹರಿಕಥೆಗಳ ಸಾಂಸ್ಕೃತಿಕ ವಾತಾವರಣವನ್ನು ಮನೆಯಲ್ಲಿ ಕಲ್ಪಿಸಿದ್ದರು. ಈ ನಾಲ್ಕು ಹೆಣ್ಣು ಮಕ್ಕಳ ನಂತರ ಉಳಿದುಕೊಂಡ ಏಕಮಾತ್ರ ಪುತ್ರ ಪಾ.ವೆಂ. ಆಗಿದ್ದರು.

ಅ) ಜನನ, ಬಾಲ್ಯ, ವಿದ್ಯಾರ್ಥಿಯಾಗಿ ಪಾ.ವೆಂ.:

ಪಾ.ವೆಂ. ಅವರು ಆನಂದನಾಮ ಸಂವತ್ಸರದ ಮಾಘ ಬಹುಳ ಪಂಚಮಿ ಅಂದರೆ ಫೆಬ್ರವರಿ ೬ರಂದು ೧೯೧೫ ಬೆಳಗಿನ ಜಾವ ಶನಿವಾರದಂದು ಉಡುಪಿಯ ಬಳಿ ಕುಂಜಿಬೆಟ್ಟುವಿನಲ್ಲಿ ಜನಿಸಿದರು. ಪಾ.ವೆಂ. ಹುಟ್ಟಿದ ಒಂದು ತಿಂಗಳಲ್ಲಿ ತಂದೆ ಉಡುಪಿಯ ಅದಮಾರು ಮಠದಿಂದ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೋದೆ (ಸೊಂದಾ) ಎಂಬಲ್ಲಿರುವ ವಾದಿರಾಜರ ಮಠಕ್ಕೆ ಪಾರುಪತ್ಯಗಾರರಾಗಿ ಬಂದು ಸೇರಿದರು. ಒಂದು ವರ್ಷವಾಗುತ್ತಲೇ ತಾಯಿಯನ್ನು ಪಾ.ವೆಂ. ಅವರನ್ನು ಸೋದೆಗೆ ಕರೆದೊಯ್ದರು. ಪಾ.ವೆಂ. ಅವರಿಗೆ ಐದು ವರ್ಷ ತುಂಬುವಾಗ ತಂದೆಯ ಮರಣ. ತನ್ನ ತಂದೆಯವರ ಮರಣದಿಂದ ಪಾ.ವೆಂ. ಅವರ ಮನಸ್ಸಿನಲ್ಲಿ ಮೂಡಿದ ಅನಿಸಿಕೆಗಳನ್ನು ಒಂದೆಡೆ ಹೀಗೆ ಹೇಳುತ್ತಾರೆ.[*೧] "ತಂದೆಯ ಕೈಯಲ್ಲಿ ಬೆಳೆಯ ಬೇಕಿದ್ದ ಮಗು, ನನ್ನ ತಂದೆಯ ಎಷ್ಟು ಅಂಶಗಳು ನನ್ನಲ್ಲಿವೆ ಎಂದು ನಾನು ಯೋಚಿಸಿದರೆ, ನಾನು ಏನಾಗಿದ್ದೇನೋ ಅದರಲ್ಲಿ ಅವರು ದೊಡ್ಡ ಅಂಶವಾಗಿದ್ದರೆಂದು ನನಗೆ ತೋರುತ್ತದೆ. ನನ್ನ ಸಾಹಿತ್ಯ ಕಲಾಸಕ್ತಿಯಲ್ಲಿ ನನ್ನ ಕುತೂಹಲಮಯ ಮಿದುಳಿನಲ್ಲಿ ನನ್ನ ತಂದೆ ಇದ್ದಾರೆ" ಎಂದು ಪಾ.ವೆಂ. ನನ್ನ ವ್ಯಕ್ತಿತ್ವ ಪ್ರೌಢವಾಗಿ ಬೆಳೆಯಲು ತಂದೆಯೇ ಕಾರಣವೆಂದು ತಾವೇ ಹೇಳಿಕೊಂಡಿದ್ದಾರೆ.

ಪಾ.ವೆಂ. ಅವರ ತಂದೆಯವರು ತಮ್ಮ ಕಾಲದಲ್ಲಿ ಸಾಕಷ್ಟು ಸಂಪಾದಿಸಿದ್ದರೂ ಯಾವ ಸಂಪತ್ತನ್ನೂ ಉಳಿಸಿರಲಿಲ್ಲ. ಅವರ ರಸಿಕತನದ ಬದುಕು ಇದಕ್ಕೆ ಕಾರಣವಾಗಿತ್ತು. ಊರಿನಲ್ಲಿ ಒಂದು ಚಿಕ್ಕ ಮನೆ ಮಾತ್ರ ಇತ್ತು. ಆದರೆ ಒಂದಂಗುಲ ಆಸ್ತಿಯೂ ಇರಲಿಲ್ಲ. ಹೀಗೆ ಅನಾಥರಾದ ಪಾ.ವೆಂ. ಕುಟುಂಬ ಮತ್ತೆ ಮೂರು ವರ್ಷ ಸೋದೆಯಲ್ಲೆ ತಾಯಿ ಮತ್ತು ಮಗ ಉಳಿಯುವ ಸ್ಥಿತಿ ಉಂಟಾಯಿತು. ಪಾ.ವೆಂ. ಅವರ ಅಕ್ಕ ನೇತ್ರಾವತಿ ಮತ್ತು ಬಾವ ನಾರಾಯಣಾಚಾರ್ಯರು ಅದೇ ಮಠದಲ್ಲಿ ಶ್ಯಾನುಭೋಗರಾಗಿ ಉಳಿದಿದ್ದರಿಂದ ಪಾ.ವೆಂ. ಮತ್ತು ಅವರ ತಾಯಿ ಅಲ್ಲಿರಲು ಸಾಧ್ಯವಾಯಿತು.

ಪಾ.ವೆಂ. ಅವರ ಮೊದಲ ಶಿಕ್ಷಣ ಅವರ ಅಕ್ಕಂದಿರಿಂದಲೇ ಪ್ರಾರಂಭವಾಯಿತು. ಅಕ್ಕಂದಿರು ಅವರ ಮೊದಲ ಶಿಕ್ಷಕರಾದರು. ತಾಯಿ ನಿರಕ್ಷರಿಯಾದರೂ ಧೀರೆಯಾಗಿದ್ದರು. ಪಾ.ವೆಂ. ಅವರ ಭವಿಷ್ಯಕ್ಕೆ ಉತ್ತಮ ಅವಕಾಶಗಳನ್ನು ತಮಗರಿಯದಂತೆ ಕಲ್ಪಿಸಿದ್ದರು. ತಾಯಿಯ ನಂತರ ಪಾ.ವೆಂ. ಅವರನ್ನು ರೂಪಿಸಿದ ವ್ಯಕ್ತಿಗಳೆಂದರೆ ಅಕ್ಕ ಮತ್ತು ಭಾವ. ಆ ಊರಲ್ಲಿ ಶಾಲೆ ಎಂಬುದು ಇರಲಿಲ್ಲ ಆ ಸಂದರ್ಭದಲ್ಲಿ ಭಾವ ಕೆಲ ಸ್ತೋತ್ರ ಪಾಠಗಳನ್ನು ಕಲಿಸಿದರು. ಅಕ್ಕ ಕನ್ನಡ ಓದು, ಬರಹ, ಲೆಕ್ಕಗಳನ್ನು ಹೇಳಿಕೊಟ್ಟರು. ಮಠಕ್ಕೆ ಬಂದ ಯಾತ್ರಿಕರೊಬ್ಬರು ಇಂಗ್ಲೀಷ ವರ್ಣಮಾಲೆಯನ್ನು, ಇಂಗ್ಲೀಷ್ ಶಬ್ದಗಳನ್ನು ಕಲಿಸಿದರು. ಇದು ಪಾ.ವೆಂ. ಅವರ ಪ್ರಾಥಮಿಕ ಹಂತದ ಶಿಕ್ಷಣವಾಗಿತ್ತು.

ಮನೆಯಲ್ಲಿಯೂ ಅಕ್ಕಂದಿರು ಅದರ್ಶ ಜೀವನದ ತತ್ವಗಳನ್ನು ಅಚ್ಚೊತ್ತಿದ್ದರು. ತಂದೆಯ ರಕ್ಷಣೆಯಿಂದ ವಂಚಿತರಾದ ಕುಟುಂಬ ಪಾ.ವೆಂ. ಅವರ ಭವಿಷ್ಯವನ್ನು ರೂಪಿಸಲು ಹೆಚ್ಚು ಶ್ರಮಿಸುತ್ತಿತ್ತು. ಪರರ ವಿಷಯಗಳಲ್ಲಿ ಕುತೂಹಲ ಸಲ್ಲದು. ಬೇರೆಯವರು ಖಾಸಗಿ ಮಾತುಗಳನ್ನಾಡುವಾಗ ಅದು ನಮ್ಮ ವಿರುದ್ಧವೇ ಇದ್ದರು ಕದ್ದು ಆಲಿಸಕೂಡದು, ಮಾತು ಕೊಟ್ಟು ತಪ್ಪಬಾರದು, ಸುಳ್ಳಾಡಬಾರದು, ವಹಿಸಿಕೊಂಡ ಕೆಲಸಗಳನ್ನು ಪ್ರಾಮಾಣಿಕವಾಗಿ ಪೂರೈಸಬೇಕು ಇತ್ಯಾದಿ ಎಲ್ಲಕ್ಕಿಂತ ಮುಖ್ಯವಾಗಿ ಸ್ತ್ರೀಯರೊಡನೆ ಸಲಿಗೆ ಬೇಡ ಎಂಬ ಬೋಧೆ. ತಮ್ಮ ತಂದೆಯವರ ಏಕಮಾತ್ರ ಅವಗುಣ ಸ್ತ್ರೀ ವ್ಯಾಮೋಹದಿಂದ ಕುಟುಂಬದ ಸದಸ್ಯರಲ್ಲಿ ಉಂಟಾದ ದುಃಖದ ಪ್ರತಿಕ್ರಿಯೆಯ ಫಲವಾಗಿದ್ದಂತೆ ತೋರುತ್ತದೆ. ಇರುವ ಏಕಮಾತ್ರ ಕುಲಪುತ್ರನನ್ನು ಉತ್ತಮ ಭವಿಷ್ಯದತ್ತ ಮುಖಮಾಡಿ ಬೆಳೆಸುವುದು ಎಲ್ಲರ ಕರ್ತವ್ಯವಾಗಿತ್ತು. ಈ ಎಲ್ಲ ಉಪದೇಶಗಳನ್ನು ಪಾ.ವೆಂ. ಅವರು ತನ್ನ ಜೀವನದಲ್ಲಿ ಪಾಲಿಸುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ.*೨ 'ಬಾಲ್ಯದಲ್ಲಿ ತಬ್ಬಲಿಯಾಗಿ ಪಿತೃ ನಿಗ್ರಹದ ಆಲಂಬವನವಿಲ್ಲದೆ, ಬಡತನದಲ್ಲಿ ಸೂಕ್ಷ್ಮದರ್ಶಿ ಬಾಲಕ ಜಗತ್ತನ್ನು ಸಂಶಯ ದೃಷ್ಟಿಯಿಂದ ನೋಡ ತೊಡಗುತ್ತಾನೆ. ಅಂತರ್ಮುಖತೆ ಮುಖ ಹೇಡಿತನವಾಗುತ್ತದೆ. ವಿವೇಕ ಎಂಬುದು ಕುಂಟುಕುದುರೆಗೆ ಹಾಕಿದ ಕಡಿವಾಣವಾಗುತ್ತದೆ. ಜಾಗರೂಕತೆ ಸಾಹಸವನ್ನು ನಿಷ್ಕ್ರೀಯಗೊಳಿಸುತ್ತದೆ. 'ನನಗೆ ೧೬ ವರ್ಷ ತುಂಬುವವರೆಗಾದರೂ ತಂದೆ ಬದುಕಿದ್ದರೆ ಅವರ ಬಹಿರ್ಗಾಮಿ ವ್ಯಕ್ತಿತ್ವದ ಒಂದಂಶವಾದರೂ ಹೀರಿಕೊಳ್ಳುತ್ತಿದ್ದರೋ ಏನೋ'– ಎಂದು ಬಾಲ್ಯದಲ್ಲಿ ತಂದೆಯವರ ಮರಣದ ನಂತರ ಪಾ.ವೆಂ. ತನ್ನ ಬಗ್ಗೆ ಹೇಳಿಕೊಂಡ ಮಾತುಗಳು, ತಂದೆಯವರ ರಕ್ಷಣೆಯಲ್ಲಿ ಬೆಳೆಯಲು, ಪಿತೃ ಹೃದಯದ ಪ್ರೀತಿಗಾಗಿ ಹಂಬಲಿಸುವ ಈ ಮನಸ್ಸನ್ನು ಇಲ್ಲಿ ಕಾಣುತ್ತೇವೆ.

ಬಡತನದ ಜೀವನ ಅರಕ್ಷಿತತ್ತ್ವದ ಭಾವ ಬಾಲ್ಯದಿಂದಲೇ ಪಾ.ವೆಂ. ಅವರನ್ನು ಕಾಡುತ್ತಿತ್ತು. ಇದು ಅವರ ದೌರ್ಭಾಗ್ಯವೂ ಆಗಿತ್ತು. ತಂದೆಯನ್ನು ಹೊಂದಿರುವುದರ ಬೆಲೆ ಕಳೆದುಕೊಂಡವರಿಗೆ ತಿಳಿದಿರುತ್ತದೆ. ತಂದೆ ಎಂಥವನೇ ಆದರೂ ಅವನು ಮಗುವಿನ ಮನಸ್ಸಿಗೆ ಧೈರ್ಯದ ಆಧಾರ ಸ್ತಂಭವಾಗಿರುತ್ತಾನೆ. ಈ ತಂದೆಯವರ ಪ್ರೀತಿಯ ಅಭಾವದಲ್ಲಿ ಮಗು ಚುಕ್ಕಾಣಿಯಿಲ್ಲದ ದೋಣಿಯಂತೆ, ಲಂಗರಿಲ್ಲದ ಹಡಗಿನಂತೆ ಬದುಕಿನ ಅಘಾತಸಾಗರದಲ್ಲಿ ತೊಳಲಾಡ ಬೇಕಾಗುತ್ತದೆ. ತಂದೆಯವರಿಲ್ಲದ ಈ ಬದುಕು ಪಾ.ವೆಂ. ಅವರ ಮನಸ್ಸಿನಲ್ಲಿ ಬೇರೂರಿದ ಅನಾತ ಪ್ರಜ್ಞೆ ಅವರ ಬಡತನದ ಬದುಕಿಗೆ ಬದಲಿಸಲಾರದ ಒತ್ತನ್ನು ಕೊಟ್ಟಿದೆ.

ಈ ಎರಡು ದುರದೃಷ್ಟಗಳ ನಡುವೆ ಮೂರು ಮತ್ತು ನಾಲ್ಕನೇ ವಿಶೇಷ ದುರದೃಷ್ಟಗಳಿಗೆ ಒಳಗಾಗಿದ್ದರು. ಅವೆಂದರೆ ತಕ್ಕಮಟ್ಟಿನ ಬುದ್ಧಿ ಶಕ್ತಿ ಮತ್ತು ಸೂಕ್ಷ್ಮ ಮನಸ್ಸು. ಇವೆರಡೂ ಗುಣಗಳು ಅವರಿಗೊದಗಿದ ಪ್ರತಿಯೊಂದು ಘಟನೆಯನ್ನು

ದೊಡ್ಡದಾಗಿ ಬೆಳೆಸಿ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚೊತ್ತುವಂತೆ ಮಾಡುತ್ತಿತ್ತು. ಬಡತನ ಮತ್ತು ಅನಾಥ ಪ್ರಜ್ಞೆ ಅವರ ಬದುಕನ್ನು ಉತ್ತಮ ರೀತಿಯಲ್ಲಿ ರೂಪಿಸಲು ತಳಹದಿಯನ್ನು ಒದಗಿಸಿತು.

ಬಾಲ್ಯದ ಬದುಕಿನ ನೆನಪಿನ ಜಾಡಿನಲ್ಲಿ ಅಚ್ಚಳಿಯದೆ ಉಳಿದ ಕೆಲವು ಸನ್ನಿವೇಶಗಳು: ಪಾ.ವೆಂ. ಅವರ ಏಳನೇ ವಯಸ್ಸಿನಲ್ಲಿ ಕುಟುಂಬದವರೊಂದಿಗೆ ಕುಳಿತು ಊಟ ಮಾಡುವಾಗ ಒಂದು ರಾತ್ರಿ ಸಾರು ಸ್ವಲ್ಪ ಖಾರ ಎನಿಸಿದ್ದರಿಂದ ಅಂಜುತ್ತಾ ಅಂಜುತ್ತಾ ಎಣ್ಣೆ ಬೇಕು ಎಂದು ಕೇಳಿದೆ. ಆಗ ಅಲ್ಲಿದ್ದವರೊಬ್ಬರು ಸ್ವಲ್ಪ ವ್ಯಂಗ್ಯವಾಗಿ 'ಆಚಾರ್‍ರಿಗೆ ಎಣ್ಣೆ ಬೇಕಾಗಿತ್ತು' ಎಂದು ರಾಗ ಎಳೆದರು, ಎಣ್ಣೆ ಬಂತು, ನಾನು ಉಂಡೆ, ಎಲ್ಲ ಸರಿ ಆದರೆ ಆ ಕ್ಷುದ್ರ ಸನ್ನಿವೇಶ ಇಂದು ಇಳಿ ವಯಸ್ಸಿನಲ್ಲಿ ಕೂಡ ನನ್ನದೇ ಮನೆಯಲ್ಲಿ ನನ್ನ ಹೆಂಡತಿಯಿಂದಲೇ ಸಾರಿಗೆ ಎಣ್ಣೆ ಬೇಕೆಂದು ಕೇಳುವಾಗ ತಟ್ಟನೆ ಅವರಿಗೆ ನೆನಪಿಗೆ ಬರುತ್ತಿತ್ತೆಂದು ತಮ್ಮ ಉಡುಪಿಯ ಜೀವನ ಲೇಖನದಲ್ಲಿ ವಿವರಿಸಿದ್ದಾರೆ. ಎಷ್ಟು ನೆನಪಿನಲ್ಲಿ ಉಳಿದಿದೆ ಎಂದರೆ ಅನಿರ್ವಚನೀಯ ತಳಮಳ, ಅನಾಥಪ್ರಜ್ಞೆ ಬಡತನ ಇವೆಲ್ಲವೂ ಹೃದಯದಲ್ಲಿ ಆಳವಾಗಿ ಬೇರೂರಿ ಅವರ ಮನಸ್ಸನ್ನು ಹಣ್ಣುಮಾಡಿದೆ. ಬಡತನ ಸ್ವಾವಲಂಬಿಯಾಗಿ ಬದುಕಲು ಕಲಿಸಿದರೆ ಸ್ವಾವಲಂಬಿತನ ಅವರಲ್ಲಿ ಅದಮ್ಯ ಚೈತನ್ಯ ತುಂಬಿತು.

ಪಾ.ವೆಂ. ಅವರಿಗೆ ಎಂಟು ವರ್ಷ ತುಂಬುವಾಗ ಅವರ ತಾಯಿಯ ವಿಧವೆ ಅಕ್ಕ ನಾಗವೇಣಿಯಮ್ಮ ಉಡುಪಿಗೆ ಬರಮಾಡಿಕೊಂಡರು. ಅವರಿಗೆ ದೊರೆತ ಸ್ತ್ರೀಧನವನ್ನು ಕಾಪಾಡಿಕೊಂಡು ಸುಮಾರು ೮೦೦ರೂಪಾಯಿ ಸಂಗ್ರಹ ಮಾಡಿದ್ದರು. ಆ ಹಣವನ್ನು ಪಾ.ವೆಂ. ಅವರ ತಾಯಿಗೆ ಕೊಟ್ಟು ತನ್ನನ್ನು ಅಂತ್ಯಕಾಲದಲ್ಲಿ ನೋಡಿಕೊಳ್ಳಬೇಕೆಂದರು. ಕುಂಜಿಬೆಟ್ಟುವಿನಲ್ಲಿ ತಮಗಿದ್ದ ಚಿಕ್ಕಮನೆಯನ್ನು ದುರಸ್ತಿಮಾಡಿ ಅದರಲ್ಲಿ ವಾಸಿಸತೊಡಗಿದರು.

ಅನಂತೇಶ್ವರ ಪ್ರೈಮರಿ ಶಾಲೆಯಲ್ಲಿ ಪಾ.ವೆಂ. ನೇರವಾಗಿ ಮೂರನೇ ತರಗತಿ ಸೇರಿ ತರಗತಿಯಲ್ಲಿ ಮೇಲ್ಮಟ್ಟದ ವಿದ್ಯಾರ್ಥಿಯೆಂದು ಮನ್ನಣೆಯನ್ನು ಪಡೆದರು. ಅವರಿಗೆ ಉಪನಯನವೂ ಆಯಿತು. ಸಂಧ್ಯಾವಂದನೆ, ಅಗ್ನಿಕಾರ್‍ಯದ ಹೆಚ್ಚಿನ ವೈದಿಕ ಶಿಕ್ಷಣ ಅವರಿಗೆ ಸಿಗಲಿಲ್ಲ. ಅದರ ಬಗ್ಗೆ ಹೆಚ್ಚಿನ ಒಲವು ಇರಲಿಲ್ಲ. ದೈವಭಕ್ತನು ಆಗಿರಲಿಲ್ಲ. ಮುಂದೆಯೂ ಆಗಿಲ್ಲ. ಉತ್ತರವಿಲ್ಲದ ಸಮಸ್ಯೆಗಳು ಎದುರಾದಾಗ ಒಮ್ಮೊಮ್ಮೆ ದೇವರ ಕಡೆ ಮನಸ್ಸು ಹರಿಯುತ್ತಿತ್ತು. ಆದರೆ ದೇವರ ಮೇಲೆ ವಿಶ್ವಾಸವಿದ್ದ ಹಾಗೇ ಇಲ್ಲ. ಪಾ.ವೆಂ. ಅವರದು ತರ್ಕಬುದ್ಧಿ. ದೇವರು ತರ್ಕಕ್ಕೆ ಸಿಲುಕಿದವನಲ್ಲ. ಪರಿಣಾಮವಾಗಿ ರವೀಂದ್ರನಾಥ ಟಾಗೋರರು ಹೇಳುವ ಹಾಗೆ 'ನನ್ನನ್ನು ನನ್ನ ತಲೆಯ ಮೇಲೆ ನಾನೆ ಹೊತ್ತು' ತಿರುಗಾಡಬೇಕಾಗಿದೆ. ಬಡತನ ಯಾವಾಗಲೂ ಮನೆಯ ಬಾಗಿಲಲ್ಲೇ ಕಾದಿತ್ತು. ಅವರ ತಾಯಿ ಅನಕ್ಷರಸ್ಥೆಯಾದರೂ ಧೈರ್ಯಶಾಲಿ, ಸಹನಶೀಲೆಯಾಗಿದ್ದರು. ಆದ್ದರಿಂದಲೇ ಎಲ್ಲರಂತೆ ಬದುಕಲು ಸಾಧ್ಯವಾಯಿತು. ಗತಜೀವನವನ್ನು ನೆನಸಿದರೆ ಯಾವುದೋ ಒಂದು ಅದೃಷ್ಟ ಪಾ.ವೆಂ. ಅವರನ್ನು ನಡೆಸಿಕೊಂಡು ಬಂದಿದೆ.

ಪಾ.ವೆಂ. ನಾಲ್ಕನೇ ತರಗತಿಯಲ್ಲಿ ಇರುವಾಗ ನಡೆದ ಘಟನೆ. ಮನೆಯಲ್ಲಿ ಕಡುಬಡತನ ಬಿಡಿಗಾಸು ಇರಲಿಲ್ಲ. ಶಾಲೆಯ ಫೀ ಎಂಟಾಣೆ (೫೦ ಪೈಸೆ) ಕೊಡಲು ಸಾಧ್ಯವಾಗದ ಪರಿಸ್ಥಿತಿ. ಉತ್ತಮ ವಿದ್ಯಾರ್ಥಿಯಾಗಿದ್ದರೂ 'ಫೀ' ತಾರದಿದ್ದರೆ ನಾಳೆ ಕ್ಲಾಸಿಗೆ ಬರಬೇಡ ಎಂದು ಶಾಲಾ ಅಧಿಕಾರಿಗಳ ಆದೇಶವಾಯಿತು. ಇದನ್ನು ಮನೆಯಲ್ಲಿ ಹೇಳಿದಾಗ ತಾಯಿ ರೋಸಿಹೋಗಿ 'ಬರಬಾರದಾದರೆ ಹೋಗಿ ಸಂಸ್ಕೃತ ಪಾಠಶಾಲೆಗೆ ಸೇರು, ಏನಾದರೂ ಆಗು' ಎಂದುಬಿಟ್ಟರು. ಆದರೆ ಪಾ.ವೆಂ. ಅವರಿಗೆ ಸಂಸ್ಕೃತ ಶಾಲೆ, ವೈದಿಕ ವಿದ್ಯೆ, ಮಠಗಳ ಆಶ್ರಯದ ಬಗ್ಗೆ ಆಸಕ್ತಿ ಇರಲಿಲ್ಲ. ಮಠಗಳ ಸಂಪೂರ್ಣ ಸ್ವರೂಪವನ್ನು ಬಾಲ್ಯದಿಂದಲೂ ಕಂಡದ್ದರಿಂದ ಆ ದಿಕ್ಕಿಗೆ ತಲೆಹಾಕಿಯೂ ಮಲಗಬಾರದೆನ್ನುವ ಅನಿಸಿಕೆ ಅವರದಾಗಿತ್ತು. ಆದರೆ ಏನೂ ಮಾಡಲು ಸಾಧ್ಯವಿಲ್ಲ. ಪುಸ್ತಕ ಹಿಡಿದುಕೊಂಡು ಬೆಳಿಗ್ಗೆ ಅಳುತ್ತಾ ಶಾಲೆಗೆ ಹೊರಟರು. ಅದೃಷ್ಟವೆನ್ನುವಂತೆ ದಾರಿಯಲ್ಲಿ ನೆರೆಮನೆಯ ವಿಧವೆಯೋರ್ವರು ಬ್ರಾಹ್ಮಣೆಯ ರೂಪದಲ್ಲಿ ಎದುರಾಯಿತು. ಅವರು ಕೃಷ್ಣದೇವಾಲಯದಿಂದ ಬರುತ್ತಿದ್ದರು. ಅಳುವ ನನ್ನನ್ನು ನೋಡಿ ವಿಚಾರಿಸಿದರು. ನನ್ನ ಸಮಸ್ಯೆ ಅವರಿಗೆ ಅರ್ಥವಾಯಿತು.*[೩] 'ಹೆದರಬೇಡ, ನಾಳೆಯಿಂದ ಬೆಳಿಗ್ಗೆ ನಮ್ಮಲ್ಲಿ ಪೂಜೆಮಾಡಿ ಗಂಜಿ ಊಟ ಮಾಡಿ ಶಾಲೆಗೆ ಹೋಗು ನಿನ್ನ ಫೀ ನಾನು ಕೊಡುತ್ತೇನೆ' ಎಂದು ತಕ್ಷಣ ತಮ್ಮ ಗೋಪಿಚಂದನದ ಸಂಪುಷ್ಟದಿಂದ ಎಂಟಾಣೆ ತೆಗೆದುಕೊಟ್ಟರು. ಮುಂದೆ ಪಾ.ವೆಂ. ಅವರು ಅನೇಕ ವರ್ಷಗಳವರೆಗೆ ಅವರ ಮನೆಯಲ್ಲಿ ಪೂಜೆಮಾಡಿ ಒಂದು ಹೊತ್ತಿನ ಊಟವನ್ನು ಎಂಟಾಣೆ ದಕ್ಷಿಣೆಯನ್ನು ಸಂಪಾದಿಸುತ್ತಿದ್ದರು.

ಐದನೇ ತರಗತಿಯ ನಂತರ ಪ್ರಾಥಮಿಕ ಶಿಕ್ಷಣ ಮುಗಿಯಿತು. ಮುಂದೆ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಹೋಗಬೇಕೆಂಬ ಹಂಬಲ. ಆದರೆ ಹೈಸ್ಕೂಲಿನಲ್ಲಿ ಎರಡು ಮುಕ್ಕಾಲು ರೂಪಾಯಿ ಫೀ ತುಂಬಬೇಕು. ಪುಸ್ತಕಗಳಿಗೆ ಹಣ ಬೇಕು. ಮನೆಯಲ್ಲಿ ಊಟಕ್ಕೆ ಕೊರತೆ, ಬೇಡ, ಸಂಸ್ಕೃತ ಶಾಲೆಗೆ ಸೇರು, ಇಲ್ಲವಾದರೆ ಪರವೂರಿನಲ್ಲಿ ಹೋಟೆಲ್ ಸೇರು' ಎಂದರು ತಾಯಿ. ಒಮ್ಮೆ ರಜಾ ಸಮಯದಲ್ಲಿ ಅಕಸ್ಮಾತಾಗಿ ದೊಡ್ಡಪ್ಪನ ಮಗ ವೆಂಕಟದಾಸಾಚಾರ್ಯರು ಮನೆಗೆ ಬಂದರು. ಅವರು ಬೋರ್ಡ್ ಸ್ಕೂಲ್‌ನ ಪಂಡಿತರು. ಪಾ.ವೆಂ. ಅವರ ಸಮಸ್ಯೆಯನ್ನು ತಿಳಿದುಕೊಂಡರು. ಮುಂದಿನ ಹೈಸ್ಕೂಲ್ ಶಿಕ್ಷಣಕ್ಕೆ ಧನಸಹಾಯದೊಂದಿಗೆ ಎಲ್ಲ ಸಹಕಾರವನ್ನು, ಪ್ರೋತ್ಸಾಹವನ್ನು ನೀಡಿದರು. ಇವರಿಗೆ ಪ್ರತಿಕಾಣಿಕೆ ಎನ್ನುವಂತೆ ಪಾ.ವೆಂ. ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಾಲೆಗೆ ಮೊದಲನೆಯವರಾಗಿ ತೇರ್ಗಡೆಯಾದರು. ಗಣಿತದಲ್ಲಿ ನೂರಕ್ಕೆ ನೂರು, ಸಂಸ್ಕೃತದಲ್ಲಿ ೮೨, ಇಂಗ್ಲೀಷ್ ಫಸ್ಟ್ ಪೇಪರಿನಲ್ಲಿ ೫೦ಕ್ಕೆ ೪೨ ಅಂಕಗಳು ಬಂದಿದ್ದವು.

ಈ ಮಧ್ಯೆ ಮನೆಯ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು. ಅಸಲು ಹಣಕ್ಕೆ ಬಡ್ಡಿದರವನ್ನು ಸಾಲಿಗರು ಇಳಿಸಿದ್ದರಿಂದ ಆದಾಯ ಇಳಿ ಮುಖವೇ ಆಗಿತ್ತು. ಬೇಸಿಗೆಯಲ್ಲಿ ಮಳೆಗಾಲಕ್ಕೆ

ಬೇಕಾದ ಕಟ್ಟಿಗೆ ಸಂಗ್ರಹಿಸಲಾರದೇ ಮಳೆಗಾಲದಲ್ಲಿ ಹಸಿಕಟ್ಟಿಗೆಯಿಂದ ಒಲೆ ಉರಿಸುವ ಯತ್ನದಲ್ಲಿ ತಾಯಿ ಕಣ್ಣುಗಳನ್ನು ಊದಿಸಿಕೊಂಡು ಒಂದು ದಿನ ಪತಿಯನ್ನು ಶಪಿಸಿದ್ದನ್ನೂ ಮುಂದೆ ಪತಿ ನಿಂದನೆಗೆ ಪಶ್ಚಾತ್ತಾಪ ಪಟ್ಟು ಕಣ್ಣೀರು ಸುರಿಸಿದ್ದರು. ಇಂಥ ಮನೆಯ ಕಷ್ಟ ಪ್ರಸಂಗದಲ್ಲಿ ಶಾಲೆ ಬಿಟ್ಟು ಏನಾದರೂ ಕೆಲಸಕ್ಕೆ ಸೇರೋಣ ಎನ್ನುವ ಭಾವನೆ ಮೂಡಿದ್ದು ಇದೆ. ನವರಾತ್ರಿಯ ಸಮಯ. ಉಡುಪಿಯ ಶ್ರೀಮಂತರ ಕೆಲವು ಮನೆಗಳಲ್ಲಿ ಬ್ರಾಹ್ಮಣರಿಗೆ ಊಟ ಮತ್ತು ಒಂದೆರಡು ಕಾಸು ದಕ್ಷಿಣೆಯು ಸಿಗುತ್ತಿತ್ತು. ಆ ಸಮಯದಲ್ಲಿ ಶಾಲೆಗೆ ರಜೆ ಇದ್ದುದರಿಂದ ಮನೆಯ ಬಡತನದ ವ್ಯವಸ್ಥೆಗೆ ಅಲ್ಲಿ ಊಟಕ್ಕೆ ಹೋಗು ಎಂದು ತಾಯಿ ಒತ್ತಾಯ ಪಡಿಸುತ್ತಿದ್ದರು. ಪಾ.ವೆಂ. ಅವರಿಗೆ ಆ ಶ್ರೀಮಂತರ ಮನೆಯಲ್ಲಿ ಮಾರುದ್ದ ಮೈಯನ್ನು ಗೇಣುದ್ದ ಮಾಡಿಕೊಂಡು ಒಂದೂಟಕ್ಕೆ ಬಾಯ್ಬಿಡುವುದೆಂದರೆ ಸತ್ತಹಾಗೆಯೇ ಆಗಬೇಕು. ಮನೆಯ ಯಜಮಾನರಲ್ಲದಿದ್ದರೂ ಬಡಿಸುವವರು ಕೆಕ್ಕರುಗಣ್ಣಿನಿಂದ ನೋಡು*೪ 'ನೀನು ನಿನ್ನೆ ಕೂಡ ಊಟಕ್ಕೆ ಬಂದಿರಲಿಲ್ಲವೇ? ನನಗೆ ನೋಡಿದ ಹಾಗಾಗುತ್ತದೆ' ಎಂದು ಮಿಥ್ಯಾರೋಪ ಮಾಡಿದಾಗ ಉಂಡದ್ದನ್ನು ಕಾರಿಬಿಡಬೇಕೆನಿಸುತ್ತಿತ್ತು.

ಒಂದು ಸಲ ಪಾ.ವೆಂ. ತನ್ನ ಸಹಪಾಠಿಯೊಬ್ಬನ ಕ್ಲಿಪ್ಪನ್ನು ಕಳೆದರು. ಆತ 'ಬೇರೆ ಕೊಡಿಸು ಇಲ್ಲದಿದ್ದರೆ ಎರಡಾಣೆ ದಂಡ ಕೊಡು' ಆತ ಗಂಟುಬಿದ್ದು ಬಿಟ್ಟ ಎರಡಾಣೆ ಕೊಡಲು ಸಾದ್ಯವಾಗಲಿಲ್ಲ. ತಾಯಿಯನ್ನು ಕೇಳಿದರೆ ಕೆಂಡವಾಗುವರು ಎಂದು ಕೊನೆಗೆ ದೇವರಿಗೆ ಮುಡಿಪೆಂದು ತಾಯಿ ತೆಗೆದಿಟ್ಟ ಎರಡಾಣೆಯನ್ನು ಕದ್ದು ಪಾ.ವೆಂ. ಸಹಪಾಠಿಯ ಕಿರುಕುಳದಿಂದ ತಪ್ಪಿಸಿಕೊಂಡರು. ತಾಯಿ ಆ ಹಣವನ್ನು ಎಲ್ಲ ಕಡೆ ಹುಡುಕಾಡಿದರು. ಪಾ.ವೆಂ. ಅವರು ಕದ್ದಿರಬಹುದೆಂಬ ಸಂಶಯ ಕನಸಿನಲ್ಲಿಯೂ ಅವರಿಗೆ ಸುಳಿಯಲಿಲ್ಲ.

ಎಸ್.ಎಸ್.ಎಲ್.ಸಿ.ಯಲ್ಲಿ ೧೯೩೧ರಲ್ಲಿ ಮೊದಲನೆಯದಾಗಿ ತೇರ್ಗಡೆಯಾದ್ದರಿಂದ ಪಾ.ವೆಂ. ಅವರ ಮೇಲಿನ ಅಭಿಮಾನದಿಂದ ದಿವಂಗತ ರಾಕಿ ಫರ್ನಾಂಡಿಸ್‌ರು (ಆಸ್ಕರ್ ಫರ್ನಾಂಡಿಸ್‌ರ ತಂದೆ) ಮಂಗಳೂರಿನ ಆಲೋಶಿಯಸ್ ಕಾಲೇಜಿಗೆ ಹೋಗು ಅಲ್ಲಿ ಎಲ್ಲ ವ್ಯವಸ್ಥೆ ಮಾಡಿಸುತ್ತೇನೆ ಎಂದಾಗ ಪಾ.ವೆಂ. ಅವರು ಆ ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ. ಮನೆಯ ಆರ್ಥಿಕ ಸಂಕಟ, ಮಂಗಳೂರಲ್ಲಿ ಊಟಕ್ಕೇನು ಗತಿ ಇತ್ಯಾದಿ ಅಂಶಗಳು ಮುಂದೆದ್ದವು. ಇನ್ನೊಂದು ಊನಾಂಶವೆಂದರೆ ಬಡತನದಿಂದ ಮನೆಯ ಪರಿಸ್ಥಿತಿ ತೀರ ಹದಗೆಟ್ಟಿತ್ತು. ತಿಂಗಳಿಗೆ ಆರೇಳು ರೂಪಾಯಿಯ ಬಡ್ಡಿ ಆದಾಯದಿಂದ ದಿನ ತಳ್ಳಲು ಸಾಧ್ಯವಾಗುತ್ತಿರಲಿಲ್ಲ. ಸಹಾಯಹಸ್ತ ನೆರವಿಗೆ ಬರಲಿಲ್ಲ. ಔಪಚಾರಿಕ ವಿದ್ಯಾವ್ಯಾಸಂಗ ಇಲ್ಲಿಗೆ ಮುಕ್ತಾಯವಾಯಿತು.

ವಿದ್ಯಾರ್ಥಿಯಾಗಿ ಪಾ.ವೆಂ.: ತರಗತಿಯಲ್ಲಿ ಮೂರನೇಯ ಸ್ಥಾನಕ್ಕಿಂತ ಕಲಿಯುವುದರಲ್ಲಿ ಕೆಳಗಿಳಿದವರಲ್ಲ. ಎಲ್ಲ ಪರೀಕ್ಷೆಗಳಲ್ಲೂ ಪ್ರಥಮ ಸ್ಥಾನದಲ್ಲಿರುತ್ತಿದ್ದರು. ಅವರು ಪಠ್ಯಪುಸ್ತಕದ

ಕೀಟವೇನು ಆಗಿರಲಿಲ್ಲ. ಯಾರೊಂದಿಗೂ ಹೆಚ್ಚಿನ ಒಡನಾಟವಿಲ್ಲ. ಶಾಲೆಗೂ ತಪ್ಪಿಸುತ್ತಿರಲಿಲ್ಲ. ಪಠ್ಯಪುಸ್ತಕಗಳನ್ನು ಒಮ್ಮೆ ಕೊಂಡುಕೊಂಡ ಮೇಲೆ ಅಮೂಲಾಗ್ರ ಓದಿ ಮುಗಿಸಿದರೆ ಮುಂದೆ ಪರೀಕ್ಷೆಯ ಸಮಯದಲ್ಲಿ ಓದುವುದು ವಾಡಿಕೆ. ನೆರೆಮನೆಯಲ್ಲೊಬ್ಬರು ಹುಬ್ಬಳ್ಳಿಯಿಂದ ಕಥೆ, ಕಾದಂಬರಿಗಳನ್ನು ತರಿಸುತ್ತಿದ್ದರು. ಇದನ್ನು ಪಾ.ವೆಂ. ಅವರು ತಪ್ಪದೆ ಓದುತ್ತಿದ್ದರು. ಜೊತೆಗೆ ಕೈಗೆ ಸಿಕ್ಕಿದ ಪ್ರಾಚೀನ ಕಾವ್ಯಗಳು ಸಿಕ್ಕಿದ್ದನ್ನು ಓದುವ ಅಭ್ಯಾಸ ಜೋರಾಗಿತ್ತು. ಇದರ ಗುಂಗಿನಲ್ಲಿ ಒಮ್ಮೆ ಹೋಂ ವರ್ಕ್ ಮಾಡಲು ತಪ್ಪಿ ಇಂಪೋಜಿಶನ್‌ಗೆ ಗುರಿಯಾಗಿದ್ದು ಇದೆ. ಪಾ.ವೆಂ. ಜ್ಞಾಪಕ ಶಕ್ತಿ ಅಗಾಧವಾಗಿತ್ತು. ಓದಿದ್ದು ಹಸಿಗೋಡೆಯಲ್ಲಿ ಹರಳು ನೆಟ್ಟಂತೆ ನಟ್ಟುಬಿಡುತ್ತಿತ್ತು.ಶಾಲೆಯ ಪುಟ್‌ಬಾಲ್ ಆಟಗಳಿಗೆ ಹೋಗುತ್ತಿದ್ದರು. ದೊಡ್ಡ ಹುಡುಗರ ಕಾಲಡಿ ನುಸುಳಿ ಹೋಗುವಷ್ಟು ಸಣ್ಣವರಾಗಿದ್ದರು. ಅದು ಅವರಿಗೆ ಸಾಧಿಸಲಿಲ್ಲ. ರವಿವಾರ, ರಜಾದಿನಗಳಲ್ಲಿ ನೆರೆಮನೆಯ ಗೆಳೆಯರೊಂದಿಗೆ ಚಿನ್ನಿದಾಂಡು ಆಟದಲ್ಲೇ ಕಾಲವ್ಯಯ. ಅದರಲ್ಲಿಯೂ ಪ್ರವೀಣರಾಗಲಿಲ್ಲ.

ಕಾವ್ಯದ ಮೊದಲ ಹೆಜ್ಜೆ: ೫ನೇ ತರಗತಿ ೧೧ನೇ ವಯಸ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಕವಿತೆ ಬರೆಯುವ ಹವ್ಯಾಸ ಉಂಟಾಯಿತು. ಕ್ಲಾಸ್ ಮಾಸ್ತರರು ರಜೆ ತೆಗೆದುಕೊಂಡಾಗ ಭಂಡಾರಕರೆಂಬ ಮಾಸ್ತರರು ಅವರ ಸ್ಥಾನದಲ್ಲಿ ಆ ದಿನದ ಪಾಠ ಹೇಳಿದರು. ಆ ದಿನದ ಅವರು 'ಏತರಾಯಸವಿದು ಜಗದ್ವಿಖ್ಯಾತನಲ್ಲ ರಾಯರಲಿ ನಳ' ಎಂಬ ನಳಚರಿತೆಯ ಪದ್ಯವನ್ನು ಮಾಡಿದರು. ಇದು ಭಾಮಿನಿ ಷಟ್ಪದಿಗೆ ಸೇರಿದ ಪದ್ಯವಾಗಿತ್ತು. ನಾಗವರ್ಮನ ಛಂದಸ್ಸಿನ ಪದ್ಯವನ್ನು ಉದಾಹರಿಸಿ ವಿವರಿಸಿದರು. ಇತರ ಹುಡುಗರನ್ನು ಬಿಟ್ಟು ಪಾ.ವೆಂ. ಅವರ ಮೇಲೆ ಈ ಪದ್ಯ ಹೆಚ್ಚು ಪರಿಣಾಮವನ್ನು ಉಂಟುಮಾಡಿತು. 'ತರನ ತರಗನ ತಾನ ತನ್ನನ' ಎಂದು ಭಾಮಿನಿಯ ಲಯವನ್ನು ಗುಣುಗುಣಿಸುತ್ತಲೇ ಮನೆಗೆ ಬಂದರು. ನೆರೆಮನೆಯ ಕೋಳಿ ಅವರ ಮನೆಯ ಅಂಗಳಕ್ಕೆ ಹಾರಿಬಂದು ಅವರ ಬ್ರಾಹ್ಮಣ್ಯಕ್ಕೆ ಸವಾಲು ಹಾಕುತ್ತಿದ್ದುದನ್ನು ಕಂಡ ಪಾ.ವೆಂ. ಒಡನೆ ವಾಲ್ಮೀಕಿಯ ಬಾಯಲ್ಲಿ ಶೋಕ ಶ್ಲೋಕವಾದಂತೆ:[*೫]

'ಬಂದಿತಾದರೆ ಕೋಳಿ ಇಲ್ಲಿಗೆ
ಕೊಂದು ಬಿಡುವೆನದನು ಜಾಗ್ರತೆ
ಯಿಂದ ಇರಲ್ಕೆ ಕೋಳಿ ಸಾಕುವರೆಲ್ಲರವನಿಯಲಿ'

ಎಂದು ನಿರರ್ಗಳವಾಗಿ ಹಾಡಿ ಅದಕೊಂದು ಕಲ್ಲು ಬೀಸಿದರು. ಹೀಗೆ ಪಾ.ವೆಂ. ಅವರ ಕಾವ್ಯಸೇವೆ ಪ್ರಥಮವಾಗಿ. ಪ್ರಾರಂಭವಾಯಿತು. ಅಂದಿನಿಂದ ದ್ವಿಪದಿ-ಚೌಪದಿ-ಷಟ್ಪದಿ ಮೊದಲಾದವುಗಳನ್ನು ಬರೆಯುತ್ತಿದ್ದರು. ಚಂಪೂಕಾವ್ಯ ಪಠ್ಯಪುಸ್ತಕವಾಗಿ ಸಿಕ್ಕಿದ ಮೇಲೆ ರನ್ನನ ಗದಾಯುದ್ಧದ 'ಯಮರಾಜಪ್ರಿಯ ಸೂನುಗಂ ನಿನಗಮಾಗಾಂಡೀವ

ಧನ್ವಾಂಗಮಾ ಯಮಳರ್ಗಂ' ಎಂಬಲ್ಲಿಂದಾರಂಭವಾಗಿ 'ಗತಕಾಲಂ ಲಯಕಾಲಮಾಯ್ತು ನಿನಗಿನ್ನಾಯ್ತಂತ್ಯ ಕಾಲಂಗಡಾ' ಎಂಬಲ್ಲಿನವರೆಗಿನ ಭಾಗದಿಂದ ಸ್ಫೂರ್ತಿಗೊಂಡು ಕಂದವೃತ್ತಗಳಲ್ಲಿ ಪದ್ಯ ಬರೆಯತೊಡಗಿದರು.

ಚಂಪೂಕಾವ್ಯ ಬರೆದ ಒಂದು ಉದಾ: 'ವಿಲಸತ್ ಸಾಹಿತ್ಯ ಕಾಂತಾಕುಚಯುಗಲ ಸಮಾಕ್ರಾಂತ ಸದ್ರತ್ನಹಾರಕ್ಕೆ ಲಲಾಮಪ್ರಾಯಮಪ್ಪಾ' ಎಂದು ಆರಂಭಿಸಿ ಐವತ್ತು ಕಂದ ವೃತ್ತಗಳನ್ನು ಬರೆದರು. ತಮ್ಮ ದೊಡ್ಡಣ್ಣನಿಂದ ವಿದ್ವಾನ್ ಪರೀಕ್ಷೆಗೆಂದು ತಂದ ಗ್ರಂಥಗಳಾದ **ಛಂದೋಂಬುದಿ, ಶಬ್ದಮಣಿದರ್ಪಣಂ, ಭಿಕ್ಷಾಟನ ಚರಿತೆ** ಎಲ್ಲವನ್ನು ಓದಿ ಮುಗಿಸಿದ್ದರು. ವಿರೂಪಾಕ್ಷ ಪಂಡಿತನ ಋತುವರ್ಣನೆಯ ಓದಿನ ಪ್ರಭಾವದಿಂದ ವಾರ್ಧಕ ಷಟ್ಪದಿಗಳನ್ನು ಬರೆದರು. ಪದ್ಯಗಳಲ್ಲದೆ ಭೀ.ಪ.ಕಾಳೆ ಮೊದಲಾದವರ ಪ್ರಭಾವದಿಂದ ಪತ್ತೇದಾರಿ ಕಾದಂಬರಿಗೂ ಕೈಯಾಡಿಸಿದರು. ರವೀಂದ್ರನಾಥರ ಬರಹಕ್ಕೆ ಪ್ರೇರಿತರಾಗಿ ಬಂಗಾಲಿಯನ್ನೇ ಓದಬೇಕೆನ್ನುವ ಹುಮ್ಮಸ್ಸಿನಿಂದ ಬಂಗಾಲಿ ಭಾಷೆಯನ್ನು ಕಲಿತರು. ಬೀದಿಯಲ್ಲಿ ಎಸೆದ **ಅಲೆಟ್ರಾಸ್ ಕಾರ್ಡಿಯಲ್‌ರಿಯೋ** ಎಂಬ ಬಹುಭಾಷ ಔಷದದ ಕ್ಯಾಟಲಾಗೊಂದು ಸಿಕ್ಕಿದ್ದರಿಂದ ದೇವನಾಗರಿ ಮತ್ತು ಬಂಗಾಲಿ ಜಾಹೀರಾತುಗಳ ಅಕ್ಷರಗಳ ಹೋಲಿಕೆಯಿಂದ ಬಂಗಾಲಿ ವರ್ಣಮಾಲೆಯನ್ನು ಅರಿತುಕೊಂಡರು. ಮುಂದೆ ಆರೆಂಟಾಣೆ ಕೊಡಿಸಿ ಕಲ್ಕತ್ತೆಯಿಂದ ಬಂಗಾಲಿ ಬಾಲಬೋಧೆಯನ್ನು ತರಿಸಿಕೊಂಡು ಭಾಷೆಯ ಮೂಲತತ್ತ್ವಗಳನ್ನು ಕಲಿತುಕೊಂಡರು. ೧೦ನೆಯ ತರಗತಿಯಲ್ಲಿರುವಾಗ ರವೀಂದ್ರರ ಗೀತಾಂಜಲಿಯನ್ನು ತರಿಸಿಕೊಂಡು ಠಾಕೂರರು ರೂಪಿಸಿಕೊಂಡ ಛಂದಸ್ಸುಗಳಲ್ಲಿ ಬರೆಯುವ ಪ್ರಯತ್ನವನ್ನು ಮಾಡಿದರು.

ಗೀತಾಂಜಲಿಯ ಒಂದೆರಡು ಸಾಲುಗಳು*[೬]

ದಿನವು ಮುಗಿದ ಸಮಯದಲ್ಲಿ
ಯಮನು ನಿನ್ನ ಮನೆ ಬಾಗಿಲ
ಬಳಿ ಬಂದು ನಿಲ್ಲಲು ಅವಗೆ ಏನ ನೀವೆ ಗಾವಲ
ತುಂಬಿದೆನ್ನ ಪ್ರಾಣವನ್ನು
ತಂದು ಈವೆ ದಾನವೆಂದು...

ಹೀಗೆ ತೊಡಗುತ್ತದೆ. ಆಗ ಕವಿ ಕಿಶೋರನ ಪ್ರತಿಭೆಯ ಮೊಗ್ಗು ಮಿಟ್ಟೆಯಾಗಿತ್ತು ಎಂದು ಮೇಲಿನ ಸಾಲುಗಳು ಧ್ವನಿಸುತ್ತದೆ. ಹೆಚ್ಚಿನ ಅಧ್ಯಾಪಕ ವೃಂದದವರಿಗೆ ಪಾ.ವೆಂ. ಅವರ ಕಾವ್ಯಸಕ್ತಿ ರುಚಿಸಲಿಲ್ಲ. ಕೊರಡ್ಕಲ್ ಶ್ರೀನಿವಾಸರಾಯರು ಪಾ.ವೆಂ. ಅವರಿಗೆ ಬೆಂಬಲವಿತ್ತು. ತಿದ್ದಿ ತೀಡಿ ಸಲಹಿದವರು. ಅವರು ಸ್ವತಃ ಬರಹಗಾರರು ಆಗಿದ್ದರಿಂದ ಸಂಪೂರ್ಣ ಬೆಂಬಲ ದೊರೆಯಿತು. ಇನ್ನೊಬ್ಬ ಪ್ರೇರಕರು ದೂರದ ಬಂಧುಗಳಾದ ಕನ್ನಡ ಪಂಡಿತ, ಬರಹಗಾರ ರಾಘವೇಂದ್ರ ಬಲ್ಲಾಳರು. ನಿರಂತರವಾದ ಓದು ಜೊತೆಗೆ ಏನಾದರೂ ಕಲಿಯಬೇಕು ಎನಿಸಿದರೇ ಏನೇ ಅಡಚಣೆಗಳಿದ್ದರೂ ಕಲಿಯುವ ಛಲ

ಪಾ.ವೆಂ. ಅವರದು. ವ್ಯವಸ್ಥಿತ ಓದು ಅಲ್ಲದಿದ್ದರು ಕೈಗೆ ಸಿಕ್ಕಿದ್ದನ್ನು ಓದಿ ಅರಗಿಸಿಕೊಳ್ಳುತ್ತಿದ್ದರು. ಅವರ ಮನದಲ್ಲಿ ವಿಚಾರಧಾರೆಗಳು ಕಂಪ್ಯೂಟರ್ ಶೇಖರಣೆಯಂತೆ ವ್ಯವಸ್ಥಿತ ರೀತಿಯಲ್ಲಿ ಉಳಿಯುತ್ತಿದ್ದವು. ಬೇಕೆಂದಾಗ ಥಟ್ಟನೆ ಹೊರತೆಗೆಯುವ ಅದ್ಭುತ ನೆನಪಿನ ಶಕ್ತಿ ಅವರಲ್ಲಿತ್ತು.

ಆ) ವೃತ್ತಿಯ ಆಯ್ಕೆ, ಬರಹಗಾರ, ಕವಿ ನಂತರ ಪತ್ರಿಕೋದ್ಯಮ ಪ್ರವೇಶ:

ವಿದ್ಯಾಭ್ಯಾಸದ ಅವಧಿಯಲ್ಲಿ ಆದಾಯ ಸಾಲದ್ದರಿಂದ ಕಾಲೇಜು ಶಿಕ್ಷಣ ಕನಸಿನ ಗಂಟಾಯಿತು. ತಾಯಿ ಕೃಷ್ಣಮಠದ ಧರ್ಮಾರ್ಥ ಅನ್ನವನ್ನು ಆಶ್ರಯಿಸಬೇಕಾಯಿತು. ತಾಯಿ ಮತ್ತು ಮಗ ಪಾ.ವೆಂ. ಇಬ್ಬರಿಗೂ ಇದು ಅವಮಾನಕರ ಬದುಕು ಅನ್ನಿಸುತ್ತಿತ್ತು. ಆದಷ್ಟು ಬೇಗ ಇದಕ್ಕೆ ಕೊನೆ ಹಾಕಬೇಕೆಂದು ನಿರ್ಧರಿಸಿದರು. ಬಡತನದಲ್ಲಿಯೂ ದೇಹಿ ಎನ್ನುವ ಪ್ರವೃತ್ತಿ ಅವರಿಗೆ ಹಿಡಿಸಲಿಲ್ಲ. ಆದರೆ ಏನಾದರೂ ಮಾಡಬೇಕೆನ್ನುವ ಮನಸ್ಸು ನಿಖರವಾಗಿ ರೂಪುಗೊಂಡಿತ್ತು. ಬ್ರಾಹ್ಮಣರಿಗೆ ಸರಕಾರಿ ಕೆಲಸ ಸಿಗುವುದು ಕಷ್ಟವಾಗಿತ್ತು. ಸರಕಾರಿ ಕೆಲಸಕ್ಕೆ ಸೇರಲು ಅವರಿಗೆ ಮನಸ್ಸು ಇರಲಿಲ್ಲ.

ಹೈಸ್ಕೂಲಿನಲ್ಲಿದ್ದಾಗ ಸ್ವರಾಜ್ಯ ಚಳವಳಿ, ಮೆರವಣಿಗೆಗಳು, ಮಹಾತ್ಮಾಗಾಂಧಿಯ ಕತೆಗಳು, ಅವರು ಜೈಲಿಗೆ ಹೋದ ಘಟನೆಗಳು ಅಪರೂಪಕ್ಕೆ ಶಾಲಾ ಇನ್ಸ್‌ಪೆಕ್ಟರರು ಬರುವ ದಿನ ಕೆಲವು ಧೈರ್ಯಶಾಲಿ ಹುಡುಗರು ಗಾಂಧೀ ಟೋಪಿ ಹಾಕಿಕೊಂಡು ಬರುವ ಮೂಲಕ ಸಾಂಕೇತಿಕ ಬಂಡಾಯ ಹೂಡುತ್ತಿದ್ದರು. ಶಾಲಾ ಅಧಿಕಾರಿಗಳು ಬಹಿರಂಗದಲ್ಲಿ ಈ ರೀತಿ ರಾಜದ್ರೋಹವನ್ನು ನಿಲ್ಲಿಸಲು ಯತ್ನಿಸಿದರು. ಅಂತರಂಗದಲ್ಲಿ ಅವರ ಪರಕೀಯ ರಾಜಭಕ್ತಿ ಸಡಿಲವಾಗುತ್ತಿತ್ತು.

ಭಾರತ ಹಾಗೂ ಕನ್ನಡ ನಾಡಿನ ಇತಿಹಾಸದಲ್ಲಿ ೧೯೩೦ನೆಯ ವರ್ಷ ಅತಿ ಮಹತ್ತ್ವದ ಕಾಲವೆನಿಸಿದೆ. ಈ ಕಾಲದಲ್ಲಿ ಮಹಾತ್ಮಾ ಗಾಂಧೀಯವರು ಆಂಗ್ಲಸತ್ತೆಯ ವಿರುದ್ಧವಾಗಿ ಅಸಹಕಾರ ಆಂದೋಲನವನ್ನು ಪ್ರಾರಂಭಿಸಿದ ಕಾಲ. ಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗ ಎಂಬುದು ಅವರ ಸಂದೇಶವಾಗಿತ್ತು. ಇದರಿಂದ ದೇಶಾಭಿಮಾನ, ಭಾಷಾಭಿಮಾನ ಪುಟಿದೆದ್ದವು. ಭಾರತದಿಂದ ಬ್ರಿಟಿಷರನ್ನು ತೊಲಗಿಸಲು ಸತ್ಯಾಗ್ರಹವೊಂದೆ ಶಾಂತಿಯುತ ಮಾರ್ಗವೆಂಬುದು ಗಾಂಧೀಜಿಯ ಮಂತ್ರವಾಯಿತು. ಐತಿಹಾಸಿಕವಾಗಿ ಬ್ರಿಟಿಷರು ಭಾರತವನ್ನು ಆಳಿದ ಕಾಲ. ಸ್ವರಾಜ್ಯಕ್ಕಾಗಿ ಗಾಂಧೀಜಿಯವರು ಇತರರ ನಾಯಕತ್ವದಲ್ಲಿ ಹೋರಾಟ ನಡೆಸಿದರು. ಇದರ ಪರಿಣಾಮ ಉಡುಪಿಯಂತಹ ಧಾರ್ಮಿಕ ನಗರದಲ್ಲಿಯು ನಾವು ಕಾಣುತ್ತೇವೆ. ಯು.ಎಸ್. ಪಣಿಯಾಡಿಯವರಂತ ಸ್ವಾತಂತ್ರ್ಯ ಹೋರಾಟಗಾರರು ದೇಶಭಕ್ತರು ಈ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಇತಿಹಾಸದ ಪಾಠವನ್ನು ಹೇಳುತ್ತಿದ್ದ ಹೆಡ್ಮಾಸ್ಟರ್ ರಾಕಿ ಫರ್ನಾಂಡಿಸ್‌ರು ಕ್ಲೈವ್, ಹೇಸ್ಟಿಂಗ್ ಮೊದಲಾದವರು ಭಾರತೀಯರಿಗೆ ಮಾಡಿದ ಅನ್ಯಾಯಗಳನ್ನು ತಮ್ಮ ಸ್ವಾರಸ್ಯ

ಶೈಲಿಯಲ್ಲಿ ವಿವರಿಸುತ್ತಿದ್ದರು. ಕಲ್ಕತ್ತೆಯ ಕಪ್ಪು ಕೋಣೆಯ ಕಥೆ ಕಪೋಲಕಲ್ಪಿತವೆಂಬ ಬಗ್ಗೆ ಅವರು ಅನೇಕ ಪ್ರಮಾಣಗಳನ್ನು ಕೊಡುತ್ತಿದ್ದರು. ಎಲ್ಲ ಯುವಕರ ರಕ್ತವೂ ಬಿಸಿಯೇರುತ್ತಿತ್ತು. ಚಳುವಳಿಯಲ್ಲಿ ಧುಮುಕುವ ಧೈರ್ಯವಿಲ್ಲದಿದ್ದರೂ ಒಂದು ದಿನ ಸ್ವರಾಜ್ಯದವರ ಮೆರವಣಿಗೆ ನೋಡುತ್ತಾ ನಿಂತು ತಡವಾಗಿ ಶಾಲೆಗೆ ಬಂದು ಎಚ್ಚರಿಕೆಗೂ ಗುರಿಯಾಗಿದ್ದರು. ಒಟ್ಟಿನಲ್ಲಿ ಸರಕಾರಿ ನೌಕರಿಗೆ ಪ್ರಯತ್ನ ಮಾಡದೆ ೧೯೩೨ರಲ್ಲಿ ಕಡಿಯಾಳಿ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಮಾಸ್ತರರಾದರು. ಎಲ್ಲ ವಿದ್ಯೆಯನ್ನು ಸುಲಭವಾಗಿ ಕರಗತ ಮಾಡಿಕೊಳ್ಳುವ ಶಕ್ತಿಪಡೆದಿದ್ದ ಪಾ.ವೆಂ.ರವರು ಕಡಿಯಾಳಿ ಶಾಲೆಯಲ್ಲಿ ಒಂದು ವರ್ಷ ಉಪಾಧ್ಯಾಯ ವೃತ್ತಿ ಮಾಡಿದ ನಂತರ ಬೋಧನೆ ಮಾಡುವುದಕ್ಕೆ ಅಪ್ರಯೋಜಕ ರೆಂದುಕೊಂಡರು. ಅವರ ದೌರ್ಬಲ್ಯವೆಂದರೆ ಎಳೆಯ ಮಕ್ಕಳ ಮಟ್ಟಕ್ಕಿಳಿದು ಪಾಠ ಹೇಳಿ ಕೊಡಲು ಸಾಧ್ಯವಾಗುತ್ತಿರಲಿಲ್ಲ. 'ಉತ್ತಮ ಮೇಧಾಶಕ್ತಿ ಸಾಲುವುದಿಲ್ಲ[*೭] ಮಕ್ಕಳಿಗೆ ಪಾಠ ಹೇಳಲಾರೆ ಉಪಾಧ್ಯಾಯ ವೃತ್ತಿಗೆ 'ನಮೋ ಉಪಾಧ್ಯಾಯ!' ಎಳೆಯ ಕರುಗಳಿಗೆ ಎಳೆ ಹುಲ್ಲು ತಿನಿಸದೇ ಹೋದೆ' ಎಂದಿದ್ದಾರೆ. ಹೀಗೆ ಪಾ.ವೆಂ. ಅವರು ಪ್ರವೇಶಿಸಿದ ಮೊದಲ ವೃತ್ತಿರಂಗದಲ್ಲಿ ಜಯಗಳಿಸಲಿಲ್ಲ.

ವಿಫಲ ಶಿಕ್ಷಕರೆನಿಸಿದ ಪಾ.ವೆಂ. ತನ್ನ ಬಗ್ಗೆ ಮನಗಂಡಿದ್ದು ಹೀಗೆ: ವಿಶಿಷ್ಟ ಬೌದ್ಧಿಕ ಮಟ್ಟಕ್ಕಿಂತ ಕೆಳಗಿನ ಪ್ರೌಢರಿಗೂ ವಿಷಯವನ್ನು ವಿವರಿಸಿ ಮನದಟ್ಟು ಮಾಡುವುದು ಸಾಧ್ಯವಾಗಲಿಲ್ಲ. ಗುರುವಾಗುವುದಕ್ಕೆ ಹೇಗೆ ಅನರ್ಹನೋ ಶಿಕ್ಷಕನಾಗುವುದಕ್ಕೂ ಅನರ್ಹ ಶಾಲೆಯ ಮಾಸ್ತರರು ಪಾ.ವೆಂ. ಅವರಿಗೆ ನಿಮಿತ್ತ ಮಾತ್ರವಾಗಿದ್ದರು. ತಮಗೆ ಬೇಕಾದ ಅಂಶವನ್ನು ತಾವೇ ಕಲಿತುಕೊಂಡಿದ್ದರು. ಪರೀಕ್ಷೆಗಾಗಿ ಓದುತ್ತಿದ್ದರು ಕುತೂಹಲಕ್ಕಾಗಿ ಅಭ್ಯಾಸ. ಶರೀರಶಾಸ್ತ್ರ, ಗಣಿತ, ಭಾಷೆ, ಭೌತಶಾಸ್ತ್ರಗಳ ಬಗ್ಗೆ ಹೆಚ್ಚು ಆಸಕ್ತಿಯಿತ್ತು. ಸ್ವಾಧ್ಯಾಯದ ಇಂಗಿತವನ್ನು ಬಾಲ್ಯದಿಂದಲೇ ನಾವು ಕಾಣುತ್ತೇವೆ.

ಉಪಾಧ್ಯಾಯ ವೃತ್ತಿಗೆ ಶರಣು ಹೊಡೆದು ೧೯೩೩ರಲ್ಲಿ ಸ್ವದೇಶಿ ಅಂಗಡಿಯಲ್ಲಿ ಸೇಲ್ಸ್‌ಮನ್ ಆಗಿ ಕೆಲಸಕ್ಕೆ ಸೇರಿದರು. ಆಗಲೇ ಪಾ.ವೆಂ. ಅವರ ಕವಿತೆಗಳು ಮಂಗಳೂರಿನ **ರಾಷ್ಟ್ರಬಂಧು** ಪತ್ರಿಕೆಯಲ್ಲಿ ಪ್ರಕಟವಾದವು. ಉಡುಪಿಯಲ್ಲಿ ಒಬ್ಬ ಕವಿ ಎನಿಸಿಕೊಂಡರು. ಪಾ.ವೆಂ. ಅವರ ಸಮಾನ ವಯಸ್ಕರಾದ ಎಸ್.ವೆಂಕಟರಾಜರು ಕವಿ ಕಥೆಗಾರರೆಂದೇ ಪ್ರಸಿದ್ಧರಾದರು. ಇಬ್ಬರು ಗೆಳೆಯರಾದರು. 'ಭಾರತ ವಸ್ತು ಮಂದಿರ' ಈ ಸ್ವದೇಶಿ ಅಂಗಡಿ ಎಸ್.ಯು.ಪಣಿಯಾಡಿಯವರದು. ಇವರು ಉಡುಪಿಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಯಾವಾಗಲೂ ಕೆಂಪಂಗಿ ಧರಿಸುತ್ತಿದ್ದರು. ಮಹತ್ತ್ವದ ವ್ಯಕ್ತಿಯಾಗಿದ್ದರು.

ಎಸ್.ಯು. ಪಣಿಯಾಡಿ: ಆಧುನಿಕ ಉಡುಪಿಯ ನಿರ್ಮಾತೃಗಳಲ್ಲಿ ಇವರು ಒಬ್ಬರು. ಇವರನ್ನು ವ್ಯಕ್ತಿ ಅನ್ನವುದಕ್ಕಿಂತ ಧೈರ್ಯದ ಶಕ್ತಿ ಎನ್ನಬಹುದು. ಸಂಸ್ಕೃತದಲ್ಲಿ ಮೀಮಾಂಸೆ

ಶಿರೋಮಣಿ ಧರ್ಮಶಾಸ್ತ್ರ ಪಾರಂಗತರು. ಬರೋಡಾದ ಸಂಸ್ಕೃತ ವಿಭಾಗದಲ್ಲಿ ಲೈಬ್ರರಿಯನ್ ಆಗಿದ್ದರು. ನಂತರ ಕಾಂಗ್ರೆಸ್ ಸೇರಿ ಜೈಲುವಾಸವನ್ನು ಅನುಭವಿಸಿ ಸ್ವದೇಶಿ ಅಂಗಡಿಯನ್ನು ಮತ್ತು ತುಳುನಾಡು ಪ್ರೆಸ್ಸು ಎಂಬ ಮುದ್ರಣಾಲಯವನ್ನು ಪ್ರಾರಂಭಿಸಿದರು. ಮುಂದೆ ತಮ್ಮ ಸಂಸ್ಥೆಯೊಂದಿಗೆ ಲಿಮಿಟೆಡ್ ಕಂಪನಿಯನ್ನು ಮಣಿಪಾಲದಲ್ಲಿ ಒಂದು ಪ್ರೆಸ್ಸು ಬ್ಯಾಂಕ್‌ನ್ನು ತೆರೆದರು. ಪ್ರಭಾವಶಾಲಿ ವ್ಯಕ್ತಿತ್ವದವರು.

ಪಣಿಯಾಡಿಯವರ ಸ್ವದೇಶಿ ವಸ್ತು ಭಂಡಾರದಲ್ಲಿ ಹಾಗೂ ಅವರ ತುಳುನಾಡ ಪ್ರೆಸ್‌ನಲ್ಲಿ ನೌಕರಿಗೆ ಸೇರಿ ಕಾರಕೂನಿಕೆ, ಲೆಕ್ಕಪತ್ರ ಮತ್ತು ಮುದ್ರಣ ಕಾರ್ಯಗಳನ್ನು ನಡೆಸುತ್ತಿದ್ದರು. ಇಲ್ಲಿಯ ಸಂಸ್ಥೆಗಳಲ್ಲಿ ಪ್ರಾರಂಭದಲ್ಲಿ ಕೆಲಸಮಾಡುವುದು ಪಾ.ವೆಂ. ಅವರಿಗೆ ಯಾತನಮಯದ ಅನುಭವವಾಗಿತ್ತು. ನಂತರ ಅದು ನಾಶದ ಅಂಚನ್ನು ತಲುಪಿತು. ಕಂಪನಿಗೆಳಲ್ಲವೂ ದಿವಾಳಿಯಾಗಿ ಅವುಗಳೊಡನೆ ಪಾ.ವೆಂ. ಅವರಿಗಿದ್ದ ಸಂಬಂಧ ಮತ್ತು ಆರ್ಥಿಕ ತಳಕುಗಳ ಫಲವಾಗಿ ಊರಿನಲ್ಲಿ ನಿಲ್ಲಲಾರದ ಪರಿಸ್ಥಿತಿ ಉಂಟಾಯಿತು.

ಪಣಿಯಾಡಿಯವರು ಓರ್ವ ಕ್ರಾಂತಿಕಾರಿ ವೃತ್ತಿಯವರು. ಪಾ.ವೆಂ. ಅವರಲ್ಲಿದ್ದ ಸಾಂಪ್ರದಾಯಿಕ ನಂಬಿಕೆಗಳು ಪಣಿಯಾಡಿಯವರ ಸಂಸರ್ಗದಿಂದ ಕಳಚಿ ಬಿದ್ದವು. ಆದರೆ ಪಾ.ವೆಂ. ಅವರಿಗೆ ಪಿತೃಶ್ರಾದ್ಧದಲ್ಲಿ ಆಸಕ್ತಿ ಇತ್ತು. ಸ್ನೇಹಿತರನ್ನು ಹಿತವರನ್ನು ಕರೆದು ಊಟ ಮಾಡುವ ಸಂದರ್ಭದಲ್ಲಿ ಶ್ರಾರ್ಧ ಎಂದರೆ ಶ್ರದ್ಧೆಯಿಂದ ಹಿರಿಯರಿಗೆ ಕೃತಜ್ಞತೆಯನ್ನು ನೆನೆಯುವ ದಿನ ಎನ್ನುತ್ತಿದ್ದರು. ಉಡುಪಿಯಲ್ಲಿ ಹರಿಜನ ಚಳವಳಿಯ ನೇತೃತ್ವ ವಹಿಸಿದ್ದ ಪಣಿಯಾಡಿಯವರು ಸನಾತನಿಗಳ ಪವಿತ್ರ ನಂಬಿಕೆಗಳ ಒಂದು ವಾಲ್ತೇರಿಯನ್ ಲೇವಡಿಯಿಂದ ಅವರು ಕೆಡವ ಬಲ್ಲವರಾಗಿದ್ದರು. ಇವರೊಂದಿಗೆ ಕಳೆದ ಆರು ವರ್ಷಗಳು ಫಲಪ್ರದವಾದವು.

ಪಣಿಯಾಡಿಯವರ ಸಂಸ್ಥೆಯಲ್ಲಿ ಒದಗಿಸಿದ ಬಹುಮುಖ ಅನುಭವಗಳು ಲೆಕ್ಕ ಪತ್ರಗಳನ್ನು ಬರೆಯುವಲ್ಲಿ ನಿಪುಣತೆಗೊಳಿಸಲು ಸಹಕಾರಿಯಾದ ಅಂಶಗಳು: ಪಾ.ವೆಂ. ಅವರು ಆಧುನಿಕ ಅಕೌಂಟನ್ಸಿಯ ಜ್ಞಾನವನ್ನು ತಿಳಿಯಲು ಫೀಲ್ಡ್‌ಹೌಸ್‌ನ ಅಕೌಂಟನ್ಸಿ ಪುಸ್ತಕವನ್ನು ಅಭ್ಯಾಸ ಮಾಡಿದ್ದರು. ಪಣಿಯಾಡಿಯವರ ಪ್ರೆಸ್ಸಿನ ಲೆಕ್ಕಪುಸ್ತಕಗಳು ಗೊಂದಲದಲ್ಲಿ ಬಿದ್ದಿದ್ದವು. ಅದನ್ನು ವ್ಯವಸ್ಥಿತ ರೀತಿಯಲ್ಲಿರಿಸಿ ಲೆಕ್ಕ ಬರೆಯುವ ಪದ್ಧತಿಯನ್ನು ಆಧುನಿಕರಿಸಿದರು. ಪಣಿಯಾಡಿಯವರ ಕಂಪನಿಗಳಲ್ಲಿ ಲೆಕ್ಕಪತ್ರ, ಸಭಾಕ್ರಮ ಸೆಕ್ರೆಟೆರಿಯಲ್ ಪ್ರ್ಯಾಕ್ಟೀಸು, ಬ್ಯಾಲನ್ಸ್ ಶೀಟುಗಳ ತಯಾರಿ, ಕಂಪನಿ ಕಾನೂನು ಎಲ್ಲ ಕೆಲಸಗಳನ್ನು ಸುಸೂತ್ರವಾಗಿ ನಿಭಾಯಿಸಿದರು. ಕಂಪನಿಗಳ ವಿಷಯದಲ್ಲಿ ಪಾ.ವೆಂ. ಅವರ ತಿಳುವಳಿಕೆ ವ್ಯಾಪಕವಾಗಿ ವೃದ್ಧಿಯಾಗಿತ್ತು. ಪಣಿಯಾಡಿಯವರು ಮಣಿಪಾಲ ಪ್ರೆಸ್ಸಿನ ಮ್ಯಾನೇಜರ್‌ರಾಗಿ ಕೆಲಸ ಮಾಡಿದರು. **ಅಂತರಂಗ** ಪತ್ರಿಕೆಯನ್ನು ಪ್ರಾರಂಭಿಸಿದರು. ಮುಂದೆ ಅದು ಬಹಳ ಜನಪ್ರಿಯತೆಯುನ್ನು ಪಡೆಯಿತು. ಆ ಸಂಪಾದಕ ಮಂಡಲಿಯಲ್ಲಿದ್ದು ಲೇಖನ ಬರವಣಿಗೆಯ ದೀಕ್ಷೆಯನ್ನು ಪಾ.ವೆಂ. ಅವರು ಪಡೆದರು.

೧೯೩೩ರ ಸುಮಾರಿಗೆ ಕವಿಯಾಗಿ ಬೆಳೆಯುತ್ತಿದ್ದ ಪಾ.ವೆಂ. ರಚನೆಗಳು ಮಂಗಳೂರಿನ **ರಾಷ್ಟ್ರಬಂಧು** ಧಾರವಾಡದ **ಜಯ ಕರ್ನಾಟಕ,** ಮೈಸೂರಿನ **ಪ್ರಬುದ್ಧ ಕರ್ನಾಟಕ,** ಪಣಿಯಾಡಿಯವರ **ಅಂತರಂಗ ಪತ್ರಿಕೆ, ಧುರೀಣ** ಮೊದಲಾದ ಪತ್ರಿಕೆಗಳಲ್ಲಿ ಬೆಳಕು ಕಂಡವು. ಅದರಿಂದಾಗಿ ಉಡುಪಿಯ ಬರಹಗಾರರು, ಸಾಹಿತಿಗಳಾದ ಬನ್ನಂಜೆ ರಾಮಾಚಾರ್ಯ, ಸತ್ಯಮಿತ್ರ ಬಂಗೇರ, ಎಸ್.ವೆಂಕಟರಾಜ, ಕೊರಡ್ಕಲ್ ಶ್ರೀನಿವಾಸರಾವ್, ಕು.ಶಿ. ಹರಿದಾಸ ಭಟ್ಟ, ಧಾರವಾಡದ ದ.ಬಾ.ಕುಲಕರ್ಣಿ, ಪ್ರಹ್ಲಾದ ನರೇಗಲ್, ಜಿ.ಶೇ. ಕುಲಕರ್ಣಿ ಮುಂತಾದವರು ಅವರ ಗೆಳೆಯರಾದರು. ಹುಬ್ಬಳ್ಳಿಗೆ ಬಂದ ಮೇಲೆ ನಿಕಟವರ್ತಿಗಳಾದರು. ದ.ಬಾ.ಕು. ಅಂತರಂಗದ ಮಿತ್ರರೇ ಆದರು.

೧೯೩೮ರಲ್ಲಿ ಪಣಿಯಾಡಿಯವರು ಅಂತರಂಗ ಎಂಬ ಪತ್ರಿಕೆಯನ್ನು ಆರಂಭಿಸಿದರು. **ಅಂತರಂಗ** ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಪಾ.ವೆಂ. ಇದ್ದರು. ಪಾ.ವೆಂ.ಗೆ ಬರೆಯುವ ಅಧಿಕೃತ ದೀಕ್ಷೆ ದೊರೆಯಿತು. **ನವಯುಗ** ತುಳು ಪುರವಾಣಿಯಲ್ಲಿ ತುಳು ಕವಿತೆಗಳು ಪ್ರಕಟಗೊಂಡವು. **ಅಂತರಂಗ**ದ ವ್ಯಾಪಕ ಪ್ರಸಾರ ಜನಪ್ರಿಯತೆಯನ್ನು ಗಳಿಸಿಕೊಟ್ಟಿತು. ಕತೆಗಾರರಾಗಿ ಕಾಣಿಸಿಕೊಂಡ ಪಾ.ವೆಂ.ಗೆ **ನವಯುಗ** ಪತ್ರಿಕೆಯ ಸಂಪಾದಕ ಕೆ. ಹೊನ್ನಯ್ಯ ಶೆಟ್ಟರು **ಮಧುವನ** ಎನ್ನುವ ಪ್ರಾತಿನಿಧಿಕ ಕಥಾಸಂಕಲನವನ್ನು ಸಿದ್ಧಪಡಿಸುವಾಗ ಸಹ ಸಂಪಾದಕನಾಗಿ ಬಳಸಿಕೊಂಡರು. ಪಾ.ವೆಂ. ಅವರ ಮೊದಲ ಪುಸ್ತಕ ೧೯೩೫ರಲ್ಲಿ ಶ್ರೀ ರಾಮಪರ ಹರಿಕೀರ್ತನೆಗಳು ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರಿಗಾಗಿ ಸಂಪಾದಿಸಿದರು. ಮರು ವರ್ಷ ೧೯೩೬ರಲ್ಲಿ 'ಕಾವ್ಯ ಸಾಮಾಜ್ಯದ ಪ್ರಕಟಣೆ' ಇದರಲ್ಲಿ ವಿವಿದ ಕವಿಗಳ ೪೮ ಕವನಗಳಿದ್ದು, ಪಾ.ವೆಂ. ಮತ್ತು ಗೆಳೆಯರಾದ ಹೊನ್ನಯ್ಯ ಶೆಟ್ಟಿಯವರು ಕೂಡಿ ಸಂಪಾದಿಸಿದ್ದರು. ಎಲ್ಲ ಸುಪ್ರಸಿದ್ಧ ಕವಿಗಳ ಕವಿತೆಗಳಿವೆ. ಅದಕ್ಕೆ ಬಿ.ಯಂ ಶ್ರೀಯವರು ಮುನ್ನುಡಿ ಬರೆದಿದ್ದರು. ೧೯೩೫ರಲ್ಲಿ ಮರು ಮುದ್ರಣವನ್ನು ಕಾಣುವಷ್ಟು ಉತ್ಕೃಷ್ಟ ಕವನ ಸಂಗ್ರಹ ಇದಾಗಿತ್ತು. ೧೯೪೦ರಲ್ಲಿ **ಅಂತರಂಗದ ಕಥೆಗಳು** ಎನ್ನುವ ಸಣ್ಣಕತೆಗಳ ಸಂಕಲವನ್ನು ಸಂಪಾದಿಸಿದರು. ಇದರಲ್ಲಿ ಪಾ.ವೆಂ. ಅವರ ಮೂರು ಕಥೆಗಳು ಪ್ರಕಟವಾಗಿದೆ. ಇದು ೧೯೫೩ರಲ್ಲಿ ಮರುಮುದ್ರಣಗೊಂಡಿದೆ.

ಪಾ.ವೆಂ. ಅವರಲ್ಲಿ ಹುದುಗಿದ್ದ ಆಂತರಿಕ ಶಕ್ತಿಯ ಪಣೆಯಾಡಿಯವರು ಹೊರಗೆಡವಿದರು. ೧೯೪೦ರಲ್ಲಿ ಪಣೆಯಾಡಿಯವರ ಕಂಪನಿಗಳು ದಿವಾಳಿಯಾದವು.*[೮] 'ನಾನು ಸಮುದ್ರ ಪಾಲಾದರೂ ಅವರ ಸಂಗಡ ಇದ್ದಾಗ ಬಹುಮುಖ ಅನುಭವಗಳು ನನಗೆ ತೆಪ್ಪವನ್ನೂ ಒದಗಿಸಿದವು. ಬಹುಶಃ ಅವರೊಡನಿದ್ದಾಗ ನನಗೆ ದಿನಕ್ಕೆ ೧೪-೧೬ ತಾಸು ದುಡಿತ ಬೀಳುತ್ತಿತ್ತು. ಆದರೆ ಆ ದುಡಿತದ ಅಭ್ಯಾಸ ಮುಂದೆ ನನಗೆ ಬಹಳ ಅನುಕೂಲವಾಯಿತು ಎನ್ನುತ್ತಾರೆ ಪಾ.ವೆಂ. ಮುಂದಿನ ದಿನಗಳಲ್ಲಿ ಈ ಸಂಸ್ಥೆಯಲ್ಲಿ ದುಡಿದ ಅನನ್ವಿತ ಪ್ರಯೋಜನ, ಕಾರ್ಯದಕ್ಷತೆ, ಪಣಿಯಾಡಿಯವರ ದೇಶಭಕ್ತಿಯನ್ನು ಪಾ.ವೆಂ. ಅವರು ಮೈಗೂಡಿಸಿಕೊಂಡಿದ್ದರು. ಪಣಿಯಾಡಿಯವರ ಸಂಸ್ಥೆಗಳು ಕುಸಿದ ನಂತರ ಅಲ್ಲಿ ಜೀವಿಸಲು ಸಾಧ್ಯವಾಗಲಿಲ್ಲ.

೧೯೩೫ರಲ್ಲಿ ಕಿದಿಯೂರು ಮನೆತನದ ಲಕ್ಷ್ಮೀಬಾಯಿಯವರೊಡನೆ ಮದುವೆ. ತನ್ನ ೧೫ನೇ ವಯಸ್ಸಿನಲ್ಲಿ ಪಾ.ವೆಂ. ಅವರ ಸಂಗಾತಿಯಾದರು. ಹೆಚ್ಚು ಓದಿದವರಲ್ಲ, ಒಳ್ಳೆಯ ಮನೆತನದಲ್ಲಿ ಜನಿಸಿದವರು. ಸಹನೆಯಲ್ಲಿ ಪಾ.ವೆಂ. ಅವರಿಗೆ ಅನುರೂಪದ ಸತಿಯಾಗಿದ್ದರು. ಮುಂದೆ ಮೂರು ಮಕ್ಕಳ ತಂದೆಯೂ ಆಗಿದ್ದರು.

೧೯೪೦ರ ನಂತರ ಉಡುಪಿಯಲ್ಲಿ ಪಣಿಯಾಡಿಯವರ ವ್ಯವಹಾರವೆಲ್ಲವು ಕುಸಿದ ನಂತರ ಪಾ.ವೆಂ. ಅವರಿಗೆ ಸಂಸಾರ ನಿಭಾಯಿಸುವುದು ಕಷ್ಟವಾಯಿತು. ಸಂಸಾರವನ್ನು ಉಡುಪಿಯಲ್ಲೇ ಬಿಟ್ಟು ಮದ್ರಾಸಿಗೆ ಪ್ರಯಾಣ ಬೆಳೆಸಿದರು. ಕುತ್ತೇತ್ತೂರು ಸೀತಾರಾಮಾಚಾರ್ಯರ ಮದ್ರಾಸಿನ ದಾಸಪ್ರಕಾಶ ಹೋಟೆಲನಲ್ಲಿಬಿಲ್‌ರೈಟರ್ ಆಗಿ ಕೆಲಸಕ್ಕೆ ಸೇರಿದರು. ೧೮ರೂಪಾಯಿ ಸಂಬಳ. ೨ ರೂಪಾಯಿಯನ್ನು ತಾನು ಇಟ್ಟುಕೊಂಡು ಉಳಿದದ್ದನ್ನು ಸಂಸಾರದ ಖರ್ಚಿಗೆ ಮನೆಗೆ ಕಳುಹಿಸುತ್ತಿದ್ದರು. ೧೯೪೧ರಲ್ಲಿ ದ್ವಿತೀಯ ಮಹಾಯುದ್ಧ ಪ್ರಾರಂಭವಾದ ದಿನಗಳಾಗಿದ್ದವು. ಜಪಾನಿನ ವಿಮಾನಗಳು ಮದ್ರಾಸಿನ ಮೇಲೆ ಹಾರಾಡುತ್ತಿದ್ದವು. ಯುದ್ಧದ ಭಯ ಎಲ್ಲರಲ್ಲೂ ಮೂಡಿತ್ತು. ಉಡುಪಿಯಲ್ಲಿದ್ದ ಪಾ.ವೆಂ. ಅವರ ಸಂಸಾರಕ್ಕೆ ಗಾಬರಿ. ಮೂರು ಮಕ್ಕಳ ಸಂಸಾರಕ್ಕೆ ದಿನವೂ ಪಾ.ವೆಂ ಅವರ ಯೋಗಕ್ಷೇಮದ ಚಿಂತೆ.

೧೯೪೨ರಲ್ಲಿ ಪಾ.ವೆಂ ಅವರ ಸತಿ ಲಕ್ಷ್ಮೀಯವರ ತಂದೆ, ಸಹೋದರರ ಒತ್ತಾಯದ ಮೇರೆಗೆ ಮದ್ರಾಸಿನಿಂದ ಧಾರವಾಡಕ್ಕೆ ಬಂದರು. ಪಾ.ವೆಂ ಅವರ ಪತ್ನಿಯ ಅಣ್ಣ ರಂಗರಾವ್ ಸಹೋದರರು ನಡೆಸುತ್ತಿದ್ದ ಧಾರವಾಡ ರೆಸ್ಟೋರಂಟಿನಲ್ಲಿ ಬಿಲ್ ರೈಟರ್ ಆಗಿ ನೇಮಕಗೊಂಡರು. ಆ ಹೋಟೆಲು ಕಾಲೇಜು ಮತ್ತು ಸಾಹಿತಿಗಳ ಮೆಚ್ಚಿನ chit, N-chat ಆಗಿದ್ದಿತು. ವಡೆ, ದೋಸೆ, ಚಹಾಗಳ ಜೊತೆಗೆ ಅಲ್ಲಿ ಹರಟೆ, ನಗೆ, ಚರ್ಚಾತ್ಮಕ ಜಗಳ, ವಾದ–ಸಂವಾದಗಳು ದಿನವು ನಡೆಯುತ್ತಿದ್ದವು. ಹೀಗೆ ಅಲ್ಲಿ ಬರುತ್ತಿದ್ದವರಲ್ಲಿ ದ.ಬಾ.ಕುಲಕರ್ಣಿ, ಹೊಸಕೇರಿ ನಾರಾಯಣರಾವ್, ದ.ರಾ. ಬೇಂದ್ರೆ, ಪಾಟೀಲ್ ಪುಟ್ಟಪ್ಪ ಎಲ್ಲರು ಇರುತ್ತಿದ್ದರು. ಬಿಲ್‌ರೈಟರ್ ಕೆಲಸವನ್ನು ನಿರ್ವಹಿಸಿಕೊಂಡು ಇವರೆಲ್ಲರ ಜೊತೆ ಮಾತಿನಲ್ಲಿ ಪಾ.ವೆಂ ಕೂಡ ತಪ್ಪದೇ ಭಾಗವಹಿಸುತ್ತಿದ್ದರು. ಅದನ್ನು ಕೇಳಿದವರಿಗೆ ಪ್ರತಿಸಲವೂ ಈತ ಎಷ್ಟೊಂದು ತಿಳಿದುಕೊಂಡಿದ್ದಾನೆ, ಓದಿಕೊಂಡಿದ್ದಾನೆ, ಅಲ್ಲವೇ? ಎಂದೆನಿಸುತ್ತಿತ್ತು. ಕ್ರಮೇಣ ಕವಿಯು, ಕತೆಗಾರರು ಆಗಿದ್ದರು ಎಂಬುದು ಬೆಳಕಿಗೆ ಬಂದಿತು.

ವೃತ್ತಿಯ ನಿಮಿತ್ತ ಧಾರವಾಡಕ್ಕೆ ಬಿಲ್‌ರೈಟರ್ ಆಗಿ ಬಂದ ಪಾ.ವೆಂ.ಗೆ ಧಾರವಾಡ ರೆಸ್ಟೋರೆಂಟ್ ತಮ್ಮ ಸ್ವಯಂಪ್ರಭೆ ಹೊರಬರಲು ಕೇಂದ್ರಸ್ಥಾನವಾಯಿತು. ತಮ್ಮ ಅಭಿರುಚಿಗೆ ತಕ್ಕ ವ್ಯಕ್ತಿಗಳು ಇಲ್ಲಿ ಆತ್ಮೀಯರಾಗಿ ಒಡನಾಡಲು ಅವಕಾಶವಾಯಿತು. ೧೯೪೨ರಲ್ಲಿ ನವೆಂಬರ್ ತಿಂಗಳಲ್ಲಿ ಹೊಸಕೇರಿ ನಾರಾಯಣರಾವ್ ಒಮ್ಮೆ ಹುಬ್ಬಳ್ಳಿಗೆ ಬಂದಾಗ ಸಂಯುಕ್ತ ಕರ್ನಾಟಕದ ಮೊಹರೆ ಹನುಮಂತರಾಯರಿಗೆ ಈ ಬಿಲ್‌ರೈಟರ್ ಮತ್ತು

ಇವರ ಸಾಹಿತ್ಯಾಸಕ್ತಿಯ ವಿಷಯ ಹೇಳಿದರು. ಈತ ದಕ್ಷಿಣ ಕನ್ನಡ ಜಿಲ್ಲೆಯವನಲ್ಲವೇ? ಮುದ್ರಣ ವಿಷಯದಲ್ಲಿ ಸಂಪೂರ್ಣ ಅನುಭವ, ಜ್ಞಾನವಿದೆ ಎಂದು ಯೋಚಿಸಿ ಮೊಹರೆಯವರು ಸಂಯುಕ್ತ ಕರ್ನಾಟಕ ಪ್ರೆಸ್ಸಿನ ಓದಿನ ವಿಭಾಗದಲ್ಲಿ ಮೇಲ್ವಿಚಾರಕರೆಂದು ನಿಯಮಿಸಿಕೊಂಡರು. ೧೯೪೩ರಲ್ಲಿ ತಡವಿಲ್ಲದೆ ಪ್ರೆಸ್ಸಿನಲ್ಲಿ ಸುಧಾರಣೆಯನ್ನು ಮಾಡಿದರು. ಪಾ.ವೆಂ. ಅವರಿಗೆ ಮುದ್ರಣದ ಬಗ್ಗೆ ಮುದ್ರಣದ ಕಾರ್ಯಾಂಗಗಳ ನೈಪುಣ್ಯತೆಯಿರುವುದರಿಂದ ಇಲ್ಲಿ ಸಮಯೋಚಿತವಾಗಿ ಕಾರ್ಯನಿರ್ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.

೧೯೪೪ರಲ್ಲಿ ಹ.ರಾ.ಪುರೋಹಿತರು ಸಂಪಾದಕರಾಗಿದ್ದ ಕರ್ಮವೀರದಲ್ಲಿ ಪಾ.ವೆಂ.ಅವರು ಆಗಾಗ ಲೇಖನಗಳನ್ನು ಬರೆಯುತ್ತಿದ್ದರು. ಒಮ್ಮೆ ಹ.ರಾ.ಪುರೋಹಿತರು ೫–೬ ವಾರ ರಜೆಯಲ್ಲಿದ್ದಾಗ ನಿರಾಯಾಸವಾಗಿ ಆ ಸಾಪ್ತಾಹಿಕವನ್ನು ಪಾ.ವೆಂ. ಸಂಪಾದಿಸಿ ಹೊರತಂದರು. ಆಗಿನಿಂದ ಪಾ.ವೆಂ ನಿಜವಾದ ಪತ್ರಿಕೋದ್ಯಮಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. ಅವರು ಸಿದ್ಧಪಡಿಸಿದ ೧೯೪೪ ಫೆಬ್ರವರಿಯ ಸಂಚಿಕೆ ಉಡುಪಿಯ ಕೃಷ್ಣಮಠದ ಪರ್ಯಾಯೋತ್ಸವದ ಒಂದು ವಿಶೇಷ ಸಂಚಿಕೆಯಾಗಿತ್ತು.

ಪಾ.ವೆಂ. ಸ್ವಯಂ ಬೋಧನೆಯ ಪ್ರವೃತ್ತಿ ಲೆಕ್ಕಪತ್ರದ ಕಡೆಗೂ ಹರಿಯಿತು. ಪೀಲ್ಡ್ ಹೌಸ್‌ನ ಅಕೌಂಟೆನ್ಸಿ ಪುಸ್ತಕ ಅಧ್ಯಯನದಿಂದ ಆಧುನಿಕ ಅಕೌಂಟೆನ್ಸಿಯ ಪರಿಚಯ ಮಾಡಿಕೊಂಡ ಅವರ ಪಣಿಯಾಡಿಯವರ ಪ್ರೆಸ್ಸಿನ ಗೊಂದಲವನ್ನು ಹಸನು ಮಾಡಿದ್ದರು. ಜೊತೆಗೆ ಬಲಗೈಯಾಗಿ ಲೆಕ್ಕ ಪತ್ರ, ಸಭಾಕ್ರಮ, ಸೆಕ್ರೆಟರಿಯಲ್ ಪ್ರ್ಯಾಕ್ಟೀಸ್, ಬ್ಯಾಲನ್ಸ್ ಶೀಟ್‌ಗಳ ತಯಾರಿಸಿ, ಕಂಪೆನಿ ಕಾನೂನು ಇವುಗಳಲ್ಲೂ ಅನುಭವಿಯಾಗಿ ಕಾರ್ಯನಿರ್ವಹಿಸಿ ತೋರಿಸಿದರು. ಮುಂದೆ ಹುಬ್ಬಳ್ಳಿಗೆ ಬಂದಾಗ ಲೋಕಶಿಕ್ಷಣ ಟ್ರಸ್ಟ್‌ನ ಮೊಹರೆ ಹನುಮಂತರಾಯರು ಬ್ಯಾಂಕ್ ಆಫ್ ಕರ್ನಾಟಕದ ಮೆಮೊರಾಂಡಂ ಆರ್ಟಿಕಲ್ಸ್ ತಯಾರಿಸಲು ಹೇಳಿದಾಗ ಅವರಿಗೇನು ಕಷ್ಟವಾಗಲಿಲ್ಲ. ದಕ್ಷತೆಯಿಂದಲೇ ಆ ಕಾರ್ಯ ನಿರ್ವಹಿಸಿದರು. ಈ ಕುರಿತು ಅವರ ಪುತ್ರ ಪೂರ್ಣಪ್ರಜ್ಞ ಕಾಲೇಜಿನ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಪಿ. ರಾಧಾಕೃಷ್ಣ ಆಚಾರ್ಯರು ಹೀಗೆ ಹೇಳುತ್ತಾರೆ. 'ಅಪ್ಪನಿಗೆ ಹೋಲಿಸಿದರೆ ನಾವು ನಥಿಂಗ್', ನನ್ನ ಅರ್ಥಶಾಸ್ತ್ರ ಕೂಡ ಅವರಿಗೆ ನನಗಿಂತ ಜಾಸ್ತಿ ಗೊತ್ತಿತ್ತು.

ಕರ್ಮವೀರದಲ್ಲಿದ್ದಾಗ ಪಾ.ವೆಂ. ವಿದೇಶ ಪತ್ರಿಕೆಗಳ, ವಿಶೇಷವಾಗಿ ಅಮೇರಿಕನ್ ಪತ್ರಿಕೆಗಳ ಪರಿಚಯ ಮಾಡಿಕೊಂಡರು. ಅವರ ನೇರ ಬರವಣಿಗೆ ರಾಜಕೀಯಕ್ಕೆ ಅತಿಯಾದ ಮಹತ್ವ ನೀಡದಿರುವುದರಿಂದ ಪ್ರಭಾವಿತರಾಗಿ ವಿದೇಶಿ ಪತ್ರಿಕೆಗಳ ಪದ್ಧತಿಯನ್ನು ಕರ್ಮವೀರಕ್ಕೆ ತರಲು ಯತ್ನಿಸಿದರು. ಡಿಸ್ಪ್ಲೇ (ಪುಟ ವಿನ್ಯಾಸ) ಬಗೆಗಿನ ತನ್ನ ಕಲ್ಪನೆಗಳನ್ನು ಸಾಕಾರಗೊಳಿಸಿದವು. ಸಂಪಾದಕ ಪುರೋಹಿತರು ಆಚಾರ್ಯರನ್ನು 'ಕಮ್ಯುನಿಸ್ಟ್' ಎಂದು ಕರೆದರೂ ಕೂಡ ಇವರ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ

ಹೆಚ್ಚಿನ ಪುಸ್ತಕ ವಿಮರ್ಶೆಗಳನ್ನು ಆಚಾರ್ಯರೇ ಬರೆಯುತ್ತಿದ್ದರು. ತಮ್ಮ ನಿರ್ದಾಕ್ಷಿಣ್ಯದ ಗುಣದಿಂದ ಅವು ಬಹುಬೇಗ ಗಮನ ಸೆಳೆದವು.

ವೃತ್ತಿಯಲ್ಲಿ ಎಲ್ಲರಿಂದಲೂ ಮನ್ನಣೆಯನ್ನು ಗಳಿಸಿದ್ದರು. ತನ್ನ ಸಂಬಳದಲ್ಲಿ ವಿಶೇಷ ಹೆಚ್ಚಳವು ಆಯಿತು. ಹೀಗಾಗಿ ತನ್ನ ಕುಟುಂಬವನ್ನು ಹುಬ್ಬಳ್ಳಿಗೆ ಬರಮಾಡಿಕೊಂಡು ಸಂಸಾರ ಜೀವನ ಪ್ರಾರಂಭಿಸಿದರು. ಆದರೂ ಯುದ್ಧಕಾಲ ಆರ್ಥಿಕ ಅಡಚಣೆ ಇದ್ದುದರಿಂದ ಸ್ಥಳೀಯ ಹೋಟೆಲುಗಳಲ್ಲಿ, ರೇಶನ್ ಅಂಗಡಿಗಳಲ್ಲಿ ಲೆಕ್ಕ ಬರೆದುದನ್ನು ಸರಿಪಡಿಸಿದರು. ಅದನ್ನು ಕಂಡ ಹುಬ್ಬಳ್ಳಿಯ ಕೃಷ್ಣಭವನದ ಮಾಲೀಕರು ತಮ್ಮ ಹೋಟೆಲಿನ ಲೆಕ್ಕ ಬರೆಯುವ ಅರೆಕಾಲಿಕ ಕೆಲಸಕ್ಕೆ ನೇಮಿಸಿಕೊಂಡರು. ಪರಿಣಾಮ ಪಾ.ವೆಂ. ಬೆಳಗಿನಿಂದ ರಾತ್ರಿ ೧೦ ಗಂಟೆಯವರೆಗೂ ದುಡಿಯುವಂತಾಯಿತು. ಈ ರೀತಿಯಿಂದ ತಮ್ಮ ಕುಟುಂಬ ನಿರ್ವಹಣೆಗೆ ಹುಬ್ಬಳ್ಳಿಗೆ ಆಗಮಿಸಿದ ಪಾ.ವೆಂ. ಅವರು ಆರಂಭದ ದಿನಗಳಲ್ಲಿ ಅವಿರತವಾಗಿ ದುಡಿದಿರುವುದನ್ನು ಕಾಣುತ್ತೇವೆ.

ಹುಬ್ಬಳ್ಳಿ ಹೋಟೆಲ್ ಒಡೆಯರ ಸಂಘದ ರೇಶನ್ ಅಂಗಡಿಯ ಲೆಕ್ಕ ತಪಾಸಣೆ ಕೆಲಸವನ್ನು ಪಾ.ವೆಂ. ಮಾಡುತ್ತಿದ್ದರು. ಹುಬ್ಬಳ್ಳಿಯ ಶ್ರೀ ಕೃಷ್ಣಭವನ ಮಾಲಿಕ ದಿ. ಶ್ರೀ ಅನಂತ ಕೃಷ್ಣ ಭಟ್, ಉಚ್ಚಿಲ ತಮ್ಮೆಲ್ಲ ವ್ಯವಹಾರಗಳ ಲೆಕ್ಕಪತ್ರ ಮೇಲ್ವಿಚಾರಣೆ ಕೆಲಸಕ್ಕೆ ಅವರನ್ನು ನಿಯಮಿಸಿಕೊಂಡರು ಕಡೆಕಾರು ಗುರುರಾಯರು ಲೆಕ್ಕ ಪತ್ರ ತಪಾಸಣೆಯನ್ನು ಪ್ರತಿ ೬ ತಿಂಗಳಿಗೊಮ್ಮೆ ಆಚಾರ್ಯರಿಂದಲೇ ಮಾಡಿಸಿದ ನಂತರವೇ ಟಾಕ್ಸ್ ಅಧಿಕಾರಿಗಳಿಗೆ ಕಳಿಸುತ್ತಿದ್ದರು.

ಪೂಜ್ಯ ಶ್ರೀ ಪೇಜಾವರ ಶ್ರೀಗಳ ಸಲಹೆಯಂತೆ ದ್ರಾವಿಡ ಬ್ರಾಹ್ಮಣ ಸಮಾಜ ಸ್ಥಾಪನೆ ಸಂದರ್ಭದಲ್ಲಿ ಪಾ.ವೆಂ. ಅವರನ್ನು ಸಂಘದ ಕೆಲಸಗಳಲ್ಲಿ ತೊಡಗಿಸಿಕೊಟ್ಟರು. ಕಾಯಿದೆ ಪ್ರಕಾರ ಮಾಡಬೇಕಾದ ಕೆಲಸಗಳು ಇತ್ಯಾದಿಗಳನ್ನು ಪಾ.ವೆಂ. ಅವರು ಮೆಮೋರೆಂಡಮ್ ಆಫ್ ಆಸೋಸಿಯೇಶನ್‌ದ ಕರಡು ಪ್ರತಿಯನ್ನು ಮಾಡಿಕೊಟ್ಟರು. ಲೆಕ್ಕಪತ್ರ ಮತ್ತು ಇತರ ಕಡತಗಳನ್ನು ಯಾವ ರೀತಿ ಇಡಬೇಕೆಂಬುದಕ್ಕೆ ಮಾರ್ಗದರ್ಶನ ಮಾಡಿದ್ದು, ಇಂದಿನವರೆಗೂ ಮುಂದುವರೆದಿದೆ. ಸಂಘದ ಲೆಕ್ಕ ಪತ್ರಗಳ ತಪಾಸಣೆಯನ್ನು ಅವರೇ ಹಲವಾರು ವರ್ಷಗಳವರೆಗೆ ನಿಭಾಯಿಸಿದರು. ಸಮಾಜದ ಬೆಳವಣಿಗೆಗೆ ಮಾರ್ಗದರ್ಶನ ಮಾಡಿದರು. ಸಮಾಜದ ಬಾಂಧವರೊಡನೆ ಬೆರೆತು ಕೆಲಸಮಾಡಿದರು.

೧೯೪೭ರಲ್ಲಿ ಪ್ರೆಸ್ಸಿನ ಮೇಲ್ವಿಚಾರಣೆ ತಪ್ಪಿ ಕರ್ಮವೀರಕ್ಕೆ ಬಂದರು. ೧೯೫೦ರಲ್ಲಿ ಕರ್ಮವೀರದಲ್ಲಿ ಲಾಂಗೂಲಾಚಾರ್ಯ ಹೆಸರಿನಲ್ಲಿ ಹರಟೆಗಳನ್ನು ಬರೆಯತೊಡಗಿದರು. ಇದು ಅವರದೇ ಕಲ್ಪನೆ ಆ ಹೆಸರನ್ನು ಕಛೇರಿಯಲ್ಲಿ ಸುಮ್ಮನೆ ಹರಟೆ ಹೊಡೆಯುತ್ತಿದ್ದಾಗ ಒಬ್ಬರು ಆಚಾರ್ಯರು ಲಾಂಗೂಲಚಾಲನೆ ಮಾಡುವವರು ಎಂದಿದ್ದರು ಅಂತೂ ಲಾಂಗೂಲಾಚಾರ್ಯ ಹೆಸರು ಬಹುಬೇಗ ಜನಪ್ರಿಯವಾಯಿತು. ಅದಕ್ಕಾಗಿಯೇ ಪ್ರತಿವಾರ ಕರ್ಮವೀರ ಸಂಚಿಕೆಯನ್ನು ಕಾಯುವವರು ಆಗಿದ್ದರು.

ವಿದ್ವಾಂಸರು ಹಾಗೂ ಸಿದ್ದಾಪುರದ ಮ. ಗಾಂ. ಸೆಂಟನರಿ ಕಾಲೇಜು ಪ್ರಾಂಶುಪಾಲರಾದ ಕವಿ ವಿಮರ್ಶಕ ಬಿ. ಯಚ್. ಶ್ರೀಧರರು ೧೯೪೭ರಲ್ಲಿ **ಸಂಯುಕ್ತ ಕರ್ನಾಟಕ** ಪತ್ರಿಕಾಲಯಕ್ಕೆ ಸಂಪಾದನ ಮಂಡಳಿಗೆ ಸೇರ್ಪಡೆಯಾದರು. ಬಿ.ಯಚ್. ಶ್ರೀಧರರವರ ಪಾಂಡಿತ್ಯ ಜ್ಞಾನದಿಂದ ಪಾ.ವೆಂ. ಅವರಿಗೆ ನಿಕಟವರ್ತಿಗಳೇ ಆದರು. ಇಬ್ಬರ ಸಹೋದ್ಯೋಗಿ ಮಿತ್ರರ ಚರ್ಚೆಗಳು ಎಲ್ಲರ ಗಮನ ಸೆಳೆದಿದ್ದವು. ಇಬ್ಬರು ಒಂದೇ ಅಭಿಪ್ರಾಯದವರಾಗಿದ್ದು, ಚರ್ಚೆ ಇದ್ದಲ್ಲಿ ಏಕಮತ ನಿರ್ಣಯಕ್ಕೆ ಬರುತ್ತಿದ್ದರು. ೧೯೫೦ರಲ್ಲಿ ಪಾ.ವೆಂ. ಲಾಂಗೂಲಾಚಾರ್ಯ ಎನ್ನುವ ಗುಪ್ತನಾಮದಲ್ಲಿ ಕರ್ಮವೀರದ **ಓದುಗರೊಡನೆ ಹರಟೆ** ಅಂಕಣವನ್ನು ಆರಂಭಿಸಿದರು. ಇದೊಂದು ಜನಪ್ರಿಯ ಲಾಂಗೂಲ ದರ್ಶನವೇ ಆಯಿತು. ಇವರ ಲಾಂಗೂಲದ ಸೆಳೆತಕ್ಕೆ ರಾಜಕಾರಣಿಗಳು, ಮಂತ್ರಿಗಳು, ಪೀಠಾಧಿಪತಿಗಳು, ಅಧಿಕಾರಿಗಳು, ಪೌರಾಣಿಕ ವ್ಯಕ್ತಿಗಳು, ಸಾಹಿತಿಗಳು, ಹೆಂಗಸರು ಹಾಗೂ ಪ್ರಾಣಿಗಳು ಎಲ್ಲರೂ ಸಿಕ್ಕಿಬಿದ್ದರು. ಇವರ ಲಾಂಗೂಲದಲ್ಲಿಯ ಹರಿತ ವಿಡಂಬನೆ, ಹಾಸ್ಯ ಕಟುಕಿಗಳು ಲೋಕದ ಡೊಂಕುಗಳು ಕರ್ನಾಟಕದ ಸಾಹಿತ್ಯ ಪ್ರಕಾರದಲ್ಲಿ ನವಯುಗವನ್ನು ಉಂಟುಮಾಡಿದವು. ಇವರ ಖ್ಯಾತಿ ಪಸರಿಸಿದಂತೆ **'ಕರ್ಮವೀರ'**ವು ಬೆಳೆಯಿತು. ೧೪ ವರ್ಷಗಳ ಕಾಲ ನಡೆದು ಪಾ.ವೆಂ. ಅವರಿಗೆ ಅಪಾರ ಅಭಿಮಾನಿಗಳನ್ನು ಗಳಿಸಿಕೊಟ್ಟಿತ್ತು. ಅದು ಅವರ ನಿಜನಾಮಧೇಯವೇನೊ ಎಂಬಂತಾಯಿತು. ಅದನ್ನು ಬರೆಯುತ್ತಿರುವುದು ಪ್ರಖ್ಯಾತ ನಾಟಕಕಾರ ಶ್ರೀರಂಗರೆಂದು ಹಲವರ ಎಣಿಕೆಯಾಗಿತ್ತು. ಅವರು ನಾನು ಹಾಸ್ಯದವನಲ್ಲ ಗಂಭೀರ ಮನುಷ್ಯ ಎಂದರೂ ಜನ ಒಪ್ಪಲಿಲ್ಲ.

ನನಗೂ ಹಾಸ್ಯದೃಷ್ಟಿ ಎಷ್ಟು ಅಸ್ಥಿಗತವಾಯಿತೆಂದರೆ ಗಂಭೀರ ಕವಿತೆಗಳನ್ನು ಅನಂತರ ಬರೆಯಲು ನನ್ನಿಂದ ಆಗಲಿಲ್ಲ ಎಂದವರು ಹೇಳುತ್ತಿದ್ದರಂತೆ, ಪಾ.ವೆಂ. ಹೆಸರು ಕಸ್ತೂರಿಯಲ್ಲಿ ಸೇರಿಹೋಗಿದೆ, ಆದರೂ ಕರ್ಮವೀರದಲ್ಲಿ ಕಳೆದ ೧೪ ವರ್ಷಗಳು (೧೯೪೨–೫೬) ನನ್ನ ಜೀವನದಲ್ಲಿ ಸಂತುಷ್ಟಕರ ದಿನಗಳೆಂದು ಹೇಳುತ್ತಾರೆ. **ಕಸ್ತೂರಿ** ನನಗೆ ಕನ್ನಡ ಪತ್ರಿಕೋದ್ಯಮದಲ್ಲಿ ಸ್ಥಾನದೊರಕಿಸಿ ಕೊಟ್ಟರೂ ನನಗೆ ಪ್ರಿಯವಾದ ದುಡಿತ ಬಿದ್ದದ್ದು ಕರ್ಮವೀರ ದಲ್ಲಿಯೇ ಎಂದಿದ್ದಾರೆ. **ಕರ್ಮವೀರ**ದಲ್ಲಿ ಕಳೆದ ದಿನಗಳಲ್ಲಿ ಪಾ.ವೆಂ. ಅವರು ಪುಸ್ತಕ, ಸಿನಿಮಾ, ವಿಮರ್ಶೆಯಿಂದಾರಂಭಿಸಿ ಜಟಿಲ ವೈಜ್ಞಾನಿಕ ವಿಷಯಗಳವರೆಗೆ, ಕಂಡ ಕಂಡ ವಿಷಯಗಳ ಮೇಲೆ ಬರೆದರು. ಪಾ.ವೆಂ. ಅವರ ಕುತೂಹಲದ ದಶ ಮುಖಗಳಿಗೆ ಆಹಾರ ಕೊಡಲು ಬಹಳ ಕಾಲ ಓದು ಅಧ್ಯಯನದಲ್ಲೇ ಮುಳುಗಬೇಕಾಯಿತು.

೧೯೪೨ರಲ್ಲಿ **ಸಂಯುಕ್ತ ಕರ್ನಾಟಕ** ಸಂಸ್ಥೆಯೊಡನೆ ಜೀವನದ ಬಹುಭಾಗವನ್ನು ಕಳೆದರು. ಸಾವಕಾಶವಾಗಿ ವ್ಯವಸ್ಥಾಪಕ ವಿಭಾಗದಿಂದ ಸಂಪಾದಕೀಯ ವಿಭಾಗಕ್ಕೆ ಸೇರಿದರು. ಆದರೆ ಪಾ.ವೆಂ. ಅವರಿಗೆ ಕೆಳಗಿನವರನ್ನು ಮ್ಯಾನೇಜ್ ಮಾಡುವುದು ಕಷ್ಟಕರವಾಗಿತ್ತು. ವ್ಯವಹಾರದಲ್ಲಿ ಪಾ.ವೆಂ. ಬೋಳೆ ಶಂಕರನಾಗಿದ್ದರು. ಇಲ್ಲಿ ಒಂಟಿ ಸಲಗನಾಗಲು

ಹೆಚ್ಚು ಅವಕಾಶವೂ ಇತ್ತು. ಸಂಪಾದಕ ವಿಭಾಗವನ್ನು ಇಷ್ಟಪಟ್ಟರು. ಸಂಪ್ರದಾಯವಂತ ಸಂಸ್ಥೆಯಲ್ಲಿ 'ಕಮ್ಯುನಿಸ್' ಎನಿಸಿಕೊಂಡರೂ ಯಾರು ಅವರಿಗೆ ಅಡ್ಡಗಾಲು ಇಡಲಿಲ್ಲ. ಅಪರಿಮಿತ ಕುತೂಹೂಲದಿಂದ ಅಲ್ಲಿ ಬರುತ್ತಿದ್ದ ದೇಶ, ವಿದೇಶದ ಪತ್ರಿಕೆ ಪುಸ್ತಕಗಳನ್ನು ಓದುತ್ತಾ **ಸರ್ವಜ್ಞ ಆಚಾರ್ಯ** ಎನಿಸಿಕೊಂಡರು.

೧೯೫೬ ಜುಲೈನಲ್ಲಿ ಡೈಜಸ್ಟ್ ಮಾಸಪತ್ರಿಕೆಯ ಆಲೋಚನೆಯು ಮುದ್ರಕ, ಜಠಾರ ಹಾಗೂ ಕೌಜಲಗಿಯವರಲ್ಲಿ ಮೂಡಿತ್ತೆಂದು ಪಾ.ವೆಂ. ಒಂದೆಡೆ ಹೇಳಿದ್ದಾರೆ. ಒಟ್ಟಿನಲ್ಲಿ ಕಸ್ತೂರಿ ಮಾಸಿಕ ಡೈಜೆಸ್ಟ್ ಪಾ.ವೆಂ. ಅವರಿಂದಾಗಿ ಮೂಡಿಬಂದಿತು. ಸಂಪಾದಕರು ಹೊರಗಿನವರು ಯಾರಾದರೂ ಬೇಕೆ ಬೇಡವೇ ಎನ್ನುವ ಚರ್ಚೆಯಲ್ಲಿದ್ದಾಗ ನಮ್ಮವರಲ್ಲೇ ಒಬ್ಬರನ್ನು ಆರಿಸಬೇಕೆಂದು ನಿರ್ಧರಿಸಿ ಮೊಹರೆ ಹನಮಂತರಾಯರು ಪಾ.ವೆಂ. ಅವರ ಹೆಸರನ್ನು ಗಟ್ಟಿ ಹಿಡಿದರು. ಆ ವರ್ಷದ ಸೆಪ್ಟೆಂಬರ್‌ದಿಂದಲೇ ಪತ್ರಿಕೆ ಹೊರಡಬೇಕಾಗಿತ್ತು. ಪಾ.ವೆಂ. ಅವರಿಗೆ ಇದ್ದ ಸಮಯ ಕೇವಲ ಎರಡು ತಿಂಗಳು ಆ ಅಲ್ಪ ಅವಧಿಯಲ್ಲಿ ಮೊದಲ ಸಂಚಿಕೆಯನ್ನು ವ್ಯವಸ್ಥಿತವಾಗಿ ಬಿಡುಗಡೆಗೊಳಿಸಿದರು. ಕಸ್ತೂರಿ ಜನಪ್ರಿಯವಾಯಿತು.

ಕಸ್ತೂರಿಯ ಸಂಪಾದನ ಕಾರ್ಯದಲ್ಲಿ ತನಗೆ ನೆರವಾಗಲು ಜಿ.ಜಿ. ಹೆಗಡೆಯವರನ್ನು ಬೇಕೆಂದು ಕೇಳಿದ್ದರು. ಕಾರಣ ಮೂವತ್ತರ ದಶಕದ ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಅಜ್ಞಾತ ಪೋಷಕರು, ಖ್ಯಾತ ವಿಚಾರವಾದಿ, ನಾಟಕಕಾರ ಪಂಡಿತ ತಾರಾನಾಥರ ಶಿಷ್ಯರಾಗಿ 'ಪ್ರೇಮಾಯತನ' ಆಶ್ರಯದಲ್ಲಿ ಪತ್ರಿಕೋದ್ಯಮದ ತರಬೇತಿ ಪಡೆದವರು. **ನವಜೀವನ, ಕರ್ಮವೀರ** ಮೊದಲಾದ ಪತ್ರಿಕೆಗಳ ಉಪಸಂಪಾದಕರಾಗಿ ದೀರ್ಘಕಾಲ ಪತ್ರಿಕೋದ್ಯಮಿಯಾಗಿದ್ದರು. ಒಂದಾಣೆ ಗ್ರಂಥಮಾಲೆಯನ್ನು ಕೆಲಕಾಲ ನಡೆಸಿದ ಪ್ರಕಾಶಕರು ಆಕಾಶವಾಣಿಗಾಗಿ ಇಪ್ಪತ್ತಕ್ಕೂ ಹೆಚ್ಚು ಏಕಾಂಕ ನಾಟಕಗಳನ್ನು ಬರೆದವರು. ಬಹುಭಾಷಾತಜ್ಞರಾಗಿದ್ದರು.

೧೯೬೯ರಲ್ಲಿ ಜಿ.ಜಿ.ಹೆಗಡೆಯವರು ಕಸ್ತೂರಿ ಪತ್ರಿಕೆಯ ಉಪಸಂಪಾದಕತ್ವದಿಂದ ನಿವೃತ್ತರಾದಾಗ 'ಪಾ.ವೆಂ.ಆಚಾರ್ಯರು' ನನ್ನ ಬಲಗೈ ಮುರಿದಂತಾಗಿದೆ ಎಂದು ಜಿ.ಜಿ.ಹೆಗಡೆಯವರ ಮುಂದೆ ಹೇಳಿದ್ದ ನುಡಿಗಳನ್ನು ಅವರ ಮಗ **ಪ್ರಜಾವಾಣಿ**ಯ ಪ್ರಧಾನ ವರದಿಗಾರರಾದ ಗೋಪಾಲ ಹೆಗಡೆಯವರು ಇಂದಿಗೂ ಸ್ಮರಿಸುತ್ತಾರೆ. ಗೋಪಾಲ ಹೆಗಡೆಯವರು ಪಾ.ವೆಂ. ಆಚಾರ್ಯರಿಂದಲೇ ಸಂಯುಕ್ತ ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಲು ಅವಕಾಶವಾಯಿತು. ಜಿ.ಜಿ.ಹೆಗಡೆಯವರು ಮಗನಿಗಾಗಿ ಕೆಲಸ ಕೇಳಲಿಲ್ಲ. ಹಿರಿಯರೊಂದಿಗೆ ಕಿರಿಯರನ್ನು ಔದಾರ್ಯದೊಂದಿಗೆ ಕಾಣುವ ಮನೋಭಾವವನ್ನು ಇಲ್ಲಿ ಕಾಣುತ್ತೇವೆ.

ಜಿ.ಜಿ.ಹೆಗಡೆಯವರು ನಿವೃತ್ತಿಯಾದ ನಂತರ ಮುಂದೆ ಅವರಿಗೆ ಗೋಪಾಲ ವಾಜಪೇಯಿ ಮತ್ತು ಮಾಧವ ಮಹಿಷಿಯವರು ಸಹಾಯಕರಾಗಿದ್ದರು. ೧೯೫೮ರಲ್ಲಿ

ದಕ್ಷಿಣ ಭಾರತದ ಪತ್ರಿಕೋದ್ಯೋಗಿಗಳೊಡನೆ ಉತ್ತರ ಭಾರತದಲ್ಲೆಲ್ಲ ಮೂರುವಾರ ಸಂಚರಿಸಿದರು. ಹಿಂದೂ ಪತ್ರಿಕೆಯಲ್ಲಿ ವಿಶೇಷ ತರಬೇತಿಗಾಗಿ ಮದ್ರಾಸಿನಲ್ಲಿ ಕೆಲವು ತಿಂಗಳವರೆಗೆ ವಾಸವಾಗಿದ್ದರು. ಜೊತೆಗೆ ಪಾ.ವೆಂ. ಅಲ್ಲಿಯ ಪತ್ರಕರ್ತರಿಗೆ, ಹಿರಿಯ ಅಧಿಕಾರಿಗಳಿಗೆ ಕೇಳುತ್ತಿದ್ದ ಪ್ರಶ್ನೆ ಮತ್ತು ಆಗಾಗ ತಾವೇ ಕೊಡುತ್ತಿದ್ದ ವಿವರಣೆಗಳು ತುಂಬಾ ಪ್ರಭಾವ ಬೀರಿದ್ದವು. ವಿದೇಶಿರಾಯಭಾರ ವರ್ಗದವರು ಸಂಯುಕ್ತ ಕರ್ನಾಟಕ ಕಚೇರಿಗೆ ಬೇಟಿಕೊಟ್ಟಾಗಲು ಪಾ.ವೆಂ. ಪ್ರಶ್ನೆಗಳಿಂದ ಅವರು ಪ್ರಭಾವಿತರಾಗಿದ್ದರು. ಇಲ್ಲಿ ಪಾ.ವೆಂ. ಅಸಾಧಾರಣ ಮನುಷ್ಯ ಎಂದು ಪ್ರತೀತವಾಯಿತು.

ದಕ್ಷಿಣ ಭಾರತದ ಪ್ರಮುಖ ಪತ್ರಿಕೆಗಳಾದ **ದಿ ಹಿಂದೂ** ಪತ್ರಿಕೆ ೧೯೩೯ರಲ್ಲಿ ಶ್ರೀನಿವಾಸರಂಗನ್ (ಕಸ್ತೂರಿ ರಂಗನ್ ಅವರ ಮಗ) ಪ್ರಮುಖ ಸಂಪಾದಕರು, ಬಿ.ಎ.ಸುಬ್ರಹ್ಮಣ್ಯಮ್ ಮದ್ರಾಸ್ ಮೇಲ್ ಸಂಪಾದಕರು,

ದಿ ಸ್ಟೇಟ್ಸ್‌ಮನ್, ಇಂಡಿಯನ್ ಎಕ್ಸ್‌ಪ್ರೆಸ್ ರಾಷ್ಟ್ರೀಯವಾದಿಯಾಗಿದ್ದ ಕೆ.ಸಂತಾನಂ, ಜಿ.ರಾಮಚಂದ್ರನ್ ಸಂಪಾದಕರು ಗಾಂಧೀಜಿಯವರ ಪರಮಶಿಷ್ಯರು ಈ ಎಲ್ಲ ಪತ್ರಕರ್ತರ ಸಹವರ್ತಿಗಳಾಗಿದ್ದರು.

ಜಿ.ರಾಮಚಂದ್ರನ್‌ರವರು ಮಧುರೆ ಹತ್ತಿರ ಗಾಂಧಿಗ್ರಾಮ ಸ್ಥಾಪಿಸಿ ಅದನ್ನು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ತರಬೇತಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಿದರು. ಬಹುಶಃ ಪಾ.ವೆಂ. ಅವರ ವೃತ್ತಿಯ ಪ್ರಾರಂಭದ ದಿನಗಳಲ್ಲಿ ಅಪ್ಪಟ ದೇಶಭಕ್ತ, ಗಾಂಧೀವಾದಿ ಪಣಿಯಾಡಿಯವರ ವ್ಯಕ್ತಿತ್ವರೂಪಿಸಿಕೊಂಡರು. ದಕ್ಷಿಣ ಭಾರತದ ಪತ್ರಿಕೋದ್ಯೋಗಿಗಳ ಸಂಪರ್ಕ, ಗಾಂಧೀಗ್ರಾಮದ ರಚನಾತ್ಮಕ ತರಬೇತಿಯ ವಿಚಾರವಾದಗಳು ಪಾ.ವೆಂ. ಅವರಿಗೆ ಪತ್ರಿಕೋದ್ಯಮದಲ್ಲಿ ತನ್ನನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳಲು ಇದೊಂದು ಅನುಭವದ ಭೂಮಿಕೆಯಾಗಿತ್ತು.

೧೯೫೬ರಲ್ಲಿ ಡೈಜೆಸ್ಟ್ ಮಾದರಿಯ **ಕಸ್ತೂರಿ** ಪ್ರಾರಂಭವಾದಾಗ ಬೇಕಾದ ವಿಷಯದ ಮೇಲೆ ತಿಳಿಯಾಗಿ ಬರೆಯ ಬಲ್ಲ ಶಕ್ತಿ ಪಾ.ವೆಂ. ಅವರಲ್ಲಿತ್ತು. ಹೊಸ ಪತ್ರಿಕೆಯ ಸಂಪಾದಕತ್ವ ಪಾ.ವೆಂ. ಅವರ ಕೊರಳಿಗೆ ಬಿತ್ತು. ೧೮ ವರ್ಷದವರೆಗೆ ಅದನ್ನು ಯಾರು ಹೆಸರಿಡದಂತೆ ದಕ್ಷತೆಯಿಂದ ನಿರ್ವಹಿಸಿದರು. ಕಸ್ತೂರಿ ಪ್ರಾರಂಭವಾದ ಕಾಲದಲ್ಲಿ ಹಾಗೂ ಸ್ವಲ್ಪ ಅನಂತರದಲ್ಲಿ ಕರ್ನಾಟಕದಲ್ಲಿ ಕೆಲವು ಕಸ್ತೂರಿಯಂತೆ ಇನ್ನು ಅನೇಕ 'ಡೈಜೆಸ್ಟ್‌ಗಳು' ಹೊರಟವು. ಹಾಗೇ ಎಲ್ಲಿಗೆ ಹೋಗುವುದು ಎಂದು ತಿಳಿಯದೆ ಹೊರಟಂತೆ ನಿಂತವು. ಸ್ವಂತ ದೃಷ್ಟಿಕೋನ ಇಲ್ಲದವರು, ಅಭಿರುಚಿ ಇಲ್ಲದವರು ಲೇಖನಗಳನ್ನು ಆರಿಸಲು ಸಾಧ್ಯವಿಲ್ಲ. ಒಳ್ಳೆಯದನ್ನು ಆರಿಸಲು ಸಂಪಾದಕನ ಅಭಿರುಚಿ ಸುಸಂಸ್ಕೃತವಾಗಿರಬೇಕು. ಇಂಥ ಸುಸಂಸ್ಕೃತಿ ಪಾ.ವೆಂ. ಅವರಿಗೆ ಜನ್ಮಜಾತವಾಗಿತ್ತು. ಪಾ.ವೆಂ. ಅವರಿಗೆ **ಕಸ್ತೂರಿ**ಯನ್ನು ತಮಗಿಷ್ಟ ಬಂದಂತೆ ರೂಪಿಸಲು ದಾರಿ ನಿರರ್ಗಳವಾಗಿದ್ದಿತು. ಈ ಕಸ್ತೂರಿ ಯಾರಿಗಾಗಿ ಹೊರಡಿಸಬೇಕು? ಆದರೆ ಪಾ.ವೆಂ.

ಅವರ ನಿಲುವು ಸ್ಪಷ್ಟವಾಗಿತ್ತು. ಎಸ್.ಎಸ್.ಎಲ್.ಸಿ. ಪಾಸಾದವರು, ಇಂಗ್ಲೀಷ ಮೂಲಕ ಜ್ಞಾನ, ವಿಜ್ಞಾನ, ಮನರಂಜನೆ ಪಡೆಯದಿದ್ದವರಿಗೆ ಇದರ ಸಹಾಯ ಸೌಲಭ್ಯ ದೊರೆಯಬೇಕು ಅದಕ್ಕಾಗಿ ವರ್ತಮಾನವನ್ನು ಸೃಷ್ಟಿಸುತ್ತಾ ಭವಿಷ್ಯತ್ತಿನ ಮೇಲೆ ಕಣ್ಣಿರಿಸಿ ಸಾಗಬೇಕು. ಇದು ಅವರ ಸ್ಪಷ್ಟ ಧೋರಣೆಯಾಗಿತ್ತು. **ಕಸ್ತೂರಿ**ಯ ನಿಜ ಸಂಪಾದಕತ್ವ ಸಿಕ್ಕ ಮೇಲಂತೂ ಅವರಿಗೆ ಖಡ್ಡಾಯವಾಗಿ ವಿಸ್ತೃತ ಓದುಗಾರಿಕೆ ಅನಿವಾರ್ಯವಾಯಿತು. ಅನುವಾದ, ಸಂಗ್ರಹ ದಿಢೀರ ಆಗಬೇಕಾದರೆ ಆಚಾರ್ಯರನ್ನು ಮೊರೆಹೋಗಬೇಕೆಂಬುದು **ಸಂಯುಕ್ತ ಕರ್ನಾಟಕ**ದಲ್ಲಿ ಮನೆಮಾತು. ತಾನಾಗಿಯೇ ವಿಷಯಗಳು ಅನುವಾದಗೊಂಡು ಸಂಗ್ರಹ ರೂಪದಲ್ಲಿ ಪಾ.ವೆಂ. ಅವರ ಮೆದುಳಿನ ಕಂಪ್ಯೂಟರ್‌ನಲ್ಲಿ ಬಿಂಬಿಸುತ್ತದೆ. ಹೀಗೆ ಪ್ರಯತ್ನ ಪೂರ್ವಕವಾಗಿ ಸೃಷ್ಟಿಯಾದ ಗದ್ಯವೇ ಪಾ.ವೆಂ. ಅವರ ಕೊಡುಗೆ. ಈ ಬಗೆಯ ಓದು, ಅನ್ಯವಿಚಾರಗಳ ಕುತೂಹಲ, ಚಿಕಿತ್ಸಕ ಬುದ್ಧಿ ಇವುಗಳಿಗೆ ಸಮಾನಾಂತರವಾಗಿ ಪಾ.ವೆಂ. ಸ್ವಂತ ಚಿಂತನೆಯನ್ನು ನಡೆಸಿದ್ದಾರೆ. ರಾಜಕೀಯದಲ್ಲಿ ಆರ್ಥಿಕ ಸಮಾನತೆ-ಅಸಮಾನತೆಗಳ ಸಂಘರ್ಷದಲ್ಲಿ, ನಗರ-ಗ್ರಾಮ ಜೀವನದ ವ್ಯತ್ಯಾಸಗಳಲ್ಲಿ, ಸಾಹಿತ್ಯ ವಿಮರ್ಶೆಯ ದಿಟ್ಟ ನೋಟಗಳಲ್ಲಿ ತನ್ನದೇ ಆದ ಗಟ್ಟಿನೆಲೆಯಿಂದ ಪಾ.ವೆಂ. ಯೋಚಿಸಬಲ್ಲರು. ವಿಜ್ಞಾನ, ಸಮಾಜ ಶಾಸ್ತ್ರ, ಇತಿಹಾಸ, ಸಂಸ್ಕೃತ, ಕನ್ನಡ, ಹಿಂದಿ, ಇಂಗ್ಲೀಷ್, ಬಂಗಾಳಿ, ವ್ಯಾವಹಾರಿಕ ರಾಜಕೀಯ-ಮೂರ್ಖತೆ-ಎಲ್ಲವನ್ನು ಅವರು ಉದಾರ ಚಿತ್ತವೃತ್ತಿಯಿಂದ ತಬ್ಬಿಕೊಳ್ಳಬಲ್ಲರು. ನಿರ್ಲಿಪ್ತತೆಯಿಂದ ನಮಗೆ ಅರ್ಥೈಸಿ ನಂಬಿಸಿ ಹೇಳಬಲ್ಲವರು. ಪಾ.ವೆಂ. ಅವರ ಒಡನಾಡಿಗಳ ಅನುಭವದ ಮಾತು ಹೀಗಿದೆ, ಪಾ.ವೆಂ. ಜೊತೆ ಮಾತನಾಡುವುದೆಂದರೆ ಒಂದು ಸಲ ಕಣ್ತೆರೆದು ಕೊಂಡು ವಿಶ್ವಪರ್ಯಟನೆ ಮಾಡಿದಂತೆ ಎನ್ನುವ ಅನುಭವ ಎಲ್ಲರಿಗೂ ಅರಿವಾಗಿತ್ತು. ಮೂವತ್ತು ವರ್ಷಗಳ ಕಾಲ ಅವರು ತಮ್ಮ ಚಿಂತನಶೀಲತೆಯ ಲಾಭವನ್ನು ಕನ್ನಡ ಕುಲಕೋಟಿಗೆ ಉಣಬಡಿಸಿದ್ದಾರೆ. **ಸಂಯುಕ್ತ ಕರ್ನಾಟಕ**ದ ಮೂಲಕ ಮುಖ್ಯವಾಗಿ ಕಸ್ತೂರಿಯ ಮೂಲಕ ಕಸ್ತೂರಿಯ ಸುಗಂಧ ಹೊರಡಬೇಕಾದರೆ ಅನೇಕ ರಾಸಾಯನಿಕ ದ್ರವ್ಯಗಳು ಸೇರಿದಂತೆ ಪಾ.ವೆಂ. ಅವರು ರಚಿಸಿದ ಕಸ್ತೂರಿಯೂ ಇದೇ ರೀತಿಯದು ಅದರಲ್ಲಿಯ ಆಯ್ಕೆ, ಬರಹ, ಶೈಲಿ ನಿರೂಪಣೆ, ತಾತ್ಕಾಲಿಕ ಮತ್ತು ಶಾಶ್ವತ ಸಾಹಿತ್ಯದ ಸಮನ್ವಯಗಳು ಇದು ಪಾ.ವೆಂ. ಅವರ ಸ್ವಂತಿಕೆಯ ಧ್ಯೋತಕವಾಗಿದೆ. ಕನ್ನಡ ವಾಚಕರ ರುಚಿಶುದ್ಧಿಗೆ-ಭಾವ ಶುದ್ಧಿಗೆ **ಕಸ್ತೂರಿ** ಸಹಕಾರಿಯಾಗಿದೆ. ವಿಶ್ವ ವಿಶಾಲವಾದ ಮನೋರಂಜನೆ ಮತ್ತು ಜ್ಞಾನಭಂಡಾರವನ್ನು ಪ್ರತಿ ತಿಂಗಳು ನೂರಐವತ್ತು ಪುಟಗಳ ಮಿತಿಯಲ್ಲಿ ಜಗತ್ತಿನಾದ್ಯಂತ ಕನ್ನಡಿಗರ ಮನೆಬಾಗಿಲಿಗೊಯ್ದು ಮುಟ್ಟಿಸುವ ಸೇವೆ ಪಾ.ವೆಂ. ಅವರಿಂದ ನಡೆಯಿತು.

ಪಾ.ವೆಂ. ಅವರು ಪತ್ರಿಕೋದ್ಯಮದ ಯಶಸ್ವಿ ನಿರ್ವಾಹಕರು. ಪರಿಪೂರ್ಣ ಪತ್ರಿಕೋದ್ಯಮಿ, ಉದ್ಯಮಿಗಳ ಅಂಗಾಂಗಗಳನ್ನೆಲ್ಲ ಬಲ್ಲವರಾಗಿದ್ದರು. ಬುಡದಿಂದ

ತುದಿಯವರೆಗೆ ಬರಿ ಬಲ್ಲವರಷ್ಟೇ ಅಲ್ಲ ಅದರಲ್ಲೆಲ್ಲ ಪೂರ್ಣವಾಗಿ ತರಬೇತಿ ಹೊಂದಿದ ಪರಿಣಿತರು. ಪತ್ರಿಕೋದ್ಯಮವು ಸಾಮಾನ್ಯವಾಗಿ ಕರಡು ತಿದ್ದುವುದರಿಂದ ಪ್ರಾರಂಭವಾಗುವುದು ಅದರಲ್ಲಿ ಪರಿಣಿತರಾಗುವುದು ಅತ್ಯವಶ್ಯಕ ಅಷ್ಟೇ ಕಠಿಣ. ಬಹಳಷ್ಟು ಪತ್ರಿಕೋದ್ಯಮಿಗಳಿಗೆ ಈ ಕಲೆ ಕರಗತವಾಗುವುದಿಲ್ಲ. ಅನಂತರ ಸುದ್ದಿ ಸಂಗ್ರಹ, ಚಿಂತನ, ವರದಿ ಲೇಖನ, ಅನುವಾದ, ದೀರ್ಘ ಲೇಖನಗಳನ್ನು ಸಂಕ್ಷೇಪಗೊಳಿಸುವುದು. ಕಾದಂಬರಿಗಳನ್ನು ಮೂಲರೂಪಗೆಡದಂತೆ ಸಂಕ್ಷಿಪ್ತವಾಗಿಸುವುದು ಮಹತ್ತರವಾದವು.

ಪತ್ರಿಕೆ ಸಕಾಲದಲ್ಲಿ ಹೊರಡಬೇಕಾಗಿರುವುದರಿಂದ ಅವಸರದಿಂದ ಎಲ್ಲ ಕಾರ್ಯವನ್ನು ಮಾಡಬೇಕಾಗುವುದು. ಪ್ರಚಲಿತ ಸುದ್ದಿಗಳಿಗೊಂದು ಶೀರ್ಷಿಕೆ ಕೊಡುವುದೊಂದು ಕಲೆ, ಸುದ್ದಿಗಳನ್ನು ಕ್ರಮವಾಗಿ ಜೋಡಿಸುವುದು ಇಷ್ಟೆಲ್ಲ ಸಾಧಿಸಿದ ಬಳಿಕ ವಿಶೇಷ ಲೇಖನ, ಸಂಪಾದಕೀಯ, ಹರಟೆ, ನಗೆಬರಹಗಳನ್ನು ಬರೆಯುವುದು, ಸಂಗ್ರಹಿಸುವುದು ವ್ಯವಸ್ಥಿತ ರೂಪಕ್ಕೆ ತರುವುದು–ಇವೆಲ್ಲದರಲ್ಲೂ ಪಾ.ವೆಂ. ಅವರು ಸಿದ್ಧಹಸ್ತರಾಗಿದ್ದರು. ಜೊತೆಗೆ ಮುದ್ರಣ ಕಲೆಯನ್ನು ಕಲಿತಿದ್ದರು. ಪತ್ರಿಕೆಗಳಿಗೆ ಈ ಕಾರ್ಯ ಅವಶ್ಯಕ. ಪಾ.ವೆಂ. ಅವರಲ್ಲಿ ಸಂಸ್ಕೃತ ಮತ್ತು ಹಳಗನ್ನಡ ಗ್ರಂಥಗಳನ್ನು ಓದಿ ಸಾಕಷ್ಟು ಶಬ್ದಸಂಗ್ರಹವನ್ನು ಬೆಳೆಸಿಕೊಂಡಿದ್ದರು. ಅದರ ಲಾಭವನ್ನು ಕಸ್ತೂರಿ ವಾಚಕರಿಗೆ ಒದಗಿಸಿಕೊಟ್ಟಿದ್ದರು. ತಿಂಗಳು ತಿಂಗಳು ಕಸ್ತೂರಿಯಲ್ಲಿ **ನಿಮ್ಮ ಶಬ್ದ ಭಂಡಾರ ಬೆಳೆಯಲಿ** ಎನ್ನುವ ಶಬ್ದಕೋಶವನ್ನು ಪ್ರಕಟಪಡಿಸುತ್ತಿದ್ದರು.

೧೯೭೪ರಲ್ಲಿ ಅಕ್ಟೋಬರ್ ೩೧ರಂದು **ಸಂಯುಕ್ತ ಕರ್ನಾಟಕ** ಕಚೇರಿಯಲ್ಲಿ ಕಾರ್ಯನಿರತರಾಗಿದ್ದಾಗ ರಕ್ತವನ್ನು ಕಾರಿಕೊಂಡರು. ತಕ್ಷಣ ಆಸ್ಪತ್ರೆಗೆ ದಾಖಲು ಮಾಡಿದರು. ನವೆಂಬರ್ ೧೧ರಂದು ಉದರ ಶಸ್ತ್ರಕ್ರಿಯೆ ಮಾಡಿದರು. ಆದರೆ ಪೂರ್ಣ ಗುಣಮುಖರಾಗಲಿಲ್ಲ. ಇನ್ನೊಮ್ಮೆ ಆಪರೇಶನ್ ಮಾಡಬೇಕು, ಆದರೆ ಪಾ.ವೆಂ. ಅವರ ಮೈಯಲ್ಲಿ ರಕ್ತವೇ ಇಲ್ಲ. ಪ್ರಾಣಕ್ಕೆ ಅಪಾಯವಾಗಬಹುದೆಂಬ ಅಳುಕು. ಕುಟುಂಬದವರು, ಭಾವಮೈದ ಜನಾರ್ಧನರಾವ 'ಆಪರೇಶನ್' ಮಾಡಿ ದೇವರಿದ್ದಾನೆ ಎಂದು ಧೈರ್ಯ ಹೇಳಿದರು. ಮುಕ್ಕಾಲು ಭಾಗ ಕರುಳನ್ನು ಕತ್ತರಿಸಲಾಯಿತು. ಸಾವಿನ ಅಂಚಿಗೆ ಹೋಗಿದ್ದ ಪಾ.ವೆಂ. ಮತ್ತೆ ಉಸಿರಾಡಿದರು. ಶಸ್ತ್ರಕ್ರಿಯೆಗೆ ಮೊದಲು ೧೯ ಸೀಸೆ ರಕ್ತವನ್ನು ಪಾ.ವೆಂ ಅವರಿಗೆ ನೀಡಲಾಯಿತು. ಅವರಿಗೆ ರಕ್ತ ನೀಡಲು ಸ್ನೇಹಿತವರ್ಗ, ಬಂಧು, ಬಾಂಧವರು, ವೈದ್ಯ, ವಿದ್ಯಾರ್ಥಿಗಳ ಹೊಳೆಯೇ ಹರಿದು ಬಂತು. ತಾವಾಗಿಯೇ ರಕ್ತದಾನ ಮಾಡಿ ಪಾ.ವೆಂ. ಅವರಿಗೆ ಸಹಕರಿಸಿದರು.

ವ್ಯಕ್ತಿ ಜೀವನದ ದೊಡ್ಡತನ, ಮಹತ್ವ ಅರಿವಾಗುವುದು ಆತನ ಜೀವನದ ಉತ್ಕಟ ಸನ್ನಿವೇಶಗಳಲ್ಲಿ ಎಂಬುದನ್ನು ಇಲ್ಲಿ ಕಾಣುತ್ತೇವೆ. ಪಾ.ವೆಂ. ಅವರದು ನಿರ್ಲಿಪ್ತ ಜೀವನ, ಸಾವಿನ ಬಗ್ಗೆ ಅಂಜಿಕೆ ಇರಲಿಲ್ಲ. ರೋಗ ವಿಪತ್ಕಾರಕ ಹಂತ ಮುಟ್ಟಿದಾಗು

ಅವರು ಏನು ಆಗದವರ ಹಾಗೆ ಇದ್ದರು. ೨ ಶಸ್ತ್ರಕ್ರಿಯೆಗಳು ಮುಗಿದವು. ೭೨ ದಿನ ಆಸ್ಪತ್ರೆಯಲ್ಲಿದ್ದರು. ಅಷ್ಟು ಕಾಲವು ಅವರು ವಿಧಿಯೊಡನೆ ಹೋರಾಡಿ ಮನಸ್ಥೈರ್ಯದಿಂದ ಬದುಕಿದರು. ಬುದ್ಧಿಜೀವಿ, ಅತಿರೇಕದ ಜೀವಿಯಲ್ಲ. ಸಹೋದ್ಯೋಗಿಯಿಂದ ಹಿಡಿದು ದಾಯಿಯವರೆಗೂ ಅವರು ಯಾರ ಸೂಚನೆಯನ್ನು ಉಪೇಕ್ಷೆಯನ್ನು ಬಯಸದೆ ಮಗುವಿನಂತೆ ಅದನ್ನು ಪಾಲಿಸುತ್ತಿದ್ದರು. ಪಾ.ವೆಂ. ಪತ್ನಿ, ಮಕ್ಕಳು, ಕುಟುಂಬದವರು ಜೊತೆಯಲ್ಲಿದ್ದು ಸೇವೆ ಯನ್ನು ಮಾಡುತ್ತಿದ್ದರು. ಪತ್ನಿಯ ಒಳ್ಳೆಯತನ, ಸಹನೆ, ಆರೈಕೆಯಲ್ಲಿನ ಕಟ್ಟುನಿಟ್ಟು ಎಲ್ಲ ಗುಣಗಳು ಪ್ರಶಂಸಾರ್ಹ. ಸಾವಿತ್ರತ್ವದ ಸಾಕ್ಷಾತ್ಕಾರವನ್ನು ರೂಪಿಸಿಕೊಂಡು ಪತಿಯೊಂದಿಗೆ ಅನುರೂಪ ಸತಿಯಾಗಿ ಬದುಕಿದವರು. ಡಾಕ್ಟರ್ ಮತ್ತು ನರ್ಸ್‌ಗಳಿಗೆ, ವೈದ್ಯ ವಿದ್ಯಾರ್ಥಿಗಳಿಗೆ ಪಾ.ವೆಂ. ಮೇಲೆ ವಿಶೇಷ ಪ್ರೀತಿ, ಅಭಿಮಾನ. ನಿತ್ಯವು ಅವರನ್ನು ಕಾಣಲೆಂದು ಬರುತ್ತಿದ್ದ ಅಪಾರ ಜನಸಂಪದವನ್ನು ಕಂಡು ಬದುಕಿಸದೇ ಹೋದರೆ ಡಾಕ್ಟರ್ ತಮ್ಮ ವೃತ್ತಿಗೆ ಅವಮಾನ ಮಾಡಿದಂತೆ ಎಂದು ಭಾವಿಸಿದ್ದರು.

ಮನೆಗೆ ಮರಳುವ ಪಾ.ವೆಂ. ಡಾಕ್ಟರರಿಗೆ ಕೃತಜ್ಞತೆ ಹೇಳಲು ಹೋದಾಗ ಮೇಲಿನಂತೆ ಹೇಳಿದುದಲ್ಲದೆ 'ನಾವೇನೋ ನಮ್ಮ ಕರ್ತವ್ಯ ಮಾಡಿದೆವು. ನಿಜವೆಂದರೆ ನೀವು ಬದುಕಿದ್ದು ನಿಮ್ಮ ಮನೋಬಲದಿಂದ' ಎನ್ನುತ್ತಾರೆ ಅವರನ್ನು ಶಸ್ತ್ರಕ್ರಿಯೆ ನಡೆಸಿದ ಡಾ.ಸಿ.ಆರ್.ರಘು. ಪಾ.ವೆಂ. ಅವರು ನೀವು ಶ್ರಮಪಟ್ಟು ಬದುಕಿಸಿದ್ದರಿಂದ ನನ್ನ ಜೀವನ ಇನ್ನಷ್ಟು ಅರ್ಥಪೂರ್ಣವೆನಿಸಿದೆ ಎಂದು ಉತ್ತರಿಸಿದರು.

ಬದುಕಿನಲ್ಲಿ ಸ್ಥಿತಪ್ರಜ್ಞೆಯನ್ನು ಕಂಡುಕೊಂಡ ವ್ಯಕ್ತಿ ಹೇಗೆ ಸಾವು ನೋವುಗಳ ಬಗ್ಗೆ ನಿರ್ಲಿಪ್ತನಾಗಿರುತ್ತಾನೆ. 'ಮಾನವ ಜನ್ಮ ದೊಡ್ಡದು' ದಾಸವಾಣಿಯನ್ನು ಅರ್ಥೈಸಿಕೊಂಡ ಪಾ.ವೆಂ. ಜೀವನದಲ್ಲಿ ಸಾವು, ನೋವುಗಳೊಂದಿಗೆ ಸೆಣಸಾಡಿದ ರೀತಿಯನ್ನು ಇಲ್ಲಿ ಕಾಣುತ್ತೇವೆ. ೧೯೭೫ ಜನವರಿ ೧೫ರಂದು ಕಸ್ತೂರಿಯ ಸಂಪಾದಕತ್ವದಿಂದ ಹಾಗೂ ಲೋಕಶಿಕ್ಷಣ ಸಂಸ್ಥೆಯ ನೌಕರಿಯಿಂದ ನಿವೃತ್ತಿಯನ್ನು ಪಡೆದರು. ೧೯೭೫–೧೯೯೧ ಕಸ್ತೂರಿಯಲ್ಲಿ **ಪದಾರ್ಥ ಚಿಂತಾಮಣಿ**ಯನ್ನು ಮುಂದುವರೆಸಿದರು. ಇತರ ಪತ್ರಿಕೆಗಳಿಗೂ ಅಭ್ಯಾಸಪೂರ್ಣವಾದ ಚಿಂತನಪರ ಲೇಖನಗಳನ್ನು ಬರೆಯುತ್ತಿದ್ದರು. ವೃತ್ತಿಯಿಂದ ನಿವೃತ್ತಿ ಹೊಂದಿದರೂ ಓದು, ಬರಹದ ಪ್ರವೃತ್ತಿಯಿಂದ ನಿವೃತ್ತಿ ಹೊಂದಲಿಲ್ಲ. ನಿರಂತರವಾದ ಓದು, ಕಲಿಕೆ ಅವರ ಜನ್ಮಜಾತವಾದ ಗುಣವಾಗಿತ್ತು.

ಕೊನೆಯ ದಶಕ: ಅನಾರೋಗ್ಯ ಪೀಡಿತರಾಗಿ ಆಗಾಗ ದೀರ್ಘಕಾಲದ ಉಬ್ಬಸದ ತೊಂದರೆ, ಇಪ್ಪತ್ತೊಂದು ಅಡಿ ಉದ್ದದ ಶಸ್ತ್ರ ಚಿಕಿತ್ಸೆಯಲ್ಲಿ ಕತ್ತರಿಸಿ ಹಾಕಿ ಉಳಿದ ಕೆಲವೇ ಅಡಿಗಳ ಕರಳಿನಿಂದಲೇ ೧೮ ವರ್ಷ ಚಟುವಟಿಕೆಯಿಂದ ವೃತ್ತಿಜೀವನ, ನಿವೃತ್ತ ಜೀವನವನ್ನು ನಡೆಸಿದ್ದಾರೆ. ಪಾ.ವೆಂ. ಕಷ್ಟ ಸಾಧನೆಯಲ್ಲಿ ಆನಂದವನ್ನು ಕಾಣುವ ಕರ್ಮಯೋಗಿ.

೧೯೯೨ರಲ್ಲಿ ಬಿ.ಡಿ. ಗೋಯೆಂಕಾ ಪ್ರಶಸ್ತಿಯ (ಒಂದು ಲಕ್ಷ ರೂ.) ಪ್ರಧಾನ ಕಾರಣಾಂತರದಿಂದ ಸಮಾರಂಭ ಮುಂದೂಡಲಾಗಿತ್ತು. ಬದುಕು ಮುಗಿಯುವ ಮುನ್ನ **ಗೋಯೆಂಕಾ ಪ್ರಶಸ್ತಿ** ಸ್ವೀಕರಿಸಿರುವ ಅವಕಾಶ ನೀಡುವಷ್ಟು ಬದುಕು ಉದಾರಿಯಾಗಲಿಲ್ಲ. ಗೋಕಾರರ ಸಾವಿನ್ನೂ ಘೋಷಿತವಾಗಿ ಒಂದು ವಾರ ಕಳೆದಿಲ್ಲ. ಗೋಕಾಕರಿಗೆ **ಶ್ರದ್ಧಾಂಜಲಿ ಲೇಖನ**ವನ್ನು ಪಾ.ವೆಂ. ಬರೆದಿದ್ದರು. ಸಾವಿಗೆ ಎರಡು ದಿನಗಳ ಮುನ್ನ ಹುಬ್ಬಳ್ಳಿಯಲ್ಲಿ ಹಾ.ಮಾ.ನಾಯಕರ ಅಧ್ಯಕ್ಷತೆಯಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಕೊಂಚಕಷ್ಟದಿಂದಲೇ ಮಾತನಾಡಿದ್ದರು. ಪಾ.ವೆಂ. ಅವರ ಲೇಖನಗಳ ಸಂಕಲನ **ಮುಂಜೂಷ** ಬಿಡುಗಡೆಯಾಗಿತ್ತು. ಪಾ.ವೆಂ. ಅವರ ಲೇಖನಗಳ ಸಂಕಲನ ಉತ್ಸಾಹಕ್ಕೆ ದಣಿವು ಇರಲಿಲ್ಲ. ಈ ಸಂಕಲನದ ಕೆಲವು ಲೇಖನಗಳು ವಿವಾದಕ್ಕೆ ಎಡೆಮಾಡಬಹುದೆಂದರು. ಎಲ್ಲ ವಿವಾದಗಳಿಗೆ ಉತ್ತರ ನೀಡುವ ಚೈತನ್ಯ ಅವರಲ್ಲಿತ್ತು. ಆದರೆ ವಿಧಿಯ ಆಟ ಎಲ್ಲವನ್ನು ಮುಗಿಸಿತ್ತು.

೧೯೯೨ ಎಪ್ರಿಲ್ ೪ರಂದು ಪಾ.ವೆಂ. ಅವರನ್ನು ಸಾವು ಕೊಂಡೊಯ್ಯಿತ್ತು. ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆಯೂ ನೆರವೇರಿತು.

ಇ) ರೂಪಿಸಿಕೊಂಡ ಮನೋಧರ್ಮ, ಸಾಂಸಾರಿಕ ವ್ಯಕ್ತಿಯಾಗಿ ಪಾ.ವೆಂ.:

ಶಿವಳ್ಳಿ ವೈದಿಕ ಮನೆತನದಲ್ಲಿ ಜನಿಸಿದ ಪಾ.ವೆಂ. ಹಿರಿಯ ಮನೆತನವೆಲ್ಲವೂ ವೇದ-ವಿದ್ಯಾ ಪಾರಂಗತರಾಗಿದ್ದರು. ತಂದೆ ಲಕ್ಷ್ಮೀನಾರಾಯಣ ಆಚಾರ್ಯರು ಸಂಸ್ಕೃತ ಪಂಡಿತರು, ನಾಟಕ, ಹರಿಕತೆ, ಸಂಗೀತಾಸಕ್ತರು ಅಂದಿನ ಕಾಲದ ಮೌಢ್ಯ ಪರಂಪರೆಯನ್ನು ಬದಿಗೊತ್ತಿ ಮನೆಯಲ್ಲಿ ತನ್ನ ಮಕ್ಕಳಿಗೆ ಸಂಗೀತ ಸಾಂಸ್ಕೃತಿಕ ಶಿಕ್ಷಣವನ್ನು ರೂಪಿಸಿದ್ದರು. ಪಾ.ವೆಂ. ಅವರಿಗೆ ೫ ವರ್ಷ ಇರುವಾಗಲೇ ಪಿತೃವಿಯೋಗವಾದ್ದರಿಂದ ಬಡತನ, ಕಷ್ಟಗಳೊಂದಿಗೆ ವಿದ್ಯಾಭ್ಯಾಸ ಪ್ರಾರಂಭವಾಯಿತು.

ತಂದೆಯ ಅಭಾವ, ಬಡತನದ ಬದುಕು ಪಾ.ವೆಂ. ಅವರ ಜೀವನಕ್ಕೆ ಹೆಚ್ಚು ಒತ್ತುಕೊಟ್ಟಿದೆ. ವಿದ್ಯಾರ್ಥಿಯಾಗಿ ಪಾ.ವೆಂ. ಎಲ್ಲ ವಿಷಯಗಳಲ್ಲೂ ಪ್ರಥಮ ಸ್ಥಾನವನ್ನು ಅಲಂಕರಿಸುತ್ತಿದ್ದರು. ಪಾ.ವೆಂ. ಜ್ಞಾಪಕ ಶಕ್ತಿ ಅಪಾರವಾದದ್ದು. ಒಮ್ಮೆ ಓದಿದರೆ ಹಸಿಗೋಡೆಯ ಮೇಲೆ ಅಚ್ಚೊತ್ತಿದಂತೆ ಇರುತ್ತಿತ್ತು. ಓದು, ಅಧ್ಯಯನ, ಮನನ, ಕವಿತಾರಚನೆ, ಸಂಸ್ಕೃತ, ತುಳು, ಕನ್ನಡ, ಹಳಗನ್ನಡ, ಬಂಗಾಲಿ ಈ ಎಲ್ಲ ಭಾಷೆಗಳ ಪಾಂಡಿತ್ಯವನ್ನು ಬಾಲ್ಯದಲ್ಲೇ ಅರಗಿಸಿಕೊಂಡಿದ್ದರು. ಅವರ ಮನಸ್ಸಿನಲ್ಲಿ ಕಂಪ್ಯೂಟರ್ ಶೇಖರಣೆಯಂತೆ ವಿಚಾರಧಾರೆಗಳು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹವಾಗುತ್ತಿತ್ತು. ಸಂದರ್ಭಕ್ಕನುಸಾರವಾಗಿ ಹೊರತೆಗೆಯುವ ಚಮತ್ಕಾರವು ಅದರಲ್ಲಿತ್ತು. ಅಕ್ಕಂದಿರ ನೈತಿಕ ಬೋಧನೆ, ತಾಯಿಯ ಧೀರತನ ಮನುಷ್ಯರಂತೆ ಬದುಕಲು ರೂಪಿಸಿತು. ಬಾಲ್ಯದಿಂದಲೇ ವೈದಿಕ ವಿದ್ಯೆ, ಮಠಗಳ ಆಶ್ರಯ, ಸಂಸ್ಕೃತ ಶಾಲೆಗಳ ವಿರೋಧ,

ಮತಗಳ ಪೋಷಣೆ, ಪತಿತ ಸ್ವರೂಪಗಳನ್ನು ನೋಡಿ ಸ್ವತಃ ಅನುಭವಿಸಿದ್ದರಿಂದ ಇವೆಲ್ಲದರ ತಿರಸ್ಕೃತ ಮನೋಭಾವ ಮೂಡಲು ಕಾರಣವಾಯಿತು.

ಕಾವ್ಯ ಬರೆಯುವ ಗೀಳು ೧೧ ವಯಸ್ಸಿನಲ್ಲಿಯೇ ಪ್ರಾರಂಭವಾಗಿತ್ತು. ನಂತರ ಪಣಿಯಾಡಿಯವರ ಧುರೀಣ ಅಂತರಂಗ ಪತ್ರಿಕೆ, ನವಯುಗ, ಮಧುವನ, ತುಳುಪುರವಾಣಿ ಪತ್ರಿಕೆಗಳು, ಕಾವ್ಯ ಬರೆಯಲು ಭೂಮಿಕೆಯಾಯಿತು. ಕಾಲೇಜು ವಿದ್ಯಾಭ್ಯಾಸ ಸಾಧ್ಯವಾಗಲಿಲ್ಲ. ಉಪಾಧ್ಯಾಯ ವೃತ್ತಿಯಲ್ಲೂ ಸಫಲರಾಗಲಿಲ್ಲ. ಪಣಿಯಾಡಿಯವರ ಸಂಸ್ಥೆಗಳಲ್ಲಿ ಬಿಲ್‌ರೈಟರ್, ಕಾರಕೂನಿಕೆ, ಮುದ್ರಣ ಎಲ್ಲ ಕಾರ್ಯಗಳಲ್ಲೂ ದಕ್ಷತೆಯನ್ನುಗಳಿಸಿದರು. ಕಾರಣಾಂತರದಿಂದ ಪಣಿಯಾಡಿಯವರ ಸಂಸ್ಥೆ ಅಧಃಪತನದ ಹಾದಿಯನ್ನು ತಲುಪಿತ್ತು. ಉಡುಪಿಯಲ್ಲಿ ಉಳಿಯುವ ಸ್ಥಿತಿಯು ಇಲ್ಲದಂತಾಯಿತು.

ಪಾ.ವೆಂ. ಅವರ ಅಂತಃಕರಣದಲ್ಲಿ ಕವಿಶಕ್ತಿ ಅಡಗಿತು. ಪ್ರಾರಂಭದಲ್ಲಿ ಬರೆದ ನವನೀರದ ತುಳುಕವಿತೆಗಳೇ ಇದಕ್ಕೆ ಸಾಕ್ಷಿ. ಕಾವ್ಯ ಬರೆಯುವುದನ್ನೇ ಕೃಷಿಯನ್ನಾಗಿ ಮಾಡಿದ್ದಾರೆ. ಸಾಕಷ್ಟು ಕವನ ಸಂಕಲನಗಳು ಇಂದು ಕನ್ನಡಿಗರ ಪಾಲಿಗೆ ಒದಗುತ್ತಿತ್ತೊ ಏನೋ? ಆದರೆ ಯಾರೋ ಕೇಳಿದರಂತೆ ಪಾ.ವೆಂ. ಅವರನ್ನು ನಾನು ಕವಿ ಎಂದಾಗ ಊಟಕ್ಕೇನು ಮಾಡುತ್ತೀಯಾ? ನಾ.ಮೊಗಸಾಲೆಯವರು ಪಾ.ವೆಂ. ಅವರಿಗೆ ಸಂದರ್ಶನ ಮಾಡಿದ ಪ್ರಶ್ನೆಗೆ ಈ ರೀತಿಯಾಗಿ ಉತ್ತರಿಸುತ್ತಾರೆ.

ಕವಿಗಳಾಗಿರುವ ನೀವು ವೃತ್ತಿಯಿಂದ ಪತ್ರಿಕಾ ಧರ್ಮವನ್ನು ಸ್ವೀಕರಿಸಿದರೋ ಅಥವಾ ಪ್ರವೃತ್ತಿಯಾಗಿ ಒಪ್ಪಿಕೊಂಡರೋ? 'ನಾನು ಪ್ರಥಮಥಃ ಪದ್ಯದ ಕಡೆಗೆ ಆಸಕ್ತಿ ತಾಳಿದ್ದೆ ಎನ್ನುವುದು ಸತ್ಯ. ಆದರೆ ನಾನು ಜೀವನ ಪ್ರಾರಂಭಿಸಿದ ಕಾಲದ ಸ್ಥಿತಿಗತಿ ನನ್ನದೇ ಆರ್ಥಿಕ ಅಗತ್ಯಗಳು ನನ್ನನ್ನು ಕವಿತೆಗೆ ಅಷ್ಟು ಪ್ರೋತ್ಸಾಹಕರವಲ್ಲದ ಜೀವನ ರಂಗಗಳಲ್ಲಿ ತಳ್ಳಿದವು. ಎಲಿಮೆಂಟರಿ ಶಾಲಾಶಿಕ್ಷಕ, ಅಂಗಡಿ ಕೆಲಸಗಾರ, ಲೆಕ್ಕಿಗ, ಕಂಪನಿ ಕಾರ್ಯದರ್ಶಿ, ಪ್ರೆಸ್‌ಮ್ಯಾನೇಜರ್, ಹೋಟೆಲ್ ಬಿಲ್‌ರೈಟರ್ ಈ ಬಳಸುದಾರಿಯಿಂದ ನಾನು ಕೊನೆಗೆ ಪತ್ರಿಕೋದ್ಯೋಗಕ್ಕೆ ತೇಲಿಬಂದೆ. ನನಗೆ ಕ್ಷಿಪ್ರಬುದ್ಧಿ ಇದ್ದುದರಿಂದ ಶಿಕ್ಷಕ ವೃತ್ತಿಯಲ್ಲೊಂದು ಹೊರತು ಉಳಿದವುಗಳಲ್ಲಿ ನಾನು ನಿರೀಕ್ಷೆ ಮೀರಿಯೇ ಒಳ್ಳೆ ಕೆಲಸ ಮಾಡಿದೆ. ವೃತ್ತಿ–ಪ್ರವೃತ್ತಿಗಳಲ್ಲಿ ಆರಿಸಿಕೊಳ್ಳುವ ಸ್ವಾತಂತ್ರ್ಯ ನನಗೆ ಅಷ್ಟಾಗಿ ಇರಲಿಲ್ಲ.

'ಕುದುರೆ ನನ್ನ ದಾರಿಯಲ್ಲೇ ಬಂತು ಹತ್ತಿಕೂತೆ ಅದು ಪ್ರತಿಭಟಿಸಲಿಲ್ಲ' ಹಾಗಾಗಿ ಪತ್ರಿಕಾ ಧರ್ಮ ಸ್ವೀಕರಿಸಿದೆ ಎನ್ನುತ್ತಾರೆ. ಜೀವನೋಪಾಯಕ್ಕಾಗಿ ತಮ್ಮನ್ನೇ ಪತ್ರಿಕಾಧರ್ಮಕ್ಕೆ ಸಮರ್ಪಿಸಿಕೊಂಡರು. ಇದು ಕನ್ನಡ ಪತ್ರಿಕೋದ್ಯಮದ ಸೌಭಾಗ್ಯವೂ ಹೌದು. ಪತ್ರಿಕೋದ್ಯಮವನ್ನು ವ್ಯಾಪಾರೀಕರಣದ ಧ್ಯೇಯೋದ್ದೇಶಕ್ಕೆ ಬಳಸಿಕೊಳ್ಳುವಾಗ ಓದುಗರ ಜ್ಞಾನನಿಧಿಯನ್ನು ಅಭಿವೃದ್ಧಿಪಡಿಸುವ ಉದಾತ್ತದೃಷ್ಟಿ ಸಾಧಿಸಿದ್ದರು. ಎಷ್ಟು ಸೃಜನಾತ್ಮಕ ಕೆಲಸವನ್ನು ಮಾಡಬೇಕೋ ಅಷ್ಟು ಮಾಡಿದರು.

ಸಾಂಸಾರಿಕ ವ್ಯಕ್ತಿಯಾಗಿ ಪಾ.ವೆಂ.ಆಚಾರ್ಯ: ಪತ್ರಿಕೋದ್ಯಮ, ಚಿಂತನೆ, ವಿಮರ್ಶೆ, ಬರವಣಿಗೆಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದರು. ಕೌಟುಂಬಿಕ ಜೀವನದ ಬಗ್ಗೆ ಹೆಚ್ಚು ಆಸಕ್ತರಾಗಿರಲಿಲ್ಲ. ತನ್ನ ಕೆಲಸ, ಕಾರ್ಯಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದರು. ಸಾಂಸಾರಿಕ ವ್ಯಕ್ತಿಯಾಗಿ ಪಾ.ವೆಂ. ಅವರ ಜೀವನ ಕುತೂಹಲಕಾರಿಯಾದದ್ದು. ವಿದ್ವಾಂಸರ ಮನೆತನದಲ್ಲಿ ಬೆಳೆದ ಪಾ.ವೆಂ. ಬಾಲ್ಯದಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡಿದ್ದರು. ನಾಲ್ಕು ಜನ ಹೆಣ್ಣುಮಕ್ಕಳ ನಂತರ ಉಳಿದ ಏಕಮಾತ್ರ ಪುತ್ರ ಪಾ.ವೆಂ. ಮಾತೃಭಾಷೆ ಶಿವಳ್ಳಿ ತುಳು. ಆಗಿನ ಕಾಲದ ವೈದಿಕ ಮನೆತನದ ಸಾಂಪ್ರದಾಯಿಕ ಪರಂಪರೆಯನ್ನು ಮುರಿದು ಮನೆಯಲ್ಲಿರುವ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು, ಸಂಗೀತ, ನಾಟಕ, ಹರಿಕತೆ, ಯಕ್ಷಗಾನದ ಸಾಂಸ್ಕೃತಿಕ ವಾತಾವರಣವನ್ನು ತಂದೆ ಪಾಡಿಗಾರು ಲಕ್ಷ್ಮೀ ನಾರಾಯಣ ಆಚಾರ್ಯರು ಮನೆಯಲ್ಲಿಯೇ ಕಲ್ಪಿಸಿದ್ದರು. ಪಾ.ವೆಂ. ಅವರು ತನ್ನ ೫ ವರ್ಷದವರೆಗೂ ಎಲ್ಲರ ಪ್ರೀತಿಯ ಸಮ್ಮುಖದಲ್ಲಿ ಬೆಳದರು. ೫ ವರ್ಷ ಆಗುವಾಗಲೇ ತಂದೆಯನ್ನು ಕಳೆದುಕೊಂಡರು. ತಂದೆ ಸಾಕಷ್ಟು ಸಂಪತ್ತನ್ನು ಗಳಿಸಿದ್ದರು. ಅದನ್ನು ಅನುಭವಿಸುವ ಅವಕಾಶದಿಂದ ಪಾ.ವೆಂ. ಕುಟುಂಬ ವಂಚಿತವಾಗಿತ್ತು. ಕಡುಬಡತನದಲ್ಲಿಯೇ ಜೀವನ ಸಾಗಿಸುವಂತಾಯಿತು. ತನ್ನ ತಾಯಿಯ ವಿಧವೆ ಅಕ್ಕ ನಾಗವೇಣಿಯವರ ಸಹಕಾರದಿಂದ ಉಡುಪಿಯ ಕುಂಜಿಬೆಟ್ಟುವಿನಲ್ಲಿ ಸೋದೆಯಿಂದ ಬಂದು ಪುಟ್ಟ ಮನೆಯಲ್ಲಿ ವಾಸಿಸುವಂತಾಯಿತು. ತಾಯಿ ಮತ್ತು ಬಂಧುವರ್ಗದವರ ಸಹಕಾರದಿಂದ ಸಾಂಪ್ರದಾಯಿಕ ಶಿಕ್ಷಣ ಹತ್ತನೇ ತರಗತಿಯವರೆಗೆ ಮುಗಿಸಿದರು. ಪಾ.ವೆಂ. ಅವರ ವಿದ್ಯಾಭ್ಯಾಸ ಕಾಲದಲ್ಲಿ ಆರ್ಥಿಕ ಪರಿಸ್ಥಿತಿ ಕೊರತೆಯಿಂದಾಗಿ ಕೃಷ್ಣಮಠದ ಧರ್ಮಾರ್ಥ ಅನ್ನವನ್ನು ಆಶ್ರಯಿಸಬೇಕಾಗಿತ್ತು. ತಾಯಿ ಮಗ ಇಬ್ಬರಿಗೂ ಇದು ಸಹಿಸದ ವಿಷಯವಾಗಿತ್ತು. ಪರಾವಲಂಬನೆಯ ಅನ್ನ ಆಶ್ರಯ ಕಡುಬಡತನದಲ್ಲಿ ತೀರ ಕಷ್ಟಕರವಾಗಿತ್ತು. ಪಾ.ವೆಂ. ಅವರಿಗೆ ನನಗೀಗ ಹರೆಯಕ್ಕೆ ಕಾಲಿಡುತ್ತಿದ್ದೇನೆ. ಏನಾದರೂ ಸಾಧಿಸಬೇಕೆನ್ನುವ ಛಲ ಅವರಲ್ಲಿ ದೃಢವಾಗಿ ಮೂಡಿತ್ತು. ಆದರೆ ಬ್ರಾಹ್ಮಣರಿಗೆ ಸರಕಾರಿ ಕೆಲಸ ಸಿಗುವುದು ಕಷ್ಟಕರವಾಗಿತ್ತು. ಭಾರತ ಪರಕೀಯರ ಆಳ್ವಿಕೆಯಲ್ಲಿ ಇದ್ದಕಾಲ, ಪರಕೀಯ ಸರಕಾರದ ವೇತನ ಪಡೆಯುವುದು ಪಾ.ವೆಂ. ಅವರ ಮನಸ್ಸಿಗೆ ಒಗ್ಗದ ವಿಷಯವಾಗಿತ್ತು.

ಕುಟುಂಬದ ನಿರ್ವಹಣೆಗಾಗಿ ಒಂದು ವರ್ಷ ಕಡಿಯಾಳಿ ಪ್ರೈಮರಿ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಮಾಡಿದರು. ನಂತರ ಎಸ್.ಯು.ಪಣಿಯಾಡಿಯವರ ಸ್ವದೇಶಿ ವಸ್ತುಭಂಡಾರದಲ್ಲಿ ಲೆಕ್ಕಿಗ, ಕಾರಕೂನ, ಮುದ್ರಣ ಎಲ್ಲ ಕೆಲಸವನ್ನು ನಿರ್ವಹಿಸಿದರು. ೧೯೩೦ರಲ್ಲಿ ಉಡುಪಿಯ ಲಕ್ಷ್ಮೀಬಾಯಿಯವರು ತಮ್ಮ ೧೫ನೇ ವಯಸ್ಸಿನಲ್ಲಿ ಪಾ.ವೆಂ. ಅವರ ಜೀವನ ಸಂಗಾತಿಯಾದರು. ಲಕ್ಷ್ಮೀಬಾಯಿಯವರು ಹೆಚ್ಚು ಓದಿದವರಲ್ಲ, ಒಳ್ಳೆಯ ಮನೆತನದಲ್ಲಿ ಜನಿಸಿದವರು. ಅನುರೂಪದ ಸಂಗಾತಿಯಾಗಿ ಪಾ.ವೆಂ. ಅವರೊಂದಿಗೆ ಜೀವನ ನಡೆಸಿದರು.

ಪಾ.ವೆಂ. ಅವರು ತಾಯಿಯನ್ನು ಪೂಜ್ಯ ಗೌರವ ಭಾವನೆಯಿಂದ ಕಾಣುತ್ತಿದ್ದರು. ಸಣ್ಣ ವಯಸ್ಸಿನಲ್ಲಿ ಗಂಡನ್ನು ಕಳೆದುಕೊಂಡು ಬ್ರಾಹ್ಮಣ ಪರಂಪರೆಯ ಮೌಢ್ಯ ಸಂಪ್ರದಾಯಕ್ಕೆ ಒಳಗಾದ ತಾಯಿ ಬಗ್ಗೆ ದುಃಖವಿದ್ದರೂ ಪ್ರೀತಿ, ಗೌರವ, ಅಂತಃಕರಣ ಎಲ್ಲವೂ ಇತ್ತು. ತಾಯಿಯ ಧೀರತನ ರಕ್ಷಣೆಯಲ್ಲಿಯೇ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಂಡರು. ಕುಟುಂಬದ ವಿಷಯಕ್ಕೆ ಬಂದಾಗ ಪಾ.ವೆಂ. ಅವರ ಗಮನ ಕಡಿಮೆ ಎಂದೇ ಹೇಳಬಹುದು. ಪಾ.ವೆಂ. ಅವರು ತಾಯಿ ಅಂತ್ಯಾವಸ್ಥೆಯಲ್ಲಿದ್ದಾಗ ಲಿವರ್ ಕ್ಯಾನ್ಸರ್‌ನಿಂದ ರಾತ್ರಿಯೆಲ್ಲ ನೋವಿನಿಂದ ನರಳುತ್ತಿದ್ದರು. ರಾತ್ರಿಯೆಲ್ಲ ಕುಳಿತು ಆರೈಕೆ ಮಾಡಿ ಬೆಳಿಗ್ಗೆ ಆಫೀಸಿಗೆ ಹೋಗುತ್ತಿದ್ದರು. ಆಗ ಕರ್ಮವೀರ ದೀಪಾವಳಿಯ ಸಂಚಿಕೆಯನ್ನು ಪ್ರಕಟಪಡಿಸುವ ಅವಸರವಿತ್ತು. ಪಾ.ವೆಂ. ಅವರು 'ಅಮ್ಮಾ ಈವೊತ್ತು ಸಂಜೆಗೆ ಕೆಲಸ ಮುಗಿಯತ್ತೆ, ಆಮೇಲೆ ಒಂದು ತಿಂಗಳು ರಜೆ ಹಾಕಿ ನಿಮಗೆ ಭಾಗವತ ಪುರಾಣ ಹೇಳುತ್ತೇನೆ' ಎಂದು ಹೇಳಿ ಆಫೀಸಿಗೆ ಹೋದರು. 'ನಾಲ್ಕು ಗಂಟೆಗೆ ಮನೆಗೆ ಬಂದಾಗ ತಾಯಿ ಕೊನೆಯ ಸ್ಥಿತಿಯಲ್ಲಿದ್ದರು. ಕಣ್ಣಲ್ಲಿ ಪ್ರಾಣಹಿಡಿದುಕೊಂಡು ಕೈಸನ್ನೆಯಿಂದ ಬಾಯಿ ತೋರಿಸಿದರು. ಎರಡು ಚಮಚ ಹಾಲು ಬಾಯಿಗೆ ಹಾಕಿದರು. ಅದು ಒಳಗೆ ಹೋಗುತ್ತಲೇ ತಾಯಿಯ ಪ್ರಾಣಹೋಯಿತು. ಭಾಗವತ ಅಲ್ಲೇ ಉಳಿಯಿತು. ತಾಯಿಯ ಅಂತ್ಯ ಸಂಸ್ಕಾರ ಮುಗಿಸಿ ಬಂದ ಪಾ.ವೆಂ. ಅವರಿಗೆ ಅಸ್ತಮ ಉಲ್ಬಣಿಸಿ ಮರುಜನ್ಮ ಪಡೆದುಬಂದರು. ಮನೆಯ ಕಡೆಗೆ, ತನ್ನ ಆರೋಗ್ಯದ ಕಡೆಗೆ ಅಲಕ್ಷ್ಯವೇ ಹೆಚ್ಚು. ಯಾವುದೇ ಜವಾಬ್ದಾರಿಯನ್ನು ಹೊತ್ತರೆ ಅದನ್ನು ಅತಿಯಾಗಿ ಹಚ್ಚಿಕೊಂಡು ಕಷ್ಟಪಡುವುದ ವಾಡಿಕೆ. ಇದು ಪಾ.ವೆಂ. ವ್ಯಕ್ತಿತ್ವದ ಒಂದಂಶವೂ ಹೌದು.

ಪಾ.ವೆಂ. ಅವರಿಗೆ ಒಟ್ಟು ೮ ಜನ ಮಕ್ಕಳು. ೧.ಮುರಳೀಧರ, ೨.ರಾಧಾಕೃಷ್ಣ, ೩.ಸುಕನ್ಯ, ೪.ರಾಘವೇಂದ್ರ, ೫.ರಮಾನಂದ, ೬.ಅನಸೂಯ, ೭.ಅಹಲ್ಯ, ೮.ಶ್ರೀನಿವಾಸ. ಮೊದಲ ಕೆಲವು ವರ್ಷಗಳು ಕುಟುಂಬದೊಡನೆ ನಂತರ ಪ್ರತ್ಯೇಕವಾಗಿ ಸಂಸಾರ ಹೂಡಿದ್ದರು. ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕಕ್ಕೆ ೧೯೪೨ರಲ್ಲಿ ಬಂದನಂತರ ಕುಟುಂಬದವರೊಡನೆ ಪ್ರತ್ಯೇಕವಾದ ಜೀವನವನ್ನು ಆರಂಭಿಸಿದರು. ಸುಖ, ದುಃಖ, ನೋವು-ನಲಿವುಗಳ ಸಂಗಮದಲ್ಲಿ ಇಬ್ಬರು ಸಮಭಾಗಿಗಳು. ಜೀವನ ಅಚ್ಚು ಮೆಚ್ಚಿನಲ್ಲಿಯೇ ಸಾಗುತ್ತಿತ್ತು. ನೆರೆಹೊರೆಯವರು ಆಶ್ಚರ್ಯದಿಂದ ಕೇಳುತ್ತಿದ್ದರಂತೆ ನಿಮ್ಮಲ್ಲಿ ಜಗಳವಾಗುವುದೇ ಇಲ್ಲವಲ್ಲ, ಮನೆಯಲ್ಲಿ ವಿನೋದದ ಚಟಾಕಿಗಳು ಆಗಾಗ ಹಾರುತ್ತಲೇ ಇರುತ್ತಿತ್ತು. ಗಳಿಸುವುದಕ್ಕಾಗಿ ಹೆಚ್ಚುಹೊತ್ತು ಮನೆಯ ಹೊರಗೆ ಕಳೆಯುತ್ತಿದ್ದರು. ಬೆಳಿಗ್ಗೆ ೮ ಗಂಟೆಗೆ ಮನೆಯಿಂದ ಹೊರಬಿದ್ದರೆ ರಾತ್ರಿ ಹತ್ತು ಗಂಟೆಗೆ ಮನೆಗೆ ಬರುತ್ತಿದ್ದರು. ಮನೆಯ ವ್ಯಾವಹಾರಿಕ ವಿಷಯಗಳಿಗೆ ಗಮನ ಕಡಿಮೆ. ಸತಿ ಲಕ್ಷ್ಮೀಯವರೇ ಮನೆಯ ಎಲ್ಲ ಜವಾಬ್ದಾರಿಯನ್ನು ಕುಶಲತೆಯಿಂದ ನಿರ್ವಹಿಸುತ್ತಿದ್ದರು. ಪಾ.ವೆಂ. ಅವರ ಸೋಪಜ್ಞತೆ ಕೆಲಸದಲ್ಲಿ ಓದಿನಲ್ಲಿ, ಚರ್ಚೆಗಳಲ್ಲಿ ಹೊರತು ಮನೆಯ ಅಗತ್ಯಗಳನ್ನು ತರ್ಕಿಸಿ ಪೂರೈಸುವುದರಲ್ಲಿ ಕುಂಟುವುದೇ ಜಾಸ್ತಿ.

ಲಕ್ಷ್ಮೀಯವರು ಪತಿಯ ಆರೋಗ್ಯದ ಬಗ್ಗೆ, ಮಕ್ಕಳ ಬಗ್ಗೆ ಹೆಚ್ಚು ಗಮನ ಕೊಡುತ್ತಿದ್ದರು. ಗೃಹಕೃತ್ಯಗಳ ಬಗ್ಗೆ ಬಹಳ ಲಕ್ಷ್ಯಕೊಟ್ಟು ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದರು. ಪಾ.ವೆಂ. ಅವರು ಬರಹಗಾರರಾದ್ದರಿಂದ ಮನೆಗೆ ಅನೇಕ ಸಾಹಿತಿಗಳು, ಗಣ್ಯವ್ಯಕ್ತಿಗಳು, ಜನಸಾಮಾನ್ಯರು, ಬಂಧು ವರ್ಗದವರು ಆಗಾಗ ಬಂದು ಹೋಗುತ್ತಿದ್ದರು. ಲಕ್ಷ್ಮೀಯವರ ಧಾರಾಳ, ಸೌಜನ್ಯದ ಸ್ವಭಾವ ಪಾ.ವೆಂ. ಅವರಿಗೆ ಅನುಕೂಲವೇ ಆಗಿತ್ತು.

ಪಾ.ವೆಂ. ಅವರು ತಮ್ಮ ಎಲ್ಲ ಮಕ್ಕಳಿಗೂ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯನ್ನು ಹೊತ್ತು ಯೋಗ್ಯ ಶಿಕ್ಷಣವನ್ನು ಕೊಡಿಸಿ ಉತ್ತಮ ಉದ್ಯೋಗ ಕ್ಷೇತ್ರದಲ್ಲಿ ಜೀವನ ಸಾಗಿಸುವಂತೆ ಮಾಡಿದರು. ಪಾ.ವೆಂ. ಅವರದು ತುಂಬಿದ ಮನೆ. ತಾವು ಪತ್ನಿ ಲಕ್ಷ್ಮೀ, ಮಕ್ಕಳು, ಮೊಮ್ಮಕ್ಕಳು, ಪಾ.ವೆಂ. ಅವರ ಅಕ್ಕಂದಿರು, ಅವರ ಮಕ್ಕಳು, ಸಾಹಿತಿಗಳು, ಬಂದುಹೋಗುವ ಸ್ನೇಹಿತ ವರ್ಗ, ವಿವಿಧ ಕೆಲಸಗಳಿಗಾಗಿ ಬಂದುಹೋಗುವ ಕಿರಿಯರು, ಹಿರಿಯರು – ಹೀಗೆ ಅವರ ಮನೆ ಸದಾ ಲವಲವಿಕೆಯಿಂದ ಕೂಡಿರುತ್ತಿತ್ತು. ಅದು ಜ್ಞಾನಸತ್ರದಂತೆ ಕಂಗೊಳಿಸುತ್ತಿತ್ತು. ಅಧ್ಯಯನ, ಪತ್ರಿಕಾ ಸಂಪಾದನೆ, ಚಿಂತನೆ ಹೀಗೆ ಒಂದಿಲ್ಲೊಂದು ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ಪಾ.ವೆಂ. ಇದ್ದ ಸಮಯದಲ್ಲಿಯೇ ಕುಟುಂಬಕ್ಕೆ ಹಾಗೂ ತನ್ನ ಸನಿಹಕ್ಕೆ ಬಂದ ಆತ್ಮೀಯ ಬಳಗಕ್ಕೆ ಉಣಬಡಿಸಿದ ವಾತ್ಸಲ್ಯಧಾರೆ ಅನುಪಮವಾದುದಾಗಿದೆ.

ಈ) ಪಾ.ವೆಂ. ದಿನಚರಿ – ಪಾ.ವೆಂ. ಅವರ ಆತ್ಮಕಥೆ

ಪಾ.ವೆಂ. ಆಚಾರ್ಯರ ದಿನಚರಿ ಕ್ರಮಬದ್ಧವಾದ ಚಿಂತನೆ ಮತ್ತು ಶಿಸ್ತುಬದ್ಧತೆಯಿಂದ ಕೂಡಿತ್ತು. ಸಮಯಕ್ಕೆ ಬಹಳ ಮಹತ್ವ ಕೊಡುತ್ತಿದ್ದರು. ಪ್ರತಿದಿನ ಬೆಳಿಗ್ಗೆ ೫ ಗಂಟೆಗೆ ಏಳುತ್ತಿದ್ದರು. ನಂತರ ತುಳಸಿ ಗಿಡ ಮತ್ತು ಹೂವಿನ ಗಿಡಗಳಿಗೆ ನೀರನ್ನು ಹಾಕುತ್ತಿದ್ದರು. ತುಳಸಿ ಗಿಡಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. ತಾವೇ ಮನೆಯಲ್ಲಿ ತುಳಸಿಕಟ್ಟೆಯನ್ನು ಕಟ್ಟಿ ಗಿಡವನ್ನು ನೆಡುತ್ತಿದ್ದರು. ಪಾ.ವೆಂ. ಅವರಿಗೆ ತುಳಸಿ ಗಿಡದ ಬಗ್ಗೆ ಅಪಾರ ಅಭಿಮಾನ. ಅದರ ಬಗ್ಗೆ ಒಂದು ಘಟನೆಯನ್ನು ಪಾ.ವೆಂ. ಪತ್ನಿ ಲಕ್ಷ್ಮೀಬಾಯಿಯವರು ಇಂದಿಗೂ ನೆನಪಿಸುತ್ತಾರೆ.

ಸಹೋದ್ಯೋಗಿಗಳು, ಸಮಕಾಲೀನ ವಿದ್ವಾಂಸರು ಆಗಾಗ ಅವರ ಮನೆಗೆ ಭೇಟಿ ನೀಡುತ್ತಿದ್ದರು. ಹಿರಿಯ ವಿದ್ವಾಂಸ ವಿಚಾರವಾದಿ ಶಂ.ಬಾ.ಜೋಶಿಯವರ ಮನೆಯಲ್ಲಿ ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲು ಅವಕಾಶವಿರಲಿಲ್ಲ. ಆ ಸಮಯದಲ್ಲಿ ಅವರ ಪತ್ನಿ ಬೇರೆಯವರ ಮನೆಯಲ್ಲಿ ತುಳಸಿ ಪೂಜೆಮಾಡಿ ಬರುತ್ತಿದ್ದರು. ಒಂದು ಬಾರಿ ಅದನ್ನು ನೋಡಿದ ಪಾ.ವೆಂ. ತುಳಸಿಗಿಡದ ವೈಜ್ಞಾನಿಕ, ಸಾಂಪ್ರದಾಯಿಕ ಮಹತ್ವವನ್ನು ಶಂ.ಬಾ.ಜೋಶಿಯವರಿಗೆ ಮನದಟ್ಟು ಮಾಡಿ ಮನೆಯಲ್ಲಿಯೇ ತುಳಸಿ–ಪೂಜೆ ಮಾಡುವಂತೆ ಪ್ರೇರಿಸಿದರು. ವಿಷಯವನ್ನು ಮನದಟ್ಟು ಮಾಡುವ ಅವರ ಬೌದ್ಧಿಕ ಪ್ರಾಮಾಣಿಕತನವನ್ನು ನಾವಿಲ್ಲಿ ಗುರುತಿಸುತ್ತೇವೆ.

ಪ್ರತಿದಿನ ತಪ್ಪದೇ ವಿಶ್ವೇಶ್ವರ ನಗರದ ತಮ್ಮ ಮನೆಯಿಂದ ನೃಪತುಂಗ ಬೆಟ್ಟದವರೆಗೆ ಮುಂಜಾನೆ ವಾಯುವಿಹಾರಕ್ಕಾಗಿ ಹೋಗುತ್ತಿದ್ದರು. ಜೊತೆಗೆ ಸಾಹಿತಿಗಳಾದ ಶ್ರೀನಿವಾಸ ತೋಫಖಾನೆ, ಪಾಟೀಲ ಪುಟ್ಟಪ್ಪ, ಆತ್ಮೀಯ ಗೆಳೆಯರಾದ ಕೆ.ವಿ.ಪೈಯವರು ಮುಂಜಾನೆಯ ವಾಯುವಿಹಾರದ ಗೆಳೆಯರಾಗಿದ್ದರು. ಚರ್ಚೆ ವಿಷಯಗಳೊಂದಿಗೆ ವಾಯುವಿಹಾರ ಸಾಗುತ್ತಿತ್ತು. ನಂತರ ಮನೆಗೆ ಬಂದು ಸ್ನಾನ ಪೂಜಾದಿಗಳನ್ನು ಮಾಡಿ, ಬೆಳಗಿನ ಉಪಹಾರ ಮುಗಿಸಿ ಆಫೀಸಿಗೆ ಬೆಳಿಗ್ಗೆ ೮.೩೦ಕ್ಕೆ ಮನೆ ಬಿಡುತ್ತಿದ್ದರು. ಮೊದಲು ಹೋಟೆಲ್ ಕೃಷ್ಣಭವನದ ಲೆಕ್ಕಪತ್ರ ಬರೆಯುವ ಕೆಲಸ ಮುಗಿಸಿ ನಂತರ **ಸಂಯುಕ್ತ ಕರ್ನಾಟಕ** ಆಫೀಸಿಗೆ ಹೋಗುತ್ತಿದ್ದರು. ರಾತ್ರಿ ಹೆಚ್ಚಾಗಿ ೧೦ ಗಂಟೆಗೆ ಮನೆಗೆ ಬರುತ್ತಿದ್ದರು. ಯಾರಾದರೂ ಮಾತಿಗೆ, ಚರ್ಚೆಗೆ ಸಿಕ್ಕಿದರೆ ತಮ್ಮ ವಿಷಯಪೂರ್ತಿ ಚರ್ಚಿಸಿಯೇ ಬರುತ್ತಿದ್ದರು. ಸಮಯ ಹೋಗುವುದೇ ತಿಳಿಯುತ್ತಿರಲಿಲ್ಲ.

ಅಧ್ಯಯನಕ್ಕಾಗಿ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ಸಾಕಷ್ಟು ಪುಸ್ತಕಗಳು ಸಂಗ್ರಹವು ಇವರಲ್ಲಿತ್ತು. ಭಾಷಾ ದೃಷ್ಟಿಯಿಂದ ಪಾ.ವೆಂ. ಅವರು ಸಂಸ್ಕೃತ, ಕನ್ನಡ, ಇಂಗ್ಲೀಷ್ ಪುಸ್ತಕಗಳನ್ನು ಅಧ್ಯಯನ ಮಾಡುತ್ತಿದ್ದರು. ತೆಲುಗು, ಹಿಂದಿ, ತಮಿಳು, ಮಲೆಯಾಳಿ, ಕೊಂಕಣಿ, ತುಳು, ಹಿಂದಿ, ಮರಾಠಿ, ಬಂಗಾಲಿ ಎಲ್ಲ ಭಾಷೆಗಳು ಪಾ.ವೆಂ. ಅವರಿಗೆ ತಿಳಿದಿತ್ತು. ಅಷ್ಟೆ ಅಲ್ಲ, ಈ ಎಲ್ಲ ಭಾಷೆಯ ಪುಸ್ತಕಗಳನ್ನು ಅಭ್ಯಾಸ ಮಾಡುತ್ತಿದ್ದರು.

ವಿಷಯದ ದೃಷ್ಟಿಯಿಂದ ಪಾ.ವೆಂ. ಅವರು ಸಾಹಿತ್ಯ, ವ್ಯಾಕರಣ, ಛಂದಸ್ಸು, ಕಾವ್ಯ-ಮೀಮಾಂಸೆ, ಭಾಷಾಶಾಸ್ತ್ರ, ಅಲಂಕಾರ, ಇತಿಹಾಸ, ರಾಜ್ಯಶಾಸ್ತ್ರ, ತತ್ವಜ್ಞಾನ, ಮನೋವಿಜ್ಞಾನ, ಆರೋಗ್ಯ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಸಾಮಾನ್ಯಜ್ಞಾನ, ಸಂಗೀತ, ನೃತ್ಯ, ವಾಸ್ತುಶಿಲ್ಪ. ಎಲ್ಲ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಅಧ್ಯಯನ ನಿರಂತರವಾಗಿರುತ್ತಿತ್ತು. ಪಾ.ವೆಂ. ಅವರ ವಾಚನಾಭಿರುಚಿಯ ಅಭಿವ್ಯಕ್ತಿಯೇ **ಕಸ್ತೂರಿ**ಯ ರೂಪ. ಪತ್ರಿಕೋದ್ಯಮ ರಂಗಕ್ಕೆ ನೀಡಿದ ಮಹತ್ತರ ಕೊಡುಗೆ.

ಪಾ.ವೆಂ. ಅವರಿಗೆ ವಿಜ್ಞಾನ ಅರ್ಥಶಾಸ್ತ್ರ, ಶಿಕ್ಷಣ ಗಣಿತ ವಿಭಾಗ ಅತ್ಯಂತ ಮೆಚ್ಚಿನ ವಿಷಯಗಳಾಗಿದ್ದವು. ಲೆಕ್ಕದಲ್ಲಿ ಯಾವುದೇ ಸಮಸ್ಯೆಯಿದ್ದರೂ ಸುಲಭ ಉಪಾಯಗಳಿಂದ ಸಮಸ್ಯೆಗಳನ್ನು ಕ್ಷಣದಲ್ಲಿ ಪರಿಹರಿಸುತ್ತಿದ್ದರು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಒಮ್ಮೆ ಮಗಳು ಶಾಲೆಗೆ ಹೋಗುತ್ತಿದ್ದಾಗ ಒಂದು ಘಟನೆ ನಡೆಯುತ್ತದೆ. ಟೀಚರ್ ಹೋಂವರ್ಕ್ ಮಾಡಲು ಲೆಕ್ಕವನ್ನು ಕೊಟ್ಟಿದ್ದರು. ಮಗಳಿಗೆ ತಿಳಿಯಲಿಲ್ಲ. ತಂದೆಯ ಸಹಾಯದಿಂದ ಲೆಕ್ಕದ ಸಮಸ್ಯೆಯನ್ನು ಸುಲಭವಾಗಿ ಬಿಡಿಸುತ್ತಾರೆ. ಆದರೆ ಟೀಚರ್ ಅದನ್ನು ನೋಡಿ ಇದು ಸರಿಯಾದ ಕ್ರಮವಲ್ಲ. ತಪ್ಪು ಎಂದು ಮಗಳನ್ನು ಶಿಕ್ಷಿಸುತ್ತಾರೆ. ಆದರೆ ಪಾ.ವೆಂ. ಶಾಲೆಗೆ ಹೋಗಿ ಟೀಚರನ್ನು ಭೇಟಿಯಾಗಿ ಲೆಕ್ಕವನ್ನು ಸುಲಭ ರೀತಿಯಲ್ಲಿ ಟೀಚರಿಗೆ ತಿಳಿಸಿ ಸರಿಯಾದ ಕ್ರಮವನ್ನು ಹೇಳಿ

ಸಮಸ್ಯೆ ಬಗೆಹರಿಸಿ ಬರುತ್ತಾರೆ. ತಪ್ಪನ್ನು ತಿದ್ದಿ ಖಂಡಿಸಿ ಸರಿಪಡಿಸುವ ಪಾ.ವೆಂ. ವ್ಯಕ್ತಿತ್ವವನ್ನು ನಾವು ಇಲ್ಲಿ ಕಾಣುತ್ತೇವೆ.

ಪಾ.ವೆಂ. ತಾವು ಒಪ್ಪಿಕೊಂಡ ಕರ್ತವ್ಯವನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಿದ್ದರು. ಇದು ಪಾ.ವೆಂ. ಅವರ ಪತ್ನಿ ಲಕ್ಷ್ಮೀಯವರು ಹೇಳುತ್ತಿದ್ದ ಮಾತು. ಒಮ್ಮೆ ಮನೆಯ ಹತ್ತಿರದ ಹುಡುಗ ಲೆಕ್ಕ ಅರ್ಥವಾಗುತ್ತಿಲ್ಲವೆಂದು ಪಾ.ವೆಂ. ಅವರನ್ನು ಕೇಳಲು ಬಂದ. ಆಗ ಪಾ.ವೆಂ. ಅವರ ಬರವಣಿಗೆಯಲ್ಲಿ ನಿರತರಾಗಿದ್ದರು. ನಾಳೆ ಬಾ ಎಂದು ಹೇಳಿ ಕಳುಹಿಸಿದರು. ಅಂದು ಪಾ.ವೆಂ. ತನ್ನ ಬರವಣಿಗೆ ಮುಗಿಸಿದ ನಂತರ ಮಲಗಲು ಹಾಸಿಗೆಯ ಹತ್ತಿರ ಹೋದಾಗ ರಾತ್ರಿ ಒಂದು ಗಂಟೆಯಾಗಿತ್ತು. ಆಗ ಹುಡುಗ ಹೇಳಿದ ಲೆಕ್ಕದ ಸಮಸ್ಯೆ ನೆನಪಾಗಿ, ಪಾ.ವೆಂ. ಮತ್ತೆ ಎದ್ದು ಬಂದು ಲೆಕ್ಕದ ಸಮಸ್ಯೆಯನ್ನು ಬಿಡಿಸಿ ಮತ್ತೆ ಹೋಗಿ ಮಲಗಿ ನಿದ್ದೆ ಮಾಡಿದರು.

ಮರುದಿನ ಪಾ.ವೆಂ. ಪತ್ನಿ ಸಮಸ್ಯೆ ಹೇಗೆ ಬಗೆಹರಿಸಿದಿರಿ ಎಂದು ಕೇಳಿದರೆ ಪಾ.ವೆಂ. ಅದಕ್ಕೆ ಈ ರೀತಿಯಾಗಿ ಉತ್ತರಿಸುತ್ತಾರೆ: 'ರಾತ್ರಿ ನಿದ್ದೆ ಮಾಡುವಾಗಲೂ ತಲೆಯಲ್ಲಿ ಲೆಕ್ಕವನ್ನು ಹೇಗೆ ಬಿಡಿಸುವುದು ಎಂದು ಯೋಚಿಸುತ್ತಾ ಮಲಗಿದ್ದೆ. ರಾತ್ರಿ ತಟ್ಟನೆ ಉತ್ತರ ಹೊಳೆಯಿತು. ರಾತ್ರಿಯೇ ಈ ಸಮಸ್ಯೆ ಬಿಡಿಸಿ ಮಲಗಿದೆ ಎಂದು ಹೇಳಿದರು'. ಇದು ಪಾ.ವೆಂ. ಅವರು ನಿದ್ರಾಸ್ಥಿತಿಯಲ್ಲಿ ತಾವು ಒಪ್ಪಂದ ಮಾಡಿಕೊಂಡ ಕೆಲಸಕ್ಕೆ ಹೇಗೆ ಬದ್ಧರಾಗಿರುತ್ತಿದ್ದರು ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಯಾವುದೇ ವಿಷಯ ತನ್ನ ತಲೆಗೆ ಹೊಳೆಯಿತು ಎಂದರೆ ಅದಕ್ಕೆ ಸಮಯಾ ಸಮಯಗಳ ಬಗ್ಗೆ ಯೋಚನೆ ಮಾಡದೆ ಮಧ್ಯರಾತ್ರಿ ಎದ್ದು ಬರೆಯಲು ಆರಂಭಿಸುತ್ತಿದ್ದರು. ರಾತ್ರಿ ಮಲಗುವುದು ೧೨ ಗಂಟೆಗೆ. ಕೆಲವೊಮ್ಮೆ ೧ ಗಂಟೆ, ೨ ಗಂಟೆ ರಾತ್ರಿಯವರೆಗೂ ಬರೆಯುತ್ತಾ ಇರುತ್ತಿದ್ದರು. ಹೊಸ ಆಲೋಚನೆ ತಲೆಯಲ್ಲಿ ಬಂತೆಂದತೆ ತಕ್ಷಣ ಅದನ್ನು ಬರೆದು ಬಿಡುತ್ತಿದ್ದರು.

ಪಾ.ವೆಂ. ಅವರು ಅಸ್ತಮಾ ರೋಗಿಯಾಗಿದ್ದರು. ಒಮ್ಮೊಮ್ಮೆ ಉಸಿರಾಟದ ತೊಂದರೆಯಿಂದ ರಾತ್ರಿಯಿಡೀ ನರಳುತ್ತಿದ್ದರು. ಬೆಳಗಿನ ಜಾವ ಎದ್ದು ಕಾಫಿ ಸೇವಿಸಿ ತಮ್ಮ ಆಫೀಸಿನ ದೈನಂದಿನ ಕೆಲಸಕ್ಕೆ ಹಾಜರಾಗುತ್ತಿದ್ದರು. ಆರೋಗ್ಯದ ಬಗ್ಗೆ ಸ್ವಲ್ಪವೂ ಏರುಪೇರಾದಂತೆ ಕಾಣಿಸುತ್ತಿರಲಿಲ್ಲ.

ಒಮ್ಮೆ ಧಾರವಾಡ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿ ಪಾ.ವೆಂ. ಅವರ ಮನೆಗೆ ಮಾತನಾಡಲು ಬಂದಿದ್ದ. ಆದರೆ ಪಾ.ವೆಂ. ಅವರ ಪತ್ನಿ ಆಚಾರ್ಯರ ಅನಾರೋಗ್ಯ ಗಮನಿಸಿ ಅವರ ಆರೋಗ್ಯ ಸರಿ ಇಲ್ಲ, ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿ ಆ ವಿದ್ಯಾರ್ಥಿಯನ್ನು ಹಿಂದಕ್ಕೆ ಕಳುಹಿಸುತ್ತಾರೆ. ಆದರೆ ವಿಷಯ ತಿಳಿದ ಪಾ.ವೆಂ. ತನ್ನ ಪತ್ನಿಗೆ ಚೆನ್ನಾಗಿ ಬೈದು ಮತ್ತೆ ಆ ವಿದ್ಯಾರ್ಥಿಯನ್ನು ವಾಪಸು ಕರೆದುಕೊಳ್ಳುತ್ತಾರೆ. ವಿದ್ಯಾರ್ಥಿಯ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ಮನೆಗೆ ಯಾವುದೇ ಕಾರಣಕ್ಕೆ ಬಂದವರನ್ನು

ಪಾ.ವೆಂ. ಹಾಗೇ ಕಳುಹಿಸುತ್ತಿರಲಿಲ್ಲ. ತನ್ನಿಂದ ಆಗುವ ಸಹಾಯವನ್ನು ಮಾಡುತ್ತಿದ್ದರು. ಕಲಿಯುವುದರೊಂದಿಗೆ ಕಲಿಸುತ್ತಾ ಬಂದಿರುವ ಅವರ ಹಿರಿಯ ವ್ಯಕ್ತಿತ್ವವನ್ನು ಕಾಣಬಹುದು.

ಸಹಧರ್ಮಿಣಿ ಲಕ್ಷ್ಮೀಯವರು ಪತಿಯ ಸ್ವಭಾವದ ವೈಚಿತ್ರ್ಯಗಳನ್ನು ಗುರುತಿಸಿದ ರೀತಿ:

ಲಕ್ಷ್ಮೀಬಾಯಿಯವರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಪಾ.ವೆಂ. ಅವರ ಜೀವನ ಸಂಗಾತಿಯಾಗಿ ಬಂದರು. ಉಭಯ ಕುಲಗಳಲ್ಲಿ ಇಂಗ್ಲೀಷ್ ಕಲಿತ ಮೊದಲನೆಯ ಹುಡುಗನಾದ ಪಾ.ವೆಂ. ಏನು ವರದಕ್ಷಿಣೆ ಕೇಳದೆ ಮದುವೆ ಮಾಡಿಕೊಂಡದ್ದು ತಾಯಿಗೆ ಅಷ್ಟಾಗಿ ಹಿಡಿಸದಂತಿರಲಿಲ್ಲ, ಹಣಕ್ಕಾಗಿ ಅಲ್ಲದಿದ್ದರೂ ಮಗನ ಅಭಿಮಾನಕ್ಕಾಗಿ. ಈ ವಿಷಯದಲ್ಲಿ ಪಾ.ವೆಂ. ತಾಯಿಯವರು ಇಬ್ಬರನ್ನು ಪೂರ್ತಿಯಾಗಿ ಕ್ಷಮಿಸಿದಂತಿರಲಿಲ್ಲ. ಒಮ್ಮೊಮ್ಮೆ ಪಾ.ವೆಂ. ಇಲ್ಲದಿರುವ ವೇಳೆ ನವಿರಾದ ಕಟಕಿ ಮಾತುಗಳನ್ನು ಆಡುತ್ತಿದ್ದರು. ಆದರೆ ಯಾರ ಮುಂದೆಯೂ ಅವಮಾನಿಸುತ್ತಿರಲಿಲ್ಲ. ಒಟ್ಟಿನಲ್ಲಿ ಎಲ್ಲರಿಗೂ ಹಿತವಾಗಿ ಜೀವನ ನಡೆಸಿದವರು ಲಕ್ಷ್ಮೀಯವರು.

ಪಾ.ವೆಂ. ಮನೆಯಲ್ಲಿ ಕಳೆಯುತ್ತಿದ್ದ ಸಮಯ ಅಲ್ಪಕಾಲ ಬೆಳಿಗ್ಗೆ ೭-೮ ಗಂಟೆಗೆ ಆಫೀಸಿಗೆ ಹೋದರೆ ಮಧ್ಯಾಹ್ನ ಒಂದು ಗಂಟೆಗೆ ಊಟಕ್ಕೆ ಬಂದು ಹೊರಟವರು ಹಿಂದಿರುಗಿದಾಗ ರಾತ್ರಿ ಹನ್ನೊಂದು ಹನ್ನೆರಡು ಗಂಟೆ ಮನೆಯಲ್ಲಿ ಪಾ.ವೆಂ. ಅವರ ಅಕ್ಕಂದಿರಲ್ಲಿ ಒಬ್ಬರಲ್ಲ ಒಬ್ಬರು ಅವರ ಮಕ್ಕಳು ಬಂದಿರುತ್ತಿದ್ದರು. ಪಾ.ವೆಂ. ಅವರ ರಸಿಕತೆಗೆ ಕೊರತೆಯಿರಲಿಲ್ಲ. ಪ್ರತಿದಿನವು ಹಾಸ್ಯದ ಚಟಾಕಿಗಳು ಹಾರುತ್ತಲೇ ಇರುತ್ತಿದ್ದವು. ಇವರೊಡನೆ ಬಾಳುವುದು ಸುಲಭವಾಗಿತ್ತೆಂದು ಹೇಳಲಾರೆ ಇವರ ಸೂಕ್ಷ್ಮಜ್ಞತೆ ಕೆಲಸದಲ್ಲಿ ಓದಿನಲ್ಲಿ, ಚರ್ಚೆಗಳಲ್ಲಿ ಹೊರತು ಮನೆಯ ಅಗತ್ಯಗಳನ್ನು ತರ್ಕಿಸಿ ಪೂರೈಸುವುದರಲ್ಲಿ ಕುಂಟುವುದೇ ಜಾಸ್ತಿ. ಲಕ್ಷ್ಮೀಯವರು ವಿದ್ಯಾವಂತಳಾಗಿದ್ದರೆ, ಸಮಸ್ಯೆಗಳು ಕಲಹಗಳು ಹೆಚ್ಚಾಗುತ್ತಿತ್ತೋ ಏನೋ ಎಂದು ಒಮ್ಮೊಮ್ಮೆ ಯೋಚಿಸುತ್ತಿದ್ದರು. ಜೀವನವನ್ನು ಸುಖಸಂತೋಷದಿಂದಲೇ ಕಳೆದಿದ್ದೇನೆ.

ಪಾ.ವೆಂ. ಅವರಿಗೆ ಮೂರು ವರ್ಷಗಳಲ್ಲಿ ಎರಡು ಮಕ್ಕಳಾದವು. ಪಣಿಯಾಡಿಯವರ ಸಂಸ್ಥೆ ಕೈಕೊಟ್ಟಿದ್ದರಿಂದ ಉಡುಪಿಯನ್ನು ಬಿಟ್ಟು ಮದ್ರಾಸಿಗೆ ಹೋಗಬೇಕಾಯಿತು. ಈ ಸಂದರ್ಭದಲ್ಲಿ ಸತಿ ಲಕ್ಷ್ಮೀಯವರು ತಾಯಿ ಮನೆಯಲ್ಲಿ ಇರುವಂತಾಯಿತು. ಪಾ.ವೆಂ. ಅವರು ತಿಂಗಳುಗಟ್ಟಲೆಯಾದರು ಹೆಂಡತಿಗೆ ಕ್ಷೇಮಸಮಾಚಾರ ಪತ್ರ ಬರೆದವರಲ್ಲ. ಒಂದು ಪುಸ್ತಕ ಬರೆದರೇ ಹೊರತು ಕಾಗದ ಬರೆಯಲಾರರು. ಎಂದಾದರೂ ಬರೆದರೆ ಏನೇನೋ ಬರೆದು ನನಗೆ ಕಣ್ಣೀರು ಸುರಿಸುತ್ತಿದ್ದರು. ಕಾಗದ ಬರೆಯಲಿಲ್ಲವೆಂದು ಬರೆದರೆ ಒಂದು ಸಲ

ಕ್ಷೇಮವಾಗಿದ್ದರಿಂದಲೇ ಬರೆದಿಲ್ಲ
ಎಂದು ತಿಳಿದರೆ ಸಾಲದಾ?
ಎಂದೊಂದು ಕವಿತೆಯನ್ನು ಬರೆದು ಕಳಿಸಿದ್ದರು.

ಇನ್ನು ಕೆಲವು ಸನ್ನಿವೇಶಗಳನ್ನು ಲಕ್ಷ್ಮೀಯವರು ಈ ರೀತಿ ನೆನಪಿಸುತ್ತಾರೆ. ಪಾ.ವೆಂ. ಅವರೊಡನೆ ದೂರಪ್ರಯಾಣದ ಅನುಭವ ೧೯೪೩ರಲ್ಲಿ ಉಡುಪಿಯಿಂದ ಹೊರಟು ಬಂದೆವು. ಸಂಜೆಯಾಗಿತ್ತು. ಮುಂದೆ ಹುಬ್ಬಳ್ಳಿಗೆ ಸುಖವಾಗಿ ಹೋಗೋಣವೆಂದು ಇಂಟರ್‌ಕ್ಲಾಸ್ ಟಿಕೇಟು ತೆಗೆದು ಹೊರಟೆವು. ಅಷ್ಟರಲ್ಲಿ ಕರ್ಜಗಿ ಬಳಿ ಇಳಿಯಬೇಕಿದ್ದ ವೃದ್ಧ ದಂಪತಿಗಳು ಪಾ.ವೆಂ. ಅವರಿಗೆ ಗಂಟುಬಿದ್ದರು. ಆ ದಂಪತಿಗಳಿಗೆ ಇದು ಹೊಸ ರೈಲು ಪ್ರಯಾಣವಂತೆ. ಪಾ.ವೆಂ. ಅವರು ಕೈಯಿಂದ ಹಣ ಸೇರಿಸಿ ಅವರಿಗೂ ರೈಲು ಟಿಕೇಟು ಕೊಂಡರು. ರೈಲು ಬಂತು. ಅದರಲ್ಲಿ ಯಾವ ಕ್ಲಾಸಿನಲ್ಲೂ ಎಳ್ಳು ಹಾಕುವಷ್ಟೂ ಸ್ಥಳ ಇರಲಿಲ್ಲ. ಮಿಲಿಟರಿಯವರು ತುಂಬಿಹೋಗಿದ್ದರು. ಗಂಡಸರ ಡಬ್ಬಿಯಲ್ಲಿ ಸ್ಥಳ ಇಲ್ಲದೇ ಹೆಂಗಸರ ಡಬ್ಬಿಯಲ್ಲಿ ಲಕ್ಷ್ಮೀ ಮತ್ತು ಅವರ ತಾಯಿಯನ್ನು ಹತ್ತಿಸಿದರು. ಈ ಗಡಿಬಿಡಿಯಲ್ಲಿ ಟಿಕೇಟುಗಳು ಪ್ಲಾಟ್‌ಫಾರ್ಮಿನಲ್ಲಿ ಕಳೆದು ಹೋದವು. ಎಷ್ಟು ಹುಡುಕಿದರೂ ಸಿಗಲಿಲ್ಲ. ಹೊಸ ಟಿಕೇಟು ತೆಗೆದುಕೊಳ್ಳಲು ಸಮಯವಿಲ್ಲ. ಪಾ.ವೆಂ. ಅವರು ಹಾಗೇ ರೈಲು ಏರಿದರು. ರೈಲು ಹೊರಟ ಕೆಲ ಸೆಕೆಂಡುಗಳಲ್ಲಿ ಪಾ.ವೆಂ. ದೊಪ್ಪನೆ ಕೆಳಗೆ ಜಿಗಿದರು. ಲಕ್ಷ್ಮೀಯವರಿಗೆ ಜೀವ ಹಿಂಡಿದಂತಾಗುತ್ತದೆ. ರೈಲಿನ ವೇಗ ಹೆಚ್ಚಾಗುತ್ತಿದೆ. ಪಾ.ವೆಂ. ಯಾಕೆ ಹಾರಿದರು? ಹೇಗೆ ತಿರುಗಿ ಬರುತ್ತಾರೆ? ನಮ್ಮ ಗತಿ ಏನು? ಮಕ್ಕಳು ಬೇರೆ ಇದ್ದಾರೆ ಏನು ಗತಿ ಬಂತಪ್ಪಾ! ನನಗೆ ಧಾರವಾಡವೂ ಗೊತ್ತಿಲ್ಲ, ಹುಬ್ಬಳ್ಳಿಯೂ ಗೊತ್ತಿಲ್ಲ. ಆದರೆ ಮುಂದೆ ರಾಣೆಬೆನ್ನೂರಿನಲ್ಲಿ ಪಾ.ವೆಂ. ಡಬ್ಬಿಯಲ್ಲಿ ಹಾಜರಾದರೂ ಹೆದರಿದೆಯಾ' ಎಂದರು. ಹೆದರಿದ್ದೇನೆ! 'ರೈಲು ಹೊರಟ ಮೇಲೆ ನಮ್ಮ ಟಿಕೇಟು ಪ್ಲಾಟ್ ಫಾರ್ಮಿನಲ್ಲಿ ಬಿದ್ದುದು ಕಂಡೆ. ಹೆಕ್ಕಿಕೊಳ್ಳಲೆಂದು ಜಿಗಿದೆ' ಎಂದರು. 'ಓಡುವ ಗಾಡಿಯಿಂದ ಹಾರುವುದೇ' ಎಂದರೆ 'ಓ ಅದೇನು ಮಹಾ ಮದ್ರಾಸಿನಲ್ಲಿದ್ದಾಗ ಟ್ರಾಮುಗಳಿಂದ ಹಾರಲಿಕ್ಕೆ ಅಭ್ಯಾಸ ಮಾಡಿಕೊಂಡಿದ್ದೆ' ಎಂದರು. ಟಿಕೇಟು ಸಿಕ್ಕಿತೆ? ಎಂದು ಕೇಳಿದೆ. ಸಿಕ್ಕಿರಲಿಲ್ಲ. ಪಾ.ವೆಂ. ಹಾರಿದ್ದಕ್ಕೂ, ನೋಡಿದ್ದಕ್ಕೂ ನಡುವೆ ರೈಲು ಸುಮಾರು ಮುಂದೆ ಹೋಗಿತ್ತು. ಟಿಕೇಟು ಆಸೆ ಬಿಟ್ಟು ರೈಲಿನ ಹಿಂದೆ ಓಡತೊಡಗಿದರು. ಫಸ್ಟ್‌ಕ್ಲಾಸ್ ಬೋಗಿಯಲ್ಲಿದ್ದ ಮಿಲಿಟರಿ ಆಫೀಸರ್ ಕೈಹಿಡಿದು ಮೇಲೆಳೆದು ತನ್ನ ಕಂಪಾರ್ಟ್‌ಮೆಂಟಿನಲ್ಲಿ ಹತ್ತಿಸಿಕೊಂಡು ಚೆನ್ನಾಗಿ ಬೈದು ಮುಂದಿನ ಸ್ಟೇಷನ್ನಿನಲ್ಲಿ ನಮ್ಮ ಡಬ್ಬಿಗೆ ಕಳಿಸಿದ್ದ'. ಅವನು ಮೇಲೆ ಎಳೆದು ಹತ್ತಿಸಿಕೊಳ್ಳದಿದ್ದರೆ ಏನು ಮಾಡುತ್ತಿದ್ದೀರ? ಎಂದರೆ 'ಧಾರವಾಡದ ನಿನ್ನ ಅಣ್ಣನಿಗೆ ತಂತಿಕೊಡುತ್ತಿದ್ದೆ. ಅವರು ನಿನ್ನನ್ನು ಇಳಿಸಿಕೊಳ್ಳುತ್ತಿದ್ದರು! ಎಂದರು. ಅಂತೂ ಧಾರವಾಡದಲ್ಲಿ ಸ್ವಲ್ಪ ದಂಡ ಸಹಿತ ಟಿಕೇಟು ಹಣ ಸಲ್ಲಿಸಿ ಪಾರಾಗಿ ಬಂದರು.

ಪಾ.ವೆಂ. ಪ್ರತಿಸಲ ಪ್ರಯಾಣದಲ್ಲಿ ಒಂದಲ್ಲ ಒಂದು ತೊಂದರೆ ತಂದುಕೊಳ್ಳುತ್ತಿದ್ದರು. ಒಮ್ಮೆ ಬೆಳಗಿನ ಜಾವದ ರೈಲಿಗೆ ನಮ್ಮನ್ನು ಕರೆದೊಯ್ಯುವ ಟಾಂಗದವರನ್ನು ಮನೆಗೆ ಬರಹೇಳಿದ್ದರು. ಹೇಳಿದ್ದಕ್ಕಿಂತ ಹತ್ತು ನಿಮಿಷ ತಡಮಾಡಿದನೆಂದು ಸಹನೆಗೆಟ್ಟು ಬೇರೆ ಟಾಂಗ ತಂದರು. ದಾರಿಯಲ್ಲಿ ಮೊದಲನೇ ಟಾಂಗದವನು ಬೇಕೆಂದೇ ಜಗಳ ಹೂಡಿದ. 'ನೀನು ಯಾಕೆ ಹೇಳಿದ ಟೈಮಿಗೆ ಬರಲಿಲ್ಲ?' ಎಂದು ಪಾ.ವೆಂ. ಇನ್ನೂ ರೈಲಿಗೆ ಟೈಂ ಇದೆ ಅದರೊಳಗೆ ನಾನು ಬರುತ್ತಿದ್ದೆ ಎಂದು ಅವನು 'ಟೈಮು ಅಂದರೆ ಟೈಮು' ಎಂದು ಪಾ.ವೆಂ. ವಾದ. ಪಾಪ ಅವನ ಹತ್ತಿರ ರಿಸ್ಟ್‌ವಾಚ್ ಇದೆಯಾ! ಅವನು ಬಿಡ, ಪಾ.ವೆಂ. ಬಿಡರು. ಪೋಲೀಸ್ ಸ್ಟೇಶನ್‌ಗೆ ಹೋಗುವಾ ಎಂದು ಇವರು. ಲಕ್ಷ್ಮೀಯವರಿಗೆ ಎರಡು ಸಂಕಟ ಈ ಜಗಳದಲ್ಲಿ ರೈಲು ತಪ್ಪಿದರೆ ಎಂದು ಕಳವಳ. ಅವನಿಗೆ ಏನಾದರೂ ಕೊಟ್ಟುಬಿಡಿ ಎಂದು ಎರಡಾಣೆ ಕೊಡಿಸಿ ರೈಲು ಹೊರಡುವ ಮುಂಚೆ ಬಂದು ಸೇರಿದೆವು. ಹಣದ ಪ್ರಶ್ನೆ ಅಲ್ಲ ತತ್ತ್ವದ ಪ್ರಶ್ನೆ ಎಂದು ರೇಗುತ್ತಲೇ ಇದ್ದರು. ಯಾವಾಗಲೂ ತತ್ತ್ವಕ್ಕಾಗಿ ಬೇಡದ ಜಗಳ ಹೂಡುತ್ತಿದ್ದರು. ಬಸ್ಸಿನಲ್ಲಿ ಬೀಡಿ ಸೇದಿದರೆ ಕ್ಯೂ ನಿಂತಲ್ಲಿ ಬುದ್ಧಿವಂತರು, ಕ್ಯೂ ಜಂಪ್ ಮಾಡಿ ಹೋದರೆ ಪಾ.ವೆಂ. ತಡೆಯುತ್ತಿದ್ದರು. ಎಲ್ಲರೂ ಸುಮ್ಮನಿರುವಾಗ ಅವರಿಗೇಕೆ ಉಸಾಬರಿ? ಸ್ವಂತದ ಹಕ್ಕುಗಳಿಗಾಗಿ ಅಲ್ಲದೆ ಇತರರಿಗಾಗಿಯೂ ಕಲಹ.

ಒಂದು ಸಲ ಬಸ್ಸಿನಲ್ಲಿ ಟಿಕೇಟು ಕೊಳ್ಳದಿದ್ದ ಪ್ರಯಾಣಿಕನ ವಿರುದ್ಧ ಕಂಡಕ್ಟರ್ ಪಕ್ಷದಲ್ಲಿ ವಾದಿಸಿದರು. ಅವನು ಟಿಕೇಟು ಕೊಂಡ ನಂತರ ಅವರನ್ನು ಅವಾಚ್ಯವಾಗಿ ಬೈದದಕ್ಕೆ ಆ ಪ್ರಯಾಣಿಕನ ಪರವಾಗಿ ಹೋರಾಡಿದರು ಅಂತೂ ಇಬ್ಬರಿಗೂ ಸಲ್ಲದವರಾದರು.

ಇಲ್ಲಿ ಪಾ.ವೆಂ. ಸ್ವಭಾವದಲ್ಲಿ ಎದ್ದು ಕಾಣುವ ಅಂಶ ಅಪ್ಪಟ ಪ್ರಾಮಾಣಿಕತೆ, ಸತ್ಯ ನಿಷ್ಠತೆ. ಅನ್ಯಾಯ, ಸುಳ್ಳು ಇಂಥವೆಲ್ಲ ಅವರಿಗೆ ಎಳ್ಳಷ್ಟು ಸೇರುತ್ತಿದ್ದಿಲ್ಲ. ಈ ವಿಷಯಕ್ಕೆ ಎಷ್ಟು ನಿಷ್ಠುರವಾಗಲೂ ಹಿಂಜರಿಯುತ್ತಿದ್ದಿಲ್ಲ. ಈ ಸತ್ಯ, ಪ್ರಾಮಾಣಿಕತೆಗೆ ಪ್ರೇರಣೆ ಬಾಲ್ಯದಿಂದಲೇ ಗಾಂಧೀಜಿಯ ಬದುಕಿನತ್ತ ಅವರು ಹರಿಸಿದ ನೋಟವಿರಬೇಕು. ಈ ಆದರಾಭಿಮಾನ ಬರವಣಿಗೆಯಲ್ಲಿ ಅಲ್ಲಲ್ಲಿ ಗೋಚರವಾಗುತ್ತದೆ.

೧೯೭೪ರ ಅಕ್ಟೋಬರ್ ೩೧ರಂದು ಬೆಳಿಗ್ಗೆ ಆಫೀಸಿಗೆ ಹೋದ ಪಾ.ವೆಂ. ಸಂಜೆ ಮನೆಗೆ ಬರಲಿಲ್ಲ. ಆಫೀಸಿನಲ್ಲಿ ರಕ್ತವಾಂತಿಯಾಗಿ ಅಲ್ಲಿಂದಲೇ ಆಸ್ಪತ್ರೆಗೆ ಸೇರಿಸಿದ್ದರು. ರಕ್ತವಾಂತಿ ನಿಲ್ಲಲಿಲ್ಲ. ಧಾರವಾಡದ ಮೆಡಿಕಲ್ ಕಾಲೇಜಿನಲ್ಲಿ ಡಾಕ್ಟರರು ಬಹಳ ಹೋರಾಡಿದರು ರಕ್ತ ಕೊಡುತ್ತಲೇ ಇದ್ದರು. ವಾಂತಿಯಾಗುತ್ತಲೇ ಇತ್ತು. ಪರ ಊರಿನಲ್ಲಿ ಮಕ್ಕಳನ್ನು ಕರೆಸಿದರು. ಬದುಕುವ ಆಸೆ ದೂರವಾಗಿತ್ತು.

ಆ ಸಮಯದಲ್ಲೇ ಹಿಂದಿನಿಂದಲೂ ಪತಿಯ ವಿಷಯ ತಿಳಿಯದಿದ್ದ ಕೆಲ ವಿಶೇಷಗಳು ಪ್ರತೀತಿಗೆ ಬಂದವು. ವ್ಯವಹಾರ ಚಾತುರ್ಯ ಇಲ್ಲದ ಯಾರನ್ನು ಹೆಚ್ಚಿಗೆ

ಹಚ್ಚಿಕೊಳ್ಳದ ಹೆಚ್ಚು ಜನ ಆತ್ಮೀಯರನ್ನು ಸಂಪಾದಿಸದ, ಮರಗುಳಿ ಸ್ವಭಾವದ, ಬಹಳ ನಿರ್ಲಿಪ್ತ ವೃತಿಯ ವ್ಯಕ್ತಿ ಪಾ.ವೆಂ. ಇಂಥವರನ್ನು ಕಾಣಲು ಆಸ್ಪತ್ರೆಗೆ ದಿನವೂ ಎಷ್ಟೋ ಜನ ಬರುತ್ತಿದ್ದರು. ಪತ್ನಿಗೆ ಎಲ್ಲರೂಅಪರಿಚಿತರು. ವಿದ್ಯಾರ್ಥಿಗಳು ಓದುಗರು, ಲೇಖಕರು, ಲಾಂಗೂಲಾಚಾರ್ಯರ ಅಭಿಮಾನಿಗಳು ಕೆಲವರು ಕಸ್ತೂರಿ ಪ್ರಿಯರು ಕೆಲವರು; ಇದು ಪಾ.ವೆಂ. ಅವರು ತಮ್ಮಬರವಣಿಗೆಯ ವ್ಯಕ್ತಿತ್ವದಿಂದ ಸಂಪಾದಿಸಿದ ಬಹುದೊಡ್ಡ ಬಳಗ.

ಆಸ್ಪತ್ರೆಯಲ್ಲಿ ಪಾ.ವೆಂ. ಅವರು ವಿಕ್ಷಿಪ್ತ ವೃತ್ತಿಯಿಂದ ಬಹುಬೇಗನೆ ಹಿರಿಯ ಡಾಕ್ಟರ್ ಆಸ್ಪತ್ರೆಯ ಎಲ್ಲ ಸಿಬ್ಬಂದಿ ವರ್ಗದವರಿಗೆಲ್ಲ ಪ್ರಿಯರಾಗಿಬಿಟ್ಟರು. ಬೆಳಿಗ್ಗೆ ಡಾಕ್ಟರರು ನೋಡಲು ಬಂದರೆ ಪಾ.ವೆಂ. ಅವರೇ ಅವರ ಕ್ಷೇಮ ಸಮಾಚಾರ ಕೇಳುತ್ತಿದ್ದರು! ರಕ್ತ, ಸಲೈನ್ ಕೊಡುವುದಕ್ಕೆ ಕೈಕಾಲುಗಳಲ್ಲಿ ಹೊಸ ಹೊಸ ನಾಡಿಗಳನ್ನು ಹುಡುಕಿ ಚುಚ್ಚುವಾಗ ಇನ್ನಾರಿಗೂ ಚುಚ್ಚುತ್ತಾರೆಂಬ ಹಾಗೆ ಆಸಕ್ತಿಯಿಂದ ಗಮನಿಸುತ್ತಾ ಹೊಸ ಹೊಸ ಸ್ಥಳಗಳನ್ನು ತೋರಿಸುತ್ತಿದ್ದರು. ಅವರಿಂದ ಡಾಕ್ಟರ್ ಕಲಿಯುವವರ ಹಾಗೆ ಏನೇನೋ ಕೇಳಿ ತಿಳಿದುಕೊಳ್ಳುತ್ತಿದ್ದರು. ಇಂತಹ ಸಂದರ್ಭದಲ್ಲಿಯೂ ಪಾ.ವೆಂ. ಅವರ ಕುತೂಹಲಕಾರಿ ಬುದ್ಧಿ, ಹೊಸ ಹೊಸ ವಿಷಯಗಳ ಸಂಗ್ರಹಣೆ ಏನೇ ಕಷ್ಟ ಬಂದರೂ ಕಲಿಯುವ ಛಲ ಅವರದು. ಪಾ.ವೆಂ. ಅವರ ಈ ನಡವಳಿಕೆ ಎಲ್ಲರಿಗೂ ಇವರನ್ನು ಹೇಗಾದರೂ ಬದುಕಿಸಬೇಕೆಂಬ ಹಟ ಹುಟ್ಟಿತ್ತು. ಹಗಲು ರಾತ್ರಿ ಇದಕ್ಕಾಗಿ ಪ್ರಯತ್ನಿಸುತ್ತಿದ್ದರು. ಆದರೆ ಪಾ.ವೆಂ. ಅವರಿಗೆ ಬದುಕಿನ ಬಗ್ಗೆ ಯಾವ ಕಾಳಜಿಯೂ ಇದ್ದಂತಿರಲಿಲ್ಲ.

ಬದುಕುವ ಸಂಭವ ಬಹಳ ಕಡಿಮೆ ಎರಡನೆಯ ಬಾರಿ ಆಪರೇಶನ್ ಆಗಿ ಎಲ್ಲರೂ ಆಶ್ಚರ್ಯಪಡುವ ಹಾಗೆ ಸಜೀವವಾಗಿ ಬಂದರು. ಮೂರನೆಯ ದಿನವೋ ಏನೋ ವಾರ್ಡಿನಲ್ಲಿ ಎಲುಬುಗೂಡು ಮತ್ತು ಚರ್ಮ ಮಾತ್ರ ಮಲಗಿದ್ದ ಇವರ ಹತ್ತಿರ ಯಾರೋ ಹಳ್ಳಿಗ, ಯಾರನ್ನೋ ಹುಡುಕಿಕೊಂಡು ಬಂದು ಪಾ.ವೆಂ. ಅವರೇ ಅವನೆಂಬ ಭ್ರಾಂತಿಯಿಂದ 'ಭೀಮಪ್ಪ ಅಂದರೆ ನೀನೇ ಏನು?' ಪಾ.ವೆಂ. ಕಣ್ಣು ಹೊರಳಿ ಏನಪ್ಪಾ ನನ್ನ ಕಂಡರೆ ಭೀಮನ ಹಾಗೆ ಕಾಣುತ್ತಾ ನಿನಗೆ?' ಎಂದು ಕೇಳಿದರು. ಅವನು ಪೆಚ್ಚಾಗಿ ಹೊರಟುಹೋದ. ಪತ್ನಿ ಲಕ್ಷ್ಮೀಯವರು ಪಾ.ವೆಂ. ಅವರ ಬಗ್ಗೆ ಈ ರೀತಿ ಹೇಳುತ್ತಾರೆ. ನನಗೆ ಆಗ ಅಳು ಬಂತು. ಎಂಥ ಹೊತ್ತಿನಲ್ಲಿ ತಮಾಷೆ ಇವರದು. ನಿರ್ಮೋಹಿ ಅವರಿವರ ವಿಷಯದಲ್ಲಿ ಮಾತ್ರವಲ್ಲ. ತನ್ನ ಸ್ವಂತ ಜೀವ ಸಾವಿನ ವಿಷಯದಲ್ಲಿಯೂ.

ಅವರ ಮಕ್ಕಳಲ್ಲಿ ಒಂದು ಮಗು ಒಂದೂವರೆ ವಯಸ್ಸಿನಲ್ಲಿ ತೀರಿಕೊಂಡಿತ್ತು. ಪಾ.ವೆಂ. ದುಃಖಿಸಲಿಲ್ಲ. ಒಂದು ಸಂಜೆ ಮುಖ ಒಣಗಿಸಿಕೊಂಡು ಮನೆಗೆ ಬಂದರು. ಬಂದು ತಣ್ಣೀರು ಸ್ನಾನ ಮಾಡಿದರು. ಊಟ ಬೇಡ ಎಂದರು ಯಾಕೆ? ಎಂದರೆ ಗಾಂಧಿಯನ್ನು ಕೊಂದರು. ಹಾಗೇ ಮಲಗಿಬಿಟ್ಟರು. ಅವರಿಗೆ ಜ್ವರ ಬಂತು. ಮರುದಿನ

ಇನ್ನು ಹೆಚ್ಚಾಯಿತು. ಸಂಜೆ ರೇಡಿಯೋವಿನಲ್ಲಿ ಗಾಂಧಿಯ ಚಿತಾರೋಹಣದ ಸುದ್ದಿ ಬರುತ್ತಿರುವಾಗ ಗೋಳೋ ಎಂದು ಅತ್ತುಬಿಟ್ಟರು. ಯಾರೋ ಏನೋ! ಅವನಿಗಾಗಿ ಹೀಗೆ ಅಳುತ್ತೀರಿ. ನಮ್ಮ ಮಗು ಸತ್ತಾಗ ನಿಮಗೆ ಅಳು ಬರಲಿಲ್ಲ? ಎಂದ. 'ನಿನಗೆ ಗೊತ್ತಿಲ್ಲ ಲಕ್ಷ್ಮೀ ನಿನಗೆ ಗೊತ್ತಿಲ್ಲ. ಗಾಂಧಿ ಅಂದರೆ ಏನು ಅಂತ ನಿನಗೆ ಗೊತ್ತಿಲ್ಲ' ಎಂದು ಬಿಕ್ಕತೊಡಗಿದರು. ಹದಿನೈದು ದಿನ ಇವರ ಜ್ವರ ಬಿಡಲಿಲ್ಲ.

ಪಾ.ವೆಂ. ಮೋಹಿಯೋ? ನಿರ್ಮೋಹಿಯೋ? ಇವರೊಡನೆ ಬಾಳುವುದು ಸುಲಭವೇ? ಇವರನ್ನು ಪ್ರೀತಿಸದಿರುವುದು ಸುಲಭವೇ? ಎನ್ನುತ್ತಾರೆ ಪಾ.ವೆಂ. ಅವರ ಇಚ್ಛೆಯರಿತ ಮಡದಿ ಲಕ್ಷ್ಮೀ.

ಪಾ.ವೆಂ. ಅವರ ಆತ್ಮಕಥೆ: ಗಾಂಧೀಜಿಯ ಮರಣದ ನಂತರವೂ ಪಾ.ವೆಂ. ಅವರು ಆಗಾಗ ನೆನಪಿಸಿಕೊಳ್ಳುತ್ತಾರೆ. ೧೯೬೭ ನವೆಂಬರ್‌ನಲ್ಲಿ ಗಾಂಧೀಜಿಗೆ ೧೦೦ ವರ್ಷ ತುಂಬುವ ಸಂದರ್ಭದಲ್ಲಿ 'ಗಾಂಧೀಜಿ ನನಗೇನು ಮಾಡಿದರು?' ಈ ನೆನಪಿನ ಸುರುಳಿಯ ಲೇಖನದಲ್ಲಿ ಈ ರೀತಿ ಹೇಳುತ್ತಾರೆ. 'ಒಂದೊಂದೆ ಮೆಟ್ಟಲು ಹತ್ತಿ ನೆಲದ ಸ್ಪರ್ಶವನ್ನು ಬಿಡದೆನೇ ಎತ್ತರದಲ್ಲಿ ಬಾಳುವ ಜೀವನ ವಿಧಾನ ಬೌದ್ಧಿಕ ಕಸರತ್ತಿಗಿಂತಲೂ ಕಠಿಣವಾದ ಕಸರತ್ತು'. ವ್ಯಕ್ತಿಯ ಒಳಗೆ 'ವ್ಯಕ್ತಿತ್ವ' ಜಡಮೂಡುವುದು ಸಾಮಾನ್ಯ ಸಂಗತಿ ಅಲ್ಲ. ಅದೊಂದು ಪ್ರತಿಕ್ರಿಯೆ (proce) ಗಾಂಧೀಯ ಅಗಾದ, ಅಮೇಯ 'ವ್ಯಕ್ತಿತ್ವ' ಬಾಲ್ಯದಿಂದ ಹಿಡಿದು ವ್ಯಕ್ತಿಯಾಗಿ ಪಾ.ವೆಂ. ಬೆಳೆಬೆಳೆದಂತೆ, ಸಂದರ್ಭಗಳು ಭಾವವನ್ನು ವಿಚಾರವನ್ನೂ ಪ್ರಭಾವಿಸಿಸದಂತೆ ಕ್ರಮೇಣ ಇವರನ್ನು ಆವರಸಿ ಸ್ವಲ್ಪ ಸ್ವಲ್ಪವೇ ಗಾಂಧಿಯತ್ತ ಒಲಿಯುತ್ತದೆ. ನಡೆ-ನುಡಿಗಳಲ್ಲಿ ಕ್ರಿಯೆ-ಪ್ರತಿಕ್ರಿಯೆಯಲ್ಲಿ ಎಚ್ಚರ, ಸತ್ಯಾಗ್ರಹ, ವಿಶ್ವವಿಶಾಲ ನೋಟ, ನಿಸ್ವಾರ್ಥ-ನಿಷ್ಕಳಂಕ ಭಾವ ಸೇರಿಕೊಂಡು, ಗಾಂಧೀತ್ವ-ವ್ಯಕ್ತಿತ್ವ ರೂಪುಗೊಳ್ಳುತ್ತದೆ. 'ಗಾಂಧಿ ನನ್ನನ್ನು ಸ್ವಾರ್ಥ ಸಾಧಕನಾಗಗೊಟ್ಟಿಲ್ಲ. ನಿರ್ಘೃಣನಾಗಿಯೇ ಉಳಿದಿದ್ದೇನೆ. ಆದರೆ ಗಾಂಧಿಯಿಂದಾಗಿ ನಾನು ಕ್ರೂರನಾಗುವುದು ತಪ್ಪಿದೆ. ಹೇಡಿಯಾಗಿಯೇ ಇದ್ದೇನೆ. ಆದರೆ ಅಲ್ಪನಾಗದಂತೆ ಗಾಂಧಿ ನೋಡಿಕೊಂಡಿದ್ದಾನೆ.

ಮತ್ತೆ ಮಹಾತ್ಮರಾದವರು ಅದಕ್ಕಿಂತ ಹೆಚ್ಚೇನು ಮಾಡಬಲ್ಲರು? ಅವರು ನಮ್ಮನ್ನು ಸ್ವಲ್ಪ ಕಡಿಮೆ ಕೆಟ್ಟವರಾಗಿ ಮಾಡಬಲ್ಲರಷ್ಟೇ ಸ್ವಲ್ಪ ಹೆಚ್ಚು ಒಳ್ಳೆಯವರಾಗಿ ಮಾಡಬಲ್ಲರಷ್ಟೇ, ಬರೇ ಸ್ವಲ್ಪ ರವರಷ್ಟು ಕಡಿಮೆ ಅಲ್ಪರಾಗಿ ಎಳ್ಳಷ್ಟು ಹೆಚ್ಚು ಉದಾರರಾಗಿ ಮಾಡಬಲ್ಲರಷ್ಟೇ ಬರೇ ರವಷ್ಟು. ಆದರೆ ಈ ಲೇಶ ಅಂತರವೇ ಅಲ್ಲವೇ, ಪತಿತ ಅ-ಪತಿತರ ನಡುವೆ ಇರುವುದು? ಈ ಪರಿಗಳನ್ನು ಈ ಲೇಖನ ಸಾಬೀತು ಪಡಿಸುತ್ತದೆ.

ಕುಟುಂಬದ ಪ್ರೇರಣೆ ಮತ್ತು ಸ್ವಭಾವದ ವೈಶಿಷ್ಟ್ಯ: ಐದು ವರ್ಷವಿರುವಾಗಲೇ ತಂದೆಯನ್ನು ಕಳೆದುಕೊಂಡ ಪಾ.ವೆಂ. ತಂದೆಯ ಬಗ್ಗೆ ಈ ರೀತಿಯಾಗಿ ಬರೆಯುತ್ತಾರೆ. ನನ್ನನ್ನು

ನನ್ನ ತಂದೆ ಬಾಲ್ಯದಲ್ಲೇ ಬಿಟ್ಟು ಹೋಗಿದ್ದರೂ ನನ್ನ ಬದುಕಿನಲ್ಲಿ ನನ್ನ ತಂದೆಯ ಎಷ್ಟು ಅಂಶ ಇದೆ ಎಂದು ಯೋಚಿಸಿದರೆ ನಾನು ಏನಾಗಿದ್ದೇನೋ ಅದರಲ್ಲಿ ಅವರು ದೊಡ್ಡ ಅಂಶವಾಗಿದ್ದರೆಂದೇ ನನಗೆ ತೋರುತ್ತದೆ. ನನ್ನ ಸಾಹಿತ್ಯ ಕಲಾಸಕ್ತಿಯಲ್ಲಿ, ನನ್ನ ಕುತೂಹಲಮಯ ಮಿದುಳಿನಲ್ಲಿ ನನ್ನ ತಂದೆ ಇದ್ದಾರೆ. ನಮ್ಮ ಕುಲದ ಪರಂಪರೆಯನ್ನು ಮುರಿದು ಅವರು ನನ್ನ ಅಕ್ಕಂದಿರಿಗೆ ಅವರು ಓದು ಬರಹ ಕಲಿಸಿದ್ದರು. ಹರಿಕಥೆ ನಾಟಕಗಳ ವಾತಾವರಣವನ್ನು ಮನೆಯಲ್ಲಿ ಕಲ್ಪಿಸಿದ್ದರು. ಈ ಅಕ್ಕಂದಿರು ನನ್ನ ಮೊದಲ ಶಿಕ್ಷಕರಾದರು. (ತಾಯಿ ನಿರಕ್ಷರಿಯಾದರೂ ಧೀರೆಯಾಗಿದ್ದರು) ಅವರು ನನ್ನನ್ನು ನಮಗರಿಯದೆಯೇ ನನ್ನ ಭವಿಷ್ಯದತ್ತ ಮುಖಮಾಡಿ ತಳ್ಳಿದ್ದರು. ಈ ಕಡುಬಡತನದಲ್ಲಿ ನಾನು ಓದಿ ಸಾಹಿತಿಯಾದೆನೆಂದುಕೊಳ್ಳುವಾಗ ಈ ಮೂಲಭೂತ ಉಪಕರಣಗಳಿಲ್ಲವಾದರೆ ನಾನು ಏನಾಗಬಹುದಿತ್ತು? ಎಂಬ ಯೋಚನೆ ಬಾರದಿರುವುದಿಲ್ಲ.

ಪಾ.ವೆಂ. ಅವರ ಸಾಹಿತ್ಯ, ಕಲಾಸಕ್ತಿ ಕುತೂಹಲಮಯ ಮೆದುಳಿಗೆ ಅಪ್ಪಟ ಪ್ರಾಮಾಣಿಕತನಕ್ಕೆ ಅವರ ಕುಟುಂಬವೇ ಮೊದಲ ಪ್ರೇರಣೆ. ಪಾ.ವೆಂ. ಅವರ ಓದು ಮೆಟ್ರಿಕ್ಕಿನ ಹೊಸಲು ದಾಟಿ ಮುಂದೆ ಹೋಗಲಿಲ್ಲವಷ್ಟೇ. ಆದರೆ ಕಲಿಕೆ ಎನ್ನುವುದು ತಡೆದು ನಿಲ್ಲಲಿಲ್ಲ. ಅವ್ಯಾಹತವಾದ ವಾಚನದ ಮೂಲಕವೇ ವಿದ್ವತ್ತಿನ ಹೊಸ್ತಿಲಲ್ಲಿ ಬಂದು ನಿಂತರು. ಅದೇನೂ ವ್ಯವಸ್ಥಿತ ಓದು ಅಲ್ಲ. ಕೈಗೆ ಸಿಕ್ಕಿದ್ದನ್ನು ಓದುತ್ತಿದ್ದರೂ ಅವರ ಮನದಲ್ಲಿ ವಿಚಾರಗಳು ಕಂಪ್ಯೂಟರ್ ಶೇಖರಣೆಯಂತೆ ವ್ಯವಸ್ಥಿತವಾಗಿ ಉಳಿಯುತ್ತಿದ್ದವು. ಬೇಕೆಂದಾಗ ಥಟ್ಟನೆ ಹೊರತೆಗೆಯುವ ಅದ್ಭುತ ನೆನಪಿನ ಶಕ್ತಿ ಅವರದಾಗಿತ್ತು. ಜೊತೆಗೆ ಇಂಥದೊಂದನ್ನು ಕಲಿಯಬೇಕು ಎನಿಸಿದರೆ ಏನೇ ಅಡಚಣೆಯಿದ್ದರೂ ಕಲಿಯುವ ಛಲ ಅವರದು. ಪಣಿಯಾಡಿಯವರಲ್ಲಿದ್ದಾಗ ಅಕೌಂಟ್ ತಿಳಿದಿರಬೇಕಿತ್ತು. ಸರಿ ಅಂಥದೊಂದು ಪಠ್ಯಪುಸ್ತಕ ತಂದು ಕಲಿತರು. ರವೀಂದ್ರರ ಗೀತಾಂಜಲಿಗೆ ನೊಬೆಲ್ ಪಾರಿತೋಷಕ ಬಂದಿತಲ್ಲವೇ ಹಾಗಾದ್ದರೆ ತಾನು ಬಂಗಾಲೀ ಕಲಿತು ಅದನ್ನು ಓದಬೇಕು. ಸಾಧ್ಯವಾದರೆ ಅನುವಾದಿಸಬೇಕು ಎಂಬ ಛಲ ಮೇಲ್ವಾಯ್ದು ಬಂತು. ಯಾವುದೋ ಒಂದು ಔಷಧದ ಬಹುಭಾಷಾ ವಿವರಣೆಯು ಬಂಗಾಲಿಯಲ್ಲಿತ್ತು. ಅವರೇ ಅಕ್ಷರಗಳನ್ನು ರೂಢಿ ಮಾಡಿಕೊಂಡರು. ಕಲ್ಕತ್ತೆಯಿಂದ ಬಂಗಾಲೀ ಪ್ರೈಮರ್ ತರಿಸಿಕೊಂಡರು, ಕಲಿತರು. ಇದೆಲ್ಲ ಹೈಸ್ಕೂಲಿನ ಕೊನೆಯ ಹಂತದಲ್ಲಿದ್ದಾಗ ನಡೆದದ್ದು. ಹೈಸ್ಕೂಲಿನಲ್ಲಿ ಕಲಿಯುವ ಕಾಲಕ್ಕೆ ಪಠ್ಯಪುಸ್ತಕಗಳು ಇರುತ್ತವಲ್ಲವೇ ವರ್ಷದ ಆರಂಭದಲ್ಲಿ ಒಮ್ಮೆ ಓದಿಬಿಟ್ಟರೆ ಮುಗಿಯಿತು. ಪರೀಕ್ಷೆ ಹತ್ತಿರ ಬಂದಾಗಲೇ ಎರಡನೇ ಸಲ ಅವನ್ನು ತೆರೆಯುವುದು. ಮಧ್ಯದ ಅವಧಿಯಲ್ಲಿ ಅನ್ಯಪುಸ್ತಕಗಳ ಓದಿನ ಹುಚ್ಚಿನಲ್ಲಿ ಮಾಸ್ತರರು ಮನೆಗೆಲಸ ಕೊಟ್ಟುದನ್ನು ಮರೆತು ಶಿಕ್ಷೆಗೊಳಗಾದ ಪ್ರಸಂಗಗಳೂ ಆಗಿಹೋದವು. ಅಂತೂ ಶಾಲಾ ಶಿಕ್ಷಣ ಮುಗಿಯುವ ಹಂತದಲ್ಲಿ ಯಾವುದೇ ವಿಷಯವನ್ನು ಓದಿ ಮನನ ಮಾಡಿಕೊಳ್ಳುವೆನೆಂಬ ಆತ್ಮವಿಶ್ವಾಸ. ಹಾಗೆ ವಿಶೇಷ ಪರಿಣತಿಯನ್ನು ಹೊಂದಿದ್ದರಲ್ಲಿ

ಹಳಗನ್ನಡ ಸಾಹಿತ್ಯವನ್ನು ಅದಕ್ಕೆ ಸಂಬಂಧಿಸಿದ ವ್ಯಾಕರಣ, ಛಂದಶಾಸ್ತ್ರಗಳನ್ನು ಶಾಲಾದಿನಗಳಲ್ಲಿಯೇ ಚೆನ್ನಾಗಿ ಓದಿಕೊಂಡಿದ್ದರು.

ಇದೊಂದು ಘಟನೆ: ನಿವೃತ್ತರಾಗಲಿರುವ ವಯಸ್ಸು ಆಚಾರ್ಯರು ಸಾಮಾನ್ಯವಾಗಿ ೭.೩೦ಕ್ಕೆ ಆಫೀಸು ಬಿಡುತ್ತಾರೆ. ರಾತ್ರಿ ಓದಲೆಂದು ಕೈಲೊಂದು ಪುಸ್ತಕ ಹಿಡಿದುಕೊಂಡು ಹೊರಡುವುದು ಅವರ ಕ್ರಮ. ಅರ್ಧ ತಾಸಿನಲ್ಲಿ ಮನೆಯಲ್ಲಿರುವುದು ನಿತ್ಯದ ರೂಢಿ.

ಒಂದು ದಿನ ಅವರು ರಾತ್ರಿ ೮.೩೦ ಆದರೂ ಮನೆಗೆ ಬಂದಿರಲಿಲ್ಲ. ಆಫೀಸಿನಲ್ಲಿ ವಿಚಾರಿಸಿದಾಗ ತಿಳಿಯಿತು ಅವರು ೭ ಗಂಟೆಗೆ ಹೋಗಿದ್ದಾರೆ! ಅರೇ ಎಲ್ಲಿಗೆ ಹೋದರು? ಏನಾದರೂ ಅಪಘಾತವಾಗಿರಬಹುದೇ? ಎಂದು ಗಾಬರಿಗೊಂಡರು. ಹಿರಿಯ ಮಗ ಹುಡುಕುತ್ತ ಹೊರಟರು. ದಾರಿಯ ಒಂದು ವಿದ್ಯುತ್‌ದೀಪದ ಕಂಬಕ್ಕೆ ಆತುಕೊಂಡು ಆ ಬೆಳಕಿನಲ್ಲಿ ತಾವು ತಂದಿದ್ದ ಪುಸ್ತಕವನ್ನು ಓದುತ್ತಾ ಇದ್ದರು.

ಓದುವ ಅತಿಯಾದ ಹುಚ್ಚು ಅವರಿಗೆ ಮೊದಲಿನಿಂದಲೂ ಇತ್ತು. ವರ್ತಮಾನ ಪತ್ರದ ಒಂದು ಹರಿದುಹೋದ ತುಂಡು ಕಾಗದವು ರಸ್ತೆಯಲ್ಲಿ ಬಿದ್ದಿದ್ದರೆ ಅದನ್ನು ಎತ್ತಿಕೊಂಡು ತುಸು ಕಣ್ಣಾಡಿಸಿ ಕಿಂಚಿತ್ ಉಪಯೋಗದ್ದು ಏನಾದರೂ ಇದ್ದರೆ, ಕೈಚೀಲದಲ್ಲಿ ತುರುಕಿಕೊಳ್ಳುವುದನ್ನು ನಾನೇ ಒಮ್ಮೆ ನೋಡಿದ್ದೇನೆ. ಇದು ತನ್ನ ಬಾಲ್ಯ ಕಾಲದ ಅಭ್ಯಾಸವೆಂದು ಆಗ ಹೇಳಿದ್ದರು ಶ್ರೀ ಹಾವನೂರ.

ಪಾ.ವೆಂ. ಅವರಲ್ಲಿ ಎದ್ದು ಕಾಣುವ ಸ್ವಭಾವವೆಂದರೆ ಅಪ್ಪಟ ಪ್ರಾಮಾಣಿಕತೆ. ಮೋಸ, ಅನ್ಯಾಯ, ಸುಳ್ಳು ಇಂಥವೆಲ್ಲ ಅವರಿಗೆ ಎಳ್ಳಷ್ಟು ಸೇರುವುದಿಲ್ಲ. ಅವರು ಮದ್ರಾಸದಲ್ಲಿ ನೌಕರಿ ಹಿಡಿದಾಗ ಮಹಾಯುದ್ಧ ಅದೇ ಸುರುವಾಗಿತ್ತಷ್ಟೇ. ಹಿಟ್ಲರನು ದುರಾಸೆಯಿಂದ ಪೋಲೆಂಡನ್ನು ಮುತ್ತಿದ್ದನೆಂದು ಪಾ.ವೆಂ. ಅವರಿಗೆ ಅವನ ಮೇಲೆ ಬ್ರಹ್ಮಾಂಡ **ಕೋಪ ಇವನು ಸತ್ತು ಹೋಗಲಿ** ಎಂದು ಕೈಯಲ್ಲಿ ಬಿಲ್ ಬರೆಯಲೆಂದು ಇದ್ದ ಲೇಖನಿಯಿಂದ ಗೀಚಿದ್ದರು.

ಮುರಳೀಧರರು (ಮಗ) ಒಮ್ಮೆ ತಂದೆ ಮಗ ದೊಡ್ಡ ಕ್ಯೂನಲ್ಲಿ ನಿಂತಿದ್ದರು. ಇವರ ಹಿಂದೆ ಒಬ್ಬ ಇದ್ದ. ಮತ್ತೊಬ್ಬ ನುಗ್ಗಿ ಆ ಹಿಂದಿನವನ ಮುಂದೆ ನಿಂತ. ಅವನು ಕ್ಯೂ ಮುರಿದು ಬಂದದ್ದನ್ನು ಕಂಡು ಆಚಾರ್ಯರು ಆಕ್ಷೇಪಿಸಿದರು. 'ನಿಮ್ಮ ಮುಂದೇನು ಬಂದು ನಿಂತಿಲ್ಲ; ನಿಮಗ್ಯಾಕೆ ಉಸಾಬರಿ?' ಎಂದು ಅವನು ಒರಟಾಗಿ ಉತ್ತರಿಸಿದಾಗ ಆಚಾರ್ಯರು ಕೈಯಲ್ಲಿದ್ದ ಛತ್ರಿಯಿಂದ ಹೊಡೆಯಲೆಂದೇ ಸಿದ್ಧರಾದರು! ಆಗ ಮಗ ಸಮಾಧಾನ ಹೇಳಬೇಕಾಯಿತು.

ಸತ್ಯ ಮತ್ತು ಪ್ರಾಮಾಣಿಕತೆಯೆ ಅವರನ್ನು ಗಾಂಧೀಜಿಯತ್ತ ತರುಣವಯದಿಂದಲೇ ಸೆಳೆಯಿತು. ತಮ್ಮ ಈ ಆಧರಾಭಿಮಾನವನ್ನು ಒಂದು ಕವಿತೆಯಲ್ಲಿ ಬಿಟ್ಟರೆ ಲೇಖನದಲ್ಲಿಯಾಗಲೀ ಮಾತಿನಲ್ಲಿಯಾಗಲೀ ವಿಶೇಷವಾಗಿ ತೋರಿಸಿರಲಿಲ್ಲ. ಆದರೆ ಗಾಂಧೀಜಿಯ ಹತ್ಯೆಯ ಸುದ್ದಿ ತಿಳಿದು ಅವರ ಮನಸ್ಸಿಗಾದ ನೋವು ಅಷ್ಟಿಷ್ಟಲ್ಲ.

ಅದೇ ದುಃಖದಿಂದ ಆ ರಾತ್ರಿ ಮನೆಗೆ ಬಂದ ಮೇಲೆ ಸೂತಕವಾದಂತೆ ಸ್ನಾನ ಮಾಡಿದರಂತೆ. ಅದನ್ನು ನೆನೆದು ಅವರ ಪತ್ನಿ ಹೀಗೆ ದಾಖಲಿಸಿದ್ದಾರೆ.

ನಮ್ಮ ಮಕ್ಕಳಲ್ಲಿ ಒಂದು ತನ್ನ ಒಂದೂವರೆ ವಯಸ್ಸಿನಲ್ಲಿ ತೀರಿಕೊಂಡಿತ್ತು. ಇವರು ಅಳಲಿಲ್ಲ. ಆದರೆ ಆ ಮಗು ತೀರಿಕೊಂಡ ಕೆಲ ತಿಂಗಳಲ್ಲಿ ಒಂದು ಸಂಜೆ ಮುಖ ಒಣಗಿಸಿಕೊಂಡು ಬಂದು ತಣ್ಣೀರು ಸ್ನಾನ ಮಾಡಿದರು. ಊಟ ಬೇಡ ಅಂದರು ಯಾಕೆ? ಅಂತ ಕೇಳಿದೆ 'ಗಾಂಧೀಜಿಯನ್ನು ಕೊಂದರು' ಎಂದರು. ಮರುದಿನ ಸಂಜೆ ರೇಡಿಯೋದಲ್ಲಿ ಗಾಂಧೀ ಚಿತಾರೋಹಣದ ಸುದ್ದಿ ಬರುತ್ತಿದ್ದಾಗ ಗೋಳೋ ಎಂದು ಅತ್ತುಬಿಟ್ಟರು.

ಪಾ.ವೆಂ. ಅವರ ಬಗ್ಗೆ ಲೇಖನ ಬರೆದ ಒಬ್ಬರು **ಪಾ.ವೆಂ. ಸ್ಥಿತಪ್ರಜ್ಞರು** ಎಂದಿದ್ದಾರೆ. ಭಗವದ್ಗೀತೆಯಲ್ಲಿ ಬಂದ ಆ ಶಬ್ದ ಎಲ್ಲರಿಗೂ ಅನ್ವಯಿಸುವಂತಿಲ್ಲ. ಪಾ.ವೆಂ. ಬಗ್ಗೆ ಅನ್ವಯಿಸಿ ಹೇಳುವುದಾದರೆ ಅವರು ಸುಖ, ದುಃಖ ಎರಡನ್ನು ನಿರ್ಮೋಹದಿಂದ ಕಾಣಬಲ್ಲವರಾಗಿದ್ದರು. ಅತಿಯಾಗಿ ಹಚ್ಚಿಕೊಂಡವರಲ್ಲ. ಹಾಗೆಂದು ಸ್ನೇಹಪರ ನಡತೆಯುಳ್ಳವರಲ್ಲಿ ನಿರಾಸಕ್ತರು ಅಲ್ಲ. ಮುಖ್ಯವಾಗಿ ಕಸ್ತೂರಿಯ ನಿಮಿತ್ತ ಅವರ ಸ್ನೇಹದ ಬಳಗ ಬಲು ದೊಡ್ಡದಿತ್ತು. 'ಅವರು ವ್ಯಕ್ತಿಯಾಗಿ ವಾಮನ ಸಾಹಿತಿಯಾಗಿ ತ್ರಿವಿಕ್ರಮ' ನಾಗಿದ್ದರು.

ಹಾ.ಮಾ.ನಾ. ಅಭಿಪ್ರಾಯದಂತೆ ಪಾ.ವೆಂ. ಅವರ ಬದುಕಿನಲ್ಲಿ ದ್ವಂದ್ವವೆಂಬುದು ಇರಲಿಲ್ಲ. ಅಧ್ಯಯನ ಬಲದಿಂದ ನಂಬಿದ್ದನ್ನು ಹೇಳುತ್ತಿದ್ದ ಬೌದ್ಧಿಕ ಪ್ರಾಮಾಣಿಕತೆ ಅವರಲ್ಲಿ ಯತೇಚ್ಛವಾಗಿ ಇದ್ದಿತು. ಅವರ ಬರವಣಿಗೆಯ ಯಶಸ್ಸಿನ ಗುಟ್ಟು ಇದ್ದದ್ದು ಅವರ ಸದ್ವಿಮರ್ಶನ ಪ್ರಜ್ಞೆಯಲ್ಲಿ ಅಂತರ್ಮುಖಿಯಾಗಿ ತಮ್ಮನ್ನು ವಿಮರ್ಶಿಸಿ ಕೊಳ್ಳುವವರಾಗಿದ್ದರು.

ಭಾಷಾ ಪರಿಶ್ರಮ: ಪಾ.ವೆಂ. ಅವರು ಬಹುಭಾಷಾಜ್ಞಾನಿ. ಮಾತೃಭಾಷೆ ತುಳುವಾದರೂ ಕನ್ನಡ, ಸಂಸ್ಕೃತಗಳಲ್ಲಿ ಹೆಚ್ಚು ಪಾಂಡಿತ್ಯವನ್ನು ಬಾಲ್ಯದಿಂದಲೇ ಗಳಿಸಿದರು. ಜೊತೆಯಲ್ಲಿ ಶಿಕ್ಷಣದೊಂದಿಗೆ ಇಂಗ್ಲೀಷ ಭಾಷೆಯನ್ನು ಕರಗತ ಮಾಡಿಕೊಂಡಿದ್ದರು. ಆಸಕ್ತಿಯಿಂದ ಬಂಗಾಳಿಯನ್ನು ಕಲಿತರು. ಜೊತೆಗೆ ಹಿಂದಿ, ಮರಾಠಿ, ಕೊಂಕಣಿ, ತಮಿಳು, ತೆಲಗು, ಮಲಿಯಾಳಿ ಎಂಬ ಭಾಷೆಗಳನ್ನು ತಮ್ಮದನ್ನಾಗಿಸಿಕೊಂಡಿದ್ದರು. ಈ ಎಲ್ಲ ಭಾಷೆಗಳನ್ನು ಪಾಂಡಿತ್ಯವನ್ನು ಪರಿಶ್ರಮ ಪೂರ್ವಕವಾಗಿ ಪಡೆದಿದ್ದರು. ನಿರಂತರವಾಗಿ ಅಧ್ಯಯನವನ್ನು ಮಾಡಿತ್ತಿದ್ದರು. ಎಲ್ಲ ಭಾಷೆಯ ಪಾಂಡಿತ್ಯ ಸಂಪಾದನೆಯ ಫಲವೇ **ಪದಾರ್ಥ ಚಿಂತಾಮಣಿ** ಎಂಬ ಮಹತ್ವದ ಕೃತಿ. ಕನ್ನಡ ಭಾಷೆಯ ಮೊದಲ **ಪದಪರಂಪರೆಯ ಲೋಕಕ್ಕೆ** ಈ ಕೃತಿ ನಾಂದಿಯಾಗಿದೆ. ಪಾ.ವೆಂ. ಆಚಾರ್ಯರು ಒಂದೆಡೆ ಹೇಳಿದ್ದಾರೆ ಶಬ್ದಗಳ ಬಗ್ಗೆ ಮೊದಲಿನಿಂದಲೂ ನನಗೆ ಕುತೂಹಲ ನಿವೃತ್ತ ಜೀವನದಲ್ಲಿ ಪದಗಳಿಗೂ ಅರ್ಥಗಳಿಗೂ ಇರುವ ಸಂಬಂಧಗಳನ್ನು ಹಿಂಜಿ ನೋಡುವ ಹವ್ಯಾಸ ಒಂದು ಗೀಳಾಗಿ ಅಮರಿಕೊಂಡಿತು.

ಮೊದಲು ನನ್ನ ಲಹರಿಯನ್ನು ಉತ್ತೇಜಿಸಿದ ಕೆಲ ಪದಗಳನ್ನು ಬೆಂಬತ್ತಿ ನನಗೆ ಲಭ್ಯವಿದ್ದ ನಿಘಂಟು ಇತಿಹಾಸಾದಿ ಗ್ರಂಥಗಳ ಸಹಾಯದಿಂದ ಅವುಗಳ ಜಾತಕ ಸಾಮಾಗ್ರಿ ಕಲೆ ಹಾಕಿದೆ. ಶುರುವಿಗೆ ತೊಡಗಿದ್ದು, ಕುತೂಹಲದಿಂದ ಅವುಗಳ ಬಗ್ಗೆ ಹೇಗೆ ಎಂಬ ವಿಚಾರ ಬಂದದ್ದು ಆಮೇಲೆ.

ಕಸ್ತೂರಿಯ ಸಂಪಾದಕನಾಗಿದ್ದ ಮಾಧವ ಮಹಿಷಿಯವರು ಓದು **ಕಸ್ತೂರಿ** ಸಂಚಿಕೆಯಲ್ಲಿ ಇದನ್ನು ಪ್ರಕಟಿಸಿದರು. ಹೀಗೆ ವಿದ್ವಾಂಸರು, ಸಾಹಿತಿಗಳು **ಪದಾರ್ಥ ಚಿಂತಾಮಣಿ**ಯಿಂದ ಪಾ.ವೆಂ. ಅವರನ್ನು ಗುರುತಿಸ ತೊಡಗಿದರು. ಕಾಲು ಶತಮಾನಗಳವರೆಗೆ **ಲಾಂಗೂಲಾಚಾರ್ಯ**ನಾಗಿ ಗುರುತಿಸಲ್ಪಟ್ಟವರನ್ನು ಈ ಚಿಂತಾಮಣಿ ವಿಮೋಚನೆಗೊಳಿಸಿತು.

ಪ್ರತಿಯೊಂದು ಪದಕ್ಕೂ ಆದರದೇ ಆದ ಚರಿತ್ರೆಯುಂಟು, ಐತಿಹ್ಯವುಂಟು, ಕಥೆಯುಂಟು. ಇಲ್ಲಿ ಪಾ.ವೆಂ. ದೃಷ್ಟಿಕೋನ ಚರಿತ್ರೆಯ ನಿರೂಪಣೆಯಲ್ಲ. ಸ್ವಾರಸ್ಯ ಕಥನ ನಂಬಲರ್ಹವಾದ ವಿವೇಚನೆಯಿದೆ. ಸಾಧಾರಣವಾದ ಮಾಹಿತಿ ಇದೆ. ಪದ ಪ್ರಪಂಚ ತುಂಬ ಸ್ವಾರಸ್ಯ ಪೂರ್ಣವಾಗಿದ್ದರೂ ಜಟಿಲವಾದದ್ದು, ಪ್ರತಿ ಶಬ್ದಕ್ಕೂ ಕಾರಣ ಹೇಳಲಾಗುವುದಿಲ್ಲ. ವಿವರಣೆ ಕೊಡುಲಾಗುವುದಿಲ್ಲ. ಪದ ಮತ್ತು ಅರ್ಥ ಬೆಳೆಯುತ್ತದೆ. ಬದಲಾಗುತ್ತದೆ. ಆಗ ತಾರ್ಕಿಕವಾಗಿ ಉತ್ತರ ಸಾಧ್ಯವಿಲ್ಲದಾಗ ಕಲ್ಪನೆ ಗರಿಗೆದರಬಹುದು ಇಲ್ಲಿ ಹಾಗಾಗಿದೆ, ಎನ್ನುವ ಹಾ.ಮಾ. ನಾಯಕರ ಮಾತು ಸಮಂಜಸವಾಗಿದೆ.

ಕಸ್ತೂರಿಯಲ್ಲಿ ಆಚಾರ್ಯರು ಮೊದಲಿಗೆ ಪರಿಚಯಿಸಿದ ಒಂದು ಅಂಕಣವೆಂದರೆ **ನಿಮ್ಮ ಶಬ್ದ ಭಂಡಾರ ಬೆಳೆಯಲಿ** ಪ್ರತಿ ತಿಂಗಳೂ ಆ ಅಂಕಣದಲ್ಲಿ ಹತ್ತು ಹನ್ನೆರಡು ಶಬ್ದಗಳನ್ನು ಕೊಟ್ಟು ಪ್ರತಿಯೊಂದಕ್ಕೂ ನಾಲ್ಕು ನಾಲ್ಕು ಅರ್ಥಗಳನ್ನು ಕೊಡಲಾಗುತ್ತಿತ್ತು. ಮುಂದಿನ ಪುಟದಲ್ಲಿ ಅರ್ಥವನ್ನು ಕೊಡುತ್ತಿದ್ದರು. ವಾಚಕ ವೃಂದಕ್ಕೆ ತಮ್ಮ ಶಬ್ದ ಶಕ್ತಿಯನ್ನು ಅಳೆದುಕೊಳ್ಳಲು ಇದೊಂದು ಸೂಕ್ತ ಮಾರ್ಗ. ಉತ್ತರಗಳಲ್ಲಿ ಆ ಶಬ್ದಕ್ಕೆ ಸಂಬಂಧಿಸಿದ ವಿವರಗಳೂ ಇರುತ್ತಿದ್ದವು.

ಎಲ್ಲ ವಿದ್ಯಾಮಾನಗಳಿಗೆ ಸ್ಪಂದಿಸುವ ಆಚಾರ್ಯರು **ಶಬ್ದಸಾಗರ**ದಲ್ಲಿ ದಿನದ ಬಹುಪಾಲ ಮುಳುಗಿ ಏಳುತ್ತಿದ್ದರು. ನಮ್ಮ ಶಬ್ದ ಭಂಡಾರಕ್ಕೆ ಅಮೂಲ್ಯ ಮುತ್ತುರತ್ನಗಳನ್ನು ತುಂಬುತ್ತಾರೆ.

ಪಾ.ವೆಂ. ಅವರ ಸಂಪ್ರದಾಯವನ್ನು ಚೆನ್ನಾಗಿ ಬಲ್ಲವರು. ಅಷ್ಟೇ ಚೆನ್ನಾಗಿ ಕುಂದುಕೊರತೆಗಳನ್ನು ಅರಿತವರು. ಪ್ರಾಚೀನ ಜ್ಞಾನದ ಬೇರುಗಳಿಗಿಳಿದು ಅದೇ ರೀತಿ ಆಧುನಿಕ ಜ್ಞಾನ ವಿಜ್ಞಾನಗಳ ತುದಿಗೆ ಏರಿ ಸಂಶೋಧಿಸಿ ಆಕಾಶದತ್ತ ದೃಷ್ಟಿ ಎತ್ತಿದ್ದು ಇವರ ಪ್ರತಿಭೆ. ಜೀವನೋಪಾಯಕ್ಕಾಗಿ ಪತ್ರಿಕಾಲಯದ ಕೆಲಸ ಒದಗಿಬಂತು, ತನ್ನ ಮೂಲಾಭಿರುಚಿಗೆ ತಕ್ಕದ್ದಾಗಿಲ್ಲದೆ ಇದ್ದರೂ ಅದಕ್ಕೆ ಬದ್ಧರಾಗಿ ನಿಷ್ಠೆಯಿಂದ ಸೌಜನ್ಯದಿಂದ

ಕರ್ತವ್ಯ ನಿಭಾಯಿಸಿದರು. ಮುಂದೆ ಬರುವ ಪತ್ರಿಕೋದ್ಯಮಿಗಳಿಗೆ ಮಾರ್ಗಸೂಚಿಯು ಆಯಿತು. ಸಂಪ್ರದಾಯವನ್ನು ತಿಳಿದವರೂ ಆದರೆ ಅದರೊಳಗೆ ಮುಳಗಬೇಕಿಲ್ಲ, ಕ್ರಾಂತಿಕಾರಿಯು, ಪ್ರಗತಿಗಾಮಿಯೂ ಆಗಿರಬಹುದೆಂಬುದನ್ನು ತಮ್ಮ ಜೀವನದಲ್ಲಿ ರುಜುವಾತು ಪಡಿಸಿದರು.

ಉ) ಪಾ.ವೆಂ. ಒಟ್ಟು ನೋಟ:

ಪತ್ರಿಕೋದ್ಯಮದಲ್ಲೇ ಸರ್ವಸ್ವವನ್ನು ಕಂಡವರು ಪಾ.ವೆಂ. ಅತ್ಯಂತ ಕಡಿಮೆ ಅಕ್ಷರಗಳಲ್ಲಿ ಕನ್ನಡದ ಅತಿ ಹೆಚ್ಚಿನ ಓದುಗರನ್ನು ಸ್ಪರ್ಶಿಸಿದವರು. ಸಾಂಪ್ರಾದಾಯಿಕವಾದ ಶಿಕ್ಷಣವನ್ನು ಪಡೆದರು. ಶಾಲೆಗಿಂತ ಹೆಚ್ಚಾಗಿ ಬದುಕಿನ ಸಂತೆಯಲ್ಲಿ ಓದು ಕಲಿತವರು ಶಬ್ದಗಳೊಡನೆ ಸೆಣಸಿ ಸೆಣಸಿ ನಡೆದಾಡುವ ಶಬ್ದಭಂಡಾರವಾದರು ಬದುಕು ಮುಗಿಯುವ ಮುನ್ನ ಗೋಯೆಂಕಾ ಪ್ರಶಸ್ತಿಗೆ ಆಯ್ಕೆಯಾದರು. ಆದರೆ ಖುದ್ದಾಗಿ ಹೋಗಿ ಪ್ರಶಸ್ತಿ ಸ್ವೀಕರಿಸುವ ಅವಕಾಶ ನೀಡುವಷ್ಟು ಬದುಕು ಉದಾರಿಯಾಗಲಿಲ್ಲ.

ಪಾ.ವೆಂ. ಅವರ ವ್ಯಕ್ತಿತ್ವದಲ್ಲಿ ಹಲವು ಮಿತಿಗಳಿದ್ದವು. ಆದರೆ ಯಾವುದೇ ರೀತಿಯ ಬಿರುಕುಗಳಿರಲಿಲ್ಲ. ಪಾ.ವೆಂ. ಅವರ ಅಪಾರವಾದ ಸ್ನೇಹಿತರು, ಅಭಿಮಾನಿಗಳ ಬಳಗವನ್ನು ಹೊಂದಿದ್ದರು. ಸುಳ್ಳು ಹೇಳುವುದು, ಲಂಚ, ಅಪ್ರಾಮಾಣಿಕತನಗಳನ್ನು ಕಂಡರೆ ಕಿಡಿಕಾರುತ್ತಿದ್ದರು. ಮಾತನ್ನು ತಪ್ಪಾಗಿ ಉಚ್ಚಾರಮಾಡುವುದು, ತಪ್ಪಾಗಿ ಬರೆಯುವುದು ಕಂಡರೆ ಹೋಗಿ ಸರಿಪಡಿಸಿ ಬರುತ್ತಿದ್ದರು. ಸಮಯಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. ತಮಗಿಂತಲೂ ಹೆಚ್ಚಿನ ಗುಣ ಸಾಧಿಸಿದರೆ ಮೆಚ್ಚುವ ಔದಾರ್ಯವಿತ್ತು. ಅಂತವರೊಡನೆ ಹೆಚ್ಚು ತರ್ಕ, ವಿಚಾರ ಚರ್ಚೆಯೊಂದಿಗೆ ತಮ್ಮ ಸಮಯವನ್ನು ವಿನಿಯೋಗಿಸಿ ಸಮಯಕ್ಕೆ ತಕ್ಕದಾದ ಬರೆಹವನ್ನು ಸಿದ್ಧಪಡಿಸುತ್ತಿದ್ದರು.

ಪಾ.ವೆಂ. ಅವರಿಗೆ ಜಗತ್ತಿನ ಎಲ್ಲ ವಿಷಯಗಳ ಬಗ್ಗೆ ಅಪಾರವಾದ ಜ್ಞಾನವಿತ್ತು. ತಮ್ಮ ಮುಂದೆ ಬಂದ ಸಮಸ್ಯೆಗಳನ್ನು ಸ್ವಾಗತಿಸಿ ಮುನ್ನಡೆಯುತ್ತಿದ್ದರು. ಪಾ.ವೆಂ. ಅವರು ಸಾಮಾಜಿಕ ಮಾರ್ಪಟುಗಳ ಬಗೆಗೆ ಅವರಿಗೆ ಪೂರ್ಣವಾದ ಅರಿವಿತ್ತು. ಇನ್ನೊಂದು ಮಾರ್ಗದಲ್ಲಿ ಒಳ್ಳೆಯದನ್ನು ಕಂಡರೆ ಅದನ್ನು ತಮ್ಮದಾಗಿಸಿಕೊಳ್ಳುವ ಆಕಾಂಕ್ಷೆಯೂ ಔದಾರ್ಯ ಇತ್ತು. ಅದನ್ನು ಧಮನ ಮಾಡುವ ಪ್ರವೃತ್ತಿ ಅದರಲ್ಲಿರಲಿಲ್ಲ. ಅವರಿಗೆ ಸಮಾಜದ ಪರಿಷ್ಕರಣದಲ್ಲಿ ಅಪರಿಮಿತವಾದ ಆಸಕ್ತಿ. ಡೊಂಕನ್ನು ಹೇಳುವಾಗಲೂ ಸಹಾನುಭೂತಿ ಇರುತ್ತಿತ್ತು. ಇದನ್ನು ಅವರ ಹಾಸ್ಯ ಬರಹಗಳಲ್ಲಿ ಚಿಂತನಪರ, ವಿಜ್ಞಾನ ಲೇಖನಗಳಲ್ಲಿ ಪೂರ್ಣವಾಗಿ ಕಾಣುತ್ತೇವೆ.

ಪಾ.ವೆಂ. ಅವರು ವ್ಯಕ್ತಿತ್ವ ಅವರ ಬರಹಗಳಲ್ಲಿ ಅಲ್ಲಲ್ಲಿ ಮಿನುಗುತ್ತದೆ. ಅವರು ಪತ್ರಿಕೋದ್ಯಮಿಯಾಗಿ ಬದುಕನ್ನು ಸ್ವೀಕರಿಸಿದರು. ಬರಹಗಳ ಮೂಲಕ ನಾಡಿನಲ್ಲಿ ಪ್ರಖ್ಯಾತರಾದರು. ನಾಡು ನುಡಿಗಳನ್ನು ಅತಿಶಯವಾಗಿ ಪ್ರೀತಿಸಿದರು. ಪರಿಶುದ್ಧಶೀಲರು,

ಸ್ನೇಹ ಪರರಾದರೂ, ಪ್ರಗತಿಗಾಮಿಯಾಗಿದ್ದರು ಖಂಡಿತವಾದಿಗಳು ಎಂಬ ಸಂಗತಿಗಳು ಸ್ಪಷ್ಟವಾಗಿ ಹೊಳೆಯುತ್ತದೆ. ತುಂಬು ಸಂಸಾರದ ಹಿರಿಯರಾಗಿ ಅನೇಕ ಬರಹಗಾರರನ್ನು ಬೆಳಕಿಗೆ ತಂದು ಜ್ಯೋತಿಯಾಗಿ ಕಸ್ತೂರಿಯಂಥ ಸಮೃದ್ಧ ಪತ್ರಿಕೆಯ ಚುಕ್ಕಾಣಿ ಹಿಡಿದವರಾಗಿ, ಅಜಾತಶತ್ರುವಾಗಿ, ಸ್ನೇಹ ಪರಿಜೀವಿಯಾಗಿ ೭೮ ವರ್ಷದ ತುಂಬು ಜೀವನ ಮುಗಿಸಿದ ಪಾ.ವೆಂ. ವ್ಯಕ್ತಿತ್ವ ನಿಸ್ಸಂಶಯವಾಗಿಯೂ ಪರಿಶುದ್ಧವಾದ ಜೀವನ ಘನವಾದ ವ್ಯಕ್ತಿತ್ವ.

ತನ್ನ ಬರವಣಿಗೆಯ ಶಕ್ತಿ, ಶ್ರಮವನ್ನು ತನ್ನ ಸಂಸ್ಥೆಯ ಪತ್ರಿಕೆಗೆ ಸಂಪೂರ್ಣವಾಗಿ ಎರಕ ಹೊಯ್ದರು. ವೈಯಕ್ತಿಕ ಹೆಸರಿನ ಅಥವಾ ಹಣದ ಆಸೆ ವ್ಯಾಮೋಹ ಇಲ್ಲದ ಕರ್ಮಯೋಗಿಯಾಗಿದ್ದರು. ಆರೋಗ್ಯವನ್ನು ಆಲಕ್ಷಿಸಿ, ವೈದ್ಯಕೀಯ ನೆರವಿಗೂ ತನ್ನ ಹತ್ತಿರ ಏನು ಇರದಂಥ ಸ್ಥಿತಿಯಲ್ಲಿ ದುಡಿದರು. ಯಾವ ಮನ್ನಣೆ ಕೀರ್ತಿಯ ಲಾಭಿಗೂ ಅವರ ಬುದುಕು ಬಯಸಲಿಲ್ಲ.

ಪಾ.ವೆಂ. ಅವರು ವಿಶ್ರಾಂತಿಯ ನಂತರವೂ ಬರವಣಿಗೆ ಮುಂದುವರಿಸಿದ್ದರು. ಮಣಿಪಾಲದ ಪತ್ರಿಕಾ ಗುಂಪಿನವರು ಮೊದಲು ಪಾ.ವೆಂ. ಅವರ ಲೇಖನಗಳನ್ನು ಸ್ವಾಗತಿಸಿದರು. **ಕಸ್ತೂರಿ**ಗೂ ಬರೆಯುತ್ತಿದ್ದರು. ಪಾ.ವೆಂ. ಅವರ ಕೆಲವು ಪದ್ಯಗಳು **ಕವಿತಾ ಸಂಗ್ರಹ** (೧೯೭೬) ಮತ್ತು ಎರಡು ಹರಟೆಗಳು **ಲೋಕದಡೊಂಕು** (೧೯೮೦) ಮತ್ತು **ವಿಪರೀತ** (೧೯೭೭) ಪ್ರಕಟವಾದವು. ನಿವೃತ್ತಿಗಿಂತ ಎರಡು ವರ್ಷ ಮೊದಲು **ಸ್ವತಂತ್ರ ಭಾರತ** (೧೯೭೨) ಎಲ್ಲರ ಮೆಚ್ಚುಗೆಗಳಿಸಿತ್ತು. ಇದೇ ಸಂದರ್ಭದಲ್ಲಿ ತುಳು ಕವಿತೆಗಳ ಸಂಗ್ರಹ **ಬಯ್ಯಮಲ್ಲಿಗೆ** (೧೯೮೧) ಪ್ರಕಟಗೊಂಡಿತು. ಪಾ.ವೆಂ. ಅವರಿಗೆ ವೃತ್ತಿ ಬಾಂಧವರು ಪತ್ರಿಕೋದ್ಯೋಗದ ಪಿ.ಆರ್. ರಾಮಯ್ಯ ಪ್ರಶಸ್ತಿ ನೀಡಿ ಗೌರವಿಸಿದರು. ಮೈಸೂರಿನಲ್ಲಿ ಮಿತ್ರ ವರ್ಗದವರಿಂದ ಸಾರ್ವಜನಿಕ ಸನ್ಮಾನ ಮತ್ತು ನಿಧಿ ಪ್ರಧಾನವಾಯಿತು (೧೯೭೭). ಕರ್ನಾಟಕ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದಲ್ಲಿ ಗೌರವಿಸಲ್ಪಟ್ಟರು. ಕರ್ನಾಟಕ ಸಾಹಿತ್ಯ ಆಕಾಡಮಿಯ ಪ್ರಶಸ್ತಿಯೂ ಲಭಿಸಿದೆ. ಹೀಗೆ ಅನೇಕ ಸಂಘ ಸಂಸ್ಥೆಗಳು ಪಾ.ವೆಂ. ಅವರನ್ನು ಗೌರವಿಸಿ ಪುರಸ್ಕರಿಸಿದೆ. ಹೀಗೆ ನಿಶಿತವಾದ ವಿಶ್ಲೇಷಣಾತ್ಮಕ ಬರಹದಿಂದ ಪಾ.ವೆಂ. ಒಬ್ಬರು ವಿಚಾರವಾದಿ ಎನಿಸಿದರು. ಓದುಗರೊಡನೆ ಪಾ.ವೆಂ. ಸಂಬಂಧ ವಿನೂತನವಾದುದು. ಹಾಗೆಯೇ ಲೇಖಕರೊಡನೆಯೂ ಪಾ.ವೆಂ. ಆಳವಾದ ಸಂಪರ್ಕ ಇಟ್ಟುಕೊಂಡಿದ್ದರು. ಹೊಸ ಹೊಸ ಲೇಖಕರನ್ನು ಸೃಷ್ಟಿಸಿದರು. ಅದರಲ್ಲಿ ಮುಂದೆ ಹಿರಿಯ ಲೇಖಕರೂ ಆದರು ಹೊಸಬರಲ್ಲಿ ಅವಿತಿದ್ದ ವೈಚಾರಿಕ ಶಕ್ತಿಯನ್ನು ಮತ್ತು ಬರವಣಿಗೆಯ ಸಾಮರ್ಥ್ಯವನ್ನು ಕಂಡುಹಿಡಿಯಬಲ್ಲ ಗುಣ ಆಚಾರ್ಯರಲ್ಲಿತ್ತು. ಅನೇಕ ಲೇಖಕರು ಕಸ್ತೂರಿಯಲ್ಲಿ ಸಿಕ್ಕಿದ ಅವಕಾಶವು ತಮ್ಮನ್ನು ಬರಹಲೋಕದಲ್ಲಿ ಬೆಳೆಯುವಂತೆ ಹುರಿತುಂಬಿಸಿತೆಂದು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ದಿ.ಕು.ಶಿ. ಹರಿದಾಸ ಭಟ್ಟ, ಜಿ.ಟಿ. ನಾರಾಯಣ ರಾವ್, ಕೆ.ಟಿ. ವೇಣುಗೋಪಾಲ, ಸಂತೋಷ

ಗುಲ್ವಾಡಿ, ಕೃಷ್ಣಾನಂದ ಕಾಮತ್, ದೊಡ್ಡರಂಗೇಗೌಡ, ಜಯಂತ ಕಾಯ್ಕಿಣಿ, ಭುವನೇಶ್ವರಿ ಹೆಗಡೆ ಪಾ.ವೆಂ.ಕೈಯಲ್ಲಿ ಪಳಗಿ ಬೆಳೆದವರು. ಪಾ.ವೆಂ. ಅವರು ಲೇಖಕರ ವಿಷಯದಲ್ಲಿ ಗುಣೈಕ ಪಕ್ಷ ಪಾತಿಗಳು ಮತ್ತು ನಿರ್ಭಿಡೆಯಿಂದ ತಮ್ಮ ವಿಧಾಯಕ ಸೂಚನೆಗಳನ್ನು ಕೊಡುತ್ತಿದ್ದರು.

ಸಾಹಿತ್ಯ ವ್ಯವಸಾಯ: ಪಾ.ವೆಂ. ಅವರಿಗೆ ಪತ್ರಿಕೋದ್ಯಮವೂ ಒಂದು ಬಗೆಯ ಸಾಹಿತ್ಯವೇ ನಿಜ. ಆದರೆ ಇದರ ಸುಳಿಗೆ ಸಿಕ್ಕಿ ಮತ್ತೆ ಕವಿ ಎಂದು ಸಾಹಿತಿ ಎಂದು ಗುರುತಿಸಲ್ಪಡುವುದು ವಿರಳ. ಕಾರಣ ಪತ್ರಿಕೆಗಳಲ್ಲಿ ಬರೆದುದಕ್ಕೆ ದೊರೆತಷ್ಟು ಜನಪ್ರಿಯತೆ, ಪ್ರಸಾರ ಆತನ ಕಾವ್ಯಗಳಿಗೆ ಸಿಗಲಾರದು. ಸಮಯ ಸಿಕ್ಕಾಗ ಪಾ.ವೆಂ. ಕವಿಯಾಗಿದ್ದಾರೆ. ಕಥೆಗಾರರಾಗಿದ್ದಾರೆ, ಅನುವಾದಕರಾಗಿದ್ದಾರೆ, ವಿಚಾರ ಸಾಹಿತ್ಯದ ನಿರ್ಮಾಪಕರು ಆಗಿದ್ದಾರೆ. ಆದರೆ ಸಾಹಿತಿ ಆಗಬೇಕೆಂಬ ಮನದ ಹಂಬಲ ಅವರಿಗೆ ಇದ್ದಂತೆ ತೋರುವುದಿಲ್ಲ. ಆದರೆ ಪಾ.ವೆಂ. ಸಾಹಿತಿಗಳ ನಡುವೇ ಜೀವಿಸಿದರು. ಅವರ ಮನೋವಿಚಾರಗಳಿಗೆ ಸ್ಪಂದಿಸಿದರು, ವಿಮರ್ಶಿಸಿದರು, ವಿಶ್ಲೇಷಿಸಿದರು. ಹಿರಿಯ, ಕಿರಿಯ, ಮರಿಯ ಸಾಹಿತಿಗಳೆಲ್ಲರಲ್ಲೂ ಅವರಿಗೆ ಸ್ನೇಹ, ಸಂಪರ್ಕ ಇತ್ತು. ಈಚೇಗಿನ ೬೦ ವರ್ಷಗಳಲ್ಲಿ ಪತ್ರಿಕೆಗಳ ಸ್ವರೂಪವೂ ಬದಲಾಗಿದೆ. ಜನಸಾಮಾನ್ಯರಿಗೆ ಮುಟ್ಟುವಂತೆ ಕನ್ನಡ ಗದ್ಯವನ್ನು ತಿದ್ದಿ, ತೀಡಿ ಒಪ್ಪವಾಗಿಡುವ ಕೆಲಸ ನಡೆದಿದೆ. ಪತ್ರಿಕೆಗಳ ಗದ್ಯ ಎಂಬಷ್ಟು ಮಟ್ಟಿಗೆ ಒಂದು ನಿಷ್ಕೃಷ್ಟ ರೂಪ, ಪರಿಮಾರ್ಜಿತ ಆಕಾರ ಕನ್ನಡ ಗದ್ಯಕ್ಕೆ ಒದಗಿದೆ. ಅರ್ಧಶತಮಾನದ ಪತ್ರಿಕೆ ಪ್ರಪಂಚದ ಗದ್ಯೇತಿಹಾಸದಲ್ಲಿ ಪಾ.ವೆಂ. ಅವರಿಗೆ ಒಂದು ನಿರ್ದಿಷ್ಟ ಸ್ಥಾನವಿದೆ.

ಸಮಾಜದ ಓರೆಕೋರೆಗಳನ್ನು ವಿನೋದಪರವಾಗಿ, ಗದ್ಯದ ರೂಪದಲ್ಲಿ ಎರಕ ಹೊಯ್ಯುವುದು ಹೇಗೆಂದು ತೋರಿಸಿಕೊಟ್ಟಿದ್ದಾರೆ. ಅವರ ಭಾಷೆಯ ಶೈಲಿಯ ತೇಜಸ್ಸಿನ ಹಿಂದೆ ಅವರ ವಿಚಾರದ ಸ್ಪಷ್ಟತೆ ಮತ್ತು ವ್ಯಕ್ತಿತ್ವದ ಪೂರ್ವದ ಮಾರ್ದವ ಅಡಗಿರುವುದನ್ನು ಕಾಣುತ್ತೇವೆ. ಅವರ ಗದ್ಯ ಸಾಹಿತ್ಯ ಎಂಥಾ ನೋವಿನ, ದುಃಖದ ವಿಷಯವನ್ನು ನಗೆಯಾಗಿ ತೇಲಿಸಿ ಹೇಳುತ್ತದೆ. ಸಾಹಿತ್ಯೇತಿಹಾಸದಲ್ಲಿ ಎದ್ದು ತೋರುವಷ್ಟು ಸನಾತನ ಸೌಂದರ್ಯವನ್ನು ಅಡಗಿಸಿಕೊಂಡಿರುತ್ತದೆ.

ಪಾ.ವೆಂ. ಸಮಾಜದಲ್ಲಿ ಒಬ್ಬ ವ್ಯಕ್ತಿಯಾಗಿ ಪತ್ರಿಕಾಲಯದಲ್ಲಿ ಉದ್ಯೋಗಿಯಾಗಿ, ಸಮಾರಂಭಗಳಲ್ಲಿ ಭಾಷಣಕಾರರಾಗಿ ಕಾರ್ಯನಿರ್ವಾಹಕರಾಗಿ ಹೊಟ್ಟೆಪಾಡಿಗೆ ಕೆಲಸಗಾರರಾಗಿ, ಸ್ನೇಹಿತರಾಗಿ, ವೈಚಾರಿಕ ಬರಹಗಾರರಾಗಿ ಹರಟೆಗಾರರಾಗಿ, ಮನೆಯ ಜವಾಬ್ದಾರಿಗಳ ಒಂದು ಅಂಗವಾಗಿ ಬದುಕಿನ ಆಗುಹೋಗುಗಳಿಗೆ ಪ್ರತಿಕ್ರಿಯಿಸುವ ಜೀವಸ್ಪಂದನವಾಗಿ ಅಜಾತ ಶತ್ರುವಾಗಿ ಜೀವಿಸಿದವರು. ಅತಿ ಬುದ್ಧಿವಂತರಾಗಿದ್ದರಿಂದ ಅವರನ್ನು ಕಂಡು ಕರುಬಿದ ಜನ ಬೇರೆ ದಾರಿಯಿಂದ ಅವರನ್ನು ಸರಿಸಿದರು. ಅವರಿಗೇನೂ ಅನ್ನದಂಥ ಪರಿಸ್ಥಿತಿಯನ್ನು ಪಾ.ವೆಂ. ನಿರ್ಮಿಸಿದ್ದರು. ಬ್ರಾಹ್ಮಣರಾಗಿದ್ದರಿಂದ ನಮ್ಮ ಕಡೆಯ ಬ್ರಾಹ್ಮಣನಲ್ಲ ಎಂಬ ಕಾರಣದಿಂದ ಸರಿಸಲ್ಪಟ್ಟರು. ತಮ್ಮ ಸುತ್ತಲಿನ ಬ್ರಾಹ್ಮಣರಿಂದಲೇ ಬ್ರಾಹ್ಮಣರಲ್ಲದವರ ಕುಹುಕ ನುಡಿಗಳನ್ನು ದ್ವೇಷದ ಸಂದರ್ಭಗಳನ್ನು

ಅಸಹಕಾರದ ಆಚರಣೆಗಳನ್ನು ಅವರು ನೋಡಬೇಕಾಯಿತು. ಈ ರೀತಿಯ ಸಂದರ್ಭದಲ್ಲೂ ವಿಚಲಿತನಾಗದೆ ಅವರತ್ತ ಬೆಟ್ಟು ತೋರಿಸಿ ಅವರಲ್ಲಿ ಇಂಥ ಕೊರತೆಯಿದೆ ಎಂದು ತೋರಿಸಿ ತಿದ್ದಿದ ಧೈರ್ಯ ಪಾ.ವೆಂ. ಅವರದು.

ಪಾ.ವೆಂ. ಅವರು ೨೨೧ ಸಂಚಿಕೆಯವರೆಗೆ (೧೯೭೫ ಫೆ.) ಸಹ ಸಂಪಾದಕರಾಗಿ **ಕಸ್ತೂರಿ** ಪತ್ರಿಕಾಲಯದಲ್ಲಿ ದುಡಿದರು. ಪಾ.ವೆಂ. ಅವರು ತಮ್ಮ ಕಾಲಕ್ಕೆ ಮೀರಿದ ವಿದ್ವತ್ತು ಅನುಭವ ಹೊಂದಿದ್ದರು. ಅವರನ್ನು ಅವರ ಬರಹಗಳನ್ನು ತಿಳಿಯುವ ಶಕ್ತಿ, ಕುತೂಹಲ ಅವರ ಸಮಕಾಲೀನರಿಗೆ ಇದ್ದಂತೆ ತೋರುವುದಿಲ್ಲ. ಸಮ ವಯಸ್ಕ ಖಾದ್ರಿಯವರನ್ನೂ ತಮ್ಮ ಮೇಲೆ ತಂದಿರುವುದನ್ನು ನೋಡಿದರೆ ಪಾ.ವೆಂ. ಅದನ್ನು ಸಹಿಸಿಕೊಳ್ಳುವುದಾದರೂ ಹೇಗೆ? ಅವಮಾನವನ್ನವರು ಸಹಿಸುವ ಬದಲು, ನಿರ್ಗಮನವನ್ನು ಆರಿಸಿಕೊಂಡರು. ಇದು ಕೂಡ ಪಾ.ವೆಂ. ಅವರ ವಿಶಿಷ್ಟ ಗುಣ ಹೃದಯವೈಶಾಲ್ಯತೆ, ಈ ಔದಾರ್ಯತೆಯನ್ನು ಮೆಚ್ಚುವಂತದ್ದು. ಪಾ.ವೆಂ. ಅವರು ಕೇವಲ ಪತ್ರಿಕೋದ್ಯಮಿಯಲ್ಲ, ಬರೆ ಚಿಂತಕ ಬರೆಹಗಾರನೂ ಅಲ್ಲ, ಸಾಹಿತಿಯೂ ಅಲ್ಲ, ಅವರ ವಿಷಯದಲ್ಲಿ ಮುಖ್ಯವಾಗಿ ಗಮನದಲ್ಲಿಟ್ಟು ಕೊಳ್ಳಬೇಕಾದ ಸಂಗತಿ, ಅವರ ಬರೆಹ, ಸಾಹಿತ್ಯ ಅವರ ಬದುಕಿನಲ್ಲಿ ಕಂಡದ್ದರ ಫಲವೂ ಆಗಿದೆ. ಪಾ.ವೆಂ. ಅವರ ಬದುಕಿನಲ್ಲಿ ದ್ವಂದ್ವವೆಂಬುದು ಇಲ್ಲವೇ ಇಲ್ಲ ತಮ್ಮ ಓದಿನಿಂದ, ಅನುಭವದಿಂದ ಕ್ಷಮಾಶೀಲ ಉದಾರ ತತ್ವಜ್ಞಾನವನ್ನು ರೂಪಿಸಿಕೊಂಡರು. ಈ ಎಲ್ಲ ಕಟು ಮಧುರ ಅನುಭವಗಳು ಅವರ ವೈವಿಧ್ಯ ಬರಹ ಸಾಹಿತ್ಯದ ಅಸಾಧರಣ ವಸ್ತು ವೈವಿಧ್ಯಕ್ಕೆ ಬಂಡವಾಳವಾದವು. ಇಂತಹ ವ್ಯಕ್ತಿ ಕಟ್ಟಿಕೊಟ್ಟ ಜ್ಞಾನ ಮೌಲ್ಯ ಕನ್ನಡಿಗರಿಗೆ ನೀಡಿದ ಅಮೂಲ್ಯ ಕಾಣಿಕೆ.

ಅಡಿಟಿಪ್ಪಣಿಗಳು:

*೧ ಪುಟ ೧೨೮, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೨ ಪುಟ ೧೨೯, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೩ ಪುಟ ೧೩೨, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೪ ಪುಟ ೧೩೩, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೫ ಪುಟ ೧೩೫, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೬ ಪುಟ ೧೪೬, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೭ ಪುಟ ೧೩೭, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

*೮ ಪುಟ ೧೪೬, ಸಂ. ಶ್ರೀನಿವಾಸ ಹಾವನೂರು, **ಉಡುಪಿಯ ಪರಿಸರದಲ್ಲಿ ಪಾ.ವೆಂ.**

ಅಧ್ಯಾಯ – ೩
ಪಾ.ವೆಂ. ಅವರ ಕಾವ್ಯ–ಕಥೆ

೧. ಕವಿತೆಯಲ್ಲಿ ಪಾ.ವೆಂ.

ಅ. ನವನೀರದ ಆ. ಕೆಲವು ಪದ್ಯಗಳು ಇ. ಹೌಸಿಂಗ್ ಕಾಲೋನಿ

೨. ಬಯ್ಯಮಲ್ಲಿಗೆ (ತುಳು ಗೀತಾಂಜಲಿ)

೩. ಪೆಂಗೋಪದೇಶ

೪. ಸುಭಾಷಿತ ಚಮತ್ಕಾರ (ಅನುವಾದ)

೫. ಕಥೆಗಾರ ಪಾ.ವೆಂ.

೧. ಕವಿತೆಯಲ್ಲಿ ಪಾ.ವೆಂ.:

ಪಾ.ವೆಂ. ಅವರು ಸ್ವಭಾವತಃ ಕವಿ ಮನಸ್ಸಿನ ವ್ಯಕ್ತಿ. ಸಂಸ್ಕೃತ, ಇಂಗ್ಲೀಷ, ಕನ್ನಡ, ಹಿಂದಿ ಕವಿತೆಗಳನ್ನು ಅವರು ವಿದ್ಯಾರ್ಥಿಯಾಗಿದ್ದಾಗಲೇ ಓದುತ್ತಾ ಬಂದವರು. ಪಠ್ಯ ಪುಸ್ತಕದಲ್ಲಿಯ ಹಳೆಗನ್ನಡ, ನಡುಗನ್ನಡ, ಓದಿನಿಂದ ಕವಿತೆಯಿಂದ ಪ್ರೇರಿತನಾಗಿ ಅವರು ಕಂದ, ಷಟ್ಪದಿ, ವೃತ್ತ ರೂಪದ ಕವನಗಳನ್ನು ತಮ್ಮ ೧೧ನೇ ವಯಸ್ಸಿನಲ್ಲಿಯೇ ಬರೆಯುತ್ತಾ ಪದ್ಯರಚನೆಯಲ್ಲಿ ಕೈ ಪಳಗಿಸಿಕೊಂಡವರು. ಅವರ ನಲವತ್ತರ ಪ್ರಾಯದ ಹೊತ್ತಿಗೆ ಕವನಗಳು ನವನೀರದವ ಸಂಕಲನದ ಕವನಗಳು (೧೯೩೨)ರಲ್ಲಿ ಸಂಗ್ರಹವಾಗಿದೆ. ಹಳೇ ವಿಧಾನದ ಕವನಗಳನ್ನು ಕೈಬಿಟ್ಟು ತಮ್ಮ ೨೦ನೇ ವಯಸ್ಸಿನ ನಂತರ ಪಾ.ವೆಂ.ರಚಿಸಿದ ತಮ್ಮ ಸ್ವಂತ ರಾಗ, ಧಾಟಿಯ ಕವನಗಳನ್ನು **ಹೊಸಕವಿತೆಯ ಕಲೆ** ಎಂದು ಬರೆದುಕೊಂಡಿದ್ದಾರೆ. ಅಂದರೆ ಅನುಕರಣಶೀಲವಲ್ಲದ ಸಮಕಾಲೀನ ಸಂವೇಧನೆ ಅಥವಾ ಅನಿಸಿಕೆ ತನ್ನದೇ ಆದ ಧಾಟಿ ಧೋರಣೆಯಲ್ಲಿ ಪ್ರಕಟಗೊಳ್ಳತೊಡಗಿದಾಗ ಪಾ.ವೆಂ.ಅವರಿಗೆ ತಮ್ಮ ತನದ ಅರಿವು ಮತ್ತು ಧೈರ್ಯ ಮಾಡಿ ಅವುಗಳನ್ನು **ನವನೀರದ**ದಲ್ಲಿ ಪ್ರಕಟಿಸಿದ್ದಾರೆ. ತಮ್ಮ ಕಾವ್ಯ ಕೃಷಿ ೨೦ ವರ್ಷಗಳಲ್ಲಿ ಹುಲುಸಾದ ಪೈರನ್ನು ಕೊಟ್ಟಿಲ್ಲವೆಂಬ ಅಳುಕು ಎಚ್ಚರ ಅವರಿಗಿದ್ದುದನ್ನು ಗಮನಿಸಿದ್ದರೆ ಕಾವ್ಯದ ಬಗ್ಗೆ ಅವರು ಹೊಂದಿದ ಸ್ವಂತಿಕೆಯ ಹಂಬಲದ ಅರಿವು ನಮಗಾಗುತ್ತದೆ. ಸ್ವಂತಿಕೆಯ ಆಕಾಂಕ್ಷೆ ನಮಗಾಗುತ್ತದೆ. ಇದು ಆಧುನಿಕ ಕವಿಯ ಪ್ರಾಮಾಣಿಕ ಲಕ್ಷಣ. ಕವಿತೆಯನ್ನು ಹುಲುಸಾಗಿ ಕೃಷಿ ಮಾಡಲಿಕ್ಕೆ ತಮಗೆ ಸಾಧ್ಯವಾಗದ್ದನ್ನು ಪಾ.ವೆಂ. ಹೀಗೆ ಹೇಳಿಕೊಂಡಿದ್ದಾರೆ. 'ಜೀವನದ ಬಿರುಗಾಳಿ ನನ್ನನ್ನು ಮೊದಲಿನಿಂದಲೂ ಕಾವ್ಯದ ವ್ಯವಸಾಯಕ್ಕೆ ಪ್ರತಿಕೂಲದವಾದ ಕ್ಷೇತ್ರಗಳಲ್ಲಿಯೇ ಸುತ್ತಾಡಿಸುತ್ತಾ ಬಂದಿತು. ಪ್ರತಿಕೂಲ ಆವರಣದಲ್ಲಿ ಹುಲುಸಾಗಿ ಬೆಳೆಯುವಷ್ಟು ಸತ್ವಶಾಲಿ ಪ್ರತಿಭೆ ನನ್ನದಲ್ಲವೋ ಏನೋ ಎಂದು ಹೇಳಿಕೊಂಡಿದ್ದಾರೆ'. ಪಾ.ವೆಂ. ಗದ್ಯ ಲೇಖಕ ಮತ್ತು ಪತ್ರಿಕಾ ಸಂಪಾದಕ ಕಾರ್ಯ ಮಾಡುತ್ತಿದ್ದ ಆ ಕಾಲದಲ್ಲಿ ನಾಡಿನ ಎಲ್ಲ ಪತ್ರಿಕೆಗಳ ಜೊತೆಗೆ ಅವರ ಸಂಬಂಧವಿತ್ತು. ಧಾರವಾಡದ ಜಯಕರ್ನಾಟಕ ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧ ಕರ್ನಾಟಕ, ಮಾಸ್ತಿ ವೆಂಕಟೇಶ ಅಯ್ಯಂಗಾರರ **ಜೀವನ** ಮತ್ತು ಹುಬ್ಬಳ್ಳಿಯ **ಕರ್ಮವೀರ** ವಾರಪತ್ರಿಕೆ ಇವುಗಳಲ್ಲಿ

ಸುಮಾರು ೧೯೩೨ರ ನಂತರ ಇವರ ಕವನಗಳು ಮೊದಲ ಸಲ ಬೆಳಕು ಕಂಡಿದೆ. ಅವರ ಕವನಗಳು ೧.ನವನೀರದ (೧೯೫೨) ೨.ಕೆಲವು ಪದ್ಯಗಳು (೧೯೭೮) ಈ ಸಂಕಲನದಲ್ಲಿ ಬಂದಿದೆ. ಇವುಗಳ ಒಟ್ಟು ಸಂಖ್ಯೆ ೭೭.

ಪೆಂಗೋಪದೇಶವೆಂಬ ವಿಶಿಷ್ಟ ಮುಕ್ತಕಗಳು ಚೌಪದಗಳು ಹಾಸ್ಯ ವಿಡಂಬನೆಯ ಧಾಟಿಯಲ್ಲಿದ್ದು **ಕಸ್ತೂರಿ, ತುಷಾರ** ಪತ್ರಿಕೆಗಳಲ್ಲಿ ಬಿಡಿ ಬಿಡಿಯಾಗಿ ೧೯೭೬ರ ನಂತರ ಪ್ರಕಟವಾಗಿದೆ. ಇವುಗಳಲ್ಲಿ ಕಾವ್ಯಾಂಶ ತೀರ ಔಪಚಾರಿಕ ರೂಪದ್ದು. ಮುಖ್ಯವಾಗಿ ಇವು ಪದ್ಯ ರೂಪದ ಅನಿಸಿಕೆಗಳು, ಲಹರಿಗಳು.

(ಅ) ನವನೀರದ: ನವನೀರದದಲ್ಲಿ ೪೩ ಕನವಗಳಿವೆ. ಲೇಖಕ ಮಿತ್ರ ಮತ್ತು ಪುಸ್ತಕ ಪ್ರಕಾಶ ಶ್ರೀ. ದ. ಬಾ. ಕುಲಕರ್ಣಿ ನವನೀರವವನ್ನು ತಮ್ಮ ಮನೋಹರ ಗ್ರಂಥ ಬಂಢಾರದಿಂದ ಪ್ರಕಾಶನಗೊಳಿಸಿದರು. ಆಗಿನ್ನು ಪಾ. ವೆಂ. ಹರಟೆ ಬರೆಯುವ ಲಾಂಗೂಲಾಚಾರ್ಯರಾಗಿರಲಿಲ್ಲ. ಅವರ ಗದ್ಯಲೇಖನಗಳು ಪುಸ್ತಕಗಳು ಬಂದಿದ್ದವು ಅಷ್ಟೇ. **ಕಸ್ತೂರಿ**ಯೂ ಹುಟ್ಟಿರಲಿಲ್ಲ. ಅಂದರೆ ಪಾ.ವೆಂ. ಒಬ್ಬ ಭಾವನಿಷ್ಟ, ಕಲ್ಪನಾಶೀಲ, ವ್ಯಕ್ತಿಯಾಗಿ ಅದಕ್ಕಿಂತ ಮುಖ್ಯವಾಗಿ ಸಾಹಿತ್ಯ ವಿದ್ಯಾರ್ಥಿನಿಯಾಗಿ ತಮ್ಮನ್ನು ಗುರುತಿಸಿಕೊಂಡಿದ್ದರು. ನವೋದಯ ಸಂದರ್ಭದ ಗೋವಿಂದ ಪೈ, ದ.ರಾ. ಬೇಂದ್ರೆ, ಕುವೆಂಪು, ಕಡೆಗೊಡ್ಲು ಶಂಕರಭಟ್ಟ, ವಿ.ಸೀ., ರಾಜರತ್ನಂ, ಪು.ತಿ.ನಾ., ಡಿ.ವಿ.ಜಿ., ಗೋಪಾಲಕೃಷ್ಣ ಅಡಿಗರು, ಯಕ್ಕುಂಡಿ ಮೊದಲಾದ ಕವಿಗಳು ನಿರ್ಮಿಸಿದ ಕಾವ್ಯ ವಾತಾವರಣ ಪಾ.ವೆಂ. ಅವರಿಗೆ ಸ್ಫೂರ್ತಿ ಪ್ರೇರಣೆ ಕೊಟ್ಟಿರಬೇಕು. ಬಾಲ್ಯದಲ್ಲಿಯೇ ಕವಿತೆಯನ್ನು ಬರೆಯುತ್ತಿರುವಾಗ ಅದನ್ನು ತಿದ್ದಿ ತೀಡಿ ಪ್ರೇರಿಸಿದ ವ್ಯಕ್ತಿಗಳು ಕಥೆಗಾರ ಸಾಹಿತಿಗಳಾದ ಕೊರಡ್ಕಲ್ ಶ್ರೀನಿವಾಸರಾಯರು ಮತ್ತು ಪಾ.ವೆಂ. ಅವರ ದೂರದ ಸಂಬಂಧಿ ಕನ್ನಡ ವಿದ್ವಾಂಸರಾದ ಶ್ರೀ ರಾಘವೇಂದ್ರ ಬಲ್ಲಾಳರು. ನವೋದಯ ಸಂದರ್ಭದಲ್ಲಿ ವ್ಯಕ್ತಿಶಃ ಸತ್ಯ ಶಿವ ಸೌಂದರ್ಯವನ್ನು ಕಲ್ಪಿಸುವ ಆರಾಧಿಸುವ ಮತ್ತು ಒಂದು ಆದರ್ಶದ ಸಂಭ್ರಮದಲ್ಲಿ ಭಾಷೆಯೊಂದಿಗೆ ನಡೆಸುವ ಅನುಸಂಧಾನವಾಗಿತ್ತು. ಜಡವಾಗಿರುವುದೆಲ್ಲವು ಪ್ರಕೃತಿ ಜಡವಲ್ಲ ಅದರಲ್ಲಿಯೂ ಚೈತನ್ಯ ಅದರಿಂದ ಬರುವ ಜೀವನ ವರ್ಧನೆಯ ಸಂದೇಶ ಇವುಗಳನ್ನು ಕವಿ ಮನಸ್ಸು ಗ್ರಹಿಸಿ ವ್ಯವಹಾರ ಜೀವನದ ಬರಡು ಕಹಿ, ಕಾರ್ಯ, ನಿಸ್ಸಾರಗಳನ್ನು ಎದುರಿಸುವಂತಹ ಮನೋಧರ್ಮವನ್ನು ಕವಿಯಲ್ಲಿ ಉತ್ಪಾದಿಸುವ ಒಂದು ಸಂದರ್ಭ, ವಾಸ್ತವ ಜೀವನವನ್ನು ತಾತ್ವಿಕ ನೆಲೆಗಳಿಂದ ಅರ್ಥೈಸುವ ಮತ್ತು ಅದನ್ನು ಹೆಚ್ಚು ಸಹನೀಯವು ಸುಂದರವೂ ಆಗುವಂತೆ ಮಾಡುವ ಮನೋಧರ್ಮವಿದು. ಪಾ.ವೆಂ. ಅವರಿಗೆ ಇಂಗ್ಲೀಷ ಮತ್ತು ಹಿಂದಿ ಮೂಲಕ ರವೀಂದ್ರರ ಗೀತಾಂಜಲಿ ಪರಿಚಿತವಾಗಿತ್ತು. ಮುಂದೆ ಅವರು ಬಂಗಾಲಿಯನ್ನು ಕಲಿತರು ಮತ್ತು ಮೂಲ ಕವಿತೆಗಳನ್ನು ಓದಿಕೊಂಡರು. ಆರಂಭದ ಅವರ ರಚನೆಗಳಲ್ಲಿ ಉದ್ಗಾರವೆಂಬ ಕವನ ರಚನೆಯಾಗಿದೆ. ಇದು ಕವಿ ರವೀಂದ್ರರ **ಹೇಮೋರ ದುರ್ಭಾಗಾ ದೇಶ** ಎಂಬ

ಕವನದಿಂದ ಸ್ಫೂರ್ತಿಗೊಂಡಿದೆ. ನವೋದಯ ಮನೋಧರ್ಮ ನಿಜವಾಗಿಯು **ಸಾಂಪ್ರದಾಯಿಕ ಮನೋಧರ್ಮವನ್ನು** ತೀವ್ರವಾಗಿ ಬದಲಾಗುವ ವಿಶ್ವದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ವಾತಾವರಣವನ್ನು ಆಧುನಿಕ ನೆಲೆಯಿಂದ ನೋಡಿ ಹೊಸ ಮೌಲ್ಯಗಳನ್ನು ರೂಪಿಸುವ ಮತ್ತು ಪರಿವರ್ತನಾ ಕಾಲದ ಸಂಕಟಗಳಿಗೆ ಧೈರ್ಯದಿಂದ ಎದುರಾಗಿ ಕವಿ ರೂಪಿಸಿಕೊಳ್ಳುವ ಆಧುನಿಕ ಮೌಲ್ಯದ ಪ್ರಯತ್ನವಾಗಿದೆ. ಪಾ.ವೆಂ. ಈ ವಾತಾವರಣದಲ್ಲಿ ತಮ್ಮ ಕವಿತೆಗಳನ್ನು ಬರೆದಿದ್ದಾರೆ.

ಹೂಬುಟ್ಟಿ, ಹೂವಿನ ಹಂಬಲ ಕವನಗಳನ್ನು ಗಮನಿಸಿದಾಗ ಕವಿಗೆ ತನ್ನ ವ್ಯಕ್ತಿತ್ವ ಒಂದು ಶಕ್ತಿಯಿಂದ ಕೂಡಿದ್ದು, ಅದು ವಾಸ್ತವ ಜೀವನದ ಕಟುವಾದ ಸ್ಥಿತಿಯಿಂದ ತನ್ನನ್ನು ಭಿನ್ನವಾಗಿಸಿಕೊಂಡು ಸತ್ಯ, ಶಿವ ಸುಂದರದ ಮೌಲ್ಯವನ್ನು ಅಂಗೀಕರಿಸಿಕೊಂಡು ಜೀವನವನ್ನು ರೂಪಿಸುವ ಆಕಾಂಕ್ಷೆಯಿಂದ ಕೂಡಿದ ಕವಿ ಒಬ್ಬ ಎಚ್ಚೆತ್ತ ಆತ್ಮ, ಪ್ರತಿಭೆ ಪ್ರತಿಭೆಯ ಕಣ್ಣು, ಹೊಸಲೋಕದ ದೃಷ್ಟಿ, ಆಶಾವಾದದ ಹಂಬಲ ಇವುಗಳಿಂದ ಒಂದು ಸಾಮೂಹಿಕ ಆತ್ಮ ಒಂದು ನಿರ್ಮಾಣಗೊಳ್ಳುವ ಸಿದ್ಧತೆ ಕವಿತೆಯಲ್ಲಿ ಕಾಣುತ್ತದೆ.*೧

'ನಿನ್ನ ಉಪವನದೊಳ ಹೊಗುತಲಿ
ಎನಿತೆನಿತೋ ಬಳ್ಳಿಗಳಲಿ
ಎನಿತೆನಿತೋ ಮರಗಿಡದಲಿ ನಿನ್ನಯದೋಹಳಿದೆ
ಅರಳಿದ ಹೂ, ಅರಳುವ ಹೂ,
ಅರಳಿದ ಹೂಗಳ ಕಂಡೆನು
ಕದ್ದವು ಹೃದಯವನವುಗಳು, ಅವುಗಳ ನಾ ಕೊಯ್ದು'

ಕಾವ್ಯಾಭಿವ್ಯಕ್ತಿಯ ರೀತಿಯನ್ನು ಜೀವನವನ್ನು ಕಾಣುವ ಮತ್ತು ರೂಪಿಸುವ ಒಂದು ಅರ್ಥಪೂರ್ಣ ಶಕ್ತಿಯೆಂದು ಪಾ.ವೆಂ. ಗ್ರಹಿಸಿದ್ದಾರೆ. ನವ-ನೀರವ ಈ ಕವನವಿಡೀ ಒಂದು ಹೃದ್ಯವಾದ ರೂಪದ, ಆಕಾಶದಲ್ಲಿ ಅಸೀಮವಾದ, ವ್ಯಾಪ್ತಿ ಮತ್ತು ಅನಂತವಾದ ರೂಪಗಳನ್ನು ಕಾಣಿಸುತ್ತಾ ಚಲಿಸುವ ಮೋಡಗಳನ್ನು ಕವಿ, ತನ್ನ ಮನುಕುಲದ ಹೊಸ ಜೀವನಕ್ಕೆ ತನ್ನ ಪ್ರೇರಕವಾಗುವ ಸಂದೇಶವಾಹಕವಾಗಲೆಂದು ಆಶಿಸುತ್ತಾನೆ. ಮನುಕುಲಕ್ಕೆ ನೆಲವೇ ಆಧಾರ ಆದರೆ ನೆಲದ ಮೇಲೆ, ನೆಲಕ್ಕಾಗಿ ಯುದ್ಧ ನಡೆಯುತ್ತಿವೆ. ಈ ಕವನ ರಚನೆಯಾದಾಗ ಎರಡು ಮಹಾಯುದ್ಧ ವಿಶ್ವವನ್ನು ತಲ್ಲಣಗೊಳಿಸಿತು. ನೆಲಕ್ಕೆ ಇತರ ನಾಲ್ಕು ಭೌತಿಕ ಶಕ್ತಿಗಳ ಸಂಬಂಧ ಮತ್ತು ಅನುಬಂಧ ಸತತವಾಗಿ ಬೇಕು ಅದರಲ್ಲೂ ಆಕಾಶ, ಆಕಾಶವನ್ನು ನೆಲೆಯಾಗಿ ಮಾಡಿಕೊಂಡ ಮೋಡ (ನೀರದ) ತಲ್ಲಣಿಸಿದ ನೆಲಕ್ಕೆ ನೀಡಬೇಕಾದ ಸಾಂತ್ವನ ಏನು? ಎಂತದ್ದು ಎಂಬುದೇ ಈ ಕವನ. ಇನ್ನೊಂದು ಅರ್ಥದಲ್ಲಿ ಇಪ್ಪತ್ತೇಳರ ಹರೆಯದ ಕವಿಗೆ ಹೊಸ ಹೊಸ ಆಸೆ ಆಕಾಂಕ್ಷೆಗಳು ಮೂಡುತ್ತಿವೆ. ಅವುಗಳನ್ನು ವಾಸ್ತವಗೊಳಿಸುವ ಶಕ್ತಿಯುಕ್ತಿ ತನಗೆ ಆ ಮೋಡಗಳಿಂದ ಬರಲಿ ಎಂಬ ಹಾರೈಕೆ ನವನೀರದ ಪದ್ಯಕ್ಕಿದೆ. **ಸುಗ್ಗಿಯ ಹಾಡು** ಇದೇ ರೀತಿಯ ಇನ್ನೊಂದು ಪದ್ಯ.

ಯುದ್ಧ ಎಂಬ ಕವನದಲ್ಲಿ (೧೯೪೧) ಕವಿಯ ಚಿಂತೆ ಚಿಂತನದ ರೂಪ ತಳೆದಿದೆ. **ಬೆಳಕಲ್ಲಿ ಕವನದಲ್ಲಿ** ಪಾ.ವೆಂ. ಚಿಂತನದ ಬೆಳಕಿನೊಂದಿಗೆ ಕತ್ತಲೆಯ ಅಜ್ಞಾನವನ್ನು ನಿವಾರಿಸಲು ಹೊರಟಂತಿದೆ. ಕೃಷ್ಣನ ಕೊಳಲು ಸಾಂಪ್ರದಾಯಿಕ ಕಾವ್ಯದಲ್ಲಿ ಮೆಲಿಂದ ಮೇಲೆ ಬರುವ ಒಂದು ಪ್ರತಿಮೆ **ಮುರಳಿಯ ಹಾಡು** ಎಂಬ ಹಂಸಧ್ವನಿರಾಗದ ಕವಿತೆಯಲ್ಲಿ ಪಾ.ವೆಂ. ಕೃಷ್ಣನ ಮುರಳಿಯ ಇಂದಿನ ಸ್ಥಿತಿಗತಿಯನ್ನು ಪ್ರಸ್ತಾಪಿಸಿದ್ದಾರೆ. **ರೊಟ್ಟಿಯರಾಗ**ದಲ್ಲಿ ವಾಸ್ತವದ ಹಸಿವಿನ ಸಮಸ್ಯೆಗೆ ಕವಿತೆ ಆಹಾರ ಕೊಡುವುದೇ ಎಂಬ ಪ್ರಶ್ನೆಯೊಂದಿಗೆ ಕವಿ ಪ್ರಕೃತಿಯನ್ನು ಕೆಣಕುತ್ತಾರೆ.*೨

'ಏಕೆಲೆ ಕವಿಯೆ? ಏನನು ಬರೆವೆ ?
ಸಂಜೆಯ ಸೊಬಗಿನ ಬಣ್ಣನೆಯೇನು ?
ಕಂಜದ ಕಂಪಿನ ಮನ್ನಣೆಯೇನು ?
ಮಧುವಿನ ಸವಿಯೇ ? – ಅವುದನೊರೆವೆ ?'
ಹೀಗೆ ಕೆಣಕುತ್ತಾ ಕೊನೆಗೆ ಅಯ್ಯೋ ಕವಿಯೇ ನೀನನುಭವಿಯೇ ?
ಸೌಂದರ್ಯದ ದೇವಿಯ ಪೂಜಾರಿ,
ದುಗುಡದ ನೋವಿಗೆ ಸುಯ್ಯನುಕಾರಿ
ಜಗವೊಂದಿದೆ ನರಳುತೆ, ಮರೆಯುವೆಯೆ ?

ಈ ಪ್ರಶ್ನೆಗಳಲ್ಲಿ ಸೌಂದರ್ಯಪ್ರಜ್ಞೆ ಕವಿಗಿದ್ದರೆ ಸಾಕೆ? ಈ ಪ್ರಜ್ಞೆಯೊಂದಿಗೆ ವಾಸ್ತವದ ಜೀವನ ಪ್ರಜ್ಞೆ ಬೇಕಾಗಿದೆಯಲ್ಲವೇ ಎಂಬ ಉತ್ತರವೂ ಇದೆ.

ಕಾವ್ಯಕಲೆ ವ್ಯಕ್ತಿಯ ಪ್ರತಿಭೆಯ ಫಲ ಭಾಷಿಕವಾದ ಕಾವ್ಯ ಕಲೆ ಶಬ್ದಾರ್ಥಗಳ ಸಂಯೋಜನೆಯಿಂದ ಸೃಷ್ಟಿಯಾಗುವ ವಸ್ತು ಭಾವಸತ್ಯದ ಪರಿಣಾಮ. ಇಂದು ಜಡವಲ್ಲ ಇದರೊಳಗಿರುವ ಕಲ್ಪನಾಂಶ ಮಾನವ ಚೇತನದ ಉನ್ನತ ಆಸೆ, ಆಕಾಂಕ್ಷೆಗಳ ಚಿತ್ರಣ. ವಸ್ತು ಜಡವಿರಲಿ ಚೇತನವಿರಲಿ ಅದರೊಳಗಿರುವ ಭಾವಸತ್ಯವನ್ನು ಕವಿ ಮಾನವೀಯತೆಯ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಭಾವದಿಂದ ಗುರುತಿಸುತ್ತಾನೆ ಮತ್ತು ಮಾನವೀಯ ಸಂಬಂಧದ ಶ್ರದ್ಯ ಭಾವನೆಯನ್ನು ಹೃದ್ಯವಾದ ಪದಗಳಲ್ಲಿ ವಿನ್ಯಾಸಗೊಳಿಸುತ್ತಾನೆ. ಅಂದರೆ ಸಾಮಾನ್ಯ ಮನುಷ್ಯನಲ್ಲಿರಬಹುದಾದ ಭಾವಸತ್ಯವನ್ನು ಸುಂದರ ಸತ್ಯವನ್ನಾಗಿ ಕವಿ ಪರಿವರ್ತಿಸುತ್ತಾನೆ. ಇದು ಕವಿಯ ಸಂಶ್ಲೇಷಣಾತ್ಮಕ ನೋಟದ ರೀತಿ ಈ ಸತ್ಯವನ್ನು ಭೌತಿಕವಾಗಿ ಪೃತಃಕರಣ ಮಾಡಿ ನೋಡಬಹುದು. ಆದರೆ ಅದರಿಂದ ಹೊರಡುವ ಸತ್ಯಕ್ಕೆ ಭಾವಸ್ಪರ್ಶವಾಗಲಿ, ಪಂಚೇಂದ್ರಿಯಗಳ ಸ್ಪಂಧನವಾಗಲಿ ಇದ್ದೀತೆ ಎಂಬ ಅನಾದಿ ಕಾಲದ ಪ್ರಶ್ನೆಯನ್ನು ಪಾ.ವೆಂ. ಗಮನದಲ್ಲಿಟ್ಟುಕೊಂಡು ಬರೆದ ಕವನ **ಕವಿ–ವಿಜ್ಞಾನಿಗೆ** (೧೯೫೦).

ಪಾ.ವೆಂ. ಪದ್ಯಗಳ ವೈಚಾರಿಕ ನೆಲೆಯ ಮೇಲೆ ಪದ್ಯ ಬರೆಯಲಾರಂಭಿಸಿದ್ದು ಇಲ್ಲಿಂದಲೇ ಎನ್ನಬಹುದು. ೧೯೫೦ರ ಹೊತ್ತಿಗೆ ನವೋದಯದ ಭಾವಗೀತಾತ್ಮಕ ಅಥವಾ ಭಾವೋದ್ದೀಪಕ ಕವನ ಮಾರ್ಗದಿಂದ ಕನ್ನಡ ಕವಿಗಳು ಪ್ರಗತಿಶೀಲ

ಮನೋಭಾವಕ್ಕೂ ನವ್ಯ ದೃಷ್ಟಿಗೂ ಪರಿವರ್ತಿತರಾಗತೊಡಗಿದರು.*[೩]

'ಹಸು ಕರುವ ನೆಕ್ಕುತ್ತ ನಿಂತಾಗ
ನಾನದರ ವಾತ್ಸಲ್ಯಕ್ಕೆ ಮುಗ್ಧನಾಗಿ ಅರೆಮುಗಿದ ಕಣ್ಣಾಗಿರಲು,
ತಿವಿದು ಕಿವಿಯಲಿ ನನ್ನ ಸಂಶೋಧನೆಯ ಫಲಿತಾಂಶ ಶಲ್ಯವನು
ಹೆಳದರು, ವಿಜ್ಞಾನಿ,
'ಈ ಕರುವ ಮೈಯ ಉಪ್ಪಿನ ರುಚಿಗೆ
ನೆಕ್ಕುತಿಹುದೇ ತಾಯಿ ಎಂದು;
ಕರುವಿನಾ ಮೈಯ ಒಂದೊಂದು ಚದುರಿಂಬಿನಲಿ
ದಿನವೊಂದರಲಿ ಹಸುವಿಂಗೆ ಒಂದೌಂಸಿನಲಿ
ಇಂತಿಷ್ಟು ಲಕ್ಷದಂಶದ ಉಪ್ಪುದೊರೆವುದೆಂ' ದೆನಗೆ
ಹೇಳಬೇಡವೋ ನಮೋ ನಿನಗೆ!'

ಎಂದು ನವ್ಯ ಕವಿ ವಿಜ್ಞಾನಿಗೆ ಮೂದಲಿಸುತ್ತಾನೆ. ವಸ್ತುಸತ್ಯವನ್ನು ವಿಶ್ಲೇಷಿಸಿ ಹೇಳುವ ವಿಜ್ಞಾನಿಯ ಶೈಲಿ ಶುಷ್ಕವೂ, ರಸಹೀನವೂ ಆದುದು. ಭಾವ ಸತ್ಯವನ್ನು ಗುರುತಿಸುವ ಕವಿ ಸಂಶ್ಲೇಷಣಾತ್ಮಕ ವರ್ಣನೆ ರಸಪೂರ್ಣವಾದದ್ದು ಪಂಚೇಂದ್ರಿಯಗಳನ್ನು ಜಾಗೃತವಾಗಿಟ್ಟುಕೊಂಡ ಕವಿ ಭೌತ ಸತ್ಯದಲ್ಲಿ ಅಡಿಗಿರುವ ರುಚಿ, ವಾಸನೆ, ಸುಶ್ರಾವ್ಯ, ಪುಳಕ ಅಂದಚೆಂದಗಳನ್ನು ಅನುಭವಿಸುತ್ತಾ ತಕ್ಕ ಶಬ್ಧಗಳಲ್ಲಿ ಪುನರ್ ಸೃಷ್ಟಿಸುತ್ತಾನೆ. ಈ ಭಾವಲೋಕ ಹೆಚ್ಚು ಮಾನವೀಯವಾದದ್ದು. ಅಂತರಗಂದ ಶ್ರೀಮಂತಿಕೆ ಹೆಚ್ಚಿಸುವಂತದ್ದು ಅಂತೆಯೇ ಕವಿ*[೪]

'ಈ ಬ್ರಹ್ಮಸೃಷ್ಟಿಯೇ ಸಾಕು ನನಗೆ
ಬೆರಗಿನಲಿ ಬಾಯಿ ತೆರೆಸೆ,
ನಿನ್ನ ಸೂತ್ರವ ಕಂಡು ದಿಙ್ಮೂಢನಾದೆನ್ನ ತೆರೆದ ಬಾಯಿ
ಮತ್ತೆ ಮುಚ್ಚದು, ಒಮ್ಮೆ ಮಾಡಿಬಿಡು ಮಾಫಿ,
ನಾನು ಬಡಪಾಯಿ!'

ಎಂದು ಕವಿ ವಿನೋದವಾಗಿ ಹೇಳುತ್ತಾರೆ.

ಅದರಲ್ಲಿಯ ಉದ್ದೇಶ ಕವನವೂ ಕೂಡ ಈ ಜಗತ್ತಿನ ಸೃಷ್ಟಿ, ಮನುಷ್ಯ ಜೀವನ ಇವುಗಳ ಅರ್ಥವೇನು? ಇದಕ್ಕಾಗಿ ನಾವು ಮಾಡುವ ಊಹೆಗಳು ಅದರಿಂದ ಸಿಗುವ ಉತ್ತರಗಳು ಹೇಗಿರುತ್ತವೆ ಎಂಬ ಚರ್ವಿತ ಚರ್ವಣ ಇಲ್ಲಿದೆ. **ಸತ್ಯದರ್ಶನ** ಎನ್ನುವ ಸಾನೇಟ್‌ನಲ್ಲಿ ಸತ್ಯದ ಹುಡುಕಾಟ ಹೇಗಿರುವುದೆಂಬ ವಿಡಂಬನೆಯಿದೆ. ಪಾ.ವೆಂ.ಚಿಂತನ ಪರ ಕವಿಯಾಗಿ ಇಲ್ಲಿ ತಲುಪಿದ ವಿಚಾರದ ನೆಲೆ "ಸತ್ಯದಾಲೋಕದಲೆ ಸಂಚಾರ ನಮ್ಮದಿರಲು ಶಿವದ ಸುಂದರದಿ ಸತ್ಯವ ಕಾಂಬುದದುವೆ ಮಿಗಿಲು!" ನವನೀರದದ ಕೊನೆ ಕೊನೆಯ ಕವನಗಳ ಸಮಕಾಲೀನ ಆಗುಹೋಗುಗಳಿಗೆ ಪಾ.ವೆಂ. ಸ್ಪಂಧಿಸಿದ ರೀತಿಯಲ್ಲಿದೆ. ಗಾಂಧಿ ಹತ್ಯೆಯ ನಂತರ ತಲ್ಲಣಗೊಂಡ ಕವಿ ಬರೆದ ಸಾನೆಟ್ **ಅಮರ ಮಹಾತ್ಮ***[೫]

'ಕ್ರಿಸ್ತನಾದನು ಅಮರ ಗಾಂಧಿಯಾದನು ಅಮರ
ಮಾನವ್ಯ ಮಾತ್ರ ಕಡೆಗೂ ಅಸುರ ಬರಿ ಅಸುರ!'

ಹಾಸ್ಯ ಪ್ರವೃತ್ತಿಯ ಪಾ.ವೆಂ. ಅವರ ಒಂದು ರೊಮ್ಯಾಂಟಿಕ್ ಪದ್ಯ **ಒಂದು ಕಾಗದ**. ಪಾ.ವೆಂ. ಅವರಿಗೆ ಕಾವ್ಯಗಟ್ಟುವುದು ಒಂದು ಕರ್ಮವಲ್ಲ, ಅವರ ಮನೋಧರ್ಮ ತನ್ನ ಎದೆಯು ಮಿಡಿಯುವ ಸತ್ಯವನ್ನು (ಭಾವಸತ್ಯ) ಮುಚ್ಚಿಡಲಾಗದೆ ಅದನ್ನು ಅಂತರಾತ್ಮಕ್ಕೆ ಪೂಜೆ ಮಾಡಿ ನೈವೇದ್ಯವಾಗಿ ಅರ್ಪಿಸುವ ಗಾಢ ಭಕ್ತಿ ಕವಿಯದು. ತನ್ನ ಹೃದಯ ತಂತಿ ಮಿಡಿದ ಸಂಗೀತ ಕಾವ್ಯ ಇಂತಹ ಕಾವ್ಯರಚನೆಯ ಹೊಸ ಬಗೆಯನ್ನು ಅರ್ಥಮಾಡಿಕೊಳ್ಳದೆ ತೆಗಳುವ ಓದುಗರಿಗೆ ಪಾ. ವೆಂ. ಕೊಡುವ ಎಚ್ಚರಿಕೆ 'ಹೊಸ ಕವಿತೆಯನ್ನು ತೆಗಳುವವರಿಗೆ ಕವನ' ಇದೇ ಭಾವದ ಇನ್ನೊಂದು ಕವನ **ವಿಮರ್ಶಕ** ಎಂಬುದಾಗಿದೆ. ಪಾ.ವೆಂ. ಕಥನ ಕವಿಯಾಗಿಯೂ ಪಡೆದ ಯಶಸ್ಸು **ಸಂಯುಕ್ತ** ಕವನದ ಶ್ರೇಯಸ್ಸು ಕವನದ ಛಂದರೂಪ ಧಾಟಿಯ ಸಹಜತೆ ಕವನಕ್ಕೆ ಜೀವಂತಿಕೆ ಕೊಟ್ಟಿದೆ.

ಪಾ.ವೆಂ. ೧೯೫೨ರ ನಂತರ ಪದ್ಯ ರೂಪದಲ್ಲಿ ಬರೆದದ್ದೇ ಕಡಿಮೆ, ಪತ್ರಿಕಾ ಲೇಖನಗಳ ಸಾಂದರ್ಭಿಕ ವರದಿಗಳು ಸಂದರ್ಶನಗಳು ಅವರ ವೈಯಕ್ತಿಕ ಸಮಯವನ್ನು ಮತ್ತು ಒಳನೋಟಗಳ ಸಮಯವನ್ನು ಕಬಳಿಸಿದಂತಿದೆ. ಅವರು ಆಗಾಗ ಬರೆದ ಪದ್ಯಗಳು ೩೩ ಪದ್ಯಗಳು ೧೯೭೮ರಲ್ಲಿ ಕೆಲವು ಪದ್ಯಗಳು ಹೆಸರಿನಿಂದ ಸಂಕಲನವಾಗಿ ಬಂದಿವೆ. ಕನ್ನಡ ಪದ್ಯರಚನೆಯ ಒಲವು ನಿಲುವುಗಳಲ್ಲಿ ಕ್ಷಿಪ್ರವೇಗದ ಬದಲಾವಣೆಗಳು ಅಥವಾ ಪ್ರಯೋಗಗಳು ಈ ಅವಧಿಯಲ್ಲಿ ಆಗಿವೆ. ಪೆಜಾವರ ಸದಾಶಿವರಾಯ. ವಿ.ಜಿ. ಭಟ್ಟ, ಸುರಂ ಎಕ್ಕುಂಡಿ, ಗಂಗಾಧರ ಚಿತ್ತಾಲ, ಗೋಪಾಲ ಕೃಷ್ಣ ಅಡಿಗ ಮತ್ತು ವಿ.ಕೃ.ಗೋಕಾಕ ಇವರೆಲ್ಲ ನವ್ಯಧಾಟಿಯ ನವ್ಯ ಧೋರಣೆಯ ಪದ್ಯಗಳನ್ನು ಹೊರಹಾಕಿದರು. ಇಂಗ್ಲೀಷ ಆಧುನಿಕ ಕಾವ್ಯದಿಂದ ಪ್ರೇರಿತವಾದ ಇವರೆಲ್ಲಾ ಕವಿವ್ಯಕ್ತಿಯನ್ನು ಹೆಚ್ಚು ಸ್ವತಂತ್ರ್ಯ ಮತ್ತು ಹೆಚ್ಚು ವೈಯಕ್ತಿಕ ಎಂದೇ ಭಾವಿಸಿದವರು. ವ್ಯಕ್ತಿಯ ಪ್ರಪಂಚದ ಆಳ ಮತ್ತು ಎತ್ತರಗಳನ್ನು ಅಳೆಯುವ ಮುಟ್ಟುವ ಮಹತ್ವಾಕಾಂಕ್ಷೆ ನವ್ಯ ಕವಿಗಳಿಂದ ಪ್ರಯೋಗವಾಗತೊಡಗಿತು. ಕಾವ್ಯದ ವಿಷಯ ಛಂದಸ್ಸು, ದೃಷ್ಟಿಕೋನದ ವಿಲಕ್ಷಣತೆಗಳಲ್ಲಿ ಕವಿಯ ಪ್ರತ್ಯೇಕತೆ ವಿಶಿಷ್ಟತೆ ಎದ್ದು ಕಾಣತೊಡಗಿತು. ರೋಮ್ಯಾಂಟಿಕ್ ಅನ್ನಬಹುದಾದ ಆದರ್ಶ ದೃಷ್ಟಿಗೆ ಹೊರತಾದ ವಾಸ್ತವಿಕ ನಿಷ್ಟುರತೆ ಇಲ್ಲಿ ವ್ಯಕ್ತವಾಗತೊಡಗಿತು. ಪಾ.ವೆಂ. ಒಬ್ಬ ಓದುಗನಾಗಿ, ಬೆಳೆಯಬಲ್ಲ ಕವಿಯಾಗಿ ನವ್ಯವನ್ನು ಸ್ವೀಕರಿಸಿದರು ಎಂದಿನಿಂದಲೋ ಅವರದು ಮುಕ್ತವಿತ್ತು ಬಹುತ್ವ (plurality)ವನ್ನು ಸ್ವೀಕರಿಸುವ ಮನೋಧರ್ಮ. ಇದರಿಂದಾಗಿಯೇ ಅವರು ಸಾಹಿತ್ಯದಲ್ಲಿ ಒಬ್ಬ, ಧೀಮಂತ ಲೇಖಕನಾಗಿ ಇಂದಿಗೂ ಪ್ರಸ್ತುತರೆನಿಸುತ್ತಾರೆ. (ಆ) **ಕೆಲವು ಪದ್ಯಗಳು** ಸಂಕಲನಕ್ಕೆ ಎರಡು ಮಾತು ಬರೆಯುತ್ತಾ "ನನ್ನನ್ನು ನವ್ಯ ಎಂದುಕೊಳ್ಳಲಾರೆ ರೋಮ್ಯಾಂಟಿಕ್ ಕಾಲಕ್ಕೆ ಸಲ್ಲದ ಒಂದು ವ್ಯಂಗ ದೃಷ್ಟಿ ಇಲ್ಲಿ ಕಾಣಿಸುತ್ತಿದ್ದರೆ ಅದಕ್ಕೆ ನಾನು ನವ್ಯತ್ವಕ್ಕೆ ಮತಾಂತರವಾದದ್ದು ಕಾರಣವಾಗಿರದೆ,

ಎಂತ ಬ್ರಾಂತ ಆದರ್ಶವಾದಿಯ ಕಣ್ಣುಗಳ ಪೊರೆಯನ್ನು ಕಳಚಬಲ್ಲ ಪತ್ರಿಕೋದ್ಯೋಗಕ್ಕೆ ಇಳಿದದ್ದು ಒಂದು ಕಾರಣವಾಗಿರಬಹುದು. ಇಲ್ಲಿ ಅವರು ನವನೀರದದ ತಮ್ಮ ಸಮಯವನ್ನು ರೋಮ್ಯಾಂಟಿಕ್ ಎಂದು ಗುರುತಿಸಿಕೊಂಡಿದ್ದಾರೆ. ಅಂದರೆ ಕನ್ನಡದ **ನವ್ಯಕ್ಕೆ** ಪೂರ್ವಾಗ್ರಹವಾದದ್ದು, ರೋಮ್ಯಾಂಟಿಕ್ ಸಂಪ್ರದಾಯವೆಂಬ ಅಭಿಪ್ರಾಯ ಇಲ್ಲಿದೆ.ನಿಜವಾಗಿ ನೋಡಿದರೆ ಸುಮಾರು ೧೯೨೦ರಿಂದ ೧೯೫೨ರ ವರೆಗಿನ ಗೋವಿಂದ ಪೈ, ಬೇಂದ್ರೆ, ಕುವೆಂಪು, ಪಿ.ಸೀ., ಪು.ತಿನಾ., ಮಧುರ ಚೆನ್ನ ಮತ್ತು ನಂತರದ ಎಕ್ಕುಂಡಿ, ನರಸಿಂಹಸ್ವಾಮಿ ಶಿವರುದ್ರಪ್ಪ, ಕಣವಿ, ಕರ್ಕಿ ಇವರ ಕಾವ್ಯದ ಸಮಯವನ್ನು ರೋಮ್ಯಾಂಟಿಕ್ ಎಂದು ಕರೆಯುವುದು ಒಂದು ಸರಳೀಕರಣ. ವಾಸ್ತವದಲ್ಲಿ ರಾಷ್ಟ್ರೀಯ ಚಳವಳಿಯ ಆ ಕಾಲ ನವೋದಯದ ವಿವಿಧ ಆಸೆ, ಆಕಾಂಕ್ಷೆಗಳ ದೃಷ್ಟಿಕೋನಗಳ ಸಮಯ. ಈ ಸಮಯದ ಕವಿತೆಯ ಆದರ್ಶ ವಾಸ್ತವತೆಯ ಮುಖಾಮುಖಿಯಾಗಿ ಬಂದಿತು. ರೋಮ್ಯಾಂಟಿಕ ಎನ್ನುವಷ್ಟು ವೃಷ್ಟಿ ಪ್ರಜ್ಞೆಯ ಚೌಕಟ್ಟಿನಲ್ಲಿ ಇರಲಿಲ್ಲ ಅದು ಸಮಷ್ಟಿ ಪ್ರಜ್ಞೆಯ ಆಧುನಿಕ ಸ್ವರೂಪವನ್ನು ಅಳವಡಿಸಿಕೊಂಡಿತ್ತು. ಪಾ.ವೆಂ. ಇದನ್ನು ವಿವೇಚನೆಗೆ ಒಳಪಡಿಸದೆ ಸ್ಥೂಲವಾಗಿ ಒಂದು ದುಂಡುಸುತ್ತಿನ ಮಾತಾಗಿ ರೋಮ್ಯಾಂಟಿಕ್ ಮತ್ತು ನವ್ಯವನ್ನು ಪ್ರಸ್ಥಾಪಿಸುತ್ತಾರೆ. ಪಾ.ವೆಂ. ಅವರಿಗೆ ನವ್ಯಕಾವ್ಯ ಬಂದದ್ದು ಕನ್ನಡದ ಪರಂಪರೆಯ ಒಂದು ಒಳ್ಳೆಯ ಬೆಳವಣಿಗೆಯಾಗಿ ಕಂಡಿದೆ. ನವ್ಯವೂ ಐತಿಹಾಸಿಕ ಅಗತ್ಯವಾಗಿ ಬಂದಿತ್ತೋ? ವೈಯಕ್ತಿಕ ಅಗತ್ಯವಾಗಿ ಬಂದಿತ್ತೋ? ಎಂಬ ಅನುಮಾನ ಈಗಾಗಲೇ ವಿಮರ್ಶಕದಿಂದ ಸಾಕಷ್ಟು ಚರ್ಚೆಗೆ ಒಳಗಾಗಿದೆ. ಪಾ.ವೆಂ. ಇವೆರಡೂ ಅಂಶಗಳನ್ನು ಒಳಗೊಂಡಂತೆ ತಮ್ಮ ಕವಿ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದು ಕೆಲವು ಪದ್ಯಗಳಿಂದ ವ್ಯಕ್ತವಾಗುತ್ತದೆ. ಯಾವನೇ ಸಹಜ ಕವಿ ತನ್ನ ಕಾಲದ ಕಾವ್ಯಾಭಿವ್ಯಕ್ತಿಯ ಪ್ರವೃತ್ತಿಗಳಿಗೆ ಅನುಗುಣವಾಗಿ ತನ್ನನ್ನು ಪ್ರಸ್ತುತಗೊಳಿಸಿಕೊಳ್ಳುತ್ತಾನೆ.

ನವನೀರದಂತಹ ರೂಪಕಗಳೊಂದಿಗೆ ಕವಿತೆ ಬರೆಯುತ್ತಿದ್ದ ಪಾ.ವೆಂ. ನವೋದಯದ ಕವಿಗಳ ಹಾಗೆ ಭಾವಗೀತಾತ್ಮಕ ಶೈಲಿಯಲ್ಲಿ ಬರೆಯುತ್ತಿದ್ದರು. ೧೯೫೩ರಲ್ಲಿ ಅವರು ಬರೆದ **ನಲುವತ್ತರ ನೆರೆಯಲ್ಲಿ** ಪದ್ಯ ಮುಕ್ತ ಛಂದಸ್ಸಿನಲ್ಲಿದೆ. ಹೆಚ್ಚಾಗಿ ಗದ್ಯಲಯವನ್ನು ಬಳಸಿಕೊಂಡು ಸಡಿಲು ಬಂಧದಲ್ಲಿ ಒಂದು ಅನಿಸಿಕೆ ಅಥವಾ ಅನುಭವವನ್ನು ಹೇಳುವ ಕ್ರಮ ಇಲ್ಲಿದೆ. ಕವಿ ಆಧುನಿಕ ಸಂದರ್ಭದಲ್ಲಿ ಯಂತ್ರ ತಂತ್ರಗಳ ನಡುವೆ ಉದರಂಭರಣಕ್ಕಾಗಿ ನಗರ ಜೀವನದಲ್ಲಿ ಕಾಲಯಾಪನೆ ಮಾಡುತ್ತಿದ್ದಾನೆ. ಅವನಿಗೆ ೪೨ ವರ್ಷಗಳು ಏನು ಸಾಧನೆಯಿಲ್ಲದೆ ಗತಿಸಿಹೋಗಿವೆ ಎಂಬ ಎಚ್ಚರ ಉಂಟಾಗಿದೆ. ಕಾಲದ ಎದುರು ಅಸಾಹಯಕ ಏನೋ ಸಾಧನೆ ಮಾಡಬೇಕೆಂಬ ಕಿಂಚತ್ ಕಲ್ಪನೆ ಇದೆ. ಅದೊಂದು ಕ್ಷೀಣ ಆಸೆ. ಏನು ಮಾಡದಿದ್ದರೂ ಜೀವನದ ಬ್ರೇಕಿಲ್ಲದ ಕಾರಿನಲ್ಲಿ ಕುಳಿತು ತಾನು ಆ್ಯಕ್ಸಿಡೆಂಟ್ ಆಗದಂತೆ, ಇರುವ ಪೆಟ್ರೋಲ್ ತೀರುವ ಮುಂಚೆ ಗುರಿ ತಲುಪಿದರಾಯಿತು ಎಂದು ಹಗುರಾಗಿ ಯೋಚಿಸುತ್ತಾನೆ. ಜೀವನ ಈ ಪಯಣಕ್ಕೆ ಜೊತೆಗಾತಿಯಾಗಿ

ಬಂದಿರುವ ಹೆಂಡತಿಯನ್ನು ಅನುಮಾನದಿಂದ ಮಾತನಾಡಿಸುತ್ತಾನೆ. ಕಳೆದ ಹತ್ತು ವರ್ಷದ ದಾಂಪತ್ಯ ಜೀವನದಲ್ಲಿ ತಾನು ಸಫಲನಾಗಿದ್ದೇನೆ ಎಂಬುದಕ್ಕೆ ನಲ್ಲೆಯೊಂದಿಗೆ ಸಾಧಿಸಿದ ಪ್ರೇಮ ಸಂಯೋಗದ ಯೋಗವೇ ಎಂದು ಹೇಳಿಕೊಳ್ಳುತ್ತಾನೆ. ಟಿ. ಎಸ್. ವಿಲಿಯಟನ್ 'A love song of tolfin protrek' ಎಂಬ ಕವನದ ಛಾಯೆ ಇಲ್ಲಿ ಕಾಣುತ್ತದೆ. ಈ ಕವನವನ್ನು ೧೯೫೮ರಲ್ಲಿ ವಿ.ಕೃ.ಗೋಕಾಕರು ಸಂಪಾದಿಸಿದ **ನವ್ಯ ಧ್ವನಿ** ಎಂಬ ಪ್ರಾತಿನಿಧಿಕ ಕವನಗಳ ಸಂಕಲನದಲ್ಲಿ ಅವಕಾಶ ಪಡೆದಿದೆ. ಗೋಕಾಕರು ಪಾ.ವೆಂ. ಆಚಾರ್ಯರನ್ನು ನವ್ಯ ಕವಿ ಗುಂಪಿಗೆ ಸೇರಿಸಿ ಮನ್ನಣೆ ಕೊಡುತ್ತಾರೆ. **ಅನಿಸುತಿದೆ** ಎಂಬ ನಾಲ್ಕು ನಾಲ್ಕು ಸಾಲಿನ ಐದು ನುಡಿಗಳ ಪದ್ಯ ಕೂಡ ಒಬ್ಬ ಮಧ್ಯಮ ವರ್ಗದ ಸಾಮಾನ್ಯ ತರುಣ ಕ್ಷಣಿಕ ಭಾವನೆಯನ್ನು ಹೃದ್ಯಮಯ ರೀತಿಯಲ್ಲಿ ಕೆಡಿಸುತ್ತದೆ. ಇಲ್ಲಿಯ ಉಪಮೆಗಳು ರೂಪಕಗಳು ಆಡುಮಾತಿನ ರೀತಿಯಲ್ಲಿದ್ದು ಸವಕಲುತನದಿಂದ ಬಿಡಿಸಿಕೊಂಡು ತಾಜಾತನವನ್ನು ಪ್ರತಿನಿಧಿಸುತ್ತವೆ. ಅಂತ್ಯ ಪ್ರಾಸದ ಹೊಂದಾಣಿಕೆ ಕವನಕ್ಕೆ ಗೇಯತೆಯ ಸೊಗಸನ್ನು ನೀಡಿದೆ. **ಬಾಳಿಗೊಂದು ರುಚಿಯಾದರೆ ಸಾವು ಬೇರೆ ಬೆಲ್ಲ**ವೆಂದು ಕಲ್ಪಿಸುವ ಕವಿಯ ಮನಸ್ಥಿತಿ ಲೌಕಿಕವಾಗಿ ನಿರಾಳವಾಗಿರಬೇಕು ಎಂಬುದನ್ನು ಧ್ವನಿಸುತ್ತದೆ.

ಪಿ. ಲಂಕೇಶ ೧೯೭೦ರಲ್ಲಿ ಅಕ್ಷರ, ಹೊಸಕಾವ್ಯ.... ಎಂಬ ನವ್ಯ ಕವಿತೆಗಳ ಪ್ರಾತಿನಿಧಿಕ ಸಂಕಲವನ್ನು ಹೊರತಂದಾಗ ಆಚಾರ್ಯರ ಎರಡು ಕವನಗಳನ್ನು ಉಪೋದ್ಘಾತ್ತ ನವತ್ತರ ನೆರೆಯಲ್ಲಿ ಬದಲಾವಣೆ ಆರಿಸಿಕೊಂಡಿದ್ದರು. ನವ್ಯ ಧ್ವನಿಯಲ್ಲಿದ್ದ ಅನೇಕ ಕವನಗಳಿಗಿಂತ ಭಿನ್ನರಾದ ಹೊಸಕವಿಗಳು ಲಂಕೇಶರಿಗೆ ನವ್ಯರಾಗಿ ಉಳಿದು ಬೆಳೆದದ್ದು ಇಲ್ಲಿ ಕಂಡಿದೆ. ವಿ.ಕೃ.ಗೋಕಾಕರವರ ನವ್ಯ ಕಾವ್ಯದ ವ್ಯಾಖ್ಯಗಿಂತ ತೀರ ಭಿನ್ನವಾದ ಧೃಷ್ಟಿಕೋನ ಲಂಕೇಶರಿಗೆ ಇದ್ದುದು ಅವರ ಸಂಪಾದಕೀಯದಲ್ಲಿ ಪ್ರಮುಖವಾಗಿ ವ್ಯಕ್ತವಾಗಿದೆ. ಲಂಕೇಶರ ಪ್ರಕಾರ ನವ್ಯ ಕವಿಯಾದವನು ತನ್ನ ವಸ್ತುವನ್ನು ತನ್ನದೇ ಆದ ಉಳಿದೆಲ್ಲದರಿಗಿಂತ ಭಿನ್ನವಾದ ರೀತಿಯಲ್ಲಿ ಪ್ರಸ್ತುತಪಡಿಸಬೇಕು. ಕವಿಯ ಏಕತಾನತೆ, ಸವಕಲು ಧ್ಯೇಯಧೋರಣೆ, ಪದಗಳ ಸಡಿಲುತನ ಇವಕ್ಕೆ ಹೊರತಾದ ರೀತಿಯಲ್ಲಿ ತುಂಟತನ ಮೂರ್ತಿಭಂಜಕತೆಯಿಂದ ಆದರ್ಶವಾದುದನ್ನು ಲವಲವಿಕೆಯ ನಿರೂಪಣೆ ಆದರ್ಶವಾದುದನ್ನು ಮತ್ತು ಶಾಕ್ ಕೊಡುವ ರೀತಿಯಲ್ಲಿ ನೋಡುವುದು ಮತ್ತು ತೋರಿಸುವುದು. ಪಾ.ವೆಂ. ಆಚಾರ್ಯರು ಸಂಪ್ರದಾಯಿಕ ವ್ಯವಸ್ಥೆಯಲ್ಲಿದ್ದರು ಕುಟುಂಬ ಮತ್ತು ಉದ್ಯೋಗ ಅವರ ಪಾಲಿಗೆ ಹಾಗಿದ್ದವು. ಮಾನಸಿಕವಾಗಿ, ವ್ಯಕ್ತಿಪ್ರಜ್ಞೆಯ ಸ್ಥಿತಿಯಲ್ಲಿ ಅವರದು ಇಡೀಯಾಗಿ ಮುಕ್ತ ಹಾಗೂ ಸ್ವಚ್ಛಂದ ಪ್ರವೃತ್ತಿ ಇದು ಅವರ ಕವಿತೆಗಳಲ್ಲಿ ಲಂಕೇಶ್ ಕಂಡಿದ್ದರಿಂದ ಗೋಪಿಯಂತಹ ಕವನವನ್ನು ಆರಿಸಿಕೊಂಡಿದ್ದರು. ಗೋಪಿಕಾ ಸ್ತ್ರೀಯ ಉಪಪ್ರಜ್ಞೆಯಲ್ಲಿ ಗೋಪಾಲನ ಧ್ಯಾನವೇ ಯಾವಾಗಲು ಆಕೆ ಲಜ್ಜಾವತಿಯಾಗಿ ಹೊರಗೆ ತೋರಿದರೂ ಮೈ ಮನಗಳ ಅಂತರಾಳದಲ್ಲಿ ಆಕೆ ಗೋಪಾಲನನ್ನು ನಗ್ನ ಸತ್ಯವಾಗಿ ಒಪ್ಪಿಕೊಂಡಳು. ಹೌಸಿಂಗ್ ಕಾಲನಿ ನಗರ ಜೀವನದ ಶಿಸ್ತು ಮತ್ತು ಯಾಂತ್ರಿಕ

ಯೋಜನೆಯಲ್ಲಿ ಉಂಟಾಗುವ ಗೊಂದಲ ಮತ್ತು ಬದಲಾದ ಪರಿಸ್ಥಿತಿಯಲ್ಲಿ ಬದುಕನ್ನು ಹೇಗೆ ನಡೆಸುತ್ತಿದ್ದಾರೆ ಎನ್ನುವ ನೋಟ ಕವಿಯದು. ಇದೊಂದು ಅಣಕು ಕವಿತೆ. ನಮ್ಮ ಜನ ಭಾಷೆ, ಸಂಸ್ಕೃತಿ, ಆಚರಣೆ, ವೈವಿಧ್ಯವನ್ನು ಬಿಟ್ಟು ಪಾಶ್ಚಾತ್ಯ ಸಂಸ್ಕೃತಿಯ ಕಡೆ ತಮ್ಮ ಬದುಕನ್ನು ನಡೆಸುತ್ತಿದ್ದಾರೆ. ಪಾಶ್ಚಾತ್ಯರ ಕಡೆ ಒಲವು ಹೆಚ್ಚು, ಇದರಿಂದ ಬದುಕಿನ ಶೈಲಿ ವಿಚಿತ್ರವಾಗುತ್ತಿದೆ. ಜೀವನ ವಿಧಾನ ಕೃತಕವಾಗಿತ್ತು. ಅನುಕರಣೆಯ ಹೆಚ್ಚು[೬]

'ನಮ್ಮೀ ಹೌಸಿಂಗ್ ಕಾಲನಿಯಲ್ಲಿ
ಹೆಂಡರುಗಳ ಎಲ್ಲ ಪ್ಯಾಶನ್ನೂ
ಈವ್ಸ್ ವೀಕ್ಲೀಲಿ ಪ್ರಿಂಟಾದ್ದೇನೇ
ಅವರು ನಗೋದೋ ಅಳೋದೂನೂ
ಮಾರ್ಲಿನ್ ಮನ್ರೋ ಡಿಟ್ಟೋನೇನೇ'

೧೯೬೧ರ ಕೊನೆಯ ಹೊತ್ತಿಗೆ ನೆರೆಯ ಚೀನದೇಶ ಭಾರತದ ಮೇಲೆ ಧಾಳಿ ಮಾಡಿತು.ಶಾಂತಿ ದೂತ ನೆಹರು ಅಘಾತಗೊಂಡರು ಚೀನಾದ ಮಾವೋತ್ಸೆತುಂಗ್ ಮಾನವ ರೂಪಿ ಆಟಂಬಾಂಬಿನಂತೆ ನಮಗೆ ಕಂಡು ಮತ್ತು ಜಗತ್ತನ್ನು ಎದುರಿಸಲು ಆಟಂ ಬಾಂಬನ್ನು ತಯಾರಿಸಿದೆ. ಚಿನ್ನದ ಈ ಮಾವನಿಗೆ ಉತ್ತರವಾಗಿ ಪಾ.ವೆಂ. ಬರೆದ **ಆತ್ಮಬಾಂಬು** ಪದ್ಯದಲ್ಲಿ ಭಾರತೀಯರ ಸವಕಲು ಶಬ್ದ ಆತ್ಮದ ಬಗ್ಗೆ ವಿಡಂಬನೆ ಇದೆ. ಆತ್ಮದ ಬಾಂಬು ನಮ್ಮ ಸಂಸ್ಕೃತಿ ಸಂಪ್ರದಾಯಗಳ ಹಿಂದಿರುವ ಪೊಳ್ಳನ್ನು ಅಣಕಿಸುವಂತಿದೆ. ಅಂದರೆ ಆತ್ಮರಹಿತರಾದ ಜನಸಮುದಾಯವಿಲ್ಲದ ನಮ್ಮ ದೇಶ ಬಲಿಷ್ಠ ಆಗುವುದು ಹೇಗೆ ಎಂಬ ಚಿಂತನೆ ಇಲ್ಲಿದೆ. ನಾವು ದೇಶದ ಮೌಲ್ಯಗಳಿಗೆ ನಾವೇ ಬಾಂಬುಹಾಕಿ ಭ್ರಷ್ಟಾಚಾರವೆಂಬ ಬಾಂಬನ್ನು ಹಾಕಿ ವಿನಾಶಕ್ಕೆ ಒಯ್ಯುತ್ತಿದ್ದೇವೆ. ಇದು ಹೊರಗಿನವರು ಹಾಕುವ ಬಾಂಬಿಗಿಂತ ಹೆಚ್ಚು ಮಾರಕವಾದದ್ದು. ಪಾ.ವೆಂ.ರ ದೇಶ ಚಿಂತನೆ ಮಾರ್ಮಿಕವಾಗಿದೆ. ದೇಶದ ಚರಿತ್ರೆಯನ್ನು ಕೊಡೆಯೆಂಬ ಪ್ರತಿಮೆಯ ಮೂಲಕ ವಿಡಂಬನ ಪೂರ್ಣವಾಗಿ ಮಾಡಿದ್ದಾರೆ. ಇದನ್ನು ಸನಾತನ ಧರ್ಮ ಅಥವಾ ನಮ್ಮ ಜಡ ಲೋಕದ ಸಂಪ್ರದಾಯದ ಪ್ರತಿಮೆ ಎನ್ನಬಹುದು. ಎಂದೂ ಬದಲಾಗದೆ ಚರಿತ್ರೆ ಉದ್ದಕ್ಕೂ ಉಳಿದು ಬಂದ ಈ ಕೊಡೆಯ ಚರಿತ್ರೆ ಇಂದು ಅಪ್ರಸ್ತುತವೂ ಅನಗತ್ಯವೂ ಆಗಿದೆಯೆಂದು ಚರಿತ್ರೆಯನ್ನು ಓದದೆ ಇರುವ ಇಂದಿನ ಹೊಸಪೀಳಿಗೆ ಹಳೆಯದನ್ನು ತಿರಸ್ಕರಿಸಿ ಹೊಸದನ್ನು ತರೋಣವೆಂದು ಅನ್ನುತ್ತಿದೆ. ಚರಿತ್ರೆಯ ಜಡತೆ ನಿಷ್ಫಲತೆಯನ್ನು ನೆನಪಿಸುವ ಕವಿಗೆ ಇದರ ಪ್ರಸ್ತುತತೆ ಏನೂ ಇಲ್ಲ ಎಂಬ ಸತ್ಯ ಹೊಳೆದಿದೆ.

ಗೀತಾಧ್ಯಾಯ ೧೯ ಕವನ ಪಾ. ವೆಂ. ಆಚಾರ್ಯರಿರುವ ತೀಕ್ಷ್ಣ ಅಣಕ ರಣಂಗಣದಲ್ಲಿ ದೃಷ್ಟಿಯನ್ನು ತೋರಿಸುವ ಕವನ, ಪ್ರಾಣತ್ಯಾಗ ಮಾಡುವ ಮುಂಚೆ ಕರ್ಣ ಕೃಷ್ಣನನ್ನು ಕುರಿತು ಆಡುವ ಮಾತು ಅದಕ್ಕೆ ಕೃಷ್ಣನ ಸಮಾಧಾನವಿದು.

ಮುರಳಿಯ ಹಾಡು, ಹೂವಿನ ಹಂಬಲ, ಬೆಳಕಿಲ್ಲಿ, ಕವಿತೆಗೆ, ಇನಿಯನ ಸ್ವಾಗತ, ಶ್ರೀಕೃಷ್ಣನಿಗೆ ಮೊದಲಾದ ಕವಿತೆಗಳಲ್ಲಿ ಆದರ್ಶ, ರಾಷ್ಟ್ರಪ್ರೇಮ, ಭಕ್ತಿ, ಪ್ರಕೃತಿ ಪ್ರೇಮ ಮೊದಲಾದ ಅಂಶಗಳೊಂದಿಗೆ ಲಯ ಪೂರ್ಣವಾದ ಭಾವಗೀತೆಯ ಲಹರಿಯನ್ನು ಒಳಗೊಂಡಿದೆ. ಸಂಯುಕ್ತೆ ಐತಿಹಾಸಿಕ ಘಟನೆಯ ಕಥನಕವನ ರಾಜಸ್ಥಾನದ ರಾಜ ಪೃಥ್ವಿರಾಜ ರಾಜಕುಮಾರಿ ಸಂಯುಕ್ತೆಯನ್ನು ಸ್ವಯಂವರದ ಮೂಲಕ ವಿವಾಹವಾಗುವ ರೀತಿಯ ಕಥೆ ಇಲ್ಲಿದೆ. **ಸಂಯುಕ್ತೆ**ಯ ಮುಗ್ಧ ಪ್ರೀತಿಯ ಉತ್ಕಟತೆ ಮತ್ತು ಪ್ರಾಮಾಣಿಕತನ ಮೆಚ್ಚುವಂತದ್ದು.*೭

'ಬಾಗಿಲೊಳಿದೆ ಪೃಥ್ವಿಯ ಬೊಂಬೆ–
ಅದನೆ ವರಿಸಿ ನಾ ಸೊಗಗೊಂಬೆ!' ಪೃಥ್ವಿರಾಜನನ್ನು ಅವಮಾನಿಸಲು
ಆತನ ಮೂರ್ತಿಯ ತಂದು ಬಾಗಿಲಲ್ಲಿಟ್ಟು ಕದ ಕಾಯುವ ಊಳಿಗ ನಿನಗೆಂದು!

ಅದಕೇ ಮಾಲೆಯ ಹಾಕಿದಳು! ನಾಲ್ಕು ಮಾತ್ರೆಯ ಸೊಗಸು ಇಲ್ಲಿದೆ ಇಪ್ಪತ್ತೆರಡು ವರ್ಷದ ಯುವ ಕವಿ ಪ್ರೀತಿಶೃಂಗಾರದ ಮನದ ಭಾವನೆಯನ್ನು ತಣಿಸಿಕೊಳ್ಳುವ ಕವಿಯ ಮನಸ್ಸು ಇದು. **ಕರೆ** ಹೊಸ ಕವಿತೆಯನ್ನು ತೆಗಳುವವರಿಗೆ ಎಚ್ಚರಿಕೆಯ ಕವನವಿದು.

ಧತ್ತನ ನೆನಪು ಎನ್ನುವ ಕವಿತೆಯಲ್ಲಿ ಗೆಳೆತನದ ಭಾವ ಹೆಪ್ಪುಗಟ್ಟಿದೆ. ದ.ಬಾ.ಕು. ೧೩ ಆಗಸ್ಟ್ ೧೯ ತೀರಿಕೊಂಡಾಗ ಕವಿ ಗೆಳೆಯನಾಗಿ ಅರ್ಪಿಸಿದ ಭಾವಪೂರ್ಣ ಶ್ರದ್ಧಾಂಜಲಿ ಕವನವಿದು. ದ.ಬಾ.ಕು ಎಂದೂ ಕೂಡ ದುಃಖವನ್ನು ಪಟ್ಟವರಲ್ಲ, ತೋರಿದವರಲ್ಲ. ದುಃಖ ಆದಾಗಲು ಬಡತನ ಮತ್ತು ಇತರ ಕಾರಣಗಳಿಂದ ಹಾನಿ ಉಂಟಾದಾಗಲು ನಿರಾಸೆಯ ಭಾವ ತಳೆದವರಲ್ಲ ಪ್ರಕೃತಿ (ಸ್ವಭಾವ) ದುಃಖ ದೂರವಾದದ್ದು. ಅಳುವುದೇ ಗೊತ್ತಿಲ್ಲದ್ದು. ವ್ಯತಿರಿಕ್ತವಾಗಿ ದ.ಬಾ.ಕು. ಅವರಿಗೆ 'ವಿಧಿಯ ನಗುವೆಂಬ ಸಹಚರನ ನನಗೆ ಗಂಟಿಕ್ಕಿ ಕಳಿಸಿದ್ದ' ಕವಿತೆ ಕೊನೆಯ ಸಾಲು. ಪಾರಿಜಾತ ಅಲ್ಪಾಯುಷಿ, ಆನಂದದ ಸಾರ್ಥಕತೆಯ ಸಂಕೇತ.ಇವೆಲ್ಲ ಭಾವವನ್ನು (ದುಃಖ ವಿಶಾದ) ಪಾ. ವೆಂ. ಅವರು ಭಾವನಿರ್ಭರತೆಯಿಂದ ಹೇಳುತ್ತಾರೆ.

ವಿ.ಜಿ. ಭಟ್ಟ ಪಾ.ವೆಂ. ಅವರ ಓರಗೆಯ ಕವಿ, ತುಂಟತನ ಪದ್ಯಗಳು ಪಿ.ಜಿ. ಭಟ್ಟರ ನಾಲ್ಕು ಸಾಲಿನ ಚುಟುಕು ಪದ್ಯಗಳ ಸಂಕಲನ ಗಂಬೀರ ಜೀವನವನ್ನು ನಗುನೋಟದಿಂದ ಕಾಣುವ ಭಟ್ಟರ ಕಾವ್ಯ ತನ್ನದೇ ಆದ ಹಗುರ ದಾಟಿ ಧ್ವನಿಯಿಂದ ಸಾಂಪ್ರದಾಯಿಕ ಕಾವ್ಯಕ್ಕೆ ಚುರುಕು ಮುಟ್ಟಿಸುವಂತಿತ್ತು. ಪ್ರೀತಿ, ಪ್ರೇಮ, ಪ್ರಣಯಗಳ ಅನುಭವವನ್ನು ಭಟ್ಟರು ನಿವೇದಿಸುವ ಬಗೆ ತೀರ ಹಗುರವಾದದ್ದು. ಅವರ ಕಾವ್ಯ ವೇದನೆ ಸಂಕಲನದ ಮೊದಲ ಭಾಗಕ್ಕೆ ಪಾ.ವೆಂ.ಬರೆದ ಮುನ್ನುಡಿ ಪದ್ಯರೂಪದಲ್ಲಿದೆ. ಉಪೋದ್-ಘಾತ ಎಂದು ಹೆಸರಿಸಿ ಪಾ.ವೆಂ. ಬರೆದ ಪದ್ಯ ಮುನ್ನುಡಿ ಮಾರ್ಮಿಕವಾಗಿದೆ. ಹಳೆಯ ಕವಿಗಳು ಪ್ರಣಯ ನಿವೇದನೆಯನ್ನು ಒಬ್ಬ ಪ್ರೇಮ ಪೂಜಾರಿಯಂತೆ ಪ್ರಣಯ ಮುಕುರಕ್ಕೇ ಹೋಗಿ ಅರ್ಪಿಸುತ್ತಿದ್ದರು. ಅದು ಗಂಭೀರವಾದ

ಶೈಲಿಯಲ್ಲಿ ಆದರೆ ಈ ಕವಿ 'ಪೋಲಿ ಭಟ್ಟ' ಪ್ರಣಯ ಹುಚ್ಚಿಗೆ ಈಡಾಗಿ ಒಬ್ಬ ಪಾಷಾಂಡಿ (ನಾಸ್ತಿಕ) ಯಂತೆ ಮಾಡಿದ್ದು ಒಂದು ಘಾತ.ಕವಿಯ ಈ ಘಾತಕ್ಕೆ ಮುನ್ನುಡಿಕಾರನ ಈ ಉಪೋದ್-ಘಾತ.*[೮]

'ಪ್ರಣಯ ದೇವತೆಯ ಮಂದಿರದಲಿ ಬಿಡ-
ಬಹುದೇ ಮಂಗನ ತಂದು
ಪಿಂಗಾಣಿಯಂಗಡಿಗೆ ತಂದುಬಿಟ್ಟಂತೆ
ಹುಚ್ಚು ಹೋರಿಯೊಂದು ?
ಪ್ರಣಯ ದೇವತೆಯ ಮೈಯ ಮೇಲಿನಾ
ಹಾರಗಳನ್ನು ಹರಿದು
ಅವಳ ಮುಚ್ಚಿರುವ ಶಿಲ್ಪ ವೈಭವದ
ಹೊನ್ನ ಕವಚವೊಡೆದು
ರನ್ನಹರಳ ಕಣ್ಣುಗಳ ಕಿತ್ತು ತುಟಿ –
ಗೆಂಪನುಜ್ಜಿ ತೆಗೆದು
ಪುಷ್ಯ ರಾಗದ ತಿಲಕ ಕಳೆದು ಸಿಂ-
ಗಾರ ಮಾಡಿ ಬಂದು'

ಹೀಗೆ ಹಾಸ್ಯ ಕಾವ್ಯಕ್ಕೆ ತಕ್ಕಂತೆ ಹಾಸ್ಯಮಯ ರೀತಿಯಲ್ಲಿ ಮುನ್ನುಡಿ ಬರೆಯುವ ಪಾ.ವೆಂ. ನವ್ಯ ಕಾವ್ಯವನ್ನು ಓದುಗರು ಹೊಸ ಸಹೃದಯತೆಯಿಂದ ಓದಬೇಕೆಂದು ಸೂಚಿಸುತ್ತದೆ. ಈ ಮುನ್ನುಡಿ ಭಟ್ಟರ ಕಾವ್ಯದಿಂದಾಗುವ ವೇದನೆ ಅಥವಾ ಆಘಾತಕ್ಕೆ ಮಾತಿನ ಹೊಸ ಘಾತವನ್ನು ಕೊಟ್ಟು ಚುರುಕು ಮುಟ್ಟಿಸುವ ರೀತಿಯಲ್ಲಿದೆ.

ನವ್ಯ ಕವಿತೆಯು ಹಾಕುವ ತೋರಿಸುವ ವರಸೆಗಳು ಅನೇಕ. ಅವುಗಳಲ್ಲಿ ಸ್ವಭಾವೋಕ್ತಿ ನಿರೂಪಣೆಯೂ ಒಂದು. **ಬದಲಾವಣೆ** ಕವನ ರಚನೆಯಲ್ಲಿ ಪಾ.ವೆಂ.ಸರಳ ಸುಂದರವಾಗಿ ಸಾಧಿಸಿದ್ದಾರೆ. **ಗೋಪಿ** ಕವನದಲ್ಲೂ ಇದರ ನೆರಳು ಇದೆ. ೧೯೬೪ರ ಎಪ್ರೀಲ್ ೨೭ರಂದು ಹದಿನೇಳು ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿದ್ದ, ರಾಜಕಾರಣದಲ್ಲಿ ಚಿರಯುವಕನೆಂದೇ ಕರೆಸಿಕೊಂಡಿದ್ದ ಜವಹರಲಾಲ ನೆಹರು ಹಠಾತ್ತನೆ ತೀರಿಕೊಳ್ಳುತ್ತಾರೆ ಆಗ ಕವಿ ಹೃದಯದ ಪಾ.ವೆಂ.*[೯]

ನೆಹರು ಸತ್ತರು
ನೆಹರು ಸತ್ತರು
ಅವರು ಅತ್ತರು
ಇವರು ಅತ್ತರು
ನಾನು ಅಳಲಿಲ್ಲ
ಧಕ್ಕೆ ಗೊಳ್ಳಲಿಲ್ಲ ;
ಬರೇ
ನನ್ನ ಒಳಗಿನಿಂದ
ಏನೋ ಒಂದಿಷ್ಟು
ಹೊರಟು ಹೋದಂದ

ಅನಿಸತೊಡಗಿತ್ತು
ಆನಿಮಿಷದಿಂದ
ನಾ ಮೊದಲಿಗಿಂತ
ಕಡಿಮೆ ಧೀರ,
ಕಡಿಮೆ ಉದಾರ
ಅನಿಸುತಿದೆ ಅಷ್ಟೇ
ನೆಹರು ಹೋದುದಕೆ
ಬದಲಾದುದಿಷ್ಟೇ.

ಕವನ ಒಂದು ಹೇಳಿಕೆ (Statement) ರೂಪದಲ್ಲಿದೆ. ಸಾಮಾನ್ಯವಾಗಿ ಶ್ರದ್ಧಾಂಜಲಿ ಕವನದಲ್ಲಿ ಮೃತಪಟ್ಟವನ ಇದ್ದುಬಿದ್ದ ಗುಣಗಳನ್ನೆಲ್ಲ ತುರುಕಿ ಕವನ ಹೊಸೆಯುತ್ತಾರೆ ಅಥವಾ ಗೀಚುತ್ತಾರೆ. ತನ್ನಲ್ಲಿ ಆದ ಬದಲಾವಣೆಯನ್ನು ಹೇಳುತ್ತಲೇ ತಾನಿನ್ನು ಮೇಲೆ ತನ್ನೊಳಗೆ ತಾನು ಧೀರನು ಉದಾರನೂ ಆಗಿ ಬೆಳೆಯುತ್ತೇವೆ ಎಂಬ ಸೂಚನೆ ಕವಿ ಕೊಡುತ್ತಾನೆ. ಪ್ರಾಮಾಣಿಕ ಕವಿತೆಯ ಧ್ವನಿ ಈ ರೀತಿಯದ್ದು ನವ್ಯ ಕವಿತೆಯ ಧ್ವನಿಪೂರ್ಣ ಲಕ್ಷಣ ಇಲ್ಲ ಎಷ್ಟೊಂದು ಸರಳವಾಗಿ ಹರಳುಗಟ್ಟಿದೆ. ಇದೇ ನಮೂನೆಯ ಕವಿತೆ **ರಾಮದೇವರ ಸತ್ಯ** ಕಥನ ಕವನದಲ್ಲಿ ಮತ್ತೊಂದು ಧಾಟಿಯಿಂದ ಪಡಿಮೂಡಿದೆ. ಕಥನ ಕವನದ ರೂಪದಲ್ಲಿರುವ ಈ ಪದ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರ ಕಥನ ಕವನವನ್ನು ಹೋಲುತ್ತದೆ. ಭಾರತ ಜನಪದದಲ್ಲಿ ರಾಮಾಯಣ ಮಹಾಕಾವ್ಯದ ಆದರ್ಶ ಅಥವಾ ಕವಿಸತ್ಯ ಎಷ್ಟೊಂದು ಮಾರ್ಮಿಕವಾಗಿ ಅಂತರ್ಗತಗೊಂಡಿದೆ ಎಂಬುದರ ಕೆಲವು ಉದಾಹರಣೆಗಳನ್ನು ಕವಿ ಕೊಡುತ್ತಾರೆ. ರಾಮ, ಲಕ್ಷ್ಮಣ ಸೀತೆ ಕಾವ್ಯದ ಆದರ್ಶ ಪಾತ್ರಗಳು. ಅವುಗಳನ್ನು ಕಾಲ ಮತ್ತು ಸ್ಥಳಗಳ ಅಂತರವನ್ನು ಮೀರಿ ತಮ್ಮೊಳಗೆ ಗುರುತಿಸಿಕೊಳ್ಳುವ ಅನೇಕ ಕುರುಹುಗಳನ್ನು ಹಳ್ಳಿ ಹಳ್ಳಿಗಳಲ್ಲಿವೆ. ರಾಮಾಯಣದ ಕತೆ ತಮ್ಮಲ್ಲಿಯೇ ನಡೆಯಿತೆಂಬಂತೆ ಹೇಳಿಕೊಂಡು ಹಳ್ಳಿಯ ಜನ ಉದಾತ್ತ ಬದುಕಿನ ಬಗ್ಗೆ ತಮಗಿರುವ ಒಲವನ್ನು ಸಾರುತ್ತಾರೆ. ವೈಜ್ಞಾನಿಕವಾಗಿ ಈ ನಂಬಿಕೆ, ತಿಳುವಳಿಕೆ ಸತ್ಯವೇ ಅಥವಾ ಐತಿಹಾಸಿಕ ಸಂಗತಿಯೆಂದು ಕೇಳಬಾರದೆಂದು ಪಾ.ವೆಂ. ಕಿವಿಮಾತು ಹೇಳುತ್ತಾರೆ.

'ಇವು ಸತ್ಯವೇ ಕೇಳಬೇಡಿ ನಾನದನರಿಯೆ ಸತ್ಯಮಿತ್ಯದ ಲೆಕ್ಕವಿಡುವ ಬುದ್ಧಿಯೇ ಮೊಟಕು' ಎಂದು ನಮ್ಮ ಮಿತಿಯ ನುಡಿಯನ್ನು ತಿಳಿಸಿ ಸತ್ಯವೆಂಬುದರ ನಂಬಿಕೆಯ ಮನಸ್ಸಿನ ಅಳತೆಗೋಲು ಅದು ನಮ್ಮ ಉಪ ಪ್ರಜ್ಞೆಯಲ್ಲಿ ದಾಖಲುಗೊಂಡ ಪರಂಪರಾಗತ ಅರಿವು ಮಾತ್ರ. ಪಾ.ವೆಂ. ಅವರ ನವ್ಯ ಶೈಲಿಯ ಎರಡು ಕವನಗಳು ೧) **ವಿಕಾರಿ** ೨) **ದ್ವಾಸುಪರ್ಣ** ಕ್ಲಿಷ್ಟವಾಗಿರುವ ಕವಿತೆಗಳು **ದ್ವಾಸುಪರ್ಣ** ಶಂಕರಾಚಾರ್ಯರ ಅದ್ವೈತ ತತ್ವವನ್ನು ಪ್ರತಿಮಿಸುವ ಒಂದು ನುಡಿಗಟ್ಟು. ಇದನ್ನು ಕವನವಾಗಿ ನಿರೂಪಿಸುವಲ್ಲಿ ಗೊಂದಲ ಮತ್ತು ವಿಷಯಾತುರ ಅಭ್ಯಾಸ ನಮಗೆ ಉಂಟಾಗುತ್ತದೆ. **ವಿಕಾರಿ** ಎಂಬ ಸಂವತ್ಸರ ಬಂದಾಗ ಬರೆದ ಪದ್ಯವು, ಅಸ್ಪಷ್ಟಿ ಹಾಗೂ ವಿಷಯಾತುರದ ನಿರೂಪಣೆಯಾಗಿ ನಮ್ಮ ಬುದ್ಧಿಗಾಗಲಿ ಸಂವೇಧನೆಗಾಗಲಿ ತಾಕುವುದೇ ಇಲ್ಲ.

ಬರುತಿದೆ ಬರುತಿದೆ ಬರುತಿದೆ ಅನ್ನ ೧೯೬೪ ನವೆಂಬರ್ ೪ರಂದು ಸಾಪ್ತಾಹಿಕ ಕರ್ಮವೀರದಲ್ಲಿ ಪ್ರಕಟಣೆಯಾದ ಕವನವಿದು. (ಇ) **ಹೌಸಿಂಗ್ ಕಾಲೋನಿ** ಕವನ ಸಂಕಲನಕ್ಕೆ ಈ ಕವಿತೆ ಸೇರಿಲ್ಲ. ಬೇಂದ್ರೆಯವರ **ಅನ್ನ ಬಕಾಸುರ** ಪಂಜೆಯವರ **ತೆಂಕಣ ಗಾಳಿ** ಕವನದ ಧಾಟಿಯಂತೆ ರಚಿತವಾಗಿದೆ. **ಕರ್ಮವೀರ** ಸಾಪ್ತಾಹಿಕ ಪತ್ರಿಕೆ ಟಾಬ್ಲೈಡ್‌ಸೈಸ್ (Tablied size) ಇಡೀ ಪುಟವನ್ನು ಆವರಿಸುವ ಕವನ, ತುರ್ತಾಗಿ ಪ್ರಚಲಿತ ವಿದ್ಯಮಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು **ಲಾಂಗೂಲಾಚಾರ್ಯ** ಎನ್ನುವ ಹೆಸರಿನಿಂದ ಈ ಕವಿತೆ ಬರೆದಂತೆ ಕಾಣಿಸುತ್ತದೆ.

ವಿದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸಿ ಇಲ್ಲಿ ಹಸಿವನ್ನು ನೀಗಿಸುವ ಒಂದು ಯೋಜನೆ. ಸರಕಾರದ ದೃಷ್ಟಿ ವಿತರಣಾ ವ್ಯವಸ್ಥೆ, ಅಧಿಕಾರಿಗಳ ಲಾಭಕೋರತನ ಇವುಗಳಿಂದಾಗಿ ರೇಷನ್ ಪದ್ಧತಿಯಲ್ಲಿ ಕಂಡು ಬಂದ ಅಕ್ರಮ ಅನ್ಯಾಯ ಇವುಗಳಿಂದ ಕನಲಿದ ಕವಿ ಜನಸಾಮಾನ್ಯರ ಧ್ವನಿಯಾಗಿ ಪದ್ಯವನ್ನು ಕಟ್ಟುತ್ತಾರೆ. ಕವನದ ತುಂಬಾ ಟೀಕೆ ಇಲ್ಲ. ದೂಷಣೆಯೂ ಇಲ್ಲ. ಇಲ್ಲಿ ಇರುವುದು ಒಟ್ಟು ವ್ಯವಸ್ಥೆಯಲ್ಲಿಯ ಅರಾಜಕತೆ, ಸರಕಾರದ ತೋರಿಕೆ ಜನಸಾಮಾನ್ಯರ ರಾಜಕಾರಣಿಗಳ ಸಮಾಧಾನದ ಹೇಳಿಕೆಗಳ ವಿಡಂಬನೆ ಇಲ್ಲಿದೆ. ಬೇಂದ್ರೆಯವರ ಹಸಿವಿನ ಪದ್ಯಗಳ **ಒಂದು ಕಡೆಗೆ ಕಾಳು ಇದೆ, ಕೂಳು ಇಲ್ಲ** ಎನ್ನುತ್ತಾರೆ. ಅಂದರೆ ಆಹಾರ ಧಾನ್ಯ ಇಲ್ಲವೆಂದು ಅದನ್ನು ಹಸಿದವರಿಗೆ ಪ್ರಾಮಾಣಿಕವಾಗಿ ವಿತರಿಸಿ ಹಾಹಾಕಾರವನ್ನು ಕಡಿಮೆ ಮಾಡುವ ಬುದ್ದಿ ಅಧಿಕಾರಿಗಳಿಗಿಲ್ಲ. ರಾಜಕಾರಣಿಗಳೋ ಹೊಟ್ಟೆ ತುಂಬಿದವರು ಅಥವಾ ಸಮೃದ್ಧವಾದ ಕಾಳಿನ ವಿತರಣೆ ಇದೆ. ಬಾಯಿ ಇದ್ದವ ಬದುಕಿದ ಬಾಯಿ ಇಲ್ಲದವ ಸತ್ತ ಎನ್ನುವ ಸ್ಥಿತಿಗತಿಯನ್ನು ಪಾ.ವೆಂ. ತುಂಬಾ ನೋವಿನಿಂದ ಸಿಟ್ಟಿನಿಂದ ಆದರೆ ಅಣಕದ ಧಾಟಿಯಲ್ಲಿ ವ್ಯಕ್ತಪಡಿಸಿದ್ದಾರೆ. ದೇಶ ಎದುರಿಸಿದ ಆಹಾರ ಅಭಾವ ಕೃತಕ ಮತ್ತು ರಾಜಕೀಯ ಕುಯಕ್ತಿಯ ಪರಿಣಾಮ ಎಂಬುದು ಕವನದ ಧ್ವನಿ. ಕವನದ ಧಾಟಿ ಎಂಥವರನ್ನು ಓದಿಸಿಕೊಂಡು ಹೋಗುವಂತಿದೆ. ಲಯ ಮತ್ತು ಅಂತ್ಯ ಪ್ರಾಸದ ಸೊಗಸಿನಿಂದ ತುಂಬಿದೆ.[*೧೦]

ಕಾಳನು ತಿನ್ನಿರಿ ಸ್ವಲ್ಪ ಸ್ವಲ್ಪ;
ಆವರೆಗೂ ಅಶ್ವಾಸನವನು
ಹಂಚುತಲಿರುವೆವು ಟನ್ನು ಟನ್ನು
ಆಶ್ವಾಸನೆಗಳ ಪೌಷ್ಟಿಕ ಹಿಟ್ಟು
ಸಹಾನುಭೂತಿಯ ಕಲಸಿಟ್ಟು
ತಿಂದು ತೇಗಿರೈ ಬೇಕೆಂಬಷ್ಟು !

ದೃಷ್ಟಿಚಕ್ರ ಕವಿತೆಯಲ್ಲಿ (ಫೆಬ್ರುವರಿ-೧೯೭೨, ಕಸ್ತೂರಿ ಸಂಚಿಕೆ)ರಲ್ಲಿ ತಾಯಿ ಮಡಿಲಲ್ಲಿದ್ದಾಗ ರಾಮಾಯಣದ ಕಥಾನಾಯಕಿ ಎಳೆಯಕುಮಾರ ಕವಿಗೆ **ಸೀತಾಮಾತೆ**ಯಾಗಿ ಕಂಡಿದ್ದಳು. ಮುಂದೆ ಮನದನ್ನೆಯ ಅಪ್ಪುಗೆಯಲ್ಲಿ ಯುವಕನಿಗೆ ಸೀತೆ **ರಾಮನಾರ್ಧಾಂಗಿ**ಯಾಗಿ ಕಂಡಳು. ಕವಿ ವೃದ್ಧನಾದಾಗ ಮೊಮ್ಮಗು ಕೇಳಿದ ಪ್ರಶ್ನೆಗೆ ಉತ್ತರಿಸುವಾಗ ಸೀತೆಯು

ಜನಕನ ಪುತ್ರಿಯಾಗಿ ಕಂಡಳು. ಮುಂದೆ ಕಾಲ ಕಳೆದು ವರ್ತಮಾನ ಕಾಲವೇ ಬಂದು ಸೀತೆ ಯಾರು? ಎಂದು ಪ್ರಶ್ನಿಸಿದರೆ ಕವಿ ಕೊಡುವ ಉತ್ತರ **ಸೀತಾದೇವಿ** ಎಂದು.[*೧೧]

‘ಕಾಹೋಯಿತು, ಇಂದು ಕಾಲಬರಬಹುದು,
ನಿಂದು ಮುಂದೆನ್ನ ಕೇಳಬಹುದು’;
ಹೇಳಿಗ ನಿಜವನ್ನು ಸೀತೆ ಯಾರು ?
ನಾನೆಂಬೆ ಕಣ್ಮುಚ್ಚಿ, “ಸೀತಾದೇವಿ”

ಕವಿ ಹೆಜ್ಜೆಹೆಜ್ಜೆಗೂ ಹೊಸತನ್ನು ಸಹೃದಯತೆಯಿಂದ ಅರ್ಥಮಾಡಿಕೊಂಡು ಹೊಸ ಅರ್ಥವನ್ನು ಹೊಮ್ಮಿಸುವ ಅಪೂರ್ವ ಜ್ಞಾನದ ಕಣಜವಾಗಿದ್ದಾನೆ.

ಪಾ.ವೆಂ.ಅವರ ಸಮಸ್ತ ಪದ್ಯಗಳಾದ **ಹೌಸಿಂಗ್ ಕಾಲನಿ** ಯ ಕವನ ಸಂಕಲನದ ಕೃತಿಯ ಹಿನ್ನುಡಿಯಲ್ಲಿ ಕವಿ, ನಾಟಕಕಾರ ಪಾ.ವೆಂ. ಅವರ ಆತ್ಮೀಯರಾದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿಯವರು ‘ಕೆಲವು ಪದ್ಯಗಳು ಕೆಲಕಾಲ ಬೆಳಗುತ್ತವೆ. ಅನಂತರ ಕಳೆಗುಂದುತ್ತವೆ. ಪಾ.ವೆಂ. ಆಚಾರ್ಯರ ಪದ್ಯಗಳು ಪದ ಜ್ಯೋತ್ಯತೀತ ನಕ್ಷತ್ರಗಳು ಎನ್ನುವ ಮಾತಿನಲ್ಲಿ ತಥ್ಯವಿದೆ.

೨. ಪಾ.ವೆಂ. ಅವರ ತುಳು ಕಾವ್ಯ:

ಬಯ್ಯಮಲ್ಲಿಗೆ ತುಳು ಕಾವ್ಯಾಂಜಲಿ: ಪಾ. ವೆಂ. ಹುಟ್ಟಿನಿಂದಲೇ ಕವಿ ಮನೋಧರ್ಮ ಬೆಳೆಸಿಕೊಂಡವರು. ತನ್ನನ್ನು ಮತ್ತು ವಾಸ್ತವ ಲೋಕವನ್ನು ಒಂದು ಕಲ್ಪನೆಯ ರೂಪದಲ್ಲಿ ಕಾಣುವ ಭಾವಿಸುವ ಮತ್ತು ತಕ್ಕ ಶಬ್ದ ವಿನ್ಯಾಸದಲ್ಲಿ ಅಭಿವ್ಯಕ್ತಗೊಳಿಸುವ ಮನೋಶಕ್ತಿಯೇ ಕವಿಯ ಮನೋಧರ್ಮ ಎನ್ನುವುದಾದರೆ ಪಾ.ವೆಂ. ಒಬ್ಬ ಅಂತಹ ವ್ಯಕ್ತಿ ತಾಯಿ ಮಾತು ತುಳುವಿನಲ್ಲಿ ಅವರು ಸಂಭಾಷಿಸುತ್ತಲೆ ಆಗಿನ ತುಳು ಸಾಹಿತ್ಯ ಮಾಲೆಯ ಕೃತಿಗಳ, ಕವಿ, ಲೇಖಕರ ಬಗ್ಗೆ ಓದುತ್ತಾ ಕಾವ್ಯ ಭಾಷೆಯನ್ನು ರೂಪಿಸಿಕೊಳ್ಳತೊಡಗಿದರು. ಉಡುಪಿಯ ಸೋದೆ ಮಠದ ವಾದಿರಾಜ ಸ್ವಾಮಿಗಳು (೧೪೮೦–೧೬೦೦) ಬರೆದ **ದಶಾವತಾರ** ಕೀರ್ತನೆಯೊಂದಿಗೆ ಆಧುನಿಕ ತುಳು ಕಾವ್ಯ ಚರಿತೆ ಪ್ರಾರಂಭವಾಗುತ್ತದೆ. ೧೮೮೭ರಲ್ಲಿ ಬರೆದ **ಪಂಚವಟಿ – ವಾಲಿಸುಗ್ರೀವರ ಕಾಳಗ** ಪಾರ್ಥಿಸುಬ್ಬರ ಪ್ರಸಂಗವೊಂದರ ಭಾಷಾಂತರ.

೧೯೩೦ನೇಯ ಇಸವಿ ಸ್ಥಳ ವೆಲ್ಲೂರಿನ ಸೆಂಟ್ರಲ್ ಜೈಲು ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲಿಗೆ ಬಂದಿದ್ದ ಮೂವರು ತುಳುನಾಡಿನ ಯುವಕರು ಅಲ್ಲಿದ್ದರು. ಪ್ರಾದೇಶಿಕ ಭಾಷೆಗಳ ಕುರಿತ ಗಾಂಧೀಜಿಯವರ ಧೋರಣೆಯಿಂದ ಪ್ರಭಾವಿತರಾಗಿದ್ದ ಅವರು ತುಳು ಚಳುವಳಿಯ ಬಗ್ಗೆ ಕುರಿತು ಚರ್ಚಿಸುತ್ತಿದ್ದರು. ತುಳು ಭಾಷೆಯಲ್ಲಿ ಕತೆ ಕವಿತೆಗಳನ್ನು ಬರೆಯುತ್ತಿದ್ದರು. ಆ ಮೂವರು ಎಸ್.ಯು. ಪಣಿಯಾಡಿ, ಮೊಳಲಿ ಶೀನಪ್ಪ ಹೆಗಡೆ ಮತ್ತು ಕೆ.ಬಿ. ನಾರಾಯಣ ಕಿಲ್ಲೆ.

ಇವರಲ್ಲಿ ಎಸ್. ಯು. ಪಣೆಯಾಡಿಯವರು. ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿಯೇ ತುಳು ಚಳುವಳಿ ಕೂಡ ಪ್ರಾರಂಭವಾಯಿತು. ಎಸ್.ಯು. ಪಣಿಯಾಡಿಯವರ ನೇತೃತ್ವದಲ್ಲಿ ಮೊದಲು ಪ್ರಾರಂಭವಾದ ಚಳುವಳಿ ತುಳು ಸಾಹಿತ್ಯಮಾಲೆ ತುಳುನಾಡಪ್ರೆಸ್, ತುಳುಕಾದಂಬರಿ, ವ್ಯಾಕರಣ ಸ್ವದೇಶಿ ಚಳುವಳಿ, ತುಳುನಾಡ ಬ್ಯಾಂಕ್ ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ತುಳು ಭಾಷೆಯ ಸಾಹಿತ್ಯ ಬೆಳೆಯಲಾರಂಭಿಸಿತು. ಈ ನಿಟ್ಟಿನಲ್ಲಿ ತುಳು ಸಾಹಿತ್ಯ ಪೇಜಾವರ ಶ್ರೀಯವರ (ವಿಶ್ವಮಾನ್ಯ ತೀರ್ಥರು ಸಹಾಯ ಹಸ್ತದಲ್ಲಿ ತುಳು ಸಾಹಿತ್ಯ ಮಾಲೆಯಲ್ಲಿ ಪಣಿಯಾಡಿಯವರು ಕೆಲವು ಕೃತಿಗಳನ್ನು ಪ್ರಕಟಿಸಿದರು. ಬಡಕಬೈಲ್ ಪರಮೇಶ್ವರಯ್ಯರ್‌ನ– ತುಳು ಕಿಟ್ನರಾಜಿ ಪರ್ಸಂಗೊ (೧೯೨೯) ಪೊಳಲಿ ಶೀನಪ್ಪ ಹೆಗ್ಗೆ–ತುಳುವಾಂ ಬಲಿಯೇಂದ್ರ ೧೯೨೯ ಸತ್ಯಮಿತ್ರ ಬಂಗೇರನ ಅಳಿಯ ಸಂತಾನ ಕಟ್ಟು (೧೯೨೯) ಕೆ.ಬಿ.ನಾರಾಯಣಶೆಟ್ಟಿ – ಕಿಲ್ಲೆರನ 'ಕಾನಗೆ' (೧೯೩೨) ಎಸ್. ಯು. ಪಣಿಯಾಡಿ ತುಳು ವ್ಯಾಕರಣ (೧೯೩೨) ಮಾಧವ ತಿಂಗಳಾಯನ– ಜನಮರ್ಲ್ (೧೯೩೩) ತುಳುಪದ್ಯವಾಲಿಕೆ. ೧೯೩೩ರಲ್ಲಿ ಉಡುಪಿಯಲ್ಲಿ ಪಣಿಯಾಡಿಯವರು ಖಾದಿ ಭಂಡಾರ, ತುಳುನಾಡ ಪ್ರೆಸ್ ಪ್ರಾರಂಭಿಸಿದರು. ಅದೇ ವರ್ಷ ಪಾ. ವೆಂ. ಆಚಾರ್ಯರು ಇಲ್ಲಿ ಉದ್ಯೋಗಕ್ಕೆ ಸೇರಿದರು. ತುಳುನಾಡ ಪ್ರೆಸ್‌ನ್ನು ಸುಧಾರಿಸಿದರು. ಮದ್ರಾಸಿನ ಅನಿಬೆಸೆಂಟ್‌ರನ ನ್ಯಾಷನಲ್ ಪ್ರೆಸ್‌ನ ಕೆಲವು ಮಿಶನ್‌ಗಳನ್ನು ಮಣಿಪಾಲಕ್ಕೂ ತರಿಸಿ ಅನೇಕ ತುಳು ಸಾಹಿತ್ಯ ಮಾಲೆಯ ಪುಸ್ತಕಗಳನ್ನು ಪ್ರಕಟಿಸಿದರು. ಉಡುಪಿಯ ನವಯುಗ ಪತ್ರಿಕೆಯವರು ಕೆಲವು ದಿನಗಳವರೆಗೆ ತುಳು ಪುರವಾಣಿಯನ್ನು ಪ್ರಾರಂಬಿಸಿದರು. ಇದಕ್ಕೆ ಅಂದಿನ ತುಳು ಸಾಹಿತಿಗಳಾದ ಕೊರಡ್ಕಲ್ ಶ್ರೀನಿವಾಸರಾವ್ ಸಾಂತ್ಯಾರು ವೆಂಕಟರಾಜಭಟ್ಟ ಪಾ.ವೆಂ. ಪೊಳಲಿ, ಎಲ್ಲರೂ ಲೇಖನಗಳನ್ನು ಬರೆಯುತ್ತಿದ್ದರು. ಇದಕ್ಕೂ ಪೂರ್ವದಲ್ಲಿ ತುಳು ಭಾಷೆಯ ಕೃಷಿ ಸುಮಾರು ೧೯೨೦ರಲ್ಲಿ ಬಾಸೆಲ್ ಮಿಶನ್‌ನವರು ಸಾಕಷ್ಟು ಮಾಡಿದ್ದರು. ವಾದಿರಾಜ ಸ್ವಾಮಿಗಳ **ದಶಾವತಾರ** ಹಾಡನ್ನು ಪರಿಷ್ಕರಿಸಿ ರೂಪಾಂತರಿಸಿ ಬರೆದ ಕಿಲ್ಲೆಯವರು ತುಳು ಕಾವ್ಯದಲ್ಲಿ ತುಳು ಭಾಷೆಯ ಪ್ರಯೋಗ ಹೇಗಿರಬೇಕೆಂಬ ಸರಿಯಾದ ದಾರಿ ತೋರಿಸಿದರು. ವಾದಿರಾಜರ **ದಶಾವತಾರ** ಶೀರ್ಷಿಕೆಯನ್ನು ಪತ್ತಾವತಾರ ಎಂದು ಬದಲಾಯಿಸಿ ಕಿಲ್ಲೆಯವರು ಭಾಷಾ ಪ್ರಾವಿಣ್ಯವನ್ನು ತೋರಿದ್ದಾರೆ. ತುಳು ಭಾಷೆಯ ಸಂಸ್ಕೃತಿಯ ಬಗ್ಗೆ ೧೯೧೮ರಲ್ಲಿ ಡಾ. ಕಾಲ್ಡೆವೆಲ್ ದ್ರಾವಿಡ ಭಾಷೆಯ ತುಲನಾತ್ಮಕ ವ್ಯಾಕರಣ comparative grammar of Dravidian languages or Coldwellನಲ್ಲಿ[*೧೨] "Next in the list of cultivated Dravidian languages stands Tulu or Tuluva. The claim of this of cultivated Dravidian languages stands Tulu or Tuluva. The claim of this very peculiar and very interesting language to be ranked amongst the cultivated members of the family may per-

haps be regarded as open to question seeing that it is destitute of a literature in the proper sense of the terms and never had a character of its own" "Not withstanding its want of a literature, Tulu is one of the most highly developed languages of the Dravidian family"

ಈ ರೀತಿಯ ಪಾಶ್ಚಾತ್ಯ ವಿದ್ವಾಂಸರ ಮಾತು, ಬರವಣಿಗೆಯಿಂದ ತ್ತೇಜಿತಗೊಂಡ ತುಳುನಾಡಿನ ಬರಹಗಾರರಾದ ಪಣಿಯಾಡಿಯವರು ಮಾತೃನುಡಿಯ ಸೇವೆ ಮಾಡಬೇಕೆಂದು ನಿಶ್ಚಯಿಸಿದರು. ಇದಕ್ಕೆ ಪ್ರೇರಕ ಎನ್ನುವಂತೆ ೧೯೨೨ರಲ್ಲಿ ಗಾಂಧೀಜಿಯವರು ಗುಜರಾತ್‌ನ ಬಾರ್ಡೋಲಿ ಜಿಲ್ಲೆಯ ಚಳವಳಿ (ಕರ ನಿರಾಕರಣೆಯ ಚಳವಳಿ) ಪ್ರಾರಂಭಿಸಿದರು. ಇದರ ಮೇಲೆ ಗಾಂಧೀಜಿಯವರು ತನ್ನ ತಾಯಿ ಭಾಷೆಯ ಮೇಲೆ ಗುಜರಾತ್ ಭಾಷೆಯಲ್ಲಿ ಪುಸ್ತಕ ಬರೆದರು. ಮಹಾತ್ಮಾ ಗಾಂಧಿಯವರ ಪ್ರಭಾವ ಪಣಿಯಾಡಿಯವರ ಮೇಲೆಯು ಆಯಿತು. ಹೀಗೆ ಸ್ವಾತಂತ್ರ ಚಳುವಳಿಯ ಜೊತೆ ಜೊತೆಯಲ್ಲಿಯೇ ತುಳು ಚಳುವಳಿ ಪ್ರಾರಂಭಗೊಂಡಿತು. ೧೯೨೩ ರಿಂದ ೧೯೪೦ವರೆಗೆ ಉಡುಪಿಯ ಸಾಂಸ್ಕೃತಿರಂಗ ಒಳ್ಳೆಯ ಮೆರಗನ್ನೇ ಪಡೆದಿತ್ತು. ಪಣಿಯಾಡಿಯವರ ರಾಜಕೀಯ ಚಳುವಳಿಯ ಜೊತೆಗೆ ಸಾಹಿತಿಗಳು ಅವರ ಬೆನ್ನಲುಬಾಗಿ ನಿಂತರು. ಸಾಂತ್ಯಾರು ಅನಂತ ಪದ್ಮನಾಭ, ಸಿ.ಎ.ಪೈ, ಪಾಂಗಳ ನಾಯಕ್ ಚಕ್ರವರ್ತಿ ರಾಜಗೋಪಾಲಚಾರ್ಯ, ಕೆ. ಕೆ.ಶೆಟ್ಟಿ, ಪೊಳಲಿ ಸೀನಪ್ಪ ಹೆಗ್ಡೆ ಹೀಗೆ ಸ್ವಾತಂತ್ರ್ಯ ಚಳುವಳಿಯ ಸ್ನೇಹಿತರಾದರು. ಸರೋಜಿನಿ ನಾಯ್ಡು, ನೆಹರು, ಗಾಂಧೀಜಿಯವರಂತ ರಾಜಕೀಯ ಹಿರಿಯ ಧುರೀಣರ ವ್ಯಕ್ತಿತ್ವದಲ್ಲಿ ತುಳು ನಾಡಿನಲ್ಲಿ ಸ್ವಾತಂತ್ರ ಚಳುವಳಿ ನಡೆಯುತ್ತಿದ್ದರೆ, ಇನ್ನೊಂದು ಕಡೆ ತುಳು ಕೃಷಿ ಪ್ರಾರಂಭಗೊಂಡಿತ್ತು. ತುಳುನಾಡ ಸಭೆ, ತುಳು ಜನರ ಸ್ಥಿತಿಗತಿ, ತುಳು ಭಾಷೆಯ ಮಹತ್ವ, ಪ್ರಾಂತ್ಯರಚನೆ, ತುಳುಕಾಗದ, ತುಳುವ ಸಾಹಿತ್ಯಮಾಲೆ, ಪತ್ರಿಕೆಗಳು ಹೀಗೆ ಹಲವು ಮುಖಗಳಲ್ಲಿ ಬರವಣಿಗೆ ಪ್ರಾರಂಭವಾಯಿತು. ಅದು ತುಳುವ ಸಾಹಿತ್ಯ ಮಾಲೆಯೆಂದು ಪ್ರಕಟವೂ ಆಯಿತು. ಈ ತುಳು ಚಳುವಳಿಯಲ್ಲಿ ಪಣಿಯಾಡಿಯವರು ನವಯುಗ ಪತ್ರಿಕೆಯ ಜೊತೆಗೆ ಕೆಲವುದಿನ ತುಳು ಪುರವಣಿಯು ಅಚ್ಚಾಗಲು ಪ್ರಾರಂಭವಾಯಿತು. ಈ ತುಳು ಪತ್ರಿಕೆಯಲ್ಲಿ ಪಾ.ವೆಂ. ಅವರು ತನ್ನ ಆರಂಭದ ಮೂರು ತುಳು ಕವಿತೆಗಳನ್ನು ಪ್ರಕಟಿಸಿದ್ದರು. ಈ ಕವಿತೆಗೆ ತುಳು ಕವಿಗಳಾದ ಸತ್ಯಮಿತ್ರ ಬಂಗೇರರಿಂದ ಮೆಚ್ಚುಗೆಯು ಸಿಕ್ಕಿತ್ತು. ಈ ತುಳುಪುರವಾಣಿ ಪತ್ರಿಕೆಗೆ ಕೊರಡ್ಕಲ್ ಶ್ರೀನಿವಾಸರಾಯರು, ಪಾದೂರು ವಾಸುದೇವ ಉಪಾಧ್ಯಾಯರು ಮುಂತಾದವರ ಬರಹಗಳು ಕೂಡ ಇಲ್ಲಿ ಪ್ರಕಟಗೊಳ್ಳುತ್ತಿತ್ತು. ತುಳು ನಾಡಿನ ಈ ಎಲ್ಲ ವಿದ್ಯಮಾನಗಳಿಗೆ ಪಾ. ವೆಂ. ಜೊತೆಯಲ್ಲಿಯೇ ಸ್ಪಂದಿಸುತ್ತಿದ್ದರು. ಹಿರಿಯರ ಸಮ್ಮುಖದಲ್ಲಿ ತನ್ನ ಬರವಣಿಗೆಯಿಂದ ಪ್ರತಿಭೆಯನ್ನು ಗುರುತಿಸಿಕೊಂಡರು. ಕಾರ್ಯತತ್ಪರತೆಯಿಂದ, ದಕ್ಷತೆಯಿಂದ ಎಲ್ಲರ ವಿಶ್ವಾಸಕ್ಕೂ ಅರ್ಹರಾದರು.

ತುಳು ಮಣ್ಣಿನ ಜೀವಸತ್ವವನ್ನು ಮೈಗೂಡಿಸಿಕೊಂಡಿರುವ ಹತ್ತು, ಹನ್ನೊಂದನೇ ಶತಮಾನದ ತುಳು ಕಾವ್ಯಗಳಾದ ವಿಷ್ಣುತುಂಗನ ತುಳುಭಾಗವತೊ, ಅರುಣಾಬ್ಜ ಕವಿಯ ಮಹಾಭಾರತ, ಇತ್ಯಾದಿ ಕಾವ್ಯಗಳನ್ನು ಓದಿ ಪಾ.ವೆಂ. ತನ್ನ ತುಳು ಕಾವ್ಯ ಭಾಷೆಯನ್ನು ಗಟ್ಟಿಯಾಗಿಸಿಕೊಂಡವರು. ತುಳು ಭಾಷೆಯ ಮಹಾಕಾವ್ಯವಾದ ವಿಷ್ಣುತುಂಗನ ಶ್ರೀ ಭಾಗವತೋ ಅರ್ಥವಾಗದ ರಚನೆ, ಇದನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದವರು ನಶಿಸಿ ಹೋಗುತ್ತಿರುವ ಭಾಷೆ ಮತ್ತೆ ಉಳಿಯಲಿ ಎನ್ನುವ ಕಾಳಜಿ ಪಾ.ವೆಂ. ಅವರಲ್ಲಿತ್ತು.

ಅದೇ ಹೊತ್ತಿಗೆ ೧೯೪೦ರಲ್ಲಿ ಪಣಿಯಾಡಿಯವರ ಸಮ್ಮುಖದಲ್ಲಿ ಉಡುಪಿಯಲ್ಲಿ ಕನ್ನಡ ಮಾಸಪತ್ರಿಕೆ ಅಂತರಂಗ ಪ್ರಾರಂಭವಾಯಿತು ಇದಕ್ಕೆ ಪಾ.ವೆಂ. ಆಚಾರ್ಯರು ಸಂಪಾದಕರಾಗಿದ್ದರು. ಇವರ ಜೊತೆಗೆ ಕೆ. ಹೈದರ್, ಎಂ.ವಿ. ಹೆಗಡೆ, ಎಸ್. ಎಸ್.ಕಾರಂತ ಸಂಪಾದಕ ಮಂಡಳಿಯಲ್ಲಿದ್ದು ಸಹಕರಿಸುತ್ತಿದ್ದರು. ಕೊರಡ್ಕಲ್ ಶ್ರೀನಿವಾಸ ರಾಯರು, ಪಾದೂರು ವಾಸುದೇವ ಉಪಾಧ್ಯಾಯರು ಈ ಪತ್ರಿಕೆಗೆ ಬರೆಯುತ್ತಿದ್ದರು. ಜೊತೆಗೆ ಬೆನ್ನೆಲುಬಾಗಿ ಸಹಕರಿಸುತ್ತಿದ್ದರು. ಐದು ವರ್ಷದವರೆಗೆ (೧೯೪೫) ಕರ್ನಾಟಕದ ಜನಪ್ರಿಯ ಕನ್ನಡ ಮಾಸಪತ್ರಿಕೆಯಾಗಿ **ಅಂತರಂಗ** ಪತ್ರಿಕೆ ಪ್ರಸಿದ್ಧವಾಗಿತ್ತು. ಆ ಕಾಲದಲ್ಲಿ ಅಂತರಂಗ ಮಾಸಪತ್ರಿಕೆ ಬರವಣಿಗೆ ಒಂದು ಕ್ರಾಂತಿಕಾರಿಯಾದ ಪ್ರಯೋಗವಾಗಿತ್ತು. ಉಡುಪಿಯ ಪತ್ರಿಕೋದ್ಯಮದ ಇತಿಹಾಸದಲ್ಲಿ ಉನ್ನತವಾದ ಗೆಲುವನ್ನು ಸಾಧಿಸಿದ ಪತ್ರಿಕೆ ಇದಾಗಿತ್ತು. ಪ್ರಜಾಮತ ಬೆಂಗಳೂರಿನ ವಾರಪತ್ರಿಕೆಯ ಸಂಪಾದಕರಾದ ಬಿ. ಯನ್. ಗುಪ್ತ **ಅಂತರಂಗ** ಪತ್ರಿಕೆಯ ಜನಪ್ರಿಯತೆಯನ್ನು ನೋಡಿ 'ಇವ ಎಲ್ಲಿಂದ ಬಂದನಪ್ಪ ಗ್ರಹಚಾರ ಎಂದು ಕಳವಳಗೊಂಡು ಮಾತಾಡಿದ್ದರಂತೆ'. ಹೀಗೆ ಪಾ. ವೆಂ. ಅವರು ದ್ವಿ ಭಾಷೆ ಕವಿಯಾಗಿ, ಬರಹಗಾರರಾಗಿ ಅಂತರಂಗ ಮಾಸಪತ್ರಿಕೆಯ ಮೂಲಕ ಕರ್ನಾಟಕ ಜನರ ಅಂತರಂಗವನ್ನು ಮುಟ್ಟಿದ್ದರು ಹಾಗೂ ತನ್ನ ನೆಲೆಯನ್ನು ಗುರುತಿಸಿಕೊಂಡಿದ್ದರು. ತುಳುವಿನಂತಹ ಸಂಕುಚಿತ ಭಾಷಾ ಪ್ರದೇಶದಲ್ಲಿಯ ಭಾಷೆ, ಭಾಷೆಯ ಜನ ನಾನಾ ಕಾರಣಗಳಿಗಾಗಿ ಪ್ರದೇಶದಿಂದ ಹೊರಗೆ ಹೋಗುತ್ತಾ ಹಾಗೆ ಹೋದಾಗ ತುಳು ಅವರ ಕುಟುಂಬದ ಭಾಷೆಯಾಗಿ ಮಾತ್ರ ಉಳಿಯಬಹುದು. ಎಲ್ಲಿ ಹೋಗಿರುತ್ತಾರೋ ಅಲ್ಲಿ ಸಾಮಾಜಿಕ ವ್ಯವಹಾರ ಭಾಷೆಯನ್ನು ರೂಢಿಸಿಕೊಂಡರೂ ತಾಯಿ ಭಾಷೆ ಅಂತರಂಗದ ನುಡಿಗಟ್ಟಾಗಿ ಉಳಿದೆ ಉಳಿಯುತ್ತದೆ. ಪಾ. ವೆಂ.ಅವರು ೧೯೪೦ರಲ್ಲಿ ತಮ್ಮ ಇಪ್ಪತ್ತಾರನೇ ವಯಸ್ಸಿನಲ್ಲಿ ಉಡುಪಿ ತವರೂರನ್ನು ಬಿಟ್ಟು ಮದ್ರಾಸಿಗೆ ಹೋಗಬೇಕಾಯಿತು. ಈ ಒಳಗಿನ ಅವಧಿಯಲ್ಲಿ ಅವರಿಗೆ ತುಳು ಮನೆಯ ಮಾತು ಮತ್ತು ಕವಿತೆಯ ಮಾತು ಮಾತ್ರ ಆಗಿರಲಿಲ್ಲ ಇಡೀ ತುಳುನಾಡಿನ ಆಗುಹೋಗುಗಳ ಜೊತೆಗೆ ಸಂಪರ್ಕವಿತ್ತು. ಬದಲಾಗುತ್ತಿದ್ದ ಉಡುಪಿಯ ಸಾಮಾಜಿಕ ವಾತಾವರಣ ಮತ್ತು ಕನ್ನಡದ ಜೊತೆಗೆ ಅದು ತುಳು ಬದಲಾಗುತ್ತಿದ್ದ ಮತ್ತು ತುಳು ಬೆಳೆಯುತ್ತಿದ್ದ ಸನ್ನಿವೇಶವು ಪಾ. ವೆಂ. ಅವರಿಗೆ ಪ್ರತ್ಯಕ್ಷವಾಗಿತ್ತು. ತುಳು ಕಾವ್ಯ ವಿಷ್ಣುತುಂಗನ ಭಾಗವತೋ,

ಅರುಣಾಬ್ಜನ ತುಳು ಕಾವ್ಯ ಆರಂಭವಾದಾಗ ಹಳೆಯ ಶೈಲಿಯಲ್ಲಿತ್ತು. ಅನಂತರ ಭಾಷಾ ಪ್ರಯೋಗಗಳಲ್ಲಿ ಬದಲಾವಣೆಯಾದವು. ಆಧುನಿಕ ಕಾಲಕ್ಕೆ ಬಂದಾಗ ಪಾ. ವೆಂ., ಪೊಳಲಿ, ಶೀನಪ್ಪ ಹೆಗಡೆ, ಮೋಹನಪ್ಪ ತಿಂಗಳಾಯ, ಸತ್ಯಮಿತ್ರ ಬಂಗೇರ, ಕಯ್ಯಾರ ಕಿಞ್ಞಣ್ಣರೈ, ಬನ್ನಂಜೆ ರಾಮಾಚಾರ್ಯ, ಕುಶಿ ಹರಿದಾಸ ಭಟ್ಟ, ಸೇಡಿಯಾಪು ಕೃಷ್ಣಭಟ್, ಮುರಳೀಧರ ಉಪಾದ್ಯ, ಹಿರಿಯಡಕ, ಬನ್ನಂಜೆ ಗೋವಿಂದಚಾರ್ಯ ಹೀಗೆ ಅನೇಕ ಸಮಕಾಲೀನ ತುಳು, ಕನ್ನಡ, ಸಂಸ್ಕೃತ ಲೇಖಕರೊಂದಿಗೆ ಪಾ. ವೆಂ. ಅವರ ಸಾಹಿತ್ಯಿಕ ಒಡನಾಟ ನಿರಂತರವಾಗಿತ್ತು. ಅವರ ಮಾತೃ ಭಾಷೆ ತುಳುವಾದ್ದರಿಂದ ಕನ್ನಡದ ಜೊತೆ ಅದನ್ನು ಒಂದು ದನಿಯನ್ನಾಗಿ ಮಾಡಿಕೊಂಡಿದ್ದಾರೆ. ಪ್ರಾದೇಶಿಕ ಪರಿಧಿಯಾಚೆಗೆ ಹೋದಾಗಲು ಕೂಡ ಕನ್ನಡದಲ್ಲಿ ಪ್ರಭುದ್ಧವಾದ ಕನ್ನಡದ ಕವಿತೆಯನ್ನು ಬರೆದು ಒಬ್ಬ ಗಮನಾರ್ಹ ಕವಿಯಾಗಿದ್ದರೂ ಕೂಡ ತುಳು ಕಾವ್ಯ ರಚನೆಯಿಂದ ವಿಮುಖರಾಗಲಿಲ್ಲ. ಹೀಗಾಗಿ ಕವಿ ಪಾ.ವೆಂ. ತಮ್ಮ ಒಳದನಿ ಅಥವಾ ವ್ಯಕ್ತಿ ಸಂಸ್ಕೃತಿಯ ಅಭಿವ್ಯಕ್ತಿಯಾಗಿ ತುಳುವನ್ನು ಪದ್ಯಕ್ಕಾಗಿ ಬಳಸಿಕೊಂಡು ಬೆಳೆದರು. ಕನ್ನಡ ಕಾವ್ಯವನ್ನು ತಮ್ಮ ಸಾಮಾಜಿಕ ಅಥವಾ ರಾಜಕೀಯ ದನಿಯಾಗಿಯೂ ಬೆಳೆಸಿಕೊಂಡರು.

ಪ್ರಾರಂಭದ ಜೀವನ ದಿನಗಳಲ್ಲಿ ಶಿಕ್ಷಣ, ವೃತ್ತಿ, ಸಂಸಾರಿಯಾದ ಎಸ್.ಯು.ಪಣಿಯಾಡಿಯವರ ಶಿಷ್ಯರಾಗಿ ಸಾಹಿತ್ಯ ದೀಕ್ಷೆಯನ್ನು ಪಡೆದವರು ಪಾ.ವೆಂ.ಉಡುಪಿಯ ಸಾಹಿತ್ಯ, ಸಾಂಸ್ಕೃತಿಕ ರಂಗದಲ್ಲಿ ತಮ್ಮ ಜೀವನವನ್ನು ತೊಡಗಿಸಿಕೊಂಡು ಬೆಳೆದರು. ಪಣಿಯಾಡಿಯವರಿಗೆ ೧೯೪೦ರಲ್ಲಿ ಆರ್ಥಿಕ ಸಂಕಷ್ಟವು ಬಂತು ಉಡುಪಿಯಲ್ಲಿ ನಿಲ್ಲಲಾರದ ಪರಿಸ್ಥಿತಿ ಒದಗಿತು. ಪಣಿಯಾಡಿಯವರು ಉಡುಪಿಯನ್ನು ತೊರೆದು ಮದ್ರಾಸಿಗೆ ಹೋದರು. ಪಾ.ವೆಂ.ಅವರು ಇದನ್ನೇ ಅನುಸರಿಸಿದರು. ದ್ವಿತೀಯ ಯುದ್ಧದ ಭೀತಿಯಿಂದ ಪಾ.ವೆಂ. ಅವರ ಬಂಧುಗಳು ಅವರನ್ನು ಹೆಚ್ಚು ಕಾಲ ಮದ್ರಾಸಿನಲ್ಲಿ ನಿಲ್ಲಲು ಅವಕಾಶ ಕೊಡದೆ ಧಾರವಾಡಕ್ಕೆ ಕರೆಸಿಕೊಂಡರು. ೧೯೪೨ರಲ್ಲಿ ಹುಬ್ಬಳ್ಳಿಯಲ್ಲಿ **ಲೋಕ ಶಿಕ್ಷಣ ಟ್ರಸ್ಟ್‌ನ ಸಂಯುಕ್ತ ಕರ್ನಾಟಕ** ಪ್ರೆಸ್‌ನ ಜಾಬ್ ವಿಭಾಗದಲ್ಲಿ ಮೇಲ್ವಿಚಾರಕರೆಂದು ನಿಯಮಿಸಿಕೊಂಡರು. ಹೀಗೆ ಪಾ.ವೆಂ. ಹುಬ್ಬಳ್ಳಿಯಲ್ಲಿ ಪತ್ರಿಕೋದ್ಯಮದ ಕ್ಷೇತ್ರದಲ್ಲಿ ವೃತ್ತಿ ಜೀವನ ಪ್ರಾರಂಭವಾಯಿತು. ೧೯೪೪ರಲ್ಲಿ ಹ.ರಾ. ಪುರೋಹಿತರು ಕರ್ಮವೀರದಲ್ಲಿ ಸಂಪಾದಕರಾಗಿದ್ದಾಗ ಪಾ.ವೆಂ. ಲೇಖನಗಳನ್ನು ಬರೆಯತೊಡಗಿದರು. ಹೀಗೆ ಅವರ ಸಾಹಿತ್ಯ ಕ್ಷೇತ್ರದ ಬೆಳವಣಿಗೆ ೧೯೫೦ **ಕರ್ಮವೀರ** ಸಾಪ್ತಾಹಿಕ ಪತ್ರಿಕೆಯಲ್ಲಿ **ಲಾಂಗೂಲಾಚಾರ್ಯ** ಹೆಸರಿನಲ್ಲಿ ಸರಣಿಗಳನ್ನು ಬರೆಯತೊಡಗಿದರು. ಹುಬ್ಬಳ್ಳಿಗೆ ಬಂದು ಹತ್ತು ವರ್ಷದ ನಂತರ ತುಳು ನಾಡಿನಲ್ಲಿ ತುಳು ಚಳುವಳಿ ಮತ್ತೆ ನಿದ್ದೆ ಬಿಟ್ಟು ಎಚ್ಚೆತ್ತಿತು. ಈ ವಿಷಯ ತಿಳಿದು ಪಾ.ವೆಂ. ತನ್ನ ಮಾತೃ ಭಾಷೆಯ ಬಗ್ಗೆ ಮತ್ತೆ ತಮ್ಮ ದೃಷ್ಟಿ ಹರಿಸಿದರು. ತುಳು ಭಾಷೆಯ ಸಾಹಿತ್ಯದಲ್ಲಿ ಗಂಭೀರವಾಗಿ ೧೯೫೨ರ ನಂತರ ಸಾಹಿತ್ಯ ಕೃಷಿ ಆರಂಭಗೊಂಡಿತು. ಹುಟ್ಟೂರಿನ

ಮಣ್ಣಿನ ವಾಸನೆಗೆ ಪಾ.ವೆಂ. ಅವರ ಮನ ಮಿಡಿಯ ತೊಡಗಿತು, ಸ್ಪಂದಿಸಿತು ಆಲೋಚನೆಯಿಂದಲೇ ಮಾತೃನುಡಿಯ ಬಗ್ಗೆ ಅಭಿಮಾನ ಮೂಡಿ ತುಳು ಕವಿತೆಗಳನ್ನು ಬರೆಯಲು ಮನಸ್ಸು ಮಾಡಿದರು. ತಾಯಿ ನುಡಿಯ ಅಭಿಮಾನದ ಶಿಲ್ಪಕಾವ್ಯ ತುಳು ಗೀತಾಂಜಲಿಯೇ **ಬಯ್ಯಮಲ್ಲಿಗೆ** (ಸಂಜೆ ಮಲ್ಲಿಗೆ) ಕವನದ ಶೀರ್ಷಿಕೆಯೇ ಆಕರ್ಷಿತವಾದದ್ದು ಈ ಹೂವಿನ ಬದುಕಿಗೂ ಒಂದು ವೈಶಿಷ್ಟವಿದೆ. ಎಲ್ಲ ಹೂಗಳು ಸೂರ್ಯನ ಹೊಂಗಿರಣ ಮುಟ್ಟಿ ಅರಳಿ ಸುಮಧುರ ಬೀರಿ ತಮ್ಮ ಜೀವನ ಸಾರ್ಥಕಗೊಳಿಸುತ್ತದೆ. ಬಯ್ಯಮಲ್ಲಿಗೆ ಸಂಜೆ ಮಲ್ಲಿಗೆ ಹೂ ಅಂದರೆ ಸೂರ್ಯಸ್ತದ ನಂತರ ಅರಳಿ ತನ್ನ ಸುವಾಸನೆಯನ್ನು ಎಲ್ಲ ಕಡೆಗೂ ಬೀರುತ್ತದೆ.

ಪಾ.ವೆಂ. ಅವರು ತನ್ನ ಕವಿತೆಯ ಬಗ್ಗೆ ಬರೆದವನ ಅರಿಕೆಯಲ್ಲಿ ಕೆಲವು ಮಾತುಗಳನ್ನು ಹೇಳಿಕೊಳ್ಳುತ್ತಾರೆ.[*೧೩] 'ಬಾಳಬಾವಿಯ ನೀರು ಕುಡಿಯಲು ಹುಬ್ಬಳ್ಳಿಗೆ ಬರಬೇಕಾಯಿತು'. ನನ್ನ ಹೆಚ್ಚಿನ ಬರವಣಿಗೆ ಕನ್ನಡ ಭಾಷೆಗೆ ಮೀಸಲಾಗಿರುವುದರಿಂದ, ಹೊಟ್ಟೆಯ ಪಾಡಿಗೋಸ್ಕರ ಇರುವುದರಿಂದ ತುಳು ಬರವಣಿಗೆಯನ್ನು ಈ ಪರಿಸ್ಥಿತಿಗೊಸ್ಕರ ಕಡಿಮೆ ಗೊಳಿಸಲಾಯಿತು. ಈ ಕವಿತೆಗಳಲ್ಲಿ ಹೇಳಿಕೊಳ್ಳುವ ವಿಶೇಷಗಳಿಲ್ಲ. ಈ ಕವಿತೆಗಳಲ್ಲಿ ಬಹಳಷ್ಟು ಕವಿತೆಗಳು ವಯಸ್ಸು ಪಶ್ಚಿಮಕ್ಕೆ ಪ್ರಯಾಣಿಸಿದ ನಂತರ ಬರೆದ ಕವಿತೆಗಳು ತರುಣ ಪೀಳಿಗೆಯನ್ನು ಆಕರ್ಷಿಸುವ ಕವಿತೆಗಳಾವುವು ಇಲ್ಲ. ಕೆಲವು ಪದ್ಯ ಬರೆಯುವಾಗ ತುಳು ಭಾಷೆ ಹೆಚ್ಚು ಕಷ್ಟವಾಗಿರಲಿಲ್ಲ. ಹಾಗಾಗಿ ಗಂಭೀರ ಆಲೋಚನೆಗಳನ್ನು ಕವಿತೆಯಲ್ಲಿ ತರುವ ಚಪಲ ಇತ್ತು ನನಗೆ ೯೯% ಕನ್ನಡ ಭಾಷೆಯಲ್ಲಿ ನನ್ನ ಬರವಣಿಗೆ ಇದ್ದರು ಇದು ಒಂದೂ ಸಪ್ಪೆಯಾದಂತೆ ಅನ್ನಿಸುತ್ತದೆ. ಆದರೆ ತುಳು ಭಾಷೆ ಎದ್ದು ತೋರುವ ನುಡಿ ಸಂಸ್ಕೃತದ ಸಹಾಯ ಇಲ್ಲದೆ ಹೆಚ್ಚು ತೂಕದ ಗಹನವಾದ ವಿಚಾರಗಳನ್ನು ತುಳು ಭಾಷೆಯಲ್ಲಿ ತುಂಬಲು ಸಾಧ್ಯವಿದೆ. ಇದು ಹೆಚ್ಚು ಬಲಯುತವಾದ ಭಾಷೆ ಎಂದು ನಾನು ನಂಬಿರುವೆ. ಇದಕ್ಕಿಂತ ಹೆಚ್ಚಿನ ತೀರ್ಮಾನವನ್ನು ಓದುವವರ ನ್ಯಾಯದ ಚಾವಡಿಗೆ ಬಿಟ್ಟಿದ್ದೇನೆ.' ಎಂದು ಬಿಚ್ಚು ಮನಸ್ಸಿನಿಂದ ತುಳು ಕಾವ್ಯಾಂಜಲಿಯ ಬಗ್ಗೆ ಪಾ.ವೆಂ. ಹೇಳಿಕೊಳ್ಳುತ್ತಾರೆ.

ಕವಿ ಬುದ್ಧಿ ಜೀವಿಗಳ ವೈಫಲ್ಯತೆಯನ್ನು **ಸತ್ಯೊಗು ಪ್ರಾರ್ಥನೆ** (ಸತ್ಯಕ್ಕಾಗಿ ಪ್ರಾರ್ಥನೆ) ಎನ್ನುವ ಕವಿತೆಯಲ್ಲಿ ಚೆನ್ನಾಗಿ ಗುರುತಿಸುತ್ತಾರೆ. ಎಲ್ಲ ಬುದ್ಧಿ ಜೀವಿಗಳಂತೆ ನಾನು ಒಬ್ಬ ಅಪಕ್ವ ಬುದ್ಧಿ ಜೀವಿ, ಭಾರತದ ಬುದ್ಧಿ ಜೀವಿಯ ವೈಫಲ್ಯ ನನಗೂ ಅನ್ವಯಿಸುತ್ತದೆ. ಬುದ್ಧಿ ಜೀವಿಗಳು ವಸ್ತುಸಿದ್ಧವಾಗಿ ಬಿಡಿಸಬೇಕಾದ ಸಮಸ್ಯೆಗಳು ಸಾಕಷ್ಟಿವೆ ಇವುಗಳ ನಿವಾರಣೆಯಾಗಬೇಕು. ಬುದ್ಧಿಜೀವಿಗಳ ಸೋಲಿಗೆ ಅನೇಕ ಕಾರಣಗಳಿವೆ. **ಬುದ್ಧಿಜೀವಿ, ಸಮಾಜ ಮತ್ತು ಸಾಹಿತ್ಯ ಲೇಖನ**ದಲ್ಲಿ ಸೂಚಿಸಿದ್ದಾರೆ. ಈ ಸೂಚನೆ ಕೆಲವು ತೀರ್ಮಾನಗಳಿಗೂ ಇಲ್ಲಿಯೂ ಅನ್ವಯಿಸುತ್ತದೆ. ಕವಿತೆಯ ಪ್ರಾರಂಭದಲ್ಲಿ ಬೂದಿಯಲ್ಲಿ ಇರುವ ಬೆಂಕಿಯ ಕಿಡಿಯಂತೆ ಶರೀರದ ಒಳಗೆ ಅಡಗಿರುವ ಸತ್ಯವೇ ಎದ್ದು ಬಾ ಎಚ್ಚರವಾಗು ಎಂದು ಪ್ರಾರ್ಥಿಸುತ್ತಾ ನನ್ನ ಕೋಣೆಗೆ, ದಾರಿಗೆ, ಬೀದಿಗೆ, ನನ್ನ ಲೋಕಕ್ಕೆ

ಬೆಳಕಾಗಿ ಬಾ ಸತ್ಯವೇ ಎಂದು ಪ್ರಾರ್ಥಿಸುವ ರೀತಿ ಅಜ್ಞಾನದ ಕತ್ತಲಲ್ಲಿ ತುಂಬಿರುವ ಬದುಕಿಗೆ ಜ್ಞಾನವೆನ್ನುವ ಸತ್ಯದ ಬೆಳಕಿನ ಅಗತ್ಯವಿದೆ. ಈ ದಾರಿ ತೋರುವ ಬೆಳಕಾಗಿ ಇರುವ ಧೈರ್ಯ ತುಂಬುವ ಹೆಜ್ಜೆ ಹೆಜ್ಜೆಗೂ ಗಟ್ಟಿಗೊಳಿಸಿ ನಡೆಸುವಂತಿರಬೇಕು. ಬಣ್ಣದ ಲೋಕಕ್ಕೆ ಮಾರುಹೋಗದೆ ತಂಪಾದ ಸುಳ್ಳಲ್ಲಿ ಈಜಾಡುತ್ತಾ ಸೋಮಾರಿ, ಆಲಸ್ಯತನ ಇವುಗಳನ್ನೆಲ್ಲಾ ಹೋಗಲಾಡಿಸಿ ಕಾಡು ಕುದುರೆಗೆ ಲಗಾಮು ಹಾಕಿ ಸವಾರಿ ಮಾಡು ಎನ್ನುವ ಈ ಪ್ರಾರ್ಥನೆ ಬುದ್ಧಿಜೀವಿಗಳನ್ನು ಎಚ್ಚರಿಸುವಂತಿದೆ. ತನ್ಮೂಲಕ ಕವಿ ಈ ಮಾತನ್ನು ತುಳು ಶಬ್ದಗಳಲ್ಲಿ ಸರಳವಾಗಿ ಸುಂದರವಾಗಿ ನಿರೂಪಿಸುತ್ತಾನೆ. ಬೂದಿ ಮುಚ್ಚಿದ ಕೆಂಡದಂತಿರುವ ಸತ್ಯ ಜೀವವನ್ನು ಶೋಧಿಸಿ ಮನುಷ್ಯನನ್ನು ಜಗತ್ತನ್ನು ಆರೋಗ್ಯದಾಯಕವನ್ನಾಗಿ ಮಾಡಬೇಕು ಎನ್ನುವ ಪ್ರಾರ್ಥನೆ ಇದು. ಹಾಗಾಗಿ ಕವಿ ಶರೀರದೊಳಗೆ ಅಗೋಚರವಾಗಿರುವ ಸತ್ಯವೇ ನನ್ನ ತಲೆಯನ್ನು ನೀನು ಕಾಪಾಡು, ನನ್ನ ಕೈ, ನಾಲಿಗೆ, ನನ್ನ ಮನಸ್ಸಿನ ಬಾಗಿಲನ್ನು ಕಾಪಾಡು, ಮನಸ್ಸು ಮತ್ತು ಬುದ್ಧಿಗಳಿಗೆ ಕಾರಣವಾಗಿರುವ ಅಂಗಾಂಗಗಳ ಬಗ್ಗೆ ದುಡಿಯುವ ಕೈ, ತಲೆ, ಮನಸ್ಸು, ನಾಲಿಗೆ ಎಲ್ಲ ಸತ್ಯದಿಂದ ತುಂಬಿರಲಿ ಎನ್ನುವುದು ಪ್ರಾರ್ಥನೆಯೊಂದಿಗೆ ಸಮಾಜದ ಜನರ ಹಿತಚಿಂತನೆಯ ಬಗ್ಗೆ ಶಕ್ತಿಯುತವಾಗಿ ಹೊರ ಹೊಮ್ಮಿದ ಧ್ವನಿಯಿದು.

ಒಳಪ್ರಾಸ ಮತ್ತು ಅಂತ್ಯಪ್ರಾಸಗಳಿಂದ ಕವನದ ರಚನೆ ತುಳು ಶಬ್ದದ ಮೊನಚುಗಳಿಂದ ಕವಿತೆ ಓದುಗರ ಹೃದಯ ಮಿಡಿಯುವಂತಿದೆ. ಇದೇ ರೀತಿಯ ಕವನ **ಬಿನ್ನಯ** ಎನ್ನುವುದು ಮನೆಯ ಮಾತು ತುಳುವಾಗಿದ್ದರೂ ತುಳು ಭಾಷೆಯ ಸಂಪರ್ಕ ಅವರ ತರುಣ ವಯಸ್ಸಿನ ಕೆಲವೇ ವರ್ಷಗಳಲ್ಲಿದ್ದಿತು. ಅದಾಗ್ಯೂ ತಾಯ್ನಾಡಿನ ಮೇಲಿನ ಮಮತೆ ತವರು ಮನೆಯಲ್ಲಿದ್ದಂತೆ, ಪಾ.ವೆಂ. ಅವರು ಮೂಲ್ಕಿಯಲ್ಲಿ ಜರುಗಿದ ಜನವರಿ ೧೯೮೦ರಲ್ಲಿ ಮೂರನೆಯ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ತುಳುನಾಡಿನ ಅಭಿಮಾನ, ಮಾತೃಭಾಷೆಯ ಬಗ್ಗೆ ಇರುವ ಮಮತೆ ಈ ಕವಿತೆಯಲ್ಲಿ ವ್ಯಕ್ತವಾಗಿದೆ. ತುಳುನಾಡಿನ ಭಾಷೆ ಪರವಶತೆ, ಸೌಂದರ್ಯವನ್ನು ವರ್ಣಿಸುತ್ತಾ ಬಾಲ್ಯ, ತರುಣ ವಯಸ್ಸಿನ ಅನುಭವ, ನೆನಪುಗಳು ದೂರದ ಊರಿಗೆ ಹೋಗಿ ಬದುಕಲು ಊರುಗಳನ್ನು ದೇಶಗಳನ್ನು ಸುತ್ತಾಡಿ ಅನೇಕ ಭಾಷೆಗಳನ್ನು ಕಲಿತರೂ ತುಳು ನಾಡಿನ ಬಗ್ಗೆ ಎಷ್ಟೊಂದು ಭಾವಜೀವಿಯಾಗಿದ್ದರೆ, ಭಾವಜೀವಿಯ ಸೆಳವಿನಿಂದ ಪಾ. ವೆಂ. ಮುಕ್ತರಾದಂತಿಲ್ಲ. **ತುಳುನಾಡ್‌ದ ನೆನಪು** ಕವನದಲ್ಲಿ*[೧೪]

ತುಳುನಾಡ್‌ದ ಮಣ್ಣ್‌ಡ್ ವಾ ಕಂಪುಂಡಾ
ತುಳುನಾಡ್ ನೀರ್‍ಡ್ ವಾ ತಂಪುಂಡಾ
ಆ ಪಡ್ಡಯ್ ಗಾಳಿಡ್ ವಾ ಒಯ್ಪುಂಡಾ
ಪಿನಯ್; ಯಾನ್ ಪಿನಯೆ;

ಇಜ್ಜಿಡ–ಒಲ್ಲೊ ಒಲ್ಲೊ ಒಲ್ಪನೊ ತಿರಗ್ಂಡಲಾ
ನೂದ್ ಗಾವುತದ ದೂರ ಆಂಡಲಾ
ಮೂಜಿಪತ್ತೆ ಮರಿಯಾಲ ಪೋಂಡಲಾ
ಒಯ್ಪುಂಡೇ ಅವು ಒಯ್ಪುಂಡೇ

ಇದು ವಾಚನಕಾರರಿಗೆ, ಕವಿಗಳಿಗೆ ಸಾಹಿತಿಗಳಿಗೆ ಮಾತ್ರ ಮಿತವಾದ ಭಾವನೆಯಾಗಿಲ್ಲ. ದೇಶ ವಿದೇಶಗಳಿಗೆ ಅನ್ನದ ದಾರಿಯನ್ನು ಅದೃಷ್ಟದ ದಾರಿಯನ್ನು ಆರಿಸಿಕೊಂಡು ಹೋಗಿ ದುಡಿಯುವ ತುಳು ಮಣ್ಣಿನ ಮಕ್ಕಳಿಗೆ ವರ್ಷಕ್ಕೆ ಒಂದು ಸಲವಾದರೂ ತಮ್ಮ ತವರೂರ ತೊಟ್ಟಿಲಿಗೆ ಬರುವಾಗ ಆ ಊರಿನ ಗಾಳಿಯ ಸೆಳವು ಸಹಜವಾಗಿ ಆಕರ್ಷಿಸುತ್ತದೆ. ಕವಿ ತನ್ನ ಬಾಲ್ಯದ ಬಡತನದ ಕಹಿ ದಿನಗಳನ್ನು ಈ ರೀತಿ ನೆನೆಯುತ್ತಾನೆ. ಪಾ.ವೆಂ. ಅವರ ಆತ್ಮಕಥೆ ಎನ್ನಬಹುದು. ನನ್ನ ತುಳು ನಾಡಿನಲಿ ಕುಡಿಯಲು ಗಂಜಿಯೂ ಇಲ್ಲದೆ ತಲೆಯ ಮೇಲಿನ ಸೂರಿಗೂ ಹುಲ್ಲಿಗೂ ಗತಿ ಇಲ್ಲದೆ ಒಲೆ ಉರಿಸಲು ಒಣ ಎಲೆಯೂ ಇಲ್ಲದೆ, ಭಾರವಾದ ಕಾಲನ್ನು ಎಳೆದುಕೊಂಡು ನಾನಾದೇಶವನ್ನು ಸುತ್ತಿ ಪ್ರೀತಿ ಸ್ನೇಹವನ್ನು ಸಂಪಾದಿಸಿದೆ. ತಾಯಿ ನಾಡಿನ ಪ್ರೀತಿಯನ್ನು ಕಡಿದು ಹಾಕಿದೆ. ಮತ್ತೆ ಅದು ಚಿಗುರಿತು. ಹೀಗೆ ತುಳುನಾಡಿನ ಮಣ್ಣಿನ ಜೊತೆ ಹೊರ ಊರಿನ ಬದುಕಿನ ಚಿತ್ರಣವನ್ನು ಕವಿತೆಯಲ್ಲಿ ಕಾಣುತ್ತೇವೆ. ಕೊನೆಯ ಸಾಲುಗಳಲ್ಲಿ ಹೇಳುವ ಮಾತುಗಳು ಕವಿ ಮನದಾಳದಲ್ಲಿ ಹುದುಗಿದ ತಾಯಿ ನೆಲದ ಮಣ್ಣಿನ ವಾಸನೆ, ಮಮಕಾರ ಮಡುಗಟ್ಟಿದ ಪರಿಯನ್ನು ಕಾಣುತ್ತೇವೆ. ತುಳು ನಾಡಿನಲ್ಲಿ ಬದುಕಲು ನಲಿಯಲು ನಡೆದಾಡಲು ಸಾಧ್ಯವಾಗದಿದ್ದರೂ ಬದುಕಿನ ಕೊನೆಯ ದಿನದ ಉಸಿರನ್ನು ಬಿಡಲು ತಾಯಿ ನಾಡಿಗೆ ಹೋಗಬೇಕೆಂದೆನಿಸುತ್ತದೆ. ಬಹುಷಃ ಬದುಕಿನ ಉದಾತ್ತ ಧ್ಯೇಯವನ್ನು ಇಟ್ಟುಕೊಂಡ ಕವಿ ಅದು ಸಾಧ್ಯವಾಗದೆ ಹೋದಾಗ ಕವಿ ಮನಸ್ಸು ಈ ರೀತಿ ಮಿಡಿಯುತ್ತದೆ. ತುಳುನಾಡಿನ ಗಾಳಿಯಲಿ ಗಾಳಿಯಾಗಿ, ಕಡಲಿನ ತಡಿಯ ಮರಗಳಲ್ಲಿ ಹೇಳದೆ ಉಳಿದಿರುವ ಪದಗಳನ್ನು, ನುಡಿಗಳನ್ನು ಹೇಳಬೇಕೆನಿಸುತ್ತದೆ.

ಹೀಗೆ ಹೊರ ದೇಶದಲ್ಲಿ ಬದುಕಿದ ಕವಿ ತಾಯಿ ನಾಡಿನ ನೆನಪನ್ನು ಈ ರೀತಿ ಸ್ಮರಿಸುತ್ತಾರೆ. ಆಚಾರ್ಯರಿಗೆ ಮೆಚ್ಚುಗೆಯಾಗುವ ತತ್ವ ವಿಚಾರಗಳು **ಗೌತಮ–ಗೌತಮಿ** ಕವಿತೆಯಲ್ಲಿ ಸ್ಪಷ್ಟಗೊಂಡಂತಿದೆ. ಕವಿ ದುಃಖದ ಕುರಿತು ಚಿಂತನೆ ಬೆಳೆಸಿದ್ದಾರೆ. **ಗೌತಮ–ಗೌತಮಿ** ಎನ್ನುವ ಕಥನ ಕಾವ್ಯದಲ್ಲಿ ಗೌತಮ ಬುದ್ಧ (ತಿಳಿದವ) ಗೌತಮಿಯು ಇಲ್ಲಿ ಬುದ್ಧನು ಹೇಗೆಂದರೆ ದು:ಖವೆನ್ನುವುದು ಹಗೆತನ, ಸಾವು ಹಗೆತನವಲ್ಲ ದು:ಖದ ತಿರುಳನ್ನು ತಿಳಿದರೆ ಸಾವು ಗೆದ್ದಂತೆ ಆಗ ಎಲ್ಲರೂ ಬುದ್ಧರಾಗಲು ಸಾಧ್ಯವಿದೆ. ಇದು ಅನುಭವ ಸತ್ಯ. ಬದುಕಿನ ವಿಶ್ಲೇಷಣೆಯುಳ್ಳ ಹಾಗೂ ಅನುಭವ ಜನ್ಯ ವಿಚಾರಗಳು ಕವಿತೆಯ ಕೊನೆಯ ಚರಣಗಳಲ್ಲಿ ಸ್ಪಷ್ಟವಾಗಿದೆ. ದೀರ್ಘವಾದ ಕವಿತೆಯ ಉದ್ದಕ್ಕೂ ಐತಿಹಾಸಿಕ ಕಥೆಯನ್ನು ಹೆಣೆಯುತ್ತಾರೆ. ಕವಿತೆಯ ಸಾಲುಗಳಲ್ಲಿ ಕಂಡು ಬರುವ

ಪಡೆನುಡಿಯ ಪಲಕು ಒಳಪ್ರಾಸಗಳು, ಅಂತ್ಯಪ್ರಾಸ, ಲಯಬದ್ಧವಾದ ಹೃದಯಸ್ಪರ್ಶಿ ಶಬ್ದಗಳು ಕವಿತೆಗೆ ತನ್ನದೆ ಆದ ಕಾಂತಿಯನ್ನು ಕೊಟ್ಟಿದೆ.

ಪಾ.ವೆಂ. ಅವರಿಗೆ ಯಕ್ಷಗಾನದ ವಿದೂಷಕನಂತೆ ನಮ್ಮನ್ನು ಪುರಾಣಲೋಕದಿಂದ ವರ್ತಮಾನದ ರಗಳೆ-ರಂಪಗಳಿಗೆ ಆಧುನಿಕತೆಯ ಮೆರುಗನ್ನು ನೀಡುವದರಲ್ಲಿ ಹರಟೆಗಾರ ಪಾ.ವೆಂ. ಸಿದ್ಧಹಸ್ತರು. ನನ್ನಂತೆಯೇ Devastaing ವಿಷಯಗಳನ್ನು Devastaing ಹೇಳಿದವರು ಹೆಚ್ಚು ಜನರಿಲ್ಲ' ಎನ್ನುವ ಪಾ.ವೆಂ. ಅವರ ಮಾತಿನಲ್ಲಿ ಅಹಂಕಾರದ ಲೇಪನವಿಲ್ಲ. ಸ್ವಮೌಲ್ಯಮಾಪನವಿದೆ. ಪುರಾಣ ಪ್ರಜ್ಞೆಯನ್ನು ಆಧುನಿಕ ರೀತಿಯಲ್ಲಿ ಹೇಳುವ ಚಮತ್ಕಾರವನ್ನು **ಗೋಪಿ** ಕವನದಲ್ಲಿ ಕಾಣುತ್ತೇವೆ. ಗೋಪಿ ಒಂಟಿಯಾಗಿ ಬಂದು ಯಮುನೆಯ ನೀರಿಗಿಳಿದು ಸ್ನಾನ ಮಾಡುತ್ತಿರುತ್ತಾಳೆ. ಕಳ್ಳ ಗೋಪಾಲಕೃಷ್ಣ ಬರುತ್ತಾನೋ, ಸೀರೆ, ರವಿಕೆ ಕದಿಯುತ್ತಾನೋ ಎಂಬ ತಲ್ಲಣದಲ್ಲಿರುತ್ತಾಳೆ. ಸಾಕಷ್ಟು ಹೊತ್ತು ಈಜಾಟವಾಡಿ ದಡ ಸೇರುತ್ತಾಳೆ. ಆಗ[೧೫]

ಕೈಲ ಕಾರ್‌ಲ ಸೋತುದು,
ಕರೆತ ದಿಕ್ಕ್‌ಗ್ ತಿರ್ಗಿದ್
ಮೆಲ್ಲಮೆಲ್ಲ ನೀಂದ್‌ದ್
ಬತ್‌ದ್ ಕಟ್ನನಿ ಪತ್ತ್‌ದ್
ಗೋಪಿ ನಿಲೊಕ್ಕು ಬತ್ತೊಲು
ಗಾಬ್ರಿ ಆಯಿನ

ಪುರಾಣ ಲೋಕದ ಅತ್ಯಂತ ಸಣ್ಣ ಘಟನೆಯ ಮೂಲಕ ಕವಿ ಪುರಾಣಲೋಕಕ್ಕೂ ವಾಸ್ತವ ಲೋಕಕ್ಕೂ ಇರುವ ಅಂತರವನ್ನು ಸೊಗಸಾಗಿ ವರ್ಣಿಸುತ್ತಾರೆ. ಪುರಾಣ ಪ್ರತೀಕದ ಮೇಲೆ ಬಿದ್ದಿರುವ ಕವಿಯ ವೈಯಕ್ತಿಕ ಛಾಪುವಿನಿಂದ ಇಲ್ಲಿಯ ಸೊಗಸು ಇಮ್ಮಡಿಯಾಗಿದೆ. **ಎನ್ನ ರಾಮಾಯಣದಲ್ಲಿ** ಶ್ರೀರಾಮ ಕಥೆಯನ್ನು ಅಣಕವಾಗಿ ಹೇಳುತ್ತಾರೆ. ಶ್ರೀಮಂತರ ಕಥೆಯಲ್ಲ ರಾಮಾಯಣವಾದರೆ ಚಂದ ಆದರೆ ಬಡವರ ಕಥೆ ಪಿಟ್ಕಯ್ಲನಾ ಎಂದೂ ತನ್ನ ಮೂಲಕ **ಎನ್ನಂಚಿನಾಕುಲೆಗ್‌ಬಜಿ ಪಿಟ್ಕಾಯ್ಲನಾ!** ಎಂದು ಪ್ರಶ್ನಿಸುತ್ತರೆ. ಸಾಮಾನ್ಯ ಜನತೆಯ ಬದುಕು ಕೇಳುವವರಾರು ಎನ್ನುವುದು ಪ್ರಶ್ನೆ. ಬೇಂದ್ರೆಯವರ ರಾಮಾಯಣ ಕವನ ಇದಕ್ಕೆ ಪ್ರೇರಣೆಯಂತಿದೆ. ಬೇಂದ್ರೆ- **ರಾಮನ ವಿರಹವು ಸೀತಾವಿರಹವು ತುಂಬಿದೆ ರಾಮಾಯಣ ಸಣ್ಣವರತ್ತರೆ ಎಣಿಕೆಗೆ ಬಾರದು ಅಯ್ಯೋ ನಾರಾಯಣ.** ಸಾಮಾನ್ಯ ಜನರ ಅಸಾಹಯಕತೆಯನ್ನು ಕೇಳುವವರಿಲ್ಲ.

ಅರ್ತ ಕವಿತೆಯಲ್ಲಿ ಜೀವನ ವ್ಯವಹಾರದ ವೈಚಾರಿಕ ವಿಷಯಗಳ ಬಗ್ಗೆ ಹೇಳುತ್ತಾರೆ. ಪಾ. ವೆಂ. ಅವರ ಪ್ರಾರಂಭದ ತುಳು ಕವಿತೆಯಿದು ತುಳು ಭಾಷೆಯು ಹೆಚ್ಚು ಕೃಷಿಯಾಗದೆ ಇರುವ ಸಮಯದಲ್ಲಿ ಕವಿ ತನ್ನ ಮನಸ್ಸಿನ ಚಪಲತೆಗೋಸ್ಕರ ಬರೆದ ಕವಿತೆಯಾಯಿತು. ಬದುಕಿನ ಅರ್ಥಕ್ಕೆ ಘನವಾದ ವಿಚಾರಗಳನ್ನು ತುಂಬುವ ಪ್ರಯತ್ನ, ಅದನ್ನು ಅರ್ಥಿಸುವ ಪ್ರಯತ್ನದೊಂದಿಗೆ ಕವನ ಸಾಗುತ್ತದೆ. ಈ ಬದುಕಿನ ಅರ್ಥಕ್ಕೆ

ಕವಿಗೆ ಉತ್ತರವೇ ಸಿಗುವುದಿಲ್ಲ ಬದುಕಿನ ಬಗ್ಗೆ ನೆನೆಯುತ್ತಾ ಕೊನೆಗೂ ಮನುಷ್ಯನಿಗೆ ನಿದರೆ ಇಲ್ಲ ನಿದ್ರೆ ಇಲ್ಲ ಎನ್ನುವ ನಿದ್ರೆ ಮಾಡಿದರೂ ಮತ್ತೆ ಕ್ಷಣದಲ್ಲಿ ಎಬ್ಬಿಸುತ್ತದೆ. ಕವಿತೆಯಲ್ಲಿ ಪೂರ್ಣವಾಗಿ ವಿಚಾರವಾದಗಳೇ ತುಂಬಿದೆ. ಜೀವನ ಸಂಘರ್ಷದ ಪೂರ್ಣ ಚಿತ್ರಣವಿಲ್ಲಿದೆ. ಪ್ರಾರಂಭದಲ್ಲಿ ಹೇಳುವ ನುಡಿಗಳು ಜೀವನಕ್ಕೆ ಅರ್ಥವೇ ಇಲ್ಲ, ಹೇಗೆ ಸರಿಮಾಡಿದರೂ ಇದರ ಲೆಕ್ಕ ಸರಿ ಬರುವುದಿಲ್ಲ. ಒಂದು ಕಡೆ ಹೊಲಿದರೆ ಇನ್ನೊಂದು ಕಡೆ ಹರಿಯುತ್ತದೆ. ಬಯ್ಯಮಲ್ಲಿಗೆ ಹೂ ಅರಳುತ್ತದೆ. ಪಶ್ಚಿಮದಲ್ಲಿ ಬೀರಾಟ ಪ್ರಾರಂಭವಾಗುತ್ತದೆ. ಬೆಂಕಿಗೆ ನೀರು ಹಾಕುತ್ತಾರೆ. ಅನ್ನುವ ಸಾಲುಗಳು ಜೀವನದ ಅರ್ಥ ತಿಳಿಯುವ ಮುನ್ನವೇ ಅರ್ಥ ಜೀವನ ಮುಗಿದಿರುತ್ತದೆ. ಸಂಜೆ ಮಲ್ಲಿಗೆ ಹೂವಿನಂತೆ ಇದು ಜೀವನದ ಸಾರ್ಥಕತೆಯ ಸಂಕೇತವೂ ಆಗಿದೆ ಜೀವನದ ಸಂಜೆಯೂ ಹೌದು. **ಜೀವನಕ್ಕೆ ಅರ್ಥವುಂಟೆ** ಎನ್ನುವ ಚಿಂತನ ಪರ ಲೇಖನದಲ್ಲಿಯೂ ಇದಕ್ಕೆ ವಿವರವನ್ನು ಕಾಣುತ್ತೇವೆ. ಸೃಷ್ಟಿಯ ಒಂದು ಅಂಗವಾದ ಮನುಷ್ಯನ ಜೀವನಕ್ಕೆ ಸೃಷ್ಟಿಗಿಂತ ಭಿನ್ನವಾದ ಅಸ್ತಿತ್ವವನ್ನು ಹೇಳಲು ಬರುವುದಿಲ್ಲ. ಲೋಕದ ಎಲ್ಲ ಜೀವಿಗಳ ಸಾವು ನೋವು ಇದೆ. ಆದರೆ ನೂರೊಂದು ಹಾರುವ ಮನಸ್ಸು, ದುಃಖ ಮನುಷ್ಯನಿಗಷ್ಟೆ ಇದೆ. ದುಃಖದ ತಿರುಳನ್ನು ಮನುಷ್ಯ ಅರ್ಥೈಸಿದಂತಿಲ್ಲ. ಹಾಗಾಗಿ ಇವನು ಸದಾ ನಿದ್ರಾಹೀನವಾಗಿರುತ್ತಾನೆ. ವ್ಯಕ್ತಿ ಕ್ಷಣಿಕ; ಜೀವನ ಸೃಷ್ಟಿ ನಿರಂತರವಾದುದು.

ರಾಮದೇವರ ಸತ್ಯ, ಗೋಪಿ, ಯುಗಾದಿ-ದುರ್ಮತಿ: ಈ ಕವನಗಳು ಕನ್ನಡ ಭಾಷೆಯಲ್ಲಿಯು ಅನುವಾದಗೊಂಡಿವೆ. ಗೋಪಿ ಕನ್ನಡದಿಂದ (೧೯೬೦) ಹಿಂದಿ, ತುಳು ಭಾಷೆಗೂ ಪಾ. ವೆಂ. ಅನುವಾದಿಸಿದ್ದಾರೆ. ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡ ಈ ಕವನ ಬಯಮಲ್ಲಿಗೆಯಲ್ಲೂ ತನ್ನ ಕಂಪನ್ನು ಬೀರಿದೆ. ಪಾ. ವೆಂ. ಅವರಿಗೆ ಹೆಚ್ಚು ಪ್ರಿಯವಾದ ಕವನವೂ ಹೌದು. ಬಡವು (ಹಸಿವು) ಎನ್ನುವ ಕವಿತೆ. ಪ್ರಗತಿಪರ ಧೋರಣೆಯ ಅಂಶಗಳನ್ನು ಶಕ್ತಿ ಯುತವಾಗಿ ಧ್ವನಿಸುತ್ತದೆ. ಹಸಿವಿನ ತೀವ್ರತೆ, ಅದರ ಕರಾಳ ಮುಖಗಳು, ಶ್ರೀಮಂತರ ಕ್ರೌರ್ಯ, ಧರ್ಪ ತಾರತಮ್ಯ ಧೋರಣೆ ಬಡವರನ್ನು ಶೋಷಣೆ ಬಳಸಿಕೊಂಡು ಅಸಾಹಯಕರನ್ನು, ಬಲಹೀನರನ್ನು ತಮ್ಮ ಅನುಕೂಲಕ್ಕೆ ಒಳಪಡಿಸಿ ಅಮಾನವೀಯ ದಮನ ಪ್ರವೃತ್ತಿಯನ್ನು ಅನುಸರಿಸುತ್ತಾರೆ. ನ್ಯಾಯ-ಧರ್ಮ, ಮಂತ್ರ-ತಂತ್ರ, ಮಠ-ಮಾನ್ಯ, ಶಾಲೆ, ವೇದ ಉಪನಿಷತ್, ಜಾತಿ-ಮತ ಆಳ್ವಿಕೆ ಈ ಎಲ್ಲಹೆಸರುಗಳಡಿಯಲ್ಲಿ ಉಳ್ಳವರು ನಡೆಸುವ ಈ ವೃತ್ತಿಗಳಲ್ಲಿ ಬಡವರ ಜೀವನದ ಸ್ಥಿತಿಗತಿಯ ಹೃದಯ ಸ್ಪರ್ಶಿ ಶಬ್ದ ಚಿತ್ರಣವಿದೆ. ಬಡವರ ಹಸಿವಿನ ಬಗ್ಗೆ ಈ ಸಮಾಜಕ್ಕೆ ಗಮನವೇ ಇಲ್ಲ. ಕಷ್ಟದ ಜೀವನ ನಡೆಸುವ ಈ ಶ್ರಮ ಜೀವಿಗಳಿಂದ ಸಮಾಜದಲ್ಲಿ ಲಾಭ ಪಡೆದವರು ಮುಂದೆ ಸಾಗಿ ತಮಗೆ ಬೇಕಾದ ಅನುಕೂಲಸ್ಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಶೋಷಿತರ, ನಿರ್ಗತಿಕರ ಅವಸ್ಥೆಯನ್ನು ಕವಿ ಸ್ವಭಾವೋಕ್ತಿಗಳಿಂದ ಪಡಿನುಡಿಸುತ್ತ ಓದುಗರಲ್ಲಿ ಅನುಕಂಪ ಮತ್ತು ಎಚ್ಚರಿಕೆಯನ್ನು

ನೀಡುತ್ತಾನೆ. ಕವಿತೆಯ ಪ್ರಾರಂಭದಲ್ಲಿ ಹಸಿವಿನ ತೀವ್ರ ಸ್ವರೂಪ ಚಿತ್ರಣವಿದೆ. ಹಸಿವಿನ ಹೊಟ್ಟೆ ಮಾತ್ರ ಇದೆ. ಕಣ್ಣು, ಕಿವಿ, ಬಾಯಿ, ತಲೆ ಯಾವುದು ಇಲ್ಲ.ಹೊಟ್ಟೆಯಲ್ಲಿ ನಂಜು ಹುಟ್ಟಬಹುದು (ಇದು ಮನುಷ್ಯ ಗುಣ) ಇದನ್ನು ನಂಜುಂಡನ್ನು ಕುಡಿಯಲು ಹಿಂಜರಿಯುತ್ತಾನೆ. ಆದರೆ ಈ ನಂಜು ಕೈಲಾಸ ವೈಕುಂಠವನ್ನೇ ಒಂದು ಮಾಡಬಹುದು. ಶ್ರೀಮಂತರೆ (ಬಂಗಾರ ಮನೆಯ ಮಾಲಿಕರು) ಹಸಿವು ಎನ್ನುವ ಕಾಡು ಹಂದಿಯನ್ನು, ಮುಂದೆ ಹಿರಣ್ಯಕಶಿಪು (ಹಿರಣ್ಯ ಬಂಗಾರ)ವನ್ನು ಸಿಗಿದ ನರಸಿಂಹ, ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದ ವಾಮನ ಇವರೆಲ್ಲ ತಮ್ಮ ಹಸಿವನ್ನು ನೀಗಿಸಿಕೊಂಡರು. ಶ್ರೀಮಂತರೇ ಕೇಳಿ ಹಸಿವೇ ಅನ್ನ ಆದಾ ಬಡವರ ನಾಲಗೆ ನುಡಿಯುತಿದೆ ಎಚ್ಚರ! ಎನ್ನುವ ಸಾಲು ಕವಿ ಇಡೀ ಬಡವರ ವರ್ಗದವರ ಪ್ರತಿನಿಧಿಯಾಗಿ ಶ್ರೀಮಂತಿಕೆಯ ಅಟ್ಟಹಾಸವನ್ನು ಖಂಡಿಸುವ ರೀತಿ ಇಲ್ಲಿ ಮಾರ್ಮಿಕವಾಗಿದೆ. **ಬಡವು** ಕವಿತೆಯ ಕೊನೆಯ ಸಾಲುಗಳು*೧೬

ಬಂಗಾರದ ಕವಚದಾಕುಲೇ ಕೆಬಿ ಕೊರ್ಲೆ,
ಬಂಗಾರ್ ತಿನ್ಪನಾಯನಿ ಸಿಗ್ತಿನಾಯ ಬಡವುನ್ಪಿ ನರ- ಸಿಂಗೆ;
ಬಂಗಾರ್ತ ಏಣೆಡ್ ಸೊರ್ಗದ ಕೋಟಿಗೆಂದುನಕುಲೇ,
ನೂದು ಯಜ್ಞಾಯನಿ ಬೊಲ್ತಿ ಮೂಜಜಿ ಪೆಜ್ಜೆದಾಯೆ
ಮೂಜಿ ಮುನ್ಚಿದಾಲೆತ್ತಿನ ಬಡವುದಾಯೆ!
ಬಡವು ಉಪ್ಪಾಡ್ಂದ್ ಎಣ್ಣೊಂದಿ ಮಲ್ಲ ಬಂಜಿದಕುಲೆ,
ಬಡವೇ ನುಪ್ಪಾಯಿ ನಾಕುಲೆ ನಾಲಾಯಿ ಪಂದುಂಡು ಜೋಕೆ!

ಸಂಸ್ಕೃತತೊಡ್ದು: ಸಂಸ್ಕೃತದಿಂದ ಅನುವಾದಗೊಂಡ ಸುಭಾಷಿತಗಳು ತುಳು ಭಾಷೆಯಲ್ಲೂ ಪಾ. ವೆಂ. ಅನುವಾದಿಸಿದ್ದಾರೆ. ಕಡೆಯ ನಾಲ್ಕು ಸಾಲಿನ ಕವಿತೆಗಳು ಸುಭಾಷಿತದ ಮಾದರಿಯನ್ನು ಹೋಲುತ್ತದೆ. ಬಾಲ್ಯದಿಂದಲೂ ವೈದಿಕ ವಾತಾವರಣದಲ್ಲಿ ಬೆಳೆದ ಕವಿ ತನ್ನ ಸುತ್ತಲಿನ ಜಗತ್ತಿನ ಬಗ್ಗೆ ಆಗು ಹೋಗುಗಳ ಬಗ್ಗೆ ತನ್ನ ವಿಚಾರ ದೃಷ್ಟಿಯನ್ನು ಹರಿಸುತ್ತಲೇ ಬೆಳೆದಿರುತ್ತಾನೆ. ಮತ ಪರಂಪರೆ ಧರ್ಮ, ಶಿಕ್ಷಣ, ನಂಬಿಕೆಗಳು ಮುಂತಾದ್ದರ ಬಗ್ಗೆ ಸಾಮಾಜಿಕ ಚಿತ್ರಣ ಕವಿ ಮನಸ್ಸಿನಲ್ಲಿ ಸಾಕಾರಗೊಂಡು ಧರ್ಮ ಸಂಸ್ಕೃತಿಯ ಬಗೆಗೆ ನಡೆಯುವ ಲೆಕ್ಕಾಟವನ್ನು **ಆಯಿಜಿನರಮಾನಿ** ಎನ್ನುವ ಕವಿತೆಯಲ್ಲಿ ಹೇಳುತ್ತಾರೆ. ಇದೇ ಪದ್ಯಕ್ಕೆ ಕೆಲವು ಸಾಲುಗಳನ್ನು ಸೇರಿಸಿ ೧೯೮೩ರ ಮೈಸೂರಿನ ದಸರಾ ಕವಿಗೋಷ್ಟಿಯಲ್ಲಿ ಪಾ.ವೆಂ. ಓದಿದ **ಆಯೆ ಬತ್ತೆ ಉಂಬ್ಯೊ ಬತ್ತೆ** ತುಳು ಕಾವ್ಯದ ಶ್ರೇಷ್ಟ ಕವನಗಳಲ್ಲೊಂದು. ಪಾ.ವೆಂ. **ಅವನು ಬಂದ ಇವನು ಬಂದ** ಎಂಬ ಕನ್ನಡ ಪಾಠಾಂತರವನ್ನು ಬರೆದಿದ್ದಾರೆ.*೧೭

ರಾಮ ಬಂದ ಕೃಷ್ಣ ಬಂದ
ಬುದ್ಧ ಬಂದ ಕ್ರಿಸ್ತ ಬಂದ
ಬಸವ ಬಂದ ಗಾಂಧಿ ಬಂದ
ಎಲ್ಲ ತೊರೆದ ಜಿನನು ಬಂದ

ಹೀಗೆ ಕವನ ಪ್ರಾರಂಭವಾಗುತ್ತದೆ. ವಿವಿಧ ಧರ್ಮದ ಮಹಾತ್ಮರು ಹೇಳಿದ ಮಾತುಗಳು ಕವನದ ಮೊದಲ ಭಾಗದಲ್ಲಿದೆ. ಮತ, ಧರ್ಮ ತತ್ವ ಚಿಂತನೆಗಳನ್ನು ಸ್ವಾರ್ಥ, ಪ್ರತಿಷ್ಠೆಗಾಗಿ ಬಳಸಿಕೊಂಡ ಮನುಷ್ಯ, ಮಾನವಧರ್ಮದ ಮೂಲ ನೆಲೆಗಟ್ಟನ್ನು ಅಲುಗಾಡಿಸಿದ್ದಾನೆ. ಹೀಗಾಗಿ ನಮ್ಮ ಸಮಾಜ ಜೀವನದಲ್ಲಿ ಮತ-ಧರ್ಮಗಳು ಕಲಹದ ಮೂಲಗಳಾಗಿ ವಿಜೃಂಭಿಸುತ್ತಿದೆ. ಬಡವರಿಗೊಂದು ಧರ್ಮ-ದೇವರು-ಶ್ರೀಮಂತರಿಗೊಂದು ಧರ್ಮ ದೇವರು ಇಲ್ಲಿ ನಿತ್ಯ ಕಲಹ ಮನುಷ್ಯನ ಅಸ್ತಿತ್ವವು ಸಂಕುಚಿತ ಮತಿಗಳ ಸೃಷ್ಟಿನಿಂದ ಭೇದ ಭಾವಗಳಿಂದ ಆತಂಕಕ್ಕೀಡಾಗುತ್ತಿದೆ. ಬುದ್ಧಿ ರಹಿತ, ನಿರರ್ಥಕ ಹೀಂಸೆಯನ್ನು ಗಮನಿಸಿ ಕವಿ ಯಾವ ಮಹಾ ಪುರುಷರು ಬಂದರು ಈ ದಾರಿ ಸುಗಮಗೊಳ್ಳಲಿಲ್ಲ. ಯಾರ ತತ್ವ ಪ್ರಭಾವವು ಇವರ ಮೇಲಾಗಲಿಲ್ಲ. ಮನುಷ್ಯ ನಡೆಯುವ ಒಳ್ಳೆಯ ದಾರಿ ಕಂಡುಕೊಳ್ಳಲು ಅಸಮರ್ಥನಾಗಿದ್ದಾನೆ. ಈ ಮನುಷ್ಯ ಪ್ರಯೋಜನವಿಲ್ಲ ಎನ್ನುವ ಆತಂಕವನ್ನು ಕವಿ ಈ ಕವಿತೆಯಲ್ಲಿ ವ್ಯಕ್ತ ಪಡಿಸುತ್ತಾನೆ. ಕವಿತೆಯ ಪ್ರಾರಂಭದಲ್ಲಿಯೇ 'ನೆರೆಮನೆಕ್ಕ್‌ದೀಯಿ ತೂವೆ ನಿನ್ನ ಮಾಡ್‌ಲ ನಕ್ಕುಂಡು' ನೆರೆಮನೆಗೆ ಇಟ್ಟ ಬೆಂಕಿಯೇ ನಿನ್ನ ಮನೆಯ ಹಂಚನ್ನು ನೆಕ್ಕುತ್ತದೆ ಎನ್ನುವ ಎಚ್ಚರಿಕೆಯನ್ನು, ಮಹಾತ್ಮರ ಸಂದೇಶ ನುಡಿಗಳು ಬಾಯಿಪಠ ಮಾಡಲು ಇರುವುದಿಲ್ಲ. ಅದರಂತೆ ನುಡಿಯಬೇಕು, ನುಡಿಯ ಬೇಕೆನ್ನುವ ಆಂತರಿಕ ದನಿಯು ಈ ಸಾಲುಗಳಲ್ಲಿ ಕಾಣುತ್ತೇವೆ. ಆಯೆ ನುಡಿನಿ 'ಪೆಜಿದ್ ಬಾಯಿಪಠ ಮಲ್ತುಂಡ್ ಬೆತ್ತಡ್ದೇ ನಡತಂಡ್' ಎನ್ನುವ ಮನುಷ್ಯನ ಕುಹಕ ಬುದ್ಧಿಯನ್ನು ಸ್ಪಷ್ಟ ಪಡಿಸುತ್ತಾರೆ. ಅವನಿಗೊಂದು ಇವನಿಗೊಂದು ಗುಡಿ ಕಟ್ಟಿದರು. ಪೂಜೆ, ಸ್ಥಳಪುರಾಣ, ತಂತ್ರದವರು, ಮೊಕ್ತೇಸರ, ಆಸ್ತಿ-ದುಡ್ಡು ಬೆಳೆದವು. ಈ ವಿವರಣೆಯ ಭಾಗದಲ್ಲಿ ಕವಿ ಧರ್ಮದ ಹೆಸರಿನಲ್ಲಿ ಮತಾಂಧರು ಆರಂಭಿಸಿದ ಗಲಭೆಗಳನ್ನು ನೆನಪಿಸುತ್ತಾರೆ. ಹೀಗೆ ಧರ್ಮದ ಬಗ್ಗೆ ನಡೆಯುವ ಸಂಘರ್ಷವನ್ನು ಕವಿ ಮೊನಚು ನುಡಿಗಳಿಂದ ಮಾರ್ಮಿಕವಾಗಿ ಚಿತ್ರಿಸುತ್ತಾರೆ. ಪಡೆನುಡಿಗಳು, ಸ್ವಭಾವೋಕ್ತಿ, ಲಯಬದ್ಧವಾಗಿ ಸಾಗುವ ಸಾಲುಗಳು ಕಾವ್ಯ ಸೌಂದರ್ಯದಿಂದ ವಿಚಾರ ಪೂರ್ಣತೆಯಿಂದ ಓದುಗರನ್ನು ತನ್ನ ಗಮನಕ್ಕೆ ಸೆಳೆಯುತ್ತದೆ. ತುಳು ಓದುಗರ ವಿಶೇಷ ಮೆಚ್ಚುಗೆಯನ್ನು ಈ ಕವಿತೆ ಗಳಿಸಿದೆ.

ಕವನದ ಮೊದಲ ಭಾಗದಲ್ಲಿ ಬೇರೆ ಬೇರೆ ಧರ್ಮ ಗ್ರಂಥಗಳು ಮಹಾತ್ಮರ-ಭಾಗವತ-ಬೈಬಲ್ ಬುದ್ಧ ಗಾಂಧೀಜಿಯವರ ಸೂಕ್ತಿಗಳಿವೆ. ಎರಡನೇ ಭಾಗದಲ್ಲಿ ಮಂತ್ರದ ಅರ್ಥ ಮರೆತು ತಂತ್ರವನ್ನು ಮಾತ್ರ ಉಳಿಸಿಕೊಂಡು, ಗರ್ಭಗುಡಿಯಿಂದ ಬೀದಿಗಿಳಿದು ಕಿರಿಚುವ, ಕಚ್ಚಾಡುವ ತಥಾಕಥಿತ ಭಕ್ತರ ಚಿತ್ರಣವಿದೆ. ಕವನದ ಮೂಲಕ ಧರ್ಮ ಚಿಂತನೆ ಮಾಡುವುದು ಸುಲಭವಲ್ಲ ಇದನ್ನು ಗೋಪಾಲ ಕೃಷ್ಣ ಅಡಿಗರ ನನ್ನ **ಅವತಾರ** ಕವನದೊಡನೆ ಹೋಲಿಸಬಹುದು. ಧರ್ಮದ ಮೂಲ ನೆಲೆಗೆ, ಸೃಷ್ಟಿಯ ಸಹಜತೆಯ ಕಡೆಗೆ ಹೋಗುವುದು ಅಸಾಧ್ಯ ಎನ್ನುವ ಭ್ರಮೆಗಳು ಆರ್ಥಿಕ ಕಾರಣದಿಂದ ಸೃಷ್ಟಿಯಾಗಿವೆ. ಈ ಎಲ್ಲ ಸಮಸ್ಯೆಗಳ ಜಾಲದಿಂದ ಹೊರಬಂದು ವೈಚಾರಿಕ ನೆಲೆಗಳಿಂದ

ಪರಿಹಾರವನ್ನು ಕಂಡುಕೊಳ್ಳುವ 'ಬುದ್ದಿ ಜೀವಿ'ಗಳು ಸಾಕಷ್ಟಿದ್ದಾರೆ. ಪಾ.ವೆಂ. ಅವರ ಕವನದ ಕೊನೆಯ ಪ್ರಶ್ನೆ ಇರುವುದು ಆಶಾವಾದಿಯೊಬ್ಬನ ವಿಷಾದ. ನಿಶಾಧರನ್ನು ಕಂಡು ವ್ಯಾಸರ ವಿಷಾದ. ಧರ್ಮದ ಬಗ್ಗೆ ಚಿಂತಿಸಿದ ಚಿಂತಕರಾದ ಬರ್ಟ್ರೆಂಡ್ ರಸೆಲ್, ವಿವೇಕಾನಂದರು ಮಾರ್ಕ್ಸ್‌ರ ಮಾತುಗಳನ್ನು ನೆನಪಿಸುವ ಕವನದ ಸಾಲು 'ಮಹಾಯುದ್ಧವೊಂದನ್ನು ಆರಂಭಿಸುವ ಮೊದಲು ನಿಮ್ಮ ನಿಮ್ಮ ಮಕ್ಕಳನ್ನು ನೆನಪಿಸಿಕೊಳ್ಳಿ ಎಂದು ಸೂಚ್ಯವಾಗಿ ತಿಳಿಸುವಂತೆ, ತತ್ತಚಿಂತಕ ಮಧ್ವಚಾರ್ಯರು ಹೇಳುವಂತೆ,' ಎಲ್ಲ ಮತಗಳು ಎಲ್ಲ ಕಾಲದಲ್ಲೂ ಇದ್ದೆ ಇರುತ್ತದೆ' ಪಾ.ವೆಂ. ಅವರ ಕವನದಲ್ಲಿ ಮಾತ್ರವಲ್ಲದೆ ಹರಟೆಗಳಲ್ಲೂ ಅಸಾಧಾರಣ ವೈಚಾರಿಕತೆ ಇದೆ. ಪಾ.ವೆಂ. ಅವರು ಗಾಂಧಿ ಯುಗದ ಒಬ್ಬ ಧೀಮಂತ ವ್ಯಕ್ತಿ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಚಿಂತನೆಯಲ್ಲಿ ಭಾರತೀಯತೆ ಕಾಣಿಸುತಿಲ್ಲವೆಂದು ವ್ಯಥೆ ಪಾ.ವೆಂ. ಅವರಿಗಿತ್ತು. ಪಾ.ವೆಂ. ಅವರು ಹೇಳುವಂತೆ ನನ್ನ ದೃಷ್ಟಿಯಲ್ಲಿ ಕಾವ್ಯದ ತಿರುಳು ಮನುಷ್ಯನ ವ್ಯಕ್ತಿತ್ವವನ್ನು ಕಾಣುವ ದರ್ಶನದಲ್ಲಿದೆ. ನಮ್ಮ ದೇಶದ ದೊಡ್ಡ ದುರಂತವೆಂದರೆ ನಾವು ವೈಜ್ಞಾನಿಕವಾಗಿ ಬೆಳೆದಷ್ಟು ಚಿಂತನದಲ್ಲಿ ಬೆಳೆದಿಲ್ಲ ನಮ್ಮ ದೇಶದ ಅನುಭವಗಳನ್ನು ಆಧರಿಸಿ ಹೊಸ ಚಿಂತನೆ ಮಾಡುವುದು ನನಗಿನ್ನು ಸಾದಿಸಿಲ್ಲ. ಭಾರತೀಯ ಪರಂಪರೆಗಳಿಂದ ಉದ್ಭವಿಸಿದ ಗುಣ ಇಲ್ಲದಿದ್ದರೆ ಅದಕ್ಕೆ ತನ್ನ ತನ ಬರಲು ಸಾಧ್ಯವಿಲ್ಲ. ಅದು ಕೊನೆಯವರೆಗೂ ಅನುಕರಣೆಯೇ ಆಗಿ ಬಿಡುತ್ತದೆ. ತುಳುವಿನಲ್ಲಿ ಮಹಾ ಕಾವ್ಯ ಪರಂಪರೆ ಬೆಳೆದರಳಿದೆ. ಪಾ.ವೆಂ. ಕಾವ್ಯ ಕೃಷಿ ಕಡಿಮೆಯಾದರು ಫಸಲು ಸಮೃದ್ಧಿಯಾಗಿದೆ.

೩. ಪೆಂಗೋಪದೇಶ:

ಸಂಸ್ಕೃತದಲ್ಲಿ ವಿಡಂಬನ ಪದ್ಯರೂಪಗಳು ನಾನಾರೀತಿಯಲ್ಲಿವೆ. ಲಿಮರಿಕ್ (Limerick) ರೀತಿಯಲ್ಲಿ ಬರುವ ಪದ್ಯಗಳನ್ನು ಕನ್ನಡದಲ್ಲಿ ಚುಟುಕ ಎಂದು ಕರೆಯಲು ಆರಂಭಿಸಿದವರು. ಜಿ.ಪಿ.ರಾಜರತ್ನಂ (೧೯೭೩ರಲ್ಲಿ) ಎಂದರೇ ದೊಡ್ಡ ವಿಷಯವನ್ನು ಚುರುಕಾದ ನುಡಿಗಳಲ್ಲಿ ಚಮತ್ಕಾರಿಕವಾಗಿ ಪಡೆ ನುಡಿಯುವ ಈ ಪದ್ಯರೂಪ ಬಹುತೇಕವಾಗಿ ಆತ್ಮವಿಡಂಬನೆ ಮತ್ತು ಸಮಾಜ ವಿಡಂಬನೆಯ ಚುರುಕು ನೋಟವನ್ನು ಹೊಂದಿರುತ್ತದೆ. ಸ್ವಭಾವತಃ ವಿಡಂಬನಕಾರರಾದ **ಲಾಂಗೂಲಾಚಾರ್ಯರು ಕಸ್ತೂರಿ**ಯ ಸಂಪಾದಕತ್ವದಿಂದ ಹೊರಬಂದನಂತರ ೧೯೭೬ರಲ್ಲಿ ಹಗುರ ಮನಸ್ಸಿನ ಪದ್ಯಗಳನ್ನು **ಪೆಂಗೋಪದೇಶ**ವೆಂದು ಹೆಸರಿನಿಂದ ಕರೆದರು. ಇವು ಎಂಬತ್ತೈದರ ದಶಕದಲ್ಲಿ ಕಸ್ತೂರಿ, ತುಷಾರ ಸಂಚಿಕೆಗಳಲ್ಲಿ ಪ್ರಕಟವಾಯಿತು. ಡಿ.ವಿ.ಜಿಯವರ **ಮಂಕುತಿಮ್ಮನ** ಹಾಗೆ ಪಾ.ವೆಂ. ಅವರ **ಪೆಂಗ** ಒಬ್ಬ ತೀಕ್ಷ್ಣಮತಿ, ವಿವೇಕಶಾಲಿ. ಎಲ್ಲ ಕಾಲದ ಜೀವನದಲ್ಲೂ ತೀಕ್ಷ್ಣಮತಿಗಳು ಬಹುತೇಕ ಜನರ ಕಣ್ಣಲ್ಲಿ ಪೆಂಗರು, ಲೋಕಜ್ಞಾನ, ವ್ಯವಹಾರಜ್ಞಾನ ಎಲ್ಲ ಇದ್ದರೂ ಪೆಂಗನೆನಿಸಿದ್ದರ ಸ್ವಾರ್ಥಕ್ಕಾಗಿ ಏನನ್ನು ಮಾಡದೆ ಅಥವಾ ಲಾಭಕ್ಕೆ ಕೈ

ಒಡ್ಡದೆ ಜೀವನದಲ್ಲಿ ಕಂಡದ್ದನ್ನು ಕಂಡಹಾಗೆ ಹಾಸ್ಯಮಯ ಶೈಲಿಯಲ್ಲಿ ಅಣಕಮಾಡಿ ಹೇಳುತ್ತಾನೆ. ಜನರ ಉಪದೇಶ ಗಂಭೀರವಾದುದಲ್ಲ, ನಿಷ್ಠುರವಾದುದಂತೂ ಅಲ್ಲವೇ ಅಲ್ಲ. ನಡೆನುಡಿಗಳಲ್ಲಿ ಕಾಣುವ ವಿಪರ್ಯಾಸಗಳನ್ನು, ಅನ್ಯಾಯಗಳನ್ನು ಅಸಂಬದ್ಧತೆಗಳನ್ನು ಪೆಂಗನೋಡಿ ಕೋಪಗೊಳ್ಳುವುದಿಲ್ಲ ಅಥವಾ ಕಂಗಾಲಾಗುವುದಿಲ್ಲ. ಲೋಕದ ಡೊಂಕನ್ನು ತನ್ನ ಮೊನಚು ಮಾತಿನಿಂದ ನೇರಗೊಳಿಸಲು ವಿನೋದಮಯವಾಗಿ ಆಡಿಬಿಡುತ್ತಾನೆ. ಇನ್ನು ಎಷ್ಟೋ ಸಲ ಈ ಪೆಂಗನಿಗೆ ಜೀವನದ ಮಾರ್ಮಿಕತೆಗಳು ಹೊಳೆಯುತ್ತವೆ. ಹೇಗೆ ಹೇಗೋ ಇರುವ ಬದಲು ಅರ್ಥಗಳನ್ನು ಗ್ರಹಿಸಿ ಜೀವನದ ಸ್ವಾರಸ್ಯವನ್ನು ಅನುಸರಿಸಿ ಪೆಂಗ ಅಚ್ಚರಿಗೊಂಡು ಉದ್ಗರಿಸುತ್ತಾನೆ. ಉದಾಹರಣೆಗೆ:

ನೀ ಹುಟ್ಟಿ ಈ ಭೂಮಿ ಭಾರವಾಗಲು ಇಲ್ಲ,
ನೀ ಸತ್ತರದು ಹಗುರವಾಗುವುದು ಸುಳ್ಳು ;
ಯಾ ಮಾಹಾ ಪುರುಷನಿದನರಿತು ನಡೆವನೊ ಅವನು
ಹೂ ಹುಲ್ಲಿನಂತೆ ಬಾಳುವ ನೆಲವೊ ಪೆಂಗೇ (ಪ.೩)

(ಜಗತ್ತಿನಲ್ಲಿ ವ್ಯಕ್ತಿ ಬಾಳುವ ಬಗೆ ಹೂಹುಲ್ಲಿನಂತೆ ಇರಬೇಕಾದರೆ ಮನೋಭಾವ ಹೇಗಿರಬೇಕೆಂಬುದನ್ನು ಹುಟ್ಟು ಸಾವಿನ ಅರ್ಥ ಅನರ್ಥದ ದೃಷ್ಟಾಂತದಿಂದ ಪೆಂಗ ನಮಗೆ ತೋರಿಸುತ್ತಾನೆ.) ಪುರಾಣ ಇತಿಹಾಸ ಸಮಕಾಲೀನ ವಾಸ್ತವ ಬದುಕುಗಳಲ್ಲಿ ಕಾಣುವ ಮಾರ್ಮಿಕವಾದ ಅಂಶಗಳನ್ನು ಪೆಂಗ ಆಯಾಕ್ಷಣಗಳಲ್ಲಿ ಹೊಳೆದಂತೆ ವ್ಯಾಖ್ಯಾನಿಸುವನು.

'ಹೆಣ್ಣನರಿಯುವೆನಲು ನೀರುಳ್ಳಿ ಸುಲಿದಂತೆ
ಪದರವನು ಪದರವನು ಬಿಡಿಸಿದಂತೆ
ಕಣ್ಣೀರು ಕಣ್ಣೀರು ಎಲ್ಲ ಪದರವು ಮುಗಿದು
ಲೊಳನೊಳಗೆ ನೊಳಗುವುದುದೇನಿಲ್ಲೋ ಪೆಂಗೇ' (ಪದ್ಯ ೫೦)

ಆದರೆ ನಾಲ್ಕುಸಾಲಿನ ನಿಬಂಧವಿರುವುದರಿಂದ ಹೋಲಿಕೆ ಉಪಮೆ ಇರುವುದರಿಂದ ಶೈಲಿಯ ಸೊಗಸು ಪದಗಳ ಸಂಯೋಜನೆ ಅಷ್ಟು ಹಿತಕರವೆನಿಸುವುದಿಲ್ಲ. ಕೆಲವೊಮ್ಮೆ ಇಲ್ಲಿ ಒಳ್ಳೊಳ್ಳೆ ವಿಚಾರಗಳು ವ್ಯವಹಾರಜ್ಞಾನದ ತಿಳುವಳಿಕೆಗಳು ಸಾಕಷ್ಟು ನಮಗೆ ಕಾಣಸಿಗುತ್ತದೆ.

ಅರಿವು ಸ್ವಯಂಬದ್ಧ ಹಸಿವೆನೊಲು ನೋವಿನಲು
ಅದನ್ನು ತಿಳಿವಾಗಿಸನ್ಯರಿಗೊರೆಯ ಬೇಕು
ತಿಳಿವು ಭಾಷಾವಲಂಬಿ, ಭಾಷೆ ಸಂಕೇತಮಯ,
ಸಂಕೇತವುಬ್ಬು ತಗ್ಗಿನ ಮುಕುರ, ಪೆಂಗೇ (ಪದ್ಯ ೭೦)

ಇಲ್ಲಿ ಅರಿವು ಮತ್ತು ಭಾಷೆಯ ಸಂಬಂಧವನ್ನು ಕಲ್ಪಿಸುವ ವಿಚಾರ ಮಾರ್ಮಿಕವಾಗಿದೆ.ಉಬ್ಬು-ತಗ್ಗಿನ ಕನ್ನಡಿಯಂತೆ ಭಾಷೆಯ ಸಂಕೇತ ಇರುತ್ತದೆ ಎಂಬ ಕಲ್ಪನೆ ಪೆಂಗನ ವಿಶೇಷೋಕ್ತಿ.

ನನಗಾತ್ಮವುಂಟೆಂಬ ಮನವರಿಕೆಯುಳ್ಳವನ
ಆತ್ಮಸಾಕ್ಷಿಯು ಬಗೆಗೆ ಕಣ್ಣಕಾಪು;
ಬೆಣ್ಣೆಕದಿಯುವ ಮುನ್ನ ದೊಣ್ಣೆ ನೆನಪಾಗುವುದು
ಇನ್ನುಳಿದವರಿಗಾತ್ಮ ಸಾಕ್ಷಿಯಲೊ ಪೆಂಗೇ (ಪದ್ಯ ೩೫)

ಒಳಿತು ಮಾಡುವರೆಲ್ಲರೊಳ್ಳಿದರು ಎನಬೇಡ
ದಾನಿಗಳನೆಲ್ಲರನುದಾರರೆನ ಬೇಡ;
ಇರಬಹುದು ಒಳ್ಳಿತನ ಹಿಂದೊಂದು ನರಿಲೆಕ್ಕ
ದಾನದೊಳಗಿರ ಬಹುದು ಗಾಣವೆಲೊ ಪೆಂಗೇ (ಪದ್ಯ ೪೨)

ಒಳ್ಳೆಯ ಕೆಲಸ ಮಾಡುವವರೆಲ್ಲರೂ ಒಳ್ಳೆಯದಾಗಿರಲು ಸಾಧ್ಯವಿಲ್ಲ. ದಾನಿಗಳು ಉದಾರಿಗಳಲ್ಲ. ಈ ಎರಡು ಕೆಲಸದ ಹಿಂದೆ ಕಪಟ ಬುದ್ಧಿ, ಸ್ವಾರ್ಥ ಅಡಗಿದೆ.ಇದಕ್ಕೆ ಮರುಳಾಗಬೇಡ ಎನ್ನುವ ಪೆಂಗನ ಹಿತಬೋಧನೆಯಿದೆ.

ಬಡವರುದ್ಧಾರ ಆಗಲೇ ಬೇಕು, ಮ–
ತ್ತದು ಕೂಡ ನಮ್ಮಿಂದಲೇ ಆಗಲಿಕ್ಕು
ಹೆರವರುದ್ಧರಿಸ ಹೊರಟರೆ ತಡೆಯನೊಡ್ಡು, ಇದು
ರಾಜಕಾರಣ ರಹಸ್ಯವು ತಿಳಿಯ ಪೆಂಗೇ (ಪದ್ಯ ೪೫)

ಇಂದಿನ ರಾಜಕಾರಣಿಗಳ ಕುಹಕತನದ ವಿಡಂಬನೆಯ ಚಿತ್ರಣ ಇಲ್ಲಿದೆ.ಆಶ್ವಾಸನೆಗಳಿಂದಲೇ ಬಡವರನ್ನು ಮರಳು ಮಾಡುವುದು, ಅಧಿಕಾರಗಿಟ್ಟಿಸುವುದು ಇದೊಂದು ರಾಜಕಾರಣ ವಂಚಕತನ ಇದು ತಿಳಿದಿರಲಿ ಪೆಂಗೇ ಎನ್ನುವ ಎಚ್ಚರಿಕೆ ಇಲ್ಲಿದೆ.

ನಾನು ನೀನವನೆಂಬ ತ್ರಿಪದಿಗಳ ಅರ್ಥ ಸಂ–
–ಬಂಧ ವೈಬಂಧಗಳ ಸೋಜಿಗವ ನೋಡೋ–
ನಾ ನಾನೆ ನೀ ನೀನೆ, ಅವರು ಕಾಣಿಸುವ ತನಕ,
ಆಮೇಲೆ ನಾನು ನೀನ್ ನಾವೆಲ್ಲವೊ ಪೆಂಗೇ (ಪದ್ಯ ೪೬)

ನಾಸ್ತಿಕರ ಕಾಣಲಲ್ಲಲ್ಲಿ ಅಲೆಯಲು ಬೇಡ,
ಮಠಗಳಲಿ ಹುಡುಕು, ಮೇಣ್ ಮಂದಿರಗಳಲ್ಲೂ;
ಸುಳ್ಳುತನವನು ಹುಡುಕಲೆಲ್ಲೆಲ್ಲೊ ತಿರಗದಿರು
ಗಾಂಧಿನಾಮವ ಜಪಿಪರದೆ ಸೀಲೊ ಪೆಂಗೆ

ವೈಚಾರಿಕತೆಯ ಡಂಭಾಚಾರದ ಪ್ರವೃತ್ತಿಯಾಗಿರುವವರನ್ನು ವಿಡಂಬಿಸುವ ರೀತಿಯಿಲ್ಲದೆ ಮಠಮಂದಿರಗಳು ಸತ್ಯಧರ್ಮವನ್ನು ಹುಡುಕುವ ಬೋಧಿಸುವ ಒಂದು ತೋರಿಕೆಯಷ್ಟೆ.

ಇದು ನಾಯಿಬಾಲ ಇದು ನೇರಮಾಡಲು ಕೊಳವೆ
ತೊಡಿಸದಿರು, ಚೆಂದಾಗಿ ಅಲ್ಲಡಲಾಗ;
ಬಾಲವಾಡಿಸುವ ನಾಯಿ, ಕುಡಿನೋಟದಿಂದ ಹೆಚ್
ಯಾರಿಗೇತಕೊ ಜಗದೊಳೆಲವೊ ಪೆಂಗೋ (ಪದ್ಯ ೭೪)

ಚಂಚಲತೆ ಎಂಬುದು ನಾಯಿ ಮತ್ತು ಹೆಣ್ಣಿನ ಜಾಯಮಾನ ಎಂಬುದನ್ನು ಪೆಂಗನ ಈ ಸೀಳುಮಾತು ಬಣ್ಣಿಸುವ ಬಗೆಯಿದು.

ಜೀವನ, ನಿಸರ್ಗ, ರಾಜಕಾರಣ, ಸಮಾಜ, ಧರ್ಮ ಬದುಕಿನ ವಿಷಮತೆ ಆನೇಕ ವಿಚಾರಗಳ ರೂಪ ಈ ಪೆಂಗನ ಆಯ್ಕೆ, ಸಹಜಾತಿಯೊಳಗಿನ ವೈಶಮ್ಯ, ಪರವಸ್ತುವಿನ ಸಾಕ್ಷಾತ್ಕಾರದ ರಹಸ್ಯ. ಮರಳಿ ಪ್ರಯತ್ನವನ್ನು ಮಾಡುವ ಸಫಲತೆ, ಜೀವನಗೌರವ, ಕಷ್ಟಗಳಿಗೆ ಎದೆಯೊಡ್ಡಿ ನಿಲ್ಲುವ ಛಲ ಇಲ್ಲಿಯ ಪೆಂಗನ ಅನುಭವಪೂರ್ಣ ನುಡಿಗಳಾಗಿವೆ. ಈ ಪೆಂಗೋಪದೇಶ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ಬದುಕುವ ರೀತಿಯನ್ನು ನಿರ್ದೇಶಿಸುವ ಸಂದೇಶವಾಹಕಗಳಾಗುತ್ತವೆ.

ಗತವ ತಲೆಯಲಿ ಹೊತ್ತು ತಿರುಗದಿರು ಅದರೊಜ್ಜೆ
ಮಿಡಿದು ನಿನ್ನನು ಚೆಬ್ಬಿಮಾಡಬಹುದು
ಗತವೆಷ್ಟು ಚಿನ್ನೆನಿಸದಿರು ಪರೀಕ್ಷಿಲೇಬೇಕು.
ತಲೆ ಮೇಲಿನದು ಕಣ್ಗೆ ಕಾಣದಲೊ ಪೆಂಗೇ (ಪದ್ಯ ೫)

ಹಳೇ ಮೂಡ ಸಂಪ್ರದಾಯವನ್ನು ಬಿಡದೆ ಅದರಲ್ಲೆ ಬದುಕುವವರಿಗೆ ಈ ಮಾತು. ಹಳೇ ಪ್ರವೃತ್ತಿಗಳನ್ನೆಲ್ಲ ಚಿನ್ನವೆಸಿದರು ಅದನ್ನು ಪರೀಕ್ಷಿಸಿ ಕಾಲಸ್ಥಿತಿಗನುಗುಣವಾಗಿ ಜೀವಿಸಬೇಕೆನ್ನುವ ನಿಲುವು ಇಲ್ಲಿಯದು. ಹೀಗೆ ಸರಳವಾಗಿ ಸುಂದರವಾಗಿರುವ ಪೆಂಗನ ಬೋಧನೆ ಸಾಕಷ್ಟು ವಿಚಾರಪಕ್ವವಾಗಿದೆ.ಸುತ್ತಲಿನ ಬದುಕನ್ನು ಕವಿ ಇಲ್ಲಿ ವಿಡಂಬನಾತ್ಮಕವಾಗಿ ವಿಮರ್ಶಿಸಿದ್ದಾನೆ.

೪. ಸುಭಾಷಿತ ಚಮತ್ಕಾರ (೧೯೭೫):

ಸಂಸ್ಕೃತ ಸಾಹಿತ್ಯದಲ್ಲಿ ಮಹಾಕಾವ್ಯ, ಖಂಡಕಾವ್ಯ ನಾಟಕ ಇವು ಕ್ಲಾಸಿಕಲ್ ಸ್ವಭಾವದ ನಿದರ್ಶನಗಳು. ಇವುಗಳ ಜೊತೆಗೆ ಲೌಕಿಕ ಜೀವನದ ದೈನಂದಿನ ಅನುಭವಗಳು ವಿಚಾರಗಳು, ಪ್ರತಿಕ್ರಿಯೆಗಳು ಪ್ರಕಟಮಾಡುವಂತಹ ಬಿಡಿ ಬಿಡಿ ಕವಿತೆಗಳು ಲಘು ಕಾವ್ಯ ವಿಡಂಬನಾ ಸ್ತುತಿ ಅಥವಾ ಸ್ತೋತ್ರ ವರ್ಣನಪರ ಕಾವ್ಯ ಮತ್ತು ಎರಡು ಅಥವಾ ನಾಲ್ಕು ಸಾಲಿನ ದ್ವಿಪದಿ ಅಥವಾ ಚೌಪದಿ ರೂಪದಲ್ಲಿ ಲಘು ಕವಿತೆಗಳು ಬಂದಿವೆ. **ಕಾಳಿದಾಸನ ಋತುಸಂಹಾರ,** ವರ್ಣನಪರ ಕವಿತೆಯಾಗಿದ್ದರೆ ಅವನ ಮೇಘಸಂದೇಶ ಲಘುಕಾವ್ಯವಾಗಿದೆ. **ಶಂಕರಾಚಾರ್ಯರ ಸೌಂದರ್ಯ ಲಹರಿ** ಭತೃಹರಿಯ **ಶತಕಗಳು** (ಶೃಂಗಾರಭಾವ, ವೈರಾಗ್ಯಭಾವ, ನೀತಿಭಾವ) ಬರೆದದ್ದು ಮುಕ್ತಕ ಎಂಬ ಪದ ಪ್ರಕಾರದಲ್ಲಿ ಸಂಚಾರಿ ಭಾವಗಳಾದ ಪ್ರೀತಿ, ಪ್ರೇಮ, ವಾತ್ಸಲ್ಯ, ಶೃಂಗಾರಹಾಸ್ಯ ಮುಂತಾದ ಕೌಟುಂಬಿಕ ಅನುಭವಗಳ ಅಭಿವ್ಯಕ್ತಿಗೆ ಮಾಧ್ಯಮವಾಗಿದೆ. ಮುಕ್ತವನ್ನು ಇಂದಿನ ಚುಟುಕು ಕಾವ್ಯ ಎನ್ನಬಹುದು. ಪಾ.ವೆಂ.ಅವರ ಪೆಂಗೋಪದೇಶದ ಚೌಪದಿಗಳು ಮುಕ್ತಕ ಪ್ರಕಾರಕ್ಕೆ ಸೇರುವಂತದ್ದು. ಇವೆಲ್ಲವುಗಳ ಜೊತೆಗೆ ಸಂಸ್ಕೃತ ನುಡಿ ಗಟ್ಟಿನ

ಗುಣವನ್ನು ಅತ್ಯಂತ ಪ್ರಶಸ್ತವಾಗಿ ನಡೆಸಿಕೊಳ್ಳುವ ಸುಭಾಷಿತ ಎಂಬ ಅಭಿವ್ಯಕ್ತಿ ಪ್ರಕಾರ ಕಾಲಕಾಲಕ್ಕೆ ಪ್ರಕಟವಾಗುತ್ತ ಬಂದಿದೆ.

ಸುಭಾಷಿತ ಒಂದು ಸಮಾಸ ಪದ, ಒಳ್ಳೆಯ ಮಾತನ್ನು ಹೇಳಿದ್ದು ಎಂಬ ಅರ್ಥ ಇದಕ್ಕಿದೆ. ಒಳ್ಳೆಯ ಮಾತು ಹಿತನುಡಿ ಇಲ್ಲಿನ ಮಾತಿನ ಶೈಲಿ ಧಾಟಿ ಎಷ್ಟು ಹಿತಮಿತವಾಗಿರುತ್ತದೋ ಅಷ್ಟೇ ಅದು ವಿಶದ ಪಡಿಸುವ ವಿಚಾರವೂ ಆಗಿರುತ್ತದೆ. ಅಂದರೆ ಒಳ್ಳೆಯ ವಿಚಾರದ ಪರಿಣಾಮಕಾರಿ ಅಭಿವ್ಯಕ್ತಿ ಇದನ್ನು ವಿವೇಕೋಕ್ತಿ ಎಂತಲೂ ಅನ್ನಬಹುದು. ಮನುಷ್ಯನ ವಿಶೇಷವೆಂದರೆ ಅವನಿಗೆ ಮಾತು ಬರುತ್ತದೆಂಬುದು ಮತ್ತು ಅವನಲ್ಲಿ ವಿಚಾರ ಶಕ್ತಿ ಬೆಳೆಯುತ್ತಲೆ ಹೋಗುತ್ತದೆಂಬುದು. ಮಾತು ಮತ್ತು ವಿಚಾರ ಇವುಗಳ ಅವಿನಾಭಾವದ ಸಂಬಂಧ ಮನಸ್ಸಿನಿಂದ ಸಾಧ್ಯವಾಗುವ ಒಂದು ಕ್ರಿಯೆ. ವಿಚಾರ ಮೊದಲೋ ಮಾತು ಮೊದಲೋ ಎಂದು ಅನುಮಾನ ಹುಟ್ಟುವಷ್ಟು ಈ ಅವಿನಾಭಾವ ಸಂಬಂಧ ಸುಭಾಷಿತದಲ್ಲಿ ಕಾಣಿಸುತ್ತದೆ. ಇದೇ ಭಾಷಿಕ ಕಲೆಯ ಲಕ್ಷಣ.

ಮನುಷ್ಯ ಮೂಲತಃ ವ್ಯಕ್ತಿ, ಆದರೆ ವ್ಯಕ್ತಿಯ ಇರುವಿಕೆ ಏಕಾಂಗಿಯದಲ್ಲ. ಹುಟ್ಟುತ್ತಲೇ ವ್ಯಕ್ತಿಗೆ ಮಾನವೀಯ ಸಂಬಂಧಗಳ ಒಂದು ನೆಲೆ ಸಿಗುತ್ತದೆ. ಇದು ಕೂಡ ಜೀವಿಗಳಿಗೂ ಅನ್ವಯ. ವ್ಯಕ್ತಿಯ ಮೊದಲ ಸಂಬಂಧ ಹುಟ್ಟಿಸಿದ ಜನನಿ-ಜನಕನೊಂದಿಗೆ ಆಗುವಂತದ್ದು. ವ್ಯಕ್ತಿಗೆ ಮಾತು ಬರುವವರೆಗೆ ಉಳಿದೆಲ್ಲ ಪಶುಪಕ್ಷಿ ಪ್ರಾಣಿಗಳಂತೆ ಮಗು ಕೆಲವು ಸಂಜ್ಞೆ ಮತ್ತು ದೈಹಿಕ ಸಂವಹನಗಳೊಂದಿಗೆ ವರ್ತಿಸಿ ಹಸಿವು ನೀರಡಿಕೆ ರಕ್ಷಣೆಗಳನ್ನು ಜನನಿ-ಜನಕರ ಸಂಪರ್ಕ ಮನೆಯಲ್ಲಾದರೆ ಇತರ ಬಂಧು ಬಾಂಧವರ ಮತ್ತು ಸುತ್ತ ಮುತ್ತಲಿನ ಸಾಮಾಜಿಕರ. ಸಂಬಂಧ ಅನಿವಾರ್ಯವಾದಾಗ ಮಗು ಬಾಯಿ ಬಿಡುತ್ತದೆ. ಅಂಗಾಂಶಗಳ ಸಂಜ್ಞೆ ಅಥವಾ ಸಂವಹನ ಕ್ರಿಯೆಗಳನ್ನು ಮೀರಿ ಧ್ವನ್ಯಂಗಗಳ ಮೂಲಕ ಹೊರಡುವ ಶಬ್ದವಾಕ್ಯ ಮಗುವಿನ ಸಾಮಾಜಿಕ ಸಂವಹನಕ್ಕೆ ಸಹಾಯವಾಗುತ್ತದೆ. ಇದೇ ಭಾಷೆ ಅಂದರೆ ಪ್ರವೃತ್ತಿಪರ ಜೀವನಕ್ಕೆ ಸೀಮಿತವಾದ ಸಂಜ್ಞೆ-ಸಂವಹನ ಅಂಗಾಂಗ ಚೇಷ್ಟೆಗಳು ಭಾಷೆಗೆ ಪರಿವರ್ತನೆಗೊಂಡು ವಯಸ್ಸು ಮತ್ತು ವಿದ್ಯಾಭ್ಯಾಸ ಸೌಲಭ್ಯ ಹೆಚ್ಚಿದಂತೆ ಬೆಳೆದಂತೆ ಮಗುವಿನ ಸಾಮಾಜಿಕ ಪಾತ್ರ ಬದಲಾಗುತ್ತದೆ. ಹೀಗೆ ಭಾಷೆಯೆಂಬುದು ಸಾಮಾಜಿಕ ಉತ್ಪಾದನೆಯಾದ ಭಾಷೆ ವ್ಯಕ್ತಿ ಮತ್ತು ಸಮಾಜದ ನಡುವಿನ ಬೇರೆ ಬೇರೆ ಸ್ಥರದ ಸಂಬಂಧ ಮತ್ತು ಸಂದರ್ಭಗಳಿಗೆ ತಕ್ಕಂತೆ ತನ್ನದೇ ಆದ ಶೈಲಿಯನ್ನು ರೂಪಿಸಿಕೊಳ್ಳುತ್ತದೆ. ಸಾಮಾಜಿಕ ಉತ್ಪಾದನೆ ಸಮಾಜ ಎಂದಾಗ ಪ್ರವೃತ್ತಿಗಳ ಜೊತೆಗೆ ಅನುಕರಣೆ, ಅನುಸರಣೆಗಳ ನೀತಿ ನಡತೆ ಮನುಷ್ಯನಲ್ಲಿ ಸಹಜವಾಗಿ ಬೆಳೆಯ ಬೇಕಾಗುತ್ತದೆ. ಇದಕ್ಕೆ ನೆರವಾಗುವಭಾಷೆ ಸಾಮಾಜಿಕ ಉತ್ಪಾದನೆಯಲ್ಲದೆ ಮತ್ತೇನು? ಅಂದರೆ ಸಮಾಜಜೀವಿ ಮನುಷ್ಯ ಏಕಾಂಗಿಯಲ್ಲ ಮತ್ತು ಸ್ವೇಚ್ಛಾಚಾರಿಯೂ ಅಲ್ಲ. ಆತನಿಗೆ ಸಾಮಾಜಿಕ ಸಂಬಂಧಗಳ ಬಾಂಧವ್ಯ ಸಹಜ ಮತ್ತು ಅನಿವಾರ್ಯ. ಭಾಷೆಯ ಮೂಲಕವೇ ತನ್ನನ್ನು ವ್ಯಕ್ತಗೊಳಿಸುವ ಮನುಷ್ಯತ್ವವನ್ನು

ಬಿಂಬಿಸುತ್ತಾ ಅವನನ್ನು ಬೆಳೆಸುತ್ತಾ ಪ್ರವೃತ್ತಿ ಪರತೆಯಿಂದ ಸಂಸ್ಕೃತಿಯತ್ತ ಒಯ್ಯುವ ಸಾಧ್ಯತೆ ಕೂಡ ಭಾಷೆಗೆ ಇದೆ.

ಭಾಷೆಯನ್ನು ಬಯ್ಯುವುದಕ್ಕೂ ಬಳಸಬಹುದು, ಸಿಟ್ಟು, ದ್ವೇಷ ಅಸಹನೆಯ ಪ್ರತಿಕ್ರಿಯೆಯಾಗಿಯು ಬಳಸಬಹುದು. ಇದು ಪ್ರವೃತ್ತಿಯ ವ್ಯತಿರಿಕ್ತ ಪ್ರತಿಕ್ರಿಯೆ ಸೊಂಟದ ಕೆಳಗಿನ ಮಾತು ಎಂಬ ಪದವಿದೆ. ಇದು ವೈಚಾರಿಕತೆಗಾಗಲಿ ಉನ್ನತ ತಿಳುವಳಿಕೆಯ ನಡವಳಿಕೆಗಾಗಿ ವಿರುದ್ಧವಾಗಿ ಭಾಷೆ ವಾಸ್ತವದಲ್ಲಿ ಇದು ಪರಿಹರಿಸಲಾಗದ ಒಂದು ಸಂಗತಿ ಮಾತ್ರ. ಮನುಷ್ಯನ ಪ್ರವೃತ್ತಿಯೂ ಸಹಜ ಸುಂದರವಾಗಿರುವಂತೆ ವಾಸ್ತವದ ನೆಲೆಯಲ್ಲಿ ವಿಕೃತಿಯು ಆಗಿರುತ್ತದೆ. ವಿಕೃತಿಯಿಂದ ಯಾವ ಬೆಳವಣಿಗೆಯೂ ಸಾಧ್ಯವಿಲ್ಲ ಆದ್ದರಿಂದ ಅದು ಕೇವಲ ಅನುಕರಣೀಯವಾಗಿ ಉಳಿದು ಬಿಡುವ ಸಂಗತಿ.

ಇದಕ್ಕೆ ಸಮಾಂತರವಾಗಿ ಅನುಸರಣೀಯವಾದುದೆಂದರೆ ಮನುಷ್ಯ ಪ್ರವೃತ್ತಿಯನ್ನು ವಿಕೃತಿಯಿಂದ ಹೊರತು ಪಡಿಸಿ ಸುಸಂಸ್ಕೃತಿ ನಡೆನುಡಿಗಳಿಗೆ ಪರಿವರ್ತಿಸಿ ಎತ್ತರಕ್ಕೆ ಸಾಗುವುದು. ಭಾಷೆ ಮೂಲತ: ಆಡುನುಡಿ ದೈನಂದಿನ ವ್ಯವಹಾರಗಳಿಗೆ ಮಾಧ್ಯಮವಾಗಿ ನಮ್ಮ ವೃತ್ತಿ ಮತ್ತು ಪ್ರವೃತ್ತಿಪರ ಜೀವನಕ್ಕೆ ಸಹಕಾರಿಯಾಗಿದೆ. ಆದರೆ ಭಾಷೆ ಸಾಹಿತ್ಯಕ್ಕೆ ಬಳಸುವಾಗ ಧ್ವನಿ, ಪದ ಮತ್ತು ಛಂದಸ್ಸು ಇವುಗಳ ಸಂಯೋಜನೆಯಿಂದಾಗಿ ಮತ್ತು ಇವುಗಳಲ್ಲಿರುವ ಸತ್ಯ, ಶಿವ, ಸೌಂದರ್ಯ ಲಕ್ಷಣ ಸಮೇತವಾಗಿ ಸಂಸ್ಕೃತಿಯ ಸ್ವರೂಪವನ್ನು ತಾಳುತ್ತದೆ. ಭಾಷೆ ಎನ್ನುವುದು ಅಂದದ್ದು ಆಡಿದ್ದು ಈ ಅನ್ನುವಿಕೆ ಆಡುವಿಕೆ ಯಾವ ಉನ್ನತ ದೃಷ್ಟಿಕೋನವನ್ನು ಅಥವಾ ಕಲ್ಪನೆಯನ್ನು ಒಳಗೊಂಡು ಭಾಷೆಯ ಸಾಧ್ಯತೆಗಳಾದ ಧ್ವನಿ ವ್ಯಂಜಕತೆ ಅಥವಾ ಸೂಚ್ಯತೆಗಳೊಂದಿಗೆ ಒಂದು ಆಕೃತಿಯನ್ನು ಪಡೆಯುತ್ತದೆಯೋ ಆಗ ಅದು ಕೇಳುವವನ ಕಿವಿಗೆಸುಭಾಷಿತವಾಗುತ್ತದೆ. ಸುಭಾಷಿತವನ್ನು ವ್ಯಕ್ತಪಡಿಸುವ ವ್ಯಕ್ತಿಯನ್ನು ನಾವು ಕವಿಯೆಂದು ಮೊದಲಿಗೆ ಗುರುತಿಸೋಣ. ಈ ಕವಿಯಲ್ಲಿ ರೂಪಗೊಳ್ಳುವ ಅಂಶವೆಂದರೆ ತನ್ನೊಳಗಿನ ಜ್ಞಾನ ಸಂಗ್ರಹ ಅನುಭವ ವಿವೇಕ ಮತ್ತು ಇದನ್ನು ಅನುಕರಿಸಬೇಕಾದ ಉದಾತ್ತ ತಿಳುವಳಿಕೆ. ಇವನ್ನೊಳಗೊಂಡಂತೆ ಇಲ್ಲಿ ಸ್ವಹಿತ ಪರಹಿತ ಎರಡೂ ಲೋಕಹಿತವೆಂಬ ಗುರಿಯ ಕಡೆಗೆ ಸಾಗುವ ಒಂದು ಚಲನಶೀಲ ಪ್ರವೃತ್ತಿ ಮಾಡುತ್ತದೆ. (ಇಲ್ಲಿ ಸಾಹಿತ್ಯವೆಂದರೆ ಸಹಿತ ಎಂಬುದನ್ನು ಗಮನಿಸಬೇಕು. ರಚನೆಯೆಂದರೆ ಅಕ್ಷರ ರೂಪದಲ್ಲಿ ಬರೆದದ್ದು ಮಾತ್ರವಲ್ಲ ಮೌಖಿಕವಾಗಿ ಅಂದದ್ದು ಆಡಿದ್ದು ಕೂಡ) ಸುಭಾಷಿತದ ಮುಖ್ಯ ಲಕ್ಷಣ ಸವಿನುಡಿಯಲ್ಲಿ ಕಹಿಯಾದುದನ್ನು ಸಿಹಿ ರೂಪದಲ್ಲಿ ಹೇಳುವುದು. ಬಳಕೆಯಾಗುವ ಪದಗಳು ಮೃದುವಾಗಿ, ಕೆಲಸ ತೀಕ್ಷ್ಣವಾಗಿ ಲೋಕದ ತನ್ನದೇ ಆದ ಶೈಲಿಯನ್ನು ರೂಪಿಸಿಕೊಳ್ಳುತ್ತದೆ. ಸುಭಾಷಿತದ ಇನ್ನೊಂದು ಗುಣವೆಂದರೆ ದೃಷ್ಟಾಂತಗಳನ್ನು, ನಿದರ್ಶನಗಳನ್ನು ಮುಖ್ಯ ವಿಚಾರದೊಂದಿಗೆ ಉಪಮೆಯಾಗಿ ನೀಡುವುದು ಹೋಲಿಕೆ ಕೊಡುವುದು ಇದು ಓದುಗನ ಅನುಭವಕ್ಕೆ ಕವಿಯು ತನ್ನ ಕಲ್ಪನೆಯನ್ನು ತಲುಪಿಸುವ ಉಪಾಯ. ಜೊತೆಗೆ ಚಮತ್ಕಾರಿತವಾಗಿ

ಹೇಳುವ ರೀತಿಯಿರಬೇಕು. ಸಾಮಾನ್ಯ ನಡುವಳಿಕೆಗಳು ಈ ಲೋಕದಲ್ಲಿ ನಾವು ಸಾಮಾಜಿಕವಾಗಿ ಇರಬೇಕು. (Style)ರೀತಿ ನೀತಿ ಇರಬೇಕು. ನಿರ್ದಿಷ್ಟವಾದ ಇತಿ-ಮಿತಿ. ನಿರ್ದಿಷ್ಟವಾಗಿ ಇದು ಹೇಗೆ ಖಚಿತತೆ policy ರಾಜನೀತಿ ನಡವಳಿಕೆ ರೀತಿ, ನೀತಿ ಅವಿನಾಭಾವ ಇತ್ಯಾದಿ ಲೋಕದೊಳಗೆ ಸತ್ಯವನ್ನು ಪ್ರಕೃತಿಯ ಸತ್ಯವನ್ನು ಅನುಸರಿಸಬೇಕು ಎನ್ನುವ ಒತ್ತಾಯವಿರುತ್ತದೆ, ಮಾರ್ಮಿಕತೆ ಇರುತ್ತದೆ. ಒಳಅರ್ಥ, ಬುದ್ಧಿವಂತಿಕೆ ಇರುತ್ತದೆ. ಪರಿಣಾಮಕಾರಿಯಾದ ಲೋಕದ ರೀತಿ ನೀತಿಯನ್ನು ಬಿಂಬಿಸುವ ಸೂಚಿಪದ ಒಂದು ಧಾಟಿ ಸುಭಾಷಿತಕ್ಕಿರುತ್ತದೆ. ಒಂದು ಸರಿಯಾದ ಬದುಕನ್ನು ಅರ್ಥಿಸುವುದು, ಬುದ್ಧಿವಂತಿಕೆ ವಿವೇಕ ಅನುಭವದಿಂದ ಬಂದ ಜಾಣತನ ಎಲ್ಲರಿಗೂ ಪಕ್ಷಪಾತವಿಲ್ಲದೆ ಜಾಣತನದ ಮೇಲ್ಮಟ್ಟದ ನಡವಳಿಕೆ ಇಲ್ಲಿರುತ್ತದೆ. ಇದು ಅಸಾಧ್ಯ ಆದರೆ ತಿಳುವಳಿಕೆ ಇದ್ದರೆ ಸಾಧ್ಯ Higher kind of common sence. ಸುಭಾಷಿತದೊಳಗೆ ಲಲಿತ ಪದಗಳಿರುತ್ತದೆ, ಕಠಿಣ ಧ್ವನಿಗಳಿರುವುದಿಲ್ಲ, ಪೌರುಷ ವರ್ಣಗಳಿರುವುದಿಲ್ಲ, ಮೃದು ವರ್ಣಗಳಿರುತ್ತದೆ. ಎರಡು ಅಥವಾ ನಾಲ್ಕು ಸಾಲುಗಳಲ್ಲಿ ಒಂದು ಸಂಸ್ಕೃತದ ಲಯವಿರುತ್ತದೆ. ಸುಭಾಷಿತಗಳು ಏಕವ್ಯಕ್ತಿ ಗಾದೆ ಮಾತು, ಕವಿಕೃತ ಆದರೆ ಲೋಕೋಕ್ತಿಯಾಗುವ ಜನಪ್ರಿಯವಾಗುವ ಶಕ್ತಿ ಇದೆ. ಸೃಷ್ಟಿಯ ಸ್ಥಿತಿಗತಿ ಒಳಿತು ಕೆಡಕುಗಳಿಂದ ಕೂಡಿದೆ, ಆದರೂ ಒಳಿತನ್ನೇ ಗುರುತಿಸಿ ಒಳಿತನ್ನು ಆತ್ಮೀಕರಿಸಿಕೊಂಡು (positive) ಇತ್ಯಾತ್ಮಕ ಗುಣಗಳನ್ನು ಗುರುತಿಸಿ ಬೆಳೆಸಿಕೊಳ್ಳಬೇಕು. ಜಗತ್ತಿನಲ್ಲಿ ನಾವಂತೂ ಒಳ್ಳೆಯವನಾಗಿರಬೇಕು ಮತ್ತು ಜಗತ್ತನ್ನು ಒಳ್ಳೆಯದಾಗಿ ಉಳಿಸಿಕೊಳ್ಳಬೇಕು ಇದು ಪ್ರತಿಯೊಬ್ಬ ವ್ಯಕ್ತಿಯ ಅಪೇಕ್ಷೆ. ಸುಭಾಷಿತಕಾರನಿಗೆ ಒಳ್ಳೆಯ ಕೆಟ್ಟವುಗಳ ಅರಿವು ಇರಬೇಕು. ಜಗತ್ತು ದೇವರ ಉಪಾಯದಿಂದಾಗಿದೆ, ಆದ್ದರಿಂದ ಇಲ್ಲಿಯ ಜೀವನದಲ್ಲಿಯೂ ಎದುರಾಗುವ ಕಷ್ಟನಷ್ಟ, ಏರುಪೇರು, ವಿಫಲತೆ, ಸೋಲು ಇವುಗಳನ್ನು ಉಪಾಯದಿಂದ ಯಾರಿಗೂ ಹಿಂಸೆ, ಅಪಾಯ, ಹಾನಿ, ಅನ್ಯಾಯ ಆಗದಂತೆ ನಾವು ಉಪಾಯಗಳನ್ನು ಯೋಚಿಸಿ ಇತ್ಯಾತ್ಮಕವಾಗಿ ಯೋಚಿಸಿ ಬದುಕನ್ನು ನಿರ್ವಹಿಸಬೇಕು. ಬದುಕಿನ ನಿರ್ವಹಣೆ ಒಂದು ಬುದ್ಧಿವಂತಿಕೆಯ ವ್ಯವಸ್ಥಾಪನೆ ಕಾಲ ಪರಿಸ್ಥಿತಿ ಯಾವುದಿರಲಿ ನಾನು ಬದುಕಬೇಕು, ಇದು ಸರಿಯಾಗಿ ಸುಖವಾಗಿ ಬದುಕಬೇಕೆಂಬುದು ಪ್ರತಿವ್ಯಕ್ತಿಯ ಹಕ್ಕು. ಇದನ್ನು ಸಾಧಿಸಲು ಆತ ಅನುಸರಿಸಬೇಕಾದ

ರೀತಿ-ನೀತಿ ಸರಿಯಾಗಿರಬೇಕು. ಇತರರಿಗೂ ಸಂತೋಷ ಕೊಡುವಂತಿರಬೇಕು ಎಂಬುದು ಧರ್ಮನೀತಿ. ತೀರ ಸರಳವಾಗಿ ಹೇಳುವುದಾದರೆ ಮಾನವನು ಟುತಜ ಚಿಟಿಜ ಟಜಣ ಟುತಜ ನೀನು ಬದುಕು ಇತರರನ್ನು ಬದುಕಗೊಳು ಎನ್ನುವಂತೆ. ಇದಕ್ಕೆ ಪೂರಕವಾದ ಸಂಸ್ಕೃತ ಮಂಜರಿಯ ಒಂದು ಶ್ಲೋಕ ಹೀಗಿದೆ.[೧೮]

ಸಂಸಾರ ವಿಷವೃಕ್ಷಸ್ಯೆ ದ್ವೇಷತೀ ಅಮೃತೋಪಮೇ।
ಸುಭಾಷಿತ ರಸಾಸ್ವವ: ಸಂಗತಿ: ಸುಜನೇ ಜನೇ।

-ಸಭಾಪಿತ ರತ್ನಭಾಂಡಾಗಾರ

ಸಂಸಾರ ಅಥವಾ ಜೀವನ ಕಹಿಯಾದ ಮರ. ಆದರೆ ಅದರಲ್ಲಿ ಅಮೃತದಂತಹ ಎರಡು ಹಣ್ಣುಗಳಿವೆ, ಸುಭಾಷಿತವನ್ನು ಅಥವಾ ಒಳ್ಳೆಯ ಮಾತುಗಳನ್ನು ಸವಿಯುವುದು ಒಂದು ಮತ್ತು ಸಜ್ಜನರೊಡನೆ ಸೇರುವುದು ಇನ್ನೊಂದು (ಪ್ರತಿಯೊಂದು ಸುಭಾಷಿತ ಸುಭಾಷಿತಕಾರನ ಅನುಭವದಲ್ಲಿರುತ್ತದೆ.)

ಸಾಕ್ರೆಟಿಸ್ ದಾರ್ಶನಿಕ ಸುಭಾಷಿತವನ್ನು ಕುರಿತು ಈ ರೀತಿ ಹೇಳುತ್ತಾನೆ. ಓದುತ್ತ ಓದುತ್ತ ಹೋದಂತೆ ನನಗೆ ಬಂದ ಜ್ಞಾನವೆಂದರೆ ನಾನೆಷ್ಟು ಅಜ್ಞಾನಿಯೆಂದು ಸುಭಾಷಿತದ ರಸ ಶಾಶ್ವತವಾದದ್ದು.[*೧೯] **ದ್ರಾಕ್ಷಾ ಮ್ಲಾನ ಮುಖ। ಔತಾ ಶರ್ಕರಾ ಜಾ ತಾಂಗತಾ ಸುಭಾಷಿತ ರಸಸ್ಯಾಗೇ ಸುಧಾಭೀತಾದವಂಗತಾ ದ್ರಾಕ್ಷಿ,** ಸಕ್ಕರೆ, ಅಮೃತ- ಯಾವುತ್ತು ಸಿಹಿಯಮಡುಗಳೇ. ಆದರೆ ಸುಭಾಷಿತದ ಸಿಹಿಯ ಮುಂದೆ ಇವು ನಿಲ್ಲಲಾರವು, ದ್ರಾಕ್ಷಿಯ ರುಚಿಯುಗೆಡುತ್ತದೆ. ಸುಭಾಷಿತಕ್ಕೆ ಸಮಾನಪದ ಸೂಕ್ತಿ (ಸು_ಉಕ್ತಿ) ಸಾಮಾನ್ಯವಾಗಿ ಸಂಸ್ಕೃತ ಸೂಕ್ತಿಗಳು ಎರಡು ಸಾಲಿನ ಅಥವಾ ನಾಲ್ಕು ಸಾಲಿನ ನುಡಿಶಿಲ್ಪದಲ್ಲಿದೆ. ಬೇರೆ ಬೇರೆ ಅಕ್ಷರ ವೃತ್ತದಲ್ಲಿ ರಚಿತವಾಗಿರುವ ಸುಭಾಷಿತ ಕೃತಿ ಅನುಪ್ರಾಸವನ್ನು ಹೊಂದಿರುತ್ತದೆ. ಪರುಷ ಅಕ್ಷರವನ್ನು ತಪ್ಪಿಸಿ ಮೃದು ವರ್ಣಗಳನ್ನು ಬಳಸಲಾಗುತ್ತದೆ. ಸಂಸ್ಕೃತ ಭಾಷೆ ಅತಿ ಮಧುರ ಈ ಮಾಧುರ್ಯವನ್ನು ಕವಿ ವಿವೇಕ ಹೆಚ್ಚಿಸುವ ಅವಕಾಶವನ್ನು ಪಡೆಯುತ್ತಾನೆ. ಸುಭಾಷಿತವು ಅವಿಸ್ತಾರವಾಗಿ (ಸಂಕ್ಷೇಪ) ಅಸಂದಿಗ್ದವಾಗಿ (ಸರಳ) ಅವಲಂಬಿತವಾಗಿ (ವೇಗ) ಮತ್ತು ಹೃದಯ ಗಮ್ಯವಾದ ರೀತಿಯಲ್ಲಿ ರಚಿತವಾಗುತ್ತದೆ.

ಸುಭಾಷಿತ ಗ್ರಂಥಗಳು: ೧) **ಸುಭಾಷಿತ ರತ್ನ ಭಾಂಡಾಗಾರ** ಎಂಬ ಗ್ರಂಥ ಸಾವಿರಾರು ದ್ವಿಪದ ಮತ್ತು ಚೌಪದ ಸುಭಾಷಿತ ಸುಧಾನಿಧಿ ಎಂಬ ಇನ್ನೆರಡು ಸಂಗ್ರಹಗಳಿವೆ. ಇವುಗಳಲ್ಲಿ ಮಹಾಭಾರತ, ಭಾಗವತ, ಪಂಚತಂತ್ರ, ಮನುಸ್ಮೃತಿ, ವಿಷ್ಣುಪುರಾಣ ಮುಂತಾದ ಗ್ರಂಥಗಳಿಂದ ಹಾಗೂ ಕಾಳಿದಾಸ, ಮಾಘ ಮುಂತಾದ ಕವಿ ನಾಟಕಕಾರರ ಕೃತಿಗಳಿಂದ ಆಯ್ದ ಕವಿ ವಾಕ್ಯಗಳು ಸೇರಿವೆ. ಸಂಸ್ಕೃತದಲ್ಲಿ ಭರ್ತೃಹರಿಯಂತ ಕವಿ ಬರೆದ ಮೂರು ಶತಕಗಳು ನೀತಿ, ವೈರಾಗ್ಯ, ಶೃಂಗಾರ ಶತಕಗಳು ಸುಭಾಷಿತಗಳ ಆಗರವೇ ಆಗಿದೆ. ಕಾವ್ಯ ನಾಟಕಗಳಲ್ಲಿ ಬರುವ ಪ್ರಸಂಗೋಚಿತ ವಾಕ್ಯಗಳು ನೀತಿ, ಲೋಕರೂಢಿ ಮತ್ತು ಜೀವನೋಪಾಯದ ಉನ್ನತ ತಿಳುವಳಿಕೆಯನ್ನು ಸಾರಾವತ್ತಾದ ಮಾತಿನಲ್ಲಿ ಹೇಳುತ್ತದೆ. ಸುಭಾಷಿತಗಳು ಕಾವ್ಯ ಧರ್ಮದ ನಿರೂಪಣೆಯಾಗಿಯೂ ಬಂದಿದೆ. ಪುರುಷಾರ್ಥಗಳ ಸಾಧನೆಯೇ ಉತ್ತಮ ಜೀವನದ ಮಾದರಿ ನಮ್ಮ ಹಿರಿಯರು ಜಾತಿ ಮತದ ಉನ್ನತ ತಿಳುವಳಿಕೆಯನ್ನು ಸಾರಾವತ್ತಾದ ಮಾತಿನಲ್ಲಿ ಹೇಳುತ್ತದೆ. ಸುಭಾಷಿತಗಳು ಕಾವ್ಯ ಧರ್ಮದ ನಿರೂಪಣೆಯಾಗಿಯೂ ಬಂದಿದೆ. ಪುರುಷಾರ್ಥಗಳ ಸಾಧನೆಯೇ ಉತ್ತಮ ಜೀವನದ ಮಾದರಿ ನಮ್ಮ ಹಿರಿಯರು ಜಾತಿ ಮತ ಪಂಥಗಳನ್ನು ಮೀರಿದ ಜೀವನ ಧರ್ಮ ಯೋಗವನ್ನು ಸಾಧಿಸಿದವರು.ಅವು

ಅವರ ಅನುಭವಕ್ಕೆ ಹೇಗೆ ಬಂದವು ಮತ್ತು ಭಾಷಿಕವಾಗಿ ಹೇಗೆ ರೂಪುಗೊಂಡವು ಎಂಬುದನ್ನು ಸುಭಾಷಿತಗಳಿಂದ ತಿಳಿದುಕೊಳ್ಳುತ್ತೇವೆ.

ಪಾ.ವೆಂ. ಆಚಾರ್ಯರು ಕವಿತ್ವ ರಚನೆಯಲ್ಲಿ ಪಳಗಿದ ಕೈ ಹಾಗಿದ್ದರೂ ಅವರ ಬಹುಮುಖ ಬರವಣಿಗೆಯಲ್ಲಿ ಕವಿತೆಗಳಿಗೆ ಸ್ಥಾನ ಕಡಿಮೆ. ಇದರ ಬಗ್ಗೆ ಪ್ರಾರಂಭದಲ್ಲಿದ್ದ ಕವಿತಾ ರಚನೆಯ ಆಸಕ್ತಿ ಪತ್ರಿಕೋದ್ಯಮಿಯಾದ ಮೇಲೆ ತೀರ ಕಡಿಮೆಯಾಯಿತು. ಆದರೆ ಈ ಸುಭಾಷಿತಗಳ ಅನುವಾದವನ್ನು ಓದಿದರೆ ಪಾ.ವೆಂ. ಅವರ ಕವಿತ್ವ ಸಾಮರ್ಥ್ಯಕ್ಕೆ ಹೆಚ್ಚು ಪುಷ್ಟಿಯನ್ನು ಕೊಡುತ್ತದೆ. ೧೯೭೫ರಲ್ಲಿ ಅನಾರೋಗ್ಯದ ನಿಮಿತ್ತ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಸಂಸ್ಕೃತದ ಸುಭಾಷಿತಗಳನ್ನು ಕನ್ನಡಕ್ಕೆ ಪದ್ಯದಲ್ಲೇ ಅನುವಾದಿಸುವುದರ ಮೂಲಕ ಮನಸ್ಸಿನ ಶೂನ್ಯತನವನ್ನು ತುಂಬಿಕೊಳ್ಳುವ ಯತ್ನವನ್ನು ಪ್ರಾರಂಭಿಸಿದರು. ಸಂಸ್ಕೃತದ ಅನುವಾದವಾದರೂ ಕನ್ನಡದ ಸ್ವತಂತ್ರ ರಚನೆಗಳಂತೆ ವಿಜೃಂಭಿಸಿದೆ. ಮೂಲದ ಸಂಸ್ಕೃತಕ್ಕಿಂತಲೂ ಕನ್ನಡ ಶಬ್ದಗಳಲ್ಲಿ ಸುಭಾಷಿತ ಸೊಗಸಾಗಿ ಮೂಡಿಬಂದಿದೆ. ಪತ್ರಿಕೋದ್ಯಮ ಗಡಿಬಿಡಿಯಲ್ಲಿ ಕವಿತ್ವ ರಚನೆ ಕಡಿಮೆಯಾಗಿದ್ದರು ಅನಾರೋಗ್ಯದಿಂದ ಹಾಸಿಗೆ ಹಿಡಿದ ಸಂದರ್ಭದಲ್ಲಿ ದೈಹಿಕ ಆರೋಗ್ಯ ಸುಧಾರಣೆಯಾಗುತ್ತಿದ್ದ ಸಮಯದಲ್ಲಿ (೧೯೭೫) ಸುಭಾಷಿತಗಳ ಕನ್ನಡ ರೂಪಾಂತರವನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಒಟ್ಟು ನಾನೂರು ಮೇಲ್ಪಟ್ಟು ಶ್ಲೋಕಗಳು ಅನುವಾದಗೊಂಡವು. ಸಂಸ್ಕೃತ ಶ್ಲೋಕದೊಡನೆ ಪ್ರಕಟಿಸುವುದು ಲೇಸೆಂದು ತಿಳಿದು ಇಲ್ಲಿನ ೨೬೬ ಶ್ಲೋಕಗಳನ್ನು ಸಂಸ್ಕೃತ ಶ್ಲೋಕದ ಕೆಳಗೆ ಕನ್ನಡ ಅನುವಾದವನ್ನು ನೀಡಲಾಗಿದೆ. ಸಂದರ್ಭಕ್ಕೆ ತಕ್ಕಂತೆ ಹದಿಮೂರು ವಿಷಯಗಳಲ್ಲಿ ಸುಭಾಷಿತಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸುಭಾಷಿತ ಚಮತ್ಕಾರದ ಮುನ್ನುಡಿಯಲ್ಲಿ ಪಾ.ವೆಂ. ಅವರು ಅನುವಾದದಲ್ಲಿ ತಾವು ಅನುಸರಿಸಿದ ತತ್ವದ ಬಗ್ಗೆ ಈ ರೀತಿಯಲ್ಲಿ ವಿಷಾದಪಡಿಸಿದ್ದಾರೆ. ಇದು ಅಕ್ಷರಶ: ಅನುವಾದವಲ್ಲ ಇದೊಂದು ಕನ್ನಡೀಕರಣ ಅಥವಾ ಸಂಸ್ಕೃತ ಶ್ಲೋಕಗಳ ಹೊಸಗನ್ನಡ ಛಾಯೆ; ಸಾಧ್ಯವಾದ ಮಟ್ಟಿಗೂ ಮೂಲದ ಅಭಿಪ್ರಾಯದಿಂದ ತೀರದೂರ ಅಲೆಯದೆ ಮಾಡಿದ ಸಾರಶೋಷಣೆ. ಸಂಸ್ಕೃತ ಸುಭಾಷಿತಗಳಲ್ಲಿ ಒಟ್ಟು ೩೨ ಅಕ್ಷರಗಳುಳ್ಳ ಅನುಷ್ಟುಪ್ ಶ್ಲೋಕಗಳಿಂದಾರಂಭಿಸಿ ಸುಧೀರ್ಘ ಮಹಾಸ್ರಗ್ಧರಾ ಛಂದಸ್ಸಿನ ಶ್ಲೋಕಗಳವರೆಗೆ ನಾನಾ ಗಾತ್ರದವು ಇವೆ. ಸುಸಂತಲಿತ ಚಿತ್ತದಿಂದ ನೀತಿಗಳನ್ನು ಹೇಳುವ ಪದ್ಯಗಳಿಂದ ತೊಡಗಿ ಉಗ್ರ ರಾಗದ್ವೇಶಗಳಿಂದ ಕೂಡಿದ ಪದ್ಯಗಳೂ ಇವೆ. ವಿಚಾರಗಳನ್ನು ನೇರವಾಗಿ, ಸರಳವಾಗಿ, ಪರಿಮಿತ ಶಬ್ದಗಳಲ್ಲಿ ವ್ಯಕ್ತಪಡಿಸುವವುಗಳಿಂದ ಹಿಡಿದು ಆಡಂಬರ ಪೂರ್ಣವಾಗಿ, ಸರಳವಿದ್ದುದನ್ನು ಜಟಿಲವಾಗಿ ಮಾಡುವ ಪದ್ಯಗಳೂ ಇವೆ. ಚರ್ಚೆಯಲ್ಲಿ, ಹರಟೆಯಲ್ಲಿ, ಉಪದೇಶದಲ್ಲಿ ಆಯಾ ಶ್ರೊತೃಗಳ ಅಭಿರುಚಿ, ಗ್ರಹಣ ಶಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಡುನಡುವೆ ಉದಾಹರಿಸುವ ಉದ್ದೇಶದಿಂದ ರಚಿಸಿದ, ಸಂಗ್ರಹಿಸಿದ ಈ ಎಲ್ಲ ಶ್ಲೋಕಗಳು ಉಪಯುಕ್ತವಾದುದು ಆಗಿದೆ. ಪಾ.ವೆಂ. ಅವರ ಸುಭಾಷಿತದ ಮಹತ್ವವೆಂದರೆ ಮತ್ತು

ಅದರ ಉದ್ದೇಶವನ್ನು ತಾನೇ ಈ ರೀತಿಯಾಗಿ ಹೇಳಿಕೊಂಡಿದ್ದಾರೆ.[*೨೦]

ಸುಭಾಷಿತಗಳು ಪ್ರಧಾನವಾಗಿ ಒಂದು ಸತ್ಯವನ್ನು ಒಂದು ನೀತಿಯನ್ನು ಬೋಧಿಸಲು ಹೊರಟವುಗಳಾದರೂ ನನ್ನ ಆಯ್ಕೆ ಬರೇ ಬೋಧಿಸಿದ ಸತ್ಯ ಅಥವಾ ನೀತಿಯನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡದ್ದಲ್ಲ ಹೇಳುವ ವಿಧಾನದಲ್ಲಿ ಏನಾದರೊಂದು ಸ್ಮರಣೀಯವಾದ ವೈಚಿತ್ರ್ಯ ಅಥವಾ ಚಮತ್ಕಾರ ಇದ್ದವುಗಳನ್ನು ಒಪ್ಪಿಕೊಂಡಿದ್ದೇವೆ. ಅಥವಾ ಮರ್ಮವನ್ನು ನಾಟುವಂತೆ ಒಂದು ಭಾವನೆಯನ್ನು ಉತ್ಕಟವಾಗಿ ಪ್ರಕಟಿಸುವಂತವುಗಳನ್ನು ಎತ್ತಿಕೊಂಡಿದ್ದೇನೆ. ಅದಕ್ಕಾಗಿಯೇ ಈ ಸಂಗ್ರಹವನ್ನು ಸುಭಾಷಿತ ಚಮತ್ಕಾರ ಎಂದು ಹೆಸರಿಸಿದ್ದು.

ಸರಸ್ವತಿ। ಮನೋಹಾರಿ। ವಿಭಾಗದಲ್ಲಿ ಬರುವ ೧೩ ಶ್ಲೋಕಗಳು ವಿದ್ಯೆ ವಿವೇಕಗಳ ಬಗ್ಗೆ ಅವುಗಳ ಅಗತ್ಯ ಮಹತ್ವಗಳ ಬಗ್ಗೆ ಹೇಳುತ್ತದೆ.

ಬುವಿಯಲಿ ರತ್ನಗಳೆಂಬವು ಮೂರೇ
ಅನ್ನ, ನೀರು, ಸುಭಾಷಿತ
ಬಣ್ಣದ ಕಲ್ಲಿನ ಹರಳುಗಳನ್ನು
ರತ್ನಗಳೆಂಬುದು ಮೂಢಮತ

ಅನ್ನ, ನೀರು, ಸುಭಾಷಿತ ಜೀವನ ಮೌಲ್ಯಗಳನ್ನು ಸೂಚಿಸುತ್ತದೆ. ಈ ನುಡಿಗಳ ಹಿನ್ನಲೆಯಲ್ಲಿ ಹೆಚ್ಚು ಅನುಭವ ತಿಳಿವು ಮತ್ತು ಚಿಕಿತ್ಸಕ ದೃಷ್ಟಿಕೋನವನ್ನು ಕಾಣುತ್ತೇವೆ. ವಿದ್ಯಾಹೀನನ ಬಾಳನ್ನು ಈ ರೀತಿಯಾಗಿ ಹೇಳುತ್ತದೆ.

ವಿದ್ಯೆ ಕಾಣದವನ ಬಾಳು
ನಾಯಿ ಬಾಲದಂತೆ ಗಾಳು:
ಮಾನ ಮುಚ್ಚಲಾರದು,
ನೊಣ ಹೊಡೆಯಲು ಸಾಲದು.

ಮಾನವ ಜೀವನದ ನಿತ್ಯವ್ಯವಹಾರಗಳಿಗೂ ನಿತ್ಯಸತ್ಯಗಳಿಗೂ ಸಂಬಂಧಿಸಿರುವ ಮಾತುಗಳು ಇವು. ಸರಸ್ವತಿಯ ಮಹಿಮೆ ಭಿನ್ನವಾದುದು ಲಕ್ಷ್ಮೀಯ ಹಾಗೇ ಅಲ್ಲ. ಇಲ್ಲಿ ಸರಸ್ವತಿ ಕೃಪಾ ಪಾತ್ರರ ಬಗ್ಗೆ ಸುಭಾಷಿತಗಳನ್ನು ಹೇಳುತ್ತಾರೆ. ಈ ರಸಾಸ್ವಾಧನೆಗೆ ಕನ್ನಡಿಗರು ಪಾತ್ರರಾಗುವಂತೆ ತಮ್ಮ ಮಾತಿನ ಸೇತುವೆಯನ್ನು ಗಟ್ಟಿಯಾಗಿ ಸುಭಾಷಿತ ಮಾಧ್ಯಮದ ಮೂಲಕ ಕಟ್ಟಿಕೊಟ್ಟಿದ್ದಾರೆ. ಮನೋಬಲಂ ಬಲಂ ಎನ್ನುವ ಭಾಗದಲ್ಲಿ ನೀತಿ ಸಂದೇಶದಂತಿರುವ ಸುಭಾಷಿತದಲ್ಲಿ

ಸಾವಿರ ಗಾವುದ ಸಾಗಲುಬಹುದು
ಇರೆವೆಯಾದರೂ ನಡೆದೂ ನಡೆದೂ,
ಕೂತಲ್ಲಿದ್ದರೆ ಗರುಡನು ಕೂಡ
ಒಂದಂಗುಲ ಮುನ್ನಡೆಯನು ಮಾಡ

ಇಲ್ಲಿಯ ಅಂತ್ಯ ಪ್ರಾಸ, ಛಂದೋಲಯ ಸೊಗಸಾಗಿ ಮೂಡಿಬಂದಿದೆ.

ಸಮಾಜದಲ್ಲಿ ದುಡಿಯುವ-ದುಡಿಯದವರ ಇಬ್ಬರನ್ನು ಸೂಚಿಸುವ ವಿರೋಧಾಬಾಸ ಚಿತ್ರಣ ಇಲ್ಲಿದೆ. ಬಗೆ ಬಗೆ ನಯ ನೀತಿ ಸುಭಾಷಿತಗಳಲ್ಲಿ ಸರ್ವಜ್ಞನ ವಚನದಂತಿರುವ ನೀತಿಯ ಸುಭಾಷಿತವನ್ನು ಇಲ್ಲಿ ನೋಡುತ್ತೆವೆ. ತ್ರಿಪದಿಯಂತೆ ಕನ್ನಡದಲ್ಲಿ ಮಿಂಚುತ್ತಿದೆ.

ಒಡೆಯರಾದರಿಸುವುದು ಕುಲವಲ್ಲ ಕಲೆ; ನೋಡು
ಮೃಡನು-ನಾ-ನೀ ಎಂಬ ದೇವರನು ಕಡೆಗಣಿಸಿ
ಕಲೆಯುಳ್ಳವನ್ನ ತಲೆಗಿಟ್ಟ. (೧೯೦ ಸುಭಾಷಿತ ಚಮತ್ಕಾರ)

ಹಗಲು ಕಾಣದ ಗೂಗೆ, ಇರಳು ಕಾಣದ ಕಾಗೆ;
ಹಗಲಿರುಳು ಕಣ್ಣಿದ್ದು ಕಾಣದವನುಂಟೊಬ
ಅವನೆ ಹೆಸರಾಂತ ಕಾಮಾಂಧ (೨೪೫ ಸುಭಾಷಿತ ಚಮತ್ಕಾರ)

ಬಡತನಕೆ ಗುಣವಲ್ಲ ಬಡತನದಲ್ಲಿ ಜನಗಳ ಕಣ್ಣಿಗೆ ಕಾಣಿಸದರುವ ಸ್ಥಿತಿಯ ವರ್ಣನೆ

ದಾರಿದ್ರ್ಯವೆ ನಿನಗೆ ನಮೋ ಅವಶ್ಯ ಎಂಬೆ ।
ಸಿದ್ಧನಾದೆ ನಾನಿನ್ನ ದಯದಿಂದೆ;
ಜಗವನೆಲ್ಲ ನಾ ಕಾಣುತಲಿರುವ
ಜಗದ ಕರಿಗಳಿಗೆ ಕಾಣಿಸದಿರುವೆ

ಅನ್ಯೋನ್ಯ ಪ್ರಶಂಸೆಯ ಬಗ್ಗೆ ಇರುವ ತಿರಸ್ಕಾರ ಚಿತ್ರಣ ಈ ಸುಭಾಷಿತದಲ್ಲಿ ಕಾಣುತ್ತದೆ.

ಒಂಟೆಗಳ ಮದುವೆಯಲಿ ಕತ್ತೆಗಳು ಹಾಡಿದವು,
ಒಂದನಿನ್ನೊಂದು ಕೊಂಡಾಡಿದವು ತಲೆದೂಗಿ,
ಏನುರೂಪೇನು ದನಿಯಹಹಾ !

ಸಂಸ್ಕೃತ ಸುಭಾಷಿತವು ಕನ್ನಡದಲ್ಲಿ ಬಂದ ಬಗೆ ಜೀವನ ಸಂದೇಶದಂತಿದೆ ಎರಡು ಸಾಲುಗಳಲ್ಲಿ ಚಾಟೂಕ್ತಿಗಳಂತೆ ಕಾಣುತ್ತವೆ.

ಆಸೆಗೊಳಗಾದವನು ಲೋಕಕ್ಕೆ ಆಳು,
ಆಸೆಯನ್ನಾಳುವವಗೆ ಲೋಕವೇ ಆಳು

ಶ್ಲೋಕ ರೂಪದಲ್ಲಿರುವ ಸುಭಾಷಿತಗಳ ಶಿಲ್ಪ ಕಿರಿದರಲ್ಲಿ ಹಿರಿದನ್ನು ಹೇಳುವ ಸಂಕ್ಷಿಪ್ತ ರೀತಿ, ಕವಿಗೆ ಹೊಳೆಯುವ ವಿಚಾರ ಭಾಷೆಯಲ್ಲಿ ಮಿಂಚಿನ ರೂಪ ತಳೆಯುತ್ತದೆ. ಅದು ಎರಡು ಅಥವಾ ನಾಲ್ಕು ಪದಗಳ ಸೀಮಿತ ಅಕೃತಿಯಲ್ಲಿ ಬರುವಾಗ ಕವಿ ಯಾವುದಾದರೊಂದು ಛಂದೋಲಯವನ್ನು ಆಯ್ದು ಕೊಳ್ಳುತ್ತಾನೆ. ಸಂಸ್ಕೃತ ಭಾಷೆಯಲ್ಲಿಯ ಅಕ್ಷರ ವೃತ್ತಗಳು ನೂರಾರು ನಮೂನೆಯ ಲಯಗಳ ಆಗರವಾಗಿದೆ. ಉದಾ:

ಮಾಗಿದ ಹಣ್ಣು ಅಣಿಯಾದೂಟ
ಜವ್ವನವೇರಿದ ಹೆಣ್ಣಿನ ಕೂಟ
ಮಡಿಸಿದ ವೀಳ್ಯ ಸುಭಾಷಿತ ವಚನ
ಜವ್ವನವೇರಿದ ವೀಳ್ಯ ಸುಭಾಷಿತ ವಚನ
ಒಡನೆಯೇ ಕೈಗೊಳ್ಳುವವನೇ ಜಾಣ

ಇಲ್ಲಿ ಕವಿಯ ಪ್ರತಿಭೆ ವಿಚಾರಕ್ಕೆ ತಕ್ಕುದಾದ ಪದ ಮತ್ತು ಪದಗತಿಯನ್ನು ಆಯ್ದುಕೊಂಡು ವಿಷಯವನ್ನು ಪ್ರಕಟಿಸುತ್ತದೆ. ಪ್ರಾಸ, ಅನುಪ್ರಾಸ ವಹಿಸುವ ಪಾತ್ರ ಸುಭಾಷಿತಕ್ಕೆ ಮೆರಗು ನೀಡುತ್ತದೆ. ಒಟ್ಟಿನಲ್ಲಿ ಸುಭಾಷಿತ ಅನ್ನುವುದಕ್ಕೆ ಎಷ್ಟು ಸುಲಲಿತ ಮತ್ತು ಸುಭಗವೂ ಆಗಿರುತ್ತದೆ. ಜೊತೆಗೆ ಅತ್ಯಂತ ನಿಖರ ಪದಗಳ ಹಾಸುಹೊಕ್ಕಿನಲ್ಲಿ ಸುಂದರವಾಗಿ ಮೂಡಿ ಬರುವ ಚುಟುಕು ಕಾವ್ಯ ಎನ್ನಬಹುದು.

ಸಂಸ್ಕೃತ ಸಾಂಪ್ರದಾಯಿಕವಾಗಿ ಒದಗಿ ಬಂದ ಒಂದು ಶಕ್ತಿ ಸಂಸ್ಕೃತದಲ್ಲಿಯ ಕಾವ್ಯಶಾಸ್ತ್ರಗಳಲ್ಲಿ ಸಾಂದರ್ಭಿಕವಾಗಿ ಓದಿಕೊಂಡು ವಿಚಾರಶೋಧನೆ ಅಭಿಪ್ರಾಯಗಳಿಗೆ ಉಲ್ಲೇಖಿಸುವ ಅಧ್ಯಯನ ಪಾ.ವೆಂ. ಅವರದಾಗಿತ್ತು. ಹೀಗೆ ಪಾ.ವೆಂ. ಸಂಸ್ಕೃತದ ಸುಭಾಷಿತ ಸಾಹಿತ್ಯದ ಕಡೆಗೂ ಆಗಾಗ ಕಣ್ಣು ಹರಿಸುತ್ತಿದ್ದರು. ಕಸ್ತೂರಿಯ ಕಾಲಿ ಇರುವ ಪುಟಗಳಲ್ಲಿ ಸುಭಾಷಿತಗಳನ್ನು ಆಯ್ಕೆ ಮಾಡಿ ಮೂಲರೂಪದೊಂದಿಗೆ ಅನುವಾದವನ್ನು ಕೊಡುತ್ತಿದ್ದುದುಂಟು. ಅವರ ನೆನಪಿನ ಆಗಾಧ ಶಕ್ತಿಯಿಂದಾಗಿ ಹಲವು ಸುಭಾಷಿತಗಳು ಅವರಿಗೆ ಸಂದರ್ಭೋಚಿತವಾಗಿ ಒದಗಿ ಬರುತ್ತಿದ್ದವು. ಹೀಗೆ ಬಿಡಿಯಾಗಿ ಉದ್ಧರಣಗೊಂಡ ಸುಭಾಷಿತಗಳನ್ನು ಅವರು ೧೯೮೬ರಲ್ಲಿ ಸಂಗ್ರಹಿಸಿ **ಸುಭಾಷಿತ ಚಮತ್ಕಾರ** ಎಂಬ ೨೬೬ ಸುಭಾಷಿತಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ೨೦೦೪ರಲ್ಲಿ ಪಾ.ವೆಂ. ವಿಶ್ವಸ್ತ ಸಮಿತಿಯಿಂದ ಮರುಮುದ್ರಣವನ್ನು ಮಾಡಲಾಯಿತು. ಸಂಸ್ಕೃತ ಸುಭಾಷಿತಗಳ ಸಾಗರದ ಮೇಲೆ ಪ್ರಯಾಣಿಸುವ ಓದುಗ ಅಥವಾ ಸಂಗ್ರಾಹಕ ಅವುಗಳನ್ನು ಅನುವಾದ ರೂಪಕ್ಕೆ ತರುವಾಗ ವಿಷಯ ವರ್ಗೀಕರಣ ಮಾಡುವುದುಂಟು. ಸಾಮಾನ್ಯವಾಗಿ ನೀತಿಯ ನೆಲೆ ಮೇಲೆ ಸುಭಾಷಿತಗಳನ್ನು ನೋಡುವವರೇ ಹೆಚ್ಚು. ಧರ್ಮ, ಸಮಾಜ, ವೈರಾಗ್ಯ, ಭಕ್ತಿ, ನಂಬಿಕೆ, ವಿವೇಕ, ಸದ್ಗುಣ–ದುರ್ಗುಣ, ದೈವ ಪುರುಷ ಪ್ರಯತ್ನ ವಿಧೇಯಗಳನ್ನು ಗುರಿಯಾಗಿಟ್ಟುಕೊಂಡು ನೋಡಲಾಗುತ್ತದೆ. ಸುಭಾಷಿತಗಳನ್ನು ಓದುಗರಿಗೆ ಕೊಡುವಾಗ ಪಾ. ವೆಂ. ಅವರು ಅವುಗಳನ್ನು ಹೀಗೆ ವರ್ಗೀಕರಿಸುತ್ತಾರೆ.

	ವಿಷಯ	ಪುಟ ಸಂಖ್ಯೆ
೧.	ಸರಸ್ವತಿ ಮನೋಹಾರಿ	೧–೧೩
೨.	ಹರಂ ವಂದೇ ಹರಂ ವಂದೇ	೧೪–೨೪
೩.	ಮನೋಬಲಂ ಬಲಂ	೨೫–೨೯
೪.	ಧನಮಹಿಮೆ	೩೦–೪೫

೫.	ಬಡತನಕ್ಕೆ ಗುಣವಿಲ್ಲ	೫೬-೯೮
೬.	ಈ ನಂಟು ಕಗ್ಗಂಟು	೫೬-೯೮
೭.	ಭೂ ಬಾಣ	೯೯-೧೩೫
೮.	ಸಜ್ಜನ -ದುರ್ಜನ	೧೩೬-೧೫೬
೯.	ಆಳುವವರ ಸ್ವರೂಪ	೧೫೭-೧೭೨
೧೦.	ಅನ್ಯೋಕ್ತಿ	೧೭೩-೧೮೩
೧೧.	ಸ್ತುತಿ ಚಮತ್ಕಾರ	೧೮೪-೧೮೯
೧೨.	ಬಗೆ ಬಗೆಯ ನಯ-ನೀತಿ	೧೯೦-೨೬೦
೧೩.	ವೈರಾಗ್ಯ ಭಾಗ್ಯ	೨೬೧-೨೬೬

ಈ ರೀತಿ ವರ್ಗೀಕರಣ ಒಂದೊಂದು ವಿಷಯಗಳಲ್ಲಿ ಹತ್ತು-ಹನ್ನೆರಡು, ಐದು-ಆರು ಸುಭಾಷಿತಗಳನ್ನು ಕೊಡಲಾಗಿದೆ. ಸುಭಾಷಿತಗಳ ರಚನಾಕಾಲ ಸಂದರ್ಭ ಐತಿಹಾಸಿಕವಾದುದಲ್ಲ. ಅದು ಸುಭಾಷಿತಕಾರನ ಬುದ್ಧಿಯ ಔನತ್ಯ, ಪ್ರತಿಭೆಯ ಒತ್ತಡ ಎರಡೂ ಸೇರಿದಾಗ ಲೋಕದೃಷ್ಟಿಯ ಅಭಿವ್ಯಕ್ತಿಯಾಗಿ ಹೊಮ್ಮುವ ಸಹಜ ಸಾಹಿತ್ಯ. ಪಾ.ವೆಂ. ಅವರು ಸದಾ ತಮ್ಮ ಬುದ್ಧಿ ಮತ್ತು ಪ್ರತಿಭೆಯನ್ನು ಅಭಿವ್ಯಕ್ತಿಗಾಗಿ ತೆರೆದಿಟ್ಟರು.

ಹೀಗಾಗಿ ಅವರು ಒತ್ತಡದಿಂದ ಪ್ರೇರಿತರಾಗಿ ತಮಗೆ ಅನುಪಮವಾಗಿ ಕಂಡ ತಮ್ಮ ಲೋಕಾಭಿಮತಕ್ಕೆ ಸರಿಹೊಂದುವ ಸುಭಾಷಿತಗಳನ್ನು ಆಯ್ದುಕೊಂಡಿದ್ದಾರೆ. ಇದು ಅವರ ಅನೇಕ ಬರಹಕಾರ್ಯಗಳ ನಡುವೆ ವಿರಾಮ ಸಿಕ್ಕಾಗ ಸಾಧ್ಯವಾದ ಅಭಿರುಚಿಯನ್ನು ಸಾದರಪಡಿಸುವ ಸಾಹಿತ್ಯ ಕ್ರೀಡೆಯಾಗಿದೆ.

೫. ಕಥೆಗಾರ ಪಾ.ವೆಂ.:

ಹಿಂದೂ ಮುಸ್ಲಿಂ ಮತ್ತು ಇತರ ಕತೆಗಳು (೨೦೦೨) ಮತ್ತು ಪಾ.ವೆಂ. ಅವರದು ಕಥನಕಾರನ ವೃತ್ತಿಯಲ್ಲ. ಅವರದು ವಾಸ್ತವ ಸಂಗತಿಗಳ (Fact)ನ್ನು ಸಂಗ್ರಹಿಸಿ, ವಿಶ್ಲೇಷಿಸಿ ಅದರಲ್ಲಿಯ ಸತ್ಯಾಂಶಗಳನ್ನು ಕಂಡು ಹಿಡಿಯುವ ವೃತ್ತಿ ಅಥವಾ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳೊಳಗಿನ ಅಂತಃ ಸಂಬಂಧವನ್ನು ಗುರುತಿಸಿ ವಿಷಯ ಲೇಖನ ಮಾಡುವ ಪ್ರವೃತ್ತಿ ಕತೆಗಾರನಾದವ ತನ್ನ ಅನುಭವಕ್ಕೆ ಬಂದ ಅಥವಾ ಸಂವೇದನೆಯನ್ನು ತೀವ್ರವಾಗಿ ಸ್ಪರ್ಶಿಸಿದ ಸಂಗತಿಯನ್ನು ಘಟನೆ, ಪಾತ್ರ ಸನ್ನಿವೇಶಗಳ ಒಂದು ಬಂಧದಲ್ಲಿ ಕಲ್ಪಿಸಿ ಕತೆ ಕಟ್ಟುವುದು. ಪಾ.ವೆಂ. ಅವರು ಸೊಗಸಾಗಿ ಕತೆಕಟ್ಟಬಲ್ಲರು ಎಂಬುದಕ್ಕೆ ಮರಣೋತ್ತರವಾಗಿ ಪ್ರಕಟವಾದ (೨೦೦೨) ಶ್ರೀನಿವಾಸ ಹಾವನೂರರು ಸಂಪಾದಿಸಿ ಕೊಟ್ಟ **ಹಿಂದೂ ಮುಸ್ಲಿಂ ಮತ್ತು ಇತರ ಕತೆಗಳು** ಸಾಕ್ಷಿಯಾಗಿದೆ. ಈ ಸಂಕಲನದಲ್ಲಿ ಕೆಲವು ಒಳ್ಳೆಯ ಕತೆಗಳಿವೆ.

ಹಿಂದೂ ಮುಸ್ಲಿಂ ಮತ್ತು ಕನಸು ಎಂಬೆರಡು ಕತೆಗಳು ಪಾ.ವೆಂ. ಅವರ ಕಥನ ಕೌಶಲ್ಯಕ್ಕೆ ಉದಾಹರಣೆಯಾಗಿದೆ. ಕತೆಯ ಅಂಶಗಳನ್ನು ಒಳಗೊಂಡು ವಿಡಂಬನೆಯ ಧಾಟಿಯಲ್ಲಿ ಬರೆಯಲಾದ ಒಂದು **ಆ ನೀತಿ ಕತೆ** ಮತ್ತು ಹಾಗೆಯೇ **ಒಬ್ಬ ಸ್ವಾಮಿಗಳ ಕತೆ** ಗಮನಾರ್ಹವಾಗಿದೆ. **ವಾಕ್‌ಂಗ್ ಸ್ಟಿಕ್‌**ನ ಪ್ರಕರಣ ಎಂಬುದು ಹರಟೆಯ ಧಾಟಿಯಲ್ಲಿರುವ ವಿಡಂಬನಾ ಪ್ರಬಂಧ. ಯಾವುದೇ ಆಶಯ ಅಥವಾ ಕಥನದ ತುರ್ತು ಇಲ್ಲದೆ ಪಾ.ವೆಂ. ಅವರು ಬರೆದ **ವಿನೋದದ ಪರಮಾವದಿ** ಎಂಬ ಕತೆ ಒಂದು ಸಂಗತಿಯ ನಿರೂಪಣೆ ಮಾತ್ರ ಆಗಿದೆ.

ಒಂದು **ಅ–ನೀತಿ ಕಥೆ** ಇದೊಂದು ಮಾರ್ಮಿಕವಾದ ದೃಷ್ಟಾಂತ ಕತೆ. ಸುಮಾರು ೧೯೩೦ರ ದಶಕದಲ್ಲಿ ಪಾ.ವೆಂ. ವ್ಯಾಪಾರೋದ್ಯಮಿ ದಿ. ಶ್ರೀನಿವಾಸ ಉಪಾಧ್ಯಾಯ ಪಣಿಯಾಡಿಯವರ ಜೊತೆಗೆ ಮದ್ರಾಸಿನಲ್ಲಿದ್ದಾಗ ಅವರಿಂದ ಕೇಳಿದ ಒಂದು ಪ್ರಸಂಗ–ಕತೆ ದೃಷ್ಟಾಂತ ರೂಪದ್ದು. ಇದನ್ನು ಸ್ವಾಮಿ ವಿವೇಕಾನಂದರು ಅಮೇರಿಕಾದಲ್ಲಿದ್ದಾಗ ಹೇಳಿದ್ದೆಂದು ಪಣಿಯಾಡಿ ಇವರಿಗೆ ತಿಳಿಸಿದ್ದರು. ಕತೆ ಕೇಳಿದ ಪಾ.ವೆಂ. ಇದನ್ನು ತುಳುವಿನಲ್ಲಿ ಬರೆದು ಉಡುಪಿಯ ತುಳು ಪತ್ರಿಕೆಗೆ ಕಳುಹಿಸಿದ್ದರು. ನಂತರ ತಾವೇ ಅನುವಾದಿಸಿ ಪ್ರಕಟಿಸಿದ್ದಾರೆ. 'ದೇವರು, ಸ್ವರ್ಗ, ನರಕ ಯಾವುದೇ ಧರ್ಮದಲ್ಲಿ ತಲೆ ಹಾಕುವ ಸಂಕೇತಗಳು. ಪಾಪ–ಪುಣ್ಯ ಆಸ್ತಿಕತೆ–ನಾಸ್ತಿಕತೆಗಳ ಬಗ್ಗೆ ಮತಾನುಯಾಯಿಗಳಿಗೆ ಬೋಧಿಸುವ ಪುರೋಹಿತರು, ಪಾದ್ರಿಗಳು, ಕಾಳಜಿಗಳು ಎಲ್ಲ ಮತಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ ಇದ್ದಾರೆ. ತಾವು ದೇವರೇ ಕಳಿಸಿದ ಧೂತ ಎಂಬಂತೆ ಇವರು ಸಾಮಾನ್ಯರೊಂದಿಗೆ ಮಾತಾಡುತ್ತಾರೆ ಮತ್ತು ದೇವರು, ಸ್ವರ್ಗ ಇವುಗಳ ಬಗ್ಗೆ ಭಕ್ತನಿಗೆ ಇರಬೇಕಾದ ಕರ್ತವ್ಯದ ಬಗ್ಗೆ ತಿಳಿಸುತ್ತಿರುತ್ತಾನೆ. ನಾಸ್ತಿಕರ ಬಗ್ಗೆ ಈ ಧರ್ಮಬೋಧಕರು ಯಾವತ್ತು ಕಣ್ಣಿಟ್ಟು ಅವರನ್ನು ಆಸ್ತಿಕರನ್ನಾಗಿ ಮಾಡುವ ಪ್ರಯತ್ನದಲ್ಲಿರುತ್ತಾರೆ. ನಾಸ್ತಿಕರಿಂದ ಧರ್ಮಹಾಳಾಗಬಾರದು; ನಾಸ್ತಿಕನಾದವ ಪಾಪಿಯಾಗಿ ಉಳಿಯದೆ ಪುಣ್ಯವಂತನಾಗಬೇಕು ಮತ್ತು ಸ್ವರ್ಗಸುಖ ಪಡೆಯುವವನಾಗಬೇಕು ಎಂಬುದೇ ಈ ಧರ್ಮೋಪದೇಶಕರ ಹಟ. ಈ ಕತೆಯಲ್ಲಿ ಕ್ರಿಸ್ತುದಾಸ್ ಪಾದ್ರಿ ಮತ್ತು ಬಸ್ತ್ಯಾಂ ಪೊರ್ಬು ಎಂಬ ಎರಡು ತದ್ವಿರುದ್ಧ ಪಾತ್ರಗಳ ಮೂಲಕ ಪಾ.ವೆಂ. ಧಾರ್ಮಿಕ ನಂಬಿಕೆ ಮತ್ತು ಧರ್ಮನಿರಸನದ ಕತೆಯನ್ನು ಕಟ್ಟಿದ್ದಾರೆ. ಕ್ರಿಸ್ತುದಾಸ್ ಪಾದ್ರಿಗೆ ಬಸ್ತ್ಯಾಂನನ್ನು ಆಸ್ತಿಕನನ್ನಾಗಿ ಮಾಡಿಯೇ ತೀರಬೇಕೆಂಬ ಹಟ ಆದರೆ ಬಸ್ತ್ಯಾಂ ದೇವರು, ಸ್ವರ್ಗಗಳನ್ನು ಮತ್ತೆ ಮತ್ತೆ ಮೂದಲಿಸುವ, ಅಲ್ಲಗಳೆದು ತನ್ನ ನಾಸ್ತಿಕತೆಯೇ ಸರಿಯೆಂದು ಸಾಧಿಸುವ ಹಟ. ಅಷ್ಟೆ ಅಲ್ಲ ದೇವರ ಉಸಾಬರಿ ಇಲ್ಲದೇ, ಸ್ವರ್ಗದಾಸೆಯ ಹಂಗು ಇಲ್ಲದೆ ಮನುಷ್ಯ ಇರಬಲ್ಲ ಮತ್ತು ಕಾಲ್ಪನಿಕವಾದ ಸ್ವರ್ಗವನ್ನು ಸೇರಬಲ್ಲ ಪಾದ್ರಿಹೇಳುವ ಧರ್ಮೋಪದೇಶ ವಿರೋಧಾಭಾಸಗಳಿಂದ ಕೂಡಿದೆ. ಮನುಷ್ಯ ಅನಿವಾರ್ಯವಾಗಿ ಮಾಡುವ ಪಾಪ ಅಥವಾ ಕೆಡಕುಗಳಿಗೆ ಪ್ರಾರ್ಥನೆ ಮಾಡಿ ಪರಿಹಾರ ಪಡೆಯಬಹುದು ಎಂಬುದಾದರೆ ಆತ

ಮತ್ತೆ ಮತ್ತೆ ಪಾಪವನ್ನು ಮಾಡಿ ಪಶ್ಚಾತ್ತಾಪಪಡುವ ಸೌಲಭ್ಯ ಸಿಕ್ಕಂತಾಯಿತಲ್ಲವೆ ಎಂದು ಪ್ರಶ್ನಿಸುವ ಪೊರ್ಬುರ್ ಹೇಳುವುದೇನೆಂದರೆ 'ಮನುಷ್ಯ ತನಗೆ ತಾನು ಜವಾಬ್ದಾರನಾಗಿ ತನ್ನ ಮೂಗುದಾರ (ಆತ್ಮ ನಿಯಂತ್ರಣ) ತಾನೆ ಹಿಡಿಯಲಿಕೆ ಕಲಿತರೆ ದೇವರು ಯಾಕೆ? ಕಲಿಯದಿದ್ದರೆ ದೇವರು ಇದ್ದೂ ಏನು ಲಾಭ? 'ಎಂದು ಕೇಳುವ ಪೊರ್ಬುರ್' ತನ್ನ ಮನೆಯ ಅಂಗಳದ ಕಸವನ್ನು ಅಥವಾ ಹೊಲಸನ್ನು ತಾನೆ ಗುಡಿಸಿ ತೆಗೆಯಬೇಕು. ದೇವರನ್ನು ನಂಬಿ ಕೂತರೆ ಅವನ ಬೆನ್ನು ಕೋಲು ಎಂದು ನೆಟ್ಟಗಾಗದು'. ಅದು ನೆಟ್ಟಗಾಗದೆ ಎಂದು ವಾದಿಸುವವನನ್ನು ಪಾದ್ರಿ ಪ್ರತಿ ಹೇಳದೆ 'ದೇವರೆ ಈ ಮನುಷ್ಯನ ಮಾತಿನ ಹೊಂಡದಲ್ಲಿ ನಾನು ಜಾರಿ ಬೀಳದಂತೆ ಕಾಪಾಡಪ್ಪ ಎಂದು ದೇವರಲ್ಲಿ ಪ್ರಾರ್ಥನೆ ಮಾಡುವನು. ಆ ಬಸ್ತ್ಯಾಂ ಪೊರ್ಬುರ್‌ವನ್ನು ಬಿಟ್ಟರೆ ಆ ಊರಿನ ಎಲ್ಲರೂ ಪಾದ್ರಿಯ ಪ್ರಭಾವದಿಂದ ಅರ್ಥಾತ್ ಅವರು ಜಲಪ್ರೋಕ್ಷಣೆ ಮಾಡಿ ಉಪದೇಶ ಕೊಟ್ಟಿದ್ದರಿಂದ ಆಸ್ತಿಕರಾಗಿ ಮೆರೆದರು. ಪೊರ್ಬುರ್ ಒಂದು ದಿನ ತೀರಿಕೊಂಡ 'ನಾನು ಸತ್ತರೆ ನನ್ನನ್ನು ಸುಮ್ಮನೆ ಒಯ್ದು ಹುಗಿದುಬಿಡಬೇಕು' ಯಾವ ಪಾದ್ರಿಗೂ ಹೇಳದೆ ಯಾವ ಮಂತ್ರವನ್ನು ಪಟಿಸದೆ ಹೂಳಬೇಕೆಂದು ಬರೆದಿಟ್ಟಿದ್ದ. ಅಂತೂ ಪಾದ್ರಿಯ ಉಪದೇಶ ಮನವೊಲಿಕೆಗಳಿಕೆಗೆ ಮೀರಿ ಪೊರ್ಬುರ್ ಸತ್ತ. ಪಾದ್ರಿಗೆ ಅಸಮಾಧಾನ ಹೆಚ್ಚಿತು. ಪೊರ್ಬುರ್‌ವಿಗೆ ನರಕ ಸಿಕ್ಕಿತಲ್ಲವೆಂದು ಕೊರಗಿದ. ಎಷ್ಟೋ ದಿವಸದ ಮೇಲೆ ಪಾದ್ರಿಯೂ ಸತ್ತು ಸ್ವರ್ಗಕ್ಕೆ ಸೇರಿದ ಕೂಡಲೇ ತಮ್ಮೊಂದು ಆಸೆಯನ್ನು ಬಾಗಿಲಲ್ಲಿ ನಿಂತಿದ್ದ ಸಂತ ಪೇತ್ರನಿಗೆ (ಪೀಟರ್) ನಿವೇಧಿಸಿದ. ನರಕಕ್ಕೆ ಹೋದ ಪೊರ್ಚುವನ್ನು ಬೆಟ್ಟಿಯಾಗಿ ಇನ್ನೊಮ್ಮೆ ಅವನ ಮನಸ್ಸನ್ನು ದೇವರ ಕಡೆ ತಿರುಗಿಸಬೇಕಾಗಿದೆ ಎಂದರು. ಇವರು ತಿಳಿದಂತೆ ಪೊರ್ಬುರ್ ಅತಿಭಯಂಕರ ನರಕಕ್ಕೆ ಹೋಗಿದ್ದ ಅವನನ್ನು ಕಾಣಲು ಪಾದ್ರಿ ಪೋರ ನರಕಗಳನ್ನು ಧಾಟಿ ಹೋಗಬೇಕಾಯಿತು. ಹೋದ ಹೋದಂತೆ ದುರ್ವಾಸನೆ, ಅಳು, ಚೀರು, ಬೆಂಕಿ ಕಮ್ಮಿಯಾಗುತ್ತಾ ಕ್ರಮೇಣ ಸುವಾಸನೆ, ಸ್ವಚ್ಛಹಾದಿ ಹೂ ಬಿಡುವ ಸಾಲು ಮರಗಳು, ಇಂಪಾದ ಸಂಗೀತ ಸ್ವಚಂದವಾಗಿ ನಗುನಗುತ್ತಾ ನಡೆದಾಡುವ ಗಂಡು ಹೆಣ್ಣುಗಳು ಆ ಲೋಕದಲ್ಲಿ ಕಾಣತೊಡಗಿದವು. ಭೂಲೋಕದ ಪವಿತ್ರ ಪಾದ್ರಿಗೆ ಆಶ್ಚರ್ಯವೆನಿಸಿತು. ನರಕದಲ್ಲಿ ಇದೇನು ಸ್ವರ್ಗದ ವಾತಾವರಣ ಎಂದು ಪ್ರಶ್ನಿಸಿದಾಗ ಅಲ್ಲಿಯ ಜವಾನನೊಬ್ಬ ಬಸ್ತ್ಯಾಂ ಪೊರ್ಬುರ್‌ವಿನ ಆಗಮನದಿಂದ ಈ ನರಕವೂ ಸ್ವರ್ಗವಾಗುತ್ತಿದೆ ಎಂಬ ಕತೆ ಹೇಳಿದ. ಸುಮಾರು ವರ್ಷದ ಹಿಂದ ಬಂದ ಈ ಪೊರ್ಬುರ್ ನರಕದ ಗಲೀಜನ್ನು ಅಸ್ತವ್ಯಸ್ತ ಸ್ಥಿತಿಯನ್ನು ಕಂಡು ಅಲ್ಲಿದ್ದವರಿಗೆಲ್ಲ ಹೇಳಿದನಂತೆ. ಹೊಲಸನ್ನು ಏಕೆ ಸಹಿಸುತ್ತೀರಿ? ನಾವೆಲ್ಲ ಹಾರೆ, ಗುದ್ದಲಿ, ಬುಟ್ಟಿ ಹಿಡಿಯೋಣ ಕಸ, ಕೊಳೆ ತೆಗೆಯೋಣ, ನೆಲವನ್ನು ಹಸನು ಮಾಡೋಣ ನಮಗೆ ಬೇಕಾದನ್ನು ಭಿತ್ತಿ ಬೆಳೆಯೋಣ, ನೀರು ಹರಿಸೋಣ ಬೆಳಕು ಹಾಕೋಣ ಗಾಳಿ, ಬೆಳಕು, ಮಳೆ ಬರುವಂತೆ ವಾತಾವರಣ ನಿರ್ಮಿಸೋಣ ಪೊರ್ಬುರ್‌ವಿನ ಮಾತಿನಿಂದ

ನರಕವಾಸಿಗಳಲ್ಲಿ ಪ್ರೇರಿತರಾಗಿ ಉತ್ಸಾಹದಿಂದ, ಒಕ್ಕಟ್ಟಿನಿಂದ ಒಮ್ಮನಸ್ಸಿನಿಂದ ದೆವ್ವದಂತೆ ದುಡಿದೇ ದುಡಿದದ್ದು. ಮೈ ಬೆವರು ಸುರಿಸಿ ಧಣಿದವರು ಈಗ ಹಾಯಾಗಿ ಸ್ವಚ್ಛಂಧವಾಗಿ ಕಾಲಕಳೆಯುತ್ತಾರೆ. ಈ ಕತೆ ಕೇಳಿದ್ದಲ್ಲದೆ ನರಕದಲ್ಲಿಯ ಸ್ವರ್ಗವನ್ನೇ ಕಂಡು ಪಾದ್ರಿ ಪೊರ್ಬುವನ್ನು ಅಭಿನಂದಿಸುತ್ತಾನೆ. ಆದರೆ ಪೊರ್ಬು 'ದೇವರನ್ನು ಧಿಕ್ಕರಿಸಿ' ಇದೆಲ್ಲ ಸಾಧಿಸಿದ್ದು ಮಾತ್ರ ಸರಿಯಲ್ಲ; ಪೊರ್ಬುವಿಗೆ 'ಇನ್ನಾದರೂ ಸದ್ಬುದ್ಧಿ ಕೊಡುವಂತೆ' ದೇವರನ್ನು ಪ್ರಾರ್ಥಿಸ ಬೇಕೆಂದು ಪಾದ್ರಿ ಮೊಣಕಾಲು ಊರಿದ, ಆದರೆ ಪೊರ್ಬು ನಗುತ್ತಾ ಅವರ ಕೈ ಹಿಡಿದೆಬ್ಬಿಸಿ 'ಪಾದ್ರಿಗಳೇ ಈ ನರಕದಲ್ಲಿ ಬೇರೆ ಏನು ಮಾಡಲಿಕ್ಕೆ ನಿಮಗೆ ಸ್ವಾತಂತ್ರ್ಯ ಉಂಟು ದೇವರಿಗೆ ಪ್ರಾರ್ಥನೆ ಮಾಡುವುದು ಮಾತ್ರ ನಿಷಿದ್ಧ' ಎನ್ನಬೇಕಾಯಿತು.

ದೇವರು, ಧರ್ಮಗಳಲ್ಲಿಯ ನಂಬಿಕೆಯ ಪೊಳ್ಳುತನವನ್ನು ವಿಡಂಬಿಸುವ ಈ ಕತೆ ಮಾನವಪ್ರಜ್ಞೆ ಮತ್ತು ಪೌರುಷ ಪ್ರಯತ್ನಗಳನ್ನು ಮನ್ನಿಸುತ್ತದೆ. ಪಾ.ವೆಂ. ಈ ಕತೆ ಬರೆಯಲಿಕ್ಕೆ ಕಾರಣ ಅಥವಾ ಸಂದರ್ಭ ಮುಖ್ಯ ಎನಿಸುತ್ತದೆ. ಅವರು ಹುಟ್ಟೂರು ಉಡುಪಿಯಲ್ಲಿಯೇ ಇದ್ದು, ಅಲ್ಲಿಯ ಆಸ್ತಿಕ, ಧಾರ್ಮಿಕ ವಾತಾವರಣದಲ್ಲಿ ರೂಢಿಗತವಾದ ವ್ಯವಸ್ಥೆಯೊಳಗೆ ಇದ್ದಿದ್ದರೆ ಶರಣಾಗತ ಕುಬ್ಜ ಜೀವನವನ್ನು ಮಾಡಬೇಕಾಗುತ್ತಿತ್ತು. ಅವರಿಗೆ ಪಣಿಯಾಡಿಯಂತವರ ಸಾಹಸಿ, ಉದ್ಯಮಿಯ ಸಹವಾಸ ಸಿಕ್ಕು ಸ್ವತಂತ್ರ ಜೀವನ ರೂಪಿಸಿಕೊಳ್ಳುವ ಅವಕಾಶ ಸಿಕ್ಕಿತು. ಭಾವನಾತ್ಮಕವಾಗಿ ಪಾ.ವೆಂ. ಆಸ್ತಿಕರಾಗಿದ್ದರು. ಆದರೆ ಅವರದು ಪರೋಪದೇಶದ ಅವಲಂಬನೆಯದಲ್ಲ ಎಂಬುದು ಗಮನಾರ್ಹ. ತಮ್ಮ ಜೀವನದ ತಾತ್ವಿಕತೆ ಮತ್ತು ಸ್ವಂತಿಕೆಯ ದೃಷ್ಟಾಂತವಾಗಿ ಈ ಕತೆಯನ್ನು ಅವರು ಹೇಳಿದ್ದಾರೆನಿಸುತ್ತದೆ. ಸ್ವಾಮಿ ವಿವೇಕಾನಂದರು ಹೇಳಿರಬಹುದಾದ ಈ ಕತೆಗೆ ವ್ಯಾಪಕ ಅರ್ಥವಿದೆ. ಅ–ನೀತಿಕತೆ ಇದನ್ನು ಅ–ನೀತಿಕತೆಯೆಂದು ಪಾ.ವೆಂ. ಕರೆದಿರುವುದರಲ್ಲಿ ಮಾರ್ಮಿಕತೆಯಿದೆ. ಮತೀಯ ನಂಬಿಕೆಗಳ ಅಧಾರಿತ, ಧರ್ಮೋಪದೇಶದ ಕತೆಗಳು ನೀತಿ ಕಥೆ ಎನ್ನುವುದಾದರೆ ಇದು ಅಂತಹ ಸುಳ್ಳುಪೊಳ್ಳು, ಭ್ರಮಾಧಿನ ನೀತಿ ವಿರುದ್ಧವಾದುದು. ಈ ವಿರೋಧ ಕ್ರಿಯಾಶೀಲವೂ, ವಿಚಾರಶೀಲವೂ ಆಗಿದ್ದನ್ನು ಪೊರ್ಬುವಿನ ಮೂಲಕ ಸಮರ್ಥವಾಗಿ ಸೂಚಿಸಲಾಗಿದೆ. ಮಾನವನ ಒಳಿತಿಗೆ, ಪ್ರಗತಿಗೆ, ಹೊರಗಿನದೇನೂ ಬೇಕಾಗಿಲ್ಲ. ಅವನೊಳಗಿನ ಎಚ್ಚರ, ಪ್ರಾಮಾಣಿಕ, ಪರಿಶ್ರಮ ಮಾತ್ರಬೇಕು. ಇಂತಹ ನೀತಿ ಭೌತಿಕವಾದದ ಪರಿಣಾಮ ಎಂಬುದನ್ನು ಪಾ.ವೆಂ. ಲಕ್ಷಿಸಿದ್ದಾರೆ.

ಕನಸು, ಸಾಗರತನೆಯ ಹೆಸರಿನಲ್ಲಿ ಕಸ್ತೂರಿಗಾಗಿ ಒಂದು ಲಹರಿಯಲ್ಲಿ ಪಾ.ವೆಂ. ಬರೆದ ಕತೆ **ಕನಸು** ಮನೋವೈಜ್ಞಾನಿಕ ವಿಶ್ಲೇಷಣೆಯ ಈ ಕತೆಯಲ್ಲಿ ವಿವಾಹಿತ ಸ್ತ್ರೀಯ ಮನಸ್ಥಿತಿಯ ಚಿತ್ರಣವಿದೆ. ಸುಚೇತಾ ಮದುವೆಯಾಗಿ ಕೆಲಕಾಲ ಕಳೆದಿದ್ದರೂ ಇನ್ನು ಬಸುರಿನ ಸೌಭಾಗ್ಯ ಪಡೆದಿಲ್ಲ. ಆದರೆ ಅದನ್ನು ಪಡೆಯುವ ನೀರಿಕ್ಷೆಯಲ್ಲಿದ್ದಾಳೆ. ಆದರೆ ಅವರ ಸುಪ್ತ ಮನಸ್ಸು ಅಸ್ವಸ್ಥವಾಗಿದೆ. ಅದಕ್ಕೆ ಕಾರಣ ಆಕೆಯ ಕನಸ್ಸಿನಲ್ಲಿ ಮತ್ತೆ

ಮತ್ತೆ ಬರುತ್ತಿರುವ ಪರಪುರುಷ. ತನ್ನ ಗಂಡ ಸತೀಶನಿಗಿಂತ ಹೆಚ್ಚು ಆತ್ಮೀಯನಾಗಿದ್ದಾನೆ. ಅವನ ಬಗೆಗಿನ ಆಕರ್ಷಣೆ ಒಲವು ತೀವ್ರವಾಗಿದೆ. ಅದಕ್ಕೆ ಕಾರಣ ಆ ಪರ ಪುರುಷನ ಪ್ರೀತಿ ತುಂಬಿದ ನೋಟ ಮತ್ತು ಆಲಿಂಗನದ ಅನುಭವ. ಈ ಅಸ್ವಸ್ಥಸ್ಥಿತಿಯಿಂದ ಸುಚೇತಾ ದ್ವಂದ್ವಕ್ಕೆ ಈಡಾಗಿದ್ದಾಳೆ. ಆ ಪರಪುರುಷನನ್ನು ದೂರ ಮಾಡುವಷ್ಟು ಮರೆಯುವಷ್ಟು ಶಕ್ತಿ, ವಿಶ್ವಾಸ ಅವಳಿಗೆ ಸಿಗುತ್ತಿಲ್ಲ. ಸತೀಶ ಅವಳಿಗೆ ಪ್ರೀತ್ಯಾಸ್ತನೂ, ವಿಶ್ವಾಸಕನೂ ಆಗಿದ್ದಾನೆ. ದಾಂಪತ್ಯದಲ್ಲಿ ಬಿರುಕೆಂಬುದೇ ಇಲ್ಲ. ಹೀಗಿದ್ದರೂ ಅವಳಿಗೆ ಬಸಿರು ನಿಲ್ಲುತ್ತಿಲ್ಲ ಇದಕ್ಕೆ ಕಾರಣ ತನ್ನನ್ನು ಕಾಡುತ್ತಿರುವ ಪರಪುರುಷನ ಪ್ರತಿಬಿಂಬ ಎಂಬುದು ಅವಳ ಗಮನಕ್ಕೆ ಬರುತ್ತಿದೆ. ಇಬ್ಬರ ನಡುವಿನ ಒಬ್ಬ ಹೆಂಗಸಾಗಿ ತೊಳಲಾಡುವ ಸ್ಥಿತಿಯಿಂದ ಪಾರಾಗುವುದು ಹೇಗೆ? ಎಂದು ಅವಳು ಮತ್ತೆ ಮತ್ತೆ ಯೋಚಿಸುತ್ತಾಳೆ. ಪರಪುರುಷನಿಗೆ ಪರವಶಗೊಂಡ ತಾನು ತಪ್ಪಿತಸ್ಥಳೇನು (Guilt) ಎಂಬ ಸಮಸ್ಯೆಯೂ ಅವಳಿಗಿದೆ. ಇದರಿಂದ ಪಾರಾಗುವುದು ಹೇಗೆ? ತನ್ನ ಪತಿ ತನ್ನ ಸುಪ್ತಮನ ಸ್ಥಿತಿಯೊಳಗೆ ಪ್ರವೇಶಿಸುವುದು ಹೇಗೆ ಎಂದು ತಾನೇ ಮನೋವಿಶ್ಲೇಷಣೆ ಮಾಡಿಕೊಳ್ಳುತ್ತಾಳೆ. ಆಗ ಅವಳಿಗೆ ದೊರೆತ ಪರಿಹಾರವೇನೆಂದರೆ ಸತೀಶನನ್ನು ಕಾಯಾ-ವಾಚಾ-ಮನಸ್ಸು ನನ್ನವನೆಂದು ತಾನೆ ಮನದಟ್ಟು ಮಾಡಿಕೊಳ್ಳುವುದು ಅದಕ್ಕಾಗಿ ದಿಟ್ಟ ನಿರ್ಧಾರ ತಾನೆ ತೆಗೆದುಕೊಳ್ಳುತ್ತಾಳೆ. ಸತೀಶನಿಗೇ ಅಚ್ಚರಿ ಆನಂದ ಆಗುವಂತೆ ಸುಚೇತಾ ಅವನನ್ನು ಸೇರುತ್ತಾಳೆ. ಇಲ್ಲಿ ಹೆಣ್ಣಿಗಿರುವ ಪಾರತಂತ್ರ್ಯ, ಪರಾವಲಂಬನೆಯ ಸಮಸ್ಯೆಯನ್ನು ಪಾ.ವೆಂ. ಗ್ರಹಿಸಿದ್ದಾರೆ. ಸ್ತ್ರೀಗೆ ತಾನು ಪ್ರೀತಿಸಲ್ಪಡುವವಳು ಮಾತ್ರ ಎಂಬ ಸಂಕುಚಿತ ತಿಳುವಳಿಕೆ ಇದೆ. ಇದರ ಪರಿಣಾಮವಾಗಿ ಪುರುಷರನ್ನು ಆಕೆ ಭ್ರಮಿಸುತ್ತಾಳೆ. ಪ್ರೀತಿ, ವಿಶ್ವಾಸಗಳು ತನ್ನ ಹೃದಯದಾಳದಿಂದ ತಾನಾಗಿಯೇ ಪುಟಿಯಬೇಕು ಮತ್ತು ಪುರುಷನನ್ನು ಆವರಿಸುವಷ್ಟು ನಿಸ್ಸಂಕೋಚವಾಗಿರಬೇಕೆಂಬ ತಿಳುವಳಿಕೆ ಸುಚೇತಾಗೆ ಉಂಟಾಗುವುದೇ ಕತೆಯ ಮರ್ಮ.

ಹಿಂದೂ ಮುಸ್ಲಿಂ ಒಂದು ಸಾಮಾಜಿಕ-ರಾಜಕೀಯ ಸಮಸ್ಯೆಯ ಕತೆ-ಕೋಮು ಭಾವನೆಗಳನ್ನು ಪ್ರಚೋಧಿಸಿ ಜನಸಾಮಾನ್ಯರಲ್ಲಿಯ ಕೋಮು ಭಾವನೆಗಳನ್ನು ಕೆರಳಿಸಿ ಅವರಲ್ಲಿಯ ಕೆಳಮಟ್ಟದ ಮತೀಯ ವೈಶಮ್ಯವನ್ನು ಘರ್ಷಣೆಗೆ ತೊಡಗುವಂತೆ ಮಾಡುವುದು. ಕೆಲವು ರಾಜಕೀಯ ಹಿತಾಸಕ್ತಿಗಳ ಕೆಲಸ. ರಾಜಕೀಯದೊಂದಿಗೆ ವೈಯಕ್ತಿಕ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು, ಕೆಲವೊಮ್ಮೆ ಈ ಅನಿಷ್ಟ ಶಕ್ತಿಗಳು ಪ್ರಯತ್ನಿಸುತ್ತದೆ. ಇಲ್ಲಿ ಎರಡೂ ಕೋಮುಗಳ ನಡುವಿನ ತಪ್ಪು ತಿಳುವಳಿಕೆ ಮತ್ತು ಅಪಾರ್ಥಗಳ ಪರಿಣಾಮವಾಗಿ ಉಂಟಾಗುವ ಸೇಡು ಪ್ರತಿ ಸೇಡುಗಳ ಮನೋಭಾವನೆ ಪರಿಣಾಮ ಬೀರುತ್ತವೆ. ಹಿಂದೂ-ಮುಸ್ಲಿಂ ಸಮುದಾಯಗಳ ನಡುವೆ ಉಂಟಾಗಿದ್ದ ಅನೇಕ ಘಟನೆಗಳು ಸಾಮಾಜಿಕವಾಗಿ ಅಪಾಯಕರವೂ ಅಮಾನವೀಯವೂ ಆಗಿವೆ. ಎರಡು ಸಮೂದಾಯಗಳ ನಡುವೆ ಶಂಕೆ, ಅನುಮಾನ ಆತಂಕಗಳನ್ನು ಹುಟ್ಟಿಸಿ ಕಲ್ಪಿತ ಸಮಸ್ಯೆ ಬುಗಿಲೇಳುವಂತೆ ಮಾಡಿ 'ಉರಿಯುವ ಮನೆಗಳ ಹೀರಿಕೊಳ್ಳುವ' ಕೋಮುವಾದಿಗಳು ಕೆಲವರಿದ್ದಾರೆ.

ಈ ಕತೆಯಲ್ಲಿ ಹಿಂದೂ–ಮುಸ್ಲಿಂ ಸಮೂದಾಯಕ್ಕೆ ಸೇರಿದ ಇಬ್ಬರು ವ್ಯಕ್ತಿಗಳು ಜನಾಬ್ ರಹಿಮುಲ್ಲಾಖಾನ್ ಮತ್ತು ಕೃಷ್ಣ ಶೆಟ್ಟಿ ತಮ್ಮ ಒಂದು ವೈಯಕ್ತಿಕ ಲಾಭಕ್ಕಾಗಿ ಮತೀಯ ದಂಗೆಯ ಬೆಂಕಿ ಹೊತ್ತಿಸಲು ಒಪ್ಪಂದ ಮಾಡಿಕೊಳ್ಳುತ್ತಾನೆ. ಖಾನನಿಗೆ ಉನ್ನೀಸ ಎಂಬ ತರುಣಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳುವ ಆಸೆ. ಅದಕ್ಕಾಗಿ ಅವಳನ್ನು ಕೃಷ್ಣ ಶೆಟ್ಟಿಯ ಜೊತೆಗೆ ಒಂದು ಕತೆ ಕಟ್ಟಿ ಕತೆಯು ದಂಗೆಯ ರೂಪವಾಗಿ ಬೆಳೆಯಬೇಕೆಂದು ಸಂಚು ಮಾಡುತ್ತಾರೆ. ಹೆಣ್ಣು ಮತ್ತು ಹಣ ಹಂಚಿಕೊಳ್ಳಲು ಇವರು ಎಬ್ಬಿಸುವ ದಂಗೆ ಕಾರ್ಯರೂಪಕ್ಕೆ ಬರುವುದೇ ಇಲ್ಲ. ಅಲ್ಲಿಯ ಎರಡೂ ಸಮೂದಾಯದ ಜನಗಳಿಗೆ ಬುದ್ಧಿ ಇರಲಿಕ್ಕಿಲ್ಲ. ಆದರೆ ಮಾನವೀಯ ಭಾವನೆಗಳಿವೆ. ದಂಗೆಯ ಒಂದು ಹಂತವೆಂದರೆ ಮುಸ್ಲಿಂಮರ ಮನೆಗಳಿಗೆ ಬೆಂಕಿ ಹಚ್ಚುವುದು. ಹಚ್ಚಿದ ಚಿತೆಯಲ್ಲಿ ಸಿಕ್ಕಿಕೊಂಡ ತಾಯಿ–ಮಗು ತಪ್ಪಿಸಿಕೊಳ್ಳಲು ಒಬ್ಬ ಹಿಂದೂ ಯುವಕ ಮುನ್ನುಗ್ಗುತ್ತಾನೆ. ಆಗ ಯುವಕನಿಗೆ ಮರಣಾಂತಿಕ ಸುಟ್ಟಗಾಯವಾಗುತ್ತದೆ. ಆದರೂ ಜಾತಿ–ಮತ ಲೆಕ್ಕಿಸದೆ ಆತ ಮಾಡಿದ ಸಾಹಸವನ್ನು ಎಲ್ಲರೂ ಮೆಚ್ಚುತ್ತಾರೆ. ಅಲ್ಲಿಯವರೆಗಿದ್ದ ವೈಮನಸ್ಸು ಈ ಘಟನೆಯಿಂದ ಮಾಯಾವಾಗುತ್ತದಲ್ಲದೆ ಕನಿಷ್ಟ ಶಕ್ತಿಗಳಾದ ರಹಿಮತ್ತುಲ್ಲಾಕಾನ್ ಮತ್ತು ಕೃಷ್ಣ ಶೆಟ್ಟರು ಭಂಗಿತರಾಗುತ್ತಾರೆ. ಮುಂದೆಯೂ ಪಾ.ವೆಂ. ಅವರಿಗೆ ಮನುಷ್ಯರಲ್ಲಿರುವ ನಿಸ್ವಾರ್ಥ ಬುದ್ಧಿಯ ಬಗ್ಗೆ ಮತ್ತು ಯುವಕರಲ್ಲಿರುವ ತ್ಯಾಗಬುದ್ಧಿಯ ಬಗ್ಗೆ ವಿಶ್ವಾಸವಿದೆ. ಇದೊಂದು ಸಾಮಾಜಿಕ ನೀತಿಯ ಕತೆ ಕೋಮು ಸಾಮರಸ್ಯ ಅಂದಿನಿಂದ ಇಂದಿನವರೆಗೂ ನಮ್ಮ ಸಮಾಜಗಳಿಗೆ ಅಗತ್ಯವಾದೊಂದು ಮೌಲ್ಯ. ಇಂತಹ ಕತೆಯನ್ನು ಪಾ.ವೆಂ. ಕಟ್ಟಿಲ್ಲ ತೋರಿಸಿದ್ದಾರೆನಿಸಿದೆ.

ಅಡಿಟಿಪ್ಪಣಿಗಳು:

*೧ ಪುಟ ೧, ಲೇ. ಪಾ.ವೆಂ. ಆಚಾರ್ಯ, ನವನೀರದ ಕವನ ಸಂಕಲನ.

*೨ ಪುಟ ೩೩-೩೪, ಅದೇ ಪುಸ್ತಕ.

*೩ ಪುಟ ೭೫, ಅದೇ ಪುಸ್ತಕ.

*೪ ಪುಟ ೭೬, ಅದೇ ಪುಸ್ತಕ.

*೫ ಪುಟ ೬೨, ಅದೇ ಪುಸ್ತಕ.

*೬ ಪುಟ ೨೫, ಲೇ. ಪಾ.ವೆಂ. ಆಚಾರ್ಯ, ಕೆಲವು ಪದ್ಯಗಳು.

*೭ ಪುಟ ೨೨, ಲೇ. ಪಾ.ವೆಂ. ಆಚಾರ್ಯ, ನವನೀರದ ಕವನ ಸಂಕಲನ.

*೮ ಪುಟ ೧೧, ಲೇ. ಪಾ.ವೆಂ. ಆಚಾರ್ಯ, ಕೆಲವು ಪದ್ಯಗಳು.

*೯ ಪುಟ ೨೧, ಅದೇ ಪುಸ್ತಕ.

*೧೦ ಪುಟ ಸಂಖ್ಯೆ ಇಲ್ಲ, ೧೯೬೯ ನವೆಂಬರ್ ೪ ಸಾಪ್ತಾಹಿಕ ಕರ್ಮವೀರದಲ್ಲಿ ಪ್ರಕಟವಾದ ಕವಿತೆ ಇದು ಪಾ.ವೆಂ. ಸಮಗ್ರ ಕವನ ಸಂಕಲನಕ್ಕೆ ಸೇರಿಲ್ಲ.

*೧೧ ಫೆಬ್ರವರಿ ೧೯೭೯ ಕಸ್ತೂರಿ ಸಂಚಿಕೆಯಲ್ಲಿ ಪ್ರಕಟಿತ (ಸ.ಸಂಕಲನಕ್ಕೆ ಸೇರಿಲ್ಲ)

*೧೨ ಪುಟ ೫, ಲೇ. ಮುರಳೀಧರ ಉಪಾದ್ಯಾಯ ಹಿರಿಯಡ್ಕ. ಎಸ್. ಯು. ಪಣಿಯಾಡಿ, ಮದಪ್ಪೆರಾವಂದಿ ತುಳುವೆರ್.

*೧೩ ಪುಟ ಸಂಖ್ಯೆ ಇಲ್ಲ. ಲೇಖಕ ಪಾ.ವೆಂ. ಆಚಾರ್ಯ, ಬಯ್ಯಮಲ್ಲಿಗೆ ತುಳುಗೀತಾಂಜಲಿ.

*೧೪ ಪುಟ ೩, ಅದೇ ಪುಸ್ತಕ.

*೧೫ ಪುಟ ೯, ಅದೇ ಪುಸ್ತಕ.

*೧೬ ಪುಟ ೧೬, ಅದೇ ಪುಸ್ತಕ.

*೧೭ ಪುಟ ೮೩, ಸಂ. ಹಾ. ಮಾ. ನಾಯಕ/ಕಾವ್ಯದೀಪ ದಸರಾ ಮಹೋತ್ಸವ ಸಮಿತಿ, ಮೈಸೂರು, ವ. ೧೯೮೩.

*೧೮ ಪುಟ ೪, ಸಂ. ಲೂಯಿ ರೈಸ್, ಅಮರಸಿಂಹನ ಅಮರಕೋಶ.

*೧೯ ಪುಟ ೫, ಸಂ. ಲೂಯಿ ರೈಸ್, ಅಮರಸಿಂಹನ ಅಮರಕೋಶ.

*೨೦ ಪುಟ ೭, ಸಂ. ಲೂಯಿ ರೈಸ್, ಅಮರಸಿಂಹನ ಅಮರಕೋಶ.

ಅಧ್ಯಾಯ–೪
ವಿಡಂಬನ ಸಾಹಿತ್ಯ

ಅ. ಹರಟೆಗಳು

ಆ. ನಗೆ ಅಥವಾ ವಿಡಂಬನೆ

ಇ. ನಗೆಹನಿಗಳು

ಪಾ.ವೆಂ. ಅವರ ವಿಡಂಬನ ಸಾಹಿತ್ಯ ಭಾವನಿಷ್ಠ ಕವಿ ಮತ್ತು ವಿಚಾರವಾದಿ ಲೇಖಕರಾದ ಪಾ.ವೆಂ. ಅವರೊಳಗೆ ಒಬ್ಬ ವಿಡಂಬನಕಾರ ಅಡಕವಾಗಿದ್ದಾನೆ. ಇದು ಅವರಲ್ಲಿದ್ದ ವಿನೋದ ಪ್ರಜ್ಞೆಯ ನಿದರ್ಶನ. ಇವರು ಬದುಕನ್ನು ತೆರೆದ ಕಣ್ಣಿನಿಂದ ನೋಡಿದವರು ಯಾವುದೇ ಅನುಭವವಿರಲಿ, ದೃಶ್ಯವಿರಲಿ, ಘಟನೆಯಿರಲಿ ಅಥವಾ ಸುದ್ಧಿ ರೂಪದ ನಡವಳಿಕೆ ಇರಲಿ ಅದನ್ನು ವಕ್ರನೋಟದಿಂದ ನೋಡುತ್ತಾ ಸತ್ಯಕ್ಕೆ ಉಂಟಾಗುವ ವಿಪರ್ಯಾಸವನ್ನು ಗುರುತಿಸುವ ಮತ್ತು ನಾಟಕೀಯವಾಗಿ ಅದನ್ನು ಮಂಡಿಸುವ ವಿಡಂಬನ ಶೈಲಿ ಇವರದೆಂಬುದು ಎಲ್ಲ ನಗೆಲೇಖನಗಳ ಹರಟೆಗಳ ಸ್ವರೂಪ. ವಿಡಂಬನಕಾರ ತನ್ನ ಸುತ್ತಮುತ್ತಲಿನ ಜೀವನವನ್ನು ಒಂದು ಬಗೆಯ ಮುಗ್ಧತೆಯಿಂದ ಮತ್ತೊಂದು ಬಗೆಯ ಬೌದ್ಧಿಕತೆಯಿಂದ ಗಮನಿಸುತ್ತಾನೆ. ಆಗ ಅಲ್ಲಿಯ ಹುಸಿಸತ್ಯ, ಢಾಂಬಿಕತೆ, ಸ್ವಾರ್ಥ–ಸಂಕುಚಿತತನ ಮತ್ತು ಸತ್ಯವನ್ನು ಮರೆಮಾಚಿ ಸುಳ್ಳನ್ನು ನಿಜವೆಂದು ತೋರಿಸುವ ಆತ್ಮವಂಚನೆ ಕಂಡು ಬರುತ್ತದೆ. ಇದನ್ನು ನೇರವಾಗಿ ನಿಷ್ಠುರವಾಗಿ ಕಠಿಣ ಶಬ್ದಗಳಿಂದ ಹೇಳದೆ ವಕ್ರವಾಗಿ ಆದರೆ ನಯವೆನಿಸುವ ಶಬ್ದಗಳಿಂದ ಅಣಕಮಾಡಿ ಹೇಳಿದಾಗ ವಿಡಂಬನ ಶೈಲಿ ರೂಪುಗೊಳ್ಳುತ್ತದೆ. **ಲಾಂಗೂಲಾಚಾರ್ಯ** ಎಂದು ತಮ್ಮನ್ನು ಕರೆದುಕೊಳ್ಳುವ ಪಾ.ವೆಂ. ಆಚಾರ್ಯರಿಗೆ ವಿಡಂಬನೆ ಶೈಲಿ ಸಹಜವಾಗಿ ಕರಗತವಾಗಿತ್ತು. ಲಾಂಗೂಲಾ ಎಂದರೆ ಬಾಲ ಇದು ಬಹುಷಃ ನಾಯಿಯ ಬಾಲ. ನಾಯಿಬಾಲ ಎಂದಿಗೂ ಡೊಂಕೆ ಈ ಆಚಾರ್ಯರ ನೋಟವು ಡೊಂಕೆ. ನಾಯಿ ಬಾಲವನ್ನು ಅಲ್ಲಾಡಿಸುತ್ತ ಸಾಕಿದವರನ್ನು ಆತ್ಮೀಯತೆಯಿಂದ ಕಾಣುತ್ತದೆ. ಆಚಾರ್ಯರ ಬಾಲವೂ ಹರಟೆಗಳಲ್ಲಿ ಓದುಗನಿಗೆ ಆತ್ಮೀಯವೆನಿಸುತ್ತದೆ. ಹಿಂದಿನ ಕಾಲದ ರಾಜಾಸ್ಥಾನಗಳಲ್ಲಿ ಆಳುವವನ ಮಗ್ಗಲಿಗೆ ಒಬ್ಬ ವಿಧೂಷಕ ಇರುತ್ತಿದ್ದ ಅವನ ಮಾತು ಅಸಂಬದ್ಧವಾಗಿಯು, ಅಂಗಚೇಷ್ಟೆ ನಗೆ ತರಿಸುವಂತೆಯು ಇರುತ್ತಿದ್ದವು. ಆದರೆ ಯಾವುದೇ ಗಂಭೀರ ಸಂಗತಿಯನ್ನು ವಿಧೂಷಕ ನೇರವಾಗಿ ನಿಷ್ಠುರವಾಗಿ ಹೇಳದೆ ನಯವಾಗಿ, ಮಾರ್ಮಿಕವಾಗಿ, ಚಮತ್ಕಾರಿಕವಾಗಿ ಅಥವಾ ನಗೆ ತರಿಸುವಂತೆ ಅಸಂಬದ್ಧವಾಗಿ ಹೇಳುತ್ತಿದ್ದ. ಅಕ್ಬರ್‌ನ ಬಳಿ ಇದ್ದ ಬೀರಬಲ್ಲ ಕೃಷ್ಣದೇವರಾಯನ ಬಳಿ ಇದ್ದ ತೆನಾಲಿರಾಮಕೃಷ್ಣನಂತಹ ವಿಧೂಷಕರು ನೋಡಲು ಬುದ್ದುಗಳಂತೆ ಇರುವ ಇವರು ಆಂತರ್ಯದಲ್ಲಿ

ಮಹಾಬುದ್ಧಿವಂತರು, ಚತರರು, ತತ್ವಜ್ಞಾನಿಗಳು ಲಾಂಗೂಲಾಚಾರ್ಯ ಇಂತಹ ಆಧುನಿಕ ವಿಧೂಷಕ. ಈತನ ಮಾಧ್ಯಮ ಲೋಕಪ್ರಿಯವಾಗುವ ಪತ್ರಿಕೆ ಕರ್ಮವೀರ ಮತ್ತು ಕಸ್ತೂರಿ ಪತ್ರಿಕೆಗಳ ಗಂಭೀರ ಧಾಟಿಶೈಲಿಗಳ ಇತರ ಲೇಖನಗಳಿಗೆ ಸರಿಸಾಟಿಯಾಗಿ **ಲಾಂಗೂಲಾಚಾರ್ಯರ ಹರಟೆಗಳು** ಓದುಗನಿಗೆ ಹಾಸ್ಯ, ವಿಡಂಬನೆಯ ಮಸಾಲೆ ಪದಾರ್ಥವನ್ನು ಉಣಬಡಿಸುತ್ತಿದ್ದವು. ಕನ್ನಡ ವಿಡಂಬನ ಸಾಹಿತ್ಯದಲ್ಲಿ **ಲಾಂಗೂಲಾಚಾರ್ಯರ ಬರಹ**ಗಳಾಗಿರುವ ವಿಶೇಷತೆಯನ್ನು ಆರಾ, ಮಿತ್ರ, ಎನ್ಕೆ ಗುರುತಿಸಿದ್ದಾರೆ.

(ಅ) ಹರಟೆಗಳು:

ಸಂಯುಕ್ತ ಕರ್ನಾಟಕ ಸಂಸ್ಥೆಯೊಡನೆ ಪಾ.ವೆಂ. ತನ್ನ ಬದುಕಿನ ಬಹುಭಾಗವನ್ನು ಕಳೆದವರು. ಸಾವಕಾಶವಾಗಿ ವ್ಯವಸ್ಥಾಪಕ ವಿಭಾಗದಿಂದ ಸಂಪಾದಕೀಯ ವಿಭಾಗಕ್ಕೆ ಸೇರಿದರು. ಇದು ಪಾ.ವೆಂ. ಅವರ ದೌರ್ಬಲ್ಯವೆನ್ನುವುದಕ್ಕಿಂತ ಸೌಲಭ್ಯವು ಆಗಿತ್ತೆಂದು ತನ್ನ ಆತ್ಮಾವಲೋಕನದಲ್ಲಿ ಹೇಳುತ್ತಾರೆ. ನನ್ನ ಅಧೀನದಲ್ಲಿ ಕೆಲಸ ಮಾಡುವವರನ್ನು ವ್ಯವಸ್ಥಿತ ರೀತಿಯಲ್ಲಿ ಕಾಯುವುದು ಕಷ್ಟ. ಇದಕ್ಕೆ ಬುದ್ಧಿ ಚಾಣಕ್ಯತೆ ಅವಶ್ಯಕ ಈ ವ್ಯವಹಾರದಲ್ಲಿ ಪಾ.ವೆಂ. ಮುಗ್ಧರಾಗಿದ್ದರು. ಹಾಗಾಗಿ ಒಂಟಿಸಲಗನಾಗಲು ಹೆಚ್ಚು ಅವಕಾಶವಿರುವುದರಿಂದ ಸಂಪಾದಕೀಯ ವಿಭಾಗವನ್ನು ಆರಿಸಿದರು. ಸಂಪ್ರದಾಯ ಸಂಸ್ಥೆಯೊಳಗೆ **ಕಮ್ಯುನಿಸ್ಟ್** ಎನಿಸಿದರೂ ಅವರ ಸ್ವಾತಂತ್ರ್ಯಕ್ಕೆ ಯಾರೊಬ್ಬರು ಅಡ್ಡಗಾಲು ಹಾಕಲಿಲ್ಲ. ಪಾ.ವೆಂ. ಅವರ ಕುತೂಹಲ ಚಿಕಿತ್ಸಕ ಗುಣದಿಂದ ಅಲ್ಲಿ ಬರುತ್ತಿದ್ದ ದೇಶ, ವಿದೇಶದ ಪತ್ರಿಕೆ, ಪುಸ್ತಕಗಳನ್ನು ಅರಗಿಸುತ್ತಾ ೧೯೫೦ರ ಒಳಗೆ ಟೀಕೆಯಿಂದಲೇ ನಿಜದಿಂದಲೋ **ಸರ್ವಜ್ಞ ಆಚಾರ್ಯ** ಎನಿಸಿದ್ದರು. ತಮ್ಮ ಸ್ವಯಂ ನಿರ್ಣಯದಿಂದ **ಲಾಂಗೂಲಾಚಾರ್ಯ** ಎಂಬ ಹೆಸರಿನಿಂದ ಒಂದು ಲಘುಬರಹದ ಸ್ತಂಭವನ್ನು (Coloum) **ಕರ್ಮವೀರ**ದಲ್ಲಿ ಪ್ರಾರಂಭಿಸಿದರು. ಅದು ಓದುಗರ ಕಲ್ಪನೆಯನ್ನು ಸೆರೆಹಿಡಿಯಿತು. ಕೆಲವು ವರ್ಷಗಳವರೆಗೆ ಶ್ರೀರಂಗರೇ ಅದನ್ನು ಬರೆಯುತ್ತಾರೆಂಬ ತಿಳುವಳಿಕೆ ವಾಚಕರಲ್ಲಿ ಹಬ್ಬಿತ್ತು. ಪಾ.ವೆಂ. ಅದನ್ನು ತಿದ್ದುವ ಇರಾದೆಗೂ ಹೋದಂತಿಲ್ಲ. ಉದಾತ್ತ ತ್ಯಾಗದ ಮುಖಗಳನ್ನು ಹೊತ್ತು, ರಾಜಕಾರಣ ಮಾಡುವವರ ಒಳ ಇರಾದೆಗಳನ್ನು ಗಾಳಿಗೆ ಹಿಡಿಯುವ ಪ್ರವೃತ್ತಿಯಿಂದ **ಹೇಸಿ ಲಾಂಗೂಲಾಚಾರ್ಯ** ಎಂಬ ಬಿರುದನ್ನು ಪಡೆದರು. ಈ ಲಾಂಗೂಲಾಚಾರ್ಯ ಎನ್ನುವ ಪ್ರಾಬಲ್ಯದಿಂದಾಗಿ ಬೇರೆ ಬೇರೆ ಗಂಭೀರ ವಿಷಯುಗಳ ಮೇಲೆ ಮತ್ತು ಕಥೆ, ಕವಿತೆಗಳನ್ನೂ ಬರೆಹ ಬಲ್ಲನೆಂಬುದೂ, ಬರೆದಿದ್ದರೆಂಬುದೂ ಮರೆಯುವ ಸ್ಥಿತಿ ಉಂಟಾಯಿತು. ಆದರೆ ಪಾ.ವೆಂ. ಅವರಿಗೆ **ಕರ್ಮವೀರ**ದಲ್ಲಿ ಕಳೆದ ೧೨ ವರ್ಷಗಳಲ್ಲಿ ಪುಸ್ತಕ, ಸಿನಿಮಾ ವಿಮರ್ಶೆಯಿಂದಾರಂಭಿಸಿ ಜಟಿಲ ವೈಜ್ಞಾನಿಕ ವಿಷಯಗಳವರೆಗೆ, ಗಮನಕ್ಕೆ ಬಂದ ನೂರಾರು ವಿಷಯಗಳಲ್ಲಿ

ಕೈಯಾಡಿಸಿದರು. ಪಾ.ವೆಂ. ಅವರ ಕುತೂಹಲದ ದಶಮುಖಗಳಿಗೆ ಅನ್ನ ನೀಡಲು ಬಹಳಕಾಲವನ್ನು ಓದಿನಲ್ಲಿ ಕಳೆದರು. ಪ್ರಸ್ತುತ ಕಾರ್ಯವನ್ನು ಪೂರೈಸಲು ಬೇರೆಯೇ ದುಡಿಯ ಬೇಕಾಗುತ್ತಿತ್ತು. ದುಡಿಮೆ ಇಷ್ಟವಾಗಿದ್ದಾಗ ೧೨-೧೪ ಗಂಟೆಯವರೆಗೂ ದುಡಿದರು ತುಂಬು ಸಂಸಾರವನ್ನು ನಿಭಾಯಿಸಿದರು. ಪಾ.ವೆಂ. ಅವರ **ಲೇಖನ ವೃತ್ತಿಗೆ** ಕರ್ಮವೀರದಲ್ಲಿರುವಾಗಲೇ ಮನ್ನಣೆ ದೊರೆಕಿತ್ತು. ಬಿ.ಹೆಚ್. ಶ್ರೀಧರ, ಜಿ.ಟಿ.ನಾ. ರಂತಹ ಆತ್ಮೀಯರ ಗೆಳೆತನವೂ ಇಲ್ಲಿಯೇ ಆಗಿತ್ತು. ಇವರೆಲ್ಲರ ಪ್ರೋತ್ಸಾಹವು, ಉತ್ತೇಜನವು ಪಾ.ವೆಂ. ಅವರಿಗೆ ಬೆಳೆಯಲು ಅನುಕೂಲವಾಯಿತು.

ಸ್ವತಂತ್ರ ಭಾರತದ ವಿಚಾರ ಪ್ರಣಾಲಿಯ ಬಗ್ಗೆ ಹೆಚ್ಚು ಅಭಿಮಾನವುಳ್ಳ ಪಾ.ವೆಂ.ಗೆ ನಮ್ಮ ನಾಡಿನ ಲೋಪದೋಶಗಳ ಬಗ್ಗೆ ಸ್ಪಷ್ಟ ಚಿತ್ರಣವಿತ್ತು. ನಾವು ಆಧುನಿಕರಾಗದೆ ಅನ್ಯಮಾರ್ಗವಿಲ್ಲವೆಂದು ಅವರಿಗೆ ಖಚಿತತೆ ಇತ್ತು. ಜನರ ತಿಳುವಳಿಕೆ ಹೆಚ್ಚಾಗದೆ ನಾಯಕತ್ವದ ಮೂರ್ಖತೆ ಕಡಿಮೆ ಆಗದೆಂದು ಅವರ ಬರವಣಿಗೆ ಸ್ಪಷ್ಟ ಪಡಿಸುತ್ತದೆ. ನಮ್ಮ ದೇಶದ 'ಟೊಳ್ಳುಗಟ್ಟಿ' ಎರಡನ್ನು ಪಾ.ವೆಂ. ಅವರ ಕೂಲಂಕುಶವಾಗಿ ಗಮನಿಸಿದವರು. 'ಟೊಳ್ಳಿ'ನ ಮೇಲೆ ಅವರಿಗೆ ಅಪಾರವಾದ ಕ್ರೋಧವಿದೆ. ಆದರೆ ಬಡಕಲು ಶರೀರ ಯಾರ ಮೇಲೆಯೂ ಪೈಲ್ವಾನ ಗಿರಿಯನ್ನು ತೋರಿಸುವಂತಿಲ್ಲವಾದ್ದರಿಂದ ಪಾ.ವೆಂ. ಅವರ ಕ್ರೋಧ ಲಾಂಗೂಲ ಚಾಲನೆಯಾಗುತ್ತದೆ. ಲೇವಡಿ, ಅಣಕ ವಿನೋದದ ಸೂಜಿಮದ್ದಾಗುತ್ತದೆ. ಮಿದುವಾಗಿ ಚುಚ್ಚಿದರೂ ಇಡೀ ದೇಹ ರಕ್ತ ಸಂಚಾರದೊಡನೆ ಒಂದುಗೂಡುವ ಔಷದದಂತೆ ಪಾ.ವೆಂ. ಅವರ ಮೊನಚು ತತ್ತ್ವ ಅಖಿಲ ಕರ್ನಾಟಕವನ್ನು ವ್ಯಾಪಿಸಿತ್ತು. **ಲಾಂಗೂಲಾಚಾರ್ಯ** ಎನ್ನುವ ಕಾವ್ಯನಾಮದಲ್ಲಿ ಅವರು **ಕರ್ಮವೀರ**ದಲ್ಲಿ ಬರೆಯುತ್ತಿದ್ದ ಲೇಖನಗಳ ಮಾಲೆ ನಾಲ್ಕು ಸಂಗ್ರಹದಲ್ಲಿ ಪಾ.ವೆಂ. ಅವರ ವ್ಯಕ್ತಿತ್ವದ ತೇಜಸ್ಸು ನಮಗೆ ಗೋಚರವಾಗುತ್ತದೆ.

ಪಾ.ವೆಂ. ಅವರ ಸ್ವಭಾವ ಸಾಮಾನ್ಯ ಅರ್ಥದಲ್ಲಿ ಅವರೆಂದು ಹರಟೆ ಹೊಡೆಯುತ್ತಿರಲಿಲ್ಲ. ಚಿಲ್ಲರೆ ನಿತ್ಯ ವ್ಯವಹಾರದ ಸಂಗತಿಗಳು ಅವರನ್ನೆಂದು ಆಕರ್ಷಿಸಲೂ ಇಲ್ಲ. ತನ್ನ ಹರಟೆಯ ಬಗ್ಗೆ ಪಾ.ವೆಂ. ಅವರು ಈ ರೀತಿಯಾಗಿ ಹೇಳಿಕೊಂಡಿದ್ದಾರೆ.*[೧] ಗಂಭೀರವಾದ ವಿಷಯಗಳೊಡನೆ ನಾನು ಯಾರೊಡನೆಯಾದರೂ ಚರ್ಚಿಸುವುದಕ್ಕೆ ಇಷ್ಟ ಪಡುತ್ತೇನೆ. ನನ್ನ ಹರಟೆಗಳಿಗೆ ಯಾವ ನಿಯಮವನ್ನು ನಾನು ಇಟ್ಟುಕೊಂಡಿಲ್ಲ. ಒಂದು ಮಾತನ್ನು ಹೇಳಬೇಕಾದರೆ ಮಾನವನ ಶ್ರೀಮದ್ಗಾಂಭೀರ್ಯವತ್ತಾದ ಮುಖವಾಡವನ್ನು ತಳ್ಳಿ ಅದರ ಹಿಂದೆ ಅಡಗಿರುವ ಪೊಳ್ಳುತನವನ್ನು ತೋರಿಸುವುದು ನನ್ನ ಹರಟೆಗಳ ಲಕ್ಷಣ.

ಪಾ.ವೆಂ. ಹರಟೆಗಳ ವೈಲಕ್ಷಣಗಳು: ಕರ್ಮವೀರದಲ್ಲಿ ಮಿತಸ್ಥಳಗಳಲ್ಲಿ ಬರೆಯಬೇಕಾದುದರಿಂದ ಸಾಂದ್ರತೆ ಎಂದು ಹೇಳುವ ಗುಣ ಅನಿವಾರ್ಯವಾಗಿತ್ತು. ದೀರ್ಘವಾಗಿ ಬರೆಯುವ ಸಾಮರ್ಥ್ಯವುಅವರಲ್ಲಿತ್ತು. ಇಂಗ್ಲೀಷ್‌ನಲ್ಲಿ wit ಎಂದು

ಕರೆಯುವ ವಾಗ್ವಿಲಾಸ. ಸಂಕ್ಷೇಪ, ತರ್ಕಪ್ರಧಾನವೇ witನ ಜೀವಾಳ. ಇದು ಸಾಂದ್ರತೆಗೂ ಕಾರಣವಾಗಿದೆ. ಆದರೆ ಕನ್ನಡದಲ್ಲಿ ಪಾ.ವೆಂ.ರಂತೆ devasting ವಿಷಯಗಳನ್ನು devasting ರೀತಿಯಲ್ಲಿ ಹೇಳಿದವರು ಅತಿ ವಿರಳ. ಪುರಾಣ ಸನ್ನಿವೇಶಗಳ ನಮ್ಮ ರಾಷ್ಟ್ರೀಯ ಚೇತನವನ್ನು ಆಳವಾಗಿ ಆವರಿಸಿರುವುದರಿಂದ ಯೋಗ್ಯ ಪ್ರತಿಕ್ರಿಯೆಯನ್ನುಂಟು ಮಾಡುವುದರಲ್ಲಿ ಅವು ಉತ್ತಮ ಸಾಹಿತ್ಯದ ಆಯುಧಗಳಾಗಿವೆ. ವಾಸ್ತವಿಕ ಕನ್ನಡ ಸಾಹಿತಿಗಳು ಭಾಷೆಯ ಪರಿಣಾಮಕಾರಿ ಬಳಕೆಯಲ್ಲಿ ಪುರಾಣ ಪ್ರಜ್ಞೆಯ ಸಂಪತ್ತನ್ನು ಸಾಕಷ್ಟು ಉಪಯೋಗಿಸಿದಂತಿಲ್ಲ. ಪಾ.ವೆಂ. ಅವರ ಹರಟೆಗಳು ತಮ್ಮದೇ ದಾರಿಯಲ್ಲಿ ಸಾಗಿದ ಹರಟೆಗಳು.

ಪಾ.ವೆಂ. ಹರಟೆಯಲ್ಲಿ ಕನ್ನಡದ ಶ್ರೇಷ್ಠ ಹರಟೆಗಾರರಾದ ರಾ.ಕು.ರಾವ್ ಬಹದ್ದೂರ್, ಎನ್ನೆಯವರ ಹರಟೆಗಳಿಗಿಂತ ಭಿನ್ನ ವ್ಯತ್ಯಾಸಗಳು ಕಂಡು ಬರುತ್ತದೆ. ಪಾ.ವೆಂ. ಹರಟೆಯಲ್ಲಿ ತನ್ನ ಸುತ್ತಲಿನ ಅನುಭವವನ್ನು ಭಾಷೆಯ ಸಾಂದ್ರತೆಯಲ್ಲಿ ವ್ಯಕ್ತಪಡಿಸುವ ಗುಣವಿದೆ. ಶ್ರೀರಂಗರ ರಂಗಭಾರತದ ಹಾಗೆ ಪುರಾಣಗಳನ್ನು ಆಧುನೀಕರಿಸುವ ಸಮಕಾಲೀನ ಪ್ರಜ್ಞೆಯನ್ನು ಕಾಣುತ್ತೇವೆ.

ಕನ್ನಡದಲ್ಲಿ ಲಲಿತ ಪ್ರಬಂಧ (personal essay) ಎ.ಎನ್. ಮೂರ್ತಿರಾವ್, ಗೊರೂರು ರಾಮಸ್ವಾಮಿ, ವಿಸೀ ಇವರಿಂದ ಪ್ರಾರಂಭವಾಯಿತೆಂದು ಅನ್ನುವುದಾದರೆ, ಅದಕ್ಕೆ ಸಮಾಂತರವಾಗಿ ಹರಟೆಗಳು ಎಂಬ ಅಭಿದಾನದಿಂದ ದ.ರಾ.ಬೇಂದ್ರೆ, ರಂ.ಶ್ರೀ ಮುರಳಿ; ಶಿವರಾಮ ಕಾರಂತರು ಲಘು ಪ್ರಬಂಧಗಳನ್ನು ಬರೆಯಲಾರಂಬಿಸಿ ಆಗಿನ ಸಾಹಿತ್ಯ ಪತ್ರಿಕೆಗಳ ಮೂಲಕ ಹೊರಹಾಕಿದರು. ಇವುಗಳನ್ನು ಬೇಂದ್ರೆಯವರ ಹರಟೆಯೆಂದೆ ಗುರುತಿಸಿದರು. ನಂತರದ ತಲೆಮಾರಿನ ಲೇಖಕರಾದ ರಾ.ಕು., ದಬಾಕು, ಮೊದಲಾದವರು ಈ ತರಹದ ಹರಟೆಗಳನ್ನು ಮುಂದುವರಿಸಿದರು. ಪಾ.ವೆಂ. ಆಚಾರ್ಯ ಇವರ ಸಮಕಾಲೀನರಾಗಿ ಕರ್ಮವೀರ (೧೯೫೦) ಪತ್ರಿಕೆಯಲ್ಲಿ ವಾರಕೊಮ್ಮೆ **ಓದುಗರೊಡನೆ ಹರಟೆ** ಬರೆದು ಹರಟೆಗಾರರ ಸಾಲಿಗೆ ಸೇರಿಕೊಂಡರು. ೫೦-೬೦ರ ದಶಕಗಳಲ್ಲಿ ಲಲಿತ ಪ್ರಬಂಧ ಅಥವಾ ಹರಟೆ ಸಾಹಿತ್ಯದ ಮುಖ್ಯ ಪ್ರವಾಹ ಹರಿದು ಬರಲಾರಂಭಿಸಿತು. ಪಾ.ವೆಂ. ಪತ್ರಿಕೆಗಳ ಹರಟೆಗಾರರಾಗಿ ಪಡೆದ ವಿಶಿಷ್ಟತೆ ಗಮನಾರ್ಹ.

ಕನ್ನಡದಲ್ಲಿ ವಿಡಂಬನ ಸಾಹಿತ್ಯ **ಸಮಯ ಪರೀಕ್ಷೆ**ಯ ಬ್ರಹ್ಮಶಿವ ದರ್ಮಾಮೃತದ ನಯಸೇನ ಬರೆದ ಹಳಗನ್ನಡ ಕಾವ್ಯಗಳು ಜೈನ ಮತಕ್ಕೆ ಹೊರತಾದ ವೈಧಿಕ ಮತಿಗಳನ್ನು ವಿಡಂಬಿಸುವ ಧಾಟಿಯಲ್ಲಿದೆ. wit-ಚತುರೋಕ್ತಿಯ ಶೈಲಿಯಲ್ಲಿ ಪರಮತದ ನಡೆನುಡಿ-ಗಳನ್ನು ಕತೆ ಮಾಡಿ ಹೇಳು ನಯಸೇನ, ಬ್ರಹ್ಮಶಿವರು ವೈದಿಕ ಮತಾವಲಂಬಿಗಳ ಕಣ್ಣು ತೆರೆಸುತ್ತಾರೆ. ಮಾರ್ಮಿಕ ಮಾತುಕತೆಗಳ ಹೆಣಿಕೆಯು ವಿಡಂಬನ ಶೈಲಿಯನ್ನು ರೂಪಿಸಿದೆ.

ಕನ್ನಡ ಮೊದಲ ಪ್ರಬಂದಕಾರರು: ಮುದ್ದಣ ಮತ್ತು ಪಂಜೆ ಮಂಗೇಶರಾಯರನ್ನು ಗುರುತಿಸಿದರೆ, ಅಲ್ಲೊಂದು ಇಲ್ಲೊಂದು ಬಿಡಿ ಬರಹಗಳನ್ನು ಬರೆದು ಶ್ರೀಮಂತ ಗೊಳಿಸಿದವರು ವಿ.ಸಿ.ಎ.ಎನ್. ಮೂರ್ತಿರಾವ್ ಮತ್ತು ಸಮಕಾಲೀನರ ಬಳಗ.

ಹರಟೆ ಪ್ರಬಂಧದ ಪತ್ರಿಕೆಗಳು: ಕನ್ನಡದಲ್ಲಿ ಉತ್ತಮ ಬರಹಗಾರರನ್ನು ಸೆಳೆದು ತಂದ ಬರಹದ ಮಾದ್ಯಮ ಹರಟೆ ಪ್ರಬಂಧ. **ಪ್ರಭುದ್ಧ ಕರ್ನಾಟಕ, ಜಯ ಕರ್ನಾಟಕ, ಜಯಂತಿ ಕೊರವಂಜಿ, ವಿಕಟವಿನೋದಿ ನಗುವನಂದನ, ಪ್ರಪಂಚ, ಕರ್ಮವೀರ** ಮೊದಲಾದ ಪತ್ರಿಕೆಗಳು ಮತ್ತು ಕನ್ನಡದಲ್ಲಿ ವಿಶಿಷ್ಟವಾದ ವಾರ್ಷಿಕೋತ್ಸವಗಳನ್ನು ಸಾಹಿತ್ಯ ಪುರವಾಣಿ ವಿಶೇಷ ಸಂಚಿಕೆಗಳ ರೂಪದಲ್ಲಿ ಆಚರಿಸುವ ಪತ್ರಿಕೆಗಳು, ನಿಯತಕಾಲಿಕೆಗಳು ಹರಟೆ ಪ್ರಬಂದಗಳು ಬೆಳಕಿಗೆ ಬರಲು ಕಾರಣವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಹರಟೆಗಾರರ ಗುಂಪು ದೊಡ್ಡದು. ನಾ ಕಸ್ತೂರಿ ಗೊರೂರು, ಸಿದ್ದವನ ಹಳ್ಳಿ ಕೃಷ್ಣ ಶರ್ಮಾ, ಬೇಂದ್ರೆ, ಆನಂದಕಂದ, ಕುವೆಂಪು, ಶ್ರೀರಂಗ, ಕಾರಂತ, ರಾಶಿ, ನಾಡಿಗೇರ ಕೃಷ್ಣರಾಯ, ಬೀchi, ಜಿ.ಪಿ. ರಾಜರತ್ನಂ, ಆ.ರಾ.ಸೇ. ದೇಶಕಥೆ ದೀಕ್ಷಿತ್, ನಾಡಿಗೇರ ಗೋವಿಂದರಾಯ, ಭಾರತೀ ಪ್ರಿಯೆ, ಎನ್.ಕೆ.ಅಷ್ಟಾವಕ್ರ, ವಿ.ಕೆ.ದೊರೆಸ್ವಾಮಿ, ಹಾ.ರಾ., ಎಂ.ಎಸ್.ನರಸಿಂಹ ಮೂರ್ತಿ, ಎಚ್.ಎಲ್.ಕೇಶವಮೂರ್ತಿ, ಎನ್.ಪಿ.ರಾವ್., ಪಾ.ವೆಂ. ಮುಂತಾದವರ ಹೆಸರುಗಳು ಮುಖ್ಯವಾಗಿದೆ.

೫–೬ ದಶಕಗಳಿಂದ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಲಲಿತ ಪ್ರಬಂಧವು ಹಿರಿಯ, ಕಿರಿಯ ಲೇಖನಗಳ ಲೇಖನಿಯಿಂದ ಸರಾಗವಾಗಿ ಹರಿದು ಬಂದ ವಿಚಾರವಾಹಿನಿ. ಹಿರಿಯ ಪ್ರಬಂಧಕಾರರು ಈ ಪ್ರಕಾರದ ತಳಹದಿಯನ್ನು ನಿರ್ಮಾಣಮಾಡಿದರು. ನಂತರದ ಮಜಲನ್ನು ಕಟ್ಟಿದವರು ಬೀchi, ಎನ್ಕೆ ದಶರಥ ಬಿ.ಜಿ.ಯಲ್. ಸ್ವಾಮಿ. ಪಾ.ವೆಂ. ಇವರದೇ ಹೆಜ್ಜೆಯ ಜಾಡಿನಲ್ಲಿ ತಮ್ಮ ವಿಶಿಷ್ಟ ಛಾಪನ್ನು **ಕರ್ಮವೀರ** ಪತ್ರಿಕೆಯಲ್ಲಿ **ಓದುಗರೊಡನೆ ಹರಟೆ** ಎನ್ನುವ ಕಾಲಂನಲ್ಲಿ ಬರೆದು ಲಲಿತ ಪ್ರಬಂಧಕಾರರ ಪಂಕ್ತಿಯಲ್ಲಿ ಸ್ಮರಣೀಯರಾದರು.

ಹರಟೆ ವಿರಾಮವಾಗಿ ಒಂದು ವಿಚಾರದಿಂದ ಶುರವಾಡಿ ಲಹರಿ ಚಿತ್ತಲಹರಿಯಿಂದ ಇನ್ನೊಂದಕ್ಕೆ ಜಿಗಿದು ವಿಚಾರದ ಲಘುಮಗ್ಗಲು ನೋಡುತ್ತಾ ತಡವುತ್ತಾ ತಟ್ಟುತ್ತಾ ನಿದರ್ಶನಗಳು ಮಾಸದೆ ರುಚಿ ಹಚ್ಚುತ್ತ ಸುಳಿದಾಡುವುದು ಇಲ್ಲಿಯ ಲಘುಮನದ ಅಲೆದಾಟ–ಸ್ವಚಂದವೂ ಸುಂದರವೂ ಆಗಿ ನಗೆ ಉಕ್ಕಿಸುತ್ತಾ ವಿಚಾರದ ಕಚಗುಳಿ ಇಡುತ್ತಾ ಟೀಕಿಸುತ್ತಾ, ವಿಚಾರಿಸುತ್ತಾ ವ್ಯವಸ್ಥಿತವಾಗಿ ಮುಕ್ತಾಯವಾಗುತ್ತದೆ.

ಸಂಸ್ಕೃತದ ಕವಿ, ಪ್ರಸಿದ್ಧ ಕಾದಂಬರಿಕಾರ ಬಾಣಭಟ್ಟ 'ಹರ್ಷಚರಿತ್ರೆಯ ಮೂಲಕ ತನ್ನ ಪ್ರತಿಭೆಯನ್ನು ಹೊರಹಾಕಿದನು. ಇದು ಸಂಸ್ಕೃತ ಗದ್ಯಕಾವ್ಯಕ್ಕೆ ಮಾನದಂಡವಾಗಿದೆ. ಪಾ.ವೆಂ. ಅವರ ಬಹುಮುಖ ಪ್ರತಿಭೆ, ಬಹುಶ್ರುತ ಪಾಂಡಿತ್ಯ ಬಾಣನಂತೆ ಕಷ್ಟವಲ್ಲದ ಲಲಿತಪದಗಳು, ಗದ್ಯದ ಮೂಲಕ ಸಮಕಾಲೀನ ವಿಚಾರಗಳನ್ನು ಆಯ್ದು **ಕರ್ಮವೀರ,**

ಕಸ್ತೂರಿ ಪತ್ರಿಕೆಗಳಲ್ಲಿ ಬಹುಕಾಲ ಬರೆಯುತ್ತಾ ಬಂದರು. ಪಾ.ವೆಂ. ಅವರ ತಳಸ್ಪರ್ಶಿಯಾದ ವಿಚಾರಚಿಂತನೆಗಳ ಆಳವಾದ ಅಧ್ಯಯನದ ಚಿಂತನೆಗಳು ಬೆಳಕಿನಂತೆ ಗೋಚರಗೊಳ್ಳುವುದೇ 'ಲಾಂಗೂಲಾಚಾರ್ಯರ ಹರಟೆಗಳ' ಮೂಲಕ.

ಲಾಂಗೂಲಾನಾಮ: ನಗು ಹೃದಯಕ್ಕೆ ಸಂಬಂಧಿಸಿದ್ದು, ನಗೆ ಇತರರಿಗೆ ಕಾಣಿಸುವ ವಸ್ತು. ಹಾಸ್ಯ ಒಳಗೆ ಅನುಭವಿಸುವ ವಸ್ತು ವಿಹಾರ. ಪಾ.ವೆಂ. ಆಚಾರ್ಯ, ಪಿ.ವಿ. ಆಚಾರ್ಯ, ರಾಧಾಕೃಷ್ಣರಾವ್, ಮುರಳೀಧರ ಮೊದಲಾದ ಹೆಸರುಗಳಿಗೆ ಪ್ರಸಿದ್ಧರಾಗಿದ್ದರು. ಉಡುಪಿಯ ಈ ತುಳುನಾಡ ಪುತ್ರನಿಗೆ ಅಪರೂಪದ ನಿದರ್ಶನ ಬಯಲಿಗೆಳೆಯುವ ಅಥವಾ ಮುಚ್ಚಿದ ಸತ್ಯಸಂಗತಿಯನ್ನು ತೆರೆದಿಡುವ ತುಂಟತನ, ನಗೆ, ಚೇಷ್ಟೆ, ವಕ್ರತೆ ವಿಡಂಬನೆ, ಕೆಣಕಾಟ ವಿಡಂಬನೆಗಳಿಂದ ಕೂಡಿರುವಾಗ ಮೇಲಿನ ಹೆಸರುಗಳು ಸೂಕ್ತವಲ್ಲ ಎನಿಸಿರಬೇಕು. ಆದ್ದರಿಂದಲೇ ಲಾಂಗೂಲಾಚಾರ್ಯ ಎಂಬ ಸ್ವಯಂ ನಾಮಕರಣ ಮಾಡಿಕೊಂಡಿದ್ದಾರೆ.

ಪಾ.ವೆಂ. ತುಂಬಾ ಆಲೋಚಿಸಿ ಹೆಸರಿಟ್ಟುಕೊಂಡಂತೆ ಕಂಡುಬರುವುದಿಲ್ಲ. ಆದರೆ ತಮ್ಮ ಪ್ರಬಂಧದೊಳಗೆ ಎಲ್ಲ ಪ್ರಾಣಿಗಳ ಬಗೆಗೂ ಪ್ರಸ್ತಾಪ ಮಾಡಿದ್ದಾರೆ. 'ಹನುಮನುದಿಸಿದನಾಡು' ಎಂದು ಸೇವೆಗೆ ಪ್ರಸಿದ್ಧವಾಗಿರುವ ಕನ್ನಡನಾಡಿದ ರಾಷ್ಟ್ರೀಯ ಪ್ರಾಣಿಯನ್ನು ಬಾಲವನ್ನು ಸಂಕೇತವಾಗಿದ್ದುಕೊಂಡು ಬರೆಯುವ ಪ್ರಚೋದನೆ ಬಂದಿರಬಹುದು. ಪಾ.ವೆಂ. ತಮ್ಮ ಹರಟೆಯಲ್ಲಿ ಹೆಸರಿನ ಬಗ್ಗೆ ಸ್ಪಷ್ಟಪಡಿಸುತ್ತಾರೆ. 'ಲಾಂಗೂಲಾಚಾರ್ಯರ ಹುಟ್ಟು ಹೆಸರೇನು ಲಾಂಗೂಲಾಚಾರ್ಯ ಎಂಬ ಬಿರುದನ್ನು ದಯಪಾಲಿಸಿದವರು ಯಾರು ಎಂಬ ಕುತೂಹಲ ಇಲ್ಲಿ ಪ್ರದರ್ಶಿಸಲಾಗಿದೆ. ಮೊದಲನೆಯದಾಗಿ ಲಾಂಗೂಲಾಚಾರ್ಯರು ಹುಟ್ಟಲೇ ಇಲ್ಲ. ಆದ್ದರಿಂದ ಅವರಿಗೆ ಹುಟ್ಟು ಹೇಸರೇನು? ಎಂಬ ಪ್ರಶ್ನೆ ಏಳುವುದೇ ಇಲ್ಲ. ಅವರು ಸ್ವಯಂ ಲಿಂಗದಂತೆ ಕಾಲರ ಪಿಡುಗಿನಂತೆ ಏಕಾಏಕ ಪ್ರಕಟವಾದರು.' (ಲೋಕದ ಡೊಂಕು ಪುಟ ೨೦೪).

ಪಾ.ವೆಂ. ಅವರು ವಿಶಿಷ್ಟ ಬಗೆಯ ಬಾಲಬಡಕರು ಆಚಾರ್ಯರ ಬಾಲ ಅಲ್ಲಾಡುವಿಕೆ, ಕಪಿಚೇಷ್ಟೆ ಚಿತ್ರ ವಿಚಿತ್ರವಾದ ವಿಷಯವನ್ನು ಹರಡುವುದು. ಭಾಷೆಯ ಬಳಕೆಯಲ್ಲಿ ಸನ್ನಿವೇಶಕ್ಕನುಗುಣವಾಗಿ, ಉಪಮಾ ವಿಧಾನದಲ್ಲಿ, ಆತ್ಮವಿಡಂಬನೆಯಲ್ಲಿ ಈ ಎಲ್ಲ ರೀತಿಯಲ್ಲಿ ಅವರ ಚೇಷ್ಟೆಯ ಬೇರುಗಳು ಗೋಚರವಾಗುತ್ತದೆ. ಇದರಿಂದಲೇ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಬಗೆಯ ಹರಟೆಗಾರರಾಗಿ ಪ್ರಸಿದ್ಧರಾಗಿದ್ದಾರೆ. **ಪ್ರಹಾರ,** (೧೯೬೫) **ಲೋಕದ ಡೊಂಕು** (೧೯೭೬) **ವಿಪರೀತ** (೧೯೭೭) **ವಕ್ರದೃಷ್ಟಿ** (೧೯೯೧) ಇವು ಪಾ.ವೆಂ. ಅವರ ನಗೆಬರಹಗಳ ಸಂಕಲನಗಳು.

ಪ್ರಹಾರದಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತು ಪೌರಾಣಿಕ ಕತೆಗಳ ವಿಚಿತ್ರ ಸನ್ನಿವೇಶಗಳ ವಿಶ್ಲೇಷಣೆಗಳು ಇವೆ. ಸಮಕಾಲೀನ ವಿಷಯವನ್ನಾದರಿಸಿದ ಹರಟೆಗಳು ಅಲ್ಲಲ್ಲಿದೆ. **ಲೋಕದ ಡೊಂಕು, ವಿಪರೀತ, ವಕ್ರದೃಷ್ಟಿ**ಯಲ್ಲಿ ಎಲ್ಲ ರೀತಿಯ

ಹರಟೆಗಳನ್ನು ಕಾಣುತ್ತೇವೆ. ಭಾರತೀಯರ ಬದುಕನ್ನು ಪುರಾಣಪ್ರಜ್ಞೆಗಳು ಹೆಚ್ಚಾಗಿ ಆವರಿಸಿಕೊಂಡಿದೆ. ಇವು ಓದುಗರ ಮನಸ್ಸನ್ನು ಹೆಚ್ಚಾಗಿ ಆಕರ್ಷಿಸುತ್ತದೆ.

ಲಾಂಗೂಲಾಚಾರ್ಯ ಎಂಬ ಹೆಸರಿನಲ್ಲಿ ಸಾವಿರಕ್ಕೂ ಹೆಚ್ಚು ನಗೆಬರಹಗಳನ್ನು **ಕರ್ಮವೀರ, ಕಸ್ತೂರಿ** ಮತ್ತು **ತುಷಾರ** ಪತ್ರಿಕೆಗಳಲ್ಲಿ ಬರೆದಿದ್ದಾರೆ. ಹಾಸ್ಯ, ವಿಚಾರ, ವಿಡಂಬನೆ, ಮಾನವೀಯತೆ ಹಾಸಹೊಕ್ಕಾಗಿರುವ ಪಾ.ವೆಂ. ಅವರ ಲೇಖನಗಳು ಒಂದು ವಿಶೇಷ ಸಂಪ್ರದಾಯದಲ್ಲಿ ಬೆಳೆದು ವಿಚಾರವಂತರ ಹೃದಯಗಳನ್ನು ಮುಟ್ಟಿದೆ. ವ್ಯಕ್ತಿ ಅಥವಾ ಸಮಾಜಕ್ಕೆ ಸಂಬಂಧಿಸಿದ ಹದಗೆಟ್ಟ ಸ್ಥಿತಿಗಳು, ಅದರ ನಿರ್ಮೂಲನ ಅಥವಾ ಎಚ್ಚರಿಕೆ, ಜಾಗೃತಗೊಳಿಸುವುದು. ಈ ಹರಟೆಯ ಉದ್ದೇಶದಂತಿದೆ. ಇಲ್ಲಿ ವ್ಯಕ್ತಿಯನ್ನು ಅಥವಾ ಸಮಾಜವನ್ನು ಉದ್ದೇಶಿಸುವುದಿಲ್ಲ. ಇವರ ಆಕ್ರೋಶ ಏನಿದ್ದರೂ ಅವುಗಳ ನಡುವಳಿಕೆ, ಸ್ವಭಾವದ ಮೇಲೆ. ಈ ಸಿಟ್ಟು ಸಾತ್ವಿಕವಾದುದು. ಢಾಂಬಿಕತನದ ಎದುರು ಸೆಟೆದು ನಿಂತಿದ್ದು. ಇದು ವಿನೋದಗಾರರ ಮನಸ್ಸನ್ನು ಆಳವಾಗಿ ಕಲಕುತ್ತದೆ. ತಮ್ಮ ಬರಹ ಮಾತಿನ ಮೊನಚಿಗೆ ಹಾಸ್ಯದ ಲೇಪನ ಹಾಕುತ್ತಾರೆ.

ಪಾ.ವೆಂ. ಅವರು ಗಂಭೀರ ಚಿಂತಕರೆ ಆಗಿದ್ದಾರೆ. ಅವರ ನಗುವಿನ ಹಿಂದೆ ನೋವಿನ ಅಳಲು ಇದೆ. ವೇದನೆ ಇದೆ. ಈ ಎರಡರ ಅಂತರ ಸೂಕ್ತವಾದುದು. ಆಂಗ್ಲ ಕವಿ ಥ್ಯಾಕರೆ ಹೇಳುವಂತೆ Loughter is the Mistreas of tears ಎನ್ನುವ ಮಾತು ಪಾ.ವೆಂ.ಅವರ ಬರಹಕ್ಕೂ ಇದು ಅನ್ವಯವಾದಂತಿದೆ. ಈ ರೀತಿಯ ವಿನೋದ ಹರಟೆ ಸಾಹಿತ್ಯವನ್ನು ಸೃಷ್ಟಿಸಬೇಕಾದರೆ ವಿಶ್ವದ ಎಲ್ಲ ಘಟನೆ, ಸನ್ನವೇಶಗಳನ್ನು ಕೊಂಕುಕಣ್ಣಿನಿಂದ ನೋಡುವ ಶಕ್ತಿ ಇರಬೇಕು. ಇದಕ್ಕೆ ಆರೋಗ್ಯವಾದ ಮನಸ್ಸು ಇರಬೇಕು. ಸದಾ ಸುಖಲೋಲುಪರಿಂದ, ಸಿನಿಕರಿಂದ ಸ್ವಾರ್ಥಿಗಳಿಂದ ಹಾಸ್ಯ ಸೃಷ್ಟಿ ಸಾಧ್ಯವಿಲ್ಲ. ಪಾ.ವೆಂ. ಅವರ ಕೊಂಕುಕಣ್ಣಿನ ನೋಟ, ಆರೋಗ್ಯಕರವಾದ ಮನಸ್ಸಿನ ಜಾಗೃತಿಯೇ ಈ ಹರಟೆ ಪ್ರಕಾರದ ಸಂಕಲನದ ಮೊತ್ತ.

ಪ್ರಹಾರ: ಮಾತಿನ ಪ್ರಹಾರ ಈ ಹೊಡೆತ (ಪೆಟ್ಟು) ಜಾಣರಿಗೆ, ಕೋಣರಿಗೆ, ಈ ಮಾತು ಓದುವ ಪುರುಸುತ್ತು ಇಲ್ಲ. ಓದಿದರು ಬದಲಾಗರು. ಆಚಾರ್ಯರ ಈ ಮಾತಿನ ಪೆಟ್ಟು ತಿನ್ನುವವರು ಮನೋಜ್ಞ ಓದುಗರು ಮಾತ್ರ. ಈ ಓದುಗರಿಗೆ, ನೈತಿಕ ಪ್ರಜ್ಞೆ ರಾಜನೀತಿ ಪ್ರಜ್ಞೆ ಇರುತ್ತದೆ. ಈ ಪ್ರಜ್ಞೆಯನ್ನು ಜಾಗರೂಕಗೊಳಿಸಿ ಅದನ್ನು ಗಟ್ಟಿಗೊಳಿಸುವ ಜಾಣ್ಮೆ ಪಾ.ವೆಂ. ಅವರದು.

ಲಾಂಗೂಲಾಚಾರ್ಯರ ಹರಟೆಯ ನಿದರ್ಶನ ಬಯಲಿಗಿಡುವ ಅಥವಾ ಗುಪ್ತ ವಿಷಯವನ್ನು ಸ್ಫೋಟಿಸುವ ತುಂಟತನಕ್ಕೆ ಉದಾಹರಣೆಗಳು. **ಐದು ಸಾಲದು ಏಳು ಬೇಕು** ಪಂಚಗವ್ಯಗಳ ಬಗ್ಗೆ ಹೇಳುವಾಗ ಶಿಷ್ಯನೊಬ್ಬ ಸ್ವಾಮಿಗಳಿಗೆ ಗೋಮಾಂಸ ತಿನ್ನಿಸಿದ ಅಧಿಕ ಪ್ರಸಂಗತನವನ್ನು ಇಲ್ಲಿ ಕಾಣುತ್ತೇವೆ. ಪಂಚ ಶಬ್ದದ ಬಗ್ಗೆ ಕೊಡುವ ವಿವರಣೆಗಳು ಸಾಮಾನ್ಯ ಜ್ಞಾನವನ್ನು ವಕ್ರಮಾರ್ಗದಲ್ಲಿ ಬಂದು ಕೊಡುವಂತದ್ದು, ಸತ್ಯ ವಿಷಯಗಳು ಅವರಿಗೆ ಹೊಳಹುಗಳಾಗಿ ಬಂದು ಓದುಗರಲ್ಲಿ ಹೊಳಪುಮೂಡಿಸಿದೆ. ಶಬ್ದ ಭಂಡಾರ

ಶಬ್ದಾರ್ಥಹೇಳಿ ನಿಲ್ಲುವುದಿಲ್ಲ. ಶಬ್ದೇತಿಹಾಸವನ್ನು ವಿವರಿಸುತ್ತಾ ಶಬ್ದಕೋಶ ವಿಶ್ವಕೋಶವಾಗಿ ಹಬ್ಬುತ್ತದೆ. ಹರಟೆಯಲ್ಲಿ ಬರುವ ಪಂಚ ಎನ್ನುವ ಶಬ್ದದ ಬಗ್ಗೆ 'ಪಂಚೆ' ಎಂಬುದು ತೀರ ಹಿಂದೂತ್ವದ ಧ್ಯೋತಕವೆಂದು ಪಂಚಗದ್ಯದ ಮಾತಿರಲಿ, ಪಂಚಾಂಗ ಪಂಚಭೂತ ಪಂಚಕನ್ನೆಯರು ಮನುಷ್ಯರ ಕೈ ಕಾಲುಗಳಿಗೆ ಐದೈದು ಬೆರಳುಗಳನ್ನು ಕೊಟ್ಟು ಹಿಂದೂ ಪಕ್ಷಪಾತವನ್ನೇ ತೋರಿಸಿದ್ದಾನೆ. ಸಪ್ತ ಶಬ್ದದ ಕತೆಯು, ವಿವರಣೆಗಳು ಇಲ್ಲಿ ವಿಶೇಷ ಜ್ಞಾನವನ್ನು ಮೂಡಿಸುತ್ತದೆ.

ಶಬ್ದಚ್ಛಟ ಎಂಬ ರೋಗ ಈ ಲಘು ಹರಟೆಗಳಲ್ಲಿ ಶಬ್ದಚ್ಛಟ ಹಿಡಿದವರನ್ನು ಅಣಕಿಸುತ್ತಾರೆ. ಮಾತುಮಾತಿಗೆ ಗೊತ್ತಾಯ್ತಲ್ಲ, ಏನು ನಿಮಗೆ ಅರ್ಥ ಆಗೋದಿಲ್ಲ ನಿಮಗೆ ಹೇಳಿದ್ದೆ ತಿಳಿಲಿಕ್ಕಿಲ್ಲ 'ಮತ್ತೆ ಅಂದ ಬಳಿಕೆ ಭಯಂಕರ' ಎಂಬಿತ್ಯಾದಿ ಮಾತುಗಳನ್ನು ವಾಕ್ಯಗಳ ಮಧ್ಯ ಆಗಾಗ ಉದುರಿಸುತ್ತಿರುತ್ತಾರೆ. ಹೀಗೆ ನಿಗದಿತ ಪದಪುಂಜಗಳನ್ನು ಬಳಸುವುದು ಉದುರಿಸುವುದು ಅವರ ಅಭ್ಯಾಸ. ನಶ್ಯ, ಎಲೆ, ಅಡಿಕೆ, ಸಿಗರೇಟುಗಳ ಚಟಗಳಂತೆ ಅವರ ದೃಷ್ಟಿಯಲ್ಲಿ ಹೀಗೆ ಅಭ್ಯಾಸವಾದ ಕೆಲವು ಪದಪುಂಜಗಳನ್ನು ಆಗಾಗ ಬಳಸುತ್ತಿರುವುದಕ್ಕೆ ಯಾವ ವಿಶೇಷ ಅರ್ಥವೂ ಇಲ್ಲ. ಆದರೆ 'ನಿಮಗೆ ಅರ್ಥ ಆಗೋದು ಹೇಳಿದ್ರೆ ತಿಳಿಲಿಕ್ಕಿಲ್ಲ' ಎಂದು ಪದೆ ಪದೇ ಅನ್ನುತ್ತಿದ್ದರೆ ಕೇಳುವವನಿಗೆ ಏನನಿಸಬೇಕು ಶಬ್ದಗಳನ್ನು ಈ ರೀತಿಯಾಗಿ ಸುಮ್ಮನೆ ಬಳಸುವ ರೋಗ ಮನುಷ್ಯನ ಸಂಬಂಧವನ್ನೇ ಹಾಳುಮಾಡಬಲ್ಲದು. ಇಂಥವರನ್ನು ಕಷ್ಟ ಪಟ್ಟು ಪದೇ ಪದೇ ಒಂದೇ ಶಬ್ದ ಪುಂಜವನ್ನು ಪದೇ ಪದೇ ಬಳಸುವ ಚಾಳಿಯನ್ನು ಬಿಡಿಸಬಹುದು. ಆದರೆ ಅವರು ಮತ್ತೊಂದು ಪದವನ್ನು ಬಳಸಲು ಪ್ರಾರಂಭಿಸುತ್ತಾರೆ. ಸಿಗರೇಟಿನ ಚಟ ಬಿಟ್ಟವರು ನಶ್ಯದ ಚಟ ಆರಂಭಿಸಿದ ಹಾಗೆ. ಈ ಪ್ರಬಂಧದಲ್ಲಿ ಹಾಸ್ಯವಿದೆ. ಜೊತೆಗೆ ಮನುಷ್ಯನ ವಿಕಾರಗುಣವನ್ನು ಲೇವಡಿಮಾಡಿ ಅದನ್ನು ಸರಿಪಡಿಸುವ ಮನೋಧರ್ಮವಿದೆ.

ಪಾ.ವೆಂ. ಅವರಿಗೂ ಇತರ ಹರಟೆ ಪ್ರಬಂಧಗಳನ್ನು ಬರೆದ ಇತರ ಲೇಖಕರಿಗೂ ಇರುವ ವ್ಯತ್ಯಾಸವೆಂದರೆ ಇಲ್ಲಿಯ ಪ್ರಬಂಧಗಳು ಹಾಸ್ಯದಲ್ಲಿ ಮುಳುಗಿಸುತ್ತದೆ. ವಾಚಕರನ್ನು ನಗುವಂತೆ ಮಾಡುವುದರ ಜೊತೆಗೆ ಮನುಷ್ಯ ವಕ್ರವರ್ತನೆಗಳನ್ನು ತಿದ್ದಿ, ತಪ್ಪಿನ ಅರಿವನ್ನು ಮೂಡಿಸಿ ಉತ್ತಮ ಮನುಷ್ಯನನ್ನಾಗಿ ಮಾಡುವ ಮೂಲ ಉದ್ದೇಶವಿದೆ. ಇದರಿಂದಲೇ ಕನ್ನಡ ಸಾಹಿತ್ಯದಲ್ಲಿ ಹರಟೆ ಪ್ರಕಾರಕ್ಕೆ ಹೊಸ ಚೈತನ್ಯ ರೂಪಿಸುವುದು ಪಾ.ವೆಂ. ಅವರಿಗೆ ಸಾಧ್ಯವಾಗಿದೆ.

ಹಾಸ್ಯದೆಂಬುದು ಗಾಯದ ಮೇಲಿನ ಮುಲಾಮೂ ಇದ್ದಂತೆ, ಹಾಸ್ಯವಿಲ್ಲದಿದ್ದರೆ ಬದುಕು ಅಸಾಧ್ಯ ಪಾ.ವೆಂ. ಅವರು ಹರಟೆಗಳ ಕವಲು ದಾರಿಯಲ್ಲಿ ಸಾಗುತ್ತಿರುವಾಗ ಅವರ 'ವಕ್ರದೃಷ್ಟಿ'ಗೆ ಬಿದ್ದಿರುವ ಒಂದು ವಸ್ತು 'ಹಾಸ್ಯಮೀಮಾಂಸೆ' ಹಾಸ್ಯವೆಂದರೇನು? ಹಾಸ್ಯಕ್ಕೆ ನಿರ್ದಿಷ್ಟವಾದ ಉತ್ತರ ಕೊಡಲು ಸಾಧ್ಯವೆ? ಎನ್ನುವುದರ ಲಕ್ಷಣಗಳ ಬಗ್ಗೆ ಈ ರೀತಿ ಹೇಳುತ್ತಾರೆ.[೩] 'ಹಾಸ್ಯವೆಂದರೆ ವೈಜ್ಞಾನಿಕ ಲಕ್ಷಣ ವಾಕ್ಯ ಮುಖವಿಕಾರ. ಸಂಸ್ಕೃತ ಕೋಶದ ಪ್ರಕಾರ ಎಲ್ಲ ಬದಲಾವಣೆ ವಿಕಾರವೇ ಎನ್ನುವುದನ್ನು ತಿಳಿಸುತ್ತಾರೆ. ಹಾಸ್ಯದ

ಲಕ್ಷಣ ಮನುಷ್ಯರಿಗೆ ಮಾತ್ರ ಅಲ್ಲ. ಪ್ರಾಣಿಗಳಿಗೂ ಹಾಸ್ಯ ತಿಳಿದಿದೆ ಎನ್ನುತ್ತಾರೆ'. ಅದಕ್ಕೆ ಅವರ ನೆರೆಮನೆಯ ಕುರೂಪಿ ಬೆಕ್ಕನ್ನು ಬೇರೊಂದು ನಾಯಿ ಅಟ್ಟಿಸಿಕೊಂಡು ಹೋಗುವ ಸಂದರ್ಭ, ಚಿಕ್ಕ ಮರದ ಮೇಲೆ ಹತ್ತಿ ಮ್ಯಾಂ ಎಂದು ನಾಯಿಯನ್ನು ಅಣಕಿಸುವುದನ್ನು ಉದಾಹರಿಸುತ್ತಾರೆ.

ಕಾಗೆ ಮೊಟ್ಟೆಯೆಂದು ತಿಳಿದು ಪಿಂಗ್ ಪಾಂಗ್ ಚೆಂಡನ್ನೆ ಕುಕ್ಕಿದ್ದು, ತನ್ನ ಬಳಗವನ್ನೆಲ್ಲ ಕರೆದು ತತ್ತಿಯೆಂದು ಬಗೆದು ಎಲ್ಲ ಕಾಗೆಗಳು ಕುಕ್ಕಿದ ಸನ್ನಿವೇಶ, ಮೊದಲ ಕಾಗೆ ಕೊರಳು ಕೊಂಕಿಸಿ ದೂರದಿಂದ ನೋಡುವ ಸನ್ನಿವೇಶ ಇದು ಕಾಗೆಯ ಹಾಸ್ಯಪ್ರಜ್ಞೆ, ಬುದ್ಧಿವಂತ ಮನುಷ್ಯ ಹೇಗೆ ಉಪಕಾರದಿಂದ ತನಗೆ ಅನೇಕ ಯೋಗ್ಯತೆಗಳನ್ನು ತಾನು ಆರೋಪಿಸಿಕೊಳ್ಳುತ್ತಾನೆ ಕಾಕಾ ಸಮಾಜದ ಸಹ ಬಾಂಧವ್ಯ ಸ್ಥಾಪನೆಯು ಹಾಸ್ಯಮಯವಾಗಿದೆ. ಹಾಸ್ಯದ ಮೂಲ ಪ್ರಯೋಜನ ಪ್ರಚೋದನೆ ಇವುಗಳ ಬಗ್ಗೆ ಪ್ರಶ್ನಿಸುತ್ತ ಜಗತ್ತಿನ ಮಹಾಪ್ರಜ್ಞಾವಂತರನ್ನು ಈ ರೀತಿ ಲೇವಡಿ ಮಾಡುತ್ತಾರೆ. *೪ ಹಾಸ್ಯದ ಮೂಲ ಪ್ರಯೋಜನ, ಪ್ರಯೋಜನ ಏನು ಎಂಬುದನ್ನು ಕುರಿತು ಜಗತ್ತಿನ ಮಹಾ ಮಹಾ ತತ್ವಜ್ಞಾನಿಗಳು ತೌಡುಕುಟ್ಟಿದ್ದಾರೆ. ಸರಕಾರ ಮುಟ್ಟಿದ್ದೆಲ್ಲ ಮಸಿಯಾದ ಹಾಗೆ, ತತ್ವಜ್ಞಾನಿಗಳು ಕುಟ್ಟಿದ್ದೆಲ್ಲ ಹೊಟ್ಟಾಗುತ್ತದೆ. ಎನ್ನುವ ವಿಡಂಬನೆಯ ಮೂಲಕ ರಾಜಕಾರಣಿಗಳ ಹಣೆಬರಹ, ಇತಿಹಾಸ, ಭೌಗೋಳಿಕ ವಿಷಯ, ನಗು–ಬಿಳಿ, ಹಿಮದರಾಶಿ ಬಿಳಿ, ಚಳಿಪ್ರದೇಶದಲ್ಲಿ ಹೆಚ್ಚು ಹಾಸ್ಯದ ರಾಶಿ ಇದೆ.*೫ ನಾನು ಮಾತ್ರ ಆಸ್ತಮ ರೋಗಿಯಾದ್ದರಿಂದ ಈ ಶೀತಲ ಹಾಸ್ಯವನ್ನು ನುಂಗಲು ಅಂಜುತ್ತೇನೆ ಎನ್ನುವ ಆತ್ಮವಿಡಂಬನೆಯ ಮೂಲಕ ಸಾಗುವ ಈ ಹರಟೆ 'ನಗುವರಲ್ಲೋ ರಂಗಯ್ಯ ನಿನ್ನಾಟವ ಕಂಡು! ಹಗರಣವೆನಿಸುತ್ತಿದೆ ನನಗೆ' ಎಂದು ದಾಸವಾಣಿಯನ್ನು ಪಾ.ವೆಂ. ಆಶ್ರಯಿಸುತ್ತಾರೆ. ಜಗತ್ತಿನ ಅಸಂಬದ್ಧತೆಯೇ ಹಾಸ್ಯದ ಮೂಲಕ ರಂಗಯ್ಯನೇ ಹಗರಣದವನು ಪ್ರಪಂಚದಲ್ಲಿ ಎನ್ನುತ್ತಾರೆ. ಮುಂದೆ ಕಾರು ಡಿಕ್ಕಿ ಹೊಡೆಯುವ ಸನ್ನಿವೇಶ, ಪರಪೆಕ್ಟ್ ಆಗಿರುವುದರಷ್ಟು ಅಸಂಬದ್ಧತೆ. ಬೇರೆ ಒಂದು ರೀತಿ ಎಂದು ಸ್ಪಷ್ಟ ಪಡಿಸುವುದರಲ್ಲಿ ಮನುಷ್ಯನ ಕುರುಡುತನ ಬಯಲಿಗೆಳೆಯುತ್ತಾರೆ. ಹೀಗೆ ತನ್ನ ಮಿತ್ರ ದ.ಬಾ. ಕುಲಕರ್ಣಿಯವರ 'ಸ್ವಂತ ಬಾಡಿಗೆ ಮನೆಯ ಪ್ರಸಂಗ' ದಲ್ಲಿ ಕಲ್ಪನೆಯ ಶಬ್ಧ ವೈಪರೀತ್ಯ, ಆಚಾರ್ಯರ ಏಕಾದಶಿ ಫಲಹಾರದ ಮೂಲಕ ಮನುಷ್ಯ ಕುಲದ ಡಂಭಾಚಾರಗಳು ಪಾ.ವೆಂ. ಅವರ ಹಾಸ್ಯದ ಒಂದು ಕಣಜವಾಗಿದೆ.

ಅರವಿಂದರ ಜನ್ಮದಿನದಿಂದಲೇ ಭಾರತಕ್ಕೆ ಸ್ವಾತಂತ್ರ್ಯ ಬಂತು. ಆಗಸ್ಟ್ ೧೫ರಂದು ಅಸ್ಸಾಮಿನಲ್ಲಿ ಆದ ಭಯಂಕರ ಭೂಕಂಪ ಯಾರ ತಪಸ್ಸಿನಿಂದ ಆದದ್ದು ಹೀಗೆ ಒಂದು ಸನ್ನಿವೇಶಕ್ಕೆ ಮತ್ತೊಂದನ್ನು ಸಮೀಕರಿಸಿ ಮನುಷ್ಯ ಪ್ರಜ್ಞಾಹೀನತೆಯನ್ನು ಹಾಸ್ಯದೊಂದಿಗೆ ಎತ್ತಿತೋರಿಸುತ್ತಾರೆ. ಮನುಷ್ಯನ ಬದುಕು ಕಾರ್ತವೀರ್ಯನ ಹಾಗೆ ಸಹಸ್ರಬಾಹುವಾಗುವ ಕಾಲದಲ್ಲಿ ಹಾಸ್ಯದ ಉತ್ಪಾದನೆ ಭಾರಿ ಕೈಗಾರಿಕ ಮಟ್ಟದಲ್ಲಿ ಆಗುತ್ತಿದೆ. ಜ್ಯೋಕುಗಳಿಗೆ ಸಾಕಷ್ಟು ಡಿಮ್ಯಾಂಡು ಇದೆ ಆದರೆ ಸರಬರಾಜು (ಸಪ್ಲೈ) ಇಲ್ಲ. ಎನ್ನುವುದರ ಮೂಲಕ ಕನ್ನಡಿಗರ ಹಾಸ್ಯದ ಕೊರತೆಯನ್ನು ಹೇಳುತ್ತಾರೆ.

ತಾಯಿ ಬೇಕಂತೆ ಎನ್ನುವ ಪ್ರಬಂಧದಲ್ಲಿ ತಾಯಿಗೂ–ಹೆಂಡತಿಗೂ ಇರುವ ಅಂತರವನ್ನು ಸ್ಪಷ್ಟಪಡಿಸುತ್ತಾರೆ. *೬ ಇಬ್ಬರು ಬತ್ತಲೆಯಾಗಿ ಬಲ್ಲರು. ಆದರೆ ಈ ಬತ್ತಲೆ ದರ್ಶನದಲ್ಲಿ ಎಷ್ಟು ಅಂತರ! ತಾಯಿ ನಮ್ಮ ಹೊರಗಿನಿಂದ ಒಳಗಿನವರೆಗೆ ಬತ್ತಲೆಗಳನ್ನು ಬಲ್ಲಳು. ಎಲ್ಲ ಬತ್ತಲೆಯೊಡನೆ ಆಕೆಯೊಡನೆ ಬೆಳೆದಿದ್ದೇವೆ. ಆದರೆ ಹೆಂಡತಿ ನಮ್ಮ ಹೊರ ಬತ್ತಲೆಯನ್ನಷ್ಟೇ ದಾಯವಾಗಿ ಪಡೆದಿರುತ್ತಾಳೆ. ನಮ್ಮ ಒಳಬತ್ತಲೆಯನ್ನು ಅವಳ ಮುಂದೆ ಕತ್ತಲೆಯಲ್ಲಿ ಇಡುತ್ತವೆ". ಹೆಂಗಸರ ಮುಂದೆ ಗಂಡಸರು ವಿಕ್ರಮವಾಗಿ ಬದುಕಲು ಬಯಸುತ್ತಾರೆ. ತಾಯಿಗೆ ಜಾತಿ ಇಲ್ಲ ಎಲ್ಲ ಜಾತಿಯಲ್ಲು ತಾಯಿ ತಾಯಿಯೇ ಪ್ರೇಮವೊಂದಿದ್ದರೆ ತಾಯಿಯಾಗುತ್ತಾಳೆ. ಬೆಕ್ಕಿನ ಮರಿಯನ್ನು ಸಾಕಿದ ನಾಯಿಯಂತೆ. ಮನುಷ್ಯರೊಳಗಿನ ಜಾತಿ ಅವಾಂತರಕ್ಕೆ ಬೆಲೆ ಏನು? ಕುಪುತ್ರ ಇರಬಹುದು ಕಾಮಾತೆ ಇರಲು ಸಾಧ್ಯವಿಲ್ಲವೆನ್ನುವ ಶಂಕರರ ನುಡಿ ಇಲ್ಲಿ ಗಟ್ಟಿಯಾಗಿದೆ. ಇಲ್ಲಿ ಹೆಣ್ಣು, ತಾಯಿಯ ಬಗ್ಗೆ ತಾತ್ವಿಕ ಚರ್ಚೆಯನ್ನು ಕಾಣುತ್ತೇವೆ, ಜೊತೆಗೆ ಅಣಕು ಗಾಂಭೀರ್ಯವೇ ಅವರ ಶೈಲಿಯ ಮೂಲ ನೆಲೆಯಾದ್ದರಿಂದ ಪಾ.ವೆಂ. ಅವರು ಘನವಾದ ಮಹತ್ವದ ವಿಚಾರವನ್ನು ಅರ್ಥಪೂರ್ಣವಾಗಿ ತೇಲಿಸಬಲ್ಲ ತಂತ್ರವನ್ನು ಅರಿತವರಾಗಿದ್ದಾರೆ.

ನೀರುಳ್ಳಿಯ ಮಹಿಮೆ ಪ್ರಬಂಧದಲ್ಲಿ ನೀರುಳ್ಳಿಯ ವಿವಿಧ ಹೆಸರು, ರಸಪಾಕಗಳ ಬಗ್ಗೆ ದಾಂಪತ್ಯದ ಕೆಲವು ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ, ಬಸವಣ್ಣ ಹಸಿಬ್ರಾಹ್ಮಣರು ಪುರಾಣಲೋಕಗಳನ್ನೆಲ್ಲ ತಮ್ಮ ಚರ್ಚೆಯಲ್ಲಿ ತಂದು ಈರುಳ್ಳಿಯ ಮಹಿಮೆಯನ್ನು ಹಾಸ್ಯ –ಗಂಭೀರ ಶೈಲಿಯಲ್ಲಿ ವರ್ಣಿಸಿ ತಕ್ಕನೆ *೭'ಈರುಳ್ಳಿಯೆಂದರೆ ನಾಚುಗುಳಿತನ ಹೆಣ್ಣಿನ ಹಾಗೆ. ನಾಚಿಕೆಯ ಒಂದು ಪೊರೆಯನ್ನು ಸುಳಿದು ಹಾಕಿದರೆ ಒಲಗೆ ಇನ್ನೊಂದು ಪರೆ ಇರುತ್ತದೆ. ಅದನ್ನು ತೆಗೆದರೆ ಒಳಗೆ ಮತ್ತು ಒಂದೆಡೆ ತಿರುಳಿನವರೆಗೂ ಇದೆ ಕಥೆ ಎಲ್ಲಾ ನಾಚಿಕೆ ಪರೆಗಳನ್ನು ಹೋಗಲಾಡಿಸಿದರೆ ಒಳಗೆ ಏನೂ ಎಲ್ಲ! ಆಗಲೇ ನಿಮಗೆ ಗೊತ್ತು ಹೆಣ್ಣೆಂದರೆ ನಾಚಿಕೆಯ ಅಸಂಖ್ಯಾ ಸುರುಳಿಗಳ ಸಂಯೋಜನೆ ಅಂತ. ಮತ್ತೆ ಈ ಪರೆಗಳ ಕಳಚುವಿಕೆಯಲ್ಲಿ ತುಸು ಅಚಾತುರ್ಯವಾಯಿತೋ, ನಿಮ್ಮ ಕಣ್ಣಲ್ಲಿ ನೀರು!'

ಈ ಹರಟೆಯ ಅಂಶವನ್ನು ತಮ್ಮ ಪೆಂಗೋಪದೇಶ ಕವಿತೆಯಲ್ಲಿ ಕೂಡ ಪಾ.ವೆಂ. ಅವರು ಬರೆದಿದ್ದಾರೆ. **ದೇವಾಸ್ತ್ಯಪ್ತ್ಯಂತೂಹರಟೆ.** ಕೇವಲ ೧೮೦ ವರ್ಷಗಳ ಹಿಂದೆ ಕಾಣಿಸಿಕೊಂಡಿದೆ ಸತ್ಯನಾರಾಯಣ ಎಂಬ ಹೊಸದೇವರ ಜನಪ್ರಿಯತೆಗೆ ಆತನಿಗೆ ಮಾಡುವ ನೈವೇದ್ಯ ಸಪಾದಭಕ್ಷ ಈ ಪಾಕಭಿರುಚಿಯೇ ಕಾರಣವಿರಬೇಕು ಎಂದು ವಾದಿಸುವ **ಲಾಂಗೂಲಾಚಾರ್ಯರು** ಸತ್ಯನಾರಾಯಣನನ್ನು ಗಣಿತಪ್ರಿಯ ಎಂದು ಕರೆಯುತ್ತಾರೆ. ವಿಶ್ವ ಸೃಷ್ಟಿಕರ್ತನು ಪೂರ್ಣಾಂಕಗಳಲ್ಲಿ ಚಿಂತಿಸುವ ಗಣಿತ ಶಾಸ್ತ್ರಜ್ಞ ಎಂಬ ವಿಜ್ಞಾನಿಯ ಹೇಳಿಕೆಯನ್ನು ಒಪ್ಪದೆ.*೮ 'ನಮ್ಮ ಸತ್ಯನಾರಾಯಣ ಪೂರ್ಣಾಂಕಗಳಲ್ಲಿ

ಅಲ್ಲ ಭಿನ್ನರಾಶಿಗಳಲ್ಲಿ ಚಿಂತಿಸುವ ದೇವರು ಎನ್ನುತ್ತಾರೆ. ಸತ್ಯನಾರಾಯಣನ ಪ್ರಸಾದದ ಎಲ್ಲ ಅಂಗಗಳನ್ನು ಸಪಾದ ಎಂದರೆ ಒಂದುಕಾಲು ಪ್ರಮಾಣದಲ್ಲಿ ಹಾಕುತ್ತಾರೆ'.

ಪಾ.ವೆಂ. ಅವರ ದೃಷ್ಟಿಯಲ್ಲಿ ಹೆಂಡತಿಯನ್ನು ಅರ್ಥಮಾಡಿಕೊಳ್ಳುವುದೆಂದರೆ ನವ್ಯಕವಿತೆಯನ್ನು ಅರ್ಥಮಾಡಿಕೊಳ್ಳುವಷ್ಟೇ ಕಷ್ಟದ ಕೆಲಸವೆನ್ನುತ್ತಾರೆ. ಪಾ.ವೆಂ. ಅವರ ಹೆಚ್ಚಿನ ಬರಹಗಳಲ್ಲಿ ಅನೇಕ ಜನರ ಭಾವನೆಗಳ ಸಮೀಕರಿಸುವ ಪ್ರಯತ್ನ ತುಂಬ ಸಫಲವಾಗಿದೆ. ಉದಾಹರಣೆಗೆ **ಮದುವೆಯಾದರು ಸುಖ ಪಡುವುದು ಹೇಗೆ?** ಎಂಬ ಪ್ರಬಂಧದಲ್ಲಿ ಏಕಕಾಲದಲ್ಲಿ ಸರಳತೆ-ಸಂಕೀರ್ಣತೆಗಳನ್ನು ಒಂದುಗೂಡಿಸುತ್ತಾ ಸಾಗುವುದನ್ನು ಕಾಣುತ್ತೇವೆ. **ಬ್ರಹ್ಮ ಹೆಣ್ಣನ್ನು ಸೃಷ್ಟಿ ಮಾಡಿದ ಆದರೆ ಅರ್ಥಮಾಡಿಕೊಂಡ ಅನ್ನುವ ಭರವಸೆ ನನಗಿಲ್ಲ** ಎಂದು ಪಾ.ವೆಂ. ಅವರು ಅಭಿಪ್ರಾಯ ಪಡುತ್ತಾರೆ.

ಅನಾದಿ ಕಾಲದಿಂದಲೂ ಮದುವೆಯಾದ ಗಂಡು ಪತ್ನಿಯನ್ನು ಸುಖವಾಗಿಟ್ಟು ಕೊಳ್ಳುವ ಸೂತ್ರ ಯಾವುದು ಎಂದು ಪ್ರಯೋಗ ನಡೆಸುತ್ತಲೇ ಬಂದಿದ್ದಾನಂತೆ, ಇದರ ಪರಿಣಾಮವೋ ಎಂಬಂತೆ ಬಹುಪತ್ನಿ ವಿವಾಹ, ಏಕಪತ್ನಿ ವಿವಾಹ, ಅಂಶ ಪತ್ನಿವಿವಾಹ ಈ ಎಲ್ಲ ಪ್ರಯೋಗಗಳನ್ನು ಗಂಡು ಮಾಡಿದ್ದಾನಂತೆ.

ಒಂದಕ್ಕಿಂತ ಕಮ್ಮಿ ಹೆಂಡತಿಯನ್ನು ಮದುವೆಯಾಗುವುದನ್ನು 'ಅಂಶ ಪತ್ನಿ ವಿವಾಹ' ಎನ್ನುತ್ತಾರೆ. ಪಾ.ವೆಂ. ಅವರು ದ್ವಾಪರ ಯುಗದಲ್ಲಿ ಪಾಂಡವರು ಈ ಪ್ರಯೋಗ ಮಾಡಿ ನೋಡಿರುವಂತೆ ಅದಕ್ಕಾದರೂ ಏನು ಗತಿ ಆಯಿತು? ಗಂಡರೋ ನೀವು ಶಂಡರೋ ಅಂತ ದ್ರೌಪದಿ ಅವರಿಗೆ ಸವಾಲು ಹಾಕಿದಳಂತೆ. ಆದ್ದರಿಂದ ಹೆಂಡಂದಿರ ಸಂಖ್ಯೆಯಿಂದ ವೈವಾಹಿಕ ಸಂಖ್ಯೆ ನಿರ್ಧಾರವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಲೇಖಕರು ಬರುತ್ತಾರೆ. ಡೈವೋರ್ಸಿನಲ್ಲೂ ಸುಖ ಕಾಣುವುದಿಲ್ಲ. ಹೊಸ ಹೆಂಡತಿಯ ಮೂಲಕ ಸುಖಾನ್ವೇಷಣೆ ಸಾಧ್ಯವಿಲ್ಲ. ಹೊಸ ಹೆಂಡತಿ ನಮಗೆ ಹೊಸ ಪಾಠಕಲಿಸಬಹುದಲ್ಲ. ಆದ್ದರಿಂದ ಬುದ್ಧಿವಂತರು ಸಿಕ್ಕಿದ ಹೆಂಡತಿಯ ಸಂಗಾತಿಯೇ ಹೇಗಾದರೂ ಮದುವಾಳುವುದಕ್ಕೆ ಕಲಿಯುತ್ತಾರಂತೆ.

ಮುಂದೆ ನಮ್ಮ ಮಡದಿಯೊಂದಿಗೆ ಬದುಕಿದ ಅನುಭವನ್ನು ಹೀಗೆ ಹಂಚಿಕೊಳ್ಳುತ್ತಾರೆ. ನಾನು ಈಗ ಸುಮಾರು ೪೦ ವರ್ಷಗಳಿಂದ ಒಬ್ಬಳೆ! ಹೆಂಡತಿಯ ಸಂಗಡ ಆತ್ಮಹತ್ಯೆಮಾಡಿಕೊಳ್ಳದೆ ಅಥವಾ ಅವಳನ್ನು ಆತ್ಮಹತ್ಯೆಗೆ ತಳ್ಳದೆ ಬಾಳುತ್ತಾ ಇದ್ದೇನೆ. ಮುಂದೆ ಮಡದಿಯನ್ನು ಅರ್ಥಮಾಡಿಕೊಳ್ಳುವುದರ ಬಗ್ಗೆ ಪಾ.ವೆಂ. ಈ ರೀತಿ ಹೇಳುತ್ತಾರೆ. ಗಂಡು ಮಾಡಬೇಕಾದ್ದು ಇಷ್ಟು ನಿಮ್ಮ ತಲೆಯನ್ನು ಆದಷ್ಟು ಕಾಲ ನಿಮ್ಮ ಹೆಗಲ ಮೇಲೆ ಉಳಿಸಿಕೊಂಡು, ಅವಳ ಇಷ್ಟಾನಿಷ್ಟಗಳು ಏನು? ಅವಳ ಕಣ್ಣು ಭಾಷೆಯ ಲಿಪಿ ಯಾವುದು? ಅವಳ ಅಂತರಂಗದ ಭಾಷೆಯ ಶಬ್ದಗಳಿಗೆ ಅವಳ ಬಹಿರಂಗದ ಭಾಷೆಯಲ್ಲಿನ ಪರ್ಯಾಯ ಪದಗಳು ಯಾವುವು? ಅವಳ ಹುಸಿಕೋಪಕ್ಕೆ ಅವಳ ಹಣೆ, ಹುಬ್ಬು, ತುಟಿ, ಗಲ್ಲಗಳ ಮೋಡಿಗಳಲ್ಲಿ ಏನೇನು ವ್ಯತ್ಯಾಸಗಳು ಬರುತ್ತವೆ.

ಅವಳ ದೌರ್ಬಲ್ಯಗಳೇನು ಎಂದೆಲ್ಲಾ ಅಧ್ಯಯನ ಮಾಡುತ್ತ ಸಾಧ್ಯವಿದ್ದರೆ ಒಂದು ದಿನಚರಿಯನ್ನು ಬರೆದಿಡಿ. ಕೊನೆಗೂ ಒಂದು ತೀರ್ಮಾನಕ್ಕೆ ಬರುತ್ತಾರೆ ಒಲಿಸಿಕೊಂಡಿರುವುದಕ್ಕೆ ಒಂದು ರೂಲ್-ಆಫ್-ದ- ಥಂಬ್ ಅನ್ನುವುದು ಇಲ್ಲ. ಪ್ರತಿ ಮಡದಿಗೂ ಅವಳದೆ ಕಾನೂನುಗಳು ಇರುತ್ತವೆ. ಅವುಗಳನ್ನು ಅರಿತುಕೊಳ್ಳುವುದರಲ್ಲಿ ಅರ್ಧಾಯುಷ್ಯ ಹೋಗಬಹುದು. ಅಷ್ಟರಲ್ಲಿ ಅವಳ ಕಾನೂನುಗಳೇ ಬದಲಾಗಿರಬಹುದು. ಹೆಂಡತಿಯನ್ನು ಒಲಿಸಿಕೊಂಡಿರುವುದು ಸುಮಾರು ಮಟ್ಟಿಗೆ ನಿಮ್ಮ ಅದೃಷ್ಟದ ವಿಷಯವೂ ಹೌದು. ಎಲ್ಲ ಮಾಡಿಯೂ ನಿಮ್ಮ ಮಡದಿ ಸೆಟೆದುಕೊಂಡೇ ಇದ್ದರೆ ಹರ್ಮನ್ ಕೆಸರ್‌ಲಿಂಗನ ತಂತ್ರಜ್ಞಾನದಿಂದ ನೀವು ಸಮಾಧಾನ ತಾಳಬೇಕಷ್ಟೇ.*೯ 'ಹೆಚ್ಚು ಜನ ಮಹಾಪುರುಷರು ಸುಖಹೀನ ದಾಂಪತ್ಯಕ್ಕೆ ಹುಟ್ಟಿದವರು ಅಂತ ಆತ ಹೇಳುತ್ತಾನೆ. ನೀವು ಸುಖಗಂಡ ಆಗದಿದ್ದರೆ ಮಹಾಪುರುಷನ ತಂದೆ ಆಗುವ ಚಾನ್ಸ್ ಇದೆ!'.

ಹಳೆದಾದರೂ ಹೊಸತು ಎನ್ನುವ ಪ್ರಬಂಧದಲ್ಲಿ ನಾವು ಎಷ್ಟೇ ಹೊಸ ಕಾಲದವರೂ ಹಳೆ ಕಾಲದ ಬೇರುಗಳನ್ನು ಹುಡುಕುತ್ತೇವೆ ಎಂಬ ನಿಲುವನ್ನು ಇಲ್ಲಿ ಮಂಡಿಸುತ್ತಾರೆ. ನಮ್ಮ ಜೊತೆಗೆ ತಾರುಣ್ಯವನ್ನು ಅನುಭವಿಸಿ ನಮ್ಮ ಸಂಗಡವೇ ಮುದಿಯಾದವಳು ನಮಗೆ ಸದಾ ಹೊಸಬಳೇ ಆಗಿರುತ್ತಾಳೆ. ಇದನ್ನು ಸೃಷ್ಟಿಪಡಿಸಲು ಶೇಕ್ಸಪೀಯರ್‌ನ ಸಾನೆಟ್ ಒಂದನ್ನು ಉದಾಹರಿಸುತ್ತಾರೆ.*೧೦

ನನಗೆ ನೀನೆಂದಿಗೂ ಹಳಿತಾಗಲಾರೆ
ಎನಗೆ ಸುಂದರಿ! ನಾನಂದು ಹೊಸದಾಗಿ
ನಿನ್ನ ಕಣ್ಣು ತಡರಿಸಿದ ಕ್ಷಣದಲಿ
ಯಾವ ಸುಂದರಿಯಾಗಿ ಕಂಡಿದ್ದೇಯೋ
ಅದೇ ಸುಂದರಿಯಾಗಿ ಇಂದಿಗೂ ಕಾಣುವೆ.

ನೀವು ಪ್ರೀತಿಸಿದ್ದರೆ ಹಳೇ ಹೆಂಡತಿ ಕಡೆವರೆಗೂ ಹೊಸಬಳೇ

ಕೋಟ್ಯದಿಪತಿಯಕೋಟಲೆಗಳು ಎನ್ನುವ ಹರಟೆಯಲ್ಲಿ ಕಾಯಿಲೆಗಳನ್ನು ಚರ್ಚಿಸುತ್ತ ಸಾಹುಕಾರರ ಜಾತಿಯನ್ನು ಮಧ್ಯಮ ವರ್ಗದವರು ಹೇಗೆ ಕಾಣುಬಲ್ಲರು ಎಂಬುದನ್ನು ವಿವರಿಸುತ್ತಾರೆ. ಶ್ರೀಮಂತರಿಗೆ ಸ್ವರ್ಗದ ಮುಂಬಾಗಿಲಿನಿಂದ ಪ್ರವೇಶ ಇಲ್ಲ ಎಂದು ಬೈಬಲ್ ಹೇಳಿದ್ದರೆ ಭಾರತದ ರಾಜಕಾರಣವನ್ನು ಸಮಾಜವಾದದ ವೈಭವವನ್ನು ತಿಳಿದ ಎಲ್ಲ ಧರ್ಮಗಳ ತುಲನಾತ್ಮಕ ಅಧ್ಯಯನ ಮಾಡಿದ ಪಾ.ವೆಂ. ಅವರು*೧೧ 'ಹಿಂಬಾಗಿಲ ಮೂಲಕ ಶ್ರೀಮಂತಿಗೆ ಪ್ರವೇಶ ಕೊಡುವ ಏರ್ಪಾಡು ಇದೆ ಅಂತ ನನಗೆ ಸಂಶಯ ಎನ್ನುತ್ತಾರೆ. ಹೀಗೆ ಸ್ವರ್ಗ ನರಕದ ಬಗ್ಗೆ ಅಣಕವಾಡುತ್ತಾ ನನಗೆ ಈ ಭೂಮಿಯಲ್ಲಿ ಬಾಡಿಗೆಗೆ ಮನೆ ಸಿಗುವುದೇ ಇಲ್ಲ ಅಂತಾಗುವವರೆಗೆ ಸ್ವರ್ಗದಲ್ಲಿ ಮನೆ ಹಿಡಿಯುವ ಇಷ್ಟ ನನಗೆ ಇಲ್ಲ' ಎನ್ನುತ್ತಾರೆ. ಪಾ.ವೆಂ. ಹೀಗೆ ಧರ್ಮ, ಸಮಾಜ, ಶ್ರೀಮಂತಿಕೆ ಬಡತನದಿಂದ ಮುಂದೆ ಸಾಗಿ ಕೋಟ್ಯಾಧಿಪತಿಗಳ ಶಾರೀರಿಕ ಕೋಟಲೆಗಳ

ಬಗ್ಗೆ ತಮ್ಮ ಹಾಸ್ಯ ಚಟಾಕಿಯನ್ನು ಹಾರಿಸುತ್ತಾರೆ.[*೧೨] 'ಕೋಟ್ಯಾಧಿಪತಿಗಳಿಗೆ ಶಾರೀರಿಕ ಕೋಟಲೆಗಳು ಹಿಂಡು ಹಿಂಡಾಗಿ ಭಿಕ್ಷುಕರಂತೆ ಗಂಟು ಬೀಳುತ್ತವೆಯಂತೆ, ಮನುಷ್ಯನು ಬ್ಯಾಂಕಿನಲ್ಲಿಟ್ಟ ಹಣ ಒಂದು ಲಕ್ಷ ರೂಪಾಯಿಗೆ ಮೀರಿದ ಕೂಡಲೇ ಹೈ ಬ್ಲಡ್ ಪ್ಲಶರ್, ಹಾರ್ಟ್ ಟ್ರಬಲ್, ಡಯಾಬಿಟಿಸ್ ಮೊದಲಾದ ಅಸಂಖ್ಯಾಂತ ರೋಗಗಳು ಆ ವ್ಯಕ್ತಿಯನ್ನು ಅಟ್ಟಿಸಿಕೊಂಡು ಹೋಗುತ್ತವಂತೆ. ಬಡವರಿಗೆ ಅವು ಬರುವುದಿಲ್ಲ ಎಂದಲ್ಲ ಆದರೆ ಬಡವರಿಗೆ ಬಂದಾಗ ರೋಗಗಳಿಗೆ ಹೆಸರೇ ಇರುವುದಿಲ್ಲವಂತೆ ಬಡವರ ರೋಗ ಭಯಂಕರವಾಗಿ ಕಾಣಿಸುವುದಿಲ್ಲವಂತೆ!'

ಪಾ.ವೆಂ. ಆಚಾರ್ಯರ ಹರಟೆಗಳಲ್ಲಿ ಕಂಡುಬರುವ ನಮ್ಮ ಮನಸ್ಸಿಗೆ ತಟ್ಟುವ ಪ್ರಮುಖ ಅಂಶ ಲಾಂಗೂಲಾಚಾರ್ಯ ಲೋಕಜ್ಞಾನ ಮತ್ತು ಅಪಾರವಾದ ಸ್ಮರಣಶಕ್ತಿ, ಯಾವುದೇ ವಿಷಯವನ್ನು ಹರಟೆಗೆ ಆಯ್ದುಕೊಂಡರೂ ಅದರಲ್ಲಿ ನಮ್ಮ ವಿಶೇಷವಾದುದು ವಿಚಿತ್ರವಾದ ತರ್ಕ ಸ್ಮರಣೆಯನ್ನು ಅವರು ಮಂಡಿಸುತ್ತಾರೆ. ಈ ಹರಟೆಗಳಿಗಾಗಿ ಪುರಾಣಗಳಿಂದ ಪಾಶ್ಚಾತ್ಯ ಕಾವ್ಯ ನಾಟಕಗಳಿಂದ, ಜನಪದ ಉಕ್ತಿಗಳಿಂದ, ಸಂಶೋಧನಾ ಗ್ರಂಥ, ಸುದ್ಧಿ ಪತ್ರಿಕೆ, ಇತಿಹಾಸ, ಪ್ರಚಲಿತ ವಿದ್ಯಮಾನಗಳು, ಸಂದರ್ಶನಗಳು ಅಂತೂ ಒಂದಲ್ಲ ಒಂದು ಕಡೆಯಿಂದ ಆಧಾರಗಳನ್ನೊದಗಿಸಿ ಹೂವೆತ್ತಿದಷ್ಟು ಹಗುರವಾಗಿ ವಿಷಯವನ್ನು ಮಂಡಿಸುತ್ತಾ ತಮ್ಮೊಂದಿಗೆ ಸಾಗುತ್ತಾರೆ.

ಹಳೆಯದಾದರೂ ಹೊಸದು ಎನ್ನುವ ಪ್ರಬಂಧದಲ್ಲಿ ಈ ರಚನೆಗೆ ಬದ್ಧವಾದ ಅವರ ತಾರ್ಕಿಕ ನಿಲುವು ಪ್ರತಿಪಾದಿತವಾದ ರೀತಿಯನ್ನು ಕಾಣುತ್ತೇವೆ. ಹಳೆದೆಲ್ಲಾ ಚಿನ್ನ ಎನ್ನವ ಹಳಬರಲ್ಲಿ ನಾನು ಒಬ್ಬ ಎಂದು ತಿಳಿಯಬೇಡಿ. ಅಜ್ಜ ನೆಟ್ಟ ಆಲದ ಮರಕ್ಕೆ ಹಳೇ ಹಗ್ಗದಿಂದ ನೇಣು ಹಾಕಿಕೊಳ್ಳುವವನು ನಾನಲ್ಲ ನೇಣು ಹಾಕಿಕೊಳ್ಳಬೇಕಾದರೆ ನಾನು ನನ್ನ ರೂಮಿನ ಸೀಲಿಂಗಿಗೆ ನೈಲಾನ್ ಹಗ್ಗ ಕಟ್ಟಿ ನೇಣು ಹಾಕಿಕೊಂಡೇನು, ನೇಣು ಹಾಕಿಕೊಳ್ಳುವುದಕ್ಕೆ ಆಲದ ಮರಕ್ಕಿಂತ ರೂಮಿನ ಸೀಲಿಂಗ್ಗೇ ಉತ್ತಮ ಪೊಳ್ಳುಬಿದ್ದ ಮರಕ್ಕೆ ನೇಣು ಹಾಕಿಕೊಳ್ಳಲು ಹೊರಟರೆ ಅದರ ಕೊಂಬೆ ಬಿದ್ದು ಮೈಕೈ ಗಾಯವಾದರೆ ಏನು ಗತಿ ಎಂಬ ಭಯವೂ ಇದೆ. ಅಜ್ಜ ನೆಟ್ಟ ಆಲದ ಮರವನ್ನು ಹಾಕಿಬಿಡಬೇಕು ಎನ್ನುವ ಕ್ರಾಂತಿಕಾರಕನ ಹುಮನಸ್ಸು ಅವರಿಗಿಲ್ಲವಂತೆ, ಮರದ ನೆರಳಿನಲ್ಲಿ ಹಾಯಾಗಿ ಒರಗಿ ಸೋಮಾರಿ ಹಗಲು ನಿದ್ದೆ ಮಾಡುವುದಕ್ಕೆ ಪಾ.ವೆಂ. ಅವರಿಗೆ ಇಷ್ಟ. ಹಾಗಾಗಿ ಹಳೇದನ್ನು ಹೇಗೆ ಉಪಯೋಗಿಸಬೇಕು ಅಂತ ತಿಳಿದುಕೊಂಡುವನೇ ಕಡುಜಾಣ ಎನ್ನುತ್ತಾರೆ ಪಾ.ವೆಂ.

ಇದೇ ದೃಷ್ಟಿಕೋನದಲ್ಲಿ ಪ್ರಬಂಧವನ್ನು ಮುಂದುವರೆಸುತ್ತಾ ಹಳೆಯ ಕಾಲದಲ್ಲಿನ ಕಷ್ಟಕಾರ್ಪಣ್ಯಗಳು ಕೂಡ ರಮ್ಯವಾಗಿ ಪಾ.ವೆಂ. ಅವರಿಗೆ ಕಾಣಿಸುತ್ತದೆ. ಸ್ನೇಹಲಾಪ ಎಷ್ಟು ಹಳೆಯದಾದರೂ ಅದು ಹೊಸತೇ. ಆದರೆ ಸಾಲ ಕೇಳುವ ಗೆಳೆಯ ಮಾತ್ರ ಆತಂಕಕಾರಿ ಎಂದು ಎಚ್ಚರಿಸುತ್ತಾರೆ. ಆದರೆ ಹಳೇ ಕಾಲದ ಕಷ್ಟಗಳನ್ನೆಲ್ಲ ಮರೆತು

ಸುಖಗಳನ್ನು ಮಾತ್ರ ಜೋಪಾನವಾಗಿ ಟ್ರೆಜರಿಯಲ್ಲಿ ಯಾಕೆ ಇಟ್ಟುಕೊಳ್ಳುತ್ತೆ ಎನ್ನುವುದು ಪಾ.ವೆಂ. ಅವರಿಗೆ ಅರ್ಥವಾಗದೆ ಇರುವ ಅಂಶವಾಗಿತ್ತು ಎಂದು ಅಭಿಪ್ರಾಯ ಪಡುತ್ತಾರೆ.

ಮುಂದೆ ಇತಿಹಾಸಕಾರರನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ. ಶಾತವಾಹನರ ಕಾಲದ ಮಡಿಕೆಯ ಚೂರುಗಳನ್ನು ಗುರುತಿಸಿದಷ್ಟು ಶೀಘ್ರವಾಗಿ ಅವರು ಹೆಂಡತಿಯನ್ನು ಗುರುತಿಸುತ್ತಾರೋ ಎನ್ನುವ ಅನುಮಾನ ವ್ಯಕ್ತಪಡಿಸುತ್ತಾರೆ.

ಇಂದಿನ ಇತಿಹಾಸ ಸಂಶೋಧಕರು ೧೮೭೪ನೇ ಇಸವಿಯ ಪೇಪರಿನ ಸಂಚಿಕೆ ಸಿಕ್ಕಿದೆ ಎಂದರೆ ಬೇಗನೆ ಎದ್ದು ಅದನ್ನು ಹುಡುಕಲು ಬರುತ್ತಾರೆ. ಇದಕ್ಕೆ ಇಟಲಿಯ ಕೋಟಿಪತಿ ಎಟ್ರಸ್ಕನ್ ಅವಶೇಷಗಳನ್ನು ಅಗೆಯುವುದಕ್ಕೆ ತನ್ನೆಲ್ಲ ಸಂಪತ್ತನ್ನು ಖರ್ಚುಮಾಡಿದ ಸಂದರ್ಭವನ್ನು ನೆನಪಿಸುತ್ತಾರೆ. ಹಳತ್ತು ಎಂದರೆ ಬೆಲೆಬಾಳುವಂಥದ್ದು, ಅಂಚೆ ಚೀಟಿಗಳಿಗೆ, ಹಸ್ತಪ್ರತಿಗಳಿಗೆ ಸಿಕ್ಕ ಹೊಸ ಪ್ರಾಶಸ್ತ್ಯದ ಪ್ರಸ್ತಾಪ ಮಾಡುತ್ತಾರೆ.

ಹಳೆಯ ಮದ್ಯದ ಚರ್ಚೆಯನ್ನು ಇತ್ತಿಕೊಳ್ಳುತ್ತಾರೆ. ಹುಳಿಮಜ್ಜಿಗೆಯ ವಿಷಯಕ್ಕೆ ಬರುತ್ತಾರೆ. ಕೇರಳದಲ್ಲಿ ಹಿಂದೆ ಮುರಜಪ ಎಂಬ ಭಾರಿಯ ವಿದ್ವತ್ಸಭೆಗಳು ಏರ್ಪಾಟಾದಾಗ ಭಾರಿ ಮಣ್ಣಿನ ಗುಡಾಣಗಳಲ್ಲಿ ೪೮ ದಿನಗಳವರೆಗೆ ಭೂಗತವಾಗಿ ಪಳಗಿದ ಹುಳಿ ಮಜ್ಜಿಗೆಯನ್ನು ವಿದ್ವಾಂಸರಿಗೆ ಕುಡಿಯಲು ಹಂಚಲಾಗುತ್ತಿತ್ತಂತೆ. ಅದನ್ನು ಸೇವಿಸಿದ ವಿದ್ವಾಂಸರ ಬುದ್ಧಿ ಕ್ಷೌರದ ಕತ್ತಿಯ ಹಾಗೆ ಹರಿತವಾಗಿರುತ್ತಿತ್ತು ಎನ್ನುತ್ತಾರೆ ಪಾ.ವೆಂ. ಮಜ್ಜಿಗೆ ಪಳದ್ಯ ಭಕ್ತರು ಕರ್ನಾಟಕದಲ್ಲಿಯೂ ಇದ್ದಾರೆ. ಮಹಾಭಾರತ, ರಾಮಾಯಣ ಉಪನಿಷತ್ತುಗಳು ಪ್ರತಿಸಲ ಓದುವಾಗಲೂ ಹೊಸ ಅರ್ಥ ಹೊಳೆಯುತ್ತದೆ. ಮೂಲ ಪ್ರಶ್ನೆಗಳನ್ನು ಅವು ಹೇಗೆ ಕಂಡವೋ ಹಾಗೆ ಇಂದಿಗೂ ನಾವು ಕಾಣುತ್ತೇವೆ.

ಈ ಪ್ರಬಂಧದಲ್ಲಿ ನಾವು ಎಷ್ಟೇ ಹೊಸ ಕಾಲದವರಾದರೂ ಹಳೇಕಾಲದ ಬೇರುಗಳನ್ನು ಕಾಪಾಡುತ್ತೇವೆ. ನಮ್ಮ ಜೊತೆಗೆ ತಾರುಣ್ಯ ಅನುಭವಿಸಿ ನಮ್ಮ ಸಂಗಡವೇ ಮುದಿಯಾದವಳು ಹೆಂಡತಿ ನಮಗೆ ಸದಾ ಹೊಸಬಳೇ ಆಗಿರುತ್ತಾಳೆ ಎಂಬ ನಿಲುವನ್ನು ಸ್ಪಷ್ಟಪಡಿಸುತ್ತಾರೆ.

ಆತ್ಮಸಾಕ್ಷಿಗೆ ಕೈಬಿಡಿ ಎನ್ನುವ ಹರಟೆಯಲ್ಲಿ ಸಂದರ್ಭಕ್ಕನುಗುಣವಾಗಿ ಆತ್ಮಸಾಕ್ಷಿಯನ್ನು ಉಪಯೋಗಿಸುವ ಗಂಭೀರ ಎರಡನ್ನು ಲಘುವಾಗಿ ತೀರಿಸುವುದನ್ನು ಇಲ್ಲಿ ಕಾಣುತ್ತೇವೆ.[೧೨] ಆತ್ಮ ಮತ್ತು ಸಾಕ್ಷಿ ಇವೆರಡು ಸಾಬೂನಿನಷ್ಟು ಪಾರುಪದಾರ್ಥಗಳಾಗಿರುವಾಗ ಆತ್ಮಸಾಕ್ಷಿ ಯೆಂಬುದು ಎಷ್ಟು ನುಣಚಿಕೊಳ್ಳುವ ವಸ್ತು ಎಂದು ಉಪಯೋಗಿಸಿಕೊಳ್ಳಬಹುದು. ಮೋಕ್ಷವಾದ ಮೇಲೆ ಆತ್ಮ ಏನು ಮಾಡುತ್ತದೆ ಎಂಬ ಬಗ್ಗೆ ಬಹಳ ಭಿನ್ನಾಭಿಪ್ರಾಯಗಳಿವೆ. ಸುಖವಾಗಿ ಪೆನ್ಷನ್ ಅನುಭವಿಸುತ್ತಾ ಇರುತ್ತೇವೆಂದು ಹೇಳಲಾಗುತ್ತದೆ. ನಿವೃತ್ತ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ವಿಶೇಷ ಆಯೋಗಗಳ ಅಧ್ಯಕ್ಷರಾಗಿ ಮಾಡಲ್ಪಡುವಂತೆ ಕೆಲವು ಸಲ ಈ ಮುಕ್ತಾತ್ಮಗಳು ಪ್ರಪಂಚಕ್ಕೆ ಕಳಿಸಲ್ಪಡುವುದುಂಟು. ಇವರಿಗೆ ಅವತಾರ ಪುರುಷರು ಎಂದು ಹೆಸರು.

ಪಾ.ವೆಂ. ಅವರ ಈ ಸ್ಥೂಲ ಗುಣಗಳ ವಿಷಯಗಳ ಒಳಗೆ ಇತರ ಸಂದರ್ಭಗಳು, ಉಲ್ಲೇಖಗಳು, ಸನ್ನವೇಶಗಳು ತೆರಪಿಲ್ಲದೆ ತುಂಬುಕೊಂಡಿರುತ್ತದೆ. ಹಾಗೆ ಸಾಗಿದ ನಿರೂಪಣೆಯನ್ನು ಆಲೋಚಿಸುತ್ತಿದ್ದಂತೆ ವಿಷಯವು ನುಣುಚಿಕೊಂಡು ಇನ್ನಾವುದೋ ಕವಲು ದಾರಿಯಲ್ಲಿ ನಮ್ಮನ್ನು ಸಾಗಹಾಕುತ್ತದೆ.

ಪಾ.ವೆಂ. ಅವರು ಕ್ಷುಲ್ಲಕ ವಿಷಯಗಳಿಗೆ ಗಾಂಭೀರ್ಯದ ಲೇಪನ, ಗಂಭೀರ ವಿಷಯವನ್ನು ಹೇಳುತ್ತಾ ಕೆಳಗಿನ ಸ್ತರಕ್ಕೆ ಇಳಿಯುತ್ತಾರೆ. ಪರಿಣಾಮ? ಗಿಡ್ಡ ಗಂಡ, ಎತ್ತರದ ಹೆಂಡತಿ ಈ ಜೋಡಿ ನೋಡಿದರೆ ನಮ್ಮಲ್ಲಿ ಕೌತುಕಮಯವಾದ ನಗೆ ಹೇಗೋ ಹಾಗೆ, ಅವರ ಹರಟೆಗಳನ್ನು ಓದುವಾಗಿ ಹೊರಹೊಮ್ಮುತ್ತದೆ.

ಪಾ.ವೆಂ. ಹರಟೆಗೆ ಏನಾದರೂ ಒಂದು ಘಟನೆ ಸಿಕ್ಕಿದರೆ ಸಾಕು. ಫಿರೋಜ್‌ಖಾನ ಎಂಬ ಪಾಕಿಸ್ತಾನಿಯ ಚಪ್ಪಲಿ ಜನ ಸಂದಣಿಯಲ್ಲಿ ಕಳಚಿ ಕೆಳಗೆ ಬಿತ್ತು. ಅಲ್ಲಿ ಯಾರೋ ಅದನ್ನು ಎತ್ತಿಕೊಟ್ಟರು ಅದನ್ನು ಪಾ.ವೆಂ. ಅವರು ಎತ್ತಿಕೊಂಡರು ಕಳೆದುಹೋದ ಚಪ್ಪಲಿ ಪ್ರಬಂಧದಲ್ಲಿ ಪಾದುಕೆಗಳ ಹರಣ, ಪೆಟ್ಟುಗಳ ಪ್ರಸ್ತಾಪ, ರಾಜಕೀಯ ಇತಿಹಾಸ, ಪುರಾಣ ಪ್ರಸಂಗಗಳನ್ನು ತರುತ್ತಾರೆ. ಸಿನಿಮಾ ನಟಿ, ಸಿನಿಮಾ ಸಂಪಾದಕರಿಗೆ ಹೊಡೆದದ್ದು, ನಾಗಪುರದ ಮೂವರು ನಾರಿಮಣಿಗಳು ಇಬ್ಬರು ಬೀದಿ ಕಾಮಣ್ಣರಿಗೆ ಚಪ್ಪಲಿಯಿಂದ ಥಳಿಸಿದ್ದು, ಈ ರೀತಿಯ ಫವರ್ ಮುಂದುವರೆದು ಪಾದುಕೆಯತ್ತ ತಿರುಗುತ್ತದೆ. ರಾಮನ ಪಾದುಕೆಯನ್ನು ಇಟ್ಟು ೧೪ ವರ್ಷ ಕೋಸಲ ರಾಜ್ಯವನ್ನು ಆಳಿತು. ಗಾಂಧೀಜಿ ಹೊಲಿದುಕೊಟ್ಟ ಚಪ್ಪಲಿಗಳನ್ನು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸ್ಮಟ್ಸ್ ರಾಮಾಯಣದ ಭರತನಂತೆ ಗೌರವದಿಂದ ಕಾಣುವ ಪ್ರಸಂಗಗಳನ್ನು ಇಲ್ಲಿ ಉಲ್ಲೇಖಿಸುತ್ತದೆ. ಪಾ.ವೆಂ. ಅವರ ಯಾವ ಹರಟೆಯನ್ನು ಓದಿದರೂ, ಅದರ ವಿಸ್ತಾರ ವ್ಯಾಸಂಗದ ಹೊಸಕೊಳ್ಳಗಳು ಇದ್ದೇ ಇರುತ್ತದೆ. ಪಾಶ್ಚಾತ್ಯ ವಿದ್ವಾಂಸರ, ವಿಚಾರವೆತ್ತರ ಹೆಸರುಗಳು. ಕವಿವರ್ಯರ ಉಕ್ತಿಗಳು ಪಾ.ವೆಂ. ಅವರ ಬತ್ತಳಿಕೆಯಲ್ಲಿ ತುಂಬಿರುತ್ತಿದ್ದವು. ಬೇಕೆಂದಾಗ ನಿರಾಯಸವಾಗಿ ಸದ್ದಿಲ್ಲದೆ ಹೊರಗೆ ಬರುತ್ತಿದ್ದವು. ಚಂದ್ರಲೋಕಕ್ಕೆ ಹೋಗಬೇಕೆನ್ನುವ ಹರಟೆಯಲ್ಲಿ ಚಂದ್ರಲೋಕದಲ್ಲಿ ಮೈಭಾರ ಕಡಿಮೆಯಾಗಿ ಯಾರು ಜಿಗಿಯಬಹುದು. ಹೈಜಂಪದವರು ಹಾರಬಹುದು ಎಂದು ವಿಜ್ಞಾನಿಗಳು ಹೇಳುತ್ತಾರಲ್ಲ ಆಗ ಪಾ.ವೆಂ. ಕುವೆಂಪುರವರ ಕವನದ ಸಾಲುಗಳನ್ನು ನೆನಪಿಸುತ್ತಾರೆ. ನೀ ಹಾರಬಲ್ಲೆಯ ಬಾನೆತ್ತರಕ್ಕೆ? ಕಡೆಂಗೋಡ್ಲು ಶಂಕರಭಟ್ಟರ 'ಅನುಭವವು ಸವಿಯಲ್ಲ ಅದರ ನೆನಪೇ ಸವಿ' **ಹಳೆದಾದರೂ ಹೊಸತು** ಶೇಕ್ಸಪೀಯರ್ ಪಾ.ವೆಂ. ಅವರಿಗೆ ಬೇಂದ್ರೆ ಕಾಣಿಸಿಕೊಳ್ಳುವ ರೀತಿ ವಿಶಿಷ್ಟವಾದುದು.

ಹರಟೆಗಳಲ್ಲಿ ಎದ್ದು ಕಾಣುವ ಮುಖ್ಯ ಲಕ್ಷಣ ವಿನೋದವಾದುದು ಅದು ಬದುಕಿನ ನೋವಿಗೆ ಇಳಿಬಿಟ್ಟ ನವಿರಾದ ಕಸೂತಿಹಾಕಿದ ನಲವಿನ ಪರದೆ ಎಂಬುದು ಇಲ್ಲಿಯ ಹರಟೆಯ ಬರಹಗಳಲ್ಲಿ ಕಾಣುತ್ತೇವೆ. ಪಾ.ವೆಂ. ಅವರ ಒಂದೊಂದು ಹರಟೆಯೂ

ತನ್ನಷ್ಟಕ್ಕೆ ಪೂರ್ಣ ಸ್ವರೂಪವಿದ್ದು, ಅದನ್ನು ಪೂರ್ಣವಾಗಿ ಓದಿ ಸವಿಯಬೇಕು. ಅದು ಮನಪೂರ್ತಿಯಾಗಿ ನಗುವಂತದ್ದು. ಇಲ್ಲಿಯ ಪ್ರಬಂಧದ ವ್ಯಾಪ್ತಿ, ವಿಸ್ತಾರ, ವಿಷಯ ಇವು ಯಾವುದೇ ನಿರ್ಬಂಧಕ್ಕೆ ಒಳಪಟ್ಟಂತಿಲ್ಲ. ಇಲ್ಲಿ ಚಿಂತನೆ ಮತ್ತು ಯೋಚನಾಲಹರಿಯ ಹರಿಯುವಿಕೆ ನಿರಂತರವಾದಂತಿದೆ. ಇದೊಂದು ಮಾತಿನ ಸಂತೆಯಾಗಿರದೆ ಮೌಲಿಕವಾದ ಬರವಣಿಗೆಯಾಗಿದೆ. ಹಾಸ್ಯದೊಂದಿಗೆ ಜನತೆಯನ್ನು ಜಾಗ್ರತಿಗೊಳಿಸುವ ಉದ್ದೇಶವಿದೆ. ಈ ಹರಟೆ ಸಾಹಿತ್ಯವನ್ನು ಹುರಿಗೊಳಿಸಿದ ಹದಗೊಳಿಸಿದ ಚಂದಗೊಳಿಸಿದ ಅನೇಕ ಮಹನೀಯರಲ್ಲಿ ಪಾ.ವೆಂ. ಅವರ ಹೆಸರು ಮುಂಚೂಣಿಕೆಯಲ್ಲಿ ನಿಲ್ಲುವಂತದ್ದು.

ಹರಟೆಯಲ್ಲಿ ಕೀಟಲೆಯಿರುತ್ತದೆ. ವಿಡಂಬನೆ, ತಿಳಿಹಾಸ್ಯವಿರುತ್ತದೆ. ಆದರೆ ಯಾವುದು ಮನಸ್ಸನ್ನು ಕೆಡಿಸದೆ ಕೆಣಕುವಂತೆ ಮಾಡುತ್ತದೆ. ಅನಿರೀಕ್ಷಿತವಾದ ಹೇಳಿಕೆಗಳಿಂದ, ಯಾವು ಯಾವುದೋ ವಸ್ತುಗಳಿಗೆ ನಾವು ನಿರೀಕ್ಷಿಸಿಯೇ ಇರದ ರೀತಿಯಲ್ಲಿ ಸಂಬಂಧ ಕಲ್ಪಿಸುವುದರಿಂದ ನಲಿವನ್ನು ಸೃಷ್ಟಿಸಿ ಬೆಳೆಸಿ ಮನಸ್ಸು ಪ್ರಸನ್ನವಾಗಿರುವಂತೆ ಮಾಡುವ ಶಕ್ತಿ ಪಾಂ.ವೆಂ. ಹರಟೆಯಲ್ಲಿ ಎದ್ದು ಕಾಣುವ ಅಂಶ.

'ಲಾಂಗೂಲಾಚಾರ್ಯ'ರು ಕೇಳುತ್ತಾರೆ ನಿಂದೆ ಟೀಕೆ ಯಾವುದೇ ಉದ್ಯೋಗವಾದರು ಕಾಲಂತರದಲ್ಲಿ ಬೇಸರತರಬಹುದು. ನಿರುದ್ಯೋಗದಲ್ಲಿ ಎಂದೆಂದು ಬೇಸರವಿಲ್ಲ. ಅದು ಅತ್ಯಂತ ಉತ್ಸಾಹದಾಯಕವಾದ ಟಾನಿಕ್ ಅವರದೇ ಇದೊಂದು ಹರಟೆಯ ಮಾತು. ದೇವರು ಮೂಗನ್ನು ಮಾಡಿದ, ಮನುಷ್ಯ ನಶ್ಯವನ್ನು ಮಾಡಿದ ಸಸ್ಯವನ್ನು ಮನುಷ್ಯ ಸೃಷ್ಟಿಸುವವರೆಗೂ ಮಾಡಿರುವುದು ಉಸಿರಾಡುವುದಕ್ಕೆ ಎಂದು ಭ್ರಮಿಸಿದ್ದೆ. ಹೀಗೆ ಬಗೆ ಬಗೆಯ ಮನೋರಂಜನೆಯ ವಿಚಾರ ಪ್ರಚೋದನೆಯ ಹರಟೆಗಳಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ ಎನ್ನುವ ಪ್ರಭುಶಂಕರರ ಮಾತು ಉಚಿತವಾದುದು.

ಆ) ನಗೆ ಅಥವಾ ವಿಡಂಬನಾ ಸಾಹಿತ್ಯ:

ಹರಟೆಗಿಂತ ತುಸುಭಿನ್ನವಾಗಿ ಮತ್ತು ಲಘುವಾಗಿ ಸಮಯೋಚಿತ ಪ್ರಜ್ಞೆಯಿಂದ ಬರೆದ ಲೇಖನಗಳು ಹರಟೆಯಲ್ಲಿ ವಿಷಯದ ಗಹನತೆ ಮತ್ತು ಬೇರೆ ಬೇರೆ ಮಗ್ಗಲುಗಳ ಕಡೆಗಿನ ಚಿತ್ತಲಹರಿ ಇರುತ್ತದೆ. ನಗೆಲೇಖನ ಸಾಮಾನ್ಯ ವ್ಯವಹಾರದಲ್ಲಿ ಕಾಣುವ ವಿಕ್ಷಿಪ್ತತೆ ಅಥವಾ ವಿಪರ್ಯಾಸದಿಂದ ಕೂಡಿದೆ. ದೈನಂದಿನ ಘಟನೆಗಳ ವಿಚಿತ್ರ ಪ್ರವೃತ್ತಿಗಳು ನಗೆಗೆ ಗುರಿಯಾಗುತ್ತದೆ. ಸಮಯ ಸ್ಥಳದ ಸಂಕುಚಿತತೆ ಪುಟ ಭರ್ತಿಮಾಡುವ ಆತುರದ್ದಾಗಿರುತ್ತದೆ. ಒಂದೇ ಗಂಟೆಯೊಳಗೆ ಬರೆದು ಗೀಚಿ ಕೊಡುವ ತುರ್ತು ಬರಹ. ಒಂದು 'ಶಬ್ದ', ವಿಚಾರ ಅಥವಾ ಪ್ರಚಲಿತ ಸುದ್ದಿಯನ್ನು ಗುದ್ದಿ ನೋಡುವ ತುಂಟತನದಲ್ಲಿ

ಹುಟ್ಟುವ ಬರಹ. ಜಿಟ್ಟು ಆರಂಭ ಅನಿರೀಕ್ಷಿತ ಅಂತೆಯೇ ಮುಕ್ತಾಯ ಕೂಡ, ಇನ್ನು ಬೇಕು ಅನ್ನುವಾಗಲೇ ಮತ್ತೊಂದು ಮಗ್ಗಲಿಗೆ ಹೊರಳುವ ಮೊದಲೇ ಇದು ಮುಗಿದಿರುತ್ತದೆ. ಇದು ಮಧ್ಯಾಹ್ನದ ಮಂಪರು ಜೊಂಪು ನಿದ್ದೆಯಂತೆ.

ಪತ್ರಿಕೋಧ್ಯಮದಲ್ಲಿ ಗದ್ಯೇತಿಹಾಸದಲ್ಲಿ ಪಾ.ವೆಂ. ನಿರ್ದಿಷ್ಟ ಸ್ಥಾನವನ್ನು ಗುರುತಿಸಿಕೊಂಡದ್ದು, ಸಮಾಜದ ಓರೆಕೋರೆಗಳನ್ನು ವಿನೋದಪರವಾಗಿ, ನಿಶ್ಚಿತವಾಗಿ ಗದ್ಯರೂಪದಲ್ಲಿ ಎರಕಹೊಯ್ಯುವುದರ ಮೂಲಕ. ಅವರ ವಿನೋದ ಪರವಾದ ಶೈಲಿಯ ತೇಜಸ್ಸಿನ ಹಿಂದೆ ಅವರ ವಿಚಾರ ಸ್ಪಷ್ಟತೆ ಮತ್ತು ವ್ಯಕ್ತಿತ್ವದ ಪೂರ್ವದ ಮಾರ್ದನ ಅಡಗಿರುವುದನ್ನು ಕಾಣುತ್ತೇವೆ. 'ಹಾಸ್ಯ ಹೆಚ್ಚಿದಷ್ಟು ಆಕ್ರಮಣ ಕಮ್ಮಿ, ರಾಷ್ಟ್ರಗಳು ಹೆಚ್ಚು ನಗಲು ಕಲಿತರೆ ಕಡಿಮೆ ಯುದ್ಧ ಮಾಡಲು ಅಣಿಯಾದವು. ಆದ್ದರಿಂದ ಹೊಗೆ ಬಾಂಬುಗಳ ಬದಲು ನಗೆ ಬಾಂಬುಗಳನ್ನು ತಯಾರಿಸಬೇಕು'. ಇದು ಪಾ.ವೆಂ. ಅವರು ಅಮೇರಿಕಾದ ಅಧ್ಯಕ್ಷ ರೋನಾಲ್ಡ್ ರೇಗನ್‌ರನ್ನು ಕುರಿತು ಹೇಳುವ ಮಾತು. ರಾಷ್ಟ್ರವನ್ನು ಆರೋಗ್ಯವಾಗಿಡುವ ಆಂತರಿಕ ಪ್ರಜ್ಞೆಯನ್ನು ಕಾಣುತ್ತೇವೆ. **ಮನುಷ್ಯ ನಗದಿದ್ದರೆ** ಎನ್ನುವ ನಗೆಲೇಖನದಲ್ಲಿ ಪಾ.ವೆಂ. ಹೇಳುವ ಮಾತಿದು*೧೪ ಹಾಸ್ಯಗಾರನಿಗೆ ಲೋಕದ ಡೊಂಕನ್ನು ನೋಡುವ ತೀಕ್ಷ್ಣಮತಿ ಬೇಕು. ನಗುವವನಿಗೆ ಹಾಸ್ಯ ಪ್ರಜ್ಞೆ ಇರಬೇಕು. ಇದು ಹಾಸ್ಯದ ಬಗ್ಗೆ ಪಾ.ವೆಂ. ಅಭಿಮತ.

ಪುರಾಣಗಳನ್ನು ಆಧುನೀಕರಿಸುವ ಸಮಕಾಲೀನ ಪ್ರಜ್ಞೆ ಪಾ.ವೆಂ. ಅವರ ನಗೆ ಲೇಖನದ ಮುಖ್ಯ ಲಕ್ಷಣ. ಇದು ಭಾಷೆಯ ಶ್ರೀಮಂತಿಕೆಗೂ ಹೆಚ್ಚು ಪರಿಣಾಮಕಾರಿಯಾಗಿದೆ. **ಕರ್ಮವೀರ**ಗಳಲ್ಲಿ ನಿಗದಿತ ಸ್ಥಳಗಳಲ್ಲಿ ಆತುರದಲ್ಲಿ ಲೇಖನಗಳನ್ನು ಬರೆಯಬೇಕಾಗಿದ್ದರಿಂದ ಸಾಂದ್ರತೆ ಎನ್ನುವ ಗುಣವನ್ನು ಇಲ್ಲಿ ಹೆಚ್ಚಾಗಿ ಕಾಣುತ್ತೇವೆ. **ದೇವತಾ ಚಟಗಳು** ಎನ್ನುವ ನಗೆ ಲೇಖನದಲ್ಲಿ ಶಾಸ್ತ್ರಮಂಜರಿ, ವೈದಿಕಶಾಸ್ತ್ರ ಎಲ್ಲ ವ್ಯಾಪಾರಗಳು ಶಾಸ್ತ್ರದ ಅಂಕೆಗೆ ಅಥವಾ ಅಂಕೆಗೆ ತಕ್ಕ ಬಳಸುವ ಹರಟೆಯ ಸೀಳುದಾರಿಯಲ್ಲಿ ಮುಂದುವರಿಯುತ್ತಾ ಬೇರೊಂದು ಸಂಗತಿಗೆ ಸಂಬಂಧ ಕಲ್ಪಿಸಿ ಮತ್ತು ಹಳೆಯದಾರಿಯಲ್ಲಿ ಸಾಗುವುದು, ವಕ್ರದಾರ ಗುಣವೂ ಪಾ.ವೆಂ. ಅವರ ಬರಹದ ವೈಶಿಷ್ಟ್ಯ, ದೇವತಾಚಟ ಪ್ರಬಂಧದಲ್ಲಿ ಗಣಪತಿಯ ತಿಂಡಿಪ್ರಿಯ, ಇಂದ್ರನ ಸೋಮರಸ ಪ್ರಿಯಗುಣ, ದೇವಾದಿದೇವತೆಗಳ ಪ್ರಿಯವಸ್ತು, ನರಲೋಕದ ಮಾನವರಂತೆ ದೇವಲೋಕದಲ್ಲಿಯೂ ಈ ಗುಣ ಇದೆ. ಋಷಿಮುನಿಗಳ ಯಾಗ ಯಜ್ಞ ಇವುಗಳ ಉದ್ದೇಶ ಹೇಗೆ ದೇವಾದಿದೇವತೆಗಳ ಚಟವನ್ನು ತೆರೆದಿಡುತ್ತಾ ವೇದ ಸಂಸ್ಕೃತಿಯ ಸತ್ಯಾಂಶವನ್ನು ಬಯಲಿಗೆಳೆಯುತ್ತಾರೆ. ಭಕ್ತಿಯ ಚಟವೆನ್ನುವ ಮನುಷ್ಯ ಮೌಢ್ಯತೆಯ ಬಗ್ಗೆ ಚರ್ಚಿಸುತ್ತಾರೆ.

ಇದೇ ರೀತಿಯಲ್ಲಿ **ಶಾಸ್ತ್ರಮಂಜರಿ** ಲಘು ಪ್ರಬಂಧದಲ್ಲಿ **ಊಟದ ಶಾಸ್ತ್ರ** ಉಪವಾಸ **ಫಲಹಾರದ** ಬಗೆ ಕ್ರಮಗಳು ಶಾಸ್ತ್ರಗಳ ವಿಷಯದಲ್ಲಿ ಅಣಕವಾಡುತ್ತಾ ದೈನಂದಿನ

ವ್ಯವಹಾರ, ವ್ಯಾಪಾರಗಳಲ್ಲಿ ಹೀಗೆ ಶಾಸ್ತ್ರವನ್ನು ಮಾಡುತ್ತೇವೆ ಎನ್ನುವುದರ ಬಗ್ಗೆ ಸೊಗಸಾಗಿ ವಿಡಂಬಿಸುತ್ತಾರೆ. ಶಾಲೆಯ ಮೇಷ್ಟ್ರು ಹಾಜರಿ ಹಾಕುವ ಶಾಸ್ತ್ರ, ಕಚೇರಿಗೆ ಹೋದ ಶಾಸ್ತ್ರ ಸಂಸತ್ತಿನಲ್ಲಿ ಹಾಜರಿಶಾಸ್ತ್ರ ಹೀಗೆ ಭಾರತದ ಶಾಸ್ತ್ರವ್ಯಾಪ್ತಿ ಪಿ.ಹೆಚ್.ಡಿ. ಪ್ರಬಂಧಕ್ಕೆ ಮೀರಿದ ವಿಷಯವೆಂದು ವಿಡಂಬಿಸುತ್ತಾ ಹಾಸ್ಯದೊಂದಿಗಿನ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾರೆ.

ಪಾ.ವೆಂ. ಆಚಾರ್ಯರ ೫೦೦ಕ್ಕೂ ಹೆಚ್ಚು ವೈವಿಧ್ಯಮಯವಾದ ಹರಟೆಗಳು ಕೃತಿರೂಪದಲ್ಲಿ ನಮಗೆ ಕಾಣಸಿಗುತ್ತದೆ. ಅವುಗಳಲ್ಲಿ ರಾಜಕೀಯ ವ್ಯಕ್ತಿಗಳು, ಚುನಾವಣೆಗಳು, ರಾಜೀನಾಮೆಗಳು ಮಂತ್ರಿಗಳ ಅಡಿಗಲ್ಲು ಸಮಾರಂಭ, ರಾಜಕೀಯ ಪ್ರಚಾರಗಳು, ದಪ್ಪ ಚರ್ಮ, ದೇವರ ಕೆಲಸ ಹೀಗೆ ಹಲವಾರು ರಾಜಕೀಯ ಪ್ರಸಂಗದ ವಿಡಂಬನೆಗಳಿವೆ. ವಿರುದ್ಧವಾಗಿ ಇಲಿ, ನೊಟ, ಸೊಳ್ಳೆಗಳ ಉಪದ್ರವದ ವಿಷಯ ಪ್ರಸ್ತಾಪವಿದೆ. ದಿನನಿತ್ಯದ ವ್ಯವಹಾರಿಕ ಬದುಕಿನಲ್ಲಿ ಕಂಡು ಬರುವ ಬಸ್ ಪ್ರಯಾಣ, ಸ್ನೇಹಿತರು ಸಲಹೆಗಳು, ವ್ಯಾಪಾರ ಗೌಜಿ ಗದ್ದಲಗಳು ಹಾಗೆಯೇ ಸ್ವಯಂ ಚಟಗಳಾದ ಸಿಗರೇಟು ಸೇವನೆ, ನಶ್ಯ ಏರಿಸುವಿಕೆ, ಮಧ್ಯ ಇತ್ಯಾದಿಗಳು ಕೆಮ್ಮು, ದಮ್ಮು, ಅಲರ್ಜಿಗಳು ಇಲ್ಲಿ ಬಂದು ಹೋಗಿವೆ. ನಾರಿಯರು ಪ್ರಮೀಳಾ ರಾಜ್ಯ ಹೆಂಗಸರನ್ನು ಅರ್ಥಮಾಡಿಕೊಳ್ಳುವುದೇಕೆ? ಮದುವೆಯಾದರೆ ಸುಖ ಪಡುವುದು ಹೇಗೆ? ಹೀಗೆ ವ್ಯಕ್ತಿ ಸ್ವಭಾವದ ಸಾಂಸಾರಿಕ ನಿರ್ವಹಣೆಯ ಓರೆಕೋರೆಗಳನ್ನು ಚಿತ್ರಿಸುವುದರೊಂದಿಗೆ, ಕನ್ಯಾಪಹರ, ಸವತಿ ಮತ್ಸರ, ದ್ವಿತೀಯ ವಿವಾಹ ಮೊದಲಾದ ವಿಷಯಗಳು ಇಲ್ಲಿ ನಗೆಗೆ ಗುರಿಯಾಗಿದೆ.

ಸಮಕಾಲೀನ ಜೀವನದ ಆಗು ಹೋಗುಗಳನ್ನು ವಿಶಿಷ್ಟ ಸಮಸ್ಯೆಗಳನ್ನು ಹಾಸ್ಯದ ಲೇಪ, ರೂಪ ಕೊಟ್ಟು ತಮ್ಮ ಬರಹಗಳಲ್ಲಿ ಹೊಮ್ಮಿಸುವುದು ಲಾಂಗೂಲಾಚಾರ್ಯರ ಇನ್ನೊಂದು ಹೆಗ್ಗಳಿಕೆ. ಸಾಮಾನ್ಯ ಜನರ ಭಾವನೆಗಳನ್ನು ಚಿಂತನೆಗಳನ್ನು ಈ ಲೇಖನಗಳು ಸಮರ್ಥವಾಗಿ ಸೆರೆಹಿಡಿಯುತ್ತವೆ. ಉದಾಹರಣೆಗೆ ವಿಧಾನಸೌಧದಲ್ಲಿ ಅಧಿಕಾರಿಗಳ ಕೈ ಬೆಚ್ಚಗಾಗಿಸದೇ ಯಾವ ಕೆಲಸವೂ ನಡೆಯದು ಎಂಬುದು ಎಲ್ಲರಿಗೂ ತಿಳಿದ ಸಾರ್ವತ್ರಿಕ ಸತ್ಯ. ಅದನ್ನು ಹಾಸ್ಯಪೂರ್ಣವಾಗಿ ವರ್ಣಿಸುವ ಲೇಖನ **ದೇವರ ಕೆಲಸ** ಕೆಂಗಲ್ ಹನುಮಂತಯ್ಯನವರು ವಿಧಾನಸೌಧದ ಒಂದು ಸಿಂಹದ್ವಾರದ ಮೇಲೆ **ಸರಕಾರದ ಕೆಲಸ ದೇವರಕೆಲಸ** ಎಂದು ಕೆತ್ತಿಸಿದರಂತೆ. ಅದೇ ಲಾಂಗೂಲರ ಹಾಸ್ಯಕ್ಕೆ ಈಡಾಗುತ್ತದೆ. ಸರಿಯಾಗಿ ದಕ್ಷಿಣೆ ಕೊಡುವ ಭಕ್ತರು ಇಲ್ಲದಿದ್ದರೆ ಪೂಜಾರಿಗಳು ದೇವರಿಗೆ ಒಂದು ತಂಬಿಗೆ ನೀರು ಹೊಯ್ದು, ನೈವೇದ್ಯ ತೋರಿಸಿ, ಆರತಿ ದರ್ಶನ ಮಾಡಿಸಿ ಪೂಜೆ ಮುಗಿಸಿ ಬಿಡುತ್ತಾರಂತೆ. ಅದೇ ಭರ್ಜರಿ **ದಕ್ಷಿಣೆ** ಕೊಡುವ ಭಕ್ತಾದಿಗಳಿದ್ದರೆ ಸಾಂಗವಾಗಿ ಪೂಜೆ ನಡೆಯುತ್ತಂತೆ. ಅದಕ್ಕೂ ದಕ್ಷಿಣೆ ಬೇಕಾಗಿರುವ ವಿಧಾನಸೌಧದ ಕೆಲಸಕ್ಕೂ ಸಾಮ್ಯ ಇರುವುದು ಮನಸ್ಸಿಗೆ ಖಚಿತವಾಗಿಯೇ ಕೆಂಗಲ್ ಹನುಮಂತಯ್ಯ **ಸರಕಾರದ**

ಕೆಲಸ ದೇವರ ಕೆಲಸ ಅಂತ ಶಾಸನ ಕೆತ್ತಿಸಿದರು ಅಂತ ಲಾಂಗೂಲರು ಹೇಳುವುದು! ಮುಂದೆ ನಿಜಲಿಂಗಪ್ಪನವರ ಕಾಲದಲ್ಲಿ ಆ ಶಾಸನವನ್ನು ಅಳಿಸಿ **ಸತ್ಯಮೇವ ಜಯತೆ** ಎಂದು ಕೆತ್ತಿಸಿದರಂತೆ. 'ಬಾಗಿಲಿನ ಶಾಸನವನ್ನೋದಿ ಸತ್ಯಕ್ಕೆ ಜಯವಾಗುತ್ತದೆ ಎಂಬ ಭ್ರಮೆಯಿಂದ ಪ್ರಜೆಗಳು ಒಳಹೊಕ್ಕರೆ ಗತಿಯೇನು? ಅಥವಾ ಜಯ ಹೊಂದಿದ್ದೇ ಸತ್ಯ ಎಂದು ನಾವು ಭಾವಿಸಬೇಕೆ?' ಎಂದು ಪ್ರಶ್ನಿಸುತ್ತಾರೆ ಲಾಂಗೂಲಾಚಾರ್ಯರು.

ಕಬ್ಬಿನಿಂದ ರಸ ಹೊಮ್ಮಿಸಿದಂತೆ ಭಾಷೆಯನ್ನು ಹೇಗೆಂದರೆ ಹಾಗೆ ತಿರುವಿ ಹಾಸ್ಯವನ್ನು ಹೊಮ್ಮಿಸುವ ಲಾಂಗೂಲಾಚಾರ್ಯರ ಸವ್ಯಸಾಚಿತ್ವಕ್ಕೆ ಒಂದು ಉದಾಹರಣೆಯೆಂದರೆ **ರಾಜಕೀಯ ಗುಳಿಗೆಗಳು** ಎನ್ನುವ ಹಾಸ್ಯ ಪ್ರಬಂಧದಲ್ಲಿ **ಅನನುಕರಣೀಯ** ಎಚ್.ವಿ. ಕಾಮತರು ಕಳೆದವಾರ ಸಂಸತ್ತಿನಲ್ಲಿ ಇಂಗ್ಲೀಷ ಭಾಷೆಗೆ **ಚೋರ್ ಪೊರೇಶನ್** ಎಂಬ ಹೊಸ ಶಬ್ದವನ್ನು ಕೊಡಮಾಡಿದರು. ಭಾರತದ ಹಣಕಾಸಿನ ಕಾರ್ಪೋರೇಶನನ್ನು ಚೋರ್ ಪೊರೇಶನ್ ಎನ್ನುವುದೇ ನ್ಯಾಯವೆಂದು ಅವರ ಮತ. ಹಣಕಾಸಿನ ಕಾರ್ಪೊರೇಶನ್ ಮಾತ್ರ ಯಾಕೆ, ಮುನಿಸಿಪಲ್ ಕಾರ್ಪೊರೇಶನ್‌ಗಳೂ **ಚೋರ್ ಪೊರೇಶನ್‌ಗಳೇ** ಅವುಗಳಲ್ಲಿ ಕೆಲವುಗಳ ಸಭೆಗಳನ್ನು ನೋಡಿದರೆ ಅವುಗಳನ್ನು ಶೋರ್ (ಗೊಂದಲ) ಪೊರೇಶನ್‌ಗಳೆಂದೂ ಕರೆಯಬಹುದು. ಹುಬ್ಬಳ್ಳಿ ಮುನಸಿಪಾಲಿಟಿಯು ಒಂದು ಬಗೆಯ ಗೊರ್ (ಗೊರಕೆ ಹೊಡೆಯುವ) ಪೊರೇಶನ್ ಎಂದು ಧಾರಾಳವಾಗಿ ಹೇಳಬಹುದು. ಅದು ಮುನಿಸಿ (ಸರಕಾರವನ್ನು ಸಿಟ್ಟಿಗೆಬ್ಬಿಸಿ) ಪಲ್ಟಿಯಾಗಬಹುದೆಂದು ತೋರುತ್ತದೆ. ಅಂತೂ ಇಂತೂ ರಾಜಕಾರಣಿಯೊಬ್ಬನ ಬಾಯಿಯಿಂದ ಹೊರಬಿದ್ದ ತಪ್ಪು ಉಚ್ಚಾರ ಕಾರ್ಪೊರೇಶನ್ **ಚೋರ್‌ಪೊರೇಶನ್** ಆಗಿ ಲಾಂಗೂಲರ ಪ್ರಹಾರದ ಮುಷ್ಟಿಗೆ ಸಿಕ್ಕಿ ಇಷ್ಟು ನಗೆಗೆ ಕಾರಣವಾಯಿತು. ಅನೇಕ ಭಾರಿ ಗಂಭೀರ ವಿಷಯಗಳನ್ನು, ತಮ್ಮ ತಾತ್ವಿಕ ನಿಲುವುಗಳನ್ನು ಹಾಸ್ಯದ ಮೂಲಕ ಹಗುರವಾಗಿ ತೇಲಿಸಿ ನಮಗೆ ತಲುಪಿಸುತ್ತಾರೆ. ಕುರೂಪದ ಬಗ್ಗೆ ತಮ್ಮ ಧೋರಣೆಯನ್ನು **ಶ್ರೀ ಗಣೇಶಾಯ ನಮಃ** ಪ್ರಬಂಧದಲ್ಲಿ ಸ್ಪಷ್ಟ ಪಡಿಸುತ್ತಾರೆ.

ದೇಹ ಸೌಂದರ್ಯ ವಿಚಾರದಲ್ಲಿ ಗಣಪತಿ ಅಷ್ಟೇನೂ ಆದರ್ಶಪ್ರಾಯನಲ್ಲ. ಇದರ ಅರ್ಥವೆಂದರೆ ನಿಮ್ಮ ಜನಪ್ರಿಯತೆಗೆ ನಿಮ್ಮ ಕುರೂಪ ಅಡ್ಡಿ ಬರುವುದಿಲ್ಲ ಎಂದು ಒಂದು ಮಿತಿಯವರೆಗೆ ವಿಕರಾಳ ರೂಪ ನಿಮ್ಮ ಜನಪ್ರಿಯತೆಗೆ ಪೋಷಕವಾಗುತ್ತದೆ. ವಿಶೇಷವಾಗಿ ಕೊಬ್ಬಿದ ಮೈಯಲ್ಲಿ ಉಬ್ಬಿದ ಹೊಟ್ಟೆ ಯಾವಾಗಲು ಜನಪ್ರಿಯತೆಯನ್ನು ಆಕರ್ಷಿಸುತ್ತದೆ. ಗಣಪತಿ ತನ್ನ ರೂಪದ ಬಗ್ಗೆ ಕಿಂಚಿತ್ತಾದರೂ ಅತೃಪ್ತನಾಗಿಲ್ಲ. ಅಲ್ಲೇ ಇದೆ ಅವನ ಜನಪ್ರಿಯತೆಯ ಗುಟ್ಟು. ಕುರೂಪಿಯಾಗಿರುವುದು ಪಾಪವಲ್ಲ. ಕುರೂಪಿಯಾಗಿದ್ದೇನಲ್ಲಾ ಎಂದು ಹಳ ಹಳಿಸುವುದು ಪಾಪ. **ಭಾವಿ ಜಗತ್ತಿನಲ್ಲಿ ಮಹಿಳೆಯರ ಸ್ಥಾನ** ಎಂಬ ಲೇಖನ ಸಂದರ್ಶನರೂಪದಲ್ಲಿವೆ. ಇಲ್ಲಿ ಪಾ.ವೆಂ. ಶಬ್ದಗಳನ್ನು

ದ್ವಂದ್ವಾರ್ಥವನ್ನು ಹಾಸ್ಯಕ್ಕಾಗಿ ಬಳಸುವುದು. ತಮ್ಮ ವೈಜ್ಞಾನಿಕ ಜ್ಞಾನವನ್ನು ಲೇಖನಗಳಲ್ಲಿ ಹಾಸ್ಯಮಯವಾಗಿ ತರುವುದನ್ನು ಕಾಣುತ್ತೇವೆ.

ಪ್ರಶ್ನೆ (ಸಂದರ್ಶಕನಿಂದ): ದೇಶೋದ್ಧಾರದಲ್ಲಿ ಹೆಂಗಸರಿಗೆ ಪಾತ್ರ ದೊರೆಯ ಬೇಕೆಂಬ ಬಗ್ಗೆ ನಿಮ್ಮ ಅಭಿಪ್ರಾಯವೇನು, ಲಾಂಗೂಲಾಚಾರ್ಯರೆ?

ಲಾಂಗೂಲ: ದೇಶೋದ್ಧಾರ ಮಾತ್ರವಲ್ಲ, ಮನೆ ಉದ್ಧಾರ, ಊರಿನ ಉದ್ಧಾರ, ಲೋಕೋದ್ಧಾರ ಎಲ್ಲದರಲ್ಲಿಯೂ ಹೆಂಗಸರಿಗೆ ಪ್ರಧಾನ ಪಾತ್ರ ಇರಬೇಕೆಂದು ನಾನು ಹೇಳುತ್ತೇನೆ. ಮನೆಯಲ್ಲಿ ನಾನಾ ತರಹದ ಪಾತ್ರೆಗಳನ್ನು ತೊಳೆದು ಜಳಜಳ ಇಡುವ ಸಾವಿರಾರು ವರ್ಷಗಳ ಅನುಭವ ಹೆಂಗಸರಿಗೆ ಇರುವುದರಿಂದ ಉದ್ಧಾರದ ಪಾತ್ರಗಳು ಅವರಿಗೆ ಸಿಗಬೇಕಾದದ್ದು ಸ್ವಾಭಾವಿಕ. **ಪಾತ್ರೆ** ಪದದ ಎರಡು ಅರ್ಥವನ್ನು ಬಳಸಿ ಹಾಸ್ಯ ಚಿಮ್ಮಿದ ರೀತಿ ಸ್ವಾರಸ್ಯಕರವಾಗಿದೆ.

ಮುಂದೆ ಇದೇ ಪ್ರಬಂಧದಲ್ಲಿ ಪಾ.ವೆಂ. ಹೇಳುವ ಮಾತು ಹೆಣ್ಣು ಅಬಲೆಯಲ್ಲವಂತೆ; ಜೀವಶಾಸ್ತ್ರ, ಶರೀರಶಾಸ್ತ್ರ, ಭ್ರೂಣಶಾಸ್ತ್ರ ಎಲ್ಲವೂ ಹೆಣ್ಣಿಗಿಂತ ಸಬಲೆ ಅಂತ ಹೇಳುತ್ತದಂತೆ. ಹುಟ್ಟುವ ಮೊದಲು ಗರ್ಭದಲ್ಲಿ ಸಾಯೋ ಗಂಡು ಪಿಂಡಗಳ ಸಂಖ್ಯೆ ಜಾಸ್ತಿ, ಹೆಣ್ಣು ಭ್ರೂಣ ಸಾಯೋದು ಕಮ್ಮಿಯಂತೆ ಹುಟ್ಟಿದ ಮೇಲೂ ಗಂಡಿಗೆ ಬರೋ ರೋಗಗಳು ಜಾಸ್ತಿ, ಹೆಣ್ಣಿಗೆ ಕಡಿಮೆಯಂತೆ, ಹಾಗಾಗಿ ಸಬಲೆಯಾದ ಹೆಣ್ಣಿಗೆ ದೇಶೋದ್ಧಾರದ ಕೆಲಸ ಕೊಡಬೇಕಂತೆ ಯಾಕೆಂದರೆ ಅವಳ ಕೋಮಲ ಮೃದು ಹೃದಯದ ಪ್ರೇಮಲ ಭಾವನೆಗಳು ರಾಷ್ಟ್ರಕ್ಕೆ ಹಿತಕಾರಿ ಅಂತಲ್ಲ! ಇಷ್ಟು ದಿನ ಗಂಡು ಕೊಲೆ, ಸುಲಿಗೆ, ಶೋಷಣೆ ಮುಂತಾದ ಥಿಲ್ ಅನುಭವಿಸಿದ್ದಾನೆ. ಈ ಹೆಂಗಸರ ಸರದಿಯಂತೆ! ಈ ಹೀಗೆ ಲಾಂಗೂಲಾಚಾರ್ಯರು ವಿಜ್ಞಾನದ ಎಲ್ಲ ಪುರಾವೆಗಳನ್ನೂ ಒದಗಿಸುತ್ತಾ ಹೆಣ್ಣುಲೋಕದ ಸ್ವಭಾವಗಳನ್ನು ಹೇಳುತ್ತಾ ತಮ್ಮ ವಿಚಿತ್ರವಾದ ಸರಣಿಯನ್ನು ಮಂಡಿಸುತ್ತಾರೆ. ಇವರಿಗೆ ಹೆಂಗಸರಲ್ಲದೆ ಪುರಾಣದ ದೇವತೆಗಳು ಐತಿಹಾಸಿಕ ನಾರಿಮಣಿಗಳು, ರಾಜಕೀಯ ಧುರೀಣರು, ಪ್ರಾಣಿ, ಕ್ರಿಮಿ ಕೀಟಗಳು ಕೂಡಾ ಇವರ ಹಾಸ್ಯಕ್ಕೆ ಒಳಗಾಗಿವೆ. ಜೊತೆಗೆ ಯಾವ ವಸ್ತುವೇ ಆದರೂ ತಮ್ಮ ಅಸಾಮಾನ್ಯ ಸ್ಮರಣ ಶಕ್ತಿಯಿಂದ ಮತ್ತು ಅದಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು, ಆದಾರಗಳನ್ನು ತಂದು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವಲ್ಲಿ ಪಾ.ವೆಂ. ನಿಸ್ಸೀಮರು.

ವಸ್ತುಸ್ಥಿತಿಯೆಂದರೆ ನಮ್ಮ ನಾಗರೀಕತೆಯ ಪ್ರಗತಿಗೆ ಸರಿಯಾಗಿ ನಾವು ನಮ್ಮ ಸಾಮಾಜಿಕ ನಿಲುವುಗಳನ್ನು ಸರಿಪಡಿಸಿಕೊಂಡಿಲ್ಲ. ನಮ್ಮಲ್ಲಿ ನೂರಕ್ಕೆ ತೊಂಬತ್ತು ಜನರ ಮನಸ್ಸಿನಲ್ಲಿ ಸ್ತ್ರೀಯರು ಕೇವಲ ಉಪಭೋಗದ ಸಾಮಾಗ್ರಿಗಳು. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕೂಡ ನಮ್ಮಲ್ಲಿ ಗಂಡು, ಹೆಣ್ಣುಗಳ ಒಡನಾಟ ಕೇವಲ ಸಂತಾನೋತ್ಪಾದನೆಗೆ, ದುಡಿತಕ್ಕೆ ಮಾತ್ರ ಸೀಮಿತವಾಗಿದೆ. ಇಂತಹ ಪ್ರಗತಿಪರ ಚಿಂತನೆ– ಒಬ್ಬ ಸಂಪ್ರದಾಯಸ್ಥ ಬ್ರಾಹ್ಮಣ ಬಡ ಕುಟುಂಬದಲ್ಲಿ ಇಪ್ಪತ್ತನೆಯ ಶತಮಾನದ ಆದಿಯಲ್ಲಿ

ಹುಟ್ಟಿದ ಒಬ್ಬ ವ್ಯಕ್ತಿಯಿಂದ ಉದಾಹರಣೆಗೆ **ಬೀದಿ ಕಾಮಣ್ಣರು, ಅಮ್ಮಾವ್ರ ಗಂಡಾಯಣ, ಬಾವಿಜಗತ್ತಿನಲ್ಲಿ ಮಹಿಳೆಯರ ಸ್ಥಾನ, ಹೆಣ್ಣು ಅಬಲೆಯಲ್ಲವಂತೆ, ಪುರಾಣದೇವತೆಯ ಕಲ್ಪನೆಗಳು** – ಹೀಗೆ ಅನೇಕ ಸ್ತ್ರೀಯರ ಕುರಿತು ನಗೆಲೇಖನದಲ್ಲಿ ಪಾ.ವೆಂ. ಅವರ ಪ್ರಗತಿಪರ ಚಿಂತನೆಯನ್ನು ಕಾಣುತ್ತೇವೆ. ಲಾಂಗೂಲಾಚಾರ್ಯರು ತಮ್ಮನ್ನು ವರ್ಷಾನುಗಟ್ಟಲೆ ಕಾಡಿದ್ದ ಅಸ್ತಮ ಮೂವತ್ತನೆಯ ಹುಟ್ಟಿದ ಹಬ್ಬ ಆಚರಿಸುವ ಸಿದ್ಧತೆಯನ್ನು **ಅಸ್ತ್ಮ ಅರ್ಧಷಷ್ಟಾಬ್ದಿ ನಿಮ್ಮ ಅಲರ್ಜಿಯಾವುದು?** ಎನ್ನುವ ಲೇಖನದಲ್ಲಿ ನೋಡುತ್ತೇವೆ. ಈ ವರ್ಷ ನಾನು ನನ್ನ ಅಸ್ತಮಾ ಅಥವಾ ಗೂರ ಉಬ್ಬಸದ ಅರ್ಧ ಷಷ್ಟಬ್ದಿಯನ್ನು ಆಚರಿಸಲು ನಿರ್ಧರಿಸಿದ್ದೇನೆ. ನನಗೆ ಅಸ್ತ್ಮ ಪ್ರಾರಂಭವಾಗಿ ಈ ನವೆಂಬರಿಗೆ ಸರಿಯಾಗಿ ಮೂವತ್ತು ವರ್ಷಗಳಾಗುತ್ತದೆ. ಈ ಸಂದರ್ಭದಲ್ಲಿ ನಾನು ಮೂವತ್ತು ವರ್ಷಗಳಲ್ಲಿ ನುಂಗಿದ, ಮೂಸಿದ ಮತ್ತು ಚುಚ್ಚಿಸಿಕೊಂಡ ಹೋಮಿಯೋಪಥೆ, ಅಲ್ಲೋಪಥೆ ಮೊದಲಾದ ಪಥೆಗಳ ಸುಮಾರು ೩೭ ಬಗೆಯ ಔಷದಗಳ ಒಂದು ಪ್ರದರ್ಶನವನ್ನು ಏರ್ಪಡಿಸಿಕೊಂಡಿದ್ದೇನೆ ಮತ್ತು ಆಸ್ತಾಕ್ಕೆ ನಾನು ಪ್ರಯೋಗಿಸಬೇಕಾದ ರಾಮಬಾಣೋಪಾಯಗಳಾವುವೆಂಬ ಬಗ್ಗೆ ನನಗೆ ವಿವಿಧ ಮಿತ್ರರಿಂದ ಬಂದ ಉಪದೇಶಗಳ ಸಂಗ್ರಹವನ್ನು ಪ್ರಕಟಿಸಬೇಕೆಂದಿದ್ದೇನೆ. ಈ ಉಪಾಯಗಳು ದೀರ್ಘಶ್ವಾಸ ಬಿಡುವುದರಿಂದ ಬೀಡಿ ಸೇದುವವರೆಗೆ, ಮಂತ್ರ ಹಾಕಿಸಿಕೊಳ್ಳುವುದರಿಂದ ಮೀನು ನುಂಗುವುದರವರೆಗೆ ಬಹುಮುಖವಾಗಿವೆ. ಇದೇ ಸಂದರ್ಭದಲ್ಲಿ ನಾನು ಅಸ್ತ್ಮಾಕ್ಕಾಗಿ ಅರ್ಧರಾತ್ರಿಯಲ್ಲಿ ಕರೆಸಿದ ೨೬ ಡಾಕ್ಟರಿಗೊಂದು ಪಾರ್ಟಿಯನ್ನೂ ಕೊಡಬೇಕೆಂದಿದ್ದೇನೆ. ಇಲ್ಲಿ ೩೫ ವರ್ಷಗಳಲ್ಲಿ ಅಸ್ತ್ಮಾದೊಡನೆ ಬದುಕಿದ ನೋವಿನ ದಿನವನ್ನು ಆತ್ಮ ವಿಡಂಬನಾತ್ಮಕವಾಗಿ ಹೇಳುವ ಶೈಲಿ ಮುಖ್ಯವಾಗಿದೆ. ಟಿ. ಪಿ. ಕೈಲಾಸಂರವರ 'The barvue of hormone obtain veers through shotals of smiles to seas ofteas' **ಕಿರಿಯಾಳದ ನಗೆ ನೀರಿನ ಮೇಲೆ ತಿರುಗುತ ಬಹುವೇಳೆ ಕಣ್ಣೀರಿನ ಕಡಲಿನ ಪಾಲು ಹಾಸ್ಯದ ಹರಿಗೋಲು** (ಅನು: ಜಿ.ಪಿ. ರಾಜರತ್ನಂ) ಎನ್ನುವ ಮಾತಿನಂತೆ ಪಾ.ವೆಂ. ಅವರ ನೋವಿನ ಬದುಕು ಹಾಸ್ಯದ ಹರಿಗೋಲಾಗಿ ಸಾಗುತ್ತಿರುವುದನ್ನು ಕಾಣುತ್ತೇವೆ.

ಇ) **ನಗೆಹನಿಗಳು:**

ಕಸ್ತೂರಿಯ ಕೆಲವು ಪುಟಗಳನ್ನು ತುಂಬಲು ಆಗಾಗ ಕೆಲವು ನಗೆಚಟಾಕಿಗಳನ್ನು ಬರೆಯುತ್ತಿದ್ದರು. ಹೆಚ್ಚಾಗಿ ಇವು ಬೇರೆ ಭಾಷೆಯಲ್ಲಿ ಬರೆದ ಲೇಖನಗಳ ಅನುಕರಣೀಯ ಅಥವಾ ಅನುವಾದದಂತೆ ಕಾಣುತ್ತದೆ.

ಯಾವದೇ ವಿನೋದ ಸಾಹಿತ್ಯದ ಮುಖ್ಯ ಉದ್ದೇಶ ಮನಸ್ಸನ್ನು ಮುದಗೊಳಿಸಿ ನಗೆತರಿಸುವುದು. ನಗು ಒಂದು ರಿಫ್ಲೆಕ್ಸ್ ಕ್ರಿಯೆ. ಬೆಂಕಿತಾಗಿದರೆ ಹೇಗೆ ಕೈ ತಾನೇ ತಾನಾಗಿ ಹಿಂದಕ್ಕೆಳೆಯುವುದೋ ಹಾಗೆಯೇ ಕಚಗುಳಿ ಇಟ್ಟರೆ, ಒಳ್ಳೆಯ ನಗೆ ಹನಿ

ಓದಿದರೆ, ವ್ಯಂಗ ಚಿತ್ರವೊಂದನ್ನು ನೋಡಿದರೆ ತಾನೇ ತಾನಾಗಿ ಹೊರಹೊಮ್ಮುವ ಶಾರೀರಿಕ ಪ್ರಕ್ರಿಯೆ ನಗು.

ಕಸ್ತೂರಿ, ಕರ್ಮವೀರದಲ್ಲಿ ಸ್ಥಳದ ಮಿತಿಗಳಿಂದ ಬರೆಯಬೇಕಾದುದರಿಂದ ಪಾ.ವೆಂ. ಅವರಿಗೆ ಬರಹಕ್ಕೆ ಸಾಂದ್ರತೆಯನ್ನು ಹೇಳುವುದು ಅನಿವಾರ್ಯವಾಗಿತ್ತು. ಹೆಚ್ಚು ಸ್ಥಳವಿರುವ ಕಡೆ ದೀರ್ಘವಾಗಿಯೂ ಬರೆದಿದ್ದಾರೆ. ಈ ನಗೆ ಬರಹಗಳಲ್ಲಿ ಗುರುತಿಸಬಹುದಾದ ಮುಖ್ಯಲಕ್ಷಣವೆಂದರೆ ಇಂಗ್ಲೀಷನಲ್ಲಿ ತಿಣ ಎಂದು ಕರೆಯುವ ವಾಗ್ವಿಲಾಸ ಸಂಕ್ಷೇಪವೇ wit ಜೀವಾಳ. ವಾಕ್ ಚಾತುರ್ಯದಿಂದ ಟೀಕಿಸುವಿಕೆ. ಇಲ್ಲಿ ಸತ್ಯದ ಸ್ವರೂಪವನ್ನು ಬೆತ್ತಲೆಗೊಳಿಸುವುದು. ಕಪಟ, ಡೋಂಗಿ ಆತ್ಮವಂಚನೆಗಳ ವಸ್ತ್ರಧರಿಸಿ ದೊಡ್ಡಸ್ತಿಕೆ ಪ್ರದರ್ಶನ ಮಾಡುವವರ ವರ್ತನೆ, ಹೇಳಿಕೆ ಪ್ರಣಾಳಿಕೆ (ಮೆನಿಫೆಸ್ಟೊ) ಬಹಿರಂಗ ಪೋಷಣೆ ನೀತಿ (ನಿಲುವು) ಧೋರಣೆಗಳ ನೈಜವನ್ನು ಅರ್ಥಿಸುವುದು. ಕೋಣನಿಗೆ ಲತ್ತೆ ಪೆಟ್ಟು, ಜಾಣನಿಗೆ ಮಾತಿನ ಪೆಟ್ಟು, ಪತ್ರಿಕಾ ಮಾಧ್ಯಮ (print media)ದ ಮೂಲಕ ಸಾರ್ವಜನಿಕ ಜೀವನಕ್ಕೆ ತೋರಿಸಬೇಕಾದ್ದು ಅಂತರಂಗದ ಸೌಂಧರ್ಯ ಸತ್ಯ ಮತ್ತು ಕೊಳಕುಗಳನ್ನು ಸಹ, ಥಳಕಿನ ಹಿಂದಿರುವ ಕತ್ತಲೆ (ಅಜ್ಞಾನ, ಬಡತನ)ವನ್ನು ನಿವಾರಿಸುವ ಬೆಳಕಣ್ಣು. ಇದಕ್ಕಾಗಿ ಮಾತು ಮತ್ತು ಗೆರೆ (graph) ಎಂದು ಛಾಯಚಿತ್ರಗಳನ್ನು ಪತ್ರಕರ್ತ ಸಮಯೋಚಿತವಾಗಿ ಬೆಳೆಸುತ್ತಾನೆ. ಮಾತಿನ ಕಲೆ (ಶಬ್ದಕಲೆ) ಯಿಂದ ವಿಡಂಬನದ ಲೇಪ ಬರೆದರೆ, ಚಿತ್ರ ಕಲಾವಿದ cartoon ರೇಖಿಸುತ್ತಾನೆ. ಇಂಗ್ಲೇಡಿನ 'Punch' ಪತ್ರಿಕೆ cartoonಗಳ ಪ್ರಭಾವವನ್ನು ಜಗತ್ತಿಗೇ ತೋರಿಸಿದ ಮೊದಲ ಪತ್ರಿಕೆ. ಭಾರತದಲ್ಲಿ ಶಂಕರನ್ ಅವರು ೧೯೫೦-೬೦ರ ದಶಕದಲ್ಲಿ 'Shankara's Weekly' ಪ್ರಕಟಿಸಿ-ನೆಹರೂ ಆಡಳಿತವನ್ನು ವ್ಯಂಗ್ಯಚಿತ್ರಗಳಿಂದ ವ್ಯಾಖ್ಯಾನಿಸುತ್ತಾರೆ. ಲಿಬರಲ್ ಮನೋಭಾವದ ಜವಾಹರಲಾಲ್ ಅದನ್ನು ನಗುನಗುತ್ತಲೆ ಸ್ವೀಕರಿಸಿ, ಶಂಕರನ್ ಪಿಳ್ಳೆಯವರನ್ನು ಪ್ರೋತ್ಸಾಹಿಸುತ್ತಿದ್ದರು.

ನೆಹರೂ ಸ್ವತಃ ಆತ್ಮ ವಿಶ್ವಾಸವುಳ್ಳ ಜನತಾಂತ್ರಿಕ ರೀತಿ ನೀತಿಯನ್ನ ಅಳವಡಿಸಿಕೊಂಡಿದ್ದ ರಾಜನೀತಿಜ್ಞ (statemen) ಆಗಿದ್ದರು. ಶಂಕರನ್ ಪಿಳ್ಳೆ ಇಂಗ್ಲೀಷ್‌ನಲ್ಲಿ ತರುತ್ತಿದ್ದ ಪತ್ರಿಕೆಗೆ ಪೂರಕವಾಗಿ ಭಾರತೀಯ ಕಲಾವಿದರ ವ್ಯಂಗಚಿತ್ರಗಳೂ ಪ್ರಕಟಿಸಲ್ಪಟ್ಟವು. ಕನ್ನಡದ ಡಾ.ಎಸ್.ಶಿವರಾವ್ (ರಾಶಿ) ಅವರು ೧೯೪೫ರಲ್ಲಿ **ಕೊರವಂಜಿ** ಪತ್ರಿಕೆ ಆರಂಭಿಸಿ ಚಿತ್ರ ಮತ್ತು ಲೇಖನಗಳ ಸಂಕಲನಗಳನ್ನು ಯಥೇಚ್ಛ ಪ್ರಕಟಿಸಿದರು. ಕೊರವಂಜಿಗೆ ವ್ಯಂಗಚಿತ್ರ ಬರೆಯಲಾರಂಬಿಸಿದ ಆರ್.ಕೆ. ಲಕ್ಷ್ಮಣ ಕ್ರಮೇಣ ಮುಂಬಯಿಗೆ ಹೋಗಿ Times of India ಪತ್ರಿಕೆಗೆ ಸೇರಿ 'You said It' ಅಂಕಣ ಚಿತ್ರ ಬರೆದು ಪ್ರಸಿದ್ಧರಾದರು. ಕರ್ನಾಟಕದ ಏಕೈಕ ಇಂಗ್ಲೀಷ್‌ನ ದೈನಿಕ Deccan Herald ಮತ್ತು ಪ್ರಜಾವಾಣಿ (೧೯೪೮)ಗಳಿಗೆ ವ್ಯಂಗಚಿತ್ರ ಬರೆಯಲಾರಂಭಿಸಿದ ರಾಮಮೂರ್ತಿ (R. Murthy) ಮೂರುವರೇ ದಶಕಕಾಲ- Mr. Citizen ಕಾಲಂ ಬರೆದರು. ದಿನ

ದಿನಗಳ ರಾಜಕೀಯ, ಸಾರ್ವಜನಿಕ ಜೀವನದಲ್ಲಿ ಕಾಣಿಸುವ ಕೇಳಿಸುವ ಸತ್ಯಕ್ಕೆ ವಿಪರ್ಯಾಸವೆನಿಸುವ ಸಂಗತಿಗಳ ವಿಡಂಬನ ಚಿತ್ರ (ಹಾವಭಾವ) ಮತ್ತು ಚುಟುಕುಮಾತಿನ ಪ್ರತಿಕ್ರಿಯೆಯಿಂದ ತೀವ್ರ ಬುದ್ಧಿವಂತಿಕೆಯಿಂದ ಪ್ರತಿಕ್ರಿಯೆ ನೀಡುವುದು.

ನಗೆಹನಿ ಅತಿ ಸಂಕ್ಷಿಪ್ತದಲ್ಲಿ ಕ್ಷಿಪ್ರವಾಗಿ ಅಂತೆಯೇ ಚುರುಕಾಗಿ ವ್ಯಂಗ್ಯವಾಗಿ ತಿಳಿಸುವ ಪ್ರತಿಕ್ರಿಯಾತ್ಮಕ ಅಭಿವ್ಯಕ್ತಿ ನಗೆಹನಿ ಅಥವಾ ನಗೆ ಚುಟುಕು. ಇದು ಪಾಶ್ಚಾತ್ಯ ಸಾಹಿತ್ಯದಿಂದ ನಮಗೆ ಬಂದ ಒಂದು ಅಭಿವ್ಯಕ್ತಿ ಪ್ರಕಾರ ಇದು ಬಂದದ್ದು ಪತ್ರಿಕಾ ಸಾಹಿತ್ಯ ಮೂಲಕ. ಇಂಗ್ಲೀಷ್ ಪತ್ರಿಕೆಗಳಲ್ಲಿ ಓದುಗರನ್ನು ಬೌದ್ಧಿಕವಾಗಿ ರಂಜಿಸಲು ವ್ಯಂಗ್ಯ ಚಿತ್ರ (cartoon) ಮತ್ತು ನಗೆ ಹನಿಗಳನ್ನು ಸಂಚಿಕೆಯ ಖಾಲಿಜಾಗದಲ್ಲಿ ತುಂಬುವುದು ಒಂದು ಅನಿವಾರ್ಯ ಪದ್ಧತಿ. ಮುದ್ರಣ ಮಾಧ್ಯಮದ ತಂತ್ರ ಮತ್ತು ರೂಪವನ್ನು ನಾವಿಲ್ಲಿ ಯಥಾವತ್ ಅನುಕರಣೆ ಮಾಡ ತೊಡಗಿದಾಗ ಈ ಅಂಶಗಳು ಇಲ್ಲಿ ಪ್ರಕಟವಾಗ ತೊಡಗಿದವು. ನಗೆಹನಿ ಅಥವಾ cartoon ಪ್ರಕಟಿಸುವವನ ಹಾಸ್ಯ ಪ್ರಜ್ಞೆ ಮತ್ತು ವ್ಯಂಗ್ಯ ದೃಷ್ಟಿ ಎರಡನ್ನು ಒಳಗೊಂಡಿದ್ದನ್ನು ಅಭಿವ್ಯಕ್ತಿಯಲ್ಲಿ ಗುರುತಿಸುತ್ತೇವೆ. ಇಲ್ಲಿ ಚಿತ್ರಕಾರ ಅಥವಾ ಲೇಖಕ ತಾನು ಕಂಡ ಅಥವಾ ತಿಳಿದ ಯಾವುದೋ ವಾಸ್ತಾವಾಂಶವನ್ನು ಗಮನಿಸಿ ಅದಕ್ಕೆ ಪ್ರತಿಕ್ರಿಯೆಯಾಗಿ ಕಲ್ಪಿಸಿ ಬರೆಯುತ್ತಾರೆ.

ನಗೆಯನ್ನು ಉಕ್ಕಿಸುವುದೇ ಉದ್ದೇಶ. ನಗೆ ಒಂದೇ ರೀತಿಯದ್ದು ಇರುವುದಿಲ್ಲ. ನಗುವವರು ಏಕಪ್ರಕಾರದಲ್ಲಿರುವುದಿಲ್ಲ. ನಗೆ ಹುಟ್ಟ ಬೇಕಾದರೆ ನಗಿಸುವವ, ನಗುವವನ ನಡುವೆ ಒಂದು ಸಾಮಾನ್ಯ ತಿಳುವಳಿಕೆಯ ಸಂದರ್ಭ ಇರಬೇಕು. ಈ ಸಂದರ್ಭ ವ್ಯಕ್ತಿಗಳ ಮನಸ್ಥಿತಿ ಸಾಮಾನಿಕ ಕ್ರಿಯೆ ಅಭಿಪ್ರಾಯದ ವ್ಯಕ್ತಿಗೆ ಅಥವಾ ವಿಪರ್ಯಾಸಗಳಿಂದ ಕೂಡಿದ ಪರಿಸ್ಥಿತಿಗಳಿಗೆ ಪ್ರತಿಕ್ರಿಯೆಯಾಗಿ ಬರುವಂತಹದು. ನಗೆಹನಿಯ ವಿಷಯಕ್ಕೆ ಓದುವುದಾದರೆ ಇದು ಬರೆದವನಲ್ಲಿರುವ ಹಾಸ್ಯ ಪ್ರಜ್ಞೆಯ ಅಭಿವ್ಯಕ್ತಿ. ಹೆಚ್ಚಾಗಿ ನಗೆಹನಿಗಳು ಚಿಕ್ಕ ಸಂಭಾಷಣ ರೂಪದಲ್ಲಿರುತ್ತದೆ. ಒಬ್ಬ ವ್ಯಕ್ತಿ ಆಡುವ ಮಾತು ಅಥವಾ ಹೇಳಿ ಕೊಡುವ ಹೇಳಿಕೆ ಅದಕ್ಕೆ ಉತ್ತರವಾಗಿ ಬರುವ ಪ್ರತಿಕ್ರಿಯೆ ಅವರಿಬ್ಬರ ನಡುವಿನ ಸಂದರ್ಭವನ್ನು ಓದುಗರಿಗೆ ತೋರಿಸುತ್ತದೆ. ಇಲ್ಲಿ ವಿವರಣೆಗಳಿರುವುದಿಲ್ಲ. ಆ ಮಾತುಗಳದಾಟಿಯಲ್ಲಿಯೇ ಆ ವ್ಯಕ್ತಿಗಳ ಮತ್ತು ಸಂದರ್ಭದ ಅರಿವು ನಮಗಾಗುತ್ತದೆ.

ಅಲ್ಲಿ ಪ್ರಸ್ತಾಪವಾಗುವ ಅಂಶ ಬರೆಯುವವನ ಕಲ್ಪನಾ ಶಕ್ತಿ ಊಹೆಯ ಅಪರಿಮಿತ ಯುಕ್ತಿಗಳಿಂದ ಕೂಡಿರುತ್ತದೆ. ಅನೀರಿಕ್ಷಿತವಾದ ಅಥವಾ ಅವಾಸ್ಥವಿಕವಾದ ಮತ್ತೊಂದು ಕಲ್ಪನೆ ಮಾತಿನಲ್ಲಿ ಗಂಟು ಹಾಕಿಕೊಂಡು ಆ ಸಂದರ್ಭವನ್ನು ನಗೆಗೆ ಈಡುಮಾಡುತ್ತದೆ. ಉದಾಹರಣೆ: 'ರಾತ್ರಿ ಹೊತ್ತು ಮಲಗಿದ ಗಂಡನನ್ನು ಎಬ್ಬಿಸುತ್ತಾ ಏಳ್ರಿ... ಏಳ್ರೀ... ಅಡುಗೆ ಮನೇಲಿ ಕಳ್ಳ ಬಂದಿದ್ದಾನೆ' ಎಂದು ಹೆಂಡತಿ ಹೇಳಿದರೆ, ಗಂಡ: 'ಹೇ... ನಿದ್ರೆ ಕೆಡಿಸಬ್ಯಾಡ ನಾನು ಡ್ಯೂಟಿ ಮೇಲು ಇಲ್ಲ ಯುನಿಫಾರಂನಲ್ಲು ಇಲ್ಲ.. ಎನ್ನುತ್ತಾನೆ'. ಓದುವವನಿಗೆ ಹೊಳೆಯುವ ಸಂಗತಿ ಮಲಗಿದ ಗಂಡನನ್ನು ಎಬ್ಬಿಸಿದವಳು ಪೋಲಿಸನ

ಹೆಂಡತಿ ಎಂಬುದು ಎರಡನೇ ಮಾತಿನಿಂದ ವ್ಯಕ್ತವಾಗುತ್ತದೆ. ಆತ ಕೊಡುವ ಉತ್ತರ ಅವನ ಬೇಜಾವಾಬ್ದಾರಿ ನಿಲುವನ್ನು ಮತ್ತು ವ್ಯಕ್ತಿಯ ಬಗ್ಗೆ ಅವನಿಗಿದ್ದ ಆಲಕ್ಷ್ಯವನ್ನು ಅದಕ್ಕಿಂತ ಮುಖ್ಯವಾಗಿ ಅವನಲ್ಲಿರುವ ಆಲಸ್ಯವನ್ನು ಅಯೋಗ್ಯತನವನ್ನು ಬಿಂಬಿಸುತ್ತದೆ.

೧. **ಗಿರಾಕಿ:** ಏನಯ್ಯ, ಇವತ್ತು ಮಾಡಿದ ಇಡ್ಲಿ ಉಂಟೋ?

ಮಾಣಿ: ಇವತ್ತಿನದೇಕೆ ಸ್ವಾಮಿ ನಾಳೇದು ರೆಡಿ ಉಂಟು. (ಕಸ್ತೂರಿ ಅ. ೧೯೭೨ ಪು.೮೬)

ಇಲ್ಲಿ ಓದುಗರಿಗೆ ಅರ್ಥವಾಗುವ ಸೂಕ್ಷ್ಮತೆ ಅವಶ್ಯಕತೆ ಮತ್ತು ಆಹಾರದ ಕಾಳಜಿಯಾದರೆ ಮಾಣಿಯ ಉತ್ತರದಿಂದ ಹೋಟೆಲಿನ ಅಪಕ್ವ ಆಹಾರದ ಚಿತ್ರಣ ಎಂಥವರಿಗೂ ನಗು ತರಿಸುವಂತದ್ದು.

೨. **ಡಾಕ್ಟರ್ ಮಗಳು:** ನೀರಿನ ಉಪಯೋಗದ ಬಗ್ಗೆ ಲೇಖನ ಬರೆದಿದ್ದಕ್ಕೆ ನನಗೆ ಎರಡನೇ ಬಹುಮಾನ ಕೊಟ್ಟರು. 'ಮೊದಲನೆಯ ಬಹುಮಾನ ಯಾರಿಗೆ?' 'ಹಾಲು ಮಾರುವ ಗೌಳಿಗನ ಮಗನಿಗೆ'

ಉಪಯೋಗಕ್ಕಿಂತಲೂ ನೀರನ್ನು ಬಳಸುವ ಇಡೀ ವ್ಯವಸ್ಥೆಯನ್ನು ವಿಡಂಬಿಸುವ ಮಿಂಚಿನ ಮಾತುಗಳನ್ನು ಇಲ್ಲಿ ಕಾಣುತ್ತೇವೆ. (ಕ.ಆ.೧೯೭೨ ಪು.೮೬)

ಅಪ್ಪ ಮಗನ ಸಂಭಾಷಣೆಯಲ್ಲಿ ಇದೊಂದು ನಗೆ ನುಡಿ;

೩. **ಅಪ್ಪ:** ವಿಟಮಿನ್-ಸಿ ಯಾವ ಯಾವುದರಲ್ಲಿ ಇದೆ ನಿಮಗೆ ಗೊತ್ತೆ? ಹೇಳು.

ಮಗ: ನಂಗೆ ಗೊತ್ತು, ರಾಜನ್ ಸ್ಟೋರ್ಸ್, ಗೀತಾ ಮೆಡಿಕಲ್ ಸ್ಟೋರ್ಸ್, ಪ್ರಭಾ ಮೆಡಿಕಲ್ ಹಾಲ್ ಇಲ್ಲೆಲ್ಲಾ ಇದೆ.

೪. **ಒಬ್ಬ:** ಕಮ್ಯುನಿಸ್ಟ್‌ನ ಎಲ್ಲಕ್ಕೂ ಉತ್ತಮ ನಿಯಮವೇನು?

ಮತ್ತೊಬ್ಬ ರಷ್ಯಾದಲ್ಲಿ ಮಳೆಯಾದಾಗ ಹಿಂದುಸ್ಥಾನದಲ್ಲಿ ಛತ್ರಿ ಹಿಡಿದು ನಡೆಯುವುದು. ಇಲ್ಲಿ ರಾಜಕೀಯದ ಅರಾಜಕತೆಯ ಪರಾಕಾಷ್ಟೆಯನ್ನು ಬಿಂಬಿಸುವ ಕಿಡಿನುಡಿಗಳು. ವ್ಯವಸ್ಥೆಗೆ ಅಬದ್ಧವಾಗಿರುವ ಶಿಕ್ಷಣ ವ್ಯವಸ್ಥೆಗಳ ಸ್ಥಿತಿಗತಿಯನ್ನು ನಗೆಮಲ್ಲಿಗೆ ಮಾತಿನಲ್ಲಿ ಕಾಣುತ್ತೇವೆ. ಉದಾಹರಣೆಗೆ

೫. ಉಪಾಧ್ಯಾಯರಿಗೆ ಜರೂರಾದ ಕೆಲಸ ಮಾಡಬೇಕಿತ್ತು. ಆದುದರಿಂದ ಅವರು ತಮ್ಮ ಟೋಪಿ ತೆಗೆದು ಮೇಜಿನ ಮೇಲಿಟ್ಟು ಹೇಳಿದರು. ಮಕ್ಕಳೇ, ನೋಡಿ ಇದು ಟೋಪಿ; ಇದರ ಮೇಲೊಂದು ಚಿಕ್ಕದಾದ ಸುಂದರ ಲೇಖನ ಬರೆಯಿರಿ' ತರಗತಿ ಕೆಲಸದಲ್ಲಿ ತೊಡಗಿ ಬಿಟ್ಟಿತ್ತು ಮತ್ತು ಐದು ನಿಮಿಷ ತರಗತಿಯಲ್ಲಿ ಶಾಂತಿಯಿದ್ದಿತು. ತರಗತಿಯ ಹಿಂದಿನಿಂದ ಧ್ವನಿ ಬಂದಿತು. ಸಾರ್.. 'ಕೊಳಕಿ' ನಲ್ಲಿ 'ಕೊ' ಚಿಕ್ಕದೋ ದೊಡ್ಡದೋ. (ಕ.ಮಾ.೧೯೭೫೦)

೬. ಸಾಹಿತಿಯ ಪತ್ನಿಯೊಬ್ಬಳು ಪತ್ರಿಕೆಯಲ್ಲಿ ಈ ರೀತಿ ಜಾಹೀರಾತು ಕೊಟ್ಟಳು

'ನನ್ನ ಪತಿಯ ೨೦೦ ಪುಸ್ತಕಗಳು ಕೇವಲ ೧೦೦ ರೂಪಾಯಿಗಳಿಗೆ ದೊರೆಯುತ್ತದೆ. ಅಸ್ಥೆಯಿದ್ದವರು ನಂ.೨೪೭೩ಕ್ಕೆ ಫೋನ್ ಮಾಡಿ ವಿಚಾರಿಸಬಹುದು.

ವಿ.ಸೂ.: ಒಂದು ವೇಳೆ ಪೋನಿನಲ್ಲಿ ಗಂಡು ಧ್ವನಿ ಕೇಳಿದರೆ ತಟ್ಟನೆ ಪೋನ್ ಕೆಳಗಿಟ್ಟು ಬಿಡತಕ್ಕದ್ದು, ಸಾಹಿತಿಯೋರ್ವನ ವ್ಯವಸ್ಥೆಗೆ ಬೇಸತ್ತ ಹೆಂಡತಿಯ ಮಾತುಗಳು ಎಂತವರಿಗೂ ನಗೆ ತರಿಸುವಂತದ್ದು.

೭. ಶಬ್ದ ಸಾಗರವನ್ನು ಹುಟ್ಟನ್ನು ಅರಸುತ್ತಾ ನಡೆದ ಪಾ.ವೆಂ. ಅವರಿಗೆ ಪದಗಳಲ್ಲಿಯು ಹಾಸ್ಯವನ್ನು ದರ್ಶಿಸುವ ರೀತಿ ಇಲ್ಲಿದೆ. 'ಮಾತೃಭಾಷೆ ಎಂಬ ಶಬ್ದ ಹೇಗೆ ಹುಟ್ಟಿಕೊಂಡಿತು? ಮತ್ತು ಪಿತೃ ಭಾಷೆ ಎಂಬ ಶಬ್ದ ಏಕೆ ಹುಟ್ಟಲಿಲ್ಲ?'

೮. 'ಏಕೆಂದರೆ ಅವ್ವ ಮಾತಾಡಲಿಕೆ ಪ್ರಾರಂಭಿಸಿದ ಕೂಡಲೆ ಅಪ್ಪ ಮಾತಾಡಬೇಕೆಂದಿದ್ದ ಎಲ್ಲ ಶಬ್ದಗಳು ಗಂಟಲಲ್ಲೇ ಉಳಿದುಹೋಗುವುದರಿಂದ' (ಕ. ಆ. ೧೯೭೩ ಪು.೧೦೪).

೯. ಪತ್ರಿಕೆಯಲ್ಲಿನ ಮುದ್ರಣ ದೋಷಗಳ ಬಗ್ಗೆ ಓದುಗನೊಬ್ಬನಿಂದ ಬಂದ ದೂರಿಗೆ ಸಂಪಾದಕ ಕೊಟ್ಟ ಉತ್ತರ:

'ಮಹನೀಯರೆ, ಈ ಮುದ್ರಣ ದೋಷಗಳು ಪ್ರಮಾದದಿಂದ ಆದವಲ್ಲ ಬುದ್ಧಿ ಪೂರ್ವಕವಾದವುಗಳು. ನಾವು ಪ್ರತಿಯೊಂದು ಅಭಿರುಚಿಯನ್ನು ಪೂರೈಸಲು ಯತ್ನಿಸುತ್ತೇವೆ. ಕೆಲ ಓದುಗರು ತಪ್ಪುಗಳನ್ನೇ ಹುಡುಕುತ್ತಾರೆಂದು ನಾವು ನಿರಾಶೆಗೊಳಿಸಲು ಅಪೇಕ್ಷಿಸುವುದಿಲ್ಲ'.

ಪಾ.ವೆಂ. ಅವರಿಗೆ ಪತ್ರಿಕಾ ಮಾಧ್ಯಮದ ಮೂಲಕ ಸಾರ್ವಜನಿಕ ಜೀವನಕ್ಕೆ ತೋರಿಸಬೇಕಾದದ್ದು ಅಂತರಂಗದೊಳಗಿನ ಸತ್ಯ ಮತ್ತು ಸತ್ತ್ವ ಜೊತೆಗೆ ಮುಖವಾಡದ ಬದುಕಿನ ಹಿಂದಿರುವ ಕೊಳಕುಗಳು, ಥಳಕಿನ ಹಿಂದಿರುವ ಕತ್ತಲೆ (ಆಲಸ್ಯ, ಬಡತನ, ಅಜ್ಞಾನ, ಮೂಢತೆ) ಇದನ್ನು ಪಾ.ವೆಂ. ಅವರು ಸಮಯೋಚಿತವಾಗಿ ತಮ್ಮ ಬುದ್ಧಿವಂತಿಕೆಯಿಂದ ಬಳಸುತ್ತಾರೆ. ಪಾ.ವೆಂ. ಅವರ ವಿಡಂಬನೆ ವಿನೋದಮಯ ಮನೋಧರ್ಮದ ಶಬ್ದಕಲೆ ವ್ಯಂಗ್ಯಾರ್ಥಗಳನ್ನು ಅದರ ಕೃತಿಗಳಾದ **ಲೋಕದ ಡೊಂಕು, ವಕ್ರದೃಷ್ಟಿ, ವಿಪರೀತ, ಪ್ರಹಾರ** ಸಂಗ್ರಹಗಳ ಬರಹಗಳು ಇದಕ್ಕೆ ಪೂರಕವಾಗಿದೆ.

ಹೀಗೆ ಪಾ.ವೆಂ. ಅವರು ಕಸ್ತೂರಿಯಲ್ಲಿ **ನಗೆ ಮಲ್ಲಿಗೆ** ಕಾಲಂನಲ್ಲಿ ಎರಡು ಪುಟದ ಹಾಸ್ಯ ಸಂದರ್ಭಗಳನ್ನು ಬರೆಯುತ್ತಿದ್ದರು. ಕೆಲವೊಮ್ಮೆ ಸಂಗ್ರಹ, ಅನುವಾದ ಅಥವಾ ತಾನೇ ಬರೆದು ಆ ಪುಟವನ್ನು ಭರ್ತಿಮಾಡುತ್ತಿದ್ದರು. ಪ್ರಶ್ನೋತ್ತರದ ರೀತಿಯಲ್ಲಿ ಘಟನೆಗಳನ್ನು ಹೆಣೆಯುತ್ತಿದ್ದರು. ಸಾಮಾಜಿಕ, ರಾಜಕೀಯ, ಜೀವನದ ಯಾವುದೇ ರಂಗದಲ್ಲಿ ಬರುವ ಸನ್ನವೇಶಗಳು ದೋಷಗಳ ಮೇಲೆ ಮಿಂಚಿನಂತೆ ಬೆಳಕು ಚೆಲ್ಲಿ ಮರೆಯಾಗುವುದು. ಈ ನಗೆ ಮಲ್ಲಿಗೆಯ ಸ್ವಭಾವ. ಕಸ್ತೂರಿ, ಕರ್ಮವೀರದಲ್ಲಿ ಅಲ್ಲಲ್ಲಿ ಕಾಣ ಬರುವ ಚತುರೋಕ್ತಿಗಳು ವ್ಯಂಗಚಿತ್ರ ಮಾತುಗಳು ಅಂದಿನ ರಾಜಕೀಯದ

ಮತ್ತು ಜನಜೀವನದ ಅತಿರೇಖಗಳನ್ನು ಗೇಲಿಮಾಡಿ ಬರೆದ ಲೇಖನಗಳು ಜನಪ್ರಿಯವಾಗಿದ್ದವು. ಉದಾಹರಣೆಗೆ 'ದಪ್ಪ ಚರ್ಮದ ರಾಜಕಾರಣಿಗಳಿಗೆ ಇಂಥಾ ತೆಳುವಾದ ಸೂಜಿ ಉಪಯೋಗ ಬೀಳಬಹುದೇ. ಬೇರೆ ಸೂಜಿ ತೆಗೆದು ಕೋ', ಈ ರೀತಿಯ ಮಾತು ಮತ್ತು ಗೆರೆ (graph) ಮತ್ತು ಛಾಯಾಚಿತ್ರಗಳನ್ನು ಪತ್ರಕರ್ತ ಸಮಯೋಚಿವಾಗಿ ಬಳಸುತ್ತಾನೆ. ಇದೊಂದು ಕಲೆ.

ಕನ್ನಡ ಹಾಸ್ಯ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೋಧ್ಯಮಿಗಳು ದೊಡ್ಡ ಪಾತ್ರ ವಹಿಸಿದ್ದಾರೆ. ದಿನಪತ್ರಿಕೆಗಳ, ವಾರಪತ್ರಿಕೆಗಳ ಮತ್ತು ಮಾಸಪತ್ರಿಕೆಗಳ ಅಂಕಣಗಳಲ್ಲಿ ಬರೆಯುತ್ತ ಹಾಸ್ಯದ ಹೊಳೆ ಹರಿಸಿದ್ದಾರೆ. ಟೀ.ಯಸ್.ರಾವ್, ವೈಯನ್ಕೆ ಮತ್ತು ಲಾಂಗೂಲಾಚಾರ್ಯರು ಮೊದಲಿಗರು. ಸತ್ಯ ನ್ಯಾಯ, ಮಾನವೀಯ ನೆಲೆ, ಸಮಾನತೆಯ ಮೌಲ್ಯಗಳು ಯಾವುದೇ ರಾಜಕೀಯ, ಆಧುನಿಕ ಧಾರ್ಮಿಕ ವ್ಯವಸ್ಥೆಯ ನೆಲೆಗಟ್ಟು ಪ್ರಜಾತಾಂತ್ರಿಕ ರಾಜ್ಯ ವ್ಯವಸ್ಥೆಯಲ್ಲಂತೂ ಈ ನೆಲೆಗಟ್ಟಿನ ಮೇಲೆ ಜೀವನ ನಡೆಸುವುದು ಹೇಗೆ? ಆದರೆ 'ರಾಜಕೀಯ' (Politics) ಬುದ್ಧಿ ಅಪ್ರಬುದ್ಧ ನಡೆನುಡಿಗಳೇ ಸ್ವಾತಂತ್ರ್ಯೋತ್ತರ ಜೀವನದಲ್ಲಿ ಹಾಸುಹೊಕ್ಕಿದೆ.

ಅಡಿಟಿಪ್ಪಣಿಗಳು:

*೧ ಪುಟ ೨೦೪, ಲೇ. ಪಾ.ವೆಂ. ಆಚಾರ್ಯ, ಲೋಕದ ಡೊಂಕು.

*೨ ಪುಟ ೪, ಲೇ. ಪಾ.ವೆಂ. ಆಚಾರ್ಯ, ವಕ್ರದೃಷ್ಟಿ.

*೩ ಪುಟ ೫, ಅದೇ ಪುಸ್ತಕ.

*೪ ಪುಟ ೮೭, ಅದೇ ಪುಸ್ತಕ.

*೫ ಪುಟ ೭೦, ಲೇ. ಪಾ.ವೆಂ. ಆಚಾರ್ಯ, ವಿಪರೀತ.

*೬ ಪುಟ ೮೩, ಅದೇ ಪುಸ್ತಕ.

*೭ ಪುಟ ೮೩, ಅದೇ ಪುಸ್ತಕ.

*೮ ಪುಟ ೧೦, ಅದೇ ಪುಸ್ತಕ.

*೯ ಪುಟ ೭೮, ಅದೇ ಪುಸ್ತಕ.

*೧೦ ಪುಟ ೧೦, ಅದೇ ಪುಸ್ತಕ.

*೧೧ ಪುಟ ೧೩, ಅದೇ ಪುಸ್ತಕ.

*೧೨ ಪುಟ ೧೦೦, ಅದೇ ಪುಸ್ತಕ.

*೧೩ ಪುಟ ೧೦೦, ಅದೇ ಪುಸ್ತಕ.

*೧೪ ಪುಟ ೧೦೦, ಅದೇ ಪುಸ್ತಕ.

ಅಧ್ಯಾಯ-೫

ಪಾ.ವೆಂ. ಚಿಂತನ ಸಾಹಿತ್ಯ

೧. ಬ್ರಾಹ್ಮಣರೇನು ಮಾಡಬೇಕು?

ಅ. ಅಲೆಕ್ಸಸ್ ಕೆರಲನ ಆತ್ಮತೇಜಸ್ಸಿನ ಮಾರ್ಗಗಳು (ಬಿಡಿ ಲೇಖನ)

ಆ. ಧಾರ್ಮಿಕ ನೆಲೆ

ಇ. ಬುದ್ಧಿಜೀವಿ ಸಮಾಜ ಮತ್ತು ಸಾಹಿತ್ಯ

ಈ. ವೈಚಾರಿಕ ಮತ್ತು ಶೈಕ್ಷಣಿಕ

ಉ. ವಿದ್ಯಾರ್ಥಿಗಳು ಯೋಚಿಸಬೇಕು

ಊ. ಸಾಮಾಜಿಕ ಬದಲಾವಣೆ ಮತ್ತು ಮನೋವೃತ್ತಿಗಳು

೨. ವ್ಯಕ್ತಿ ಚಿತ್ರಣ

೩. ರಷ್ಯಾದ ರಾಜ್ಯಕ್ರಾಂತಿ

೪. ಸ್ವತಂತ್ರ ಭಾರತ

೫. ಸಂಸ್ಕೃತಿ-ಸಂಸ್ಕಾರ-ಸಂಸ್ಕೃತ

೬. ಮಾನವ ಪ್ರವೃತ್ತಿ ಮತ್ತು ಮೌಲ್ಯಗಳು

೭. ಕಾಮಾರ್ಥಕೋಶದ ಅಂಕಣ ಬರಹಗಳು

೮. ಮಂಜೂಷ

೯. ವ್ಯಕ್ತಿ ಚಿತ್ರ ಪರಿಣಿತ ಪಾ.ವೆಂ.

೧೦. ವಿಜ್ಞಾನ ವಿಸ್ಮಯ

೧೧. ಚಿತ್ರ ವಿಚಿತ್ರ ಜಗತ್ತು

೧೨. ಕಾರಂತರ ಸಾಹಿತ್ಯದಲ್ಲಿ ಜೀವನ ದೃಷ್ಟಿ

೧೩. ಕಾರಂತರ ಸಾಹಿತ್ಯ ದರ್ಶನ

೧೪. ಪಾ.ವೆಂ. ಕಂಡಂತೆ ಶಂಬಾ

ಭೂಮಿಕೆ:

ಪಾ.ವೆಂ. ಆಚಾರ್ಯರು ಸಾಂಪ್ರದಾಯಿಕ ವಿದ್ಯಾಭ್ಯಾಸದಿಂದ ದೂರ ಉಳಿದವರು. ಜಾತಿಯಿಂದ ಬರಬಹುದಾದ ಆಚಾರ್ಯ ವೃತ್ತಿ ಮತ್ತು ಅದನ್ನು ವಿಸ್ತರಿಸುವ ಸಂಸ್ಕೃತ ವಿದ್ಯಾಭ್ಯಾಸವನ್ನು ಅವರು ಕೈಗೊಳ್ಳಲಿಲ್ಲ. ಉಡುಪಿಯಲ್ಲಿ ಇದನ್ನೇ ಕೈಕೊಳ್ಳುವುದಿದ್ದರೆ ಯಾವುದೊಂದು ಮಠಕ್ಕೆ ಶಿಷ್ಯನಾಗಿ, ವೈದಿಕ ಪದ್ಧತಿಯಿಂದ ಸಂಸ್ಕೃತ ಕಲಿಯಬಹುದಾಗಿತ್ತು; ಅದನ್ನು ಅವರು ಮಾಡಲಿಲ್ಲ. ಮೆಟ್ರಿಕ್‌ವರೆಗಿನ ಇಂಗ್ಲಿಷ್ ಶಿಕ್ಷಣ ಕಲಿತ ಪಾ.ವೆಂ. ಇಂಗ್ಲಿಷ್ ಭಾಷೆಯನ್ನು ಕಾವ್ಯ ಮತ್ತು ಸಾಹಿತ್ಯದೊಂದಿಗೆ ಅಭ್ಯಾಸ ಮಾಡಿದರು. ಇಂಗ್ಲಿಷ್ ವಿಶ್ವಜ್ಞಾನಕ್ಕೆ ತೆರೆದ ಕಿಟಕಿ (English is a window to world knowledge) ಎಂಬಂತೆ ಅವರು ರೂಪಿಸಿಕೊಂಡರು. ಸಂಸ್ಕೃತವನ್ನೂ ಅವರು ಅಭ್ಯಾಸ ಮಾಡಿದ್ದು ಹೀಗೆಯೇ. ಲೌಕಿಕ ಜ್ಞಾನ ಮತ್ತು ಸಾಹಿತ್ಯಾನುಭವದ ನೆಲೆಯಿಂದ ಸಂಸ್ಕೃತ ಅವರಿಗೆ ಕೈವಶವಾಯಿತು. ಇವೆರಡನ್ನು ಪಾ.ವೆಂ. ಅವರು ಬೆಳೆಸಿಕೊಂಡು ಇದರಿಂದ ಅವರಲ್ಲಿ ತರ್ಕ ಮಾಡುವ ಮನೋಬಲ ಊಹೆ ಮತ್ತು ಕಲ್ಪನೆ ಮೂಡಿ ಇತಿಹಾಸವನ್ನು ಗ್ರಹಿಸುವಂತೆ ತಿಳುವಳಿಕೆ ಬಂದಿತ್ತು. ಅಂದರೆ ಜ್ಞಾನದ ವಿವಿಧ ಶಿಸ್ತುಗಳನ್ನು ಅಳವಡಿಸಿಕೊಳ್ಳುವಂತಹ ಶಕ್ತಿ ಮತ್ತು ಅದನ್ನು ಅಭಿವ್ಯಕ್ತಿತ್ವಗೊಳಿಸುವಂತಹ ಯುಕ್ತಿ, ಯುಕ್ತ ರೀತಿ ಪಾ.ವೆಂ. ಅವರಿಗೆ ಕೈವಶವಾಯಿತು. ಇದು ಪಾ.ವೆಂ. ಅವರ ಸ್ವಾಧ್ಯಾಯ ಸಾಧನೆ.

ಇದರಿಂದ ಸಾಧ್ಯವಾದ ಪಾ.ವೆಂ. ಬರಹಗಾರಿಕೆ ಸದಾ ಚಲನಶೀಲವಾಗಿ ವರ್ತಿಸುವಂತಾಗಿದೆ. ಅವರ ಚಿಂತನ-ಮಂಥನ ಪ್ರವೃತ್ತಿ ಸ್ಥಳೀಯ ಮತ್ತು ತಾತ್ಕಾಲಿಕ ಸ್ಥಿತಿಗತಿಗಳಿಂದ ಹಿಡಿದು ವಿಶ್ವದ ಮತ್ತು ಸಮಕಾಲೀನ ವಿದ್ಯಮಾನಗಳವರೆಗೆ ಹರಿದಾಡುತ್ತದೆ. ಸಮಸ್ಯೆಯ ಬಗ್ಗೆ ಸಂಪೂರ್ಣವಾದ ಮಾಹಿತಿ, ಹಿನ್ನೆಲೆ ಇತಿಹಾಸದ ಅಂಶಗಳು ಅವರ ಗಮನದಲ್ಲಿರುತ್ತವೆ. ಸಮಸ್ಯೆಯ ಮಗ್ಗಲುಗಳನ್ನು ಹೊರಳಿಸಿ ನೋಡುವ ದೃಷ್ಟಿಯೂ ಅವರಿಗಿರುತ್ತದೆ. ಪರವಿರೋಧದ ಅಂಶಗಳನ್ನು ಚಿಂತನೆಯ ಕ್ರಮದಲ್ಲಿ ಅಳವಡಿಸಿಕೊಂಡು ಅನ್ವಯಿಸುವ ಬುದ್ಧಿಮತ್ತೆಯು ಪಾ.ವೆಂ. ಅವರಿಗೆ ನೆರವಿಗೆ ಬರುತ್ತದೆ. ಇವೆಲ್ಲ ಸಂಪನ್ಮೂಲಗಳು ಕ್ರೋಡಿಕರಣಗೊಂಡು ಅವರಿಗೆ ವಿಷಯದ ಬಗ್ಗೆ ಒಳನೋಟಗಳನ್ನು ನೀಡಲು ಸಾಧ್ಯವಾಗುತ್ತದೆ. ಪಾ.ವೆಂ. ಅವರ ಚಿಂತನೆ, ಮನುಷ್ಯನ ವ್ಯಕ್ತಿಗತ, ಕೌಟುಂಬಿಕ

ಸಾಮಾಜಿಕ ಅಂಶಗಳನ್ನು ಪರಿಶೀಲಿಸುವುದರಿಂದ ಆರಂಭಿಸಿ ಮಾನವನ ಆಸೆ ಆಕಾಂಕ್ಷೆ, ಆದರ್ಶ ಅಥವಾ ಸಾಂಸ್ಕೃತಿಕ ನೆಲೆಯನ್ನು ಸಾಧಿಸುವ ಮಹತ್ವಾಕಾಂಕ್ಷೆಯ ಅಂಶಗಳನ್ನು ಗ್ರಹಿಸಿ ನಿರ್ವಚನಗೊಳಿಸುವಷ್ಟು ವ್ಯಾಪ್ತಿಯನ್ನು ಪಡೆದಿದೆ.

೧. ಬ್ರಾಹ್ಮಣರೇನು ಮಾಡಬೇಕು?:

ಪಾ.ವೆಂ. ಅವರ ವಿಚಾರಚಿಂತನೆಯ ಪ್ರವೃತ್ತಿ ಮೂರು ಕಾಲಖಂಡಗಳಲ್ಲಿ ಹುಟ್ಟಿ ಬೆಳೆದು ಒಂದು ಸ್ವರೂಪವನ್ನು ಪಡೆದುದಕ್ಕೆ ಅವರ ಮರೋಣತ್ತರವಾಗಿ ಪ್ರಕಟವಾದ **ಬ್ರಾಹ್ಮಣರೇನು ಮಾಡಬೇಕು** (೨೦೦೨) ಕೃತಿ ನಮ್ಮೆದುರಿಗಿದೆ. ಅವರ ವಿಚಾರ ಸಾಹಿತ್ಯ ರಚನೆ ೧೯೩೨ ರಿಂದ ೧೯೪೨ರ ವರೆಗಿನ ಉಡುಪಿಯ ವಾಸ್ತವ್ಯದಲ್ಲಿ ನಡೆಯಿತು. ಅಲ್ಲಿ **ಅಂತರಂಗ** ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ೧೯೪೨ರಿಂದ ೧೯೭೪ರ ವರೆಗೆ ಹುಬ್ಬಳ್ಳಿಯ ವಾಸ್ತವ್ಯದಲ್ಲಿದ್ದಾಗ **ಕಸ್ತೂರಿ** ಮತ್ತಿತರ ಪತ್ರಿಕೆಗಳ ಮುಖಾಂತರ ಅವರ ವೈಚಾರಿಕತೆಗೆ ಬೆಳಕು ಸಿಕ್ಕಿತು. ಈ ಕಾಲವೇ ಬಹಳ ಮಹತ್ವದ್ದು ಕಸ್ತೂರಿಯ ಸಂಪಾದಕರಾಗಿ ಅವರು ವಿಚಾರವೇದಿಕೆಗಳನ್ನೇ ಸಂಚಿಕೆಗಳಲ್ಲಿ ಏರ್ಪಡಿಸುತ್ತಿದ್ದರು. ಪ್ರಶ್ನೆ, ಅನುಮಾನಗಳ ಹಾದಿಗುಂಟ ನಡೆದು ಅವರು ಸಮಕಾಲಿನ ವಿದ್ಯಮಾನಗಳನ್ನು ವಿಶ್ಲೇಷಿಸುತ್ತಾ ಓದುಗರೊಂದಿಗೆ ಸಂವಾದ ಮಾಡುತ್ತ ಬೆಳೆದರು. ಅವರಿಗಿಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂವಾದ ಮಾಡುವ ವಿಪುಲ ಅವಕಾಶ ಸಿಕ್ಕಿದವು. ಮೂರನೆಯ ಕಾಲಖಂಡವೆಂದರೆ ೧೯೭೪-೧೯೯೨. ಈ ಕಾಲದಲ್ಲಿ ಅವರು ವೈವಿಧ್ಯಮಯ ರೀತಿಯಲ್ಲಿ ತಮ್ಮ ವಿಚಾರ ವಿಮರ್ಶೆಯ ಲೇಖನಗಳನ್ನು ವಿಪುಲವಾಗಿ ಬರೆದರು ಮತ್ತು ತುಷಾರ, ತರಂಗ, ಸುಗುಣಮಾಲ, ರತಿದರ್ಪಣ ಮತ್ತಿತರ ಪತ್ರಿಕೆಗಳ ಮೂಲಕ ಹೊರಹಾಕಿದರು. ಈ ಮೂರು ಕಾಲ ಖಂಡಗಳ ನಡುವೆಯೂ **ರಷ್ಯಾದ ರಾಜ್ಯ ಕ್ರಾಂತಿ** ಮತ್ತು **ಸ್ವತಂತ್ರ ಭಾರತ** ಎಂಬೆರಡು ಸಮಕಾಲೀನ ರಾಜಕೀಯ ಚರಿತ್ರೆಗಳನ್ನು ರಚಿಸಿದರು. ಇವರ ಸಾಹಿತ್ಯದ ಇತರ ಅಭಿವ್ಯಕ್ತಿಗಳಷ್ಟೇ ವಿಚಾರಸಾಹಿತ್ಯದ ಪ್ರಕಟಣೆ ಪ್ರಭಾವಶಾಲಿಯಾಗಿದೆ.

೨೦೦೨ರಲ್ಲಿ ಡಾ. ಶ್ರೀನಿವಾಸ ಹಾವನೂರರು ಬಿಡಿಬಿಡಿಯಾಗಿದ್ದ ಪಾ.ವೆಂ. ಅವರ ೩೨ ಲೇಖನಗಳನ್ನು ಸಂಪಾದಿಸಿ ಅವರ ವಿಚಾರಸಾಹಿತ್ಯದ ಸ್ವರೂಪಕ್ಕೆ ಒಂದು ಆಕೃತಿಯನ್ನು ಕೊಡಲೆಂಬಂತೆ **ಬ್ರಾಹ್ಮಣರೇನು ಮಾಡಬೇಕು?** ಪುಸ್ತಕವನ್ನು ಪ್ರಕಟಿಸಿದ್ದಾರೆ. ಇಲ್ಲಿಯ ಲೇಖನಗಳ ವಿಷಯ ಮತ್ತು ಸಂದರ್ಭದ ನೆಲೆಯ ಮೇಲೆ ೫ ಭಾಗಗಳಲ್ಲಿ ವಿಂಗಡಿಸಿಕೊಟ್ಟಿದ್ದಾರೆ. ೧.ಬ್ರಾಹ್ಮಣ್ಯ, ೨. ಧಾರ್ಮಿಕ ನೆಲೆ, ೩. ಚಿಂತನಪರ ದೃಷ್ಟಿ, ೪. ವೈಚಾರಿಕತೆ, ೫. ಶೈಕ್ಷಣಿಕ ಚಿಂತನ.

೧. ಬ್ರಾಹ್ಮಣ್ಯ: ಈ ಭಾಗದಲ್ಲಿ ೫ ಪ್ರಬಂಧಗಳಿವೆ. **ಹಿಂದಿಲ್ಲ ಸ್ವಾಮಿ ಮುಂದಿಲ್ಲ** ಹರಟೆಯ ಶೈಲಿಯ ಲಘು ಪ್ರಬಂಧವನ್ನು ಬಿಟ್ಟರೆ, ಉಳಿದ ನಾಲ್ಕು ಚರ್ಚೆ, ಸಂವಾದದ ಶೈಲಿಯಲ್ಲಿವೆ. **ಹಿಂದಿಲ್ಲ ಸ್ವಾಮಿ ಮುಂದಿಲ್ಲ** ಎಂಬುದು ಬ್ರಾಹ್ಮಣರ ಜಾತಿ ಸಮಸ್ಯೆಯನ್ನು

ವಿಡಂಬನೆಯ ದೃಷ್ಟಿಯಿಂದ ನೋಡುವ ಹರಟೆ. ಶಿಕ್ಷಣ ಕ್ಷೇತ್ರದಲ್ಲಿ ಜಾತಿರಾಜಕೀಯ ಎಷ್ಟರಮಟ್ಟಿಗೆ ಫಲಪ್ರದ ಎಂಬ ಪ್ರಶ್ನೆಯನ್ನಿಟ್ಟುಕೊಂಡು ಕೆಲವು ಅನುಭವಗಳ ಮೂಲಕ ಹಗುರವಾಗಿ ಇಲ್ಲಿ ಚರ್ಚೆಮಾಡಿದ್ದಾರೆ. ವ್ಯಕ್ತಿಯ ಪ್ರತಿಭೆ, ಪರಿಶ್ರಮದ ಪ್ರಯತ್ನ ಮತ್ತು ಉದಾರವಾದ ಸೇವಾದೃಷ್ಟಿ ಇವುಗಳು ಜಾತ್ಯತೀತ ಲಕ್ಷಣಗಳು ಎಂಬುದನ್ನು ಮನವರಿಕೆ ಮಾಡಿಕೊಡುವ ಹರಟೆ ಇದು. ಭಾರತದಲ್ಲಿಯ ಬ್ರಾಹ್ಮಣರು ತಮ್ಮ ಮೇಲೆ ಆರೋಪಗೊಳ್ಳುತ್ತಿರುವ ಸಂಗತಿಗಳಿಂದ ದಿಗ್ಮೂಢರಾಗಬೇಕಾಗಿಲ್ಲವೆಂಬ ಕಿವಿಮಾತನ್ನೂ ಪುನರುಚ್ಚರಿಸಿದ್ದಾರೆ. ವಿವೇಚನಾ ರಹಿತವಾದ, ಪೂರ್ವಗ್ರಹಪೀಡಿತವಾದ ದೋಶಾ-ರೋಪಣೆಗಳಿಂದ ಬ್ರಾಹ್ಮಣ ವಿಚಲಿತನಾಗಬೇಕಾಗಿಲ್ಲ. ನಿಜವಾದ ಬ್ರಾಹ್ಮಣ ತನ್ನ ಪ್ರತಿಭೆ, ಪರಿಶ್ರಮ ವೃತ್ತಿಯಿಂದ ಸಮಾಜದಲ್ಲಿ ತಲೆಯೆತ್ತಿ ನಿಲ್ಲಬಲ್ಲ ಎಂಬ ವಿಶ್ವಾಸವನ್ನು ಇಲ್ಲಿ ಪಾ.ವೆಂ. ಸೂಚಿಸಿದ್ದಾರೆ.

ಪ್ರಬಂಧದ ಪ್ರಾರಂಭದಲ್ಲಿ ಪಾ.ವೆಂ. ಅವರು ಬ್ರಾಹ್ಮಣ ಜಾತಿಯ ವಿರುದ್ಧ ೧೯೨೦ರಿಂದಲೂ ಮಹಾರಾಷ್ಟ್ರ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಬ್ರಾಹ್ಮಣೇತರ ರಾಜಕೀಯ ನಾಯಕರು ನಡೆಸುತ್ತಾ ಬಂದ ಆಂದೋಲನವನ್ನು ನೆನಪಿಸಿಕೊಳ್ಳುತ್ತಾರೆ. ಈ ಆಂದೋಲನ ಒಳಗೊಂಡಿದ್ದ ವಿಸಂಗತಿಗಳನ್ನು ಉಲ್ಲೇಖಿಸುತ್ತಾರೆ. ಬ್ರಾಹ್ಮಣೇತರರು ನಡೆಸಿದ ಆಂದೋಲನದಿಂದ ಉಂಟಾದ ಲಾಭಗಳು ಎಲ್ಲರಿಗೂ ಸಮವಾಗಿ ಸಿಗಲಿಲ್ಲ. ಬ್ರಾಹ್ಮಣೇತರರಲ್ಲಿಯೇ ತಾರತಮ್ಯ ಭಾವಗಳಿವೆ. ಅಸಮಾನತೆಯ ಸ್ಥಿತಿಗತಿಗಳಿವೆ. ಅಂದರೆ ಶೋಷಣೆ ರಹಿತ ವ್ಯವಸ್ಥೆಯನ್ನು ಯಾರು ಮಾಡಲೇ ಇಲ್ಲ.

ವಸ್ತು ಸ್ಥಿತಿ ಹೀಗಿದ್ದಾಗ ಎಲ್ಲ ಕಾಲದ ಸಾಮಾಜಿಕ ಶೋಷಣೆಗೆ ಬ್ರಾಹ್ಮಣೇತರರ ಹಿಂದುಳಿಯುವಿಕೆಗೆ ಬುದ್ಧಿವಂತರಾದ ಬ್ರಾಹ್ಮಣ ವರ್ಗವೇ ಕಾರಣ, ಎಂದು ಈಗಿನ ಆಂದೋಲನಕಾರರು ಹುಯಿಲೆಬ್ಬಿಸುತ್ತಾರೆ. ಇದು ಜಾತಿಜಾತಿಯ ನಡುವೆ ವೈಮನಸ್ಸು ಅನುಮಾನ ಬೆಳೆಸುವ ರಾಜಕಾರಣವೇ ಹೊರತು ಯಾವುದೇ ಸಾಮಾಜಿಕ ಮೌಲ್ಯದ ಪ್ರಾಮಾಣಿಕ ಪ್ರಯತ್ನವಲ್ಲ ಇಂತಹ ರಾಜಕಾರಣವನ್ನು ಡಾ.ಬಿ.ಆರ್.ಅಂಬೇಡ್ಕರವರು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾಡಲಿಲ್ಲ ಎಂಬುದು ಗಮನಾರ್ಹ. ಏಕೆಂದರೆ ಭಾರತದಲ್ಲಿಯ ಅಸಮಾನತೆ, ಅಸ್ಪಶ್ಯತೆ ಮುಂತಾದ ಅನಿಷ್ಟಗಳಿಗೆ ಕಾರಣ ಇತಿಹಾಸದ ರಾಜಕಾರಣವೇ ಹೊರತು ಬ್ರಾಹ್ಮಣರಂತಹ ಒಂದು ಜನ ಸಮೂದಾಯ ಕಾರಣವಲ್ಲ ಎಂಬ ವಿಚಾರ ಅವರಿಗೆ ಸ್ಪಷ್ಟವಿತ್ತು. ಡಾ.ಅಂಬೇಡ್ಕರರಲ್ಲಿ ಅಜ್ಞಾನ, ಮತ್ಸರ, ಸೇಡಿನ ಬುದ್ದಿ ಎಂದು ಇರಲಿಲ್ಲ. ಅವರದು ಧೀಮಂತ ವಿಚಾರವಂತಿಕೆ ಮತ್ತು ಸತ್ಯನಿಷ್ಟೆಯ ಪ್ರಾಮಾಣಿಕ ನಡೆನುಡಿ. ಹಾಗೆ ನೋಡಿದರೆ ಅವರಿಗೆ ಎಲ್ಲ ಜಾತಿವರ್ಗಗಳಲ್ಲಿದ್ದ ಬಡವರ ಬಗ್ಗೆ ಶೋಷಿತರ ಬಗ್ಗೆ ಕಾಳಜಿ ಇತ್ತು. ಏಕೆ ಎಂದರೆ ಡಾ.ಅಂಬೇಡ್ಕರ್ ವ್ಯಕ್ತಿತ್ವದಲ್ಲಿ ಕಾಣುವ ಲಕ್ಷಣವೆಂದರೆ **ಜನ್ಮನಾ ಬ್ರಾಹ್ಮಣೊ ಜ್ಞೇಯಃ ಸಂಸ್ಕಾರೋ ದ್ವಿಜ ಉಚ್ಚತೇ ವಿದ್ಯಯಾ ಯಾತಿ ವಿಪ್ರತ್ವಂ ತ್ರಿಬಿಃ ಶ್ರೋತ್ರಿಯಾ ಉಚ್ಚತೇ** (ಜ್ಞಾನಿಯಾದವನು ಜನ್ಮತ

ಬ್ರಾಹ್ಮಣನೇ, ಸಂಸ್ಕಾರದಿಂದ ದ್ವಿಜತ್ವ ಪಡೆದು ಉಚ್ಚನಾಗುತ್ತಾನೆ. ವಿದ್ಯೆಯಿಂದ ವಿಸ್ತೃತ್ವ ಬರುತ್ತದೆ. ಈ ಮೂರು ಸೇರಿದಾಗ ಪುರೋಹಿತನೆನಿಸುತ್ತಾನೆ. ಅವನೇ ಉಚ್ಚಸ್ಥಾನೀಯ). ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆ ಜಾರಿಗೆ ಬಂದ ಮೇಲೆ ಬ್ರಾಹ್ಮಣೇತರು ಎಂದು ಕೊಂಡ ರಾಜಕೀಯ ನಾಯಕರು ಸರಕಾರಗಳಲ್ಲಿ ಅಧಿಕಾರ ಸ್ಥಾನಗಿಟ್ಟಿಸಿ ಮೆರೆಯಬೇಕೆಂದು ಜಾತಿ ರಾಜಕಾರಣದ ಭೂತವನ್ನು ಸೃಷ್ಟಿಸಿ ತಮ್ಮ ಹಿಂದುಳಿಯುವಿಕೆಗೆ ಇತಿಹಾಸ ಕಾಲದಿಂದಲೂ ಬ್ರಾಹ್ಮಣಜಾತಿಯ ಶಕ್ತಿಗಳೇ ಕಾರಣವೆಂದು ಈ ಕಾಲದಲ್ಲೂ ಬ್ರಾಹ್ಮಣ ಪ್ರವೃತ್ತಿ ಒಟ್ಟಾರೆಯಾಗಿ ಶೋಷಕ ಶಕ್ತಿಯಾಗಿ ವರ್ತಿಸುತ್ತಿದೆಯೆಂದು ಆರೋಪಿಸುತ್ತಾ ಹುಟ್ಟಾ ಬ್ರಾಹ್ಮಣರೆಲ್ಲಾ ಪ್ರಗತಿಗೆ ಅಡ್ಡಿಯಾಗಿದ್ದಾರೆಂದು ಅವರಿಗೆ ಯಾವುದೇ ಅವಕಾಶಗಳು ಲಭಿಸದಂತೆ ಹಿಂದೂಡಬೇಕೆಂದು ಪ್ರಚಾರ ನಡೆಸತೊಡಗಿತು. ಇದರಿಂದ ಜಾತಿ ಬ್ರಾಹ್ಮಣ ಸಮೂದಾಯಕ್ಕೆ ಭಾವನಾತ್ಮಕವಾಗಿ ಪೆಟ್ಟು ಬೀಳತೊಡಗಿತು ಮತ್ತು ಅಸ್ತಿತ್ವದ ಭರವಸೆ ಕುಂದತೊಡಗಿತು. ಅಂದರೆ ನಿಂದನೆ ಘೂಷಣೆ ಅಪಾದನೆಗಳ ದಾಳಿಯಿಂದ ಒಂದು ಸಮೂದಾಯದ ನೈತಿಕ ಸ್ಥೈರ್ಯ ಕುಗ್ಗತೊಡಗಿದ್ದು ಪಾ.ವೆಂ. ಅವರ ಭೌದ್ಧಿಕ ನಿಲುವನ್ನು ಅಲುಗಾಡಿಸಿತು.

ಈಗಾಗಲೇ ಬ್ರಾಹ್ಮಣರ ಪಾತ್ರ ರಾಜಕೀಯರಂಗದಲ್ಲಿ ಮಸುಕಾಗಿರುವುದು, ಉದ್ಯೋಗ ವ್ಯವಸ್ಥೆಯಲ್ಲಿ ವಿರಳವಾಗುತ್ತಿರುವುದು ಆರೋಗ್ಯಕರವಾದ ಬೆಳವಣಿಗೆ ಅಲ್ಲ ಎಂಬ ಅಂಶ ಗೋಚರಿಸಿತು. ಬ್ರಾಹ್ಮಣ ವಿರೋಧಿ ಆಂಧೋಲನ ಪ್ರಜಾಪ್ರಭುತ್ವ ವ್ಯವಸ್ಥೆಯ ಬೇರನ್ನು ಸಡಿಲುಗೊಳಿಸುತ್ತಿರುವುದರ ಅನುಭವ ಯಾರಿಗಾದರೂ ಸ್ಪಷ್ಟವಿತ್ತು. ಸ್ವತಂತ್ರ ದೇಶದ ಆರ್ಥಿಕ ಶೈಕ್ಷಣಿಕ ಅಭಿವೃದ್ಧಿ ಆದ್ಯತೆ ನೆಲೆಯಲ್ಲಿ ಆಗಬೇಕಾದ ಸಂದರ್ಭದಲ್ಲಿ ಪ್ರತಿಭೆ ಪ್ರಗತಿಪರತೆ ಮತ್ತು ಕ್ರಿಯಾಶೀಲತೆ ಉಳ್ಳವರನ್ನು ಅವರ ಜಾತಿ ಆಧಾರದ ಮೇಲೆ ದೂರವಿರಿಸುವ, ನಿಷ್ಕ್ರೀಯಗೊಳಿಸುವ ಪ್ರಯತ್ನಗಳು ಕಂಠಕಪ್ರಾಯವೇ ಹೊರತು ಹೊಸ ಸಮಾಜದ ನಿರ್ಮಾಣದ ಗೊತ್ತು ಗುರಿಗಳಾಗಲಾರವು. ಇಂತಹ ಒಂದು ಗೊಂದಲಮಯ ಪರಿಸ್ಥಿತಿಯಲ್ಲಿ ಅಜ್ಞಾನ, ಪೂರ್ವಗ್ರಹ ಮನಸ್ಥಿತಿಗಳನ್ನು ಸರಿಯಾದ ದೃಷ್ಟಿಕೋನದಿಂದ ವಿಶ್ಲೇಷಿಸಿ ಎರಡು ಭಿನ್ನ ಪಕ್ಷಗಳ ನಡುವೆ ಉಂಟಾದ ಬಿರುಕನ್ನು ಸರಿಯಾದ ವೈಚಾರಿಕ ನಿಲುವಿನಿಂದ ತುಂಬಬೇಕು. ಇದಕ್ಕಾಗಿ ಪಾ.ವೆಂ. ಅವರು ಬ್ರಾಹ್ಮಣೇತರರ ವಾದ ಮತ್ತು ರಾಜಕೀಯ ತಂತ್ರಗಳನ್ನು ಪೂರ್ವಪಕ್ಷವಾಗಿ ಇಟ್ಟುಕೊಂಡು ಯೋಚನಾಪರರಾಗುತ್ತಾರೆ.

ಪಾ.ವೆಂ. ಅವರು ರೂಪಿಸಿಕೊಂಡ ಮನೋಧರ್ಮ ಜಾತ್ಯತೀತವೂ ಸಮಾಜವಾದಿ ರೀತಿನೀತಿಯ ನಿಲುವಿನದೂ ಆಗಿದೆ. ಅಂತೆಯೇ ಕಸ್ತೂರಿಯಂತಹ ಜ್ಞಾನವರ್ಧಕ, ಆಧುನಿಕ ಪತ್ರಿಕೆಯನ್ನು ಓದುಗರಿಗೆ ಒದಗಿಸಿ ಲೋಕಶಿಕ್ಷಣ ಪ್ರಸಾರ ಮಾಡುವ ಪ್ರಬುದ್ಧ ಶಿಕ್ಷಕರಾಗಿದ್ದಾರೆ. ಗದ್ದಲ ಮಾಡುವ, ಮಾಡುತ್ತಲೇ ಜಗಳಕ್ಕಿಳಿಯುವ, ಹೊಡೆದಾಟಕ್ಕೂ ತೊಡಗುವ ವಿದ್ಯಾರ್ಥಿಗಳ ಎರಡು ಗುಂಪುಗಳನ್ನು ಒಬ್ಬ ಶಿಕ್ಷಕ ಹೇಗೆ ತಹಬಂಧಿಗೆ

ತರಬಲ್ಲ ಮತ್ತು ಗಲಭೆ ಗೊಂದಲಗಳಿಂದ ಅವರನ್ನು ದೂರಸರಿಸಬಲ್ಲ ಎಂಬುದು ಒಂದು ವೈಚಾರಿಕ, ಸಮಯೋಚಿತ ಸವಾಲು. ಇಲ್ಲಿ ಆಚಾರ್ಯರು ನಿರ್ವಿಕಾರ ವಿವೇಚನೆಯನ್ನು ಬಿಡುತ್ತಾರೆ. ಜಾತಿಯನ್ನೆತ್ತಿ ಅಥವಾ ಇಳಿಸಿ ವಾದ ಮಂಡಿಸುವುದು ಸುಲಭ. ಆದರೆ ನ್ಯಾಯ ಸತ್ಯ ಇಲ್ಲಿ ಸಿಗಲಾರದು. ಅದರಲ್ಲೂ ಜಾತಿ ವ್ಯವಸ್ಥೆಯೇ ಸಮಾಜ ಮತ್ತು ರಾಜಕಾರಣದಲ್ಲಿ ಪ್ರಮುಖವಾಗಿದ್ದಾಗ, ಈ ವ್ಯವಸ್ಥೆಯಿಂದ ಶೋಷಿತರಾಗಿದ್ದೇವೆ ಎಂಬ ಮನಸ್ಥಿತಿ ಸೂಕ್ಷ್ಮವಾಗಿರುವಾಗ ವಾದ ಮಂಡನೆ ಅಥವಾ ಖಂಡನೆ ನಿರ್ವಿಕಾರವಾಗಬೇಕಾದದ್ದು ಅನಿವಾರ್ಯ. ಪಾ.ವೆಂ. ಹುಟ್ಟು ಬ್ರಾಹ್ಮಣರು ಅಂದರೆ ಪ್ರಾಜ್ಞಾತೆ ಅವರ ಸಹಜ ಗುಣ ಮತ್ತು ಲಕ್ಷಣ. ಅವರು ಮನೆಯ ಸಂಸ್ಕಾರದಿಂದ ದ್ವಿಜರು ಆಗಿ ಬೆಳೆದಿದ್ದಾರೆ. ಜೊತೆಗೆ ಪುಸ್ತಕಗಳ ಓದು ವೈಚಾರಿಕ ಬುದ್ಧಿಗಳಿಂದ ವಿಪ್ರರು ಆಗಿದ್ದಾರೆ. ಈಗ ಜಾತಿರಾಜಕಾರಣದ ಹುಯಿಲು ಎದ್ದು ಜಾತಿ ಬ್ರಾಹ್ಮಣರನ್ನು ಪ್ರತ್ಯೇಕಿಸಿ ನೋಡುವ ಆಂದೋಲನಕಾರರನ್ನು ಅವರು ಒಬ್ಬ ಜಾತಿಬ್ರಾಹ್ಮಣನಾಗಿಯೇ ಎದುರಿಸಬೇಕಾಗಿದೆ. ಅಂದರೆ ಯಾವ ನಮೂನೆಯ ಆರೋಪಗಳನ್ನು ಬ್ರಾಹ್ಮಣರ ಮೇಲೆ ಮಾಡುತ್ತಿದ್ದಾರೋ ಅವುಗಳನ್ನು ಇತಿಹಾಸದ ಸಮಕಾಲೀನ ಆಗುಹೋಗುಗಳ ಉದಾಹರಣೆಗಳಿಂದಲೇ ಅಲ್ಲಗಳೆಯುವ ಪ್ರಯತ್ನ ಮಾಡಬೇಕಾಗಿದೆ. ಆಚಾರ್ಯರು ಬ್ರಾಹ್ಮಣನಾಗಿ ತಮ್ಮ ವಾದವನ್ನು ಪ್ರತಿವಾದದಂತೆ ಮಂಡಿಸುತ್ತಾರೆ. ಇಲ್ಲಿ ಅವರು ತಮ್ಮ ಸಮುದಾಯದ ಬ್ರಾಹ್ಮಣರ ಮನೋ ಪರಿವರ್ತನೆಯನ್ನೇ ಗುರಿಯಾಗಿಟ್ಟುಕೊಂಡು ಹೇಳುವುದೇನೆಂದರೆ ಬ್ರಾಹ್ಮಣರು ಇಂದು ಹೊಂದಬೇಕಾದ ಮನೋಧರ್ಮ ಮತ್ತು ನಡೆಸಬೇಕಾದ ಕ್ರಿಯಾಧರ್ಮ ಹೀಗಿರಬೇಕೆಂದು ಮನ ಒಲಿಸುತ್ತಾರೆ.

೧. ಬ್ರಾಹ್ಮಣರು ದುರಭಿಮಾನಿಗಳಾಗಿ ತಮ್ಮನ್ನು ಸಮರ್ಥಿಕೊಳ್ಳಬೇಕಾಗಿಲ್ಲ.

೨. ಬ್ರಾಹ್ಮಣ ಸಮುದಾಯದಲ್ಲಿ ನಂಬಿಕೆ, ಆಚರಣೆಗೆ ಸಂಬಂಧ ಪಟ್ಟಂತೆ ಬೇಧ ಉಪಬೇಧಗಳಿವೆ. ಇವುಗಳಲ್ಲಿ ಎದ್ದು ಕಾಣುವ ಬೇಧಗಳು ತ್ರಿಮತಗಳಲ್ಲಿ ಹಂಚಿಹೋದದ್ದು. ಈ ಮತಬೇಧ ಕೇವಲ ತಾರ್ಕಿಕ ಆದ್ದರಿಂದ ಆಧುನಿಕ ಸಂದರ್ಭದಲ್ಲಿ ನಿಷ್ಫಲ.

೩. ಬ್ರಾಹ್ಮಣರು ಸರಕಾರಿ ನೌಕರಿಗಳ ಮೇಲೆ ಗುರಿ ಇಡುವುದನ್ನು ಕಡಿಮೆಮಾಡಿ ಸ್ವತಂತ್ರ ವ್ಯಾಪಾರ, ಉದ್ಯಮಗಳಲ್ಲಿ ತೊಡಗುವುದು ಆರ್ಥಿಕವಾಗಿ ಸುಸ್ಥಿರ ಇಂತಲ್ಲಿ ಪ್ರತಿಭೆ, ಪರಿಶ್ರಮ ಮತ್ತು ಸದ್ಗುಣ ಸಂಪನ್ನ ನಡತೆಗೆ ಅವಕಾಶ ಇರುತ್ತದೆ.

೪. ಬ್ರಾಹ್ಮಣರ ಸ್ವಭಾವದಲ್ಲಿ ಬೌದ್ಧಿಕತೆ ಪರಂಪರಾಗತವಾಗಿ ನೆಲೆಗೊಂಡಿರುತ್ತದೆ. ಇದನ್ನವರು ಜಾತ್ಯತೀತ ರೀತಿಯಲ್ಲಿ ತಮ್ಮ ಸಮಾಜದ ಅಭ್ಯುದಯಕ್ಕಾಗಿ ವಿನಿಯೋಗಿಸಬೇಕು. ಇದನ್ನು ಮರೆತರೆ ಬ್ರಾಹ್ಮಣ ಕೇವಲ ಒಂದು ಸಂಪ್ರದಾಯವಾಗಿ ನಿಂತ ವ್ಯಕ್ತಿಯನ್ನು ಸಂಕುಚಿತನನ್ನಾಗಿ ಮಾಡಿ ಕ್ರಮೇಣ ಜಾತಿನಿಷ್ಠೆಗೆ ಮಾತ್ರ ನಿಲ್ಲಿಸುತ್ತದೆ. ಸಂಪ್ರದಾಯವನ್ನು (Convention) ಪರಂಪರೆಯಾಗಿ

(Treditions) ಪರಿವರ್ತಿಸುವ ಚಾಕಚಕ್ಯತೆ ಬ್ರಾಹ್ಮಣನಿಗಿದ್ದಾಗ ಅವನೊಂದು ಶಕ್ತಿಯಾಗಬೇಕು.

೫. ಬ್ರಾಹ್ಮಣರು ಸುಲಭವಿದ್ಯೆ ಹೊಗಳಿಕೆ ಪರಿಶ್ರಮಹೀನವಾದ ಪದವಿ ಮತ್ತು ಆರಾಮದಾಯಕ ಜೀವನದ ಪದ್ಧತಿಗಳನ್ನು ಅನುಸರಿಸದೆ ಕಠಿಣ ವಿದ್ಯೆ ಉನ್ನತಾಕಾಂಕ್ಷಿಯ ಪದವಿಗಳಿಕೆಗಾಗಿ ಮುನ್ನುಗ್ಗಬೇಕು. ಅತಿಮುಖ್ಯವೆಂದರೆ ಸರಳ, ಸುಲಭ ಮಿತವ್ಯಯದ ಗೃಹಜೀವನವನ್ನು ರೂಢಿಸಿಕೊಂಡು ಪ್ರಗತಿಶೀಲ ಸಮಾಜಕ್ಕೆ ಮಾದರಿಯಾಗಬೇಕು. ಇವೆಲ್ಲಾ ಇತ್ಯಾತ್ಮಕವಾದ ನಡವಳಿಕೆಗಳೇ ಎಂಬುದನ್ನು ಪಾ.ವೆಂ. ಸ್ಪಷ್ಟಪಡಿಸಿದ್ದಾರೆ. ಇಂತಹ ಬ್ರಾಹ್ಮಣವರ್ಗಯಾರದೇ ಟೀಕೆ ಅವಹೇಳನಕ್ಕೆ ಗುರಿಯಾಗುವ ಅವಕಾಶವೇ ಇಲ್ಲ. ಒಟ್ಟಿನಲ್ಲಿ ಗೊಡ್ಡು ಬ್ರಾಹ್ಮಣ್ಯದಿಂದ ಹೊರಬಂದು ಆಧುನಿಕ ಜಗತ್ತು ನಿರೀಕ್ಷಿಸುವ ಬೌದ್ಧಿಕ ಪ್ರಾವೀಣ್ಯ, ಪ್ರಾಮಾಣಿಕ ನಡೆನುಡಿಗಳು ಬ್ರಾಹ್ಮಣರಿಗೆ ದಾರಿದೀಪವಾಗಬಲ್ಲವು ಇದರಿಂದ ಕೀಳರಿಮೆ ಮೇಲರಿಮೆ ಮುಂತಾದ ಮನೋವೈಪಲ್ಯಗಳು ಇರಲಾರವು. ಪಾ.ವೆಂ. ಅವರ ಈ ಮಾರ್ಗದರ್ಶನ ಒಂದು ಉಪದೇಶವಾಗಿರದೆ ಬ್ರಾಹ್ಮಣರನ್ನು ಆತ್ಮಾವಲೋಕನಕ್ಕೆ ಅಳವಡಿಸುವ ಸೂಚನೆಯಾಗಿದೆ.

ಬ್ರಾಹ್ಮಣರೇನು ಮಾಡಬೇಕು? ಎಂದು ಪಾ.ವೆಂ. ತಮ್ಮನ್ನೇ ಕೇಳಿಕೊಂಡು ತಾವು ಹುಟ್ಟಿದ ಸಮೂದಾಯದ ಜನರೊಂದಿಗೆ ಧ್ವನಿಗೂಡಿ ಮಾಡುವ ಒಂದು ವಿವೇಚನೆ ಇದಾಗಿದೆ. ಆದರೆ ಇದು ಒಂದು ಮಾತೆಂದು ತಿಳಿಯಬೇಕಿಲ್ಲ. ಬ್ರಾಹ್ಮಣ ಸಮೂದಾಯದ ಎಲ್ಲರೂ ತಮ್ಮ ಮೇಲೆ ಇತರರಿಂದ ಆಗುತ್ತಿರುವ ಆಪಾದನೆಗಳ ಬಗ್ಗೆ ಗಂಭೀರವಾಗಿ, ಸಂಯಮದಿಂದ ವಿಶ್ಲೇಷಣೆ ಅಥವಾ ಆತ್ಮಾವಲೋಕನ ಮಾಡಿಕೊಳ್ಳಬೇಕೆಂಬ ಬಹಿರಂಗ ಒತ್ತಾಯ ಪಾ.ವೆಂ. ಅವರದು.

'ಬ್ರಾಹ್ಮಣರೇನು ಮಾಡಬೇಕು?' ಎಂಬ ಶೀರ್ಷಿಕೆಯ ಲೇಖನ ಮೊದಲಸಲ ಹುಬ್ಬಳ್ಳಿಯ ಬ್ರಾಹ್ಮಣ ಸೇವಾಸಂಘದ ಸಂಸ್ಕರಣ ಗ್ರಂಥ **ಬ್ರಹ್ಮತೇಜ**ದಲ್ಲಿ ಪ್ರಕಟವಾಯಿತು. ಇದನ್ನು ಕಸ್ತೂರಿಯ ಸಂಪಾದಕರು **ಕಸ್ತೂರಿ**ಯಲ್ಲಿ ಜುಲೈ ೧೯೮೦ರ ಸಂಚಿಕೆಯಲ್ಲಿ ಮರುಪ್ರಕಟಿಸಿದ್ದಾರೆ. 'ಬ್ರಾಹಣ-ಬ್ರಾಹ್ಮಣೇತರ ಪ್ರಶ್ನೆಯನ್ನು ಪೂರ್ತಿ ನಿರ್ವಿಕಾರ ಮನಸ್ಸಿನಿಂದ ವಿಶ್ಲೇಷಿಸುವಷ್ಟು, ವಿವೇಚಿಸುವಷ್ಟು ತಾಳ್ಮೆಯಾಗಲಿ ಅದಕ್ಕೆ ಅಗತ್ಯವಾದ ಮನಸು-ಹೃದಯುಗಳ ಪಕ್ವತೆಯಾಗಲಿ ವಿರಳ. ಇಲ್ಲಿ ಮಾತ್ರ ಲೇಖಕರು ಎರಡನ್ನು ತೋರಿಸಿದ್ದಾರೆ. ಸಂಖ್ಯಾಮಾನದಿಂದ ಅಲ್ಪ ಸಂಖ್ಯಾಕರೇ ಆದರೂ 'ಮುಂದುವರಿದವರು' ಎಂಬ ಹಣೆ ಪಟ್ಟಿಯನ್ನು ಕಟ್ಟಿಕೊಂಡಿರುವ ಈ ಸಮಾಜದ ಸಮಸ್ಯೆ ವ್ಯಾಪಕ ಪರಿಣಾಮಗಳಿಗೆ ಎಡೆಗೊಡ ಬಹುದಾದ್ದರಿಂದ ವಿಚಾರವಂತ ಓದುಗರ ಅವಗಾಹನೆಗಾಗಿ ಲೇಖನವನ್ನು ಪ್ರಕಟಿಸಲಾಗಿದೆ ಎಂದು ಬರೆಯುತ್ತಾ ಮುಂದಿನ ಸಂಚಿಕೆಗಳಲ್ಲಿ (ಆಗಸ್ಟ ೧೯೮೦, ಸೆಪ್ಟೆಂಬರ್, ಅಕ್ಟೋಬರ್‌ಗಳಲ್ಲಿ ಆಗಸ್ಟ) ಅನೇಕ ವಿಚಾರವಂತರ ವಿಚಾರಗಳಿಗೆ ಕಸ್ತೂರಿಯನ್ನು ವೇದಿಕೆಯನ್ನಾಗಿ ಮಾಡಿಕೊಂಡರು.

ಚಂದ್ರಶೇಖರ ಪಾಟೀಲ, ಜಿ.ಟಿ. ನಾರಾಯಣರಾವ್, ಚಿದಂಬರಾನಂದ, ಎಸ್.ಕೆ. ಜೋಶಿ, ಜಿ. ಯಸ್. ಜಯದೇವ, ಉಡುಪಿ ಅನಂತೇಶರಾವ್, ಶಿವರಾಮ್ ಜೋಶಿ ಹಾಗೂ ಪಿ.ವಿ. ಜೋಶಿ ಇವರೆಲ್ಲರೂ ತಮ್ಮ ದೃಷ್ಟಿಕೋನಗಳನ್ನು ಇವೆರಡೂ ಸಂಚಿಕೆಗಳಲ್ಲಿ ವ್ಯಕ್ತ ಪಡಿಸಿದ್ದಾರೆ. ಇವೆಲ್ಲವೂಗಳನ್ನು ಕ್ರೋಡಿಕರಿಸಿ ಬರೆದ ಉತ್ತರ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಗಿದೆ. ಈ ನಡುವೆ 'ಒಂದು ಪ್ರತಿಕ್ರಿಯೆ' ಎಂಬ ಎರಡು ಪುಟದ ಪತ್ರ ರೂಪದ ಲೇಖನವನ್ನು ಶ್ರೀನಿವಾಸ ಹಾವನೂರರು 'ಬ್ರಾಹ್ಮಣ್ಯ' ಭಾಗದಲ್ಲಿ ಸೇರಿಸಿದ್ದಾರೆ. ಈ ಪತ್ರವನ್ನು ಬರೆದವ ವೆಂಕಪ್ಪ ಲಕ್ಕಪ್ಪ ದೇಶಪಾಂಡೆ, ನಗರ ಹುಬ್ಬಳ್ಳಿ ಎಂದಿದೆ. ಇದನ್ನು ಬರೆದವರು ಆಕಾಲಕ್ಕೆ ಕಸ್ತೂರಿಯ ಸಹ ಸಂಪಾದಕರಾಗಿದ್ದ ಮಾಧವ ಮಹಿಷಿ ಇರಬಹುದೆಂದು ತೋರುತ್ತದೆ. ಅವರು ಈ ಚರ್ಚೆಯಲ್ಲಿ ನೇರವಾಗಿ ಪಾಲುಗೊಳ್ಳದೆ ಚಂದ್ರಶೇಖರ ಪಾಟೀಲರ ಸಂಕ್ರಮಣ ಸಂಚಿಕೆಗೆ ಬರೆದಿರಬಹುದಾದ ಒಂದು ಸ್ಪಷ್ಟೀಕರಣದ ಪತ್ರ ಇದಾಗಿದೆ. ಇಲ್ಲಿ ಚಂಪಾ ಅವರು ಸಂಕ್ರಮಣದಲ್ಲಿ ಬರೆದ ಲೇಖನದಲ್ಲಿ ಬಳಸಿದ **ಪುರೋಹಿತ ವರ್ಗ** ಎಂಬ ಶಬ್ದದ ಕುರಿತು ವಿವೇಚನೆ ಮಾಡಲಾಗಿದೆ. ಪುರೋಹಿತ ಎಂಬುದನ್ನು ಕೇವಲ ಜಾತಿ ಬ್ರಾಹ್ಮಣರನ್ನು ಉದ್ದೇಶಿಸಿ ಹೇಳಲಾಗುತ್ತಿದೆಯೇ? ಆಗಿದ್ದರೆ ಅದು ನ್ಯಾಯವಾದ ದೋಷಣೆಯೇ? ಎಂದು ಚಿಂತಿಸುತ್ತಾ ಕೆಳಜಾತಿಯವರ ಮೇಲೆ ಆಗುವ ಅನ್ಯಾಯ ಶೋಷಣೆ ಮುಂತಾದವುಗಳಿಗೆ ಪುರೋಹಿತ ಎನ್ನಲಾದ ಬ್ರಾಹ್ಮಣರೇ ಕಾರಣರು ಎಂದು ಪ್ರಚಾರ ಆಗುತ್ತಿರುವುದನ್ನು ಈ ಪತ್ರ ಲೇಖಕರು ಅಲ್ಲಗಳೆದಿದ್ದಾರೆ. ಜಾತಿ ದೌರ್ಜನ್ಯಗಳು ವಾಸ್ತವವಾಗಿ ಆಗುತ್ತಿರುವುದು ಪ್ರಬಲವಾದ 'ಸವರ್ಣೀ'ಯರಿಂದ. ಆದರೆ ಆ 'ಸವರ್ಣೀ'ಯರೆಲ್ಲರೂ 'ಬ್ರಾಹ್ಮಣರು' ಅಥವಾ 'ಪುರೋಹಿತರು' ಎಂದು ಕಲ್ಪಿಸಿ ಬ್ರಾಹ್ಮಣವರ್ಗವನ್ನೇ ದೂಷಿಸಲಾಗುತ್ತಿದೆ. ಮಾ.ನಾ. ಮಹಿಷಿಯವರು ಈ ಚರ್ಚೆಯಲ್ಲಿಯ ಗೊಂದಲಗಳನ್ನು ನಿವಾರಿಸಿ ಪದ ಪ್ರಯೋಗದಲ್ಲಿ ಖಚಿತತೆ, ಸ್ಪಷ್ಟತೆ ಇರಬೇಕೆಂದು ಆಶಿಸುತ್ತಾರೆ. ಈ ಆಶಯ ಪಾ.ವೆಂ. ಅವರದು ಆಗಿದೆ ಎಂಬುದು ನಮಗೆ ಮನವರಿಕೆ ಆಗುತ್ತದೆ. ಯಾವುದೇ ವಿಷಯದ ಅಥವಾ ಸಂಗತಿಯ ಕುರಿತು ವಾದ, ಪ್ರತಿವಾದ ಮಂಡಿಸುವಾಗ ಪ್ರಯೋಗವಾಗುವ ಪದಗಳ ಸಾಂದರ್ಭಿಕ ಅರ್ಥ ಖಚಿತವಿದ್ದಾಗ ನ್ಯಾಯಪೂರ್ಣವಾದ ತಿಳುವಳಿಕೆ ಉಭಯತರಲ್ಲೂ ಮೂಡಲು ಸಾಧ್ಯ. ಆದರೆ ಚಂಪಾರಂತಹ ಲೇಖಕರು ವಾದದ ವಿರುದ್ಧ ಹೇಳಿಕೆ ಕೊಡುವಾಗ ಈ ಸೂಕ್ಷ್ಮತೆಗೆ ಗಮನಕೊಡದೆ ಸ್ಥೂಲವಾಗಿ ಪದಪ್ರಯೋಗ ಬಳಸುವುದನ್ನು ಈ ಪತ್ರ ಲೇಖಕರು ಅಲ್ಲಗಳೆದಿದ್ದಾರೆ. ಪಾ.ವೆಂ. ವಾದವಿವಾದದಲ್ಲಿ ಭಾಗವಹಿಸುವಾಗ ಬಳಸುವ ಪದಗಳು ಸೂಕ್ಷ್ಮವೂ ಸಾಂದರ್ಭಿಕವೂ ಆಗಿದ್ದು ವಿವೇಚನೆಯನ್ನು ಆದಷ್ಟು ನಿರ್ವಿಕಾರವಾಗಿ ಮಾಡುವ ರೀತಿಯಲ್ಲಿ ಎಂಬ ಅಂಶ ಈ ಎಲ್ಲವಾದ ವಿವಾದಗಳಿಗೆ ಅಕ್ಟೋಬರ್ ಸಂಚಿಕೆಯಲ್ಲಿ ಅವರು ಕೊಟ್ಟ ಒಂಬತ್ತು ಅಂಶಗಳ ಮೂಲಕ ವಿವರಿಸಿದ್ದಾರೆ.

೧. ಬ್ರಾಹ್ಮಣರ ವರ್ಗದ ಮೇಲೆ ಬರುತ್ತಿರುವ ಮಿಥ್ಯಾರೋಪಗಳನ್ನು ನಿವಾರಿಸುವುದಕ್ಕಾಗಿ ತಾನು ಜಾತ್ಯತೀತ ನೆಲೆಯ ಮೇಲೆ ನಿಂತು ವಿಚಾರಗಳನ್ನು ಮಂಡನೆ ಮಾಡುತ್ತಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

೨. ಬ್ರಾಹ್ಮಣರು ಸರ್ವಗುಣ ಸಂಪನ್ನರೆಂದು ಹೇಳಲಾಗದು ಆದರೆ ಅವರ ದೋಷಗಳು ಜಾತಿವ್ಯವಸ್ಥೆಗೆ ಪೋಷಕವಾಗಿದೆ ಎಂದು ಹೇಳಲಾಗದು.

೩. ಭಾರತದಲ್ಲಿ ಜಾತೀಯತೆ ಮತ್ತು ಅದರಿಂದಾಗುವ ದೋಶಗಳಿಗೆ ಬ್ರಾಹ್ಮಣೇತರ ಜಾತಿ ವರ್ಗಗಳ ಪಾತ್ರಗಳೂ ಇದೆ. ಹಳ್ಳಿಯ ಹರಿಜನ, ಗಿರಿಜನ ವರ್ಗಗಳ ಮೇಲೆ ಈ ವರೆಗೆ ಉಂಟಾದ ದೌರ್ಜನ್ಯಗಳಲ್ಲಿ ಪಾಲುಗೊಂಡವರು ಬ್ರಾಹ್ಮಣೇತರರೇ ಇದ್ದಾರೆಂದು ವರದಿಯಾಗಿದೆ. ಅಂದರೆ ಬ್ರಾಹ್ಮಣವರ್ಗ ಶೋಷಿಕವರ್ಗ, ಶೋಷಣೆಗಳನ್ನು ಬೆಂಬಲಿಸುವ ವರ್ಗ ಎಂದು ಸ್ಥೂಲವಾಗಿ ದೂಷಿಸುವ ಹುಂಬತನವನ್ನು ವಿಚಾರವಂತರು ಮಾಡುವಂತಿಲ್ಲ ಎಂದು ಪಾ.ವೆಂ. ನಮ್ರರಾಗಿ ಹೇಳಿದ್ದಾರೆ.

೪. ಪುರೋಹಿತಶಾಹಿ ಎಂಬುದು ಬ್ರಾಹ್ಮಣವರ್ಗಕ್ಕೆ ಸೀಮಿತವಲ್ಲ. ಎಲ್ಲಾ ಜಾತಿ ಮತಿ ಪಂಥಗಳ ಪೋಷಕರಾದ ಸ್ವಾಮಿಗಳು ಅಥವಾ ಮಠಾಧೀಶರು ತಮಗೆ ಸಿಕ್ಕ ಸ್ಥಾನಮಾನಗಳನ್ನು ವೈಯಕ್ತಿಕ ನೆಲೆಯಲ್ಲಿ ಉಳಿಸಿಕೊಳ್ಳುವುದಕ್ಕಾಗಿ ಭಕ್ತಾದಿ ಜನರ ಮೇಲೆ ಸವಾರಿಮಾಡುತ್ತಾರೆ ಮತ್ತು ಜಾತಿ ಪೋಷಕವಾದ ಮನೋಭಾವವನ್ನು ಬೆಳೆಸಿ ಸಂಕುಚಿತಗೊಳಿಸುತ್ತಾರೆ. ಇದು ಸಾಮಾಜಿಕ ಬೆಳವಣಿಗೆಗೆ ಅಡ್ಡಿಯಾಗುವ, ಸ್ವಾರ್ಥಪರ ಸಾಧನೆಯ ನಡವಳಿಕೆಯೇ ಹೊರತು ಧರ್ಮಶ್ರದ್ಧೆಯ ಇತ್ಯಾತ್ಮಕ ಅಂಶವಲ್ಲ. ಧರ್ಮಶ್ರದ್ಧೆಯಿಂದ ಮತ್ತು ಸಮಾಜದ ಪ್ರಗತಿಯ ಪ್ರಜ್ಞೆಯಿಂದ 'ಪುರೋಹಿತವರ್ಗ'ಕ್ಕೆ ಸೇರಿದ ಸ್ವಾಮಿಗಳು ಸುಧಾರಣಾವಾದಿಯಾಗಿ ಮಾಡುವ ಕೆಲಸವನ್ನು ವಿಚಾರಪರರಾದವರು ಸ್ವಾಗತಿಸಬೇಕೆ ಹೊರತು ಅಪಹಾಸ್ಯಮಾಡಿ ಅಲ್ಲಗಳೆಯಬೇಕಾಗಿಲ್ಲ.

೫. ಸರಕಾರಿ ನೌಕರಿ ಮತ್ತು ವಿಶ್ವವಿದ್ಯಾಲಯಗಳ ಹುದ್ದೆಗಳಲ್ಲಿ ಬ್ರಾಹ್ಮಣರ ಸಂಖ್ಯೆ ಹೆಚ್ಚಿದೆ ಎಂಬುದಕ್ಕೆ ಐತಿಹಾಸಿಕ ಕಾರಣಗಳಿವೆ. ಅಧಿಕಾರ ಮತ್ತು ಬಹುಸಂಖ್ಯಾತ ಬಲದಿಂದ ಈ ಬ್ರಾಹ್ಮಣರು ಶೋಷಣೆಗೆ ತೊಡಗಿದ್ದಾರೆಯೇ ಎಂಬುದು ಸೂಕ್ಷ್ಮವಾಗಿ ವಿಚಾರಿಸಬೇಕಾದ ಅಂಶ.

೬. ಬ್ರಾಹ್ಮಣರನ್ನು ಇಂದಿನ ಜಾತಿ ವ್ಯವಸ್ಥೆಯ ಪರಿಣಾಮವಾಗಿ ಒಂದು ಜಾತಿವರ್ಗಕ್ಕೆ ಸೀಮಿತಗೊಳಿಸಿ ಅವರಿಗೆ ಸಿಗುತ್ತಿರುವ ಮನ್ನಣೆ ಅವಕಾಶಗಳನ್ನು 'ಸಾಮಾಜಿಕ ನ್ಯಾಯ'ದ ಪರಿಧಿಗೆ ತಂದು ಸೀಮಿತಗೊಳಿಸಬೇಕೆಂದು ಒಂದು ವಾದವನ್ನು ಪಾ.ವೆಂ. ಒಪ್ಪುತ್ತಾರಾದರೂ ಅವರ ಮೇಲೆ ಆಗುತ್ತಿರುವ ಭರ್ತ್ಸನೆಯನ್ನು ಒಪ್ಪುವುದಿಲ್ಲ ಅಂದರೆ.

೭. ಬ್ರಾಹ್ಮಣವನ್ನು ಉಳಿಸಬೇಕಾದರೆ ಜಾತಿಬ್ರಾಹ್ಮಣರು ಸಾಂಪ್ರದಾಯಿಕ ಕ್ರಿಯಾಕರ್ಮಗಳಿಗೆ ಹಿಂದಿರುಗಬೇಕು ಎಂದು ಒಬ್ಬರು ಯೋಚಿಸಿದ್ದಾರೆ. ಆದರೆ ಇದು ಬ್ರಾಹ್ಮಣ್ಯದ ಪುನರುಜ್ಜೀವನ ಆಗಬಾರದು. ಬ್ರಾಹ್ಮಣರ ಜನಾಂಗದ ಮುಖ್ಯ ಜೀವನಾಡಿಯೆಂದರೆ ವಿದ್ಯೆಯ ಒಲವು ಮತ್ತು ಯಾವುದೇ ಕೆಲಸದಲ್ಲಿ ಸಾಧಿಸುವ ನೈಪುಣ್ಯದ ಛಲ. ಬೌದ್ಧಿಕವಾಗಿ ಕೂಡ ಬ್ರಾಹ್ಮಣರು ಪ್ರಚಲಿತವಿರುವ ಎಲ್ಲ ನಮೂನೆಯ ವಿಚಾರಧಾರೆಗಳಿಗೂ ಮುಕ್ತವಾಗಿ ಸ್ಪಂದಿಸಬಲ್ಲ ಸ್ವಾತಂತ್ರ್ಯವನ್ನು ಪಡೆದವರು ಉದಾಹರಣೆಗೆ ಆಸ್ತಿಕ ಭಾವವನ್ನು ಪೋಷಿಸುವಷ್ಟೇ ಚಾರ್ವಾಕವಾದವನ್ನು ಒಪ್ಪಬಲ್ಲರು. ಸ್ವಾತಂತ್ರ ಚಳವಳಿ ಕಾಲದಲ್ಲಿ ಮತ್ತು ನಂತರದಲ್ಲಿ ಎಡಪಂಥೀಯ ರಾಜಕಾರಣವನ್ನು ನಡೆಸಿದವರು ಬ್ರಾಹ್ಮಣರೇ ಎಂಬುದು ಗಮನಾರ್ಹ. ಬ್ರಾಹ್ಮಣರು ಯಾವುದೇ ವ್ಯಕ್ತಿಯನ್ನು ಹೊಟ್ಟೆಪಾಡಿಗಾಗಿ ಮಾಡಬಲ್ಲ ನಮ್ಯ (Flexible) ಯಾವುದೇ ಪರಿಸ್ಥಿತಿಯಲ್ಲಿ ಬ್ರಾಹ್ಮಣರು ಹತಾಶರಾಗದೆ ತಮ್ಮ ಅಸ್ತಿತ್ವಕ್ಕಾಗಿ ಆತ್ಮಗೌರವದಿಂದಲೇ ಬದುಕು ಕಟ್ಟಿಕೊಳ್ಳಬಲ್ಲ ಮತ್ತು ಆರಿಸಿಕೊಂಡ ವೃತ್ತಿಯಲ್ಲಿ ನೈಪುಣ್ಯ ಸಾಧಿಸಿ ಬೆಳೆಯಬಲ್ಲ ಒಂದು Ethosನ್ನು ಹೊಂದಿದ್ದಾರೆ. ಇದನ್ನು ಪ್ರಜ್ಞಾಪೂರ್ವಕವಾಗಿ ಬ್ರಾಹ್ಮಣರು ಉಳಿಸಿಕೊಳ್ಳಬೇಕಾಗಿದೆ. ಇದು ಕಷ್ಟದ ಕೆಲಸವಾದರೂ ಒಂದು ಜನಾಂಗವಾಗಿ ಅವರು ಉಳಿದ ಜಾತಿಜನಾಂಗಗಳಿಗೆ ಎದುರಾಗಿ ತಮ್ಮನ್ನು ಗುರುತಿಸಿಕೊಳ್ಳಬೇಕಾದ ಅನಿವಾರ್ಯವಿದೆ. ಈ ಅಂಶವನ್ನು ಪಾ.ವೆಂ. ಸಮತೂಕದ ಅನುಭವವಾಗಿ ಹೇಳಿದ್ದಾರೆ.

ಈ ವಿಚಾರವನ್ನು ಗಟ್ಟಿಗೊಳಿಸುವಂತೆ ಪಾ.ವೆಂ. ಸೂಚಿಸುವ ಇನ್ನೊಂದು ಅಂಶ ಏನೆಂದರೆ ಬ್ರಾಹ್ಮಣರು ರಾಜಕಾರಣದಿಂದ ದೂರವಾಗದೆ ಅದರಲ್ಲಿ ಸಾತ್ವಿಕ ರೀತಿಯಿಂದ ತೊಡಗಿಕೊಳ್ಳಬೇಕು.

೮. ಬ್ರಾಹ್ಮಣರು ಪ್ರತಿಯೊಂದು ಕಾಲದ ಜೀವನ ಪರಿಸ್ಥಿತಿಯಲ್ಲಿ ಆದರ್ಶವನ್ನು ಮೆರೆದವರು. ಹಲವು ಸಲ ಜಾತಿ ಸೂಚಕವಾದ ಅಥವಾ ಸಂಕುಚಿತವೆನಿಸುವ ಆಚಾರಗಳನ್ನು ಧಿಕ್ಕರಿಸಿ ತಮ್ಮ ಜನಾಂಗದ ಆದರ್ಶ ಕಲ್ಪನೆಯನ್ನು ಧೀಮಂತಿಕೆಯಿಂದ ಮೆರೆದವರಿದ್ದಾರೆ. ಜನಿವಾರ ಬಿಸುಟುವುದು, ಅಂತರ್ಜಾತಿಯ ವಿವಾಹವಾಗುವುದು, ಮಠಗಳಿಂದ ನಿಷಿದ್ಧವಾದ ವಿದೇಶಪ್ರವಾಸ ಮಾಡುವುದು ಅಥವಾ ಮದ್ಯ ಮಾಂಸ ಪಾನಮಾಡುವುದು ಮುಂತಾದ ಬಾಹ್ಯ ಕ್ರಿಯೆಗಳನ್ನು ನಡೆಸಿ ಬ್ರಾಹ್ಮಣ್ಯದ ಗೊಡ್ಡುತನಕ್ಕೆ ಸವಾಲು ಹಾಕಿದವರುಂಟು. ಕನ್ನಡ ಸಾಹಿತ್ಯದಲ್ಲಿ ಮೊದಲಿಗೆ ಬಸವಣ್ಣನವರು, ಆನಂತರ ಆಧುನಿಕ ಕಾಲದಲ್ಲಿ ಶಿವರಾಮ ಕಾರಂತರು, ಅನಂತಮೂರ್ತಿ 'ದೇವರು ಕೃತಿಯ ಲೇಖಕ ಪ್ರೊ. ಎ.ಎನ್. ಮೂರ್ತಿರಾವ್ ಮುಂತಾದವರ ಉದಾಹರಣೆ ನಮ್ಮೆದುರಿಗಿದೆ. ಸಾಮಾಜಿಕ ವಸ್ತುಸ್ಥಿತಿಯನ್ನು ಅರ್ಥೈಸಿಕೊಂಡು ಅದನ್ನು ಅತ್ಯುತ್ತಮದ ಕಡೆಗೆ ಬೆಳೆಸುವ ಕಲ್ಪನೆ ಮತ್ತು ಕ್ರಿಯಾಶೀಲತೆ ಉಳ್ಳವರು ಬಹುತೇಕ ಬ್ರಾಹ್ಮಣರೇ

ಎಂಬುದು ಐತಿಹಾಸಿಕ ಸತ್ಯ. ಇದನ್ನು ಸಾಧಿಸಲು ಮತ್ತು ಪರಿಣಾಮಕಾರಿಯಾಗಿ ಗುರಿಮುಟ್ಟಲು ಹೋರಾಟವನ್ನು ಮಾಡಬಲ್ಲವರು ಬ್ರಾಹ್ಮಣ ವ್ಯಕ್ತಿಗಳೆ. ಇದನ್ನು ಅವರು ಆತ್ಮಗೌರವದ ದಾರಿಯಲ್ಲಿ ನಡೆಸುತ್ತಾರೆಂಬುದು ಪ್ರತ್ಯಕ್ಷ ಅನುಭವ. ಬಡತನ ಅಪಮಾನ ಅವಕಾಶಗಳಿಂದ ವಂಚನೆ ಉಂಟಾದಾಗಲು ಅಂತಃಶಕ್ತಿಯಿಂದ ಧೀಮಂತಿಕೆಯ ನೆರವಿನಿಂದ ಇದು ಸಾಧ್ಯವಾಗುವ ಅಂಶ ಬ್ರಾಹ್ಮಣರು ಇಂತಹ ಉದಾಹರಣೆಗಳನ್ನು ಗಮನಿಸುತ್ತಾ ಮಹತ್ವಾಕಾಂಕ್ಷೆಯ ಹಾದಿಯಗುಂಟ ಚಲಿಸಬೇಕು ಎಂಬುದು ಪಾ.ವೆಂ. ಅವರ ಸೂಚನೆ.

೯. ಬ್ರಾಹ್ಮಣ ವಿರೋಧಿ ಅಭಿಪ್ರಾಯಗಳು ಮತ್ತು ರಾಜಕೀಯ ಪ್ರವೃತ್ತಿಗಳು, ವಿವೇಚನಾ ರಹಿತವಾಗಿ ಮುಂದುವರಿದರೆ ಬ್ರಾಹ್ಮಣ ಜನಾಂಗ ಮೊದಲೆ ಅಲ್ಪಸಂಖ್ಯಾತವಾಗಿದ್ದು ಬರುಬರುತ್ತಾ ಮೂಲೆಗುಂಪಾಗುವ ಅಥವಾ ನಿಷ್ಕ್ರೀಯವಾಗಿ ಉಳಿಯುವ ಸಂಭವವಿದೆ. ಕಳೆದ ಶತಮಾನದ ಆರಂಭದಿಂದಲೇ ಯುರೋಪ್‌ದಲ್ಲಿ ಅಲ್ಪ ಸಂಖ್ಯಾತರಾಗಿದ್ದ 'ಯುಹೂದಿ' ಜನಾಂಗವನ್ನು ಕೋಮು ರಾಜಕೀಯ ಕಾರಣಗಳಿಗಾಗಿ ಹಿಂಸಿಸಲಾಯಿತು. ಆದರೆ ಯಹೂದಿಗಳು ತಮ್ಮ ಪೂರ್ವಜರ ನೆಲ ಇಸ್ರೇಲಕ್ಕೆ ತೆರಳಿ ಕಳೆದುಹೋದುದನ್ನು ಮರಳಿ ಪಡೆದು ಜನಾಂಗ ಅಸ್ಮಿತೆಯನ್ನು ಉಳಿಸಿಕೊಂಡರು. ಇದು ಭಾರತದಲ್ಲಿಯ ಬ್ರಾಹ್ಮಣರಿಗೆ ಸಾಧ್ಯವಲ್ಲದ ಸ್ಥಿತಿ. ಬ್ರಾಹ್ಮಣರೇನಿದ್ದರೂ ಭಾರತದ ಭೂಮಿಯಲ್ಲಿಯೇ ತಲೆಯೆತ್ತಿ ನಿಲ್ಲಬೇಕು ಮತ್ತು ತಮ್ಮ ಅಸ್ತಿತ್ವದ ಅಗತ್ಯ ಉಳಿದೆಲ್ಲಾ ಜಾತಿವರ್ಗಗಳಿಗೆ ಇದೆ ಎಂಬುದನ್ನು ಸಾಭೀತು ಪಡಿಸಬೇಕಾಗುತ್ತದೆ. ಯುರೋಪ್‌ನಲ್ಲಿ ಇಸ್ರೇಲಿಗಳ ಮೇಲೆ ಆದಂತೆ ಹಿಂಸಾಚಾರ ಆಗುವ ಭಾರತದಲ್ಲಿ ಲಕ್ಷಣಗಳು ಇಲ್ಲ. ಆದ್ದರಿಂದ ಬ್ರಾಹ್ಮಣರು ತಮ್ಮ ಪೂರ್ವಜರ ಜೀವನ ಮೌಲ್ಯಗಳಾದ ಸಹನೆ ಸಮಭಾವ ಮತ್ತು ಉದಾರವಾದ ಜಾತ್ಯತೀತ ನಿಲುವುಗಳನ್ನು ಸ್ಪಷ್ಟಿಪಡಿಸಿಕೊಂಡು ಬದುಕುವ ಕ್ರಮೇಣ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ ಎಂದು ಸೂಚಿಸುತ್ತಾರೆ.

ಬ್ರಾಹ್ಮಣರೇನು ಮಾಡಬೇಕು? ಎಂಬ ಪ್ರಶ್ನೆಯನ್ನು ಪಾ.ವೆಂ. ಆತ್ಮಗತವಾಗಿ ಕೇಳಿಕೊಳ್ಳುತ್ತಲೇ ಬ್ರಾಹ್ಮಣ ಜನಾಂಗದ ಒಬ್ಬ ಪ್ರತಿನಿಧಿಯಾಗಿ ಸಮಾಧಾನಕರ ಉತ್ತರಗಳನ್ನು ಕಂಡುಕೊಂಡಿದ್ದಾರೆ. ಇವರಲ್ಲಿ ಈ ವಿಚಾರಗಳನ್ನು ಪ್ರಚೋದಿಸಲು ಕಾರಣರಾದವರು ಎತ್ತಿದ ಆಕ್ಷೇಪಗಳನ್ನು ಮಂಡಿಸಿದ ಪರಿಹಾರೋಪಗಳನ್ನು ಒಂದೊಂದಾಗಿ ವಿಶ್ಲೇಷಿಸಿ ಉತ್ತರ ರೂಪದ ಲೇಖನವನ್ನು ಬರೆದಿದ್ದಾರೆ. ಪಾ.ವೆಂ. ಅವರ ವ್ಯಕ್ತಿತ್ವದಲ್ಲಿ ಅಡಕವಾಗಿರುವ ಚಿಂತಕ ಒಬ್ಬ ಭಾರತೀಯ ಪ್ರೌಢ ವ್ಯಕ್ತಿಯೇ ಆಗಿದ್ದಾನೆ. ಜಾತಿ, ಮತ, ಧರ್ಮ, ದೇವರು, ಮಠ, ಮಂದಿರ, ಆಚಾರಣೆ ಮತ್ತು ಸಂಘರ್ಷ ಮುಂತಾದ ಅಂಶಗಳ ಚರ್ವಿತ ಚರ್ವಣ ಮಾಡಿಕೊಂಡು ಅದರ ಪರಿಣಾಮವಾಗಿ ಮೂಡಿದ ಒಂದು ಆದರ್ಶ (Model) ಚಿಂತನಕೃತಿಯನ್ನು ಓದುಗರೆದುರು ಇಟ್ಟಿದ್ದಾರೆ. ಇದರಲ್ಲಿ 'ಬ್ರಾಹ್ಮಣ'

ಎಂಬುದು ಒಂದು ಜಾತಿ ಅಥವಾ ಪೂರ್ವಸೂಚಕವಾಗಿರದೆ ಶೃತಿ, ಸ್ಮೃತಿ ಒಳಗೊಂಡಂತೆ ಭಾರತೀಯ ಸಮಾಜ ಜ್ಞಾನಮಾರ್ಗ ಹಿಡಿದು ಉಳಿದು ಬೆಳೆದು ಬಂದ ಅನುಭವವನ್ನು ಪಾ.ವೆಂ. ಕ್ರೋಡಿಕರಿಸಿದ್ದಾರೆ. ಇದೊಂದು ರೀತಿಯ ನೈತಿಕ ಸಂಹಿತೆಯಾಗಿ ಬ್ರಾಹ್ಮಣರನ್ನು ಜಾಗೃತಗೊಳಿಸುವ ಸಾಹಿತ್ಯವಾಗಿದೆ.

ಪಾ.ವೆಂ. ಅವರದು ಅಧ್ಯಯನಶೀಲ ಮನೋವೃತ್ತಿ ಪತ್ರಕರ್ತನಾಗಿ ಅವರು ತಮ್ಮ ಅಧ್ಯಯನ ಆಲೋಚನಾಫಲಗಳನ್ನು ಸತತವಾಗಿ ಓದುಗರೆದುರು ಮಂಡಿಸುತ್ತಾ **ಕಸ್ತೂರಿ**ಯನ್ನು 'ಜ್ಞಾನವಾಹಕ'ವನ್ನಾಗಿ ಬೆಳೆಸಿದರು. ಚಿಂತಕ ಮತ್ತು ಓದುಗ ಇವರ ನಡುವೆ ವಿವೇಕವೆಂಬ ವಾಹನವಿರುತ್ತದೆ. ಈ ವಾಹನದ ಚಾಲಕ ಚಿಂತನಶೀಲ ಲೇಖಕನೇ (ಪತ್ರಕರ್ತ) ಓದುಗ ಯಾತ್ರಿಕರನ್ನು ಜ್ಞಾನದ ಮಾರ್ಗದಲ್ಲಿ ವಾಹನದ ಮೂಲಕ ದಕ್ಷತೆಯಿಂದ ಒಯ್ಯುವುದು ಈ ಚಾಲಕನ ಕರ್ತವ್ಯ. ಓದುಗನ ಮಟ್ಟಿಗೆ ವಿವೇಕವೆಂಬುದು ಅಮೂರ್ತ ಅಥವಾ ಜಡ. ಇದಕ್ಕೆ ಚಿಂತನ ಸೂತ್ರಗಳ ಇಂಧನವನ್ನು ತುಂಬಿ ಚಾಲಕನು ಸುಸೂತ್ರವಾಗಿ ವಾಹನ ನಡೆಸಬೇಕು. ಪಾ.ವೆಂ. ಅಂತಹ ಚಾಲಕನಾಗಿ ವಿವೇಕದ ವಾಹನವನ್ನು ಓದುಗರೊಂದಿಗೆ ನಡೆಸುತ್ತಿದ್ದರೆಂಬುದಕ್ಕೆ **ಆತ್ಮ ತೇಜಸ್ಸಿನ ಮಾರ್ಗಗಳು** ಎಂಬ ಲೇಖನ ಒಂದು ಸೂಕ್ತ ನಿದರ್ಶನ.

ಅ. ಅಲೆಕ್ಸಸ್ ಕೆರಲನ ಆತ್ಮತೇಜಸ್ಸಿನ ಮಾರ್ಗಗಳು (ಬಿಡಿ ಲೇಖನ): ಆತ್ಮ ಅಂದರೆ ದೇಹ ಮನಸ್ಸು (ಭಾವ) ಬುದ್ಧಿ ಮತ್ತು ಜ್ಞಾನ ಇವುಗಳ ಬೇರೆ ಬೇರೆ ಮಟ್ಟಗಳನ್ನು ಒಳಗೊಂಡ ಒಂದು ಸ್ಥಿತಿ. ಇಲ್ಲಿ ಜ್ಞಾನ ಎಂದರೆ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳಿಂದ ಬರುವ ಪ್ರಜ್ಞೆ ಅಥವಾ ಅನುಭವಗಳ ಮೊತ್ತ. ಇದರಲ್ಲಿ ನೆನಪು ಒಂದು ಜ್ಞಾನ. ವ್ಯಕ್ತಿ ಪ್ರತಿದಿನ ಕನಿಷ್ಟ ಎರಡು ಹೊತ್ತು ತಾನೇ ತಾನಾಗಿ ಪ್ರಶಾಂತ ಸ್ಥಳದಲ್ಲಿ ಕುಳಿತು ತನ್ನೊಳಗೆ ತಾನು ಹೊಗಬೇಕು. ಹೊಕ್ಕು ತನ್ನ ತಪ್ಪು ಅಥವಾ ಕೊರತೆ ಕಂಡುಕೊಳ್ಳಬೇಕು ಇದು ಪ್ರಾರ್ಥನೆಯ ಕಾರ್ಯ ಇದರಲ್ಲಿ ಸ್ವಂತ ಕಲಿಕೆಯಿಂದ (Self learing) ಪ್ರಾರ್ಥನೆಯ ಪರಿಣಾಮ ವ್ಯರ್ಥವಲ್ಲ. ನಮಗೆ ಸಮಸ್ಯೆಯಾಗುವುದು ಬಾಹ್ಯ ಪ್ರಪಂಚದಲ್ಲಿ ಇದಕ್ಕೆ ಪರಿಹಾರ ಅಲ್ಲಿ ಇರಲಿಕ್ಕಿಲ್ಲ ಅಥವಾ ಇನ್ನೊಬ್ಬರ ಮೇಲೆ ಅವಲಂಬಿಸಿ ನಾವು ಬಗೆಹರಿಸಲು ಹೊರಟಾಗ ಪರಾವಲಂಬಿಯಾಗುತ್ತೇವೆ ಮತ್ತು ಸಮಸ್ಯೆಗಳ ಜಾಲದಲ್ಲಿ ಬೀಳಬಹುದು. ಅಂತರಾತ್ಮನ ಜೊತೆಗೆ ಅನುಸಂಧಾನ ಹೊಂದುವುದು ಕೆಲವರಿಗೆ ನಿಧಾನ ಕ್ರಿಯೆಯಾಗಬಹುದು. ಆದರೆ ಅದನ್ನು ರೂಢಿಸಿಕೊಳ್ಳುವುದರಿಂದ ಬೆಳಕು ಶಾಂತ ಸರತ್ತಿನಂತೆ (ನದಿ) ಹರಿಯುವುದು.

ಈ ವಿಚಾರ ಪ್ರಬಂಧದಲ್ಲಿ ಅಲೆಕ್ಸಿಸ್ ಕೆರಲ್ ಅವರು ಶಿಕ್ಷಕ ಮತ್ತು ಪಾಲಕವರ್ಗದವರಿಗೆ ಸೂಚಿಸಿದ ಕೆಲವು ಬೋಧನೆಗಳು ಇಂತಿವೆ.

೧. ನಿಮ್ಮ ಮಕ್ಕಳ ಮನೋಪ್ರಪಂಚ ದೃಢವಾಗಿ ಬೆಳೆಯುವಂತೆ ಅವರಿಗೆ ಮೊದಲು ನೀವು ಮಾದರಿ ವ್ಯಕ್ತಿಗಳಾಗಬೇಕು. ಜೊತೆಗೆ ಈಗಿರುವ ಮತ್ತು ಆಗಿಹೋದ ಗಟ್ಟಿ ವ್ಯಕ್ತಿತ್ವಗಳ (ಶ್ರೇಷ್ಠ ಮಟ್ಟದ) ಸಾಧನೆಗಳನ್ನು ಮನವರಿಕೆ ಮಾಡಕೊಡಬೇಕು. ಇದರಿಂದ ಅವರಿಗೆ ಮಾದರಿ ಕಾಣುತ್ತದೆ. ವಿಜ್ಞಾನಿ, ವೀರ, ಶೂರ, ಕವಿ, ಸಂತ ಮುಂತಾದ ಸಾಧಕರು ಮಕ್ಕಳ ಮನಸ್ಸಿನಲ್ಲಿ ಬಿಂಬಿತರಾದಾಗ ಅವರಿಗೆ 'ಆತ್ಮ ತೇಜಸ್ಸಿನ ಮಾರ್ಗ' ಸಿಕ್ಕಂತಾಗುತ್ತದೆ. ಆದರೆ ಇತ್ತೀಚೆಗೆ ಜೀವಂತ ಮಾದರಿ ವ್ಯಕ್ತಿಗಳು ಕಾಣುತ್ತಿಲ್ಲ. ಪ್ರಬಲವಾದ ಮಾಧ್ಯಮಗಳಾದ ಸಿನಿಮಾ, ಟಿವಿಗಳ ಮೂಲಕ ಸಿನಿಮತಾರೆಯರು, ಕ್ರಿಕೆಟ್ ಆಟಗಾರರು ಮಾದರಿಯಾಗುವ ಪ್ರಸಂಗಗಳಿವೆ. ಇದನ್ನು ಶಿಕ್ಷಕ, ಪಾಲಕರು ನಿವಾರಿಸುವ ದಿಸೆಯಲ್ಲಿ ಎಚ್ಚರವಹಿಸಬೇಕು. ಮಹಾತ್ಮಗಾಂಧಿ, ಅಂಬೇಡ್ಕರ್‌ರಂತಹ ಮುತ್ಸದ್ದಿ (Statesmen)ಗಳನ್ನು ಇಂದಿನ ಸಂದರ್ಭದಲ್ಲಿ ಅರ್ಥೈಸುವುದು ರಾಜನೈತಿಕಮಾರ್ಗವಾಗಿದೆ.

೨. ಮಕ್ಕಳಲ್ಲಿ ಸೌಂಧರ್ಯ ಪ್ರಜ್ಞೆ, ಪರಿಸರ ಪ್ರಜ್ಞೆಗಳನ್ನು ಮೂಡಿಸಿ ಬೆಳೆಸುವ ಕ್ರಿಯೆಗಳನ್ನು ಪಥ್ಯದೊಂದಿಗೆ ನಡೆಸಬೇಕು ಇವೆರಡು ಮನಸ್ಸಿನ ಶ್ರೀಮಂತಿಕೆಯನ್ನು ಬೆಳೆಸಿ ಆರ್ಥಿಕ ಬಡತನವನ್ನು ಸಂತೋಷದಿಂದ ಎದುರಿಸುವಂತೆ ಮಾಡುತ್ತದೆ. ತರ್ಕವು ಸೂತ್ರಗಳಿಗಿಂತ ಸೌಂದರ್ಯದ ಪ್ರೇಮವು ವಿದ್ಯಾರ್ಥಿಯ ಆತ್ಮವನ್ನು ಶೌರ್ಯ, ತ್ಯಾಗ, ಗುಣಗಳನ್ನು ಹೆಚ್ಚಿಸಿ ಮಹೋನ್ನತ ಸೌಂದರ್ಯವಿರುವ ಮಹಾತ್ಮನ ಕಡೆ ಒಯ್ಯಬಲ್ಲದು.

೩. ಮೂಢನಂಬಿಕೆ, ಸಂಕುಚಿತ ಅಥವಾ ತತ್‌ಕ್ಷಣದ ಲಾಭಕೊಡುವ ಬ್ರಾಮಕ ವಿಧಾನಗಳಿಂದ ನಾವು ನಮ್ಮ ಆತ್ಮ ಶಕ್ತಿಯನ್ನೇ ಕುಗ್ಗಿಸುತ್ತೇವೆ. ಇದಕ್ಕೆ ಹೊರತಾದ ಅನುಭವದ ರೆಕ್ಕೆಗಳನ್ನು ಮಕ್ಕಳಿಗೆ ಕಟ್ಟಬೇಕು. ಅದು ದೇಶ, ಕಾಲ, ಬಾಷೆಗಳ ಮೇರೆಗಳನ್ನು ಮೀರಿಸುವ ಹಾರಾಟ ಆಗಬಹುದು. ಅಂತಹ ಸಾಹಸಕ್ಕೆ ಒಮ್ಮೆಲೆ ಹೋಗದೆ ಕ್ರಮೇಣ ನಿಧಾನವಾಗಿ ಹೋಗುವಂತಹ ಪದ್ಧತಿ ಅನುಸರಿಸುವಾಗ ಮತಧರ್ಮದ (religion) ಒಳ್ಳೆಯ ಪದ್ಧತಿಗಳನ್ನು ಪ್ರಜ್ಞಾಪೂರ್ವಕ ಆಚರಿಸಬಹುದು. ಇಲ್ಲಿ ಗುರು ಉಪದೇಶ (ಅಂದರೆ ಪ್ರಜ್ಞೆಯುಳ್ಳ ಶಿಕ್ಷಕ, ಪಾಲಕ) ಅವಶ್ಯ. ಮಕ್ಕಳ ಮನೋನಿಯಂತ್ರಣವನ್ನು ಮಾಡುತ್ತಲೆ ಮಹತ್ವಾಕಾಂಕ್ಷೆಯ ಅವರ ಕಲ್ಪನೆಗಳಿಗೆ ದಿಕ್ಸೂಚಿಯಾಗುವ ಗುರು ಉಪದೇಶವಿದು. ಡಾ. ಅಲೆಕ್ಸಿಸ್ ಕೆರಲ್‌ರವರು ತಮ್ಮದೇ ಮಾರ್ಗದರ್ಶಕ ವಿಚಾರಗಳನ್ನು ಕೊನೆಗೊಳಿಸುವುದು ಹೀಗೆ 'ಮಾನವನು ದೈವ ದತ್ತವಾದ (ಅಂತರ್ಗತ) ತನ್ನ ಅಂತಃ ಶಕ್ತಿ (ಆತ್ಮ ತೇಜಸ್ಸು)ಯನ್ನು ಪೂರ್ಣ ಉಪಯೋಗಿಸಿಕೊಂಡು ಪರಮೋನ್ನತಿಗೆ ಏರಬೇಕಾದರೆ ಮಾನವನ್ನು ತನ್ನಲ್ಲಿರುವ ಬೌದ್ಧಿಕ (Intellectual) ನೈತಿಕ (Ethical or Moral) ಕಲಾತ್ಮಕ (Artistic are Aesthetic) ಮತ್ತು ಧಾರ್ಮಿಕ (Spirirtual)

ಸತ್ವಗಳನ್ನು (Esions) ಬಳಸಿಕೊಂಡು ಊರ್ಧ್ವಮುಖಿಯಾಗಿ ಬೆಳೆಯಬೇಕು.

ಪಾ.ವೆಂ. ಅವರು ಅಲೆಕ್ಸಿಸ್ ಕೆರಲ 'man, the unknown' ಗ್ರಂಥವನ್ನು ಈ ಮೊದಲೆ ಗ್ರಹಸಿದ್ದಾರೆ. (ಈ ಗ್ರಂಥವನ್ನು ಪ್ರೊ. ಲಕ್ಷ್ಮೀನಾರಾಯಣ ಆಚಾರ್ಯ ಹಾಗೂ ಪ್ರೊ. ಕು.ಶಿ. ಹರಿದಾಸ ಭಟ್ ೧೯೫೩ರಲ್ಲಿ ಅನುವಾದಿಸಿ ಪ್ರಕಟಿಸಿದ್ದರು. ಈ ಗ್ರಂಥದಲ್ಲಿ ಡಾ.ಕೆರಲ ಮಾನವ ಜೀವಿಯ (Homosepion) ಹೊಮೊಸೆಫಿಯನ್ ೧.ಜೈವಿಕ ೨.ಮಾನವ ವೈಜ್ಞಾನಿಕ ೩. ಮನೋವೈಜ್ಞಾನಿಕ ೪. ಆತಂರಿಕ ೫. ವೈಯಕ್ತಿಕ ಮತ್ತು ೬. ವಿಕಾಸದ ನೆಲೆಗಳನ್ನು ವಿಶ್ಲೇಷಿಸುತ್ತಾ ಸ್ವರೂಪವನ್ನು ಅರ್ಥೈಸುತ್ತಾ ಅಧ್ಯಯನ ಮಾಡಿದ್ದಾರೆ. ಮನುಷ್ಯನ ಅಗಾಧತೆಯನ್ನು ವರ್ಣಿಸಿದ್ದಾರೆ. ಮಾನವ ಏಕಕಾಲಕ್ಕೆ ಜಡವಸ್ತು, ಜೀವಂತ ಶಕ್ತಿ, ಮಾನಸಿಕ ಕ್ರಿಯೆಗಳ ಕೇಂದ್ರ ಈ ಮೂರನ್ನು ಒಳಗೊಂಡಿದ್ದಾನೆ. ಅವನಿಗಿರುವ ಒಳ ಪ್ರಪಂಚ ಮತ್ತು ಬಾಹ್ಯವಾಗಿರುವ ಅಗಾಧ ಪ್ರಪಂಚ ಇವುಗಳ ಬಗೆಗೂ ಹೃದಯಕುಹರದಲ್ಲಿ ಅಪಾರ ಅಂಶಗಳನ್ನು ಎಷ್ಟೋ ಕಾಲದಿಂದ ಹುದುಗಿಸಿಕೊಂಡಿದ್ದಾನೆ. ತನ್ನ ಅಜೇಯವಾದ ಮನೋಬಲದಿಂದ ಮಾನವ ವಿಶ್ವದ ಅಗಣಿತ ಚಕ್ರಗಳುಳ್ಳ ವಾಹನದ ಮೇಲೆ ಕುಳಿತು ಪ್ರವಾಸ ಮಾಡಬಲ್ಲನು. ಈ ಚಕ್ರಗಳು ಸೌಂಧರ್ಯ ಚಕ್ರ, ಪ್ರೇಮಚಕ್ರ ಹಾಗೂ ಭಗವತ್ ಸಾಕ್ಷಾತ್ಕಾರ ಚಕ್ರ ಇವೆಲ್ಲವು ನಮಗೆ ಜ್ಞೇಯ ಮತ್ತು ಗಮ್ಯವಾಗಿದೆ. ಡಾ.ಅಲೆಕ್ಸಿಸ್ ಕೆರಲರ 'ಅವ್ಯಕ್ತ ಮಾನವ'ನನ್ನು ಪಾ.ವೆಂ. ಅವರು ತಮಗೆ ಸಹಜವಾದ ಕೌತುಕದಿಂದ ಅಭ್ಯಾಸ ಮಾಡಿದ್ದಾರೆ. ಅಷ್ಟಕ್ಕೆ ನಿಲ್ಲದೆ ಕೆರಲರ ಇತರ ಬರಹಗಳನ್ನು ಹುಡುಕಿ ತಮ್ಮ ಅಂತರ್ಜ್ಞಾನಕ್ಕೆ ಸೆಳೆದುಕೊಂಡಿದ್ದಾರೆ. ಕೆರಲರು ಒಬ್ಬ ಋಷಿಯಂತೆ ಇದ್ದ ಆಧುನಿಕ ವಿಜ್ಞಾನಿ ಸನಾತನ ಭಾರತದಲ್ಲಿ ಋಷಿಮುನಿಗಳು ತಮ್ಮ ತಪಸ್ಸಿನಿಂದ ಮಾನವ ಜೀವಿಯನ್ನು ವ್ಯಾಖ್ಯಾನಿಸಿ ಹೇಳಿದ ಮಾತುಗಳು ತಪಸ್ಸಿನ ಅಭಿವ್ಯಕ್ತಿಯಾಗಿವೆ. ಅವು ವಿಜ್ಞಾನದ ಪರಿಭಾಷೆಯಲ್ಲಿ ಇಲ್ಲ ಅಷ್ಟೆ. ಅವುಗಳಿಗೆ ಕೆರಲರು ವಿಜ್ಞಾನದ ಶಿಸ್ತಿನ ಪರಿಭಾಷೆಯಿಂದ ವ್ಯಾಖ್ಯಾನರೂಪದಲ್ಲಿ ೧೯೪೨ರ ಪ್ರಕಟಿಸಿದ 'ಜೀವನ ಚಿಂತನಗಳು' ಗ್ರಂಥದಲ್ಲಿ ವರ್ಣಿಸಿದ್ದಾರೆ. ಇದು ವಿವೇಕ ಜ್ಞಾನದ ಪರಮೋಚ್ಚ ಅಭಿವ್ಯಕ್ತಿಯಾಗಿದೆ. ಅಂತೆಯೇ ಆನಂತರ ಕೆರಲರು ಬರೆದ ತತ್ತ್ವಜ್ಞಾನದ ಪ್ರಬಂಧವನ್ನು **ಜೀವನ ಚಿಂತನೆಗಳು** (೧೯೪೨) ಪುಸ್ತಕ ಪಾ.ವೆಂ. ಅವರನ್ನು ಆಕರ್ಷಿಸಿದೆ. ಅದರಲ್ಲಿ ವ್ಯಕ್ತವಾದ ಅಂಶಗಳನ್ನೆ ಒಂದು ಸ್ವಾರಸ್ಯಕರ ಪ್ರಬಂಧವಾಗಿ ಕೊಟ್ಟಿದ್ದಾರೆ. ಇದು ಪಾ.ವೆಂ. ತಮ್ಮಲ್ಲಿ ಮನದಟ್ಟು ಮಾಡಿಕೊಂಡ ಅಖಂಡ ವ್ಯಕ್ತಿತ್ವದ ಕಲ್ಪನೆಯಾಗಿದೆ. ಮಾನವನ ಏಕಾಂತ ಸ್ಥಿತಿ ಕೇವಲ ಸ್ವಾರ್ಥವಲ್ಲ. ಅದು ಕೌಟುಂಬಿಕ, ಸಾಮಾಜಿಕ ಮತ್ತು ವಿಶ್ವಾತ್ಮಕ ಸ್ಥಿತಿಗತಿಗಳಿಗೆ ಸಾಗುವ ಮನೋವೈಚಾರಿಕ ಪ್ರಯಾಣವಾಗಿದೆ. ಪಾ.ವೆಂ. ಅವರ ತಮ್ಮ ಸಮ್ಮತಿಯನ್ನು ಇದರೊಂದಿಗೆ ಗುರುತಿಸಿಕೊಂಡಿದ್ದು ಗಮನಾರ್ಹವಾಗಿದೆ.

ಆ. ಧಾರ್ಮಿಕ ನೆಲೆ: ಧರ್ಮ: 'ಧಾರ್ಮಿಕ ನೆಲೆ'ಯಲ್ಲಿ ಧರ್ಮ ಎಂಬುದು **ಧರಾಯೇವ ಇತಿ ಧರ್ಮ**. ಯಾವುದು ನಮ್ಮನ್ನು ಎತ್ತಿ ಹಿಡಿಯುತ್ತದೆಯೋ ಅದು ಧರ್ಮ. ನೆಲ (=ಧರೆ) ಮೊದಲ ಅಂಶ. ಸಕಲ ಜೀವಿಗಳ ಅಸ್ತಿತ್ವಕ್ಕೆ ಮೂಲವಾದ ನೆಲ ಮತ್ತು ಅಸ್ತಿತ್ವದ ಬೆಳವಣಿಗೆಗೆ ಕಾರಣವಾಗುವ ಪಂಚಭೂತಗಳಿಂದ ಆವೃತವಾದ ಪ್ರಪಂಚ ವ್ಯವಸ್ಥೆ, ಇದು ನೈಸರ್ಗಿಕವಾಗಿ ಧರ್ಮ. ಇದನ್ನು ನಂಬುವ ಮತ್ತು ಅದರಿಂದ ಪೋಷಣೆಗೊಳ್ಳುವ ಪ್ರಜ್ಞೆಯೇ ಧರ್ಮ. ಹೀಗೆ ಧರ್ಮವೆಂಬುದು ಜೀವಿಯ ಪ್ರವೃತ್ತಿ ಜನ್ಯ ಅಥವಾ ಪ್ರಕೃತಿ ಜನ್ಯ ಅಸ್ಥಿತ್ವ. ಆದರೆ ಮನುಷ್ಯನ ವಿಕಾಸ ಕ್ರಮದಲ್ಲಿ ಮೂಲಧರ್ಮದ ವ್ಯವಸ್ಥೆಯನ್ನು ಮೀರಿದ ಅನೇಕ ಅಂಶಗಳು ಸಂಚಿತವಾಗುತ್ತಾ ಬಂದಿದೆ. ಮುಖ್ಯವಾಗಿ ಮನಸ್ಸಿನ ವಿಕಾಸ, ವಿಚಾರದ ವಿಕಾಸ ಒಂದಕ್ಕೊಂದು ತಳುಕು ಹಾಕಿಕೊಂಡು ಮಾನವನನ್ನು ವಿಶಿಷ್ಟ ಜೀವಿಯನ್ನಾಗಿ ಕಾಲಾಂತರದಲ್ಲಿ ಬೆಳೆಸಿವೆ. ಇವುಗಳಲ್ಲಿ ಭಾಷೆ ವಹಿಸುವ ಪಾತ್ರ ಅತ್ಯಂತ ಪ್ರಮುಖ. 'ಧರ್ಮ' ಪದ ಇವತ್ತಿನವರೆಗೆ ಬೆಳೆದು ಬಂದ ಕ್ರಮಗಳನ್ನು ಗಮನಿಸಿದಾಗ ಅದುಕೊಡುವ ಅರ್ಥ ಸಾಂದರ್ಭಿಕವಾಗಿ ಭಿನ್ನವಾಗಿವೆ.

೧. ಮನಸ್ಥಿತಿಯ ಸಹಜತೆ ಅಥವಾ ಶುದ್ಧ, ಸ್ನಿಗ್ದ, ಮುಗ್ಧ, ಸ್ವಾಭಾವದ ಅವಸ್ಥೆಯೇ ವ್ಯಕ್ತಿ ಧರ್ಮ.
೨. ಪ್ರಕೃತಿಯ ನಿಯಮಗಳು ಮತ್ತು ಅವುಗಳನ್ನು ಅನುಸರಿಸಿ ಅವುಗಳೊಂದಿಗೆ ಅನುಸಂಧಾನಮಾಡಿ ಬದುಕುವ ಕ್ರಮ ಅಥವಾ ದೈಹಿಕವಾಗಿ ಆರೋಗ್ಯ ಮತ್ತು ಬಲದೊಂದಿಗೆ ಬದುಕುವ ಕ್ರಮ.
೩. ಮನೋ ಬುದ್ಧಿಗಳ ಸಾಂಗತ್ಯದಿಂದ ಸಂಸ್ಕೃತಿ, ನಾಗರಿಕತೆಗಳ ಅಭಿವೃದ್ಧಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಸಹಜ ಕ್ರಿಯೆ–ಪ್ರತಿಕ್ರಿಯೆಗಳ ವರ್ತನೆ.
೪. ಹುಟ್ಟು ಬದುಕು ಸಾವು ಈ ಅನಿವಾರ್ಯ ಸಂಗತಿಗಳನ್ನು ಸಹಜವೆಂಬಂತೆ ಕಾಣುವುದು ಅನುಸರಿಸುವುದು ವಿಕಾರಕ್ಕೊಳಗಾಗದೆ ನಡೆಸುವ ಜೀವನ ಯಾತ್ರೆ.
೫. ಪ್ರಕೃತಿ ಮತ್ತು ಪರಿಸರದ ಜೊತೆ ಅವಿರೋಧವಾಗಿ ವರ್ತಿಸುವ, ಸಾಮಾಜಿಕ ನಡೆನುಡಿ.
೬. ವಿಶ್ವಪ್ರಜ್ಞೆಯನ್ನು ಸದಾ ಜಾಗೃತವಾಗಿಟ್ಟುಕೊಂಡು ಮಾನವೀಯ ಮೌಲ್ಯಗಳನ್ನು ರೂಪಿಸಿಕೊಂಡು ನಂಬಿಕೆ ಸಂಕಲ್ಪಗಳೊಂದಿಗೆ ಸಾಧನೆ ಮಾಡುವುದು.

ಹೀಗೆ ಧರ್ಮವನ್ನು ಬೇರೆ ಬೇರೆ ನೆಲೆಗಳಲ್ಲಿ ಅರ್ಥೈಸುವ ಜೀಜ್ಞಾಸೆಯಿದೆಯಲ್ಲ ಇದು ಜೀವನ ಕಲೆಯಾಗಿ ಉಳಿಯುವಂತೆ ವರ್ತಿಸುವುದೇ ಧರ್ಮ. ಇವೆಲ್ಲ ವಿಚಾರಗಳು ಉಪನಿಷತ್ತುಗಳಲ್ಲಿ ಒಂದು 'ದರ್ಶನ' ರೂಪವಾಗಿ ನಮಗೆ ಪ್ರಾಪ್ತವಾಗಿ ಸಾವಿರಾರು ವರ್ಷಗಳಾದವು. 'ಧರ್ಮದ ಜಿಜ್ಞಾಸೆ' ಎಂದು ಮುಗಿದಿಲ್ಲ. ಕವಿಗಳಾದ ವಾಲ್ಮೀಕಿ, ವೇದವ್ಯಾಸರು ಮಹಾಕಾವ್ಯಗಳ ಮೂಲಕ ಧರ್ಮದ ಬೇರೆ ಬೇರೆ ನೆಲೆಗಳನ್ನು ಶೋಧಿಸಿದ್ದಾರೆ. ವಿಚಾರವಾದಿಗಳು ಧರ್ಮವನ್ನು ಸಾಪೇಕ್ಷ (Relative) ಕಲ್ಪನೆಯೆಂದು ವಾದಿಸುತ್ತಾರೆ.

ಕಾಲಧರ್ಮ, ಸ್ಥಳ ಧರ್ಮ, ಅನುಕೂಲತೆ ಧರ್ಮ ಇವೆಲ್ಲ ಜಾಣತನದ ಉಪಾಯಗಳೇ ಹೊರತು ದರ್ಶನಶಾಸ್ತ್ರಗಳಲ್ಲ. ಧರ್ಮವನ್ನು ಬೇರೆ ಬೇರೆ ಕಾಲ ಮತ್ತು ಬೇರೆ ಬೇರೆ ಸ್ಥಳಗಳಲ್ಲಿ ಅರ್ಥೈಸಿ, ಜನಜೀವನಕ್ಕೆ ಅನ್ವಯಿಸಿ ದಾರ್ಶನಿಕರು ನಿರೂಪಿಸಿದ ವಿಚಾರಗಳು ತತ್ವಗಳು ಅಥವಾ ಶಾಸ್ತ್ರಗಳು ಮತಗಳಾಗಿವೆ (Religion) ಅಂದರೆ ಯಾವುದನ್ನು ಧರ್ಮ ಎಂದು ಅವರು ಪ್ರತಿಪಾದಿಸಿದರೂ ಅವುಗಳಿಗೆ ಹೆಸರು ಕೊಟ್ಟಾಗ ಅದು ಮತವಾಗುತ್ತವೆ. 'ಜಗತ್ತಿನಲ್ಲಿ ಮತಗಳಿವೆಯೇ ಹೊರತು ಧರ್ಮಗಳಿಲ್ಲ' ಹಾಗಾದರೆ ಒಂದೇ ಒಂದಾಗಿರುವ ಅದು ಯಾವುದು? ಇಷ್ಟೇ ಬದುಕು, ಬದುಕಿಸು, ಇದು ಧರ್ಮವೇ ಆಗಿ ಉಳಿಯಬೇಕೆಂದರೆ ನಮ್ಮ ತಿಳುವಳಿಕೆಯಲ್ಲಿ ಸದಾ ಇರಬೇಕಾದ ಅಂಶ 'ಪ್ರೀತಿ' ಒಂದೇ ಏಕೆಂದರೆ ಸೃಷ್ಟಿ ಧರ್ಮವೇ ಪ್ರೀತಿಯಿಂದ ಆಗಿದೆ. ಪ್ರೀತಿಯ ಫಲ ಆನಂದ. ಇದನ್ನೇ ಚಿದಾನಂದ ಸ್ವರೂಪದಲ್ಲಿ ಕಾಣುವ ವಿವೇಕಿಗಳು 'ಧರ್ಮ'ಕ್ಕೆ ನಿಶ್ಚಿತ ನೆಲೆಕೊಟ್ಟಿದ್ದಾರೆ. ಸತ್-ಚಿತ್-ಆನಂದದ ಸ್ಥಿತಿಯೇ ಮಾನವಧರ್ಮ, ಇಲ್ಲಿ ಪ್ರಜ್ಞೆಯ ಚಿತ್ ಇದೆ. ಭಾವದ ಆನಂದವಿದೆ.

ಆದರೆ ಮತ, ಮತಗಳು, ಜಾತಿಗಳು, ಪಂಥಗಳು, ಧರ್ಮದ ನೆಲೆಯಿಂದಲೇ ಹುಟ್ಟಿವೆಯಾದರೂ ಅವುಗಳಿಗೆ ಇಡೀತನವಿಲ್ಲ. ಧರ್ಮದ ಆಚರಣೆಗೆ ರೀತಿ-ನೀತಿ-ವಿಧಿ-ವಿಧಾನ ಏನೇನಿರಬೇಕೆಂದು ಕಾಲಕಾಲಕ್ಕೆ ಸೂತ್ರಗಳನ್ನು ಹೇಳುತ್ತಾ ಬರಲಾಗಿದೆ. ವೃತ್ತಿಧರ್ಮವನ್ನು ಅನುಸರಿಸಿ ಜಾತಿ, ಕಾಲ ವಂಶಗಳು ಹುಟ್ಟಿವೆ. ಇವೆಲ್ಲ ಬಿಡಿ ಬಿಡಿಯಾಗಿ ಸಮಾಜವನ್ನು ಕಟ್ಟಿಕೊಳ್ಳುತ್ತಾ ಸಮಾಜಧರ್ಮ ಸೃಷ್ಟಿಸಿದೆ. ಇದು ಕೂಡ ಬಿಡಿಯಾದದ್ದೆ. ಹೀಗೆ ಇಡೀ ತನವಿಲ್ಲದ ಮತ ಜಾತಿ ಪಂಥಗಳು ತಮ್ಮ ಜಾಣತನದಿಂದಲೋ ಅಧಿಕಾರ ಶಕ್ತಿಯಿಂದಲೋ ವ್ಯವಹಾರಿಕ ನೀತಿಯಿಂದಲೋ ಮನುಷ್ಯರನ್ನು ವರ್ಗ, ವರ್ಣಗಳಲ್ಲಿ ಜಾತಿಗಳಲ್ಲಿ ವಿಂಗಡಿಸಿ ಸಾಮಾಜಿಕ ಆರ್ಥಿಕ ಅಸಮಾನತೆಗಳನ್ನು ವೈಶಮ್ಯಗಳನ್ನು ಅಗಾಧವಾಗಿ ಬೆಳೆಸಿದೆ. ಇವೆಲ್ಲವೂ ಸೃಷ್ಟಿಸಿದ ಸಮಸ್ಯೆಗಳು ನಾಗರಿಕ ಜಗತ್ತಿನಲ್ಲಿ ರಾಜಕೀಯ ಕಾರಣಗಳಿಂದ ಪೆಡಂಭೂತಗಳಾಗಿ ಪರಿಣಮಿಸಿವೆ. ಹಿಂದಕ್ಕೆ ಅಂದರೆ ಧರ್ಮದ ಮೂಲಕ್ಕೆ ಸೃಷ್ಟಿಯ ಸಹಜತೆಗೆ ಹೋಗುವುದು ಅಸಾಧ್ಯ ಎನ್ನುವ ಭ್ರಮೆಗಳು ಆರ್ಥಿಕ ಕಾರಣದಿಂದ ಸೃಷ್ಟಿಯಾಗಿವೆ. ಇಂತಹ ಸಮಸ್ಯೆಗಳ ಜಾಲದಲ್ಲಿ ಸಿಕ್ಕಿ ವೈಚಾರಿಕ ನೆಲೆಗಳಿಂದ ಪರಿಹಾರೋಪಾಯವನ್ನು ಕಂಡುಕೊಳ್ಳುವ ಬುದ್ಧಿ ಜೀವಿಗಳು ಸಾಕಷ್ಟಿದ್ದಾರೆ. ಇಂತಹ ಬುದ್ಧಿ ಜೀವಿಗಳ ಸಾಲಿನಲ್ಲಿ **ಕಸ್ತೂರಿ**ಯ ಪಾ.ವೆಂ. ಬರುತ್ತಾರೆಯೇ ಎಂಬುದನ್ನು ಅವರ **ಬುದ್ಧಿಜೀವಿ, ಸಮಾಜ ಮತ್ತು ಸಾಹಿತ್ಯ** ಲೇಖನದ ವಿಶ್ಲೇಷಣೆಯಿಂದ ಸೃಷ್ಟಿ ಮಾಡಿಕೊಳ್ಳಬೇಕಾಗಿದೆ.

ಇ) ಬುದ್ಧಿಜೀವಿ, ಸಮಾಜ ಮತ್ತು ಸಾಹಿತ್ಯ: 'ಬುದ್ಧಿಜೀವಿ' ಎಂಬ ಪದ ಇಂಗ್ಲೀಷಿನ (Intellectual) ಎಂಬುದಕ್ಕೆ ಪರ್ಯಾಯ ಪದ ಆಗಲಾರದು. ಇದು ಬುದ್ಧಿವಂತ

ಎಂದು ಅರ್ಥ ಕೊಡುತ್ತದೆ. ಬುದ್ಧಿಯಿಂದ ವರ್ತಿಸುವವನು ಅಂದರೆ ಬೇರೆ ಬೇರೆ ಜ್ಞಾನ, ಜ್ಞಾನವೃತ್ತಿಗಳಿಂದ ಜೀವಿಸುವವನು ಬುದ್ಧಿಜೀವಿ. ಸಮಾಜದಲ್ಲಿಯ ವಕೀಲ, ವೈದ್ಯ, ಶಿಕ್ಷಕ, ಎಂಜಿನೀಯರ್ ಇವರೆಲ್ಲರೂ ಬುದ್ಧಿ ಜೀವಿ ಇವರಿಗೆ ಒಂದೊಂದು ಜ್ಞಾನಶಾಖೆಯಲ್ಲಿ ಪರಿಣತಿ ಇದೆಯೆಂಬುದು ಗ್ರಹಿತ. ದೈನಂದಿನ ಜೀವನವನ್ನು ಈ ಬುದ್ಧಿ ಜೀವಿಗಳು ನಿರ್ಮಿಸುತ್ತಾರೆ. ಒಂದು ರೀತಿಯಿಂದ ಇದು ಉದ್ಯೋಗದ ಸುಗಮತೆಗೆ ಆಧಾರವಾಗಿದೆ. ಆದರೆ ಒಂದು ಸಮಾಜ ಬದಲಾಗಬೇಕಾದರೆ ಅದರ ಪರಿಣಾಮವಾಗಿ ಬೆಳೆಯ ಬೇಕಾದರೆ ಆಲೋಚನೆಗಳ ಸರಣಿ ಬುದ್ಧಿಜೀವಿಗಳಿಂದ ನಡೆಯುತ್ತಿರಬೇಕಾಗುತ್ತದೆ. ಗ್ರೀಕ್ ತತ್ವಜ್ಞಾನಿ ಸಾಕ್ರೇಟಿಸ್ ಅಂತಹ ಒಬ್ಬ ಜಾಗತಿಕ ಬುದ್ಧಿ ಜೀವಿ ತನ್ನ ತತ್ವಜ್ಞಾನದ ಅರಿವನ್ನು ಸಾಕ್ರೇಟಿಸ್ ತನ್ನ ಬಳಿ ಬಂದ ಜ್ಞಾನವಾಹಿನಿಗಳೊಂದಿಗೆ ಸಂವಾದದ ಶೈಲಿಯಲ್ಲಿ ಹಂಚಿಕೊಳ್ಳುತ್ತಿದ್ದ ಪರಿಣಾಮವಾಗಿ ಪ್ಲೇಟೊ ನಂತಹ ಬುದ್ಧಿ ಜೀವಿ ಮುಂದೆ ಬಂದ ಇದೇ ವಿಚಾರವಾದದ ಸರಣಿಯಲ್ಲಿ ಅರಿಸ್ಟಾಟಲ್ ಕೂಡ ಬಂದ ಕ್ರಿ.ಶ. ಪೂರ್ವದಲ್ಲಿಯ ಯುರೋಪ್ ವಿಚಾರವಾದ ತಳಹದಿಯನ್ನು ಹಾಕಿತು. ಇದು ವಿಜ್ಞಾನಯುಗಕ್ಕೆ ಎಷ್ಟೊ ಮೊದಲು ಸೃಷ್ಟಿಯಾದ ಬೌದ್ಧಿಕ ಜಗತ್ತು. ಮುಂದೆ ೧೯ನೇ ಶತಮಾನದಲ್ಲಿ ಜರ್ಮನ್ ತತ್ವಜ್ಞಾನಿ ಫ್ರೆಡ್ರರಿಕ್ ಹೆಗಲ್ ಒಂದು ತರ್ಕವನ್ನು ಸುಸಂಬದ್ಧ ರೀತಿಯಲ್ಲಿ ಮಂಡಿಸಿದನು. ಇದೇ 'ಗತಿ ತಾರ್ಕಿಕವಾದ' (Dialecticis) (ಡೈಯಲ್‌ಕ್ಟಿಸ್) ಹೆಗಲ್ ಪ್ರಕಾರ ಮನುಷ್ಯ ಬುದ್ಧಿಯು ವಾಸ್ತವವನ್ನು ತರ್ಕಿಸುತ್ತಾ ಒಂದು ಯೋಚನಾ ಸರಣಿಯನ್ನು ರೂಪಿಸುತ್ತದೆ. ಈ ಯೋಚನಾ ಸರಣಿ ಮುಂದುವರಿದಂತೆ ಇದರಲ್ಲಿಯ ಅಂಶಗಳನ್ನು ಅಲ್ಲಗಳೆಯುವ ಅಥವಾ ಕುಂದುಕೊರತೆಗಳನ್ನು ಸೂಚಿಸುವ ಇನ್ನೊಂದು ವಿಚಾರ ಸರಣಿ ಎದುರಾಗುತ್ತದೆ. ಇದೇ ದ್ವಂದ್ವಮಾನ ತರ್ಕ. ಹೆಗಲ್‌ನ ಈ ವಾದದಲ್ಲಿ ಮೂರು ಅಂಶಗಳು ವ್ಯಕ್ತವಾದವು.

೧. ವಾದಮಂಡನೆ (Thesis) ಇದನ್ನು ಖಂಡಿಸುವ ಅಥವಾ ವಿಮರ್ಶಿಸುವ ಎದುರಾಳಿಯಾಗಿ ಬರುವ Antitheses.

೨. Antitheses

೩. Synthesis ಸಮನ್ವಯ ವಿಚಾರ ಹೆಗಲ್‌ನ ಪ್ರತಿಪಾದನೆ ಖಂಡನೆ ಮತ್ತು ಸಮನ್ವಯದ ಈ ವಿಚಾರಾಕೃತಿ ಎಂದರೆ ದ್ವಂದ್ವಮಾನ ವಿಚಾರಪದ್ಧತಿ ತತ್ವಜ್ಞಾನದ ಹೊಸ ಲೋಕವನ್ನೆ ತೆರೆದಿಟ್ಟಿತ್ತು. ಇದನ್ನು ವಿಮರ್ಶೆಗೆ ಒಳಪಡಿಸಿದ ಜರ್ಮನಿಯ ಕಾರ್ಲ್‌ಮಾರ್ಕ್ಸ ಮತ್ತು ಆತನ ಸಹ ಅಧ್ಯಾಯಿ ಇಂಗ್ಲೆಂಡಿನ ಫ್ರೆಡ್ರಿಕ್ ಎಂಗೆಲ್ಸ್ ಹೆಗಲ್‌ನ ದ್ವಂದ್ವಮಾನ ವಿಚಾರ ಸರಣಿಯನ್ನು ಭಾವನಾವಾದಿ ವಿಚಾರ ಸರಣಿಯೆಂದು ಸೀಮಿತಗೊಳಿಸುತ್ತಾರೆ. ಏಕೆಂದರೆ ಹೆಗಲ್‌ನ ವಾದದ ಪ್ರಕಾರ Synthesis ಪ್ರಕ್ರಿಯೆ ಸ್ಥಗಿತಗೊಳ್ಳದೆ ಮತ್ತು ಮುಂದುವರಿದು ಹೊಸ Thesis ಮತ್ತು Antithesis ಅವಕಾಶ ಕೊಡಲೇ ಬೇಕಲ್ಲವೇ? ಅಂದರೆ ಮಾನವ ಪ್ರಜ್ಞೆ ಬದಲಾಗುತ್ತ, ಬೆಳೆಯುತ್ತಾ ಹೋಗುವುದು ತಾನೇ ತಾನಾಗಿ ಅಲ್ಲ. ಅದು ಚಲನಶೀಲ ಕೃತಿಯಾಗಿ

ಮುಂದುವರಿಯುವಾಗ ಅದಕ್ಕೆ ಚೈತನ್ಯ ನೀಡುವ ಶಕ್ತಿ ಯಾವುದು? ಎಂಬ ಪ್ರಶ್ನೆಯನ್ನು ಎದುರಿಟ್ಟುಕೊಂಡು ಮಾರ್ಕ್ಸ ಮತ್ತು ಎಂಗ್ಲ್ಸ್ ಪ್ರತಿಪಾದಿಸುವುದು ಹೀಗೆ ಹೆಗಲ್‌ನು ಮಾನವ ಪ್ರಜ್ಞೆಯಿಂದ ವಸ್ತು ಹುಟ್ಟುತ್ತದೆನ್ನುತ್ತಾನೆ ಮತ್ತು ಬೌದ್ಧಿಕತೆ ಬೆಳೆಯುತ್ತದೆ. ಹುಟ್ಟಿದ ವಸ್ತು ಮಾನವ ಪ್ರಜ್ಞೆಯಿಂದಲೇ ಬೆಳೆಯುತ್ತದೆ, ಬದಲಾಗುತ್ತದೆ ಎನ್ನುತ್ತಾನೆ. ಮಾನವ ಪ್ರಜ್ಞೆಗೆ ಮೂಲವಾಗಿ ಇನ್ನೊಂದು ಅದೃಶ್ಯ ಶಕ್ತಿ ಇದ್ದು ಅದು ಪ್ರಜ್ಞೆಯನ್ನು ರೂಪಿಸಿ ಆಲೋಚನೆಗೆ ಒಳಗಾಗಿಸಿ ಜಗತ್ತಿನ ಬೆಳವಣಿಗೆಗೆ ಪ್ರೇರಿಸುತ್ತದೆ ಎಂಬ ವಿಚಾರ ಸರಣಿ ವಾಸ್ತವವಲ್ಲ ಪ್ರಾಮಾಣಿಕವಲ್ಲವೆಂದರು. ಇವರಿಬ್ಬರು ಮರುವ್ಯಾಖ್ಯಾನಿಸುತ್ತಾರೆ. ಮಾರ್ಕ್ಸ್ ಎಂಗಲ್ಸ್‌ನ ವಿಶ್ಲೇಷಣೆಯ ಪ್ರಕಾರ ಜಗತ್ತು ಮೂಲತಃ ಇದೆ ಇದರ ನಿರ್ಮಾಪಕರು ಎಂಬವರಿಲ್ಲ. ಯಾವ ಪ್ರಜ್ಞೆಯ ಭೌತಿಕ ಜಗತ್ತನ್ನು ನಿರ್ಮಿಸುವ, ರೂಪಿಸುವ ಕ್ರಿಯೆ ಎಂಬುದಿಲ್ಲ. ಭೌತಿಕ ಜಗತ್ತು ಜಡವಾಗಿ ಕಂಡರೂ ಚೈತನ್ಯಯುಕ್ತವಾಗಿದೆ. ಆದ್ದರಿಂದ ಭೌತಿಕ ಜಗತ್ತು ಚಲನಶೀಲವೂ ವಿಕಾಸಶೀಲವೂ ಆಗಿ ಎಂದಿನಿಂದಲೋ ಬದಲಾಗುತ್ತಾ, ಬೆಳೆಯುತ್ತಾ ಮುಂದುವರಿದಿದೆ. ಚೈತನ್ಯಶೀಲ ಭೌತಿಕ ಜಗತ್ತಿನ ಜೀವವುಳ್ಳ ಪ್ರಾಣಿ ಮನುಷ್ಯನಾಗಿದ್ದು ಪ್ರಜ್ಞೆಯೂ ಮನುಷ್ಯನಲ್ಲಿ ವಿಕಾಸಶೀಲವಾಗುತ್ತಿದೆ. ಹೀಗೆ ಆಗುತ್ತಿರುವಾಗ ಮನುಷ್ಯ ಪ್ರಜ್ಞೆ ಭೌತಿಕ ಜಗತ್ತಿನ ವಸ್ತುಗಳನ್ನು ಪರಿವರ್ತಿಸಿ ಪರಿಷ್ಕರಿಸಿ ತನ್ನ ಸೌಕರ್ಯಗಳನ್ನು ಹುಟ್ಟಿಸುತ್ತದೆ. ಇದಕ್ಕೆ ಮಾನವ ಪ್ರಜ್ಞೆಯ ಸ್ವಾರ್ಥ, ಸಂಕುಚಿತ ಮನಸ್ಥಿತಿ ಕ್ರಿಯಾಶೀಲವಾಗಿ ವಸ್ತುವನ್ನು ಬಂಡವಾಳವನ್ನಾಗಿ ಮಾಡಿಕೊಂಡು ಉತ್ಪಾದಕ ಕ್ರಿಯೆಗಳಿಗಾಗಿ ಕಡಿಮೆ ಬುದ್ಧಿಯ ವ್ಯಕ್ತಿಗಳನ್ನು ನೇಮಿಸಿಕೊಳ್ಳುತ್ತದೆ. ಅಂದರೆ ಕೂಲಿ ಕಾರ್ಮಿಕರಿಂದ ವಸ್ತುಗಳನ್ನು ಉತ್ಪಾದಿಸಿ ಅದನ್ನು ಮಾರಿ ಬಂದ ಲಾಭದಲ್ಲಿ ಅಲ್ಪವನ್ನು ಕೂಲಿಯಾಗಿ ಕೊಟ್ಟು ಹೆಚ್ಚಿನದನ್ನು ತನ್ನ ವಶದಲ್ಲಿ ಇಟ್ಟುಕೊಂಡು ಬಂಡವಾಳ ಬೆಳೆಸುತ್ತದೆ. ಇದರ ಪರಿಣಾಮವಾಗಿ ದುಡಿಮೆಯ ಸಮಾಜದಲ್ಲಿ ಕೂಲಿಕಾರರ ವರ್ಗ ದೊಡ್ಡ ಪ್ರಮಾಣದಲ್ಲಿ ಇದ್ದು ಅಲ್ಪ ಪ್ರಮಾಣದ ಸುಖಗಳನ್ನು ಅನುಭವಿಸುತ್ತದೆ. ತದ್ವಿರುದ್ಧವಾಗಿ ದುಡಿಸುವ ವರ್ಗ ಅಥವಾ ಆಳುವ ವರ್ಗ ಎಲ್ಲ ಬಗೆಯ ಸುರಕ್ಷಿತ ವ್ಯವಸ್ಥೆಯನ್ನು ಮಾಡಿಕೊಂಡು ತನ್ನ ಹಿತವನ್ನು ಬೆಳೆಸುತ್ತಾ ಹೋಗುತ್ತದೆ. ಹೀಗೆ ಆರ್ಥಿಕ ಅಸಮಾನತೆಯ ಸಮಾಜ ನಿರ್ಮಾಣವಾಗಿ ಎರಡು ವರ್ಗಗಳು ಮನುಷ್ಯ ಇತಿಹಾಸವನ್ನು ಕಟ್ಟುತ್ತಾ ಬಂದಿವೆ. ಮೊದಲು ಯಜಮಾನ–ಗುಲಾಮ ಸಮಾಜ ಇತ್ತು. ಯಂತ್ರ ವೈಜ್ಞಾನಿಕ ತಂತ್ರ ಬೆಳೆದಂತೆ ಔದ್ಯಮಿಕ (Industrial) ಪ್ರಬಲ ಬಂಡವಾಳಶಾಹಿ ಮತ್ತು ದೊಡ್ಡ ಸಂಖ್ಯೆಯ ಅಂದರೆ ಬಡವರಾದ ಕೂಲಿಕಾರರವರ್ಗ ತಲೆ ಎತ್ತಿ ಬರುತ್ತಿದೆ. ಈ ಅಸಮಾನ ಆರ್ಥಿಕ ಸಂಬಂಧ ಮನುಷ್ಯ ಸಮಾಜದಲ್ಲಿ ವಿಷಮತೆ ಅಮಾನವೀಯ ಪೈಪೋಟಿ ತಲೆಎತ್ತಿ ವರ್ಗ ಸಂಘರ್ಷ ಏರ್ಪಡುತ್ತದೆ. ಸಮಾಜದಲ್ಲಿ ನೀತಿ, ನಂಬಿಕೆ ಆರೋಗ್ಯಕರವಾಗಿ

ಉಳಿಯದೆ ಬಲಿಷ್ಠರ ರೀತಿ–ನೀತಿಗಳನ್ನು ಅನುಕರಿಸಿ ಮಾನವ ಪ್ರಜ್ಞೆ ಮಸುಳಿಸುತ್ತಾ ಹೋಗುತ್ತದೆ. ಸದ್ಯದ ಭಾರತದ ಅವಸ್ಥೆ ಹೀಗಾಗಿದೆ. ಇಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದು ಅದಕ್ಕೆ ಪೂರಕವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯೂ ಬಂದು ಒಟ್ಟು ಆರ್ಥಿಕ ಪ್ರಗತಿ ಆಗಿದೆಯೇ ಎಂದು ಪ್ರಶ್ನಿಸಿಕೊಂಡಾಗ ಬಂಡವಾಳಶಾಹಿ ವ್ಯವಸ್ಥೆಗೆ ಮಾತ್ರ ಸ್ವಾತಂತ್ರ್ಯ ಮತ್ತು ಜನತಾಂತ್ರಿಕ ಅನುಕೂಲತೆಗಳು ಲಾಭಗಳು ದೊರಕಿದುದ್ದು ವಾಸ್ತವ. ಈ ಬಂಡವಾಳಶಾಹಿ ವ್ಯವಸ್ಥೆ ಜಾತಿಯತೆ ವರ್ಗ ವ್ಯತ್ಯಾಸಗಳನ್ನು ರಾಜಕೀಯ ದಾಳಗಳನ್ನಾಗಿ ಮಾಡಿಕೊಂಡು ದುಡಿಯುವ ಶ್ರಮಿಕರನ್ನು ಮತ್ತು ಪ್ರತಿಭಾವಂತರಾದ ನಿಸ್ಪೃಹ ವಿಜ್ಞಾನಿ, ಲೇಖಕ, ಪ್ರಾಧ್ಯಾಪಕ, ವಿವೇಚಕ ಇವರನ್ನು ಹಾದಿ ತಪ್ಪಿಸುವಂತೆ ಮಾಡುತ್ತಿದೆ. ದೇಶದ ಮಾನವೀಯ ಅಭಿವೃದ್ಧಿಯ ಪಥವನ್ನು ದಿಕ್ಕು ತಪ್ಪುವಂತೆ ಮಾಡುವಲ್ಲಿ ನಿರತವಾಗಿವೆ.

ಈ) ವೈಚಾರಿಕ ಮತ್ತು ಶೈಕ್ಷಣಿಕ: ಪಾ.ವೆಂ. ಕಸ್ತೂರಿಯನ್ನು ವೇದಿಕೆ ಮಾಡಿಕೊಂಡು ತಮ್ಮ ಸ್ವಭಾವಸಿದ್ಧ ಪ್ರಜ್ಞಾವಾದ (Rationality)ವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ನಿರೂಪಿಸಿದ್ದಾರೆ. **ವೈಚಾರಿಕ** ಹಾಗೂ **ಶೈಕ್ಷಣಿಕ** ಈ ಎರಡು ಭಾಗಗಳಲ್ಲಿ ಬಂದಿರುವ ಹದಿನಾಲ್ಕು ಲೇಖನಗಳು ಚಿಂತನೆಯ ಕಿಡಿಗಳಂತಿವೆ. ಪ್ರಜ್ಞಾವಾದದ ನೆಲೆಯನ್ನು ಪಾ.ವೆಂ. ನಿರೂಪಿಸುವುದು ಹೀಗೆ. ಭಗವತ್‌ಗೀತೆಯಲ್ಲಿ ಬರುವ 'ಪ್ರಜ್ಞಾವಾದಾಂಶ ಭಾಷಸೇ' ಎಂಬ ಕೃಷ್ಣನ ಮಾತು ದಬ್ಬಾಳಿಕೆಯ ವಾಕ್ಯವಾಗಿದೆಯೆಂದು ಸೂಚಿಸುತ್ತಾ ಪ್ರಜ್ಞಾವಾದದಲ್ಲಿ ಕುರುಡು ವಿಧೇಯತೆ ಇರಬಾರದು ಎಂದೆನ್ನುತ್ತಾರೆ. ಯಾವುದೇ ಕೆಲಸವನ್ನು ತರ್ಕದ ಒರೆಗಲ್ಲಿಗೆ ಹಚ್ಚಿಯೇ ಮಾಡುವಾಗ ಪ್ರಜ್ಞೆ ವಿಚಾರ ಮತ್ತು ಸದಸದ್ ವಿವೇಕ ಇವುಗಳ ಚರ್ವಿತ ಚರ್ವಣವೇ ಪ್ರಜ್ಞಾವಾದ. ಭಗವತ್‌ಗೀತೆಯಲ್ಲಿ ಅರ್ಜುನ ಆತಂಕದಿಂದ, ಅನುಮಾನದಿಂದ ಕೇಳುವ ಪ್ರಶ್ನೆಗಳಿಗೆ ಶ್ರೀ ಕೃಷ್ಣ ಕೊಡುವ ಉತ್ತರಗಳಲ್ಲಿ **ಮೇಲ್ನೋಟಕ್ಕೆ ನಾನು ಹೇಳಿದ್ದನಷ್ಟೇ ಮಾಡು** ಎಂಬ ದಾಟಿ ಇದೆ. ಇದು ಪ್ರಜ್ಞೆಯ ಸ್ಥಗಿತತೆಗೆ ಕಾರಣವಾಗುತ್ತದೆ. ಈ ಸ್ಥಿತ ಪ್ರಜ್ಞೆಯ ಮನಸ್ಥಿತಿಯನ್ನು ಶಂಬಾ ಜೋಶಿಯವರು ಒರೆಗಲ್ಲಿಗೆ ಹಚ್ಚುತ್ತಾರೆ. ಪ್ರಜ್ಞೆಯು ಕೇವಲ ಒಬ್ಬನ ಪ್ರಬಲವಿಚಾರವಾದಿಯ ಸ್ವತ್ತಲ್ಲ. ಅದು ಇನ್ನೊಬ್ಬರ ತರ್ಕ ದ್ವಂದ್ವಗಳ ವಿವೇಚನೆಗಳಿಗೂ ವಿಸ್ತರಿಸಿ ಪೂರ್ವಗ್ರಹಿತ ಕಲ್ಪನೆಗಳನ್ನು ನಿವಾರಿಸುವಂತೆ ಬೆಳೆಯಬೇಕು. ರಾಗ–ದ್ವೇಶ ಅಥವಾ ಪಕ್ಷಪಾತದ ಅಂಶವಿಲ್ಲದ ತರ್ಕವನ್ನು ಯಾವುದೇ ವಿಷಯದಲ್ಲಿ ಮಾಡಿದಾಗ ಅದು ಚಲನಶೀಲ ಪ್ರಜ್ಞಾವಾದವಾಗುತ್ತದೆ. ಭಗವತ್‌ಗೀತೆಯ ಶ್ರೀ ಕೃಷ್ಣ ಕೆಲವು ಸಲ ಪ್ರಜ್ಞಾವಾದಕ್ಕೆ ಹೊರತಾದ ಯುಕ್ತಿವಾದವನ್ನು ಅರ್ಜುನನಿಗೆ ಬೋಧಿಸುತ್ತಿದ್ದಾನೆಂದು ಭಾಸವಾಗುತ್ತದೆ. ಅಂದರೆ ತರ್ಕಕ್ಕಿಂತ ವ್ಯಕ್ತಿಯ ಭಾವನೆಗಳನ್ನು ಬಡಿದೆಚ್ಚರಿಸುವ ಕ್ರಮಕ್ಕೆ ಹೊರಟಾಗ ವಿಚಾರವಾದದ ಹಾದಿ ಮೊಟಕಾಗುತ್ತದೆ. ಅಲ್ಲಿ ಭಾವನೆ ಉನ್ಮಾದಕ್ಕೆ ಕಡಿವಾಣ ಹಾಕುವಂತೆ ತರ್ಕದ

ಸೂತ್ರಗಳು ಹೆಣೆದುಕೊಂಡು ವಸ್ತುನಿಷ್ಟವಾದ ಆದರ್ಶವನ್ನು (Idiaology) ಮಂಡಿಸಿದಂತಾಗುತ್ತದೆ. ನಮ್ಮ ದೇಶದಲ್ಲಿ Idiaologyಗಳನ್ನು ಇಟ್ಟುಕೊಂಡ ರಾಜಕೀಯ ಪಕ್ಷಗಳು ಅನೇಕ ರೀತಿಯಲ್ಲಿ ವಿಫಲತೆಗಳನ್ನು ಎದುರಿಸುತ್ತಿವೆ. ಮುಖ್ಯವಾಗಿ ಜನತಾಂತ್ರಿಕ (Democratic) ಆದರ್ಶಗಳನ್ನು ಪರಿಪಾಲಿಸಲಿಕ್ಕಾಗದೆ ಅನೇಕ ವಿರೋಧಾಬಾಸಗಳನ್ನು ಪೋಣಿಸುತ್ತಿವೆ. ಇಂತಹ ಪ್ರಜ್ಞಾವಾದವನ್ನು ರಾಜಕೀಯವಾಗಿ ಸರಿ (Political Right) ಎಂಬ ತಾತ್ಕಾಲಿಕ ಸೂತ್ರವನ್ನು ಅನ್ವಯಿಸಿ ಸಮರ್ಥಿಸುವ ಆತ್ಮವಂಚಿತವಾದವನ್ನು ಪಾ.ವೆಂ. ಖಂಡಿಸುತ್ತಾರೆ. ತರ್ಕವು ವಿಚಾರವಾದದ ಗಿಲಿಟು ಆಗತಕ್ಕದ್ದಲ್ಲ. ಅಂತಹ ಪ್ರಜ್ಞಾವಾದಗಳ ಹಾವಳಿಯಿಂದ ಸ್ವಂತಂತ್ರ ಭಾರತದಲ್ಲಿ ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸುವ ಮತ್ತು ಲೆನಿನ್ ಅನುಷ್ಟಾನಕ್ಕೆ ತಂದ 'ವೈಜ್ಞಾನಿಕ ಸಮಾಜವಾದ'ದ ರಾಜ್ಯ (State) ಸ್ಥಾಪನೆ ಆಗಿಲ್ಲ. ಇಲ್ಲಿ ಬಂದಿರುವ ಎಲ್ಲ ಸರಕಾರಗಳು ದೇಶದ ಶೈಕ್ಷಣಿಕ, ಆರ್ಥಿಕ, ಸಮಸ್ಯೆಗಳಿಗೆ ಆಯಾ ಹೊತ್ತಿನ 'ರಾಜಕೀಯ ಸರಿತನ'ದ ಸೂತ್ರಗಳನ್ನು ಅನ್ವಯಿಸುತ್ತಾ ಅಸಲಿ ಪ್ರಜ್ಞಾವಾದಕ್ಕೆ ಬೆನ್ನು ತೋರಿಸಿವೆ. ಸ್ಥಿತಪ್ರಜ್ಞೆಯ ವಿಚಾರವಾದ ನಮ್ಮನ್ನು ಆಳುತ್ತಿರುವುದರ ಅಪಾಯಗಳನ್ನು ಪಾ.ವೆಂ. ಸ್ಪಷ್ಟಪಡಿಸುತ್ತಾರೆ.

ಶೈಕ್ಷಣಿಕ ಸ್ಥಿತಿಗತಿಗಳ ಬಗೆ ಪಾ.ವೆಂ. ಅವರು ಮಂಡಿಸುವ ಅಂಶಗಳು ಅವರ ವಸ್ತುನಿಷ್ಟ ಆದರ್ಶವನ್ನು ಅನುಸರಿಸುತ್ತವೆ. ವಸ್ತುನಿಷ್ಟ ಆದರ್ಶ ನಿಜವಾಗಿ ರಾಜಕೀಯ ಆದರ್ಶವಾಗಬೇಕು. ಗಾಂಧೀಜಿ ತಮ್ಮ 'ಹಿಂದ್ ಸ್ವರಾಜ್' (೧೯೧೦) ಪ್ರಣಾಳಿಕೆಯ ಮೂಲಕ ಹೊರಹಾಕಿದ ಆದರ್ಶ ಒಂದು ಮಾರ್ಗದರ್ಶಕ ಸೂಚಿಯಾಗಿತ್ತು. ಇದನ್ನು ಬೌದ್ಧಿಕರು (Intellectual) ಮನಗಂಡು ಒಂದು ವೈಚಾರಿಕ ನೆಲೆಯನ್ನು ನಿರ್ಮಿಸಿಕೊಂಡಿದ್ದುಂಟು ಪಾ.ವೆಂ. ಅವರು ಕೂಡ ತಮ್ಮ ವಿಚಾರವಾದವನ್ನು ಅದರ ಮೇಲೆ ಕಟ್ಟಿಕೊಂಡಿದ್ದಾರೆ. ವಿದ್ಯಾರ್ಥಿ, ಯುವಕ, ಶಿಕ್ಷಕ, ಶಿಕ್ಷಣ ಪದ್ಧತಿ ಈ ಎಲ್ಲ ಅಂಶಗಳನ್ನು ಒಬ್ಬ ಮನೋವಿಜ್ಞಾನಿಯಾಗಿ ಗಮನಿಸುತ್ತಾರೆ. ಈ ಕ್ಷೇತ್ರಗಳಲ್ಲಿ ಕಾಣಿಸುತ್ತಿರುವ ವರ್ತನೆಗಳನ್ನು ಪ್ರವೃತ್ತಿಗಳನ್ನು ಗಮನಿಸುತ್ತಾ ಹೋದಂತೆ ಒಂದು ವೈಚಾರಿಕ ಆಕೃತಿ ಇವುಗಳನ್ನು ನಿಯಂತ್ರಿಸುತ್ತಿಲ್ಲ ಎಂಬುದು ಅವರ ಅನುಭವಕ್ಕೆ ಬಂದಿದೆ. ಒಬ್ಬ ಪ್ರಾಮಾಣಿಕ ನೀರಿಕ್ಷಕನಾಗಿ ಅವರು ಅಂಶಗಳನ್ನು ಮಂಡಿಸುತ್ತಾ ಜಾಗೃತಿಯನ್ನುಂಟು ಮಾಡಿದ್ದಾರೆ. ಒಬ್ಬ ಶಿಕ್ಷಕ ಮಾಡುವ ಕೆಲಸ ಇದೆ ಮತ್ತು ಇಷ್ಟೇ ಅಲ್ಲವೇ ಎಂಬ ಅನಿಸಿಕೆ ಬರುವಂತಿದೆ.

ಉ) ವಿದ್ಯಾರ್ಥಿಗಳು ಯೋಚಿಸಬೇಕು: ವಿದ್ಯಾರ್ಥಿಗಳು ಯೋಚಿಸಬೇಕು ಈ ಪ್ರಬಂಧದ ಆಶಯ 'ನಿನ್ನೆಗಳನ್ನು ಮೆಟ್ಟನಿಂತು ನಾಳೆಗಳನ್ನು ಎದುರು ನೋಡುತ್ತಿರುವವರ' ಕುರಿತು ಆಶಯ ಇದಾಗಿದೆ. ವಿದ್ಯಾರ್ಥಿ ಸಮುದಾಯ ಯೋಚನಾ ಪರತೆಯನ್ನು ಬಿಟ್ಟು ತಮ್ಮ ಸಮಸ್ಯೆಗಳ ಬಗ್ಗೆ ಬೀದಿಗಿಳಿದು ಘೋಷಣೆಗಳನ್ನು ಹಾಕಿ ಆಂದೋಲನ ಕೈಗೊಳ್ಳುವ ಪ್ರವೃತ್ತಿಯ ಬಗ್ಗೆ ಪಾ.ವೆಂ. ಕಳವಳಗೊಂಡಿದ್ದಾರೆ. ವಿದ್ಯಾರ್ಥಿ ಸಮೂಹವನ್ನು ತಮ್ಮ

ಆಂದೋಲನಗಳಿಗೆ ಬಳಸಿಕೊಳ್ಳುವ ರಾಜಕೀಯ ಮತ್ತು ಸಾಮಾಜಿಕ ಮುಖಂಡರ ಬಗೆಗೂ ಪಾ.ವೆಂ. ಚಿಂತಿತರಾಗಿದ್ದಾರೆ. ವಿದ್ಯಾರ್ಥಿಗಳ ಶಕ್ತಿ ಅವರ ವಿಕಾಸಕ್ಕೆ ವಿನಿಯೋಗವಾಗುವುದರ ಹೊರತಾಗಿ ಕೇವಲ ಅನ್ಯರ ತೋರಿಕೆಯ ಅಂದೋಲನಗಳಿಗೆ ಬಳಕೆಯಾಗಿ ಹ್ರಾಸವಾಗುತ್ತಿದೆಯೆಂದು ಪಾ.ವೆಂ. ಕಳವಳಗೊಂಡು ಈ ಲೇಖನ ಮಂಡಿಸಿದ್ದಾರೆ. 'ವಿದ್ಯಾರ್ಥಿಗಳು ನಿರಂಕುಶ ಮತಿಗಳಾಗಬೇಕು' ಎಂದು ರಾಷ್ಟ್ರಕವಿ ಕುವೆಂಪು ಕೊಟ್ಟ ಕರೆಯನ್ನು ಈ ಸಂದರ್ಭದಲ್ಲಿ ನೆನಪಿಸಬಹುದು. ವಿದ್ಯಾರ್ಥಿಯೊಬ್ಬ ವ್ಯಕ್ತಿಗತವಾಗಿ ಒಬ್ಬ ಪ್ರಜ್ಞಾವಂತ ಘಟಕವಾಗಿ ಬೆಳೆಯುತ್ತಾ ತನ್ನ ಉದ್ಯೋಗಾಕಾಂಕ್ಷೆ (Carrier)ಯನ್ನು ಕಂಡುಕೊಳ್ಳುವುದರ ಜೊತೆಗೆ ಭವಿಷ್ಯದ ಸಾಮೂಹಿಕ ಜೀವನದ ನೆಲೆ-ಬೆಲೆಗಳನ್ನು ಕುರಿತು ಸ್ಪಷ್ಟವಾದಿತ್ವವನ್ನು ರೂಪಿಸಿಕೊಳ್ಳಬೇಕು. ಜೀವನದ ಬಗ್ಗೆ ಸಂವೇದನೆ, ಕಲ್ಪನೆ ಮತ್ತು ಆದರ್ಶದ ಆಕೃತಿಯ ನಿರ್ಮಾಣ ಈ ಅಂಶಗಳು ವಿದ್ಯಾರ್ಥಿಯ ಗಮನದಲ್ಲಿರಬೇಕು. ಇದಕ್ಕೆ ಪೂರಕವಾದ ಪ್ರಾಮಾಣಿಕ ವಾತಾವರಣ ಶಾಲೆ-ಕಾಲೇಜುಗಳಲ್ಲಿ ವ್ಯಾಪಿಸಬೇಕು. ಇಂತಲ್ಲಿ ಬೋಧಕ ವರ್ಗದ ಪಾತ್ರ ಮುಖ್ಯ. ಆದರೆ ಪಾ.ವೆಂ. ಕಂಡಂತೆ ಬೋಧಕವರ್ಗದಲ್ಲಿ ಮೊದಲನೆಯದಾಗಿ ವಿಷಯ ತಜ್ಞತೆ ಅಲ್ಪ ಪ್ರಮಾಣದಲ್ಲಿರುತ್ತದೆ. ಮಾಹಿತಿ ರೂಪದಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ದಾಟಿಸುವ ಸಾಮಾನ್ಯ ಪದ್ಧತಿಯಿಂದ ಯಾವುದೇ ವಿಷಯದ ಜ್ಞಾನ, ತತ್ವಜ್ಞಾನ ಬೆಳೆಯುವುದಿಲ್ಲ. ವಿದ್ಯಾರ್ಥಿಗಳೊಂದಿಗೆ ವಿಷಯ ಕುರಿತು ಚರ್ಚೆ ಮಾಡುವುದಂತು ದೂರ ಉಳಿಯಿತು. ಹೀಗಾಗಿ ಜಿಜ್ಞಾಸುಗಳು ಮೂಡುವುದೇ ಇಲ್ಲ. ಇಂತಹ ವಿದ್ಯಾರ್ಥಿಗಳನ್ನು ಅವೈಚಾರಿಕ ನೆಲೆಯ ಮೇಲೆ ನಡೆಯುವ ಆಂದೋಲನಕ್ಕಾಗಿ ಬಳಸಿಕೊಳ್ಳುವುದು ಸುಲಭ. ವಿದ್ಯಾರ್ಥಿಗಳ ಆಂದೋಲನದಲ್ಲಿ ಅಬ್ಬರದ ಘೋಷಣೆ ಅಥವಾ ವ್ಯವಸ್ಥೆಯ ವಿರುದ್ಧದ ಘೋಷಣೆ ಎದ್ದು ಕಾಣುತ್ತದೆ. ವಿದ್ಯಾರ್ಥಿಗಳಲ್ಲಿ ಇರುವ ಆದರ್ಶಗಳು ಕೂಡ ಅಸ್ಪಷ್ಟವೂ ದೂರಾಲೋಚನೆ ರಹಿತವೂ ಆಗಿರುವುದು ಹೆಚ್ಚು. ಇಂತಹ ವಿದ್ಯಾರ್ಥಿ ಚಳವಳಿಗಳನ್ನು ವ್ಯವಸ್ಥೆ ಪೋಲಿಸರಿಂದ ಸುಲಭವಾಗಿ ಹತ್ತಿಕ್ಕಿಬಿಡುತ್ತದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ನಿಷ್ಫಲತೆಗೆ ಕಾರಣವಾಗಿ ವಿಚಾರ ಸಮಾಜ ತೀರ ಅಲ್ಪಸಂಖ್ಯಾತವಾಗಿ ಉಳಿದುಬಿಡುತ್ತದೆ.

ಊ) ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಮನೋವೃತ್ತಿಗಳು: ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಮನೋವೃತ್ತಿಗಳು ಕುರಿತು ಪಾ.ವೆಂ. ಮಾಡಿದ ಭಾಷಣದಲ್ಲಿ ಬದಲಾವಣೆಗಳ ಅರ್ಥವನ್ನು ಮನುಷ್ಯನ ದೈಹಿಕ ಪ್ರವೃತ್ತಿಗಳಿಂದ ಹಿಡಿದು ಕೃಷಿ ಸಮಾಜ ನಿರ್ಮಾಣ ನಂತರದ ಸಾಮಾಜಿಕ ಪ್ರವೃತ್ತಿಗಳಲ್ಲಾದ ಪ್ರಕ್ರಿಯೆಗಳನ್ನು ಪಾ.ವೆಂ. ಗಮನಿಸುತ್ತಾರೆ. ವ್ಯಕ್ತಿಯಿಂದ ಸಮಾಜಕ್ಕೆ ಆಗಿರುವ ಪ್ರವೃತ್ತಿಯ ಸ್ವರೂಪವನ್ನು ಪಾ.ವೆಂ. ವಿಶ್ಲೇಷಿಸುತ್ತಾ ಮಾನವ ಇತಿಹಾಸ ಧಾಟಿಬಂದಿರುವ ಹಂತಗಳನ್ನು

ವಿವರಿಸುತ್ತಾರೆ. ಕೃಷಿ ಸಮಾಜದ ನಂತರ ಬಂದ ವಿಜ್ಞಾನ ಮತ್ತು ಔದ್ಯೋಗಿಕ ಕ್ರಾಂತಿ ಭಾರಿ ಬದಲಾವಣೆಗಳನ್ನು ಮೌಲ್ಯ ಪಲ್ಲಟಗಳನ್ನು ಗುರುತಿಸುತ್ತಾರೆ. ೨೦ನೇ ಶತಮಾನ ಒಂದರಲ್ಲಿಯೇ ಉಂಟಾದ ಅದ್ಭುತ ಬದಲಾವಣೆಗಳು ಸಮಾಜಗಳ ಸ್ವರೂಪವನ್ನು ಅನೀರಿಕ್ಷಿತವಾಗಿ ಬದಲಿಸಿ ವ್ಯಕ್ತಿ ಮತ್ತು ಸಮಾಜದ ನಡುವೆ ಉಂಟಾದ ಬಿರುಕುಗಳು ಆಧುನಿಕ ಸಮಾಜದ ಸಮಸ್ಯೆಗಳಾಗಿ ಕಾಡುತ್ತಿವೆ. ವ್ಯಕ್ತಿ ತೀರ ಸ್ವಾರ್ಥಿಯಾಗಿ ತನ್ನ ಸಂಕುಚಿತ ವಲಯವನ್ನು ನಿರ್ಮಿಸುತ್ತಾ ಸಮಾಜದ ಮೌಲ್ಯಗಳಿಂದ ಬಾಹಿರನಾಗಿದ್ದಾನೆ.

ಮನುಷ್ಯನ ಮೂಲ ಮನೋವೃತ್ತಿ ಕೃಷಿ ಸಮಾಜದ ನಂಬಿಕೆ ನಡವಳಿಕೆ ಸೀಮಿತವಿದ್ದು, ಆಧುನಿಕ ಬೇಡಿಕೆಗಳಿಗೆ ಒಗ್ಗದಂತಾಗಿದೆ. ಅಂದರೆ ಭೌತಿಕವಾಗಿ ವ್ಯಕ್ತಿ ಮತ್ತು ಸಮಾಜ ಆಧುನಿಕವಾಗಿ ಕಾಣುತ್ತದೆಯೇ ಹೊರತು ವ್ಯಕ್ತಿಯ ಮನಸ್ಸು ಮತ್ತು ಸಾಮಾಜಿಕ ಮನಸ್ಸು ಅದಕ್ಕೆ ಪೂರಕವಾಗಿ ಬೆಳೆದಿರುವುದಿಲ್ಲ. ಭ್ರಷ್ಟಾಚಾರ ಬರಿ ರಾಜಕೀಯವಾಗಿ ಇಲ್ಲ. ಅದರ ಕಬಂದ ಬಾಹುಗಳು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ವಲಯಗಳಿಗೂ ವಿಸ್ತರಿಸಿದ್ದು ಮನುಷ್ಯನ ವಿಘಟನೆಯ ವ್ಯಕ್ತಿತ್ವದ ಪರಿಣಾಮವಾಗಿರುತ್ತದೆ. ಸಾಮಾಜಿಕ ತಿಳುವಳಿಕೆ ವಿಕಾಸವಾಗುವುದು ಹೇಗೆ ಎಂದು ಪ್ರಶ್ನಿಸಿಕೊಂಡು ಪಾ.ವೆಂ. ಅವರು ಧಾರ್ಮಿಕ ನೈತಿಕ ಆಯಾಮಗಳತ್ತ ಗಮನ ಸೆಳೆಯುತ್ತಾರೆ. ಇಂದು ಧಾರ್ಮಿಕ ವಲಯದಲ್ಲಿ ಸಾಕಷ್ಟು ಜ್ಞಾನ ಸಂಪತ್ತಿದೆ. ಭೌತಿಕ ಅನುಕೂಲತೆಗಳಿವೆ. ಆದರೆ ತಾಂತ್ರಿಕವಾಗಿ ಮಾತ್ರ ಬೆಳವಣಿಗೆ ಸಾಧಿಸಿದ್ದು ಕಾಣುತ್ತದೆ. ವಿಕೃತವೆಂದರೆ ಧರ್ಮಸಂಸ್ಥೆಗಳು ಜಾತಿಗುಂಪುಗಳನ್ನು ಪೋಷಿಸುತ್ತಿವೆ. ಇಲ್ಲಿಯೂ ರಾಜಕೀಯ ತನ್ನ ಕೆಲಸ ಸಾಧಿಸುತ್ತಾ ವ್ಯಕ್ತಿಯ ನೀತಿಮತ್ತೆಯನ್ನು ನಿಯಂತ್ರಿಸುತ್ತದೆ. ಅಭಿವ್ಯಕ್ತಿಯ ಸ್ವಾತಂತ್ರದ ಮೇಲೆ ಆಗುತ್ತಿರುವ ನಿಯಂತ್ರಣ ಗ್ರಹಿಸಲಿಕ್ಕೂ ಅಸಾಧ್ಯ. ಸಾಮಾಜಿಕ ಬದಲಾವಣೆಗೆ ಆರ್ಥಿಕ, ರಾಜಕೀಯ ವ್ಯವಸ್ಥೆ ಒಂದು ಉತ್ತಮ ಸಾಧನವೆಂದು ಹೇಳಿಕೊಳ್ಳುವ ಕಮ್ಯುನಿಸ್ಟ್ ದೇಶಗಳ ಸಮಾಜದಲ್ಲಿ ಒತ್ತಾಯದಿಂದ ಮಾಡಿದ ಬದಲಾವಣೆಗಳ ಫಲವೂ ಕೂಡ ಹಿಂಸೆಯ ಫಲವಾಗಿದೆಯೇ ಹೊರತು ಅದಕ್ಕೆ ನಾಳಿನ ಸಹಜ ವಿಕಾಸದ ಲಕ್ಷಣಗಳಿಲ್ಲ. ಈ ಪ್ರಬಂಧದಲ್ಲಿ ಅವರು ಸ್ಥಳೀಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಸ್ಥಿತಿಗತಿಗಳನ್ನು ವಿಶ್ಲೇಷಿಸಿದ್ದಾರೆ. ಈ ವಿಶ್ಲೇಷಣೆ ಅಂತಿಮ ಅಥವಾ ನಿರ್ಣಾಯಕವಲ್ಲ. ಪತ್ರಕರ್ತನಾಗಿ ಪಾ.ವೆಂ. ಅವರು ಒಟ್ಟು ಪರಿಸ್ಥಿತಿಯ ಚಿತ್ರಣವನ್ನು ಕೊಟ್ಟು ಬದಲಾವಣೆಗೆ ಕೇವಲ ಚಿಂತಿಸಿದರೆ ಸಾಲದು ಕ್ರಿಯಾತ್ಮಕವಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನ ಕಾರ್ಯಕ್ಷೇತ್ರದಲ್ಲಿ ತನು-ಮನ-ಧನಗಳಿಂದ ವಿಚಾರವಾದವನ್ನು ತನ್ನದನ್ನಾಗಿ ಮಾಡಿಕೊಂಡು ಕ್ರಿಯಾಶೀಲನಾಗ ಬೇಕಾಗುತ್ತದೆ. ಅಂತಹ ಅನೇಕ ವ್ಯಕ್ತಿಗಳನ್ನು ಪಾ.ವೆಂ. ಕಂಡಿದ್ದಾರೆ. ಬೇಟಿಯಾಗಿದ್ದಾರೆ ಎಂಬುದಕ್ಕೆ ಹೊಸಗನ್ನಡದ ಹಿರಿಯರು ಕೃತಿಯಲ್ಲಿಯ ಹದಿನೇಳು ಜನ ವ್ಯಕ್ತಿ-ಶಕ್ತಿಗಳ ಕುರಿತ ಚಿತ್ರಣವನ್ನು ಗಮನಿಸಬೇಕು.

೨. **ವ್ಯಕ್ತಿ ಚಿತ್ರಣ:**

ಮಂಜೇಶ್ವರ ಗೋವಿಂದ ಪೈಗಳನ್ನು ಕು.ಶಿ. ಹರಿದಾಸ ಭಟ್ಟರೊಂದಿಗೆ ಮಂಜೇಶ್ವರಕ್ಕೆ ಹೋಗಿ ಕಾಣುತ್ತಾರೆ. ಪೈಗಳು ಆಗ ೭೧ರ ಹರೆಯದಲ್ಲಿದ್ದ ಪರಿಪಕ್ವ ಬುದ್ಧಿಯ ಹಿರಿಯರು ಅವರೊಂದಿಗೆ ಮಾತನಾಡುವಾಗ ಕರ್ನಾಟಕದ ಏಕೀಕರಣದಿಂದ ಹಿಡಿದು ಇಂದಿನ (ಅಂದಿನ) ವಿದ್ಯಾಭ್ಯಾಸ ಸ್ಥಿತಿಯವರೆಗಿನ ವಿಷಯಗಳು ಪ್ರಸ್ತಾಪವಾಗುತ್ತವೆ. ಮುಖ್ಯವಾಗಿ ಪ್ರಾಸ ಬಿಟ್ಟು ಕವಿತೆ ಬರೆದರೆ ಹೇಗೆ ಎಂಬ ಅವರ ನಿರ್ಣಯದ ಸುತ್ತ ಚರ್ಚೆ ಬರುತ್ತದೆ. ಆಕಾಲಕ್ಕೆ ಹಳೇ ವಿದ್ವಾಂಸರಿಂದ ಬಂದ ಟೀಕೆಗಳನ್ನು ಎದುರಿಸುತ್ತಾರೆ. ಸಾಹಿತ್ಯದ ರಾಶಿ ಹೊಸಗನ್ನಡದಲ್ಲಿ ಬೆಳೆಯುತ್ತಿರುವುದೇನೋ ಸಮಾಧಾನದ ವಿಷಯ, ಆದರೆ ಯೋಗ್ಯತೆಯ ಅಂಶ ಕುಗ್ಗುತ್ತಿರುವುದರ ಜೊತೆಗೆ ನಿರುತ್ಸಾಹಿಯಾಗಿದ್ದಾರೆ. ಭಾಷೆ ಸಾಹಿತ್ಯಗಳು ನಿರಂತರ ಬೆಳೆಯ ಬೇಕಾದರೆ ರಾಜಕೀಯ ಐಕ್ಯ ಭಾವನೆ ಅಗತ್ಯ ಎಂದು ಅವರು ಹೇಳಿದುದರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ನಂತರ ಉಂಟಾಗುವ ಸಂಕುಚಿತ ಪರಿಸ್ಥಿತಿಯ ಬಗ್ಗೆ ಕಳವಳವಿದೆ. ಅಂದರೆ ಸರಕಾರಗಳು ತಮ್ಮ ಪ್ರಾಂತ್ಯದಲ್ಲಿಯ ಎಲ್ಲ ಭಾಷೆಗಳ ಸಾಹಿತ್ಯಕ್ಕೂ ಮನ್ನಣೆ, ಪ್ರೋತ್ಸಾಹ ಕೊಡುವಂತ ವಾತಾವರಣವಿರಬೇಕೆಂದು ಅಪೇಕ್ಷಿಸುತ್ತಾರೆ. ಗೋವಿಂದ ಪೈ ಯವರಿಗೆ ರಾಷ್ಟ್ರಕವಿ ಪದವಿ ಸಿಕ್ಕಿದ್ದು ಮದ್ರಾಸ್ ಪ್ರಾಂತ್ಯದ ತಮಿಳು ಸರಕಾರದಿಂದ ಸ್ವಾತಂತ್ರ್ಯದ ನಂತರದ ಸಂಶೋಧನೆಯ ಕಾರ್ಯ ಇಂಗ್ಲೀಷ್ ಅಧಿಕಾರಿಗಳ ರೀತಿಗಿಂತ ಭಿನ್ನವಾಗಿ ಜರುಗಬೇಕೆಂದು ಪೈಗಳು ಆಶೀಸುತ್ತಾರೆ. ಇದರರ್ಥ ಅವರು ಈ ವರೆಗೆ ನಡೆಸಿದ ಸಂಶೋಧನಾ ಮಾರ್ಗ ಇಂಗ್ಲೀಷರಿಗಿಂತ ಭಿನ್ನವಾಗಿತ್ತೆಂಬುದು ಸ್ಪಷ್ಟ. ಪೈಗಳು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಸಮ್ಮೇಳನದಲ್ಲಿ ತನ್ನ ಮೆರವಣಿಗೆ ಆಗಬಾರದು, ತಮ್ಮನ್ನು ವ್ಯಕ್ತಿಗತವಾಗಿ ಪ್ರಸಿದ್ಧಿಸಬಾರದು, ಸಮ್ಮೇಳನಾಧ್ಯಕ್ಷನಾಗಿ ತನ್ನಿಂದ ವ್ಯಕ್ತವಾಗುವ ವಿಚಾರಗಳನ್ನು ಕುರಿತು ಚರ್ಚೆಯಾಗಬೇಕು ಮತ್ತು ನಾಡಿನಲ್ಲಿ ಸಾಹಿತ್ಯಕ ವಾತಾವರಣ ವ್ಯಾಪಕವಾಗಬೇಕೆಂಬುದು ಅವರ ಆಶಯವಾಗಿದೆಯೆಂದು ಪಾ.ವೆಂ. ಸ್ಪಷ್ಟಪಡಿಸುತ್ತಾರೆ.

ಡಾ.ಶಿವರಾಮ ಕಾರಂತರು: ಕೋಟ ಶಿವರಾಮ ಕಾರಂತರು ೬೭ ಪ್ರಾಯ ದಾಟಿದಾಗ ಉಡುಪಿಯ ವಿದ್ವತ್‌ಜನ ಅವರಿಗೆ **ಕಾರಂತ ಪ್ರಪಂಚ**ವೆಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದರು. ಬಹುಮುಖ ಕಾರಂತರ ಸಮಗ್ರ ದರ್ಶನ ಈ ಗ್ರಂಥದಿಂದ ಆಗಿದೆ. ಇದನ್ನು ಮುಂದಿಟ್ಟುಕೊಂಡು ಪಾ.ವೆಂ. ಶಿವರಾಮ ಕಾರಂತ **ಪ್ರಪಂಚ** ಲೇಖನವನ್ನು ಕಸ್ತೂರಿಯಲ್ಲಿ ಪ್ರಕಟಿಸಿದರು. ಕಾರಂತರ ೧) ವ್ಯಕ್ತಿತ್ವ ೨)ಕಲಾಸಾಧನೆ ೩)ಸಾಹಿತ್ಯ ಸಾಧನೆ ೪) ಕಾದಂಬರಿ ಸಾಧನೆ ಈ ೪ ಅಂಶಗಳು ಈ ಗ್ರಂಥದಲ್ಲಿವೆ. ಇಲ್ಲಿಯ ೫೫ ಲೇಖನಗಳನ್ನು ಪಾ.ವೆಂ. ಅವಲೋಕಿಸುತ್ತಾ ಕಾರಂತರ ವ್ಯಕ್ತಿಚಿತ್ರವನ್ನು ಓದುಗರಿಗೆ ತೋರಿಸುತ್ತಾರೆ. ಬದುಕಿನ ಅರ್ಥವೇನು? ಎಂಬ ಪ್ರಶ್ನೆಯನ್ನು ಮುಂದಿಟ್ಟು

ಕೊಂಡು ಕಾರಂತರು ಮಾಡಿದ ಕೆಲಸಗಳು ಮುಖ್ಯವಾಗಿ ವೈಚಾರಿಕ ಹಾಗೂ ಸಾಹಿತ್ತ್ಯಿಕ. ಮನುಷ್ಯ, ವ್ಯಕ್ತಿ, ಸಮಾಜ, ವಿಶ್ವಪರಿಸರ ಇವುಗಳನ್ನು ಪ್ರತಿಕ್ರಮಿಸುವ ಕಲಾಭಿವ್ಯಕ್ತಿಗಳನ್ನು ಕಾರಂತರು ಪರಸ್ಪರ ಮುಖಾಮುಖಿಯಾಗಿಡುತ್ತಾ ವಿಚಾರವನ್ನು ಮಾಡುತ್ತಾರೆ ಮತ್ತು ಬರೆಯುತ್ತಾರೆ. ಕಾರಂತರ ಬರಹಗಳನ್ನು ವಿಮರ್ಶಿಸುವ ಲೇಖನಗಳು ಈ ಗ್ರಂಥದಲ್ಲಿ ಪ್ರಬುದ್ಧರಿಂದ ರಚನೆಯಾಗಿದೆ. ಪ್ರತಿಯೊಬ್ಬರು ತಮ್ಮ ಸ್ವಂತ ನೆಲೆಯಿಂದಲೇ ಕಾರಂತರನ್ನು ಕಂಡಿದ್ದಾರೆ. ಅವರ ಅಗಾಧ ವ್ಯಕ್ತಿತ್ವನ್ನು ತಲಸ್ಪರ್ಶಿಯಾಗಿ ಕಂಡಿದ್ದಾರೆ. ಇದನ್ನು ಪಾ.ವೆಂ. ತುಂಬಾ ಗೌರವದಿಂದ ಮೆಚ್ಚಿಕೊಂಡು ಕಾರಂತರಿಗೆ ತಮ್ಮ ಪ್ರತಿಕ್ರಿಯೆಯನ್ನು ಕೊಟ್ಟಿದ್ದಾರೆ. ಗ್ರಂಥಾಂಥರಂಗದ ಮೂಲಕ ಒಬ್ಬ ಲೇಖಕನನ್ನು ಹೇಗೆ ಚಿತ್ರಿಸಬಹುದೆಂಬುದಕ್ಕೆ ಈ ಲೇಖನ ಉದಾಹರಣೆಯಾಗಿದೆ.

ಅ.ನ.ಕೃಷ್ಣರಾಯರು: ಸ್ವಭಾವತಃ ಪ್ರಗತಿಶೀಲ ಮನೋಧರ್ಮದ ಪಾ.ವೆಂ. ಅವರು ಅ.ನ.ಕೃ.ರವರನ್ನು ೧೯೩೪-೩೫ರಲ್ಲಿಯೇ ಉಡುಪಿಯಲ್ಲಿ ಬೇಟಿಯಾಗಿದ್ದರು. ಆ ಹೊತ್ತಿಗೆ ನಾಟಕ, ಸಣ್ಣಕಥೆಗಳಿಂದ ಅ.ನ.ಕೃ. ಹೆಸರು ಮಾಡಿದರು. ಜೊತೆಗೆ ಚಿತ್ರಕಲೆಯ ಬಗ್ಗೆ ವಿಮರ್ಶೆಗಳನ್ನು ಬರೆದಿದ್ದರು. ಅ.ನ.ಕೃ.ರವರ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಾ.ವೆಂ. ತುಂಬ ಮೆಚ್ಚಿಕೊಂಡಿದ್ದಾರೆ. ತಮ್ಮ ಆಲೋಚನೆಗಳನ್ನು ಪ್ರಭಾವಶಾಲಿಯಾಗಿ ಮಂಡಿಸುವ ಭಾಷಣಕಾರ. ಅ.ನ.ಕೃ. ಆಚಾರ್ಯರ ಮೆಚ್ಚುಗೆಯ ಮುಖ್ಯ ಅಂಶ. ೨ನೇ ಸಲ ಅ.ನ.ಕೃ.ರವರನ್ನು ಕಂಡದ್ದು (೧೯೪೪) ಧಾರವಾಡದಲ್ಲಿ. ಅ.ನ.ಕೃ.ರ ಜ್ಞಾಪಕಶಕ್ತಿ ಮತ್ತು ಸಾಹಿತ್ಯದ ಮೇಲಿನ ಅವರ ವಿಮರ್ಶಾತ್ಮಕದೃಷ್ಟಿಪಾ.ವೆಂ. ಅವರನ್ನು ಆಕರ್ಷಿಸಿದೆ. ಪುಸ್ತಕ ವಿಮರ್ಶೆಗೂ, ವ್ಯಕ್ತಿಯ ಮೈತ್ರಿಗೂ ವ್ಯತ್ಯಾಸವಿರುವುದನ್ನು ಅ.ನ.ಕೃ. ಪಾಲಿಸಿದ ವ್ಯಕ್ತಿ. ಅನೇಕ ವಿವಾದಗಳ ಕೇಂದ್ರವಾಗಿದ್ದ ಅ.ನ.ಕೃ. ತಮ್ಮದೇ ಆದ ವಾದಸರಣಿಯನ್ನು ಓದುಗರ ಮುಂದೆ ಆಕರ್ಷಕವಾಗಿಟ್ಟು ಯಾವತ್ತು ಗೆಲುವಿನ ಭಾವದಲ್ಲಿರುತ್ತಿದ್ದರು. ಕನ್ನಡ ಕಾದಂಬರಿ ಓದುವ ಚಟವನ್ನು ಸಾರ್ವಜನಿಕಗೊಳಿಸಿದ ಅ.ನ.ಕೃ.ರವರು ಸಾಹಿತ್ಯ ಪ್ರವೇಶಕ್ಕೆ ಓದುಗರಿಗೆ ಪ್ರಚೋದನೆಕೊಟ್ಟರು. ಈ ದೃಷ್ಟಿಯಿಂದಲಾದರೂ ಅ.ನ.ಕೃ. ಮೆಚ್ಚಬೇಕಾದ ವ್ಯಕ್ತಿ.

ಸಮನ್ವಯದ ಉಪಾಸಕರು ವಿ.ಕೃ. ಗೋಕಾಕ್: ವಿ.ಕೃ.ಗೋಕಾಕರು ತೀರಿ-ಕೊಂಡದ್ದು, ೧೯೯೨ ಎಪ್ರಿಲ್ ೨೮ರಂದು ಮರುದಿನವೇ ಸಂಯುಕ್ತ ಕರ್ನಾಟಕದಲ್ಲಿ ಪಾ.ವೆಂ. ಗೋಕಾಕರ ಕಣ್ಮರೆಯನ್ನು ಒಬ್ಬ ಓದುಗನಾಗಿ ಪತ್ರ ಬರೆದು ಸೂಚಿಸಿದರು. ಪತ್ರದಲ್ಲಿ ಗೋಕಾಕರ ಹಿರಿಮೆಯನ್ನು ಮೆಚ್ಚಿ ಶ್ರದ್ಧಾಂಜಲಿ ಅರ್ಪಿಸಿದರು. ಇವರ ಮೇಲೆ ಗೋಕಾಕರ ಪ್ರಭಾವ ಆಗಾಧವಾಗಿತ್ತೆಂಬುದು ಸ್ಪಷ್ಟ. ವಿಚಿತ್ರವೆಂದರೆ ಮುಂದೆ ಐದೇ ದಿನಕ್ಕೆ ಪಾ.ವೆಂ. ಕಣ್ಮರೆಯಾದರು. ಪಾ.ವೆಂ. ಅವರಿಗೆ ಗೋಕಾಕರ ಮೊದಲ ಪರಿಚಯುವಾದ್ದು ೧೯೫೨ರಲ್ಲಿ ಆಗ ಅವರು ಕರ್ನಾಟಕ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಅದಕ್ಕಿಂತ ಮುಂಚೆ ಗೋಕಾಕರ ಬರಹಗಳನ್ನು ಓದಿದ್ದರು.

ಅವರ ವಾಕ್ ಪ್ರಹಾರವನ್ನು ಕೇಳಿ ಪ್ರಭಾವಿತರಾಗಿದ್ದರು. ಗೋಕಾಕರು ಪ್ರಾಧ್ಯಾಪಕರಾಗಿ, ಕಾಲೇಜು ಪ್ರಿನ್ಸ್‌ಪಾಲರಾಗಿ ಹೆಚ್ಚು ಕಾಲ ಕೆಲಸ ಮಾಡಿದ್ದು, ಕರ್ನಾಟಕದ ಹೊರಗೆ. ಆದರೆ ಕನ್ನಡವನ್ನು ಎಂದೂ ಮರೆಯಲಿಲ್ಲ ಅಲ್ಲಿದ್ದು ಬರೆದರು, ಮಾತನಾಡಿದರು ಮಿಗಿಲಾಗಿ ಅಲ್ಲಲ್ಲಿಯ ಜನಗಳಿಗೆ ಕರ್ನಾಟಕದ ಹಿರಿಮೆಯನ್ನು ಮನಗಾಣಿಸಿದರು. ಗೋಕಾಕರೊಂದಿಗೆ ಪಾ.ವೆಂ. ಅವರು ಒಮ್ಮೆ ಆಪ್ತವಾಗಿ ಮಾತನಾಡಿದಾಗಿ ಅವರ ಸಾಹಿತ್ಯೋಪಸನೆಯ ಹಾಗೂ ಜೀವನ ದೃಷ್ಟಿಯ ಕಿಂಚಿತ್ ದರ್ಶನ ನನಗಾಯಿತು ಎಂದಿದ್ದಾರೆ.

ಗೋಕಾಕರ ಕಾವ್ಯ ರಚನಾ ಪ್ರವೃತ್ತಿ ಮಹಾಕಾವ್ಯದ ರಚನಾ ಒಲವಿನದು. ಅಂದರೆ ಸಾಹಿತ್ಯದಲ್ಲಿ ಅವರದು ಮಹತ್ವಾಕಾಂಕ್ಷೆಯ ಗುರಿ. ೩೫ ವರ್ಷಗಳ ಕಾಲ ಅವರು ಬರೆಯುತ್ತಾ ಬಂದ ನಾಲ್ಕೈದು ಕಾದಂಬರಿಗಳು ಕೊನೆಗೆ ಒಂದು ಮಹಾಕಾದಂಬರಿಯ ರೂಪವನ್ನು ತಳೆದು **ಸಮರಸವೇ ಜೀವನ** ಎಂದಾಗುತ್ತದೆ. ಎಲ್ಲಿಯ ಕಥಾವಸ್ತು ಗೋಕಾಕರ ಆತ್ಮಕತೆ, ಅನುಭವ ಕಥನ, ಉತ್ತರ ಕರ್ನಾಟಕದ ಮಧ್ಯಮವರ್ಗದ ಕುಟುಂಬ ಜೀವನ ಸ್ಥಿತಿಗತಿ, ಹೊಸವಿದ್ಯೆಯ ಪರಿಣಾಮವಾಗಿ ತಲೆಯೆತ್ತಿದ ಸಮಾಜ, ಪಾಶ್ಚಾತ್ಯ ಪ್ರಭಾವ ಇವುಗಳ ಕಲಸು ಮೇಲೊಗರವಾಗಿದೆ. ಈ ಗದ್ಯರಚನೆಯ ನಂತರ ಅವರು **ಭಾರತಸಿಂಧುರಶ್ಮಿ** ಪೌರಾಣಿಕ ಕಥಾವಸ್ತುವನ್ನು ಸ್ವಚ್ಛಂದ ಛಂದೋಕಾವ್ಯವಾಗಿ ರಚಿಸಿದರು. ಋಗ್ವೇದ ಕಾಲದ ಭಾರತವನ್ನು ಅರ್ಥಮಾಡಿಕೊಳ್ಳುವ ಒಂದು ಮಹಾಪ್ರಯತ್ನ ಈ ಕೃತಿಯಾಗಿದೆ. ಈ ಕೃತಿಯ ಬಗ್ಗೆ ಗೋಕಾಕರು ಹೇಳಿದ ಮಾತು ಗಮನಾರ್ಹವಾಗಿದೆ.

'ನಮಗೆ ಅಗತ್ಯವಿದ್ದುದು ಇಡೀ ಪರಂಪರೆಯ ಪ್ರಜ್ಞೆಯೇ ಹೊರತು ಅಷ್ಟಿಷ್ಟು ತುಂಡು ಪ್ರಜ್ಞೆಯಲ್ಲ. ಪರಂಪರೆಯ ಅರಿವಿಲ್ಲದವನದು ತ್ರಿಶಂಕು ಸ್ಥಿತಿಯಾಗಬಹುದು. ಹಿಂದಿನ ಯಾವುದರ ಅನುಭವವಿಲ್ಲದೆ ಸ್ವಂತ ಮಾತ್ರದಿಂದಲೇ ಬರೆಯುತ್ತಿದ್ದೇನೆ. ಎಂಬವನ ಬರವಣಿಗೆ ಹೆಚ್ಚೆಂದರೆ ದೀಪದ ಹುಳುಗಳಂತೆ ಅಲ್ಪಾಯುಷಿಯಾಗಬಹುದು'.

ವಿ.ಕೃ.ಗೋಕಾಕರದು ಕನ್ನಡ ಕಾವ್ಯದಲ್ಲಿ ಸಮನ್ವಯಕಾರನ ಪಾತ್ರ. ರಮ್ಯ ಅಥವಾ ನವೋದಯ ಕಾವ್ಯದ ಸತ್ವವನ್ನು ಪರೀಕ್ಷಿಸಿ ಗೋಕಾಕರು ಅಭ್ಯುದಯ (Prograsive) ಎಂಬೊಂದು ಕವಲನ್ನು ಕಂಡುಕೊಂಡರು. ಸ್ವಚ್ಛಂದ ಚಂದ 'ಸಮುದ್ರ ಗೀತೆಗಳು' ಅವರಿಂದ ಬಂದವು ಆಮೇಲೆ ನವ್ಯತಂತ್ರದ ಮತ್ತೊಂದು ಹಾದಿಯನ್ನು ಕಂಡುಕೊಂಡು ಚಿಂತನಪರ ಕಾವ್ಯವನ್ನು ಆರಂಭಿಸಿದರು. ಹೀಗೆ ೩ ಬಗೆಯ ಅಭಿವ್ಯಕ್ತಿ ಪ್ರವೃತ್ತಿಗಳನ್ನು ಗೋಕಾಕರು ಪ್ರಯೋಗಿಸಿದರು. ನವೋದಯ, ನವೋದಯ ಆದರ್ಶ, ಅಭ್ಯೋದಯದ ಅಕಾಂಕ್ಷೇ ನವ್ಯದ ಪ್ರಾಯೋಗಿಕ ದೃಷ್ಟಿ ಇವೆಲ್ಲವುಗಳ ಸಮನ್ವಯ ಸಾಧಿಸುವ ಮಾರ್ಗವನ್ನವರು ಕನ್ನಡದಲ್ಲಿ ನಿರ್ಮಿಸಿದರು. ಗೋಕಾರರ ಚಿಂತನ ಪರತೆಯಲ್ಲಿ ಭಾವನಾವೇಶವಿದೆ ಮತ್ತು ಸಮಾಜ ಪ್ರಜ್ಞೆಯೂ ಇದೆ. ಗೋಕಾಕರ ಚೈತನ್ಯ ಮುಖ್ಯವಾಗಿ

ವ್ಯಕ್ತಿಯ ಆದರ್ಶದ ಉನ್ನತೀಕರಣವಾಗಿದೆ. ಅವರದನ್ನೇ ಪ್ರಮಾಣಿಕವಾಗಿ ಸಾಧಿಸಿದ ಎತ್ತರದ ವ್ಯಕ್ತಿಯಾಗಿದ್ದಾರೆ.

ಹ.ರಾ. ಪುರೋಹಿತ, ಬುರ್ಲಿ ಬಿಂದು ಮಾದವ್, ಜಿ.ವಿ. ಜೋಶಿ ಮತ್ತು ಮೊಹರೆಯವರು. ಪಾ.ವೆಂ. ಜೀವನದ ಮೇಲೆ ಬೀರಿದ ಪ್ರಭಾವ ಅವರ ಕುರಿತು ಬರೆದ ಈ ಲೇಖನಗಳಲ್ಲಿ ಎದ್ದು ಕಾಣುತ್ತದೆ. ಈ ನಾಲ್ವರನ್ನು ಹುಬ್ಬಳ್ಳಿ, ಧಾರವಾಡಗಳಲ್ಲಿ ಪ್ರತ್ಯಕ್ಷ ಕಂಡು, ಅವರ ಜೊತೆ ಸಾಹಿತ್ಯಕ ಕೆಲಸಗಳನ್ನು ಮಾಡಿದ ಅನುಭವ, ಅವರಿಂದ ತಿಳಿದುಕೊಂಡ ಅಂಶಗಳು ಇಲ್ಲಿ ಜ್ಞಾಪಕಕ್ಕೆ ಬಂದಿವೆ. ಹನುಮಂತರಾವ್, ಮೊಹರೆ ಇವರಿಗೆ **ಸಂಯುಕ್ತ ಕರ್ನಾಟಕ**ದಲ್ಲಿ ಆಶ್ರಯಕೊಟ್ಟು ಬರಹಗಾರನಾಗಿ **ಕಸ್ತೂರಿ** ಸಂಪಾದಕನಾಗಿ ಬೆಳೆಯಲು ಕಾರಣರಾದವರು. ಮೊಹರೆಯವರು ಅಕಾಲಿಕವಾಗಿ ತೀರಿಕೊಂಡರು. **ಸಂಯುಕ್ತ ಕರ್ನಾಟಕ**ವನ್ನು ಪರಿಕಲ್ಪಿಸಿ, ರೂಪಿಸಿ ನಾಡಿನಲ್ಲಿ ಅದಕ್ಕೊಂದು ಸ್ಥಾನವನ್ನು ಕೊಟ್ಟವರು ಮೊಹರೆ. ಅಂತವರನ್ನು 'ಲೋಕ ಶಿಕ್ಷಣ ಟ್ರಸ್ಟ್' ಕಡ್ಡಾಯವಾಗಿ ಮನೆಗೆ ಕಳಿಸಿತು. ಇಂತಹ ಅಮಾನವೀಯ ಫಲವನ್ನು ಪಡೆಯುವ ದುರ್ದೈವ ಅವರಾದಾಗಿತ್ತು. ಅದಕ್ಕಾಗಿ ಪಾ.ವೆಂ. ಅವರಿಗೆ ವಿಷಾದವಿದೆ. ಸುಮಾರು ೧೬ ವರ್ಷ ಮೊಹರೆಯವರ ಕೆಳಗೆ ದುಡಿದ ಪಾ.ವೆಂ. ಅವರನ್ನು ನೆನೆಸಿ ಬರೆದ ಒಂದೇ ಪುಟದ ನೆನಪಿನ ಲೇಖನದಲ್ಲಿ ಮೊಹರೆಯವರ ಮಾನವತೆಯನ್ನು ಎತ್ತಿ ತೋರಿಸಿದ್ದಾರೆ. ಮೊಹರೆಯವರ ಮಾನವತೆಯ ಹೆಗ್ಗುರುತೆಂದರೆ ಎಲ್ಲ ಮಾನವರಲ್ಲಿ ಅವರಿಗಿದ್ದ ಆಸ್ಥೆ (Intrest) ತಮ್ಮ ಜೊತೆಗೆ ಕೆಲಸಮಾಡುವ ಪ್ರತಿಯೊಬ್ಬನ ಶಕ್ತಿಯುಕ್ತಿ ಕಾರ್ಯಕ್ಷಮತೆಯ ಯೋಗ್ಯತೆ ಮೊಹರೆಯವರಿಗೆ ಸ್ಪಷ್ಟವಿತ್ತು. ಸಂಪಾದಕನಾಗಿ ಅವರು ದುಡಿಸಿಕೊಳ್ಳುವ ರೀತಿಯಲ್ಲಿ ಸರ್ವಾಧಿಕಾರಿಯ ಗತ್ತು ತುಂಬಿರುತ್ತಿತ್ತು. ನಿಷ್ಟುರತೆಯಿಂದ ವರ್ತಿಸುತ್ತಿದ್ದರು. ಅದರು ಗುಣಮಟ್ಟದ ರಕ್ಷಣೆಗಾಗಿ. ಆದರೆ ಅವರೆಂದು ಯಾರನ್ನು ಕಠೋರವಾಗಿ ಶಿಕ್ಷಿಸಲಿಲ್ಲ. ದುರ್ದೈವವೆಂದರೆ 'ಟ್ರಸ್ಟ್' ನಿಂದ ಅವರ ಶಿಕ್ಷೆಗೆ ಒಳಗಾದುದು ವ್ಯಂಗ್ಯ, ವಿಪರ್ಯಾಸ. ಇದನ್ನು ಪಾ.ವೆಂ. ಇಲ್ಲಿ ದಾಖಲಿಸಿದ್ದಾರೆ. ಮಾನವರಲ್ಲಿಯ ಆಸ್ಥೆಯೆಂದರೆ ಒಬ್ಬೊಬ್ಬ ವ್ಯಕ್ತಿಯ ಗುಣ ಯೋಗ್ಯತೆಯನ್ನು ಗಮನಿಸಿ ಅವರಲ್ಲಿ ಅದನ್ನು ಬೆಳೆಸುವುದು. ಪಾ.ವೆಂ. ಬೆಳೆದು ಬಂದದ್ದು ಅಂತಹ ಒಬ್ಬ ಮಾನವತೆಯ ನೇಕಾರಮೂರ್ತಿಯಾಗಿದ್ದ, ಧೀಮಂತ ಪತ್ರಕರ್ತನ ನೆರಳಿನಲ್ಲಿ.

ಹ.ರಾ. ಮೊಹರೆಯವರ **ಸಂಯುಕ್ತ ಕರ್ನಾಟಕ**ದಲ್ಲಿ ಅವರ ಜೊತೆಗೆ ಕೆಲಸಮಾಡಿದ ಇನ್ನೊಬ್ಬ ಧೀಮಂತ ವ್ಯಕ್ತಿ **ಹ.ರಾ. ಪುರೋಹಿತರು**. ಬಾಗಲಕೋಟೆಯಲ್ಲಿ ಹುಟ್ಟಿದ (೧೯೦೦) ಹ.ರಾ. ಪುರೋಹಿತರು ಮೊದಲಿಗೆ ವೈದಿಕ ವಿದ್ಯೆಯನ್ನೇ ಕಲಿತು ಆಮೇಲೆ ಲೌಕಿಕ ವಿದ್ಯೆಗೆ ಪರಿವರ್ತಿತರಾಗಿ ಎಂ.ಎ. ಪದವಿಧರರಾದರು. ಹನುಮಂತಾಚಾರ್ಯರಲ್ಲಿ ಪ್ರತಿಭೆ ಇದ್ದಷ್ಟೇ ರಾಷ್ಟ್ರೀಯ ಆಂದೋಲನದ ಬಗ್ಗೆ ಆಸಕ್ತಿ ಕಳಕಳಿ ಇದ್ದವು. ಖಾದಿ ವ್ರತವನ್ನು ತೊಟ್ಟು ತಮ್ಮ ಹಿರಿಯಣ್ಣನಂತೆ ಅವರು ರಾಷ್ಟ್ರದೀಕ್ಷೆಯನ್ನು ಕೈಕೊಂಡರು.

ಕಾಂಗ್ರೆಸ್ಸಿನ ಸ್ವಯಂ ಸೇವಕರಾದರು. ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರು. ಸಂಬಳ ತರುವ ನೌಕರಿಯನ್ನು ಹಿಡಿಯದೆ ಪುರೋಹಿತರು ರಂ. ದಿವಾಕರರ **ಕರ್ಮವೀರ** ಪತ್ರಿಕೆಯ ಸಹಾಯಕ ಸಂಪಾದಕರಾಗಿ ನಾಡಿನ ಸೇವೆಗೆ ಸಿದ್ಧರಾದರು. ಪತ್ರಿಕೆ ನಿಂತಾಗ 'ಕರನಿರಾಕರಣ' ಚಳವಳಿಯ ಭೂಗತ ಸಂಘಟನೆಗೆ ಸೇರಿದರು. ಅವರ ತ್ಯಾಗ, ಸಾಹಸ, ದುಡಿಮೆ ಅಗಾಧವಾದದ್ದು. ತನ್ನ ಹಿರಿಯಣ್ಣ ಅಕಾಲಿಕವಾಗಿ ಸತ್ತಾಗ ಅವರ ಕುಟುಂಬದ ಹೊಣೆಯನ್ನು ತಾವು ಹೊತ್ತು ಅಖಂಡ ಬ್ರಹ್ಮಚಾರಿಯಾಗಿ ಉಳಿದ ನಿಸ್ಪೃಹತೆ ಅವರದು. ಎಷ್ಟೋ ದಿನಗಳಾದ ಮೇಲೆ ಪುರೋಹಿತರು **ಕರ್ಮವೀರ**ವನ್ನು ಮತ್ತೆ ಸೇರಿ ಬೆಳೆಸಿದರು. ಜೊತೆಗೆ **ಸಂಯುಕ್ತ ಕರ್ನಾಟಕ**ಕ್ಕೂ ಸಹಾಯ ಮಾಡಿದರು. **ಲೋಕ ಶಿಕ್ಷಣ ಗ್ರಂಥಮಾಲೆ**ಯನ್ನು ಬೆಳೆಸಿದರು. ಪುರೋಹಿತರು ಹೆಸರಿಗೆ ತಕ್ಕಂತೆ ಹನುಮಂತನಂತೆ ಪತ್ರಿಕೆಗಳ ಪ್ರಕಟಣೆಗಾಗಿ, ಪ್ರಸಾರಕ್ಕಾಗಿ ದುಡಿದರು. ಪತ್ರಿಕಾಕರ್ತನಿಗೆ ಇರಬೇಕಾದ ಬಹುಮುಖಿ ಆಸಕ್ತಿ, ನೆನಪಿನ ಶಕ್ತಿ ಮತ್ತು ಸತತ ಬರೆಯುವ ಟಿಪ್ಪಣೆ ಹಾಕಿಕೊಳ್ಳುವ ಯುಕ್ತ ಪುರೋಹಿತರಲ್ಲಿ ಸಾಕಷ್ಟು ಇತ್ತು. ಅವರದು ಧಾರ್ಮಿಕ ವ್ಯಕ್ತಿತ್ವ ಎಲ್ಲ ಅನುಷ್ಠಾನಗಳನ್ನು ನಡೆಸುತ್ತಿದ್ದರು ಕರ್ಮಠರಾಗಿರಲಿಲ್ಲ. ಈ ಅಂಶ ಪಾ.ವೆಂ. ಅವರನ್ನು ಪ್ರಭಾವಿಸಿದಂತಿದೆ. ಬ್ರಹ್ಮಚಾರಿಯಾಗಿದ್ದರು ಅವರಿಗೆ ಸುತ್ತಮುತ್ತಲಿನ ಸಾಂಸಾರಿಕರ ಬದುಕಿನ ಬಗ್ಗೆ ಕಾಳಜಿ ಇತ್ತು. ಸ್ನೇಹ, ಸೌಹಾರ್ಧತೆ ಸಹಜವಾಗಿದ್ದವು. ಪಾ.ವೆಂ. ಅವರಲ್ಲಿಯ ಸಂಪನ್ಮೂಲಗಳನ್ನು ಅರಿತು ಕರ್ಮವೀರಕ್ಕಾಗಿ ಇವರನ್ನು ದುಡಿಸಿಕೊಂಡರು. **ಓದುಗರೊಡನೆ ಹರಟೆ** ಅಂಕಣವನ್ನು **ಕರ್ಮವೀರ**ದಲ್ಲಿ **ಲಾಂಗೂಲಾಚಾರ್ಯ** ಹೆಸರಿನಿಂದ ಇವರು ಬರೆಯ ತೊಡಗಿದುದನ್ನು ಪ್ರೋತ್ಸಾಹಿಸಿದವರು ಪುರೋಹಿತರೇ. ಅವರ ಗುಣಗ್ರಾಹಕತೆ, ನಿರ್ಮತ್ಸರ ಬುದ್ಧಿ, ಸ್ನೇಹ ಸೌಹಾರ್ಧತೆಯ ವರ್ತನೆ ಒಬ್ಬ ಯಶಸ್ವಿ ಪತ್ರಕರ್ತನ ಗುಣಗಳೆಂದೇ ಪಾ.ವೆಂ. ಭಾವಿಸಿದ್ದಾರೆ. ಕಟ್ಟಾ ಬ್ರಾಹ್ಮಣ ನಿಷ್ಠ ಮಾಧ್ವರಾಗಿದ್ದ ಪುರೋಹಿತರು ಜಡ್ಡುಗಟ್ಟಿದ ಬ್ರಹ್ಮಚಾರಿಯಾಗಿರಲಿಲ್ಲ ಅವರದು ತೆರೆದ ಮನಸ್ಸು ಮತ್ತು ಧಾರ್ಮಿಕ ವೃತ್ತಿಯ ಸಾಮಾಜಿಕ ಪ್ರವೃತ್ತಿ. ಇಂತಹದೇ ಇನ್ನೊಂದು ವ್ಯಕ್ತಿತ್ವ ಧಾರವಾಡದ **ಬುರ್ಲಿ ಬಿಂಧು ಮಾದವ** (೧೮೯೯–೧೯೮೧) ಪುರೋಹಿತ ಮತ್ತು ಬುರ್ಲಿಯವರ ನಡುವೆ ಕೆಲವು ಸ್ವಾರಸ್ಯಕರ ಸಾಮ್ಯಗಳಿವೆ. ಇಬ್ಬರು ಬಾಗಲಕೋಟೆಯವರು, ವೈಷ್ಣವ ವೈದಿಕ ಮನೆತನದಿಂದ ಬಂದ ಮಾಧ್ವನಿಷ್ಠೆಯನ್ನು ಆಚರಣೆಯಲ್ಲಿ ತಂದವರು. ಆಗಿನ ರಾಷ್ಟ್ರೀಯ ಚಳವಳಿಯಲ್ಲಿ ಧುಮುಕಿದವರು. ಬ್ರಿಟೀಷರ ವಿರುದ್ಧ ಸಂಘಟನೆ ಮಾಡಿ ಹೋರಾಡಿದರು. ಖಾದಿಧರಿಸಿ ಸಮಾಜ ಸೇವೆ ಮಾಡಿ ತಮ್ಮ ಸಾತ್ವಿಕತೆಯನ್ನು ಸಮಾಜಕ್ಕೆ ತುಂಬಿದವರು. ಸನಾತನ ಬ್ರಾಹ್ಮಣರಂತೆ ಇದ್ದು ಮಡಿ ಮೈಲಿಗೆಗಳಾಚೆ ಸಮಾಜವನ್ನು ಪ್ರೀತಿಸಿ ದುಡಿದವರು. ಅಂದರೆ ಜಡತ್ವವನ್ನು ಮೀರಿ ಚಲನಶೀಲರಾಗಿ ಸ್ವತಂತ್ರ ಸಮಾಜದ ಆಶೋತ್ತರಗಳಿಗೆ ಸ್ಪಂದಿಸಿ ವ್ಯಕ್ತಿಯ ಮೋಕ್ಷ ಆಧುನಿಕ ಸಂದರ್ಭದಲ್ಲಿ ಸಾಮಾಜಿಕವಾಗಿಯೇ ಸಾಧ್ಯವಾಗಬೇಕೆಂದು ನಂಬಿ ನಡೆದವರು. ಇಂತಹ ಸೌಮ್ಯವುಳ್ಳ ವ್ಯಕ್ತಿಗಳು ಪಾ.ವೆಂ. ಅವರಿಗೆ ಸಾಹಿತ್ಯ ಸಮಾಜದಲ್ಲಿಯ ವಿಶಿಷ್ಟ ಶಕ್ತಿಯಾಗಿಯೇ ಕಾಣಿಸಿದ್ದಾರೆ.

ಬುರ್ಲಿ ಬಿಂದು ಮಾಧವಚಾರ್ಯರು: ಮಿಂಚಿನ ಬಳ್ಳಿಯಿಂದ ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದಾರೆ. ೧೯೩೮ರಲ್ಲಿ ಅವರು ತಮ್ಮ ಸಾಹಿತ್ಯಕ ವ್ಯಕ್ತಿತ್ವವನ್ನು ಹೆಚ್ಚು ಪ್ರಚಾರಗೊಳಿಸಲು ಪುಸ್ತಕ ಪ್ರಕಾಶನಕ್ಕೆ ತೊಡಗಿದರು. ಕನ್ನಡದಲ್ಲಿ ವಿಚಾರಸಾಹಿತ್ಯ ಬೆಳೆದು ಕನ್ನಡಿಗರ ವಿಶ್ವಜ್ಞಾನ, ಸಮಕಾಲೀನ ಸ್ಪಂದನೆ ಹೆಚ್ಚಬೇಕು ನಾಡು ನುಡಿಗಳಿಗೆ ಪ್ರೌಢಿಮೆ ಪ್ರಾಪ್ತವಾಗಿ ಕರ್ನಾಟಕದ ಏಕೀಕರಣದ ಹಾದಿ ಸುಗಮವೂ, ವಿಸ್ತಾರವೂ ಆಗಬೇಕು. ಈ ಸಂಕಲ್ಪದಿಂದ ಅವರು **ಮಿಂಚಿನ ಬಳ್ಳಿ** ಗ್ರಂಥ ಮಾಲೆಯನ್ನು ಆರಂಭಿಸಿ ಮುದ್ರಣ, ಪ್ರಕಟಣ, ವಿತರಣ ೩ ಕೆಲಸಗಳನ್ನು ಹಚ್ಚಿಕೊಂಡರು. ಸ್ವತಃ ಬರಹಗಾರರಾಗಿ ಬರೆದುದಲ್ಲದೆ ನೂರಾರು ಲೇಖಕರನ್ನು ಕಂಡು ಬರೆಸಿದ್ದರು. ಅವರಲ್ಲಿ ಪಾ.ವೆಂ. ಕೂಡ ಒಬ್ಬರು ಎಂಬುದು ಗಮನಾರ್ಹ.

ರಷ್ಯಾದ ರಾಜ್ಯ ಕ್ರಾಂತಿ (೧೯೪೩), **ಮಂಜೂಷ** (೧೯೯೨) ಗ್ರಂಥಗಳು **ಮಿಂಚಿನಬಳ್ಳಿ**ಯಿಂದಲೇ ಬಂದವು. ಆವರೆಗೆ ಪತ್ರಿಕೆಗಳಿಗಾಗಿ ಬರೆಯುತ್ತಿದ್ದ ಪಾ.ವೆಂ. ಪುಸ್ತಕ ಲೇಖಕರಾಗಿ ಮಿಂಚಿದರು. ಮುಂದೆ ೩೦ ವರ್ಷಗಳ ಕಾಲ ಮಿಂಚಿನ ಬಳ್ಳಿ ಗ್ರಂಥಮಾಲೆಯನ್ನು ಬಿಂದು ಮಾದವಾಚಾರ್ಯರು ಕಷ್ಟನಷ್ಟಗಳೊಂದಿಗೆ ನಡೆಸಿದ್ದು ಉಲ್ಲೇಖನೀಯ. ೧೧೦ಕ್ಕೂ ಹೆಚ್ಚು ವೈಚಾರಿಕ ಗ್ರಂಥಗಳು ಮುಂದಿನ ಮೂವತ್ತು ವರ್ಷಗಳ ಕಾಲ ಬಂದವು ವಿಜ್ಞಾನ ಸಂಶೋಧನೆ ಸಾಮಾಜಿಕ ವಿಚಾರ ವಿಶ್ವ ವಿದ್ಯಾಮಾನಗಳು, ವೈಚಾರಿಕ ವ್ಯಕ್ತಿ ಚಿತ್ರಗಳು ಅಭಿವೃದ್ಧಿ, ಚಿಂತನ ವಿಷಯಗಳು ಪುಸ್ತಕಗಳಾಗಿ ಬಂದುದು **ಮಿಂಚಿನ ಬಳ್ಳಿ**ಗೆ ಅನುಗುಣವಾಗಿದ್ದವು. ತ್ಯಾಗ ಉತ್ಸಾಹಗಳಿಗೆ ಸಹಕಾರಿಯಾಗಿ ನಾಡಿನ ೫೦ಕ್ಕೂ ಹೆಚ್ಚು ಹಳೆ, ಹೊಸ ಲೇಖಕರು ಪುಸ್ತಕಗಳನ್ನು ಬರೆದುಕೊಟ್ಟರು. ಲೇಖಕರಿಗೆ ಸಂಭಾವನೆ ಕೊಡುವ ಪದ್ಧತಿಯನ್ನು ಬುರ್ಲಿಯವರು ಹಾಕಿದ್ದು ಮತ್ತೊಂದು ಉಲ್ಲೇಖನೀಯ ಸಂಗತಿ.

ಬುರ್ಲಿಬಿಂದು ಮಾದವಾಚಾರ್ಯರು ಆರಂಭದಲ್ಲಿ ಶಿಕ್ಷಕರಾಗಿದ್ದರು. ಅದು ಅವರಿಗೆ ಕೇವಲ ನೌಕರಿಯಾಗಿರದೆ ವಿದ್ಯಾರ್ಥಿಗಳನ್ನು ರೂಪಿಸುವ ಕನ್ನಡವನ್ನು ಬೆಳೆಸುವ ಆತ್ಮೀಯ ವೃತ್ತಿಯೂ ಆಗಿತ್ತು. ಗಾಂಧೀಜಿಯವರ ಅಸ್ಪೃಶ್ಯೋದ್ಧಾರ ಕಾರ್ಯಕ್ರಮವನ್ನು ಸ್ವಯಂಪ್ರೇರಿತರಾಗಿ ಧಾರವಾಡದಲ್ಲಿ ಕೈಗೊಂಡರು. ಖಾದಿ ಗ್ರಾಮೋದ್ಯೋಗ ಸಂಘ ಸ್ಥಾಪಿಸಿ ಕಾಂಗ್ರೆಸ್ ಸೇವಾದಳದಲ್ಲಿ ಕಾರ್ಯಕರ್ತನಾಗಿ ದುಡಿದು ಬುರ್ಲಿಯವರು ತಮ್ಮ ಧೀಮಂತಿಕೆ ಪ್ರದರ್ಶಿಸಿದರು.

ಮಾಧ್ವಮತದ ಅನುಷ್ಠಾನವೆಂದರೆ ಜನತಾಜನಾರ್ಧನನ ನಿಸ್ಪ್ರುಹ ಸೇವೆ ಎಂಬುದನ್ನು ಬಿಂದು ಮಾದವಾಚಾರ್ಯರು ತೋರಿಸಿದ್ದು, ಪಾ.ವೆಂ. ಅವರಿಗೆ ಅಪ್ಯಾಯಮಾನವಾದ ಸಂಗತಿ. ಅವರಲ್ಲಿದ್ದ ನಿಷ್ಟುರಶಿಸ್ತು, ಕಾರ್ಯನಿಷ್ಠೆ, ಸ್ವಾಭಿಮಾನ, ಸ್ತುತಿ ವಿಮುಖತೆಯ ಗುಣಗಳನ್ನು ಪಾ.ವೆಂ. ಅನುಸರಿಸಿದ್ದಾರೆ. ಉದ್ದಕ್ಕೂ ಬಡತನದ ಜೀವನವನ್ನು ನಡೆಸಿದ ಬುರ್ಲಿಯವರು ತಮ್ಮ ಗುಣಸ್ವಭಾವದ ಶ್ರೀಮಂತಿಕೆಯಿಂದ ಮತ್ತು ಸಾಹಿತ್ಯಕ್ಕೆ ಪೂರಕವಾದ ಸೇವಾನಿರತ ಜೀವನದಿಂದ ಶ್ರೇಷ್ಠರೇ ಆಗಿದ್ದಾರೆ.

ಬಿಂದುಮಾದವ ಆಚಾರ್ಯರ ಸಮಕಾಲೀನರೇ ಆಗಿದ್ದ **ಜಿ.ಬಿ. ಜೋಶಿ** (೧೯೦೩-೧೯೯೨)ಯವರು ಪಾ.ವೆಂ. ಅವರ ದೃಷ್ಟಿಯಲ್ಲಿ ಮತ್ತೊಬ್ಬ ಗ್ರಂಥ ಪ್ರಕಾಶಕ ಹಾಗೂ ಸಾಹಿತ್ಯ ಆಂದೋಲನಕಾರರಾಗಿದ್ದಾರೆ. ಇವರು ಕೂಡ ಮಾಧ್ವ ಸಾಂಪ್ರದಾಯದ ಮೂಲದಿಂದ ಬಂದು ನವೋದಯ ಕಾಲದ ಸಾಂಸ್ಕೃತಿಯ ಜೀವನದಲ್ಲಿ ಸಕ್ರೀಯ ಪಾತ್ರ ವಹಿಸಿದ ಧರ್ಮನಿಷ್ಟ ವ್ಯಕ್ತಿ. 'ಜಡಭರತ' ಗುಪ್ತನಾಮದಿಂದ ನಾಟಕಗಳನ್ನು ಬರೆದ, ೧೯೩೩ರಿಂದ **ಮನೋಹರ ಗ್ರಂಥಮಾಲೆ**ಯನ್ನು ನಡೆಸಿದ ಗೋವಿಂದಚಾರ್ಯ ಭೀಮಚಾರ್ ಜೋಶಿಯವರು ಪಾ.ವೆಂ. ಅವರ ಕಣ್ಣಿಗೆ ಕನಸುಗಾರನಾಗಿ ಕಂಡಿದ್ದಾರೆ ನಿಜ.

ಜಿ.ಬಿ. ಜೋಶಿಯವರ ಮೂಲ ನೆಲೆ ದ.ರಾ.ಬೇಂದ್ರೆಯರ ಗೆಳೆಯರ ಗುಂಪಿನಲ್ಲಿದೆ. **ಗೆಳೆಯರ ಗುಂಪು** ಆಲೂರು ವೆಂಕಟರಾಯರಿಂದ **ಜೈ ಕರ್ನಾಟಕ** ಪತ್ರಿಕೆಯನ್ನು ಖರೀದಿಸಿ ತನ್ನ ಮುಖ ಪತ್ರಿಕೆಯನ್ನಾಗಿ ಸ್ವೀಕರಿಸಿದಾಗ ಪತ್ರಿಕೆಯ ಮುದ್ರಣ ಮತ್ತು ಪ್ರಸಾರಣ ಕೆಲಸವನ್ನು ವಹಿಸಿಕೊಂಡವರು 'ಜಡ ಭರತರು' ಕಾವ್ಯದ ಜಯ, ಸಾಹಿತ್ಯದ ಅಭ್ಯಾಸದ ಹುಚ್ಚನ್ನು ಹಚ್ಚಿಕೊಂಡಿದ್ದ ಇವರು ಬೇಂದ್ರೆಯವರ ಪ್ರಭಾವಕ್ಕೆ ಒಳಗಾಗಿ 'ಗೆಳೆಯರ ಗುಂಪು' ಸೇರಿ ಕನ್ನಡದ ನವೋದಯದ ಕನಸು ಕಾಣ ತೊಡಗಿ ಗಾಂಧೀಜಿಯ ಚಳವಳಿಯಿಂದಲೂ ಪ್ರಭಾವಿತರಾಗಿ ಆಂದೋಲನದಲ್ಲಿ ತೊಡಗಿದರು. ಶಂಬಾ ಜೋಶಿ, ಚುಳಕಿ ಮೊದಲಾದವರ ಪ್ರೇರಣೆಯಿಂದ ಜಿ.ಬಿ. ಜೋಶಿಯವರು 'ಮನೋಹರ ಗ್ರಂಥ ಮಾಲೆ'ಯನ್ನು ಆರಂಭಿಸಿದರು. ಕನ್ನಡದ ಸೃಜನಶೀಲ ಸಾಹಿತ್ಯ ನಾಡಿನಲ್ಲಿ ಓದುಗರಿಗೆ ನಿರಂತರ ಸಿಗಬೇಕು ಮತ್ತು ಲೇಖಕರು ಹೊಸ ಸಾಹಿತ್ಯವನ್ನು ನಿರಂತರ ರಚಿಸುತ್ತಾ ಸಾಹಿತ್ಯ ಬಳಗ ವ್ಯಾಪಿಸಬೇಕು. ಹೀಗೆ ಲೇಖಕ ಮತ್ತು ಓದುಗನ ನಡುವೆ ಮನೋಹರ ಸಂಬಂಧ ನಿರ್ಮಿಸುವ ಕನಸ್ಸನ್ನು ಕಂಡ 'ಜಡಭರತರು' ಗ್ರಂಥಮಾಲೆಯ ವ್ಯವಹಾರವನ್ನು ಜಾರಿಗೆ ತಂದರು. ಇದು ಆರ್ಥಿಕ ವ್ಯವಸ್ಥೆಯ ತಳಹದಿಯ ಮೇಲೆ ನಡೆಯಬೇಕಾದ ಸಾಂಸ್ಕೃತಿಕ ಕೆಲಸ. ಜಿ. ಬಿ. ಜೋಶಿಯವರು ಸಂಸ್ಕೃತಿಯ ಕಾಳಜಿಗೆ ಮಹತ್ವ ಕೊಡಬಲ್ಲವರೇ ಹೊರತು ಆರ್ಥಿಕ ತಳಹದಿಯಿಂದ ದುರ್ಬಲರೇ ಆಗಿದ್ದರು. ಹಾಗೆಂದು ಅವರು ಹಿಂಜರಿಯಲಿಲ್ಲ. ನಾಡಿನ ಪ್ರತಿಯೊಬ್ಬ ಪ್ರತಿಭಾವಂತ ಲೇಖಕನ ಜೊತೆ ಸ್ನೇಹ ಸಂಬಂಧ ಕುದುರಿಸಿ ಅವರಿಂದ ಪುಸ್ತಕ ಬರೆಯಿಸಿ ಅಚ್ಚುಕಟ್ಟಾಗಿ ಮುದ್ರಿಸಿ ಪ್ರಕಟಿಸುವ ಅಸಾಧ್ಯ ಕೆಲಸವನ್ನು ಏಕಾಂಗಿಯಾಗಿ ನಡೆಸಿದರು. ಅ.ನಾ.ಕೃ, ರಂ. ಶ್ರೀ. ಮುಗಳಿ, ಕಾರಂತ, ಶ್ರೀರಂಗ, ಗೋಕಾಕ್, ಕಂಬಾರ, ಕಾರ್ನಾಡ್, ರಾಮನುಜನಮ್, ಕೆ.ವಿ. ಅಯ್ಯರ್ ಬೇಂದ್ರೆ ಮುಂತಾದ ನೂರಾರು ಉತ್ಕೃಷ್ಟ ಲೇಖಕರ ಗದ್ಯಕೃತಿಗಳನ್ನೇ ಪ್ರಕಾಶನ ಗೊಳಿಸಿ ನಾಡಿನಲ್ಲಿ ಓದುಗರ ಉತ್ಕೃಷ್ಟ ವರ್ಗವನ್ನೇ ಸೃಷ್ಟಿಸಿದರು. ಇದು ಜಿ.ಬಿ. ಯವರ ಅಪರೂಪದ ಸಾಧನೆ. ಪಾ.ವೆಂ. ಅವರು ಜಿ.ಬಿ.ಯವರ ಈ ಸಾಹಸವನ್ನು ಮೆಚ್ಚಿಕೊಂಡಿದ್ದಾರೆ. ಜಡಭರತನಾಗಿ ಅವರು ಕಂಡಿದ್ದ ಕನಸುಗಳು ಒಂದು ಪುಸ್ತಕ ರೂಪದಲ್ಲಿ ೧೯೫೦ರಲ್ಲಿ ಪ್ರಕಟವಾಗಿವೆ. ಅದು ನಾಡಿನ ದೈವ ಮಾನವ ಪ್ರಯತ್ನಗಳ

ಸಂಘರ್ಷ ಹಾಗೂ ಸಮರಸದ ಕತೆಯಾಗಿದೆ. ಜಿ.ಬಿ. ಜೋಶಿಯವರು ಅನೇಕ ಲೇಖಕರಿಗೆ ಸಾಹಿತ್ಯದ ಅಂಕಿತ ಹಾಕಿದರು. ಅವರಲ್ಲಿ ವಿಮರ್ಶಕ ಕುರ್ತಕೋಟಿ ನಾಟಕಕಾರ ಕಾರ್ನಡ್ ಎಂದಿಗೂ ಎದ್ದು ಕಾಣುವ ಲೇಖಕರು. ಜಿ.ಬಿ. ಜೋಶಿಯವರಿಗಿದ್ದ ಸಾಹಸ ಸತತ ದುಡಿಮೆ ಮತ್ತು ಸದಭಿರುಚಿಯ ಪ್ರಕಾಶನ ಗುಣ ಪಾ.ವೆಂ. ಅವರಿಗೆ ವಿಶೇಷವಾಗಿ ಕಂಡಿದೆ.

ಪಾ.ವೆಂ. ಅವರ ಮೂವರು ಲೇಖಕ ಸ್ನೇಹಿತರೆಂದರೆ **ದ.ಬಾ.ಕು., ಕು.ಶಿ. ಹರಿದಾಸ್ ಭಟ್** ಮತ್ತು **ವ್ಯಾಸರಾವ್ ಬಲ್ಲಾಳರು, ದ.ಬಾ.ಕು**.ರಂತು ೩೦ ವರ್ಷಗಳ ಕಾಲ ಆತ್ಮೀಯ ಮಿತ್ರರೇ ಆಗಿದ್ದರು. ಧಾರವಾಡದ ಈ ಮಿತ್ರ ಹುಬ್ಬಳ್ಳಿಯ ಪಾ.ವೆಂ.ಗೆ ತೀರ ಹತ್ತಿರದ ಲೇಖಕ ಮಿತ್ರರೇ ಆಗಿದ್ದರು. ದ.ಬಾ.ಕುರವರ ವ್ಯಕ್ತಿ ಚಿತ್ರಗಳ ಸಾಹಿತ್ಯ ಪಾ.ವೆಂ. ಅವರ ಮೇಲೆ ಬೀರಿದ ಪ್ರಭಾವ ಅವಿಸ್ಮರಣೀಯ. ಕನ್ನಡದಲ್ಲಿ **ವ್ಯಕ್ತಿ ಚಿತ್ರಗಳು** ಸಾಹಿತ್ಯ ಪ್ರಕಾರಕ್ಕೆ ನಾಂದಿಹಾಡಿದವರು. ಸಿದ್ಧವನಹಳ್ಳಿ ಕೃಷ್ಣ ಶರ್ಮ. ಅದನ್ನು ಮುಂದುವರಿಸಿದವರು ದ.ಬಾ.ಕು. ಹುಟ್ಟಿನಿಂದಲೇ ಲೇಖನ ಕಲೆಯನ್ನು ಸೊಗಸಾಗಿ ಸಾದಿಸಿದವರು ದ.ಬಾ.ಕು. ಬರೆದ **ನಾ ಕಂಡ ಗೌರಮ್ಮ** ವ್ಯಕ್ತಿ ಚಿತ್ರ ಪಾ.ವೆಂ. ಅವರಿಗೆ ಅಮೂಲ್ಯವಾಗಿ ಕಂಡಿದೆ. ಒಂದು ವ್ಯಕ್ತಿ ಚಿತ್ರದ ಬರಹದಲ್ಲಿ ಲೇಖಕ ಲೇಖಕನ ಗುಣವಿರುವುದು ಆತ್ಮೀಯ ಶೈಲಿಯಲ್ಲಿ. ವಸ್ತುವಿನಲ್ಲಿಯ ವ್ಯಕ್ತಿತ್ವವನ್ನು ಗುರುತಿಸುವುದು ಇಲ್ಲಿಯ ಕೌಶಲ್ಯ. ಯಾವ ವ್ಯಕ್ತಿ ತನ್ನ ಸಾಧನೆಯಿಂದ ಪ್ರಸಿದ್ಧನಾಗಿರುತ್ತಾನೋ ಆ ಸಾಧನೆಗಳ ಮಾಹಿತಿಗಳೊಂದಿಗೆ ಲೇಖಕ ವ್ಯಕ್ತಿಯ ಗುಣದೋಶ ಮತ್ತು ಆಂತರ್ಯದ ಸಂಗತಿಗಳನ್ನು ತಿಳಿದವನಾಗಿರಬೇಕು. ಅವನ ವ್ಯಕ್ತಿತ್ವ ಮೂಡಿಬಂದಿರುವುದಕ್ಕೆ ಕಾರಣವಾದ ಸಂಗತಿಗಳ ಬಗೆಗೂ ಅರಿವಿರಬೇಕು. ವ್ಯಕ್ತಿಯ ಬಗ್ಗೆ ಆಸ್ಥೆ, ಆಸಕ್ತಿ ಮತ್ತು ಪ್ರೀತಿಪೂರ್ವ ಆತ್ಮೀಯತೆ ಇರಬೇಕು. **ಹಕ್ಕಿನೋಟದ** ೧೦ ವ್ಯಕ್ತಿ ಚಿತ್ರಗಳಲ್ಲಿ ದ.ಬಾ.ಕು. ಅವರ ಕುಶಲ ಕಲೆ ಎದ್ದು ಕಾಣುತ್ತದೆ. ಲಲಿತ ಬರಹದ ಧಾಟಿಯಿಂದ, ವಿನೋದ ಬೆರೆಸಿದ ನೋಟದಿಂದ ದ.ಬಾ.ಕು. ವ್ಯಕ್ತಿಗಳನ್ನು ಕಾಣುತ್ತಾರೆ. ಚಿಕ್ಕ ಚಿಕ್ಕ ವಾಕ್ಯಗಳು ಧ್ವನಿಪೂರ್ಣವಾಗಿ ಅಂದರೆ ಅನೇಕ ಸಂಗತಿಗಳನ್ನು ಹಿಡಿದಿಡುವ ವಾಕ್ಯಗಳು ಸಂಗ್ರಹಿಸಿದ ವಿಷಯಗಳನ್ನು ಸಂದರ್ಭೋಚಿತವಾಗಿ ಸಂಯೋಜಿಸಿ ವ್ಯಕ್ತಿಯ ವಿಶಿಷ್ಟ ಮುಖವನ್ನು ಎತ್ತಿ ತೋರಿಸುವ ಶೈಲಿ ಇದನ್ನು ದ.ಬಾ.ಕು. ಸಾಧ್ಯವಾಗಿಸಿದ ಉದಾಹರಣೆಗಳನ್ನು ಪಾ.ವೆಂ. ನೆನಪಿಸಿಕೊಂಡಿದ್ದಾರೆ. ದ.ಬಾ.ಕು. ಕುರಿತು ತಾವೇ ಒಂದು ವ್ಯಕ್ತಿಚಿತ್ರವನ್ನು (Penpicture) ಪಾ.ವೆಂ. ಬರೆಯ ತೊಡಗಿದರು. ಅದು ಮುಗಿಯಲೇ ಇಲ್ಲ. ಆದರೆ ದ.ಬಾ.ಕು. ೧೯೬೩ರಲ್ಲಿ ೪೭ರ ಪ್ರಾಯದಲ್ಲಿ ಅನೀರಿಕ್ಷಿತ ತೀರಿಕೊಂಡಾಗ ಪಾ.ವೆಂ. ಬರೆಯಲೇ ಬೇಕಾಯಿತು. ಆಗ ಕವಿಯಾಗಿ **ದತ್ತನ ನೆನಪು** ಎಂಬ ೧೬ ಸಾಲಿನ ಪದ್ಯವನ್ನಂತು ಬರೆದರು. ಮುಂದೆ ಮರಣೋತ್ತರವಾಗಿ ದ.ಬಾ.ಕು. ಅವರನ್ನು ಕುರಿತು ಬಂದ ದ.ಬಾ.ಕು. ಬಾಳು ಬದುಕು.

ಪುಸ್ತಕಕ್ಕೆ ಪಾ.ವೆಂ. ಅವರ ಬರೆದ ಮಿತ್ರ ದ.ಬಾ.ಕುಲಕರ್ಣಿ ಎಂಬ ವ್ಯಕ್ತಿ ಚಿತ್ರವೇ ಅಂತುಕೊನೆಗೊಂಡಿತು. ಹೀಗೆ ಕೊನೆಗೊಂಡಾಗ ಅದು ಶ್ರದ್ಧಾಂಜಲಿ ಲೇಖನವಾಯಿತು.

ಹಕ್ಕಿನೋಟಕ್ಕೆ ಪಾ.ವೆಂ. ಅವರು ಬರೆದ ಮುನ್ನುಡಿಯಲ್ಲಿ ವ್ಯಕ್ತಿ ಚಿತ್ರ ಪ್ರಕಾರ ಸಾಹಿತ್ಯದ ಗುಣಲಕ್ಷಣಗಳನ್ನು ಹೀಗೆ ಗುರುತಿಸಿದ್ದಾರೆ. ೧. ವ್ಯಕ್ತಿ ಚಿತ್ರವೆಂದರೆ ಜೀವನ ಚರಿತೆಯಲ್ಲ. ೨. ವ್ಯಕ್ತಿತ್ವದ ಕಡೆಗೆ ನೋಟವನ್ನು ಬೀರಿ, ಆ ವ್ಯಕ್ತಿತ್ವದ ಅನುಭವದ ಮೇಲೆ ಬೀರಿದ ಪ್ರಭಾವವನ್ನು ತೋರಿಸುವುದು. ೩. ವ್ಯಕ್ತಿಯ ಸಂಪರ್ಕ ಅಥವಾ ಸ್ನೇಹ ಒಂದಿದ್ದರೆ ಅದು ತನ್ನ ಹೃದಯದಲ್ಲಿ ಮೂಡಿಸಿದ ಪರಿಣಾಮವನ್ನು ಮಾರ್ಮಿಕವಾಗಿ ನಿರೂಪಿಸುವುದು. ಅಂದರೆ ವಸ್ತು ನಿಷ್ಠವಾಗುತ್ತಲೇ ವ್ಯಕ್ತಿ ನಿಷ್ಠವೂ ಆಗುವುದು. ಇದು ಲೇಖಕನ ಸಹೃದಯತಾ ಗುಣದಿಂದಾಗುವ ಕೆಲಸ. ಪಾ.ವೆಂ. ಅವರಿಗೆ ದ.ಬಾ.ಕು. ಅವರ ವ್ಯಕ್ತಿ ಚಿತ್ರ ಗುಣಗಳು ಧಾರಳವಾಗಿ ಕಂಡಿದೆ.

ವ್ಯಾಸರಾವ್ ಬಲ್ಲಾಳ: ಕಾದಂಬರಿಕಾರ ವ್ಯಾಸರಾವ್ ಬಲ್ಲಾಳ ಮೂಲತಃ ಉಡುಪಿಯವರು ಮುಂಬಯಿಗೆ ಜೀವನೋಪಾಯಕ್ಕಾಗಿ ನೆಲೆಸಿದ ಬಲ್ಲಾಳರು ಬರೆದ ಕಥೆ ಕಾದಂಬರಿಗಳಲ್ಲಿ ಬರುವುದು ದಕ್ಷಿಣ ಕನ್ನಡ ಜಿಲ್ಲೆಯ ವಸ್ತು ವಿಷಯಗಳೇ. ಅವರ ೨ನೇ ಕಾದಂಬರಿ **ಹೇಮಂತ ಗಾನ**ವನ್ನು (೧೯೫೪) ಪಾ.ವೆಂ. ಅವಲೋಕನ ಮಾಡಿದ್ದಾರೆ. ಲೇಖಕರ ಸೂಕ್ಷ್ಮ ನೀರಿಕ್ಷಣಾ ಶಕ್ತಿ, ಸಾಮಾಜಿಕ ಮನೋವಿಶ್ಲೇಷಣೆ ಸಾಮರ್ಥ್ಯ ಇವು ಕಾದಂಬರಿಯಲ್ಲಿ ಸಂಯೋಜನೆಗೊಂಡ ಕ್ರಮವನ್ನು ಪಾ.ವೆಂ. ಎತ್ತಿ ತೋರಿಸಿದ್ದಾರೆ. ಈ ಕಾದಂಬರಿಯಲ್ಲಿ ಸಾಮಾಜಿಕ ವರ್ಗಗಳ ಸ್ವಭಾವ ಮತ್ತು ಉದ್ದೇಶಗಳನ್ನು ಬಲ್ಲಾಳರು ದೈರ್ಯವಾಗಿ ಚಿತ್ರಿಸಿದ್ದಾರೆ ಎಂಬುದು ಗಮನಾರ್ಹ. ಮುಂಬಯಿಯಲ್ಲಿ ನಡೆದ ಕನ್ನಡೊದ್ಧಾರದ ಒಂದು ಚಳುವಳಿಯಲ್ಲಿ ಮದ್ಯಮವರ್ಗ, ಕೆಳ ಮದ್ಯಮವರ್ಗ, ಕಾರ್ಮಿಕವರ್ಗ ಒಂದಾಗಿ ಸಹಕರಿಸುತ್ತವಾದಾರೂ ಅವುಗಳ ಒಳ ಉದ್ದೇಶಗಳು ಭಿನ್ನಭಿನ್ನವಾಗಿರುತ್ತವೆ ಎಂಬ ವಾಸ್ತವವನ್ನು ಬಲ್ಲಾಳರು ಭಾವುಕ ಕಣ್ಣುಗಳಿಂದ ಕಂಡು ಚಿತ್ರಿಸಿದ್ದಾರೆ.

ಕುಂ.ಶಿ. ಹರಿದಾಸ ಭಟ್ಟರು: ಪಾ.ವೆಂ. ಅವರಿಗೆ ಅನೇಕ ಕಾರಣದಿಂದ ಗೆಳೆಯರಷ್ಟೇ ಅಲ್ಲ ಬಂಧುಗಳು ಸಹಕಾರಿಗಳು, ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಕು.ಶಿ. ಹರಿದಾಸ ಭಟ್ಟರು ಬರಹಗಾರನಾಗಿ, ಮಾತುಗಾರನಾಗಿ, ಸಂಘಟಕನಾಗಿ ಬಹುವಿಧವಾಗಿ ಜೀವನವನ್ನು ರೂಪಿಸಿಕೊಂಡಿವರು. ಅವರಲ್ಲಿಯ ಶಕ್ತಿ ಉತ್ಸಾಹ, ಸಂಘಟನಾ ಚಾತುರ್ಯ ಪಾ.ವೆಂ. ಅವರಿಗೆ ಮೆಚ್ಚುಗೆ ಆಗಿದೆ. ಅವರಲ್ಲಿಯ ಇನ್ನೊಂದು ಗಮನಾರ್ಹ ಗುಣವೆಂದರೆ 'ಯಾವುದೇ ವಿಷಯಗಳ ಬಹಿರಾವರಣವನ್ನು ತತ್ತರಿಸಿ ನೇರವಾಗಿ ವಾಸ್ತವಿಕ ಅಂತರಂಗವನ್ನು ಹೋಗುವ ನಿಶಿತ ಬುದ್ದಿ'.

೩. **ರಷ್ಯಾದ ರಾಜ್ಯಕ್ರಾಂತಿ:**

ಪಾ.ವೆಂ. ಅವರ ಬರಣಿಗೆಯ ಮೊದಲ ಪುಸ್ತಕ ರೂಪ **ರಷ್ಯಾದ ರಾಜ್ಯಕ್ರಾಂತಿ** ೧೯೪೩ರ **ಮಿಂಚಿನ ಬಳ್ಳಿ** ಆರನೇ ವರ್ಷದ ಒಂದನೇ ಕುಡಿಯಾಗಿ ಪ್ರಕಟವಾಯಿತು. ಸಮಕಾಲೀನ ಜಾಗತಿಕ ಜೀವನವನ್ನು ಕನ್ನಡಿಗರಿಗೆ ಒದಗಿಸುವ ಮಹತ್ವಾಕಾಂಕ್ಷೆಯಿಂದ **ಮಿಂಚಿನ ಬಳ್ಳಿ** ಪ್ರಕಾಶನ ಕೆಲವು ವೈಚಾರಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿತು. ಇವುಗಳಲ್ಲಿ **ರಷ್ಯಾದ ರಾಜ್ಯ ಕ್ರಾಂತಿ,** ಗೌರಿಶ್ ಕಾಯ್ಕಿಣಿಯವರ ಕಮ್ಯುನಿಸಮ್ ಹಾಗೂ ರಷ್ಯಾದ ಸರ್ವಾಧಿಕಾರ. ಸ್ಟಾಲಿನ್ ಕುರಿತು ಎಂ. ಹರಿದಾಸರು ಬರೆದ **ಉಕ್ಕಿನ ಮನುಷ್ಯ** ಎದ್ದು ಕಾಣುತ್ತವೆ. ಪತ್ರಕರ್ತ ಪಾ.ವೆಂ. ತಮ್ಮ ವಿಶಾಲ ಓದು ಚಿಂತನೆಗಳ ಆಧಾರದ ಮೇಲೆ **ರಷ್ಯಾದ ರಾಜ್ಯಕ್ರಾಂತಿ**ಯನ್ನು ರಚಿಸಿದ್ದಾರೆ. ಇದು ಮುಖ್ಯವಾಗಿ ಖಚಿತ ಮಾಹಿತಿ ಸಂಗ್ರಹದ ಮೇಲೆ ರಚಿತವಾಗಿದೆ. ೧೯೧೭ರಲ್ಲಿ ಸೋವಿಯತ್ ರಷ್ಯಾ ಕ್ರಾಂತಿಕಾರಕ ರಾಷ್ಟ್ರವಾಗಿ ತಲೆ ಎತ್ತಿತು. ವಿಶ್ವದ ರಾಜಕೀಯ ಇತಿಹಾಸದಲ್ಲಿ ಇದೊಂದು ಅಪೂರ್ವ ಘಟನೆ ಮೊದಲ ಸಲ ದುಡಿಯುವ ಜನವರ್ಗ ಆಡಳಿತ ಕೈಗೆತ್ತಿಗೊಂಡ ಘಟನೆ ರಾಜಕೀಯ ತತ್ವ ಸಿದ್ಧಾಂತ ಹೋರಾಟ ಮತ್ತು ಚಾಕಚಕ್ಯತೆಗಳ ಫಲವಾಗಿ ತಲೆಯೆತ್ತಿದ ಸಮಾಜವಾದಿ ರಾಷ್ಟ್ರ U.S.S.R. (Unaited Socialist Soviet Russia) ಇದು ಈ ಮುಂಚಿನ ಫ್ರೆಂಚ್ ಕ್ರಾಂತಿಗಿಂತ ಸಾಕಷ್ಟು ಆಧುನಿಕವಾದದ್ದು. ಬೃಹತ್ ಭೌಗೋಳಿಕ ಪರಿಸರವನ್ನು ವಿಭಿನ್ನ ಭಾಷೆ, ಪ್ರಕೃತಿ ವೈವಿಧ್ಯವನ್ನು ಒಳಗೊಂಡ ದೇಶದಲ್ಲಿ ರಾಜ್ಯಕ್ರಾಂತಿ ಆದದ್ದು ಅದ್ಭುತ ಸಾಧನೆ. ಇದಕ್ಕೆ ಕಾರಣರಾದ ಕಮ್ಯುನಿಷ್ಟ್, ಸೇನಾಪಡೆ ಜಗತ್ತಿನಲ್ಲಿಯೇ ಅಪೂರ್ವವಾದದ್ದು. ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ **ಕಮುನಿಸ್ಟ್ ಪ್ರಣಾಳಿಕೆ** (೧೮೪೮)ಯನ್ನು ಜಾರಿಗೆ ತಂದ ಲೆನಿನ್ ಈ ರಾಜ್ಯಕ್ರಾಂತಿಯ ಪ್ರವರ್ತಕ ಪಾ.ವೆಂ. ಅವರಿಗೆ ಅತ್ಯಂತ ಪ್ರಿಯವಾದ ವಿಚಾರವಾದದ ಒಂದು ಮಹತ್ವದ ಉದಾಹರಣೆ ಮಾರ್ಕ್ಸ್ ಎಂಗೆಲ್ಸ್‌ರ ಕೃತಿ. ವೈಯಕ್ತಿಕವಾದ ಈ ನಿಲುವು ಮತ್ತು ಜಾಗತಿಕವಾಗಿ ಸಾಧ್ಯವಾದ ರಾಜ್ಯಕ್ರಾಂತಿಯ ಘಟನೆ ಅವರಿಂದ ಈ ಪುಸ್ತಕವನ್ನು ಸರಾಗವಾಗಿ ಬರೆಸಿದೆ.

೧೪ ಅಧ್ಯಾಯಗಳಲ್ಲಿ ವಿಸ್ತಾರಗೊಂಡ ರಾಜ್ಯಕ್ರಾಂತಿಯ ಈ ಕಥೆ ಮನೋಜ್ಞವಾಗಿದೆ. ರಷ್ಯಾದೇಶದ ಕಥೆಯನ್ನು ಪೂರ್ವರಂಗದಿಂದ ಹೇಳಲಾರಂಬಿಸಿ ೧೯೪೩ರ ವರೆಗಿನ ಅದರ ವಿಕಾಸವನ್ನು ಪಾ.ವೆಂ. ಅನೇಕ ಮಾಹಿತಿ ನಿದರ್ಶನಗಳಿಂದ ತೋರಿಸುತ್ತಾರೆ. ರಷ್ಯಾದ ವಿಕಾಸದ ಹೆಗ್ಗುರುತುಗಳು, ರಷ್ಯಾದ ಬಂಡವಾಳ ಶಾಹಿಯ ವೈಶಿಷ್ಯಗಳು, ಪ್ರಜೆಗಳು ಪಕ್ಷಗಳು ಎಂಬ ಭಾಗಗಳಲ್ಲಿ ಪಾ.ವೆಂ. ಆ ದೇಶದ ಸ್ಥಿತಿಗತಿಗಳನ್ನು ತೋರಿಸುತ್ತಾರೆ. ಬಾಲ್‌ಶೆವಿಕರು, ಮೈನ್‌ಶೆವಿಕರು ಎಂಬ ಎರಡು ಪ್ರಜಾತಾಂತ್ರಿಕ ರಾಜಕೀಯ ನೆಲೆಗಳಲ್ಲಿ ಕ್ರಾಂತಿ ಆರಂಭವಾಗಿ ಬೆಳೆಯಿತು. ಈ ಅಂಶಗಳನ್ನು ವಿವರಿಸುತ್ತಾ ಕ್ರಾಂತಿಕಾರರ ಭಿನ್ನಾಭಿಪ್ರಾಯ ಮತ್ತು ದುಡಿಯುವ ಜನತೆಯ ಮನಸ್ಥಿತಿಗಳನ್ನು ವಿವರಿಸುತ್ತಾರೆ. ಬಾಲ್‌ಶೆವಿಕರು ಪಂಗಡ ಲೆನಿನರ ನೇತೃತ್ವದಲ್ಲಿ ರೂಪುಗೊಂಡ 'ಕಮುನಿಸ್ಟ್' ಪಂಗಡ

ಇದರಲ್ಲಿ ಬಹುಸಂಖ್ಯಾತ ಕೂಲಿಕಾರ, ರೈತವರ್ಗ ಸಮಾವೇಶವಾಗಿತ್ತು. ಇವರಿಗೆ ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯಶಾಹಿ ಆಡಳಿತ ನಾಶವಾಗಿ ಕೈಗಾರಿಕೋದ್ಯಮ ಮತ್ತು ಕೃಷಿ ಉತ್ಪನ್ನಗಳ ಮೇಲೆ ಹಿಡಿತ ತಮ್ಮ ಕೈಗೆ ಸಿಗಬೇಕು ಮತ್ತು ದುಡಿಯುವ ವರ್ಗದ ಶಿಕ್ಷಣ ಸಂಸ್ಕೃತಿ ವಿಕಾಸಕ್ಕೆ ತಾವೇ ರೂಪಿಸಿಕೊಂಡ ಸಮತಾವಾದದ ನೀತಿ ನಿಲುವುಗಳ ಜಾರಿಗೆ ಬರಬೇಕೆಂಬುದಿತ್ತು. ಅಂದರೆ 'ಝೂರ್' ಸಾಮ್ರಾಜ್ಯಶಾಹಿಯ ಜೊತೆಗೂಡಿದ್ದ ಉಂಬಳಿಗಾರಿಕೆ (Fudeal) ವರ್ಗ ಮತ್ತು ದುಡಿಯದೆ ಉಣುವ ಶ್ರೀಮಂತ ವರ್ಗ ನಾಶವಾಗಿ ಬಹುಸಂಖ್ಯಾತ ದುಡಿಯುವ ವರ್ಗ ರಾಷ್ಟ್ರದ ಅಧಿಕಾರಕ್ಕೆ ಬರಬೇಕು ಎಂಬುದಾಗಿತ್ತು. 'ಮಾರ್ಕ್ಸ್‌ವಾದ'ವನ್ನು ಲೆನಿನರು ಪುನರ್ವಿಮರ್ಶಿಸಿ ತನ್ನ ರಾಜಕೀಯ ಆರ್ಥಿಕ ವ್ಯವಸ್ಥೆಯ ಮರುರೂಪಕ್ಕಾಗಿ ಅಳವಡಿಸಿಕೊಳ್ಳುವ ಪ್ರಣಾಳಿಕೆಯನ್ನು ಜನಗಳಿಗೆ ಮನವರಿಕೆ ಮಾಡಿಕೊಟ್ಟರು. ಆದರೆ ವರ್ಗಕ್ರಾಂತಿ ಮಾತ್ರ ಆಗಬೇಕು ಎಂದು ಕಲ್ಪಿಸಿದ, ಮೆನ್‌ಶೆವಿಕ್ ಪಂಗಡದವರು ಲೆನಿನರ ಮೂಲಭೂತ ಕಲ್ಪನೆಯನ್ನು ಹಗುರಾಗಿ ತೆಗೆದುಕೊಂಡು ಸುಶಿಕ್ಷಿತ, ಮಧ್ಯಮ ವರ್ಗದ ಅರ್ಥಾತ್ ಅಲ್ಪಬಂಡಾವಳದಾರರ ನೆಲೆಯಿಂದ ಬದಲಾವಣೆಯಾಗಬೇಕು ಎಂದು ಪ್ರಯತ್ನಿಸುತ್ತಿತ್ತು. ಧನಿಕ ಮಧ್ಯಮವರ್ಗದವರ ಈ ಮುಂದಾಳತನ ಒಟ್ಟು ಕ್ರಾಂತಿ ಮತ್ತು ಶಾಶ್ವತ ಬದಲಾವಣೆಗೆ ಇಂಬುಗೊಡುವಂತದಲ್ಲ. ಈ ಮಧ್ಯಮವರ್ಗ ಯಾವುದೇ ಹೊತ್ತಿಗೆ ಕ್ರಾಂತಿ ಮಾರ್ಗವನ್ನು ಒಟ್ಟು ಯಥಾಸ್ಥಿತಿಗೆ ಶರಣು ಹೋಗಬಹುದಿತ್ತು. ಲೆನಿನ್‌ನವಾದ ಮಾತ್ರ ಶಾಶ್ವತವೂ ಪರಿಣಾಮಕಾರಿಯೂ ಆದ ಕ್ರಾಂತಿಕಾರಿ ಮಾರ್ಗವಾಗಿ ಸಾಮ್ರಾಜ್ಯಶಾಹಿಯನ್ನು ಬಂಡವಾಳವಾದವನ್ನು ಬುಡಮೇಲು ಮಾಡುವ ಸಿದ್ಧತೆಯಲ್ಲಿತ್ತು. ಬೊಲ್‌ಶೆವಿಕರ ಈ ಮಾರ್ಗ ಕ್ರಿಯಾಶೀಲವೂ, ತತ್ತ್ವಬದ್ಧವೂ ಆಗಿ ಮುಂದೆ ಸಾಗುವ ಲಕ್ಷಣಗಳು ರಷ್ಯಾದಲ್ಲಿ ಕಂಡುಬಂದವು. ಬುದ್ಧಿ ಮತ್ತು ಕರ್ಮ ಇವೆರಡರ ಸಂಯೋಗದಿಂದ ಕಟ್ಟಲಾದ ಲೆನಿನರ ಪಕ್ಷ ಬಹುಸಂಖ್ಯಾತ ಕೂಲಿಗಾರರನ್ನು ಆಕರ್ಷಿಸಿತು. ಮಧ್ಯಮ ಕ್ರಾಂತಿಕಾರಿಗಳು ಮೃದುಧೋರಣೆಯ ಬುದ್ಧಿವಂತರು ಕ್ರಮೇಣ ಲೆನಿನರ ಕ್ರಿಯಾಶಾಲಿ ಹೋರಾಟಗಳಿಗೆ ಮಣಿದು ೧೯೦೩ ರಿಂದ 'ಝೂರ್ ಸಾಮ್ರಾಜ್ಯಶಾಹಿ' ವಿರುದ್ಧ ಯುದ್ಧೋಪಾದಿಯಲ್ಲಿ ಜನಸಂಘಟನೆ ಮಾಡಿದರು. ಈ ಕಾಲದ ಪ್ರತಿಯೊಂದು ಕ್ರಾಂತಿಕಾರಕ, ಸಂಘಟನಾತ್ಮಕ ಚಟುವಟಿಕೆಗಳ ವಿವರಗಳನ್ನು ಪಾ.ವೆಂ. 'ಯುದ್ಧ-ಜನತೆ-ಝೂರ್‌ಶಾಹಿ' ಎಂಬ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಫೆಬ್ರವರಿಯ ವಿಪ್ಲವ, ತಾತ್ಫೂರ್ತಿಕ ಸರ್ಕಾರ ಮತ್ತು ಸೋವಿಯಟ್ ಘಟಕಗಳ ಎಂಬ ಎರಡು ಅಧ್ಯಾಯಗಳಲ್ಲಿ ವ್ಯವಸ್ಥೆಯನ್ನು ಬುಡಮೇಲು ಮಾಡುವ ರೋಚಕ ವಿವರಗಳಿವೆ. ಸೋವಿಯಟ್ ಎಂದರೆ 'ಸಮಿತಿ' ಇಂತಹ ರಷ್ಯಾದ ಪ್ರಮುಖ ನಗರಗಳಲ್ಲಿ ಸ್ಥಾಪಿತವಾದವು. ಜನಸಾಮಾನ್ಯರಿಗೆ 'ಕಮ್ಯುನಿಸ್ಟ್' ಕ್ರಾಂತಿಯ ತಾತ್ವಿಕ ಹಾಗೂ ವ್ಯವಹಾರಿಕ ಹೋರಾಟದ ಬಗ್ಗೆ ತಿಳುವಳಿಕೆ ಕೊಡುವುದು ಮತ್ತು ಹೊಸ ಸಮತಾವಾದದ, ಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬರ ಹೊಣೆಗಾರಿಕೆಯ

ಶಿಕ್ಷಣವನ್ನು ಕೊಡುವುದು ಈ ಸಮಿತಿಗಳ ಕೆಲಸವಾಗಿತ್ತು. ಸೋವಿಯಟ್‌ಗಳಲ್ಲಿ ಆಗಿನ ಕಾಲದ ಕವಿಗಳು, ಲೇಖಕರು, ಪತ್ರಕರ್ತರು, ಶಿಕ್ಷಕರು ಪಾಲುಗೊಂಡು ಸಮತವಾದದ ಪಾಠಗಳನ್ನು ಮಾಡುತ್ತಿದ್ದರು. ಅನ್ನದ ಬಿಡುಗಡೆಯಾಗಬೇಕು ಅದಕ್ಕಾಗಿ ದುಡಿಯುವ ಕೈಗಳಿಗೆ ಉದ್ಯೋಗಾವಕಾಶ ಸಿಗಬೇಕು ಕೈಗಾರಿಕೋದ್ಯಮಗಳ ಬಂಡವಾಳ ಖಾಸಗಿ ಕೈಗಳಿಗೆ ಹೋಗದೆ ಕಮ್ಯುನ್‌ಗಳ ಕೈಗೆ ಬಂದು ದುಡಿಯುವ ಬಂಡವಾಳವಾಗಿ ಬೆಳೆಯಬೇಕು. ಆಡಳಿತ ವ್ಯವಸ್ಥೆಯ ಶಾಸಕಾಂಗ ಮತ್ತು ಕಾರ್ಯಾಂಗಕ್ಕೆ ಜನಪ್ರತಿನಿಧಿಗಳು ಸೇರಬೇಕು. ಇದಕ್ಕಾಗಿ ಚುನಾವಣೆಗಳು ನಡೆದು ಪ್ರಜಾಪ್ರಾತಿನಿಧ್ಯ ರೂಪುಗೊಳ್ಳಬೇಕು. ಆದರೆ ಇವೆಲ್ಲಾ ಕ್ರಾಂತಿಕಾರಕ ಕ್ರಿಯೆಗಳು ಸುಸೂತ್ರವಾಗಿ, ಏಕಮುಖವಾಗಿ ನಡೆಯುವಂತಹ ಪರಿಸ್ಥಿತಿ ಇರಲಿಲ್ಲ. ಕ್ರಾಂತಿ ಬಯಸುತ್ತಿದ್ದವರಲ್ಲಿಯೇ ಅನೇಕ ಭಿನ್ನಾಬಿಪ್ರಾಯಗಳು, ಒಡಕುಗಳು, ತಪ್ಪು ತಿಳುವಳಿಕೆಗಳೂ ಇದ್ದವು. ಇವು ಪ್ರತಿಗಾಮಿ (Reactionary) ಚಲನೆಗಳಾಗಿದದು ಲೆನಿನ್‌ವಾದವನ್ನು ಸಡಿಲುಗೊಳಿಸುವಂತಿದ್ದವು. ಬಾಲ್‌ಶೆವಿಕ್ ಪಕ್ಷದಲ್ಲಿಯೇ ಇಂತಹ ಪ್ರತಿಗಾಮಿಗಳಿದ್ದರು. ಕೂಲಿಕಾರರ ವರ್ಗ ಮತ್ತು ರೈತವರ್ಗದ ನಡುವೆ ಅಪಾರ್ಥ ಕಲ್ಪನೆ ಹುಟ್ಟಿಸಿ ಹೋರಾಟದ ಬಲಿಷ್ಟತೆಯನ್ನು ಸಡಿಲು ಮಾಡುವ ಅನೇಕ ಪ್ರಯತ್ನಗಳು ನಡೆದವು. ಭೂ ಸುಧಾರಣೆ, ಗ್ರಾಮಗಳ ಪುನರ್ನಿರ್ಮಾಣ, ಸಹಕಾರ ಚಳುವಳಿ ಮುಂತಾದ ಪ್ರಗತಿಪರ ಕ್ರಿಯೆಗಳನ್ನು ಲೆನಿನ್‌ವಾದ ಪರಿಣಾಮಕಾರಿಯಾಗಿ ಮುಂದುವರಿಸಿತು. ಪ್ರವಡ ಎಂಬ ಪತ್ರಿಕೆಯನ್ನು ಭೂರಿಜನ ಸಮಾಜ (proletrariat)ದ ಅನಿಸಿಕೆ ಅನುಭವ ಪ್ರತಿಕ್ರಿಯೆಗಳನ್ನು ದಾಖಲಿಸುವ ಪತ್ರಿಕೆ ಇದಾಗಿತ್ತು. ಲೆನಿನರ ಲೇಖನಗಳು, ಕ್ರಾಂತಿಕ್ರಿಯೆಗಳಿಗೆ ಅವರು ಪ್ಯಾರಿಸ್‌ನಲ್ಲಿದ್ದುಕೊಂಡು ಕೊಡುತ್ತಿದ್ದ ಸೂಚನೆಗಳು **ಪ್ರವಡ**ದಲ್ಲಿ ಪ್ರಕಟವಾಗುತ್ತಿದ್ದವು.

ಪ್ರವಡ ಎಂದರೆ ಸತ್ಯ ಸಮತವಾದದ ಧ್ಯೇಯಗಳು ಕ್ರಾಂತಿಯ ವಿಧಿವಿಧಾನಗಳು ಲೆನಿನರ ಸಾಧನೆಗಳು ಪ್ರಕಟವಾಗುತ್ತಿದ್ದು, ಪತ್ರಿಕೆ ಸಾಮಾನ್ಯ ಜನಗಳಲ್ಲಿ ವಿಚಾರಕ್ರಾಂತಿಗೆ ಮತ್ತು ಸರಿಯಾದ ಮಾರ್ಗದ ಅನುಸರಣೆಗೆ ನೆರವಾಯಿತು.

೧೯೧೪ರಲ್ಲಿ ವಿಶ್ವದ ಮೊದಲ ಮಹಾಯುದ್ಧ ಯುರೋಪನಲ್ಲಿ ಪ್ರಾರಂಭವಾಯಿತು. ಇಂಗ್ಲೇಡ್ ಮತ್ತು ಪ್ರಾನ್ಸ್‌ಗಳ ಜೊತೆಗಾರಿಕೆಯಲ್ಲಿ ಬಂಡವಾಳಶಾಹಿ ಸಾಮ್ರಾಜ್ಯ ಯುರೋಪ್‌ದಲ್ಲಿ ಮೆರೆಯುತ್ತಿತ್ತು. ಇದು ಜರ್ಮನಿಗೆ ಸವಾಲಿನಂತಿತ್ತು. ವ್ಯಾಪರ, ಕೈಗಾರಿಕೋದ್ಯಮಗಳಿಂದ ಬರುತ್ತಿದ್ದ ಅಪರಿಮಿತ ಲಾಭವನ್ನು ಇಂಗ್ಲೇಡ್ ಪ್ರಾನ್ಸ್ ಅನುಭವಿಸುತ್ತಿದ್ದವು. ಜರ್ಮನಿ ಇದಕ್ಕೆ ತಡೆಹಾಕಬೇಕೆಂದು ನಡೆಸಿದ ಪೈಪೋಟಿಯ ಪ್ರಯತ್ನ ಮತ್ಸರಗ್ರಸ್ಥವಾಗಿತ್ತು. ಅಂದರೆ ಸಾಮ್ರಾಜ್ಯಶಾಹಿಗಳ ನಡುವೆ ಯುದ್ಧ ಸ್ಫೋಟಗೊಂಡಿತು. ಪಶ್ಚಿಮ ಯುರೋಪಿನಲ್ಲಿ ನಡೆದ ಈ ಯುದ್ಧಕ್ಕೆ ಪ್ರಸಂಗದಲ್ಲಿ ರಷ್ಯಾ ವಹಿಸಿದ ಪಾತ್ರ ಎಂಥದೆಂಬುದು 'ಯುದ್ಧ-ಜನತೆ-ಝಾರ್‌ಸಾಹಿ' ಸಾಮ್ರಾಜ್ಯದ ಕುರಿತು ಪಾ.ವೆಂ. ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ.

ರಷ್ಯಾ ಸಂಪತ್ ಸಮೃದ್ಧಿಯಲ್ಲಿ ಪಶ್ಚಿಮ ಯುರೋಪ್ ದೇಶಗಳಿಂದ (ಫ್ರಾನ್ಸ್, ಇಂಗ್ಲೇಂಡ್, ಜರ್ಮನ್) ಹೆಚ್ಚಿನದು. ರಷ್ಯಾದ ದುಡಿಮೆಗಾರರ ವರ್ಗವೂ ಬಲಿಷ್ಟವಾದುದು. ಆದರೆ ಝಾರ್ ಸಾಮ್ರಾಜ್ಯಶಾಹಿಯ ದುರಾಡಳಿತದಿಂದ ಮತ್ತು ಸಂಘಟನಾಶಕ್ತಿಯ ಕೊರತೆಯಿಂದ ರಷ್ಯಾ ಎಲ್ಲ ದೃಷ್ಟಿಯಿಂದಲೂ ಹಿಂದುಳಿದಿತ್ತು. ಝಾರ್ ಸರಕಾರ ದಿವಾಳಿಯ ಹಾದಿಯಲ್ಲಿತ್ತು. ದುಡಿಯುವ ವರ್ಗದ ಮೇಲೆ ಒತ್ತಡ ಹೇರಿ ಕರ ವಸೂಲಿ ಮಾಡಿ ಬೊಕ್ಕಸಕ್ಕೆ ತುಂಬುತ್ತಿತ್ತು ಹೊರತು ದೇಶದ ಸಂಪತ್ತನ್ನು ಬೆಳೆಸಿ ಜನಗಳನ್ನು ಬದುಕಿಸುವ ಯೋಜನೆಗಳಿಂದ ದೂರ ಇತ್ತು. ಇಂತಹ ವಿಪನ್ನ ಸ್ಥಿತಿಯಲ್ಲಿ ಪಶ್ಚಿಮ ಯುರೋಪದ ಯುದ್ಧ ಪ್ರಸಂಗಕ್ಕೆ ಝಾರ್ ಸಾಮ್ರಾಜ್ಯಶಾಹಿ ಸಾಕ್ಷಿಯಾಗಿತ್ತಷ್ಟೆ ಅಲ್ಲ ಜರ್ಮನ್‌ನ ವಿರುದ್ಧ ಯುದ್ಧವನ್ನು ತಾನು ಸಾರಿತು. ಯಾವ ಸಿದ್ಧತೆಗಳು ಸರಿಯಾಗಿ ಇರಲಿಲ್ಲ ಸೈನಿಕರಗೂ ಶಕ್ತಿ ಇರಲಿಲ್ಲ. 'ಕೈಲಾಗದವ ಮೈ ಎಲ್ಲಾ ಪರಿಚಿಕೊಳ್ಳುವಂತಹ' ಪರಿಸ್ಥಿತಿಯನ್ನು ಝಾರ್‌ಸಾಮ್ರಾಜ್ಯ ಅನುಭವಿಸಿತು. ಜರ್ಮನಿಯ ವಿರುದ್ಧದ ದಾಳಿ ವಿಫಲವಾದವು. ಪ್ರತಿಯಾಗಿ ಜರ್ಮನಿಯೇ ರಷ್ಯಾವನ್ನು ಆಕ್ರಮಿಸುವಂತ ಪರಿಸ್ಥಿತಿ. ಇದರ ಜೊತೆಗೆ ರಷ್ಯಾದ ಸರಕಾರದ ಅಧಿಕಾರ ವರ್ಗದಲ್ಲಿ, ನೌಕರಶಾಹಿಯಲ್ಲಿ ಸೈನ್ಯಧಿಕಾರಿಗಳ ವಲಯದಲ್ಲಿ ಶಿಥಿಲತೆ, ಹೊಣೆಗೇಡಿತನ ಬೆಳೆದವು. ರಷ್ಯಾದೇಶ ನೈತಿಕ ತಳಹದಿಯನ್ನೇ ಕಳೆದುಕೊಂಡು ಅರಾಜಕತೆಗೆ ಅವಕಾಶಮಾಡಿತು. ಲೆನಿನ್‌ರ ಕ್ರಾಂತಿಕಾರ ಮಾರ್ಗದರ್ಶನದಿಂದ ಜೀವನ ಹೊಸಬೆಳಕನ್ನು ಕಂಡ ಜನತೆಗೆ ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕೆಂಬ ಅರಿವು ಬರತೊಡಗಿತು. ಇಂಗ್ಲೇಡ್ ಫ್ರಾನ್ಸ್ ಜರ್ಮನಿ ರಷ್ಯಾ ಈ ನಾಲ್ಕು ದೇಶಗಳೂ ಬಂಡವಾಳ ಶಾಹಿ – ಸಾಮ್ರಾಜ್ಯ ಶಾಹಿ ಶಕ್ತಿಗಳಾಗಿ ಬಡಿದಾಟಕ್ಕೆ ತೊಡಗಿ ಜನಸಾಮಾನ್ಯರನ್ನು ಹಿಂಸೆಗೆ ಗುರಿಮಾಡಿದ್ದಲ್ಲದೆ ಆರ್ಥಿಕ ದಿವಾಳಿಯನ್ನು ಹಬ್ಬಿಸುತ್ತಿದ್ದ ಲೆನಿನರ ಜನಪರ ರಾಜಕೀಯ ದರ್ಶನಕ್ಕೆ ವಿರುದ್ಧವಾಗಿತ್ತು. ಈಗ ಲೆನಿನ್ ಪ್ರಣೀತ ಕಮ್ಯುನಿಸ್ಟ್ ರಾಜ್ಯಕ್ಕೆ ಪರಿವರ್ತನವಾಗುವುದೊಂದೆ ಎಚ್ಚೆತ್ತ ಜನತೆಯ ಕಣ್ಣಿಗೆ ಕಂಡ ಹಾದಿ. ಸೋವಿಯತ್ ದೇಶಗಳ ಜನತೆಗೆ ಇದನ್ನು ಮನವರಿಕೆ ಮಾಡಿಕೊಡಲು ಲೆನಿನರ ಜೊತೆಗೆ ವಿಶ್ವದ ಎಲ್ಲ ಪ್ರಜ್ಞಾವಂತ ಜನತೆ ಧನಿಗೂಡಿಸಿತು. ರಷ್ಯಾದ ಲೇಖಕರೆಲ್ಲರೂ ಲೆನಿನ್ ವಾದಿಗಳಾಗಿ ಪ್ರಕರ ಸಾಹಿತ್ಯ ರಚಿಸಿ ಜನತೆಯಲ್ಲಿ ನೈತಿಕ ಸ್ಥೈರ್ಯ ತುಂಬಿದರು.

'ಬಡ ಒಕ್ಕಲಿಗರ ದಾರಿದ್ರ್ಯ ಯುದ್ಧದ ಭೀಕರತೆ, ಬರಗಾಲದ ಬೀಬತ್ಸತೆ ಇವು ಜನತೆಗೆ ಕೂಲಿಕಾರರ ಕ್ರಾಂತಿಯ ದಾರಿ (Porlitariates way of Revolution)ಯೇ ಸಮರ್ಪಕವೆಂದು ಮನಗಾಣಿಸಿವೆ. ಅದಕ್ಕೆ ಬೆಂಬಲವಾಗಿದೆ ಎಂದು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಕ್ರಾಂತಿಕಾರಿಯನ್ನು ಯಾರೂ ತಡೆಯಲಾರರು. ದಿವಾಳಿಗೆದ್ದ ತಲೆಯಿಲ್ಲದ ಸರಕಾರದ ವಿರುದ್ದ ಸಶಸ್ತ್ರಕ್ರಾಂತಿಗೆ ನಾವೆಲ್ಲ ಸಿದ್ಧರಾಗಬೇಕು' ಎಂದು ಲೆನಿನ್ ಕೊಟ್ಟ ಕರೆ.

ಅವರೊಬ್ಬರದೇ ಅಲ್ಲ ಕೋಟಿ ಕೋಟಿ ಮಾನವರ ಆರ್ತನಾದದ ಪ್ರತಿಧ್ವನಿಯೇ ಆಗಿತ್ತು. ಈ ಕ್ರಾಂತಿಕಾರಕ ವಾತಾವರಣದಲ್ಲಿ ಮೈನ್ ಶೆವಿಕರು ಸರಕಾರದ ಬೆಂಬಲಿಗರಾಗಿ ಪ್ರತಿಗಾಮಿ ಹಾದಿಯನ್ನು ತುಳಿದರು. ಜನತೆಯಲ್ಲಿ ಅಪಾರ್ಥ ಕಲ್ಪನೆ ಹುಟ್ಟಿಸುವಂತೆ ಸುದ್ಧಿಗಳನ್ನು ಹಬ್ಬಿಸಿತು. ಸಶಸ್ತ್ರ ಕ್ರಾಂತಿಯಿಂದ 'ಕಮ್ಯುನಿಸ್ಟ್' ಪಕ್ಷಕ್ಕೆ ಲಾಭವಾಗುವುದಿರಲಿ ಜನತೆ ಬರ್ಭರ ಸ್ಥಿತಿಗೆ ಇಳಿಯಿತು ಎಂದು ಹೆದರಿಕೆ ಹುಟ್ಟಿಸಿತು. ಆದರೆ ಎಚ್ಚೆತ್ತ ಜನತೆಗೆ ಅದರಲ್ಲೂ ದುಡಿಮೆಗಾರರ ವರ್ಗಕ್ಕೆ ಈ ಹುಸಿ ಬೆದರಿಕೆ ಪರಿಣಾಮ ಬೀರಲಿಲ್ಲ. ಬೋಲ್‌ಶೆವಿಕರ ಸಂಘಟನೆಗೆ ಸೈದ್ಧಾಂತಿಕ ನೆಲೆಗಟ್ಟಿತ್ತು. ಜೊತೆಗೆ ಲೆನ್‌ನರಂತಹ ಪ್ರತಿಭಾಶಾಲಿಯ ದರ್ಶನದ ವರ್ಚಸ್ಸಿತ್ತು. ೧೯೧೭ರ ತನಕ ನಡೆದ ಈ ಹೋರಾಟದ ಕಥೆ ಇಡೀ ವಿಶ್ವಕ್ಕೆ ಒಂದು ಹೊಸ ಪಾಠವನ್ನು ಕಲಿಸುವಂತಿದೆ. ಅದು ಜನಶಕ್ತಿ ಎಂದರೇನು? ಈ ಶಕ್ತಿಗೆ ಮೂಲವಾದ ಮಾನವನ ಬೌದ್ಧಿಕ, ಭೌತಿಕ ಮತ್ತು ಅಧ್ಯಾತ್ಮಿಕ ನೆಲೆ–ಬೆಲೆ ಹೇಗೆ ಸಾಧಕವಾಗಿವೆ ಎಂಬುದರ ಅನುಭವವೂ ಈ ಸಂದರ್ಭದಲ್ಲಿ ವ್ಯಕ್ತವಾಯಿತು. ಆಸೆ, ದುರಾಸೆ, ವ್ಯಕ್ತಿಗತ ಹಠಮಾರಿತನ ಹಾಗೂ ದುರ್ಗುಣ ಇವು ಮಾನವನ ವಿನಾಶಕ್ಕೆ ಕಾರಣವಾಗುವ ನಕಾರಾತ್ಮಕ ಅಂಶಗಳೇ ಹೊರತು ಮಾನವ ಸಮಾಜವನ್ನು ಕಟ್ಟುವ ಬೆಳೆಸುವ ಪ್ರಯತ್ನಕ್ಕೆ ಮಾರಕವೂ ಹೌದು ಎಂಬುದನ್ನು ತಿಳಿಸಿದರು. ತಮ್ಮ ವೈಯಕ್ತಿಕ ಬದುಕಿನ ಸನ್ನಡತೆಯಿಂದ ತೋರಿಸಿಕೊಟ್ಟರಲ್ಲದೆ. ಕಾರ್ಲ್ ಮಾರ್ಕ್ಸ್, ಎಂಗೆಲ್ಸರ ಸೈದ್ಧಾಂತಿಕ ಪ್ರಣಾಳಿಕೆಯನ್ನು ಅನ್ವಯಿಸುವುದರ ಮೂಲಕ ಅಸಾಧ್ಯವನ್ನು ಸಾಧ್ಯವಾಗಿಸಿ ತೋರಿಸಿದರು. ದುಡಿಯುವ ವಿಶ್ವದ ಜನರು ಒಗ್ಗಟ್ಟಾಗಿ, ಹೋರಾಟದಿಂದ ನೀವು ಕಳೆದುಕೊಳ್ಳುವುದು ಏನು ಇಲ್ಲ. ನಿಮ್ಮ ಬಂಧವನ್ನು ಮಾತ್ರ ಕಳಚಿಕೊಳ್ಳುವಿರಿ ಎಂಬ ಕಮ್ಯುನಿಸ್ಟ್ ಪ್ರಣಾಳಿಕೆಯ ಪ್ರಭಾವವನ್ನು ಜನತೆಯ ಮೂಲಕ ಜಗತ್ತಿಗೆ ಸಾಭಿತು ಮಾಡಿ ತೋರಿಸಿದರು.

೧೯೧೮ರ ನಂತರ ೬ ವರ್ಷಗಳ ಕಾಲ ಸಮಾಜವಾದಿ ಸೋವಿಯಟ್ ರಷ್ಯಾ ಒಕ್ಕೂಟವನ್ನು ಅಧ್ಯಕ್ಷನಾಗಿ ಮುನ್ನಡೆದ ಲೆನಿನರು ಜನತೆಯ ಎಲ್ಲ ಕನಸ್ಸುಗಳನ್ನು ನನಸ್ಸಾನ್ನಾಗಿ ಮಾಡಿ ತೋರಿಸದರೆಂದು ಹೇಳಿಲಿಕ್ಕಾಗದು. ಆದರೆ ಅವರು ತತ್ವ ನಿಷ್ಟರಾಗಿ ಬಹುದೂರದ ದೃಷ್ಟಿಯಿಂದ ಆಡಳಿತವನ್ನು ನಿರ್ವಹಿಸಿದರು. ಪ್ರತಿಗಾಮಿ ಶಕ್ತಿಗಳನ್ನು ನಿವಾರಿಸಿದರು. ಸಮತಾವಾದದ ಯೋಜನೆಗಳನ್ನು ರೂಪಿಸಿದರು. ಕೂಲಿಕಾರರ ಮತ್ತು ರೈತರ ದುಡಿಮೆಗಳಿಗೆ ಯೋಗ್ಯವಾದ ಪ್ರತಿಫಲ ನೀಡಿದ್ದಲ್ಲದೆ ದೇಶ ಕಟ್ಟುವ ಜನಗಳ ನೈತಿಕ, ಆರ್ಥಿಕ ಸ್ಥಿತಿಗತಿಗಳಿಗೆ ಭರವಸೆ ತುಂಬಿದರು. ಪ್ರತಿಭಾನ್ವಿತ ಶಕ್ತಿಗಳಿಂದ ಶಿಕ್ಷಣ, ವಿಜ್ಞಾನ ಮತ್ತು ಸಾಂಸ್ಕೃತಿಕ ಜೀವನಕ್ಕೆ ಹೊಸ ಕಳೆಯನ್ನು ತಂದರು. ಇದರ ಜೊತೆಗೆ ವಿಶ್ವರಾಜಕೀಯದ ವ್ಯವಹಾರಗಳಲ್ಲಿ ಭಾಗವಹಿಸಿ ವಿಶ್ವಶಾಂತಿ ಮಾನವ ಅಭಿವೃದ್ಧಿಗಳಿಗೆ ತಕ್ಕುದಾದ ವಿದೇಶ ನೀತಿಯನ್ನು ರೂಪಿಸಿದರು. ಲೆನಿನ್ ನಂತರ ಜೋಸೆಫ್ ಸ್ಟಾಲಿನ್ ಸೋವಿಯತ್ ಒಕ್ಕೂಟದ ನಿರ್ವಹಣೆಗೆ ತೊಡಗಿದ ದೇಶದ ಎಲ್ಲ ಭೂಮಿ ಮತ್ತು

ಉತ್ಪಾದನೆಯ ಸಾಮಾಗ್ರಿಗಳು ರಾಷ್ಟ್ರಾದೀನ ಎಂದು ಸಾರಿದವು. ಬಹುಪಾಲು ಕೃಷಿಗಾರಿಕೆ ಸಾಂಗಿಕ (collective) ಪದ್ಧತಿಯಿಂದ ನಡೆಯುವಂತೆ ಯೋಜನೆ ರೂಪಿಸಿದರು. ಒಟ್ಟು ರಾಜ್ಯ ಪದ್ದತಿ 'ಸಾಮ್ಯವಾದಿ' (communist) ಮತ್ತು ಕೂಲಿಗಾರ ಹಾಗೂ ಬಡರೈತರ ಸೋವಿಯತ್ ಯುನಿಯನ್ ಎಂಬ ಸರ್ವಾಧಿಕಾರದ್ದು. ರಷ್ಯಾದ ಈ ಹೊಸ ಸಂವಿಧಾನ ತೀರಾ ಸಾಮಾನ್ಯ ಪ್ರಜೆಗೂ ಕೊಟ್ಟ ಅಧಿಕಾರ. ಈ ಸರ್ವಾಧಿಕಾರ ಪದ ಮಾಮುಲಿಯಾದುದಲ್ಲ. ಸರ್ವರ ಅಧಿಕಾರ ಅಂದರೆ ರಾಷ್ಟ್ರದ ಸಂಪತ್ತನ್ನು ಬಂಡವಾಳ ಮಾಡಿಕೊಂಡು ಪ್ರತಿಯೊಬ್ಬನು ತನ್ನ ಸಾಮಾರ್ಥ್ಯಕ್ಕೆ ತಕ್ಕಂತೆ ದುಡಿಯುವ ಹಕ್ಕನ್ನು ಪಡೆದು ಕರ್ತವ್ಯವನ್ನು ನಿರ್ವಹಿಸುವುದು ಮತ್ತು ತನ್ನ ಅಗತ್ಯಕ್ಕೆ ತಕ್ಕಷ್ಟು ಪ್ರತಿಫಲವನ್ನು ಪಡೆಯುವುದು. 'ಸರ್ವರಿಗೆ ಸಮಪಾಲು, ಸರ್ವರದು ಸಮಬಾಳು' ಎದು ಸೋವಿಯತ್ ದೇಶದ ಸಂವಿಧಾನದ ಪ್ರಸ್ತಾವನಾ ವಾಕ್ಯ ಮತ್ತು ಅದರ ಗೊತ್ತಾಗುರಿಗಳ ಧ್ಯೇಯವಾಕ್ಯ. ಪಾ.ವೆಂ. ರಷ್ಯಾದ ರಾಜ್ಯಕ್ರಾಂತಿಯ ಕಥೆಯನ್ನು ಕಲಾತ್ಮಕವಾಗಿ ನಿರೂಪಿಸಿದ್ದಾರೆ. ಸುಮಾರು ೩೦೦ ವರ್ಷಗಳ ದೇಶದ ಪ್ರತಿವಿವರವನ್ನು ಸಾಕ್ಷ್ಯಾಧಾರ ಸಹಿತ ವಿವರಿಸುತ್ತಾರೆ ಮತ್ತು ಅಲ್ಲಿ ನಡೆದ ಕ್ರಾಂತಿಯ ಕಾರಣ–ಪರಿಣಾಮಗಳನ್ನು ಮನಂಬುಗುವಂತೆ ನಿರೂಪಿಸುತ್ತಾರೆ. ವಿವರ ಮತ್ತು ಸಂಗತಿಗಳನ್ನು ಸಂಗ್ರಹಿಸಿ ಕಥೆಯಾಗಿಸುವ ಅವರ ಶೈಲಿಯಲ್ಲಿ ಕೌಶಲ್ಯವಿದೆ. ಪಾ.ವೆಂ. ಇಲ್ಲಿ ಟಂಕಿಸಿದ ಹಲವು ಶಬ್ದಗಳು ಮನೋಜ್ಞವಾಗಿವೆ. ಸಂಸ್ಥಾಯ (community) ಸಾಮ್ಯವಾದ (communism) ಗೌಡಶಾಹಿ (fudealism) ಭೂರಿಜನ ಸಮಾಜ (ploiteriest) ಸಮಿತಿ (society) ಬದ್ಧಮುಷ್ಟಿ (kulaka) ಪದಗಳು ಗಮನಾರ್ಹವಾಗಿವೆ. ಒಬ್ಬ ಪತ್ರಕರ್ತನ ನಿರೂಪಣಾ ಶೈಲಿ ಹೇಗೆ ಪಾರದರ್ಶಕವಾಗಿರಬೇಕೆಂಬುದಕ್ಕೆ ಈ ಗ್ರಂಥ ಮಾದರಿಯಾಗಿದೆ. ಈ ತರದ ಯಶಸ್ವಿ ಬರವಣಿಗೆಗೆ ಕಾರಣ ಪಾ.ವೆಂ. ಅವರಿಗೆ ಸ್ವಭಾವತಃ ಇರುವ ಎಡಪಂಥೇಯ ವಿಚಾರಧಾರೆಯ ಒಲವು ಕಾರಣ ಎಂದೆನಿಸುತ್ತದೆ. ವಿಶ್ವದಲ್ಲೇ ಅಗಾಧವೆನಿಸುವ 'ರಾಜ್ಯಕ್ರಾಂತಿ'ಯ ಕುರಿತು ಅವರಿಗೆ ಹೆಮ್ಮೆ ಅಭಿಮಾನವಿದ್ದುದು ಕಾರಣ.

೪. ಸ್ವತಂತ್ರ ಭಾರತ:

ಭಾರತ ಸ್ವಾತಂತ್ರ್ಯದ ರಜತೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಸರ್ವತಂತ್ರ ಭಾರತದ ರಾಜಕೀಯ ಸಾಧನೆಯನ್ನು ಕುರಿತು 'ಮಿಂಚಿನ ಬಳ್ಳಿ' ಪ್ರಕಾಶನದಿಂದ ಪ್ರಕಟಗೊಂಡ ೨ನೇಯ ಕುಡಿ ಈ ಕೃತಿ **ಸ್ವತಂತ್ರ ಭಾರತ** (೧೯೭೨) ಭಾರತಕ್ಕೆ ಸ್ವಾತಂತ್ರ ಬಂದು ೨೫ ವರ್ಷಗಳ ನಂತರದ ಪರಿಸ್ಥಿತಿಯ ಸ್ಥೂಲ ಪರಿಶೀಲನೆ, ಪ್ರಯತ್ನ ಮತ್ತು ರಾಷ್ಟ್ರೀಯ ಜಾಗೃತಿಯನ್ನು ಮೂಡಿಸುವ ಸ್ಥೂಲ ನೋಟದ ಕೃತಿಯಿದು. ೨೫ ವರ್ಷಗಳ ಸ್ವಾತಂತ್ರ ಮತ್ತು ೨೦ ವರ್ಷಗಳ ಯೋಜನಾ ಬದ್ಧ ಆರ್ಥಿಕ ನಿರ್ದೇಶನದ ನಂತರ ಭಾರತದಲ್ಲಿ ಕಾಣಿಸುವ ಚಿತ್ರ ಕಪ್ಪು ಬಿಳಿ ಮಿಶ್ರಿತವಾದದ್ದು.

ಪಾ.ವೆಂ. ಅವರು ಒಂಬತ್ತು ಅಧ್ಯಾಯಗಳಲ್ಲಿ ಭಾರತದ ಸುದೀರ್ಘ ಇತಿಹಾಸ, ಅದರ ಗತಾನುಭವಗಳು, ಭಾರತದ ಅಸಂಖ್ಯ ಸಮಸ್ಯೆಗಳು, ಅದರ ಶಕ್ತಿ ದೌರ್ಬಲ್ಯಗಳು ಇವೆಲ್ಲವುಗಳ ಸಮಗ್ರ ಚಿತ್ರಣವನ್ನು ಈ ಕೃತಿಯಲ್ಲಿ ತೆರೆದಿಡುತ್ತಾರೆ.

ಒಂದೂವರೆ ಶತಮಾನಗಳ ಕಾಲ ಬ್ರಿಟೀಷರ ದಬ್ಬಾಳಿಕೆಯ ಅಳ್ವಿಕೆಯಿಂದ ಮುಕ್ತವಾದ ಭಾರತ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಲ್ಲಿ ಆಚರಿಸಿತು. ಬ್ರಿಟಿಷರು ತಮ್ಮ ನೆಲೆಯನ್ನು ಭಾರತದಲ್ಲಿ ಭದ್ರ ಪಡಿಸಲು ಮುಸ್ಲಿಂ ಜನತೆಯಲ್ಲಿ ಪ್ರತ್ಯೇಕತಾ ಭಾವನೆಯನ್ನು ಪ್ರೋತ್ಸಾಹಿಸಿದ್ದರು. ಮುಸ್ಲಿಂಲೀಗ್‌ನ (೧೯೪೭) ಪ್ರತ್ಯೇಕತೆಯಿಂದ ಈಶಾನ್ಯ, ವಾಯುವ್ಯದ ದೊಡ್ಡ ಪ್ರದೇಶಗಳು ಬೇರೆಯೇ ರಾಷ್ಟ್ರವಾಗಿ ಉಳಿದು ಭಾರತದ ರಾಷ್ಟ್ರನಾಯಕರು ಹರಕು ಮುರುಕು ಭಾರತವನ್ನು ಸ್ವೀಕರಿಸಿದರು. ಅಖಂಡ ಭಾರತದ ಕನಸು ನಿಷ್ಫಲವಾಯಿತು. ಈ ಸಂಭ್ರಮದ ಉತ್ಸವ ದಟ್ಟವಾದ ವಿಷಾದ ಛಾಯೆಯಾಗಿತ್ತು. ಗಾಂಧೀಜಿಯಂತಹ ಮಹನೀಯರು ಈ ಉತ್ಸವದಿಂದ ದೂರ ಉಳಿದಿದ್ದರು. ಜಾತಿ ಮತ್ತು ಬಹುಭಾಷಾ ವೈವಿದ್ಯವುಳ್ಳ ವಿಶಾಲ ಭಾರತಕ್ಕೆ ಸಡಿಲು ರಾಜ್ಯ ಸಂವಿಧಾನ ಸಫಲವಾಗಲು ಸಾಧ್ಯವಿದೆಯೇ? ಎಂದು ಪ್ರಶ್ನಿಸುತ್ತಾರೆ. ಮುಸ್ಲಿಂರ ಪ್ರತ್ಯೇಕಭಾವ, ದಕ್ಷಿಣ ಭಾರತದ ದ್ರಾವಿಡ ಚಳುವಳಿ, ಸ್ವತಂತ್ರರಾಗುವ ಕನಸು ಹೊತ್ತ ದೇಶಿ ಸಂಸ್ಥಾನಿಕರು ಈ ಎಲ್ಲ ಸಮಸ್ಯೆಗಳು ಭಾರತೀಯರ ಅಭದ್ರತೆಗೆ ಹುಲುಸು ಕದನ ಕ್ಷೇತ್ರವಾಗಿ ದುಃಖಿಸುವುದಕ್ಕಿಂತ ವಿಭಜನೆಯೇ ಮೇಲು ಎಂದು ಕಾಂಗ್ರೇಸಿನಲ್ಲಿ ಪಳಗಿದ ರಾಷ್ಟ್ರ ನಾಯಕರು ಇದಕ್ಕೆ ಸೈ ಎಂದಿದ್ದಾರೆ ಎನ್ನುವ ಅಸಾಹಯಕತೆಯ ಸೋಲು ಅನಿವಾರ್ಯವಾಗಿತ್ತೆನ್ನುತ್ತಾರೆ ಪಾ.ವೆಂ.

ದೇಶ ವಿಭಜನೆಗೊಂಡಿತು, ಸ್ವತಂತ್ರ ಭಾರತದ ರಾಷ್ಟ್ರಧ್ವಜವನ್ನೇರುತ್ತಿದ್ದಾಗ ಮುಂದಾಳು ನಾಯಕರು ಆಶಾವಾದಿಗಳಾಗಿದ್ದರು. ಸ್ವಾತಂತ್ರ್ಯ ಬರಲು ಕಾರಣವಾಗಿದ್ದ ಮಹಾತ್ಮ ಗಾಂಧೀಜಿಯವರು ಸಹಸ್ರ ಮೈಲು ದೂರದಲ್ಲಿದ್ದರು. 'ಉತ್ಸವ' ಮಾಡುವುದಕ್ಕೆ ಗಾಂಧೀಜಿಯವರ ಸಮ್ಮತವಿರಲಿಲ್ಲ. ದೇಶದೊಳಗೆ ರಕ್ತದ ನದಿಗಳು ಹರಿಯುತ್ತಿದೆ. ಹಿಂದೂ ಮುಸ್ಲಿಂ ಗಲಭೆ, ಕೊಲೆ, ಸುಲಿಗೆ, ಸ್ತ್ರೀ ಅಪಹರಣ, ನಿರಾಶ್ರಿತರ ಸಮಸ್ಯೆ, ಸ್ಥಾನಿಕರ ಸಮಸ್ಯೆ – ಹೀಗೆ ಜಗತ್ತಿನ ಇತಿಹಾಸದಲ್ಲಿ ಯಾವ ರಾಷ್ಟ್ರವು ಎದುರಿಸದ ಸಮಸ್ಯೆ ಭಾರತದಲ್ಲಿತ್ತು. ಕೊನೆಗೆ ಶಾಂತಿ ಪ್ರಯತ್ನಗಳ ಉಡುಗೊರೆಯಾಗಿ ಹಿಂದೂ ಧರ್ಮಾಂದನೊಬ್ಬನ ಗುಂಡಿಗೆ ರಾಷ್ಟ್ರಪಿತ ಬಲಿಯಾದರು. ಸಮಸ್ಯೆಯ ನಿವಾರಣೆಯ ವಿಶ್ಲೇಷಣೆ ಮಾಡುವಾಗಲೇ ಉತ್ತರದ ತುದಿ ದೇಶಿ ಸಂಸ್ಥಾನ ಕಾಶ್ಮೀರವನ್ನು ಬಲತ್ಕಾರದಿಂದ ವಶಪಡಿಸಿಕೊಳ್ಳಲು ಮುಂದಾಯಿತು. ಹೀಗೆ ಸಮಸ್ಯೆಯ ನಡುವೆಯು ಸರ್ವತಂತ್ರ ಭಾರತ ಬದುಕುವ ಆಶಾವಾದ ಹೇಗಿದೆ ಎನ್ನುವುದನ್ನು ಪಾ.ವೆಂ. ಇಲ್ಲಿ ಸ್ಪಷ್ಟಪಡಿಸುತ್ತಾರೆ.

ಜಾಗತಿಕ ವ್ಯಕ್ತಿತ್ವವುಳ್ಳ ನೆಹರೂರವರ ಪ್ರಧಾನಮಂತ್ರಿ ಪದವಿ, ಗೃಹಮಂತ್ರಿತ್ವ ವಹಿಸಿಕೊಂಡಿದ್ದ ಸರದಾರ್ ವಲ್ಲಬಾಯಿ ಪಟೇಲರ ಸಂಘಟನಾ ಶಕ್ತಿ ಮತ್ತು ಇನ್ನಿತರ ದೃಡಚಿತ್ತದ ನಾಯಕರು ನಿರಾಶ್ರಿತರ ಮತ್ತು ಸಂಸ್ಥಾನಿಕರ ಸಮಸ್ಯೆಯನ್ನು ಸುಮಾರಾಗಿ

ಪರಿಹರಿಸಿದರು. ಇದಕ್ಕಾಗಿ ಎರಡು ದಶಕಗಳೇ ಬೇಕಾದವು. ೧೯೫೭೦ರ ಅಂತ್ಯದೊಳಗೆ ಭಾರತದ ಅಳವಿನಲ್ಲಿ ಬರುವ ಹೆಚ್ಚಿನ ಸಂಸ್ಥಾನಗಳು ಸ್ವ ಇಚ್ಛೆಯಿಂದ ಸೇರ್ಪಡೆಯಾಯಿತು. ವಿಶ್ವ ಸಂಸ್ಥೆಯ ನೇತ್ರತ್ವದಲ್ಲಿ ಪಾಕಿಸ್ತಾನ ಮೌನವಾಯಿತು. ೧/೩ ಭಾಗ ಕಾಶ್ಮೀರ ಪಾಕಿಸ್ತಾನಿಗಳ ವಶವಾಗಿಯೇ ಉಳಿದಿದೆ. ೨೫ ವರ್ಷಗಳಲ್ಲಿಯೂ ಇದೆ ಅವಸ್ಥೆಯಲ್ಲಿದೆ. ಪಾಕಿಸ್ತಾನ-ಭಾರತದ ಈ ಧೋರಣೆ ವೈರಿತನ ಕಲ್ಯಾಣ ಯೋಜನೆಗಳಿಗೆ ವಿನಿಯೋಗವಾಗಬೇಕಿದ್ದ ಧನಸಂಪತ್ತು ಇಂದು ರಕ್ಷಣಾ ಸನ್ನಾಹಕ್ಕೆ ವಿನಿಯೋಗಿಸಿ ಶಕ್ತಿಹ್ರಾಸ ಮಾಡಿಕೊಳ್ಳಬೇಕಾಗಿದೆ. ಇದು ಪಾ.ವೆಂ. ಅವರು ಭಾರತದ ಪ್ರಗತಿಯ ಕುಂಠಿತದ ಬಗ್ಗೆ ಚಿಂತಿಸಿದ ರೀತಿ.

ಸಂವಿಧಾನ ಮತ್ತು ತಿದ್ದುಪಡಿಗಳು: ಭಾರತದ ಸಂವಿಧಾನ ಜಗತ್ತಿನಲ್ಲೇ ಅತಿದೊಡ್ಡ ಸಂವಿಧಾನ ಗ್ರಂಥವಾಗಿದೆ. ಪ್ರೆಂಚ್‌ಕ್ರಾಂತಿಗೆ ಸ್ಫೂರ್ತಿಕೊಟ್ಟ ಸ್ವಾತಂತ್ರ್ಯ (Liberty) ಸಮಾನತೆ (Equailty) ಮತ್ತು ಬಾಂಧವ್ಯ (Fraternity) ಈ ತ್ರಿತಯವನ್ನಲ್ಲದೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ (Justice)ವನ್ನು ಸಕಲ ನಾಗರಿಕರಿಗೂ ದೊರಕಿಸಿ ಕೊಡುವುದೇ ಸಂವಿಧಾನದ ಉದ್ದೇಶವೆಂದು ಉಪೋದ್ಘಾತದಲ್ಲಿ ಹೇಳಿದೆ. ಇದು ಪಂಡಿತ ನೆಹರೂರವರೂ ಭಾರತೀಯರ ಸಂರಕ್ಷಣೆಗಾಗಿ ನವಭಾರತದ ಕನಸ್ಸನ್ನು ಲಿಪಿಬದ್ಧವಾಗಿ ಮಾಡಿದ ಅಧ್ಯಾಯ ಈ ಸಂವಿಧಾನ. ಪಾಶ್ಚಾತ್ಯರ ಅನುಕರಣೆಯಿಂದ ಬಂದದು, ಮೂಲಭೂತ ಹಕ್ಕುಗಳ ಅಧ್ಯಾಯ, ನಿರ್ದೇಶಕ ತತ್ವಗಳ ಅಧ್ಯಾಯ ದರಿದ್ರ ಭಾರತದ ಉದ್ಧಾರದ ಸ್ಫೂರ್ತಿಯಿಂದ, ಸಮಾಜವಾದದ ತತ್ವಗಳಿಂದ ಹುಟ್ಟಿದ್ದು ಇವೆರಡರಲ್ಲಿ ಪರಸ್ಪರ ವಿರೋಧ ಬರಬಹುದೆಂಬ ಕಲ್ಪನೆ ಇರಲಿಲ್ಲವೆನ್ನುತ್ತಾರೆ. ಪಾ.ವೆಂ. ವಿಧಾನಸಭೆ, ರಾಜ್ಯಸಭೆ, ಮಂತ್ರಿಗಳ ಆಯ್ಕೆಯ ಬಗ್ಗೆ ವಿವರಿಸುತ್ತಾ 'ಭಾರತದಲ್ಲಿ ಪ್ರೌಢ ಮತದಾನದ ಹಕ್ಕು ದಯಪಾಲಿಸಿದ್ದು ನಿಜವಾಗಿ ಕ್ರಾಂತಿಕಾರಕ ಕ್ರಮವೆನ್ನುತ್ತಾರೆ. ಹೀಗೆ ೨೫ ವರ್ಷಗಳಲ್ಲಿ ೨೮ ಸಂವಿಧಾನದ ತಿದ್ದುಪಡಿಗಳು 'ರಾಜನೀತಿಯ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳು' ಈ ತಾಕಲಾಟದಿಂದ ನಡೆಯಿತು. ಇಂದಿರಾಗಾಂಧಿ ಸರಕಾರದಲ್ಲಿ ಜನತೆಯ ಆಶೋತ್ತರಗಳಿಗೆ ಮನ್ನಣೆ ನೀಡಲಿಲ್ಲ. ಸಮಾಜವಾದಿಗಳಿಗಾದ ಅನ್ಯಾಯಕ್ಕೆ ನ್ಯಾಯಾಲಯಗಳ ಮೇಲೆ ಹೊರಿಸಿ ಜಾರಿಕೊಳ್ಳುವ ಭೂಟಾಟಿಕೆ ಇಲ್ಲಿದೆ. ಪ್ರಧಾನಮಂತ್ರಿಯ ಪ್ರಚಂಡ ವ್ಯಕ್ತಿತ್ವಗಳಿಂದ ಭಾರತದ ಅಧ್ಯಕ್ಷರ ಅಧಿಕಾರ ಸಂಕುಚಿತವಾಗಿದೆ. ೨೫ ವರ್ಷಗಳಲ್ಲಿ ನೆಹರೂರವರ ಜಾಣ್ಮೆಯಿಂದ ಕೇಂದ್ರಕ್ಕೂ, ರಾಜ್ಯಕ್ಕೂ ಹೆಚ್ಚು ಘರ್ಷಣೆ ಇಲ್ಲದೆ ಯಶಸ್ಸಿನ ದಾರಿಯಲ್ಲಿ ದೇಶಸಾಗಿದೆ.

ಪಕ್ಷಗಳು ಮತ್ತು ಧ್ಯೇಯಗಳು: ಆಧುನಿಕ ಪಶ್ಚಿಮ ಯುರೋಪಿನ ರಾಜ್ಯ ಪದ್ಧತಿಗಳನ್ನು ಅನುಸರಿಸಿ ಸಂವಿಧಾನವನ್ನು ರಚಿಸಿಕೊಂಡ ಭಾರತ ಅಲ್ಲಿಂದಲೇ ರಾಜಕಾರಣದ ಕಾರ್ಯಾಚರಣೆಗೆ ಪಕ್ಷ ಪದ್ಧತಿಯನ್ನು ಸ್ವೀಕರಿಸಿತು. ಪಕ್ಷಗಳು ಮತ್ತು ಧ್ಯೇಯಗಳ ಬಗ್ಗೆ ಭಾರತ ಸ್ವಾತಂತ್ರವಾದ ನಂತರ ಕಾಂಗ್ರೆಸ್ ಪಕ್ಷ ಮತ್ತು ಇತರ ಪಕ್ಷಗಳ ಅಳಿವು,

ಉಳಿವುಗಳನ್ನು ಅವುಗಳ ಕಾರಣವನ್ನು ಅವಲೋಕಿಸುತ್ತಾ ಪಕ್ಷರಾಜಕಾರಣದ ದೌರ್ಬಲ್ಯವನ್ನು ಸ್ಪಷ್ಟೀಕರಿಸುತ್ತಾರೆ. ಜನರ ದೈನಂದಿನ ಸುಖ ದುಃಖಗಳಲ್ಲಿ ನೆರವಾಗದ ಕಾರ್ಯಕರ್ತರು, ಮುಂದಾಳುಗಳು ಚುನಾವಣೆಗಳನ್ನು ಹಣದ ಜಾತಿಯ ಬಲದಿಂದಲೇ ಗೆಲ್ಲಬೇಕಾಗುವುದು ಅದು ನಹಿತ ಸ್ವಾರ್ಥಗಳ ಕೈಯಲ್ಲಿ ಅವರನ್ನು ಸಿಲುಕಿಸುತ್ತದೆ ಎಂದು ಅದರ ಅಸಾಹಯಕತೆಯನ್ನು ಹೇಳುತ್ತಾರೆ.

ಚುನಾವಣೆಗಳು: ಚುನಾವಣೆ, ಮತದಾರರು, ರಾಜಕಾರಣಿಗಳು ಇವರ ಮನೋವೃತ್ತಿಗಳನ್ನು ಇಲ್ಲಿ ವಿಶ್ಲೇಷಿಸುತ್ತಾರೆ.

ಕಲ್ಯಾಣರಾಜ್ಯ: ಭಾರತ ಸ್ವಾತಂತ್ರ್ಯವಾದ ಮೇಲೆ ಸಮಾಜ ನಿರ್ಮಾಣದ ಹಾದಿಯ ಬಗ್ಗೆ ಎರಡು ಮತಗಳಿದ್ದವು.

೧. ಗಾಂಧೀಜಿಯ 'ರಾಮರಾಜ್ಯ' (ಸ್ವಾವಲಂಬಿ ಜೀವನ).

೨. ನೆಹರೂರವರ ಉತ್ಪದನಾ ಪದ್ಧತಿಗಳನ್ನು ಉಪಯೋಗಿಸಿ ಅಭಿವೃದ್ಧಿ ಹೊಂದುವ ಕಲ್ಯಾಣ ರಾಜ್ಯ. ಗಾಂಧೀಜಿಯವರ ಆದರ್ಶದ ಕನಸ್ಸು ನೆರವೇರಲಿಲ್ಲ. ನೆಹರೂರವರ ನೇತೃತ್ವದಲ್ಲಿ ಭಾರತ ಪಾಶ್ಚಾತ್ಯ ಮಾದರಿಯನ್ನು ಅವಲಂಬಿಸಿತು. ಇಲ್ಲಿ ಸಾಕಷ್ಟು ಬಂಡವಾಳದ ಕೊರತೆಯಿರುವುದರಿಂದ ಸೋವಿಯಟ್ ರಷ್ಯಾ ಮಾದರಿಯ ಯೋಜನೆ ಭಾರತದಲ್ಲಿ ಸಾಧಿಸಲಾಗಲಿಲ್ಲ. ಪಾ.ವೆಂ. ಅವರು ಭಾರತದ ಈ ಸೋಲಿಗೆ ಕಾರಣಗಳನ್ನು ಕೊಡುತ್ತಾರೆ. (೧) ರಷ್ಯಾದೇಶ ಕಾರ್ಮಿಕನಿಗೆ ನಲವತ್ತು ವರ್ಷಗಳ ಕಾಲ ಹೊಟ್ಟೆ ತುಂಬ ಅನ್ನ ಹೊರತು ಮತ್ತಾವ ಸುಖ ಸೌಕರ್ಯವನ್ನು ನೀಡಲಿಲ್ಲ. (೨) ಭಾರಿ ಮೂಲ ಉದ್ಯಮ ಮತ್ತು ಯುದ್ಧೋದ್ಯಮಗಳಿಗಾಗಿ ಜನಸಾಮಾನ್ಯರು ದುಡಿದು ಕಷ್ಟಜೀವನ ನಡೆಸಬೇಕಾಯಿತು.

೩. ಗಣಿ ಮತ್ತು ಅಣೆಕಟ್ಟುಗಳಂಥ ಕಾರ್ಯಗಳಿಗೆ ರಾಜಕೀಯ ಕೈದಿಗಳ ಗುಲಾಮ ದುಡಿಮೆಯನ್ನು ಬಳಸಲಾಯಿತು.

೪. ನಿಜವಾದ ಸಮಾಜವಾದ ಸಮೃದ್ಧ, ಸುಶಿಕ್ಷಿತ, ಸುವಿವೇಕಿ ಸಮಾಜಗಳು ಅನುಭವಿಸಬಹುದಾದ 'ವಿಲಾಸ' ಅದು ನಿಷ್ಕಿಂಚನರ ಪಾಲಿಗೆ ಬೆವರು ಕಣ್ಣೀರುಗಳ ಕಥೆ.

೫. ಧಾರ್ಮಿಕ ವೆನಿಸಬಹುದಾದ ಶದ್ಧೆಯಿಂದ ದೂರ ಭವಿಷ್ಯತ್ತಿನ ಸೌಖ್ಯಕ್ಕಾಗಿ ಇಂದು ಮಾಡಬೇಕಾದ ಬಲಿದಾನ. ಆಶ್ರದ್ಧೆ ಕುದುರಿಸಲು ತಪ್ಪಿದ್ದೇ ನಮ್ಮ ಅತಿ ದೊಡ್ಡ ಸೋಲು.

ಜನಸಂಖ್ಯಾ ಸಮಸ್ಯೆ ಬಿಟ್ಟರೆ ನಮ್ಮ ನಿಸರ್ಗದ ಸಂಪತ್ತು ಸಮೃದ್ಧವಾಗಿದೆ. ದುಡಿಯುವ ಚೈತನ್ಯ ದೇಶದಲ್ಲಿ ಅಧಿಕವಾಗಿದೆ. ನಮಗಿಂದು ಅಗತ್ಯವಿರುವುದು ಯೋಜಕರು. ಈ ನಿಸರ್ಗ ಮತ್ತು ಜನಸಂಪತ್ತಿಯನ್ನು ತ್ವರಿತದಲ್ಲಿ ಉಪಯೋಗಕ್ಕೆ ತರುವಂತೆ ನಾಡನ್ನು ನಡೆಸುವ ದೂರದರ್ಶಿ ಮತ್ತು ಸ್ಫೂರ್ತಿದಾಯಕ ಮುಂದಾಳುಗಳು.

ಭಾರತ ಮತ್ತು ಜಗತ್ತು: ವಿದೇಶಗಳೊಡನೆ ರಾಯಭಾರ ಸಂಪರ್ಕ ಪ್ರಾಚೀನ ಕಾಲದಿಂದಲೇ ಮಹತ್ವದ ಸ್ಥಾನ ಪಡೆದಿತ್ತು. ಭಾರತೀಯ ಸ್ವಾತಂತ್ರ್ಯ ಆಂದೋಲನದ ನಾಯಕರಲ್ಲಿ ವಿದೇಶನೀತಿಯ ಕಲ್ಪನೆ ನೆಹರೂರವರಿಗೆ ಚೆನ್ನಾಗಿ ಇತ್ತು. ವಿದೇಶಿ ಪ್ರಮುಖರೊಡನೆ ಸ್ನೇಹಪರ ಸಂಪರ್ಕವಿತ್ತು. ವಿದೇಶನೀತಿಯೂ ಉತ್ತಮ ಬಾಂಧವ್ಯವನ್ನು ಹೊಂದಿದ್ದರೆ, ಪಾಕಿಸ್ತಾನದ ಉದಯ ಮಾತ್ರ ಭಾರತಕ್ಕೆ ಗಂಡಾಂತರವನ್ನು ತರುವ ದೇಶವಾಗಿತ್ತು.

ನೆರೆಹೊರೆಯವರಲ್ಲಿ ಏಶಿಯಾದಲ್ಲಿ ಭಾರತದ ಪಾತ್ರ ಸಾಕಷ್ಟು ಯಶಸ್ವಿಯಾಗಿಯೇ ಇತ್ತು. ಅಮೇರಿಕಾ ಮತ್ತು ರಷ್ಯಾ ಪ್ರಬಲ ರಾಷ್ಟ್ರವಾಗಿದ್ದರೂ ಭಾರತ ಇದರಿಂದ ಹೊರಗುಳಿದಿತ್ತು. ಪುನರ್‌ಜೀವನದ ಪ್ರಯತ್ನದ ವಿರುದ್ಧವಾಗಿ ಭಾರತ ಕೈಗೊಂಡ ಪ್ರಚಾರ ಮತ್ತು ಸಂಯುಕ್ತ ರಾಷ್ಟ್ರ ಸಂಘದಲ್ಲಿ ನಡೆಸಿದ ಸಂಧಾನಗಳಿಂದ ಡಚ್ಚರು ಇಂಡೊನೇಶಿಯಕ್ಕೆ ಸ್ವಾತಂತ್ರ್ಯ ಕೂಡಬೇಕಾಯಿತು. ಇಂಡೋ ಚೀನಾದಲ್ಲಿ ಫ್ರೆಂಚರ್ ಪ್ರಯತ್ನದ ವಿರುದ್ಧವು ಭಾರತ ಸಾಕಷ್ಟು ಶ್ರಮಪಟ್ಟಿತು. ಇದೇ ಸಂದರ್ಭದಲ್ಲಿ ವಿಯಟ್ ನಾಂ ಸಮಸ್ಯೆಯನ್ನು ಬಗೆಹರಿಸಲು ನೇಮಕ ಹೊಂದಿದ ತಟಸ್ಥ ರಾಷ್ಟ್ರಗಳ ಮಂಡಳಿಗೆ ಭಾರತ ಅಧ್ಯಕ್ಷನೆಂದು ಆರಿಸಲ್ಪಟ್ಟಿತು. ಭಾರತ ಆಗಲೇ ಅಂತಾರಾಷ್ಟ್ರೀಯ ಪ್ರತಿಷ್ಠೆಗೆ ಸಾಕ್ಷಿಯಾಗಿತ್ತು. ಭಾರತ ನೇರವಾಗಿ ಚೀನಾ ಮತ್ತು ಅಮೇರಿಕಾಗಳ ಸಂಗಡ ಮಾತ್ರವಲ್ಲ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕೂಡ ನಡೆಸಿದ ಸಂಧಾನದಿಂದ ಅಲ್ಲಿ ಶಾಂತಿ ಸ್ಥಾಪನೆಯಾಗಿತ್ತು.

ಒಟ್ಟಿನಲ್ಲಿ ಏಷ್ಯಾ ಮಾತ್ರವಲ್ಲದೆ ಆಫ್ರಿಕಾ ಮತ್ತು ಇತರ ಪಾಶ್ಚಾತ್ಯ ಸಾಮ್ರಾಜ್ಯವಾದದ ಪುನರ್‌ಜೀವನದ ವಿರುದ್ಧ ಭಾರತ ಯಾವಾಗಲೂ ಧ್ವನಿ ಎತ್ತಿದೆ. ಆಫ್ರಿಕಾದ ಅನೇಕ ದೇಶಗಳು, ಬ್ರಿಟಿಷ್ ಫ್ರೆಂಚ್ ಬೆಲ್ಜಿಯಂಗಳ ಸಾಮಾನ್ಯವಾದ ಹಿಡಿತದಿಂದ ಬಿಡಿಸಿಕೊಳ್ಳಲು ಯತ್ನಿಸಿದಾಗಲೆಲ್ಲ ಭಾರತದ ಸೇವೆ ಗಮನಾರ್ಹವಾಗಿದೆ. ಭಾರತಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಒಪ್ಪಿಸಲಾದ ಎಲ್ಲ ಹೊಣೆಗಳನ್ನು ಪ್ರಾಮಾಣಿಕ ಮತ್ತು ನಿಷ್ಪಕ್ಷಪಾತ ರೀತಿಯಲ್ಲಿ ನಿರ್ವಹಿಸಿದೆ.

ಪಾಕಿಸ್ತಾನ, ಚೀನಾ, ರಶಿಯಾ ಮತ್ತು ಅಮೇರಿಕಾ ಭಾರತದ ಸಂಬಂಧಗಳನ್ನು ಪ್ರತ್ಯೇಕವಾಗಿ ವಿಚಾರಿಸಲಾರದಷ್ಟು ವಿರೋದಾಭ್ಯಾಸಗಳು ಅಂಟಿಕೊಂಡಿರುವ ಸ್ಪಷ್ಟಚಿತ್ರಣವನ್ನು ಪಾ.ವೆಂ. ಇಲ್ಲಿ ನೀಡುತ್ತಾರೆ. ಪಾಕಿಸ್ತಾನ ಭಾರತಕ್ಕೆ ಹೊರೆಯಾದ ರಾಷ್ಟ್ರವಾಗಿದೆ. ವಿದೇಶ ಸಂಬಂಧಗಳಲ್ಲಿ ಅಮೇರಿಕಾ ರಾಷ್ಟ್ರಗಳೊಳಗಿನ ಸಂಬಂಧ ಭಾರತದಲ್ಲಿ ಅದರ ಪಾತ್ರ ಎಲ್ಲ ವಿವರ ದಾಖಲೆಗಳೊಂದಿಗೆ 'ಭಾರತ ಮತ್ತು ಜಗತ್ತು' ಅಧ್ಯಾಯದಲ್ಲಿ ವಿವರಿಸಿದ್ದಾರೆ.

ಏಶಿಯಾದ ರಾಜಕಾರಣದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಅಮೇರಿಕಾ ಚೀನಾಕ್ಕೆ ಹತ್ತಿರ ಸರಿಯುತ್ತಿದೆ. ರಶಿಯಾಕ್ಕೂ ಚೀನಾಕ್ಕೂ ದ್ವೇಶ ಹೆಚ್ಚುತ್ತಿದೆ. ಮಧ್ಯ ಪೂರ್ವದಲ್ಲಿ ಈಜಿಪ್ತಿಗೆ ನೀಡುತ್ತಿದ್ದ ಮಿಲಿಟರಿ ಸಹಾಯವನ್ನು ಪುನರ್ವಿಚಾರಿಸುತ್ತಿದೆ.

ಬಾಂಗ್ಲಾದೇಶ ಸ್ವತಂತ್ರವಾದದ್ದರಿಂದ ಪಾಕಿಸ್ತಾನ ಭಾರತಕ್ಕೆ ಬಹುದೊಡ್ಡ ಗಂಡಾಂತರವಾಗಿ ಉಳಿಯುವ ಸಂಭವ ಕಡಿಮೆಯಾಗಿದೆ. ಹಿಂದೂ ಸಾಗರದಲ್ಲಿ ರಷ್ಯಾ ಅಮೇರಿಕಾಗಳ ನಡುವೆ ನೌಕಾಸ್ಪರ್ಧೆಯೊಂದು ಪ್ರಾರಂಭವಾದಂತೆ ಕಾಣುತ್ತದೆ. ನವೋದಿತ ರಾಷ್ಟ್ರಗಳು ಭಾರತವು ನಿರೀಕ್ಷಿಸಿದಂತೆ ಪ್ರಗತಿ ಮಾರ್ಗದಲ್ಲಿ ಸಾಗದೆ ಆಂತರಿಕ ಕಲಹಗಳಲ್ಲಿ ಮೈ ನವಿರೇಳಿಸುವಂತಹ ರಕ್ತಪಾತ ಮಾಡುತ್ತಿದೆ. ಪಾಕಿಸ್ತಾನದೊಡನೆ ನಮ್ಮ ಸಂಬಂಧ ಸಫಲವಾದರೆ ಪ್ರಬಲ ರಾಷ್ಟ್ರಗಳ ತಂತ್ರಗಳನ್ನು ಕೊನೆಗೊಳಿಸುವುದಕ್ಕೆ ಅದು ನಾಂದಿಯಾಗಬಹುದು. ಆಗ ಚೀನಾ, ಜಪಾನ, ಭಾರತ ಮತ್ತು ರಷ್ಯಾ ಇವು ಏಷ್ಯಾದಲ್ಲಿನ ಅಂತಾರಾಷ್ಟ್ರೀಯ ಸಂಬಂಧಗಳನ್ನು ತೊಡಕುಗಳನ್ನು ತಮ್ಮೊಳಗೆ ಬಿಡಿಸಿಕೊಳ್ಳಬೇಕಾಗುವುದು ಇದು ಪಾ.ವೆಂ. ಅವರು ಜಗತ್ತಿನ ಆಂತರಿಕ ಸಂಬಂಧ ಬೆಳವಣಿಗೆಯನ್ನು ಅಭ್ಯಸಿಸಿ ನೀಡುವ ಪರಿಹಾರ.

ಇಪ್ಪತ್ತೈದು ವರ್ಷಗಳ ಸ್ವಾತಂತ್ರ್ಯ ಭಾರತ ಕೆಲವು ಉತ್ತಮ ಮತ್ತು ಕೆಲವು ಅನುತ್ತಮ ಬದಲಾವಣೆಗಳನ್ನು ಕಂಡಿತು. ನಿರೀಕ್ಷಿಸಿದ ಬದಲಾವಣೆಗಳು ಸಾಧ್ಯವಾಗಲಿಲ್ಲ. ಪಾ.ವೆಂ. ಅವರು ಗುರುತಿಸಿದ ಬದಲಾವಣೆಗಳು ಅದರ ಲೋಪದೋಷಗಳು ಮತ್ತು ಪರಿಹಾರಗಳನ್ನು 'ಬದಲಾವಣೆಗಳು, ಆಸೆಗಳು, ಅಶಂಕೆಗಳು ಎನ್ನುವ ಅಧ್ಯಾಯದಲ್ಲಿ ಸ್ಪಷ್ಟಪಡಿಸಿದ್ದಾರೆ. ರಾಜಕೀಯ, ಸಾಮಾಜಿಕ ವಲಯಗಳ ಯಾವುದೇ ಸಮಸ್ಯೆಯ ಪರಿಣಾಮ ಮತ್ತು ಸಮಸ್ಯೆಯ ನಿವಾರಣೆಯನ್ನು ಸಾಮರ್ಥ್ಯಯುತವಾಗಿ ವಿಶ್ಲೇಷಿಸುವ ರೀತಿ ಇಲ್ಲಿ ಮನೋಜ್ಞವಾಗಿದೆ.

೧. ಭಾರತದ ನಕಾಶೆಯಲ್ಲಿ ಎದ್ದು ಕಾಣುವ ಬದಲಾವಣೆ **ಭಾಷಾವಾರು ರಾಜ್ಯಗಳ ನಿರ್ಮಾಣ:** ಇದು ಜನರ ಮಾನಸಿಕ ಐಕ್ಯಕ್ಕೆ ಅಪಾಯಕಾರವಾದುದು. ಪ್ರತ್ಯೇಕತಾ ಮನೋಭಾವವನ್ನು ತಪ್ಪಿಸಲು ಜವಾಹರಲಾಲ ನೆಹರು ಸಾಕಷ್ಟು ಹೆಣಗಿದರು. ರಕ್ತಪಾತವಾಗುವ ಸಂದರ್ಭವನ್ನು ತಪ್ಪಿಸಲು ಇದಕ್ಕೆ ಒಪ್ಪಿಗೆ ಅರಗಿಸಿಕೊಳ್ಳುವುದು ಮುಖ್ಯವಾಗಿತ್ತು. ಅನೇಕ ಕಡೆ ಭಾಷೆ ರಾಜ್ಯ ಸ್ವತಂತ್ರ್ಯ ರಾಜ್ಯಗಳೆಂಬಂತೆ ವರ್ತಿಸುತ್ತಾ ಗಡಿಕಲಹಗಳನ್ನು ವಿವೇಕರಹಿತವಾಗಿ ಇಂದಿಗೂ ಮುಂದುವರಿಸುತ್ತಿದೆ.

೨. **ಮುಸ್ಲಿಂ ಸಮಸ್ಯೆ:** ಹಿಂದೂ ಮುಸ್ಲಿಂ ಸಮಾಜದೊಡನೆ ಸಾಮರಸ್ಯ ಇಲ್ಲದಿರುವುದು ಹಿಂದೂಗಳ ನಡುವೆ ನೂರಾರು ಜಾತಿಗಳು ಅವರ ಆಂತರಿಕ ಐಕ್ಯವನ್ನು ಅಸ್ಥಿರ-ಅನಿಶ್ಚಿತಗೊಳಿಸುತ್ತಿದೆ. ಹಿಂದೂಗಳು ಪ್ರಾರಂಭದಿಂದಲೂ ಜಾತಿ ಪ್ರತ್ಯೇಕತೆಯಲ್ಲಿಯೇ ಬೆಳೆದು ಬಂದವರು. ಇವು ಕೆಲವು ಸಲ ಭಾಷಾನಿಷ್ಠವೂ, ಪ್ರದೇಶನಿಷ್ಠವೂ ಆಗಿರುವುದರಿಂದ ಹಿಂದೂಗಳ ಮೂಲಭೂತ ಭಾವನೆಗಳು ಮುಚ್ಚಿದ ಕೋಣೆಯಲ್ಲಿ ಬಂಧಿತವಾದಂತಿದೆ. ಈ ರೀತಿಯ ನಿರ್ಬಂಧದೊಳಗಿರುವುದರಿಂದ ಆಪ್ತ ಸ್ನೇಹ, ಬಾಂಧವ್ಯ ಬೆಳೆಯುತ್ತಿಲ್ಲ ಇದು ವಿವಾಹ ಸಂಬಂಧಗಳಲ್ಲಿ ಮುಖ್ಯವಾಗಿ ಕಾಣಿಸುತ್ತದೆ. ಈ ಜಾತಿಪದ್ಧತಿ ಅಂತರ್ಜಾತೀಯ ವಿವಾಹಗಳಿಂದಲೇ ನಾಶವಾಗಲು ಸಾಧ್ಯ ಎನ್ನುವ ಪ್ರಗತಿಪರ ನಿಲುವನ್ನು ಪಾ.ವೆಂ. ಮುಂದಿಡುತ್ತಾರೆ.

೩. **ಸಾಮಾಜಿಕ ವ್ಯವಸ್ಥೆಗಳು:** ಸಂಪ್ರದಾಯ ಬದ್ಧ ಮದುವೆ, ಕರ್ಮಾಂತರಗಳಲ್ಲಿ ನಂಬಿಕೆ, ಇದು ಬುದ್ಧಿ ಪೂರ್ವಕ ಬೆಳವಣಿಗೆಗೆ ಅಡಚಣೆಯಾಗಿದೆ.

೪. **ಭ್ರಷ್ಟಾಚಾರ:** ಪ್ರಜಾತಂತ್ರದಲ್ಲಿ ಜನ್ಮಸಿದ್ಧ ಸ್ಥಾನಮಾನವಿಲ್ಲದ್ದರಿಂದ ಎಲ್ಲವೂ ಹಣದಿಂದಲೇ ನಿರ್ಧಾರವಾಗುವಂತಹದ್ದು. ಅಗಾಧವಾದ ಸರಕಾರಿವೆಚ್ಚ, ಭೋಗ ಸಾಮಾಗ್ರಿಗಳ ಅಪಾರ ಉತ್ಪಾದನೆ ಅವುಗಳ ಮಾರಾಟ ತಂತ್ರಗಳು ಇವೆಲ್ಲ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಿದೆ. ಉತ್ಪಾದನೆಯ ಮಟ್ಟಕ್ಕಿಂತಲೂ 'ಜೀವನಮಟ್ಟ' ಹೆಚ್ಚಾದುದು ಇಲ್ಲಿ ಕಲ್ಯಾಣ ರಾಜ್ಯದ ದುರಂತವೂ ಆಗಿದೆ. ಮುಂದುವರಿದ ಪಾಶ್ಚಾತ್ಯ ದೇಶಗಳಿಗೂ ಇಲ್ಲಿಗೂ ಇರುವ ಅಂತರವೆಂದರೆ ಪಾಶ್ಚಾತ್ಯರಲ್ಲಿ ಭ್ರಷ್ಟಾಚಾರದಲ್ಲಿ ಸಿಲುಕಿದವರನ್ನು ಬೆಂಬಲಿಸಲು ಯಾವ ಮರ್ಯಾದಸ್ಥನೂ ಮುಂದೆ ಬರುವುದಿಲ್ಲ. ಆದರೆ ಇಲ್ಲಿ ಅತ್ಯುನ್ನತ ಸ್ಥಾನದಲ್ಲಿ ಇರುವವರು ಅವರನ್ನು ಕಾಪಾಡಲು ಅಂಜುವುದಿಲ್ಲ.

೫. **ಸಾರ್ವಜನಿಕ ಅಭಿಪ್ರಾಯ:** ಭಾರತೀಯರಲ್ಲಿ ಸಾರ್ವಜನಿಕ ಅಭಿಪ್ರಾಯಗಳಿಗೆ ಬಲವಿಲ್ಲ. ನಮ್ಮಲ್ಲಿ ಭ್ರಷ್ಟಾಚಾರ, ಅನ್ಯಾಯ, ಹಿಂಸೆ ಇದಾವುದರ ಸುದ್ಧಿಗಳು ನಮ್ಮ ಜನರನ್ನು ಉದ್ರೇಕಗೊಳಿಸುವುದಿಲ್ಲ. ಭಾರತದಲ್ಲಿ 'ಬೌದ್ಧಿಕರು' ನಿರಾಸಕ್ತರಾಗಿದ್ದಾರೆ. ಪ್ರೊಫೆಸರರೂ, ಲೇಖಕರು, ಪತ್ರಿಕೋದ್ಯೋಗಿಗಳೂ ತಮ್ಮ ಸ್ವಾತಂತ್ರ್ಯವನ್ನು ನಿರ್ಭಯದಿಂದ ಉಪಯೋಗಿಸುತ್ತಿಲ್ಲ. ಇವರ ಪ್ರತಿಯೊಂದು ಕೆಲಸಗಳಿಗೂ, ಆರ್ಥಿಕ ವ್ಯವಸ್ಥೆಗೆ ಸರಕಾರದ ಮುಂದೆ ಕೈ ಒಡ್ಡಬೇಕಾಗಿದೆ. ಸರ್ವಾಧಿಕಾರಿ ರಷ್ಯಾದೇಶದಲ್ಲಿ ಸರಕಾರ 'ಬೌದ್ಧಿಕರ ಚುನಾವಣೆಯಲ್ಲಿ ಆರಿಸಿಬರುವುದು ಅಸಾಧ್ಯ. ಇಂಥ ಬಾಲ್ಯರೋಗಗಳು ನಿವಾರಣೆಯಾಗಬೇಕು. ಪ್ರತಿಯೊಬ್ಬ ನಾಗರೀಕನು ಇಲ್ಲಿ ಎಚ್ಚೆತ್ತುಕೊಳ್ಳಬೇಕಾಗಿದೆ.

ಭಾರತದ ಸುಧೀರ್ಘ ಇತಿಹಾಸ, ಅದರ ಗತಾನುಭವಗಳು, ಅದರ ಸಮಸ್ಯೆಗಳು, ಶಕ್ತಿ ದೌರ್ಬಲ್ಯಗಳು, ಇವೆಲ್ಲವುಗಳ ಸಮಗ್ರ ಪರಿಶೀಲನಾತ್ಮಕ ನೋಟವನ್ನು ವಾಚಕರ ಮುಂದಿಟ್ಟಿದ್ದಾರೆ. ಭಾರತ ಏಶಿಯಾ ಖಂಡದ ಎರಡನೇಯ ಶಕ್ತಿಶಾಲಿ ರಾಷ್ಟ್ರವಾಗಿದೆ. ಆರ್ಥಿಕ ಪ್ರಗತಿ, ಆಧುನಿಕ ಔದ್ಯೋಗಿಕ ಅರ್ಥ ಪ್ರಣಾಲಿಗೆ ಅಗತ್ಯ ನೆಲೆಕಟ್ಟು ಇದೆ. ಯುರೋಪ ರಾಷ್ಟ್ರಗಳಿಗೆ ಸಮಾನವಾದ ವೈಜ್ಞಾನಿಕ ತಾಂತ್ರಿಕ ಕೌಶಲ ಭಾರತೀಯರಿಗಿದೆ. ಜಾಗೃತವಾದ ಜನಶಕ್ತಿಯಿದೆ. ಸರಿಯಾದ ಮುಂದಾಳ್ತನವಿದ್ದರೆ ಜಗತ್ತಿನ ಪ್ರಬಲ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲು ಸಶಕ್ತವಿದೆ ಎಂಬುದನ್ನು ಜಾಗೃತ ಮನಸ್ಸಿನ ಪಾವೆಂ ಅವರು ಸ್ವತಂತ್ರ್ಯ ಭಾರತದ ಕೃತಿಯಲ್ಲಿ ನಿರೂಪಿಸುತ್ತಾರೆ. ೨೫ ವರ್ಷದ ಭಾರತದ ರಾಜಕೀಯ ವಿಕಾಸ, ಸಮಗ್ರವಾದ ವಿವೇಚನಾತ್ಮಕ ನಿರೂಪಣೆಯೊಂದಿಗೆ ಜಗತ್ತಿನ ಪ್ರಬಲ ರಾಷ್ಟ್ರಗಳ ರಾಜಕೀಯ ಚಿತ್ರಣದೊಂದಿಗೆ ತುಲನೆ ಮಾಡುತ್ತಾರೆ. ರಷ್ಯಾ ವರ್ಷಗಳ ರಾಜ್ಯಕ್ರಾಂತಿಯ ನಂತರ ಜಗತ್ತಿನ ಪ್ರಬಲ ರಾಷ್ಟ್ರವಾಗಲು ಅವಿರತ, ನಿಸ್ವಾರ್ಥ ಶ್ರಮ ಕಾರಣವಾಯಿತು. ಭಾರತ ಭೌಗೋಳಿಕ, ಬೌದ್ಧಿಕವಾಗಿ ಸಮೃದ್ಧವಿದ್ದರೂ ಬಡತನ, ದಾರಿದ್ರ್ಯ ರೋಗದಿಂದ

ಮುಳುಗಲು ಅಸ್ಥಿರ ರಾಜಕೀಯವೇ ಮೂಲ ಕಾರಣವಾದುದನ್ನು ಚಿತ್ರಿಸುತ್ತಾರೆ. ರಾಜನೀತಿ ತಜ್ಞಪತ್ರಿಕೋದ್ಯಮಿ ಪಾ.ವೆಂ. ಆಚಾರ್ಯರು ೧೯೫೭ರಿಂದ ತಮ್ಮ ನಿವೃತ್ತಿ ಜೀವನದಲ್ಲೂ ಸುಮಾರು ಐವತ್ತಕ್ಕಿಂತಲೂ ಮಿಗಿಲಾಗಿ ರಾಜಕೀಯ ಸ್ಥಿತಿಗತಿಯ ಬಗ್ಗೆ ಲೇಖನಗಳನ್ನು ಕಸ್ತೂರಿ, ಕರ್ಮವೀರ ಪತ್ರಿಕೆಗಳಿಗೆ ಬರೆದಿದ್ದಾರೆ. ಅಂದಂದಿನ ಪ್ರಚಲಿತ ರಾಜಕೀಯ ಘಟನೆಗಳಾದ, ಭಾಷಾಪ್ರಾಂತ್ಯಗಳು, ತೆಲಂಗಾಣ ಸಮಸ್ಯೆ ಜಲವಿವಾದ, ಕಾಶ್ಮೀರ ಸಮಸ್ಯೆ, ಗಡಿತಂಟೆಗಳು, ಭೂಹಿಡುವಳಿ, ರಾಜಕಾರಣ, ಭಷ್ಟಾಚಾರ, ಎಲ್ಲ ಭಾರತದ ಸಮಸ್ಯೆಗಳನ್ನು ತೆರೆದಿಡುತ್ತಾ ಪರಿಹಾರವನ್ನು ಸೂಚಿಸುತ್ತಾರೆ. ಹೆಚ್ಚಿನ ರಾಜಕೀಯ ಸಮಸ್ಯೆಗಳು ಪಾ.ವೆಂ. ಅವರ ಹರಟೆ ಲೇಖನಗಳಲ್ಲಿ ವ್ಯಂಗ್ಯ, ವಿಡಂಬನಾತ್ಮಕವಾಗಿ ನಮಗೆ ಗೋಚರಿಸುತ್ತದೆ.

೫. ಸಂಸ್ಕೃತಿ–ಸಂಸ್ಕಾರ–ಸಂಸ್ಕೃತ:

ಜಿಜ್ಞಾಸು ಪಾ.ವೆಂ. ಸಂಸ್ಕೃತಿ ವಿಚಾರ ಸಾಹಿತ್ಯ ಇವುಗಳ ಕುರಿತು ಟಿಪ್ಪಣಿರೂಪದಲ್ಲಿ ಬರೆದ ಅಂಶಗಳು **ಸುಗುಣ ಮಾಲ ಪತ್ರಿಕೆ** ಹಾಗೂ **ಸಾಕ್ಷಿ ಪತ್ರಿಕೆ**ಗಳ ಸಂಚಿಕೆಗಳಲ್ಲಿ ವ್ಯಕ್ತವಾಗಿವೆ. ಶ್ರೀ ಗೌರಿಶ್ ಕಾಯ್ಕಿಣಿಯವರು **ಸುಗುಣಮಾಲ ಪ್ರಭಾತ** ಸಂಚಿಕೆಯಲ್ಲಿಸಂಸ್ಕೃತಿ–ಸಂಸ್ಕಾರ–ಸಂಸ್ಕೃತ ಈ ಮೂರು ಪದಗಳ ನಿಷ್ಪತ್ತಿ (Etymological Meaning) ಕುರಿತು ಬರೆದಿದ್ದ ಲೇಖನಕ್ಕೆ ಪಾ.ವೆಂ. ಹೀಗೆ ಪ್ರತಿಕ್ರಿಯೆ ಬರೆದಿದ್ದಾರೆ.

ಸಂಸ್ಕೃತಿ–ಸಂಸ್ಕಾರ: ಸಂಸ್ಕೃತಿ ಪದದ ಈಗಿನ ಅರ್ಥಛಾಯೆ ಪುರಾತನವಲ್ಲ. ೧೯ನೇ ಶತಮಾನದವರೆಗಿನ 'ಅಪ್ಟೆ ಸಂಸ್ಕೃತಕೋಶ', 'ಬಂಗಾಲಿ ಕೋಶ'ಗಳಲ್ಲಿ ನಮೂ– ದಾಗಿರದ ಪದವಿದು ಮೋನಿಯರ್ ವಿಲಿಯಮ್ಸ್ ಕೋಶದಲ್ಲಿ ಸಂಸ್ಕೃತಿ ಪದದ ಅರ್ಥ ಅಣಿಗೊಳಿಸುವುದು ಹೀಗೆ ಅರ್ಥಗಳಿವೆ. ಬಹುಶಃ ಪಶ್ಚಿಮದ ಸಂಪರ್ಕ ಬಂದ ಮೇಲೆ ೧೯೩೦ರ ಸುಮಾರಿಗೆ ಇಂಗ್ಲೀಷ್‌ನ Cultureಗೆ ಸಮಾನವಾಗಿ ಸಂಸ್ಕೃತಿ ಪದ ಪ್ರಚುರವಾದಂತಿದೆ. ಇದು ಒಂದು ಜನಾಂಗದ ವಿಸ್ತಾರವಾದ ಧಾರ್ಮಿಕ–ಲೌಕಿಕ ನಂಬಿಕೆ, ವಿಧಿವಿಧಾನ, ತಾತ್ವಿಕ ಕಲ್ಪನೆ, ಕಲೆ–ಸಾಹಿತ್ಯ ಮುಂತಾದವುಗಳನ್ನು ಒಳಗೊಂಡ ನಡೆನುಡಿಗಳ ಮೊತ್ತವಾಗಿ 'ಸಂಸ್ಕೃತಿ' ಬಳಕೆಯಾಗುತ್ತಿದೆ. 'ಸಂಸ್ಕಾರ ಎಂಬ ಪದ Cultureದ ಅರ್ಥಗಳನ್ನು ಒಳಗೊಂಡರೂ ಅದು ವೈಯಕ್ತಿಕವಾದ, ಧಾಮಿಕ ಸ್ತರದಲ್ಲಿ ವರ್ತಿಸುತಿತ್ತೇ ಹೊರತು ಸಾಮೂಹಿಕಲೌಕಿಕ ಸಂದರ್ಭದಲ್ಲಿ ಅಲ್ಲ.

ಸಂಸ್ಕೃತ: ಸಂಸ್ಕೃತಿ ಪದಗಳ ಸಂ–ಕೃತಿ ಹೀಗೆ ಎರಡು ಪದಗಳಿವೆ. 'ಕೃತಿ'ಯಲ್ಲಿಯ 'ಕೃ' ಧಾತು=ಮಾಡುವಿಕೆ, ಸಾಧಿಸುವಿಕೆ. 'ಕೃತಿ' ಎಂದರೆ ಆದದ್ದು, 'ಸಂ' ಎಂಬುದು ಉಪಸರ್ಗ= ಕೂಡಿದ್ದು, ಸೇರಿದ್ದು ಸಂಸ್ಕೃತಿ. ಕೃತಿ=ಆಗುವಿಕೆ, ಪ್ರಯತ್ನಗಳಿಂದ ಆಗುವಿಕೆ. ಇಂಗ್ಲೀಷ್‌ನಲ್ಲಿ Culture ಪದ Agriculture, Sericulture ಮುಂತಾದ ಸಮಾಸ ಪದಗಳಲ್ಲಿ

ಬಳಕೆಯಾದಾಗ ಸಂಸ್ಕೃತಿಯ ಅಥವಾ ಸಂಸ್ಕಾರದ ಅರ್ಥವನ್ನೇ ಒಳಗೊಂಡಿದೆ. Agriculture=ಕೃಷಿ (ಒಕ್ಕಲುತನ, ವ್ಯವಸಾಯ, ಬೇಸಾಯ) Agricultureದಲ್ಲಿ ಒರಟು ನೆಲವನ್ನು ಹದಗೊಳಿಸುವ, ನೀರು ಮತ್ತಿತರ ಪೋಷಾಕಾಂಶ (ಗೊಬ್ಬರ)ಗಳನ್ನು ಮಣ್ಣಿನ ಹದಕ್ಕೆ ಬೆರಸಿ, ಅದರಲ್ಲಿ ಸಂಸ್ಕರಿಸಿದ ಬೀಜಗಳನ್ನು ಭಿತ್ತಿ, ನೆಟ್ಟು, ಊರಿ ಮಾಡುವ ಕೆಲಸವೇ ಕೃಷಿ. ಇಲ್ಲಿಯ ಪ್ರಕೃತಿ ಸಹಜ ಒರಟಾದ ಮಣ್ಣು, ಹಸಿಯಾದ ನೆಲ, ಜಡವಾದ ಬೀಜ ಮುಂತಾದ ಬಿಡಿ, ಬಿಡಿ ವಸ್ತುಗಳಿಗೆ ಜ್ಞಾನ ಪೂರ್ವಕವಾಗಿ, ಕುಶಲ ಹಸ್ತದಿಂದ ಮಾಡುವ ಉತ್ಪಾದನಾ ಕ್ರಿಯೆ. ಇಲ್ಲಿ ಕೃಷಿಕನ ಮನಸ್ಸು ಅನುಭವ ಪಡೆದಿರುತ್ತದೆ. ಇದರ ಫಲವಾಗಿ ಹುಟ್ಟುವಳಿಗೆ ಪ್ರಕೃತಿ ಸಹಜವಾದ ಬಣ್ಣ, ರುಚಿ, ವಾಸನೆ ಇರುತ್ತದೆ. ಇದನ್ನು Agriculture ಎನ್ನಬಹುದು.

ಈ ಉದಾಹರಣೆಯನ್ನೆ ಮಾನವ ಸಂಸ್ಕೃತಿಯ ನಿರ್ವಚನಕ್ಕೆ ತೆಗೆದುಕೊಂಡು ಹೀಗೆ ವಿವರಿಸಬಹುದು. 'ಸಂಸ್ಕೃತಿ'ಗೆ ಮೂಲವಾದದ್ದು ಪ್ರಕೃತಿ. ಪ್ರಕೃತಿ ಒಂದು ಭೌತಿಕ ಅಸ್ಥಿತ್ವ ಅಥವಾ ಸ್ಥಿತಿ, ದೇಹ, ಜೀವ, ಭಾವಗಳ ಒಂದು ಸಂಯುಕ್ತ ಘಟಕ ಮನುಷ್ಯ. ಪ್ರಕೃತಿ ಸಹಜವಾದ ದೇಹ–ಜೀವ–ಭಾವಗಳು ಜ್ಞಾನೇಂದ್ರಿಯಗಳನ್ನು ಒಳಗೊಂಡ ಸಂಯುಕ್ತ ಘಟಕದಿಂದ ಸಾಧ್ಯವಾಗುವ ಕ್ರಿಯೆಗಳು ಸಹಜವೂ ಚಲನಶೀಲವೂ ವರ್ಧನ ಶೀಲವೂ ಆಗಿರುತ್ತದೆ. ಮಾನವ ಪ್ರಕೃತಿ ಸಹಜತೆಯಿಂದ ಸಿದ್ಧವಾಗಿದ್ದರೂ ಕೇವಲ 'ಸಂಸ್ಕೃತಿ'ಗೆ ಕಾರಣವಾಗುತ್ತಾನೆಂದು ಹೇಳಲಾಗದು. ಏಕೆಂದರೆ ಪ್ರಕೃತಿಯಲ್ಲಿಯೇ ವಿಕೃತಿಯ ಅಂಶಗಳಿವೆ. ಮಾನವ ಮನಸ್ಸು ವಿಕೃತಿಯನ್ನು ಅಪ್ರಜ್ಞಪೂರ್ವಕವಾಗಿ ಒಳಗೊಂಡಿರುವ ಸಾಧ್ಯತೆ ಸಾಕಷ್ಟಿದೆ. ಮಾನವ ಸಮಾಜದಲ್ಲಿ ಈ ವಿಕೃತಿಗಳನ್ನು ಅನುಭವಿಸುತ್ತಲೇ ಬಂದಿದ್ದೇವೆ. ಭೌತ ಜನಜಗತ್ತಿನಲ್ಲಿಯೂ ಪ್ರಕೃತಿ ಸೌಂದರ್ಯವಿದ್ದಷ್ಟೆ, ವಿಕೃತಿಯೂ ಸಾಕಷ್ಟಿವೆ. ಪ್ರಕೃತಿಗೆ ವಿಕೃತಿಯೊಂದಿಗೆ ಇರುವುದು ಸಹಜ, ಅನಿವಾರ್ಯ. ಆದರೆ ಮಾನವ ಪ್ರಾಣಿಗೆ ವಿಕಾಸದ ಒಂದು ಹಂತದಲ್ಲಿ ಮಿದುಳು (ಬುದ್ಧಿ) ವಿಕಸಿತ ಸ್ಥಿತಿಯನ್ನು ತಾಳಿ ಪ್ರಾಣಿವರ್ಗದಿಂದ ಬೇರ್ಪಡಿಸಿತು. ಆಗ ಇನ್ನೊಂದು ವಿದ್ಯಮಾನವೂ ಘಟಿಸಿತು. ಅದೇನೆಂದರೆ ಮಾನವ ಪ್ರಕೃತಿ ಸಹಜತೆಯಿಂದ ಬುದ್ಧಿ ಪೂರ್ವಕತೆ ಕಡೆಗೆ ಸಾಗುವ ಅವಕಾಶ ಸಿಕ್ಕಿತು. ಹೀಗಾಗಿ ಮಾನವ ಪ್ರಾಣಿ ಪ್ರಕೃತಿ ಮತ್ತು ಬುದ್ಧಿ ಜನ್ಯ ಮನಸ್ಥಿತಿಯನ್ನು ಒಟ್ಟಿಗೆ ಹೊಂದುವ ದ್ವಂದ್ವ ಮನಸ್ಥಿತಿಯನ್ನು ತಾಳಿದ. ಜೀವವಿಜ್ಞಾನಿಗಳು ಮಾನವನನ್ನು ಹೋಮೊಸೆಪಿಯನ್ ವರ್ಗಕ್ಕೆ ಸೇರಿಸಿದ್ದು ನರ, ವಾನರ, ಮನುಜ ಮುಂತಾದ ಪದಗಳಿಂದ ಮಾನವ ವಿಜ್ಞಾನಿಗಳು ಗುರುತಿಸುತ್ತಾರೆ. ವಾಸ್ತವದಲ್ಲಿ ಪ್ರವೃತ್ತಿ ಜನ್ಯ ಗುಣದ ಮಾನವ ಉಳಿದೆಲ್ಲ ಪ್ರಾಣಿವರ್ಗದಂತೆ ಹಸಿವು, ಭಯ, ಮೈಥುನ, ನಿದ್ರೆ ಪ್ರವೃತ್ತಿ ಸಹಜ ಗುಣಗಳನ್ನಾಗಿ ಮುಂದುವರಿಸಿದ್ದಾನೆ. ಆದರೆ ಬುದ್ಧಿಯ ವಿಕಾಸದಿಂದಾಗಿ ಈ ಪ್ರವೃತ್ತಿಗಳ ಈಡೇರಿಕೆಗಾಗಿ ಮಾನವ ಹೆಚ್ಚು ಪಾಲು ವಿಕೃತಿಯ ಕ್ರಮಗಳನ್ನೇ ಅನುಸರಿಸುತ್ತಾ ಬಂದಿದ್ದಾನೆ.

ಪ್ರಾಣಿ (animal)ಗೆ ಪ್ರವೃತ್ತಿ ಇದ್ದು ಈಡೇರಿಕೆಗಾಗಿ ಅದು ಯಾವುದೇ 'ಭಾವ'ವನ್ನು ಅವಲಂಬಿಸದೇ ತನ್ನ ಈ ಕ್ಷಣದ ಅಗತ್ಯವನ್ನು ಅಗತ್ಯವಿದ್ದಷ್ಟೇ ಈಡೇರಿಸಿಕೊಂಡು ಸ್ಥಗಿತವಾಗುತ್ತದೆ. ಪ್ರಾಣಿಮಿತಿ-ಪ್ರವೃತ್ತಿ-ಮನುಷ್ಯ 'ಮನಸ್ಸು' ಎಂಬುದನ್ನು ವಿಕಾಸ ಹೊಂದುವಲ್ಲಿ ಮೂಲವಾಗಿ ಪಡೆದು ಗಳಿಸಿ ಬೆಳೆಸಿಕೊಂಡಿದ್ದು, ತನ್ನ ಕೃತಿಗಳಲ್ಲಿ ತೊಡಗಿದಾಗ ಭಾಷಾ ವಿಕಾಸಕ್ಕೆ ಒಳಗೊಳ್ಳುತ್ತಾನೆ. ಪ್ರಕೃತಿಯ ರಾಗ, ವಿಕಾರ, ಸುಂದರ, ಅಸಹ್ಯ, ಕರುಣೆ, ಕೌರ್ಯ ಎಲ್ಲವನ್ನು ಅನುಭವಿಸುತ್ತಾನೆ.

ಇದರ ಪರಿಣಾಮವಾಗಿ ಮಾನವ ಸಮಾಜ ಅನ್ಯಾಯ, ಅಸಮಾನತೆ, ಶೋಷಣೆಗಳಿಂದ ತುಂಬಿ 'ಸಂಸ್ಕೃತಿ'ಯಿಂದ ವಿಮುಖವಾಗಿದೆ. 'ಸಂಸ್ಕೃತಿ' ಇರಬೇಕೆಂಬುದು ಮಾನವನ ಬೌದ್ಧಿಕ ಆಯ್ಕೆ. ಆದರೆ ಬೌದ್ಧಿಕತೆಯಲ್ಲಿ ಅನೇಕ ದ್ವಂದ್ವಗಳಿವೆ. ಈ ದ್ವಂದ್ವಗಳನ್ನು ನಿವಾರಿಸುವ ದಿಶೆಯಲ್ಲಿ ಸಂಸ್ಕೃತಿಗಾಗಿ ಹಂಬಲಿಸುವವರು ಮಾಡುವ ಪ್ರಯತ್ನಗಳು ನಿರಂತರವಾಗಿವೆ. ಮಾನವ ಸಂಸ್ಕೃತಿ ದೇಹ-ಜೀವ-ಭಾವಗಳ ಸಂಯುಕ್ತ ಘಟಕದಿಂದ ಸಾಧ್ಯವಾಗುವ ಕ್ರಿಯೆಗಳು ಎಂದಾಗ ಅವುಗಳಲ್ಲಿ ಭಾವ ಎಂಬುದು ಪ್ರಧಾನ ಘಟಕವೆನಿಸುತ್ತದೆ. ಭಾವದಲ್ಲಿ ೨ ಅಂಶಗಳಿವೆ. ೧. ಮನಸ್ಸು ಇನ್ನೊಂದು ಬುದ್ಧಿ (ಪ್ರಜ್ಞೆ) ಮನಸ್ಸು-ಬುದ್ಧಿಗಳ ಸಂಯೋಜನೆಯಿಂದ ಹುಟ್ಟಿದ್ದು ಭಾಷೆ. ದೇಹ-ಜೀವ-ಭಾವ ಇವುಗಳ ಪರಸ್ಪರ ಸಂಂಯೋಜನೆಗೆ ಜ್ಞಾನೇಂದ್ರಿಯುಗಳು ಸಾಹಾಯಕಾರಿಯಾಗಿವೆ. ಇವು ಪ್ರವೃತ್ತಿಗಳನ್ನು ಹದಗೊಳಿಸಿಕೊಳ್ಳುವ ಉಪಾಯವನ್ನು ಸಾಧಿಸಿವೆ. ಅಂದರೆ ಭೌತಿಕ ದೇಹ ಮಾತಿನ ಶಕ್ತಿ ಮತ್ತು ಮನಸ್ಸುಗಳನ್ನು ಉಳ್ಳ ಒಂದು ಚೈತನ್ಯ ಪೂರ್ಣ ಘಟಕ ಮಾನವನಲ್ಲಿ ವಿಕಾಸವಾಗುತ್ತಲೇ ಇದೇ. ಚಲನಶೀಲವಾಗಿರುವ ಈ ಚೈತನ್ಯ ಪ್ರಕೃತಿ ಸಹಜ ಗುಣಗಳಾದ ಸತ್ಯ-ಶಿವ-ಸುಂದರ ಕಲ್ಪನೆಗಳನ್ನು ಒಳಗೊಂಡಿವೆ. ಇವೆಲ್ಲವೂ ಸೇರಿ 'ಸಂ'. ಇವೆಲ್ಲವುಗಳ ಕ್ರಿಯಾಶೀಲ ವರ್ತನೆಯೇ ಕೃತಿ (Convention) ಇದೇ ಸಂಸ್ಕೃತಿ. ಇಲ್ಲಿ ಭಾಷೆ ಮತ್ತು ಕಲಾಭಿವ್ಯಕ್ತಿಯ ಪ್ರತಿಭೆ (ಕಲ್ಪನೆ) ವಹಿಸುವ ಪಾತ್ರ ಪ್ರಧಾನವಾಗಿವೆ. ಸಂಸ್ಕೃತಿಯು ಭಾವ ಪ್ರಧಾನ ಉತ್ಪಾದನೆಯಾಗಿದ್ದು, ಪ್ರವೃತ್ತಿಗಳನ್ನು ಹದವಾಗಿ, ಮಿದುವಾಗಿ ಇಟ್ಟುಕೊಳ್ಳುವ ಮಾನಸಿಕ ಸಮತೋಲನವನ್ನು ಸಾಧಿಸುತ್ತಿರುತ್ತವೆ. ಮನೋವೈಜ್ಞಾನಿಕ ಆಯಾಮವುಳ್ಳ ಸಂಸ್ಕೃತಿ, ನವನವೀಕೃತಗೊಳ್ಳುವ ಗುಣವನ್ನು ಬೆಳೆಸಿಕೊಂಡಿವೆ. ಸಂಸ್ಕೃತಿ ಪರ ನಡವಳಿಕೆಗಳು, ಧಾರ್ಮಿಕ, ನೈತಿಕ, ಕಲಾತ್ಮಕ ಕ್ಷೇತ್ರಗಳಲ್ಲಿ ಹುಟ್ಟುತ್ತವೆ; ಕ್ರಮೇಣ ಒಂದು ಸಂಪ್ರದಾಯವಾಗಿ (Convention) ಮಡುಗಟ್ಟಿ ನಿಲ್ಲುತ್ತವೆ. ಆಗ ವಿಕಾಸ ನಿಲ್ಲಬಹುದು. ವಿಕಾಸಶೀಲತೆಯೂ ಭೌತಿಕ ಮತ್ತು ಭಾದ್ಧಿಕ ಪ್ರೇರಣೆಗಳಿಂದ ಆಗುತ್ತಿರುತ್ತದೆ. ಇದು ಸಂಸ್ಕೃತಿಯ ಸೃಜನ ಶೀಲತೆ. ಅದು ಸಾಧ್ಯವಾದಾಗ ಸಂಪ್ರದಾಯವಾಗಿ ಮಡುಗಟ್ಟಿದ್ದನ್ನು ಹರಿದು ಸಾಗುವಂತೆ ಪ್ರಚೋದಿಸುತ್ತದೆ. ಅದು ಸಾಧ್ಯವಾದಾಗ ನೀತಿ, ನಡೆ-ನುಡಿಗಳು ಪರಂಪರೆಯಾಗಿ (Tradition) ಸ್ವರೂಪ ತಾಳುತ್ತದೆ. ಈ ಪ್ರಕ್ರಿಯೆಯಲ್ಲಿ ಮಾನವ ಪ್ರವೃತ್ತಿಗಳು

ಸಂಸ್ಕಾರಗೊಳ್ಳುತ್ತಾ ಮಾನವೀಯತೆ ಮೌಲ್ಯಗಳಾದ ಪ್ರೀತಿ, ಸೌಹಾರ್ಧತೆ, ಸಹಾನುಭೂತಿ, ಸಹಕಾರ, ಬಾಂಧವ್ಯ, ಸಮಾನತೆ ಗುಣಗಳು ಪ್ರಗತಿಯ ದಿಸೆಗೆ ಒತ್ತಾಯಿಸುತ್ತವೆ. ಸಾಹಿತ್ಯ ಮತ್ತು ಕಲೆಗಳು ಸಂಸ್ಕೃತಿಯ ದಿಸೆಗೆ ಒತ್ತಾಯಿಸುತ್ತವೆ. ಸಾಹಿತ್ಯ ಮತ್ತು ಕಲೆಗಳು ಸಂಸ್ಕೃತಿಯ ಸಾಧನಗಳು ಅಥವಾ ವಾಹಕಗಳಾಗಿ ನಾಗರಿಕ ಜಗತ್ತನ್ನು ಮಾನವ ಕೇಂದ್ರಿತ ಪರಿವಾರವಾಗಿ ಬೆಳೆಸುತ್ತದೆ.

೬. ಮಾನವ ಪ್ರವೃತಿ ಮತ್ತು ಮೌಲ್ಯಗಳು:

ಪಾ.ವೆಂ. ಅವರು 'ಮಾನವ ಪ್ರವೃತಿ ಮತ್ತು ಮೌಲ್ಯಗಳು' ಪ್ರಬಂಧದಲ್ಲಿ ಕೈಗೊಂಡ ವಿವೇಚನೆ ಮ್ಯಾನ್‌ಟು ಹಿಮ್‌ಸೆಲ್ಫ್ (Man to himself) ಎಂಬ ಎರಿಕ್ ಫ್ರೋಮನ್ (೧೯೦೦–೧೯೮೦) ಗ್ರಂಥದ ಮುಖ್ಯಾಂಶಗಳನ್ನು ಒಳಗೊಂಡಿದೆ. ಇಲ್ಲಿ ಎರಿಕ್ ಪ್ರಾಮ್ 'ಮನುಷ್ಯ'ನಾಗುವ ಪ್ರಕ್ರಿಯೆ ವಿವೇಚನೆಯನ್ನು ಮೂರು ಪ್ರಶ್ನೆಗಳಿಂದ ಆರಂಭಿಸಿದ್ದಾನೆ. ೧. ಮನುಷ್ಯ ಒಳ್ಳೆಯವನೋ ಕೆಟ್ಟವನೋ (Evil) ೨. ಆಯ್ಕೆಯ ಸ್ವಾತಂತ್ರ್ಯ ಉಳ್ಳವನೋ ಪರಿಸ್ಥಿತಿಯಿಂದ ನಿರ್ಧರಿಸಲ್ಪಟ್ಟವನೋ? ೩. ಈ ಪರ್ಯಾಯಗಳು (alternative) ಕಲ್ಪನೆಯೇ ಮೊದಲು ಅಸಮಂಜಸವಾಗಿದ್ದು, ಮನುಷ್ಯನು ಅದು ಅಲ್ಲ ಇದು ಅಲ್ಲವಾಗಿರಬಹುದು? ಅಥವಾ ಅದು ಇದು ಎರಡೂ ಆಗಿರಬಹುದಲ್ಲವೆ? (ಎರಿಕ್ ಫ್ರಾಮ್‌ನ 'ಹುಟ್ಟುವುದೆಂದರೆ....') ಲೇಖನ ಅನುವಾದ ಎಲ್. ಎನ್. ಗೋಪಾಲ ಕೃಷ್ಣ ರುಜುವಾತು ಸಂಚಿಕೆ (೧೯೮೩) ಈ ಪ್ರಶ್ನೆಗಳಿಗೆ ಉತ್ತರ ಸಿಗಬೇಕೆಂದರೆ ಇವೆಲ್ಲವುಗಳಿಗೆ ಪೂರ್ವ ಭಾವೆಯಾಗಿ ಕೇಳಬೇಕಾದ ಒಂದು ಪ್ರಶ್ನೆ ಇದೆ. ಅದೇನೆಂದರೆ ಮಾನವನಿಗೆ ಒಳತಿರುಳು ಅಥವಾ ಅಂತಃಸತ್ವ (essance) ಎಂಬುದೊಂದು ಇದೆಯೇ? ಎಂಬ ಪ್ರಶ್ನೆ ಕೇಳಿಕೊಂಡು ಅದಕ್ಕೆ ಉತ್ತರವಾಗಿ ಕೆಲವು ಸ್ವರೂಪ ಲಕ್ಷಣಗಳನ್ನು ಗುರುತಿಸಬಹುದು. ಅರಿಸ್ಟಾಟಲ್ ಪ್ರಕಾರ ಮಾನವ 'ರಾಜಕೀಯ ಪ್ರಾಣಿ' ಸೀಟ್ಸ ಪ್ರಕಾರ 'ಮಾನವ ಇನ್ನೊಬ್ಬರಿಗೆ ಮಾತುಕೊಡಬಲ್ಲ ಪ್ರಾಣಿ. ಕಾರ್ಲ್ ಮಾರ್ಕ್ಸ್‌ನ ಪ್ರಕಾರ 'ಮುಂದಾಲೋಚನೆ ಮತ್ತು ಕಲ್ಪನಾ ಶಕ್ತಿಗಳಿಂದ ಹೊಸತನ್ನು ಹುಟ್ಟಿಸ ಬಲ್ಲ ಪ್ರಾಣಿ' – ಇವು ಪೂರ್ಣವಾಗಿ ಮನುಷ್ಯತ್ವವನ್ನು ನಿರ್ಧರಿಸುವುದಿಲ್ಲ. ಎರಿಕ್ ಫ್ರಾಮ್ ಪ್ರಕಾರ ಮನುಷ್ಯನ ಅಸ್ಥಿತ್ವದಲ್ಲಿಯೇ ಅಂತರ್ಗತವಾದ, ಅದಕ್ಕೆ ಮೂಲಭೂತವಾದ ಒಂದು ದ್ವಂದ್ವವನ್ನು ಗುರುತಿಸುವುದು. ಮನುಷ್ಯ ಏಕಕಾಲಕ್ಕೆ ದೇಹ (Body) ಮತ್ತು ಆತ್ಮ (Soul) ಎರಡೂ ಆಗಿದ್ದಾನೆಂದು ಹಳೆಯ ಭಾಷೆಯಲ್ಲಿ ಹೇಳಲಾಗುತ್ತಿದೆ ಅಂದರೆ ಉಳಿದೆಲ್ಲ ಜೀವಿಗಳಿಗಿಂತ ಮನುಷ್ಯ ದಿವ್ಯ ಜೀವಿಯಾಗಿದ್ದಾನೆ. ಹೀಗಾಗಿ ನೈಸರ್ಗಿಕ ರಕ್ಷಾ ಉಪಕರಣಗಳಿಂದ ದೂರವಾಗಿದ್ದಾನೆ. ಅವನಲ್ಲಿರುವ ಒಂದು ಸತ್ವವೆಂದರೆ ಬುದ್ಧಿಶಕ್ತಿಯನ್ನು ಉಪಯೋಗಿಸಿ ಜೀವನಾವಶ್ಯಕತೆಗಳ ಉತ್ಪಾದನೆಗೆ ಹಾಗೂ ಆತ್ಮರಕ್ಷಣೆಗೆ ಬೇಕಾದ ಸಾಧನಗಳನ್ನು ನಿರ್ಮಿಸಿಕೊಳ್ಳುವ ಅನಿವಾರ್ಯತೆ. ಇದರ ಜೊತೆಗೆ ಸಮೂಹ ಜೀವನವನ್ನು ನಡೆಸಲು ಉಪಕರಣವಾಗಿ ಭಾಷೆಯನ್ನು ಬೆಳೆಸಿ ಉಳಿಸುವ ಪ್ರಯತ್ನ.

ಪ್ರಾಣಿಗಳಿಗಿರುವ ಬುದ್ಧಿಯ ಮಟ್ಟವನ್ನು ಮನುಷ್ಯ ಸಾಕಷ್ಟು ರೀತಿಯಲ್ಲಿ ಬೆಳೆಸಿಕೊಂಡು, ಭಿನ್ನವಾಗಿಸಿಕೊಂಡು, ಸ್ವಪ್ರಜ್ಞೆಯನ್ನು ಸಾಧಿಸಿದ್ದಾನೆ. ಈ 'ಸ್ವ ಪ್ರಜ್ಞೆ' (ಆತ್ಮಪ್ರಜ್ಞೆ) ಮನುಷ್ಯ ನಿಸರ್ಗದಿಂದ ಪರಕೀಯನನ್ನಾಗಿ ಮಾಡಿದೆ. ಈ ದ್ವಂದ್ವ ಸ್ಥಿತಿಯೇ ಮನುಷ್ಯನ ಮೂಲವಾಗಿದೆ. ಇದರಿಂದಾಗಿ ಪ್ರಕೃತಿ, ಸಂಸ್ಕೃತಿ, ವಿಕೃತಿ ಅವನನ್ನು ಆದರಿಸಿವೆ. ಮೇಲ್ಕಂಡ ವಿವೇಚನೆಯನ್ನೇ ಗಮನದಲ್ಲಿಟ್ಟುಕೊಂಡು ಪಾ.ವೆಂ. ಅವರು ತಲುಪುವ ವಿಚಾರದ ಹಂತ ಹೀಗಿದೆ.

ಪ್ರವೃತ್ತಿಗಳನ್ನು ಧಮನಿಸುವುದು ಮಾನಸಿಕ ಆನಾರೋಗ್ಯಕ್ಕೆ ಹಾದಿ ಮಾಡುತ್ತದೆ. ಸ್ವಪ್ರಜ್ಞೆ ಇಲ್ಲದ ಪ್ರಾಣಿಗಳು ಗಮನಿಸಲಾರವು ಮತ್ತು ಮಾನಸಿಕ ಅನಾರೋಗ್ಯದಿಂದ ಬಳಲಲಾರವು. ಪ್ರಕೃತಿಯಿಂದ ಭಿನ್ನವಾದ ಮಾನವ ಮನಸ್ಥಿತಿ ಪ್ರವೃತ್ತಿಗಳ ಗಮನಕ್ಕೆ ಹೊರಟು ಧಾರ್ಮಿಕ, ನೈತಿಕ ಕಟ್ಟುಪಾಡುಗಳನ್ನು ಹಾಕಿಕೊಳ್ಳುತ್ತಾನೆ. ಇದಕ್ಕೆ ಪ್ರಜ್ಞೆಯನ್ನು ಉನ್ನತೀಕರಿಸಿಕೊಳ್ಳುವ ಅನಿವಾರ್ಯತೆ ಬರುತ್ತದೆ. ಆಗ ಧಮನಕ್ಕೆ ವ್ಯತಿರಿಕ್ತವಾಗಿ ಪ್ರವೃತ್ತಿ ಸಹಜವಾದ ಪ್ರಾಕೃತಿಕ ಸೌಂಧರ್ಯದ ಗುಣಲಕ್ಷಣಗಳನ್ನು ಅಳವಡಿಸಿಕೊಳ್ಳುವ ಹಂತಕ್ಕೆ ಏರಬೇಕಾಗುತ್ತದೆ. ಈ ಗುಣಲಕ್ಷಣಗಳು ಅಂತಃಸ್ಫೂರ್ತಿ ಮತ್ತು ಸಂವೇಧನೆಗಳೊಂದಿಗೆ ಕೂಡಿಕೊಂಡು ಅಭಿವ್ಯಕ್ತಿ ಪಡೆಯಬೇಕಾಗುತ್ತದೆ. ಮೂಲ ಪ್ರವೃತ್ತಿಗಳಾದ ೧. ಭಯದ ಸ್ಥಾನಗಳಲ್ಲಿ ಭಕ್ತಿ (ಪ್ರೀತಿ) ೨. ಆಹಾರಕ್ಕೆ ಪರಿಹಾರವಾಗಿ (ಹಸಿವು) ೩. ಭೌದ್ಧಿಕ ಪಿಪಾಸೆ (ಜ್ಞಾನ)ಯ ಓದು ಅಧ್ಯಯನ ನಿದ್ರೆಗೆ ಬದಲು (ಧ್ಯಾನ) ೪. ಮೈಥುನಕ್ಕೆ ಪರ್ಯಾಯವಾಗಿ ಜೀವೋತ್ತಮನೊಂದಿಗೆ ಅನುಸಂಧಾನ ನಡೆಸುವುದು. ಪ್ರವೃತ್ತಿಗಳ ಉದ್ಧಾತ್ತೀಕರಣದ ಪ್ರಯತ್ನಗಳು. ಉದ್ಧಾತೀಕರಣದ ಈ ಪ್ರಕ್ರಿಯೆಯೇ ಸಂಸ್ಕೃತಿ ಇದನ್ನು ಸಾಧಿಸಿದಾಗಲೂ ಪ್ರವೃತ್ತಿಗಳ ಎಳೆತ ಮಾನವನನ್ನು ಪ್ರಕೃತಿಯೊಂದಿಗೆ ಸೇರಿಸಿ ವಿಕೃತಿಗೆ ಹಾದಿಮಾಡಿಕೊಡುವುದುಂಟು. ಮಾನವ ಸಮಾಜದಲ್ಲಿ ಉಂಟಾಗುವ ಕೆಳಹಂತದ ಚಟುವಟಿಕೆಗಳು ಪ್ರವೃತ್ತಿ ಜನ್ಯವಾಗಿದ್ದು ಮೇಲ್ನೋಟಕ್ಕೆ ಪ್ರಕೃತಿ ಸಹಜವೆಂಬಂತೆ ಕಂಡರೂ ಮಾನವನನ್ನು ವಿಕೃತಿಯ ಸ್ಥಿತಿಗೆ ತರುತ್ತದೆ. ಆದರೆ ಬುದ್ಧಿಯ ಪ್ರಭಾವದಿಂದ ಇಂದಿನ ವಿಚಾರವಾದಿ ಯುಗದವರೆಗೆ ಮಾನವನು ಹಾದು ಬಂದ ಅನುಭವಗಳು ಅನೇಕ ಮೌಲ್ಯಗಳನ್ನು ಉದ್ದಾತ್ತೀಕರಿಸಿವೆ. ಮೌಲ್ಯಗಳು ಬಹುಮುಖವಾಗಿ ಕವಲೊಡೆದಿದೆ. ಶಿಲಾಯುಗಗಳ ಕಾಲದಿಂದ ಆರಂಭವಾದ ಸಂಸ್ಕೃತಿ ನಾಗರೀಕತೆಗಳ ಬೆಳವಣಿಗೆ ಅಂದರೆ ನಡೆದ ಭೌತಿಕ ಪ್ರಗತಿ. ಮಾನವನ ಸ್ಥಿತಿಯನ್ನು ಸಾಕಷ್ಟು ಬೆಳೆಸಿವೆ. ದೈನಂದಿನ ಬದುಕಿಗೆ ಮೈ ಮುರಿದು ದುಡಿಯುವ ಅನಿವಾರ್ಯದಿಂದ ಮುಕ್ತಗೊಳಿಸಿದೆ. ಯಂತ್ರಯುಗದಲ್ಲಿ ಮಾನವನಿಗೆ ತನ್ನ ವೈಯಕ್ತಿಕ ಅಥವಾ ಖಾಸಗಿ ಬದುಕನ್ನು ಬಾಳುಮಾಡಿಕೊಳ್ಳುವ ಅವಕಾಶಗಳಿವೆ. ಇದು ಅಂತಃ ಸತ್ವವನ್ನು ತೊರೆದುಕೊಳ್ಳುವ ಅವಕಾಶ. ಆದರೆ ಆರ್ಥಿಕ ಮತ್ತು ರಾಜಕೀಯ ಬದುಕನ್ನು ಕಟ್ಟಿಕೊಳ್ಳುವಲ್ಲಿ ಸ್ವಾರ್ಥಬುದ್ಧಿ, ಮುಂಗೈಬಲ ಪ್ರಬಲವಾಗಿ ಬೆಳವಣಿಗೆಗೆ ಪೂರಕವಾಗುವ ಸಾಂಸ್ಕೃತಿಕ ಅವಕಾಶಗಳಿಂದ ಬಹುಸಂಖ್ಯೆಯ ಜನರಿಗೆ

ವಂಚನೆಯಾಗಿದೆ. ಮೌಲ್ಯಗಳು ಕೇವಲ ಕಲ್ಪನೆಗಳಲ್ಲ; ಅವು ಪ್ರತಿಭಾನ್ವಿತ ವ್ಯಕ್ತಿಯಲ್ಲಿರುವ ಸುಸಂಸ್ಕೃತ ಪ್ರವೃತ್ತಿಯ ಅಭಿವ್ಯಕ್ತಿಗಳಾಗಿವೆ. ವ್ಯಕ್ತಿಯ ಸುಂಸ್ಕೃತಿಗೆ ಕೇವಲ ಬುದ್ಧಿಜನ್ಯ ಕಲ್ಪನೆಗಳು ಸಾಲವು. ಅವುಗಳಿಗೆ ಮೂಲಬೇರಾಗಿ ದೈವಿಕ, ಆಧ್ಯಾತ್ಮಿಕ ಆಶಯಗಳು ಸೇರಿಕೊಂಡು ಇಂದ್ರಿಯ ಗಮ್ಯವಾದ ಸುಖಸಂತೋಷ, ತೃಪ್ತಿಗಳನ್ನು ಉದ್ಧಾತ್ತಿಕರಿಸುವ ರೀತಿಯಲ್ಲಿ ಭಾವನಾಪ್ರಪಂಚವೊಂದನ್ನು ನಿರ್ಮಿಸಬೇಕು. ದುಡಿಯುವ ವ್ಯಕ್ತಿ ತನ್ನ ಬಿಡುವಿನ ಗಳಿಗೆಗಳನ್ನು ಯಾಂತ್ರಿಕೃತವಲ್ಲದ ಚಟುವಟಿಕೆಗಳಾದ ಓದುವಿಕೆ, ಬರೆಯುವಿಕೆ, ಕೇಳುವಿಕೆ ಮತ್ತು ಅಭಿವ್ಯಕ್ತಿಸುವಿಕೆಗಳಲ್ಲಿ ತೊಡಗಲು ವಿಪುಲಾವಕಾಶಗಳಿವೆ. ಇದಕ್ಕೆ ಮೂಲವಾದದ್ದು ವ್ಯಕ್ತಿಯ ಸೃಜನಶೀಲ ಮನಸ್ಥಿತಿ. ಸೃಜನಶೀಲ ಮನಸ್ಥಿತಿಯಲ್ಲಿಯೂ ಸದಾತನ್ನೊಳಗೆ ನವನವೀನವಾದುದನ್ನು ಕಲ್ಪಿಸಿಕೊಂಡು ಹೊರಗಿನ ಜಡಜಗತ್ತಿನೊಂದಿಗೆ ದುಡಿಯುವ ಮತ್ತು ತುಡಿಯುವ ಭಾವವನ್ನು ಹೊಂದಿರುತ್ತದೆ. ಈ ಭಾವಶಕ್ತಿಯ ಪ್ರಚೋಧನೆಗೆ ಶಿಕ್ಷಣ ವ್ಯವಸ್ಥೆ ಇದೆ. ಶಿಕ್ಷಣವೂ ಪ್ರವೃತ್ತಿಪರ, ಕಚ್ಚಾ ಅಥವಾ ಒರಟಾದ ಭಾವಗಳನ್ನು ಸುಧಾರಿಸಿದ ಮತ್ತು ಪಕ್ವವಾದ ಚಟುವಟಿಕೆಗೆ ವಿದ್ಯಾರ್ಥಿಯನ್ನು ತೊಡಗಿಸುವ ವ್ಯವಸ್ಥೆಯಾಗಿದೆ. ಇದರಲ್ಲಿ ಶಿಕ್ಷಕವಹಿಸುವ ಪಾತ್ರವೇ ಮುಖ್ಯ. ಶಿಕ್ಷಕನು ಹೇಳುವ, ಕೇಳುವ, ಓದುವ, ಬರೆಯುವ ಕ್ರಿಯೆಗಳನ್ನು ರೂಢಿಸಿಕೊಂಡು ವಿದ್ಯಾರ್ಥಿಗಳನ್ನು ಅದರಲ್ಲಿ ತೊಡಗಿಸಿಕೊಳ್ಳಬಲ್ಲ. ಯಾವುದೇ ದೇಶದ ಸಂಸ್ಕೃತಿ ಆದೇಶದ ಶಿಕ್ಷಣ ವ್ಯವಸ್ಥೆಯ ಮೂಲಿಗನಾದ ಶಿಕ್ಷಕ ವ್ಯಕ್ತಿಯಿಂದಲೇ ನವನವಿನವಾಗಿ ಬೆಳೆಯುತ್ತದೆ. ಇಲ್ಲಿ ಶಿಕ್ಷಕ ಎಂದರೆ ಸಂಬಳಕ್ಕಾಗಿ ವೃತ್ತಿಯಲ್ಲಿರುವ ವ್ಯಕ್ತಿ ಮಾತ್ರ ಅಲ್ಲ. ಶಿಕ್ಷಕ ಎಂಬುದು ಸಂಸ್ಕೃತಿ ಪರ ಪ್ರವೃತ್ತಿಯಲ್ಲಿರುವ ವ್ಯಕ್ತಿಯ ಪದನಾಮ. ಪಾ.ವೆಂ. ವೃತ್ತಿಯಿಂದ ಪತ್ರಿಕಾ ಸಂಪಾದಕನಾಗಿದ್ದರೂ ಪ್ರವೃತ್ತಿಯಿಂದ ಅವರು ನಿರ್ವಹಿಸಿದ ಕೆಲಸ ಶಿಕ್ಷಕನದೇ ಆಗಿದೆ ಎಂಬುದು ಗಮನಾರ್ಹ.

ಇಂದಿನ ಮನುಷ್ಯನ ಮೂಲ ಪ್ರವೃತ್ತಿಗಳು ಶಿಕ್ಷಣದ ಮಾರ್ಗದಲ್ಲಿ ಪರಿವರ್ತನೆ ಸಾಧಿಸಿ ಮೌಲ್ಯಗಳಾಗಿ ಸಾಕಷ್ಟು ಮಟ್ಟಿಗೆ ಬದಲಾಗಿದೆ. ನ್ಯಾಯ ವ್ಯವಸ್ಥೆ, ವಿವಾಹಸಂಸ್ಥೆ, ಸಾಹಿತ್ಯ ರಚನೆ ವಿಶ್ವವಿದ್ಯಾಲಯ ರಚನೆ, ಇವೆಲ್ಲ ಪ್ರವೃತ್ತಿಪರ ವ್ಯಕ್ತಿಯನ್ನು ಸಂಸ್ಕೃತಿ ಪರ ಮನುಷ್ಯನನ್ನಾಗಿ ಪರಿವರ್ತಿಸುವುದಕ್ಕೆ ಹುಟ್ಟಿವೆ ಮತ್ತು ಬಹುತೇಕವಾಗಿ ಯಶಸ್ಸು ಸಾಧಿಸಿವೆ. ಹೀಗಿದ್ದರೂ ಆಧುನಿಕ ಜೀವನ ಸಮಾಧಾನಕರವಾಗಿ, ನಿಶ್ಚಿಂತೆಯಿಂದ ಇರುವ ವಾತಾವರಣವಿಲ್ಲ. ಸ್ಪರ್ಧೆಯ ಪ್ರವೃತ್ತಿಗೆ ವ್ಯಾಪಕ ಕಲೆ, ವಿಜ್ಞಾನ ಮೊದಲಾದ ನಿರುಪದ್ರವಿಕಾರಕ ಅವಕಾಶಗಳಿವೆ. ಇವುಗಳಲ್ಲಿ ಪ್ರತಿಭೆಯನ್ನು ವಿನಿಯೋಗಿಸಿ ವ್ಯಕ್ತಿಗಳು ಗೆಲವು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಶಿಕ್ಷಣವೂ ಒಂದು ರಾಜಕೀಯ, ಆರ್ಥಿಕಗಳಿಕೆಯ ವ್ಯವಸ್ಥೆಯಾಗಿ ಇಂದು ಬದಲಾಗಿದೆ. ಅಲ್ಲಿ ಮೌಲ್ಯಗಳು ಸಾಂಕೇತಿಕವಾಗಿದೆ ಅಥವಾ ತೋರಿಕೆಯ ಮಾಧ್ಯಮವಾಗಿದೆ. ಇದು ಹಿಗೇಕೆ ಎಂಬುದಕ್ಕೆ ಪಾ.ವೆಂ. ಅವರು ಕಂಡುಕೊಂಡ ವಾಸ್ತವ ಸತ್ಯವೆಂದರೆ, ಮನುಷ್ಯನ ಶರೀರದ ರಾಸಾಯನಿಕ

ಸ್ವರೂಪ ಇನ್ನು ಈಗಲೂ ಹಿಮ ಯುಗದಲ್ಲಿ ಇದ್ದಂತೆ ಇದೆ. ಅವು ಅಜ್ಞಾನ, ಕ್ರೋದ ತಕ್ಷಣದ ಉದ್ರೇಕಕಾರಿ ಭಾವಗಳಿಗೆ ಅವಕಾಶ ಕೊಟ್ಟು ಆಧುನಿಕ ಮಾನವನನ್ನು ಪಶುಮಟ್ಟದಲ್ಲಿ ಇರಿಸಿವೆ. ಶಿಕ್ಷಣದಿಂದ ಬಂದ ತಿಳಿವು ಅದಕ್ಕೆ ವಿರುದ್ಧವಾದ ಸ್ವಾರ್ಥ ಪರತೆ ಈ ದ್ವಂದ್ವದಲ್ಲಿ ಬಹುಪಾಲು ವ್ಯಕ್ತಿಗಳು ಬಳಲುತ್ತಿದ್ದಾರೆ. ಈ ಬಳಲಿಕೆಯಿಂದ ವ್ಯಕ್ತಿಗಿಂತ ಮಾನವ ಸಮಾಜಕ್ಕೆ ಗಂಡಾಂತರ ಉಂಟಾಗುತ್ತಿದೆಯೆಂದು ಅಲೆಕ್ಸ್‌ಸ್ ಕೆರೆಲ್‌ನ 'ಆತ್ಮತೇಜಸ್ಸಿನ ಮಾರ್ಗಗಳು' ವಾದವನ್ನು ಪಾ.ವೆಂ. ನೆನಪಿಸುತ್ತಾರೆ. ಅದೇ ಕೆರಲನು ಹೇಳುವಂತೆ ಮನುಷ್ಯನಜ್ಞಾನ ಸೀಮೆ ಈ ಹಳೆಯ ರಾಸಾಯನಿಕ ಪ್ರಚೋದಕಗಳನ್ನು ಸರಿಯಾಗಿ, ಉದಾತ್ತ ಮಟ್ಟದಲ್ಲಿ ಕಲ್ಪಿಸಿಕೊಳ್ಳುವಷ್ಟು ವಿಸ್ತರಿಸಿದೆ. ಅಂದರೆ ತೀರ ಕೆಳಮಟ್ಟದ ರಾಸಾಯನಿಕ ರಚನೆಯನ್ನೇ ಬದಲಿಸಿ ಮೇಲೆತ್ತಲು ಇಂದು ಸಾಧ್ಯವಿದೆ. ವಿಜ್ಞಾನ ಯುಗದ ಆಗಾದ ಸಾಧ್ಯತೆಯಿದು. ಮನೋವಿಜ್ಞಾನ ಇಂದು ಈ ದಿಸೆಯಲ್ಲಿ ವ್ಯಕ್ತಿಗೆ ಅನೇಕ ಉಪಾಯಗಳನ್ನು ಯೋಜಿಸುತ್ತಿದೆ. ಎರಿಕ್ ಫ್ರಾಮ್, ಕಾಂಡ್ರಡ್, ಲಾರೆಂಜ್ ಅಲೆಕ್ಸಿಸ್ ಕೆರೆಲ್‌ರಂತಹ ಮನೋವಿಜ್ಞಾನಿಗಳು ಮಂಡಿಸಿದ ಕಥನಗಳು ನಿಜವಾಗಿಯೂ ಸ್ವೀಕಾರಾರ್ಹವಾಗಿದೆ. ಈ ನಿಟ್ಟಿನಲ್ಲಿ ಪಾ.ವೆಂ. ಉಲ್ಲೇಖಿಸುವ ಒಂದು ವಿಚಾರ ಮನೋಜ್ಞವಾಗಿದೆ. ಮನುಷ್ಯ ಮೂಲ ಪ್ರವೃತ್ತಿಗಳಾದ ಆಕ್ರಮಣ ಮತ್ತು ಕ್ರೋಧ ಪ್ರವೃತ್ತಿಗಳು ಪ್ರಕೃತಿಯ ಸಹಜತೆಗಿಂತ ಭಿನ್ನವಾಗಿದ್ದು, ಅವುಗಳನ್ನು ಶಿಕ್ಷಣ, ಸಂಸ್ಕೃತಿಗಳ ಮೂಲಕ ಮತ್ತೆ ಪ್ರಕೃತಿ ಸಹಜವಾದ ಸುಂದರ, ಸಹನೀಯ ಗುಣಗಳನ್ನಾಗಿ ಮಾರ್ಪಡಿಸಬೇಕು. ಹೊರತು ಇವುಗಳನ್ನು ಧಮನ ಮಾಡುವ ಅಂದರೆ ಮನುಷ್ಯನ ಮೂಲ ಸ್ವಭಾವವನ್ನು ರಾಸಾಯನಿಕವಾಗಿಯೇ ಆಗಲಿ, ರೂಢ ಕ್ರಿಯೆ (condictioning) ಯಿಂದಾಗಲಿ ಬದಲಿಸುವುದು ಅಪಾಯಕಾರಿ. ಧಮನ ನೀತಿಯಿಂದ ದುರ್ಗಣ ವ್ಯಕ್ತಿಗಳನ್ನು ವಿಧೇಯರನ್ನಾಗಿ ಮಾಡಿಕೊಳ್ಳಬಹುದೇನೋ? ಆದರೆ ಈ ವಿಧೇಯತೆ ಅನುದ್ರಿಕ್ತ ಸ್ಥಿತಿಯನ್ನು ಹೊಂದಿ ನಿಷ್ಕ್ರಿಯವೂ ಆಗಿಬಿಡುತ್ತದಲ್ಲ ಎಂಬ ಸಂಶಯವನ್ನು ವ್ಯಕ್ತಪಡಿಸುತ್ತಾ ಪಾ.ವೆಂ. ಅವರು ಯಾವುದೇ ಸಮಸ್ಯೆಯನ್ನು ತರ್ಕಮಾರ್ಗದಿಂದ ಪರಿಹರಿಸುವುದು ದುಷ್ಕರ ಎನ್ನುತ್ತಾರೆ. ಪ್ರಕೃತಿ–ಸಂಸ್ಕೃತಿ–ವಿಕೃತಿ ಈ ಮೂರು ಮಾನವ ಪ್ರವೃತ್ತಿಯನ್ನು ಜೊತೆಜೊತೆಯಾಗಿಯೇ ಮುನ್ನಡೆಸುತ್ತಿರುವ ಅಂಶಗಳಾಗಿದ್ದು ಅವುಗಳ ನಿರ್ವಹಣೆಯಲ್ಲಿ ವಿಜ್ಞಾನ ಬುದ್ಧಿಯ ಮಾನವ ನಿಸ್ವಾರ್ಥ ಮತ್ತು ಬಹುದೂರದ ಕ್ಷೇಮದ ಆಸೆಯನಿಟ್ಟುಕೊಂಡು ಕ್ರಿಯಾಶೀಲನಾಗಬೇಕಾಗಿದೆ. ಇದಕ್ಕೆ ದೈವಿಕದಲ್ಲಿಯ ಶ್ರದ್ಧೆ, ನಂಬಿಕೆ ಮೂಲಾಧಾರ, ಎರಿಕ್ ಫ್ರಾಮ್ ಹೇಳುವಂತೆ ಪ್ರೇಮವೆಂಬುದು (loving) ಉತ್ಪಾದಕತಾ ಮಾನವ ಗುಣ (Prodactive Eliment) ಇದು ಹೌದು (desire) ಎಂಬ ಮೂಲ ಪ್ರವೃತ್ತಿಯ ಉದಾತ್ತ ಗುಣ. ಇದೊಂದು ಜೀವ ದ್ರವ್ಯ ಘಟಕವಾಗಿ, ಭಾಷೆ ಪ್ರದೇಶ, ಮತ, ಜನಾಂಗಗಳಂಥ ಬಿಡಿಬಿಡಿ ಅಂಶಗಳನ್ನು

ಮೀರಿ ಒಂದು ಮನೋಭಾವ ರೂಪುಗೊಂಡಾಗ ಮಾನವ ಅಭಿವೃದ್ಧಿ ಸಾಧ್ಯ ಎರಿಕ್ ಫ್ರಾಮ್ ಪ್ರಕಾರ ಪ್ರೀತಿಯಿಂದ ಉತ್ಪದನಾ ಘಟಕ ಒಳಗೊಂಡ ಅಂಶಗಳು ನಾಲ್ಕು: ೧. ಗಮನ (attention) ೨. ಜವಾಬ್ದಾರಿ (Responsibility) ೩. ಗೌರವ (Respect) ೪. ಅರಿವು (Knowledge) ಇವು ಪರಸ್ಪರ ಅವಲಂಬಿಗಳಾಗಿ ಪ್ರಕಟವಾದಾಗ ಮಾನವ ಪ್ರೇಮ ರೂಪುಗೊಳ್ಳುತ್ತದೆ.

ಯಾವುದೇ ವಸ್ತು ಅಥವಾ ವ್ಯಕ್ತಿ ಅಥವಾ ಪದಾರ್ಥ ತನ್ನ ಅಸ್ತಿತ್ವವನ್ನು ಉತ್ಪಾದಕತಾ ಮಟ್ಟದಲ್ಲಿ ಸ್ಥಿತಿಯಲ್ಲಿ ನೆಲೆಗೊಳ್ಳಬೇಕೆಂದರೆ ಅದಕ್ಕೆ ಪ್ರತಿವಾದಿಯಾದ ವ್ಯಕ್ತಿ ಅಥವಾ ವಸ್ತುವಿನ ಈ ಗುಣಗಳು ನೆಲೆಗೊಂಡಿರಬೇಕು. ೧. ಪ್ರೀತಿಸುವುದೆಂದರೆ : ಗಮನಿಸುವುದು, ಲಕ್ಷ್ಯವಹಿಸುವುದು, ಕಾಳಜಿ ವಹಿಸುವುದು. ೨. ಪ್ರೀತಿಸುವುದೆಂದರೆ ಜವಾಬ್ದಾರಿ ವಹಿಸಿಕೊಳ್ಳುವುದು ಮತ್ತು ಜವಾಬ್ದಾರಿಯಿಂದ ಇರುವುದು. ೩. ಗೌರವಿಸುವುದು ೪. ಪ್ರೀತಿಸುವುದುದೆಂದರೆ ಅರಿವಿನಿಂದ ವರ್ತಿಸುವ, ಯಾಕೆ ಪ್ರೀತಿಸುತ್ತಿದ್ದೇನೆ ಎಂಬುದರ ತಿಳುವಳಿಕೆಯಿದು, ಈ ನಾಲ್ಕು ಗುಣಗಳನ್ನು ಎರಿಕ್ ಫ್ರಾಮ್ ವಯಸ್ಕ ಮನುಷ್ಯನ ಜೀವನ ದೃಷ್ಟಿಯಲ್ಲಿ ಕಾಣಬರುವ ಲಕ್ಷಣ ಸಮುಚ್ಚಯಗಳೆನ್ನುತ್ತಾನೆ. ಬದುಕು ಈ ಉತ್ಪಾದಕಾತ ಗುಣಗಳಿಂದ ಬಾಳು ಆಗುತ್ತದೆ. ಬಾಳನ್ನು ರೂಪಿಸುವ ಈ ಸಾಧ್ಯತೆಗಳು ಕೃಷಿಗೊಳ್ಳಬೇಕಾದ ಕ್ಷೇತ್ರವೇ ಶಿಕ್ಷಣ ಶಿಕ್ಷಣ ವ್ಯವಸ್ಥೆಯಲ್ಲಿರುವ ಕೇಂದ್ರ ಘಟಕಗಳು ಶಿಕ್ಷಕ ಮತ್ತು ವಿದ್ಯಾರ್ಥಿ ಈ ೨ ಘಟಕಗಳಿಗೆ ಸಹಾಯಕವಾಗುವ ಚಟುವಟಿಕೆಗಳೆಂದರೆ ಸಾಹಿತ್ಯ ಮತ್ತು ಕಲೆಗಳಲ್ಲಿ ನಂಬಿಕೆ ಶ್ರದ್ಧೆಯ ಕ್ರಿಯೆಗಳು ಇದನ್ನೇ ಹೇಳುವ, ಕೇಳುವ, ಓದುವ, ಬರೆಯುವ ಕ್ರಿಯೆಗಳೆಂದು ಸರಳೀಕರಿಸಬಹುದು. ಪಾ.ವೆಂ. ಅವರು ಕಸ್ತೂರಿಯ ಮೂಲಕ ಇಂಥ ಕ್ರಿಯೆಗಳಿಗೆ ಪರೋಕ್ಷ ಶಿಕ್ಷಕನಾಗಿ ಮತ್ತು ಪರೋಕ್ಷ ವಿದ್ಯಾರ್ಥಿಯಾಗಿ ದುಡಿದಿದ್ದಾರೆ.

ಪಾ.ವೆಂ. ಅವರ ವಿಚಾರಶೀಲತೆ ಏಕಮುಖವಾದುದಲ್ಲ ಅಥವಾ ಜಡವಾದುದಲ್ಲ. ಇವರಿಗೆ ಮನುಷ್ಯನ ತರ್ಕ ಊಹೆ, ಕಲ್ಪನೆ ಇವುಗಳಿಗೆ ಒಂದು ಇತಿಮಿತಿ ಇದೆಯೆಂಬ ತಿಳುವಳಿಕೆ ಇದೆ. ಆದ್ದರಿಂದ ಅವರು ಅದೃಷ್ಟವೂ ಇಂದ್ರಿಯಾತೀತವೂ ಆಗಿರುವ ಒಂದು ವಿಶ್ವಸಂಕಲ್ಪದಲ್ಲಿ ನಂಬಿಕೆ ಇದೆ. ಇದನ್ನು ಸಾಮಾನ್ಯ ಅರ್ಥದಲ್ಲಿ ದೈವಿಕ ಎನ್ನಬಹುದು. ಈ ವಿಶ್ವ ಸಂಕಲ್ಪವೂ ಮಾನವನ ಮೂಲ ರಾಸಾಯನಿಕ ಸ್ವರೂಪದಲ್ಲಿ ನಿಹಿತವಾಗಿದೆ ಎಂದು ಪಾ.ವೆಂ. ನಂಬುತ್ತಾರೆ. ಜ್ಞಾನ ವಿಜ್ಞಾನಗಳಿಂದ ಮನುಷ್ಯ ಜೀವ ವಿಕಾಸವನ್ನು ಅರ್ಥಮಾಡಿಕೊಂಡಿದ್ದಾನೆ. ಮಾನವ ಚರಿತ್ರೆಯ ಕ್ರಮವನ್ನು ಗಮನಿಸಿದ್ದಾನೆ. ಇವೆರಡನ್ನು ಆ ವಿಶ್ವಸಂಕಲ್ಪವೂ ಧ್ಯಾನಿಸುತ್ತಿದೆಯೆಂದು ಪಾ.ವೆಂ. ಪ್ರತಿಪಾದಿಸುತ್ತಾರೆ. ಆದ್ದರಿಂದ ಮಾನವ ಪ್ರವೃತ್ತಿಗಳ ಉದ್ರೇಕದಿಂದ ಜೀವಜಗತ್ತಿಗೆ ಗಂಡಾಂತರವಾದರೂ ಆಗಬಹುದು ಎಂಬ ಹೆದರಿಕೆ (Fature Shock) ನಮಗೆ ಉಂಟಾದಾಗ ಆ

ವಿಶ್ವಸಂಕಲ್ಪವೂ ನಮ್ಮನ್ನು ನಮ್ಮ ಸ್ವಭಾವಕ್ಕೆ ಎಚ್ಚರಿಕೆಯನ್ನು ಕೊಟ್ಟು ಮಾನವಕುಲವನ್ನು ಕಾಪಾಡುತ್ತದೆ ಎಂದು ಪ್ರತಿಪಾದಿಸುತ್ತಾರೆ. ಪಾ.ವೆಂ. ಅವರ ಈ ದೈವಿಕ ಅವಲಂಬನೆ ಯಾವುದೇ ಮತ-ಧರ್ಮ-ಅಧ್ಯಾತ್ಮಿಕತೆಯ ಪ್ರತಿಪಾದನೆಯಾಗಿರದೆ ಮಾನವ ಸಹಜ ಚಿಂತನ ಶ್ರಮದ ಸತ್ಯಾನ್ವೇಷಣೆ ಫಲಿತಾಂಶವಾಗಿದೆ.

ಮಾನವತಾ ಜ್ಞಾನದ ವೈಚಾರಿಕತೆ: ಪಾ.ವೆಂ. ಅವರು ತಮ್ಮ ಚಿಂತನಶೀಲ ದೃಷ್ಟಿಯನ್ನು ಮಾನವತಾ ವಿಷಯಗಳ ಕಡೆಗೂ ಬೆಳೆಸಿದ್ದಾರೆ. ಮಾನವನ ಮನಸ್ಸು ದೇಹ ಇವುಗಳ ಅನ್ಯೋನ್ಯ ಸಾಂಗತ್ಯದಲ್ಲಿ ಕಂಡುಬರುವ ಸಮಸ್ಯೆಗಳು, ಲಕ್ಷಣಗಳು ಅಥವಾ ಮಾನವೀಯತೆಯ ವಿಕಾಸ ಕ್ರಮದಲ್ಲಿ ಎದುರಾಗುವ ವಿಚಾರಗಳು ಅಥವಾ ಚರ್ಚೆಗಳು ಪಾ.ವೆಂ. ಅವರನ್ನು ಲೇಖನಕ್ಕೆ ಆಹ್ವಾನಿಸಿದೆ. ಅವರು ಈ ವಿಷಯದಲ್ಲಿ ಮೊದಲು ಮಂಡಿಸಿದ ಲೇಖನ 'ಮಾನವ ಪ್ರವೃತ್ತಿ ಮತ್ತು ಮೌಲ್ಯಗಳು' ಪಾ.ವೆಂ. ಅವರು ಆಸಕ್ತಿಯಿಂದ ಓದಿಕೊಂಡ ಜೀವಶಾಸ್ತ್ರ, ಪ್ರಾಣಿಶಾಸ್ತ್ರ ಸಾಹಿತ್ಯದ ಬೆಳಕಿನಲ್ಲಿ ನಮ್ಮ ಸಾಮಾಜಿಕ ಮೌಲ್ಯಗಳು ಹೇಗೆ ವಿಕಾಸಗೊಂಡಿರಬಹುದೆಂಬುದರ ಬಗ್ಗೆ ಮಾಡಿಕೊಂಡ ಕಲ್ಪನೆಯ ರೂಪ ಇದಾಗಿದೆ. ಬದುಕಿನ ವಿಶ್ಲೇಷಣೆಯುಳ್ಳ ಹಾಗೂ ಅನುಭವ ಜನ್ಯ ವಿಚಾರಗಳಿವು.

೭. ಕಾಮಾರ್ಥ ಕೋಶ ಅಂಕಣ ಬರಹಗಳು:

೧೯೮೭ರಲ್ಲಿ ಬೆಂಗಳೂರಿನ ಮ ಶ್ರೀಧರಮೂರ್ತಿ ಎಂಬ ಲೇಖಕ ಮತ್ತು ಪತ್ರಕರ್ತರು **ರತಿವಿಜ್ಞಾನ ಧಮರ್ಪಣ**ವೆಂಬ ವಿಶಿಷ್ಟ ಮಾಸ ಪತ್ರಿಕೆಯನ್ನು ಪ್ರಕಟಿಸ ಲಾರಂಭಿಸಿದರು. ಮ. ಶ್ರೀಧರಮೂರ್ತಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯವನ್ನು ಅರಿತುಕೊಂಡ ಗಂಭೀರ ದೃಷ್ಟಿಯ ಲೇಖಕರು. ಅವರು ಲೈಂಗಿಕ ವಿಷಯವನ್ನು ಇಂಗ್ಲೀಷನಿಂದಲೂ ಓದಿಕೊಂಡಿದ್ದರು. ಕನ್ನಡದಲ್ಲಿ ಬಹುಹಿಂದೆ ಡಾ. ಎಂ. ಗೋಪಾಲ ಕೃಷ್ಣರಾಯರು ಲೈಂಗಿಕ ರಹಸ್ಯಕ್ಕೆ ಸಂಬಂಧಪಟ್ಟಂತೆ ಪತ್ರಿಕೆ ಹೊರಡಿಸುತ್ತಿದ್ದರು. ಕೆಲವು ಕಾಲ ಅವು ನಡೆದು ನಿಂತಿತು. ಡಾ. ಗೋಪಾಲಕೃಷ್ಣರಾಯರಿಗೆ ಆರೋಗ್ಯಶಾಸ್ತ್ರದ ವಿಷಯಗಳನ್ನು ಮನಂಬುಗುವಂತೆ ವಿವರಿಸುವ ಸಾಹಿತ್ಯ ಕನ್ನಡದಲ್ಲಿ ಬರಬೇಕೆಂಬುದನ್ನು ಪ್ರೇರಿಸಿದವರು ಪಂ. ತಾರಾನಾಥರು ಅವರ ಶಿಷ್ಯನಾಗಿ ಕನ್ನಡ ಸಮಾಜದ ಮನೋದೈಹಿಕ ಸ್ವಾಸ್ಥ್ಯ ನಿರೂಪಣೆಗೆ ಅಯುರ್ವೇದಿಕ್ ಮೂಲದ ಗೋಪಾಲಕೃಷ್ಣರಾಯರು ಪುಸ್ತಕಗಳನ್ನು ಬರೆದರು. ಇದು ವೈದ್ಯ ವಿಜ್ಞಾನ ಸಾಹಿತ್ಯದ ಹಿನ್ನೆಲೆ.

ಅ.ನಾ.ಕೃ., ಶ್ರೀರಂಗ ಮೊದಲಾದ ಕಾದಂಬರಿಕಾರರು ಲೈಂಗಿಕ ಸಮಸ್ಯೆಗಳ ಬಗ್ಗೆ ಕತೆ ಕಾದಂಬರಿಗಳನ್ನು ಬರೆದರು. ಲೈಂಗಿಕತೆಯ ಕುರಿತಾದ ಒಂದು ವಿಜ್ಞಾನ ಅದನ್ನು ವಸ್ತುನಿಷ್ಠವಾಗಿ ಅಭ್ಯಸಿಸಿ ಅಲ್ಲಿಯ ತೊಡಕು ತೊಂದರೆಗಳನ್ನು (ಮುಖ್ಯವಾಗಿ

ಲೈಂಗಿಕ ರೋಗಗಳನ್ನು) ನಿವಾರಿಸಿ ಗಂಡು ಹೆಣ್ಣುಗಳಿಗೆ ಮಾರ್ಗದರ್ಶನ ಮಾಡಬೇಕು. ಮಡಿವಂತಿಕೆಯ ಮುಸುಕಿನಲ್ಲಿ ಆಗುವ ಅಪರಾಧ, ಅನಾರೋಗ್ಯ ವೈಶಮ್ಯಗಳನ್ನು ತಡೆಗಟ್ಟಬಹುದೆಂದು ಪ್ರಗತಿಶೀಲ ಲೇಖಕ ಚಿಂತಕರು ಪ್ರತಿಪಾದಿಸತೊಡಗಿದರು. ಲೈಂಗಿಕ ಸಂಬಂಧ ವ್ಯಕ್ತಿ ಮಟ್ಟದ್ದಾಗಿದ್ದರು. (ಖಾಸಗಿ ರೀತಿ) ಅದರ ಕಾರಣ ಮತ್ತು ಪರಿಣಾಮಗಳು ಮಾತ್ರ ಸಾಮಾಜಿಕವೂ ಆರ್ಥಿಕವೂ ಕೆಲಮಟ್ಟಿಗೆ ಮಾನವೀಯ ಆಗಿರುತ್ತದೆ. ಲೈಂಗಿಕ ಮತ್ತು ವಿಷಯ ವಿಚಾರಗಳನ್ನು ಬಹಿರಂಗಗೊಳಿಸಬೇಕೆ ಎಂಬುದು ವಿಚಾರ ಸ್ವಾತಂತ್ರ್ಯವುಳ್ಳ ವಾತಾವರಣದಲ್ಲಿಯೂ ವಾದ-ವಿವಾದಕ್ಕೆ ಎಡೆಗೊಟ್ಟಿದೆ. ಲೈಂಗಿಕ ಜೀವನ ತೀರಗುಟ್ಟಿನದು ಮತ್ತು ಸಾಮಾಜಿಕವಾಗಿ ಅದು ಲಜ್ಜೆ, ಸಂಕೋಚಗಳನ್ನು ಉಂಟುಮಾಡುವಂತಹ ಸಂಗತಿ ಈ ಕಾರಣಕ್ಕೆ ಲೈಂಗಿಕ ಜೀವನದ ಸ್ಥಿತಿಗತಿಗಳ ಬಗ್ಗೆ ಬಹಿರಂಗವಾಗಿ ಅಥವಾ (ಸಾರ್ವಜನಿಕ) ವಿವರಿಸುವುದಾಗಲಿ, ಚರ್ಚಿಸುವುದಾಗಲಿ ನಿಷಿದ್ಧವೆಂಬ ತಿಳುವಳಿಕೆ ಅದು ಹೇಗೋ ಬೆಳೆದುಬಿಟ್ಟಿದೆ. ವಿಚಿತ್ರವೆಂದರೆ ಜಗತ್ತಿನಲ್ಲಿ ಭಾರತ ದೇಶವೇ ಲೈಂಗಿಕ ಜೀವನದ ವಿಧಿವಿಧಾನಗಳ ಬಗ್ಗೆ ಎಂದಿನಿಂದಲೂ ಮುಕ್ತವಾಗಿ ನೀತಿ ನಿರೂಪಣೆ ಮಾಡಿದ ದೇಶವೆನಿಸಿದೆ. ವಾತ್ಸಾಯನನ ಕಾಮಸೂತ್ರ ಬಹು ಪ್ರಾಚೀನ ದಾಂಪತ್ಯ ಜೀವನ ಗ್ರಂಥ ಕ್ರಿ.ಶ. ಹತ್ತನೇ ಶತಮಾನಕ್ಕೂ ಹಿಂದಿನ ದೇವಾಲಯ ಮೂರ್ತಿ ಶಿಲ್ಪಗಳಲ್ಲಿ ಲೈಂಗಿಕ ಸಂಬಂಧಗಳ ಚಿತ್ರಪಟ್ಟಿಕೆಗಳು ಅರ್ಥಾತ್ ನಗ್ನ ಮೂರ್ತಿಗಳು ಕೆತ್ತಲಾಗಿದೆ. ಭಾರತ ಪ್ರತಿಪಾದಿಸಿದ ಪುರುಷಾರ್ಥಗಳಲ್ಲಿ ಮೂರನೆಯದು 'ಕಾಮ' ಎಂಬುದಾಗಿದೆ. ಕಾಮಭಾವನೆ ಮನುಷ್ಯನ ಮೂಲಪ್ರವೃತ್ತಿಗಳಲ್ಲಿ ಒಂದಾಗಿದ್ದು ಅದನ್ನು ಕೀಳು ಮಾಡದೆ ಉದಾತ್ತವಾಗಿ ಮತ್ತು ಜೀವಪೋಷಕವಾಗಿ ಪರಿಗಣಿಸಲಾಗಿದೆ. ಲೈಂಗಿಕ ಪ್ರವೃತ್ತಿಯನ್ನು ಒಂದು ಧಾರ್ಮಿಕ ಚೌಕಟ್ಟಿಗೆ ಒಳಪಡಿಸಿ ಗಂಡು ಹೆಣ್ಣಿನ ಮನೋದೈಹಿಕ ಆರೋಗ್ಯವನ್ನು ಹಾಗೂ ಸುಖದ ಸೀಮೆಯನ್ನು ಅರ್ಥಪೂರ್ಣವಾಗಿ ನಿಯಂತ್ರಿಸಬೇಕೆಂದು ಭಾರತೀಯ ಸಂಪ್ರದಾಯದ ನಿಲುವು. ಸಂಸ್ಕೃತ ಸಾಹಿತ್ಯದಲ್ಲಿ ಕೂಡ ಭರತನ ನಾಟ್ಯ ಶಾಸ್ತ್ರಕಾರರಿಂದ ಕಾಮವನ್ನು ಒಂದು ಸ್ಥಾಯಿಯ ಭಾವವಾಗಿ ಪರಿಗಣಿಸಿ (ಪ್ರೀತಿ, ಪ್ರಣಯ, ಸಂಬಂಧ) ಅದಕ್ಕೆ ಅದು ಶೃಂಗಾರವಾಗಿ ಪರಿಣಮಿಸುವ ಪ್ರಕ್ರಿಯೆಯನ್ನು ಗುರುತಿಸಲಾಗಿದೆ. ನವರಸಗಳಲ್ಲಿ ಹಾಸ್ಯ, ಶೃಂಗಾರ, ವೀರ, ಕರುಣ ಮತ್ತು ಶಾಂತ ರಸಗಳು ಪ್ರಧಾನವಾಗಿ ಎಲ್ಲ ಪ್ರಮುಖ ಕಾವ್ಯಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಆದರೆ ಜೈನ ಬೌದ್ಧ ಮತಗಳ ಪ್ರಾಬಲ್ಯದಲ್ಲಿ ವೈದಿಕ ಸಂಸ್ಕೃತಿಗೆ ಗ್ರಹಣ ಹಿಡಿದಾಗ ಲೈಂಗಿಕ ಪ್ರವೃತ್ತಿಯ ಬಹಿರಂಗ ಪ್ರದರ್ಶನ ಮತ್ತು ಆ ಕುರಿತು ಮುಕ್ತ ಚರ್ಚೆಗೆ ನಿರ್ಬಂಧ ಒದಗಿತು. ಗಂಡು ಹೆಣ್ಣು ಪ್ರಕೃತಿ ದೃಷ್ಟಿಯಲ್ಲಿ ಸಮಾನವಾಗಿದ್ದರು ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಮತ್ತೊಂದು ಕೆಳಹಂತಕ್ಕೆ ತಳ್ಳಲಾಗಿ ಆಕೆಯ ಬೌದ್ಧಿಕತೆಗೂ ಮಿತಿಯನ್ನು ಹಾಕಿ ಹೆಣ್ಣನ್ನು ಬೋಗವಸ್ತುವನ್ನಾಗಿ ಪರಿಗಣಿಸಲಾರಂಬಿಸಿದಾಗ ಅಸಮಾನತೆ ಹೆಚ್ಚಿತು. ದಾಂಪತ್ಯ ಜೀವನದಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆ ಪ್ರಬಲವಾಗಿ ಹೆಣ್ಣಿಗೆ ಪಾತಿವ್ರತ್ಯದ ನಿಬಂಧ ಹೇರಲಾಯಿತು.

ಹೆಣ್ಣು ಸಂತಾನ ವೃದ್ಧಿಯ ಸಾಧನವಾಗಿ ಉಳಿದು ಲೈಂಗಿಕ ಸುಖಸ್ವಾತಂತ್ರ್ಯಕ್ಕೆ ಎರವಾಗುವಂತೆ ವ್ಯವಸ್ಥೆ ಏರ್ಪಟ್ಟಿತು. ಇದೆಲ್ಲದರ ಒಟ್ಟು ಪರಿಣಾಮ ಗಂಡು ಮತ್ತು ಹೆಣ್ಣುಗಳ ನಡುವೆ ಬೇಧದ ಸೃಷ್ಟಿ. ಬೇಧ ಹೆಚ್ಚಾದಷ್ಟು ಸಾಮಾಜಿಕ ಸಂಬಂಧಗಳಲ್ಲಿ ಲಜ್ಜೆ, ಹಿಂಜರಿತ, ಭಿನ್ನಭಾವ ಪ್ರಬಲ ಗಂಡು ಆಳುವ ಅಬಲೆ ಹೆಣ್ಣು ಆಳಿಸಿಕೊಳ್ಳುವ ಪ್ರವೃತ್ತಿ ಬೆಳೆದವು. ಈ ನಡುವೆ ಮಧ್ಯಕಾಲೀನ ಭಾರತದಲ್ಲಿ ಮುಸ್ಲಿಮರ ಆಳ್ವಿಕೆ ವ್ಯಾಪಕಗೊಂಡಾಗ ರತಿ ವಿಷಯಕ ಸಂಗತಿಗಳ ಪ್ರದರ್ಶನ, ಅಭಿವ್ಯಕ್ತಿ ಮತ್ತು ವಿಚಾರ ವಿನಿಯಮಗಳು ಸ್ಥಗಿತವಾದವು. ಲೈಂಗಿಕತೆ ಕೇವಲ ಖಾಸಗಿಯಾಗಿ ಅನುಭವಿಸುವ ಒಂದು ಸೀಮಿತ, ಆದ್ದರಿಂದ ಸಂಕುಚಿತ ಅನುಭವವಾಗಿ ಉಳಿಯಿತು. ಹಾಗಾದಾಗ ಅದು ವಿಧಿವಿಷಯಗಳಿಗೆ ಒಳಗಾದ ಸಂಗತಿಯಾಗಿ ಮಡಿವಂತಿಕೆಯ ಕಲ್ಪನೆ ಸಾರ್ವಜನಿಕವಾಯಿತು. ಒಟ್ಟಿನಲ್ಲಿ ದಾಂಪತ್ಯ ಮತ್ತು ಸಾಮಾಜಿಕ ಪರಿಸ್ಥಿತಿಗಳಲ್ಲಿ ಹೆಣ್ಣು ನಿಷ್ಕ್ರೀಯಳು ಆದ್ದರಿಂದ ಅವಳಿಗೆ ಯಾವ ಸ್ವಾತಂತ್ರ್ಯವು ಇರಬೇಕಿಲ್ಲ–ಎಂಬ ಮನಸ್ಥಿತಿ ಗಂಡು ಹೆಣ್ಣು ಇಬ್ಬರಲ್ಲೂ ಬೆಳೆದು ಪ್ರಥಮ ಸಂಪ್ರದಾಯವೇ ಬೆಳೆಯಿತು. ಗಂಡಿನ ಲೈಂಗಿಕ ಬಯಕೆಗಳು ಮಾತ್ರ ಸ್ವಾತಂತ್ರ್ಯ ಅಥವಾ ಸುಖವನ್ನು ಪಡುವ ಅಂಶ ಎಂದಾಯಿತು. ಇದು ಇಂದಿಗೂ ಮುಂದುವರಿದಿರುವ ಒಂದು ವಿಪರ್ಯಾಸ. ಅಂದರೆ ಲೈಂಗಿಕತೆ ಒಂದು ಅಭ್ಯಾಸ ಮಾಡುವ ಮತ್ತು ತಿಳುವಳಿಕೆಗಳನ್ನು ಬೆಳೆಸಿಕೊಂಡು ಮಾನವೀಯ ಸಂಸ್ಕೃತಿಯನ್ನು ರೂಪಿಸುವ ಮಹತ್ವದ ಅಂಶ ಆಗಲೇ ಇಲ್ಲ ಇದರ ಪರಿಣಾಮವಾಗಿ ಲೈಂಗಿಕ ಜೀವನ ಗುಟ್ಟಿನಲ್ಲಿ ಉಳಿದು ಅಸ್ಪಷ್ಟವೂ ಅಸ್ವಸ್ಥವೂ ಆಗಿಯೇ ಉಳಿದು ಬಂದಿದೆ. ಆಧುನಿಕ ವಾತಾವರಣದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ವ್ಯಾಪಕತೆಯಿಂದಾಗಿ ಗಂಡು ಹೆಣ್ಣಿನ ಸಂಬಂಧಗಳ ವಿಷಯ ಸಾಹಿತ್ಯ ಸಿನಿಮಾದಂತಹ ನಾಟಕ, ಪತ್ರಿಕೆ ಸಮೂಹ ಮಾಧ್ಯಮಗಳಲ್ಲಿ ಸಾಕಷ್ಟು ಮುಕ್ತವಾಗಿ ಪ್ರದರ್ಶನಗೊಳ್ಳುತ್ತಿದೆ. ಪಾಶ್ಚಾತ್ಯ ಜೀವನದ ಮುಕ್ತ ಲೈಂಗಿಕತೆ ಭಾರತದ ಮೇಲೆ ಪರಿಣಾಮ ಮಾಡಿ, ಅದನ್ನು ಒಂದು ಜೀವನದ ಅವಿಭಾಜ್ಯ ಅಂಗವನ್ನಾಗಿ ಪರಿಗಣಿಸುವಂತೆ ಆಗಿದೆ. ಲೈಂಗಿಕ ಪ್ರದರ್ಶನ ಶೀಲವೇ ಅಶ್ಲೀಲವೇ ಎಂಬ ಪ್ರಶ್ನೆ ತುಂಬಾ ನಾಜೂಕಾದದ್ದು ಲೈಂಗಿಕತೆಯ ಅಭಿವ್ಯಕ್ತಿ ಅಥವಾ ಪ್ರದರ್ಶನ ಯಾವ ಉದ್ದೇಶದಿಂದ, ಯಾವ ಶೈಲಿಯಲ್ಲಿ ಬರಹ ಮತ್ತು ಚಿತ್ರಗಳಲ್ಲಿ ಉಂಟಾಗುತ್ತದೋ ಮತ್ತು ನೋಡುವವನ ಮನಸ್ಥಿತಿಯ ಮೇಲೆ ಎಂತಹ ಪರಿಣಾಮ ಉಂಟು ಮಾಡುತ್ತದೊ ಎಂಬುದು ಚರ್ಚಾಸ್ಪದ ವಿಷಯ. ಆದರೆ ಆಧುನಿಕ ಕಾಲದಲ್ಲಿ ಲೈಂಗಿಕ ವಿಷಯ ಒಂದು ಜ್ಞಾನವಾಗಿ ವಿಜ್ಞಾನವಾಗಿ ತಿಳಿಯುವ ಕಲಿಯುವ ಸಂಗತಿ ಆಗಿದೆ ಎಂಬುದು ಎಲ್ಲ ಆಧುನಿಕ ವಿಚಾರವಂತರ ಐಕ್ಯಕ ಅಭಿಪ್ರಾಯ. ಮಾನವೀಯವಾದ ಉನ್ನತ ಸಂಸ್ಕೃತಿಯನ್ನು ರೂಪಿಸತ್ತಾ ಹೊರಡುವ ವಿಚಾರವಾದಿಗಳು ನಿರ್ವಿವಾದವಾಗಿ ಲೈಂಗಿಕ ಶಿಕ್ಷಣವನ್ನು ಯುವಕರಿಗೆ ಕೊಟ್ಟು ಅವರ ಮನೋದೈಹಿಕ ಸ್ವಾಸ್ಥ್ಯವನ್ನು ಕಾಪಾಡಲು ಪ್ರತಿಪಾದಿಸುತ್ತಾರೆ. ಈ ನೆಲೆಯ ಮೇಲೆ ಪ್ರಾರಂಭವಾದ

ಕನ್ನಡ ಪತ್ರಿಕೆ **ರತಿ ದರ್ಪಣ, ವಿಜ್ಞಾನ ಪತ್ರಿಕೆಗೆ** ವೈಚಾರಿಕ ವಿಶ್ಲೇಷಣೆಗಳನ್ನು ಬರೆದು ಕೊಡಬೇಕೆಂದು ಸಂಪಾದಕರು ಕೇಳಿಕೊಂಡಾಗ ಪಾ.ವೆಂ. ಅವರು ಸಹಜವಾಗಿ ಒಂದು ಲೇಖನಮಾಲೆಯನ್ನು ಬರೆದುಕೊಟ್ಟರು. ಆದರೆ ಈ ಪತ್ರಿಕೆಗೆ ಅಶ್ಲೀಲ ಸಾಹಿತ್ಯ ಪ್ರಸಾರ ಎಂಬ ಪೋಲಿಸ್ ಆಪಾದನೆ ಎರಗಿದ್ದರಿಂದ ಅದು ಅಕಾಲಿಕವಾಗಿ ನಿಂತುಹೋಯಿತು. ಲೈಂಗಿಕ ವಿಜ್ಞಾನ ಪತ್ರಿಕಾ ರೂಪದಲ್ಲಿ ಪ್ರಸಾರವಾದದ್ದು ಸರಿಯೇ ತಪ್ಪೇ ಎಂಬುದು ಕರ್ನಾಟಕದಲ್ಲಿ ಚರ್ಚೆಗೆ ಒಳಗಾಗಲೇ ಇಲ್ಲ ಪಾ.ವೆಂ. ಅವರೂ ಇದಕ್ಕೆ ಪ್ರತಿಕ್ರಿಯೆಯೂ ನೀಡಲಿಲ್ಲ.

ಕಾಮಾರ್ಥ ಕೋಶವೆಂಬ ಸ್ಥಿರ ಶೀರ್ಷಿಕೆಯಲ್ಲಿ ಲೈಂಗಿಕ ಪದಗಳ ಹುಟ್ಟು ಕಾಲಕ್ರಮದಲ್ಲಿ ಪಡೆದುಕೊಂಡ ಹೊಸ ಅರ್ಥಗಳ ಅರಿವನ್ನು ಮಾಡಿಕೊಟ್ಟಿದ್ದಾರೆ. ಅವರ ಈ ಕಮಾರ್ಥ ಕೋಶ ಓದುಗರ ಭಾಷಾ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ಪ್ರತಿಯೊಂದು ಪದ ಅಥವಾ ಪದ ಅರ್ಥ ಆಯಾಕಾಲದ ಸಾಮಾಜಿಕ ಜೀವನದಲ್ಲಿ ಪಡೆದ ಕಲ್ಪನೆ, ಬೆಳವಣಿಗೆ ಕೂಡ ಹೆಚ್ಚಿಸುವಂತಿದೆ. ೧. ಕಾಮ ಪದದ ಬೇರೆ ಬೇರೆ ಭಾಷೆಯ ಅರ್ಥಗಳನ್ನು ಅಥವಾ ಸಮಾನಾರ್ಥಕಗಳನ್ನು ಸಂಗ್ರಹಿಸಿ ಕೊಡುತ್ತಾರೆ. ಕಾಮದ ಬಗ್ಗೆ ಇರುವ ಸಾಂಪ್ರದಾಯಿಕ ಆಚರಣೆಗಳು ಧಾರ್ಮಿಕ ಅಥವಾ ನೈತಿಕ ಭಾವನೆಗಳು ಇಲ್ಲಿ ಪ್ರಸ್ತಾಪವಾಗಿವೆ. ೨. ಪುರುಷ ಗುಪ್ತಾಂಗ ೩. ಭಗ ಮತ್ತು ಉಪಸ್ಥ ೪. ವೃಷಣ ಮಹಿಮೆ ೫. ಮೊಲೆಯ ಮಹಿಮೆ ಇವೆಲ್ಲ ಪದಗಳನ್ನು ಪಾರಿಭಾಷಿಕ ಪದಗಳೆಂದು ಮೊದಲು ಪ್ರಸ್ತಾಪಿಸಿ ನಂತರ ಅವು ರೂಢಿಗಳಲ್ಲಿ ಪಡೆದ ಮನೋಕಲ್ಪನೆ ಸಚಿತ್ರರೂಪ ಅದರಿಂದ ಉಂಟಾಗುವ ಶೃಂಗಾರ ರಸ ಪೋಷಕ ಭಾವನೆಗಳು ಕವಿ ಕಲ್ಪನೆಗಳು ಹೀಗೆ ಪದ ಜಗತ್ತಿನಲ್ಲಿ ಪಾ.ವೆಂ. ವಿಹರಿಸುತ್ತಾರೆ. ಇವೆಲ್ಲ ವ್ಯಕ್ತವಾಗುವುದು ಅವರಿಗಿರುವ ಬಹುಭಾಷಾ ಪದಜ್ಞಾನ ಮತ್ತು ಅವರು ಓದಿಕೊಂಡು ನೆನಪಿಟ್ಟ ಲೈಂಗಿಕ ಜೀವನದ ವಿವರಗಳು. ಇವುಗಳ ಓದಿನಿಂದ ಮನಸ್ಸು ಪ್ರಬುದ್ಧವಾಗುತ್ತದೆ. ಪ್ರಬುದ್ಧತೆಯ ಪರಿಣಾಮವಾಗಿ ಲೈಂಗಿಕ ವಿಷಯದಲ್ಲಿ ಜವಾಬ್ದಾರಿಯಿಂದ ಕೂಡಿದ ಸುಖಾನುಭವದ ತಿಳುವಳಿಕೆ ಕೂಡ ಬರುತ್ತದೆ. ಒಟ್ಟಿನಲ್ಲಿ ಲೇಖಕರ ಗುರಿ ಅಥವಾ ಉದ್ದೇಶ ಉನ್ನತ ಮಟ್ಟದ್ದಾಗಿದ್ದು, ಆಲಕ್ಷಿತವಾದ ಒಂದು ಲೌಕಿಕ ವಿಷಯದ ಮೇಲೆ ಬೆಳಕನ್ನು ಕೊಡುತ್ತದೆ. ಹಾಗಾಗಿ ಇದು ಅಪೇಕ್ಷಣೀಯವಾದ ಲೇಖನ ಸರಣಿ ಎಂದೆನಿಸುತ್ತದೆ.

ಹೀಗೆ ಆರಂಭವಾದ ಅವರ ಚಿಂತನಶೀಲ ಪ್ರವೃತ್ತಿ ರತಿ ವಿಜ್ಞಾನ ದರ್ಪಣದ ಕಾಮಾರ್ಥಕೋಶ ಲೇಖನ ಮಾಲೆಗಳ ವರೆಗೆ ಬೆಳೆಸಿದೆ. ನವೆಂಬರ್ ೧೯೮೫ರ ರತಿವಿಜ್ಞಾನ ದರ್ಪಣ ಸಂಚಿಕೆಯಲ್ಲಿ ಪಾ.ವೆಂ. ಜೊತೆ ಲೇಖಕ ಪಾಂಡುರಂಗ ಶಾಸ್ತ್ರಿ ನಡೆಸಿದ ಸಂವಾದ ಲೇಖನವಿದೆ. ಇಪ್ಪತ್ತು ವರ್ಷ ಸಂದಿದ್ದರೂ ಪಾ.ವೆಂ. ಚಿಂತನೆ ಮತ್ತು ಬರವಣಿಗೆಯಿಂದ ನಿವೃತ್ತಿ ಹೊಂದಿದವರಿರಲಿಲ್ಲ. ಅವರ ಓದಿನ ಹಸಿವು ಚಿಂತನೆಯ ದಾಹ ಮತ್ತು ಚರ್ಚಾಪಟುವಿನ ಉತ್ಸಾಹ ಎಂದೂ ಕುಗ್ಗಿರಲಿಲ್ಲ. ಕವಿ

ಮನಸ್ಸಿನ ಪಾ.ವೆಂ. ಶಾಸ್ತ್ರ ಅಥವಾ ವಿಜ್ಞಾನದ ಮನೋಧರ್ಮವನ್ನು ಬೆಳೆಸಿಕೊಂಡಿದ್ದರು. ಹೀಗಾಗಿ ಅವರು ಜೀವಜಗತ್ತಿನ ಯಾವುದೇ ಸಂತಿಯ ಬಗೆಗೂ ಕುತೂಹಲ ಮತ್ತು ಜೀವನಪರವಾದ ಅಸ್ಥೆಯನ್ನು ವ್ಯಕ್ತಪಡಿಸುವ ಸಿದ್ಧತೆಯಲ್ಲಿ ಇರುತ್ತಿದ್ದರು. ಪಾ.ವೆಂ. ಅವ ಗ್ರಹಿಕೆ ಮತ್ತು ಅಭಿವ್ಯಕ್ತಿ ಎರಡೂ ಮುಕ್ತ ಸ್ವರೂಪದ ಕ್ರಿಯೆ ಪ್ರತಿಕ್ರಿಯೆಗಳನ್ನು ಹೊಂದಿದ್ದರಿಂದ ಅವರಿಗೆ ಯಾವ ವಿಧಿ ನಿಶೇಧಗಳ ಸಂಕೋಚವಿರಲಿಲ್ಲ. ಅವರ ಚಿಂತನಶೀಲ ಪ್ರಕ್ರಿಯೆಯಲ್ಲಿ ಊಹೆ, ತರ್ಕಗಳ ಜೊತೆಗೆ ಅನುಭವದ ತಿಳುವಳಿಕೆಯೂ ಇತ್ತೆಂಬುದು ಪ್ರಸ್ತುತ ಸಂದರ್ಶನದ ಲೇಖನದಲ್ಲಿ ನಮಗೆ ಕಾಣುತ್ತದೆ. ಸಂದರ್ಶಕ ಪಾಂಡುರಂಗ ಶಾಸ್ತ್ರಿಯವರು ತಮ್ಮ ವಿಶಿಷ್ಟ ಪತ್ರಿಕೆಗಾಗಿ ನಾಡಿನ ಕೆಲವು ಲೇಖಕಿ–ಲೇಖಕರನ್ನು ಸಂದರ್ಶಿಸುತ್ತಾ ಹುಬ್ಬಳ್ಳಿಗೆ ಬಂದು ಪಾ.ವೆಂ. ಅವರನ್ನು ಮಾತನಾಡಿಸುತ್ತಾರೆ. ಈ ಸಂದರ್ಶನ ಸಚಿತ್ರವಾಗಿದೆ. ಪಾ.ವೆಂ. ಅವರ ಮಾತಿನ ನಾಲ್ಕು–ಐದು ಮೋಡಿಗಳನ್ನು ಪಿ. ಹೆಚ್. ಚಂದ್ರಶೇಖರ ಛಾಯಾಗ್ರಾಹಕರು ಸೆರೆ ಹಿಡಿದಿದ್ದಾರೆ. 'ಜೀವನದಲ್ಲಿ ಲೈಂಗಿಕ ಸಮಾಧಾನದಿಂದ ಯಾರು ವಂಚಿತರಾಗಬಾರದು' ಎಂಬ ಶೀರ್ಷಿಕೆಯಿಂದ ಪಾಂಡುರಂಗ ಶಾಸ್ತ್ರಿಗಳು ಪಾ.ವೆಂ. ಅವರ ವಿಚಾರಗಳನ್ನು ವಿವರವಾಗಿ ಸಂಗ್ರಹಿಸಿದ್ದಾರೆ. ಇಲ್ಲಿ ಅವರೆತ್ತುವ ಪ್ರಶ್ನೆಗಳು ಸಮಕಾಲೀನ ಮತ್ತು ಸಮಾಜ ಮತ್ತು ಲೈಂಗಿಕತೆಯಿಂದ ಆರಂಭವಾಗಿ ಮಾನವ ಇತಿಹಾಸದ ಬೇರೆ ಬೇರೆ ಸಂದರ್ಭಗಳ ಉಲ್ಲೇಖನಗಳಿಂದ ತುಂಬಿದ ಮಾನವೀಯ ವಿಕಾಸನದಲ್ಲಿ ಹೆಣ್ಣು ಮತ್ತು ಗಂಡು ಸಮಾನವಾದ ಸಂವೇದನೆ, ಸ್ಥಾನ, ಮಾನ ಮತ್ತು ಪರಸ್ಪರ ವಿನಿಮಯದಲ್ಲಿ ಪ್ರಕೃತಿ ಸಹಜ ನ್ಯಾಯವನ್ನು ಪಡೆದಿದ್ದಾರೆಯೇ ಅಥವಾ ಸಾಮರಸ್ಯವನ್ನು ಸಾಧಿಸಿದ್ದಾರೆಯೇ ಎಂಬ ಅಂಶದ ಮೇಲೆ ಪಾ.ವೆಂ. ನವಿರಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಮಾನವ ಲೈಂಗಿಕತೆ, ನಾಗರೀಕತೆಯ ಬೆಳವಣಿಗೆಯ ಹಾದಿಯಲ್ಲಿ ಪಡೆದುಕೊಂಡಿರುವ ಆಕೃತಿ ಎದುರಿಸಿದ ವೈಶಮ್ಯಗಳನ್ನು ಪಾ. ವೆಂ. ಗಮನಹರಿಸುತ್ತಾರೆ. ಲೈಂಗಿಕ ಜೀವನ ವೈಯಕ್ತಿಕವಾಗಿದ್ದರೂ ಅದು ಗಂಡು ಹೆಣ್ಣಿನ ನಡುವಿನ ಮಾನಸಿಕ, ವೈಚಾರಿಕ, ಆರ್ಥಿಕ ವೈಶಮ್ಯಗಳಿಗೆ ಬಲಿಯಾಗಿ ನಿಜವಾದ ಸಮತೆಯನ್ನು ಸಾಧಿಸದೆ ಉಳಿದಿದ್ದನ್ನು ಸೋದಾಹರಣವಾಗಿ ತೋರಿಸಿದ್ದಾರೆ. ಮುಖ್ಯವಾಗಿ ಹೆಣ್ಣು ಸಮಾಜ ಹೊದಿಸಿದ ನೀತಿ, ನಿಯಮ ಮತ್ತು ಕಾನೂನುಗಳ ನಿರ್ಬಂಧಗಳಿಂದ ಶೋಷಣೆಗೆ ಒಳಗಾಗಿ ಲೈಂಗಿಕ ಸುಖ ಸೌಕರ್ಯಗಳಿಂದ ವಂಚಿತಳಾಗಿದ್ದಾಳೆ. ಇದರ ಕಾರಣ ಪರಿಣಾಮಗಳನ್ನು ಒಬ್ಬ ಪಾಲಕನಂತೆ, ಗುರುವಿನಂತೆ ಬಿಡಿಸಿ ನೋಡುತ್ತಾರೆ. ಅವರ ಚಿಂತನೆಯಲ್ಲಿ ಪುರುಷಪರವಾದ ಪೂರ್ವಾಗ್ರಹಗಳು ಒಂದೂ ಇಲ್ಲದಿರುವುದು ಗಮನಿಸಬೇಕಾದ ಅಂಶ. ಈ ಕಾರಣಕ್ಕೆ ಅವರೇ ಈ ಸಂದರ್ಶನ ಲೇಖನ ಮತ್ತು ಕಾಮಾರ್ಥ ಕೋಶದ ಏಳೆಂಟು ಲೇಖನಗಳು ವೈಚಾರಿಕ ಸಾಹಿತ್ಯದ ನೆಲೆಯನ್ನು ಗಳಿಸುತ್ತದೆ.

ಪತ್ರಿಕಾ ಅಥವಾ ಪುಸ್ತಕಗಳಲ್ಲಿ ಲೈಂಗಿಕ ವಿಷಯ ಪ್ರಕಟವಾಗಬೇಕೆ ಅದು ಜ್ಞಾನ ವಿಜ್ಞಾನದ ವಿಷಯವೇ ಎಂಬ ಪ್ರಶ್ನೆ ಅಥವಾ ಅನುಭವ ಅನೇಕರಿಗೆ ಇದೆ. ಕೆಲವರು

ತಿಳಿದಿರುವಂತೆ ಲೈಂಗಿಕ ಜೀವನ ಗುಪ್ತವಾಗಿರುವಂತದ್ದು. ಅದು ಕೇವಲ ಸಂತಾನವೃದ್ಧಿಗಾಗಿರುವ ಒಂದು ಪ್ರಕೃತಿ ಸಹಜ ವ್ಯವಸ್ಥೆ. ಲೈಂಗಿಕ ಕ್ರಿಯೆ ಪ್ರಕೃತಿ ಪ್ರೇರಿತ ಪ್ರೇಮ, ಆಕರ್ಷಣೆ ಮತ್ತು ದೈಹಿಕ ಹೊಂದಾಣಿಕೆ ಇವುಗಳಿಂದ ಸಾಧ್ಯವಾಗುವ ವಿಷಯ ಇದರ ಬಗ್ಗೆ ತಿಳಿಯುವ ಅಥವಾ ತಿಳಿಸುವ ಸಮಸ್ಯೆ ತೊಡಕು ಅಥವಾ ಬಿಕ್ಕಟ್ಟು ಏನೂ ಇಲ್ಲ. ಪಶುಪಕ್ಷಿ ಮೂಕಪ್ರಾಣಿಗಳು ಹೇಗೆ ಇದರ ಅಭಿವ್ಯಕ್ತಿಯಲ್ಲಿ ಸಹಜವಾಗಿ ತೊಡಗಿ ಅಪೇಕ್ಷಿತ ಫಲ ಸುಖ ಮತ್ತು ಸಂತಾನ ಫಲವನ್ನು ಪಡೆದು ವಿರಮಿಸುತ್ತದೆಯೋ ಹಾಗೆ ಇದೂ ಎಂದೂ ಭಾವಿಸಿದವರು ಲೈಂಗಿಕ ವಿಷಯದ ಚರ್ಚೆ ಪ್ರದರ್ಶನಕ್ಕೆ ತಡೆ ಒಡ್ಡುತ್ತಾರೆ. ೨. ಲೈಂಗಿಕ ಜೀವನಕ್ಕೆ ಕಾರಣವಾಗುವ ದೇಹದ ಅಂಗಾಗಳನ್ನು ಗುಪ್ತವಾಗಿಟ್ಟು ಅವುಗಳ ಕ್ರಿಯೆ – ಪ್ರತಿಕ್ರಿಯೆಗಳು ಕೂಡ ಅಸಹ್ಯವೆಂದು ಭಾವಿಸುವ ನಾಗರೀಕ ಸಮಾಜದ ಪೂರ್ವಾಗ್ರಹ ಕೂಡ ಲೈಂಗಿಕತೆಯನ್ನು ಒಂದು ವಿಚಾರವಾಗಿ ವಿಜ್ಞಾನವಾಗಿ ತಿಳಿಯುವುದು ಅಸಭ್ಯವೆಂದು ಭಾವಿಸಿದೆ.

ಮಾನವ ಜೀವನದಲ್ಲಿ ಲೈಂಗಿಕತೆಯನ್ನು ಮುಖ್ಯವಾಗಿ ದಾಂಪತ್ಯದ ಚೌಕಟ್ಟಿಗೆ ಒಳಪಡಿಸಿ ವಿಚಾರಿಸಲಾಗಿದೆ. ಪಾ.ವೆಂ. ಅವರು ದಾಂಪತ್ಯ ಜೀವನವನ್ನು ಧರ್ಮವೆಂದು ಪರಿಗಣಿಸುತ್ತಾರೆ. ಅಂದರೆ ಒಂದು ಗಂಡಿಗೆ ಒಂದು ಹೆಣ್ಣು ಎಂಬ ಪ್ರಾಥಮಿಕ ತಿಳುವಳಿಕೆ. ಇದನ್ನು ಪ್ರೀತಿಯ ಸಂಬಂಧಕ್ಕೂ ಅವಿವಾಹಿತರಾದ ಗಂಡು ಹೆಣ್ಣಿನ ಸಂಬಂಧಕ್ಕೂ ಅನ್ವಯಿಸುತ್ತದೆ. ಈ ಬಗೆಯ ಸಂಬಂಧ ದೈಹಿಕವಾಗಿ ಮಾನಸಿಕವಾಗಿ ಸ್ವಾಸ್ಥ್ಯವೂ ನಿಷ್ಕಳಂಕವೂ ಆಗಿ ಉಳಿದಾಗ ಸಮಾಜ ಜೀವನಕ್ಕೆ ಒಂದು ನೀತಿಯ ಬುನಾದಿ ಹಾಕಿದಂತೆ ಆದರೆ ಅಜ್ಞಾನ, ಅರೆಜ್ಞಾನ, ಮಡಿವಂತಿಕೆಯ ಸೋಗು ಮತ್ತು ಹತ್ತಿಕ್ಕಲಾಗದ ಚಪಲ ಬಿತ್ತತೆ ಪ್ರಧಾನವಾದಾಗ ಲೈಂಗಿಕ ಜೀವನದ ಅನೇಕ ಸಮಸ್ಯೆಗಳಿಗೆ ಮೂಲವಾಗುತ್ತದೆ. ಇವುಗಳಲ್ಲಿ ಅತ್ಯಂತ ಮಹತ್ವದ್ದು ಅತೃಪ್ತಿ ಎಂಬ ಮನೋದೈಹಿಕ ಕೊರಗು ಹೆಣ್ಣನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಅಸಮಾನತೆಯಿಂದ ಕಾಣುವ ಪದ್ಧತಿ ಬೆಳೆದದ್ದರಿಂದ ಹೆಣ್ಣಿಗೆ ಲೈಂಗಿಕ ಸುಖ ಒಂದು ಮರೀಚಿಕೆಯಾಗಿ ಕಾಡುವುದುಂಟು. ಜೊತೆಗೆ ವೈಧವ್ಯ ಅವಿವಾಹಿತ ಸ್ಥಿತಿ ಮನೋವೈಕಲ್ಯ ಹೆಣ್ಣನ್ನು ವಂಚಿತರನ್ನಾಗಿ ಮಾಡುವ ವಾಸ್ತವವು ಉಂಟು. ಇಂತಹ ದುಸ್ಥಿತಿಗಳನ್ನು ನಿವಾರಿಸಿ ಒಂದು ಸ್ವಸ್ಥ ಸುಂದರ ಲೈಂಗಿಕ ಜಗತ್ತನ್ನು ಗಂಡು ಹೆಣ್ಣುಗಳಿಗೆ ನಿರ್ಮಿಸಿ ಕೊಡುವುದು ಲೈಂಗಿಕ ಜ್ಞಾನ ವಿಜ್ಞಾನದ ಕರ್ತವ್ಯ. ಮಡಿವಂತಿಕೆಯ ಸೋಗನ್ನು ತೆಗೆದು, ಮುಜುಗರ, ಜಿಗುಪ್ಸೆ, ಸಂಕುಚಿತತೆಯನ್ನು ಮನಸ್ಸಿನಿಂದ ತೆಗೆದು ವ್ಯಕ್ತಿ ಸಮಸ್ಯೆಗೆ ಪರಿಹಾರಬೇಕೆಂಬ ಗುರಿಯಾಗಿಟ್ಟುಕೊಂಡು ಪಾ.ವೆಂ. ಅಂತವರು ತಮ್ಮ ಲೇಖನಗಳನ್ನು ಪತ್ರಿಕೆಗಳ ಮೂಲಕ ಹೊರ ಹಾಕಿದ್ದಾರೆ. ಒಟ್ಟಿನಲ್ಲಿ ಲೈಂಗಿಕ ವಿಜ್ಞಾನ, ವಿಜ್ಞಾನ ಸಮೂಹ ಶಿಕ್ಷಣದ ಒಂದು ಪಠ್ಯವೆಂದು ಪರಿಗಣಿಸುವ ಅಗತ್ಯವನ್ನು ಪಾ.ವೆಂ. ಸೂಚಿಸುತ್ತಾರೆ.

ಕಾಮಾರ್ಥ ಕೋಶದ ಏಳೆಂಟು ಲೇಖನಗಳಲ್ಲಿ ಪಾ.ವೆಂ. ಪ್ರಸ್ತಾಪಿಸುವ ವಿಷಯಗಳು ಲೈಂಗಿಕ ಜೀವನದ ಸುಖ ಮತ್ತು ಸೌಂದರ್ಯ ಪ್ರಜ್ಞೆಯನ್ನು ಒಳಗೊಂಡಿದೆ. ಗಂಡು ಹೆಣ್ಣಿನ ನಡುವಿನ ದೈಹಿಕ ಆಕರ್ಷಣೆ ಮತ್ತು ಅದನ್ನು ಒಳಗೊಳ್ಳುವ ಪ್ರಕೃತಿ ಸಹಜ ಅನುಕೂಲತೆಗಳು ಯಾವುವು ಎಂಬುದು ಪಾ.ವೆಂ. ಪಟ್ಟಿ ಮಾಡಿದ್ದಾರೆ. ಅವರ ಈ ಲೇಖನಗಳಲ್ಲಿ ಲೈಂಗಿಕ ತಜ್ಞನ ವಸ್ತು ನಿಷ್ಠ ದೃಷ್ಟಿಯೂ ಇದೆ, ಒಬ್ಬ ಕವಿಯ **ರಸಬಜ್ಞತೆಯ** ಶೃಂಗಾರ ಕಲ್ಪನೆಯ ಅನುಭವಗಳು ಇವೆ. ಈ ತಿಳುವಳಿಕೆಯನ್ನು ಮನದಟ್ಟು ಮಾಡಿಕೊಂಡಾಗ ಲೈಂಗಿಕ ಜೀವನದ ಅರ್ಥಪೂರ್ಣವಾದ ಸುಖ ಜೀವನ ಸಾಧ್ಯವಾಗುತ್ತದೆ. ಏಕೆಂದರೆ ಇಪ್ಪತ್ತೊಂದನೇ ಶತಮಾನಕ್ಕೆ ಬಂದಿಸುವ ನಾವು ಯಾವುದೇ ಅಜ್ಞಾನ, ಪೂರ್ವಾಗ್ರಹಪೀಡಿತ ಸಂಕುಚಿತತೆಯಿಂದ ಜೀವನವನ್ನು ಕುಗ್ಗಿಸಿಕೊಳ್ಳಬೇಕಾಗಿಲ್ಲ ಜ್ಞಾನದ ಬೆಳಕು ಎಲ್ಲದರ ಮೇಲೆ ಹರಿಸಿ ಆ ವಸ್ತು ಅಥವಾ ಅನುಭವದ ಸೌಂದರ್ಯವನ್ನು ಸತ್ಯವನ್ನು ಶಿವವನ್ನು ನಾವು ಪಡೆದು ಪರಿಪೂರ್ಣರಾಗಬೇಕಾಗಿದೆ. ಈ ದೃಷ್ಟಿಯಿಂದ ಪಾ.ವೆಂ. ಅವರ ಲೇಖನಗಳು ಲೈಂಗಿಕ ಶಿಕ್ಷಣದ ಪಾಠಗಳಾಗಿ ಪತ್ರಿಕೆಯ ಮೌಲ್ಯವನ್ನು ಬೆಳೆಸಿದೆ.

೧.ಕಾಮಾರ್ಥ ಕೋಶವೆಂಬ ಈ ಲೇಖನಗಳು ಕಾಮಜೀವನದ ಮನೋದೈಹಿಕ ಅಂಶ ಮತ್ತು ಅಂಗಾಂಗಳ ಬಗ್ಗೆ ನೀಡಲಾದ ವರ್ಣನಾತ್ಮಕ ವಿವರಗಳಾಗಿವೆ.

೧.	ಕಾಮಶಬ್ದದ ನಿರ್ವಚನ	೧೯೮೬ ಮಾರ್ಚ
೨.	ಪುರುಷ ಗುಪ್ತಾಂಗ	೧೯೮೬ ಎಪ್ರೀಲ್
೩.	ಪುರುಷ ಗುಪ್ತಾಂಗ	೧೯೮೬ ಜೂನ್
೪.	ವೃಷಣ ಮಹಿಮೆ	೧೯೮೬
೫.	ಸೊಂಟದ ಕೆಳಗೆ	೧೯೮೬ ಡಿಸೆಂಬರ್
೬.	ಮುತ್ತು ಬೇಕೆ ಮುತ್ತು	೧೯೮೭ ಮಾರ್ಚ
೭.	ಕುಪ್ಪುಸದ ಅವತಾರಗಳು	೧೯೮೭ ಫೆಬ್ರುವರಿ
೮.	ಮೊಲೆಯ ಮಹಿಮೆ	೧೯೮೬ ಅಕ್ಟೋಬರ

ಮೇಲ್ಕಂಡ ಕಾಮಾರ್ಥಕೋಶಕ್ಕೆ ಮುನ್ನುಡಿಯೆಂಬಂತೆ ರತಿವಿಜ್ಞಾನ ದರ್ಪಣದ ನವೆಂಬರ್ ೧೯೮೫ರ ಸಂಚಿಕೆಯಲ್ಲಿ ಪತ್ರಿಕೆಯ ಪರವಾಗಿ ಪಾಂಡುರಂಗ ಶಾಸ್ತ್ರಿಯವರು ಪಾ.ವೆಂ. ಅವರನ್ನು ಬೇಟಿಮಾಡಿ ತೆಗೆದುಕೊಂಡ ಸಂದರ್ಶನ ಲೇಖನವಿದೆ. ಈ ಸಂದರ್ಶನವನ್ನು ಛಾಯಾಗ್ರಾಹಕ ಪಿ.ಯಸ್. ಚಂದ್ರಶೇಖರ ಸೆರೆಹಿಡಿದಿದ್ದಾರೆ.

೮. ಮಂಜೂಷ:

ಮಂಜೂಷ ೧೨ ಲೇಖನಗಳ ಸಂಕಲನದಲ್ಲಿ ಪಾ.ವೆಂ. ಅವರ ಅಭಿಪ್ರಾಯ, ಆಲೋಚನೆಗಳು ಒಂದು ಪೆಟ್ಟಿಗೆ ಒಳಗೆ ಅಡಕವಾಗಿದೆ. ಆಧುನಿಕ ಭಾರತವೆಂದರೆ ಸ್ವತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಜೀವನ ಮೌಲ್ಯಗಳ ಅರ್ಥಪೂರ್ಣ ಸಾಂಗತ್ಯ. ಸ್ವಾತಂತ್ರ್ಯ

ಎಂಬುದು ವ್ಯಕ್ತಿಗತ ಕಲ್ಪನೆ. ಇವರ ಶಕ್ತಿ ಮತ್ತು ಮಿತಿ ವಾದಕ್ಕೂ ಚರ್ಚೆಗೂ ಒಳಗಾಗುವಂತದು. ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾಗಿ ಮಾತು ವಾದದ (ಅಭಿವ್ಯಕ್ತಿ) ಮತ್ತು ವೈಯಕ್ತಿಕ ಆಸ್ತಿಯನ್ನು ಹೊಂದುವುದರಲ್ಲಿ ಎಂದಿನಿಂದಲೂ ಸ್ಥಾಪಿತವಾಗಿದೆ. ಮಾತಿನಿಂದಲೇ ಆಳುವ ಜಾಣರು ತಮ್ಮ ಮಾತಿಗೆದುರಾಗಿ ಬರುವ ಶುದ್ಧ ಪ್ರಾಮಾಣಿಕ ಮಾತುಗಳನ್ನು ಸಹಿಸುತ್ತಾರೆಂಬುದು ಕ್ವಚಿತ್ (ಕಡಿಮೆ) ಇದನ್ನು ಜಾಗತಿಕ ವಿಚಾರವಾದದ ಮೂಲಋಷಿ ಸಾಕ್ರೇಟಿಸ್ ಎದುರಿಸಬೇಕಾಯಿತು. ಯಾವುದೇ ಸಮಾಜದಲ್ಲಿ ಮಾತಿನ ಸ್ವಾತಂತ್ರ್ಯಕ್ಕೆ ಅಧಿಕಾರ ಮತ್ತು ಹಣದ ಬಲ ಬೆಂಬಲವಾಗಿ ಬಂದಿದೆ. ಮಾತಿನ ಸ್ವಾತಂತ್ರ್ಯದಿಂದ ಒಳ್ಳೆಯವಿಚಾರಗಳು, ಸರಿಯಾದ ಕಲ್ಪನೆಗಳು, ಸಿದ್ಧಾಂತಗಳ ಪ್ರಕಟವಾಗುತ್ತಲೇ ಬಂದಿದೆ. ಅವು ಜ್ಞಾನನಿಧಿ ಕೋಶಗಳಾಗಿ ಬೌದ್ಧಿಕ ವ್ಯಕ್ತಿಗಳ ಶಕ್ತಿಗಳಾಗಿ ಉಳಿದಿವೆ ಹೊರತು ಸಮಾಜಗಳನ್ನು ಜ್ಞಾನದ ಉನ್ನತ ಮಟ್ಟಕ್ಕೆ ಒಯ್ದು ಮಾನವೀಯ ಮೌಲ್ಯಗಳನ್ನು ಆಚರಣೆಗೆ ನೆಲೆಗಟ್ಟಾಗಿದೆಯೇ ಎಂಬುದು ನಾವು ಮತ್ತೆ ಮತ್ತೆ ನಡೆಸುತ್ತಿರುವ ಚರ್ಚೆ. ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಸಾರ್ವಜನಿಕ, ಅಷ್ಟೇ ಅಲ್ಲ ಸ್ವತಂತ್ರ್ಯ ವಿಚಾರಗಳನ್ನು ಜಾರಿಗೆ ತರಲು ಅಥವಾ ಆಚರಿಸಲು ಇಲ್ಲಿ ಸಾಕಷ್ಟು ಅವಕಾಶವಿದೆ. ವ್ಯಕ್ತಿ ಮತ್ತು ಸಮುದಾಯ ಎರಡು ಒಂದಕ್ಕೊಂದು ಪೂರಕವಾಗಿ ಜ್ಞಾನವನ್ನು ಆಚರಣೆಗೆ ತರುವುದಕ್ಕೂ ಇದೊಂದು ಶ್ರೇಷ್ಠ ವ್ಯವಸ್ಥೆ. ಇದರ ಪರಿಣಾಮವಾಗಿ ರಾಜಕೀಯಕ್ರಾಂತಿ, ಸಾಮಾಜಿಕ ಬದಲಾವಣೆಗಳು, ವಿಕಾಸ ಸಾಕಷ್ಟಾಗಿದೆ. ಆದರೆ ಮಾನವನ ಪ್ರವೃತ್ತಿಯಲ್ಲಿಯೇ ಇರುವ ದ್ವಂದ್ವಗಳು, ವಿರೋಧಾಬ್ಯಾಸಗಳು ಕ್ರಾಂತಿಯನ್ನು ವಿಫಲಗೊಳಿಸಿದ್ದುಂಟು. ಬೌದ್ಧಿಕತೆ, ನಿಷ್ಪಕ್ಷ ಪಾತವೂ, ನಿಸಾರ್ಥವೂ, ನಿರ್ಭಯವೂ, ಪೂರ್ವಗ್ರಹರಹಿತವೂ ಆಗಿ ಆಚರಣೆಗೂ ನಡೆನುಡಿಗೂ, ಸಂಬಂಧ ಉಂಟಾಗುವುದು ಯಾವ ಸಂದರ್ಭದಲ್ಲಿ ಎಂಬುದು ಬಗೆಹರಿಯದ ಕಗ್ಗಾಂಟಾಗಿದೆ. ವಿಚಾರವಾದದ ಒಬ್ಬ ಪ್ರಕರ ಲೇಖಕನಾಗಿ ಪಾ.ವೆಂ. ಸರ್ವತಂತ್ರ ಸ್ವತಂತ್ರ ಚಿಂತಕನಾಗಿ ನಿಲ್ಲುವ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಇದರ ಪರಿಣಾಮವಾಗಿ ಅವರು ಧ್ಯಾನಸ್ಥ ಸ್ಥಿತಿಯಲ್ಲಿದ್ದುಕೊಂಡು ಪ್ರಚಲಿತ ವಿದ್ಯಮಾನಗಳ ಕುರಿತು ವಿಶ್ಲೇಷಿಸುತ್ತಾರೆ. ಪಾ.ವೆಂ. ಅವರ ವಿಶ್ಲೇಷಣೆಯ ಉದ್ದೇಶ ಸತ್ಯದ ಹುಡುಕಾಟ ಮತ್ತು ನ್ಯಾಯದ ನಿಲುಗಡೆ. ಇದಕ್ಕಾಗಿ ಅವರು ನಾಲ್ಕು ಪ್ರಮಾಣಗಳನ್ನು ಅನುಸರಿಸುತ್ತಾರೆ. ಇವು ೧. ಪ್ರತ್ಯಕ್ಷ ೨. ಉಪಮಾನ ೩. ಅನುಮಾನ ೪. ಶಾಬ್ಧ ಈ ನಾಲ್ಕು ಪ್ರಮಾಣಗಳು ಒಂದನೊಂದು ಅವಲಂಭಿಸಿವೆ ಮತ್ತು ಕ್ರಮಾಗತವಾಗಿ ಒಂದರೊಳಗೊಂದು ಸಂಬಂಧ ಏರ್ಪಡಿಸಿಕೊಂಡು ಆಯ್ದುಕೊಂಡ ವಿಚಾರಕ್ಕೆ ಒಂದು ಸ್ವರೂಪ ಜ್ಞಾನ ಕೊಡುತ್ತದೆ. ಪಾ.ವೆಂ. ಅವರದು ವಿಚಾರ ಕ್ರಾಂತಿಯ ಅನುಕರಣೆ ಜಗತ್ತಿನ ಇತಿಹಾಸವನ್ನು ಬಲ್ಲವರಾದ ಇವರು ಮಾನವ ವ್ಯಕ್ತಿ–ಸಮಾಜ–ಸಾಹಿತ್ಯ–ಸಾಂಸ್ಕೃತಿ ಈ ನಾಲ್ಕು ಜೀವನಾಂಶಗಳ ಸ್ವರೂಪವನ್ನು ಅಭ್ಯಸಿಸುತ್ತಿರುವ ಜಿಜ್ಞಾಸುವೂ ಆಗಿದ್ದಾರೆ. ಜೊತೆಗೆ ಸಹಿಷ್ಣುತಾ ಗುಣವನ್ನು ಹೊಂದಿದ್ದಾರೆ. ಹೀಗೆ ಒಬ್ಬ ವಿಚಾರವಾದಿಯ ಮುಖ್ಯ ವೃತ ವಿಚಿಕಿತ್ಸೆ. ಇದನ್ನು

ಅವರು ಪಾಲಿಸಿಕೊಂಡು ಬಂದಿದ್ದಾರೆ. ಹೀಗಾಗಿ ಪಾ.ವೆಂ. ಅವರ ವಿಶ್ಲೇಷಣಾ ಲೇಖನಗಳಲ್ಲಿ ಐತಿಹಾಸಿಕ ದೃಷ್ಟಿ, ತಾರತಮ್ಯ ದೃಷ್ಟಿ ಪರಾಕ್ರಮ ದೃಷ್ಟಿ ಎದ್ದು ಕಾಣುತ್ತದೆ. ಜೊತೆಗೆ ಔಧಾರ್ಯ ಗುಣವೂ ಕಂಡುಬರುತ್ತವೆ.

'ಜಾತಿ ಪದ್ಧತಿ ಒಂದು ಐತಿಹಾಸಿಕ ವಿಶ್ಲೇಷಣೆ' ಹಾಗೂ 'ಹರಿಜನರ ಸಮಸ್ಯೆ' ಕೆಲ ಅನಿಷ್ಟ ಲಕ್ಷಣಗಳು. ಈ ಎರಡು ಲೇಖನಗಳಲ್ಲಿ ಭಾರತೀಯ ಸಮಾಜ ವ್ಯವಸ್ಥೆಯ ಅಡಿಗಲ್ಲಾನ್ನು ಪರೀಕ್ಷಿಸುವ ಅಂಶಗಳಿವೆ. ಇಂದು ಈ ಸಮಸ್ಯೆಗಳಿಗೆ ತಳೆದಿರುವ ರಾಜಕೀಯ ಆರ್ಥಿಕ ಆಯಾಮಗಳು ದೇಶದ ಸ್ವಾತಂತ್ರ್ಯ ಮತ್ತು ಪ್ರಜಾತಾಂತ್ರಿಕ ನೆಲೆಯಲ್ಲಿಯೇ ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿದೆ. ಆದರೆ ಸ್ವಾತಂತ್ರ್ಯವನ್ನು ವ್ಯಕ್ತಿನೆಲೆಯಲ್ಲಿ ಮಾತ್ರ ಅನುಭವಿಸುವ ವ್ಯಕ್ತಿಗಳು ಹಾಗೂ ಪ್ರಜಾತಾಂತ್ರಿಕ ಅನುಕೂಲಗಳನ್ನು ಅಧಿಕಾರದ ನೆಲೆಯಲ್ಲಿ ಅನುಭವಿಸುವವರು ಸಮಸ್ಯೆಗಳನ್ನು ಪರಿಹರಿಸುವ ಅಥವಾ ನ್ಯಾಯೈಕ ದೃಷ್ಟಿಯನ್ನು ಕೊಡುವ ದಿಸೆಯಲ್ಲಿ ಕುರುಡರಾಗುತ್ತಿದ್ದಾರೆ. ಡಾ.ಅಂಬೇಡ್ಕರ್, ಡಾ.ರಾಮಮನೋಹರ್ ಲೋಹಿಯ ಈ ಸಮಸ್ಯೆಗಳ ನೆಲೆಯನ್ನು ತಮ್ಮ ಲೇಖನಗಳಿಂದ ಮತ್ತು ಅಧಿಕಾರೇತರ ವರ್ತನೆಯಿಂದ ಜನತೆಯ ಎದುರು ನಿಸ್ಪೃಹವಾಗಿ ಮಂಡಿಸಿದ್ದಾರೆ. ಅಂಬೇಡ್ಕರ್‌ವಾದ ಲೋಹಿಯಾವಾದ ರಾಜಕೀಯ ತತ್ವಜ್ಞಾನದ ಶಿಖರಗಳಾಗಿ ಕಡೆದ ೬೦ ವರ್ಷಗಳಿಂದ ಭಾರತದಲ್ಲಿ ಚರ್ಚೆಗೆ ಒಳಗಾಗುತ್ತಲೇ ಇವೆ. ಇವುಗಳನ್ನು ಗಮನಿಸಿರುವ ಪಾ.ವೆಂ. ತಮ್ಮ ವಿಶ್ಲೇಷಣೆಗೆ ಹೆಚ್ಚಿನ ಅಂಶಗಳನ್ನು ಸೇರ್ಪಡೆ ಮಾಡಿದ್ದಾರೆ. ರಾಜಕಾರಣ ಮತ್ತು ಧರ್ಮಕಾರಣ ಒಂದರೊಳಗೊಂದು ಸೇರಿಕೊಂಡು ವ್ಯಕ್ತಿಸ್ವಾತಂತ್ರ್ಯಕ್ಕೂ ಪ್ರಜಾತಾಂತ್ರಿಕ ಬದಲಾವನೆಗೂ ಎದುರಾಳಿಯಾಗಿವೆ. ಈ ಐತಿಹಾಸಿಕ ವಾಸ್ತವವನ್ನು ಅಂಬೇಡ್ಕರ್ ಮತ್ತು ಲೋಹಿಯಾ ಅವರು ಗಮನಿಸಿದನ್ನು ಉಲ್ಲೇಖಿಸಿ ವಿಚಾರವಾದದ ವ್ಯಾಪಕತೆಯೊಂದೇ ಇಂತಹ ಜ್ವಲಂತ ಸಮಸ್ಯೆಯ ನಿವಾರಣೆಗೆ ಬೆಳೆಯಬೇಕಾಗಿದೆ ಎಂದು ಆಶೀಸುತ್ತಾರೆ. ಆದರೆ ವಿಚಾರವಾದ ಹಾದಿಗುಂಟ ನಡೆಯುವವರು ಜೀವನವನ್ನು ಸಮನ್ವಯ ದೃಷ್ಟಿಯಿಂದ (Integrated Outlouck) ನೋಡುವ, ಬುದ್ಧಿ ಮತ್ತು ಗುಣವನ್ನು ಕಳೆದುಕೊಂಡದ್ದು ಕಳವಳಕಾರಿ. ಚಿಕ್ಕ ಪುಟ್ಟ ಸಂಗತಿಗಳಿಗೆ ಅನಗತ್ಯ ಮಹತ್ವಗೊಟ್ಟು, ಕೂಗಾಡುವ, ರೇಗಾಡುವ, ಹೋರಾಡುವ ವಿಚಾರವಾದಿಗಳೆಂಬವರು ವ್ಯಕ್ತಿವಾದಿಗಳಾಗಿ ಉಳಿದುಬಿಡುತ್ತಾರೆ. ಇದರಿಂದ ಹಠವಾದ, ಮಠವಾದ, ಮತವಾದ ಬೆಳೆಯುತ್ತಿವೆಯೇ ಹೊರತು ವಿಚಾರಕ್ರಾಂತಿಯ ಅನುಸರಣೆ ಹಿಂದೆಯೇ ಉಳಿಯುತ್ತದೆ.

ಮತವಾದವೆಂದರೆ ೧. Religion ಮತ್ತು Cast ಇವೆರಡೂ ಸೇರಿ ಮತ (Religion) ಇದನ್ನು ಸಮಾಜವ್ಯವಸ್ಥೆಯ ಮೂಲ ಸ್ವರೂಪವಾಗಿ ಇಟ್ಟು, ಸಂಪ್ರದಾಯವನ್ನು ಸ್ಥಾಪಿಸಿ ಜನಸಮೂಹವನ್ನುವಿಂಗಡಿಸಿ ಇಡುವ ಜಾತಿ ರಾಜಕಾರಣ.

೨. ಮತ ಎಂದರೆ Vote. ಚುನಾವಣಾ ಪ್ರಕ್ರಿಯೆ ಕೇಂದ್ರ ಅಂಶ ಜನತಾಂತ್ರಿಕ ಆದರ್ಶದ ಅತ್ಯಮೂಲ್ಯ ಪ್ರಮುಖ ಗೊತ್ತು ಗುರಿ. ಆಡಳಿತ ಶಕ್ತಿಯ ವಿಕೇಂದ್ರಿಕರಣವನ್ನು

ಅನುಸರಿಸಿ ಸ್ವತಂತ್ರ ಭಾರತದಲ್ಲಿ ಗ್ರಾಮ, ಪಟ್ಟಣ (ಪುರ) ನಗರ, ಮಹಾನಗರ ಮುಂತಾದ ಸ್ಥಿರ ಆಡಳಿತಕ್ಕೆ ಚುನಾವಣೆ ಮೇಲಿಂದ ಮೇಲೆ ನಡೆಯುತ್ತದೆ. ಈ ಸಂದರ್ಭಗಳಲ್ಲಿ ಮತದಾರರ ಸಾಂಪ್ರದಾಯಿಕ ಕುಲ, ಜಾತಿ, ವೃತ್ತಿ, ವರ್ಗ ಮುಂತಾದ ಸಮಾಜ ವಿಭಜಕ ಅಂಶಗಳನ್ನು ಗಮನಕ್ಕೆ ತಂದು ಮತದಾರರನ್ನು ಸಾಂಪ್ರದಾಯಿಕ ಮನಸ್ಥಿತಿಗೆ ಇಳಿಸುವ ರಾಜಕೀಯ ಕೂಡ ನಡೆಯುತ್ತದೆ. ಹೀಗಾದಾಗ ಜಾತಿ ಪದ್ಧತಿ ಮತ್ತು ಮತ ವ್ಯವಸ್ಥೆ ಆಧುನಿಕವಾಗಿ ಬೆಳೆಯಬೇಕಾದ ವಸ್ತುನಿಷ್ಟ, ಪ್ರಜಾಪ್ರಭುತ್ವಕ್ಕೆ ಅಡ್ಡಿ ತರುತ್ತಿವೆ. ವಿಶ್ವವಿದ್ಯಾಲಯದಂತಹ ಶಿಕ್ಷಣ ಕೇಂದ್ರಗಳಲ್ಲಿಯೂ ಜ್ಞಾನಾರ್ಜನೆಯ ವಿಧಿವಿಧಾನಗಳ ವಿಸ್ತರಣೆಯ ಸಂದರ್ಭದಲ್ಲಿ ಶಿಕ್ಷಕರ, ಸಂಶೋಧಕರ, ವಿಷಯ ತಜ್ಞರ ಮನಸ್ಸಿನಲ್ಲಿ ಜಾತಿಭೂತ ಪ್ರವರ್ತಿಸುತ್ತಿವೆ. ಇದು ವಿಚಾರವಾದದ ಅನುಷ್ಠಾನಕ್ಕೆ ಒಡ್ಡಿರುವ ದೊಡ್ಡ ಆತಂಕ. ಈ ಲೇಖನದಲ್ಲಿ ವರ್ಣ, ಜಾತಿ ಪದ್ಧತಿಗಳ ವಿಶ್ಲೇಷಣೆ ಮಾಡುವಾಗ ಪಾ.ವೆಂ. ಎದುರಿಸಿದ ಆತಂಕ ಕೂಡ ಹೌದು. ಇದನ್ನು ಪರಿಹರಿಸಿಕೊಳ್ಳುವ ಶಕ್ತಿಯೂ, ಯುಕ್ತಿಯೂ ಅವರಿಗಿರುವುದರಿಂದ ತಟಸ್ಥ ಮನೋವೃತ್ತಿಯಿಂದ ಅವರು ಮಂಡಿಸುವ ಅಂಶಗಳು ಹೀಗಿವೆ.

'ಧ್ಯೇಯವಾದ' ಅದಕ್ಕೆ ತಳಹದಿಯಾದ 'ವಿಚಾರ ಪ್ರಣಾಳಿ' (Ideology) ಮತ್ತು ನಿರ್ಣಾಯಕ ಸಂಗತಿಗಳು ಜನಮಾನಸದಲ್ಲಿ ರೂಢಿಗೊಳ್ಳಬೇಕು. ಇದಕ್ಕೆ ನಿರ್ಮಮತೆಯ, ನಿರಂಹಕಾರದ ಕಾರ್ಯಕರ್ತರು ಸಿದ್ಧವಾಗಬೇಕು. ಅಂತಹ ಸಿದ್ಧತೆಗೆ ಪಾ.ವೆಂ. ಓದುಗರನ್ನು ಅಣಿಗೊಳಿಸುತ್ತಿದ್ದಾರೆಂಬುದು ಇವೆರಡೂ ಲೇಖನದ ತಾತ್ಪರ್ಯವಾಗಿದೆ.

ಬ್ರಾಹ್ಮಣರೇನು ಮಾಡಬೇಕು ಎಂಬ ಪಾ.ವೆಂ. ಲೇಖನವೂ ಜಾತಿ ಬ್ರಾಹ್ಮಣರೆನಿಸಿಕೊಂಡ ವರ್ಗದವರಿಗೆ ಕೊಟ್ಟ ವಿಚಾರವಾದದ ಕರೆಯಾಗಿದೆ. ಭಾರತದಲ್ಲಿಯ **'ಜಾತಿ ಸಮಸ್ಯೆ'** ನೆಲದಲ್ಲಿ ಬೇರುಬಿಟ್ಟು, ಆಕಾಶದಲ್ಲಿ ಬಿಳಲುಬಿಟ್ಟ ಅಲೆ ಆಳ ಮತ್ತು ಅತಿವ್ಯಾಪಕ ಸಮಸ್ಯೆಯಾಗಿದೆ. ಅದು ರೋಗಗ್ರಸ್ಥ ಸಮಾಜವನ್ನು ಬೆಳೆಸುತ್ತಿದೆ. ಮೊದಲು ನಾವು ಸ್ವಸ್ಥಚಿತ್ತ ನಾಗರಿಕರಾಗಿ, ರೋಗ ವಿದೂರರಾಗಿ ನೆಲೆಗೊಳ್ಳಬೇಕಾಗಿದೆ. ಪಾ.ವೆಂ. ಅವರ ವಿಚಾರೆತ್ಸಕ ಚಿಕಿತ್ಸೆ ನಮ್ಮನ್ನು ನಿರೋಗಿಗಳನ್ನಾಗಿ ಮಾಡಬಲ್ಲದಾಗಿದೆ.

ಬತ್ತಲೆ; ಮಂತ್ರದಲ್ಲಿ, ಮಾಟದಲ್ಲಿ, ಭಕ್ತಿಯಲ್ಲಿ ಎಂಬ ಲೇಖನ ಒಂದು ಸಂದರ್ಭದಲ್ಲಿ ಬರೆದುದಾಗಿದೆ. ಚಂದ್ರಗುತ್ತಿಯಲ್ಲಿ ರೇಣುಕಾ ದೇವಿಯ ಭಕ್ತರು ಗಂಡು-ಹೆಣ್ಣು ಎಂಬ ಬೇಧವಿಲ್ಲದೆ ನಗ್ನರಾಗಿ (ಆದರೆ ಸೊಂಟದ ಕೆಳಗೆ ಬೇವಿನ ಎಲೆಯಿರುವ ಟೊಂಗೆಗಳನ್ನು ಉಟ್ಟುಕೊಂಡು ಸ್ತ್ರೀಯರು ಎದೆ ಮುಚ್ಚುಕೊಳ್ಳುವುದು ಅರೆನಗ್ನಾವಸ್ಥೆಯಲ್ಲಿ) ಗುಡ್ಡದ ಮೇಲಿರುವ ದೇವಸ್ಥಾನಕ್ಕೆ ಅಡ್ಡ ಬರುವ ಒಂದು ನದಿಯನ್ನು ದಾಟಿ ಸಾಗುತ್ತಾರೆ. ಅವರೆಲ್ಲರೂ ಇಹಲೋಕದ ಪರವೆಯಿಲ್ಲದ ಭಕ್ತಿಯ ಆವೇಶದಿಂದ ಸಾಮೂಹಿಕವಾಗಿ ದೇವಿಗೆ ಹರಕೆ ಹೊತ್ತು ಹೀಗೆ ಭಕ್ತಿಯನ್ನು ಆಚರಿಸುತ್ತಾರೆ. ಇದು ಪ್ರದರ್ಶನ ಅಥವಾ

ಪ್ರಚಾರ ಅಲ್ಲ. ಎಷ್ಟೋ ಕಾಲದಿಂದ ನಡೆದುಕೊಂಡು ಬಂದ ಒಂದು ಸಾಮೂಹಿಕ ಆಚರಣೆ. (Ritual) ಇದನ್ನು ೧೯೮೦ ಹೊತ್ತಿಗೆ ಗಮನಿಸಿದ ವಿಚಾರವಾದಿಗಳು ಇದರ ವಿರುದ್ಧ ಸರಕಾರದ ಗಮನ ಸೆಳೆದರು. ಇದು ಇಂತಹ ಅನಿಷ್ಟ, ಅನಾಗರಿಕ ಪದ್ಧತಿ ಶೋಷಣೆಯ ಒಂದು ವಿಧಾನವಾಗಿದೆಯೆಂದು ಅವಲತ್ತುಕೊಂಡರು. ಎಚ್ಚೆತ್ತ ಸರಕಾರ ಪೋಲಿಸರ ಸಹಾಯದಿಂದ ಈ ನಗ್ನ ಯಾತ್ರೆಯನ್ನು ನಿಷೇದಿಸುವ ಮತ್ತು ನಿರುತ್ತೇಜನಗೊಳಿಸುವ ಕೆಲಸಕ್ಕೆ ಕೈ ಹಾಕಿತು. ಆಗ ಸಂಪ್ರದಾಯ ವಾದಿಗಳೂ, ಹರಕೆ ಹೊತ್ತು ಆಚರಿಸುವ ಸಮುದಾಯವೂ ಸರಕಾರದ ಈ ಕ್ರಮವನ್ನು ಎದುರಿಸಿ ಆಚರಣೆಯನ್ನು ನಡೆಸುವ ಪ್ರಯತ್ನ ಮುಂದುವರಿಸಿತು. ಆಗ ಈ ಧಾರ್ಮಿಕ ಪದ್ಧತಿಯ ಪರವಿರೋಧ ಅಭಿಪ್ರಾಯಗಳು, ಚರ್ಚೆಗಳು ತೀವ್ರವಾದವು. ಮುದ್ರಣಮಾಧ್ಯಮ ಇವಕ್ಕೆ ಸಾಕಷ್ಟು ಪ್ರಚಾರಕೊಟ್ಟಿತು. ಈ ಸಂದರ್ಭದಲ್ಲಿ ಕಂಡು ಬಂದ ಮಹತ್ವದ ಅಂಶವೆಂದರೇ ಆಚರಣೆಯಲ್ಲಿ ತೊಡಗಿರುವ ಮಾತಂಗಿ (ರೇಣುಕಾ) ಭಕ್ತರು ಅತಿಹೆಚ್ಚಿನ ಸಂಖ್ಯೆಯಲ್ಲಿ ದಲಿತವರ್ಗದವರೇ ಆಗಿದ್ದುದು ಸಾಮಾಜಿಕವಾಗಿ ಆರ್ಥಿಕವಾಗಿ ಧಮನಿತರಾದ ದಲಿತರು ಅಶಿಕ್ಷಿತರೂ ಆಗಿರುವುದರಿಂದ ದೇವಿಯ ಮೊರೆಹೋಗುವ ಮೂಢನಂಬಿಕೆಗೆ ಬಲಿಯಾಗಿದ್ದುದು ಇನ್ನೊಂದು ಅಂಶ. ಈ ಮೌಢ್ಯ ದಲಿತರನ್ನು ಇನ್ನೂ ಶೋಷಿಸುವುದಕ್ಕೆ ಧಾರ್ಮಿಕ ವ್ಯವಸ್ಥೆ ಉಂಟುಮಾಡಿದ ಸಂಚು ಎಂಬುದು ವಿಚಾರವಾದಿಗಳ ಪ್ರಮುಖ ಆರೋಪ. ಆದರೆ 'ಬೆತ್ತಲೆ'ಯಿಂದ ಹರಕೆ ತೀರಿಸುವುದು ತಮ್ಮ ಸ್ವಾಭಾವಿಕ ನಡತೆ ಎಂದು ಭಕ್ತ ಜನಸಮೂಹದ ಪ್ರತಿಕ್ರಿಯೆಯಾಗಿತ್ತು. ಹರಕೆ ಹೊತ್ತರವನ್ನು ಅಡ್ಡಗಟ್ಟಿ ಬತ್ತಲೆ ಪ್ರದರ್ಶನವನ್ನು ನಿಲ್ಲಿಸಲು ಹೋದ ಪೋಲಿಸರಿಗೆ ಭಕ್ತರು ಕಲ್ಲು ಹೊಡೆದು ಹೆದರಿಸಿ ದೂರ ಸರಿಸಿ ತಮ್ಮ ಪೂಜಾ ವ್ಯವಹಾರವನ್ನು ತೀರಿಸಿಕೊಂಡದ್ದು ವರದಿಯಾಯಿತು. ಈ ಸಂದರ್ಭದಲ್ಲಿ ಪತ್ರಿಕೆಗಳನ್ನು ವೇದಿಕೆ ಮಾಡಿಕೊಂಡು ವಿಚಾರವಾದಿಗಳು ಪ್ರಕರಣವನ್ನು ವಿಶ್ಲೇಷಣೆಗೂ ಆತ್ಮಾವಲೋಕವನ್ನು ಗುರಿಮಾಡಿದರು. ಆಗ ಪಾ.ವೆಂ. ಅವರು ತೀಕ್ಷಣ ಪ್ರತಿಕ್ರಿಯೆಗೆ ಬದಲಾಗಿ ಸೂಕ್ಷ್ಮ ಆಲೋಚನೆಗೆ ಅವಕಾಶವನ್ನು ಕೊಡುವಂತಹ ಲೇಖನವನ್ನು ಬರೆದರು. ಈ ಲೇಖನದಲ್ಲಿ ನಗ್ನವಿಧಿಯ (Naked Ritual) ಕುರಿತು ಆಚಾರ್ಯರು ಮೀಮಾಂಸೆಯನ್ನೇ ಮಾಡಿದ್ದಾರೆ. ನಗ್ನ ವಿಧಿ ಜಗತ್ತಿನಾದ್ಯಂತ ಬೇರೆ ಬೇರೆ ರೂಪದಲ್ಲಿ ಆಚರಣೆಯಲ್ಲಿ ಎಷ್ಟೋ ಕಾಲದಿಂದ ನಡೆದು ಬಂದಿರುವ ಮಾನವ ಚಟುವಟಿಕೆಯಾಗಿದೆ. ಮಾನ (ಮರ್ಯಾದೆ)ವನ್ನು ಮುಚ್ಚಿಕೊಳ್ಳುವ ಸಾಧನವಾಗಿ ಬಂದ ಬಟ್ಟೆ (ಚರ್ಮ) ಅಥವಾ ಉಡುಪು ತೊಡುಪು ಮಾನವ ಸಮಾಜದ ನಾಗರೀಕ ನಡವಳಿಕೆ ಇದು ಕೃತಕವೂ ಅಸ್ವಾಭಾವಿಕವೂ ಆದ ನಡವಳಿಕೆ ಇದಕ್ಕೆ ವಿರುದ್ಧವೆನಿಸುವ ನಗ್ನತೆ ಎಲ್ಲ ಸಂದರ್ಭಗಳಲ್ಲಿ ಕೃತಕ ಅಥವಾ ಅಸ್ವಾಭಾವಿಕ ಅಲ್ಲ. ಒಂದು ಸಾಮಾಜಿಕ ವಿಧಿ ನಿಷೇಧವಾಗಿ ಬಟ್ಟೆ ಬರೆಗಳನ್ನು ಉಡುವ ತೊಡುವ ಅಥವಾ ನಿರಾಕರಿಸುವ ಒಂದು ಆರೋಗ್ಯಕರ ನಡವಳಿಕೆಯು ಪ್ರಚಲಿತವಿದೆ.

ನಗ್ನತೆ, ಅಶ್ಲೀಲವೇ? ಅಸಹ್ಯವೇ? ಅಥವಾ ಸೌಂಧಾರ್ಯಭಿವ್ಯಕ್ತಿಯೇ? ಎಂಬುದನ್ನು ಪ್ರಸ್ಥಾಪಿಸುತ್ತಾ ಜಗತ್ತಿನ ಪ್ರಾಚೀನ ನಾಗರಿಕತೆಗಳ ಕಲೆ, ಸಂಸ್ಕೃತಿ, ಧಾರ್ಮಿಕ ಆಚರಣೆಗಳನ್ನು ಪಾ.ವೆಂ. ಅವರು ಉದಾಹರಿಸುತ್ತಾರೆ. ಮಡಿ–ಮೈಲಿಗೆ ನಿಷ್ಕಾಮ–ಕಾಮ, ಧರ್ಮ–ಸ್ವಾರ್ಥ ಮುಂತಾದ ದ್ವಂದ್ವಗಳಲ್ಲಿ ನಗ್ನತೆಯ ಅರ್ಥ ಮತ್ತು ಪರಿಣಾಮಗಳನ್ನು ಉಲ್ಲೇಖಿಸುತ್ತಾರೆ. ಹೀಗೆ ಬತ್ತಲೆತನ ಎಂಬುದು ಮಂತ್ರ ಜಗತ್ತಿನಲ್ಲಿ, ತಾಂತ್ರಿಕರ ಜಗತ್ತಿನಲ್ಲಿ ಹಾಗೂ ಭಕ್ತಿಯೆಂಬ ನಾಗರಿಕ ಜಗತ್ತಿರ್ನಲ್ಲಿ ಹೇಗೆ ವ್ಯಕ್ತವಾಗುತ್ತಿದೆ ಮತ್ತು ಅದರಿಂದ ಇಚ್ಛಿತ ಪರಿಣಾಮಗಳು ಉಂಟಾಗಿ ಅದೊಂದು ಮಾನವೀಯ ಸಹಜ ವರ್ತನೆಯಾಗಿದೆ ಎಂಬುದನ್ನು ಉಲ್ಲೇಖಿಸುತ್ತಾರೆ. ಕೊನೆಗೆ ಪಾ.ವೆಂ. ಅವರು ಚಂದ್ರಗುತ್ತಿಯಲ್ಲಿಯ ದೇವಿ ಭಕ್ತರು ಸಲ್ಲಿಸುವ ಹರಕೆ ಒಂದು ಭಕ್ತಿಪ್ರದರ್ಶನವಾಗಿದೆ ಎಂದು ಸಮಾಧಾನ ಪಡುತ್ತಾರೆ. ಈ ಭಕ್ತರು ದಲಿತವರ್ಗಕ್ಕೆ ಸೇರಿದವರಾಗಿದ್ದರೂ ಅವರಲ್ಲಿ ತಲೆತಲಾಂತರದಿಂದ ರೂಢಿಗೊಂಡ ಈ ಆಚರಣೆ ಕೇವಲ ಒಂದು ಮೌಢ್ಯ ಎಂದು ಅನ್ನಲಾಗದು.

ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವಾಗಿ ಮಾತಂಗಿಗೆ ಬತ್ತಲೆಯಿಂದ ಶರಣಾಗತರಾಗಬೇಕು ಎಂದು ಒಂದು ಮನೋಭಾವ ಈ ಜನಗಳಲ್ಲಿದೆ. ದಲಿತರನ್ನು ಆವರಿಸಿದ ಒಂದು ಅನಿಷ್ಟ. ಇದಕ್ಕೆ ಪರಿಹಾರವೆಂದರೆ ದೈವದ ಮೇಲಿನ ನಂಬಿಕೆಗೆ ಪರ್ಯಾಯವಾಗಿ ದಲಿತರಿಗೆ ಸಿಗಬೇಕಾದ ಸಾಂಸ್ಕೃತಿಕ ಅಭಿವ್ಯಕ್ತಿಯ ಅವಕಾಶ. ಶಿಕ್ಷಣವೆಂಬ ಶಕ್ತಿಯನ್ನು ದಲಿತರಲ್ಲಿ ತುಂಬಿದಾಗ ಅವರು ಮೌಢ್ಯದಿಂದಲೂ, ಶೋಷಣೆಯಿಂದಲೂ ತಾವಾಗಿ ಹೊರಬರುತ್ತಾರೆ. ಇಷ್ಟಾಗಿಯೂ ಬತ್ತಲೆ ಪೂಜೆ ಅಥವಾ ಸೇವೆ ಮಾಡುವ ಒಂದು ಮನಸ್ಥಿತಿ ಆಯಾವ್ಯಕ್ತಿಯ ಜೀವನ ಕಲ್ಪನೆಗೆ ಸಂಬಂಧಿಸಿದ್ದು ಇದಕ್ಕೆ ಪರಿಹಾರಗಳು ಹೊರಗಿಲ್ಲ. ಅವು ವ್ಯಕ್ತಿಯ ಅವ್ಯಕ್ತ, ನಿಗೂಢ ಮನೋಗತದಲ್ಲಿಯೇ ಇದೆ.

ಬತ್ತಲೆ, ಬಟ್ಟೆ ಮತ್ತು ದಲಿಪ್ರಜ್ಞೆ: ಈ ಲೇಖನದಲ್ಲಿ ಪಾ.ವೆಂ. ಮೊದಲಿನ ಲೇಖನದ ಮಿಮಾಂಸೆಯ ಅಂಶಗಳನ್ನು ಮುಂದುವರಿಸಿ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಬತ್ತಲೆತನ ಎಂಬುದು ಕೇವಲ ಧಾರ್ಮಿಕ ಮನೋಭಾವದ ಅಭಿವ್ಯಕ್ತಿ ಎಂದು ಬಿಡುವಂತಿಲ್ಲ. ಇದರಲ್ಲಿ ಪಾಲುಗೊಳ್ಳುವವರು ದಲಿತ ಸ್ತ್ರೀ, ಬಾಲೆಯರು ಮತ್ತು ಸ್ತ್ರೀಯರೇ ಇರುವುದನ್ನು ಗಮನಿಸಿದಾಗ ಇದರ ಹಿಂದೆ ಪುರುಷವರ್ಗದ ಒಂದು ಹೀನ ಮನೋಭಾವದ ಹುನ್ನಾರ ಇರುವುದು ಸ್ಪಷ್ಟವಾಗುತ್ತದೆ. ಸಾಮಾನ್ಯ ಮಹಿಳೆ ಶೋಷಿತೆ ಮತ್ತು ಶೂದ್ರರು ಎಂಬುದು ಭಾರತೀಯ ಸಮಾಜದ ಸಾಮಾನ್ಯ ಗ್ರಹಿಕೆ. ಅದರಲ್ಲೂ ದಲಿತ ಸ್ತ್ರೀ ಇನ್ನೂ ಅನೇಕ ಅಮಾನವೀಯ ದೂಷಣೆಗಳಿಗೆ ಗುರಿಯಾಗಿದ್ದಾಳೆ. ಅವಳನ್ನು ಅಮಾಯಕಳನ್ನಾಗಿ, ಅಸಾಹಕಳನ್ನಾಗಿ ಮಾಡುವ ಹಲವು ಪುರುಷ ಹುನ್ನಾರಗಳಲ್ಲಿ ಇದು ಒಂದು. ಮಾನಸಿಕವಾಗಿ ಹೆಣ್ಣು ದೇವಿಯ ಮೇಲೆ ಅವಲಂಬಿತಳಾಗಿ ದೈನ್ಯ ಸ್ಥಿತಿಯನ್ನು ಸದಾ ಆವಾಹಿಸಿಕೊಂಡು ಇರಬೇಕೆಂಬ ಒತ್ತಡ ಈ ಬತ್ತಲೆ ಪೂಜೆ

ವಿಧಿಯಲ್ಲಿರುವುದು ಸ್ಪಷ್ಟ. ದಲಿತ ಸ್ತ್ರೀಯರನ್ನು ತಮ್ಮ ಕಾಮದ ಗೊಂಬೆಗಳನ್ನಾಗಿ ಮಾಡಿಕೊಳ್ಳುವ ಫ್ಯೂಡಲ್ (Feudal) ವ್ಯವಸ್ಥೆ ಕಂಡುಕೊಂಡ ಕೆಲವು ಹುನ್ನಾರಗಳಲ್ಲಿ ಬೆತ್ತಲೆ ಪೂಜೆ ಅಥವಾ ಸೇವೆ ಈ ವಿಧಿಯನ್ನು ಕರ್ನಾಟಕದ ದಲಿತ ಪ್ರಜ್ಞೆಯ ಯುವಕರು ಅಸಹನೆಯಿಂದ ಪ್ರತಿಭಟಿಸತೊಡಗಿದ್ದು, ಸಕಾಲಿಕವಾಗಿತ್ತು. ೧೯೭೪ರ ನಂತರ ಕರ್ನಾಟಕದಲ್ಲಿ ದಲಿತ ಪ್ರಜ್ಞೆ ಜಾಗೃತವಾಗಿ ತೀವ್ರತೆಯಿಂದ ಮುನ್ನಡೆಯಿತು. ಸಚಿವರಾಗಿದ್ದ ಬಿ. ಬಸವ ಲಿಂಗಪ್ಪನವರು ದಲಿತ ಪ್ರಜ್ಞೆಯ ತೀವ್ರವಾದಿಗಳಾಗಿದ್ದರು. ಇದಕ್ಕೆ ಪೂರಕವಾಗಿ ದೇವನೂರು ಮಹದೇವರ ಸಾಹಿತ್ಯ ಬಿ. ಕೃಷ್ಣಪ್ಪನವರ ದಲಿತ ಸಂಘರ್ಷ ಸಮಿತಿ ಹಾಗೂ ೧೯೭೯ರಲ್ಲಿ ಒಂದು ಸಂಘಟನೆಯಾಗಿ ಸ್ಫೋಟಗೊಂಡ ಬಂಡಾಯ ಸಾಹಿತ್ಯ ಚಳವಳಿ ಇವೆಲ್ಲವೂ ಕ್ರಿಯಾಶೀಲವಾದಂತ ಸಮಯದಲ್ಲಿ ಚಂದ್ರಗುತ್ತಿಯ 'ಬೆತ್ತಲೆ ವಿಧಿ' ಒಂದು ಸಾಮಾಜಿಕ, ಸಾಂಸ್ಕೃತಿಕ ಪ್ರಕರಣವಾಗಿ ವಿಚಾರವಂತರನ್ನು ಬಡಿದೆಬ್ಬಿಸಿತು.

೯. ವ್ಯಕ್ತಿ ಚಿತ್ರ ಪರಿಣಿತ ಪಾ.ವೆಂ.:

ವ್ಯಕ್ತಿ ಚಿತ್ರ: ಆಧುನಿಕ ಕನ್ನಡ ಸಾಹಿತ್ಯ ಪ್ರಕಾರದಲ್ಲಿ ಎದ್ದು ಕಾಣುವ ಲಘು ಸಾಹಿತ್ಯ ಪ್ರಕಾರ ವ್ಯಕ್ತಿಚಿತ್ರ. ಬಹುಮುಖವಾಗಿ ಬೆಳೆಯುತ್ತಿರುವ ಕನ್ನಡ ಸಾಹಿತ್ಯದಲ್ಲಿ ಆಲಕ್ಷ್ಯಕ್ಕೊಳಗಾದ ಗದ್ಯರೂಪದ ಸಾಹಿತ್ಯ ಪ್ರಕಾರ ಅನೇಕ ಹಿರಿಯ ಕಿರಿಯ ಲೇಖಕರು ಈ ಕ್ಷೇತ್ರದಲ್ಲಿ ಕೃಷಿ ಮಾಡಿದ್ದರೂ ಬೆರಳಣಿಕೆಯಷ್ಟು ಜನ ಮಾತ್ರ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅವರಲ್ಲಿ ಪಾ.ವೆಂ. ಒಬ್ಬರು.

ವ್ಯಕ್ತಿಚಿತ್ರಗಳೆಂದರೆ ವ್ಯಕ್ತಿಯ ವ್ಯಕ್ತಿತ್ವದ ಕಡೆಗೆ ನೋಟವನ್ನು ಬೀರುತ್ತದೆ. ವ್ಯಕ್ತಿ ಚಿತ್ರಕಾರನು ತನ್ನ ಅನುಭವದ ಪರಿಧಿಯನ್ನು ಆಧರಿಸಿ ಬರೆಯುತ್ತಾನೆ. ವ್ಯಕ್ತಿ ಚಿತ್ರದ ನಾಯಕನೊಡನೆ ಬಂದ ಸಂಪರ್ಕದಿಂದ ತನ್ನ ಮನಸ್ಸಿನಲ್ಲಿ ಮೂಡಿಬಂದ ಚಿತ್ರವನ್ನು ಕೆಲವು ಪರಿಣಾಮಕಾರಿ ಶಬ್ದಗಳಿಂದ ಚಿತ್ರಿಸುತ್ತಾನೆ.

ವ್ಯಕ್ತಿ ಚಿತ್ರ ಪರಿಣಿತ ಪಾ.ವೆಂ. ಆಚಾರ್ಯರ ೧೦೦ಕ್ಕೂ ಹೆಚ್ಚು ಸಂಗ್ರಹಿಸಲಾದ ಲೇಖನಗಳನ್ನು ೧. ಜಗದ್ವಿಖ್ಯಾತರು ೨. ಖ್ಯಾತಿವೆತ್ತ ಭಾರತೀಯರು ೩. ಹೊಸ ಗನ್ನಡದ ಹಿರಿಯರು ೪. ಉಡುಪಿಯ ಪರಿಸರದಲ್ಲಿಯ ವ್ಯಕ್ತಿಗಳು ಎಂದು ನಾಲ್ಕು ವಿಭಾಗವಾಗಿ ವಿಂಗಡಿಸಲಾಗಿದೆ. ಪಾ.ವೆಂ. ಅವರು ಯಾವುದೋ ವ್ಯಕ್ತಿಯ ಮೇಲಿನ ಒಲವಿನಿಂದ, ಸ್ವಯಂ ದೃಷ್ಟಿಕೋನದಿಂದ ಇಲ್ಲಿ ವ್ಯಕ್ತಿಗಳನ್ನು ಆಯ್ದುಕೊಂಡಿಲ್ಲ. ಇದೇ ಭಾಷೆ, ಪ್ರದೇಶದವನಾಗಿರಬೇಕೆಂಬ ನಿಯಮವನ್ನು ಇಟ್ಟುಕೊಂಡಿಲ್ಲ. ಜಗತ್ತಿನಲ್ಲಿ ಹೆಸರುವಾಸಿಯಾಗಿದ್ದ ಯಾವುದೇ ವ್ಯಕ್ತಿಗಳು ಜೀವನರಂಗದಲ್ಲಿ ಯಾರಾದರೂ ಯಶಸ್ಸನ್ನು ಸಾಧಿಸಿದ್ದರೆ ಅಂತವರು ಪಾ.ವೆಂ. ಅವರ ಗರುಡ ದೃಷ್ಟಿಯಿಂದ ತಪ್ಪಿಸಿಕೊಳ್ಳಲು

ಸಾಧ್ಯವಿರುತ್ತಿರಲಿಲ್ಲ. ಇಲ್ಲಿ ಜಗದ್ವಿಖ್ಯಾತರಿದ್ದಾರೆ, ಖ್ಯಾತಿವೆತ್ತ ಭಾರತೀಯರಿದ್ದಾರೆ, ಹೊಸಗನ್ನಡದ ಸಾಹಿತ್ಯ ಕ್ಷೇತ್ರದ ಹಿರಿಯರನ್ನು ಕಣ್ಣಾರೆ ಕಂಡವರಾಗಿ, ಒಡನಾಡಿಗಳಾಗಿ ಅವರನ್ನು ಪರಿಚಯಿಸಿದ್ದಾರೆ. ತನ್ನ ತಾಯ್ನಾಡು ಉಡುಪಿಯ ಪರಿಸರದಲ್ಲಿ ಮುಖ್ಯ ವ್ಯಕ್ತಿಗಳನ್ನು ಆತ್ಮೀಯತೆಯಿಂದ ಗಮನಿಸಿದ್ದಾರೆ. ಹೀಗೆ ಜೀವನದ ಅನೇಕ ರಂಗಗಳಲ್ಲಿ ವಿಜೃಂಭಿಸಿದವರು ಪಾ.ವೆಂ. ಅವರ ಆಯ್ಕೆಯಲ್ಲಿದ್ದಾರೆ.

ಪಾ.ವೆಂ. ಅವರ ವ್ಯಕ್ತಿಚಿತ್ರಣವನ್ನು ನೀಡುವಾಗ ವ್ಯಕ್ತಿಗಳ ಹುಟ್ಟು ಬೆಳವಣಿಗೆ ಪ್ರಾಮುಖ್ಯತೆ ನೀಡದೆ ಬದಲಿಗೆ ಒಂದೆರಡು ವಾಕ್ಯಗಳಲ್ಲಿ ಅವರನ್ನು ವಿವರಿಸಿ, ಆ ವ್ಯಕ್ತಿಯ ಜೀವನ ಸಾಧನೆಯ ರಹಸ್ಯವೇನು? ಯಶಸ್ವಿ ಸಾಧನೆಗೆ ಕಾರಣವಾದ ಅವರ ವಿಶೇಷ ಸ್ವಭಾವ, ಬದುಕಿನಲ್ಲಿ ಅವರ ನಿಲುವನ್ನು ನಿರ್ದೇಶಿಸುತ್ತಾರೆ. ಇಲ್ಲಿ ಕಡಿಮೆ ಪುಟಗಳಲ್ಲಿ ವ್ಯಕ್ತಿ ಚಿತ್ರಣವಿದ್ದರೂ ಅವರ ವ್ಯಕ್ತಿತ್ವ ಸ್ಪಷ್ಟವಾಗಿ ನಿಲ್ಲುತ್ತದೆ.

ಇಲ್ಲಿಯ ವ್ಯಕ್ತಿ ಚಿತ್ರಣದೊಳಗೆ ಮಹಾದರ್ಶನಿಕರು, ರಾಜನೀತಿ ತಜ್ಞರು, ವೈದ್ಯರು, ಶಿಕ್ಷಣ ತಜ್ಞರು, ಸಮಾಜ ಸುಧಾರಕರು, ಜೊತೆಯಲ್ಲಿಯೇ ಕವಿ, ಚಿತ್ರ, ಸಂಗೀತ ಕಲಾವಿದರಿದ್ದಾರೆ. ವಿಜ್ಞಾನಿಗಳು, ಸಾಹಿತಿಗಳು, ಉದ್ಯಮಿಗಳು, ದಲಿತೋದ್ಧಾರಕರು ಹೀಗೆ ಎಲ್ಲರನ್ನು ಸಮಾನವಾಗಿ ಗುರುತಿಸಿದ್ದಾರೆ. ಒಟ್ಟಿನಲ್ಲಿ ವ್ಯಕ್ತಿ ಯಾವುದೇ ರಂಗದವನಿರಲಿ, ಅವನು ಏನಾದರೂ ಸಾಧಿಸಿದವನಾದರೆ ಅವನ ಸಾಧನೆಯನ್ನು ಆರಿಸಿಕೊಂಡು ಹೋಗಿ ಸೆರೆಹಿಡಿದಿದ್ದಾರೆ. ವ್ಯಕ್ತಿಯ ಬದುಕಿನ ಯಶಸ್ಸಿನ ಮಜಲನ್ನು ವಿವರಿಸಿದ್ದಾರೆ.

ಜಗದಿಖ್ಯಾತರು: ಪರಿಚಯಾತ್ಮಕ ಲೇಖನ, ವ್ಯಕ್ತಿ ಚಿತ್ರ ಬೇರೆ ಬೇರೆ ವ್ಯಕ್ತಿ ವಿಷಯ ಸಂದರ್ಭ ಕುರಿತು ಬರೆದಿರುವ ಚಿತ್ರಣವಿದು. ಇಲ್ಲಿ ಅಪ್ರತ್ಯಕ್ಷ ಸೆಕೆಂಡರಿ ಇನ್‌ಫಾರ್ಮೆಶನ್ ತರದ ಅಂಶಗಳು ಇರುತ್ತವೆ. ಅಪರಿಚಿತ, ವಿದೇಶಿಗರನ್ನು ಇಲ್ಲಿ ಚಿತ್ರಿಸಿದ್ದಾರೆ. ವ್ಯಕ್ತಿ ಮಾಹಿತಿ ಸಾಕಷ್ಟು ದೊರೆಯುತ್ತದೆ, ಜನಸಾಮಾನ್ಯರಿಗೆ, ವಿದ್ಯಾವಂತರಾಗಿದ್ದರೂ ಇಂಗ್ಲೀಷ್ ಭಾಷೆಯ ವಿಷಯವನ್ನು ಅರ್ಥೈಸಲು ಸಾಧ್ಯವಾಗುತ್ತಿರಲಿಲ್ಲ. ಈ ರೀತಿಯ ಸ್ಥಿತಿಯಲ್ಲಿ 'ಕಸ್ತೂರಿ ಡೈಜೆಸ್ಟ್' ಪತ್ರಿಕೆಯ ಮುಖಾಂತರ ವೈವಿದ್ಯಮಯವಾದ ವ್ಯಕ್ತಿ ಚಿತ್ರ ಬರಹಗಳನ್ನು ವಾಚಕ ಸಮುದಾಯಕ್ಕೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಜಗದ್ವಿಖ್ಯಾತರು ಕೂಡ ಇಂಗ್ಲೀಷ್, ಜರ್ಮನ್, ಫ್ರೆಂಚ್, ಹಿಂದಿ, ಬಂಗಾಳಿ ಭಾಷೆಗಳಿಂದ ಅನುವಾದಗೊಂಡು ಸಂಗ್ರಹಿಸಿದ ಲೇಖನಗಳ ಮಾಲೆಯಿದು. ವಿವಿಧ ರಾಷ್ಟ್ರ ಭಾಷೆಗಳ ಸ್ವಾರಸ್ಯಕರವಾದ ವಿಚಾರಗಳು ಪಾ.ವೆಂ. ಅವರ ವಿಚಾರಲಹರಿಯೊಂದಿಗೆ ಮೂಡಿಬಂದವು. ಜಗದ್ವಿಖ್ಯಾತರು ಚಿತ್ರಣದಲ್ಲಿ ಅಮೇರಿಕನ್ನರು, ಜೊತೆಯಲ್ಲಿ ರಷ್ಯಾದ ಇತಿಹಾಸವನ್ನು ಬದಲಾಯಿಸಿದ ಕ್ರಾಂತಿವೀರರಿದ್ದಾರೆ. ಬೆಲ್ಜಿಯಂನಂತಹ ಚಿಕ್ಕ ಭೂ ಪ್ರದೇಶದವರಿದ್ದಾರೆ. ಜಪಾನ್, ಆಫ್ರಿಕಾ, ಯುರೋಪ್, ಆಸ್ಟ್ರೇಲಿಯಾ ವಿಶ್ವದ ಎಲ್ಲ ಭೂ ಪ್ರದೇಶವನ್ನು ಇಲ್ಲಿ ಕಾಣುತ್ತೇವೆ.

ಮಹಾದಾರ್ಶನಿಕ ಪ್ಲೇಟೋ: ಜಗತ್ತಿನ ನಾಗರಿಕತೆಯ ಇತಿಹಾಸದಲ್ಲಿ ಅವನೊಂದು ಮೈಲುಗಲ್ಲು. ಪ್ಲೇಟೊ, ಅವನ ಗುರು ಸಾಕ್ರೆಟಿಸ್, ಅವನ ಶಿಷ್ಯ ಅರಿಸ್ಟಾಟಲ್ ಇವರೆಲ್ಲರೂ ಸೇರಿ ಯುರೋಪ್ ಮತ್ತು ಪಶ್ಚಿಮ ಏಶಿಯಾದ ರಾಜಕೀಯ–ಸಾಮಾಜಿಕ–ವೈಚಾರಿಕ ಸ್ವರೂಪವನ್ನೇ ಬದಲಾಯಿಸಿದವರು. ಪ್ಲೇಟೊ ತನ್ನ ಯೋಚನೆಗಳಿಂದ, ಕಲ್ಪನೆಗಳಿಂದ ಎಲ್ಲ ಬೌದ್ಧಿಕ ವರ್ಗದವರನ್ನು ಆಕರ್ಷಿಸುವ ಚೈತನ್ಯ ವ್ಯಕ್ತಿಯಾಗಿದ್ದಾನೆ. ನೀತಿಶಾಸ್ತ್ರ, ರಾಜಕೀಯ ಶಾಸ್ತ್ರ, ಧರ್ಮಶಾಸ್ತ್ರ, ಮನಶಾಸ್ತ್ರ ಇವೆಲ್ಲವುಗಳ ಗಾಢ ಚಿಂತನೆಯಿಂದ ಮಾನವನ ವೈಯಕ್ತಿಕ ಮತ್ತು ಸಾಮೂಹಿಕ ಹಿತಕ್ಕೆ ಒಂದು ಇಡಿಯಾದ ಯೋಜನೆಯನ್ನು ಹಾಕಿ ಕೊಟ್ಟಿದ್ದಾನೆ. ಪ್ಲೇಟೊನ ಆದರ್ಶಗಳು ಪ್ರಜಾತಂತ್ರಕ್ಕೆ ಬದ್ಧವಿರುದ್ಧವಾಗಿದ್ದರೂ ಜನಸಮಾನ್ಯರ ಹೆಸರಿನಲ್ಲಿ ಕ್ರಾಂತಿ ಮಾಡುವ ಕಮ್ಯುನಿಷ್ಟರು ಕೂಡ ಅವನ ಸಮಾಜ ರಕ್ಷಕ ವರ್ಗದ ಕಲ್ಪನೆಯನ್ನನುಸರಿಸಿ ತಮ್ಮ ಪಕ್ಷವನ್ನು ಕಟ್ಟುತ್ತಾರೆ, ಭಾರತದ ವ್ಯಾಸ ಮಹರ್ಷಿಗಳನ್ನು ಬಿಟ್ಟರೆ ಪ್ಲೇಟೋನಂಥ ವ್ಯಾಪಕ ಚಿಂತಕ ಪ್ರಪಂಚದಲ್ಲಿ ದುರ್ಬಲರಾಗಿದ್ದಾರೆ ಎನ್ನಬೇಕು. ಇದು ಪಾ.ವೆಂ. ಅವರು ಮಹಾದಾರ್ಶನಿಕ ಪ್ಲೇಟೊನನ್ನು ಪರಿಣಾಮಕಾರಿಯಾದ ಶಬ್ದಗಳಿಂದ ಚಿತ್ರಿಸಿದ ರೀತಿ.

ಪ್ಲೇಟೋನ 'ಸಂವಾದಗಳು' ವಿಶ್ವದ ಸರಸ್ವತೀ ಮಂದಿರದ ಅಪ್ರತಿಮ ರತ್ನವಾಗಿದೆ. ಈ ಸಂವಾದದಲ್ಲಿ ಗುರು ಸಾಕ್ರೇಟಿಸನ ಆತ್ಮ ಸಮರ್ಥನೆ (Apology) ಕೊನೆಗಾಲವನ್ನು ಕುರಿತು ಮರ್ಮಸ್ಪರ್ಶಿ ವರದಿಯಾಗಿದೆ. 'ರಿಪಬ್ಲಿಕ್' ಪ್ಲೇಟೋನ ಸರ್ವಗ್ರಾಹಿ ತತ್ತ್ವಜ್ಞಾನದ ಮಂಜೂಷೆಯಾಗಿದೆ. ಇದರೊಳಗೆ ವೇದಾಂತವಿದೆ, ದೈವಿಶಾಸ್ತ್ರವಿದೆ, ನೀತಿಶಾಸ್ತ್ರ, ಮನಶ್ಯಾಸ್ತ್ರ, ಶಿಕ್ಷಣಶಾಸ್ತ್ರ, ರಾಜ್ಯಶಾಸ್ತ್ರ, ರಸ (ಕಲಾ)ಶಾಸ್ತ್ರ ಇಲ್ಲಿದೆ. ಇಲ್ಲಿ ಇಲ್ಲದ್ದು ಎಲ್ಲಿ ಇದೆ? ಎಂಬಂತಿದೆ ಅದರ ವ್ಯಾಪಿ ಜ್ಞಾನದ ಅತ್ಯಾಧುನಿಕ ವಿಚಾರಗಳ ಬೀಜವನ್ನು 'ಸಂವಾದ' ರೂಪದಲ್ಲಿರುವ ಈ ಅಧ್ಯಾಯದಲ್ಲಿ ಕಾಣುತ್ತೇವೆ. ಈ ಸಂವಾದದಲ್ಲಿ ವಿಖ್ಯಾತ ವಿಧ್ವಾಂಸರು ಪಾಲ್ಗೊಂಡಿದ್ದರು. ಆಧುನಿಕ ವಿಜ್ಞಾನದ ಸಂಸ್ಥಾಪಕ ಅರಿಸ್ಟಾಟಲ್, ಮಹಾವಾಗ್ಮಿ ದೇಮೋಸ್ತಿನಿಸ ಆಕ್ಯಾಡಮಿಯ ಶಿಷ್ಯನೂ ಆಗಿದ್ದ ಲಿಕುರ್ಗಸ್, ಜೆನೋಕ್ರಿತಸ್ ಇಲ್ಲಿಯ ಪ್ರೌಢವ್ಯಾಸಂಗದಲ್ಲಿ ಭಾಗಿಗಳಾದವರು. ಹೀಗೆ ಜಗತ್ತಿನ ದಿಗ್ದೇಶಗಳಿಂದ ಬರುತ್ತಿದ್ದ ಜ್ಞಾನವಾಹಿಗಳಿಗೆ ಜ್ಞಾನಭೀಕ್ಷೆಯನ್ನು ನೀಡಿ ಎಲ್ಲ ಜ್ಞಾನದಾಹಿಗಳ ಪ್ರೀತಿಗೆ ಪಾತ್ರನಾಗಿದ್ದ. ಎಷ್ಟೆಂದರೆ ಆತನ ಕೊನೆಗಾಲದಲ್ಲಿ (ಎಂಬತ್ತು ವರ್ಷ) ವಿಧಿವಶನಾದಾಗ ಶಿಷ್ಯವರ್ಗದೊಂದಿಗೆ ಇಡೀ ಅಥೆನ್ಸ್ ನಗರದ ಜನತೆಯೇ ಪ್ಲೇಟೋನ ಸ್ಮಶಾನಯಾತ್ರೆಯಲ್ಲಿ ಭಾಗವಹಿಸಿದ್ದಿತು. ಹೀಗೆ ಪ್ಲೇಟೋನ ಜೀವನ, ಜೀವನ ದರ್ಶನವೇ ಜಗತ್ತಿಗೆ ಒಂದು ಕೊಡುಗೆಯಾಗಿದೆ.

ದ ಮಿಂಚಿಯ ಸರ್ವತೋಮುಖ ಪ್ರತಿಭೆ: ಸಕಲ ಶಾಸ್ತ್ರ ಪಾರಂಗತನಾದ ಜಗತ್ಪ್ರಸಿದ್ಧ ಚಿತ್ರಕಲಾವಿದ **ದ ಮಿಂಚಿಯ** ಸರ್ವತೋಮುಖ ಪ್ರತಿಭೆಯನ್ನು ಈ ರೀತಿಯ ಶಬ್ದ ಚಿತ್ರದ ಮೂಲಕ ಪಾ.ವೆಂ. ಹಿಡಿದಿಡುತ್ತಾರೆ. 'ಪ್ರಪಂಚದ ಇತಿಹಾಸದಲ್ಲಿ ಸರ್ವತೋಮುಖ

ಪ್ರತಿಭೆ ಎಂಬುದು ಇರಬಹುದಾದರೆ, ಅದು ಇಟಲಿಯಲ್ಲಿ ಲಿಯನಾರ್ಡೋ ದ ಮಿಂಚಿ ಆಮಾಸತಿಗೆ ಮತ್ತು ಅವನ ಸಾಮರ್ಥ್ಯಕ್ಕೆ ಆಧುನಿಕ ಯುರೋಪನ್ನು ಆಧುನಿಕವಾಗಿಸುವುದಕ್ಕೆ ಸೂತ್ರ ಪಾತ್ರ ಮಾಡಿದ ಇಟಲಿಯ ಪುನರುಜ್ಜೀವನ (Renaissance) ಯುಗದ ಅತ್ಯದ್ಭುತ ವ್ಯಕ್ತಿ ಎಂದು ಇಂದು ಕೀರ್ತಿ ಉಳಿದುರುವುದು ಅವನು ಬಿಟ್ಟುಹೋದ. ಅಸದೃಶವಾದ ಕೆಲ ಚಿತ್ರ ಕಲಾಕೃತಿಗಳಿಂದ. ಅವನು ಬರೆದಿರುವ ಹತ್ತೈವತ್ತು ಚಿತ್ರಗಳಲ್ಲಿ ಮೊನಾಲಿಸಾ, ಕ್ರಿಸ್ತನ ಕೊನೆಯ ಊಟ, ಕ್ರಿಸ್ತಮಾತೆ ಮತ್ತು ಮಗ ಅವನ ಹೆಸರನ್ನು ಅಮರವಾಗಿಸಲು ಸಾಲಬಹುದಿತ್ತು. *೧'ಆದರೆ ದ ಮಿಂಚಿಯ ಪ್ರತಿಭೆ ಹರಿಯದ ರಂಗವಿರಲಿಲ್ಲ. ಅವನ ಮನಸ್ಸನ್ನು ಹಿಡಿದಿರಿಸಿದ ವಿದ್ಯೆಯೇ ಇರಲಿಲ್ಲ. ಶರೀರಶಾಸ್ತ್ರ, ಭೌತಶಾಸ್ತ್ರ, ಖಗೋಲ ಶಾಸ್ತ್ರ, ತತ್ತ್ವಜ್ಞಾನ, ಸಂಗೀತ ಮತ್ತು ಇನ್ನೂ ಅನೇಕ ವಿಷಯಗಳಲ್ಲಿ ತನ್ನ ಸಮಕಾಲೀನ ಆಯಾ ಶಾಸ್ತ್ರ ನಿಪುಣರಿಗಿಂತ ಏನೂ ಕಡಿಮೆಯೆನಿಸದ ಯೋಗ್ಯತೆಯನ್ನು ಪಡೆದಿದ್ದ. ವಿಶೇಷವೆಂದರೆ ಅವನು ಬಹುಶಃ ತನಗೆ ತಾನೇ ಗುರುವಾಗಿದ್ದನು. 'ಶತಮತಿ' ಟಿಪ್ಪಣಿ ಪುಸ್ತಕದಲ್ಲಿ ಮಿಂಚಿಯ 'ಶತಪ್ರಮತಿ' ಬುದ್ಧಿಯ ಕಲ್ಪನೆಯ ಚಿತ್ರಗಳು ಸಮಕಾಲೀನ ಯಂತ್ರ ತಂತ್ರ ಆಧುನಿಕ ವಿಜ್ಞಾನವನ್ನು ಆತ ಅರಗಿಸಿಕೊಂಡು ಅದರ ಮೇಲೆ ಹೊಸ ಆಲೋಚನೆಗಳನ್ನು ದಾಖಲಿಸಿದ್ದಾನೆ. ರಿನಾಯಿಸಾನ್ಸ್ ಯುಗದ ಮಾನವ ಕುತೂಹಲವೆಲ್ಲ ಒಬ್ಬ ವ್ಯಕ್ತಿಯಲ್ಲಿ ಸಂಘಟಿಸಿದಂತೆ ಲಿಯನಾರ್ಡೊ ಮಿಂಚಿ ಬದುಕಿದನೆಂದು' ಹೇಳುತ್ತಾ ಪಾ.ವೆಂ. ಇಂತಹ ಶತಬುದ್ಧಿಗೆ ಇಂದಿನ ಯುಗದಲ್ಲಾದರೂ ಎಲ್ಲಿ ಅನುಕೂಲಕರ ವಾತಾವರಣ ಇದೇ ಎಂದು ಪ್ರಶ್ನಿಸುತ್ತಾರೆ. ಇಂಥ ಬುದ್ಧಿಯುಳ್ಳವರು ತಮ್ಮ ಕುತೂಹಲವನ್ನು ತೃಪ್ತಿಪಡಿಸಿಕೊಂಡು ಸಾಮಾನ್ಯರಂತೆ ಬದುಕಬೇಕಾಗುತ್ತದೆ ಎನ್ನುವ ಖೇದವನ್ನು ವ್ಯಕ್ತಪಡಿಸುತ್ತಾರೆ.

ಯುರೋಪಿನ ಕ್ರಾಂತಿದೂತ ರೂಸೋ: ಫ್ರೆಂಚ್ ತತ್ತ್ವಜ್ಞಾನಿ ರೂಸೋ ಪ್ರಭಾವ ಜಗತ್ತಿನಲ್ಲಿ ಮಾತ್ರವಲ್ಲ, ರಾಜಕೀಯ ಪ್ರಪಂಚದಲ್ಲಿಯೂ ಕ್ರಾಂತಿಗೆ ಕಿಡಿಯಾಗಿ ಪರಿಣಮಿಸಿ ಐತಿಹಾಸಿಕ ದಾಖಲೆಯನ್ನೇ ಸೃಷ್ಟಿಸಿದೆ. ಎರಡು ಶತಮಾನಗಳ ಹಿಂದೆ ಹುಟ್ಟಿದ ಈ ಮಹಾಪುರುಷನ ವಿಚಾರಗಳು ಅಮೇರಿಕಾದಲ್ಲಿ ಮಾತ್ರವಲ್ಲ ಜಗತ್ತಿನ ಎಲ್ಲ ಉದಾರ ರಾಜ್ಯ ಸಂವಿಧಾನಗಳಲ್ಲಿ ಅಳವಡಿಸಲ್ಪಟ್ಟಿದೆ. ರೂಸೋನ ಶಿಕ್ಷಣ ತತ್ವಗಳು ಜಗತ್ತಿನ ಶಾಲೆಗಳಲೆಲ್ಲ ಇಂದಿಗೂ ಪ್ರಮಾಣಭೂತವಾಗಿ ಅನುಸರಿಸಲ್ಪಡುತ್ತದೆ. ಫ್ರೆಂಚ್ ಸಾಹಿತ್ಯ ಕ್ಷೇತ್ರಕ್ಕೆ ಒಂದು ಹೊಸ ಮಾರ್ಗವನ್ನೇ ಸೂಚಿಸಿ ದಿಗ್ಗಜ ಸಾಹಿತಿಗಳಾದ ಬೊಡ್‌ಲೇರ್, ಸೆನಾಸ್ಕರ್, ರಿಬಾಂಡ್ ಮೊದಲಾದವರ ರಚನೆಗಳ ಮೇಲೆ ಪ್ರಭಾವ ಬೀರಿದನು. ಅನಾಗರಿಕರಲ್ಲೂ ಮಾನವೀಯತೆ ಇದೆಯೆಂದು ಸಾರಿ ಮಾನವ ಶಾಸ್ತ್ರದ ಸಂಸ್ಥಾಪಕನಾಗಿದ್ದಾನೆ. ನಿಸರ್ಗ ಪ್ರೇಮಕ್ಕೆ ಪ್ರಚೋದನೆ ನೀಡಿದನು. ಇಂಗ್ಲೀಷ್‌ನ ವರ್ಡ್ಸ್‌ವರ್ತ್ ಮೊದಲಾದ ಮಹಾಕವಿಗಳನ್ನೂ ಆ ಮೂಲಕ ಆಧುನಿಕ ಕಾವ್ಯಮಾರ್ಗವನ್ನು ಪ್ರೇರಿಸುವಂತೆ ಪ್ರೋತ್ಸಾಹಿಸಿದನು.

ಸಜ್ಜನತೆ, ಮಾನವತೆ, ಸಮಾನತೆ, ದಬ್ಬಾಳಿಕೆಯ ವಿರೋಧ ಅವನ ರಾಜಕೀಯ ಜೀವನದ ತಿರುಳಾಗಿತ್ತು. ರೂಸೊ ಬುದ್ಧಿಯ ವಿರುದ್ಧ ಹೃದಯದ ಪಕ್ಷ ಕಟ್ಟಿದ. ಮನುಷ್ಯ ತರ್ಕವನ್ನಲ್ಲ. ಹೃದಯದ ಒಲವುಗಳನ್ನಾದರಿಸಿದರೆ ಒಳ್ಳೆಯವನಾಗುತ್ತಾನೆ. ಇದನ್ನೆ ತನ್ನ ಜೀವನದಲ್ಲಿ ಪ್ರತಿಪಾದಿಸಿದ್ದಾನೆ. ಇದೇ ರೂಸೋ ವಿಚಾರ ಪ್ರಪಂಚಕ್ಕೆ ಕೊಟ್ಟ ಕಾಣಿಕೆ. ಈ ಕ್ರಾಂತಿದೂತನ ಬಹುಮುಖ ವ್ಯಕ್ತಿತ್ವವನ್ನು ಒಟ್ಟಿಗೆ ಸಂಕ್ಷಿಪ್ತವಾಗಿ ಕೆಲವೇ ವಾಕ್ಯಗಳಲ್ಲಿ ಹೇಳುವ ಪಾ.ವೆಂ. ರೀತಿ ಪರಿಣಾಮಕಾರಿಯಾಗಿದೆ.

ಫ್ರೆಂಚ್ ಸಾಹಿತ್ಯ ಚಕ್ರವರ್ತಿ–ವಿಕ್ಟರ್ ಹ್ಯೂಗೋ: ೧೮೦೨ರಲ್ಲಿ ಹುಟ್ಟಿದ ವಿಕ್ಟರ್ ಹ್ಯೂಗೋ, ಆಗ ಫ್ರೆಂಚ್ ಕ್ರಾಂತಿ ಮುಗಿದು ನೆಪೋಲಿಯನ್ ಯುಗ ಆರಂಭವಾಗಿತ್ತು. ಯುರೋಪಿನ ಸ್ವರೂಪವೇ ಬದಲಾಗುತ್ತಿರುವ ಸಂದರ್ಭದಲ್ಲಿ ಆ ಯುಗದ ಅತ್ಯಂತ ಪ್ರಭಾವಿ ಧ್ವನಿಯಾಗಿದ್ದ. ಸಾಹಿತ್ಯದಲ್ಲಿ ಜನಸಾಮಾನ್ಯರನ್ನು ನಾಯಕ ಪೀಠದಲ್ಲಿ ಪ್ರಥಮತಃ ಸ್ಥಾಪಿಸಿದವನು. ಫ್ರೆಂಚ್ ರಾಜಕೀಯ ಸಾಹಿತ್ಯ ರಂಗದಲ್ಲಿ ಮಾತ್ರವಲ್ಲದೆ ಯುರೋಪಿಯನ್ ಮತ್ತು ಅಮೇರಿಕನ್ ರಾಷ್ಟ್ರಗಳಲ್ಲಿ ತನ್ನ ಅಪ್ರತಿಮವಾದ ಪ್ರಭಾವವನ್ನು ಬೀರಿದ ಕವಿ, ನಾಟಕಕಾರ, ಕಾದಂಬರಿಕಾರ, ಪ್ರಬಂಧಕಾರ ಪ್ರಜಾಸತ್ತೆಯ ಪ್ರತಿಪಾದಕನಾಗಿ ತನ್ನ ಕಾಲದಲ್ಲಿ ಅರ್ಧಶತಮಾನದಕಾಲ ಜನಮನವನ್ನು ಸೆರೆಹಿಡಿದು, ಸಾಹಿತ್ಯದ ಸ್ವರೂಪವನ್ನು ಪರಿವರ್ತನೆಗೊಳಿಸಿ ರಾಜರಿಗೂ, ಆಳುವವರಿಗೂ ಸಿಂಹಸ್ವಪ್ನವಾಗಿದ್ದ. ಅ.ನ.ಕೃ. ಶರಶ್ಚಂದ್ರ, ಪ್ರೇಮಚಂದ್ರ ಎಲ್ಲರೂ ಹ್ಯೂಗೊವಿನಿಂದ ಸ್ಫೂರ್ತಿಪಡೆದವರು. ಹ್ಯೂಗೊವಿನ ಸಾಹಿತ್ಯವನ್ನು ಇಟಲಿಯಾ ವಿಮೋಚಕ ಮ್ಯಾಜಿನಿ, ಅಮೇರಿಕಾದ ಅಧ್ಯಕ್ಷ ಅಬ್ರಾಹಂ ಲಿಂಕನ್ ಪತ್ರದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಮಾರ್ಕ್‌ಟ್ವೇನ್: ಶಾಲೆಯನ್ನು ಕಾಣದ ಹುಡುಗ ಶ್ರೇಷ್ಠ ಸಾಹಿತಿಯಾದ ದುರಂತ ಬದುಕಿನ ನಡುವೆ ಬಡಪತ್ರಿಕೋದ್ಯೋಗಿಯ ಜೀವನ ದರ್ಶನವನ್ನು ಅಮೇರಿಕಾದ ಹಾಸ್ಯ ಲೇಖಕ 'ಮಾರ್ಕ್‌ಟ್ವಿನ್' ಚಿತ್ರಣದಲ್ಲಿ ಕಾಣುತ್ತೇವೆ. ಯಾವುದೋ ಒಂದು ತುಂಡು ಹಾಳೆಯ ಓದಿನಿಂದ ಸ್ಫೂರ್ತಿಗೊಂಡು ಜೀವನವನ್ನೇ ಬದಲಾಯಿಸಿಕೊಳ್ಳುತ್ತಾನೆ. ಸಮಕಾಲೀನ ಜಗತ್ತಿನ ಶ್ರೇಷ್ಟ ಲೇಖಕರ ಸಾಲಿನಲ್ಲಿ ನಿಲ್ಲುತ್ತಾನೆ. ಲಕ್ಷಗಟ್ಟಲೆ ಹಣ ಸಂಪಾದಿಸುತ್ತಾನೆ. ೪ ವರ್ಷ ಸರಿಯಾಗಿ ಶಾಲೆಗೆ ಹೋಗದ ಅವನಿಗೆ ವಿಶ್ವವಿದ್ಯಾಲಯಗಳು ಗೌರವ ಪದವಿಯನ್ನು ನೀಡುತ್ತವೆ. ಆತನ Tom Sawyer ಮತ್ತು Huckleberry Fin….. ಎಂಬೆರಡು ಗ್ರಂಥಗಳು ಇಂದಿಗೂ ಆಧರಣೀಯವಾಗಿ ಉಳಿದು ಚಿರಂತನ ಸಾಹಿತ್ಯ ಶ್ರೇಣಿಯಲ್ಲಿ ಸೇರಿದವುಗಳು. ಅವನ ಆತ್ಮಚರಿತ್ರೆ ಅಮೋಘ ಅನುಭವಗಳಿಂದ ಕೂಡಿದ್ದು ಆಗಿದೆ. ಇಲ್ಲಿ ಒಬ್ಬ ಸಾಹಿತ್ಯ ಬದುಕಿನ ಜೀವನದರ್ಶನವನ್ನು ಪಾ.ವೆಂ. ಮೂಡಿಸುತ್ತಾರೆ.

ಸಮರ್ಸೆಟ್ ಮಾಮ್: ಈ ಶತಮಾನದ ಜನಪ್ರಿಯ ಇಂಗ್ಲೀಷ್ ಕಲಾಶಿಲ್ಪಿ ೧೮೭೪ರಲ್ಲಿ ಪ್ಯಾರಿಸ್‌ನಲ್ಲಿ ಜನಿಸಿದರು. ತಮ್ಮ ಧೀರ್ಘ ಜೀವನದಲ್ಲಿ (೯೨ವ.) ೬೦ಕ್ಕಿಂತ

ಹೆಚ್ಚು ಕಾದಂಬರಿ. ನಾಟಕ, ಕಥೆ, ಪ್ರಬಂಧ, ವಿಮರ್ಶೆ ಮೊದಲಾದ ಗ್ರಂಥಗಳನ್ನು ಬರೆದರು. ಅವರ ಗ್ರಂಥಗಳ ಎಂಟು ಕೋಟಿ ಪ್ರತಿಗಳು ಮಾರಾಟವಾಗಿದೆ. ಪುಸ್ತಕಗಳಿಂದ ೨ ಕೋಟಿ ರೂಪಾಯಿಗಳನ್ನು ಗಳಿಸಿದರು. ಅವರ 'ಆಫ್ ಹ್ಯಾಮನ್ ಬಾಂಡೇಜ್' ಶ್ರೇಷ್ಠ ಸಾಹಿತ್ಯದ ಶ್ರೇಣಿಯಲ್ಲಿ ಸೇರಿದೆ. ಅವರ ಚಿಕ್ಕ ಕಥೆ 'ರೇನ್' ವಿಶ್ವದ ಶ್ರೇಷ್ಠ ಕತೆಗಳಲೊಂದೆನಿಸಿದೆ. ಕಥೆ ಕಾದಂಬರಿಗಳು ಚಲನ ಚಿತ್ರಗಳಾಗಿಯು ಯಶಸ್ವಿಯಾಗಿದೆ. ಮಾಮರು ಭಾರತಕ್ಕೆ ಆಗಮಿಸಿ ರಮಣ ಮಹರ್ಷಿಯ ಸನ್ನಿಧಾನದಲ್ಲಿ ಕೆಲಕಾಲವನ್ನು ಕಳೆದರು. ಭಾರತೀಯ ತತ್ವಜ್ಞಾನ ಅವರಿಗೆ ಪ್ರೇರಿತವಾದಂತಿದೆ. ಭಾರತ ಪರ್ಯಟನೆ ಫಲವಾಗಿ ರೇಜರ್ಸ್ ಎಜೆ (ಅಸಿಧಾರೆ) ಕಾದಂಬರಿ ೧೯೪೪ರಲ್ಲಿ ಪ್ರಕಟವಾಯಿತು. ಅಧ್ಯಾತ್ಮಿಕ ಸತ್ಯಾನ್ವೇಷಣೆಗಾಗಿ ಅಲೆದ ಪಾಶ್ಚಾತ್ಯನೊಬ್ಬನ ಕಥೆಯಿದು. ಯಶಸ್ವಿ, ಶ್ರೀಮಂತ ಲೇಖಕನ ಜೀವನದ ಸ್ಥಾನಮಾನವನ್ನು ಪಾ.ವೆಂ. ಬಿಂಬಿಸಿದ ರೀತಿ ಮನೋಜ್ಞವಾಗಿದೆ.

ಧ್ಯೇಯವಾದಿ ಸಾಹಿತಿ-ಅಂದ್ರೆ ಮಾಲ್ರಾ: ಫ್ರಾನ್ಸಿನ ಅತಿಶ್ರೇಷ್ಠ ಜೀವಂತ ಸಾಹಿತಿಗಳಲೊಬ್ಬರಾಗಿದ್ದಾರೆ. ವಿಶ್ವದಲ್ಲಿ ಸ್ವಾತಂತ್ರ್ಯ ಪ್ರಜಾಸತ್ತೆ ತುಳಿಯಲ್ಪಡುತ್ತದೆಯೋ ಅಲ್ಲಲ್ಲಿ ತಮ್ಮ ದೇಶದ ಯಾವ ಸಂಬಂಧವೂ ಇಲ್ಲದಿದ್ದ ಸಂದರ್ಭಗಳಲ್ಲಿ ಕೂಡ ಸಶಸ್ತ್ರ ಹೋರಾಟದಲ್ಲಿ ಧುಮುಕಿದ ರಾಜಸ ಸಾಹಿತಿಯಾಗಿದ್ದಾರೆ. ಬಾಂಗ್ಲಾ ದೇಶದಲ್ಲಿ ನಡೆದ ನರಹತ್ಯೆ ಪ್ರಜಾಸತ್ತೆಯ ನಾಶವನ್ನು ಕುರಿತು ಯಾವುದೇ ವಿರೋಧಗಳು ಬಾರದಿರುವಾಗ ಫ್ರಾನ್ಸಿನಲ್ಲಿ ೭೦ ವರ್ಷದ ಮುದುಕನೊಬ್ಬ ತಾನು ಬಾಂಗ್ಲಾ ಮುಕ್ತಿವಾಹಿನಿಯ ಪಕ್ಷದಲ್ಲಿ ಶಸ್ತ್ರ ಹಿಡಿಯಲು ಸಿದ್ಧನಿರುವುದು ಆಶ್ಚರ್ಯಕರವಾದ ಸಂಗತಿಯಾಗಿತ್ತು. ಜೊತೆಗೆ ಈ ಮನುಷ್ಯ ಫ್ರಾನ್ಸಿನಲ್ಲೇ ಏಕೆ, ಜಗತ್ತಿನಲ್ಲೇ ಸಕ್ರಿಯ ರಾಜಕಾರಣದಲ್ಲಿ ಕೈ ಹಾಕಿ ಕ್ಯಾಬಿನೆಟ್ ದರ್ಜೆಯ ಮಂತ್ರಿ ಪದವಿಗೇರಿದ ಪ್ರಥಮವರ್ಗದ ಸಾಹಿತಿಯಾಗಿದ್ದರು. ಜೀವನದ ಕೊನೆಯವರೆಗೂ ಧ್ಯೇಯವಾದಿ ರಾಜಕಾರಣದಲ್ಲಿ ಪ್ರದೇಶಿಸಿದರೂ ಸಾಹಸ ಮತ್ತು ಸತ್ಯ ಪಕ್ಷಪಾತವನ್ನು ಉಳಿಸಿಕೊಂಡಿದ್ದಾರೆ. ಸಾಹಿತಿಯಾಗಿ, ಧ್ಯೇಯವಾದಿಯಾಗಿ ವಿಶ್ವವನ್ನೇ ಆಕರ್ಷಿಸಿದ ವ್ಯಕ್ತಿಯಾಗಿದ್ದರು. ಇದಕ್ಕಾಗಿಯೇ ಪಾ.ವೆಂ. ಅವರು ಮಾಲ್ರಾರವರನ್ನು ಆತ್ಮೀಯತೆಯಿಂದ ಸ್ಮರಿಸಿದ್ದಾರೆ.

ಪಾಬ್ಲೊ ನೇರುದಾ: ದಕ್ಷಿಣ ಅಮೇರಿಕಾದಲ್ಲಿ ನೋಬೆಲ್ ಸಾಹಿತ್ಯ ಬಹುಮಾನ ಪಡೆದವರಲ್ಲಿ ಮೂರನೇಯವರು ನೇರುದಾ. ಸ್ಪಾನಿಶ್ ಭಾಷೆಯಲ್ಲಿ ನೇರುದಾ ಜನಪ್ರಿಯ ಕವಿತೆಗಳನ್ನು ಬರೆದಿದ್ದಾರೆ. ಪಂಚಂಡವಾದ ಕಾವ್ಯ ನಿರ್ಮಿತಿಯುಳ್ಳವರು. ೭,೦೦೦ ಪುಟಗಳಷ್ಟು ಕಾವ್ಯ ಬರೆದು ರೋಮ್ಯಾಂಟಿಕ್ ಮಹಾಕವಿ ಎನಿಸಿದರು. ಅವರ ಕವಿತೆಗಳು ಸ್ಪ್ಯಾನಿಶ್ ಜಗತ್ತಿನಲ್ಲೇ ಪ್ರತಿಧ್ವನಿಸುತ್ತವೆ. ನೇರುದಾ ಕಮ್ಯುನಿಸ್ಟ್‌ರಾದರೂ ಮಾನವತಾವಾದಿಗಳಾಗಿದ್ದರು. ನೇರುದಾ ಒಂದು ಅಪರೂಪ ಮಿಶ್ರಣದ ಕವಿಯಾಗಿ ಕುವೆಂಪುವಿನ ಹಾಗೆ. ನಗರಗಳ ವಿರುದ್ಧ ಹಳ್ಳಿಗಾಡಿನ ಧನಿಯಾಗಿದ್ದರು. ನಾಗರಿಕ ಕೋಲಾಹಲದ ವಿರುದ್ಧ ನಿಸರ್ಗದ ಕರೆಯಾದರು. ಸಂಪ್ರದಾಯ ವಿರುದ್ಧದ

ನವಸ್ಫೂರ್ತಿಯ ಪ್ರತಿಪಾದಕರೂ ಆಗಿದ್ದರು. ಗತವೈಭವ ಅವರನ್ನು ಸೆಳೆಯುತ್ತಿರಲಿಲ್ಲ. ಇದು ಪಾ.ವೆಂ. ಅವರ ಮನೋಧರ್ಮವೂ ಆಗಿರುವುದರಿಂದ ಪಾಬ್ಲೊ ನೇರುದಾನ ವ್ಯಕ್ತಿತ್ವ, ಜೀವನದರ್ಶನ ಇಲ್ಲಿ ನಿಕಟವಾದ ಸಂಬಂಧದಂತೆ ವ್ಯಕ್ತವಾಗಿದೆ.

ಹ್ಯಾನ್ಸ್ ಅಂಡರ್‌ಸನ್: ಲೋಕವಿಖ್ಯಾತ ಮಕ್ಕಳ ಕಥೆಗಳ ರಾಜನಾದ ರೀತಿ, ಅವನು ಬರೆದ ಯಕ್ಷಿಣಿ ಕಥೆಗಳಷ್ಟೇ. ಅಪೂರ್ವ ಜೀವನವಾಗಿತ್ತು. ದಡ್ಡನಾಗಿದ್ದ ಐನ್‌ಸ್ಟೀನ್ನರ ಬಾಲ್ಯ ಜೀವನ, ನೊಬೆಲ್ ಬಹುಮಾನ ಪಡೆದ ಪಾಸ್ಟಾರ್‌ನಾಕ್ ಮತ್ತು ಅವರ ಕಾದಂಬರಿ, ಜಾರ್ಜ್‌ಸ್ಯಾಂಡ್-ಗಂಡು ಬದುಕಿನ ಹೆಣ್ಣು ಸಾಹಿತಿ. ಇದು ಅಕೆಯ ಗಂಡು ಕಾವ್ಯ ನಾಮವೂ ಹೌದು. ಈಕೆಯ ನಿಜವಾದ ಹೆಸರು 'ಅಮಂದೈನ್ ಉಸಿತ್ ಔರೋರದ್ಯುದೆವಾನ್' ಸ್ವತಂತ್ರ್ಯ ಲೇಖನ ವೃತ್ತಿಯಿಂದ ಪ್ರಚಂಡ ಫ್ರೆಂಚ್ ಸಾಹಿತಿಗಳ ಸಾಲಿನಲ್ಲಿ ಜನಪ್ರಿಯವಾಗಿ ನಿಲ್ಲುವವಳು. ಈ ಮಹಿಳೆ ಮುಕ್ತಳು ಮಾತ್ರವಲ್ಲ ಸ್ವಚ್ಛಂದಳೂ ಆಗಿದ್ದಳು ಶತಮಾನದ ನಂತರ ಇಂದಿಗೂ ಸ್ವಾತಂತ್ರ್ಯಾಪೇಕ್ಷಿ ಹೆಣ್ಣಿಗೆ ಸ್ಫೂರ್ತಿದಾಯಕಳಾಗಿದ್ದಾಳೆ. ಹೀಗೆ ಸಂಪ್ರದಾಯಸ್ಥ ಮನೆತನದಲ್ಲಿ ಬದುಕಿದ ಪಾ.ವೆಂ.ಅವರು ಸ್ತ್ರೀ ಪರವಾದ ಘಟನಾವಳಿಗಳಿಗೂ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ವಿಶ್ವದ ಎಲ್ಲೆಲ್ಲಿಯೋ ಚದುರಿದ ಅಪರಿಚಿತ ಮೂಲಗಳಿಂದ ಘಟನಾವಳಿಗಳನ್ನು ಸಂಗ್ರಹಿಸಿ ಹೆಣೆದು ಮತ್ತು ಅದನ್ನು ಮಥಿಸಿ ರೂಪಿಸುವ, ತನ್ನದೆಂಬಂತೆ ಬರೆಯುವ ಕೌಶಲ್ಯದ ಸೊಬಗು ಇಲ್ಲಿಯ ವ್ಯಕ್ತಿ ಚಿತ್ರದೊಳಗಿದೆ.

ಖ್ಯಾತಿವೆತ್ತ ಭಾರತೀಯರು: ಖ್ಯಾತಿ ವೆತ್ತ ಭಾರತೀಯರು ಚಿತ್ರಣದಲ್ಲಿ ಒಟ್ಟು ೪೨ ಚಿತ್ರಣಗಳಿವೆ. ಇಲ್ಲಿಯ ವ್ಯಕ್ತಿತ್ವದ ವರ್ಣವೂ ಆಯಾನಾಯಕನ ವ್ಯಕ್ತಿತ್ವದ ವರ್ಣದೊಡನೆ ಬೆರೆತುನಿಂತಿದೆ. ಪಾ.ವೆಂ. ಅವರ ಬರವಣಿಗೆಯಲ್ಲಿ ಪ್ರಾಮಾಣಿಕತೆ ನಿಚ್ಚಳವಾಗಿ ಎದ್ದು ಕಾಣುತ್ತದೆ. ಅದರ ವಿಷಯದ ಸ್ವಯಂ ದೃಷ್ಟಿಕೋನದೊಂದಿಗೆ ಸಹೃದಯತೆಯ ಪರಿಚಯವಾಗುತ್ತದೆ. ಇಲ್ಲಿ ಖ್ಯಾತ ಭಾರತೀಯರು ಹೆಚ್ಚು ಸಂಖ್ಯೆಯಲ್ಲಿ ಚಿತ್ರಿತರಾಗಿದ್ದಾರೆ. ಕನ್ನಡಿಗರು ಅಲ್ಲಲ್ಲಿ ತಾರೆಯಂತೆ ಮಿನುಗುತ್ತಾರೆ.

ಅಂಬೇಡ್ಕರರು ಹಾಗೇಕಾದರು? ಎನ್ನುವ ಚಿತ್ರಣದಲ್ಲಿ ಭಾರತದ ಪ್ರತಿಭಾಶಾಲಿಯೊಬ್ಬನು ಜಾತಿಯ ದೆಸೆಯಿಂದ ಪಟ್ಟ ಪಾಡಿನ ಕರುಣಕಥೆ ಮತ್ತು ಅದರಿಂದ ದೇಶಕ್ಕೆ ಆದ ಹಾನಿ ನಮ್ಮೆಲ್ಲರ ಹೊಣೆಯಾಗಿದೆ. ಅನ್ಯಾಯಕ್ಕೊಳಗಾದವರಿಗೆ ತಾಳ್ಮೆಯನ್ನು ಬೋಧಿಸಿ ಏನು? ಫಲ ಇಲ್ಲಿ ಅಂಬೇಡ್ಕರರ ದೋಷಗಳಿದ್ದರು ಇದು ಸತ್ಯವಾಗುವಂತೆ ಚಿತ್ರಿಸುತ್ತಾರೆ. ಓದುಗರಿಗೂ ಅಂಬೇಡ್ಕರ್ ಹತ್ತಿರವಾಗುತ್ತಾರೆ.

ಸುಂದರರಾಜ ಅಯ್ಯಂಗಾರ್ (೧೯೧೮-೨೦೧೪): ಯೋಗ ಶಿಕ್ಷಣವನ್ನು ಪಾಶ್ಚಾತ್ಯರಿಗೆ ಕಲಿಸಿ ಜಗತ್ ಪ್ರಸಿದ್ಧರಾದವರು. ಕರ್ನಾಟಕದಲ್ಲಿ ಹುಟ್ಟಿ ಪುಣೆಯಲ್ಲಿ ನೆಲೆಸಿ ಅಖಿಲ ಭಾರತದಲ್ಲಷ್ಟೇ ಅಲ್ಲ ವಿದೇಶಗಳಲ್ಲಿಯೂ ಅಸಂಖ್ಯ ಶಿಷ್ಯರನ್ನು ಪಡೆದ ಶ್ರೀ ಬಿ.ಕೆ. ಶ್ರೀನಿವಾಸ ಅಯ್ಯಂಗಾರರು. ಭಾರತದ ಶ್ರೇಷ್ಟತಮ ಯೋಗಾಸನ ಶಿಕ್ಷಕರಲ್ಲಿ

ಒಬ್ಬರಾಗಿದ್ದಾರೆ. *೨ 'ಶರೀರವೆಂಬುದೊಂದು ವೀಣೆ; ಮಿದುಳು ಅದರ ಬುರುಡೆ. ಮೈ ಅದ ದಂಡ ಬೆನ್ನೆಲುಬುಗಳೇ ಅದರ ಬಿರಡಿಗಳು ಮತ್ತು ನರಗಳು ಅದರ ತಂತಿಗಳು. ಯೋಗಸಾಧನೆ ಈ ವೀಣೆಯನ್ನು ಸದಾಶೃತಿಗೂಡಿಸುತ್ತದೆ ಇದು ಅಯ್ಯಂಗಾರರ ಯೋಗವಾಣಿ ಇದನ್ನೇ ಜಗತ್ತಿನ ಜನತೆಯ ಆರೋಗ್ಯ, ಮನಶಾಂತಿಗೆ ನೀಡಿ ಧನ್ಯರಾದ ಯೋಗ ಗುರುಗಳು'.

ಆದರ್ಶ ರೈತ ಚೆನ್ನಮಲ್ಲಪ್ಪ ಅಸುಂಡಿ: ಧಾರವಾಡದ ಈ ರೈತ ತನ್ನ ದುಡಿಮೆಯಿಂದಲೇ ಖ್ಯಾತಿವಂತ ಭಾರತೀಯನಾಗುತ್ತಾನೆ.*೩ 'ದುಡಿತವೇ ದುಡ್ಡಿನ ತಾಯಿ, ತನ್ನ ಬಣ್ಣ ಭೂಮಿಗೆ ಕೊಟ್ಟು, ಭೂಮಿಯ ಬಣ್ಣವನ್ನು ತಾನು ತೆಗೆದುಕೊಳ್ಳಬೇಕು' ಎನ್ನುವಂತೆ ಅಕ್ಷರಶಃ ಪಾಲಿಸಿ ಬದುಕಿದ ರೈತ ಅಸುಂಡಿಯವರು. ಈ ರೈತನ ಅನುಭವ ಮತ್ತು ಕೃಷಿ ಪಾಂಡಿತ್ಯವನ್ನು ನಿಕಟವರ್ತಿಗಳಾಗಿ ನೋಡಿ ಮಣ್ಣಿನ ಮಗನ ಯಶಸ್ಸಿನ ಗಾಥೆಯನ್ನು ಸುಂದರವಾಗಿ ನಿರೂಪಿಸಿದ್ದಾರೆ.

ಆನಂದಿಬಾಯಿ ಜೋಶಿ: ೧೯೭೦ರಲ್ಲಿ ಕಸ್ತೂರಿಯಲ್ಲಿ ಬರೆದ ಈ ಲೇಖನದಲ್ಲಿ ಮೌಢ್ಯ ಸಂಪ್ರದಾಯಗಳನ್ನು ತೊರೆದು, ಸೀಮಿತ ವಾತಾವರಣದಲ್ಲಿ ಕಾಲ ಕಳೆಯಬೇಕಿದ್ದ ಕಾಲದಲ್ಲಿ, ಮಹಿಳೆ ಉಚ್ಚ ಶಿಕ್ಷಣ ಪಡೆದು ವಿದೇಶದಲ್ಲಿ ವೈದ್ಯಕೀಯ ಪದವಿ ಪಡೆದ ಮೊದಲನೆಯ ಭಾರತೀಯ ಸ್ತ್ರೀ ಆನಂದಬಾಯಿ ಜೋಶಿ. ಇವಳ ಸಾರ್ಥಕ ಬದುಕಿನ ಚಿತ್ರಣವನ್ನು ಪಾ.ವೆಂ. ಈ ರೀತಿಯಾಗಿ ಸ್ಪಷ್ಟೀಕರಿಸುತ್ತಾರೆ. ಯಾವ ಸಮಯದಲ್ಲಿ ವಿದೇಶ ಯಾತ್ರೆ ಎನ್ನುವುದು ಮಹಾಪಾಪ ಎಂದು ತಿಳಿಯುತ್ತಿದ್ದರೋ, ಯಾವ ಸಮಯದಲ್ಲಿ ಸ್ತ್ರೀಯರು ಉದ್ಯೋಗ ದಂಧೆಗಳನ್ನು ಮಾಡುವುದು ಕನಸ್ಸಿನ ಮಾತಾಗಿತ್ತೋ ಅಂಥ ಸಮಯದಲ್ಲಿ ಧೈರ್ಯದಿಂದ ವಿದೇಶಕ್ಕೆ ಹೋಗಿ ಡಾಕ್ಟರಳಾದ ಆನಂದಿಬಾಯಿಯ ಉದಾಹರಣೆ ಮೇಲ್ಪಂಕ್ತಿಯದು. ಅವಳ ಸಾಹಸ, ತ್ಯಾಗ ವ್ಯರ್ಥವಾಗದೇ ಫಲ ಬಿಟ್ಟಿರುವುದನ್ನು ನಾವಿಂದು ಕಾಣಬಹುದು.

ಆನಂದ ಕುಮಾರ ಸ್ವಾಮಿ: ಭಾರತೀಯ ಕಲೆಗೆ ಜಗತ್ತಿನಲ್ಲಿ ಸ್ಥಾನ ದೊರಕಿಸಿಕೊಟ್ಟ ಮಹಾಪುರುಷ, ಸಿಂಹಳೀ ದೇಶದ ಹಿಂದೂ ತಮಿಳು ಜನಾಂಗದವರು. ಭಾರತೀಯ ಪುರಾಣ, ತತ್ವಜ್ಞಾನ, ಸಾಹಿತ್ಯ, ಅಲಂಕಾರಶಾಸ್ತ್ರ, ಶಿಲ್ಪಶಾಸ್ತ್ರ, ಧರ್ಮ ಎಲ್ಲ ಭಾರತೀಯ ಕಲಾ ಕಲ್ಪನೆಗಳನ್ನು ತಲಸ್ಪರ್ಶಿಯಾಗಿ ಅಭ್ಯಾಸ ಮಾಡಿದ್ದರು. ಭಾರತೀಯ ಕವಿಗಳು ಹೇಗೋ ಶಿಲ್ಪಿ, ಚಿತ್ರಕಾರರು ಕೂಡ ವಿಶಿಷ್ಟ ಸಂಕೇತಗಳಿಂದ ಅರ್ಥವನ್ನು ಧ್ವನಿತಗೊಳಿಸುವ ವಿಧಾನ, ರಹಸ್ಯವನ್ನು ಅರಿತರು. ಇದೇ ಶಾಸ್ತ್ರ ಜ್ಞಾನದಿಂದ ಸಜ್ಜಿತರಾಗಿ ಅವರು ಪಾಶ್ಚಾತ್ಯರ ದೃಷ್ಟಿಯೇ ಬೇರೆ ಪೌರಾಸ್ತ್ಯರದೇ ಬೇರೆ ಎಂದು ಮನಗಾಣುವಂತೆ ಸಿದ್ಧಪಡಿಸಿದ್ದರು. **ಪೂರ್ವ ಏಶಿಯಾದ ಕಲಾ ಪರಿಚಯ** ಎಂಬ ಗ್ರಂಥದಲ್ಲಿ ಪೂರ್ವ–ಪಶ್ಚಿಮಗಳ ಆದರ್ಶಗಳಲ್ಲಿರುವ ಅಂತರವನ್ನು ಕರಾರುವಕ್ಕಾಗಿ ವಿಶ್ಲೇಷಿಸಿದ್ದಾರೆ. ಅವರ ಬರವಣಿಗೆ ಸೂತ್ರವತ್ತಾಗಿತ್ತು,ಸ್ಪಷ್ಟವಾಗಿತ್ತು, ನಿಷ್ಪಕ್ಷವಾಗಿತ್ತು ಎಪ್ಪತ್ತು ವರ್ಷ ತಮ್ಮ ಬದುಕಿನ

ಅವಧಿಯಲ್ಲಿ ೪೫ ವರ್ಷಗಳನ್ನು ಭಾರತೀಯ ಕಲೆಯ ಸಲುವಾಗಿ ತೇಯ್ದರು. ಭಾರತೀಯ ಕಲೆಯ ಫತಾಕೆಯನ್ನು ಉಗ್ಗಡಿಸಿದ ಆನಂದ ಕುಮಾರ ಸ್ವಾಮಿಯವರ ಕಾರ್ಯ ಸಾರ್ಥಕವಾಗಿದೆ. ಇಂದು ಜಗತ್ತಿನ ಪೌರಸ್ತ್ಯ ಕಲೆಯ ಬಗ್ಗೆ ಕಂಡು ಬರುವ ಸಾರ್ವತ್ರಿಕ ಉತ್ಸಾಹ, ಹಿರಿಮೆ ಏನಿದ್ದರೂ ಅದು ಭೂಗರ್ಭ ಶಾಸ್ತ್ರಿಯಾಗಿರುವ ಆನಂದ ಕುಮಾರ ಸ್ವಾಮಿಯವರ ಅವಿರತ ಶ್ರಮ, ಸಾಧನೆಯ ಫಲವಾಗಿದೆ. ಆದ್ದರಿಂದ ಪಾ.ವೆಂ. ಅವರು ಓದುಗ ವೃಂದಕ್ಕೆ ಮನನವಾಗುವಂತೆ ಚಿತ್ರಿಸಿದ್ದಾರೆ.

ಸಂದರ್ಶನರೂಪದಲ್ಲಿರುವವರ ಕೆಲವು ಚಿತ್ರಣಗಳಲ್ಲಿ ನಾಟ್ಯಚಾರ್ಯ ಶ್ರೀನಿವಾಸ ಕುಲಕರ್ಣಿ, ಶಿಕ್ಷಣ ತಜ್ಞ ಒಡೆಯರೊಂದಿಗೆ, ಮುರಾರ್ಜಿ ದೇಸಾಯಿ, ಜನಪ್ರಿಯ ಸ್ತ್ರೀ ರೋಗ ತಜ್ಞ ಡಾ. ಶ್ರೀನಿವಾಸ ಕೌಲಗೌಡ ಮುಖ್ಯವಾದ ಚಿತ್ರಣಗಳಾಗಿವೆ. ವ್ಯಕ್ತಿಚಿತ್ರವನ್ನು ರೂಪಿಸುವುದರೊಂದಿಗೆ ವ್ಯಕ್ತಿಯ, ಸಮಾಜದ ಕಳಕಳಿ ಏನೆಂಬುದನ್ನು ಸ್ಪಷ್ಟಪಡಿಸುತ್ತಾರೆ.

ಪ್ರಶ್ನೋತ್ತರದೊಂದಿಗೆ ಇರುವ ವ್ಯಕ್ತಿ ಚಿತ್ರಣದಲ್ಲಿ ಸಮಾಜದ ನ್ಯೂನತೆಗಳೇನು? ಅದಕ್ಕೆ ಪರಿಹಾರವನ್ನು ತಜ್ಞರಿಂದಲೇ ಸೂಚಿಸುವುದು ಮುಖ್ಯವಾಗುತ್ತದೆ. ಶಿಕ್ಷಣ ವೃತ್ತಿ ಮತ್ತು ವೈದ್ಯಕೀಯ ವೃತ್ತಿ ಸೇವಾಧರ್ಮ ಮತ್ತು ಆದರ್ಶವಾದದ ನೆಲೆಯಲ್ಲಿನಿಂತ ಕಾಲವೊಂದಿತ್ತು. ಶಿಕ್ಷಣ ವೃತ್ತಿ ಸಾಮಾಜಿಕ ಪ್ರತಿಷ್ಠೆಯನ್ನು ಕಳೆದುಕೊಂಡಿತು. ವೈದ್ಯಕೀಯ ವೃತ್ತಿ ಪ್ರತಿಷ್ಠೆಯ ಅತಿರೇಕದಿಂದ ನೈತಿಕ ನೆಲೆಯನ್ನು ಕಳೆದುಕೊಂಡಿತು. ಇಂದು ಈ ಸೇವಾ ಧರ್ಮ ವೃತ್ತಿಗಳು ವ್ಯಾಪಾರೀಕರಣದ ದೃಷ್ಟಿಯಿಂದ ಅಧಪತನವಾಗಿ ತನ್ನ ಮೌಲ್ಯವನ್ನೇ ಕಳೆದುಕೊಂಡಿದೆ. ಈ ರೀತಿಯ ಲೇಖನಗಳು ಎಲ್ಲ ಪ್ರಜ್ಞಾವಂತರನ್ನು ಎಚ್ಚರಿಸುವ ಕರೆಗಂಟೆಯಂತಿದೆ.

ರಮಾನಂದ ಚಟರ್ಜಿ: ಭಾರತದ ಪತ್ರಿಕೆಗಳ ಇತಿಹಾಸದಲ್ಲಿ ರಮಾನಂದ ಚಟರ್ಜಿಯವರದು ಬಹುದೊಡ್ಡ ಹೆಸರು. ಪತ್ರಿಕೆಗಳ ಸ್ವಾತಂತ್ರ್ಯಕ್ಕಾಗಿ ದಿಟ್ಟತನದಿಂದ ಬ್ರಿಟೀಷ್ ಸರಕಾರವನ್ನು ಎದುರಿಸಿದರು. ಸಮಾಜ ಸುಧಾರಣೆಗಾಗಿ ದುಡಿದವರು. ಗಾಂಧೀಜಿ ಅವರನ್ನು 'ಋಷಿ' ಎಂದು ಕರೆದಿದ್ದರು. ಪತ್ರಿಕೋದ್ಯೋಗಕ್ಕಂತೂ ಮಹರ್ಷಿಯೇ ಆಗಿದ್ದರು. ಇಂಗ್ಲೀಷ್‌ನಲ್ಲಿ **ಮಾಡರ್ನ್ ರಿವ್ಯೂ**, ಬಂಗಾಳಿಯಲ್ಲಿ **ಪ್ರವಾಸಿ** ಮತ್ತು ಹಿಂದಿಯಲ್ಲಿ **ವಿಶಾಲಭಾರತ** ಮಾಸ ಪತ್ರಿಕೆಯ ಶಿಲಿಯಾಗಿದ್ದರು. ಪತ್ರಿಕೆಗಳು ಹೇಗಿರಬೇಕೆಂಬುದಕ್ಕೆ ಅವು ನಿದರ್ಶನವಾಗಿದ್ದವು. ಭಾರತದಲ್ಲಿ ಮಾತ್ರವಲ್ಲ ಇಂಗ್ಲೇಂಡ್, ಪ್ರಾನ್ಸ್, ಅಮೇರಿಕ, ರಷ್ಯಾಗಳಲ್ಲಿಯೂ ಅದರ ಕೀರ್ತಿ ಗರಿಗೆದರಿತ್ತು. ಅವರ ಪತ್ರಗಳನ್ನು ಗೌರವಿಸುತ್ತಿದ್ದರು. ಸ್ವಾರ್ಥತ್ಯಾಗಕ್ಕೆ, ಕಾರ್ಯನಿಷ್ಠೆಗೆ ಸತ್ಯ ಸಂಧತೆಗೆ ಕೂಡ ಮಾದರಿಯಾಗಿ ಕೀರ್ತಿವಂತ ಭಾರತೀಯರಾಗಿದ್ದಾರೆ. ಎಣಿಸಿದಂತೆ ಮಾತನಾಡಿದ, ಆಡಿದಂತೆ ಬದುಕಿ ತೋರಿದ ಈ ಧಿಮಂತ ಹೇಗೆ ನೋಡಿದರೂ ಮಹಾಪುರುಷ. ರಮಾನಂದ ಚಟರ್ಜಿಯವರ **ಪ್ರವಾಸಿ** ಎನ್ನುವ ಬಂಗಾಳಿ ಪತ್ರಿಕೆ ಮತ್ತು ಪಾ.ವೆಂ. ಅವರು ಇದರಿಂದ

ಪ್ರೇರಣೆಗೊಂಡಿದ್ದಾರೆ. ಇಬ್ಬರು ಪತ್ರಿಕೋದ್ಯೋಗಿಗಳ ಸಮಿಶ್ರಧಾರೆಯ ಮನೋಧರ್ಮ ಇಲ್ಲಿ ಬಿಂಬಿತವಾಗಿದೆ.

ಎ.ಸಿ. ಪ್ಯಾರನ್: ಧಾರವಾಡವನ್ನು ಪ್ರೀತಿಸುತ್ತಿದ್ದ ಯುರೋಪಿನ ನಿವಾಸಿ ಎ.ಸಿ.ಪ್ಯಾರನ್ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಮೂವತ್ತು ವರ್ಷಗಳಿಂದ ಧಾರವಾಡದ ನಿವಾಸಿಗಳಾಗಿದ್ದರು. ಎ.ಸಿ.ಪ್ಯಾರನ್‌ರವರು ಕವಿ ಕೆ.ಎಸ್. ದೇಶಪಾಂಡೆಯವರ ಮನೆಗೆ ಬಂದ ಸಂದರ್ಭದಲ್ಲಿ ಆತ್ಮೀಯ ಮಿತ್ರ ಪಾ.ವೆಂ. ಅವರ ಪ್ಯಾರನ್ನರ ಬಗ್ಗೆ ವಿಷಯಗಳನ್ನು ಹೇಳಿ ಲೇಖನ ಬರೆಯಲು ಮಿತ್ರರಾದ ಕೆ.ಎಸ್.ದೇಶಪಾಂಡೆ ಹೇಳುತ್ತಾರೆ. ೧೯೬೦ ಏಪ್ರಿಲ್ ಕಸ್ತೂರಿನಲ್ಲಿ 'ಬಿಳಿಯ ಕನ್ನಡಿಗ' ಎ.ಸಿ.ಪ್ಯಾರನ್ ಎಂಬ ವ್ಯಕ್ತಿ ಚಿತ್ರ ಲೇಖನ ಪ್ರಕಟವಾಗುತ್ತದೆ. ಕರ್ನಾಟಕ ಕಾಲೇಜಿನ ದಕ್ಷ ಆಡಳಿತಗಾರರಾಗಿ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು, ಶಿಕ್ಷಣ, ಸಮಾಜ, ಕ್ಷೇತ್ರದಲ್ಲಿ ಸಾಧನೆಯ ಕೃಷಿಗೈದು ಕನ್ನಡಿಗರಿಗಿಂತಲೂ, ಕನ್ನಡೇತರರ ಸಾಧನೆ, ಪ್ರಾಮಾಣಿಕ ವ್ಯಕ್ತಿತ್ವವನ್ನು ಪಾ.ವೆಂ. ಯುರೋಪ್ ನಿವಾಸಿಯಾದ ಎ.ಸಿ. ಪ್ಯಾರನ್ನರ ಮೂಲಕ ಓದುಗರಿಗೆ ಪರಿಚಯಿಸಿದ್ದಾರೆ.

ಸಂಗೀತ ಪಂಡಿತ ಭೀಮಸೇನ ಜೋಶಿ: ಮಹಾರಾಷ್ಟ್ರದ ನಿವಾಸಿ. ಕರ್ನಾಟಕದ ಪುತ್ರ ಭೀಮಸೇನ ಜೋಶಿಯವರು ಹಿಂದೂಸ್ತಾನಿ ಸಂಗೀತ ಪದ್ಧತಿಯಲ್ಲಿ ಅಪ್ರತಿಮ ಜನಪ್ರಿಯತೆಯನ್ನು ಪಡೆದು ಖ್ಯಾತಿವೆತ್ತ ಭಾರತೀಯ. ಕಡಿಮೆ ಮಾತುಗಳಲ್ಲಿ ಹೆಚ್ಚು ಹೇಳುವ ಕಲೆ ಪಾ.ವೆಂ. ಅವರಿಗೆ ಸಿದ್ಧಿಸಿದೆ. ಪ.ಭೀಮಸೇನ ಜೋಶಿ ಎನ್ನುವುದರೆಂದು ಸಂಗೀತ ಪಂಡಿತ ಭೀಮಸೇನ ಜೋಶಿ, ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ, ಕಲಾಗುರು ದಂಡಾವತಿಮಠ ಹೀಗೆ ಶೀರ್ಷಿಕೆಯೇ ದೊಡ್ಡ ವ್ಯಾಖ್ಯಾನವು ಬೆಳಕು ಬಿರಲಾರದಷ್ಟು ಬೆಳಕನ್ನು ಬೀರುತ್ತದೆ.

ಬ್ರಹ್ಮರ್ಷಿ ದೈವರಾತರು: ೧೯೮೮ರಲ್ಲಿ ಉಡುಪಿಯ ಬಳಿ ಗೋಕರ್ಣದಲ್ಲಿ ವೇದವಿಧ್ಯೆಯ ತವರೂರು. ಇತಿಹಾಸ ವಿದ್ವಾಂಸರ ಅಭಿಪ್ರಾಯದಲ್ಲಿ ವೇದ ಮಂತ್ರಗಳನ್ನು ಕಂಡ ಕೊನೆಯ ಋಷಿ ಕ್ರಿ.ಪೂ. ೮೦೦ರಲ್ಲಿ ಕಾಲವಾದ ನಂತರ ೨೮೦೦ ವರ್ಷಗಳ ನಂತರ ಕರ್ನಾಟಕದಲ್ಲಿ ಜನಿಸಿದ ಇಪ್ಪತ್ತೈದಕ್ಕೂ ಕಡಿಮೆ ವಯಸ್ಸಿನ ತರುಣನೊಬ್ಬನಿಗೆ ಕೆಲವೇ ವಾರಗಳ ಅವಧಿಯಲ್ಲಿ ವೇದಕಾಲದ ಋಷಿಗಳಂತೆ, ದೈವಿ ಸ್ಫೂರ್ತಿಯಿಂದ ೪೫೦ ಮಂತ್ರಗಳನ್ನು ರಚಿಸಿದ ಅದೇ ವೇದದ ಭಾಷೆ, ಛಂದಸ್ಸುಗಳು ವೇದಮಂತ್ರದಲ್ಲಿ ಕಾಣಬರುವ ಅಪ್ರತಿಮ ಸ್ವರಗಳು ಮತ್ತು ನಾದ. ಅವರೇ ಬ್ರಹ್ಮರ್ಷಿ ದೈವರಾತರು ಎಂದು ಪ್ರಸಿದ್ಧರಾಗಿ ಭಾರತದ ವೇದಜ್ಞ ವಿದ್ವಾಂಸರಲ್ಲಿ ಶ್ರೇಷ್ಠರೆಂದು ಪರಿಗಣಿಸಿದ್ದಾರೆ.

ಮೆಹರ್‌ಚಂದ್ರ ಮಹಾಜನ: ೧೯೬೬ರಲ್ಲಿ ಎಸ್. ನಿಜಲಿಂಗಪ್ಪನವರು ಮೈಸೂರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ ಮಹಾರಾಷ್ಟ್ರದಲ್ಲಿ ಕರ್ನಾಟಕದ ವಿರುದ್ಧ ಗಡಿ

ತಂಟೆಗೆ ಮತ್ತೆ ಜೀವ ಕೊಟ್ಟರು. ಅದೇ ಆಗ ಪ್ರಧಾನಮಂತ್ರಿಯಾಗಿ ಅಧಿಕಾರದಲ್ಲಿದ್ದ ಇಂದಿರಾಗಾಂಧಿಯವರ ಮೇಲೆ ಮಹಾರಾಷ್ಟ್ರ ಸರಕಾರ ಒತ್ತಡ ಹೇರಿ ಎರಡು ರಾಜ್ಯಗಳ ನಡುವಿನ ಗಡಿ ತಂಟೆಯನ್ನು ನಿರ್ಣಾಯಕವಾಗಿ ಬಗೆ ಹರಿಸಬೇಕು ಮತ್ತು ಮಹಾರಾಷ್ಟ್ರದ ನಿರಂತರ ಬೇಡಿಕೆಯಾದ ಬೆಳಗಾವಿ ಪ್ರದೇಶ ಮಹಾರಾಷ್ಟ್ರಕ್ಕೆ ದಕ್ಕುವಂತೆ ಉಪಾಯ ಯೋಚಿಸಿಬೇಕೆಂಬ ಇಂಗಿತ ಇಟ್ಟುಕೊಂಡು ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಲಾಯಿತು. ಆದರೆ ಕನ್ನಡಿಗರಿಗೆ ಈ ಆಯೋಗ ರಚನೆ ಸಮ್ಮತವಾಗಿರಲಿಲ್ಲ. ಆದರೂ ನಿಜಲಿಂಗಪ್ಪನವರ ಉದಾರ ಮತ್ತು ನಿಷ್ಪಕ್ಷಪಾತ ವಿಚಾರಸರಣಿಗೆ ಕನ್ನಡಿಗರು ತಲೆಬಾಗಿದರು. ಮೆಹರ್ ಚಂದ್ ಮಹಾಜನ ಒಂದು ವರ್ಷದಲ್ಲಿ ಗಡಿಭಾಗದಲ್ಲೆಲ್ಲ ಸಂಚರಿಸಿ ಜನಾಭಿಪ್ರಾಯ ಮತ್ತು ಐತಿಹಾಸಿಕ ಸಾಕ್ಷ್ಯಾಧಾರಗಳನ್ನು ಹಾಗೂ ಭಾಷಿಕ ಪ್ರದೇಶದ ಜನಗಳ ವಲಸೆಯಲ್ಲಿಯ ಚಲನಶೀಲತೆ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯಾವ ಯಾವ ಪ್ರದೇಶಗಳು ಯಾವ ರಾಜ್ಯದಲ್ಲಿರಬೇಕೆಂಬುದನ್ನು ತೂಕಬದ್ಧವಾಗಿ ವಿಮರ್ಶಿಸಿ ಒಂದು ಅತ್ಯುತ್ತಮ ವರದಿಯನ್ನು ಕೇಂದ್ರ ಸರಕಾರಕ್ಕೆ ನೀಡಿದರು. 'ಮಹಾಜನ ವರದಿ'ಯ ಅತಿಮುಖ್ಯವಾದ ಶಿಫಾರಸ್ಸು ಎಂದರೆ..

(೧) ಬೆಳಗಾವಿ ಈಗ ಎಲ್ಲಿದೆಯೋ (ನಗು) ಅಲ್ಲಿಯೇ ಇರುವುದು ನ್ಯಾಯ ಎಂಬ ಅಂಶ. (೨) ಕೇರಳರಾಜ್ಯಕ್ಕೆ ಸೇರಿಸುವ ಕಾಸರಗೋಡು ಪ್ರದೇಶ ಕನ್ನಡಿಗರಾಗಿರುವುದರಿಂದ ಅದು ಇಡೀಯಾಗಿ ಮೈಸೂರು ರಾಜ್ಯಕ್ಕೆ ಸೇರಬೇಕೆಂಬ ಅಂಶ ಇವೆರಡು ಅಂಶಗಳು ಕ್ರಮವಾಗಿ ಮಹಾರಾಷ್ಟ್ರಕ್ಕೆ, ಕೇರಳಕ್ಕೆ ಒಪ್ಪಿಗೆಯಾಗುವಂತಿರಲಿಲ್ಲ.

ರಾಜಕೀಯವಾಗಿ ಪ್ರಬಲರಾದ ಆ ಎರಡು ರಾಜ್ಯಗಳ ನಾಯಕರು ಮಹಾಜನ ಶಿಫಾರಸ್ಸನ್ನು ಜಾರಿಗೆ ತರುವಂತೆ ಪ್ರತಿರೋಧ ಒಡ್ಡಿದರು. ಆದರೆ ಕನ್ನಡಿಗರಿಗೆ ಮಾತ್ರ ಮಹಾಜನರ ವರದಿ ನಿರ್ಣಯಾತ್ಮಕವಾಗಿಯೇ ಕಂಡಿದೆ. ಗಡಿತಂಟೆಯ ವಿಷಯದಲ್ಲಿ ಮೊದಲು ಕನ್ನಡಿಗರಿಗೆ ಬೇಡ ಅನ್ನಿಸಿದ್ದ ನ್ಯಾಯಮೂರ್ತಿ ಮಹಾಜನ್ ನಂತರ ಬೇಕಾದ ವ್ಯಕ್ತಿಯಾಗಿ ಕಂಡದ್ದು ಒಂದು ಚೋದ್ಯ ವಿಷಯವೇ ಸರಿ. ಈ ಸಂದರ್ಭದಲ್ಲಿ ಪಾ.ವೆಂ. ಅವರು ಮೆಹರಚಂದ ಮಹಾಜನರನ್ನು ನಮಗೆ ಪರಿಚಯ ಮಾಡಿಕೊಡುತ್ತ ಅವರ ವ್ಯಕ್ತಿತ್ವದಲ್ಲಿಯ ಮುತ್ಸದ್ಧಿತನ (Statmanship)ವನ್ನು ಎತ್ತಿ ತೋರಿಸಿದ್ದಾರೆ. ಈ ಮುಂಚೆ ಮಹಾಜನರು ಗಡಿತಂಟೆ ಭಾಷಾ ವಿವಾದ ಸಾಂಸ್ಕೃತಿಕ ತಾರತಮ್ಯದ ಸಮಸ್ಯೆಗಳನ್ನು ಪರಿಹರಿಸುವ ರೀತಿಯಲ್ಲಿ ಕೆಲಸಮಾಡಿದ ವಿಶಾಲ ಭಾರತೀಯ ಮಟ್ಟದ ನ್ಯಾಯಾಮೂರ್ತಿಯಾಗಿದ್ದಾರೆಂದು ಭಾರತವನ್ನು ಜಾತೀಯ ಮತ್ತು ಮತೀಯ ಸಂಕುಚಿತ ಮತಿಯ ಬುದ್ಧಿಯ ಹೇಳಿಕೆ ಕೇಳಿಕೆಗಳಿಂದ ಪ್ರಾಂತ್ಯಗಳಿಂದ ವಿಭಜಿಸಬಾರದೆಂಬುದು ನ್ಯಾಯಮೂರ್ತಿ ಮಹಾಜನರ ಖಚಿತ ತಿಳುವಳಿಕೆಯಾಗಿತ್ತು. ಅದರ ಈ ತಿಳುವಳಿಕೆಯನ್ನು ಜವಾಹರಲಾಲಾ ನೆಹರು, ವಿ.ವಿ.ಗಿರಿ ಮುಂದೆ ಇಂದಿರಾಗಾಂಧಿ ಮೆಚ್ಚಿಕೊಂಡಿದ್ದರು. ಇಂತಹ ಮಹಾಜನರು ಕರ್ನಾಟಕದ ಪರವಾಗಿ ಕೊಟ್ಟ ಶಿಫಾರಸ್ಸು ಐತಿಹಾಸಿಕವಾಗಿ ಮಹತ್ವದ್ದು. ಈ ದೃಷ್ಟಿಯಿಂದ ಪಾ.ವೆಂ. ಅವರನ್ನು ಧನ್ಯತೆಯಿಂದ ನೆನೆದಿದ್ದಾರೆ.

ಖ್ಯಾತಿವೆತ್ತ ಭಾರತೀಯರಲ್ಲಿ ಸಾವಿರಾರು ಕಲಾವಿದರನ್ನು ನಾಡಿಗೆ ನೀಡಿದ ಧಾರವಾಡದ ಜಿ.ಯಸ್. ದಂಡಾವತಿಮಠ, ಕೇರಳದ ಮುಖ್ಯಮಂತ್ರಿ ನಂಬೂದ್ರಿಪಾದ, ನೆಹರು ಮಹಾಪುರುಷನ ಪತ್ನಿ ಕಮಲಾನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಭಾರತೀಯ ರಾಜಕಾರಣದ ಸಿಡಿಲಮರಿ ಲೋಹಿಯಾ, ನೆಹರೂ ಮನೆತನದ ಸೌಮ್ಯ ವಿಧೇಯ ಹುಡುಗಿ, ಜಗತ್ತಿನ ಶ್ರೇಷ್ಠ ಮಹಿಳೆ ವಿಜಯಲಕ್ಷ್ಮೀ ಪಂಡಿತ್, ಅದೃಷ್ಟದ ವಿರುದ್ಧ ಧೈರ್ಯದ ವಿಜಯ ಸಾಧಿಸಿದ ಡಾ.ಮೇರಿ ವರ್ಗಿಸ್, ಹರಿಜನ ಮತ್ತು ಮಹಿಳೆಯರ ಕಲ್ಯಾಣಕ್ಕಾಗಿ ದುಡಿದ ಹರಿಜನ ಕೈವಾರ ಸರದಾರ ವೀರನಗೌಡರು, ಜಾತ್ಯತೀತ ತತ್ವಕ್ಕಾಗಿ ಹುತಾತ್ಮನಾದ ಮೀರ್‌ಮಕಬಲ್ ಶೆರ್ವಾನಿ, ವೀಣೆಶೇಷಣ್ಣ ರಾಜಕಾರಣದಲ್ಲಿ ತೊಡಗಿದ ಕವಿಯತ್ರಿ ಭಾರತದ ಕೋಗಿಲೆ ಸರೋಜಿ ದೇವಿ, ವೇದಾವಿದ್ಯಜೀವನ ನಡೆಸಿದ ಪಂಡಿತ ಸಾತವಳೇಕರ, ಈ ಎಲ್ಲಾ ಭಾರತೀಯರು ತಮ್ಮ ಯಶಸ್ಸಿನಿಂದ, ಸಾಧನೆಯಿಂದ ವಿಖ್ಯಾತ ಭಾರತೀಯರಾಗಿದ್ದಾರೆ. ಜೀವನದ ಅನೇಕ ರಂಗಗಳಲ್ಲಿ ವಿಜೃಂಬಿಸಿದವರು, ಎಲ್ಲ ವರ್ಗದವರು ಪಾ.ವೆಂ. ಅವರ ನಜರಿಗೆ ಬಿದ್ದಿದ್ದಾರೆ. ಜಗದ್ವಿಖ್ಯಾತರು ಚಿತ್ರಣದಲ್ಲಿ ಒಬ್ಬ ವ್ಯಕ್ತಿಯ ಚಿತ್ರಣದಂತೆ ಮತ್ತೊಂದಿಲ್ಲ. ರಾಜಕಾರಣಿಗಳು, ರಾಜನೀತಿ ತಜ್ಞರು, ಶಿಕ್ಷಣ ತಜ್ಞರು, ಪ್ರಸಿದ್ಧ ವೈದ್ಯರು, ಶಿಲ್ಪಿಗಳು ಕಲಾಕಾರರು, ಯೋಗನಿರ್ಮಾತೃಗಳು, ವೇದವಿದ್ಯಾಪಾರಂಗತರು, ಸಂಗೀತ ವಾದ್ಯ ಕಲಾನಿಪುಣರು, ಹೋರಾಟಗಾರರು, ಪತ್ರಿಕೋದ್ಯಮ–ಹೀಗೆ ನಾನಾ ಭೂಮಿಯಲ್ಲಿ ಯಶಸ್ಸಿನ ಕೃಷಿಯನ್ನು ಗೈದವರು ಭಾರತ ಭೂಮಿಗೆ ತಮ್ಮ ಕಾಣಿಕೆಯನ್ನು ತೆತ್ತವರು ಈ ವ್ಯಕ್ತಿಗಳು. ಈ ಖ್ಯಾತಿವಂತರ ಚಿತ್ರಣ ಒಂದು ಭಾರತದರ್ಶನದಂತಿದೆ. ಅನೇಕ ಕಲಾ ವಿದ್ಯಾ ಸಂಸ್ಕೃತಿಗಳ ಲೋಕದಲ್ಲಿ ವಿಹರಿಸಿದಂತೆ ಭಾಸವಾಗುತ್ತದೆ. ಪಾ.ವೆಂ. ಅವರು ಆಂತರಿಕ ಬಾಹ್ಯ ವ್ಯಕ್ತಿತ್ವವನ್ನು ಸೆರೆಹಿಡಿದಿದ್ದಾರೆ. ಅವರ ಲೋಪ ದೋಷಗಳೇನೆಂಬುದನ್ನು ತಿಳಿಸಿದರೂ ಅದು ಓದುಗರಿಗೆ ಚಿತ್ರಿಸಿದ ರೀತಿಯಿಂದ ಆತ್ಮೀಯತೆ ಹುಟ್ಟಿ ಬರುವಂತಿದೆ. ಇದು ಪಾ.ವೆಂ. ಅವರ ಚಿತ್ರಣ ಕಲೆಯೂ ಹೌದು.

ಉಡುಪಿಯ ಪರಿಸರದಲ್ಲಿ ಪಾ.ವೆಂ.: ಪಾ.ವೆಂ. ಅವರ ತಮ್ಮ ಜೀವನದ ಪ್ರಾರಂಭದ ಇಪ್ಪತ್ತೈದು ವರ್ಷಗಳನ್ನು ಉಡುಪಿಯಲ್ಲೇ ಮುಗಿಸಿದರು. ಬಾಲ್ಯ, ಶಿಕ್ಷಣವೃತ್ತಿಯ ಅನುಭವದ ಪಾಠಗಳ ದರ್ಶನ ಇಲ್ಲೇ ಲಭಿಸಿತ್ತು. ತಮ್ಮ ಬದುಕಿನ ಪ್ರಾರಂಭದಿಂದಲೇ ನಿಕಟವರ್ತಿಗಳಾಗಿ, ಆತ್ಮೀಯರಾಗಿ, ಗೌರವ ಪೂಜ್ಯರಾಗಿ ಕಂಡಿದ್ದ ಗಣ್ಯ ವ್ಯಕ್ತಿಗಳನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಪಾ.ವೆಂ. ಅವರ ಸ್ವಂತಿಕೆ, ಸ್ವಾನುಭವದ ಅಂಶ ಎದ್ದು ಕಾಣುತ್ತದೆ.

ಪೇಜಾವರ ಶ್ರೀ ವಿಶ್ವೇಶ್ವರ ತೀರ್ಥರು: ತನ್ನ ಬಾಲ್ಯ ಜೀವನದಿಂದಲೇ ಮಠಗಳ ಮಠಾಧಿಪತಿಗಳ ಸಂಪರ್ಕವಿದ್ದ ಪಾ.ವೆಂ. ಪೇಜಾವರ ಶ್ರೀಯವರ ಬಗ್ಗೆ ಮಾತ್ರ ಪೂಜ್ಯ ಗೌರವ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಶ್ರೀಯವರ ಮನೋಭೂಮಿಕೆ, ತಾತ್ವಿಕ

ನಿಲುವುಗಳು ಏನೆಂಬುದು ಈ ಲೇಖನದಿಂದ ಸ್ಪಷ್ಟವಾಗುತ್ತದೆ. ಶ್ರೀಯವರು ಕೇವಲ ಧರ್ಮಕ್ಕೆ ಮಹತ್ವವನ್ನು ನೀಡದೆ, ಮಠಾಧಿಪತಿಗಳ ಜವಾಬ್ದಾರಿಯನ್ನು ಹೇಗೆ ಭರಿಸಬೇಕೆಂಬುದನ್ನು ಪಾ.ವೆಂ. ಸ್ಪಷ್ಟಪಡಿಸುತ್ತಾರೆ. ಶಿಕ್ಷಣರಂಗ ವೈದ್ಯಕೀಯ ಸೇವೆ, ಇತರ ಸಾಮಾಜಿಕ ಯೋಜನೆಗಳು, ಸರಕಾರದ ಭೂ ಸುಧಾರಣೆಗೆ ಬಹಿರಂಗ ಬೆಂಬಲವನ್ನು ನೀಡಿರುವುದು ಶ್ರೀಯವರ ಕರ್ತವ್ಯ ಪ್ರಜ್ಞೆ, ಕಾಲ ಪ್ರಜ್ಞೆಯನ್ನು ಹೇಗೆ ಮೆರೆದಿದ್ದಾರೆಂಬುದು ಇಲ್ಲಿ ಮುಖ್ಯವಾಗಿ ತೋರುತ್ತದೆ.

ಮಠಗಳೆಂದರೆ ಸರ್ವಸ್ವವನ್ನು ಪರಿತ್ಯಾಗ ಮಾಡಿದ ಬೀಡಲ್ಲ. ಮಠಾಧಿಪತಿಗಳೆಂದರೆ ಬರೇ ಅಧ್ಯಾತ್ಮಿಗಳೂ ಧರ್ಮೋಪದೇಶಕರೂ ಆಗಿರದೆ ಧರ್ಮ ಕೇಂದ್ರಿತವಾದ ಸಮಾಜ ಜೀವನಕ್ಕೆ ದಿಕ್ಕು ತೋರಿಸುವ ಸಂಸ್ಥೆಗಳು ಜನತೆಯ ಬದುಕಿನೊಡನೆ ನಿಕಟ ಸಂಪರ್ಕ–ವಿರಬೇಕು. ಜನಪರವಾಗಿ ತಮ್ಮ ಬದುಕನ್ನು ಸಾಗಿಸಬೇಕು. ಈ ರೀತಿಯಿಂದ ತಮ್ಮ ಜೀವನವನ್ನು ಮೆರೆದ ಭಾರತೀಯ ಸಾಂಪ್ರದಾಯಿಕ ಮಠಾಧೀಶರಲ್ಲಿ ಪೇಜಾವರ ಶ್ರೀಗಳು ಪ್ರಮುಖರು ಎಂಬುದು ಪಾ.ವೆಂ. ಅಭಿಮತ.

ಡಾ.ತೋನ್ಸೆ ಮಾಧವ ಪೈ: ಎಸ್. ಯು. ಪಣಿಯಾಡಿಯವರ ಸಂಸ್ಥೆಗಳಲ್ಲಿ ಉಡುಪಿಯಲ್ಲಿ ಕೆಲಸ ಮಾಡುತ್ತಿದ್ದಾಗ ಪಣೆಯಾಡಿಯವರಿಗೂ ಪೈಯವರಿಗೂ ಸ್ನೇಹ ಸಂಪರ್ಕವಿತ್ತು. ಆಧುನಿಕ ಉಡುಪಿಯ ನಿರ್ಮಾಪಕರಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಒಬ್ಬ ವ್ಯಕ್ತಿಯಲ್ಲಿ ಹೊಕ್ಕು (Ferveding) ಹಚ್ಚಿಕೊಳ್ಳುವಂಥಾ ಗಾರುಡಿಯ ವ್ಯಕ್ತಿತ್ವ ಪೈಯವರದು. ಈ ರೀತಿ ಮನುಷ್ಯರನ್ನು ಗಮನಿಸುವ ಅವರ ಸ್ವಭಾವ ಪಾ.ವೆಂ. ಅವರಿಗೆ ವಿಶೇಷವಾಗಿ ಕಾಣುತ್ತದೆ. ತಮ್ಮ ಸ್ವಾನುಭವದ ಉದಾಹರಣೆಯನ್ನು ಇಲ್ಲಿ ನೀಡುತ್ತಾರೆ.

ತೋನ್ಸೆ ಅನಂತ ಪೈ: ತರುಣ ವಯಸ್ಸಿನಲ್ಲಿ ಕಾಬಿನೆಟ್ ದರ್ಜೆಯಲ್ಲಿ ಕೇಂದ್ರದ ಮಂತ್ರಿಯಾದದ್ದು ಅವರ ಕಾರ್ಯ ಸಾಮರ್ಥ್ಯದ ದ್ಯೋತಕವಾಗಿದೆ. ಯಾವುದೇ ಕಾರ್ಯವನ್ನು ಸಾದ್ಯ ಅಸಾದ್ಯತೆಯ ದೃಷ್ಟಿಯಿಂದ ಅಳೆಯುತ್ತಾರೆ. ಯಾವುದು ಒಪ್ಪಂದದ ಹಿತಕ್ಕೆ, ಪ್ರಗತಿಗೆ ಸಹಾಯವಾದಿತೋ ಅಂತಹ ಕೆಲಸವನ್ನು ಆತುರವಿಲ್ಲದ ಸಾವಕಾಶವಾಗಿ ನಡೆಯಲ್ಲಿ ಸಾಧಿಸುವ ಗುಣ ಮೆಚ್ಚುವಂತದ್ದು.

ಶ್ರೀ ಎಂ. ಮಧ್ವರಾಜರು: ದಕ್ಷಿಣ ಕನ್ನಡ ಜಿಲ್ಲೆಯ ಮತ್ಸ ವ್ಯವಸಾಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ರೀತಿಯನ್ನು ಪಾ.ವೆಂ. ಇಲ್ಲಿ ಕೊಂಡಾಡುತ್ತಾರೆ. ಮಧ್ವರಾಜರ ಕ್ರತು ಶಕ್ತಿ ನೆಲಮಟ್ಟದಲ್ಲಿ ಮುಂದಾಳ್ತನವೊದಗಿಸುತ್ತಾ ದೇಶವನ್ನು ಪ್ರಗತಿಯತ್ತ ಮುನ್ನಡೆಸುತ್ತಿದೆ. ೪೦ರ ಈ ತರುಣನಿಗೆ ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು 'ಮೀನುಗಾರಿಕೆಯ ನವಬ್ರಹ್ಮ', 'ಮತ್ಸ್ಯೋದ್ಯಮದ ರಾಜ' ಎನ್ನುತ್ತಾರೆ. ಸಾರ್ವಜನಿಕ ಹಿತಾಶಕ್ತಿಗೆ ಮಧ್ವರಾಜರ ಕೊಡುಗೆ ಅಪಾರವಾದುದು. ಅವರ ಸಹ ಧರ್ಮಿಣಿ ಮನೋರಮ ಪತಿಗೆ ತಕ್ಕ ಗೃಹಿಣೀ ಸಚಿವೆ ಆಗಿದ್ದಾರೆ. ಇದರಿಂದಲೇ ಪಾ.ವೆಂ. ಅವರು ಮಧ್ವರಾಜರನ್ನು ಅವರು ಕುಟುಂಬವನ್ನು ಪ್ರೀತಿಯಿಂದ ಸ್ಮರಿಸಿದ್ದಾರೆ.

೧೦. ವಿಜ್ಞಾನ ವಿಸ್ಮಯ:

ವೈಜ್ಞಾನಿಕ ಪ್ರಬಂಧ: ಪ್ರಾರಂಭದಲ್ಲಿ ವಿಜ್ಞಾನ ತತ್ವಜ್ಞಾನದ ಒಂದು ಭಾಗವಾಗಿ ಬೆಳೆದುಬಂದಿದೆ. ತನ್ನ ಸುತ್ತ ಮುತ್ತಲಿನ ನೈಸರ್ಗಿಕ ವಿದ್ಯಮಾನಗಳ ಬಗ್ಗೆ ನಿಖರವಾದ ಜ್ಞಾನವನ್ನು ದೊರಕಿಸಲು ಆತ ತನ್ನ ಬುದ್ಧಿಯನ್ನು ಸರಿಯಾದ ದಾರಿಯಲ್ಲಿ ಬಳಸಿದಾಗ ಹುಟ್ಟಿಕೊಂಡದ್ದು 'ವಿಜ್ಞಾನ' ಪ್ರಾರಂಭದಲ್ಲಿ ಮಂದಗತಿಯಲ್ಲಿ ಸಾಗಿದ ಈ ವಿಜ್ಞಾನ ೧೯ ಮತ್ತು ೨೦ನೇ ಶತಮಾನದಲ್ಲಿ ತೀವ್ರಗತಿಯಲ್ಲಿ ಬೆಳೆಯಲಾರಂಭಿಸಿತು. ವಿಜ್ಞಾನದ ಅದ್ಭುತ ಪ್ರಗತಿಯ ಕಾರಣದಿಂದ ಒಂದೊಂದು ವಿಜ್ಞಾನ ಶಾಖೆಯಲ್ಲಿ ಪ್ರತಿದಿನ ಸಹಸ್ರಾರು ಸಂಶೋಧನಾ ಲೇಖನಗಳು ಹುಟ್ಟಿಕೊಂಡವು. ವಿಜ್ಞಾನಿಗೆ ತನ್ನ ನಿರ್ಧಿಷ್ಟ ಸಂಶೋಧನ ಕ್ಷೇತ್ರದೊಂದಿಗೆ ಬರವಣಿಗೆಯ ಕಡೆ ಲಕ್ಷ್ಯಕೊಡಲು ಸಾಧ್ಯವಾಗುತ್ತಿರಲಿಲ್ಲ. ಸಂಶೋಧಕರಿಗೂ ಲೇಖನಗಳನ್ನು ಓದಲು ಸಾಧ್ಯವಾಗುತ್ತಿರಲಿಲ್ಲ. ತತ್ಪರಿಣಾಮವಾಗಿ ಜನರು ವಿಜ್ಞಾನದಿಂದ ಹೆಚ್ಚು ವಿಮುಖರಾಗುತ್ತಾ ನಡೆದರು.

ಈ ಪರಿಸ್ಥಿತಿಯಲ್ಲಿ ಹುಟ್ಟಿಕೊಂಡದ್ದು ಜನಪ್ರಿಯ ವಿಜ್ಞಾನ ಸಾಹಿತ್ಯ. ಕುತೂಹಲ ಮನುಷ್ಯನ ಸಹಜ ಪ್ರವೃತ್ತಿ ಕ್ಲಿಷ್ಟವಾದ ವೈಜ್ಞಾನಿಕ ಸಂಶೋಧನೆಗಳನ್ನು ವೈಜ್ಞಾನಿಕ ವಿದ್ಯಮಾನಗಳನ್ನು ನಿಸರ್ಗದ ವಿದ್ಯಮಾನಗಳ ಬಗೆಗಿರುವ ತಿಳಿವನ್ನು, ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಸರಳ ಭಾಷೆಯಲ್ಲಿ ರಚಿತವಾದವು. ವೈಜ್ಞಾನಿಕ ಅರಿವನ್ನು ಓದುಗರಿಗೆ ಮೂಡಿಸುವುದು, ವಿಜ್ಞಾನದ ವಿಶೇಷವನ್ನು ಬಿಂಬಿಸುವುದು, ಪ್ರಕೃತಿ ನಿದರ್ಶನ, ಸುಲಭ ಗ್ರಾಹ್ಯವಾದ ನುಡಿಗಟ್ಟು, ಸಚಿತ್ರ ಉದಾಹರಣೆ, ವಸ್ತು ನಿಷ್ಟತೆಯ ಎಚ್ಚರಿಕೆಯನ್ನು ಪಾ.ವೆಂ. ತನ್ನ ಪ್ರಬಂಧದಲ್ಲಿ ರೂಪಿಸಿದ್ದಾರೆ.

ತಜ್ಞರಲ್ಲದ ಓದುಗರಿಗಾಗಿ ವೈಜ್ಞಾನಿಕ ಪ್ರಬಂಧ ಹುಟ್ಟಿಕೊಳ್ಳಲು ಕಾರಣ ಕೆಲವೈಜ್ಞಾನಿಕ ಸಂಶೋಧನೆಗಳು ವಿಶೇಷವಾಗಿ ಜನರ ಗಮನ ಸೆಳೆಯುತ್ತದೆ. ಉದಾ: ಪ್ರಖ್ಯಾತ ಜೀವ ವಿಜ್ಞಾನಿ ಚಾರ್ಲಸ್‌ಡಾರ್ವಿನ್ **ವಿಕಾಸವಾದ** ಕುರಿತು ಪ್ರಬಂಧ ಪ್ರಕಟಿಸಿದಾಗ ಯುರೋಪಿನ ದೇಶಗಳಲ್ಲಿ ಬೈಬಲನಲ್ಲಿ ಹೇಳಿದ ಅಂಶಕ್ಕೆ ವಿರೋಧವಾಗಿತ್ತು ಎಂದು ದೊಡ್ಡ ಕೋಲಾಹಲವೇ ಉಂಟಾಯಿತು. ಆದರೆ ಡಾರ್ವಿನನ ಅನುಯಾಯಿ ಥಾಮಸ್ ಹರ್ಲೆ ಇದನ್ನು ಜನರಿಗೆ ಸಮರ್ಥಿಸಿ ವೈಜ್ಞಾನಿಕ ಪ್ರಬಂಧ ಸಾಹಿತ್ಯದ ಆದ್ಯ ಪ್ರವರ್ತಕನಾದ.

೨೦ನೇ ಶತಮಾನದಲ್ಲಿ ಆಧುನಿಕ ವಿಜ್ಞಾನದ ಸಂಪರ್ಕ ಬಂದದ್ದು ಬ್ರಿಟೀಷರಿಂದ ಆಂಗ್ಲಭಾಷೆಯಲ್ಲಿಯೇ ವಿಜ್ಞಾನ ಶಿಕ್ಷಣ ನಡೆಯುತ್ತಿತ್ತು. ಆದರೆ ವಿಜ್ಞಾನ, ತಂತ್ರಜ್ಞಾನ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆದ್ದರಿಂದ ಪ್ರತಿಯೊಬ್ಬ ಪ್ರಜ್ಞೆಯೂ ಅದನ್ನು ತಿಳಿದುಕೊಳ್ಳುವುದು ಅಗತ್ಯ. ಜನಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲಿ ಹೇಳುವುದು ಕಷ್ಟ. ಆದರೆ ಈ ರೀತಿಯ ವಿಜ್ಞಾನದ ಸಾಧನೆಗಳನ್ನು ತಿಳಿಯಲು ಸಂಶೋಧನಾನಿರತ ವಿಜ್ಞಾನಿಯೇ ಆಗಿರಬೇಕಿಲ್ಲ. ವಿಜ್ಞಾನಿಗಳು ತಮ್ಮ ಮಟ್ಟದಿಂದ ಸ್ವಲ್ಪ ಕೆಳಗಿಳಿದು ಈ ಕೆಲಸ ಮಾಡಬಹುದು. ಹಾಗೆಯೇ ಜನಸಾಮಾನ್ಯರು ಸ್ವಲ್ಪ

ಮೇಲೆ ಹೋಗಿ ವಿಜ್ಞಾನದ ವಿಷಯವನ್ನು ಅರಿತುಕೊಳ್ಳುವ ಆಸಕ್ತಿ ತೋರ್ಪಡಿಸಬೇಕು ಅಂದಾಗ ವಿಜ್ಞಾನ ಜನಪ್ರಿಯವಾದಿತು. ಈ ನಿಟ್ಟಿನಲ್ಲಿ ಉತ್ತಮ ವಿಜ್ಞಾನ ಸಾಹಿತ್ಯ ರೂಪುಗೊಂಡು ಕಸ್ತೂರಿ ಪತ್ರಿಕೆಯ ಮೂಲಕ ಜನಮನವನ್ನು ಗೆದ್ದ ಪಾ.ವೆಂ. ಅವರ ಕಾರ್ಯತತ್ಪರತೆ ಮಹತ್ವದ್ದು.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ: ವೈಜ್ಞಾನಿಕ ಪ್ರಬಂಧಕ್ಕೆ ಹೆಚ್ಚು ಆಸಕ್ತಿ ವಹಿಸಿ ಕಾರ್ಯ ಪ್ರವೃತ್ತರಾದವರು ಬೆಂಗಳೂರು ಸೆಂಟ್ರಲ್ ಕಾಲೇಜಿನ ಭೌತವಿಜ್ಞಾನದ ಪ್ರಾಧ್ಯಾಪಕರಾದ ಬೆಳ್ಳಾವೆ ವೆಂಕಟನಾರಾಯಣಪ್ಪ ಮತ್ತು ಮೈಸೂರು ಸರ್ಕಾರದ ಪವನಶಾಸ್ತ್ರ ವೀಕ್ಷಣಾಲಯದ ಮುಖ್ಯಸ್ಥರಾಗಿದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ, ೧೯೦೭ರಲ್ಲಿ ಈ ಇಬ್ಬರು ಮಹನೀಯರು 'ಕರ್ನಾಟಕ ವಿಜ್ಞಾನ' ಪ್ರಚಾರಣೆ ಸಮಿತಿ ಸಂಸ್ಥೆಯನ್ನು ಕಟ್ಟಿದರು. ಇದರ ಆಶ್ರಯದಲ್ಲಿ ವಿಜ್ಞಾನ ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸಿದರು. ಹೆಚ್ಚು ಕಾಲ ಇದು ಉಳಿಯಲಿಲ್ಲ. ಮುಂದೆ 'ವೈಜ್ಞಾನಿಕ ಗ್ರಂಥಮಾಲೆಯನ್ನು' ಮೈಸೂರು ರಾಜ ಶ್ರೀಕಂಠದತ್ತ ಒಡೆಯರ್ ಇವರ ಧನ ಸಹಾಯದಲ್ಲಿ ಆರಂಭಿಸಿದರು. ಈ ಗ್ರಂಥಮಾಲೆಯಿಂದಲೇ 'ನಂಗಪುರಂ ವೆಂಕಟೇಶ ಅಯ್ಯಂಗಾರರು ಅನುವಾದಿಸಿದ ಜ್ಯೋತಿರ್ವಿನೋದಿನಿ' ಪುಸ್ತಕ ಪ್ರಕಟವಾಯಿತು.

೧೯೩೧ರಲ್ಲಿ ಶಿವರಾಮ ಕಾರಂತರ 'ಬಾಲಪ್ರಪಂಚದ' ಮೂರು ಸಂಪುಟಗಳ ಮಕ್ಕಳ ವಿಶ್ವಕೋಶದಲ್ಲಿ ವಿಜ್ಞಾನವನ್ನು ಕುರಿತ ಲೇಖನಗಳಿಗೆ ಮುಖ್ಯ ಸ್ಥಾನವನ್ನು ಕೊಟ್ಟಿದ್ದಾರೆ. ವಿಜ್ಞಾನವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿ ವಿಶ್ವವಿದ್ಯಾಲಯದ ಪದವಿ ಪಡೆದಿಲ್ಲ ವಿಜ್ಞಾನ ಉಪನ್ಯಾಸಕರಲ್ಲ ಆದರೂ ಕಾರಂತರು ಆಂಗ್ಲಭಾಷೆಯಲ್ಲಿಯ ವಿಜ್ಞಾನ ಗ್ರಂಥಗಳನ್ನು ಓದಿದರು. ಆನಂದಿಸಿದರು. ತಮ್ಮ ಜ್ಞಾನ ಆನಂದವನ್ನೇ ನಾಡಿನ ಪುಟಾಣಿಗಳೊಂದಿಗೆ ಹಂಚಿಕೊಂಡ ಪ್ರಾಮಾಣಿಕ ಪ್ರಯತ್ನವೇ 'ಬಾಲ ಪ್ರಪಂಚ' ೧೯೩೬ರಲ್ಲಿ ೬೦೦ ಪುಟಗಳ ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿತು. ಇದು ವಿಷಯದ ಕುರಿತಾದ ಲೇಖನಗಳಿಂದ ಕೂಡಿರದೆ ಮಕ್ಕಳ ವಿಶ್ವಕೋಶದಂತಿದೆ. ಬಾಲಪ್ರಪಂಚದ ಪ್ರಕಟಣೆಯ ೨೦ ವರ್ಷಗಳ ನಂತರ ಕಾರಂತರು 'ವಿಜ್ಞಾನ ಪ್ರಪಂಚ'ವನ್ನು ಹೊರತಂದರು. ಸರಳಗನ್ನಡದಲ್ಲಿ ನೇರವಾಗಿ ಹೇಳುವ ಕಾರಂತರ ಶೈಲಿ ವಿಜ್ಞಾನ ಪ್ರಪಂಚವನ್ನು ಅವಲೋಕಿಸಿದಾಗ ಅದರಲ್ಲಿರುವ ವಿಷಯ ವಿಸ್ತಾರಕ್ಕನುಗುಣವಾದ ಕಾರಂತರ ತಳಸ್ಪರ್ಶ ಅಧ್ಯಯನ, ಅಪಾರ ಶ್ರಮ, ಕುತೂಹಲಕಾರಿ ಕಲ್ಪನೆಗಳ ಅರಿವು ನಮಗಾಗುತ್ತದೆ. ವಿಜ್ಞಾನವನ್ನು ಕನ್ನಡಿಗರಿಗೆ ತಲುಪಿಸುವಲ್ಲಿ ಕಾರಂತರಿಗಿದ್ದ ಕಳವಳಿಯನ್ನು ಯಾರು ಮರೆಯುವಂತಿಲ್ಲ. ಕನ್ನಡದಲ್ಲಿ ವಿಜ್ಞಾನಿಗಳಾದವರು ಮಾಡುವ ಮಹತ್ತರ ಕೆಲಸವನ್ನು ಕಾರಂತರು ಮಾಡಿದ್ದಾರೆ.

ಕನ್ನಡದಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾದ ಕೆಲವು ಪ್ರಮುಖರೆಂದರೆ ಪ್ರೊ. ಜಿ. ಆರ್. ಲಕ್ಷ್ಮಣರಾವ್, ಡಾ. ಬಿ.ಜಿ.ಯಲ್. ಸ್ವಾಮಿ, ಮದರಾಸು

ವಿಶ್ವವಿದ್ಯಾಲಯದಲ್ಲಿ ಸಸ್ಯ ಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿ 'ಸ್ವಾನುಭವದ ಚರಿತ್ರೆ'ಗಳೊಡನೆ ವಿಜ್ಞಾನ ಸಾಹಿತ್ಯ ರಚಿಸಿದವರು.

ವಿಜ್ಞಾನ ಕ್ಷೇತ್ರವಲ್ಲದೆ ವಿಜ್ಞಾನದ ಬರಹಗಾರರಾಗಿ ಬಂದವರು ಪಾ. ವೆಂ. ಅವರು ಕಸ್ತೂರಿಪತ್ರಿಕೆಯ ಮೂಲಕ ವಿಜ್ಞಾನ ಸಾಹಿತ್ಯವನ್ನು ಜನಪ್ರಿಯಗೊಳಿಸಿದರು. ಅಷ್ಟೆ ಅಲ್ಲದೆ ಪ್ರಸಿದ್ಧ ವಿಜ್ಞಾನ ಬರಹಗಾರರಾದ ಪ್ರೊ. ಜಿ.ಟಿ. ನಾರಾಯಣರಾವ್ ಡಾ. ಕೃಷ್ಣಾನಂದ ಕಾಮತ್ ಡಾ. ಎಚ್. ಬಿ. ದೇವರಾಜ ಸರ್ಕಾರ, ಸಂತೋಷ್ ಕುಮಾರ ಗುಲ್ವಾಡಿ ಡಾ. ಪಿ.ಯಸ್. ಶಂಕರ್, ಶ್ರೀ ಅಡ್ಯನಡ್ಕ ಕೃಷ್ಣಭಟ್ ಇನ್ನು ಅನೇಕ ವೈಜ್ಞಾನಿಕ ಬರಹಗಾರರು ಪಾ. ವೆಂ. ಅವರಿಂದ ಪ್ರೇರಣೆಗೊಂಡು ಅವರ ಸೂಕ್ತ ಮಾರ್ಗದರ್ಶನ ಪಡೆದು ವೈಜ್ಞಾನಿಕ ಪ್ರಬಂಧ ನಿರ್ಮಾಣದಲ್ಲಿ ಬಹುಕಾಲ ಉಳಿಯಲು ಕೆಲಸಮಾಡಿದವರು. ಹೀಗೆ ಮೇಲಿನ ಎಲ್ಲ ವೈಜ್ಞಾನಿಕ ಪ್ರಬಂಧಕಾರರು ವೈಜ್ಞಾನಿಕ ಪ್ರಬಂಧಗಳಿಂದ ಮತ್ತು ಪ್ರಚಲಿತ ವೈಜ್ಞಾನಿಕ ಸಮಸ್ಯೆಗಳ ಬಗ್ಗೆ ಬರೆಯುತ್ತಾ ಜನರ ಗಮನ ಸೆಳೆಯುವಲ್ಲಿ ಯಶಸ್ವಿ ಬರಹಗಾರರಾಗಿದ್ದಾರೆ.

ವಿಜ್ಞಾನ ವಿಸ್ಮಯ: Necessity is the mother of Inventions ಎಂಬುದು ಇಂಗ್ಲೀಷಿನ ಒಸಗೆ ಕನ್ನಡದಲ್ಲಿ ಪಾ. ವೆಂ. ಅವರ ವೈಜ್ಞಾನಿಕ ಬರವಣಿಗೆಗೂ ಅನ್ವಯಿಸುವಂತಿದೆ. ಕಸ್ತೂರಿಯಂಥ ಡೈಜಿಸ್ಟ್ ಪತ್ರಿಕೆಯಲ್ಲಿ ಪ್ರತಿ ಸಂಚಿಕೆಯಲ್ಲೂ ವಿಜ್ಞಾನದ ಲೇಖನಗಳನ್ನು ಬರೆಯಿಸಿ ಪ್ರಕಟಿಸಬೇಕೆಂಬುದು ಪಾ.ವೆಂ. ಅವರ ಹಂಬಲವಾಗಿತ್ತು. ಸಮರ್ಪಕವಾದ ಬರಹಗಾರರುಬೇಕು. ಆದರೆ ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯುವವರು ಯಾರು? ಸಾಕಷ್ಟು ವಿಜ್ಞಾನ ಪದವೀಧರರು ಸಿಗುತ್ತಾರೆ. ಶುದ್ಧ ಸ್ಪಷ್ಟವಾದ ಭಾಷೆಯಲ್ಲಿ ಬರೆಯುವ ಅವಶ್ಯಕತೆ ಬಂದಾಗ ಸ್ವತಃ ಪಾ.ವೆಂ. ಅವರೇ ಈ ಕೆಲಸಕ್ಕೆ ಬದ್ಧರಾಗುತ್ತಾರೆ.

ಎಸ್.ಎಸ್.ಎಲ್.ಸಿ. ಯವರೆಗೆ ವಿಜ್ಞಾನದ ಪಾಠಗಳನ್ನು ಓದಿದ್ದ ಪಾ. ವೆಂ. ಈ ಕೆಲಸಕ್ಕೂ ತಾವೇ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಓನಾಮದಿಂದ ವಿಜ್ಞಾನ ಲೇಖನಗಳನ್ನು ಇಂಗ್ಲೀಷನಲ್ಲಿ ಬರೆದವುಗಳನ್ನು ಸಂಪೂರ್ಣವಾಗಿ ಓದಿದರು. ಮುಖ್ಯ ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡು ಅದರ ಪೂರ್ಣತೆಗೆ ಇತರ ಲೇಖನಗಳನ್ನು ಅಭ್ಯಾಸ ಮಾಡುವುದು, ತಿಳಿಯದಿದ್ದ ಅಂಶಗಳ ಬಗ್ಗೆ ಪರಿಣಿತರನ್ನು ಕೇಳಿ ವಿಷಯ ಸಂಗ್ರಹಮಾಡುತ್ತಿದ್ದರು.

ಇಷ್ಟಕ್ಕೆ ಮುಗಿದಿರಲಿಲ್ಲ ಅದರ ಪರಿಶ್ರಮ ಸೂಕ್ತವಾದ ಕನ್ನಡದ ಪಾರಿಭಾಷಿತ ಪದಗಳನ್ನು ಸೃಷ್ಟಿಸಬೇಕು. ಈ ವಿಷಯದಲ್ಲಿ ಸಂಸ್ಕೃತ ಪರಿಣಿತರಾಗಿದ್ದ ಪಾ. ವೆಂ. ಅವರ ಸಂಸ್ಕೃತ ಪರಿಜ್ಞಾನ ಸಂಪೂರ್ಣ ನೆರವಾಯಿತು. ಅದೊಂದು ತಪಸ್ಸು ಎನ್ನುವಂತೆ ಒಂದೊಂದು ವಿಜ್ಞಾನದ ವಿಷಯಗಳನ್ನೆತ್ತಿಕೊಂಡು ಬರೆಯುತ್ತಾ ಇತರ ಪರಿಣತರಿಂದ ಬರಸುತ್ತಾ ಕಸ್ತೂರಿಯಿಂದ ನಿವೃತ್ತರಾಗುವಷ್ಟರಲ್ಲಿ ಕನ್ನಡದ ಗಣ್ಯ ವಿಜ್ಞಾನ ಲೇಖಕರಾಗಿದ್ದರು.

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಇತಿಹಾಸವನ್ನು ಬರೆಯಲು ಹೊರಟವರು ಪಾ. ವೆಂ. ಅವರನ್ನು ಪ್ರಸ್ತಾಪಿಸದೇ ಇರಲು ಸಾಧ್ಯವೇ ಇಲ್ಲ ಎನ್ನುವಂತಿದೆ. ಪಾ.ವೆಂ. ಅವರ ಬರಹಗಳ ಸಂಖ್ಯೆ ಮತ್ತು ಗುಣಗಳೆರಡರ ದೃಷ್ಟಿಯಿಂದ ಇಲ್ಲಿಯ ವಿಜ್ಞಾನ ಲೇಖನಗಳು ಮಹತ್ತರವೆನಿಸಿದೆ.

ಪಾ.ವೆಂ. ಅವರು ವಿಜ್ಞಾನದ ಎಲ್ಲ ಪ್ರಕಾರಗಳಲ್ಲಿಯೂ ಕೈಯಾಡಿಸಿದ್ದಾರೆ. ಖಗೋಳ ಶಾಸ್ತ್ರ ಪದಾರ್ಥ ವಿಜ್ಞಾನ, ಭೂಭೌತಿಕ ವಿಜ್ಞಾನ, ಸಸ್ಯಲೋಕ ಪ್ರಾಣಿಲೋಕ, ವೈದ್ಯಕೀಯ ಮನೋವಿಜ್ಞಾನ, ಅನ್ವಯಿಸಿ ವಿಜ್ಞಾನ, ವಿಜ್ಞಾನಿಗಳು ಈ ಎಲ್ಲ ವಿಷಯಗಳು ಒಳಗೊಂಡಿದೆ. ಇಲ್ಲಿಯ ಬರಹಗಳಲ್ಲಿ ಹೆಚ್ಚಿನ ಪಾಲು ವೈದ್ಯಕೀಯ ಭಾಗಕ್ಕೆ ಸಂಧಿದೆ. ಜನರ ಅರ್ಧಜ್ಞಾನ, ಅಜ್ಞಾನ ಇವುಗಳನ್ನು ಹೋಗಲಾಡಿಸುವುದು ಮತ್ತು ರೋಗಗಳ ಸ್ವರೂಪವನ್ನು ತಿಳಿದು ಜನ ಆರೋಗ್ಯವಂತರಾಗಬೇಕೆಂಬುದು ಈ ಲೇಖನಗಳ ಸದಾಶಯವಾಗಿದೆ. ಪಾ.ವೆಂ. ಆಚಾರ್ಯರು ದೈಹಿಕವಾಗಿ ಸದೃಢರಾಗಿರದಿದ್ದ, ಅರ್ಧಶತಮಾನದಷ್ಟು ದೀರ್ಘಕಾಲ ಅಸ್ತ್ಮಾವನ್ನು ತನ್ನ ಆತ್ಮಬಂಧುವಂತೆ ಕಂಡವರು. ಹಾಗಾಗಿ ವೈದ್ಯ ವಿಜ್ಞಾನಕ್ಕೆ ಹೆಚ್ಚು ಒತ್ತುಕೊಟ್ಟಂತಿದೆ. ಮೂರನೇ ಒಂದು ಭಾಗದಷ್ಟು ಲೇಖನ ವೈದ್ಯಕೀಯ ಶಾಸ್ತ್ರಕ್ಕೆ ಪ್ರತಿಯೊಂದು ಲೇಖನಗಳನ್ನು ಗಮನಿಸಿದಾಗ ಕಾಣುವ ಮುಖ್ಯ ಅಂಶವೆಂದು ಆಯ್ದುಕೊಂಡಿರುವ ವಿಷಯದ ಬಗೆಗೆ ಆಳವಾದ ಸಂಪೂರ್ಣ ಮಾಹಿತಿ, ಓದುಗರನ್ನು ತಪ್ಪುದಾರಿಗೆ ಎಳೆಯದಂತಿರುವ ವಿಷಯ ಮಂಡನೆ ಆಕರ್ಷಕವಾದ ಲೇಖನ ಶೈಲಿ – ಇವು ವಿಜ್ಞಾನ ಲೇಖನ ಕೃಷಿಯ ಮೂಲಮಂತ್ರಗಳು ಈ ಮೂರನ್ನು ಪಾ.ವೆಂ. ಅವರು ತಮ್ಮ ಲೇಖನದಲ್ಲಿ ಶಿಸ್ತಿನಿಂದ ಪಾಲಿಸಿದ್ದಾರೆ. ಈ ರೀತಿ ವಿಷಯವನ್ನು ಅಥವಾ ಮಾಹಿತಿಯನ್ನು ನಿರೂಪಿಸುವ ಪಾ. ವೆಂ. ಅವರ ಭಾಷೆಯ ಶೈಲಿ ಅಲಂಕಾರಿತವಾಗಿರುವುದು ದೃಷ್ಯಂಕಾಲಂಕಾರಗಳ ನಿಭಿಡತೆ ಉಪಮೆ – ರೂಪಕಗಳ ಸಹಜತೆ ಅವರ ಅಪಾರ ವೈವಿಧ್ಯಮ ಓದಿನ ನೆನಪುಗಳು ನೆರವಿಗೆ ಬಂದಿದೆ.

ಪ್ರತಿಯೊಂದು ಲೇಖನವನ್ನು ಬರೆಯುವಾಗಲೂ ಮಾಹಿತಿಗೆ ಸಂಬಂಧಿಸಿದ ತಜ್ಞರ ಬರಹಗಳನ್ನು ಚೆನ್ನಾಗಿ ಮನನಮಾಡಿ ನಂತರವೇ ಅದನ್ನು ಬರಹರೂಪಕ್ಕೆ ಇಳಿಸಿ ಸೂಕ್ತವಾದ ಶೀರ್ಷಿಕೆಗಳನ್ನು ಕೊಡುತ್ತಿದ್ದರು. ಉದಾಹರಣೆಗೆ 'ಮಾನವ ಯಂತ್ರಕ್ಕೆ ಆಳಾಗುವನೇ' ಎಂಬ ಲೇಖನಕ್ಕೆ ಆಧಾರ ರಾಬರ್ಟ್ ವಾಸ್ಪ್ರೋ ಅವರ ಲೇಖನ, ನ್ಯಾಚುರಲ್ ಹಿಸ್ಟರಿ ಸೈನ್ಸ್ ರಿಪೋರ್ಟರ್ ಕೆ. ಬೇಹುಗಾರ ಬರಹ ಇತ್ಯಾದಿ ಕೆಲವು ವೇಳೆ ಲೇಖನ ತಯಾರಿಯ ಹಂತಗಳಲ್ಲಿ ಹಲವು ತಜ್ಞರನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಸಂದೇಹಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು.

ಸಾಮಾನ್ಯ ವಿಜ್ಞಾನ ವಿಭಾಗದಲ್ಲಿ ಅನಂತಗಳ ಪ್ರತಿಬಿಸಿ, ಶೂನ್ಯ ಸಂಪಾದನೆ ಜಿಜ್ಞಾಸೆಗೆ ಒಳಪಡುವ ಮಾರ್ಮಿಕ ಸಂಗತಿಗಳನ್ನು ಕಾಣುತ್ತೇವೆ. ಮಾನವನು ಯಂತ್ರಕ್ಕೆ ಆಳಾಗುವನೆ ಎನ್ನುವ ಲೇಖನದಲ್ಲಿ ಅಂತರ್ ದೃಷ್ಟಿ, ಕಲ್ಪನಾಶಕ್ತಿಯನ್ನು ಹೊಂದಿದ

ಯಂತ್ರಗಳು ಬರುವವು. ಇವು ಮಾನವನ ನೆರವಿಲ್ಲದೆ ಒಂದಾನೊಂದು ತರಬೇತಿ ಮಾಡಬಲ್ಲವು. ಇಂಥ ಯಂತ್ರಗಳು ಐನ್‌ಸ್ಟಿನರಿಗೂ ಸಮಾನವಾದ ಪ್ರತಿಭೆಯನ್ನು ಸಂಪಾದಿಸಿ ತಮ್ಮನ್ನು ತಾವೇ ನೋಡಿಕೊಳ್ಳಲು ಸಮರ್ಥವಾಗುತ್ತವೆ. ಆಗ ಈ ಯಂತ್ರಗಳ ಶಕ್ತಿಯನ್ನು ಮಾತ್ರವಲ್ಲ ಕೃತ್ಯವನ್ನು ಊಹಿಸಲೂ ಈಗ ಸಾಧ್ಯವಿಲ್ಲ. ಕೊನೆಗೊಮ್ಮೆ *೬ 'ಈ ಯಂತ್ರಗಳು ನಮ್ಮನ್ನು ಸಾಕುಪ್ರಾಣಿಗಳಂತೆ ಇಟ್ಟುಕೊಂಡರೆ ನಮ್ಮ ಪುಣ್ಯ' ಎನ್ನುತ್ತಾರೆ. ಪಾ.ವೆಂ.

ಖಗೋಳ ವಿಜ್ಞಾನ : ಖಗೋಳ ವಿಜ್ಞಾನದ ಬಗ್ಗೆ ಮನುಷ್ಯನ ಸಾಹಸಕ್ಕೆ ಕುತೂಹಲಕ್ಕೆ ಕಾರಣವಾಗುವಂತಹ ವಿಷಯಗಳನ್ನು ಎತ್ತಿಕೊಂಡಿದ್ದಾರೆ. ಪ್ರತಿ ವಿಶ್ವ ಇರಬಹುದೆ? ಎನ್ನುವ ಲೇಖನ.

ಮಾನವ ಮತ್ತು ಹವಮಾನ : ವಾಸ್ತವಿಕವಾಗಿ ಹವಾಮಾನದ ಸ್ವಭಾವದ ಪರಿಚಯ ನಮಗೆ ಇನ್ನೂ ಆಗಬೇಕಷ್ಟೆ ಒಂದಕ್ಕೆ ಅಮೃತವಾದುದು ಇನ್ನೊಂದಕ್ಕೆ ವಿಷವಾಗಬಲ್ಲದು. *೫ 'ಗೋಧಿ ಬೆಳೆಗೆ ಮಳೆ ಬೇಕೆಂದು ಕೃತಕ ಮಳೆ ಏಕೆಂದು ಕೃತಕ ಮಳೆ ತರಿಸಿದ್ದರಿಂದ ಹತ್ತಿರದೂರಿನ ಹಣ್ಣಿನ ಬೆಳೆ ನಾಶವಾಗಿ ಹೋದದುಂಟು.' ಇಂದಿನ ವಿಲಕ್ಷಣ ಹವಾಮಾನಕ್ಕೆ ಮಾನವ ಎಷ್ಟು ಕಾರಣನಿದ್ದಾನೆ ಎನ್ನುವ ಅಂಶವನ್ನು ವ್ಯಕ್ತಪಡಿಸುತ್ತಾರೆ. ಹವಾಮಾನದ ಬಗ್ಗೆ ಹೆಚ್ಚು ಕಾಳಜಿಯನ್ನು ವ್ಯಕ್ತಪಡಿಸಿದ ಲೇಖನವಿದಾಗಿದೆ.

ಯುಗಾದಿಯ ಕಥೆ ಲೇಖನದಲ್ಲಿ: ಲೇಖನದಲ್ಲಿ ಕಾಲ ಅಥವಾ ಸಮಯವೆಂಬುದನ್ನು ಮನುಷ್ಯ ಹೇಗೆ ಗ್ರಹಿಸುತ್ತಾನೆ? ಎನ್ನುವ ಇಡೀ ಜಗತ್ತಿನ ಕಾಲ ಗಣನೆಯ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುತ್ತಾರೆ. ಭಾರತದಲ್ಲಿ ಇಂದು ಪ್ರಚಲಿತವಾಗಿರುವ ಪಂಚಾಗಗಳಲ್ಲಿ ಹೆಚ್ಚಿನವು ಹತ್ತಾರು ಶತಮಾನಗಳ ಹಿಂದೆ ಕ್ರಮಗೊಳಿಸಲ್ಪಟ್ಟು ಸೂರ್ಯ ಸಿದ್ಧಾಂತ, ಆರ್ಯ ಸಿದ್ಧಾಂತ, ವ್ಯಾಕರಣ ಮೊದಲಾದ ಗಣಿತಗಳ ಪ್ರಕಾರ ಗುಣಸಲ್ಪಡುತ್ತದೆ. ಈ ಗಣಿತಗಳ ಮೇರೆಗೆ ಇಂದು ಗ್ರಹಣಗಳಾಗಲಿ ಗ್ರಹ ನಕ್ಷತ್ರಗಳ ಚಲನೆಯಾಗಲಿ ನಡೆಯುವದಿಲ್ಲ. ನಮ್ಮ ಪಂಚಾಂಗಗಳಲ್ಲಿ ಉತ್ತರಾಯಣರೆಂಬ ಎಂದು ೨೧-೨೨ ದಿನ ಮೊದಲೇ ಆಯನ ಆರಂಭವಾಗುತ್ತದೆ. ತಿಥಿಗಳು ತಪ್ಪು ತಪ್ಪಾಗುತ್ತದೆ. ಇದನ್ನೆಲ್ಲ ಸರಿಪಡಿಸಿ ಪ್ರತಿಪಕ್ಷಕ್ಕೆ ಸರಿಹೊಂದುವ ಗಣಿತವನ್ನು ಉಪಯೋಗಿಸುವ ಬಗ್ಗೆ ಈ ಶತಮಾನದಲ್ಲಿ ಅನೇಕ ಜ್ಯೋತಿಷಿ ಪರಿಷತ್ತುಗಳು ಕೂಡಿದ್ದರೂ ಪ್ರತ್ಯಕ್ಷಕ್ಕೆ ವಿರುದ್ಧವಾದರೂ ಶಾಸ್ತ್ರವೇ ಪ್ರಮಾಣ ಎನ್ನುವ ಸನಾತನವಾದಿಗಳ ಮುಂದೆ ಸುಧಾರಣವಾದಿಗಳ ಆಟ ನಡೆಯಲಿಲ್ಲ. ಭಾರತ ಸರಕಾರ ಈಗ ಶುದ್ಧ ಗಣಿತದಿಂದ ತಯಾರಿಸಿದ ರಾಷ್ಟ್ರೀಯ ಪಂಚಾಂಗವನ್ನು ಪ್ರಕಟಿಸುತ್ತದೆ. ಆದರೆ ನಮ್ಮ ಪಂಚಾಂಗಗಳ ಮೇಲೆ ಇದರ ಪರಿಣಾಮ ಬೀರಲ್ಲ ಎನ್ನುವ ಅಸಮಾಧಾನವನ್ನು

ಪಾ.ವೆಂ. ಅವರು ವ್ಯಕ್ತಪಡಿಸುತ್ತಾರೆ. ದಿವಸ, ತಿಂಗಳು, ವರ್ಷ ಇತ್ಯಾದಿಯಾಗಿ ಇಂದು ನಾವು ಸುಲಭವಾಗಿ ಹೇಳುತ್ತೇವೆ. ಆದರೆ ಆದಿಮಾನವನಿಗೆ ಈ ಕಲ್ಪನೆಗಳು

ಬರಲು ಸಾವಿರಾರು ವರ್ಷಗಳು ಹಿಡಿದಿರಬೇಕು. ಕಾಲಮಾನದ ಈ ಲೆಕ್ಕ ಹೇಗೆ ಬಂದವು ಮತ್ತು ಸನಾತನ ವಾದಿಗಳ ಲೆಕ್ಕ ಪಂಚಾಂಗ ಲೆಕ್ಕಾಚಾರ ಸರಿ ಇಲ್ಲದಿರುವ ಅಂಶವನ್ನು ಈ ಲೇಖನದಲ್ಲಿ ವಿವರಿಸಿದೆ.

ಪತ್ರಿಕೋದ್ಯಮಿಯಾಗಿ ಅಸ್ಪಷ್ಟವಾಗಿರುವ ವಿಚಾರವನ್ನು ಮಂಡಿಸುವಲ್ಲಿ ಸ್ಪಷ್ಟ ಚಿತ್ರಣವನ್ನು ಓದುಗರಿಗೆ ಮನನ ಮಾಡುವ ರೀತಿ ಇಲ್ಲಿ ಕಾಣುತ್ತೇವೆ. 'ಮಂಗಳಕ್ಕೆ ಮಾನವ ಯಾತ್ರೆ', ಚಂದ್ರಲೋಕದಲ್ಲಿನ್ನು ಮನುಷ್ಯ ವಸತಿಯೇ ಅನ್ಯ ಲೋಕಗಳಲ್ಲಿ ಜೀವಗಳಿಗಾಗಿ ಶೋಧ ಮಾನವನ ಸಾಹಸ ಯಾತ್ರೆಯ ಬಗ್ಗೆ ವಿವರಿಸುತ್ತಾರೆ.

ಭೂ-ಭೌತಿಕ ವಿಜ್ಞಾನದ ಬಗ್ಗೆ : ಸಸ್ಯಲೋಕದ ವಿಸ್ಮಯ ಸೌಂದರ್ಯಗಳ ಬಗ್ಗೆ ವಿವರಿಸುತ್ತಾರೆ. ಪ್ರಾಣಿಲೋಕದ ನವಿಲು, 'ಬೆಕ್ಕು ಎಷ್ಟು ಜಾಣ ಪ್ರಾಣಿ'?, ಡಿನೋಸಾರ್‌ಗಳ ಅದ್ಭುತ ಪ್ರಪಂಚ, ಎಲ್ಲ ಪ್ರಾಣಿ ಜೀವಿಗಳ ಗುಣ ಸ್ವಭಾವಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಇನ್ನು ಪತ್ರಿಕೆಯ ಹೆಸರನ್ನು ಹೊತ್ತಿರುವ ಕಸ್ತೂರಿ ಮೃಗದ ಬಗ್ಗೆ ಎಲ್ಲ ಮಾಹಿತಿಯನ್ನು ಓದುಗರಿಗೆ ಪಾ.ವೆಂ. ನೀಡುತ್ತಾರೆ.

ವೈದ್ಯಕೀಯ ವಿಜ್ಞಾನ: ವಿಜ್ಞಾನ ವಿಸ್ಮಯದಲ್ಲಿ ವೈದ್ಯಕೀಯ ಭಾಗಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಪಾ.ವೆಂ. ಜನತೆಯ ಅಜ್ಞಾನವನ್ನು ಮೂಢ ನಂಬಿಕೆಯನ್ನು ದೂರ ಮಾಡಿ ಸಮಾಜ ಆರೋಗ್ಯದಾಯಕವಾಗಿರಬೇಕನ್ನುವುದು ಪಾ.ವೆಂ. ಅವರ ಮನೋಭಾವವಾಗಿತ್ತು. 'ಅಸ್ಪಿರಿನ್ ನಿರುಪದ್ರವಿಯೇ?' ಅಲ್ಲ ಖಂಡಿತ. ಅಲ್ಲವೆಂದು ಜನರಿಗೆ ಸ್ಪಷ್ಟಪಡಿಸುತ್ತಾರೆ. ವೈದ್ಯಶಾಸ್ತ್ರದ ಜ್ಞಾನದೃಷ್ಟಿಯಾಗಿರುವ ಎಕ್ಸರೆಯ ಮಹತ್ವ, ವೈದ್ಯರಿಗೆ ಅದರ ಅಗತ್ಯತೆಯ ಪೂರ್ಣ ವಿಷಯ ಸಂಗ್ರಹವನ್ನು ತಿಳಿಸುತ್ತಾರೆ.

ಮಧುಮೇಹರೋಗ: ಇದರ ಸ್ವರೂಪ ಲಕ್ಷಣಗಳೇನು ಪ್ರಾಣಾಂತಿಕವಾದ ರೋಗವಾಗಿ ಇಂದು ಉಳಿದಿಲ್ಲ. ರೋಗಿ ನಿಯಮಿತ ಜೀವನ ನಡೆಸುವ ತನ್ನ ಉದ್ಯೋಗವನ್ನು ನಿರಾತಂಕವಾಗಿ ನಡೆಸುತ್ತಾ ದೀರ್ಘ ಜೀವನ ನಡೆಸು ವಿಧಾನವನ್ನು ರೋಗಿಗಳಿಗೆ ಹೆಚ್ಚು ವಿಶ್ವಾಸವನ್ನು ಮೂಡಿಸುವ ಅಂಶಗಳು ಇಲ್ಲಿದೆ.

ವೈದ್ಯಕೀಯ ವಿಭಾಗದಲ್ಲಿ ರೋಗದ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸುತ್ತಾ ಜನರಿಗೆ ಜಾಗೃತಿಯನ್ನು ಮೂಡಿಸುವ ವಿಶೇಷ ಲೇಖನಕ್ಕೊಂದು ಉದಾಹರಣೆ ಮತ್ತು ಜನ ಓದಿ ಮುಚ್ಚಿಡುವ, ಬಿಸಾಡುವ ಲೇಖನಗಳಿಗಿಂತ ಸಾಮಾನ್ಯ ಜನರ ದಿನನಿತ್ಯದ ಬದುಕಿನಲ್ಲಿ ಉಪಯೋಗವಾದ ಮಾಹಿತಿಯನ್ನು ಹೇಗೆ ಮನಗಾಣಿಸಿದ್ದಾರೆಂಬುದನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಎಚ್ಚರಿಕೆ! ಪೆನ್ಸಲಿನ್ ವಹಿಸಲು ಎಂಬ ಲೇಖನ: ಆಧುನಿಕ ಜಗತ್ತಿನ ಎಲ್ಲ ರೋಗರುಜಿನಗಳಿಗೆ ಪೆನಸಲಿನ್ ರಾಮಬಾಣೌಷಧಿಗಳಲ್ಲಿ ಮಹತ್ವದ್ದು ಎನ್ನುವ ನಂಬಿಕೆ ವೈದ್ಯಕೀಯ ಕ್ಷೇತ್ರದಲ್ಲಿತ್ತು. ಕ್ರಮೇಣ ಅದರ ದುರ್ಗುಣಗಳು ಒಂದೊಂದಾಗಿ ಬೆಳಕಿಗೆ ಬಂದವು. ಹೊಸಬೆಳವಣಿಗೆಯನ್ನು ತಿಳಿಯದ ಜನಸಾಮಾನ್ಯರು ವೈದ್ಯರಿಗೆ ತಾವೇ

ಒತ್ತಾಯಿಸಿ ಪೆನಸಿಲಿನ ಕೊಡಿ ಎಂದು ಒತ್ತಾಯಿಸುತ್ತಿದ್ದರು. ಇದನ್ನು ಕಂಡ ಪಾ. ವೆಂ. ಅವರು ಈ ಲೇಖನ ಇಂಥ ರೋಗಿಗಳಿಗೆ ಎಚ್ಚರಕೊಡಲು ಆರೋಗ್ಯವನ್ನು ರಕ್ಷಿಸುವಲ್ಲಿ ಜಾಗೃತಿ ಮೂಡಿಲು ಕಸ್ತೂರಿ ಪತ್ರಿಕೆಯ ಮೂಲಕ ಬರೆದದ್ದು. ಈ ಲೇಖನದಲ್ಲಿ ಪೆನಸಲಿನಿನ ಗುಣಾವಗುಣಗಳ ಪಟ್ಟಿ ಮಾಡಿದ್ದಾರೆ. ವಿಶ್ವದ ಪ್ರಮುಖ ವೈದ್ಯರ ಅಭಿಪ್ರಾಯವನ್ನು ಸಂಗ್ರಹಿಸಿ ಪೆನಸಲಿನ್‌ನ ದುರಂತಗಳನ್ನು ಮತ್ತು ದೇಹದ ರೋಗಾಣುನಾಶಕ ಶಕ್ತಿ ಕುಂದುವ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಲೇಖನದ ಕೊನೆಯ ಭಾಗದಲ್ಲಿ ದೃಷ್ಟಾಂತದ ಮೂಲಕ ಪಾ.ವೆಂ. ಈ ರೀತಿಯಾಗಿ ಹೇಳುತ್ತಾರೆ. *೬'ಪೆನಿಸಿಲಿನ್ ಬ್ರಹ್ಮಾಸ್ತ್ರವೇ ನಿಜ. ಅದನ್ನು ಗುಬ್ಬಿಯ ಮೇಲೆ ಪ್ರಯೋಗಿಸಬೇಡಿ'. ಕರ್ಣನ ಕಥೆ ಕೇಳಿದ್ದೀರಲ್ಲ ಪರಶುರಾಮ ಕೊಟ್ಟ ಅಸ್ತ್ರವೊಂದು ಅವನಲ್ಲಿತ್ತು. ಅದರಿಂದ ಅವನು ಎಂಥ ಭಯಂಕರ ಶತ್ರುವನ್ನೂ ಕೊಲ್ಲಬಹುದಿತ್ತು. ಅರ್ಜುನನ್ನು ಕೊಲ್ಲಲು ಅದನ್ನು ಆತ ಕಾದಿಟ್ಟಿದ್ದ. ಆದರೆ ಘಟೋತ್ಕಜನು ಕೌರವ ಸೈನ್ಯದಲ್ಲಿ ಅನಾಹುತ ಮಾಡಿದಾಗ ಆ ಅಸ್ತ್ರವನ್ನು ಅವನ ಮೇಲೆ ಬಿಟ್ಟ ಮುಂದೆ ಅರ್ಜುನನ್ನು ಕೊಲ್ಲಲು ಅವನಲ್ಲಿ ಅಸ್ತ್ರವೇ ಉಳಿಯಲಿಲ್ಲ ಪೆನಿಸಿಲಿನ್ ಹಾಗೆಯೇ.

ಪೆನಸಿಲಿನ್ ಬಗ್ಗೆ ನೀವು ಹೆಸರಿಸಬಹುದಾದ ಅತ್ಯುತ್ತಮ ಮಾರ್ಗವೆಂದರೆ – ಅದನ್ನು ನಿಮಗೆ ಕೊಡಲು ಡಾಕ್ಟರರಿಗೆ ಒತ್ತಾಯ ಮಾಡಬೇಡಿರಿ. ಅದನ್ನು ಯಾವಾಗ ಕೊಡಬೇಕು ಎಂಬುದನ್ನು ಡಾಕ್ಟರರಿಗೇ ಬಿಡಿ. ಎನ್ನುವ ಪಾ.ವೆಂ. ಅವರು ಬರೆದಿರುವ ಸಾಲುಗಳು ಎಂಥ ಮೂಢರಿಗೂ ಕೂಡ ವಿವೇಕವನ್ನು ಎಚ್ಚರಿಕೆಯನ್ನು ನೀಡುತ್ತದೆ. ರಕ್ತದ ಗುಂಪಿನ ರಹಸ್ಯದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಸರಿಸಿ ಪೂರ್ಣ ಮಾಹಿತಿಯನ್ನು ಒದಗಿಸಿದ್ದಾರೆ. ಮಲೇರಿಯಾದ ಮೇಲೆ ಸಮರ ಬಿಸಿಜಿ ಎಂದರೇನು ? ಎಕ್ಸರೆಯ ಬಗ್ಗೆ, ಕ್ಯಾನ್ಸರ್ ಸಂಶೋಧನೆಯಲ್ಲಿ ಹೊಸ ಹೆಜ್ಜೆಗಳು. ಸ್ವಲ್ಪ ಅಸ್ವಸ್ಥವಾಗಿದೆಯೇ ? ಅದು ಶುಭ ಎನ್ನುವ ಲೇಖನದಲ್ಲಿ ರೋಗವು ಆರೋಗ್ಯದ ಶತ್ರುವಲ್ಲ. ಶರೀರ ಅಸ್ವಸ್ಥವಾದಷ್ಟು ಸಲ ಬಾಳಿ ಬದುಕುವ ವಿದ್ಯೆಯಲ್ಲಿ ಹೊಸತೊಂದು ಪಾಠ ಕಲಿಯುತ್ತದೆ. ಅದನ್ನು ಅದೆಂದು ಮರೆಯುವುದಿಲ್ಲ. ಅಸ್ವಸ್ಥವಾದರೆ ಅದಕ್ಕಾಗಿ ಹೆದರಬೇಕಾಗಿಲ್ಲ ಎನ್ನುವ ಧೈರ್ಯವನ್ನು ಕೂಡ ವಿಶೇಷ ತಜ್ಞ ವೈದ್ಯರಿಗಿಂತ ಸಶಕ್ತವಾಗಿ ಪಾ.ವೆಂ. ಇಲ್ಲಿ ಧ್ವನಿಸಿದ್ದಾರೆ. ಪಾ.ವೆಂ. ಅವರನ್ನು ಕಾಡಿಸಿದ ರೋಗದ ಅನುಭವವು ಅವರ ದೃಢ ಮನಸ್ಸಿನ ಒಳನೋಟದ ಮಾತು ಕೂಡ ಇದಾಗಿರಬಹುದು.

ಮನೋವಿಜ್ಞಾನ ವಿಭಾಗದಲ್ಲಿ: ಸ್ಮರಣಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಬಗೆ ಹೇಗೆ? ಎಂಬುದನ್ನು ವಿವರಿಸಿದ್ದಾರೆ. ಈ ವಿಭಾಗದಕ್ಕೆ ಸಂಬಂಧಿಸಿ ಪ್ರಮುಖವಾದ ಲೇಖನ **ಆತ್ಮತೇಜಸ್ಸಿನ ಮಾರ್ಗಗಳು.** ಡಾ. ಅಲೆಕ್ಸಿಸ್ ಕೆರಲ್ ಅನುವಾದಿತ ಲೇಖನ. (ಜೀವಶಾಸ್ತ್ರದಲ್ಲಿ ಮಾಡಿದ ಸಂಶೋಧನೆಗಳಿಗಾಗಿ ನೋಬೆಲ್ ಪಾರಿತೋಷಕ ಪಡೆದ ಫ್ರೆಂಚ್ ವಿಜ್ಞಾನಿ ಡಾ. ಕೆರಲ್ಲರು ಮಾನವನನ್ನು ಕುರಿತು ಘನವಾಗಿ ಚಿಂತಿಸಿದ ತತ್ವಜ್ಞಾನಿಯಾಗಿ

ಪಕ್ವಗೊಂಡವರು. ಅವರ **ಅಜ್ಞಾತಮಾನವ** ಜಗತ್ಪ್ರಸಿದ್ಧವಾಗಿದೆ. ಪ್ರಸ್ತುತ ಲೇಖನವು ಅವರ ಜೀವನದ ಕೊನೆಯಲ್ಲಿ ಬರೆದು ಜೀವನ ಚಿಂತನೆಗಳು ಎಂಬ ಗ್ರಂಥದಿಂದ ಸಂಗ್ರಹಿಸಿದ್ದು).

ಪಾ. ವೆಂ. ಅವರು ವೈಯಕ್ತಿಕ ಜೀವನವನ್ನು ಹೇಗೆ ರೂಪಿಸಿಕೊಂಡು ಬೌದ್ಧಿಕ, ಮಾನಸಿಕ ವೈಚಾರಿಕ, ನೈತಿಕ, ಕಲಾತ್ಮಕ ಸಫಲತೆಯನ್ನು ಸಾಧಿಸಬಹುದೆಂಬುದರ ಕಲ್ಪನೆಯು ಈ ಲೇಖನದಲ್ಲಿದೆ. ಆತ್ಮದ ವಿಕಾಸ ಶರೀರ ಮತ್ತು ಮನಸ್ಸಿನ ವಿಕಾಸದಷ್ಟೇ ಅವಶ್ಯಕವಾದುದು. ಆದರೆ ಬುದ್ಧಿ ಎಂದರೆ ಆತ್ಮವಲ್ಲ ಆತ್ಮ ಬುದ್ಧಿಯನ್ನು ದಾಟಿದ್ದು ತರ್ಕವನ್ನು ಮೀರಿದ ಮನೋವ್ಯಾಪಾರವೇ ಮಾನವ ವ್ಯಕ್ತಿತ್ವದ ತಳಪಾಯ. ಆತ್ಮದ ಬೆಳವಣಿಗೆಯಾಗಬೇಕು. ಇದಕ್ಕಾಗಿ ಆತಂಕಗಳನ್ನು ನಿವಾರಸಿಬೇಕು. ಮಾನಸಿಕ ಒಲವುಗಳನ್ನು ತ್ಯಜಿಸಬೇಕು ಮನುಷ್ಯ ಇಚ್ಛೆಸಿದರೆ ಶರೀರ ಆತ್ಮಗಳೆರಡನ್ನು ತನ್ನಿಚ್ಛೆಯಂತೆ ರೂಪಿಸಬಲ್ಲ. ಅಂತರಾಂತರ ಆತ್ಮದೊಡನೆ ಅನುಸಂಧಾನ ಪಡೆಯುವುದು ಸುಲಭವಲ್ಲವೆಂಬುದು ನಿಜ. ಆದರೆ ಅದು ಒಮ್ಮೆ ಅದು ಸಾಧಿಸಿದರೆ ಯಾರು ಬೇಕಾದರೂ ಯಾವಾಗ ಬೇಕಾದರೂ ರೂಪ ಶಬ್ದ ಗಂಧಮಯವಾದ ಈ ಬಾಹ್ಯ ಪ್ರಪಂಚದಾಚೆಗಿರುವ ಪ್ರಶಾಂತ ಲೋಕದಲ್ಲಿ ಪ್ರವೇಶ ಪಡೆಯಬಲ್ಲವನಾಗುತ್ತಾನೆ. ಆಮೇಲೆ ಮೆಲ್ಲನೆ ಕತ್ತಲು ಕರಗಿ ಶಾಂತ ಸರತ್ತಿನಂತೆ ಬೆಳಕು ಹರಿದು ಬರತೊಡಗುವುದು. ತಪ್ಪು ಅಥವಾ ಅರ್ಥವನ್ನು ವರ್ಜಿಸಲು ಮಾನಸಿಕ ಧೈರ್ಯ ಬೇಕು. ಶರೀರವನ್ನಾಗಲಿ ಮನಸ್ಸನ್ನಾಗಲಿ ಬೆಳೆಸಲು ವ್ರತನಿಷ್ಠೆ ಜೀವನವೇ ಬೇಕು ಒಂದು ಮಾತಿನಲ್ಲಿ ಮಾನವನು ದೈವಧತ್ತವಾದ ತನ್ನ ಅಂತಶಕ್ತಿಯನ್ನು ಪೂರ್ಣ ಉಪಯೋಗಿಸಿಕೊಂಡು ಪರಮೊನ್ನತಿಗೇರಬೇಕಾದರೆ ತನ್ನಲ್ಲಿರುವ ಬೌದ್ಧಿಕ, ನೈತಿಕ, ಕಲಾತ್ಮಕ, ಧಾರ್ಮಿಕ ಸತ್ವಗಳೆಲ್ಲ ಊರ್ಧ್ವಮುಖವಾಗಿ ಬಳಸಿಕೊಳ್ಳಬೇಕು ಈ ಲೇಖನದ ಸಾರಾಂಶ. ಇಂದಿನ ಸಮಾಜದಲ್ಲಿ ಧುರೀಣರೆನಿಸುವವರು ಅನುಯಾಯಿಗಳಾಗಿ ಅವರ ನೆರಳಲ್ಲಿ ನಡೆಯುವ ಕೋಟ್ಯಾಂತರ ಜನಸಮೂಹವು ಯಾವುದೋ ಅಂಧ ವಿಶ್ವಾಸದ ಚಕ್ರಕ್ಕೆ ಸಿಲುಕಿದ್ದಾರೆ. ಇದು ಇಂದಿನ ನಾಗರೀಕತೆಯ ದೌರ್ಬಲ್ಯವು ಹೌದು. ಈ ಔದ್ಯಮಿಕ ನಾಗರೀಕತೆಯ ಸ್ಥಾನದಲ್ಲಿ ಮಾನವ ಪ್ರಗತಿಯ ನವಕಲ್ಪನೆಯು ಸ್ಥಾಪಿತವಾಗಬೇಕೆಂದು ಬಯಸುವ ಮಾನವ ಹಿತೈಷಿಗಳಿಗೆ ಈ ಲೇಖನ ಉಪಯುಕ್ತವಾದುದು. ಆಧುನಿಕ ಮಾನವ ವಿಜ್ಞಾನದ ಮಾಯೆಗೆ ಸಿಲುಕಿ ನಿಸರ್ಗದ ನಿಯಮಗಳ ಉಲ್ಲಂಘನೆಯಿಂದ ಬರುವ ದುಷ್ಫಲವನ್ನು ಲೆಕ್ಕಿಸದೆ ಮುಂದುವರಿಯುತ್ತಿರುವ ಮಾನವ ಜಗತ್ತನ್ನು ಎಚ್ಚರಿಸುತ್ತಿದೆ ಈ ಲೇಖನ. ಡಾ. ಕೆರೆಲ್ ಮಾನವ ಜಗತ್ತಿಗೆ ಅರ್ಪಿಸಿದ ಈ ಗ್ರಂಥದ ಸಾರಸಂಗ್ರಹವನ್ನು ಪಾ. ವೆಂ. ಅವರು ಸಂಕ್ಷಿಪ್ತ ರೂಪದಲ್ಲಿ ಸಂಗ್ರಹಿಸಿ **ಆತ್ಮ ತೇಜಸ್ಸಿನ ಮಾರ್ಗಗಳು** ಎನ್ನುವ ಸೂಕ್ತ ಶೀರ್ಷಿಕೆಯಡಿಯಲ್ಲಿ ಎಲ್ಲ ಕಸ್ತೂರಿ ವಾಚಕರಿಗೂ ಸಂದೇಶ ರೂಪದ ಲೇಖನದಂತೆ ಅರ್ಪಿಸಿದ್ದಾರೆ. ಜ್ಞಾನಸಂಪನ್ನ ಆರೋಗ್ಯದಾಯಕ ಸಮಾಜ ನಿರ್ಮಾಣದ ಉದ್ದೇಶ ಇದಾಗಿದೆ.

ಅನ್ವಯಿಕ ವಿಜ್ಞಾನ: ಮಾನವ ನಿರ್ಮಿತ ವಿಜ್ಞಾನ, ತಂತ್ರಜ್ಞಾನದ ಅದ್ಭುತಗಳು ವಿಸ್ಮಯಗಳನ್ನು ಈ ವಿಭಾಗದಲ್ಲಿ ಕಾಣುತ್ತೇವೆ. ಉದಾ: ರೇಯಾನ್ ನೂಲಿನ ಬೆಳೆಯ ಇತಿಹಾಸದ ಬಗ್ಗೆ ಬರೆದ ಲೇಖನ ಹೆಲಿಕಾಪ್ಟರಿನ ಜನ್ಮದಾತ ಸಿಕೋರ್ಸ್ಕಿ ವ್ಯಕ್ತಿತ್ವ ಸಾಧನೆಯ ಬಗ್ಗೆ ಚಂದ್ರಬಲದಿಂದ ವಿದ್ಯುಚ್ಛಕ್ತಿ! ಮಾನವನ ಸಾಧನೆ ಜಗತ್ತಿನ ಬಗ್ಗೆ ಬೆಳಕನ್ನು ಚೆಲ್ಲುತ್ತದೆ.

ವಿಜ್ಞಾನಿಗಳು: ವಿಜ್ಞಾನದ ಯುಗ ಪುರುಷ ಕೋಪರ್ನಿಕಸ್ ಲೇಖನದಲ್ಲಿ ಅವನು ಸಾಧಿಸಿದ ಮಹಾಕೃತಿಯೆಂದರೆ ದೃಷ್ಟಿಯನ್ನು ವಿಶ್ವದ ಕೇಂದ್ರ ಸ್ಥಾನದಿಂದ ಚ್ಯುತಿಗೊಳಿಸಿ, ನವೀನ ಯುಗವನ್ನು ಸ್ಥಾಪಿಸಿ ಆಧುನಿಕ ವಿಜ್ಞಾನದ ಮಹಾದ್ವಾರ ತೆರೆದ ರೀತಿಯನ್ನು ಅವನ ನಿಯಮವನ್ನು ವ್ಯಕ್ತಿತ್ವ ಸಾಧನೆಯನ್ನು ವಿವರಿಸುತ್ತಾರೆ.

ಪ್ರಸಿದ್ಧ ವಿಜ್ಞಾನಿಗಳ ಸಾಧನೆಗಳನ್ನು ವಿವರಿಸುವ ಚರಿತ್ರಯನ್ನೇ ಪಾ.ವೆಂ. ಇಲ್ಲಿ ಚಿತ್ರಿಸಿದ್ದಾರೆ. ಉದಾ : ಬ್ರಹ್ಮಗುಪ್ತ ಭಾರತದ ಮಹಾಗಣಕ ಬ್ರಹ್ಮಗುಪ್ತನ ಬಗ್ಗೆ ಬಲ್ಲವಷ್ಟೆ ಬಲ್ಲರು. ಗಣಿತಶಾಸ್ತ್ರಜ್ಞರಾದ ಭಾಸ್ಕರಾಚಾರ್ಯ, ಆರ್ಯಭಟ ವರಹಾಮಿಹಿರರನ್ನು ಮೀರಿಸಿದ ಪ್ರತಿಭಾಶಾಲಿಯಾಗಿದ್ದನು. ಭಾಸ್ಕರಾಚಾರ್ಯರೇ ಬ್ರಹ್ಮಗುಪ್ತನನ್ನು 'ಗಣಕಚಕ್ರ ಚೂಡಾಮಣಿ' ಎಂದು ಕರೆದಿದ್ದಾನೆ. ಅಂತಾರಾಷ್ಟ್ರೀಯ ಮಟ್ಟದಲ್ಲೆ ಬೆಳಗಿದ ಪ್ರಭಾವ ಬ್ರಹ್ಮಗುಪ್ತನದು. ಆದರೆ ಅವನ ಶಿಷ್ಯರಿಂದಲೇ ಗ್ರಹಣಕ್ಕೀಡಾದ ಸ್ಥಿತಿಯನ್ನು ಪಾ.ವೆಂ. ಅವರು ಇಲ್ಲಿ ಚಿತ್ರಿಸುತ್ತಾರೆ. ಪಾ.ವೆಂ. ಅವರ ದೃಷ್ಟಿಯಲ್ಲಿ ಉತ್ತಮ ಸಾಧನೆಗೈದ ವ್ಯಕ್ತಿಯ ಇತಿಹಾಸವನ್ನು ಓದುಗರಿಗೆ ಮನನ ಮಾಡುವ ರೀತಿಯನ್ನು ಇಲ್ಲಿ ಕಾಣುತ್ತೇವೆ.

ಸಿ.ವಿ. ರಾಮನ್: ಭಾರತ ತನ್ನ ವಿಜ್ಞಾನಿಗಳನ್ನು ತಾನೇ ತರಬೇತಿ ಮಾಡಿಕೊಳ್ಳಬಲ್ಲದು ಎನ್ನುವ ವಿಶ್ವಾಸಕ್ಕೆ ಅರ್ಹರಾದವರು. ತಮ್ಮ ಸಂಶೋಧನಾ ಪದ್ಧತಿಯನ್ನು ತಾವೇ ರೂಪಿಸಿಕೊಂಡ ವಿಶ್ವಾಮಿತ್ರ. ಪಾ.ವೆಂ. ಅವರ ವಿಜ್ಞಾನ ವಿಸ್ಮಯ ಕೃತಿಯು ಪರೀಧಿಯನ್ನು ಮೀರಿದುದು. ಪಾ. ವೆಂ. ಅವರು ತಾವೊಬ್ಬರೇ ಲೇಖನಗಳನ್ನು ಬರೆಯಲಿಲ್ಲ. ಬದಲಿಗೆ ಉತ್ತಮ ಬರಹಗಳನ್ನು ಸೃಷ್ಟಿಸಬಲ್ಲ ಲೇಖಕರ ಪಡೆಯನ್ನೇ ಕಟ್ಟಿದರು. ಗಣಿತ, ಖಗೋಳಶಾಸ್ತ್ರಗಳ ಬಗ್ಗೆ ಬರೆಯುತ್ತಿದ್ದ ವಿಜ್ಞಾನ ಲೇಖಕ ಜಿ.ಟಿ. ನಾರಾಯಣರಾಯರು ಪ್ರಾಣಿ ಪರಿಸರದ ಕೃಷ್ಣಾನಂದ ಕಾಮತರು 'ನಾನು ಹೃದಯ ಶಸ್ತ್ರಚಿಕಿತ್ಸೆ ಮಾಡಿಕೊಂಡೆ' ಎಂಬ ಅಪರೂಪದ ಲೇಖನ ಬರೆದ ಸಂತೋಷಕುಮಾರ ಗುಲ್ವಾಡಿ – ಈ ಮುಂತಾದವರೆಲ್ಲರೂ ಪಾ. ವೆಂ. ಗರಡಿಯಲ್ಲೇ ಪಳಗಿ ಬೆಳಗಿದವರು. ಇಲ್ಲಿ ಬರೆದಿರುವ ಲೇಖನಗಳು ಚಾರಿತ್ರಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಸಾಂಪ್ರದಾಯಿಕ ಪರಂಪರೆ, ವೈಧಿಕ ಜ್ಞಾನವನ್ನು ಆರಿಸಿಕೊಂಡು ಆಧುನಿಕ ಸಂಸ್ಕೃತಿಯತ್ತ ಸಂಶೋಧನಾ ರೀತಿಯ ಲೇಖನಗಳನ್ನು ಕಸ್ತೂರಿಯ ವಾಚಕರಿಗೆ ನೀಡಿದರು. ಪಾ.ವೆಂ. ಅವರ ಇಲ್ಲಿಯ ಲೇಖನಗಳನ್ನು ಓದಿದರೆ ಒಬ್ಬ ಪರಿಣತ ಒಂದು ಕ್ಷೇತ್ರದಲ್ಲಿ ಮಾತ್ರ ಪರಿಣತನಾಗಲೂ ಸಾಧ್ಯ ಇದಕ್ಕೆ ಸಲ್ಲುವ ಅವಧಿ ದೀರ್ಘವಾದದ್ದು ಆದರೆ ಪಾ.ವೆಂ. ಅವರು ವಿಜ್ಞಾನದ ಎಲ್ಲ ವಿಭಾಗಗಳನ್ನು ಅವುಗಳ ವೈಶಿಷ್ಟ್ಯವನ್ನು ಸತ್ಪರಿಣಾಮದುಷ್ಪರಿಣಾಮಗಳನ್ನು ಲೇಖನದ

ಕೊನೆಯ ಭಾಗದಲ್ಲಿ ಬರುವ ಜಗತ್ಪ್ರಖ್ಯಾತರಾದ ವಿಜ್ಞಾನಿಗಳ ಚರಿತ್ರೆ, ಸಾಧನೆಗಳನ್ನು ಅಭ್ಯಾಸ ಮಾಡಿದಾಗ 'ವಿಶ್ವಕೋಶದ' ವ್ಯಕ್ತಿತ್ವವನ್ನು ನಾವು ಗುರುತಿಸುತ್ತೇವೆ. ಪಾ. ವೆಂ. ಅವರು ವೃತ್ತಿಯ ಮೂಲಕ ತಮ್ಮ ಪ್ರವೃತ್ತಿಗಳನ್ನು ತಣಿಸಿಕೊಂಡು 'ಪತ್ರಿಕಾ ಸಂಸ್ಕೃತಿಯ'ನ್ನು ನಿರೂಪಿಸಿದರು. ಅವರ ಬರಹ ಸಮುದಾಯವನ್ನು ಒಂದು ಸಂಸ್ಕೃತಿಯಾಗಿ ಗುರುತಿಸಬಹುದು. ಜ್ಞಾನ ಪರತೆಯೆನ್ನುವುದು ಪಾ.ವೆಂ. ಅದರ ಧೋರಣೆಯಾಗಿತ್ತು. ಓದುಗರಲ್ಲಿ ಜಿಜ್ಞಾಸೆ ಬೆಳೆಸುವುದು, ಜ್ಞಾನ ಸಂಪತ್ತನ್ನು ಹೆಚ್ಚಿಸಿ ಆರೋಗ್ಯದಾಯಕ ಸಮಾಜ ಕಟ್ಟುವುದು ಪಾ. ವೆಂ. ಅವರ ಕಸ್ತೂರಿ ಕನ್ನಡದ ಪ್ರಯತ್ನವಾಗಿತ್ತು. ವ್ಯಕ್ತಿಯ ಸಮಾಜದ ಶಕ್ತಿಯಾಗಿ ಬೆಳೆಯಲು ಪತ್ರಿಕೆಯ ಪಾತ್ರವೇನು ಎಂಬುದು ಅವರಿಗೆ ನಿಚ್ಚಳವಿತ್ತು. ೨೦ನೇ ಶತಮಾನದ 'ಬ್ರಾಹ್ಮಣ ಆಚಾರ್ಯನಾಗಿ ನಿರ್ವಹಿಸಬೇಕಾದ ಕರ್ತವ್ಯವನ್ನು ಅವರು ಉಡುಪಿಯಿಂದ ಹುಬ್ಬಳ್ಳಿಯವರೆಗೂ ಓಡಿ ಬಂದು ನಿರ್ವಹಿಸಿದರು. ಪಾ.ವೆಂ. ಅವರ ಬರಹ ಬದುಕನ್ನು ಕಟ್ಟಿಕೊಡುವ ವಿವೇಕವನ್ನು ಹೆಚ್ಚಿಸುವ ಯುವ ಪೀಳಿಗೆಯನ್ನು ಎಚ್ಚರಿಸುವಂತಿದೆ. ಕಸ್ತೂರಿಯಲ್ಲಿ ಕನ್ನಡಕ್ಕೆ ಶಿಕ್ಷಣ ಮಾಧ್ಯಮವಾಗಲು ಸಾಧ್ಯವಿದೆ ಎಂದು ಈ ವೈಜ್ಞಾನಿಕ ಲೇಖನಗಳ ಮೂಲಕ ಪಾ.ವೆಂ. ಅವರು ಸ್ಪಷ್ಟಪಡಿಸಿದ್ದಾರೆ.

೧೧. ಚಿತ್ರ ವಿಚಿತ್ರ ಈ ಜಗತ್ತು

> **ಅರಿವು ಸ್ವಯಂ ಬುದ್ಧ, ಹಸಿವಿನೊಲು ನೋವಿನೊಲು**
> **ಅದನು ತಿಳಿವಾಗಿಸನ್ಯರಿಗೊರೆಯಬೇಕು**
> **ತಿಳಿವು ಭಾಷಾವಲಂಬಿ, ಭಾಷೆ ಸಂಕೇತಮಯ**
> **ಸಂಕೇತವುಬ್ಬು ತಗ್ಗಿನ ಮುಕುರ, ಪೆಂಗೇ ....**[*2]

ಪಾ. ವೆಂ. ಅವರ ಪೆಂಗೋಪದೇಶದ ಸಾಲುಗಳಂತೆ ತನ್ನ ಅರಿವನ್ನು ತಿಳಿಯಾಗಿಸಿ ಅನ್ಯರಿಗೂ ತಿಳಿಯುವಂತೆ ಮಾಡಿ ತನ್ನ ಜೀವನವನ್ನು ಸಾರ್ಥಕಗೊಳಿಸಿದವರು. ೧೯೫೬ರಲ್ಲಿ ಪ್ರಾರಂಭವಾದ **ಕಸ್ತೂರಿ** ೧೮ ವರ್ಷಗಳ ಕಾಲ ಅದರ ಸಂಪಾದಕತ್ವದ ಜವಾಬ್ದಾರಿಯನ್ನು ವಹಿಸಿದ ಪಾ. ವೆಂ. ಅದನ್ನು ವ್ಯವಸ್ಥಿತವಾಗಿ ರೂಪಿಸಿದರು. ವಹಿಸಿದ ಶ್ರಮ ಆಸಕ್ತಿ, ಪಟ್ಟಕ್ರಮಗಳಿಗೆ ಎಣೆಯಿಲ್ಲ. ಬಹುಭಾಷಾ ತಜ್ಞರಾದ ಪಾ. ವೆಂ. ಅವರಿಗೆ ಕನ್ನಡ ತುಳು, ಹಿಂದಿ, ಬಂಗಾಲಿ, ಮಲಯಾಳಿ, ಮರಾಠಿ ಇತ್ಯಾದಿ ಭಾಷೆಗಳಲ್ಲಿನ ಆಸಕ್ತಿ ಅಧ್ಯಯನ ಯೋಗ್ಯ ಲೇಖನವು ಅವರ ಗರುಡ ದೃಷ್ಟಿಗೆ ಬೀಳದೆ ಹೋಗುತ್ತಿರಲಿಲ್ಲ. ಡೈಜೆಸ್ಟ್ ಸ್ವರೂಪದ ಕಸ್ತೂರಿ ಮಾಸಿಕದಲ್ಲಿ, ಜಗತ್ತಿನಲ್ಲಿ ಜರುಗಿದ ಅನೇಕ ಆಶ್ಚರ್ಯಕರ ಘಟನೆಗಳನ್ನು ಕೊಡಬೇಕೆಂಬುದು ಆರಂಭದಿಂದಲೂ ಪಾ. ವೆಂ. ಅವರ ಕನಸಾಗಿತ್ತು. ಆದ್ದರಿಂದಲೇ ಪ್ರತಿ ಸಂಚಿಕೆಯಲ್ಲೂ ಒಂದೆರಡು ಲೇಖನಗಳನ್ನು ಕೊಡುತ್ತಾ ಹೋದರು.

ಪತ್ರಿಕೆಯ ಗುಣಮಟ್ಟದ ವಿಷಯದಲ್ಲಿ ಎಂದೂ ರಾಜಿಗಿಳಿಯದ ಪಾ.ವೆಂ. **ಪದಾರ್ಥ ಚಿಂತಾಮಣಿ**ಯಂತಹ ಶಾಸ್ತ್ರಸಾಹಿತ್ಯವನ್ನು ಪ್ರಕಟಿಸುವಲ್ಲಿ ತೋರುತ್ತಿದ್ದಷ್ಟೇ

ಆಸಕ್ತಿಯನ್ನು ರೋಚಕ, ಪ್ರಣಯ ಪ್ರಸಂಗಗಳನ್ನು ಅಥವಾ ಭೀಕರ ಅವಘಡಗಳನ್ನು ಕುರಿತು ಬರೆಯುವಾಗಲೂ ವಹಿಸುತ್ತಿದ್ದರು. ಉತ್ತಮ ಲೇಖನಗಳ ಕೊರತೆಯಿದ್ದಾಗ ಒಂದೇ ಸಂಚಿಕೆಯಲ್ಲಿ ಬೇರೆ ಬೇರೆ ಹೆಸರುಗಳಲ್ಲಿ (ರಾಧಾಕೃಷ್ಣರಾವ್, ಮುರಳೀಧರ, ಪಿ.ವಿ. ಆಚಾರ್ಯ) ಬರೆದು ಪತ್ರಿಕೆಯ ಗುಣಗೌರವವನ್ನು ಉಳಿಸಿದ್ದೂ ಇದೆ.

ಯಾವುದೇ ಮಾನವಾಸಕ್ತಿಯ ಕುತೂಹಲದ ಬರಹಗಳು ಪತ್ರಿಕೆಯ ಅವಿಭಾಜ್ಯ ಅಂಗ ಇಲ್ಲಿ ರಂಜಿಸುವ ಮತ್ತು ಕುತೂಹಲದ ಅಂಶವೇ ಪ್ರಧಾನ ಎಂಬುದು ನಿಜವಾದರೂ ಪಾ.ವೆಂ. ಆಚಾರ್ಯರು ಸಮಸ್ತ ಬರಹ ಅದನ್ನು ಮಾಹಿತಿಪೂರ್ಣವಾಗಿ ಮನನಯೋಗ್ಯವಾಗಿ ಮಾಡಿದೆ. ವಿಸ್ಮಯಕರವಾದ ಘಟನೆಗಳನ್ನು ಓದುವಾಗ ಪಾ.ವೆಂ. ಅದನ್ನು ಎಲ್ಲಿಂದ ಸಂಗ್ರಹಿಸಿದ್ದಾರೆಂಬುದು ಇನ್ನಷ್ಟು ವಿಸ್ಮಯಕರವಾದ ಅಂಶವೆನಿಸುತ್ತದೆ. ಎಲ್ಲ ಲೇಖನಗಳು ಎಲ್ಲ ಮಾಹಿತಿ ಪೂರ್ಣವಾದ ಮಮನಯೋಗ್ಯವಾದ ಅಧ್ಯಯನ ಪೂರ್ಣವಾದವುಗಳು. ಇಲ್ಲಿ ಮುಖ್ಯವಾಗುವ ಅಂಶಗಳೆಂದರೆ ವಿಷಯಗಳ ಅತಿ ವಿಶಾಲವಾದ ಹರವು **ಅಂತಪುರದ ಅಂತರಂಗ**ದಲ್ಲಿ ಎನ್ನುವ ಲೇಖನದಲ್ಲಿ ಪ್ರಾಚೀನ ಕಾಲದ ಸ್ತ್ರೀಯರ ಬಗ್ಗೆ ಹೇಳುತ್ತಾ ಇತಿಹಾಸ ಪುರಾಣದ ರಾಜರುಗಳು ಎಲ್ಲ ವಿಷಯಗಳ ವಿವರಿಸುತ್ತಾ ದಾಸಿಯರ ಸ್ಥಿತಿಗತಿಯನ್ನು ಧ್ವನಿಸುವ ಲೇಖನವಾಗಿದೆ. **ಇದು ಕ್ರಿಸ್ತನ ಪವಿತ್ರ ಶವ** ಎನ್ನುವ ಲೇಖನದಲ್ಲಿ ಶವ ವಸ್ತ್ರವನ್ನು ಸುತ್ತಿದ್ದ ಮೂಲ ಕಳೇಬರ ಕ್ರಿಸ್ತ ಪ್ರಭುವಿನದೇ ಎಂಬುದನ್ನು ನಿರ್ಣಯಿಸುವ ವಿಷಯ ಯಾವುದೂ ಇಲ್ಲ. ಇಲ್ಲಿ ವಿಜ್ಞಾನ ಕೈಬಿಡುತ್ತದೆ, ಸಂಪ್ರದಾಯ ವಿಶ್ವಾಸ ಪ್ರಮಾಣವಾಗುತ್ತದೆ ಎನ್ನುವ ಅಂಶವನ್ನು ಪಾ. ವೆಂ. ಅವರು ಸೂಕ್ತವಾಗಿ ಧ್ವನಿಸಿದ್ದಾರೆ. 'ಸೈಪ್ರಸ್ ನಾಡಿನ ಮದುವೆಯ ಪದ್ಧತಿ'ಗಳ ಬಗ್ಗೆ ಹೇಳುತ್ತಾ ಮದುವೆಯ ಬಗ್ಗೆ ಒಳ್ಳೆ ಅಭಿಪ್ರಾಯವನ್ನು ಜನಮುಟ್ಟುವಂತೆ ತಲುಪಿಸುತ್ತಾರೆ. ಈ ಗತಾನುಗತಿಕ ಪದ್ಧತಿಯಲ್ಲಿ ಅನ್ಯಾಯವೆಷ್ಟಿದ್ದರೂ ಒಳ್ಳೆಯ ಫಲಗಳೂ ಕೆಲವಿದೆ. ಸೈಪ್ರಸ್ಸಿನಲ್ಲಿ ವಿವಾಹ ವಿಚ್ಛೇಧನ ಪ್ರಮಾಣ ಅತ್ಯಲ್ಪ. ಕಷ್ಟಪಟ್ಟು ಪಡೆದ ಗಂಡನನ್ನು ತಿರಸ್ಕರಿಸಲು ಯಾರೂ ಸಿದ್ಧರಿಲ್ಲ. ಅಂತೆಯೇ ಮನೆ ಮಠ ಎಲ್ಲವನ್ನು ತಂದ ಹೆಂಡತಿಯನ್ನು ಬಿಡಲು ಗಂಡಸರು ತಯಾರಿಲ್ಲ. ಈ ರೀತಿ ಮದುವೆಯ ಬಗ್ಗೆ ನೈಜತನ ತೋರಿದಂತೆ ಮೊಹೆಂಜೋದಾರದ 'ಸತ್ತವರ ದಿಬ್ಬಗಳ ಕುರಿತು ಬರೆದಿದ್ದಾರೆ'. ಸಿಂಧೂ ಸಂಸ್ಕೃತಿಯ ಜನ ದ್ರಾವಿಡರೋ ಮತ್ತಾರೋ ತಿಳಿಯದು ಅವರ ನಗರಗಳು ನಾಶವಾಗಿ ಹೋದವು. ಆದರೆ ಅವರ ಸಂಸ್ಕೃತಿಯ ದೇವತೆಗಳ ಪರಂಪರೆ ಇನ್ನೂ ನಮ್ಮಲ್ಲಿ ಜೀವಂತವಾಗಿದೆ ಎಂಬುದು ಈ ಲೇಖನದಲ್ಲಿ ಸ್ಪಷ್ಟವಾಗಿದೆ.

ಗ್ರೀನವಿಚ್ ಕಾಲಮಾನ ಪದ್ಧತಿಯಂತಹ ವೈಜ್ಞಾನಿಕ ಸಂಗತಿಗಳು ಸ್ಥಾನಿಕ ವೇಳೆಯನ್ನು ಬಳಸುವ ರೀತಿಯನ್ನು ಇಲ್ಲಿ ವಿವರಿಸಲಾಗಿದೆ. ಕ್ರೂಗರ್ ಎಂಬುವವನ ವಂಚಕತನ, ಚರ್ಮದಿಂದ ನೋಡಬಹುದೇ ಎನ್ನುವಂತಹ ಲೇಖನಗಳು ಆಸಕ್ತಿಯನ್ನು ಹುಟ್ಟಿಸುವಂತಹ ಪಾ. ವೆಂ. ಅವರ ಈ ಕೌತುಕಮಯ ಪ್ರಪಂಚದಲ್ಲಿ ನದಿಯ

ಮೂಲವನ್ನು ಅರಸುವ ಸಾಹಸಿಗಳಿದ್ದಾರೆ. ಎರಡು ತಲೆಯ ನಾಯಿಗಳು, ಗಲ್ಲಿಗೇರಿ ಬದುಕಿದವರು ಟೈಟಾನಿಕ್ ದುರಂತ, ಪೆಟ್ಟಿಗೆಯಲ್ಲಿ ೧೦,೦೦೦ ಮೈಲು ಸವಾರಿ, ಬಲೂನಿನ ಪ್ರಯಾಣದ ರಮ್ಯಕಥೆ, ವಂಚಕ ಶಿಖಾಮಣಿ ಕ್ರೂಗರ್, ಸುಳ್ಳು ನೋಟುಗಳ ಕಾಟ ನದಿಯ ಮೂಲವನ್ನು ಅರಸುವ ಸಾಹಸಿಗಳು, ಮೆಡಿಕಲ್ ಕಾಲೇಜಿಗೆ ಹೆಣಗಳನ್ನು ಒದಗಿಸುವ ಭಂಡರಿದ್ದಾರೆ. ವಿಶ್ವಪರಂಪರೆಯನ್ನು ಮಾಡಹೊರಟ ಧೀರರು, ಕೊಡುಗೈ ದೊರೆಗಳು ಇವರೆಲ್ಲರು ಇಲ್ಲಿ ಸ್ಥಾನವನ್ನು ಗಿಟ್ಟಿಸಿದ್ದಾರೆ. ಹಿಮಶಿಖರದ ಜರೆತ ಜ್ವಾಲಾಮುಖಿಯ ಮಾರುತಗಳಂತಹ ನೈಸರ್ಗಿಕ ಪ್ರಕೋಪಗಳನ್ನು ಕಾಣಬಹುದು. ಚಲನಚಿತ್ರವಾಗಿ ಅಪಾರ ಜನಪ್ರಿಯತೆಯನ್ನು ಪಡೆದಿರುವ ಟೈಟಾನಿಕ್ ಹಡಗಿನ ದುರಂತದ ಬಗ್ಗೆ ೧೯೬೧ರಷ್ಟು ಹಿಂದೆಯೇ ಪಾ. ವೆಂ. ಅವರು ಲೇಖನವನ್ನು ಬರೆದಿದ್ದಾರೆ. ಇದು ಅವರ ಸುದ್ಧಿನಾಸಿಕದ ಚುರುಕಿಗೆ ಸಾಕ್ಷಿಯಾಗಿದೆ. ಘಟನೆಗಳ ಅದ್ಭುತ ಮತ್ತು ವೈಚಿತ್ರಗಳನ್ನು ಸ್ಪಷ್ಟಪಡಿಸಲು ಒಂದು ಉದಾಹರಣೆಗಳನ್ನು ಉಲ್ಲೇಖಿಸುವೆ.

ಹೌದಿನಿಯ ಪ್ರತಿಮ ಜಾದೂ ಜಗತ್ತು ಹಿಂದೂ ಇಂದೂ ಹೌದಿನಿಯಂಥ ಪ್ರಚಂಡ ಜಾದೂಗಾರರನ್ನು ಕಂಡಿಲ್ಲ. ಅವನ ಅದ್ಭುತ ಪ್ರಯೋಗಗಳು ಜನರನ್ನು ದಂಗುಬಡಿಸಿದ್ದವು. ಕೈಗೆ ಎಂಥ ಕೋಳವನ್ನೇ ತೊಡಿಸಿರಲಿ ಅದನ್ನು ಲೀಲಾಜಾಲವಾಗಿ ಕಳಚಿಕೊಂಡು ಬಂದು ಮುಕ್ತವಾಗುವ ಆತನ ಚಾತುರ್ಯ ನಿಜವಾಗಿಯು ರೋಮಾಂಚನಕಾರಿಯಾಗಿತ್ತು. ಹೌದಿನಿಯು ತನ್ನ ಕೌಶಲ್ಯವನ್ನು ಜರ್ಮನಿಯಲ್ಲಿ ಪ್ರದರ್ಶಿಸಲು ಬಂದಾಗ ಪೋಲಿಸ್ ಆಫೀಸರ್ ಗ್ರಾಫ್ ಪತ್ರಿಕಾಕಾರರೆದುರು *ಠ 'ಹೌದಿನಿ ಬರಿ ಡಾಂಭಿಕ ಅವನು ಉಪಯೋಗಿಸುವ ಕೋಳಗಳು ಕೃತಕವಾದವು ನಾನು ತೊಡಿಸುವ ಕೋಳಗಳಿಂದ ತಪ್ಪಿಸಿಕೊಳ್ಳಲಿ ನೋಡೋಣ' ಎಂದು ಆಹ್ವಾನವಿತ್ತಿದ್ದನು.

ಅದರಂತೆ ನ್ಯಾಯಾಲಯದಲ್ಲಿ ಆತ ಹೌದಿನಿಯ ಕೈಗೆ ತಾನು ತಂದಿದ್ದ ಕೋಳಗಳನ್ನು ತೊಡಿಸಿದ. ಬಳಿಕ ತನ್ನವರ ಸಹಾಯದಿಂದ ಹೌದಿನಿಯನ್ನು ಅನೇಕ ಸರಪಳಿಗಳಿಂದ ಬಂದಿಸಿ ಅವಕ್ಕೆಲ್ಲ ತನ್ನದೇ ಬೀಗಗಳನ್ನು ಹಾಕಿದ. ಹೌದಿನಿಯ ತಲೆ ಮಾತ್ರ ಕಾಣಿಸುತ್ತಿತ್ತು. ಆದರೆ ಮುಂದೆ ನಾಲ್ಕೇ ನಿಮಿಷಗಳಲ್ಲಿ ಹೌದಿನಿ ಬಂಧಮುಕ್ತನಾಗಿದ್ದ. ಅವನನ್ನು ಕಟ್ಟಿದ ಸರಪಳಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನೀರಿನೊಳಗಿಂದ ಬೇಡಿ ಕಳಚಿಕೊಂಡು ಪಾರಾಗಿ ಬರುವುದರಲ್ಲೂ ನಿಸ್ಸಿಮನಾಗಿದ್ದ. ಜಗತ್ತಿನ ಅನೇಕ ಸುಪ್ರಸಿದ್ಧ ದೇಶಗಳಲ್ಲಿ ಪ್ರದರ್ಶನವನ್ನು ಸವಾಲೊಡ್ಡಿ ಜಗತ್ಪ್ರಸಿದ್ಧನಾಗಿದ್ದ. ಆದರೆ ಅವನ ಮರಣ ಮಾತ್ರ ವಿಚಿತ್ರವಾಗಿತ್ತು. ಚಿತ್ರ ಬರೆಯುವ ಒಬ್ಬ ಹುಡುಗ 'ನಾನೊಮ್ಮೆ ಗುದ್ದಿ ನೋಡಲೇ' ಎಂದು ಜೋರಾಗಿ ಹೊಟ್ಟೆಗೆ ಗುದ್ದಿದ. ಹುಡುಗ ಗುದ್ದುತ್ತಾನೆ ಎಂಬ ಕಲ್ಪನೆಯಿಲ್ಲದ ಹೌದಿನಿ ನೋವಿನಿಂದ ನರಳಿದ. ಆ ಹುಡುಗ ಗಾಬರಿಯಾದ 'ನಾನು ಅಸಾವಧಾನವಾಗಿದ್ದ ನೀನು ಹೊಡೆದು ಬಿಟ್ಟೆ. ಹೊಟ್ಟೆ ನೋವು ಹೆಚ್ಚಾಯಿತು ಚಿಕಿತ್ಸೆ ಫಲಕಾರಿಯಾಗಲಿಲ್ಲ.

ಹೊಟ್ಟೆಯೊಳಗೆ ಅಪೆಂಡಿಕ್ಸ್ ಒಡೆದಿತ್ತು ೧೯೬೯ ಅಕ್ಟೋಬರ್ ೩೧ರಂದು ಹೌದಿನಿ ಸತ್ತ. ನ್ಯೂಯಾರ್ಕನ ವಕೀಲರ ಒಂದು ಕಂಪೆನಿಯ ಕಚೇರಿಯಲ್ಲಿ ಒಂದು ದೊಡ್ಡ ಕವರಿದೆ. ಅದರ ಮೇಲೆ ೧೯೭೪, ಎಪ್ರೀಲ್ ೬ರಂದು ಇದನ್ನೊಡೆದು ಬಿಡಬೇಕು ಎಂದು ಬರೆದಿದೆ. ೫೦ ಪುಟಗಳ ಕೈಬರಹದ ಪುಸ್ತಕವೊಂದಿದೆ ಎಲ್ಲ ಅದ್ಭುತ ಕೌಶಲ್ಯದ ಗುಟ್ಟು ಅದರಲ್ಲಿದೆ. ಎಲ್ಲ ವಿಧಾನಗಳು ಅಲ್ಲಿ ವಿಶ್ವವಿಖ್ಯಾತ ಜಾದೂಗಾರ ಬರೆದಿಟ್ಟಿದ್ದಾನೆ. ಈ ರೀತಿಯ ಅದ್ಭುತವಾದ ರೋಮಾಂಚಕ ಘಟನೆಯ ವಿವರಗಳನ್ನು ಪಾ.ವೆಂ. ಅವರು **ಕಸ್ತೂರಿ** ಬರಹದ ಮೂಲಕ ವಾಚಕರಿಗೆ ಕೊಡಮಾಡಿದ್ದಾರೆ.

ಪ್ರಚಂಡ ಗಣಿತ ಪರಾಕ್ರಮಿಗಳು : ೮೦ ವರ್ಷದ ವೃದ್ಧ ಸುಂದರರಾಜರಾಯರು ಬೆಂಗಳೂರಿನವರು ಹುಬ್ಬಳ್ಳಿಗೆ ಬಂದ ಸಂದರ್ಭ. ಅವರ ಅಪ್ರತಿಮ ಗಣಿತ ಪರಾಕ್ರಮದ ಬಗ್ಗೆ ಅವರ ಮಗಳಾದ ಪ್ರಪಂಚ ಪ್ರಸಿದ್ಧರಾದ ಗಣಿತ ತಜ್ಞೆ ಶಕುಂತಳಾದೇವಿ ಇವಳ ಅಸಾಧಾರಣ ಗಣಿತಶಕ್ತಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಸುತ್ತಾರೆ. ಪ್ರಚಂಡರಾದ ಅಮೇರಿಕಾದ ಲೆಸ್ಲಿಮಿಚೆಲ್ಲರು ಬನ್ನಿಯನ್ನು ಉಲ್ಲೇಖಿಸುತ್ತಾರೆ. ಗಣಿತ ಶಕ್ತಿ ಎನ್ನುವುದು ದೈವದತ್ತ ವರವಾಗಿದೆ. ಅಂಕೆಗಳನ್ನು ನೆನಪಿಟ್ಟುಕೊಳ್ಳುವ ಸಾಮರ್ಥ್ಯ ಅದ್ಭುತ ಏಕಾಗ್ರತೆ ಮತ್ತು ಸಂಖ್ಯಾಪ್ರೇಮ ಇವುಗಳ ಅಪೂರ್ವ ಸಂಯೋಗದಿಂದ ಹುಟ್ಟುತ್ತದೆ. ಅವರು ಲೆಕ್ಕದಲ್ಲಿ ಕೆಲ ಒಳಹಾದಿ ಮತ್ತು ತಂತ್ರಗಳನ್ನು ಉಪಯೋಗಿಸುತ್ತಾರೆ. ಪ್ರಚಂಡರು ಕೇವಲ ಜ್ಞಾಪಿಸಿಕೊಳ್ಳುವುದಿಲ್ಲ. ಪ್ರಚಂಡ ವೇಗದಿಂದ ಗುಣಿಸುತ್ತಲೂ ಇರುತ್ತಾರೆ. ಒಟ್ಟಿನ ಮೇಲೆ ಅಂಕೆಗಳಲ್ಲಿ ಅಪಾರ ಪ್ರೀತಿಯಿರುವುದೇ ಈ ಗಣಿತ ಪ್ರಚಂಡರ ಗುಟ್ಟು ಎನ್ನುವುದು ಪಾ.ವೆಂ. ಅವರ ಅಭಿಮತ. ಪಾ.ವೆಂ. ಅವರು ಗಣಿತಪ್ರಿಯರಾಗಿರುವುದರಿಂದಲೇ ಈ ರೀತಿಯ ಲೇಖನಗಳು ಓದುಗರನ್ನು ತಲುಪಲು ಸಾಧ್ಯವಾಯಿತು.

೧೨. ಕಾರಂತರ ಸಾಹಿತ್ಯದಲ್ಲಿ ಜೀವನದೃಷ್ಟಿ:

ಡಾ. ಶಿವರಾಮ ಕಾರಂತರ ಕಾದಂಬರಿಗಳ ಸಮೀಕ್ಷೆಯನ್ನು ಪಾ.ವೆಂ. ಒಂದು ಲೇಖನದಲ್ಲಿ ಮಾಡಿದ್ದುಂಟು. ಕಾರಂತರಿಗೆ ಅವರ **ಮೂಕಜ್ಜಿಯ ಕನಸುಗಳು** ಕಾದಂಬರಿಗಾಗಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದಾಗ **ಸಾಕ್ಷಿ** ತ್ರೈಮಾಸಿಕ ಸಂಪಾದಕ ಶ್ರೀ ಗೋಪಾಲಕೃಷ್ಣ ಅಡಿಗರು, ಶ್ರೀ ರಾಮಚಂದ್ರ ದೇವ ಅವರಿಗೆ ಅತಿಥಿ ಸಂಪಾದಕನೆಂದು ಆಹ್ವಾನಿಸಿ **ಸಾಕ್ಷಿಯ** ೩೮ನೇ ಸಂಚಿಕೆಯನ್ನು ಕಾರಂತರ ಕಾದಂಬರಿಗಳ ವಿವೇಚನೆಗಾಗಿ ಮೀಸಲಿಟ್ಟರು. ಆಗ ಪಾ.ವೆಂ. ಆವರು ರಾಮಚಂದ್ರ ದೇವರವರ ಕೋರಿಕೆಯ ಮೇರೆಗೆ 'ಕಾರಂತರ ಕಾದಂಬರಿಗಳಲ್ಲಿ ಜೀವನ ದೃಷ್ಟಿ' ಲೇಖನವನ್ನು ಬರೆಯಲು ಕೋರಿದರು. ೧೨ ಪುಟಗಳ ಈ ವಿಶೇಷ ಲೇಖನ ಪತ್ರಕರ್ತನ ದಾಟಿಯಿಂದ ಭಿನ್ನವೂ ಘಹನವೂ ಆಗಿರುವುದು. ಪಾ.ವೆಂ. ಅವರ ಅಧ್ಯಯನಶೀಲ ಮನೋವೃತ್ತಿಯ ಫಲವಾಗಿ ೧೯೭೮ರ

ವರೆಗಿನ ಕಾರಂತರ ಕಾದಂಬರಿಗಳ ಸಂಖ್ಯೆ '೪೨' ಅವರ ಕಾದಂಬರಿ, ಬರವಣಿಗೆಯ ಪುಟಸಂಖ್ಯೆ ೧೦,೦೦೦ ಪುಟದಷ್ಟು ಆಗಿತ್ತು. ಇವನ್ನೆಲ್ಲಾ ಅವಲೋಕಿಸುವ ಅಧ್ಯಯನ ಪ್ರಯತ್ನವನ್ನು ಪಾ.ವೆಂ. ಕೈಗೊಂಡಿದ್ದಾರೆ. ಈ ಲೇಖನದಲ್ಲಿ 'ಕಾರಂತರ ಜೀವನದೃಷ್ಟಿ' ಅವರ ಮನೋದ್ಯೆಹಿಕ ಅವಸ್ಥಾಂತರಗಳಲ್ಲಿ ಹೇಗೆ ಬೆಳೆದು ಬದಲಿಯಾಗುತ್ತಾ ಬಂದಿದೆ ಎಂಬುದನ್ನು ಗುರುತಿಸಿದ್ದಾರೆ. ಕಾರಂತರ ಸಾಹಿತ್ಯದಲ್ಲಿ ಕಾದಂಬರಿ ಕೃತಿಗಳಿಗೆ ಪ್ರತ್ಯೇಕವಾದ ದೃಷ್ಟಿಕೋನವಿದೆ. ಅಂದರೆ ಜೀವನವನ್ನು ಹುಚ್ಚುಮನಸ್ಸಿನ ಹತ್ತು ಮುಖಗಳಿಂದ ಕಂಡ ಕಾರಂತರು ಕಾದಂಬರಿಗಳಲ್ಲಿ ಕಂಡ ಜೀವನ ಆ ಹತ್ತರಲ್ಲಿ ಒಂದಾಗಿದೆ. ಹೀಗಾಗಿ ಕಾದಂಬರಿ ಎಂಬ ಪ್ರಕಾರದ ಕಲೆಯ ಸಾಮಾನ್ಯ ರೀತಿ ನೀತಿಗಳಿಗೆ ಕಟ್ಟುಬೀಳದೆ ಕಾರಂತರು ತಮ್ಮದೇ ಆದ ನಿರೂಪಣೆಯ ಸಾಧನಗಳೊಂದಿಗೆ ಕಾದಂಬರಿಗಳನ್ನು ಬರೆದಿದ್ದಾರೆ. ಅಲ್ಲಿ ಹೊಳಹುಗಳಿವೆ. ಆದರೆ ಕಲಾತ್ಮಕ ಯೋಜನೆ (ತಂತ್ರ)ಗಳಿಲ್ಲ. ಜೀವನಗಳನ್ನು ಬೇರೆ ಬೇರೆ ನಿಟ್ಟಿನಿಂದ ನೋಡುವ, ಅದರೊಂದಿಗೆ ಸಂಘರ್ಷಿಸುವ ಅರ್ಥಮಾಡಿಕೊಳ್ಳಲು ಅನುಸಂಧಾನಿಸುವ ಪ್ರಾಮಾಣಿಕ ಪಯಣವನ್ನು ಕಾರಂತರು ಮಾಡುತ್ತಾರೆ. ಕಾರಂತರು ಒಂದೇ ಕಡೆ ಕೂತು ಯೋಜನಾಬದ್ಧವಾಗಿ ಅಥವಾ ಕಾಲಬದ್ಧವಾಗಿ ಬರೆದವರಲ್ಲ. ಸದಾ ಸಂಚಾರದಲ್ಲಿರುತ್ತಿದ್ದ ಅವರು ಬೇರೆ ಬೇರೆ ನಮೂನೆಯ ವ್ಯಕ್ತಿಗಳನ್ನು ಸ್ಥಳಗಳನ್ನು, ಸನ್ನಿವೇಶಗಳನ್ನು, ಮಾನವೀಯ ಸಂಬಂಧಗಳನ್ನು ಕುತೂಹಲದಿಂದಲೂ ಆಸಕ್ತಿಯಿಂದಲೂ ಕಂಡವರು. ಈ ನೋಟಗಳನ್ನು ಅನುಭವಕ್ಕೆ ಅನ್ವಯಿಸಿ, ವಿಶ್ಲೇಷಿಸಿ ಇದೆಲ್ಲಕ್ಕೆ ಕಾರಣ ಮತ್ತು ಪರಿಣಾಮಗಳ ಸ್ವರೂಪವನ್ನು ಕಂಡುಕೊಳ್ಳುವ ಕಲಾವಿದನ ಅನ್ವೇಷಣೆ ಕಾರಂತರದು. ಹೀಗಾಗಿ ಅವರು ಕಾದಂಬರಿ ಕ್ಷೇತ್ರಕ್ಕೆ ಕಾಲಿಟ್ಟಿದ್ದು, ಅವರ ಅನುಭವ ಪರಿಪಾಕ ಒಂದು ನಿಟ್ಟನ್ನು ತಲುಪಿದ ಮೇಲೆಯೇ ಕಾರಂತರ ಕಾದಂಬರಿಗಳನ್ನು 'ಗಂಭೀರ ಸಾಹಿತ್ಯ' ಎಂದು ಓದಿದವರೆಲ್ಲರೂ ಉದ್ಗರಿಸುತ್ತಾರೆ. ಇದಕ್ಕೆ ಕಾರಣ ಕಾದಂಬರಿಯು ಮನರಂಜನ ಸಾಧನವೂ ಆಗಿರಬೇಕು ಎಂಬ ಸಾಮಾನ್ಯ ನೀರಿಕ್ಷೆ ಇದೆ. ಅಂದರೆ ಕಾದಂಬರಿ ರಚನೆ ಲಲಿತ ಶೈಲಿಯನ್ನು ಅನುಸರಿಸಿ ಓದುಗನಿಗೆ ಸರಳವಾದ, ಮುಗ್ಧವಾದ ರಂಜನೆ ಜೊತೆಗೆ ನಿರಾಯಸವಾದ ಜೀವನಾನುಭವ ಕೊಡಬೇಕೆಂಬ ಇಂಗಿತ ಓದುಗರಲ್ಲಿದೆ. ಆದರೆ ಕಾರಂತರು ಇಂತಹ ಹಗುರವಾದ ಬರಹಕ್ಕೆ ಒಲಿದವರಲ್ಲ. ಅವರದು ಸತ್ಯಾನ್ವೇಶಣೆಯ ಮಾರ್ಗ. ನಾಜೂಕಿಗಿಂತ ಚಲತ್ವಕ್ಕೆ, ಕಸುಬುಗಾರಿಕೆಗಿಂತ ಓಜಸ್ಸಿಗೆ ಅವರು ಬೆಲೆ ಕೊಡುತ್ತಾರೆ. ಒಪ್ಪ ಓರಣ ಮಾಡುವುದಕ್ಕಿಂತ ವಸ್ತುವಿನ ತಿರುಳಿನ ಆಳಕ್ಕೆ ಅಥವಾ ಘಹನತೆಗೆ ಸಹಜವಾಗಿ ನುಸುಳುವ ಒಬ್ಬ ಮನೋವಿಜ್ಞಾನಿಯ ಚಿಕಿತ್ಸಕ ದೃಷ್ಟಿ ಅವರದು. ಹೀಗಾಗಿ ಕಾರಂತರ ಕಾದಂಬರಿಗಳ ಕಥೆಗೆ ಆದಿ, ಮಧ್ಯ, ಕೊನೆ ಎಂಬ ಸರಳ ಚಲನೆ ಅಥವಾ ಕಾರ್ಯಕಾರಣ ಸಂಬಂಧದ ವಿಧಾನ ಇರಲಿಕ್ಕಿಲ್ಲ. ಅವರ ಪಾತ್ರಗಳು ಮತ್ತು ಅವರು ತೊಡಗುವ ಸನ್ನಿವೇಶಗಳ ಚಿತ್ರಣದ ಕಡೆಗೆ ಕಾರಂತರ ಗಮನವಿರುತ್ತದೆ. ಅಂದರೆ ಕಾರಂತರು ಕಾದಂಬರಿಯಲ್ಲಿ

ಏನು ಹೇಳುತ್ತಾರೆ? ಎಂಬುದನ್ನು ಓದುಗ ಗಮನಿಸಬೇಕೆ ಹೊರತು ಹೀಗೆ ಹೇಳುತ್ತಾರೆ ಎಂಬುದಲ್ಲ. ಕಾರಂತರು ಮನುಷ್ಯ ಮೌಲ್ಯಗಳನ್ನು ಕುರಿತು ಮತ್ತೆ ಮತ್ತೆ ಚಿಂತಿಸಿದ್ದಾರೆ. ಕಲಾಜಗತ್ತು, ರಾಜಕೀಯ ಜಗತ್ತು, ಕುಟುಂಬ ಮನೆತನ ಜಗತ್ತು, ಕಾರಂತರ ಕಾದಂಬರಿಗೆ ವಸ್ತುಗಳಾಗಿವೆ. ಅವರ **ಬಾಳ್ವೆಯೇ ಬೆಳಕು** ಬರೆದು ಸ್ಫುರಣೆಗಳನ್ನು ಓದುಗರಿಗೆ ತಲುಪಿಸಿದರು. ಅಂದರೆ 'ನನಗೆ ಬಾಳು ಮುಖ್ಯ' ಎಂಬ ಅವರ ದೃಷ್ಟಿಕೋನ ಕಾದಂಬರಿಗಳಲ್ಲಿಯೂ ಅನುಭವದ ನಾಟಕೀಕೃತ (Dramatic) ರೂಪದಲ್ಲಿ ವ್ಯಕ್ತಿವಾಯಿತು. ವಿತಂಡವಾದ ಅವರಲ್ಲಿಲ್ಲ. 'ಮಾನವನು ತಾನು ದೊಡ್ಡವನಾಗದೆ ತನ್ನದೇವರನ್ನು ದೊಡ್ಡದು ಮಾಡಲಾರ' ಎಂಬ ಅವರ ಸುಪ್ರಸಿದ್ಧ ಹೇಳಿಕೆ ಗಮನಾರ್ಹವಾಗಿದೆ. ಇಲ್ಲಿ ದೇವರು ಎಂದರೆ ಆಸ್ತಿಕವಾದಿಗಳು ತಿಳಿದಂತೆ ಸೃಷ್ಟಿಕರ್ತನಲ್ಲ ಅಥವಾ ಜೀವಜಗತ್ತಿನ ಒಬ್ಬ ನಿರ್ಮಾಪಕನು ಅಲ್ಲ. ಸಾಮಾನ್ಯ ಜನರಿಗೆ ದೇವರನ್ನು ನಾಮ, ಗುಣ, ರೂಪಗಳಿಂದ ಅಳೆಯುವ ಒಂದು ದೊಡ್ಡ ಕಲ್ಪನೆ. ಈ ಅಂಶಗಳಲ್ಲಿ ದೇವರನ್ನು ಅಗಾಧವೂ ಅನೀರ್ವಚನಿಯವೂ ಮಾಡಿ ತನ್ನ ಕೈಗೆ ಸಿಗದಂತೆ ಮಾಡಿದ್ದು ಒಂದು ವ್ಯವಹಾರಿಕ ಚಟುವಟಿಕೆ. ಕಾರಂತರು ಭಕ್ತಿ ಸಾಹಿತ್ಯ ಮತ್ತು ಕಲೆಗಳಿಗೆ ಮಾರೋಗಿ ತಾರುಣ್ಯದಲ್ಲಿ ಭಕ್ತಿ, ಆಧ್ಯಾತ್ಮಿಕ ಸಾಧನೆ ಕೈಗೊಂಡಿದ್ದು ಉಂಟು. ಆದರೆ ಅವರಿಗೆ ಆ ಅಮೂರ್ತ ಮತ್ತು ಕೇವಲ ಕಲ್ಪನೆಯ ಮಿತಿಗೆ ಒಳಗಾದ ದೇವರ ಬಗ್ಗೆ ಭ್ರಮನಿರಸನವೂ ಕೂಡಲೆ ಆಯಿತು. ಭಕ್ತಿ ಸಾಧನೆಯ ಮೂಲಕ ದೇವರನ್ನು ಬೆನ್ನು ಹತ್ತುವ ಕಂಡುಕೊಳ್ಳುವ ಆ ಪ್ರಯತ್ನಗಳಿಂದ ಹಿಮ್ಮುಖರಾದ ಕಾರಂತರು ಜೀವನದ ಮೌಲ್ಯಗಳೇ ದೇವರ ಅಥವಾ ಆಗಾಧ ಶಕ್ತಿಸಂಚಯವೆಂದು ತರ್ಕಿಸಿ ಅದರ ಅರ್ಥಪೂರ್ಣವಾದ ಸಂಬಂಧಗಳನ್ನು ಹುಡುಕಲು ಹೊರಟರು. ಇದು ತೀರತಾರುಣ್ಯದಲ್ಲಿಯೇ ಅವರಗೆ ಸಾಧ್ಯವಾಯಿತು. ಅದರ ಫಲವೇ **ಬಾಳ್ವೆಯೇ ಬೆಳಕು** ಎಂಬ ಕೃತಿ.

ಮನುಷ್ಯ ಮೂಲತಃ ಪ್ರಕೃತಿ ಜೀವಿ ಆದರೆ ಬುದ್ಧಿ ಬಲದಿಂದ ಕೃತಕನೂ ವಿಕೃತನೂ ಆಗಿ ಬೆಳೆದಿದ್ದಾನೆ. ಜೊತೆಗೆ ಸುಸಂಸ್ಕೃತನೂ ನಾಗರಿಕನೂ ಆಗಿ ಜಗತ್ತನ್ನು ಬದಲಿಸಿದ್ದಾನೆ. ಪ್ರವೃತ್ತಿ, ಸಂಸ್ಕೃತಿಗಳಿಂದ ಮನುಷ್ಯಕಟ್ಟಿದ ಜೀವನ ಅಥವಾ ವ್ಯವಸ್ಥೆ ಯಾವುದೇ ಒಂದು ಗೋಚರ ಅಥವಾ ಅಗೋಚರ ಶಕ್ತಿಯಿಂದ ನಿಯಂತ್ರಣ ಗೊಂಡಿದೆಯೇ ಅಥವಾ ರೂಪುಗೊಳ್ಳುತ್ತಿದೆಯೇ ಎಂಬ ಕುತೂಹಲದಿಂದ ಕಾರಂತರು ತಮ್ಮ ಅಳತೆಗೆ ಬಂದ ವಾಸ್ತವ ಜೀವನವನ್ನು ಕಾಣುತ್ತಾ ಬರುತ್ತಾರೆ. ಮನುಷ್ಯನ ವರ್ತನೆ ಅಥವಾ ಮನೋಭಾವ ಪರಿಸರ, ಪರಿಸ್ಥಿತಿಗಳಲ್ಲಿಯ ಪ್ರಭಾವ, ವ್ಯಕ್ತಿ ಸಮಾಜದ ನಡುವಿನ ವ್ಯತ್ಯಾಸ ಸಂಘರ್ಷ, ಸಾಮಾಜಿಕ ವ್ಯವಸ್ಥೆಯಲ್ಲಿಯ ಅಸಂಗತತೆ, ವೈಶಮ್ಯ ಕಾರಂತರನ್ನು ವಿಚಾರಕ್ಕೆ ಹಚ್ಚುತ್ತದೆ. ಇವೆಲ್ಲವೂಗಳಲ್ಲಿ ವ್ಯಕ್ತವಾಗುವ ಮಾನವನ ಗುಣ ಕಲ್ಪನೆ ಆಕಾಂಕ್ಷೆ ಮೌಲ್ಯಗಳ ಶೋಧನೆ ಇವುಗಳ ಸೋಲು ಗೆಲವು ಕಾರಂತರಲ್ಲಿ ಕತೆಗಳನ್ನು ಹುಟ್ಟಿಸುತ್ತದೆ. ಇಂತಹ ಜೀವನವನ್ನು ತಾನೂ ನೋಡಿದಂತೆ ಓದುಗರಿಗೆ

ತೋರಿಸುತ್ತಾ ತನ್ನನ್ನು ಶೋಧಿಸಿಕೊಳ್ಳುವುದು ಮತ್ತು ತಾನು ತಿಳಿದ ಅರ್ಥವಂತಿಕೆಯನ್ನು ಓದುಗರೊಂದಿಗೆ ಹಂಚಿಕೊಳ್ಳುವ ವಿನಯ ಕಾರಂತರದು. ಜೀವನದಲ್ಲಿ ಮೌಲ್ಯಗಳಿವೆಯೇ? ಅಥವಾ ಜೀವನ ಮನುಷ್ಯನನ್ನು ಕಾಲಪ್ರವಾಹದಲ್ಲಿ ತಳ್ಳಿ ಅವನನ್ನು ಅವನು ತೇಲುವುದನ್ನು, ಮುಳುಗುವುದನ್ನು ನೋಡುತ್ತಿದೆಯೇ ಎಂಬ ವಿಸ್ಮಯ ಕೂಡ ಕಾರಂತರದು. **ಮರಳಿ ಮಣ್ಣಿಗೆ, ಚೋಮನಗುಡಿ, ಸರಸಮ್ಮನ ಸಮಾದಿ, ಮುಗಿದಯುದ್ಧ, ಬೆಟ್ಟದ ಜೀವ, ಕುಡಿಯರ ಕೂಸು, ಹೆತ್ತಾಳಾ ತಾಯಿ** ಇವು ಕಾರಂತರು ತಮ್ಮ ಕಾದಂಬರಿ ವ್ಯವಸಾಯದ ಮೊದಲ ದಶಕದಲ್ಲಿ ಬರೆದ ಕಾದಂಬರಿಗಳು. ಇವುಗಳ ಕೂಲಂಕುಶ ಓದಿನ ನಂತರ ಪಾ.ವೆಂ. ಅವುಗಳ ಮೇಲೆ ಹರಿಸಿದ ಒಳನೋಟಗಳ ಫಲಿತಾಂಶ ಇಂತಿದೆ.

೧. ಜೀವನ ಶ್ರದ್ಧೆ: ಜೀವನ ಶ್ರದ್ಧೆಯೆಂಬುದು ಮನುಷ್ಯ ಜೀವದ ಮೊದಲ ಗುಣ. ದೈನಂದಿನ ಜೀವನದಲ್ಲಿ ಉಂಟಾಗುವ ಸೋಲು ಬಡತನ ಅನಾನುಕೂಲತೆಗಳು ಮನುಷ್ಯನನ್ನು ಹೀನಗೊಳಿಸುವಾಗ ಅವುಗಳಿಗೆ ಪಕ್ಕಾಗದೆ ತನ್ನ ಸತ್ವವನ್ನು ಅಂದರೆ ಬದುಕಿಬಾಳುವ ರೀತಿನೀತಿಗಳನ್ನು ಕೈ ಬಿಡದೆ ಉಳಿಸಿಕೊಳ್ಳುವ ಗುಣವೇ ಬದುಕಿನಶ್ರದ್ಧೆ. ಈ ಜೀವ ಶಕ್ತಿಯನ್ನುಳ್ಳ ವ್ಯಕ್ತಿಗಳು ಕಾರಂತರಿಗೆ ಅವರು ಕಂಡ ಸಮಾಜದಲ್ಲಿ ಹಲವರು ಕಂಡಿದ್ದಾರೆ. 'ಮರಳಿ ಮಣ್ಣಿ'ಗೆಯ ಸರಸ್ವತಿ, ಪಾರೋತಿ 'ಔದಾರ್ಯದ ಉರುಳಲ್ಲಿ' ಇರುವ ದಯಾನಂದ ರಾಯ, ನಿರಂತರ ಶೋಷಣೆಗೊಳಗಾಗಿದ್ದರೂ ದುಡಿಯನ್ನು ಬಾರಿಸುತ್ತಲೇ ಇರುವ ಚೋಮ, 'ಬೆಟ್ಟದ ಜೀವದ' ಗೋಪಾಲಯ್ಯ ಪಾತ್ರಗಳನ್ನು ಪಾ.ವೆಂ. ಉದಾಹರಿಸುತ್ತಾರೆ.

೨. ಜೀವನ ಬೆಳೆಸುವ ಪ್ರಾಮಾಣಿಕ ಪ್ರಯತ್ನ: ಕಾರಂತರರದು ಚಲನಶೀಲ ಪ್ರವೃತ್ತಿ. ಅಂತೆಯೇ ಅವರು ಕನ್ನಡ ಸಂಸ್ಕೃತಿಯನ್ನು ತಮ್ಮ ಬರಹಗಳಿಂದ ಆಧುನಿಕ ಸ್ಥಿತಿಯವರೆಗೆ ಬೆಳೆಸಿದರು. ಜೀವನವನ್ನು ಸಾಹಸದಿಂದ ನಡೆಸಬೇಕು. ಆಲಸ್ಯ, ಮನೋಜಡತೆ, ಅಜ್ಞಾನ, ಪೂರ್ವಗ್ರಹ ಪೀಡಿತ ಮನಸ್ಥಿತಿಗಳಿಂದ ಬಿಡಿಸಿಕೊಳ್ಳುವ ಹೊಣೆ ವ್ಯಕ್ತಿಯದೆ. ಇದಕ್ಕೆ ಶಿಕ್ಷಣ, ಸಂಸ್ಕಾರ ನೀಡುವ ಸಹಕಾರ ಹೊರಗಿನದು. ವ್ಯಕ್ತಿ ತನಗೆ ತಾನೇ ಹೊಣೆ. ತನ್ನ ಅರಿವು ಮತ್ತು ಇರವನ್ನು ಕಂಡುಕೊಳ್ಳುವ, ಪ್ರತಿನಿತ್ಯ ಅರಳಿಸಿಕೊಳ್ಳುವ ಪ್ರಜ್ಞೆ ವ್ಯಕ್ತಿಗಿದೆ. ನಮ್ಮ ಭಾರತಕ್ಕೆ ಸ್ವಾತಂತ್ರ್ಯಬೇಕು ಅದನ್ನು ನಮಗೆ ಕೊಡಿರಿ ಎಂದು ಬ್ರಿಟೀಷರಿಗೆ ಕೇಳುವುದು ಭಿಕ್ಷೆ. ಅದು ಭಿಕ್ಷೆಯಾಗಬಾರದು; ಅದು ನಾವೇ ನಮಗಾಗಿ ಪಡೆದುಕೊಳ್ಳುವ ನಮ್ಮ ಅಗತ್ಯ ಮತ್ತು ಹಕ್ಕು ಎಂಬ ಮನೋಭಾವ ತಮ್ಮ ಕಾರಂತರದು. ಇದನ್ನವರು ತಮ್ಮ ಕಾದಂಬರಿಗಳ ಉದಾತ್ತ ಪಾತ್ರಗಳ ಮೂಲಕ ಮತ್ತೆ ಮತ್ತೆ ಎತ್ತಿ ತೋರಿಸಿದ್ದಾರೆ. ಬದುಕನ್ನು ಬೆಳೆಸಲು, ಬಾಳೂ ಆಗಿ ಮಾರ್ಪಡಿಸಲು ವ್ಯಕ್ತಿ ತನ್ನೆಲ್ಲ ಸತ್ವವನ್ನು, ಸಾರ-ಸೌಂದರ್ಯವನ್ನು ತನ್ನ ಪಂಚೇಂದ್ರಿಯಗಳ ಸಹಕಾರದಿಂದ ಚಾಲನೆಗೊಳಿಸಬೇಕು. ಕಾರಂತರು ತಮ್ಮ ಯೌವನಾರಂಭದಲ್ಲಿ ಮಾಡಿದ್ದು ಇದನ್ನೆ. ಇದಕ್ಕೆ ಪ್ರತಿಭೆ ಮೂಲವಾದರೂ ಪರಿಶ್ರಮ ಅಂದರೆ ಸಾಹಸದ ದಟ್ಟ ಹೆಜ್ಜೆಗಳನ್ನು ಹಾಕುವುದು ಅನಿವಾರ್ಯ. ಕಾರಂತರು

ತಮ್ಮ ಕಾಲದ ಸಮಾಜ ಮತ್ತು ದೇಶಗಳಲ್ಲಿ ಆಗುತ್ತಿದ್ದ ಕ್ರಾಂತಿಕಾರಕ ಆಲೋಚನೆ–ಆಂದೋಲನಗಳಿಗೆ ತೀವ್ರವಾಗಿ ಸ್ಪಂದಿಸಿದವರು. ಆದ್ದರಿಂದ ಲೇಖಕವಾಗಿ ರೋಮ್ಯಾಂಟಿಕ್ ಹಾದಿಯನ್ನು ಉದ್ದೇಶಪೂರ್ವಕವಾಗಿ ತೊರೆದು ವಾಸ್ತವವಾದನ್ನು ಕಾರಂತರು ಹಿಡಿದರು. ಅವರಿಗೆ ಸಂಪ್ರದಾಯವಾದಿಗಳ ಬಗ್ಗೆ ತಿರಸ್ಕಾರವಿರಲಿಲ್ಲ, ಬದಲು ಸಂಪ್ರದಾಯವಾದಿಗಳಲ್ಲಿದ್ದ ಜೀವನ ನಿಷ್ಠೆಯ ಬಗ್ಗೆ ಗೌರವವಿತ್ತು. ಜೀವನ ನಿಷ್ಠೆಯುಳ್ಳವರು ವಾಸ್ತವವಾದಿಗಳಾಗಿ ಮಾರ್ಪಡಾಗುವುದು ಕಾಲದ ಚಲನ ಶೀಲತೆಯ ಗುಣಧರ್ಮ ಎಂಬುದನ್ನವರು ಮನಗಂಡರು. ಆದ್ದರಿಂದ ಕಾರಂತ ಜೀವನ ದೃಷ್ಟಿಯಲ್ಲಿ ಯತ್ನಕ್ಕೆ ಅಗ್ರಪಟ್ಟ ; ಅದೇ ಉದಾತ್ತ ದೃಷ್ಟಿ.

೩. **ಜೀವನದಲ್ಲಿಯ ನಂಬಿಕೆ ಚಲನಶೀಲವಾಗಿರಬೇಕು:** ಅಂದರೆ ಆಶಾವಾದಿ ನಿಲುವು ವ್ಯಕ್ತಿಯದಾಗಿದ್ದರೆ ಅದರ ಪರಿಣಾಮ ಇತ್ಯಾತ್ಮಕ ಜೀವನವನ್ನು ರೂಪಿಸುವುದಕ್ಕೆ ಉರೇಗೋಲಾಗುತ್ತದೆ. ಇದು ವ್ಯಕ್ತಿಯಲ್ಲಿ ವ್ಯವಸಾಯಗೊಳ್ಳಬೇಕಾದ ಗುಣ ಮತ್ತು ಸಾಮರ್ಥ್ಯ, ನಂಬಿಕೆಯೂ ಯಾವುದೇ ಆದರ್ಶ ಅಥವಾ ಇಸಮ್‌ಗಳಿಗೆ ಅಡಿಯಾಳಾಗದೆ ವ್ಯಕ್ತಿಯ ಜೀವನದ ಪ್ರತ್ಯಕ್ಷ, ಪ್ರಾಮಾಣಿಕ ಅನುಭವದಿಂದಲೇ ರೂಪಗೊಂಡು ಪ್ರವೃತ್ತಿಪರವಾದ ಸ್ವಾರ್ಥವನ್ನು ದೂರವಿಟ್ಟು ಬೆಳೆಯಬೇಕು. ಜೀವನದಲ್ಲಿಯ ಪ್ರಕೃತಿ ಸಹಜವಾದ ಸೌಂಧರ್ಯ ಒಳಿತಿನ ಒಲವು (ಪ್ರೀತಿ) ಮತ್ತು ನಿರಂತರ ಎಚ್ಚರ ಇವು ವ್ಯಕ್ತಿಗೆ ವ್ಯಕ್ತಿಯೇ ಅದಿಕಾರಿ ಆತ ತನ್ನಂತೆ ಪರರನ್ನು ಬಗೆಯುವ ಉದಾತ್ತಪ್ರವೃತ್ತಿಯನ್ನು ಅನುಸರಿಸಿದಾಗ ಮಾನವೀಯತೆಯ ಅಧಿಕಾರ ಅವನಿಗೆ ಬಂದು ಇತರರನ್ನು ಪ್ರಭಾವಿಸುತ್ತದೆ. ಶಿವರಾಮ ಕಾರಂತರು ಮೇಲ್ನೋಟಕ್ಕೆ ಒಬ್ಬ ವ್ಯಕ್ತಿವಾದಿ ಲೇಖಕರಾಗಿ ಕಾಣುತ್ತಾರೆ. ಅವರನ್ನು ಅನುಸರಿಸುವುದು ಕಷ್ಟ ಎಂದು ಅನಿಸುತ್ತದೆ. ಏಕೆಂದರೆ ಕಾರಂತರು ಯಾವುದೇ ವಾದವನ್ನು ಮಂಡಿಸುತ್ತಾ ಚಳುವಳಿಯ ಮುಖಂಡರಾಗಿ ನನ್ನನ್ನು ಅನುಸರಿಸಿ ಎಂದು ಸಿದ್ದ ಹೇಳಿಕೆಯನ್ನು ಕೊಡಲಿಲ್ಲ. ಕಾರಂತರ ಪ್ರಕಾರ ವಾಸ್ತವ ಜಿವನವನ್ನು ತೆರೆದ ಕಣ್ಣಿನಿಂದ ಕಂಡು ಅನುಭವಿಸಿ ಅರ್ಥವಂತಿಕೆಯನ್ನು ರೂಪಿಸಿಕೊಂಡು ತನಗೆ ತಾನು ಪ್ರಾಮಾಣಿಕವಾಗಿ ಬರೆದುಕೊಂಡವರು. ವೈಯಕ್ತಿಕ ಸಾಫಲ್ಯದ ಅರ್ಥವನ್ನು ಗ್ರಹಿಸಿ ವೈಯಕ್ತಿಕ ಹಕ್ಕುಗಳನ್ನು ಉಜ್ವಲನ (Revision)ಗೊಳಿಸಿಕೊಂಡು ಸ್ವಾತಂತ್ರ್ಯದ ಸಾಧ್ಯತೆಗಳನ್ನು ಸಾಹಸದಿಂದ ಅಳವಡಿಸಿಕೊಂಡು ಕಾರಂತರು ಬದುಕಿದರು, ಬರೆದರು, ಬಾಳಿದರು. ಈ ಮೂರು ಪ್ರಕ್ರಿಯೆಗಳು ಕಾರಂತರ ಕಾದಂಬರಿಗಳಲ್ಲಿ ಜೀವನ ದೃಷ್ಟಿಯಾಗಿ ಓದುಗರಿಗೆ ಕಾಣುತ್ತದೆ.

೧೩. ಕಾರಂತರ ಸಾಹಿತ್ಯ ದರ್ಶನ:

ಶಿವರಾಮ ಕಾರಂತರ **ಪ್ರಪಂಚ** ಡಾ. ಶಿವರಾಮ ಕಾರಂತರು ಕರ್ನಾಟಕದಲ್ಲಿ ಹುಟ್ಟಿದ ಬಹುಮುಖ ಪ್ರತಿಭೆಯ ಮತ್ತು ಬಹುಮುಖ ಕ್ರೀಯಾಶೀಲ ಜೀವಿ ಎಂಬುದನ್ನು

ಮನವರಿಕೆ ಮಾಡಿಕೊಡುವ ಒಂದು ಅಭಿನಂದನ ಗ್ರಂಥವನ್ನು ಪ್ರೊ. ಕು. ಶಿ. ಹರದಾಸ ಭಟ್ಟರು ೧೯೮೬ರಲ್ಲಿ ಉಡುಪಿಯಿಂದ ಸಂಪಾದಿಸಿ ಪ್ರಕಟಿಸಿದರು. ಇದರಲ್ಲಿ ಕಾರಂತರ ವ್ಯಕ್ತಿತ್ವ ಮತ್ತು ಸಾಧನೆಗಳ ಸಮೀಕ್ಷೆ ತುಂಬಿದೆ. ಇಲ್ಲಿಯ ೫೫ ಲೇಖನಗಳನ್ನು ಬರೆದವರೆಲ್ಲ ಕನ್ನಡದ ಹೆಸರಾಂತ ಲೇಖಕರು. ಸಂಪಾದಕರು ೪ ಭಾಗಗಳಲ್ಲಿ ಈ ಲೇಖನಗಳನ್ನು ವಿಂಗಡಿಸಿದ್ದಾರೆ. ೧) **ವ್ಯಕ್ತಿ ಪ್ರಪಂಚ ೨) ಕಲಾಪ್ರಪಂಚ ೩) ಸಾಹಿತ್ಯ ಪ್ರಪಂಚ ೪) ಕಾದಂಬರಿ ಪ್ರಪಂಚ,** ೫ನೇ ಭಾಗದಲ್ಲಿ ಕೃತಿ ಮತ್ತು ಲೇಖನ ದರ್ಶಿಕೆ ಭಾಗದಲ್ಲಿ ಕಲಾವಿದ ಹೆಬ್ಬಾರರು ಬರೆದ ಕಾರಂತರ ಭಾವಚಿತ್ರ ಮತ್ತು ರೇಖಾಚಿತ್ರಗಳಲ್ಲದೆ ಅವರ ಕೌಟಂಬಿಕ ಮತ್ತು ವೃತ್ತಿ ಜೀವನದ ಹಲವು ಚಿತ್ರಗಳಿವೆ.

'ವ್ಯಕ್ತಿ ಪ್ರಪಂಚ'ದಲ್ಲಿ ಡಿ.ವಿ.ಜಿ., ಮಾಸ್ತಿ, ಬೇಂದ್ರೆ, ವಿ.ಸೀ., ಶಂ.ಬಾ. ಜೋಶಿ ಮೊದಲಾದ ಹಿರಿಯರ 'ಹರಕೆ'ಗಳಿವೆ. ಕಾರಂತರ ಸ್ನೇಹಸಂಪರ್ಕಕ್ಕೆ ಬಂದ ಲೇಖಕರ ನೆನಪುಗಳು ಇಲ್ಲಿವೆ. ಕಾರಂತರ ಇಬ್ಬರು ಅಣ್ಣಂದಿರು (ರಾಮಕೃಷ್ಣ ಕಾರಂತ, ಲಕ್ಷ್ಮೀನಾರಾಯಣ ಕಾರಂತ) ಬರೆದ ಬಾಲ್ಯದ ಪರಿಸರ ಮತ್ತು ಕುಟುಂಬ ಜೀವನದ ನೆನಪುಗಳಿವೆ. ಕಾರಂತರದು ಬಹುವ್ಯಾಪ್ತಿಯ ಮತ್ತು ವೈವಿಧ್ಯಮಯವಾದ ಮಿತ್ರತ್ವ ಇವರಲ್ಲಿ ಅಸಾಹಿತಿಗಳೇ ಹೆಚ್ಚು. ಎಲ್ಲ ವರ್ಗಗಳ ಜನರೊಡನೆಯು ಬೆರೆತು ಅವರೊಡನೆ ಜೀವನ ದೃಷ್ಟಿ ಬದುಕುವ ಅನುಭವಗಳನ್ನು ಹಂಚಿಕೊಂಡು ತಮ್ಮೊಂದಿಗೆ ಅವರನ್ನು ಬೆಳೆಸಿದ ಕಾರಂತರು ಅವರಿಂದ ಪಡೆದದ್ದು ಸಾಕಷ್ಟು. ಈ ಪಡೆಯುವ, ಕೊಡುವ ಮನೋಭಾವವನ್ನೇ ವಸ್ತುವಾಗಿಸಿ ಕಾರಂತರು ಬರೆದ ಕಾದಂಬರಿಗಳು ೧) **ಅಳಿದ ಮೇಲೆ ೨) ಸಮೀಕ್ಷೆ ೩) ಒಂಟಿ ಧನಿ.** ಪುತ್ತೂರಿನಿಂದ ಹಿಡಿದು ಮಂಗಳೂರು, ಮುಂಬಯಿ, ದೆಹಲಿ, ಮದ್ರಾಸು ಕಾರಂತರ ಸ್ನೇಹವಲಯದ ವ್ಯಾಪ್ತಿ ವಿದೇಶಕ್ಕೂ ಹಬ್ಬಿದೆ. ಕಾರಂತರ ಈ ಸ್ನೇಹವಲಯದಲ್ಲಿ ಎಲ್ಲ ಜಾತಿಯ, ಎಲ್ಲ ವರ್ಗದ ಹೃದಯ ಶ್ರೀಮಂತಿಕೆ ಉಳ್ಳವರಿದ್ದರು. ಅಂತೆಯೇ ಕಾರಂತರು ಕೈಗೊಂಡ ದೇಶ ವಿದೇಶ ಪ್ರವಾಸ, ಸಿನಿಮಾ ನಿರ್ಮಾಣ, ಕಲಾ ಸಂಶೋಧನೆ ಮುಂತಾದ ಕಾರಂತರ ಹುಚ್ಚುಮನಸ್ಸಿನ ಸಾಹಸಗಳಿಗೆ ನೆರವನ್ನು ಇತ್ತವರು ದಕ್ಷಿಣ ಕನ್ನಡದ ಈ ಹೃದಯವಂತ ಶ್ರೀಮಂತ ಮಿತ್ರರೇ. ಕಾರಂತರು ಪ್ರಜಾತಂತ್ರ ಕಾಲದ ಲೇಖಕರಾಗಿ, ಸ್ವತಂತ್ರ್ಯ, ಧೀಮಂತ ವಿಚಾರವಂತರಾಗಿ ಬೆಳೆಯಲು ಸಾಧ್ಯವಾದದ್ದು ಇಂತಹ ಖಾಸಗಿ ವ್ಯಕ್ತಿಗಳಿಂದಲೇ. ಕಾರಂತರು ಬಂಡವಾಳ ಶಾಹಿ ವ್ಯವಸ್ಥೆಯ ಪರವಾಗಿದ್ದು ಕಾರ್ಮಿಕ ವರ್ಗದ ಆಂದೋಲನಗಳನ್ನು ವಿರೋಧಿಸುವ ಲೇಖಕರಾಗಿದ್ದಾರೆಂಬ ಅಪಾದನೆ ಕರ್ನಾಟಕದಲ್ಲಿದೆ. ಇಂತಹ ಅಪಾದನೆ ಕೇವಲ ರಾಜಕೀಯ ನಿಲುವಿಗೆ ಸೀಮಿತವಾದದ್ದು, ಎಂಬುದನ್ನು ಜಿ.ರಾಜಶೇಖರವರು ಈ ರೀತಿಯಾಗಿ ವಿವರಿಸುತ್ತಾರೆ. 'ಜಗತ್ತಿನಲ್ಲಿ ಪ್ರತಿಯೊಬ್ಬನಿಗೂ ಮತ್ತು ಪ್ರತಿಯೊಂದು ವಸ್ತುವಿಗೂ ಒಂದು ನಿರ್ಧಿಷ್ಟ ಸಂದರ್ಭವಿದೆ. ಸಂದರ್ಭವನ್ನು ಮರೆತು ಏನನ್ನೇ

ಆಗಲಿ, ನೋಡುವುದು ತಪ್ಪು' ಎಂಬ ಅಂಟೋನಿಯೋ ಗ್ರಾಮ್ಷಿಯ ಮಾತನ್ನು ಸ್ಪಷ್ಟೀಕರಿಸುತ್ತಾ ರಾಜಶೇಖರರು ಕಾರಂತರ ಕೆಲವು ಕಾದಂಬರಿಗಳ ಒಳಮುಖವನ್ನು ನಿದರ್ಶಿಸುತ್ತ ನುಡಿದಿರುವ ಮಾತುಗಳು ವಿವೇಕ ಮತ್ತು ತರ್ಕಬದ್ಧತೆಯಿಂದ ಕೂಡಿದೆ. ಬದುಕನ್ನು ಹಲವು ಆಯಾಮಗಳಲ್ಲಿ ನೋಡಿ, ಪರಿಸರ ಪರಿಸ್ಥಿತಿಗಳ ಇಕ್ಕಟ್ಟಿನಲ್ಲಿರುವ ಮನುಷ್ಯನ ಅವಸ್ಥೆಯನ್ನು ಗಮನಿಸಿ ಅವನ ಮಾನವೀಯ ಅಸ್ತಿತ್ವವನ್ನು ಕಾಪಾಡಲು ಬೇಕಾದ ಶ್ರದ್ಧೆ ಜೀವನಾಸಕ್ತಿಗಳನ್ನು ಗುರುತಿಸುವುದೇ ಕಾರಂತರ ವಾಸ್ತವವಾದದ ಹಿರಿಮೆಯಾಗಿದೆ. ನಮ್ಮ ಸಾಂಸ್ಕ್ರತಿಕ ಸನ್ನಿವೇಶದ ಎಲ್ಲ ವೈರುದ್ಯಗಳನ್ನು ಕಾರಂತರು ಗುರುತಿಸುತ್ತಾರೆ. ಆದ್ದರಿಂದಲೇ ಸಂಸ್ಕೃತಿಯ ಜತೆಗೆ ಪ್ರೀತಿ–ದ್ವೇಶದ ಸಂಬಂಧ ಅವರಿಗೆ ಸಾಧ್ಯವಾಗುತ್ತದೆ. ಕಾರಂತರ ವಿಷಯದಲ್ಲಿ ಅತಿಮಹತ್ವದ್ದು. ಕೆಚ್ಚೆದೆಯ ಅನ್ವೇಷಣೆ ಮತ್ತು ಅದರಲ್ಲಿ ಸಿದ್ದವಾದುದನ್ನು ಸ್ವೀಕರಿಸಿ ಬಾಳುವ ದೃಶ್ಯ. ಒಂದು ಜನಾಂಗದ ಬಾಳನ್ನು ತಿದ್ದುವುದಕ್ಕೆ ಅವರು ಶ್ರಮಿಸಿದ್ದಾರೆ. ಈ ದೇಶದಲ್ಲಿ ಬಹಳ ಮಟ್ಟಿಗೆ ಆಲಕ್ಷಿಸಲ್ಪಟ್ಟ ಜೀವನ ದರ್ಶನಗಳನ್ನು ಎತ್ತಿಹಿಡಿದಿದ್ದಾರೆ. ಬಾಳಿನ ಆಚೆಗೂ ಏನೂ ಇಲ್ಲದಿದ್ದರೂ ಇಲ್ಲಿ ಬಾಳಿದ್ದಕ್ಕೆ ಸಾರ್ಥಕತೆ ಇದೆಯೆಂದು ಕಲಿಸಿದ್ದಾರೆ. ತಮ್ಮ ಬಗ್ಗೆ ಅಥವಾ ತಮ್ಮ ಕೃತಿಗಳ ಬಗ್ಗೆ ಇಲ್ಲದ ಅಹಂಕಾರವನ್ನು ಅವರು ತಾಳಿಲ್ಲ. ಬದುಕು ಹೇಗೆ ಶಾಶ್ವತವಲ್ಲವೋ ಹಾಗೆ ತಮ್ಮ ಕೃತಿಗಳು ಅಜರಾಮರವಲ್ಲವೆಂದು ಅವರೊಂದೆಡೆ ಹೇಳಿದ್ದು ಅದರ ನಿರಹಂಭಾವವನ್ನು ತೋರಿಸುತ್ತದೆ. ಕನ್ನಡಕ್ಕಾಗಿ ಇಷ್ಟೆಲ್ಲ ಮಾಡಿದ ವ್ಯಕ್ತಿ ಅವರು ತಮ್ಮ ತತ್ವಜ್ಞಾನವನ್ನು ಅರಗಿಸಿಕೊಂಡಿರುವುದರ ಹೆಗ್ಗುರುತು. ವ್ಯಕ್ತಿ ಕಾರಂತರು ಅವರ ಸಾಹಿತ್ಯವಷ್ಟೇ ದೊಡ್ಡವರು. ಒಂದು ದೃಷ್ಟಿಯಿಂದ ಕಾರಂತರ ಬರವಣಿಗೆಯ ಸಮಸ್ತವೂ ನಮ್ಮ ಸಾಂಸ್ಕೃತಿಕ–ಸಾಮಾಜಿಕ ಬಿರುಕಿನ ವಿಮರ್ಶೆಯೆ ಆಗಿದೆ. ವಾಚ್ಯವಾಗಿ ವ್ಯಕ್ತವಾಗುವ ತಮ್ಮ ಆರ್ಥಿಕ, ರಾಜಕೀಯ ಧೋರಣೆಗಳಲ್ಲಿ ಕಾರಂತರು ಪ್ರತಿಗ್ರಾಮಿ ಎಂದು ನಿಸ್ಸಂಶಯವಾಗಿ ಹೇಳಬಹುದು. ಆದರೆ ತಮ್ಮ ಸ್ಪಷ್ಟಾತ್ಮಕ ಬರವಣಿಗೆಯಲ್ಲಿ ನಮ್ಮ ಬದುಕಿನ ಬಗ್ಗೆ ಕಾರಂತರು ತಳೆದ ನಿಲುವು ಅಷ್ಟೇ ನಿಸ್ಸಂದೇಹವಾಗಿ ಕ್ರಾಂತಿಕಾರಿಯಾದದ್ದು; ಪ್ರಗತಿಶೀಲವಾದದ್ದು; ಕಾರಂತರ ಕಲಾಪ್ರಪಂಚ ಭಾಗದಲ್ಲಿ ಅದರ ಬಹುಮುಖ ವ್ಯವಸಾಯವನ್ನು ಬಲ್ಲವರಿಗೆ ಹೊಸದರ್ಶನವನ್ನು ಮೂಡಿಸುವಂತ ಲೇಖನಗಳಿವೆ. ಯಕ್ಷಗಾನ ಕಲೆಯ ಮೂರು ಅಂಶಗಳಾದ ನೃತ್ಯ, ಸಂಗೀತ, ಪ್ರಯೋಗ ಇವುಗಳ ಮರ್ಮಗಳನ್ನು ಅರಿತುಕೊಳ್ಳಲು ಕಾರಂತರು ಮಾಡಿದ ಅಧ್ಯಯನ ಗಮನಾರ್ಹವಾಗಿದೆ. ಯಕ್ಷಗಾನದ ಸಾಂಪ್ರದಾಯಿಕ ಅವಸ್ಥೆಗೆ ಆಧುನಿಕತೆಯ ಪ್ರವೇಶವನ್ನು ತೊಡಿಸಲು ಕಾರಂತರು 'ಯಕ್ಷರಂಗ' ಎಂಬ ತಂಡವನ್ನು ಕಟ್ಟಿ ಪ್ರಯೋಗಗಳಲ್ಲಿ ಇದ್ದ ಜೊಳ್ಳು, ಆಡಂಬರ ವಿಷಯಯಾಂತರದ ಅಂಶಗಳನ್ನು ತೆಗೆದು ಕೇವಲ ನೃತ್ಯ, ಹಾಡುಗಳ ಮೂಲಕ ಅಭಿನಯವನ್ನು ಕೇಂದ್ರಿಕರಿಸಿದರು. ಕಾರಂತರ ಈ ಮಾರ್ಪಟು

ಸಾಂಪ್ರದಾಯಕರಿಗೆ ಒಪ್ಪಿಗೆ ಆಗಿಲ್ಲ. ನಿಜ ಆದರೆ ಕಾರಂತರಿಗಿದ್ದ ವಿಶ್ವದೃಷ್ಟಿ ಮತ್ತು ಪರಿಷ್ಕರಣ ಮನೋಭಾವ ಚರ್ಚಾತೀತವಾದದ್ದು. ಕಾರಂತರ ಸಾಹಿತ್ಯ ಪ್ರಪಂಚ ಮತ್ತು ಕಾದಂಬರಿ ಪ್ರಪಂಚ ಭಾಗಗಳ ಲೇಖನಗಳನ್ನು ಪಾ.ವೆಂ ಸಮೀಕ್ಷಿಸುತ್ತಾ ಲೇಖಕರೆಲ್ಲರೂ ತಮ್ಮ ಸಾಹಿತ್ಯಾನುಭವದ ಶಕ್ತಿ ಮತು ಮಿತಿಗಳ ಪರಿಧಿಯಲ್ಲಿ ಕಾರಂತರನ್ನು ಸ್ವತಂತ್ರ್ಯವಾಗಿ ವಿಶ್ಲೇಷಿಸಿದ್ದಾರೆ. ಅಧ್ಯಯನಪೂರ್ಣವಾದ ಈ ವಿಶ್ಲೇಷಣೆಗಳು ಕಾರಂತರ ಬಹುಮುಖ ಶಕ್ತಿ, ಯುಕ್ತಿ ಮತ್ತು ಮಿತಿಗಳನ್ನು ಕೊಂಡಾಡುತ್ತವೆ. ಕಾರಂತರ ಸಾಹಿತ್ಯದ ಮೌಲ್ಯವನ್ನು ನಿರ್ವಿಕಾರವಾಗಿ ಗ್ರಹಿಸುವ ದೃಷ್ಟಿ ಈ ಎಲ್ಲ ಲೇಖಕರ ಗುರಿಯಾಗಿದೆ. ಕಾರಂತರ ಸಾಹಸ ಪೂರ್ಣವಾದ ಜೀವನಕ್ಕೆ ಐವತ್ತೈದು ಲೇಖಕರು ಕೊಟ್ಟ ಕಾಣಿಕೆ ಕೂಡ ಸಾಹಸಮಯವೇ ಆಗಿದೆ. ಕಾರಂತರ ಜೀವನ ಮತ್ತು ಸಾಧನೆಗಳು ಗಾತ್ರ (ವ್ಯಾಪ್ತಿ), ವೈವಿಧ್ಯ ಮತ್ತು ಮೌಲ್ಯ ಈ ಮೂರು ನೆಲೆಗಳಲ್ಲಿ ಸಾಧಿಸಿದನ್ನು ಈ ಗ್ರಂಥ ನಮ್ಮ ಮುಂದೆ ಪ್ರದರ್ಶಿಸುತ್ತದೆ. ಇಂತಹ ಗ್ರಂಥವನ್ನು ಓದಿ, ವಿವರಿಸುವ ಪಾ.ವೆಂ ಅವರ ಸಹೃದಯತೆ ಕೂಡ ಮಹತ್ವದ್ದು.

೧೪. ಪಾ.ವೆಂ. ಕಂಡಂತೆ ಶಂ.ಬಾ.:

ವ್ಯಕ್ತಿ ಸಾಧನೆಯ ಸಮೀಕ್ಷೆ ವ್ಯಕ್ತಿಯ ವಿಶಿಷ್ಟವಾದ ಜೀವನ ದೃಷ್ಟಿ ಮತ್ತು ಜೀವನದ ಬಗ್ಗೆ ತೆಗೆದುಕೊಂಡ ನಿಲುವು ಇವೆರಡನ್ನು ಅವರ ಕೃತಿಗಳಿಂದ ಓದು ಅವರ ಸಾರಸರ್ವಸ್ವವನ್ನು ಸಂಗ್ರಹಿಸಿ ವಿವರಿಸುವುದು ಸಮೀಕ್ಷೆ. ಶಂಬಾ ಒಬ್ಬಸಂಶೋಧಕರು ಜೀವನ ಅರ್ಥವನ್ನು ಅನ್ವೇಷಿಸುವ ಸಂಸ್ಕೃತಿ. ಶಂಬಾ ಅವರ ಸಂಶೋಧನೆಯ ಯಾತ್ರೆಯ ೨ ಹಂತಗಳು ಜೀವನ ಅರ್ಥ ಪದ್ಧತಿ ಇದನ್ನು ಶಂಬಾ ಬೇರೆ ಬೇರೆ ರೂಪಗಳಲ್ಲಿ ಸುಮಾರು ೩೦ ವರ್ಷಗಳಲ್ಲಿ ಮಾಡಿದ್ದಾರೆ. ಭಾರತೀಯ ಪುರಾಣಗಳಲ್ಲಿಯ ದೇವತೆಗಳು ಧರ್ಮದ ರೂಪದಲ್ಲಿ ಪ್ರಚಲಿತಗೊಂಡ ನೀತಿ ವಿಚಾರಗಳು ಒಂದು ಸಂಪ್ರದಾಯವನ್ನೇ ನಿರ್ಮಿಸಿದೆ. ಇದನ್ನು ಹಿಂದೂ ಧಾರ್ಮಿಕ ಸಂಪ್ರದಾಯವೆಂದು ನಂಬಲಾಗಿದೆ. ಆದರೆ ಇವೆಲ್ಲವನ್ನು ಅಭ್ಯಸಿಸುತ್ತಾ ಹೊದ ಶಂಬಾ ಅವರಿಗೆ ಹಿಂದೂ ಧರ್ಮ ಪ್ರವಾಹ ಪತಿತರ ಕರ್ಮವಾಗಿ ಕಂಡಿದೆ. ೧೯೬೮ರ ನಾಗಪ್ರತಿಮಾ ವಿಚಾರ ಪ್ರಕಟವಾಗುವುದರೊಂದಿಗೆ ಶಂಬಾ ಅವರು ಹಿಂದೂ ಸಂಸ್ಕೃತಿಯನ್ನು ಅರ್ಥೈಸುವ ಪದ ಮತ್ತು ಪುರಾಣ ಪ್ರತಿಮೆಗಳನ್ನು ಹೊಸಬೆಳಕಿಗೆ ಹಿಡಿದರು. ಅವರ ಪ್ರಕಾರ ಸೂರ್ಯ ಸತ್ಯದ ಒಂದೇ ಅರ್ಥವಿರುವ ಜೀವನ ಪಾತಳಿಯನ್ನು ಬಹು ಅರ್ಥವಿರುವ ಜೀವಿತ ಪಾತಳಿಗೆ ನಮ್ಮ ವಿದ್ವಾಂಸರು ಕವಿಗಳು ಇಳಿಸಿದರು. ಅಂದರೆ ಜೀವನಕ್ಕಿರುವ ಪ್ರಾಣ ಪಾತಳಿಯ ಪ್ರಕಾಶ ತತ್ವವನ್ನು ಮರೆಮಾಚಿ ಜೀವಿತ ಪಾತಳಿಯ ಲಿಂಗತತ್ವ ಅಥವಾ ಕತ್ತಲೆಯ ಸ್ವರೂಪಕ್ಕೆ ಇಳಿಸಲಾಯಿತು. ವೈದಿಕ, ಆರೋಪ, **ಏಕುಸತ್, ವಿಪ್ರಬಹುಧಾಪದಂತಿ** –

ಶಂಬಾ ಸರಿಯಾಗಿ ಓದಿ ಇತರ ಜ್ಞಾನ ಮತ್ತ ತತ್ವಗಳ ಜೊತೆ ಹೋಲಿಕೆ ಮಾಡಿ ಶಂಬಾ ಅವರು ಸಾಹಿತ್ಯವನ್ನು ಅರ್ಥೈಸಿದವರು. ಗೌರೀಶ ಕಾಯ್ಕಿಣಿಯವರು ಶಂಬಾ ವಿಚಾರಧಾರೆಗಳನ್ನು ಸಾಧ್ಯವಿದ್ದಷ್ಟು ವಾಚಕವೃಂದದವರ ಗಮನಕ್ಕೆ ತಂದು ಗಡಸಾಗಿರುವ ವಿಚಾರಗಳನ್ನು ಸರಳವಾಗಿ ಸುಲಭವಾಗಿ ತಿಳಿಸಿದರು. ಇವತ್ತಿನ ಆಧುನಿಕ ಜೀವನದ ಪರಿಸ್ಥಿತಿಯನ್ನು ಯಾಕೆ ರೂಢಿಯೊಳಗಿವೆ ಅನ್ನುವ ವಿಚಾರವನ್ನು ಶಂಬಾ ತಿಳಿಸಿದ್ದಾರೆ. ನಮ್ಮ ಸಂಸ್ಕೃತಿಯ ಜೀವನ ಮಟ್ಟವನ್ನು, ಜೀವಿತಮಟ್ಟಕ್ಕೆ ಇಳಿಸಲಾಗಿದೆ. ಅದನ್ನೆ ಸರಿ ಎಂದು ನಂಬಿಸುವುದು ಜೀವಿತದೊಳಗೆ ಲಾಭಗಳಿಸುವ ಮನೋವೃತ್ತಿ ಆರ್ಥಿಕತೆ ಇದಕ್ಕೆ ಸಾಮಾಜಿಕ ಮಾನವೀಯ ಆಯಾಮ ಇಲ್ಲ. ಜೀವಿತಪಾತಳಿಯ ಬದುಕಿನಲ್ಲಿ (living) ಇರಬೇಕು. ಭಗವತ್‌ಗೀತೆಯಲ್ಲಿ ಶ್ರೀಕೃಷ್ಣ ಕ್ರಿಯಾಶೀಲನಾಗಬೇಕಾದ ಅರ್ಜುನನಿಗೆ 'ಸ್ಥಿತ ಪ್ರಜ್ಞ ವಿಚಾರ ಮಾಡದೆ ಬದುಕಿಲ್ಲ ಪ್ರಗತಿ ಇಲ್ಲ ಮಾನವತೆಯ ಪ್ರಗತಿಗೆ ವಿಚಾರಶೀಲತೆಯ ಪ್ರಯತ್ನ ಸತತ ಇರಬೇಕು. ಅದೇ ಜೀವನದ ಲಕ್ಷಣ ಆದರೆ ಈ ಪ್ರಗತಿಯ ಗಾಲಿಯನ್ನು ನಿಲ್ಲಿಸುವ ಮತ್ತು ನಿಂತಲ್ಲಿಯೇ ಅದು ತಿರುಗಬೇಕೆಂಬ ಸಂಕುಚಿತ ಆಶಯ ಗೀತೆಯದಾಗಿರುವುದರಿಂದ ಅದು ಜೀವನಕ್ಕೆ ಪ್ರೇರಕವಲ್ಲ. ಜೀವನ ವಿಮರ್ಶೆಯನ್ನು ಮಾಡಿ ಎನ್ನುವ ಚಿಂತನೆಯಿದೆ. ಉದಾಹರಣೆಗೆ ಕರ್ನಾಟಕ ಕಟ್ಟುವಲ್ಲಿ ಶ್ರಮಿಸಿದ ವಿವಿಧ ರೀತಿ, ಸಂಸ್ಕೃತಿಯನ್ನು ಅರ್ಥೈಸುವುದಕ್ಕೆ ಶಂ.ಬಾ. ಕೊಟ್ಟ ಪ್ರತಿಮೆಗಳು ಮುಖ್ಯವಾಗಿದೆ. ಜೀವನದ ಟೀನಿಯರ್ ಸೂರ್ಯ ಪ್ರಕಾಶದ ಆಸೆ, ನಿರಾಸೆ, ಚಕ್ರಕಾರದ ದೋಷ ಇಂದು–ನಾಳೆ–ನಾಡಿದ್ದು ಹೀಗೆ ಅನೇಕ ರೀತಿಯಲ್ಲಿ ಅರ್ಥೈಸುತ್ತಾರೆ. ನಿನ್ನೆಯ ಬಿತ್ತಿದ ಬೀಜ ಇಂದು ಫಲವಾಗಿ ನಿಂತಿದೆ. ಬೇವು ಭಿತ್ತಿ ಮಾವಿಗೆ ಹಂಬಲಿಸುವ ರೀತಿಯನ್ನು ಸೊಗಸಾಗಿ ಹೇಳಿದ್ದಾರೆ. ಶಂ.ಬಾ. ವಿಚಾರಧಾರೆಯನ್ನು ಪಾ.ವೆಂ. ಅಧ್ಯಯ ಮಾಡಿ, ಅನುಭವಿಸಿ ನಂಬಿದ ಸಹಯಾತ್ರಿಯಾಗಿ ಇರುತ್ತಾರೆ.

ದ.ರಾ.ಬೇಂದ್ರೆ, ಶಂ.ಬಾ., ಪಾ.ವೆಂ. ನೋಡಿದಾಗ ಸಮಾನಾಂತರ ಸತ್ಯವಾದುದನ್ನು ಹೇಳುವ ರೀತಿ ಭಿನ್ನವಾಗಿದೆ. ಆಂತರಿಕ ಸತ್ಯ ಒಂದೇ ಆಗಿದೆ. ವೇದಜ್ಞಾನವನ್ನು ಅಧ್ಯಯನ, ಮನನ ಮಾಡಿ ಸ್ವೀಕರಿಸಿ ಅದರಲ್ಲಿಯ ಸತ್ಯ ಸೌಂದರ್ಯಗಳನ್ನು ಆಸ್ವಾದಿಸಿದ ಶಂ.ಬಾ. ಬೇಂದ್ರೆ ಒಂದೇ ರೀತಿಯಾಗಿ ಕಾಣುತ್ತಾರೆ. ಆದರೆ ವಿಚಾರ ಮಾಡಿ ಹೇಳುವ ರೀತಿ ಭಿನ್ನವಾಗಿತ್ತು. ಪಾ.ವೆಂ. ಅವರ ವಿಚಾರಗಳು ಭಿನ್ನರೀತಿಯದಾಗಿತ್ತು. ವಿರೋಧಾಬಾಸಗಳನ್ನು ಹೇಳುತ್ತಾರೆ. ಇವತ್ತೇನಾಗಿದೆ ಅರ್ಥಾತ್ ಪಾ.ವೆಂ. ನಿತ್ಯ ನೂತನವಾಗುತ್ತಾರೆ. ಬಾಲಹಿಡಿಯುವವರು, ಕಲ್ಪನೆ ಕುತೂಹಲ ಲಾಂಗೂಲಾಚಾರ್ಯರು, ವರದಿಗಾರರಲ್ಲ ಇದನ್ನು ಮೀರಿದವರು 'ವಿಚಾರವಂತಿಕೆ' ಇವರಲ್ಲಿ ಒಂದು ಪ್ರಕ್ರಿಯೆ, ಸತ್ಯದ ಅನ್ವೇಷಣೆಯಾಗಿ ಉಳಿಯುತ್ತದೆ ಮತ್ತೆ ಮುಂದುವರಿಯುತ್ತದೆ. ಈ ರೀತಿ ಬರಹವನ್ನು ಸೃಷ್ಟಿಸಿದವರು ಪಾ.ವೆಂ. ಅವರನ್ನು ನಾವು ಮತ್ತೆ ಓದಬೇಕು ಅವರ ವಿಚಾರವನ್ನು ತಿಳಿಯಬೇಕೆನಿಸುತ್ತದೆ.

ಅಡಿಟಿಪ್ಪಣಿಗಳು

*೧ ಪುಟ ೮, ಸಂ. ಶ್ರೀನಿವಾಸ ಹಾವನೂರು, ಜಗದ್ವಿಖ್ಯಾತರು.

*೨ ಪುಟ ೧೨, ಸಂ. ಶ್ರೀನಿವಾಸ ಹಾವನೂರು, ಖ್ಯಾತಿವೆತ್ತ ಭಾರತೀಯರು.

*೩ ಪುಟ ೧೭, ಸಂ. ಶ್ರೀನಿವಾಸ ಹಾವನೂರು, ಖ್ಯಾತಿವೆತ್ತ ಭಾರತೀಯರು.

*೪ ಪುಟ ೨೧, ಸಂ. ಶ್ರೀನಿವಾಸ ಹಾವನೂರು, ವಿಜ್ಞಾನ ವಿಸ್ಮಯ.

*೫ ಪುಟ ೩೦, ಸಂ. ಶ್ರೀನಿವಾಸ ಹಾವನೂರು, ವಿಜ್ಞಾನ ವಿಸ್ಮಯ.

*೬ ಪುಟ ೧೮೩, ಸಂ. ಶ್ರೀನಿವಾಸ ಹಾವನೂರು, ವಿಜ್ಞಾನ ವಿಸ್ಮಯ.

*೭ ಪುಟ ೧೫೦, ಸಂ. ಎಸ್. ಎಲ್. ಶ್ರೀನಿವಾಸ ಮೂರ್ತಿ, ಹೌಸಿಂಗ, ಕಾಲೋನಿ ಪಾ.ವೆಂ. ಅವರ ಸಮಸ್ತ ಪದ್ಯಗಳು

*೮ ಪುಟ ೩೫, ಸಂ. ಶ್ರೀನಿವಾಸ ಹಾವನೂರು – ಚಿತ್ರ ವಿಚಿತ್ರ ಜಗತ್ತು.

ಅಧ್ಯಾಯ–೬

ಕಸ್ತೂರಿಯ ಪಾ.ವೆಂ.

ಅ. ಕಸ್ತೂರಿ ಡೈಜಸ್ಟಿನ ಜನನ

ಆ. ಗುಪ್ತನಾಮಗಳು

ಇ. ಕನ್ನಡ ಪತ್ರಿಕಾರಂಗ

ಈ. ಕಸ್ತೂರಿ ಡೈಜಸ್ಟಿನ ಪ್ರೇರಣೆ ಧೋರಣೆಗಳು

ಉ. ಕಸ್ತೂರಿಯ ಅಂತರಂಗ

ಊ. ಕಸ್ತೂರಿ ಸಂಚಿಕೆಯ ವೈಶಿಷ್ಟ್ಯಗಳು

ಋ. ಕಸ್ತೂರಿಯ ಸಂಚಿಕೆಯನ್ನು ರೂಪಿಸಲು ಪಾ.ವೆಂ. ಅನುಸರಿಸಿದ ಕ್ರಮಗಳು

ಎ. ಕಸ್ತೂರಿ ಸಂಪಾದಕನ ವಿಲಕ್ಷಣಗಳು

ಅ. ಕಸ್ತೂರಿ ಡೈಜಸ್ಟಿನ ಜನನ:

ಶ್ರೀ ಪಾಡಿಗಾರು ವೆಂಕಟರಮಣಾಚಾರ್ಯ ಪಿ.ವಿ ಆಚಾರ್ಯ (೧೯೧೫–೧೯೯೨) ಅವರು ೧೯೫೦ ರಿಂದ ೧೯೯೨ರ ವರೆಗಿನ ಅವಧಿಯಲ್ಲಿ ಕವಿ, ಲೇಖಕ, ಚಿಂತಕ, ವಿಮರ್ಶಕ ಹಾಗೂ ಕಸ್ತೂರಿ ಡೈಜೆಸ್ಟ ಪತ್ರಿಕೆಯ ಸಂಪಾದಕ ಎಂದು ಕರ್ನಾಟಕದಲ್ಲಿ ಹೆಸರು ವಾಸಿಯಾಗಿದ್ದರು. ಕವಿಯಾಗಿ ಅವರು ಸೃಷ್ಟಿಸಿದ ಭಾವಲೋಕ, ಲೇಖಕ ಮತ್ತು ಚಿಂತಕನಾಗಿ ಅವರು ಪ್ರಕಟ ಪಡಿಸಿದ ಸಾಹಿತ್ಯ ಕೃತಿಗಳೂ ಕಸ್ತೂರಿಯ ಸಂಪಾದಕನಾಗಿ ಅವರು ರೂಪಿಸಿದ ಡೈಜೆಸ್ಟ ಪತ್ರಿಕೆ ಅಂದಿಗೂ ಇಂದಿಗೂ ಮೌಲಿಕವಾದ ಕೃತಿಯಾಗಿ ಕಾಣುತ್ತಿವೆ. ಆರ್ಥಿಕವಾಗಿ, ದೈಹಿಕವಾಗಿ ಕೃಶರಾಗಿದ್ದ ಪಾ.ವೆಂ. ಆಚಾರ್ಯರು ಒಂದು ಘನವಾದ, ಸ್ವತಂತ್ರ್ಯವಾದ ಮತ್ತು ಅರ್ಥಪೂರ್ಣವಾದ ವ್ಯಕ್ತಿತ್ವವನ್ನು ಹೊಂದಿದ್ದರು. ಬಡತನ, ಅನಾನುಕೂಲತೆ, ಅಸ್ಥಿರ ಉದ್ಯೋಗ ವ್ಯವಸ್ಥೆ, ಅಲ್ಪ ಶಾಲಾಶಿಕ್ಷಣ ಅವರದಾಗಿತ್ತು. ಇದನ್ನು ಮೀರಿ ಅವರು ರೂಪಿಸಿಕೊಂಡ ವೈಯಕ್ತಿಕ ಬದುಕು ಮತ್ತು ಮಾರ್ಗದರ್ಶಕ ಬರಹಗಳ ಸಾಧನೆ ಅಗಾಧವೂ, ಅನುಕರಣೀಯವೂ ಆಗಿದೆ. ಇದನ್ನು ಒಂದು ಜೀವನ ಸಾಧನೆ ಎಂದು ಪರಿಕಲ್ಪಿಸಿ ಆಚಾರ್ಯರ ಬರಹಗಳನ್ನು ಓದಿದಾಗ ಅವರೊಬ್ಬ ಗುರಿರಹಿತ ಸಾಧಕ ಎಂಬ ಅಂಶ ಗಮನಕ್ಕೆ ಬರುತ್ತದೆ. ಗುರಿರಹಿತವಾಗಿದ್ದರೂ ಪಾ.ವೆಂ. ಅವರ ಬದುಕು ಮತ್ತು ಬರಹಗಳ ವೈಶಿಷ್ಟ್ಯ ನಮ್ಮ ಮಟ್ಟಿಗೆ ಅಪೂರ್ವ ಎಂದೇ ತೋರುತ್ತದೆ. ವೈಚಾರಿಕತೆ ಹಾಸ್ಯ ಪ್ರವೃತ್ತಿ, ಅಧ್ಯಯನಶೀಲ ಧ್ಯೇಯದೋರಣೆ, ಸರಳ ಮತ್ತು ಸ್ವಾರಸ್ಯಕರ ಶೈಲಿ, ಸಂಕೀರ್ಣವಾದುದು ಸರಳಗೊಳಿಸುವ, ವಿಸ್ತಾರವನ್ನು ಸಾರಾಂಶಗೊಳಿಸುವ ಅವರ ಗ್ರಹಣಶಕ್ತಿ ಕನ್ನಡ ಬರಹಕ್ಕೆ ಅವರಿಂದ ಸಂದ ವಿಶಿಷ್ಟ ಗುಣಗಳು.

ಪಾ.ವೆಂ. ಅವರು ರಚಿಸಿದ ಸಾಹಿತ್ಯ ವೈವಿಧ್ಯಮಯವಾದದ್ದು, ಅವರ ಜೀವಿತಾವಧಿಯಲ್ಲಿ ಪ್ರಕಟವಾದ ಪುಸ್ತಕಗಳ ಸಂಖ್ಯೆ ಹದಿನೈದು. ಇವುಗಳಲ್ಲಿ ಮೂರು ರಾಜಕೀಯ ಚಿಂತನೆಗಳ ವಸ್ತುವನ್ನು ಹೊಂದಿದ್ದರೆ, ಮೂರು ಕವನ ಸಂಕಲನಗಳು, ನಾಲ್ಕು ನಗೆ ಬರಹಗಳು ಅಥವಾ ಹರಟೆಗಳ ಸಂಕಲನಗಳು, ಎರಡು ಅನುವಾದ ಕೃತಿಗಳು, ಎರಡು ಚಿಂತನಶೀಲ ಪುಸ್ತಿಕೆಗಳು ಹಾಗೂ ಪದಪರಂಪರೆ ಅಧ್ಯಯನದ ಒಂದು ಕೃತಿ. ಇವರ ಬರಹಲೋಕ ವೈವಿಧ್ಯದ್ದಷ್ಟೇ ವಿಸ್ಮಯಕಾರಿಯೂ ಆಗಿದೆ. ಕಸ್ತೂರಿ

ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಆಚಾರ್ಯರು ಅವಿರತವಾಗಿ ಹದಿನೆಂಟು ವರ್ಷ ಕೆಲಸ ಮಾಡುತ್ತಿದ್ದಾಗ ಡೈಜೆಸ್ಟ ಪತ್ರಿಕೆಯ ಆಶಯ ಸ್ವರೂಪಗಳನ್ನು ಸದಾಗಮನದಲ್ಲಿಟ್ಟು ಬರೆದು ಪ್ರಕಟಿಸಿದ ಲೇಖನಗಳು ಸಾವಿರಾರು ಇಲ್ಲಿಯ ವಿಷಯಗಳು ದೈನಂದಿನ ಜೀವನದ ಆಗುಹೋಗುಗಳು, ನಾಡು ನುಡಿ, ರಾಷ್ಟ್ರ ಅಂತಾರಾಷ್ಟ್ರದ ಸಮಸ್ಯೆಗಳು ಜ್ಞಾನ ವಿಜ್ಞಾನದ ವಿಸ್ಮಯಗಳು, ಧರ್ಮಕಲೆ, ಸಾಹಿತ್ಯ ತತ್ವಜ್ಞಾನದ ಮಾಹಿತಿಗಳು, ಸಾಧಕರ ಸಾಧನೆಗಳ ನೆನಪುಗಳು, ವಿಶ್ವದ ವಿದ್ಯಾಮಾನಗಳ ವಿಶ್ಲೇಷಣೆಗಳು, ಪ್ರಚಲಿತ ಸಾಮಾಜಿಕ ಸಂಗತಿಗಳು ಹಾಗೂ ಅವುಗಳ ಕುರಿತು ಚರ್ಚೆ ಸಂವಾದ, ಸಮಾಧಾನಗಳು ಹೀಗೆ ಓದುಗನ ಸಾಮಾನ್ಯ ತಿಳುವಳಿಕೆಯನ್ನು ಎತ್ತರಕ್ಕೇರಿಸಿ ಅವನಲ್ಲಿ ಒಂದು ಬೌದ್ಧಿಕಮಟ್ಟವನ್ನು ಉಂಟುಮಾಡುವುದು. ಈ ಬರಹಗಳ ಸಾರ್ಥಕತೆ ಕಸ್ತೂರಿ ಮೃಗದ ಸುವಾಸನೆ ಕಾಡಡವಿಯಲ್ಲಿ ಅಡ್ಡಾಡುವರ ಮೂಗಿಗೆ ಅಡರುವಂತಹದ್ದು. ಈ ಪತ್ರಿಕೆಯ ವಿಷಯ ವೈವಿಧ್ಯ ಅಂತಹ ಜ್ಞಾನದ ಕಂಪನ್ನು ಓದುಗರಲ್ಲಿ ಹರಡುವಂತೆ ರೂಪಿಸುವ ಕಲಾತ್ಮಕ ಹೊಣೆ ಪಾ.ವೆಂ. ಅವರದಾಗಿತ್ತು. ಅದಾಗಲೆ ರೀಡರ್ಸ್ ಡೈಜಸ್ಟ್ ಎಂಬ ಅಮೇರಿಕಾದ ಡಿವಿಟ್‌ವ್ಯಾಲೆಟ್ ಮತ್ತು ಲೈಲಾವ್ಯಾಲೆಟ್ ದಂಪತಿಗಳು ಅಮೇರಿಕಾದಿಂದ ಹೊರಡಿಸುತ್ತಿದ್ದ ಪತ್ರಿಕೆ ಜಗತ್ತಿನ ೧೪ ಭಾಷೆಗಳಲ್ಲಿ ಪ್ರಸಾರವಾಗುತ್ತಿತ್ತು. ಅಂತಹ ಒಂದು ಜಾಗತಿಕ ಮಟ್ಟದ ಪತ್ರಿಕೆ ಕನ್ನಡದಲ್ಲಿ ಇರಬೇಕಲ್ಲವೇ ಎಂಬ ಆಸೆ ಆಕಾಂಕ್ಷೆ ಲೋಕ ಶಿಕ್ಷಣ ಟ್ರಸ್ಟ್‌ನಲ್ಲಿದ್ದ ಪಾ.ವೆಂ. ಆಚಾರ್ಯರಿಗೆ ಮೊಳೆತು ಸಂಪಾದಕ ಮೊಹರೆ ಹನುಮಂತರಾವ್, ಪ್ರಕಾಶಕ ರಂಗನಾಥ ದಿವಾಕರ್ ಅವರೆದರು ನಿವೇದಿಸಿಕೊಂಡರು. ಆಹೊತ್ತಿಗೆ **ಸಂಯುಕ್ತ ಕರ್ನಾಟಕ** (ದೈನಂದಿನ) ಮತ್ತು **ಕರ್ಮವೀರ** (ಸಾಪ್ತಾಹಿಕ) ಪತ್ರಿಕೆಗಳಲ್ಲಿ ಉಪಸಂಪಾದಕನಾಗಿ, ಅಂಕಣಕಾರನಾಗಿ ಒಮ್ಮೊಮ್ಮೆ ಮುದ್ರಣಕಾರನೂ ಆಗಿ ಕೆಲಸ ಮಾಡುತ್ತಿದ್ದ ಪಾ.ವೆಂ. **ಸರ್ವಜ್ಞಾಚಾರ್ಯ** ಎಂದು ಸಹೋದ್ಯೋಗಿಗಳಿಂದ ಗುರುತಿಸಿಕೊಂಡಿದ್ದರು. ದಕ್ಷಿಣ ಕನ್ನಡದ ಸಂಸ್ಕೃತಿ ಹಿನ್ನಲೆಯಿಂದ ಬಂದಿದ್ದ ಇವರ ಮೇಲೆ ಶಿವರಾಮಕಾರಂತರ ಪ್ರಭಾವವೂ ಇತ್ತು. 'ಆಡುಮುಟ್ಟದ ಸೊಪ್ಪಿಲ್ಲ ಶಿವರಾಮಕಾರಂತರು ಓದದ ವಿಷಯವಿಲ್ಲ' ಎಂಬುದು ಒಂದು ಗಾದೆಯ ಮಾತಾಗಿ ನವೋದಯ ಸಾಹಿತ್ಯದಲ್ಲಿ ಪ್ರಚಲಿತವಿತ್ತು. ವಿಜ್ಞಾನ ಪ್ರಪಂಚ, ಮಕ್ಕಳ ಪ್ರಪಂಚ ಕೃತಿಗಳನ್ನು ಸಂಪಾದಿಸಿ–ಪ್ರಕಟಿಸಿದ ಕಾರಂತರು ಕನ್ನಡ ಸಾಹಿತ್ಯಕ್ಕೆ ಹೊಸ ಜ್ಞಾನಕೋಶಗಳನ್ನು ಸೇರಿಸಿದ್ದರು. ಈಗ ಒಂದು ಪತ್ರಿಕೆಯ ಮೂಲಕ ಜ್ಞಾನ ವಿಸ್ತರಣೆಯನ್ನು ಉನ್ನತ ಮಟ್ಟದಲ್ಲಿ ಕೈಗೊಳ್ಳಬೇಕೆಂಬ ವಿಚಾರಕ್ಕೆ ಆಸ್ಪದವೂ ಇತ್ತು. ಅದಕ್ಕೆ ಸಹಕಾರಿಯಾಗಿ ಸೌಕರ್ಯವೂ ಒದಗುವಂತಿತ್ತು. ಹುಬ್ಬಳ್ಳಿಯ ಲೋಕಶಿಕ್ಷಣ ಟ್ರಸ್ಟ್ ಆರಂಭವಾದದ್ದೇ ಪತ್ರಿಕಾಮಾಧ್ಯಮದ ಮೂಲಕ ಅಕ್ಷರಲೋಕವನ್ನು ಸೃಷ್ಟಿಸುತ್ತ ಸುಶಿಕ್ಷತ ಓದುಗರಲ್ಲಿ ಜಾಗೃತಿ ಉಂಟು ಮಾಡುವುದು ನಾಡಿನ ಆಗುಹೋಗುಗಳನ್ನು ವರದಿರೂಪದಲ್ಲಿ ವಿತರಿಸುವುದು ದಿನಪತ್ರಿಕೆಯ ಕೆಲಸ. ವರದಿಯ ಹಿಂದಿನ ಆಗುಹೋಗನ್ನು ಕಂಡುಹಿಡಿದು

ವಿಚಾರವಿಶ್ಲೇಷಣೆಯ ಮೂಲಕ ಓದುಗರಲ್ಲಿ ಜಾಗೃತಿ ಉಂಟುಮಾಡುವುದು ವಾರಪತ್ರಿಕೆಯ ಕೆಲಸ. ಆದರೆ ಲೋಕಶಿಕ್ಷಣದ ಮಿತಿ ಇಷ್ಟಕ್ಕೇ ಉಳಿಯಬೇಕಾಗಿಲ್ಲ. ಅದು ಆಧುನಿಕ ಜಗತ್ತನ್ನು ಅಥವಾ ವಿಶಾಲ ವಿಶ್ವವನ್ನು ನೋಡುವ ಒಂದು ಕಿಟಕಿಯಾಗಿ ಜೊತೆಗೆ ಬೇಂದ್ರೆಯವರು ಹೇಳಿದಂತೆ **ವಿಶ್ವದೊಳ ನುಡಿಯಾಗಿ ಕನ್ನಡಿಸುವ** ಕೆಲಸವು ಮಾಧ್ಯಮದಿಂದ ಆಗಬೇಕು. ಸ್ಪಂದನೀಯವಾದ ಭಾಷೆಯಾಗಿ ಬೆಳೆಯುತ್ತಿತ್ತು. ಕನ್ನಡದ ಶಕ್ತಿ ಯುಕ್ತಿ ಅಪರಮಿತವಾದುದು. ಸಾಮಾನ್ಯ ಜ್ಞಾನ, ಅನುಭವ, ತಿಳಿವಳಿಕೆಗಳು ವಿಜ್ಞಾನದ ಮಟ್ಟಕೇರಿ ಓದುಗನು ವಿಶ್ವವ್ಯಕ್ತಿಯಾಗಿ ತನ್ನನ್ನು ಕಂಡುಕೊಳ್ಳಬೇಕಲ್ಲದೆ ವಿಶ್ವದಲ್ಲಿಯೇ ಅದನ್ನು ತನ್ನ ಬಳಿಗೂ ಮಾಡಿಕೊಳ್ಳಬೇಕು. ಇದು ಒಂದು ಪತ್ರಿಕೆಯ ಸಕಾಲಿಕ ಎಚ್ಚರ. ಲೋಕಶಿಕ್ಷಣ ಟ್ರಸ್ಟ್ ಒಂದು ಡೈಜಸ್ಟ್‌ನ್ನು ಹೊರತರಬೇಕೆಂಬುದಕ್ಕೆ ಇಂತಹ ಧ್ಯೇಯ ಒಂದಿತ್ತು. ಇದನ್ನು ನಿರ್ವಹಿಸಲು ಸಕಲಸಿದ್ಧತೆಯನ್ನು ಮಾಡಿಕೊಂಡಾಗ ಮೊಹರೆ ಮತ್ತು ದಿವಾಕರರಿಗೆ ಕಂಡದ್ದು ಪಾ.ವೆಂ. ಆಚಾರ್ಯರ ಆವರೆಗಿನ ಸಾಧನೆಗಳು. ಪಿ.ವಿ. ಆಚಾರ್ಯರನ್ನು ಸಹ ಸಂಪಾದಕ ಹುದ್ದೆಗೇರಿಸಿ ಕಸ್ತೂರಿಯ ಸಂಪೂರ್ಣ ನಿರ್ವಹಣೆಯನ್ನು ಒಪ್ಪಿಸಲಾಯಿತು. 'ಬರುವುದೆನುಂಟೊಮ್ಮೆ ಬರುವ ಕಾಲಕೆಬಹುದು ಬಯಕೆ ಬರುವುದರ ಕನಸನ್ನೆ ಕಾಯಿ' (ಮಧುರ ಚೆನ್ನ) ಎಂಬಂತೆ ಪಾ.ವೆಂ. ಆಚಾರ್ಯರು ಆ ಹೊತ್ತಿಗಾಗಲೇ ಒಂದು ಡೈಜೆಸ್ಟ್‌ನ್ನು ಹೇಗೆ ರೂಪಿಸಿ ಬೆಳೆಸಬೇಕು ಎಂಬುದನ್ನು ಕಲ್ಪಿಸಿಕೊಂಡಿದ್ದರಷ್ಟೇ ಅಲ್ಲ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಅವರದು ವಿಶ್ವವಿಶಾಲ ಓದುಗಾರಿಕೆ. ಉಡುಪಿ ಮನೆಯಲ್ಲಿ ಸಂಸ್ಕೃತ ಕಲಿತಿದ್ದರು. ಮನೆಮಾತು ತುಳುವಿನೊಂದಿಗೆ ಕನ್ನಡವನ್ನು ರೂಢಿಸಿಕೊಂಡರು. ಮೆಟ್ರಿಕ್‌ವರೆಗಿನ ಶಿಕ್ಷಣದಲ್ಲಿ ಇಂಗ್ಲೀಷನ್ನು ಕರಗತಮಾಡಿಕೊಂಡಿದ್ದರು. ಉದ್ಯೋಗ ನಿಮಿತ್ತ ಮದ್ರಾಸನಲ್ಲಿ ನೆಲೆಸಿದ್ದಾಗ ತಮಿಳನ್ನು ತಿಳಿದುಕೊಂಡಿದ್ದರೂ ಗಾಂಧಿಪ್ರಭಾವದಿಂದಾಗಿ ರಾಷ್ಟ್ರಭಾಷೆ ಹಿಂದಿಯನ್ನು ಕಲಿತಿದ್ದರು. ರವೀಂದ್ರರ ಮತ್ತು ಶರಶ್ಚಂದ್ರ ಚಟರ್ಜಿಯವರ ಕೃತಿಗಳನ್ನು ಓದುವುದಕ್ಕಾಗಿ ಬಂಗಾಳಿಯನ್ನು ಓದಿದರು. ಹೀಗೆ ಬಹುಬಾಷಿಕರಾಗಿ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಶೇಷ ಪತ್ರಿಕೆಗಳನ್ನು ಓದುವ, ಸಂಗ್ರಹಿಸುವ ಹವ್ಯಾಸದಲ್ಲಿದ್ದರು. ಪಾ.ವೆಂ. ಬಹುಶೃತ ಪಂಡಿತರೆಂದನಿಸಿದ್ದು ಇದಕ್ಕಾಗಿಯೇ. ಜ್ಞಾಪಕ ಶಕ್ತಿ ನವನೀರದದಂತಹ ಕಾವ್ಯವನ್ನು ಪ್ರಕಟಿಸಿದ ಅವರು (ಮುಂಬಾಯಿ ಸರಕಾರದ ವಾರ್ಷಿಕ ಕಾವ್ಯ ಬಹುಮಾನವನ್ನು ಪಡೆದ ಕೃತಿಯಾಗಿದೆ) ಹಳೆಗನ್ನಡ ಹೊಸಗನ್ನಡ ಕಾವ್ಯಪರಂಪರೆಯ ನಿಕಟ ಸಂಬಂದ ತಮಗಿದ್ದುದನ್ನು ಸಾಬಿತುಪಡಿಸಿದ್ದರು. ಕರ್ಮವೀರದ ಸಂಚಿಕೆಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿಯ ಅಪರೂಪದ ಲೇಖನಗಳನ್ನು ಸವಿಗನ್ನಡದಲ್ಲಿ ಅನುವಾದಿಸಿ ಸಂಕ್ಷೇಪಗೊಳಿಸಿ ಬರೆದಿದ್ದರು. ಸಂಚಿಕೆಗಳ ಖಾಲಿ ಜಾಗಗಳನ್ನು ಸರಸೋಕ್ತಿ ಅಥವಾ ಸುಭಾಷಿತ ಅಥವಾ ಅಚ್ಚರಿ ಆನಂದ ಹುಟ್ಟಿಸುವ ಬರಹದಿಂದ ತುಂಬುತ್ತಿದ್ದರು. ಆಚಾರ್ಯರಿಗೆ ಆಕಾಲದ ಎಲ್ಲ ಹಿರಿ-ಕಿರಿಯ ಕವಿ ಲೇಖಕರ ಚಿಂತಕರ ಸ್ನೇಹ ಪತ್ರ

ಮುಖೇನ ಒಡನಾಟವಿತ್ತು. ಇದೆಲ್ಲಕ್ಕಿಂತ ಮಿಗಿಲಾಗಿ ಅವರು ತಮ್ಮ ವಯಸ್ಸು ಮತ್ತು ಆರೋಗ್ಯ ಇವುಗಳಿಗೆ ಅತೀತವಾಗಿ ಮಗುವಿನ ಮುಗ್ಧಮನಸ್ಸು, ಯುವಕನ ಸ್ನಿಗ್ದ ಮನಸ್ಸು ಹೊಂದಿದ್ದರು. ಇದರಿಂದಾಗಿ ಆಚಾರ್ಯರು ಮುಕ್ತಮನಸ್ಸಿನ, ಕುತೂಹಲ ಕೌತುಕದಿಂದ ಕೂಡಿದ ಮನಸ್ಥಿತಿಯನ್ನು ತಾಳಿದ್ದರು. ಒಬ್ಬ ಡೈಜಸ್ಟ್ ಪತ್ರಿಕೆಯ ಸಂಪಾದಕ ಹೊಂದಬೇಕಾದ ಸಕಲ ಸಂಪನ್ಮೂಲ ವ್ಯಕ್ತಿ ಅವರಾಗಿದ್ದರು.

ಹುಬ್ಬಳ್ಳಿಯ ಲೋಕಶಿಕ್ಷಣ ಟ್ರಸ್ಟ್ **ಸಂಯುಕ್ತ ಕರ್ನಾಟಕ** ದಿನಪತ್ರಿಕೆ ಮತ್ತು **ಕರ್ಮವೀರ**ಗಳನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿ ಅಂದಿನ ಕನ್ನಡ ಪತ್ರಿಕಾಪ್ರಪಂಚದಲ್ಲಿ ಸ್ಥಿರತೆಯನ್ನು ಸ್ಥಾಪಿಸಿದ್ದಲ್ಲದೆ, ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸುವಂತೆ ಇನ್ನಷ್ಟು ವಿಸ್ತರಣೆಯನ್ನು ಮಾಡುವ ಹಂತದಲ್ಲಿತ್ತು. ಲೋಕಶಿಕ್ಷಣ ಅಂದರೆ ಮುದ್ರಿತ ಅಕ್ಷರಗಳ ಮೂಲಕ ಸಾಮಾನ್ಯರನ್ನು ತಲುಪಿ ಅವರ ದೈನಂದಿನ ಜೀವನವನ್ನು ವಿದ್ಯೆ ಸಂಸ್ಕೃತಿಗಳಿಂದ ಜಾಗೃತಗೊಳಿಸುವುದು ಮತ್ತು ಬೆಳೆಸುವುದು. ಎರಡನ್ನು ಪೂರೈಸಲು ಲೋಕಶಿಕ್ಷಣ ಟ್ರಸ್ಟ್ ೧೯೫೬ರಲ್ಲಿ ಮಾಸಪತ್ರಿಕೆಯೊಂದನ್ನು ಪ್ರಕಟಿಸುವ ಯೋಜನೆ ರೂಪಿಸಿತು. ಆಗ ಕನ್ನಡದಲ್ಲಿ ಸರ್ವಾಂಗ ಸುಂದರವೆನಿಸುವ ಒಂದೂ ಮಾಸಪತ್ರಿಕೆ ಇರಲಿಲ್ಲ. **ಜಯ ಕರ್ನಾಟಕ, ಪ್ರಬುದ್ಧ ಕರ್ನಾಟಕ,** ಸಾಹಿತ್ಯ ಪತ್ರಿಕೆಗಳಿದ್ದವು. ಆಗ ಮೈಸೂರಿನಿಂದ ವಯಸ್ಕರ ಶಿಕ್ಷಣ ಸಮಿತಿಯವರ **ಪುಸ್ತಕ ಪ್ರಪಂಚ** ಧಾರವಾಡದಿಂದ **ಜಯಂತಿ** ಸಾಹಿತ್ಯ ಮಾಸಿಕ; ಬೆಂಗಳೂರಿನಿಂದ **ಕಥಾವಳಿ** ಎಂಬ ಮಾಸಪತ್ರಿಕೆ ಕೆಲಮಟ್ಟಿಗೆ ಪ್ರಚಲಲಿತದಲ್ಲಿತ್ತು.

ನಾಡಿನ ವಿದ್ಯಾವಂತರಿಗೆ, ಶಿಕ್ಷಕರಿಗೆ, ಪ್ರೌಢವಿಧ್ಯಾರ್ಥಿಗಳಿಗೆ ಮತ್ತು ಸದಭಿರುಚಿಯುಳ್ಳ ಸಾಮಾನ್ಯರಿಗೆ ಹಿಡಿಸುವಂತ ಒಂದಾದರು ಮಾಸಪತ್ರಿಕೆ ರೂಪುಗೊಳ್ಳಬೇಕಾದ ಕಾಲ ಅದು. ಬಾಷಾವಾರು ಪ್ರಾಂತ ರಚನೆಯ ಪರಿಣಾಮವಾಗಿ ರಾಜ್ಯದ ಏಕೀಕರಣವು ಸನ್ನಿಹಿತವಾದ ಪರಿಸ್ಥಿ ಅದು. ಲೋಕಶಿಕ್ಷಣ ಟ್ರಸ್ಟ್‌ನ ಮಹತ್ವಾಕಾಂಕ್ಷಿ ಧ್ಯೇಯ ವಾಕ್ಯ **ಕರಿಷ್ಯೇ ವಚನಂ ತವ** (ನಿನಗೆ ಕೊಟ್ಟ ಮಾತನ್ನುನೆರವೇರಿಸುವೆ) ಎಂಬುದು ಈಡೇರುವ ಸಂದರ್ಭ ಅದು. ರಂಗನಾಥ ದಿವಾಕರ್, ಹ.ರಾ. ಪುರೋಹಿತ್, ಮೊಹರೆ ಹನುಮಂತರಾವ್ ಮೂವರು ಸೇರಿ ಕನ್ನಡದಲ್ಲೊಂದು ಡೈಜೆಸ್ಟ್ ಮಾದರಿಯ ಮಾಸಿಕವನ್ನು ತರಬೇಕೆಂದು ಯೋಜಿಸಿದರು. ಈಗಾಗಲೇ ಕಳೆದ ಹದಿನಾಲ್ಕು ವರ್ಷಗಳಿಂದ ತಮ್ಮೊಡನಿದ್ದ ಪಿ.ವಿ.ಆಚಾರ್ಯರಿಗೆ **ಕಸ್ತೂರಿ**ಯ ಸಂಪಾದಕತ್ವವನ್ನು ವಹಿಸಿದರು. ಅದಾಗಲೇ ಡೈಜಸ್ಟಿನ ರೂಪರೇಖೆಗಳನ್ನು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದರು. ಡೈಜೆಸ್ಟ್ ಪ್ರಕಟಿಸಲು ಅವಶ್ಯವಿದ್ದ ವಸ್ತು, ವಿಷಯ ಸಾಮಗ್ರಿಗಳನ್ನು ಅವರು ಸಂಗ್ರಹಿಸಿದ್ದರು. ಇವರಿಗಾಗಿಯೇ ಡೈಜಸ್ಟ್ ಕಾಯ್ದುಕೊಂಡಿತ್ತೇನೋ ಎನ್ನುವಂತೆ ಆಚಾರ್ಯರ ಸಿದ್ಧತೆ ಇತ್ತು. ೧೯೫೬ ಸೆಪ್ಟೆಂಬರ್ ಮೊದಲ ದಿನ **ಕಸ್ತೂರಿ**ಯ ಸಂಚಿಕೆ ಪ್ರಕಟವಾಗಿ ಪ್ರೌಢ ಕನ್ನಡಿಗರ ಕೈ ಸೇರಿತು. ರಂಗನಾಥ ದಿವಾಕರರು ಸಂಪಾದಕರಾಗಿದ್ದರೆ ಪಿ.ವಿ. ಆಚಾರ್ಯರು ಸಹಸಂಪಾದಕರಾಗಿದ್ದರು.

ಕಸ್ತೂರಿಮೃಗ ಜಿಂಕೆ ಪ್ರಾಣಿ ವರ್ಗಕ್ಕೆ ಸೇರಿದ ಸಸ್ತನಿ (Muskdeer) ಜಿಂಕೆಗಳಲ್ಲಿ ಅರವತ್ತಕ್ಕೂ ಹೆಚ್ಚು ಪ್ರಬೇಧಗಳಿವೆ. ಕಸ್ತೂರಿ ಮೃಗದ ವಾಸ ಹಿಮಾಲಯದ ತಪ್ಪಲು. ಕೊಂಬುಗಳಿಲ್ಲದ ಚಿಕ್ಕ ಬಾಲದ ಉದ್ದ ಕಿವಿಯ ಈ ಪ್ರಾಣಿಯ ಎತ್ತರ ೫೦ ರಿಂದ ೬೦ ಸೆಂ.ಮೀ. ಭುಜದ ಭಾಗಕ್ಕಿಂತ ಹಿಂಬಾಗ ಎತ್ತರ. ಗಂಡು ಕಸ್ತೂರಿಯ ಕಿಬ್ಬೊಟ್ಟೆಯ ತ್ವಚೆಯೊಳಗೆ ಒಂದು ಚೀಲ ವಿದ್ದು, ಅಲ್ಲಿ ಸುಗಂಧಯುಕ್ತ ಪದಾರ್ಥ ಉತ್ಪತ್ತಿಯಾಗಿ, ಹೊರಗೆ ಒಸರಿ ಪುಡಿ ಪುಡಿರೂಪ ತಾಳುತ್ತದೆ. ತರಿತರಿಯಾದ ಈ ಪುಡಿ ನೆಲಕ್ಕೆ ಬಿದ್ದುದನ್ನು ಅರಣ್ಯವಾಸಿಗಳು ಸಂಗ್ರಹಿಸಿ ಉಂಡೆಯಾಗಿ ಮಾಡಿ ಮಾರುತ್ತಾರೆ. ಸಾಬೂನು, ಸುಗಂಧ ದ್ರವ್ಯ (ಅತ್ತರ್)ಗಳಲ್ಲಿ ಸೇರಿಸುವುದುಂಟು. ಕಸ್ತೂರಿ ಮೃಗದ ಗುಣಲಕ್ಷಣಗಳೆಲ್ಲ ಪತ್ರಿಕೆಯ ಆಶಯ, ಆಕೃತಿಗೆ ಅನುರೂಪವಾಗಿದೆ.



ಕಸ್ತೂರಿಯ ಸುಗಂಧ ಹೊರಡಬೇಕಾದರೆ ಅವಾವ ರಾಸಾಯನಿಕ ದ್ರವ್ಯಗಳು ಅನೇಕ ಪ್ರಮಾಣದಲ್ಲಿ ಸೇರಿಸ ಬೇಕಲ್ಲವೇ? ಈ 'ಕಸ್ತೂರಿಮೃಗ' (Muskdeer) ಈ ವಿಶೇಷತೆ ಆಚಾರ್ಯರ ಪ್ರತಿಕ್ರಿಯೆ ಆಶಯ ಮತ್ತು ಅಭಿವ್ಯಕ್ತಿಯ ರೂಪಕವೇ ಆಗಿದೆ. ಕಸ್ತೂರಿಯಲ್ಲಿನ ಆಯ್ಕೆ, ಬರಹ, ಶೈಲಿ, ವಿಷಯ ನಿರೂಪಣೆ ಮತ್ತು ಶಾಶ್ವತ ಸಾಹಿತ್ಯಗಳ ಸಮನ್ವಯ ಪಾ.ವೆಂ. ಅವರ ಸ್ವಂತಿಕೆಯ ಧ್ಯೋತಕವಾಗಿದೆ. ೧೯೫೬ರಿಂದ ೧೯೭೪ರ ವರೆಗಿನ ಹದಿನೆಂಟು ವರ್ಷದ ೨೨೨ ಸಂಚಿಕೆಗಳ ಕನ್ನಡದ **ಕಸ್ತೂರಿ**ಯನ್ನು ನಾಡಿನ ತುಂಬಾ ಪರಿಮಳ ಬೀರುವಂತೆ ರೂಪಿಸಿದರು, ಬೆಳೆಸಿದರು. ಕನ್ನಡಿಗರು ವಿದೇಶಗಳಿಗೆ ಹೋಗಿದ್ದಾಗಲೂ **ಕಸ್ತೂರಿ**ಯನ್ನು ತರಿಸಿಕೊಂಡು ಓದುತ್ತಿದ್ದರೆಂಬ ಅಂಶ ಅದರ ಜನಪ್ರಿಯತೆಯ ಕುರುಹು. ಅಲ್ಲಿಂದಲೇ ಕನ್ನಡ ಲೇಖಕರು ಇದಕ್ಕಾಗಿ ಬರೆಯುತ್ತಿದ್ದರು. ಕನ್ನಡಿಗರ ರುಚಿ-ಶುಚಿ, ಶುದ್ಧಿ ಭಾವಶುದ್ಧಿಯ ವರ್ಧನೆಗೆ **ಕಸ್ತೂರಿ** ನೆರವಾಗಿದೆ. ಪಿ.ವಿ. ಆಚಾರ್ಯರ ಮುಖ್ಯ ವ್ಯವಸಾಯವೇ **ಕಸ್ತೂರಿ** ಪತ್ರಿಕೆಯ ಸಂಪಾದನೆ. ಇದಕ್ಕಾಗಿ ಅವರು ತನ್ನೆಲ್ಲ ಸಂಪನ್ಮೂಲ ಶಕ್ತಿಯನ್ನು ವಿನಿಯೋಗಿಸಿದರು.

ಪಾ.ವೆಂ. ಅವರು ತನ್ನ ಜೀವನದ ಪ್ರಾರಂಭದಿಂದಲೂ ಕವಿತೆಯ ಕಡೆಗೆ ಹೆಚ್ಚು ಒಲವು ತೋರಿದವರು. ಅವರ ಕಾಲದಲ್ಲಿ ಶ್ರೇಷ್ಠ ಕವಿಗಳಾದ ಪಂಜೆ ಗೋವಿಂದ ಪೈ, ಶಿವರಾಮ ಕಾರಂತರು ಇನ್ನೂ ಅನೇಕರಂತೆ ಬರೆಯುವ ಹಂಬಲವು ಅವರ ಅಂತರಾಳದಲ್ಲಿತ್ತು. ಆದರೆ ಪಾ.ವೆಂ. ಅವರ ಜೀವನ ಇದಕ್ಕೆ ಪೂರಕವಾಗಿರಲಿಲ್ಲ. ಪಾ.ವೆಂ. ಜೀವನ ಪ್ರಾರಂಭಿಸಿದ ಕಾಲದ ಸ್ಥಿತಿಗತಿ ಹಾಗೂ ಕೌಟುಂಬಿಕ ಆರ್ಥಿಕ ಅಗತ್ಯತೆಗಳು ಕವಿಗೆ ಪ್ರೋತ್ಸಾಹಕವಲ್ಲದ ಜೀವನರಂಗಕ್ಕೆ ನೂಕಿತು. ಪ್ರಾಥಮಿಕ ಶಿಕ್ಷಣ

ಮುಗಿಸಿದ ಪಾ.ವೆಂ. ಬಡತನದಿಂದಾಗಿ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗಲಿಲ್ಲ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಪಾ.ವೆಂ. ಮುಂದಿನ ದಿನಗಳಲ್ಲಿ ಕುಟುಂಬಕ್ಕೆ ಆಧಾರ ಸ್ತಂಭವಾಗಿ ನಿಲ್ಲುವ ಅಗತ್ಯ ಇತ್ತು. ಮುಂದಿನ ದಿನಗಳಲ್ಲಿ ಆರ್ಥಿಕ ಅವಶ್ಯಕತೆಗಾಗಿ ಎಲಿಮೆಂಟರಿ ಶಾಲಾಶಿಕ್ಷಕನಾಗಿ, ಅಂಗಡಿ ಕೆಲಸಗಾರ, ಕಾರಕೂನಕೆ, ಲೆಕ್ಕಿಗ ಕಂಪನಿ ಕಾರ್ಯದರ್ಶಿ, ಪ್ರೆಸ್ ಮ್ಯಾನೇಜರ್, ಹೋಟೆಲ್‌ಬಿಲ್ ರೈಟರ್ ಹೀಗೆ ಬದುಕಿಗೋಸ್ಕರ ಹಲವು ಅನುಭವದ ಮಜಲುಗಳನ್ನು ಕಂಡು ಅನುಭವಿಸಿ ಕೊನೆಗೆ ಬಂದು ನೆಲೆಸಿರುವುದು ಪತ್ರಿಕೋದ್ಯಮ ರಂಗಕ್ಕೆ. ಶಿಕ್ಷಕ ವೃತ್ತಿಯನ್ನು ಹೊರತು ಉಳಿದೆಲ್ಲ ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸ ಮಾಡಿದರು. ಕಸ್ತೂರಿ ಮಾಸಿಕ ಪತ್ರಿಕೆಯಲ್ಲಂತೂ ಕಸ್ತೂರಿಯ ಆಚಾರ್ಯರೇ ಆದರು.

ಕಸ್ತೂರಿ ಆರಂಭವಾಗುವ ದಿನಗಳಲ್ಲಿ ಕರ್ನಾಟಕದಲ್ಲಿ ಅಂಥಾ ಒಂದು ಪತ್ರಿಕೆಯ ಅಗತ್ಯವಿತ್ತು. ಸ್ವಾತಂತ್ರ್ಯ ಬಂದ ನಂತರ ದೇಶದಲ್ಲಿ ಆಗಿದ್ದ ಬದಲಾವಣೆಗಳು ಇದಕ್ಕೆ ಪ್ರಮುಖ ಕಾರಣವಾಗಿತ್ತು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಇಂಗ್ಲೀಷನ್ನೆ ಅವಲಂಬಿಸಿದ ಜನರಿಗೆ ಓದುವುದಕ್ಕೆ ಸಾಕಷ್ಟು ಉತ್ತಮ ದರ್ಜೆಯ ಪುಸ್ತಕಗಳು ಸಿಗುತ್ತಿದ್ದವು. ದೇಶ ಭಾಷೆಗಳಲ್ಲಿ ದೊರೆಯುವ ವಿಷಯಗಳನ್ನು ವಿದ್ಯಾವಂತರಿಗೂ ಅರಗಿಸಿಕೊಳ್ಳಲು ಕೂಡ ಕಷ್ಟವಾಗುತಿತ್ತು. ಕನ್ನಡಿಗರಾದ ಜನಸಾಮಾನ್ಯರಿಗೆ ಇಂಗ್ಲೀಷ್ ಶಿಕ್ಷಣವಂತೂ ದೂರದ ಮಾತು. ಈ ರೀತಿಯ ಸ್ಥಿತಿಗತಿಯಲ್ಲಿದ್ದಾಗ ಕನ್ನಡದಲ್ಲಿ ಇಂಥಾ ಒಂದು ಪತ್ರಿಕೆಯನ್ನು ಸ್ವೀಕರಿಸಲು ಜನ ಸಿದ್ಧರಿದ್ದರು. ಪಾ.ವೆಂ ಅವರ ಯೋಜನೆಯ ಯಶಸ್ವಿಯಾಗಲು ಮೊದಲ ಕಾರಣವಾಯಿತು.

ಕಸ್ತೂರಿಗೆ ಪಾ.ವೆಂ. ಅವರೇ ಮೊದಲ ಸಂಪಾದಕರಾದ ಕಾರಣ ಕಸ್ತೂರಿಗೆ ಒಂದು ನಿರ್ದಿಷ್ಟ ಆಯಾಮ ದೃಷ್ಟಿಕೋನವನ್ನು ಕೊಡಲು ಪಾ.ವೆಂ. ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು. **ಸಂಯುಕ್ತ ಕರ್ನಾಟಕ** ಸಂಸ್ಥೆಯೊಡನೆ ಪಾ.ವೆಂ. ಜೀವನದ ಬಹುಭಾಗವನ್ನು ಕಳೆದಿದ್ದರು. ನಿಧಾನವಾಗಿ ವ್ಯವಸ್ಥಾಪಕ ವಿಭಾಗದಿಂದ ಸಂಪಾದಕೀಯ ವಿಭಾಗಕ್ಕೆ ಸೇರಿದರು. ಬೇರೆ ವಿಭಾಗದಲ್ಲಿ ಕೆಲಸ ಮಾಡಲು ಪಾ.ವೆಂ. ಅವರಿಗೆ ಅಸಾಧ್ಯವಾಗಿತ್ತು. ಅವರ ಅಧೀನದಲ್ಲಿ ಕೆಲಸ ಮಾಡಿವವರನ್ನು ಮೇನೆಜ್ ಮಾಡುವುದು ಅವರ ಭಾವನೆಗೆ ಒಗ್ಗದ ಕೆಲಸವಾಗಿತ್ತು. ವ್ಯವಹಾರದಲ್ಲಿ ಭೋಳೆ ಸ್ವಭಾವದ ಪಾ.ವೆಂ.ಗೆ ಒಂಟಿಸಲಗನಾಗಲು ಹೆಚ್ಚು ಅವಕಾಶವಿರುವ ಸಂಪಾದಕೀಯ ವಿಭಾಗವನ್ನೇ ಆಯ್ದುಕೊಂಡರು. ಸಂಪ್ರದಾಯಬದ್ಧವಾದ ಸಂಸ್ಥೆಯಲ್ಲಿ 'ಕಮ್ಯುನಿಸ್ಟ್; ಎನಿಸಿದರೂ ಪೂರ್ಣವಾದ ಸ್ವಾತಂತ್ರ ಅವರಿಗಿತ್ತು. ಯಾರು ಅವರ ಕೆಲಸಗಳಿಗೆ ಅಡ್ಡಗಾಲು ಹಾಕುತ್ತಿರಲಿಲ್ಲ. ಪಾ.ವೆಂ ಅವರ ಚಿಕಿತ್ಸಕ ಗುಣದಿಂದ ಅಲ್ಲಿ ಬರುತ್ತಿದ್ದ ದೇಶಿ, ವಿದೇಶಿ ಪತ್ರಿಕೆ , ಪುಸ್ತಕಗಳನ್ನು ಕಬಳಿಸುತ್ತಾ ೧೯೫೦ರ ಒಳಗೆ 'ಸರ್ವಜ್ಞಚಾರ್ಯ' ಎಂಬ ಬಿರುದಿಗೂ ಪಾತ್ರರಾದರು. ಸ್ವಯಂ ನಿರ್ಣಯದಿಂದ 'ಲಾಂಗೂಲಾಚಾರ್ಯ' ಎಂಬ ಹೆಸರಿನಿಂದ ಒಂದು ಲಘು ಬರಹದ ಸ್ತಂಭವನ್ನು ಕರ್ಮವೀರದಲ್ಲಿ ಪ್ರಾರಂಭಿಸಿದರು.ಅದು ಓದುಗರ ಭಾವನೆಗಳಿಗೆ ಭೂಮಿಕೆಯಾಯಿತು. ಉದಾತ್ತ ತ್ಯಾಗದ ಮುಖವಾಡ ಹೊತ್ತು

ರಾಜಕಾರಣ ಮಾಡುವವರ ಒಳ ಇರಾದೆಗಳನ್ನು ಗಾಳಿಗೆ ಹಿಡಿಯುವ ಪ್ರವೃತ್ತಿಯಿಂದಾಗಿ ಹೇಸಿ 'ಲಾಂಗೂಲಾಚಾರ್ಯ' ಎಂಬ ಬಿರುದು ಪಡೆದಿದ್ದರು. ಇದರಂದಾಗಿ ಕವಿ, ಕತೆಗಾರ ಅನ್ನುವ ಮಾತು ದೂರ ಉಳಿಯಿತು. ಆದರೆ **ಕರ್ಮವೀರ**ದಲ್ಲಿ ಕಳೆದ ೧೨ ವರ್ಷದ ಜೀವನ ತೃಪ್ತಿಕರವಾದ ಬದುಕಾಗಿತ್ತು. ೧೨ ವರ್ಷಗಳಲ್ಲಿ ಪುಸ್ತಕ ವಿಮರ್ಶೆಯಿಂದಾರಂಬಿಸಿ ಜಟಿಲ ವೈಜ್ಞಾನಿಕ ವಿಷಯಗಳ ಮೇಲೆ ಅನೇಕ ಲೇಖನಗಳನ್ನು ಬರೆಯುತ್ತಾರೆ. ಪಾ.ವೆಂ. ಅವರ ಕುತೂಹಲದ ಹತ್ತು ದಿಕ್ಕುಗಳ ಕಡೆಗೆ ಗಮನಹರಿಸುವ **ದಶವಧಾನಿ**ಯಾಗಿದ್ದರು. ಇದಕ್ಕಾಗಿ ಬಹುಕಾಲವನ್ನು ಓದಿನಲ್ಲಿ ಕಳೆಯುತ್ತಿದ್ದರು. ಪ್ರಸ್ತುತ ಕಾರ್ಯವನ್ನು ಪೂರೈಸಲು ಬೇರೆಯೇ ದುಡಿಯ ಬೇಕಾಗಿತ್ತು. ದಿನಕ್ಕೆ ೧೨-೧೪ ಗಂಟೆ ಕೆಲಸ ಬೀಳುತ್ತಿತ್ತು. ಪಾ.ವೆಂ. ಯಾವುದಕ್ಕೂ ಬೇಸರಿಸದೆ ಆಸಕ್ತಿಯಿಂದ ದುಡಿಯುತ್ತಿದ್ದರು.

೧೯೫೬ರಲ್ಲಿ ಡೈಜೆಸ್ಟ್ ಮಾದರಿಯ **ಕಸ್ತೂರಿ** ಪ್ರಾರಂಭವಾದಾಗ ಬೇಕಾದ ವಿಷಯದ ಮೇಲೆ ತಿಳಿಯಾಗಿ ಬರೆಯಬಲ್ಲ ಶಕ್ತಿ ಪಾ.ವೆಂ. ಅವರದಾಗಿತ್ತು. ಹೊಸ ಪತ್ರಿಕೆಯ ಸಂಪಾದಕತ್ವ ಅವರ ಕೊರಳಿಗೆ ಬಿದ್ದ ಮೇಲೆ ೧೮ವರ್ಷ ಯಾರು ಹೆಸರಿಡದಂತೆ ನಿರ್ವಹಿಸಿ ೧೯೭೪-೭೫ರಲ್ಲಿ ಕಡು ಕಾಯಿಲೆಯಿಂದ ಸಾವು ಬದುಕಿನ ನಡುವೆ ಹೋರಾಡಿ ಮತ್ತೆ ಬದುಕುತ್ತಾರೆ. ಆದರೆ **ಕಸ್ತೂರಿ** ಸಂಪಾದಕತ್ವಕ್ಕೆ ರಾಜೀನಾಮೆ ಕೊಟ್ಟು ಸ್ವಯಂ ನಿವೃತ್ತಿಯಾಗುತ್ತಾರೆ.

ಪಾ.ವೆಂ. ಅವರು **ಕಸ್ತೂರಿ** ಪತ್ರಿಕೆಯ ಸಂಪಾದಕರಾದ ಮೇಲೆ ತನ್ನ ಶಕ್ತಿಯನ್ನು ವಿನಿಯೋಗಿಸಿದ ರೀತಿ: ಪಾ.ವೆಂ. ಅವರ ಮೊದಲ ಗುರಿ ಎಸ್.ಎಸ್.ಎಲ್.ಸಿ ಯಿಂದ ಮೇಲ್ಪಟ್ಟು ಪದವಿಯಿಂದ ಕೆಳಗಿನ, ಮಧ್ಯಮ ವಿದ್ಯಾಭ್ಯಾಸದ ಜನ ನಮ್ಮ ದೇಶದಲ್ಲಿ, ಕರ್ನಾಟಕದಲ್ಲಿ ಹೆಚ್ಚು ಇದ್ದಾರೆ. ಈ ವರ್ಗದ ಜನರನ್ನು ಇಟ್ಟುಕೊಂಡು ಕಸ್ತೂರಿಯ ವಿಷಯ ಸಂಪಾದನೆಮಾಡಿದರು. ಕಸ್ತೂರಿಯ ಸಂಪಾದನೆಗಾಗಿ ಪಾ.ವೆಂ ನಿರಂತರ ಅಧ್ಯಯನದಲ್ಲಿ ತೊಡಗಬೇಕಾಯಿತು. ಸಹೋದ್ಯೋಗಿಗಳ ಮೂಲಕ ಸ್ವದೇಶಿ ಪತ್ರಿಕೆಗಳನ್ನೆಲ್ಲ ಓದಿ, ಓದಿಸಿ ಸ್ವಾರಸ್ಯದ ವಿಚಾರಗಳನ್ನು ಸಂಗ್ರಹಿಸಿದರು. ಇತರ ಭಾಷೆಯ ಪತ್ರಿಕೆಗಳು ಹಿಂದಿ, ಇಂಗ್ಲೀಷ್, ಮರಾಠಿ, ಫ್ರೆಂಚ್, ಬಂಗಾಳಿ ಹೀಗೆ ಹತ್ತು ಹಲವು ಪತ್ರಿಕೆಗಳನ್ನು ಓದಿ ಉತ್ತಮ ಸ್ವಾರಸ್ಯಕರವಾದ ವಿಷಯಗಳನ್ನು ಸಂಗ್ರಹಿಸಿ ಇಂಗ್ಲೀಷ್‌ನ ರೀಡರ್ ಡೈಜೆಸ್ಟ್‌ನ ಮಾದರಿಯಲ್ಲಿ ಈ ಕಸ್ತೂರಿ ಪತ್ರಿಕೆ ಬರಬೇಕೆಂಬುದು ಪಾ.ವೆಂ. ಅವರ ಇಂಗಿತವಾಗಿತ್ತು. ಜಗತ್ಪ್ರಸಿದ್ಧವಾದ ಲೋಕಜ್ಞಾನವುಳ್ಳ ಈ ಪತ್ರಿಕೆ ಕನ್ನಡದಲ್ಲಿ ಬಂದರೆ ಕನ್ನಡಿಗರಿಗೆ ಹೆಚ್ಚು ಅನುಕೂಲವಾದಿತು ಎನ್ನುವ ಹಿತಚಿಂತನೆಯಿಂದ ಮಥಿಸಿಬಂದ ರೂಪವೇ ಈ **ಕಸ್ತೂರಿ**. ಆಧುನಿಕ ಜಗತ್ತಿನಲ್ಲಿ ಇಂಥ ಪತ್ರಿಕೆಗಳಿಲ್ಲದಿದ್ದರೆ ಸಮಾಜದ ಕಲ್ಪನೆ ಉಹಾತೀತ ಕನ್ನಡದ ಸಮಾಜವನ್ನು ನಾಗರಿಕ, ಸಾಕ್ಷರಸ್ಥ ಹಾಗೂ ಅಭಿವೃದ್ಧಿಗೆ

ಮುಖಮಾಡಿ ನಿಲ್ಲುವ ಸಮಾಜವನ್ನಾಗಿ ಮಾಡಬೇಕೆನ್ನುವ ಗುರಿ ಪಾ.ವೆಂ. ಅವರದಾಗಿತ್ತು. ಇದಕ್ಕಾಗಿ ಅಮೇರಿಕಾದ ರೀಡರ್ ಡೈಜೆಸ್ಟ್‌ನಂತಹ ಪತ್ರಿಕೆ ಕನ್ನಡದಲ್ಲೂ ಇರಬೇಕೆಂಬ ಆಸೆ, ಆಕಾಂಕ್ಷೆ ಪಾ.ವೆಂ. ಅವರಿಗೆ ಮೊಳೆತಿತ್ತು.

ಇಂಗ್ಲೀಷ್ ರೀಡರ್ಸ್ ಡೈಜೆಸ್ಟ್‌ನ ಪ್ರೇರಣೆ: ರೀಡರ್ಸ್ ಡೈಜೆಸ್ಟ್ ಮಾಸಪತ್ರಿಕೆಯು ಅಮೇರಿಕಾದ ಕೌಟುಂಬಿಕ ಹಾಗೂ ಮನರಂಜನೆಯ ಜನಪ್ರಿಯ ಮಾಸಪತ್ರಿಕೆಯಾಗಿತ್ತು ಜೊತೆಗೆ ಜಗತ್ತಿನ ಜನತೆಯ ಪತ್ರಿಕೆಯು ಹೌದು. ನ್ಯೂಯಾರ್ಕನ ಛಪ್ಪಕ ಎನ್ನುವಲ್ಲಿ ೧೯೨೨ರಲ್ಲಿ ರೀಡರ್ ಡೈಜೆಸ್ಟ್ ಮಾಸಪತ್ರಿಕೆ ಪ್ರಾರಂಭವಾಯಿತು. ಇದನ್ನು ಸ್ಥಾಪಿಸಿದವರು ಡಿ.ವಿಟ್‌ವ್ಯಾಲೆಟ್ ಮತ್ತು ಲೈಲೆತ್ವ್ಯಾಲೆಟ್ ದಂಪತಿಗಳು ಒಂದನೇ ಮಹಾಯುದ್ಧದ ಪರಿಣಾಮವಾಗಿ ವ್ಯಾಲೇಟ್ ಸೈನ್ಯಕ್ಕೆ ಸೇರಿ ಗಾಯಗೊಂಡಿದ್ದರು. ಅವನ ಅಲೋಚನೆಗಳನ್ನು ಜಾರಿಗೆ ತರಲು ಸುಸಮಯಕ್ಕೆ ಸಾಧ್ಯವಾಗಲಿಲ್ಲ. ಆದರೂ ಛಲಭರಿತ ವ್ಯಾಲೇಟ್ ಅನೇಕ ಭಾಷೆಯ ವಿಷಯಗಳನ್ನು ವಿವಿಧ ಪತ್ರಿಕೆಗಳಿಂದ ಒಟ್ಟಾಗಿಸಿ, ಕರಡು ತಿದ್ದುಪಡಿ ಮಾಡಿ ಮತ್ತೆ ಬರೆದು ಒಂದು ಪತ್ರಿಕೆಯನ್ನಾಗಿ ರೂಪಿಸಲು ನಿರ್ಧಾರವಾದ ಇದಕ್ಕೆ ಆತನ ಪತ್ನಿ ಲೈಲಾಳ ಸಂಪೂರ್ಣ ಸಹಕಾರ ಸಿಕ್ಕಿತು. ಅಮೇರಿಕಾದ ಮ್ಯಾನ್ ಹಟನ್ ಕೆಳಮಾಳಿಗೆಯಲ್ಲಿ ಮೊದಲ ಸಂಚಿಕೆಯನ್ನು ಫೆಬ್ರವರಿ ೧೯೨೨ಕ್ಕೆ ಪ್ರಕಟಿಸಿದರು. ಮೊದಲ ಪ್ರಕಟಣೆಯಲ್ಲಿ ೧೫,೦೦೦ ಪ್ರತಿಗಳು ಮಾರಾಟವಾಯಿತು. ನಂತರ ೧೯೨೯ರ ೨,೯೦,೦೦೦ ಚಂದಾದಾರರನ್ನು ಹೊಂದಿ ೯ ಲಕ್ಷ ಡಾಲರನ್ನು ಸಂಪಾದಿಸಿತು. ೧೯೩೩ರಲ್ಲಿ ಮೂಲ ಬರಹಗಳನ್ನು ಪ್ರಕಟಿಸಲು ಆರಂಭಿಸಿದರು. ನಂತರದ ವರ್ಷದಲ್ಲಿ ಪುಸ್ತಕ ರೂಪದಲ್ಲಿ ಹೊರಡಿಸಲಾಯಿತು. ಅಂತರಾಷ್ಟ್ರೀಯ ಸಂಚಿಕೆಯನ್ನು ೧೯೩೮ರಲ್ಲಿ ಯು.ಕೆ.ಯಲ್ಲಿ ಪ್ರಾರಂಭಿಸಿದರು. ಅದು ಕೇವಲ ೨ ಶಿಲಿಂಗ್ ಆಗಿತ್ತು ೪೦ ವರ್ಷದ ವಾರ್ಷಿಕೋತ್ಸವಕ್ಕೆ ಅದು ೪೦ ದೇಶಗಳ ಸಂಚಿಕೆಗಳಾಗಿ ೧೩ ಭಾಷೆಗಳಲ್ಲಿ ಮತ್ತು ಅಂಧಲಿಪಿ (ಬ್ರೈಲ್ ಭಾಷೆ)ಯಲ್ಲಿ ಪ್ರಕಟವಾಗುತ್ತಿತ್ತು. ಈ ಮಾಸಿಕ ಪತ್ರಿಕೆ ಪ್ರಾರಂಭದಿಂದಲೂ ನಿಯಮಾವಳಿಗಳ ಸೂಕ್ಷ್ಮ ಚೌಕಟ್ಟಿನಲ್ಲಿ ಕಮ್ಯುನಿಸ್ಟ್ ವಿರೋದ ನೀತಿಯನ್ನು ರಾಜಕೀಯ ಹಾಗೂ ಸಾಮಾಜಿಕ ವಿಷಯಗಳ ಮೇಲೆ ತೋರಿಸುತ್ತಾ ಬಂತು. ಈ ವಿಶ್ವ ವಿಖ್ಯಾತ ರೀಡರ್ಸ್ ಡೈಜೆಸ್ಟ್‌ನ ಹಿನ್ನಲೆ ಪ್ರೇರಣೆ ಆಂತರಿಕ ನೋಟವನ್ನು ಅರಗಿಸಿಕೊಂಡ ಪಾ.ವೆಂ. ಅವರ ಸುಪ್ತ ಮನಸ್ಸಿನಲ್ಲಿದ್ದ ಜಾಗೃತ ವಿಚಾರ ಕನ್ನಡಕ್ಕೊಂದು ಈ ರೀತಿಯ ಡೈಜೆಸ್ಟ್‌ನ ಅವಶ್ಯಕತೆ ಇದೆ ಎಂದು ಮನಗೊಂಡರು ಪಾ.ವೆಂ. ಅವರ ವಿಚಾರ ಗರ್ಭದಲ್ಲಿ ೧೯೫೬ ಸೆಪ್ಟೆಂಬರ್ ೫ರಲ್ಲಿ ಜನಿಸಿದ ಕನ್ನಡಿಗರ ಅಕ್ಷರ ಕೂಸೇ ಈ ಕಸ್ತೂರಿ ವಿಶ್ವ ವಿಶಾಲವಾದ ಜ್ಞಾನ ಭಂಡಾರವನ್ನೆ ಪ್ರತಿ ತಿಂಗಳು ನೂರು ಪುಟಗಳ ವ್ಯಾಪ್ತಿಯಲ್ಲಿ ಕನ್ನಡಿಗರ ಮನೆಬಾಗಿಲಿಗೊಯ್ದು ಮುಟ್ಟಿಸುವ ಸೇವೆ ಪಾ.ವೆಂ. ಅವರಿಂದ ನಡೆಯಿತು. ಕಸ್ತೂರಿಯಂತೆ ಇನ್ನೂ ಕೆಲವು ಡೈಜೆಸ್ಟ್‌ಗಳು ಹೊರಟವು ಹೇಗೆ ಮುನ್ನಡೆಯಲೆಂದು ತಿಳಿಯದೆ ಅಲ್ಲಿಗೆ ನಿಂತವು ಸ್ವಂತ ಅಭಿರುಚಿ, ಸ್ವತಂತ್ರ ದೃಷ್ಟಿಕೋನಗಳಿಲ್ಲದೆ ಯಾವುದೇ

ಲೇಖನಗಳನ್ನು ಸಂಗ್ರಹಿಸಲು ಸಾಧ್ಯವಿಲ್ಲ ಒಳ್ಳೆಯದನ್ನು ಆಯ್ದು ಕಾಪಾಡಲು ಸಂಪಾದಕನ ಅಭಿರುಚಿ ಸುಸಂಸ್ಕೃತವಾಗಿರಬೇಕು ಅಂಥ ಸುಸಂಸ್ಕೃತ ಅಭಿರುಚಿ ಪಾ.ವೆಂ. ಅವರಿಗೆ ಜನ್ಮಜಾತವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ಸಾಂಪ್ರಾದಾಯಿಕ ಶಿಕ್ಷಣವನ್ನು ಮುಗಿಸಿದ ಮೇಲೆ ಕಾಲೇಜು ವಿದ್ಯಾಭ್ಯಾಸಕ್ಕೆ ಹೋಗಲು ಸಾಧ್ಯಾವಾಗದ ಪಾ.ವೆಂ ಕೌಟುಂಬಿಕ ರಕ್ಷಣೆಗಾಗಿ ಉದ್ಯೋಗವನ್ನು ಅರಿಸುತ್ತಾ ನಡೆದದ್ದು, ಇಲ್ಲಿಯೂ ಉದ್ಯೋಗದ ಸೋಲನ್ನು ಅನುಭವಿಸಿದರು. ಯಾವ ವಿದ್ಯೆಯನ್ನು ಹೆಚ್ಚು ಕಷ್ಟವಿಲ್ಲದೆ ಕರಗತ ಮಾಡಿಕೊಳ್ಳುವ ಶಕ್ತಿ ಇದ್ದವರು. ಉಪಾಧ್ಯಾಯ ವೃತ್ತಿಯಲ್ಲಿ ಅಪ್ರಯೋಜಕರಾದರು. **ಜಯ ಕರ್ನಾಟಕ, ಪ್ರಬುದ್ಧ ಕರ್ನಾಟಕ, ಧುರೀಣ, ಅಂತರಂಗ** ಪತ್ರಿಕೆಗಳು ಸ್ವೀಕರಿಸುವಂಥ ಕವಿತೆ ಬರೆದವರು ಶಿಕ್ಷಕ ವೃತ್ತಿಯನ್ನು ಬಿಟ್ಟು ೧೯೩೧ರಲ್ಲಿ ಪಣಿಯಾಡಿಯವರ ಸ್ವದೇಶಿ ಅಂಗಡಿಯಲ್ಲಿ ಮಾರಾಟಗಾರ, ಕಂ–ಕಾರಕೂನ ಕಂ–ಕಸಗುಡಿಸುವವ ಕಂ–ಗ್ಯಾಸ್‌ದೀಪ ಹಚ್ಚುವವನಾಗಿ ಸೇರಿದರು. ಅಂಗಡಿ ಕೆಲಸಗಾರರಾಗಿ, ಮುಂದೆ ಪ್ರೆಸ್ ಲೆಕ್ಕಿಗನಾಗಿ, ಆಮೇಲೆ ಕಂಪೆನಿ ಸೆಕ್ರೆಟರಿಯಾಗಿ, ತುಳು ಚಳವಳಿಯ ಅಧ್ವರ್ಯ ಕಾಂಗ್ರೆಸ್ ನಾಯಕ, ಮೀಮಾಂಸ ಶಿರೋಮಣಿಯಾಗಿಯೂ ಕ್ರಾಂತಿಕಾರಕ ವಿಚಾರಕ, ಸಾಹಸಿ ಪಣಿಯಾಡಿಯವರೊಡನೆ ಸುಮಾರು ಏಳು ವರ್ಷಗಳೊಡನೆ ಜೀವನ ಸಾಗಿಸಿದರು ಮೊದಲು ವ್ಯಥೆಯಲ್ಲಿ ಆಮೇಲೆ ಸಾರ್ಥಕತೆಯಲ್ಲಿ ಮತ್ತು ಕೊನೆಯಲ್ಲಿ ಅನಾಹುತದ ಬದುಕು ಕಳೆದರು ಕಾರಣ ಅವಿದ್ಯಾವಂತ ಸಹಕಾರಿಗಳೊಡನೆ ನೀಗದಿದ್ದುದ್ದು ಒಟ್ಟಿನಲ್ಲಿ ಪಣಿಯಾಡಿಯವರ ವ್ಯವಹಾರ ವ್ಯಾಪಾರಗಳು ಸೋಲನ್ನು ಕಂಡು ಊರಲ್ಲಿ ನಿಲ್ಲದಿರುವ ಪರಿಸ್ಥಿತಿ ಉಂಟಾಯಿತು. ಈ ಅವಧಿಯಲ್ಲಿ ಯಾವ ವಾಣಿಜ್ಯ ಶಾಲೆಗೆ ಹೊಗದೇ ತರಬೇತುಗಳಿಲ್ಲದೇ ಕಠಿಣಲೆಕ್ಕಪತ್ರ ಮತ್ತು ಕಂಪನಿ ಕಾನೂನಿನಲ್ಲಿ ಸಾಕಷ್ಟು ಪರಿಜ್ಞಾನವನ್ನು ಪಾ.ವೆಂ. ಪಡೆದಿದ್ದರು. ಅವರು ಆರಂಭಿಸಿದ ಲಿಮಿಟೆಡ್ ಕಂಪನಿಗಳ ಮೆಮೊರ್‍ಯಾಂಡಂ–ಆರ್ಟಿಕಲ್ಸನ್ನು ತಯಾರಿಸಿ ರಿಜಿಸ್ಟ್ರ ಮಾಡಿಸಲು ಸಮರ್ಥನಾದಾಗ ಎಲ್ಲವೂ ನೀರು ಪಾಲಾಯಿತು. ಆಗ ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿದ್ದ ಪಾ.ವೆಂ. ಅವರಿಗೆ ನೌಕರಿಯ ಅಗತ್ಯವಿತ್ತು. ಆಕಾಲದಲ್ಲಿ ನೌಕರಿ ಸಿಗುವುದು ಕಷ್ಟವಾಗಿತ್ತು. ಕುಟುಂಬ ನಿರ್ವಹಣೆಗೆ ಮದ್ರಾಸಿಗೆ ಹೋಗಿ ಹೋಟೆಲ್ 'ಬಿಲ್‌ರೈಟರ್' ಆಗಿ ಸೇರಿಕೊಂಡರು.

ಏಳು ವರ್ಷಗಳಲ್ಲಿ ಉಡುಪಿಯಲ್ಲಿ ವಾಣಿಜ್ಯ ಪ್ರಪಂಚದಲ್ಲಿದ್ದರೂ ಸಾಕಷ್ಟು ಬರವಣಿಗೆ ಗದ್ಯಪದ್ಯ ಎರಡೂ ಸಾಗಿತ್ತು. ಹೆಚ್ಚಿನ ಬರವಣಿಗೆ **ಜಯಕರ್ನಾಟಕ**ದಲ್ಲಿ ಕೆಲವಂಶ ಪಣಿಯಾಡಿಯವರು ಪ್ರಾರಂಭಿಸಿದ ಜನಪ್ರಿಯ **ಅಂತರಂಗ** ಪತ್ರಿಕೆಯಲ್ಲಿ ಪ್ರಕಟವಾಗಿದ್ದವು. ಪಾ.ವೆಂ ಅವರಿಗೆ ಪತ್ರಿಕೋದ್ಯಮದ ಮೊದಲ ಪಾಠ **ಅಂತರಂಗ** ಪತ್ರಿಕೆಯ ಮೂಲಕ ಮಣಿಪಾಲದ ನಿವಾಸಿ ಕೆ. ಹೈದರ್‌ರವರಿಂದ ಆಯಿತೆಂದು ಪಾ.ವೆಂ. ತನ್ನ ಆತ್ಮಕಥೆಯಲ್ಲಿ ವಿನಯದಿಂದ ಸ್ಮರಿಸುತ್ತಾರೆ ಮತ್ತು ಮಂಗಳೂರಿನಲ್ಲಿ ಪತ್ರಿಕೋದ್ಯಮದ ಮೊದಲ ತರಬೇತಿ ಹೊಂದಿದ್ದರು. ತರುಣ ಓದುಗರ ನಾಡಿಯನ್ನು

ಬಲ್ಲವರಾಗಿದ್ದರು. ಜನಪ್ರಿಯ ಲೇಖನಗಳ ಆಕರಗಳನ್ನೆಲ್ಲ ಬಲ್ಲವರಾಗಿದ್ದ ಹೈದರರು ಸುಂದರವಾದ ಅಕ್ಷರದಲ್ಲಿ ಲೇಖನ ಬರೆದು ತಮ್ಮ ಸಮಯವನ್ನೆಲ್ಲಾ ಪತ್ರಿಕೆಗಾಗಿ ವ್ಯಯಿಸಿದ್ದರು. ಆದರೆ **ಅಂತರಂಗ** ಪತ್ರಿಕೆಯ ಹೆಸರು ಜಿಲ್ಲಾ ಗೆಜಟಿಯರ್‌ನಲ್ಲಿ ಇಲ್ಲದಿರುವುದು. ಪತ್ರಿಕೋದ್ಯಮಿಗಳು ಹೈದರನನ್ನು ಮರೆತಿರುವುದು ದುಃಖಕರ ಎನ್ನುತ್ತಾರೆ. ಪಾ.ವೆಂ. ಕೆ. ಹೈದರರಿಗೂ ಪಾ.ವೆಂ. ಅವರಿಗೂ ಗಾಢವಾದ ಮತ್ತು ವೈಯಕ್ತಿಕವಾದ ಸ್ನೇಹಪೂರ್ಣ ಸಂಬಂಧವಿತ್ತು. **ಅಂತರಂಗ** ಪತ್ರಿಕೆಯನ್ನು ಬಿಟ್ಟ ನಂತರ ಹೈದರರು ಕಲ್ಕತ್ತೆಗೆ ಅಮೇಲೆ ಪಾಕಿಸ್ತಾನಕ್ಕೆ ವಲಸೆ ಹೋದರು. ಧರ್ಮದ ದುರಭಿಮಾನವಿಲ್ಲದೆ ಪ್ರಾಂಜಲ ಮನಸ್ಸಿನ ಬದ್ಧ ಖಾಧಿದಾರ ಕೆ. ಹೈದರರು ಪಾ.ವೆಂ. ಅವರ ಮನದಲ್ಲಿ ಸದಾ ಇದ್ದರು. ೧೯೪೦ರ ಕಾಲ ಹೊನ್ನಯ್ಯ ಶೆಟ್ಟರು ಅಂತರಂಗ ಪತ್ರಿಕೆಯನ್ನು ವಹಿಸಿಕೊಂಡಿದ್ದರು. ಪ್ರಥಮ ನಗೆ ಬರಹ, ಕಥೆ ಮತ್ತು ಅನುವಾದಗಳು ಬೆಳಕು ಕಂಡದ್ದು ಇಲ್ಲಿಯೇ. **ಅಂತರಂಗ** ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಪಾ.ವೆಂ. ಇದ್ದುದರಿಂದ 'ಜನಪ್ರಿಯ ಬರವಣಿಗೆ' ಹೇಗಿರಬೇಕೆಂಬ ಅನುಭವ ಸಿಕ್ಕಿತು. ಎಲ್ಲಕ್ಕಿಂತ ಹೆಚ್ಚಾಗಿ ಪಣಿಯಾಡಿಯವರ ಕ್ರಾಂತಿಕಾರರ ವಿಚಾರಗಳು ಮನಸ್ಸಿನ ಅಧಿಕಾಂಶ ವೈದಿಕ ಬೇಡಿಕೆಗಳಾದ, ವೈದಿಕರ ಜಡತೆ, ಸಂಕುಚಿತತೆ, ಮಡಿವಂತಿಕೆಯ ತೋರಿಕೆಗಳನ್ನು ಬಿಚ್ಚಿ ಹಾಕಿದ್ದವು ಮತ್ತು ವಹಿಸಿಕೊಂಡ ಜವಾಬ್ದಾರಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದೂ, ದಿನಕ್ಕೆ ಹದಿನಾರು-ಹದಿನೆಂಟು ಗಂಟೆ ದುಡಿಯುವುದು ಪಾ.ವೆಂ. ಅವರಿಗೆ ಅಭ್ಯಾಸವಾಗಿತ್ತು.

ಮದ್ರಾಸಿನಲ್ಲಿಯೂ ಒಳ್ಳೆಯ ಕೆಲಸಗಾರರೆಂದು ಮನ್ನಣೆಯೂ ಸಿಕ್ಕಿತು. ೧೯೪೧ರಲ್ಲಿ ೨ನೇ ಮಹಾಯುದ್ಧದ ಕಾಲ ಪೂರ್ವಕರಾವಳಿಗೆ ಬಾಂಬು ಬೆದರಿಕೆ ಹಾಕಿದ್ದರು. ಮದ್ರಾಸನ ಜನವ್ಯವಸ್ಥೆ ಕೋಲಾಹಲದಲ್ಲಿ ಮುಳುಗಿತ್ತು. ದಿನಕ್ಕೆ ೨೫,೦೦೦ದಂತೆ ಜನ ಪಟ್ಟಣ ತ್ಯಾಗ ಮಾಡಿದರು. ಪಾ.ವೆಂ. ಅವರ ಹೆಂಡತಿಯ ಅಣ್ಣಂದಿರು ಧಾರವಾಡದಲ್ಲಿ ಹೋಟೆಲ್ ಪ್ರಾರಂಭಿಸಿದರು. ಮದ್ರಾಸು ಅಪಾಯಕಾರಕವೆಂದು ಧಾರವಾಡಕ್ಕೆ ಬರಲು ಒತ್ತಾಯಿಸಿದರು. ಮದ್ರಾಸು ಹೋಟೆಲುಗಳ ಭವಿಷ್ಯ ಕರಾಳವೆನಿಸಿತ್ತು ಹೀಗೆ ಪಾ.ವೆಂ. ಧಾರವಾಡಕ್ಕೆ ಆಗಮಿಸಿದರು.

೧೯೪೦ರ ದಶಕದ ಆರಂಭದಲ್ಲಿ ಪಾ.ವೆಂ. ಅವರು ಜೀವನೋಪಾಯವನ್ನು ಅರಸಿಕೊಂಡು ಹುಬ್ಬಳ್ಳಿಗೆ ಕಾಲಿಟ್ಟರು. ತಮ್ಮ ಬಂಧುಗಳಾದ ಧಾರವಾಡ ರೆಸ್ಟೋರೆಂಟ್‌ನಲ್ಲಿ ಕೆಲವು ದಿನ ತಮ್ಮ ಕೆಲಸವನ್ನು ಪೂರೈಸಿದರು. ಅಲ್ಲಿ ನಡೆಯುತ್ತಿರುವ ಸಾಹಿತಿಗಳ ಸಂವಾದ ಚರ್ಚೆಯಲ್ಲಿ ನಿತ್ಯವು ಭಾಗವಹಿಸಿ ಎಲ್ಲರ ಗಮನವನ್ನೂ ಸೆಳೆದಿದ್ದರು. ಮೊಹರೆ ಹನುಮಂತರಾಯರು ಹ.ರಾ. ಪುರೋಹಿತರೂ ಆಚಾರ್ಯರ ಪ್ರತಿಭೆಯನ್ನು ಗುರುತಿಸಿ ಹುಬ್ಬಳ್ಳಿಯ **ಸಂಯುಕ್ತ ಕರ್ನಾಟಕ**ಕ್ಕೆ ಸೇರಿಸಿದ್ದರು. ಪಾ.ವೆಂ. ಅವರ ಬರವಣಿಗೆಗಳಿಗೆ ಅಖಿಲ ಕರ್ನಾಟಕ ವ್ಯಾಪ್ತಿ ದೊರೆಯಿತು. ಅವರು ದಕ್ಷಿಣ ಕನ್ನಡದ

ಕಲಿಕೆ ಕನ್ನಡ ಶೈಲಿಯನ್ನು ವಿಸರ್ಜಿಸಿ ಎರಸೀಮೆಯ ಜೋಳದ ಕಡ್ಡಿಯಂತೆ ಹೃಷ್ಟ ಪುಷ್ಟವಾಗಿರುವ ಕನ್ನಡವನ್ನು ರೂಢಿಸಿಕೊಂಡರು. ಪಾ.ವೆಂ. ಬರಹದಂತೆ ಬರೆಯಲು ಬಂದರೆ ಎಂದು ಇತರರು ಆಶೀಸುವ ಮಟ್ಟಕ್ಕೆ ಅವರು ಅದನ್ನು ಎತ್ತರಿಸಿದರು. ಉತ್ತರ ಕರ್ನಾಟಕದ ಗದ್ಯ-ಒರಟು ಶೈಲಿಯನ್ನು ಅಚ್ಚಕನ್ನಡದಲ್ಲಿ ಪಾ.ವೆಂ. ಮೃದುವಾಗಿಸಿದರು.

ಆ. ಗುಪ್ತನಾಮಗಳು (Pseudonym):

೧೯೫೬ರಲ್ಲಿ ಕಸ್ತೂರಿ ಪ್ರಾರಂಭವಾದಾಗಿನಿಂದ ನಿರಂತರ ೧೮ ವರ್ಷಗಳ ಕಾಲ ಅದರ ಸಂಪಾದಕತ್ವದ ಜವಾಬ್ದಾರಿಯನ್ನು ಹೊತ್ತ ಪಾ.ವೆಂ. ಅದನ್ನು ಸರ್ವಾಂಗ ಸುಂದರವಾಗಿ ರೂಪಿಸುವಲ್ಲಿ ವಹಿಸಿದ ಆಸಕ್ತಿ ಅವಿರತ ಶ್ರಮಗಳಿಗೆ ಎಣೆಯಿಲ್ಲ. ಬಹುಬಾಷಾತಜ್ಞರಾದ ಪಾ.ವೆಂ. ಸಂಸ್ಕೃತ, ಕನ್ನಡ, ತುಳು, ಇಂಗ್ಲೀಷ್, ಹಿಂದಿ, ಮರಾಠಿ, ಬಂಗಾಳಿ, ತಮಿಳು ಮತ್ತು ಮಲೆಯಾಳಿ ಹೀಗೆ ಭಾಷೆಗಳಲ್ಲಿನ ಅಧ್ಯಯನ ಯೋಗ್ಯ ಲೇಖನವೂ ಅವರ ಗರುಡ ದೃಷ್ಟಿಗೆ ಬೀಳದೆ ಹೋಗುತ್ತಿರಲಿಲ್ಲ. ಪತ್ರಿಕೆಯ ಗುಣಮಟ್ಟವನ್ನು ಕಾಯುವಲ್ಲಿ ಎಂದಿಗೂ ರಾಜಿಗಿಳಿಯುತ್ತಿರಲಿಲ್ಲ. ಸ್ಪಷ್ಟವಾದ ನೇರ ಪಾರದರ್ಶಕತ್ವದಿಂದ ಕೂಡಿದ ವಿಚಾರವಂತಿಕೆ ಪಾ.ವೆಂ. ಅವರದಾಗಿತ್ತು. **ಪದಾರ್ಥಚಿಂತಾಮಣಿ**ಯಂಥಹ ಶಾಸ್ತ್ರಸಾಹಿತ್ಯವನ್ನು ಪ್ರಕಟಿಸು- ವಲ್ಲಿ ತೋರಿಸುತ್ತಿದ್ದ ಮುತುವರ್ಜಿಯನ್ನು ಇತರ ವಿಷಯಗಳಾದ ರಾಜಕೀಯ, ಸಾಮಾಜಿಕ, ವೈಜ್ಞಾನಿಕ, ವೈಚಾರಿಕ ಲೇಖನಗಳ ಕೊರತೆಯಿದ್ದಾಗ ಅವರು ಒಂದೇ ಸಂಚಿಕೆಯಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಲೇಖನಗಳನ್ನು ತಾವೇ ಸ್ವತಃ ಬರೆದು ಪತ್ರಿಕೆಯ ಗುಣ ಗೌರವವನ್ನು ಕಾಪಾಡಿದ್ದಾರೆ. ಪತ್ರಿಕೆ ಬಿಡುಗಡೆಯಾಗುವ ಸಂದರ್ಭದಲ್ಲಿ ಏನೇ ಕಷ್ಟದ ಸನ್ನಿವೇಶಗಳು ಬಂದರು ತಾವೇ ನಿಭಾಯಿಸಿ ಪತ್ರಿಕೆಯನ್ನು ಉತ್ತಮವಾಗಿ ಬಿಡುಗಡೆಗೊಳಿಸಿ ಓದುಗರ ಮನವನ್ನು ಪಾ.ವೆಂ. ಅವರು ಗೆದ್ದಿದ್ದಾರೆ. ಪಾ.ವೆಂ. ಅವರ ವ್ಯವಸಾಯಕ್ಕೆ ಮಾನ್ಯತೆ **ಕಸ್ತೂರಿಗೆ** ಮೂರು ವರ್ಷವಾಗುವುದರೊಳಗೆ ಸಿಕ್ಕಿತ್ತು. ಹದಿನೆಂಟು ವರ್ಷಗಳ ಈ ಇನ್ನೂರ ಇಪ್ಪತ್ತೆರಡು ಸಂಚಿಕೆಗಳನ್ನು ಓದು ಅಧ್ಯಯನಕ್ಕೆ ಒಳಪಡಿಸಿದಾಗ ಆಚಾರ್ಯರ ಸಂಪಾದನ ಕೌಶಲ, ಸಂಪಾದಕ ಕಚೇರಿಯ ಸಮರ್ಥ ನಿರ್ವಹಣೆ, ಪ್ರಸಾರದ ಸತತ ಬೆಳವಣಿಗೆಗಾಗಿ ಅನುಸರಿಸಿದ ಪ್ರಯೋಗಶೀಲತೆ ಮತ್ತು ಸ್ವತಃ ಬೇರೆ ಬೇರೆ ಹೆಸರುಗಳು ಹೀಗಿವೆ. **ಲಾಂಗೂಲಾಚಾರ್ಯ-(ಹರಟೆ ಲೇಖಕ) ಮುರಳೀಧರರಾವ್-ಮುರಳೀದರ, ರಾಧಾಕೃಷ್ಣರಾವ್-ರಾಧಾಕೃಷ್ಣ, ರಮಾನಂದ, ರಮಾರಮಣ ರಾಘವೇಂದ್ರ, ವಿಚಾರಿ, ಸಾಗರತನಯಾ (ಲಕ್ಷ್ಮೀ), ಪಿ. ಲಕ್ಷ್ಮೀಬಾಯಿ, ರಮಾತನಯ, ಪರಶುರಾಮ, ಶ್ರೀಶ, ವಿಜ್ಞಾನಭಕ್ತ, ಗಣಿತಪ್ರಿಯ, ಆಕಾಶನೀರಿಕ್ಷಕ, ಭಾಷಾಬ್ಯಾಸಿ, ಮನೋವಿಜ್ಞಾನಿ, ಅಜ್ಞಾತ, ಕೃಷ್ಣಮೂರ್ತಿ, ಹನುಮಂತಪ್ಪ, ನಿವೃತ್ತ ಶಿಕ್ಷಕ** ಮುಂತಾಗಿ ಬರೆದು ಸರ್ವಾಂಗ ಸುಂದರವೂ

ವಾಚಾನೀಯವೂ ಆಗುವಂತೆ ರೂಪಿಸಿದ ಸಾಧನೆ ಕನ್ನಡ ಪತ್ರಿಕಾ ವ್ಯವಸಾಯದಲ್ಲಿ ಅಪೂರ್ವವಾದುದು. ಇಲ್ಲಿಯ ಹೆಸರು ಕೆಲವು ಮಕ್ಕಳ ಮತ್ತು ಮಡದಿಯ ಹೆಸರುಗಳಾಗಿದ್ದವೂ ಕೆಲವೊಮ್ಮೆ. ತಮ್ಮ ವಾಚನದ ಅಭಿರುಚಿಗೆ ತಕ್ಕಂತೆ ಪೂರಕವಾದ ಹೆಸರುಗಳನ್ನ ಬರೆಯುತ್ತಿದ್ದರು. ಓದುಗರಿಗೆ ಮಾತ್ರ ಇವು ವಿವಿಧ ಲೇಖಕರ ಹೆಸರುಗಳೆಂದೆ ತಿಳಿದಿದ್ದರು. **ಕರ್ಮವೀರ** ಮತ್ತು **ಕಸ್ತೂರಿ**ಯಲ್ಲಿ ಲಾಂಗೂಲಾಚಾರ್ಯ ಎನ್ನುವ ಹೆಸರು **ಶ್ರೀರಂಗರದೇ** ಎಂದು ಜನ ತಿಳಿದಿದ್ದರು.

೧೯೫೭ ಜನವರಿ ಸಂಚಿಕೆ ಐದರಲ್ಲಿ ಬರೆದಿರುವ **ಚಿನ್ನದ ಶೋಧ** ಪರಶುರಾಮ ಎನ್ನುವ ಗುಪ್ತನಾಮದಿಂದ ಬರೆಯಲಾಗಿದೆ. ೧೯೫೭ ಜೂನ್ **ಧೂಮಕೇತುಗಳು, ಆಕಾಶನೀರಿಕ್ಷಕ** ಖಗೋಳ ವಿಜ್ಞಾನದ ಬಗೆಗೆ ಬರೆದಿರುವ ಲೇಖನ, ಮಹಾವೀರ ತ್ಯಾಗಿ–ಸರ್ವೇಕ್ಷಣ ಎನ್ನುವ ಹೆಸರಿನಿಂದ ವ್ಯಕ್ತಿ ಚಿತ್ರಣವನ್ನು ಕಾಣುತ್ತೇವೆ. ೧೯೫೯ ಏಪ್ರಿಲ್‌ನಲ್ಲಿ 'ಆರ್ಯ ಭಾಷೆಗಳ ಮೂಲ ಪುರುಷರು' , 'ಭಾಷಾಭ್ಯಾಸಿ' ಎನ್ನುವ ಗುಪ್ತನಾಮದಲ್ಲಿ ಭಾಷೆಯ ಪ್ರಾಚೀನತೆಯ ದರ್ಶನವನ್ನೇ ನೀಡುತ್ತಾರೆ. ೧೯೫೯ ಜನವರಿಯಲ್ಲಿ 'ವಿಶ್ವಭಾಷೆ ಎಸ್ಪರೇಂಟೊ'–'ರಾದಾಕೃಷ್ಣ' ಎನ್ನುವ ಹೆಸರಿನಲ್ಲಿ ಭಾಷಾಜ್ಞಾನದ ಪರಿಚಯದೊಂದಿಗೆ ವಿಶ್ವಕ್ಕೆ ಒಂದೇ ಬಾಷೆ ಇರಲಿ ಆಶಯವನ್ನು ವ್ಯಕ್ತಪಡಿಸಿದ್ದಾರೆ. ೧೯೭೩ ಜನವರಿ ಸಂಚಿಕೆಯಲ್ಲಿ ಬಂದಿರುವ **ಈ ಪಾಟೀಲರು ಯಾರು ಶ್ರೀನಿವಾಸಪ್ಪ** ಎನ್ನುವ ನಾಮದಿಂದ ಬರೆದು ಲೇಖನ ನಾಮ ವಿಜ್ಞಾನದ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. 'ಪಾಟೀಲ' ಎನ್ನುವ ಹೆಸರಿನ ಹುಟ್ಟು ಬೆಳವಣಿಗೆ ಶಂಬಾ ಜೋಶಿಯವರೊಡನೆ ಚರ್ಚಿಸಿ ಬರೆದ ಅಧ್ಯಯನ ಯೋಗ್ಯ ಲೇಖನ ಪಾ.ವೆಂ. ಅವರ ಬರವಣಿಗೆ, ವಿಷಯ ಆಯ್ಕೆ ಶೈಲಿಯಿಂದ ಪಾ.ವೆಂ. ಅವರದೇ ಎಂದು ಖಚಿತವಾಗಿ ನಿರ್ಧರಿಸಬಹುದು. ಈ ರೀತಿಯಿಂದ ದಶದಿಕ್ಕುಗಳ ಕಡೆಗೆ ಗಮನ ಹರಿಸಿ ಬರೆಯುವ ಮತ್ತು ವಿವಿಧ ಗುಪ್ತನಾಮಗಳಿಂದ ಅವರ ವಿಚಾರವಂತಿಕೆ, ಕಸ್ತೂರಿ ಪತ್ರಿಕೆಯ ಗುಣಗೌರವ ಅರಳುವ ರೀತಿಯನ್ನು ಕಾಣುತ್ತೇವೆ.

ಪತ್ರಿಕೆಯ ಗುಣಧರ್ಮಕ್ಕನುಗುಣವಾಗಿ ವಿವಿಧ ನಾಮರೂಪಗಳಿಂದ ಲೇಖನಗಳನ್ನು ಬರೆದು, ಸಂಪಾದಕನ ಕೌಶಲ, ಸಮರ್ಥ ಜವಾಬ್ದಾರಿಯನ್ನು ಕಾಯ ವಾಚ ಮನಪೂರ್ವಕವಾಗಿ ನಿರ್ವಹಿಸಿದ್ದಾರೆ. ಕಸ್ತೂರಿ ಪ್ರಸಾರಕ್ಕಾಗಿ ಅದರ ಬೆಳವಣಿಗೆಗಾಗಿ ಅನುಸರಿಸಿದ ಪ್ರಯೋಗಶೀಲತೆಯನ್ನು ಅನುಬಂಧದ 'ಕಸ್ತೂರಿಯ ಲೇಖನ ಸೂಚಿಯಲ್ಲಿ ನೋಡಬಹುದು.

ಪತ್ರಿಕೋದ್ಯಮಿಯಾಗಿ ಪತ್ರಕರ್ತನಿಗಿರಬೇಕಾದ ಅರ್ಹತೆಗಳು ಪಾ.ವೆಂ. ಅವರಲ್ಲಿತ್ತು. ಪತ್ರಿಕೆಗಳನ್ನು ತಯಾರಿಸುವ ಪತ್ರಕರ್ತನ ಮೇಲೆ ಗುರುತರವಾದ ಹೊಣೆ ಇರುವುದು ಮತ್ತು ಅದನ್ನು ನಿಭಾಯಿಸುವ ಅರ್ಹತೆಗಳು ಇರಬೇಕಾದದ್ದು ಸಹಜ. ಈ ಮಾತು ಬರುವ ಮೊದಲೇ ದೇಶದಲ್ಲಿ ನೂರಾರು ಪತ್ರಿಕೆಗಳು ಹಾಗೂ ಅನೇಕ ಸಮರ್ಥ

ಯಶಸ್ವಿ ಸಂಪಾದಕರು ಇತಿಹಾಸದಲ್ಲಿ ಸೇರಿಹೋಗಿದ್ದಾರೆ. ಬ್ರಿಟೀಷ್ ಆಡಳಿತದ ವಿರುದ್ಧ ಹಾಗೂ ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳ ವಿರುದ್ಧ ಹೋರಾಡುವ ಛಲ ಮತ್ತು ಬಲ ಇವೆರಡೇ ಅರ್ಹತೆಗಳಾಗಿದ್ದ ಕಾಲವದು. ಇದೊಂದು ವೃತ್ತಿಯೆಂದು ಪರಿಗಣಿಸಲ್ಪಟ್ಟಾಗ ಅರ್ಹತೆ ತರಬೇತಿ ಪೂರ್ವಾನುಭವ ಎಂಬ ಶಬ್ದಗಳಿಗೆ ಬೆಲೆ ಬರತೊಡಗಿತು. ಆದರೆ ತರಬೇತಿ ಪಡೆದವರೇ ಯಶಸ್ವಿ ಪತ್ರಕರ್ತರಾಗುತ್ತಾರೆಂದು ಭರವಸೆ ಇಲ್ಲ. ವೃತ್ತಿ ತರಬೇತಿ ಕಾಲೇಜು ಕಟ್ಟೆಯನ್ನೇ ಹತ್ತದೇ ಇದ್ದವರೂ ಯಶಸ್ವಿ ಪತ್ರಕರ್ತರಾಗಿ ಹೊರ ಹೊಮ್ಮಿದ ನೂರಾರು ಉದಾಹರಣೆಗಳಿವೆ. ಮಹಾತ್ಮ ಗಾಂಧೀಜಿ, ಬಾಲಗಂಗಾಧರ ತಿಲಕ್ ತರಬೇತಿ ಇಲ್ಲದವರೆಂಬುದು ಗಮನಾರ್ಹ. ಭಾರತೀಯ ಪತ್ರಿಕೋದ್ಯಮದ ಜನಕನೆಂದು ಹೆಸರಾಗಿದ್ದ ಜೇಮ್ಸ್ ಆಗಸ್ಟಸ್ ಪತ್ರಿಕೆಯನ್ನು ಹುಟ್ಟು ಹಾಕಿ ಪತ್ರಕರ್ತರಾಗಬೇಕೆಂಬ ಉದ್ದೇಶವೆ ಇರಲಿಲ್ಲ. ಬ್ರಿಟೀಷರ ಆಡಳಿತದಲ್ಲಿ ಹಾಸುಹೊಕ್ಕಾಗಿದ್ದ ಭ್ರಷ್ಟಾಚಾರವನ್ನು ಬಯಲಿಗೆಳೆಯಲು **'ಬೆಂಗಾಲ ಗೆಜೆಟ್'** ಆರಂಭಿಸಿದನು. ಭಾರತದ ಶ್ರೇಷ್ಟ ಸಂಪಾದಕ ಫ್ರೀಪ್ರೆಸ್ ಜರ್ನಲ್ ಸ್ಥಾಪಕ ಪಿ.ಸದಾನಂದ, ಕರ್ನಾಟಕ ಕಸ್ತೂರಿ ಪತ್ರಿಕೆಯ ರೂವಾರಿ ಪಾ.ವೆಂ. ಆಚಾರ್ಯ, ಡಿವಿಜಿ, ಮೊಹರೆ ಹನುಮಂತರಾಯ, ಖಾದ್ರಿಶ್ಯಾಮಣ್ಣ ಕಾಲೇಜು ಶಿಕ್ಷಣ ಪಡೆದವರಲ್ಲ. ಈ ಮಹನೀಯರು ಪತ್ರಿಕೋದ್ಯಮವಲ್ಲದೇ ಬೇರೆ ಯಾವ ವೃತ್ತಿಯನ್ನು ಅರಸಿಹೋದವರಲ್ಲ.

ಪಾ.ವೆಂ. ಅವರ ಕೈಯಲ್ಲಿ ಪರಿಪಕ್ವವಾದ ಗದ್ಯ ಸೃಷ್ಟಿಯಾಗುತ್ತಿತ್ತು. ಅದು ಅವರ ಬರವಣಿಗೆಯ ಶೈಲಿಗಿಂತಲೂ ಅದು ಅವರ ಚಿಂತನ ಶೈಲಿ ಜೀವನ ಶೈಲಿಯ ಪ್ರತಿಬಿಂಬ ಬಹುಶಃ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸಮಷ್ಟಿ ರೂಪದಲ್ಲಿ ಚಿಂತನಶೀಲರಾಗಿರುವ ಸಾಹಿತಿಗಳನ್ನು ಗುರುತಿಸಬೇಕಾದರೆ ಶಿವರಾಮ ಕಾರಂತರನ್ನು ಮೊದಲ ಹೆಸರಾಗಿ ಬಳಸುತ್ತೇವೆ. ಇನ್ನೊಂದು ಹೆಸರು ಬೇಕಿದ್ದರೆ ಪಾ.ವೆಂ. ಅವರನ್ನೇ ಹೆಸರಿಸಬೇಕು. **ಕಸ್ತೂರಿ**ಯ ನಿಜವಾದ ಸಂಪಾದಕತ್ವ ಒದಗಿದ ಮೇಲೆ ೧೯೫೬ ಸೆಪ್ಟೆಂಬರ್‌ನಿಂದ ಪಾ.ವೆಂ. ಅವರ ವಿಸ್ತೃತ ಓದುಗಾರಿಕೆ ಅನಿವಾರ್ಯವಾಯಿತು. ಅನುವಾದ, ಸಂಗ್ರಹ, ಶೀರ್ಷಿಕೆ ರೀಡರ್ ಆಗಬೇಕಾದರೆ ಪಾ.ವೆಂ. ಅವರನ್ನು ಮೊರೆ ಹೋಗಬೇಕೆಂಬುದು **ಸಂಯುಕ್ತ ಕರ್ನಾಟಕ**ದಲ್ಲಿ ಮಾತಾಗಿತ್ತು. ತಾನಾಗಿ ವಿಷಯಗಳು ಅನುವಾದಗೊಂಡು ಸಂಗ್ರಹರೂಪದಲ್ಲಿ ಪಾ.ವೆಂ. ಅವರ ಮೆದುಳಿನ ಕಂಪ್ಯೂಟರ್‌ನಲ್ಲಿ ಬಿಂಬಿಸುತ್ತವೆ. ಆ ಪ್ರಯತ್ನ ಸಹಿತ, ಗ್ರಹಿತವಾದ ಇಂತಹ ಗದ್ಯವೇ ಪಾ.ವೆಂ. ಅವರ ಕಾಣಿಕೆ. ನಿರಂತರ ಓದು, ಪರಕೀಯ ವಿಚಾರ ಇವುಗಳಿಗೆ ಸಮಾನಾಂತರವಾಗಿ ಪಾ.ವೆಂ. ಚಿಂತನೆಯನ್ನು ನಡೆಸಿದ್ದಾರೆ. ರಾಜಕೀಯದಲ್ಲಿ ಆರ್ಥಿಕ ಅಸಮಾನತೆ-ಸಮಾನತೆಗಳ ಸಂಘರ್ಷದಲ್ಲಿ ಪ್ರಕ್ಷುಬ್ಧ ರಾಜಕಾರಣದಲ್ಲಿ, ನಗರ ಗ್ರಾಮ ಜೀವನದ ವ್ಯತ್ಯಾಸಗಳಲ್ಲಿ, ಸಾಹಿತ್ಯ ನೋಟ ವಿಮರ್ಶೆಯ ಒಳನೋಟಗಳಲ್ಲಿ, ಸಮತೂಕದ ಸಾಕಲ್ಯದ ದೃಷ್ಟಿಯಿಂದ ತನ್ನದೇ ಆದ ನೆಲೆಯಿಂದ ಪಾ.ವೆಂ. ಚಿಂತಿಸಬಲ್ಲರು. ವಿಜ್ಞಾನ ಸಮಾಜಶಾಸ್ತ್ರ,

ಇತಿಹಾಸ, ಶಿಲ್ಪಶಾಸ್ತ್ರ, ಕನ್ನಡ, ಹಿಂದಿ, ಇಂಗ್ಲೀಷ್, ಬಂಗಾಳಿ ವ್ಯವಹಾರಿಕ ರಾಜಕೀಯ ಕನ್ನಡಿಗರ ಧೀಮಂತಿಕೆ ಧೂರ್ತತೆ ಮೂರ್ಖತೆ ಎಲ್ಲವನ್ನು ಅವರು ಉದಾರ ಚಿತ್ತವೃತ್ತಿಯಿಂದ ತಬ್ಬಿಕೊಳ್ಳಬಲ್ಲರು. ನಿರ್ಲಿಪ್ತತೆಯಿಂದ ನಿಮಗೆ ಅರ್ಥವನ್ನು ಹೇಳಿ ನಂಬಿಸಬಲ್ಲರು. ಪಾ.ವೆಂ. ಜೊತೆ ಮಾತನಾಡಿ ಬರುವುದು ಎಂದರೆ ಒಂದ ಸಲ ಕಣ್ತೆರೆದು ವಿಶ್ವಪರ್ಯಟನೆ ಮಾಡಿದಂತೆ ಎನ್ನುವ ಅನುಭವ ಮಾತು ಪಾ.ವೆಂ. ಸಮಕಾಲೀನರಾದ ಸಹೋದ್ಯೋಗಿಗಳ ಮಾತು. ಸ್ವತಂತ್ರ್ಯ ಭಾರತೀಯ ಪ್ರಣಾಳಿಯ ಬಗ್ಗೆ ಆಸಕ್ತಿ ಅನುಭವವುಳ್ಳ ಪಾ.ವೆಂ.ಗೆ ನಮ್ಮ ನಾಡಿನ ಲೋಪದೋಶಗಳ ಸ್ಪಷ್ಟ ಗೋಚರವಿತ್ತು. ನಾವು ಆಧುನಿಕರಾಗದೆ ಪರಿಸ್ಥಿತಿಗೆ ತಕ್ಕ ಬದಲಾಗದೇ ಅನ್ಯ ಮಾರ್ಗವಿಲ್ಲ ಎಂಬುದು ಅವರಿಗೆ ಖಚಿತವಾಗಿತ್ತು. ಅನ್ಯರ ತಿಳುವಳಿಕೆ ಹೆಚ್ಚಾಗದೇ ನಾಯಕತ್ವದ ಮೂರ್ಖತೆ ಕಡಿಮೆಯಾಗದು ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಇದು ಅವರ ವಿಚಾರ ಸಾಹಿತ್ಯದಲ್ಲೂ ಮೂಡಿ ಬಂದಿದೆ. ದೇಶದ ಟೊಳ್ಳು ಗಟ್ಟಿ ಎರಡನ್ನೂ ಅವರ ಪರಾಂಭಿಸಿ ವಿಡಂಬಿಸುವುದನ್ನು ಹರಟೆ ಸಾಹಿತ್ಯದಲ್ಲಿ ಕಾಣುತ್ತೇವೆ.

ಇ. ಕನ್ನಡ ಪತ್ರಿಕಾರಂಗ

ಕನ್ನಡ ನಾಡು ಮತ್ತು ಕನ್ನಡ ಭಾಷೆ ಐತಿಹಾಸಿಕ ಕಾರಣಗಳಿಂದ ಹಾಗೂ ಬ್ರಿಟೀಷ್ ಆಡಳಿತದ ಕುಟಿಲ ನೀತಿಯಿಂದಾಗಿ ನಾಲ್ಕು ಭಾಗಗಳಾಗಿ ಒಡೆದು ಹೋಗಿ ಸ್ಥಳೀಯ ಪ್ರಭಾವಕ್ಕೆ ಒಳಪಟ್ಟರೂ ಕನ್ನಡ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಸರಕಾರದ ದಾಖಲೆಗಳಲ್ಲಿ ಕನ್ನಡ ಇಲ್ಲವಾದರೂ ಜನತೆಯ ಬಾಯಿಯಲ್ಲಿ ಆಡುಭಾಷೆಯಾಗಿ ಕನ್ನಡ ನಿಂತಿದೆ. ಶತಮಾನಗಳ ಕಾಲ ಪರನಾಡು, ಪರಕೀಯರ ಆಶ್ರಯ ಹಾಗೂ ಪ್ರಭಾವದಲ್ಲಿ ಬದುಕಿದ ಕಾರಣ ಆಡು ಭಾಷೆಯಲ್ಲಿ ವೈವಿಧ್ಯ ಉಳಿದಿದೆ. ಏಕತಂತ್ರ ಕರ್ನಾಟಕದ ಬೀಜ ಮೊಳೆತಂದು ಉತ್ತರ ಕರ್ನಾಟಕದಲ್ಲಿ ದಕ್ಷಿಣ ಭಾಗದಲ್ಲಿ ಸಂಸ್ಥಾನದ ಪ್ರಜೆಗಳ ಹಿತರಕ್ಷಣೆ, ಜವಾಬ್ದಾರಿ ಸರಕಾರ ಜಾರಿಗೆ ತರುವ ಪ್ರಯತ್ನಗಳಿಗೆ ಅದ್ಯತೆ ಇತ್ತು. ಆಗಿನ ಕಾಲದಲ್ಲಿ ಕನ್ನಡ ಭಾಷಾ ಪ್ರೇಶಗಳಲ್ಲಿ ಪತ್ರಿಕೆಗಳು ಏಕಕಾಲಕ್ಕೆ ಆರಂಭವಾಯಿತು. ಉತ್ತರ ಕರ್ನಾಟಕದಲ್ಲಿ ಮಾತ್ರ ರಾಷ್ಟ್ರೀಯ ಚಳುವಳಿಯ ಪ್ರಭಾವದಿಂದ ಕರ್ನಾಟಕದ ಏಕೀಕರಣ ಹಾಗೂ ಭಾರತದ ಸ್ವಾತಂತ್ರ್ಯ ಅಂದಿನ ಪತ್ರಿಕೆಗಳ ಎರಡು ಗುರಿಗಳಾಗಿದ್ದವು. ಕನ್ನಡ ಭಾಷಾ ಪ್ರದೇಶಗಳಲ್ಲಿ ಕನ್ನಡ ಮುದ್ರಣ ಮತ್ತು ಪತ್ರಿಕಾ ಪ್ರಕಾಶನ ಮೊದಲು ಆರಂಭವಾದದದು, ಕ್ರಿಶ್ಚಿಯನ್ ಧರ್ಮಪ್ರಸಾರದ ಉದ್ದೇಶದಿಂದ ಇದಕ್ಕೆ ಪ್ರತಿಸ್ಫರ್ಧಿಯಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ಸಾಧನವಾಗಿ ಪತ್ರಿಕೆಗಳು ಹುಟ್ಟಿದ್ದು ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ. ಭಾಷಾವಾರು ಪ್ರಾಂತ್ಯ ರಚನೆಯಾದ ಬಳಿಕ ಕನ್ನಡಕ್ಕೆ ಹೆಚ್ಚು ಸ್ಥಾನ ದೊರೆಯಿತು. ಬ್ರಿಟಿಷರಿಗಿಂತ ಮೊದಲು ಆಳಿದ ಅರಸರು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿಟ್ಟಿದ್ದರು. ಗಂಗರು, ಕದಂಬರು, ಚಾಲುಕ್ಯರು, ಹೊಯ್ಸಳರು, ರಾಷ್ಟ್ರಕೂಟರು ಎಲ್ಲರಿಗಿಂತ ಮಿಗಿಲಾಗಿ

ವಿಜಯನಗರದ ಅರಸರು ಕನ್ನಡದ ಅಭಿವೃದ್ಧಿಗೆ ಹೆಚ್ಚು ಪ್ರಾಶಸ್ತ್ಯ ನೀಡಿದರು. ಮಹಾರಾಷ್ಟ್ರ, ಕೇರಳ, ತಮಿಳುನಾಡು ಆಂದ್ರಗಳು ಕನ್ನಡದ ನೆಲೆಗಳಾಗಿದ್ದ ಪ್ರದೇಶಗಳಾಗಿದ್ದವರು. ಆಗಿನ ಕನ್ನಡ ಪತ್ರಿಕೆಗಳು ಈ ಪ್ರದೇಶದಲ್ಲಿ ಹುಟ್ಟಿ ಸತ್ತುಹೋಗಿರುವ ದಾಖಲೆಗಳಿವೆ. ಹರಿದು ಹಂಚಿ ಹೊಗಿದ್ದ ನಾಡಿನಲ್ಲಿ ಅದೂ ಮಣ್ಣಿನ ಗುಣಕ್ಕನುಗುಣವಾಗಿ ಪತ್ರಿಕೆಗಳು ಹುಟ್ಟಿ ಬೆಳೆದವು. ರಾಜಕೀಯ ಹಾಗೂ ಸಾಮಾಜಿಕ ರಂಗದಲ್ಲಿ ಗಣ್ಯರಾದವರು ಈ ಪತ್ರಿಕೆಗಳನ್ನು ಪ್ರಾರಂಭಿಸಿದರು. ಉದಾಹರಣೆಗೆ ದಕ್ಷಿಣದಲ್ಲಿ ಡಿ.ವಿ.ಗುಂಡಪ್ಪ ಅವರು ಪತ್ರಿಕೆ ಪ್ರಪಂಚದ ನೇತಾರರಾಗಿದ್ದರು. ಉತ್ತರದಲ್ಲಿ ಮೊಹರೆ ಹನುಮಂತರಾಯರು ಪತ್ರಿಕೋಧ್ಯಮವು ಆಗ ಬಹಳ ಕಡೆಗಳಲ್ಲಿ ಒಂದು ವ್ಯಕ್ತಿಯಾಗಿರದೇ ಸ್ವಯಂ ಪ್ರೇರಿತ ಸೇವಾದೀಕ್ಷೆಯಾಗಿತ್ತು. ಆದರೆ ಬೇರೆ ಬೇರೆ ಪ್ರದೇಶಗಳಲ್ಲಿ ಹೊರಟ ಪತ್ರಿಕೆಗಳು ತಮ್ಮದೇ ಆದ ಧ್ಯೇಯ ಧೋರಣೆಯನ್ನು ಇಟ್ಟುಕೊಂಡಿದ್ದವು.

ಉತ್ತರ ಕರ್ನಾಟಕ ಕನ್ನಡ ಪತ್ರಿಕೋಧ್ಯಮದ ಬೆಳವಣಿಗೆ ಯಶಸ್ಸುಗಳಲ್ಲಿ ಹಳೆಯ ಮೈಸೂರು ಸಂಸ್ಥಾನದ ಸಾಧನೆಗೆ ಸರಿಸಮನಾದ ದಾಖಲೆ ಹೊಂದಿದೆ. ಬೆಂಗಳೂರಿನ ನಂತರ ಅತೀ ದೊಡ್ಡ ಕನ್ನಡ ಪತ್ರಿಕಾ ಕೇಂದ್ರ ಎಂದರೆ, ಹುಬ್ಬಳ್ಳಿ ಕನ್ನಡ ಪತ್ರಿಕಾ ರಂಗಕ್ಕೆ ಸ್ಥಿರತೆಯನ್ನು ಹಾಗೆ ರಾಷ್ಟ್ರಮಟ್ಟದಲ್ಲಿ ಪ್ರತಿಷ್ಠೆಯನ್ನು ತಂದುಕೊಟ್ಟ **ಸಂಯುಕ್ತ ಕರ್ನಾಟಕ** ವಜ್ರಮಹೋತ್ಸವವನ್ನು ಆಚರಿಸಿ ಮುನ್ನಡೆದಿದೆ. ನಂತರ ವಿಜಯ ಕರ್ನಾಟಕ, ಪ್ರಜಾವಾಣಿ, ಟೈಮ್ಸ್ ಆಫ್ ಇಂಡಿಯಾ, ಕನ್ನಡ ಪ್ರಭ, ಸಂಜೆವಾಣಿ, ಉದಯವಾಣಿ, ಡೆಕನ್ ಹೆರಾಲ್ಡ್, ದಿ ಟೈಮ್ಸ್ ಆಫ್ ಇಂಡಿಯಾ ಮೊದಲಾದ ಬೆಂಗಳೂರು ಮೂಲದ ದಿನಪತ್ರಿಕೆಗಳು ಹುಬ್ಬಳ್ಳಿಯಿಂದ ತಮ್ಮ ಆವೃತ್ತಿಗಳನ್ನು ಪಡೆದಿವೆ. ಪಾಟೀಲ್ ಪುಟ್ಟಪ್ಪನವರ **ಪ್ರಪಂಚ** ಹುಬ್ಬಳ್ಳಿಯದೇ ಆವೃತ್ತಿ. ಹುಬ್ಬಳ್ಳಿಯ ಇನ್ನೊಂದು ಪತ್ರಿಕೆ ಎಂದರೆ ರೀಡರ್ಸ್ ಡೈಜೆಸ್ಟ್ ಮಾದರಿಯ **ಕಸ್ತೂರಿ** ಕನ್ನಡದಲ್ಲಿ ಇದುವರೆಗೇ ಇದೊಂದೇ ಡೈಜೆಸ್ಟ್.

ಸಂಯುಕ್ತ ಕರ್ನಾಟಕ: ಸಂಯುಕ್ತ ಕರ್ನಾಟಕ ಎಂಬ ವಾರ ಪತ್ರಿಕೆಯನ್ನು ೧೯೨೯ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿಸಿದರು. ಇದನ್ನು ರಾಷ್ಟ್ರೀಯ ವಾಙ್ಮಯ ಟ್ರಸ್ಟ್ ಎಂದು ನೋಂದಾಯಿಸಲಾಯಿತು. ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಲು ದತ್ತೊಪಂತ ಬೆಳವಿ, ಬಳವಂತರಾವ್ ದಾತಾರ, ನಾರಾಯಣರಾವ್ ಜೋಶಿ, ಕೇಶವರಾವ್ ಗೋಖಲೆ ಮೊದಲಾದವರು ಈ ಪತ್ರಿಕೆಯ ಮೂಲ ಸಂಸ್ಥಾಪಕರು. ೧೯೩೩ರ ಏಪ್ರೀಲ್ ೨೭ರಂದು ವಾರಪತ್ರಿಕೆಯನ್ನು ದಿನಪತ್ರಿಕೆಯನ್ನಾಗಿ ಪರಿವರ್ತಿಸಿ, ಅದನ್ನು ಇನ್ನಷ್ಟು ಪರಿಣಾಮಕಾರಿ ಸಾಧನವನ್ನಾಗಿ ರೂಪಿಸಿದರು. 'ಕರ್ನಾಟಕ ವೈಭವ'ದ ಸಂಪಾದಕರಾಗಿದ್ದ ಮೊಹರೆ, ಹನುಮಂತರಾಯರು ೧೯೩೪ರಲ್ಲಿ ಬೆಳಗಾವಿಗೆ ಬಂದು **ಸಂಯುಕ್ತ ಕರ್ನಾಟಕ**ದ ಸಂಪಾದಕತ್ವ ವಹಿಸಿಕೊಂಡರು. ಆರ್ ಆರ್ ದಿವಾಕರ ಅವರ **ರಾಷ್ಟ್ರೀಯ ವಾಙ್ಮಯ ಪ್ರಕಾಶನ, ಲೋಕ ಶಿಕ್ಷಣ ಟ್ರಸ್ಟ್** ಆಗಿ ಇಂದಿಗೂ ಪತ್ರಿಕೆಯನ್ನು ಹೊರಡಿಸುತ್ತದೆ. ಕರ್ಮವೀರ ಮತ್ತು ಕಸ್ತೂರಿಗಳು ಈ ಟ್ರಸ್ಟ್‌ನ ಪ್ರಕಟಣೆಗಳೇ.

ಕರ್ಮವೀರ: ಇಪ್ಪತ್ತನೆಯ ಶತಮಾನದ ಮೊದಲ ಮೂರು ದಶಕಗಳು ಪತ್ರಿಕೋದ್ಯಮ ಹೊಸ ತಿರುವನ್ನು ಪಡೆದುಕೊಂಡ ಕಾಲ. ಧಾರವಾಡ ಬೆಳಗಾವಿ ಹಾಗೂ ಹುಬ್ಬಳ್ಳಿ ಈ ಹೊಸ ತಿರುವಿಗೆ ಕಾರಣ. ಸ್ವಾತಂತ್ರ್ಯ ಚಳುವಳಿಗೆ ಮತ್ತು ಕರ್ನಾಟಕ ಏಕೀಕರಣ ಸಾಧನೆಯ ದಿಸೆಯಲ್ಲಿ ದಾಪುಗಾಲು ಹಾಕಿದ ಪತ್ರಿಕೆ **ಕರ್ಮವೀರ.** ಗಾಂಧೀಜಿಯವರ ಪರಮ ಶಿಷ್ಯರಾದ ಕಬ್ಬೂರ, ಮಧ್ವರಾಯರು, ರಾಮರಾವ್ ಹುಕ್ಕೇರ ಹಾಗೂ ರಂ. ರಾ. ದಿವಾಕರರವರು ಸೇರಿ ೧೯೨೧ರ ಫೆಬ್ರವರಿ ಐದನೇ ತಾರೀಖು ಕರ್ಮವೀರದ ಸ್ವಂತ ಮುದ್ರಣಾಲಯವನ್ನು ಸ್ಥಾಪಿಸಿದರು. ಸಂಪಾದಕರೂ ವ್ಯವಸ್ಥಾಪಕರೂ, ಪ್ರಕಾಶಕರಾಗಿ ಮೊಳೆ ಜೋಡಿಸುವ ವಿತರಿಸುವ ಮುದ್ರಿಸುವ ಹೀಗೆ ಎಲ್ಲ ಕೆಲಸವನ್ನು ತ್ರಿಮೂರ್ತಿಗಳೇ ಸೇರಿಕೊಂಡು ನಡೆಸುತ್ತಿದ್ದರು. ಲೇಖನ ಕಾರ್ಯದಲ್ಲೂ ಪಾಲ್ಗೊಂಡಿದ್ದರು. ಹೀಗೆ ಜನಮನ್ನಣೆಗೆ ಪಾತ್ರವಾದ ಪ್ರಸಿದ್ಧ ಪತ್ರಿಕೆಯಾಯಿತು. ಬ್ರಿಟಿಷ್ ಸರಕಾರ ಇದನ್ನು ಸಹಿಸದೇ ದಿವಾಕರರನ್ನು ಸೆರೆಮನೆಗೆ ತಳ್ಳಿದರು. ಹುಕ್ಕೇರಿಕರ ಸಂಪಾದಕರಾದರು. ಆಗ ಜಯ ಕರ್ನಾಟಕ ಸಂಪಾದಕರಾಗಿದ್ದ ಆಲೂರು ವೆಂಕಟರಾಯರು ಕರ್ಮವೀರದ ಬೆಂಬಲಕ್ಕೆ ನಿಂತರು. ಇದೇ ಕರ್ಮವೀರ ಪತ್ರಿಕೆಯಲ್ಲಿಯೂ ೧೯೪೨ರಲ್ಲಿ ಪಾ.ವೆಂ. ಅವರು ೧೪ ವರ್ಷ ತಮ್ಮ ವೃತ್ತಿಯನ್ನು ನಿಭಾಯಿಸಿದರು. 'ಲಾಂಗೂಲಾಚಾರ್ಯ' ಎಂದು ಕನ್ನಡ ಜನತೆಯ ಮನೆಯ ಮಾತಾಗಿರುವುದು **ಕರ್ಮವೀರ** ಪತ್ರಿಕೆಯ ಮುಖಾಂತರ ಕನ್ನಡ ಪತ್ರಿಕೆಯ ಇತಿಹಾಸದಲ್ಲಿ ಯಶಸ್ವಿಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಶ್ರೇಷ್ಠ ಪತ್ರಕರ್ತರ ಸಾಲಿನಲ್ಲಿ ಸಲ್ಲುವವರಲ್ಲಿ ಪಾ.ವೆಂ. ಅವರು ಒಬ್ಬರು.

ಈ. ಕಸ್ತೂರಿ ಡೈಜಸ್ಟಿನ ಪ್ರೇರಣೆ ಮತ್ತು ಧೋರಣೆಗಳು:

'ಸಾ ವಿದ್ಯಾ ವಿಮುಕ್ತಯೇ' ಎಂಬ ಪ್ರಾಚೀನ ಭಾರತೀಯ ತತ್ವದ ಆಧಾರದ ಮೇಲೆ ಮಹಾತ್ಮ ಗಾಂಧಿಯವರು ತಮ್ಮ ಶಿಕ್ಷಣ ನೀತಿಯನ್ನು ರೂಪಿಸಿದರು. ಅದೇ ತತ್ವವನ್ನಾಧರಿಸಿ ಲೋಕ ಶಿಕ್ಷಣ ನೀತಿಯನ್ನು ರೂಪಿಸಿದರು. ಅದೇ ತತ್ವವನ್ನಾಧರಿಸಿ ಲೋಕ ಶಿಕ್ಷಣ ಮತ್ತು ಲೋಕ ಸ್ವಾತಂತ್ರ್ಯ ಸೈನಿಕರು ತಮ್ಮ ಪತ್ರಿಕೆಯನ್ನು ಪ್ರಾರಂಭಿಸಿದರು. ತನ್ನ ಹೆಸರೇ ಸೂಚಿಸುವಂತೆ ಕರ್ಮವೀರವು ಕೂಡ ಈ ಉದಾತ್ತ ಧ್ಯೇಯದಿಂದ ಆರಂಭವಾದ ಪತ್ರಿಕೆ ಅನಂತರ ಕಸ್ತೂರಿ ಡೈಜೆಸ್ಟ್ ಈ ಜೋಡಿಯನ್ನು ಕೂಡಿಕೊಂಡಿತು. ಲೋಕಮಾನ್ಯ ತಿಲಕರು ಆರಂಭಿಸಿ ನಡೆಸಿದ ಕೇಸರಿಗೆ ಹೋಲಿಸಬಹುದಾದ ಕೀರ್ತಿ ಗೌರವಗಳು ಈ ಪತ್ರಿಕೆಗಳಿಗೆ ಸಲ್ಲುತ್ತದೆ.

ಆಂಗ್ಲರ ದಬ್ಬಾಳಿಕೆಯಿಂದ ಭಾರತವನ್ನು ಬಿಡುಗಡೆ ಮಾಡಲು ನಡೆದ ಹೋರಾಟ ಭಾರತದ ಸಹಸ್ರಾರು ವರ್ಷಗಳ ಇತಿಹಾಸದಲ್ಲೇ ಒಂದು ಮಹತ್ವಪೂರ್ಣ ಪರ್ವ ಹೋರಾಟದ ಮಂಚೂಣಿಯಲ್ಲಿ ನಿಂತು ಅದನ್ನು ನಡೆಸಿದ ಮಹಾನುಭಾವರು ಅನೇಕರು ಹೋರಾಟವನ್ನು ಜನಸಾಮಾನ್ಯವರೆಗೆ ಒಯ್ದು ಅವರೂ ವೀರಾವೇಶದಿಂದ ಅದರಲ್ಲಿ ಭಾಗವಹಿಸುವಂತೆ ಮಾಡಿ, ಅವರಲ್ಲಿ ಸ್ಫೂರ್ತಿ ತುಂಬುವಂತೆ ಮಾಡಿದವರಲ್ಲಿ ಲೋಕಮಾನ್ಯ ಬಾಲ ಗಂಗಾಧರ ತಿಲಕ ಮತ್ತು ಮಹಾತ್ಮ ಗಾಂಧೀಜಿಯವರ ಕೊಡುಗೆ ಅಪೂರ್ವ

ಮತ್ತು ಅದ್ವಿತೀಯವಾದದು ಸ್ವರಾಜ್ಯ ಭಾರತೀಯರ ಜನ್ಮಸಿದ್ಧ ಹಕ್ಕು ಎಂಬ ಉದ್ಘೋಷ ಮಾಡಿ ಸಾರ್ವಜನಿಕ ಗಣೇಶೋತ್ಸವಗಳು ಹಾಗೂ ಶಿವಾಜಿ ಉತ್ಸವಗಳ ಮೂಲಕ ಸ್ವಾತಂತ್ರ್ಯ ಹೋರಾಟವನ್ನು ಸಂಘಟಿಸಿದ ಕೀರ್ತಿ ತಿಲಕರಿಗೆ ಸಂದಿದೆ. ಅಸಹಕಾರಿ ಆಂದೋಲನ ಕರನಿರಾಕರಣೆಯ ಚಳವಳಿ, ದಂಡಿ ಸತ್ಯಾಗ್ರಹ ಮೊದಲಾದ ಆಂದೋಲನಗಳ ಮೂಲಕ ಚಿಕ್ಕ ಚಿಕ್ಕ ಹಳ್ಳಿಗಳಿಗೂ ಸ್ವಾತಂತ್ರ್ಯದ ಸಂದೇಶವನ್ನು ತಲುಪಿಸಿದ ಪವಾಡ ಗಾಂಧೀಜಿಯವರದು ಈ ಇಬ್ಬರೂ ನಾಯಕರೂ ಭಾರತೀಯ ಪ್ರಾಚೀನ ಸಾಂಸ್ಕೃತಿಕ ಮೌಲ್ಯಗಳ ಆಧಾರದ ಮೇಲೆಯೇ ತಮ್ಮ ಯೋಜನೆಗಳನ್ನು ರೂಪಿಸಿದರು.

ಈ ನಾಯಕರೂ ಆದರ್ಶವಾದ ಧ್ಯೇಯವಾದಿಗಳಾಗಿದ್ದರು. ಯುವ ಜನರನ್ನು ಸ್ಪಂದಿಸಿದರು, ಪ್ರೇರೆಪಿಸಿದರು. ಅವರ ಪ್ರಭಾವದಿಂದ ಸಹಸ್ರಾರು ಯುವಕರು ತಮ್ಮ ಸರ್ವಶಕ್ತಿಗಳನ್ನು ನಾಡಿಗಾಗಿ ಸಮರ್ಪಿಸಲು ಜನ ಜಾಗೃತೀಯ ಕಾರ್ಯದಲ್ಲಿ ತೊಡಗಿಸಿಕೊಂಡರು. ಈ ಮೂಸೆಯಲ್ಲಿ ಮೂಡಿಬಂದ **ಸಂಯುಕ್ತ ಕರ್ನಾಟಕ, ಕರ್ಮವೀರ, ಕಸ್ತೂರಿ ಪತ್ರಿಕೆ**ಗಳ ಹಾಗೂ ಲೋಕ ಶಿಕ್ಷಣ ಟ್ರಸ್ಟ್‌ನ ರೂವಾರಿಗಳು ಅವರ ತ್ಯಾಗ, ಪರಿಶ್ರಮ, ಶಿಸ್ತು, ಸಮರ್ಪಣಾ ಭಾವನೆಗಳ ಫಲಸ್ವರೂಪವೇ ಇಂದಿನ ಲೋಕ ಶಿಕ್ಷಣ ಟ್ರಸ್ಟ್, ಕನ್ನಡ ಪತ್ರಿಕೋದ್ಯಮ ಇತಿಹಾಸದಲ್ಲಿ **ಸಂಯುಕ್ತ ಕರ್ನಾಟಕ, ಕರ್ಮವೀರ ಪತ್ರಿಕೆ**ಗಳ ಪಾತ್ರ ಬಹುಮುಖ್ಯವಾದದ್ದು ಈ ಪತ್ರಿಕೆಗಳು ಸವೆಸಿರುವ ದಾರಿ ಕಷ್ಟ ನಷ್ಟಗಳ ದಾರಿ, ಏಳು ಬೀಳುಗಳ ದಾರಿ ಭಾರತ ಸ್ವಾತಂತ್ರ್ಯದ ಚಳುವಳಿಯ ಜೊತೆ ಜೊತೆಯಲ್ಲಿಯೇ ಬೆಳೆದು ಬಂದ ಈ ಪತ್ರಿಕೆಗಳು ಎಲ್ಲ ಕಷ್ಟ ನೋವುಗಳನ್ನು ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದವು. ಈ ಆದರ್ಶಗಳ ವಿಷಯದಲ್ಲಿ ಎಂದಿಗೂ ಒಪ್ಪಂದ ಮಾಡಿಕೊಳ್ಳಲಿಲ್ಲ.

ಕರ್ಮವೀರ ಮತ್ತು **ಸಂಯುಕ್ತ ಕರ್ನಾಟಕ** ಆರಂಭದಿಂದಲೂ ಸ್ಪಷ್ಟವಾದ ಎರಡು ಗುರಿಗಳನ್ನು ಇರಿಸಿಕೊಂಡು ಆ ಮೂಲಕ ಜನಶಿಕ್ಷಣ ಹಾಗೂ ಜನ ಜಾಗೃತಿಯ ಕಾರ್ಯದಲ್ಲಿ ತೊಡಿಗಿಸಿಕೊಂಡವು. ಅವೇ ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ. ಈ ಗುರಿಗಳಿಗಾಗಿ ನಿರ್ಭಯವಾಗಿ ಹೋರಾಡಿದ ಪತ್ರಿಕೆಗಳು. 'ಕರಿಷ್ಯೆ ವಚನಂ ತವ' ಎಂಬ ಗೀತಾ ವಾಕ್ಯ ವಿಶ್ವಸ್ಥ ಮಂಡಳಿಗೆ ಮೊದಲಿನಿಂದಲೂ ದಾರಿದೀಪ ತಿಲಕ, ಗಾಂಧೀಜಿ, ಮೊಹರೆ ದಿವಾಕರ ಮೊದಲಾದ ಮಹನೀಯರು ಹಾಕಿಕೊಟ್ಟಿರುವ ಮಾರ್ಗದಲ್ಲಿ ಮುನ್ನಡೆಯುವುದೇ ಲೋಕ ಶಿಕ್ಷಣ ಟ್ರಸ್ಟ್‌ನ ಸತ್ ಸಂಕಲ್ಪ. ಹಿಂದಿನಿಂದ ಅದರ ಧ್ಯೇಯ ವಾಕ್ಯವಾಗಿರುವ ಈ ಶ್ಲೋಕ ಇಂದಿಗೂ ಅದಕ್ಕೆ ಪ್ರೇರಣೆ.

ಲೋಕ ಶಿಕ್ಷಣ ಟ್ರಸ್ಟ್ ತನ್ನ ಪ್ರಕಟಣೆಗಳ ಸುಧೀರ್ಘ ಇತಿಹಾಸದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದೆ. ಕಾಲಕಾಲಕ್ಕೆ ಅನೇಕ ಮಹನೀಯರು ಬೆವರು ಸುರಿಸಿ, ಕಷ್ಟ ಕಾರ್ಪಣ್ಯದೊಂದಿಗೆ ಅಹರ್ನಿಶಿ ದುಡಿದು ಸಂಸ್ಥೆಯನ್ನು ಉಳಿಸಿ ಬೆಳೆಸಿದ್ದಾರೆ. ಕೆಲವರ ಹೆಸರು ದಾಖಲಾಗಿದ್ದರೆ ತೆರೆಮರೆಯ ಕಾಯಿಗಳಂತೆ ಹೇಳ ಹೆಸರಿಲ್ಲದಂತೆ

ದುಡಿದ ಸಿಬ್ಬಂಧಿ ಹಾಗೂ ಕಾರ್ಯನಿವಾಹಕರು ಬಹಳಷ್ಟು ಮಂದಿ ಅಂತವರೆಲ್ಲರ ದುಡಿಮೆ ಪರಿಶ್ರಮಗಳ ಫಲ ಹಿಂದಿನಿಂದಲೂ ಕನ್ನಡಿಗೂ ಇದಕ್ಕೆ ನೀಡಿರುವ ಬೆಂಬಲ ಪ್ರೋತ್ಸಾಹ ಸಂಸ್ಥೆಗೆ ಶ್ರೀರಕ್ಷೆ ಜ್ಞಾನ ಮತ್ತು ಮನರಂಜನೆಯನ್ನು ಪ್ರಮುಖ ಉದ್ದೇಶವಾಗಿಟ್ಟುಕೊಂಡು ಲೋಕ ಶಿಕ್ಷಣ ಟ್ರಸ್ಟ್‌ನ ಹೆಮ್ಮೆಯ ಮಾಸಪತ್ರಿಕೆ ಕಸ್ತೂರಿ ೧೯೫೬ ಸೆಪ್ಟೆಂಬರ್ ತಿಂಗಳಲ್ಲಿ ಜನ್ಮತಾಳಿತು. ಕಸ್ತೂರಿಯ ಪ್ರಥಮ ಸಂಚಿಕೆಯಲ್ಲಿ ಅದರ ಮೊದಲ ಸಂಪಾದಕರಾಗಿದ್ದ ಹಿರಿಯ ಪತ್ರಿಕೋದ್ಯಮಿ ಮೊಹರೆ ಹನುಮಂತರಾಯರು ಕಸ್ತೂರಿಯ ಪ್ರಮುಖ ಗುರಿಗಳನ್ನು ಹೀಗೆ ವಿವರಿಸಿದ್ದಾರೆ.*[೧] 'ಕಸ್ತೂರಿಯ ಗುರಿ ಜ್ಞಾನ ಮತ್ತು ಮನರಂಜನೆ ಜಾಗತೀಕರಣಗೊಂಡ ಇಂದಿನ ಜಗತ್ತಿನಲ್ಲಿ ಜ್ಞಾನ ವಿಜ್ಞಾನ ಸಾಹಿತ್ಯಗಳು ಅದರ ಧಾರೆಯಾಗಿ ಹರೆಯುತ್ತಿವೆ. ಅವುಗಳಲ್ಲಿ ಬಹುಭಾಗ ಕನ್ನಡ ಓದುಗನಿಗೆ ಲಭಿಸುತ್ತಿಲ್ಲ. ಏಕೆ ಸಾಧಾರಣ ಇಂಗ್ಲೀಷ ಬಲ್ಲವರಿಗೂಅದು ದುರ್ಲಭವೇ ಆಗಿದೆ. ಹಲವು ತೀರ್ಥಗಳ ಪುಣ್ಯಜಲವನ್ನು ತಮ್ಮವರಿಗೆ ಒದಗಿಸಲು ಹವಣಿಸುವುದು. ಹಲವು ಭಾಷೆ ಹಲವು ಮೂಲಗಳಿಂದ ಹಲವು ಬಗೆಯ ಜ್ಞಾನ ವಿಜ್ಞಾನದ ಸಾಮಾಗ್ರಿಗಳನ್ನು ಕೊಡಲಾಗುವುದು. ಕಸ್ತೂರಿ ಇಂದಿನ ಕಾಲದ ಜನತೆಗಾಗಿ ಇರುವುದ ಅದು ಭಾರತದ ಭವ್ಯ ಪ್ರಾಚೀನ ಸಂಸ್ಕೃತಿ ಮತ್ತು ಸಾಹಿತ್ಯಗಳ ಪರಂಪರೆಯನ್ನು ಪರಿಚಯ ಮಾಡಿಕೊಡಲು ಯತ್ನಿಸುವುದು. ಆದರೆ ಅದರ ಗತ ವೈಭವವನ್ನು ನೆನೆಯುವಾಗ ಗತಕಾಲಕ್ಕೆ ಮರಳುವ ಹವ್ಯಾಸ ಅದಕ್ಕಿಲ್ಲ. 'ಸಂತೋಷ ಜನಯೇತ ಪ್ರಾಜ್ಞಃ ತದೇವೇಶ್ವರ ಪೂಜನಃ' ಎಂದು ಸುಭಾಷಿತ ಹೇಳುತ್ತದೆ. ಕಸ್ತೂರಿಯು ತನ್ನ ಬಗ್ಗೆ ವಹಿಸುವ ನೀತಿ ಇದು. ಜೀವನದ ಆಶಾದಾಯಕ ಅಂಶಗಳ ಕಡೆಗೆ ದೃಷ್ಟಿ ತಿರುಗಿಸಿ ಮನುಷ್ಯವನ್ನು ಪೌರುಷದ ಕಡೆಗೆ ಹೊರಳಿಸುವುದು ನಮ್ಮ ನಾಡಿನಲ್ಲಿ ಅವಶ್ಯ ಮಾಡಬೇಕಾದ ಕಾರ್ಯ ಒಂದು ಮಾತಿನಲ್ಲಿ ಕಸ್ತೂರಿಯು ಜೀವನದ ಕಂಪಿನ ಪಕ್ಷಪಾತಿ ಆ ಕಂಪು ಎಲ್ಲೆಲ್ಲಿ ಪ್ರತೀತಿಗೆ ಬರುತ್ತದೆಯೋ ಅಲ್ಲಲ್ಲಿಂದ ಅದನ್ನು ಹೊತ್ತು ತರುವ ಗಾಳಿಯ ಕೆಲಸವನ್ನು ಅದು ಮಾಡುತ್ತದೆ'.

ಕಸ್ತೂರಿಗೆ ಮೊದಲು **ಪರಾಗ** ಎಂಬ ನಾಮಕರಣ ಮಾಡುವ ಸಿದ್ಧತೆ ನಡೆದಿತ್ತು. ಮೊದಲ ಸಂಚಿಕೆ ಪ್ರಕಟಣೆಗೆ ಮೊದಲು **ಸಂಯುಕ್ತ ಕರ್ನಾಟಕ**ದಲ್ಲಿ **ಪರಾಗ** ಎಂಬ ಹೆಸರಿಂದಲೇ ಜಾಹೀರಾತು ಪ್ರಕಟವಾಗಿತ್ತು. ಆದರೆ ೧೯೫೬ ಸೆಪ್ಟೆಂಬರ್ ತಿಂಗಳ ಮೊದಲ ಸಂಚಿಕೆಯಲ್ಲಿ **ಕಸ್ತೂರಿ** ಎಂದೇ ಮಾಸ ಪತ್ರಿಕೆಗೆ ಹೆಸರಿಡಲಾಯಿತು.

ಇಂಗ್ಲೀಷ್ ಪತ್ರಿಕೋದ್ಯಮದಲ್ಲಿ ಲಿಫ್‌ಮನ್, ಬುಕ್‌ವಲ್ಡ್ ಪತ್ರಿಕೋಧ್ಯಮವನ್ನು ಸ್ವಧರ್ಮವನ್ನಾಗಿಸಿ ರೂಪಿಸಿಕೊಂಡು ಋಷಿ ಸ್ಥಾನಕ್ಕೇರಿದವರು. ಕನ್ನಡ ಪತ್ರಿಕೋದ್ಯಮ ನಾಡಿನ ಇತಿಹಾಸದ ಒಂದು ಘಟ್ಟದಲ್ಲಿ ಸ್ವಾತಂತ್ರ್ಯ ಸಮರದ ಸಂದರ್ಭದಲ್ಲಿ ಮಹತ್ವಪೂರ್ಣವೆಂದು ಕಂಡಿತು. ಅದರ ವ್ಯವಸಾಯಿಗಳು ಅಂದರೆ ಹೆಚ್ಚಿನ ಪತ್ರಿಕೋದ್ಯಮಗಳು ಚಳವಳಿಯ ನೇಕಾರರಾಗಿದ್ದು, ಸೆರೆಮನೆವಾಸ, ಹಿಂಸೆ, ಕಷ್ಟನಷ್ಟಗಳನ್ನು ಅನುಭವಿಸಿದರು. ಪತ್ರಿಕೋದ್ಯಮ ಅವರಿಗೆ ಒಂದು ವೃತ್ತಿಯಾಗಿರಲಿಲ್ಲ. ಭಾಷಾ ಪತ್ರಿಕೋದ್ಯಮ ನಿರಾಶ್ರಿತರ ಬೀಡಾಗಿತ್ತು. ಕ್ರಮೇಣ ಭಾಷಾ ಪತ್ರಿಕೋದ್ಯಮಕ್ಕೆ ಪ್ರಚಾರ

ಹೆಚ್ಚಾಯಿತು. ಇದೊಂದು ಉದ್ಯೋಗ ರಂಗವು ಆಯಿತು. ಪಾ.ವೆಂ. ಆಚಾರ್ಯ ರಂಥವರು ಜೀವನ ಮಾಡುವ ಸಾಧ್ಯತೆ ಒದಗಿತು.

ಸಂಪಾದಕ ಬಳಗ: ಮೊಹರೆ ಹನುಮಂತರಾಯರು, ರಂಗನಾಥ ದಿವಾಕರು ಪಾ.ವೆಂ. ಅವರ ಮಾಧವ ಮಹಿಶಿ, ದ.ಲ. ಕೆರೂರ, ಕಸ್ತೂರಿಯ ಸಂಪಾದಕರಾಗಿ ಸೇವೆ ಸಲ್ಲಿಸಿ ಕಸ್ತೂರಿಯನ್ನು ಜನಪ್ರಿಯ ಕನ್ನಡ ಮಾಸಿಕವಾಗಿ ರೂಪಿಸಿದರು. ಅದರಲ್ಲೂ ಪಾ.ವೆಂ. ಆಚಾರ್ಯರು ಕಸ್ತೂರಿಯನ್ನು ಪ್ರಬುದ್ಧ ಮಾಸಿಕವಾಗಿ ಕಟ್ಟಿ ಬೆಳೆಸಿದವರಲ್ಲಿ ಪ್ರಮುಖರು.

ಕಸ್ತೂರಿಯ ಸಂಪಾದಕತ್ವದ ಜವಾಬ್ದಾರಿಯನ್ನು ಪಾ.ವೆಂ. ಆಚಾರ್ಯರ ಹೆಗಲಿಗೆ ವಹಿಸಲಾಯಿತು. ೧೯೫೬ ಸೆಪ್ಟೆಂಬರ್ ಕಸ್ತೂರಿ ಮಾಸಿಕದ ಮೊದಲ ಸಂಚಿಕೆ ಪ್ರಕಟವಾಯಿತು. ಜಿ.ಜಿ.ಹೆಗಡೆಯವರು ಉಪಸಂಪಾದಕರಾಗಿದ್ದರು. ಜಿ.ಜಿ.ಹೆಗಡೆಯವರು ಕೂಡ ಬಹುಭಾಷಾ ತಜ್ಞರಾಗಿದ್ದರು. ಸಂಸ್ಕೃತ, ಕನ್ನಡ, ಇಂಗ್ಲೀಷ ಭಾಷೆಯ ಪರಿಣಿತರಾಗಿದ್ದರು. ಪಾ.ವೆಂ. ಅವರು ಜಿ.ಜಿ.ಹೆಗಡೆಯವರು ಬೇಕೆಂದು ಮೊದಲೇ ಸೂಚಿಸಿದ್ದರು. ಮಾಸಿಕದ ಪ್ರಕಟಣೆಗಾಗಿ ಇಬ್ಬರು ತಮ್ಮ ಜೀವನವನ್ನು ಮುಡುಪಾಗಿಟ್ಟರು. ಮಾಸಿಕದ ಕೆಲಸಕ್ಕೆ ಮುಖ್ಯವಾಗಿ ಲೇಖಕರು, ಚಿತ್ರಕಲಾವಿದರು ಪಡಿಯಚ್ಚುಗಾರರು ಹೀಗೆ ಅನೇಕರ ಸಹಕಾರ ಅಗತ್ಯವಾಯಿತು. ಕೆಲಸಗಾರರ ನೇಮಕವೂ ಆಯಿತು. ೨೫೦ ಪ್ರತಿಗಳ ಮುದ್ರಣವೂ ಆಯಿತು. ಅದರ ಬೆಲೆ ೮ ಅಣೆ ೫೦ ಪೈಸೆ ಇತ್ತು.

ಮುದ್ರಣ: ಮುದ್ರಣಕಾರ್ಯದಲ್ಲಿ ವಿ ವಾಯ್ ಜಠಾರರವರ ಸಮ್ಮುಖದಲ್ಲಿ ನಡೆಯುತ್ತಿತ್ತು. ವಾಯ್ ನಾರಾಯಣರಾವ್‌ರು ನೋಡಿಕೊಳ್ಳುತ್ತಿದ್ದರು. ಬೆಟ್ಟಿಂಗ್‌ನಲ್ಲಿ ಪತ್ರಿಕೆಗಳನ್ನು ಅವರು ಪ್ರಸಾರಾಂಗ ವಿಭಾಗಕ್ಕೆ ಸಲ್ಲಿಸುತ್ತಿದ್ದರು. ಸದಾಶಿವ ಎಂಬುವವರು ಕಸ್ತೂರಿಯ ಮೊದಲ ಕಲಾವಿದರು. ಜಾರ್ಜ್ ಬಂಡಿವಾಡ ಬೈನಾಪೂರ ಬಿ. ಕೃಷ್ಣರಾವ್, ಬಿ. ಕುಲಕರ್ಣಿ, ಪಿ.ಆರ್. ಪಾಟೀಲ ಮುಂತಾದ ಕಿವಿಯ ಕಲಾವಿದರಿದ್ದರು. ಕಸ್ತೂರಿಯಲ್ಲಿ ಸೇವೆ ಸಲ್ಲಿಸಿ ಪ್ರತಿ ನಂಬಿಕೆಯು ಅಂದವಾಗಿ ಪ್ರಕಟವಾಗುವಂತೆ ಶ್ರಮ ವಹಿಸಿದವರು ಪ್ರಭಾತ ಸ್ಟೂಡಿಯೋದವರು ಚಿತ್ರಗಳ ಬ್ಲಾಕ್ ಬಾಕ್ಸ್ ತಯಾರಿಸಿ ಕೊಡುತ್ತಿದ್ದರು. ಮುಖಪುಟ ಚಿತ್ರದ ಮುದ್ರಣಕ್ಕೆ ಅನುಕೂಲವಾಗುವಂತೆ ಮೂರು ಬಣ್ಣದ ಕಲರ್ ಬ್ಲಾಕನ್ನು ಮುಂಬಯಿಯಿಂದ ಕಲಾವಿದ ಎನ್.ಸಿ.ದೇಸಾಯಿಯವರು ಮಾಡಿ ಕಳುಹಿಸುತ್ತಿದ್ದರು. ಅಂದಿನ ಕಾಲದಲ್ಲಿ ಮೂರು ಬಣ್ಣದ ಬ್ಲಾಕ್‌ಗಳು ಬೆಂಗಳೂರು, ಮದರಾಸು ಮುಂಬಾಯಿಗಳಲ್ಲದೆ ಬೇರೆಯಲ್ಲಿಯೂ ತಯಾರಾಗುತ್ತಿರಲಿಲ್ಲ.

ಪಾ.ವೆಂ. ಆಚಾರ್ಯರು ಕೇವಲ ಸಂಪಾದಕರಾಗಿ ಮಾತ್ರ ಇರಲಿಲ್ಲ ಪಾ.ವೆಂ. ಅವರು ಲೇಖನದ ಕರಡು ತಿದ್ದುವಲ್ಲಿಂದ ಹಿಡಿದು, ಸ್ವತಃ ಲೇಖಕರಾಗಿ ಹಾಗೂ ಮುದ್ರಣದ ಸಂಪೂರ್ಣ ಅಂಗಾಂಗಗಳನ್ನು ಬಲ್ಲವರಾಗಿದ್ದರು. ಸಂಪಾದಕರು, ವ್ಯವಸ್ಥಾಪಕರು, ಪ್ರಕಾಶಕರೂ ಮೊಳೆ ಜೋಡಿಸುವ, ಮುದ್ರಿಸುವ, ವಿತರಿಸುವ ಯಾವ ಕೆಲಸವಾದರೂ ಪಾ.ವೆಂ. ಅವರಿಗೆ ತಿಳಿದಿತ್ತು. ಅದರ ಬಗ್ಗೆ ಸಂಪೂರ್ಣ ಜ್ಞಾನವೂ ಇತ್ತು. ಹೀಗೆ ಕಂಪು ಬೀರಲು ಆರಂಭಿಸಿದ ಕಸ್ತೂರಿ ಮುಂದೆ ವರ್ಷದೊಪ್ಪತ್ತಿನಲ್ಲೇ

ಹದಿನಾರರಿಂದ ಇಪ್ಪತ್ತು ಸಾವಿರದಷ್ಟು ಪ್ರತಿಗಳ ಪ್ರಸಾರವಾಗುತ್ತಿತ್ತು. ಪ್ರತಿಯೊಂದು ಸಂಚಿಕೆ ಪಡೆದು ಓದುವ ತುಡಿತ ಓದುಗರಲ್ಲಿ ಹೆಚ್ಚುತ್ತಾ ಹೋಯಿತು. ಪಾ.ವೆಂ. ಮಾತ್ರ ಲಾಂಗೂಲಾಚಾರ್ಯ ಎಂಬ ಅಂಕಿತನಾಮದಿಂದ ಪ್ರಸಿದ್ಧರಾದರು. ನಂತರದ.ಲಾ.ಕೆರೂರು ಸಂಪಾದಕರಾದರು. ಪಾ.ವೆಂ. ಅವರು ೧೮ ವರ್ಷಗಳ ಕಾಲ ಕಸ್ತೂರಿಗಾಗಿಯೇ ತಮ್ಮ ಜೀವನವನ್ನು ತೇಯ್ದರು. ಪ್ರತಿ ತಿಂಗಳು ಆಸಕ್ತರು, ಓದುಗರು ಕಸ್ತೂರಿಯನ್ನು ಸ್ವಾಗತಿಸಲು ತುದಿಗಾಲಲ್ಲಿ ನಿಂತಿರುತ್ತಿದ್ದರು. ಪ್ರಸಾರ ಸಂಖ್ಯೆ ೩೦ ರಿಂದ ೩೫ ಸಾವಿರ ಅಷ್ಟೇ ಏಕೆ ೪೦ ಸಾವಿರದಷ್ಟು ತಲುಪಿತು. ಪಾ.ವೆಂ. ಆಚಾರ್ಯ ದ.ಲಾ. ಕೆರೂರ ಮ.ನ.ಮಹಿಷಿ ಗೋಪಾಲ ವಾಜಪೇಯಿ, ಶ್ರೀಕಾಂತ ಮಳಗಿ, ರವಿ ಬೆಳಗೆರೆ, ಅರುಣ ನಾರಾಯಣ ಮುಂತಾದವರು ಕಸ್ತೂರಿಯನ್ನು ಜನಪ್ರಿಯ ಡೈಜೆಸ್ಟ್ ಆಗಿ ರೂಪಿಸಿದರು. ಪಾ.ವೆಂ. ಕಸ್ತೂರಿಯ ಜೀವನಾಡಿಯಾಗಿದ್ದರು.

ಕಸ್ತೂರಿಯನ್ನು ಹಿಂದೆ ಹಾಕಲು ಸಂಗಮ, ಕೈಲಾಸ, ಪಂಚಾಮೃತ, ಕಲ್ಯಾಣ ಮುಂತಾದ ಮಾಸಿಕಗಳು ಹುಟ್ಟಿಕೊಂಡವು ಆದರೆ ಖಚಿತ ಸಾಮರ್ಥ್ಯಗಳಿಲ್ಲದೆ ಹೆಚ್ಚು ಕಾಲ ಬಾಳಲಿಲ್ಲ ಈ ನಿಟ್ಟಿನಲ್ಲಿ ಪ್ರಾರಂಭದ ದಶಕದಲ್ಲಿ ಹುಟ್ಟಿಕೊಂಡ ಪತ್ರಿಕಾ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನ ಪಡೆದ ಪುಸ್ತಕ ಪ್ರಪಂಚ ೪ ದಶಕಗಳ ನಂತರ ನಿಂತು ಹೋಗುತ್ತದೆ. ಮಹಾವಿದ್ವಾನ್ಮಣಿಗಳು ಕನ್ನಡದ ಹೋರಾಟಗಾರರಾಗಿರುವ ಎ. ಆರ್. ಕೃಷ್ಣಶಾಸ್ತ್ರಿಗಳ ಸಂಪಾದಕತ್ವದಲ್ಲಿಯೂ ಈ ಪತ್ರಿಕೆ ಆರ್ಥಿಕ ಮುಗ್ಗಟ್ಟಿನಿಂದ, ಕನ್ನಡದ ಅನಾಸಕ್ತರಿಂದ ಪತ್ರಿಕೆ ಬಹಳ ಕಾಲ ಬೆಳೆಯಲಿಲ್ಲ ಮುಂದೆ ೧೯೯೨ರಲ್ಲಿ 'ಪ್ರಸ್ತಕ ಪ್ರಪಂಚ' ಮರುಹುಟ್ಟನ್ನು ಪಡೆಯುತ್ತದೆ.

ಕನ್ನಡ ಪತ್ರಿಕೋದ್ಯಮದೊಡನೆ ಹೆಸರಾಂತ ರಾಜಕಾರಣಿಗಳ ಮತ್ತು ಖ್ಯಾತ ಸಾಹಿತಿಗಳ ಹೆಸರುಗಳು ತಳಕು ಬಿದ್ದಿವೆ. ಬೇಂದ್ರೆ, ಶಂಬಾ ಜೋಶಿ, ಕಡೆಂಗೋಡ್ಲು ಮೊದಲಾದ ಹತ್ತಾರು ತಲೆಮಾರಿನ ಸಾಹಿತಿಗಳು ಪತ್ರಿಕೋದ್ಯಮದಲ್ಲಿ ನುರಿತವರು ಅರಿತವರು ಆದರೆ ಆ ಕಾಲದ ಪತ್ರಿಕೆಗಳ ಪ್ರಸಾರ ಮಿತವಾಗಿತ್ತು. ಅದರಲ್ಲಿ ತೊಡಗಿದವರು ಹಸಿದಿರಬೇಕಾಗಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ ಬಹಳ ಕಾಲದಿಂದ ಕನ್ನಡಿಗರ ಕೊಂಡು ಓದುವ ಹವ್ಯಾಸದವರಲ್ಲ. ಅಭಿಮಾನ ಶೂನ್ಯರು ಆದರೆ ಇಂದಿನ ಆಧುನಿಕ ಪರಿಸ್ಥಿತಿಯಲ್ಲಿ ಪ್ರಮುಖ ಪತ್ರಿಕೆಗಳನ್ನು ಲಕ್ಷಾಂತರ ಜನ ಓದುತ್ತಾರೆ.

ಕಸ್ತೂರಿಯ ಆರಂಭದ ಸಂಚಿಕೆಯಿಂದ ಇಂದಿನವರೆಗೂ ಪಾ.ವೆಂ. ಅವರ ಹಾಕಿದ ಮೂಲ ತಳಪಾಯದ ಮೇಲೆಯೇ ವ್ಯವಸ್ಥಿತವಾಗಿ ಬೆಳೆಯುತ್ತಿದೆ. ಅಂದಿನಿಂದ ಇಂದಿನವರೆಗೂ ಹಲವಾರು ಸ್ಥಿರ ಶೀರ್ಷಿಕೆಗಳಲ್ಲಿ ಜ್ಞಾನ ಸಾಗರದ ಅಮೂಲ್ಯ ರತ್ನಗಳನ್ನು ಸಂಗ್ರಹಿಸಿ ಕನ್ನಡ ವಾಚಕ ವೃಂದಕ್ಕೆ ಹಂಚಿತು. ನಿಮ್ಮ **ಶಬ್ದ ಭಂಡಾರ ಬೆಳೆಯಲಿ, ಇದುವೇ ಜೀವ ಜೀವನ, ಜ್ಞಾನ ನಿಧಿ, ನಗೆಮಲ್ಲಿಗೆ, ಪುಸ್ತಕ ವಿಭಾಗ, ಮಾತು ಮಾಣಿಕ್ಯ** ಅಚ್ಚಳಿಯದ ಪುಟಗಳು **ಪದಾರ್ಥಚಿಂತಾಮಣಿ** ಮುಂತಾದ ಅವಿಸ್ಮರಣೀಯ ಅಂಕಣಗಳು ಕಸ್ತೂರಿಯನ್ನು ಪ್ರಬುದ್ಧ ಮಾಸಪತ್ರಿಕೆಯಾಗಿ ಬೆಳೆಸಿದೆ.

ಉ. ಕಸ್ತೂರಿಯ ಅಂತರಂಗ:

ಜ್ಞಾನ ವಿಜ್ಞಾನದ ಜಗತ್ತನ್ನು ಪಾ.ವೆಂ. ಅವರು ಕಸ್ತೂರಿಯಲ್ಲಿ ರೂಪಿಸುತ್ತಿದ್ದ ರೀತಿಯನ್ನು ಇಲ್ಲಿ ಕಾಣುತ್ತೇವೆ. ಓದುಗರ ಲೋಕ ನಿರ್ಮಾಣ ಡೈಜೆಸ್ಟ್ ಪತ್ರಿಕೆಯ ಸುಲಕ್ಷಣಗಳನ್ನು ಸ್ವತಃ ಅಳವಡಿಕೊಂಡು ಬರೆದರು ಬರೆಸಿದರು. ಸಾರಲೇಖರೂಪ ಸಂಗ್ರಹ ಸಂಕ್ಷೇಪ ರೂಪ ವಿವಿಧ ಮೂಲಗಳಿಂದ ಅನುವಾದ, ಆಧುನಿಕ ಜ್ಞಾನ ಸಂವೇದನೆಗಳು, ವಿಶ್ವದ ಸಹಜ ವಿಸ್ಮಯಗಳು, ಪ್ರಚಲಿತ ವಿಜ್ಞಾನಗಳು, ಪ್ರಕೃತಿ ಇತಿಹಾಸ, ಭೌತಿಕ, ಮಾನಸಿಕ ವಿಜ್ಞಾನ, ತಂತ್ರಜ್ಞಾನ, ಮಾನವಿಕ, ವೈದ್ಯಕೀಯ, ಕಲಾತ್ಮಕ, ರಾಜಕೀಯ ವ್ಯಕ್ತಿ, ಸ್ಥಳದ ಮಹಿಮೆ, ಕವಿ, ಲೇಖಕ, ಸಂಶೋಧಕ, ಕಲಾವಿದನ ಕಲೆಗಳು, ಚಿತ್ರವಿಚಿತ್ರ ಜಗತ್ತು, ಪುಸ್ತಕ ವಿಭಾಗ, ಚಾಟೋಕ್ತಿಗಳು, ನುಡಿ ಮುತ್ತುಗಳು, ಸುಭಾಷಿತ, ಹನಿ–ಮಿನಿ ಕವನಗಳು ಹೀಗೆ ಕಸ್ತೂರಿಯ ವೈವಿಧ್ಯಮಯ ಬರವಣಿಗೆಯ ಮೂಲಕ ಓದುಗರ ಮನವನ್ನು ಸ್ಪರ್ಶಿಸಿದರು. ವಿಚಾರಗಳನ್ನು ಹಂಚಿಕೊಳ್ಳಲು ಕಸ್ತೂರಿಯ ವಿಚಾರ ವೇದಿಕೆಯನ್ನು ಬರಹಗಳಿಗೆ ಮರುವಿಚಾರ ಪ್ರತಿಕ್ರಿಯೆಯನ್ನು ನಿರ್ಮಿಸಿ ಸ್ವಾಗತಿಸಿದರು. ಹೀಗೆ ಕಸ್ತೂರಿಯ ದರ್ಶನವೆಂದರೆ ಕನ್ನಡ ಭಾಷೆಯಲ್ಲಿ ಜಗತ್ತನ್ನು ಕಂಡಿರಬೇಕು. ಒಂದು ರೀತಿ ವಿಶ್ವಕೋಶದಂತೆ ವಾಚಕರಿಗೆ ಭಾವಿಸುತ್ತಿತ್ತು. ಜೀವನ ವಿಮರ್ಶೆ ತತ್ವಜ್ಞಾನದ ದೃಷ್ಟಿಯಿಂದ ಲೇಖನಗಳು ಕಥೆ ಒಟ್ಟಿನೊಳಗೆ ಗದ್ಯ ಸಾಹಿತ್ಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ನಮೂನೆಯ ಮಾಹಿತಿ ಸಹಿತ ವಿವರಣೆ ವಿಶ್ಲೇಷಣೆ ಮತ್ತು ಜ್ಞಾನ ಪೂರಕ ವಸ್ತುಗಳ ಸರಳ ಸುಂದರ ನಿರೂಪಣೆ ಪಾ.ವೆಂ. ಅವರ ಸಂಪಾದನಾ ವಿಧಾನದ ಮಾರ್ಗವಾಗಿತ್ತು. ಕನ್ನಡ ಓದುಗರಿಗೆ ಪರಿಚಿತವಲ್ಲದ ಅನೇಕ ವಿಷಯಗಳನ್ನು ಕಸ್ತೂರಿ ಒದಗಿಸಿತು. ಸಂಸ್ಥಾಪಕ ಮಂಡಳಿಯಲ್ಲಿ ಪಾ.ವೆಂ. ಅವರ ಸಂಪಾದಕೀಯ ನಿರ್ಣಯಗಳನ್ನು ಪ್ರಕ್ರಿಯಿಸುವವರು ಯಾರು ಇದ್ದಿಲ್ಲ. ಹಾಗಾಗಿ ಪಾ.ವೆಂ. ಸ್ವತಂತ್ರವಾಗಿ ಬರೆಯಲು ಒಂದು ರೀತಿಯಲ್ಲಿ ಸಹಕಾರಿಯಾಗಿತ್ತು. ಪರಿಪೂರ್ಣತೆಯ ಕಡೆಗೆ ನುಗ್ಗಬೇಕು ಎನ್ನುವ ಮನೋಭಾವವಿದ್ದದ್ದರಿಂದಲೇ ಸುಧಾರಣಾ ರೀತಿಯಿಂದ ಬರೆಯಲು ಸಾಧ್ಯವಾಗಿದೆ.

ಪತ್ರಿಕೆಯ ಗುಣಧರ್ಮಕ್ಕೆ ಅನುಗುಣವಾಗಿ ವಿವಿಧ ನಾಮಾವಳಿಯ ಮೂಲಕ ಲೇಖನಗಳನ್ನು ಬರೆದು ಪತ್ರಿಕೆಯ ಗುಣಧರ್ಮವನ್ನು ಹೆಚ್ಚಿಸಿದ್ದಾರೆ. ಮಾನವಾಸಕ್ತಿಯ ಬರಹಗಳು ಯಾವುದೇ ಪತ್ರಿಕೆಯ ಅವಿಭಾಜ್ಯ ಅಂಗ. ಇಲ್ಲಿ ರಂಜನೆಯ ಕೌತುಕದ ಅಂಶವೇ ಪ್ರಧಾನ ಎಂಬುದು ನಿಜವಾದರೂ ಆಚಾರ್ಯರ ಸಮರ್ಥ ಲೇಖನ ಅದನ್ನು ಮಾಹಿತಿಪೂರ್ಣವಾಗಿ, ಮನನಯೋಗ್ಯವಾಗಿ, ಸಂದರ್ಭೋಚಿತವಾದ ಮತ್ತು ವಾಚಕರ ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇದು ಯಶಸ್ವಿಯಾಗಿದೆ.

ಊ. ಕಸ್ತೂರಿ ಸಂಚಿಕೆಯ ವೈಶಿಷ್ಟ್ಯಗಳು:

೧. ಬೇರೆ ಬೇರೆ ಭಾಷೆಗಳಿಂದ ಪತ್ರಿಕಾಲೇಖನಗಳ ಅನುವಾದ ಮತ್ತು ಸಂಕ್ಷಿಪ್ತ ಭಾಗಗಳ ಪ್ರಕಟಣೆ ಇದು ಡೈಜಸ್ಟ್‌ನ ಮುಖ್ಯ ಲಕ್ಷಣ ಓದಿದ ಸ್ವಾರಸ್ಯಕರ ವಿಷಯ ಸಂಗತಿಗಳನ್ನು ಕನ್ನಡಕ್ಕೆ ಅನುವಾದಿಸಿ ಇಲ್ಲವೇ ಸಂಕ್ಷಿಪ್ತಗೊಳಿಸಿ ಕಸ್ತೂರಿಯಲ್ಲಿ ಮರುಪ್ರಕಟಿಸುವ ಕೆಲಸವನ್ನು ಸ್ವತಃ ಮಾಡಿದ್ದಲ್ಲದೆ ಬೇರೆ ಬೇರೆ ಲೇಖಕರಿಂದ ಮಾಡಿಸಿದ್ದುಂಟು. ಕಸ್ತೂರಿಗಾಗಿ ಒಂದು ಲೇಖಕರ ಪಡೆಯನ್ನೆ ಪಾ.ವೆಂ. ಸಿದ್ದ ಪಡಿಸಿದರು. ಡೈಜೆಸ್ಟ್‌ಅಂದರೆ ಪಚನಗೊಳಿಸುವುದು. ಸಂಗತಿ, ಸುದ್ದಿ, ಕಥೆ, ಕಾದಂಬರಿ. ಇತಿಹಾಸ ಮತ್ತು ಬೇರೆ ಬೇರೆ ಜ್ಞಾನ ಕ್ಷೇತ್ರಗಳ ಮಾಹಿತಿ ಮುಂತಾದುವನ್ನೇ ಅಚ್ಚಕನ್ನಡದಲ್ಲಿ ಬರೆದು ಅಥವಾ ಬರೆಯಿಸಿ ನಳಪಾಕಗೊಳಿಸುವ ಬೌದ್ಧಿಕ ಆಹಾರದಂತಿತ್ತು.

ಅನಾಹುತ, ಸಾಹಸ, ಅನುಭವಗಳು, ಆರೋಗ್ಯ, ವೈದ್ಯಕೀಯ, ಇತಿಹಾಸ, ಇದುವೆ ಜೀವಜೀವನ, ಉವಾಚ, ಕಥೆಗಳು, ಚರ್ಚೆ, ಚಿಂತನ, ಜೀವನ ಚರಿತ್ರೆ ದೇಶ, ನಗರಗಳು ಪುಸ್ತಕ ವಿಭಾಗ ರಹಸ್ಯ ಸೋಜಿಗ ವಿಜ್ಞಾನ ಸಾಮಾನ್ಯ ವಿಷಯಗಳು ಹರಟೆ ಲಲಿತ ಪ್ರಬಂಧಗಳು ಹೀಗೆ ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಪಾ.ವೆಂ. ಅವರ ಈ ವಿಷಯಕ್ಕೆ ಸಂಬಂಧಿಸಿದ ತಜ್ಞರಿಂದ ಲೇಖನಗಳನ್ನು ಸಂಪಾದಿಸಿ ತಿದ್ದಿ ತೀಡಿ ಉತ್ತಮ ಶೀರ್ಷಿಕೆಯಡಿಯಲ್ಲಿ ಲೇಖನವನ್ನು ಪ್ರಕಟಿಸುತ್ತಿದ್ದರು. ಇದಕ್ಕಾಗಿ ಪಾ.ವೆಂ. ಅವರು ಈ ಎಲ್ಲ ವಿಷಯಗಳನ್ನು ಅಧ್ಯಯನಿಸುತ್ತಿದ್ದರು. ಅನೇಕ ಕವಿಗಳು, ಸಾಹಿತಿಗಳು, ವಿಜ್ಞಾನಿಗಳು, ವೈದ್ಯರು, ಪತ್ರಿಕೋದ್ಯಮಿಗಳು ಹತ್ತು ಹಲವಾರು ಕ್ಷೇತ್ರಗಳಲ್ಲಿ ನಡೆದಾಡಿ ನೂರಾರು ಭಾರತದಲ್ಲಿ ಲಭ್ಯವಿರುವ ದೈನಿಕ ಮಾಸಿಕ ವಾರ್ಷಿಕ ಎಲ್ಲ ಭಾಷೆಯ ಪತ್ರಿಕೆಗಳನ್ನು ಅಭ್ಯಾಸ ಮಾಡುತ್ತಿದ್ದರು. ಪ್ರೆಂಚ್ ಭಾಷೆ ಜರ್ಮನ್ ಹೀಗೆ ಪರ ಭಾಷೆಯನ್ನು ಕಲಿತವರಿಂದಲೂ ವಿಷಯವನ್ನು ಅನುವಾದ ಮಾಡುತ್ತಿದ್ದರು. ಈ ರೀತಿಯಲ್ಲಿ ಪಾ.ವೆಂ. ಅವರಿಗೆ ಸಹಕರಿಸುತ್ತಿದ್ದವರು ಜಿ.ಜಿ. ಹೆಗಡೆ, ಶ್ರೀಕಾಂತ ಮಳಗಿ, ಹದಿನೆಂಟು ವರ್ಷಗಳಲ್ಲಿ ಪಾ.ವೆಂ. ಸಂಪಾದಕತ್ವದ ಅವಧಿಯಲ್ಲಿ ಕಸ್ತೂರಿಯ ಲೇಖನವನ್ನು ಗಮನಿಸಿದಾಗ ಸಿಗುವ ಕೆಲವು ಅನ್ಯ ಭಾಷೆಯ ಪತ್ರಿಕೆಗಳ ಹೆಸರು ಹೀಗಿದೆ.

ಇಂಗ್ಲೀಷಿನ ರೀಡರ್ಸ್ ಡೈಜಸ್ಟ್ ಜಗತ್ತಿನ ಭಾಷೆಗಳಲ್ಲಿ ಪ್ರಕಟಗೊಳ್ಳುವ ಜನಪ್ರಿಯ ಕೌಟುಂಬಿಕ ಪತ್ರಿಕೆ. ನವನೀತ–ಹಿಂದಿ ಡೈಜಸ್ಟ್ ೧೯೫೨ರಲ್ಲಿ ನವೆಂಬರ ೭ರಲ್ಲಿ ಭಾರತೀಯ ವಿದ್ಯ ಭವನದ ಸಂಸ್ಥೆಯಿಂದ ಪ್ರಕಟಗೊಂಡ ಮಾಸಿಕ ಪತ್ರಿಕೆ ಇದು ಗುಜರಾಜ ಭಾಷೆಯಲ್ಲೂ ಪ್ರಕಟಗೊಳ್ಳುತ್ತಿದೆ. ಜಗತ್ತಿನ ಶಾಸ್ತ್ರೀಯ ವಿದ್ಯಮಾನ ಸಂಗೀತ ನೃತ್ಯ ಸಾಹಿತಿಗಳ ಬಗ್ಗೆ ಹೆಚ್ಚು ವಿಷಯಗಳನ್ನು ಒಳಗೊಂಡಿದೆ. ಸ್ತ್ರೀ ವಿರೇಂದ್ರ ಮಿತ್ರ (ಹಿಂದಿ) ಸುಭಾಷಿತಗಳು, ಕಾಮದೇನು, ಮನೋಹರ ಮರಾಠೆ ಪತ್ರಿಕೆ, ಹಿಂದೂಸ್ಥಾನಿ ಲೀವರ್ ಲಿಮಿಟೆಡ್ (ಮಹಿಲ್‌ಸೇನ್) ಸಂಡೇಸ್ಟ್ಯಾಂಡರ್ಡ್‌ನಿಂದ ಆಕಾಶವಾಣಿ, ಕಪಿಲ, ಬಂಗಾಲಿಕಥೆ, ಯುನೆಸ್ಕೋ, ಕೊರಿಯರ್‌ನಿಂದ, ಭೂದಾನದಿಂದ ಕಿರ್ಲೋಸ್ಕರ್‌ನಿಂದ

ಸರಸ್ವತಿ, ಜ್ಞಾನೋದಯ, ಸುಬಂಧು, ವೇದಾಂತ ಕೇಸರಿಯಲ್ಲಿ ಹೆರಾಲ್ಡ್ ಆಫ್ ಹೆಲ್ತ್, ವಸಂತ ಕ್ಯಾ ಕಥೆಗಾ ಪುಸ್ತಕ ಇಲಸ್ಟೇಟಡ್ ನೀತಿ ಮನೋಹರ ಪತ್ರಿಕೆ ನಗುವನಂದನ (ಹಾಸ್ಯ) ಭವನ್ಸ್ ಜರ್ನಲ್‌ನಿಂದ ಸ್ವಾನ್‌ನಿಂದ ಅಮೃತ ಪತ್ರಿಕೆ ಹಿತವಾದದಿಂದ ಸೈಕಾಲಜಿಯಿಂದ, ಯೋಜನಾ ಮಾರ್ಚ ಆಫ್ ಇಂಡಿಯಾ ಉಡುಪಿಯ ಅಮೃತದಿಂದ, ಯುನೆಸ್ಕೊ ಕೊರಿಯರ್‌ನಿಂದ ಉಡುಪಿಯ ಅಮೃತದಿಂದ (ಸುಬ್ರಾಯಭಟ್) ಹಿತವಾದ, ಯುಗಪುರುಷ (ದ.ಕನ್ನಡ) ತ್ರಿಪಥಗಾ, ಬನಪೂಲ್ ಬಂಗಾಳಿ, ಕಾದಂಬಿನಿ, ಸಕಾಳ, ವಿಜ್ಞಾನ ಲೇಖನ ಧರ್ಮಯುಗ ಕೆಲವು ವಿಶೇಷ ಸುದ್ದಿಗಳು ಮೈ ಮ್ಯಾಗಸಿನ್ ಆಫ್ ಇಂಡಿಯಾ ಸ್ಫೆನ್ಸ ಟುಡೇ ಹೆರಾಲ್ಡ್ ಆಫ್ ಹೆಲ್ತ್ ಹೀಗೆ ನೂರಾರು ಭಾಷೆಗಳು ಅಧ್ಯಯನವನ್ನು ನಿರಂತರವಾಗಿ ಮಾಡುತ್ತಿದ್ದರು. ಈ ರೀತಿಯ ಬಹುಭಾಷಾ ಪತ್ರಿಕೆ ಸಂಪರ್ಕದಿಂದ ಪಾ.ವೆಂ. ಅವರು ಜ್ಞಾನಮುಖ ಮಾಧ್ಯಮವನ್ನಾಗಿ ಕಸ್ತೂರಿಯನ್ನು ಮಾರ್ಪಡಿಸಿದ್ದರು. ಓದುಗರಿಗೆ ಹೆಮ್ಮೆ ಆಸಕ್ತಿಯನ್ನು ಬೆಳೆಸಿದ್ದರು. ಅಷ್ಟೆ ಅಲ್ಲದೆ ತಮ್ಮ ವಿಚಾರ ವಿನಿಮಯ ಮಾಡಿಕೊಳ್ಳಲು ಓದುಗರ ಸಹಚಿಂತನ ವೇದಿಕೆಯನ್ನು ನಿರ್ಮಿಸಿದ್ದರು. ಕಸ್ತೂರಿಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಕಸ್ತೂರಿ ಅರ್ಧವಾರ್ಷಿಕ ಪರಿವಿಡಿ ಸೆಪ್ಟೆಂಬರ್ ೧೯೭೪ರಿಂದ ಫೆಬ್ರುವರಿ ೧೯೭೫ರ ವರೆಗೆ ಕ್ರಮ ಲೇಖನದ ಹೆಸರು ತಿಂಗಳು ಪುಟ ಸಂಖ್ಯೆಯ ವಿವರವನ್ನು ಕಸ್ತೂರಿಯ ಪತ್ರಿಕೆಯ ಮೊದಲ ಪುಟಗಳಲ್ಲಿ ಪ್ರಕಟಿಸುತ್ತಿದ್ದರು.

ಮಾರ್ಗಸೂಚಿಯನ್ನು ನಿರೂಪಿಸಿದ್ದಾರೆ. ಹಿರಿಯ ತಜ್ಞ ಎಂ.ವಿ.ಕಾಮತ್ ಅವರು ತಮ್ಮ ಪ್ರೋಪೆಶನಲ್ ಜರನಲಿಸಮ್ ಗ್ರಂಥದಲ್ಲಿ ಮತ್ತು ಕನ್ನಡ ಅನುವಾದ ದಿ. ಎನ್. ಎಸ್. ರಾಮಪ್ರಸಾದ ಪ್ರಕಟಣೆ ಕರ್ನಾಟಕ ಪತ್ರಿಕಾ ಅಕಾಡಮಿ ಈ ಮಾರ್ಗಸೂಚಿಯನ್ನು ಸೇರಿಸಿದ್ದಾರೆ. ಯಾವುದೇ ತರಬೇತಿಗಳಿಲ್ಲದೆ ಪಾ.ವೆಂ. ಆತ್ಮಶಿಸ್ತಿನಿಂದ ಕಸ್ತೂರಿಯನ್ನು ನಿರ್ಮಿಸಿದ್ದರು. ಪಾ.ವೆಂ. ಅವರು ಪತ್ರಿಕೋದ್ಯಮದ ಎಲ್ಲ ಮುಖಗಳನ್ನು ಪತ್ರಿಕೋದ್ಯಮವನ್ನು ಬಲ್ಲವರಾಗಿದ್ದರು. ಮುಂದಿನ ಯುವ ಪತ್ರಿಕೋದ್ಯಮಗಳಿಗೆ ಅಧ್ಯಯನಾಸಕ್ತರಿಗೆ ಪಾ.ವೆಂ. ಅನುಸರಿಸುತ್ತಿದ್ದ ರೀತಿ ಮಾರ್ಗದರ್ಶನದಂತಿದೆ. ಪಾ.ವೆಂ. ಆಚಾರ್ಯರು ಬೌದ್ಧಿಕವಾಗಿ ಹಾಗೂ ವೈಚಾರಿಕವಾಗಿ ತಮ್ಮ ಕಾಲಕ್ಕಿಂತ ಸಾವಿರ ಹೆಜ್ಜೆ ಮುಂದಿದ್ದರು ಎನ್ನುವುದಕ್ಕೆ ಕಸ್ತೂರಿಯ ನಿರ್ಮಾಣ ಕ್ರಮವೇ ಸಾಕ್ಷಿಯಾಗಿದೆ.

೨. ಕರ್ನಾಟಕ ಸಮಕಾಲೀನ ಆಗುಹೋಗುಗಳ ಬಗ್ಗೆ ವಿಚಾರ–ಚರ್ಚೆ ಸಂವಾದಗಳ ವೇದಿಕೆಯಾಗಿ ಲೇಖನಗಳನ್ನು ತರಿಸಿ ಪ್ರಕಟಿಸಿದರು. ೧೯೩೮ರಲ್ಲಿ ಧಾರವಾಡದಲ್ಲಿ ಮಿಂಚಿನ ಬಳ್ಳಿ ಪ್ರಕಾಶನ ಆರಂಭವಾದಾಗ ಪಾ.ವೆಂ. ಅವರು ಸಂಪಾದಕ ಬುರ್ಲಿ ಬಂದು ಮಾಧವರ ಜೊತೆಗೆ ಇದ್ದರು. ಆ ಅನುಭವದ ಕಸ್ತೂರಿ ಸಂಪಾದನೆಗೆ ನೆರವಾಗಿರಬೇಕು. ಶಿಕ್ಷಣ, ಜಾತಿ ಪದ್ಧತಿ, ರಾಜಕೀಯ, ಸಾಮಾಜಿಕ ಧಾರ್ಮಿಕ ಇತ್ಯಾದಿ ವಿಷಯಗಳು ಕಸ್ತೂರಿಯಲ್ಲಿ ಲೇಖನರೂಪದಲ್ಲಿ ಮಾತ್ರವಿರದೇ ಕಸ್ತೂರಿಯೊಂದು ಚರ್ಚೆಯ ವೇದಿಕೆಯಾಗಿ ಓದುಗರಿಗೆ ಹಾಗೂ ಸಹೃದಯರಿಗೆ ಬರಹದ ಮೂಲಕ ಚರ್ಚಿಸಲು ಮುಕ್ತ ಅವಕಾಶವಿತ್ತು

ಚರ್ಚೆಗಳು ಚಿಂತನ: ಅರವಿಂದರು ಹಾಗೂ ಅವರ ಪೂರ್ಣ ಯೋಗಗಳು ಭಾಗ ೧ ಮತ್ತು ೨ ಕೃತಜ್ಞತೆ ಕೆಲಸ ಮತ್ತು ಸುಖ, ಜಾತಿ ಪದ್ಧತಿ, ವಿಶ್ವ ವಿದ್ಯಾಲಯದಲ್ಲಿ ನಮ್ಮದೆಂಬುದು ಜೆ. ಕೃಷ್ಣಮೂರ್ತಿಯವರ ವಿಚಾರಗಳು ಬೆಲೆ ತರಬೇಕೆ ವಿಜ್ಞಾನದ ಪ್ರಗತಿಗೆ ಶಿಕ್ಷಣವನ್ನು ಶಿಕ್ಷಕನಿಗೆ ಬಿಡಿ (ಚರ್ಚೆ) ಸಾಮಾಜಿಕ ಬದಲಾವಣೆ (ಚರ್ಚೆ) ಅಸ್ತಿತ್ವ ಮತ್ತು ವ್ಯಕ್ತಿತ್ವ (ಚಿಂತನ) ನಮ್ಮ ದೇಶ ಅಷ್ಟು ಕೆಟ್ಟಿದೆಯೇ? ಈ ರೀತಿಯ ವಿಷಯಗಳು ದಾರ್ಶನಿಕರ ಸಮಾಜ ಸುಧಾರಕರ ತತ್ವಜ್ಞಾನಿಗಳ ನುಡಿಗಳನ್ನು ಚಿಂತನದಲ್ಲಿ ನೀಡುತ್ತಿದ್ದರು. ಶಿಕ್ಷಣ, ಜಾತಿಪದ್ಧತಿ, ರಾಜಕೀಯ, ಸಾಮಾಜಿಕ ಧಾರ್ಮಿಕ ಇತ್ಯಾದಿ ವಿಷಯಗಳು **ಕಸ್ತೂರಿ**ಯಲ್ಲಿ ಲೇಖನ ರೂಪದಲ್ಲಿ ಮಾತ್ರವಿರದೇ ಕಸ್ತೂರಿಯೆಂದು ಚರ್ಚೆ ವೇದಿಕೆಯಾಗಿಯೂ ಓದುಗರಿಗೆ ಹಾಗೂ ಸಹೃದಯರಿಗೆ ಬರಹದ ಮೂಲಕ ಚರ್ಚಿಸಲು ಮುಕ್ತ ಅವಕಾಶವಿತ್ತು.

ಪಾ.ವೆಂ. ಅವರು ಕಸ್ತೂರಿಯ ಆತ್ಮ ಮತ್ತು ಅಂತಃ ಶಕ್ತಿಯಾಗಿದ್ದರು. ಸಮಾಜದ ಜನತೆಯ ಹಿತಚಿಂತಕರಾಗಿದ್ದರು. ಹದಗೆಡುತ್ತಿರುವ ಸಮಾಜದ ಬಗ್ಗೆ ಗಾಢವಾಗಿ ಚಿಂತಿಸುತ್ತಿದ್ದರು. ಭಾಷೆಯನ್ನು ಚೆನ್ನಾಗಿ ದುಡಿಸಿಕೊಳ್ಳುವ ಜಾಣತನ ಪಾ.ವೆಂ. ಅವರಲ್ಲಿತ್ತು. ಮಾತುಗಳಲ್ಲಿ ಮರ್ಮ ತುಂಬುವ ಮಾಂತ್ರಿಕನಾಗಿದ್ದರು. ಸತ್ವಯುತವಾದ ಶಬ್ದಗಳಿಂದ ಅವುಗಳನ್ನು ಕಟ್ಟಿ ಹಿಡಿದು ಹೇಗೆ ಎಲ್ಲಿಗೆ ತಲುಪಿಸಬೇಕೋ ಅಲ್ಲಿಗೆ ತಲುಪಿಸುತ್ತಿದ್ದರು. ಗಂಭೀರ ವಿಷಯದ ಕುರಿತು ಬರೆಯುವಾಗ ಚಿಂತನಶೀಲ ದೃಷ್ಟಿಕೋನ ಅವರದಾಗಿತ್ತು. ಹಾಗಾಗಿಯೇ ಸಾರ್ವಜನಿಕರು ವಾಚಕ ಬಳಗದವರ ಹಿತ ದೃಷ್ಟಿಯಿಂದ ಕೆಲವು ಪ್ರಮುಖ ವಿಚಾರಗಳಿಗೆ ಕಸ್ತೂರಿಯನ್ನು ವಿಚಾರ ವೇದಿಕೆಯಾಗಿ ರೂಪಿಸಿದ್ದರು. ಇದರ ಉದ್ದೇಶ ಜಾಗೃತಿಯನ್ನು ಜನತೆಯಲ್ಲಿ ಮೂಡಿಸುವುದು. ಸತ್ಯಾ ಸತ್ಯತೆಯನ್ನು ಗ್ರಹಿಸಿ ವಸ್ತು ನಿಷ್ಟವಾದ ತೀರ್ಮಾನಕ್ಕೆ ಬರಬೇಕು. ಈ ರೀತಿಯ ವಿಚಾರ ವೇದಿಕೆಯಲ್ಲಿ ವ್ಯಕ್ತವಾಗುವ ಮರುವಿಚಾರಗಳು ಇವರು ಸಾಮಾನ್ಯ ಓದುಗರಾಗಿರದೆ ಸ್ವತಃ ಕ್ರಿಯಾಶೀಲರು ಆಗಿರುವುದರಿಂದ ತಮ್ಮ ವಿಚಾರವನ್ನು ರೂಪಿಸುತ್ತಾರೆ. ಇದು ಸಾರ್ವಜನಿಕ ರಂಗದ ಧುರೀಣರು, ಸಂಸ್ಥೆಗಳು ಸರಕಾರ ಸಮಾಜದ ಮೌಢ್ಯತೆ ಬಗ್ಗೆ ಇರಬಹುದು ಈ ರೀತಿ ಜನತೆಯ ಟೀಕೆ ಅಭಿಪ್ರಾಯಗಳಿಗೆ ತಪ್ಪಿತಸ್ಥರು ಹೆದರುತ್ತಾರೆ. ಇದಕ್ಕೆ ವ್ಯಾಪಕವಾದ ಪ್ರಸಾರವಿರುವುದರಿಂದ ಇದು ಜನಾದೇಶವು ಲೋಕ ಮತವು ಆಗಿರುತ್ತದೆ. ಪಾ.ವೆಂ. ಅವರು ಈ ರೀತಿಯ ವಿಚಾರವನ್ನು ಮರು ವಿಚಾರಕ್ಕೊಡ್ಡಿದಾಗ ಸಂಪೂರ್ಣವಾಗಿ ದಾಖಲೆ ವಿವರಗಳ ಸ್ಪಷ್ಟತೆಯನ್ನು ಪೂರ್ವಪರ ವಿಚಾರವನ್ನು ಒಳಗೊಂಡು ವಾಚಕರೊಂದಿಗೆ ತಮ್ಮ ಬರಹದ ಮೂಲಕ ಮಾತನಾಡಿಸುತ್ತಿದ್ದರು.

ದೇಶಗಳು, ನಗರಗಳು: ಅಮೇರಿಕಾದಲ್ಲಿ ನಾನು, ಜಪಾನ್ ಒಂದು ಪೌರಾಸ್ತ ಪವಾಡ, ಝುಕೋಸ್ಲೋವಾಕಿಯ, ಪೂರ್ವ ಆಫ್ರಿಕಾದಲ್ಲಿ ನಾವು ನಮ್ಮವರು, ಸಿಂಗಾಪುರ ದೇಶದ ನಾಡಿನ ಪ್ರಸಿದ್ಧ ನಗರಗಳು ಇವೆಲ್ಲವನ್ನು ಓದುತ್ತಾ

ಹೋದಹಾಗೆ ಆ ದೇಶವನ್ನೇ ಸುತ್ತಾಡಿದ ಅನುಭವ ವಾಚಕರ ಮನದಲ್ಲಿ ಆಗುತ್ತಿತ್ತು. ಈ ರೀತಿಯ ಲೇಖನಗಳು ಸ್ವದೇಶ, ವಿದೇಶಗಳ ಆಗು ಹೋಗುಗಳ ದಿಗ್ದರ್ಶನಗಳಂತಿತ್ತು.

ಸಹಚಿಂತನ: ಕಸ್ತೂರಿಯ ಸಹ ಚಿಂತನ ವಿಭಾಗ ಕಸ್ತೂರಿಯ ವಾಚಕರಿಗೊಂದು ಚರ್ಚೆಯ ವೇದಿಕೆಯಾಗಿತ್ತು. ತಮ್ಮ ವಾಚನದ ನಂತರ ಅಂತರಂಗದಲ್ಲಿ ಮೂಡಿದ ವಿಷಯಗಳನ್ನು ಮುಕ್ತವಾಗಿ ಪ್ರತಿಕ್ರಿಯಿಸಲು ಚರ್ಚಿಸಲು ಒಂದು ಅವಕಾಶವನ್ನು ಪಾ.ವೆಂ. ಅವಕಾಶವನ್ನು ಒದಗಿಸಿದ್ದರು.

ಕಸ್ತೂರಿಯಲ್ಲಿರುವ ಸಹ ಚಿಂತನ ವಿಷಯ, ವೈಶಿಷ್ಟ್ಯ ಉಳಿದ ಸಂಚಿಕೆಗಳಂತೆ ವ್ಯಾಪಾರಿ ಉದ್ದೇಶವಲ್ಲ. ಓದುಗರ ಪ್ರಶ್ನೆಗಳಿಗೆ ಸಾವಕಾಶವಾಗಿ ಉತ್ತರಿಸುತ್ತಾರೆ. ಎಲ್ಲ ವಿಷಯಗಳನ್ನು ಓದುಗರ ಮನಸ್ಸನ್ನು ಸ್ಪರ್ಶಿಸಿ ಮರು ಉತ್ತರವನ್ನೇ ಬಯಸುವುದು ಓದುಗರೊಡನೆ ಚಿಂತನ.

ಸಹ ಚಿಂತನದಲ್ಲಿ ಮುಖ್ಯ ಲೇಖನಗಳ ಚರ್ಚೆ ಮಹತ್ತರವಾಗಿರುತ್ತದೆ. ಓದುಗರ ಪ್ರತಿಕ್ರಿಯೆ ಮುಖ್ಯವೆನಿಸುತ್ತದೆ. ಮುಂದಿನ ಲೇಖನಗಳಿಗೆ ಬರೆದ ಮುನ್ನುಡಿ ಎಚ್ಚರಿಕೆಯ ವಿವೇಕದ ಮಾತುಗಳಾಗಿರುತ್ತವೆ. ಕಸ್ತೂರಿಯ ತಪ್ಪು ಒಪ್ಪುಗಳೂ ಕೂಡ ಮುಂದಿನ ಬೆಳವಣಿಗೆಗೆ ಪೂರಕವಾದಂತಿತ್ತು. ಸಹಸಂಪಾದಕರೂ ಕೂಡ ತಪ್ಪುಗಳಿದ್ದರೆ ವಿಷಾದಿಸಿ ಸರಿಯಾದ ಅಂಶಗಳನ್ನು ಸ್ಪಷ್ಟೀಕರಿಸಿ ಅನೇಕ ಉದಾಹರಣೆಗಳಿವೆ.

ಉದಾಹರಣೆ: ಚಳವಳಿ ಮತ್ತು ದಬ್ಬಾಳಿಕೆಗಳು: ರಾಜಕೀಯ ಲೇಖನ ಜೂನ ೧೯೭೪ ಕಸ್ತೂರಿ ಮೇಲಿನ ತಲೆಬರಹ ಪಾ.ವೆಂ. ಅವರ ಸಕಾಲಿಕ ಲೇಖನಕ್ಕೆ ಪೂರಕವಾದ ಅಂಶಗಳು ೬. ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ನೇ ಕಲಮು ಒತ್ತಟ್ಟಿಗಿರಲಿ (ಓದುಗ ಅರವಿಂದ ಮುಳಗುಂದ ಅವರ ಪ್ರತಿಕ್ರಿಯೆ) ಬಲಯುತವಾದ ಭಾರತ ರಕ್ಷಣಾ ನಿಯಮ ಮತ್ತು ಆಂತರಿಕ ಕಾನೂನುಗಳ ಬಳಕೆಯಿಂದ ಬಂಧನ ಕಿರುಕುಳಗಳ ಮುಖಾಂತರ ಸರಕಾರ ರಾಜಕೀಯ ವಿರೋಧಗಳನ್ನು ಸದೆಬಡೆದು ಹೊರಟಿದ್ದು ನಿಜಕ್ಕೂ ಕಳವಳಕಾರಿಯಾದ ಸಂಗತಿಯಾಗಿದೆ.

ಉದಾಹರಣೆ: ಚಳವಳಿ ದಬ್ಬಾಳಿಕೆ: ಮೇಲಿನ ನನ್ನ ಲೇಖನದ ವಿಷಯದಲ್ಲಿ (ಜೂನ್ ೧೯೭೪) ಶ್ರೀ ಅರವಿಂದ ಮುಳಗುಂದ (ಜುಲೈ ೧೯೭೪) ಅವರು ಆಕ್ಷೇಪವೆತ್ತಿದ ಜನರ ಹಿತಗಳ ಲಕ್ಷ್ಯವಿಲ್ಲದ ಸರಕಾರದ ವಿರುದ್ಧ ಚಳುವಳಿಗಳನ್ನು ಸಂಘಟಿಸಿ ಸರಕಾರಗಳನ್ನು ಉರುಳಿಸಿ ಬುದ್ದಿ ಕಲಿಸದೇ ವಿಧಿಯೇ ಇಲ್ಲವೆಂದೂ ಅದು ಸರಿಯೇ ಎಂದು ವಾದಿಸಿದ್ದಾರೆ. ಯಶಸ್ವಿಯಾದರೆ ಯಾವುದು ಸರಿಯೇ ಎಂದು ನಾನೊಪ್ಪುತ್ತೇನೆ. ಆದರೆ ಗುಜರಾತಿನಲ್ಲಿ ಸುಲಭವಾಗಿ ಆದದ್ದು ಬಿಹಾರದಲ್ಲಿ (ಗುಜರಾತಿಗಿಂತಲೂ ಕೊಳೆ ತುಂಬಿದ ರಾಜ್ಯ ಅದು) ಕಠಿಣವಾಗುತ್ತದೆಂದು ನಾನು ಅವರ ಗಮನಕ್ಕೆ ತರಬಯಸುತ್ತೇನೆ. ಕ್ರಾಂತಿಗಾಗಿ ಗಟ್ಟಿತಲೆಯ ನಾಯಕರು ಜನರನ್ನು ಸಂಘಟಿಸುವುದಾದರೆ ಅದಕ್ಕೆ ಅರ್ಥ ಬರುತ್ತದೆ. ಆದರೆ ಈಗಿನ ಚಳುವಳಿಗಳು ಅಸಂಘಟಿತ, ಅವ್ಯವಸ್ಥಿತ, ಬೇಜವಾಬ್ದಾರಿ

ಸ್ವರೂಪವನ್ನೇ ಹೆಚ್ಚಾಗಿ ತೋರಿಸುತ್ತವೆ. ಅವು ಸರಕಾರಕ್ಕೆ ಹೆಚ್ಚು ಹೆಚ್ಚು ದಬ್ಬಾಳಿಕೆ ಕಾನೂನುಗಳ ಆಶ್ರಯ ಪಡೆಯುವುದಕ್ಕೆ ನೆವ ಒದಗಿಸುತ್ತದೆ ಎಂದಷ್ಟೇ, ನನ್ನ ಹೇಳಿಕೆ. ಗೊಂದಲ ಹಾಕುವುದು ಕ್ರಾಂತಿಯಲ್ಲ- ಪಾ. ವೆಂ. ಹುಬ್ಬಳ್ಳಿ. ರಾಷ್ಟ್ರದ ಸಮಾಜದ ಹಿತ ಚಿಂತಕರಾದ ಪಾ.ವೆಂ. ಈ ರೀತಿಯ ವಿಷಯ ಚಿಂತನಗಳು ವಾಚಕರಿಗೆ ಸ್ಪಷ್ಟೀಕರಿಸಿದ ರೀತಿಯನ್ನು ಕಾಣುತ್ತೇವೆ. ವಿಚಾರ ಸರಣಿಯ ಮುಖಾಂತರ ಸ್ಪಂದಿಸುವ ರೀತಿ ಪ್ರಮುಖವಾದ್ದು. ಓದುಗರು ಕೂಡ ಒಂದು ರೀತಿ ತಮ್ಮ ಮನದಾಳದ ವಿಚಾರ ಕಿರಣಗಳನ್ನು ಹಂಚಿಕೊಳ್ಳುವ ಒಂದು ವೇದಿಕೆ. ಸಹಚಿಂತನ ವಿಭಾಗವಾಗಿತ್ತು ವಿಷಯಗಳ ಚಿಂತನ ಸ್ಪಷ್ಟ ರೂಪದಲ್ಲಿ ಎಲ್ಲರಿಗೂ ತಲುಪುತ್ತಿತ್ತು.

ವಾಚಕರ ಅಭಿಪ್ರಾಯ: ಒಂದು ಪತ್ರಿಕೆಯ ಸಂಪಾದಕೀಯ ಪುಟದ ನಿರ್ದಿಷ್ಟ ಸ್ಥಳದಲ್ಲಿ ಪ್ರಕಟವಾಗುವ ಈ ಅಂಕಣ ಕಸ್ತೂರಿ ಪತ್ರಿಕೆಯ ಮೊದಲ ೨ ಪುಟಗಳಲ್ಲಿ ಪ್ರಕಟವಾಗುತ್ತಿತ್ತು. ಪತ್ರಿಕೋದ್ಯಮದ ಪ್ರಾರಂಭದ ದಶಕಗಳಲ್ಲಿ ಸಂಪಾದಕರ ತಿರಸ್ಕಾರಕ್ಕೆ ಒಳಗಾಗಿತ್ತು. ಓದುಗ ತಾನು ಮೆಚ್ಚುವ ಪತ್ರಿಕೆಯೊಂದಿಗೆ ಗುರುತಿಸಿಕೊಳ್ಳುವ ರೀತಿ ಇದು. ಸಂಪಾದಕೀಯ ಪುಟದ ಅಲಂಕಾರವೂ ಆಗಿದೆ. ಓದುಗನ ಅಭಿಪ್ರಾಯದ ಕೆಳಗೆ ಸಂಪಾದಕರ ಸಮನ್ವಯ ಉತ್ತರವೂ ಇರುತ್ತದೆ. ಈ ರೀತಿ ಓದುಗರ ಅಭಿಪ್ರಾಯಕ್ಕೆ ಮಹತ್ವ ನೀಡುವುದರಿಂದ ಓದುಗರ ದೃಷ್ಟಿಯಲ್ಲಿ ಅದರ ಘನತೆ ಹೆಚ್ಚುತ್ತದೆ. ಇದು ಒಂದು ರೀತಿಯ ಕೊಡು-ಕೊಳ್ಳುವಿಕೆಯ ಗೌರವ. ಓದುಗರೇ ಪ್ರಭುಗಳು.

ಪತ್ರಿಕೆಗಳಿಗೆ ಓದುಗರು ಕಳಿಸುವ ಪತ್ರಗಳ ಅಂಕಣಕ್ಕೆ ಬೇರೆ ಬೇರೆ ಪತ್ರಿಕೆಗಳಲ್ಲಿ ಬೇರೆ ಬೇರೆ ಹೆಸರುಗಳಿರುತ್ತವೆ. ವಾಚಕರವಾಣಿ, ಜನವಾಣಿ ಜನ ಸ್ಪಂದನ ಇತ್ಯಾದಿ ಅನೇಕ ಪತ್ರಿಕೆಗಳಲ್ಲಿ ನಾವು ಕಾಣುತ್ತೇವೆ. ಸಹಸ್ಪಂದನ ವಿಭಾಗದಲ್ಲಿ ಎರಡು ರೀತಿಯ ಬರಹಗಳನ್ನು ಗಮನಿಸುತ್ತೇವೆ. ಒಂದು ಚಿಂತೆ ಹಾಗೂ ಇನ್ನೊಂದು ಚಿಂತನೆ. ಜನತೆಯ ಸಾಮಾಜಿಕ ರಾಷ್ಟ್ರದ ಸರಕಾರದ ಸಾರ್ವಜನಿಕರ ಹಿತದೃಷ್ಟಿಯಿಂದ ಯೋಚಿಸಿ ಸತ್ಯ ಜೀವನದ ಕುಂದುಕೊರತೆಗಳನ್ನು ಪತ್ರಿಕೆಯ ಮೂಲಕ ಸರಕಾರದ ಸ್ಥಳೀಯ ಇಲಾಖೆ ಸಂಸ್ಥೆಗಳ ಗಮನಕ್ಕೆ ತರುವ ಪ್ರಯತ್ನ ಇರಬಹುದು. ಎರಡನೇ ಪ್ರಕಾರ ವೈಚಾರಿಕ ಚಿಂತನ ಇವು ತಮ್ಮ ವಿಚಾರ ಮಂಡನೆ ಮಾಡುವುದು. ಕುಂದು ಕೊರತೆಗಳನ್ನು ಎತ್ತಿ ತೋರಿಸುವುದು ಒಂದು ರೀತಿಯ ಜನಸೇವೆಯಾಗಿರುತ್ತದೆ. ಓದುಗರು ಇದರಿಂದ ಸಂಪಾದಕರಿಗೆ ಹತ್ತಿರವಾಗುತ್ತಾರೆ. ಈ ರೀತಿಯ ಪತ್ರಗಳು ಶಕ್ತಿಯುತ ಸುದ್ದಿ ಮೂಲಗಳು ಆಗಿರುತ್ತದೆ. ವೈವಿಧ್ಯಮಯವಾದ ಪತ್ರಗಳು ಸಮಗ್ರ ಓದುಗರ ಪರಿಸ್ಥಿತಿಯ ದರ್ಶನ ಮಾಡಿಸುತ್ತದೆ. ಕೆಲವೊಮ್ಮೆ ಲೇಖನಗಳಿಗೆ ಪ್ರತಿಕ್ರಿಯೆ ದರ್ಶನ ಮಾಡಿಸುತ್ತದೆ. ಕೆಲವೊಮ್ಮೆ ಲೇಖನಗಳಿಗೆ ಪ್ರತಿಕ್ರಿಯೆ ವ್ಯಕ್ತ ಪಡಿಸುವ ಪತ್ರಗಳ ಹೊಸ ವಿಚಾರಗಳನ್ನು ಹುಟ್ಟು ಹಾಕಿ ಮುಂದಿನ ಲೇಖನಕ್ಕೆ ವಸ್ತುವಾಗುತ್ತದೆ.

ಕೆಲವೊಮ್ಮೆ ಸಂಪಾದಕೀಯವನ್ನು ಟೀಕಿಸಿ ಬರೆದು ಪ್ರಶಂಸಿಸಿ ಹಾಗೂ ಸಮರ್ಥಿಸಿ ಬರೆಯುವ ಪತ್ರಗಳಿಗೆ ಪಾ.ವೆಂ. ಅವರು ಆದ್ಯತೆ ಕೊಟ್ಟು ನೈತಿಕ ಧೈರ್ಯದಿಂದ ವಾಚಕರಿಗೆ ಉತ್ತರಿಸಿದ್ದಾರೆ. ಅದನ್ನು ಪ್ರಕಟಿಸಿದ್ದಾರೆ. ಇದರಿಂದಲೇ ಕಸ್ತೂರಿ ವಿಶ್ವಾಸಾರ್ಹವಾಗಿ ಜನಪ್ರಿಯವಾಗಿ ಲಾಭದಾಯಕವಾಗಿ ಪ್ರಸಾರವಾಗುತ್ತಿತ್ತು. ಪತ್ರಿಕೆಯ ಗುಣಮಟ್ಟವನ್ನು ಹೆಚ್ಚಿಸಿದೆ.

೩. ಕನ್ನಡ ಅಥವಾ ಕರ್ನಾಟಕದ ವ್ಯಕ್ತಿ ವಿಶೇಷ, ಸಂಸ್ಕೃತಿ ಸಾಹಿತ್ಯದ ವಿಕಾಸಗಳನ್ನು ಗುರುತಿಸುವ ಮಾಹಿತಿ ಮತ್ತು ವಿಶ್ಲೇಷಣೆಯ ಲೇಖನಗಳು ಕಸ್ತೂರಿಯನ್ನು ಅಲಂಕರಿಸಿದವು. ಮೇಲಿನ ಎರಡು ಅಂಶಗಳಿಗೆ ಉದಾಹರಣೆಯಾಗಿ ೧೯೬೬ ರಿಂದ ಪ್ರಾರಂಭವಾದ ವಸಂತ ಸಂಚಿಕೆಯನ್ನು ನೋಡಬಹುದು. ಕಸ್ತೂರಿಗೆ ಹತ್ತು ವರ್ಷ ತುಂಬಿದಾಗ ಹೊರಬಂದ ವಿಶೇಷ ಸಂಚಿಕೆ ಪಾ.ವೆಂ. ಸಂಪಾದಕತ್ವದಲ್ಲಿ ವರ್ಷ ವಸಂತ ಸಂಚಿಕೆಯು ವಿಶೇಷ ರೀತಿಯಲ್ಲಿ ಆಕರ್ಷಕವಾಗಿ ಮೂಡಿಬಂದಿದೆ. ಇದಕ್ಕಾಗಿ ಕಸ್ತೂರಿ ಸಂಚಿಕೆಯಲ್ಲಿ ಹೆಚ್ಚಿನ ಪುಟಗಳು (ಏಪ್ರಿಲ್) ವಸಂತ ಸಂಚಿಕೆಗೆ ಸೇರ್ಪಡೆಯಾದವು. ವಸಂತವನ್ನು ಕುರಿತು ಲೇಖನಗಳು, ಅಧಿಕ ಚಿತ್ರಗಳು, ವಿಶೇಷ ಲೇಖನಗಳು ಹಾಗೂ ಕಥೆಗಳು ಪ್ರಥಮ ಸಂಚಿಕೆಯಲ್ಲಿ ಸೇರ್ಪಡಿಸಿದ್ದರು. ವಸಂತ ಸಂಚಿಕೆಯ ಮಹತ್ವ ಉದೇಶವನ್ನು ಪಾ.ವೆಂ. ಅವರು ಋತು ವಸಂತದ ಸಂದೇಶದೊಂದಿಗೆ ಸಮೀಕ್ಷಿಸುತ್ತಾರೆ.

'ವಸಂತ ಕಾಲವು ಸಸ್ಯಗಳನ್ನು ಮಾತ್ರ ನಳನಳಿಸುವಂತೆ ಮಾಡುವುದಿಲ್ಲ. ಅದು ಸಕಲ ಜೀವ ಜಾತುಗಳಲ್ಲಿ ಒಂದು ಸಮ್ಮೋಹ ಸ್ಥಿತಿಯನ್ನುಂಟು ಮಾಡುತ್ತದೆ. ವಸಂತ ಕಾಲದ ಅರ್ಥ ಇಷ್ಟೇ. ನಾವು ಸಾವನ್ನು ನಿನ್ನೆಗಳನ್ನು ನೆನೆದು ಅಳುತ್ತಾ ಕೂಡಲು ಬಂದವರಲ್ಲ. ನಾಳೆಗಳನ್ನು ತರಲು ಜೀವನವನ್ನು ಇನ್ನೊಂದು ಹೆಜ್ಜೆ ಮುಂದೊಯ್ಯಲು ಬಂದವರು. ಜೀವಗಳು ನಶ್ವರವಾಗಿರಬಹುದು. ಆದರೆ ಜೀವನವು ಚಿರಂತನವಾದದ್ದು ಶಾಶ್ವತವಾದದ್ದು'.

ಪಾ.ವೆಂ. ಅವರಿಗೆ ಸಾಹಿತ್ಯದ ಗುಣವನ್ನು ಪುರಸ್ಕರಿಸುವ, ವಿಮರ್ಶಿಸುವ ಪರ ವಿರೋಧ ಭಾವನೆಗಳಿಲ್ಲದ ನಿರ್ಮಲ ಮನಸ್ಸು ಅವರಲ್ಲಿತ್ತು. ಸಾಹಿತ್ಯದ ಸತತ ಅಭ್ಯಾಸಿಯಾಗಿದ್ದರು. ಹೊಸ ಪ್ರವೃತ್ತಿಯ ಒಲವು, ನಿಲುವುಗಳನ್ನು ಅರ್ಥಮಾಡಿಕೊಂಡು ಸಾಹಿತ್ಯ ಚರಿತ್ರೆಯನ್ನು ಸಂಪೂರ್ಣ ತಿಳಿದುಕೊಂಡಿದ್ದರು. ಪಾ.ವೆಂ. ಅವರು ಕಾದಂಬರಿಗಾರ, ಕತೆಗಾರ ಯಾವುದು ಅಲ್ಲದಿದ್ದರೂ ಒಬ್ಬ ಸಾಹಿತಿಯ ಕೃತಿಯ ಮೌಲ್ಯವನ್ನು ಮುಕ್ತ ಮನಸ್ಸಿನಿಂದ ಆ ಕೃತಿಯಲ್ಲಿ ಅಡಕವಾಗಿರುವ ಸಿದ್ಧಾಂತವಾಗಲೀ ಸಂದೇಶವಾಗಲಿ ಅದನ್ನು ಅರ್ಥೈಸಿಕೊಂಡು ಆಸಕ್ತ ಓದುಗರಿಗೆ ಕಸ್ತೂರಿ ವಾಹಿನಿಯ ಮೂಲಕ ನೀಡುತ್ತಿದ್ದರು. ಇದೊಂದು ಪಾ.ವೆಂ. ಅವರ ವಿಶಿಷ್ಟ ಕಲೆ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಎಲ್ಲ ಲೇಖಕರನ್ನು ಅವರ ಸಾಮಾಜಿಕ ಬದ್ಧತೆ ಒಲವು ನಿಲುವುಗಳನ್ನು ಅದರ ವ್ಯಾಪ್ತಿಯನ್ನು ಕಟ್ಟುನಿಟ್ಟಾಗಿ ಅರ್ಥಮಾಡಿಕೊಂಡಿದ್ದ ಮನ್ನಣೆ ಪಡೆದ

ವಿಮರ್ಶಕರಾಗಿದ್ದರು. ಪಾ.ವೆಂ. ಅವರ ಆಯ್ಕೆಯ ದೃಷ್ಟಿಕೋನ, ಲಘುವಾದ ಭಾಷೆಯಲ್ಲಿ ವ್ಯಕ್ತಪಡಿಸುವ ರೀತಿ, ಓದುಗರ ನಡುವೆ ಮತ್ತು ಸಂಪಾದಕರ ನಡುವೆ ಜ್ಞಾನದ ಸೇತುವೆಯನ್ನು ಕಸ್ತೂರಿ ಕಟ್ಟಿತ್ತು. ಇದಕ್ಕೆ ಸಾಕಷ್ಟು ಪುರಾವೆಗಳನ್ನು ನಾವು ಕಸ್ತೂರಿಯ ವಸಂತ ಸಂಚಿಕೆ ಬರಹಗಳಲ್ಲಿ ಕಾಣುತ್ತೇವೆ. ೧೯೬೬ರಲ್ಲಿ ಪ್ರಾರಂಭವಾದ ಕಸ್ತೂರಿಯ ವಸಂತ ಸಂಚಿಕೆಗೆ ೧೦ ವರ್ಷ ತುಂಬಿದಾಗ ಪಾ.ವೆಂ. ಅವರ ಸಂಪಾದಕತ್ವದಲ್ಲಿ ೯ ವರ್ಷ ಈ ಸಂಚಿಕೆಯು ವಿಶೇಷವಾಗಿ ಹೊರಬಂದಿದೆ. ಪಾ.ವೆಂ. ಸಂಪಾದಕರಾಗಿ ೧೯೬೬-೭೪ರವರೆಗೆ ಅಂದಿನ ಪ್ರಚಲಿತ ವಿಷಯ ಸಮಸ್ಯೆಗಳನ್ನು ಆರಿಸಿ ಪ್ರಶ್ನೆಗಳನ್ನು ನಿರ್ಮಾಣ ಮಾಡಿ ಉತ್ತರ ರೂಪದ ಬರಹಗಳನ್ನು, ಟಿಪ್ಪಣಿಗಳನ್ನು ಬರೆಸುತ್ತಿದ್ದರು, ಪ್ರಕಟಪಡಿಸುತ್ತಿದ್ದರು. ಶಂ. ಬಾ. ಜೋಶಿಯವರ ವಿಚಾರಧಾರೆ ಗೋಪಾಲಕೃಷ್ಣ ಅಡಿಗರು, ಪೂರ್ಣಚಂದ್ರ ತೇಜಸ್ವಿಯವರ ವಿಚಾರಗಳು, ಚಿದಾನಂದಮೂರ್ತಿ, ಚನ್ನವೀರಕಣವಿ, ಗೌರೀಶ ಕಾಯ್ಕಿಣಿ, ಶಿವರುದ್ರಪ್ಪ, ಆಲನಹಳ್ಳಿ ಯು. ಆರ್. ಅನಂತಮೂರ್ತಿ, ಎಸ್. ಎಲ್. ಭೈರಪ್ಪ, ಶ್ಯಾಮಸುಂದರ ಬಿದರಕುಂದಿ, ಹೀಗೆ ಸಾಹಿತಿಗಳ ವಿವಿಧ ಮುಖ ಬರವಣಿಗೆಗಳಾದ ಕಥೆ, ಕವಿತೆ, ವಿಮರ್ಶೆ, ಪ್ರಬಂಧ ಕಾದಂಬರಿ ಎಲ್ಲ ಸಾಹಿತ್ಯ ಮುಖಗಳನ್ನು ವಾಚಕರಿಗೆ ಪರಿಚಯಿಸಿದರು. ಪಾ.ವೆಂ. ಸಂಪಾದಕರಾಗಿ ಕೇವಲ ಲೇಖನಗಳನ್ನು ಬರೆದು ಬರೆಯಿಸಿ ಪ್ರಕಟಪಡಿಸುವ ಕೆಲಸವನ್ನು ಮಾತ್ರ ಮಾಡುತ್ತಿರಲಿಲ್ಲ. ಆಯಾ ಕಾಲಕ್ಕೆ ಸಂದರ್ಭಕ್ಕೆ ತಕ್ಕಂತೆ ಲೇಖನಗಳನ್ನು ಪ್ರಕಟಿಸಿ ಓದುಗರ ಮನಸ್ಸನ್ನು ತಟ್ಟಿ ಅವರಿಂದ ಪ್ರತಿ ಅಭಿಪ್ರಾಯಗಳನ್ನು, ವಿಮರ್ಶೆಗಳನ್ನು ತಪ್ಪು ಒಪ್ಪುಗಳನ್ನು ಸಂಗ್ರಹಿಸಿ ಸಹ ಚಿಂತನದಲ್ಲಿ ಪ್ರಕಟಿಸುತ್ತಿದ್ದರು. ಕೆಲವೊಮ್ಮೆ ಲೇಖನಗಳಿಗೆ ಮಹಾಲೇಖನಗಳನ್ನು ಪ್ರಕಟಿಸುತ್ತಿದ್ದು ಪೂರಕ ಅಂಶಗಳು ಮತ್ತು ವಿರುದ್ಧ ಅಂಶಗಳು ಕೂಡ ಇರುತ್ತಿದ್ದವು.

ಕನ್ನಡದಲ್ಲಿ ಹಿಂದಿರದು, ಮುಂದಿರದು ಎಂಬಂಥ ಕವಿ ಮುದ್ದಣನ **ರಾಮಾಶ್ವಮೇಧದ** ರಸಭರಿತ ಅಂಶಗಳ (ಸಿ. ವ್ಯಾಸರಾವ್) ಹೊಸಗನ್ನಡದ ಅವತಾರ. ಅಕಾಡಮಿ ಬಹುಮಾನ ಹೊಂದಿ ಇಂಗ್ಲೀಷ ಆದಿ ಅನೇಕ ಭಾಷೆಗಳಿಗೆ ಪರಿವರ್ತಿಸಲ್ಪಟ್ಟ ಖ್ಯಾತ ಮರಾಠಿ ಕಾದಂಬರಿ **ಬನಗರವಾಡಿ**ಯ ಸಂಗ್ರಹ ಕನ್ನಡದ ಸಿದ್ಧ ಹಸ್ತ ಲೇಖಕರ ಏಕಾಂಕ ಲೇಖನ ಕತೆಗಳು ಅಂತರಾಷ್ಟ್ರೀಯ (ರಾಗಮೂಲಕಂಸ ಕಲಾವಿದ ಶ್ರೀ ಎಂ.ವಿ. ಮಿಣಜಗಿ) ಕಲಾವಿದರ ಮುಖಚಿತ್ರ ಹಾಗೂ ಇನ್ನೊಬ್ಬ ಕಲಾವಿದರ ಸಚಿತ್ರ ಪರಿಚಯ ಇವಲ್ಲದೇ ಕಸ್ತೂರಿಯಲ್ಲಿ ಸಾಮಾನ್ಯವಾಗಿರುವ ವೈಶಿಷ್ಟ್ಯಗಳು ಕನ್ನಡ ಲೇಖಕರಿಗೆ ಮತ್ತು ಭಾರತೀಯ ವಿಷಯಗಳಿಗೆ ಪ್ರಾಧಾನ್ಯವಿರುವುದು ಇನ್ನೊಂದು ವಿಶೇಷ.

ಮುಖ ಚಿತ್ರ ಕರ್ನಾಟಕದ ಹಿರಿಯ ಕಲಾವಿದರೂ ಕಲಾ ಗುರುಗಳೂ ಲಲಿತಾ ಕಲಾ ಅಕಾಡಮಿಯ ಸದಸ್ಯರು ಆದ ಶ್ರೀ ಎಂ. ವಿ. ಮಿಣಜಗಿಯವರು ತಮ್ಮ ಮುಂಬಯಿಯ ಗೆಳೆಯರಾದ ಶ್ರೀ ಸಿ.ಯಂ. ಪಾಂಡರ ಕಾಣಿಕೆ, ರಾಗ ಮೂಲ

ಕಂಸಾ ಎಂಬ ಮುದ್ದಾದ ವರ್ಣ ಚಿತ್ರ. **ಕೃಷ್ಣಾಜಿ ಅರಾ ಮತ್ತು ಅವರ ಕಲೆ:** ಅ.ರಾ. ಅವರ ಅಪೂರ್ವ ಜೀವನ ಹಾಗೂ ಕಲೆಯ ಪರಿಚಯ ಅವರ ಚಿತ್ರಗಳ ಸಂಗ್ರಹಕ್ಕಾಗಿ ಶ್ರಮಿಸಿದವರು ಶ್ರೀ ಭಾರದ್ವಾಜರು. ಹೀಗೆ ಪಾ.ವೆಂ ಅವರು ಜೀವನದ ಯಾವುದೇ ರಂಗದಲ್ಲಿ ವಿಜೃಂಭಿಸಿದವರನ್ನು ಅರಸಿಕೊಂಡು ಹೋಗಿ ಸೆರೆ ಹಿಡಿದು ಅವರು ಸಾಧಿಸಿದ್ದೇನು? ಅದರ ಗುಟ್ಟೇನು ಎಂಬುದನ್ನು ಗ್ರಹಿಸಿ ಆ ಜೀವನದ ಯಶಸ್ಸಿನ ಮರ್ಮವನ್ನು ವಿವರಿಸಿ ವಾಚಕರಿಗೆ ನೀಡುತ್ತಿದ್ದರು.

ಕರ್ನಾಟಕದ ಹಿರಿಯ ಲೇಖಕರು ತಮ್ಮ ಜೀವನದಲ್ಲಿ ಕಲಿತ ಪಾಠದ ಸಾರವನ್ನು ಓದುಗರಿಗೆ ಬಡಿಸಿದ ಡಾ. ಪಾರ್ವತಿ ಕೋದಂಡರಾವ್ ಹಾಗೂ ಡಾ. ಕಾರಂತರ ಲೇಖನಗಳು ಇಲ್ಲಿ ಮುಖ್ಯವಾಗಿದೆ.

೧) **ನನ್ನನ್ನು ಪ್ರೇರಿಸುವ ಶಕ್ತಿ ಯಾವುದು? ಜೀವನದ ದೃಷ್ಟಿಯ ಬಗ್ಗೆ ಲೇಖನ:** ಯೋಗ್ಯ ವರ್ತನೆ ಮತ್ತು ಯೋಗ್ಯ ನಿರ್ಧಾರ ಎನ್ನುತ್ತಾರೆ ಡಿ.ಸಿ. ಪಾವಟೆಯವರು.

೨) **ಬಾಳೇ ಬಾಳಿಗೆ ಪ್ರೇರಣೆ** : ಮಾಡಬೇಕಾದುದಾದರೆ ಮಾಡಲೇಬೇಕೆಂಬ ಭರವಸೆಯ ಬಲ ಎನ್ನುತ್ತಾರೆ ಡಾ. ಶಿವರಾಮ ಕಾರಂತರು.

೩) ನನ್ನ ಸ್ವಾರ್ಥವೇ ನನಗೆ ಸ್ಫೂರ್ತಿ ಗೆಳೆಯರೆ ಆಧಾರ ಎನ್ನುತ್ತಾರೆ ಶ್ರೀ ಪಿ. ಕೆ. ಕೋದಂಡರಾಯರು. ಅನುಭವವೇ ಬದುಕಿನ ಆಳಗಳನ್ನು ವಿಸ್ತರಿಸಿ ಮಾನವ ಬದುಕಿನ ಸಾರ್ಥಕತೆಯ ಮಹತ್ವವನ್ನು ವಾಚಕರಿಗೆ ಈ ಮೂರು ಲೇಖನಗಳು ಸ್ಪಷ್ಟಪಡಿಸುತ್ತದೆ.

೧೯೬೭ ವಸಂತ ಸಂಚಿಕೆ ಮೇ 'ನಮ್ಮ ದೇಶ ಪಂಚಶೂಲ ನಿವಾರಣೆ' ಶ್ರೀ ಹಾವನೂರ ಪುಸ್ತಕ ಸಂಗ್ರಹ ವಿಭಾಗದಲ್ಲಿ ಕೆ.ಪಿ.ಎಸ್. ಮೆನನ್‌ರ **ಜಗತ್ತಿನ ಸುತ್ತ** ಎನ್ನುವ ಲೇಖನ ಮುಖ್ಯವಾದುದು. ಶ್ರೀ ಕೆ.ಪಿ.ಎಸ್. ಮೆನನ್‌ರು ಸ್ವತಂತ್ರ ಭಾರತದ ರಾಯಭಾರಿ ವರ್ಗದಲ್ಲಿ ಹೆಸರಾಂತವರು ಅನೇಕ ಕಷ್ಟಕರವಾದ ರಾಯಭಾರ ಕಾರ್ಯಗಳನ್ನು ನಿರ್ವಹಿಸಿದವರು ನಿವೃತ್ತರಾದ ನಂತರ ಅವರು ಕೈಗೊಂಡ ವಿಶ್ವಪರ್ಯಟನದ ವರ್ಣನೆ ಅವರ ಗ್ರಂಥದಲ್ಲಿದೆ.

ಶಾಂತಿನಾಥ ದೇಸಾಯಿಯವರ–**ನಾ ಕಂಡ ಇಂಗ್ಲೆಂಡಿನ ರಂಗಭೂಮಿ.**

ದೇವದತ್ತ–ಡಿ.ವಿ.ಜಿ. ವ್ಯಕ್ತಿ ವಿಚಾರ, ಎಸ್. ಎಲ್. ಭೈರಪ್ಪ – ನಾ ಕಂಡ ಗುಜರಾತ ಕುಲಮರ್ವ, ಬಾಲಕೃಷ್ಣ – ಕಲಾವಿದ ಡಿ.ಜಿ. ಕುಲಕರ್ಣಿ, ಶಿವರಾಮಕಾರಂತರ ಕನ್ನಡನಾಡಿನ ಕರಾವಳಿ, ಬೆಟಗೇರಿ ಕೃಷ್ಣಶರ್ಮರ ಕೃಷ್ಣದೇವರಾಯನ ಸೈನ್ಯ ಸಂಪತ್ತಿ, ಎಂ. ಕೆ. ಇಂದಿರಾ ಹರಿಶ್ಚಂದ್ರ ನಾಡು(ಕಥೆ), ಜಿ. ಎಸ್. ಶಿವರುದ್ರಪ್ಪ – ಬಂತು ಬಣ್ಣದ ಕೋಳಿ, ಹೀಗೆ ಕನ್ನಡ ಕವಿಗಳ ಲೇಖನಗಳು ಹಾಗೂ ಕರ್ನಾಟಕ, ಭಾರತ ವ್ಯಕ್ತಿಗಳ ಚರಿತ್ರೆ, ಕಲಾವಿದರ ದರ್ಶನ ಲೇಖನಗಳು ಈ ವಸಂತ ಸಂಚಿಕೆಯಲ್ಲಿ ಮೂಡಿ ಬಂದಿದೆ.

೧೯೬೭ ವಸಂತ ಸಂಚಿಕೆಯ ಮುಖ್ಯವಾದ ಮತ್ತೊಂದು ಅಂಶ: ಚೌರಪಂಚಶಿಕಾ ಎನ್ನುವ ಚಿತ್ರಮಾಲೆ: ಸಂಸ್ಕೃತದ ಈ ಸುಂದರ ಅಪರೂಪದ ಕಾವ್ಯದ ಸನ್ನಿವೇಶಗಳನ್ನು ೧೬ನೇ ಶತಮಾನದ ಅಜ್ಞಾತ ಚಿತ್ರಕಾರನೊಬ್ಬ ೧೮ ಚಿತ್ರಗಳಲ್ಲಿ ಚಿತ್ರಿಸಿದ್ದಾನೆ. ಅವುಗಳನ್ನು ಆಧರಿಸಿ ಇಲ್ಲಿ ಶ್ರೀ ಟಿ. ಕೆ. ರಾಯರು ಐದು ಚಿತ್ರಗಳನ್ನು ಏಕ ವರ್ಣದಲ್ಲಿ ರೂಪಿಸಿದ್ದಾರೆ.

ಸಂಸ್ಕೃತದಲ್ಲಿ **ಚೌರ ಪಂಚಶಿಕಾ** ಕಾವ್ಯ ಒಂದು ಅಪರೂಪ ರಸಧಾರೆಯಾಗಿದೆ. ಪ್ರೇಮಿಸಿ ತನ್ನ ಪ್ರೇಮಪಾತ್ರಳಾದವಳನ್ನು ಪಡೆಯಲು ಪ್ರಾಣಿಗಳನ್ನೇ ತುಚ್ಛವಾಗಿ ಬಗೆದ ಪ್ರೇಮಿಕನೊಬ್ಬನ ಅಂತಿಮ ಉದ್ಗಾರವಾಗಿದೆ. ಅದರ ಕರ್ತೃ ಮತ್ತು ನಾಯಕ ಮಹಾಕವಿ ಬಿಲ್ಲಣ.

ಮಹಾಕವಿ ಬಿಲ್ಲಣ ಕನ್ನಡಿಗರಿಗೆ ಚಿರಪರಿಚಿತ. ಕಾಶ್ಮೀರದವನಾದರೂ ಹುಟ್ಟುನಾಡನ್ನು ತೊರೆದು ದೇಶ ದೇಶಗಳನ್ನು ಅಲೆದು ಆತ ಕರ್ನಾಟಕದಲ್ಲಿ ನೆಲೆ ನಿಂತ ೧೨ನೇ ಶತಮಾನದ ಚಾಲುಕ್ಯ ವಿಕ್ರಮಾಂಕನ ಆಸ್ಥಾನದಲ್ಲಿ ರಾಜನ ಪ್ರಿಯಕವಿಯಾಗಿ "ಬಿಲ್ಲಣ ವಿಕ್ರಮಾಂಕ ಚರಿತ" ಮಹಾಕಾವ್ಯದಿಂದ ಕನ್ನಡ ಚಕ್ರವರ್ತಿಯನ್ನು ಅಮರನಾಗಿ ಮಾಡಿದ್ದಾನೆ. ಈ ಕವಿಯ ಪ್ರೇಮ ಕಥೆಯೇ ಚೌರಪಂಚಶಿಕಾ. ಭಾಷೆ ಹೊಸ ಶೈಲಿಯ ದೃಷ್ಟಿಯಿಂದ ಇದು ಮುಖ್ಯವೆನಿಸುತ್ತದೆ. ಈ ವಿಶೇಷವಾ ವರ್ಣಚಿತ್ರಕಥೆ ಓದುಗರನ್ನು ಆಕರ್ಷಿಸುತ್ತದೆ. ಸಂಗ್ರಹದ ರೀತಿ ಯೋಗ್ಯವಾದದ್ದು. ೧೯೬೮ರ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನಗಳು, ಕವಿತೆಗಳು, ಕಥೆಗಳು, ನಾಟಕಗಳು, ಕನ್ನಡದ ಪ್ರಸಿದ್ಧ ಕವಿ ಬರಹಗಾರರ ಕತೆ, ಕವನಗಳೇ ಆಗಿದೆ. ಕನ್ನಡ ಸಾಹಿತಿಗಳ ಬರಹಗಳೇ ಇಲ್ಲಿಯ ವಿಶೇಷ.

೧೯೬೮ರಿಂದ ೧೯೭೪ರ ವರೆಗಿನ ವಸಂತ ಸಂಚಿಕೆಯಲ್ಲಿ ಗಮನೀಯ ಅಂಶವೆಂದರೆ ಸಾಹಿತ್ಯದ ಕಾಲ ಘಟ್ಟದಲ್ಲಿ ಆದ ಬದಲಾವಣೆ ಮುಖ್ಯವಾದದು. ೧೯೫೦–೧೯೭೦: ೧೯೭೦ರ ನಂತರದ ಸಾಹಿತ್ಯ ಘಟ್ಟದ ಬದಲಾವಣೆ ಜೀವನ ಬದಲಾದಂತೆ ಸಾಹಿತ್ಯವೂ ಬದಲಾಗುತ್ತಾ ಹೋಗುತ್ತದೆ. ಆಯಾ ಕಾವ್ಯದ ಧೋರಣೆಗಳು ಆಯಾ ಕಾಲದಲ್ಲಿ ಪ್ರಮುಖವಾದವುಗಳೇ ಆಗಿರುತ್ತದೆ. ನವೋದಯ ಪ್ರಗತಿಶೀಲ, ನವ್ಯ ದಲಿತ ಬಂಡಾಯ ಹೇಗೆ ಹೊಸ ತಿರುವುಗಳನ್ನು ಪಡೆದ ಆಧುನಿಕ ಕಾವ್ಯ ಈ ಆರು ದಶಕಗಳಲ್ಲಿ ಬಹು ವ್ಯಾಪಕವಾಗಿ ಬೆಳೆದಿರುವುದನ್ನು ಗಮನಿಸಬಹುದು.

ಪಾ.ವೆಂ. ಸಾಹಿತ್ಯದ ನಾಲ್ಕು ಘಟ್ಟಗಳ (ನವೋದಯ, ಪ್ರಗತಿಶೀಲಾ, ನವ್ಯ) ನವ್ಯೋತ್ತರಗಳ ಒಲವು ನಿಲುವುಗಳು) ಸಂಕ್ರಮಣಾವಸ್ಥೆಯ ಪ್ರಜ್ಞೆಯನ್ನು ಸಂಪಾದಕರು ಅಳವಡಿಸಿಕೊಂಡಿದ್ದಾರೆ. ಇದನ್ನು ಅನಿಕೇತನ ಪ್ರಜ್ಞೆ ಎನ್ನಬಹುದು. ಘಟ್ಟ ಘಟ್ಟಗಳನ್ನು ದಾಟಿ ಎಂಬ ಕುವೆಂಪು ಆಶಯ; ಪ್ರಯೋಗಶೀಲ ಮನೋಧರ್ಮ; ಅದೇ ರೀತಿಯ ಯಾಂತ್ರಿಕ ಮುನ್ನಡೆಯ ಸ್ಥಗಿತತೆಯನ್ನು ನಿವಾರಿಸಿಕೊಳ್ಳುವ ಪ್ರವೃತ್ತಿಯನ್ನು ಇಲ್ಲಿ

ಗುರುತಿಸುತ್ತೇವೆ. ೧೯೬೪ರಿಂದ ಪ್ರಾರಂಭವಾದ 'ವಸಂತ ಸಂಚಿಕೆ', ೧೯೬೪ ರಿಂದ ಶತಕ ಸಂಚಿಕೆ–ಇವೆಲ್ಲವೂ ಅಂದಂದಿನ ಹಂತಕ್ಕೆ ತಲುಪಿದ ಹಾದಿಯ ವೀಕ್ಷಣೆ–ಇವೆಲ್ಲವೂ ಅಂದಂದಿನ ಹಂತಕ್ಕೆ ತಲುಪಿದ ಹಾದಿಯ ವೀಕ್ಷಣೆ, ವಿಚಾರ–ಕಲ್ಪನೆ–ಸಾಧನೆಗಳಲ್ಲಿ ಆದ ಪರಿವರ್ತನೆಯನ್ನು ನಾವಿಲ್ಲಿ ಗುರುತಿಸಬಹುದು. ೧೯೬೯ ವಸಂತ ಸಂಚಿಕೆ ಮೇ (ಕಸ್ತೂರಿ) ಇಲ್ಲಿ ಕನ್ನಡ ಸಾಹಿತಿ ಖ್ಯಾತ ಬರಹಗಾರ ಎಸ್. ಎಲ್. ಭೈರಪ್ಪನವರ ಮೌಲಿಕ ಸಾಹಿತ್ಯ, ಡಾ॥ ಎಸ್. ಎಲ್. ಭೈರಪ್ಪನವರ ವಿಚಾರಗಳು ಇದಕ್ಕೆ ವಿಚಾರ ಮಂಡಿಸಿದವರು ಸಂತೋಷ ಕುಮಾರ್ ಗುಲ್ವಾಡಿಯವರ ವಿಚಾರಗಳು ಹೀಗಿದೆ. ಇತ್ತೀಚಿನ ದಶಕಗಳಲ್ಲಿ ಮೌಲಿಕ ಕಾದಂಬರಿಗಳನ್ನು ಮತ್ತು ವೈಚಾರಿಕ ಸಾಹಿತ್ಯವನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ವಿನೂತನ ಸೃಷ್ಟಿ ಮಾಡಿರುವ ಡಾ॥ ಎಸ್. ಎಲ್. ಭೈರಪ್ಪನವರು ಕನ್ನಡ ಸಾಹಿತ್ಯ ರಂಗದಲ್ಲೇ ಒಂದು ವೈಚಾರಿಕ ಕ್ರಾಂತಿ ಮಾಡಿದವರು. ಓದುಗರನ್ನು ಬೌದಿಕ ಮಟ್ಟದಲ್ಲಿ ತನ್ನೊಂದಿಗೆ ಎತ್ತರಕೊಯ್ದು ವಿಚಾರವಾದದ ಸಮರ್ಥನೆಗಳಿಂದ ಒಪ್ಪಿಸಿ ಭಾವನೆಗಳ ತಾಕಲಾಟದಿಂದ ಹಿಡಿದಗುಲಿಸಿ ಧಾರ್ಮಿಕ ಹಿನ್ನಲೆಯಿಂದ ಸೂಕ್ಷ್ಮವಾಗಿ ವಿವೇಚನೆ ಮಾಡಿ ಮಾನಸಿಕವಾಗಿ ವಿಶ್ಲೇಷಿಸಿ ಸಾಹಿತ್ಯದಲ್ಲಿ ಹೊಸ ಸೌಂದರ್ಯವನ್ನು ಓದುಗನಲ್ಲಿ ನವ್ಯ ಅನುಭವವನ್ನು ತರುವಂಥ ಕೃತಿಗಳು, ಕೃತಿಕಾರರು ಕನ್ನಡದಲ್ಲಿ ಬೆರಳಿಂದೆಣಿಸುವಷ್ಟು. ಇವರಲ್ಲಿ ಭೈರಪ್ಪನವರು ಒಬ್ಬರು. ಮೇಲಾಗಿ ಅವರು ಈ ಬಗೆಯ ಲೇಖಕರಲ್ಲಿಯೇ ಆ ಕಾಲದಲ್ಲಿ ತರುಣರು ಅವರಂತೆಯೇ ಅವರ ಕೃತಿಗಳು ವಿಶಿಷ್ಟವಾದುದು. ಭೈರಪ್ಪನವರ ಜೀವನಧಾರೆಯೊಂದಿಗೆ ಅವರ ಬರವಣಿಗೆ ಸೊಬಗು ಬರಹಗಳನ್ನು ಎಲ್ಲ ವಾಚಕ ಅಭಿಮಾನಿಗಳಿಗೆ ಕಸ್ತೂರಿಯ ಮೂಲಕ ತಲುಪಿಸಿದ್ದಾರೆ. ಮೂಲದ ಬರವಣಿಗೆಯನ್ನು ಓದಬೇಕೆನ್ನುವ ಹಂಬಲವನ್ನು ಮೂಡಿಸಿದೆ. ಅಂದಂದಿನ ಹಂತಕ್ಕೆ ತಲುಪಿದ ದಾರಿಯ ವೀಕ್ಷಣೆ, ವಿಚಾರ, ಕಲ್ಪನೆಗಳು ಸಾಧನೆಗಳಲ್ಲಿ ಆದ ಬದಲಾವಣೆಯನ್ನು ಕಂಡುಕೊಳ್ಳುವುದು ಚಿಂತನೆಗೆ ಒಳಪಡಿಸುವ ಪಾ.ವೆಂ. ಮಾರ್ಗ ಮಹತ್ವದಾಗಿದೆ.

ಬರಹದ ಮೂಲಕ ಮಾತ್ರ ಬರಹಗಾರ ಓದುಗರಿಗೆ ಹತ್ತಿರವಾಗುತ್ತಾರೆ. ಆದರೆ ಬರಹಗಾರನ ಮನೋಧರ್ಮ, ಸಾಧನೆ ಸಿದ್ದಿಗಳು, ಪ್ರೇರಣೆ ಧೋರಣೆಗಳು ಲೇಖನದ ಹಿಂದೆ ಹೇಗಿರುತ್ತದೆ ಎನ್ನುವುದನ್ನು ಇಲ್ಲಿ ಕಾಣುತ್ತೇವೆ. ಇದೇ ಸಂಚಿಕೆಯಲ್ಲಿರುವ ಲೇಖನ ಶ್ರೀನಿವಾಸ ಹಾವನೂರ ಬರೆದ 'ಮಂಗಳೂರು ಸಮಾಚಾರ' (ಕ್ರೈಸ್ತ ಮಿಶನರಿಗಳ ಕಾಲ ಕರ್ಮನ್ ಮೊಗ್ಲಿಂಗ್ (Editor) ಕನ್ನಡದ ಆದ್ಯ ಪತ್ರಿಕೆಯಾದ ಮಂಗಳೂರು ಸಮಾಚಾರದ ವಿವರಣೆಯನ್ನು ನೀಡಿರುವುದು ೪ ದಿಕ್ಕಿಗೆ ಹಬ್ಬುವ ಸುದ್ದಿಗಳು ಪತ್ರಿಕೆಯ ಮುಖಾಂತರ ಪ್ರಕಟಗೊಳ್ಳುವ ರೀತಿಯನ್ನು ಇಲ್ಲಿ ಗಮನಿಸಬಹುದು. ಕನ್ನಡದ ಕತೆಗಾರರಾದ ಎಸ್. ಎಲ್. ಭೈರಪ್ಪ, ರಾಶಿ, ಶಾಂತಿನಾಥ ದೇಸಾಯಿ, ಬೀchi, ಪಾ.ರಾ. ಎಲಬುರ್ಗಿ, ರಾವ್ ಬಹದ್ದೂರು, ಬೆಟಗೇರಿ ಕೃಷ್ಣಶರ್ಮ ಇವರ ಬರಹಗಳನ್ನು

ಕಸ್ತೂರಿಯಲ್ಲಿ ಪ್ರಕಟಿಸುವುದರ ಮೂಲಕ ಕನ್ನಡದ ಸಾಹಿತಿಗಳನ್ನು ಓದುಗರಿಗೆ ಪರಿಚಯಿಸಿದ್ದಾರೆ.

ಜೀವನದ ವಿವಿಧ ರಂಗಗಳಲ್ಲಿ ಹೆಸರಾಂತ ಮಹನೀಯರಿಗೆ ಪ್ರಶ್ನೆ ಮಾಲಿಕೆ ಕಳುಹಿಸಿ ಬಂದ ಉತ್ತರಗಳನ್ನು ಸಂಗ್ರಹಿಸಿ ಕಸ್ತೂರಿಯಲ್ಲಿ ಪ್ರಕಟಪಡಿಸುತ್ತಿದ್ದರು. ಉದಾರಣೆಗೆ: ವಿಷಯ: ಜಾತೀಯತೆ ಅದರಿಂದ ನಿವೃತ್ತಿ ಸಾಧ್ಯವೇ? ಇದು ದೇಶದ ಪ್ರಗತಿಗೆ ತೊಡಕಾಗಿರುವ ದೊಡ್ಡ ಸಮಸ್ಯೆಗಳಲ್ಲಿ ಜಾತೀಯತೆ ಒಂದು. ಜೀವನದ ಯಾವ ರಂಗವೂ ಅದರಿಂದ ನಿರ್ಲಿಪ್ತವಾಗಿ ಉಳಿದಿಲ್ಲ. ಅದರ ಕೆಡಕುಗಳನ್ನು ಎಲ್ಲರೂ ಬಲ್ಲರು. ಪ್ರತಿಯೊಂದು ಜಾತಿಯೂ ಅನ್ಯ ಜಾತಿಗಳ ಜಾತೀಯತೆಯಿಂದ ತಾನು ಕಷ್ಟಕ್ಕೀಡಾದ ಪಕ್ಷವೆಂದೇ ಭಾವಿಸುತ್ತದೆ. ಒಟ್ಟು ಪರಿಣಾಮವೆಂದರೆ ದೇಶದ ಪ್ರಗತಿಯಲ್ಲಿ ಅಮೂಲ್ಯ ಸೇವೆ ಸಲ್ಲಿಸಬಹುದಾದ ಪ್ರತಿಭಾಶಾಲಿಗಳನೇಕರು ತಮ್ಮ ಯೋಗ್ಯತೆಗೆ ತಕ್ಕ ಸ್ಥಾನ ದೊರೆಯದೇ ನಿರಾಶರಾಗಿದ್ದಾರೆ. ಇಂಥ ಪೀಡಿತ ಪ್ರತಿಭೆ ನಾಳೆ ಕ್ರಾಂತಿಯ ಕಿಡಿಯನ್ನು ಕಾರಿ ದೇಶದಲ್ಲಿ ಉತ್ಪಾತವೆಬ್ಬಿಸಬಹುದು.

ಈ ಪ್ರಶ್ನೋತ್ತರ ಮಾಲಿಕೆಯಲ್ಲಿ ಭಾಗವಹಿಸಿದ ಮಹನೀಯರು, ಕನ್ನಡದ ಹಿರಿಯ ಕವಿಗಳು, ಲೇಖಕರು, ಅರ್ಥಶಾಸ್ತ್ರಿಗಳು, ಚಿಂತಕರು ಡಾ॥ ಡಿ. ವಿ.ಜೋಶಿ, ಹುಬ್ಬಳ್ಳಿಯ ಸರ್ಜನ್ನರು ರೋಟರಿಯ ಪ್ರಮುಖರು ಹಲವು ಆರ್ಥಿಕ ಶಿಕ್ಷಣ ಸಂಸ್ಥೆಗಳು ಅಧ್ವರ್ಯುಗಳ ಸಹಕಾರ ಮುಂದಾಳುಗಳು ಪರಿಣಿತ ನಟರು ನಿರ್ಭಯ ವಿಚಾರಧಾರೆ ಹೊಂದಿದವರಾಗಿದ್ದರು. ಅ.ನ.ಕೃ. ಕನ್ನಡ ಕಾದಂಬರಿ ಸಾಮ್ರಾಟರಾಗಿದ್ದರು. ಕೆ.ವಿ. ಶಂಕರೇಗೌಡರು ಶಿಕ್ಷಣ ಮಂತ್ರಿಗಳು (೧೯೬೯) ಎಸ್.ಆರ್. ಬೊಮ್ಮಾಯಿ, ಮಾನವತಾವಾದಿ ಶ್ರೀ ಭರಣಯ್ಯನವರು ಐ.ಎ.ಎಸ್. ಅಧಿಕಾರಿ ವೇದ ಉಪನಿಷತ್ತುಗಳು, ಅಧ್ಯಯನಕಾರರು, ಬಿ.ಡಿ. ಅಕ್ಕಿ ವಕೀಲರು ವರ್ತಕರು – ಹೀಗೆ ವಿವಿಧ ಕ್ಷೇತ್ರಗಳಲ್ಲಿ ನುರಿತ ಮಹನೀಯರ ಪರಿಚಯದೊಂದಿಗೆ ಅವರ ವಿಚಾರಧಾರೆಯನ್ನು ಸ್ಪಷ್ಟಪಡಿಸಿ ಜನತೆಗೆ ಮುಟ್ಟಿಸಿದ ಕೆಲಸವನ್ನು ಕಸ್ತೂರಿಯ ಮೂಲಕ ಪಾ.ವೆಂ ಮಾಡಿದ್ದಾರೆ. ಹೀಗೆ ಸಮಾಜದ ಆರೋಗ್ಯಕರ ಹಾಗೂ ಜನತೆಯ ಹಿತ ಚಿಂತನೆಯ ಬಗ್ಗೆ ಚಿಂತಿಸಿ ತಾವೇ ಸ್ವಯಂ ನಿರ್ಧಾರ ಕೈಗೊಳ್ಳದೇ ಇತರ ನುರಿತ ಕ್ಷೇತ್ರಗಳ ಮಹನೀಯರಿಂದ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದರ ಮೂಲಕ ಜನತೆಯ ಮನವನ್ನು ಮುಟ್ಟಿದ್ದರು.

ಜನಮನದ ನೋವಿಗೆ ಹದಗೆಟ್ಟ ಸ್ಥಿತಿಗತಿಗೆ ಕಸ್ತೂರಿ ಉತ್ತರ ನೀಡುತ್ತಿತ್ತು. ೧೯೭೦ರ ವಸಂತ ಸಂಚಿಕೆಯಲ್ಲಿ ಬಂದಿರುವ ವಿವಿಧ ಕ್ಷೇತ್ರದ ಲೇಖನಗಳು ಕನ್ನಡ ಸಾಹಿತಿಗಳಾದ ಶಾಂತಿನಾಥ ದೇಸಾಯಿಯವರ ಕಥೆಗಳು, ಚಂಪಾರವರ ಬದುಕು ಒಂದು ನೆನಪು, ಶಾಂತಾದೇವಿ ಕಣವಿಯವರ ಬಯಲು ಆಲಯ, ರಾಜಶೇಖರ ಭೂಸನೂರ ಮಠರ ಸಾವೋನ ರಹಸ್ಯ, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು

ಶ್ರೀನಿವಾಸ ಹಾವನೂರು, ಪಿ. ಲಂಕೇಶರವರ ಸಿದ್ಧತೆ (ಏಕಾಂತ) ಈ ರೀತಿಯ ವೈಚಾರಿಕತೆ, ಪ್ರವಾಸ ಕಥನ, ನಾಟಕ ಶಿಕ್ಷಣದ ಅನುಭವ ಎಲ್ಲವೂ ಇಲ್ಲಿ ಕನ್ನಡಿಗರೇ ಬರೆದಿದ್ದಾರೆ. ಹೀಗೆ ಕಸ್ತೂರಿಯಲ್ಲಿ ಸಾಹಿತ್ಯಕ್ಕೆ ನೆಲೆ-ಬೆಲೆ ಒದಗಿಸಿದ್ದರು. ಈ ರೀತಿಯಲ್ಲಿ ಕನ್ನಡದ ಚಿಂತನೆ ಕರ್ನಾಟಕದ ಅಭಿವೃದ್ಧಿಯ ಚಿಂತನೆಗೆ ಅವಕಾಶ ಒದಗಿಸಿದ್ದರು.

ಕು.ಶಿ. ಹರಿದಾಸ ಭಟ್ಟರ **ಶಿಕ್ಷಣ ಕ್ಷೇತ್ರದಲ್ಲಿ ಕರಾವಳಿ ಜಿಲ್ಲೆ ಮುಂದಿರುವುದೇಕೆ?** ವಿಚಾರಪೂರ್ಣ ಲೇಖನವಾಗಿದೆ. ಎಂ.ಜಿ.ಎಂ. ಕಾಲೇಜಿನ ಪ್ರಾಚಾರ್ಯರಾದ ಕು.ಶಿ. ಹರಿದಾಸ ಭಟ್ಟರ ವಿಚಾರಪೂರ್ಣ ಸಂಶೋಧನಾ ಧಾರೆಯಿಂದ ತೆಗೆದ ಮುಖ್ಯ ಅಂಶವೆಂದರೆ ಕರಾವಳಿ ಜಿಲ್ಲೆಯ ಮುಂದಾಳುತನಕ್ಕೆ ಚಾರಿತ್ರೀಕರಣ ಮುಖ್ಯ. ಪಾಶ್ಚತ್ಯರೊಡನೆ ವ್ಯಾಪಾರ ಸಂಪರ್ಕ ವಿಚಾರಗಳ ವಿದ್ಯಾ ಪ್ರಚಾರ ಆಸಕ್ತಿಯು ಕರಾವಳಿ ಕ್ಷೇತ್ರಗಳಿಗೆ ಬಹು ಮುಂಚಿತವಾಗಿಯೂ ಲಭಿಸಿತ್ತು. ಘಟ್ಟದ ಮೇಲಿನವರಿಗೆ ಘಟ್ಟಗಳು ಅಡ್ಡಿಯಾದವು. ಪಶ್ಚಿಮ ಕರಾವಳಿಯ ಕೇರಳ, ಮಹಾರಾಷ್ಟ್ರ, ಗುಜರಾತ ಮತ್ತು ಪೂರ್ವ ಕರಾವಳಿಯ ಮದ್ರಾಸ ಬಂಗಾಳಗಳಿಗೂ ಈ ಅವಕಾಶಗಳು ಬೇರೆ ಬೇರೆ ಪ್ರಮಾಣದಲ್ಲಿ ಲಭಿಸಿ ಅಲ್ಲಿ ಪಾಶ್ಚಿಮಾತ್ಯ ವಿದ್ಯೆಯು ಆಯಾ ಒಳನಾಡುಗಳಿಗಿಂತ ಊರ್ಜಿತವಾಯಿತು ಎನ್ನುವ ಅಂಶವನ್ನು ವಾಚಕರಿಗೆ ಮನದಟ್ಟು ಮಾಡುತ್ತಾರೆ. ಪಾ.ವೆಂ ಅವರು ಪ್ರಚಲಿತವಾದ ವಿದ್ಯ ಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅದರ ಸಾರಾ ಸಂಗ್ರಹವನ್ನು ವಾಚಕರಿಗೆ ಸ್ಪಷ್ಟವಾಗಿ ನೀಡುತ್ತಿದ್ದರು.

೧೯೭೧-೭೨-೭೩ರ ವಸಂತ ಸಂಚಿಕೆಗಳಲ್ಲಿರುವ ಲೇಖನಗಳು ರಾಜಕೀಯ ಕ್ಷೇತ್ರದ ಪೂರ್ಣ ಮಾಹಿತಿಯನ್ನು ನೀಡುತ್ತದೆ (೧೯೭೩ರ ವಸಂತ ಸಂ.) ಇಡೀ ಭಾರತವನ್ನೇ ಒಮ್ಮೆ ನಡುಗಿಸಿರುವ ಆಂಧ್ರದ ಚಳುವಳಿ ಗೊಂದಲಗಳು "ಆಂಧ್ರದಲ್ಲಿ ನಡೆದಿರುವುದೇನು" ಈ ಲೇಖನ ಅಲ್ಲಿಯ ವ್ಯವಹಾರಗಳ ಪೂರ್ಣ ಸ್ವರೂಪವನ್ನು ಪರಿಚಯ ಮಾಡಿಕೊಟ್ಟಿದೆ. ಕೇಂದ್ರಕ್ಕೂ ಬಿಸಿ ತಾಕಿಸಿರುವ ಆಂಧ್ರದ ಜ್ವಲಂತ ಸಮಸ್ಯೆಯ ಹಿನ್ನಲೆ ರಾಜಕೀಯ ಅದರಲ್ಲಿ ಕಾಣದ ಕೈಯ ಕೈವಾಡ ಅದರ ಭವಿಷ್ಯಗಳು ಸೊಗಸಾಗಿ ವಿಶ್ಲೇಷಿತವಾಗಿದೆ. ಇದೇ ಸಂಚಿಕೆಯಲ್ಲಿ ಕಲ್ಯಾಣ ರಾಜ್ಯ ಹಾಗೂ ಸಮಾಜ ವಾದಗಳ ನಡುವಣ ಸೂಕ್ಷ್ಮ ವ್ಯತ್ಯಾಸವನ್ನು ನಮ್ಮ ಮುಂದಿಟ್ಟಿರುವ ವಿಚಾರಿಗಳು ಜನರ ವಿಶಾಲ ಪರಿಶ್ರಮದೊಂದಿಗೆ ನೇತಾರರಲ್ಲಿ ಪ್ರಾಮಾಣಿಕತೆಯ ಅಗತ್ಯ ಎನ್ನುವ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

ಪ್ರಚಲಿತವಾದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಹೊಸ ಪರಿಸರಕ್ಕೆ ತಕ್ಷಣ ಹೊಂದಿಕೊಂಡಿದ್ದ ಪಾ.ವೆಂ. ಅವರು ಕನ್ನಡ ಸಾಹಿತ್ಯ ಲೋಕವನ್ನು ಮರೆತಂತಿಲ್ಲ.

೧೯೭೦ರ ನಂತರದ ಕಾಲಘಟ್ಟದಲ್ಲಿ ಸಾಹಿತ್ಯದಲ್ಲಿ ಕಂಡು ಬಂದ ಹೊಸ ಬೆಳವಣಿಗೆಯನ್ನು ಹೊಸ ತಿರುವುಗಳನ್ನು ವಸಂತ ಸಂಚಿಕೆಯಲ್ಲಿ ಮೂಡಿಸಿದ್ದಾರೆ.

೧೯೭೦ರ ನಂತರ ಸಾಹಿತ್ಯದ ಹೊಸ ಬೆಳವಣಿಗೆ ಎರಡು ಸಾಹಿತ್ಯ ಪ್ರವೃತ್ತಿಗಳಿಗೆ ಚಾಲನೆ ನೀಡಿದುದು ಗಮನಾರ್ಹ ಸಂಗತಿ. ದಲಿತ ಶೋಷಿತ ವರ್ಗಗಳ ಜೀವನ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಬೇಕೆಂಬ ವಿಚಾರ ದಲಿತ ಪಂಥವೊಂದು ಪುರೋಹಿತಶಾಹೀ ಪಟ್ಟ ಭದ್ರರನ್ನು ಸಾಹಿತ್ಯ ಕ್ಷೇತ್ರದಿಂದ ಉಚ್ಚಾಟಿಸಿ ಸಮಾನ ಸಮುದಾಯದ ಮೇಲ್ಮೈಗಾಗಿ ಹೋರಾಡುವ ಬರಹಗಾರ ಕಲಾವಿದರ ಗುಂಪು ಇನ್ನೊಂದು. ನವ್ಯ ಸಾಹಿತ್ಯದ ಸೋಲಿನ ಸಂದರ್ಭ, ದಲಿತ ಸಾಹಿತ್ಯದ ಅವಸ್ಥೆ. ಈ ಸಂದರ್ಭವನ್ನು ಪಾ.ವೆಂ. ಗಮನಿಸಿ ಕನ್ನಡ ಕಾವ್ಯದ ಬಗ್ಗೆ ಜಿ.ಎಸ್. ಶಿವರುದ್ರಪ್ಪನವರಿಂದ ಲೇಖನವನ್ನು ಬರೆಸಿದ್ದಾರೆ. "ಅರ್ಧ ಶತಮಾನಗಳ ಕನ್ನಡ ಕಾವ್ಯ" (೧೯೭೦ ಏಪ್ರಿಲ್) ಕನ್ನಡ ಕಾವ್ಯ ಹಿಡಿದ ಹಾದಿಯ ಬಗ್ಗೆ ತಮ್ಮ ನೈಜ ಕಾಳಜಿಯನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ಮುಕ್ತವಾಗಿ ಪ್ರಸ್ತಾಪಿಸಿದ್ದಾರೆ. ಜಿ. ಎಸ್. ಶಿವರುದ್ರಪ್ಪ ಅವರ "ಅರ್ಧ ಶತಮಾನಗಳ ಕನ್ನಡ ಕಾವ್ಯ" ಸಕಾಲಿಕವಾದದ್ದು ಹಾಗೂ ಅದು ಕನ್ನಡ ಸಾಹಿತ್ಯದ ಇತ್ತೀಚಿನ ಧ್ಯೇಯ ಧೋರಣೆ ಬೇಸತ್ತವರ ಧೋರಣೆಯಾಗಿದೆ.

ವಸಂತ ಸಂಚಿಕೆಯಲ್ಲಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಪ್ರಕಟವಾದ ನೀಳ್ಗತೆ **ನಿಗೂಢ ರಹಸ್ಯ** ಮಾರ್ಕ್ಸವಾದದ ಚರ್ಚೆ ಕಸ್ತೂರಿಯಲ್ಲಿ ಜೂನ್ ತಿಂಗಳವರೆಗೂ ನಡೆದ ಸಹ ಚಿಂತನ ಓದುಗರ ಮುಕ್ತ ಮನಸ್ಸನ್ನು ಚಿಂತಿಸಲು ವೇದಿಕೆಯಂತಿತ್ತು. ತಮ್ಮ ತಮ್ಮ ವಿಚಾರ ವಿಮರ್ಶೆಗಳನ್ನು ತಪ್ಪು ಒಪ್ಪುಗಳನ್ನು ಹಂಚಿಕೊಳ್ಳಲು ಅವಕಾಶವಿತ್ತು. ಉದಾಹರಣೆಗೆ ಕೆ.ಪಿ. ಪೂರ್ಣಚಂದ್ರ ಕಥೆಯ ಬಗ್ಗೆ ಅನೇಕ ವಾದ ವಿವಾದಗಳು ಎರಡು ತಿಂಗಳು ನಡೆಯಿತು. ಕೊನೆಗೆ ಮಾರ್ಕ್ಸವಾದದ ಬಗ್ಗೆ ತಮ್ಮ ನಿಲುವುಗಳನ್ನು ಓದುಗರ ಮುಂದಿಟ್ಟು ಚರ್ಚೆಯನ್ನು ೧೯೭೪ ಜುಲೈ ಸಹಚಿಂತನದಲ್ಲಿ ಮುಕ್ತಾಯಗೊಳಿಸಿದ್ದನ್ನು ಕಾಣುತ್ತೇವೆ. ಪಾ.ವೆಂ. ಅವರು ಯಾವುದೇ ಪಂಥದ ಪರವಾಗಿ ನಿಲ್ಲದೇ ಲೇಖಕ–ಓದುಗರಿಂದಲೇ ಪ್ರಶ್ನೆಗೆ ಪರಿಹಾರವನ್ನು ಸೂಚಿಸಿರುವುದನ್ನು ಗಮನಿಬಹುದು.

೪. ಭಾರತದ ಸಮಕಾಲೀನ ರಾಜಕೀಯ ವಿಶ್ಲೇಷಣೆ ರಾಷ್ಟ್ರೀಯ ಮಟ್ಟದ ಮಹತ್ವದ ವ್ಯಕ್ತಿ, ಸ್ಥಳ, ವಿದ್ಯಮಾನಗಳ ಕುರಿತು ಪ್ರಬಂಧಗಳ ಮಂಡನೆಯು ಕಸ್ತೂರಿಯಲ್ಲಿ ಆದವು. ಸಮಕಾಲೀನ ಸನ್ನಿವೇಶ ಸಂದರ್ಭದ ನೆಲೆಯಿಂದ ಕಸ್ತೂರಿಗಾಗಿ ಬರೆದ ಗಂಭೀರವಾದ ಲೇಖನಗಳು ವಿಚಾರಪೂರ್ಣವಾಗಿದೆ. ವೃತ್ತಿಯಿಂದ ವಿಚಾರಶೀಲರು, ತರ್ಕಬದ್ಧವಾಗಿ ವಿಶ್ಲೇಷಿಸುವ ಮತ್ತು ಮಂಡನೆ ಮಾಡುವ ಕಲೆ ಅವರಿಗೆ ಕರಗತವಾದುದು ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು. ಸ್ವಾತಂತ್ರ್ಯ ಪೂರ್ವ ಸ್ವಾತಂತ್ರ್ಯದ ನಂತರದ ದಿನಗಳನ್ನು ಅನುಭವಿಸಿದ ಪಾ.ವೆಂ. ಅವರಿಗೆ ಸ್ವತಂತ್ರ ಭಾರತದ ಸಂಪೂರ್ಣ ಅರಿವು ಇತ್ತು. ಜೊತೆಗೆ ಜಗತ್ತಿನ ಇತರ ದೇಶಗಳ ಸ್ಥಿತಿಯೂ ನಮ್ಮಂತೆ ಇದೆ ಎನ್ನುವುದನ್ನು

ತುಲನೆ ಮಾಡಿನೋಡುತ್ತಾರೆ. ೧೯೬೮ ಸೆಪ್ಟೆಂಬರ್ ಸಂಚಿಕೆಯಲ್ಲಿ **ವಿಚಾರಿ** ಎನ್ನುವ ನಾಮದಿಂದ ಬರೆದಿರುವ 'ನಮ್ಮ ದೇಶ ಅಷ್ಟು ಕೆಟ್ಟಿದೆಯೇ? ನಮ್ಮ ದೇಶದ ಸ್ಥಿತಿ ಶೋಚನೀಯವಾಗಿದೆ. ಆದರೆ ನಮ್ಮಂತೆ ಇತರ ದೇಶಗಳು ಇವೆ ಎನ್ನುತ್ತಾ 'ಈ ಇಪ್ಪತ್ತೊಂದು ವರ್ಷಗಳ ಸ್ವಾತಂತ್ರ್ಯ ಯುಗದಲ್ಲಿ ದೇಶದಲ್ಲಿ ಲಂಚ ಮತ್ತು ಅದರ ವಿವಿಧ ಮುಖಗಳಾದ ಭ್ರಷ್ಟಾಚಾರಗಳು ಅಪರಿಮಿತವಾಗಿ ಬೆಳೆದುಬಿಟ್ಟಿದೆ. ಅವು ದೇಶದ ಅಸ್ತಿತ್ವಕ್ಕೆ ಅಪಾಯ ತಂದೊಡ್ಡುವವರೆಗೂ ಉಲ್ಬಣಿಸಿ ಕುಳಿತಿವೆ. ಎನ್ನುವ ವಿಕೃತ ರೂಪದ ಭಾರತ ಸ್ಥಿತಿಯನ್ನು ಚಿತ್ರಣ ನೀಡುತ್ತಾರೆ. 'ಭಾರತದಲ್ಲಿ ಭೂ ಸುಧಾರಣೆಯ ಮಹಾಭಾರತ (೧೯೭೨ ಜುಲೈ) ಈ ಲೇಖನದಲ್ಲಿ ಇಡೀ ಜಗತ್ತಿನ ಭೂಸುಧಾರಣ ಪದ್ಧತಿಯ ಚಿತ್ರಣದೊಂದಿಗೆ ಭಾರತರಾಷ್ಟ್ರದ ಮಹತ್ವ ಪೂರ್ಣ ಅಂಶವನ್ನು ಸ್ಪಷ್ಟೀಕರಿಸುತ್ತಾರೆ. ಚೀನಾ, ಅಮೇರಿಕಾ, ರಷ್ಯಾ ದೇಶಗಳ ಕ್ರಾಂತಿಕಾರಕ ಘಟನೆಯನ್ನು ತುಳನೆ ಮಾಡುತ್ತಾರೆ. ಕೃಷಿಜೀವನ ನಡೆಸಲು ಸರಕಾರದ ಆಡಳಿತ ಯಂತ್ರದಿಂದ ಸಾಧ್ಯವಿಲ್ಲ ಎನ್ನುವ ಸ್ಪಷ್ಟ ನಿಲುವು ಇಲ್ಲಿ ಕಾಣುತ್ತೇವೆ.

ಕಲ್ಯಾಣ ರಾಜ್ಯ ಕಲ್ಯಾಣ ತಂದೀತೇ? (೧೯೭೫ ಎ.) ಕಲ್ಯಾಣ ರಾಜ್ಯ ಸಮಾಜವಾದಗಳ ಈ ಫಲಗಳ ಬಗ್ಗೆ ಚಿಂತಿಸಬೇಕಾದ ಕಾಲ ಬಂದಿದೆ. ಈಗಾಗಲೇ ಕಲ್ಪನೆಗಳ ಹಿಂದೆ ಬಲವಾದ ಪಟ್ಟ ಭದ್ರ ಹಿತಾಸಕ್ತಿ ಬೆಳೆದು ಬಿಟ್ಟಿದೆ. ಅದು ವಟವೃಕ್ಷವಾಗುವ ಮೊದಲು ಜನರಿಗೆ ಕಲ್ಯಾಣ ರಾಜ್ಯದ ಇತಿಮಿತಿಗಳ ಬಗ್ಗೆ ಸತ್ಯ ಹೇಳುವ ನಾವು ಸಿದ್ಧರಾಗಬೇಕಾಗಿದೆ. ಇಲ್ಲದಿದ್ದರೆ ಭಾರತದ ಜನತೆ ಎಂಬುದು ಅಂಬುಲನ್ಸನ್ನು ನಿರೀಕ್ಷಿಸುತ್ತಿರುವ ರೋಗಿಯಾಗಬಹುದು ಎಂಬ ಎಚ್ಚರಿಕೆಯೊಂದಿಗೆ ಈ ಲೇಖನಕ್ಕೆ ವಾಚಕಬಾಂಧವರಿಂದ ಮರುವಿಚಾರದ ವೇದಿಕೆಯನ್ನು ನಿರ್ಮಾಣಮಾಡಿದ್ದಾರೆ. ಹೀಗೆ ಪಾ.ವೆಂ. ಅವರು ಇಡೀ ಜಗತ್ತಿನ, ರಾಷ್ಟ್ರದ ಆಗುಹೋಗುಗಳ ಬಗ್ಗೆ ತಮ್ಮ ವಿಚಾರವನ್ನು ಮಂಡಿಸುತ್ತಾರೆ. 'ಆಂದ್ರದಲ್ಲಿ ನಡೆದಿರುವುದೇನು' (೧೯೭೩ ಎ.) 'ತೆಲಂಗಾಣ ಸಮಸ್ಯೆ', ಹರಿಜನರ ಸಮಸ್ಯೆಯ ಕೆಲವು ಅನಿಷ್ಟ ಲಕ್ಷಣಗಳು (೧೯೭೩ ಸೆ.) ನ್ಯಾಯಾಂಗ ಮತ್ತು ಕಾರ್ಯಾಂಗ; ತಿಕ್ಕಾಟದ ಕಾರಣಗಳೇನು? (೧೯೭೩ ಜೂ.) ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾದೀಶರ ನೇಮಕದಿಂದ ಎದ್ದ ವಿವಾದಗಳ ಹಿನ್ನಲೆ ಬಗ್ಗೆ ಬರೆದಿರುವ ಸಂದರ್ಭವಿದು. (೧೯೭೨ ಜೂ.) ಭಾರತದಲ್ಲಿ ಬಡತನದ ಮುಖ– ಇಲ್ಲಿ ಭಾರತದ ಬಡತನದ ನೈಜ ಸ್ವರೂಪವನ್ನು ಅಂಕಿ ಅಂಶಗಳ ಮೂಲಕ ಸ್ಪಷ್ಟೀಕರಿಸುತ್ತಾ ಇಂದಿರಾ ಗಾಂಧಿ ಸರಕಾರದ 'ಬಡತನವನ್ನು ಓಡಿಸಿರಿ' ಎನ್ನುವ ಘೋಷಣೆಯನ್ನು ಮೆಚ್ಚುತ್ತಾ ನಾಯಕ ಪಟ್ಟವನ್ನು ಈ ಘೋಷಣೆ ಕೊಟ್ಟಿದೆ ಎನ್ನುವುದನ್ನು ವಿಡಂಬಿಸಿರುವು ಎಲ್ಲ ರಾಜಕಾರಣಿಗಳ ಮುಖವಾಡ ಟೊಳ್ಳುತನವನ್ನೂ ಬಯಲಿಗೆಳೆದಿದ್ದಾರೆ. ಸಂವಿಧಾನದ ಮೂಲಭೂತ ಬದಲಾವಣೆಗಳು ಅವಶ್ಯವೇ? ಬೆಲೆ ಏರಿಕೆ ಅಧಪತನಕ್ಕೆ ಕಾರಣ (೧೯೭೪ ಫೆ.) ಗಡಿ ಸಮಸ್ಯೆ: ವಿವೇಕ ಮತ್ತು ಅವಿವೇಕ

(೧೯೭೦ ಮಾ.) ಚುನಾವಣೆ ಮತದಾರ ಇತ್ಯಾದಿ (೧೯೮೫ ಏ.) – ಹೀಗೆ ರಾಷ್ಟ್ರೀಯ ಅಂತರಾಷ್ಟ್ರೀಯ ಸಮಕಾಲಿನ ರಾಜಕೀಯ ವಿಚಾರಗಳ ಮಹತ್ವಪೂರ್ಣ ಮಂಡನೆಯನ್ನು ಕಸ್ತೂರಿ ಸಂಚಿಕೆಯಲ್ಲಿ ಕಾಣುತ್ತೇವೆ.

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಇತಿಹಾಸವನ್ನು ಕಸ್ತೂರಿಯ ಮೂಲಕ ಪಾ.ವೆಂ. ಜನಪ್ರಿಯಗೊಳಿಸಿದ ರೀತಿ ಮಹತ್ವವಾದದು. ಇದಕ್ಕಾಗಿ ವಿಜ್ಞಾನದ ಎಲ್ಲ ವಿಭಾಗಗಳನ್ನು ಅಭ್ಯಸಿಸಿ ಮಾನವ ಕುಲಕ್ಕೆ ಅಗತ್ಯ, ಅನಗತ್ಯ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಭೌತ ವಿಜ್ಞಾನದಲ್ಲಿ 'ಮಾನವ ನಿರ್ಮಾನಿಸನಾಗಿದ್ದಾನೆ' ಎಂಬ ಲೇಖನದಲ್ಲಿ ಅಮೀಬದಿಂದ ಮನುಷ್ಯನವರೆಗೆ ಜೀವ ವಿಕಾಸವನ್ನು ರೇಖಿಸುವ ವೈಜ್ಞಾನಿಕ ವಿಕಾಸದ ಸರಪಳಿಯನ್ನು ಮೀರಿ ವಾನರಾವಸ್ಥೆಗೂ ಪೂರ್ವ ಮಾನವಾವಸ್ಥೆಗೂ ನಡುವಣ ಸ್ಥಿತಿಯನ್ನು ತೋರಿಸುವ ಆಧಾರ ಸಾಮಾಗ್ರಿ ಇದೆಯೆಂದು ಪುರಾವೆಗಳ ಮೂಲ ಸ್ಪಷೀಕರಿಸುತ್ತಾರೆ. **ಅಪಾಯಕರ ಮಿಂಚು, ವಿಶ್ವಸೃಷ್ಟಿ ಹೇಗಾಯಿತು, ಭೂಮಿ ಉಬ್ಬುತ್ತಿದೆ, ಹವಳದ ಮಹಾಶಿಲ್ಪಿ**–ಈ ಎಲ್ಲ ಲೇಖನಗಳು ಭೌತವಿಜ್ಞಾನದ ಬಗ್ಗೆ ಬೆಳಕು ಹರಿಸುತ್ತದೆ.

ಸಸ್ಯಶಾಸ್ತ್ರ: ನಿಸರ್ಗದ ಸೃಷ್ಟಿಯ ಅದ್ಭುತ ಲೋಕಗಳನ್ನು ಇಲ್ಲಿ ತೆಗೆದಿಡುತ್ತಾರೆ. ಜೀವಜಂತುಗಳ ಆಯುಷ್ಯದ ಅವಸ್ಥೆಗಳನ್ನು ನೋಡಿದರೆ ಸಸ್ಯಗಳ ಆಯುಷ್ಯ ಭಿನ್ನವಾಗಿದೆ. ಅದರಲ್ಲಿ ಒಂದು ದಿನಕ್ಕೆ ಅರಳಿ, ಬೀಳುವ ಹೂವಿನ ಸ್ಥಿತಿ ಭಿನ್ನವಾಗಿದೆ. ಗುಲಾಬಿ, ಮಲ್ಲಿಗೆ, ಹೂಗಳು ಬೀಜಗಳನ್ನು ನೀಡುವುದಿಲ್ಲ. ಕೇವಲ ಸೌಂಧರ್ಯಕ್ಕಾಗಿ ಸೃಷ್ಟಿಯಾದಂತಿದೆ. ಪ್ರಾಣಿ ಜಗತ್ತಿನ ಇನ್ನೊಂದು ಸೃಷ್ಟಿಯನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಎಫೆಮೆರಾ ಅಥವಾ ಮೇಫ್ಲೈ ಎಂದು ಹೆಸರಾದ ಪಾತರಗಿತ್ತಿಯ ಅಲ್ಪ ಬದುಕಿನ ಬಗ್ಗೆ ವಿವರಿಸುತ್ತಾರೆ.

೫. ಅಂತರಾಷ್ಟ್ರೀಯ ಮಹತ್ವದ ವ್ಯಕ್ತಿ, ದೇಶ, ಪ್ರಚಲಿತ ವಿದ್ಯಾಮಾನಗಳ ವಿಶ್ಲೇಷಣೆಯನ್ನು ಪಾ.ವೆಂ. ಖಚಿತಮಾಹಿತಿಗಳ ಮೂಲಕ ಉದಾಹರಣೆಯೊಂದಿಗೆ ವಿವರಿಸುತ್ತಾರೆ. (೧೯೭೨ ಆ.) ಮಹಾದಾರ್ಶನಿಕ ಪ್ಲೇಟೊ ಯುಗಪುರುಷ ಲೆನಿನ್, ಯುರೋಪಿನ ಕ್ರಾಂತಿದೂತ ರೂಸೊ ಮಹಾವಿಜ್ಞಾನಿ ಜಾನ್‌ಬಾರ್ಡಿನ್, ಶತಕೋಟಿದಾನಿ ಆಂಡ್ರಂ ಕಾರ್ನಜಿ ಪ್ರತಿಭಾಶಾಲಿ ಗಾಗಿನ್ (೧೯೬೪ ಮೇ) ಐನ್‌ಸ್ಟೈನರ ಬಾಲ್ಯ ಜೀವನ (೧೯೭೩ ಜೂ.) ಹೀಗೆ ನೂರಾರು ವ್ಯಕ್ತಿ ದೇಶ ಪ್ರಚಲಿತ ವಿದ್ಯಾಮಾನಗಳ ವಿಶ್ಲೇಷಣೆಯನ್ನು ನೀಡುತ್ತಾರೆ. ಪಾ.ವೆಂ. ಅವರು ಸ್ವಂತ ದೃಷ್ಟಿಕೋನ, ಒಲವಿನಿಂದ ವ್ಯಕ್ತಿಗಳನ್ನು ಆರಿಸಿಕೊಂಡಿಲ್ಲ. ಜೀವನದ ಎಲ್ಲ ರಂಗಗಳಲ್ಲಿ ವಿಜೃಂಬಿಸಿದವರನ್ನು ಪಾ.ವೆಂ. ಗುರುತಿಸಿದ್ದಾರೆ. ಅವರ ಸಾಧನೆ, ಕ್ಷೇತ್ರ ಜೀವನ ಯಶಸ್ಸಿನ ಮರ್ಮವನ್ನು ವಿವರಿಸಿದ್ದಾರೆ. ಉದಾಹರಣೆಗೆ ರಶಿಯಾದ ಮಹಾಮುತ್ಸದ್ದಿ–ನಿಕಿತಾ ಕುಶ್ಚೇವ್ (೧೯೭೧ ನ.) ಅವನು ಕಮುನಿಸ್ಟ್ ಜಗತ್ತಿನ ರೂಪವನ್ನೇ ಮಾರ್ಪಡಿಸಿ ವ್ಯಕ್ತಿ, ಕಮ್ಯುನಿಸ್ಟ್ ಚಳವಳಿಯಲ್ಲಿ ಇದ್ದ ಅಮಾನುಷತನ, ನಿರ್ಧಯತೆಯನ್ನು ಹೋಗಲಾಡಿಸಿ ಮೊದಲಿನ ಸ್ಥಿತಿಗೆ ಬಾರದಂತೆ

ಕಮ್ಯುನಿಸ್ಟನ್ನು ಬದಲಾಯಿಸಿದ ಸಾಹಸಮಯ ಬದುಕಿನ ಚಿತ್ರಣವನ್ನು ರಷ್ಯಾದ ಸ್ಥಿತಿಗತಿಯನ್ನು ವಿವರಣಾತ್ಮಕವಾಗಿ ಚಿತ್ರಿಸಿದ್ದಾರೆ. ವ್ಯಕ್ತಿ ಚಿತ್ರಣದೊಂದಿಗೆ ಆ ರಾಷ್ಟ್ರದ ಪ್ರಚಲಿತ ವಿದ್ಯಾಮಾನಗಳ ವಿಶ್ಲೇಷಣೆಯು ಇಲ್ಲಿದೆ.

ವ್ಯಕ್ತಿ ಪ್ರಧಾನ ವಿಭಾಗಗಳು: ಸಾಧನೆ, ಸನ್ಮಾನ, ಮೃತ್ಯುವಿನ ಸಂಗತಿಗಳು ವ್ಯಕ್ತಿಗೆ ಸಲ್ಲಿಸುವ ಶ್ರದ್ಧಾಂಜಲಿ ಹಾಗೂ ಗೌರವಾಂಜಲಿ, ಮೃತ ವ್ಯಕ್ತಿಯ ಹಿರಿಮೆ ಸಮಾಜಕ್ಕೆ ಅವರ ಕೊಡುಗೆ, ವ್ಯಕ್ತಿಯ ಗುಣ ವಿಶೇಷಗಳು, ಸಾಧನೆಗೆ ಸಿಕ್ಕ ಪುರಸ್ಕಾರ ಸಾರ್ವಜನಿಕ ಗೌರವಾಧಾರಗಳಿಗೆ ಪಾತ್ರವಾದ ವ್ಯಕ್ತಿಯ ಔದಾರ್ಯ ಹಿರಿಮೆಗಳನ್ನು ಶ್ಲಾಘಿಸುವ ಅಭಿಪ್ರಾಯ ಪ್ರಧಾನವಾದ ಸಂದರ್ಶನ ರೂಪದ, ಪ್ರಶ್ನೋತ್ತರ ರೂಪದ ಲೇಖನಗಳು ಇಲ್ಲಿ ಸಾಕಷ್ಟು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. (ಇದರ ಪ್ರತ್ಯೇಕ ವಿವರಗಳು ಜಗದ್ವಿಖ್ಯಾತರು ವಿಭಾಗದಲ್ಲಿದೆ)

೬. **ಕಲೆ ಮತ್ತು ಕ್ರೀಡಾ ಜಗತ್ತು ಕಲೆ ಮತ್ತು ಕಲಾ ಜಗತ್ತಿನ ಗಮನಾರ್ಹ ವ್ಯಕ್ತಿಗಳ ಸಾಧನೆ ಕಲಾಪ್ರಕಾರಗಳ ವಿಕಾಸದ ಆತ್ಮೀಯ ಪರಿಚಯ: ಕಲೆ**: ಪ್ರಾಚೀನ ಭಾರತೀಯ ಚಿತ್ರಕಲೆ ಶಿಲ್ಪಕಲೆಗಳನ್ನು ವಿದ್ಯಾವಂತರ ಗಮನಕ್ಕೆ ತಂದು ಅಭಿಮಾನ ಹುಟ್ಟಿಸುವ ಕೆಲಸವನ್ನು ಕಸ್ತೂರಿ ತನ್ನ ಪ್ರಕಟಣೆಯ ಉದ್ದಕ್ಕೂ ಮಾಡುತ್ತಾ ಬಂದಿದೆ. ಆಧುನಿಕ ಭಾರತದಲ್ಲಿ ಪ್ರಖ್ಯಾತರಾದ ಚಿತ್ರ ಶಿಲ್ಪಕಲಾವಿದರನ್ನು ಬೆಳಕಿಗೆ ತಂದಿದ್ದಾರೆ. ರಾಜ ರವಿವರ್ಮ, ರವೀಂದ್ರನಾಥ ಠಾಕೂರ್ ಅನಂತರದವರಾದ ನಂದಲಾಲ ಬಸು, ಎಸ್ಕಿಮೋ ಕಲೆ, ಗಾಂಧಿ ಜೀವನದ ಚಿತ್ರಗಳು, ಜಗತ್ತಿನ ಮಕ್ಕಳು ಜಪಾನಿ ಚಿತ್ರಕಲೆ ಫಣಿಕ್ಕರರ ಚಿತ್ರಕಲೆ, ಭಾರತೀಯ ಗೋಪುರ, ಶಿಲ್ಪಕಲೆ ಶೈಲಿಗಳು, ಗಾಜಿನಲ್ಲಿ ಕಲೆ, ಝುಕ್ ಮಾದರಿ, ಗಾಂಧೀಜಿಯ ಆತ್ಮ ಯಜ್ಞ, ಚರ್ಚೆಗಳು, ಟಿಬೇಟ್‌ನ ದೇವತೆಗಳು, ಪಶ್ಚಿಮದ ಏಶಿಯಾದ ಪ್ರಾಚೀನ ದೇವತೆಗಳು, ಮಸೀದಿಗಳು ಹೀಗೆ ಜಗತ್ತಿನ ರಾಷ್ಟ್ರದ ಜನಾಂಗ ಚಿತ್ರ ಕಲೆ ಅದರ ರಹಸ್ಯ ಕಲೆ ವೈವಿಧ್ಯವನ್ನು ಚಿತ್ರ ಕಲಾಕಾರರ ನೈಪುಣ್ಯವನ್ನು ಪ್ರತಿ ಕಸ್ತೂರಿಯಲ್ಲಿ ಎರಡು-ಮೂರು ಪ್ರತಿಗಳಲ್ಲಿ ಬಣ್ಣದ ಕಲೆಯ ಚಿತ್ರಣದೊಂದಿಗೆ ವಿವರಣೆಯನ್ನು ನೀಡುತ್ತಿದ್ದರು. ಆ ಚಿತ್ರದಲ್ಲಿ ಸಾಹಿತ್ಯವಿತ್ತು. ಕಲೆ ಇತ್ತು. ಸಾರ್ವಜನಿಕ -ಧಾರ್ಮಿಕ ಆರ್ಥಿಕ ಚರ್ಚೆಯಿತ್ತು. ರಾಜಕೀಯವು ಮಿಳಿತವಾಗಿತ್ತು. ಜಗತ್ತಿನ ಅನೇಕ ಗುಡ್ಡಗಾಡಿನ ಜನಾಂಗಗಳ ಜೀವನ ಪರಿಚಯವಿರುತ್ತಿತ್ತು. ಒಟ್ಟಿನಲ್ಲಿ ಅದು ಜಗತ್ತಿನ ಗತಕಾಲದ ಹಿರಿಮೆಗೆ ಕನ್ನಡಿಯಾಗಿತ್ತು. ದೇಶದ ಇಂದಿನ ನಾಳಿನ ಆಶೋತ್ತರಗಳ ಧ್ವನಿಯಾಗಿತ್ತು. ಪಾ.ವೆಂ ಅವರು **ಮನೋಹರ** ಪತ್ರಿಕೆಯಿಂದ ಸಂಗ್ರಹಿಸಿದ ಒಂದು ಲೇಖನ ಕಸ್ತೂರಿಯ ೧೯೫೫ ಸಂಚಿಕೆಯಲ್ಲಿ "ರವೀಂದ್ರರ ಚಿತ್ರಕಲೆ"ಯ ಬಗ್ಗೆ ಗಮನಿಸಿದಾಗ ಕವಿ ರವೀಂದ್ರರು ತಮ್ಮ ಎಪ್ಪತ್ತರ ಸಮಯದಲ್ಲಿ ಆಸಕ್ತಿ ವಹಿಸಿದ ಚಿತ್ರಕಲೆ, ಚಿತ್ರಕಾರನಲ್ಲಿ ಇರಬೇಕಾದ ಸಹ್ಯ ಮತ್ತು ಸೌಂದರ್ಯ ದೃಷ್ಟಿಯ ಕೊಡುಗೆಯ ಅಗತ್ಯ ರವೀಂದ್ರರ ಕಲಾಂತಿಕೆಯಲ್ಲಿ ತುಂಬಿದ್ದವು. ಅವರ ಚಿತ್ರಕಲೆ ರಸಪೂರ್ಣ

ಚಿತ್ರಗಳನ್ನು ಸೃಷ್ಟಿಸಿ ಬಣ್ಣ ಮತ್ತು ಆಕಾರಗಳು ಸ್ವಚ್ಛಂದವಾಗಿ ಮೂರ್ತಿ ಸ್ವರೂಪ ಪಡೆಯುತ್ತಿತ್ತು. ರವೀಂದ್ರರು ಯಾವುದೇ ಚಿತ್ರಗಳನ್ನು ಬರೆದರೂ ಮನಸ್ಸಿನಾಳದಲ್ಲಿಯ ಭಾವಗಳನ್ನು ನಿರ್ದೇಶಿಸಿ ಜೀವವಿದೆ, ರಹಸ್ಯವಿದೆ ಅಂತರ್ ವೇದನೆಯ ವ್ಯಕ್ತಿತ್ವವಿದೆ ಎಂದೂ ಅನಿಸುತ್ತದೆ. ಚಿತ್ರ ಮಾಧ್ಯಮದ ಪ್ರಕಾರ ಅದರ ಪರಿಕರಗಳು ಆಯ್ಕೆಯ ವಸ್ತುಗಳು ವಿಶೇಷವಾಗಿದ್ದವು.

'ಜಗತ್ತಿನ ಕಲಾ ಪ್ರಪಂಚದಲ್ಲಿ ಅಮರಳಾಗಿರುವ ಭಾರತದ ಶ್ರೇಷ್ಠ ಚಿತ್ರಕಾರ ಅಮೃತಾ ಶೇರಗಿಲ್ ರವೀಂದ್ರನಾಥರ ಚಿತ್ರಗಳನ್ನು ಕಂಡಾಗ ಅವರ ಕಾವ್ಯಗಳಿಗಿಂತಲೂ ಅವರ ಚಿತ್ರಗಳು ನನಗೆ ಹೆಚ್ಚು ಮೆಚ್ಚುಗೆಯಾಗಿದೆ ಎಂದಳು'. ಕವಿ ರವೀಂದ್ರರು ತಮ್ಮ ಚಿತ್ರಗಳ ಬಗ್ಗೆ ವಿವರಣೆ ನೀಡಲಿಲ್ಲ. ಹೂಗಳ ಸುವಾಸನೆಯನ್ನು ವರ್ಣಿಸಲಾದಿತೇ? ಕಣ್ಣಿನಿಂದಲೇ ಚಿತ್ರಗಳ ರಸಗ್ರಹಣ ಮಾಡಿಕೊಳ್ಳಬೇಕು ಎಂದು ಅವರ ಅಭಿಪ್ರಾಯ.

ಈ ಕವಿ ಶ್ರೇಷ್ಠರ ಪ್ರತಿಭೆ ಬಂಗಾಳದ ಭಾಗ್ಯರೇಖೆಯನ್ನು ಬದಲಾಯಿಸಿತು. ಬ್ರಿಟೀಷ್ ಸರಕಾರದಿಂದ ಸತ್ವಹೀನವಾಗಿದ್ದ ಭಾರತದ ಬಂಗಾಳದಲ್ಲಿ ಸರ್ವಕ್ಷೇತ್ರಗಳಲ್ಲಿಯೂ ಬದಲಾವಣೆಯನ್ನು ಸಾಧಿಸಿದ ಜಾದೂಗಾರನೆಂದರೆ ರವೀಂದ್ರನಾಥ ಟಾಗೂರರ ಅದ್ವಿತೀಯ ಕಲಾ ಪ್ರತಿಭೆ ಭಾರತ ಮಾತ್ರವಲ್ಲದೆ ಇತರ ದೇಶಗಳಿಗೂ ಶಾಂತಿನಿಕೇತನದ ಕಲೆಯ ದರ್ಶನ ಆಕರ್ಷಿತವಾಗಿ ಬೆಳೆಯಿತು. ರವೀಂದ್ರರ ದಾರ್ಶನಿಕ ತತ್ವ ಅವರ ತತ್ವ ಜ್ಞಾನದ ಕಲೆಯಲ್ಲಿ ಅರಳಿದ, ಕಲಾವಿದರಲ್ಲಿ ಅರಳಿಸಿದ ಇಡೀ ಇತಿಹಾಸವೇ ನಮಗೆಲ್ಲ ಗೋಚರವಾಗುತ್ತದೆ.

ಭಾರತದ ಚಿತ್ರಕಲೆಯ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟ ಎಂದು ಭಾರತ ಸರಕಾರವು ಸಂಗ್ರಹಾಲಯದಲ್ಲಿರಿಸಿದೆ. ಈ ರೀತಿಯ ವ್ಯಕ್ತಿ ಚಿತ್ರಗಳನ್ನು ಪರಿಚಯಿಸುವುದರ ಮೂಲಕ ಅವರಲ್ಲಿ ಅಡಗಿರುವ ಗುಪ್ತ ವಿಶಿಷ್ಟ ಪ್ರತಿಭೆಗಳನ್ನು ಎಲ್ಲ ಓದುಗರಿಗೂ ಪರಿಚಯಿಸಿ ಚಿತ್ರಕಲೆಯ ಮಹತ್ವ ಕಲೆಯಲ್ಲಿ ಕಲಾಗಾರರಲ್ಲಿ ಅಡಗಿರುವ ಚಿತ್ರಕಲೆಯ ಪ್ರಾಪಂಚಿಕ ಮಹತ್ವವೇನು ಎಲ್ಲರಿಗೂ ಮನದಟ್ಟು ಮಾಡುತ್ತಿದ್ದರು. ಹೀಗೆ ಆಸಕ್ತಿಯ ಕೌತುಕದ ವಿಷಯವನ್ನು ವಾಚಕರಿಗೆ ಕಸ್ತೂರಿ ನೀಡುತ್ತಿತ್ತು.

೭. ವಿಶ್ವದ ಅದ್ಭುತಗಳು, ವಿಸ್ಮಯದ ವಿದ್ಯಾಮಾನಗಳು ಇವುಗಳ ಕುರಿತು ವಿವಿಧ ಮೂಲಗಳಿಂದ ಸಿಗುವ ಮಾಹಿತಿಗಳು ಮಂಡನೆಗಳು. ಪಾ.ವೆಂ. ಅವರ ರೋಚಕ ಜಗತ್ತಿನಲ್ಲಿ ಗುಪ್ತಗಾಮಿನಿ, ನದಿಯ ಮೂಲವನ್ನು ಅರಸುವ ಧೀರರು, ಕಾಲೇಜಿಗೆ ಹೆಣಗಳನ್ನು ಒದಗಿಸುವುದನ್ನೇ ದಂದೆಯಾಗಿ ಮಾಡಿಕೊಂಡ ಕ್ರೂರಿಗಳು, ಪೇಚಿನಲ್ಲಿ ಸಿಲುಕಿದ ಸಮಾಜ ಸುಧಾರಕರು, ವಿಶ್ವಪರ್ಯಟನೆಯ ಸಾಹಸಿಗಳು, ಹಿಮಶಿಖರ ಜರೆತ, ಜ್ವಾಲಾಮುಖಿಯ ದೊರೆತ, ನೈಸರ್ಗಿಕ ಪ್ರಕೋಪಗಳು ವೇಗದಲ್ಲಿ ಓಡುವ ರೈಲು ಎಲ್ಲ ವಿವರಗಳನ್ನು ಕಸ್ತೂರಿಯ ಸಂಚಿಕೆ ಲೇಖನದಲ್ಲಿ ಕಾಣುತ್ತೇವೆ. ಟೈಟಾನಿಕ್ ದುರಂತ, ಚರ್ಮದಿಂದ ನೋಡಬಹುದೇ ವಿಮಾನದಿಂದ ಜಿಗಿದ ಮಹಿಳೆ. ಇದು ಮಾನವಾಸಕ್ತಿಯ

ಬರಹಗಳಾದರೆ ಪ್ರಾಣಿಲೋಕ ಕೀಟಲೋಕದ ವಿಸ್ಮಯಗಳು ಅವುಗಳ ಜಗತ್ತನ್ನೇ ಸಂಕ್ಷಿಪ್ತರೂಪದಲ್ಲಿ ಪರಿಚಯಿಸುತ್ತಿದ್ದರು. ಅವುಗಳ ಭಾಷೆ ನಡೆತ ಆಹಾರ ಜೀವನ ಕ್ರಮವನ್ನು ನೋಡುತ್ತೇವೆ. ಪ್ರಕೃತಿಯ ಸಮತೋಲನವನ್ನು ನಿಯಂತ್ರಿಸುವಲ್ಲಿ ಮನುಷ್ಯೇತರ ಜೀವಿಗಳ ಮಹತ್ವ ಅವುಗಳ ಪ್ರವೃತ್ತಿಯ ಬಗ್ಗೆ ತಿಳಿವನ್ನು ಜನರಿಗೆ ಸರಳಶೈಲಿಯಲ್ಲಿ ಕಸ್ತೂರಿ ತಿಳಿಸುತ್ತಿತ್ತು.

ನೈಜ ಕಥಾವಸ್ತುಗಳ ಸಂಗ್ರಹ: ಸೇವಾ ಸಮೀರಾಜಮಲ್ಲ ಇವರು ಸ್ವತಃ ನ್ಯಾಯಾದೀಶರು ಪತ್ತೆದಾರಿ ರೀತಿಯ ನೈಜಕತೆಗಳನ್ನು ಸಂಗ್ರಹಿಸಿ ಕಸ್ತೂರಿ ಕಥಾವಿಭಾಗಕ್ಕೆ ಕಥೆಗಳನ್ನು ಬರೆಯುತ್ತಿದ್ದರು. 'ನಾಲ್ಕು ಕೊಲೆಗಳು', 'ಕೊಲೆಗಡುಕರು' ಈ ರೀತಿಯ ರೋಚಕವಾದ ಕತೆಗಳನ್ನು ಕಸ್ತೂರಿ ಪ್ರಕಟಿಸುತ್ತಿತ್ತು.

೮. ವೈದ್ಯಕೀಯ, ವೈಜ್ಞಾನ, ಕೈಗಾರಿಕ ಜಗತ್ತಿನ ಸಂಶೋಧನೆಗಳು ಪ್ರಯೋಗಗಳು ಮತ್ತು ಅನುಭವಗಳ ನಿರೂಪಣೆ. ಕ್ಯಾನ್ಸರ್ ಶ್ವಾಸಕೋಶ, ನಕ್ಕು ಆಯುಷ್ಯ ಹೆಚ್ಚಿಕೊಳ್ಳಿ, ಹಾವು ಕಚ್ಚಿದಾಗ ಏನು ಮಾಡಬೇಕು, ಮೈ ಬಿಸಿಯಾಗಿದೆ ತಾಳ್ರಿ, ಆರ್. ಹೆಚ್, ಶಿಶುಗಳಿಗೊಂದು ಆಶಾಕಿರಣ, ಲೈಂಗಿಕ ರೋಗಗಳು ಹೀಗೆ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳು ಕಸ್ತೂರಿಯಲ್ಲಿ ಪ್ರಕಟವಾಗುತ್ತಿತ್ತು. ಬಹುಷಃ ಪಾ.ವೆಂ. ಅವರು ತಮ್ಮ ಜೀವನದ ಪಯಣದಲ್ಲಿ ಆಸ್ತ್ಮಾರೋಗದಿಂದ ಬಳಲುತ್ತಿದ್ದ ಕಾರಣ ಆರೋಗ್ಯದ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡಿದ್ದಾರೆ. ಸಮಾಜ ಆರೋಗ್ಯವಾಗಿರಬೇಕೆಂದು ಅವರ ಹಂಬಲ ಆಗಿತ್ತು. ಹಾಗಾಗಿ ಅನೇಕ ಭಾಷೆಯ ಅನುವಾದಗಳನ್ನು ಸಂಗ್ರಹ ವೈದ್ಯರೊಂದಿಗೆ ಚರ್ಚಿಸಿ ವೈದ್ಯರ ಮೂಲಕ ಬರೆಸುತ್ತಿದ್ದ ಲೇಖನವಾಗಿತ್ತು. ಕೇವಲ ಲೇಖಕರ ಬಳಗದೊಂದಿಗೆ ಮಾತ್ರ ಸಂಪರ್ಕವಿರದೆ ವೈದ್ಯರೊಡನೆ, ತಜ್ಞರೊಡನೆ, ವಿಜ್ಞಾನಿಗಳೊಡನೆ ಬಾಂಧವ್ಯ ಬೆಳೆಸಿದ್ದರು.

ಪತ್ರಿಕಾ ರಂಗದಲ್ಲಿ ಸಾರ್ಥಕತೆಯ ಅನುಭವವನ್ನು ನೀಡಿದ ಘಟನೆಯ ಬಗ್ಗೆ ಪಾ.ವೆಂ. ಅವರು ಒಂದು ಸಂದರ್ಶನದಲ್ಲಿ ಈ ರೀತಿಯಾಗಿ ಹೇಳಿಕೊಂಡಿದ್ದಾರೆ. ಲೇಖಕರ ಮತ್ತು ಓದುಗರನೇಕರ ಶಾಶ್ವಾತ ಸ್ನೇಹ ಮುಖ್ಯವಾದದ್ದು, ಒಬ್ಬ ಓದುಗನ ಮುರುಟಿ ಹೋದ ಜೀವನಕ್ಕೆ ಭರಿಸಲು ನೆರವಾದದ್ದು, ಉತ್ತರ ಕನ್ನಡದ ಕಸ್ತೂರಿ ಓದುಗರೊಬ್ಬರು ಸಂತತಿ ನಿಯಂತ್ರಣಕ್ಕಾಗಿ ವ್ಯಾಸೆಕ್ಟಮಿ ಮಾಡಿಸಿಕೊಂಡಿದ್ದರು. ಅದಾದ ಕೆಲ ಕಾಲದ ನಂತರ ಅವರ ಏಕ ಮಾತ್ರ ಪುತ್ರ ಅಪಘಾತದಲ್ಲಿ ಮಡಿಯುತ್ತಾನೆ. ಮಗುವನ್ನು ಕಳೆದುಕೊಂಡ ದಂಪತಿಗಳಿಬ್ಬರೂ ಹುಚ್ಚು ಹಿಡಿಯುವಷ್ಟು ನಿರಾಶರಾದರೂ. ಈ ವೇಳೆಗೆ ನಾನು ಅದೇ ಹೊಸದಾಗಿ ಮುಂಬಾಯಿಯ ಡಾ. ಫಥಕೆಯರು ರೂಪಿಸಿದ್ದ ವೀರ್ಯನಾಳ ಪುನರ್ಜೋಡಣೆಯ ಶಸ್ತ್ರ ಕ್ರಿಯೆಯ ಬಗ್ಗೆ ವಿವಿಧ ವೈದ್ಯಕೀಯ ಪತ್ರಿಕೆಗಳಿಂದಲೂ ಸ್ವತಃ ಡಾಕ್ಟರರ ಫಡಕೆಯವರಿಂದಲೂ ವಿಷಯ ಸಂಗ್ರಹಿಸಿ ಒಂದು ಆಶಾಧಾಯಕ ಲೇಖನ ಪ್ರಕಟಿಸಿದೆ. ಅದನ್ನೋದಿ ಮೇಲೆ ಹೇಳಿದ ಓದುಗರು ನನಗೆ

ಬರೆದರು. ನಾನು ಪುನಃ ಡಾ. ಪಡಕೆಯವರಿಗೆ ಬರೆದು ಹೆಚ್ಚು ವಿವರ ಸಂಪಾದಿಸಿ ಹುಬ್ಬಳ್ಳಿಯ ಸರ್ಜನರೊಬ್ಬರೊಡನೆ ಮಾತಾಡಿ ಆ ಸಂತೃಪ್ತ ಓದುಗರಿಗೆ ಸಲಹೆ ಕಳುಹಿಸಿದೆ. ಆ ಓದುಗರು ಆ ಸರ್ಜನರಿಂದಲೇ ಪುನರ್ಜೋಡಣೆಯ ಶಸ್ತ್ರಕ್ರಿಯೆ ಮಾಡಿಸಿಕೊಂಡರೆಂದೂ ಪುನಃ ಮಕ್ಕಳಾದವೆಂದೂ ಅವರಿಂದಲೇ ನಂತರ ಪತ್ರ ಬಂದಾಗ ತಿಳಿಯಿತು. ಪತ್ರಿಕೆಯ ಮೂಲಕ ಇಂಥ ಒಂದು ಉಪಕಾರ ಸಾಧ್ಯವಿದೆಯಲ್ಲವೆಂದು ಸಮಧಾನವಾಯಿತು.

೯. **ಮಾನವಿಕ ಸಂಗತಿಗಳಾದ ಪ್ರೀತಿ, ಪ್ರೇಮ, ಪ್ರಣಯ, ಸಾಹಸ ಗೂಢ ಹಾಗೂ ರಹಸ್ಯಮಯ ಪ್ರಸಂಗಗಳ ಕಥನ:** ಮೇ ೧೯೭೭ರ ಸಂಚಿಕೆಯಲ್ಲಿ ಪ್ರಕಟವಾದ 'ಮುದಿ ರಾಣಿಯ ತರುಣ ಪ್ರಿಯಕರ' ಎನ್ನುವ ಲೇಖನದಲ್ಲಿ ೧೬ನೇ ಶತಮಾನದಲ್ಲಿ ಬ್ರಿಟನ್ ಯುರೋಪಿನ ಪ್ರಥಮ ಶ್ರೇಣಿಯ ದೇಶ ಸುವರ್ಣ ಯುಗದ ಸಂಕೇತವಾಗಿದ್ದ ಎಲಿಜಾಬೆತ್ ಇತಿಹಾಸದ ಅಪ್ರತಿಮ ವ್ಯಕ್ತಿಗಳಲೊಬ್ಬಳಾಗಿದ್ದಳು. ಜೀವನದ ಕೊನೆಯವರೆಗೂ ಬ್ರಹ್ಮಚಾರಿಣಿಯೇ ಆಗಿ ಉಳಿದವಳು. ನೈಷ್ಠಿಕ ಬ್ರಹ್ಮಚಾರಿಣಿ ಏನೂ ಅಲ್ಲ. ಸಾಕಷ್ಟು ಪ್ರಣಯ ಪ್ರಕರಣಗಳು ಕತೆಯಾಗಿ ಹಬ್ಬಿವೆ. ರಾಣಿ ಎಲಿಜಾಬೆತ್ ಮತ್ತು ಎಸೆಕ್ಸಿಸ್ ಆರ್ಲನಾದ ರಾರ್ಬಟ್ ಇವರ ಪ್ರೇಮ ಪ್ರಕರಣದಷ್ಟು ಹೃದಯ ಸ್ಪರ್ಶಿ ಮತ್ತು ಹೃದಯ ವಿದ್ರಾವಕವಾದದು ಇತಿಹಾಸದಲ್ಲಿ ಅಪರೂಪವಾದದ್ದು. ಎಸೆಕ್ಸಿಸ್ ಆರ್ಲನಾದ ರಾಬರ್ಟ್ ಒಬ್ಬ ಪ್ರಜ್ಞಾವಂತ, ಬುದ್ಧಿವಂತ ಸಾಹಿತಿ ೨೦ ವರ್ಷದಲ್ಲಿಯೇ ಎಲಿಜಾಬೆತ್‌ಳ ಪ್ರೇಮಕ್ಕೆ ಒಳಗಾಗಿದ್ದ ಹಲವು ವರ್ಷಗಳ ನಂತರ ತರುಣ ಅರ್ಲನಿಗೆ ತಾನು ರಾಣಿಯ ಪ್ರೇಮಿಕನಾಗಿರುವ ಸಂಗತಿ ಉನ್ಮಾದಕಾರ, ಅಪಾಯಕಾರಿ ಎನ್ನಿಸತೊಡಗಿತ್ತು ದೂರವಾಗ ಬಯಸಿ ತನ್ನ ಸ್ವತಂತ್ರ ಬದುಕನ್ನು ಪ್ರಾರಂಭಿಸುತ್ತಾನೆ. ಆದರೆ ರಾಣಿಯಿಂದ ತಪ್ಪಿಸಿಕೊಳ್ಳಲಾರದೆ ತನ್ನ ೩೪ನೇ ವಯಸ್ಸಿನಲ್ಲಿ ಆಕೆಯಿಂದಲೇ ಮರಣದಂಡನೆಗೆ ಒಳಪಡುತ್ತಾನೆ. ಹೀಗೆ ಸಂಪಾದಕರು ಐತಿಹಾಸಿಕ ಪ್ರಸಿದ್ಧ ಮಾಹಿತಿ ಪ್ರಧಾನ ಮಾನವೀಯ ಪ್ರೀತಿ, ಪ್ರೇಮ, ಪ್ರಣಯಗಳನ್ನು ಓದುಗರ ಮುಂದಿಡುತ್ತಾರೆ.

'ಅಂತಪುರದ ಅಂತರಂಗದಲ್ಲಿ' ಇಡೀ ಜಗತ್ತಿನ ದಾಸಿಯರ, ರಾಣಿಯರ ಸ್ಥಿತಿ–ಗತಿ–ಪರಿಸ್ಥಿತಿಯನ್ನು ಇಲ್ಲಿ ವಿವರಿಸಲಾಗಿದೆ. 'ರಾಜಕುಮಾರಿಯ ಭಗ್ನ ಪ್ರಣಯ' ಬ್ರಿಟೀಷ್ ರಾಜಕುಮಾರಿಯ ತಂಗಿ ಮಾರ್ಗರೇಟ್ ರೋಸ್ ಬ್ರಿಟೀಷ್ ರಾಜ ಮನೆತನದಲ್ಲಿ ಹುಟ್ಟಿದವರಿಗೂ ಸಾಮಾನ್ಯ ಬ್ರಿಟೀಷ್ ಪ್ರಜೆಗಳಾಗಿದ್ದಷ್ಟು ಕೂಡ ಹೃದಯದ ಒಲವುಗಳನ್ನು ಅನುಸರಿಸುವ ಸ್ವಾತಂತ್ರ್ಯವಿಲ್ಲ ಎಂಬುದನ್ನು ಕಾಲು ಶತಮಾನದೊಳಗೆ ಎರಡನೇ ಬಾರಿ ಜಗತ್ತಿಗೆ ತೋರಿಸಿಕೊಟ್ಟಿತು. ೨೨ ವರ್ಷಗಳ ಹಿಂದೆ ಈ ರಾಜಕುಮಾರಿಯ ದೊಡ್ಡಪ್ಪನಾಗಿದ್ದ ಎಂಟನೇ ಎಡ್ವರ್ಡನು ತನು ಮೆಚ್ಚಿದ ಹೆಣ್ಣಿಗೋಸ್ಕರ ಸಿಂಹಾಸನವನ್ನೇ ತ್ಯಾಗಮಾಡಿದ್ದ (೧೯೩೩) ಈ ರೀತಿಯ ಘಟನೆಗಳಿಂದ ಮಾನವ ಸಂಬಂಧ–

ಧರ್ಮ ಸಂಸ್ಕೃತಿಯೊಡನೆ ಸಂಪ್ರದಾಯಗಳು ಬೆಸೆದುಕೊಂಡ ರೀತಿಯನ್ನು ಕಾಣುತ್ತೇವೆ.

ಸಾಹಸ, ನಿಗೂಡ, ರಹಸ್ಯಗಳು: ಆನೆಯೊಂದಿಗೆ ಚೆಲ್ಲಾಟ, ಹೆಸರಿಲ್ಲದ ಬೆಕ್ಕು ಹೆಸರಿಗೆ ಬಂತು, ಎರಡು ತಲೆಯ ನಾಯಿಗಳು, ಟೈಟಾನಿಕ್ ದುರಂತ, ಬಲೂನು ಪ್ರಯಾಣದ ರಮ್ಯಕತೆ ಹೀಗೆ ಆಕರ್ಷಕವಾದ ಶೀರ್ಷಿಕೆಯೊಂದಿಗೆ ಜಗತ್ತಿನ ಸಾಹಸಮಯ, ಲೋಕ ಅನಾಹುತಗಳ ಬಗ್ಗೆ ಕೌತುಕಮಯವಾದ ಲೇಖನಗಳನ್ನು ರೋಚಕವಾದ ಅಂಶಗಳನ್ನು ವಾಚಕರಿಗೆ ನೀಡುತ್ತಿದ್ದರು.

೧೦. **ಜ್ಞಾನ ಜಗತ್ತಿನ ತತ್ವಜ್ಞಾನ ವಿಚಾರವಾದಗಳ ಐತಿಹಾಸಿಕ ಮತ್ತು ವರ್ತಮಾನದ ಸ್ವರೂಪಗಳ ವಿವೇಚನೆ:** ಪಾ.ವೆಂ. ಅವರು ಪತ್ರಕರ್ತರಾಗಿದ್ದರಿಂದ ಕಸ್ತೂರಿಗಾಗಿ ಆಗಾಗ ಗಂಭೀರ ಮತ್ತು ಅಧ್ಯಯನಶೀಲ ಬರಹಗಳನ್ನು ಬಿಡಿಬಿಡಿಯಾಗಿ ಬರೆಯುತ್ತಿದ್ದರು ಮತ್ತು ತಜ್ಞರಿಂದ ಲೇಖನಗಳನ್ನು ಬರೆಸುತ್ತಿದ್ದರು. ಇದು ಸಮಕಾಲೀನ ಸನ್ನಿವೇಶ ಮತ್ತು ಸಂದರ್ಭಗಳಿಂದ ವಿಚಾರಪೂರ್ಣವಾದ ವಿಷಯಗಳಾಗಿವೆ. ಈ ವಿಷಯಗಳನ್ನು ೫ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

೧೧. ಜೀವಶಾಸ್ತ್ರ, ಸಸ್ಯಶಾಸ್ತ್ರ, ಜೀವರಸಾಯನ ಶಾಸ್ತ್ರ, ಗಣಿತ ವಿಜ್ಞಾನ ಕ್ಷೇತ್ರಗಳಲ್ಲಿಯ ಬೆಳವಣಿಗೆಗಳ ಬಗ್ಗೆ ತಜ್ಞರ ವಿಚಾರಗಳು ಅಭಿಪ್ರಾಯಗಳ ಮಂಡನೆ. ಪಾ.ವೆಂ. ಅದು ವಿಜ್ಞಾನದ ಎಲ್ಲ ಕ್ಷೇತ್ರಗಳಲ್ಲಿಯೂ ಕೈಯಾಡಿಸಿದ್ದಾರೆ. ಖಗೋಳ ಶಾಸ್ತ್ರ, ಪದಾರ್ಥ ವಿಜ್ಞಾನ ಸಸ್ಯ–ಪ್ರಾಣಿಶಾಸ್ತ್ರಗಳು, ಮನೋವಿಜ್ಞಾನ, ತಂತ್ರಜ್ಞಾನಗಳಂತಹ ವಿಜ್ಞಾನ ವಿಷಯ ಲೇಖನಗಳನ್ನು ಬರೆದಿರುವುದು ಪಾ.ವೆಂ. ಅವರ ಸ್ವಯಂ ಆಚಾರ್ಯ ಶಕ್ತಿಯ ಪ್ರತೀಕವಾಗಿದೆ. ಅವರು ಆಯ್ದು ಕೊಳ್ಳುವ ವಿಷಯದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದರು. ಓದುಗರನ್ನು ತಪ್ಪು ಕಲ್ಪನೆಗೆ ಎಳೆಯದಂತಿರುವ ವಿಷಯ ಪ್ರತಿಪಾದನೆ ಇರುತ್ತಿತ್ತು. ಆಂಗ್ಲ ಭಾಷೆಯ ವೈಜ್ಞಾನಿಕ ಶಬ್ದಗಳಿಗೆ ಕನ್ನಡದ ಪಾರಿಭಾಷಕ ಪದಗಳನ್ನು ನೀಡುತ್ತಿದ್ದರು. ಪಾ.ವೆಂ. ಅವರಿಗಿದ್ದ ಸಂಸ್ಕೃತ ಪಾಂಡಿತ್ಯ ಈ ರೀತಿಯ ರಚನೆಗೆ ಸುಲಭ ನೆರವನ್ನು ನೀಡುತ್ತಿತ್ತು.

ಪ್ರತಿಲೇಖನವನ್ನು ಬರೆಯುವಾಗಲೂ ಆ ವಿಷಯಕ್ಕೆ ಸಂಬಂಧಿಸಿದ ತಜ್ಞರ ಬರಹಗಳನ್ನು ಚೆನ್ನಾಗಿ ಅಭ್ಯಾಸಮಾಡಿ ನಂತರವೇ ಅದನ್ನು ಬರಹಕ್ಕೆ ಇಳಿಸುತ್ತಿದ್ದರು. ತಮ್ಮ ಜ್ಞಾನದಾಯಕ್ಕಾಗಿ ಜನಪ್ರಿಯ ವಿಜ್ಞಾನ ಕುರಿತು ಆಂಗ್ಲಭಾಷೆಯಲ್ಲಿ ಪ್ರಕಟಾಗಿರುವ ನೂರಾರು ಗ್ರಂಥಗಳನ್ನು ಅರಗಿಸಿಕೊಂಡರು, ಆನಂದಿಸಿದರು. ತಮ್ಮ ಈ ದಿನವನ್ನು ಇತರರೊಂದಿಗೆ ಹಂಚಿಕೊಳ್ಳಲು ಕಸ್ತೂರಿಯು ಅವರಿಗೊಂದು ವೇದಿಕೆಯಾಯಿತು. ಜರ್ಮನ್, ಪ್ರೆಂಚ್, ಇಂಗ್ಲೀಷ್, ಪಾಶ್ಚಾತ್ಯ ಭಾಷೆಗಳ ಪತ್ರಿಕೆಯಿಂದ ಕೃತಿಯಿಂದ ಭಾಷೆಯನ್ನು ತಿಳಿದ ತಜ್ಞರಿಂದ ವಿಷಯವನ್ನು ಅನುವಾದಿಸಿ ಸ್ವತಃ ತಾವೇ ಅಧ್ಯಯನ ಮಾಡಿ ಮೂಲ ರೂಪಗಳ ಬಗ್ಗೆ ಸಂಶೋದನೆ ನಡೆಸಿ, ವಿಷಯ ತಜ್ಞರೊಂದಿಗೆ

ಚರ್ಚಿಸಿ ಕನ್ನಡದ ವಿಜ್ಞಾನದ ಬಗ್ಗೆ ವಿಜ್ಞಾನಿಗಳು ಮಾಡದ ಮಹತ್ತರ ಕಾರ್ಯವನ್ನು ಪಾ.ವೆಂ. ಮಾಡಿದ್ದಾರೆ. ಕಸ್ತೂರಿಯಿಂದ ನಿವೃತ್ತರಾಗುವ ವೇಳೆಯಲ್ಲಿ ಪಾ.ವೆಂ. ಒಬ್ಬ ಉತ್ತಮ ವಿಜ್ಞಾನ ಲೇಖಕರೇ ಆಗಿದ್ದಾರೆ. ಡಾ.ಶಿವರಾಮ ಕಾರಂತರು ಇದೇ ರೀತಿಯ ವಿಜ್ಞಾನದ ಮಹತ್ ಕಾರ್ಯ ಸಾಧಕರು ಎಂಬುದನ್ನು ಮರೆಯುವಂತಿಲ್ಲ.

೧೨. ಪರಿಸರ ಪ್ರಜ್ಞೆ, ಆರೋಗ್ಯ ವರ್ಧನೆ, ಶಿಕ್ಷಣವಿಕಾಸ, ಮನೋವಿಕಾಸ ಮುಂತಾದ ಮಾನವೀಯ ಹಾಗೂ ಪ್ರಾಕೃತಿಕ ವಿಷಯಗಳ ಬಗ್ಗೆ ಜಾಗೃತಿ ಹಾಗೂ ಮಾರ್ಗದರ್ಶನ ನೀಡುವಂತೆ ಬೋಧನಿಯ ಲೇಖನಗಳು, ಪರಿಸರ ಪ್ರಜ್ಞೆ, ೨೧ನೇ ಶತಮಾನದಲ್ಲಿ ಮನುಷ್ಯನ ಮಿದುಳಿನ ಸ್ವರೂಪ ಮತ್ತು ರಚನೆಯ ವಿಷಯದಲ್ಲಿ ಜ್ಞಾನದ ಅಗಾಧ ವಿಸ್ತರಣೆಯಾಗಿದೆ. ಭೂಮಿಯ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದಾನೆ. ಇತರ ಜೀವಿಗಳಿಗೆ ಹೋಲಿಸಿದರೆ ಮನುಷ್ಯನ ಮಿದುಳಿನ ವಿಕಾಸ ಅಪರೂಪವೇ ಆಗಿದೆ. ಬುದ್ಧಿಶಕ್ತಿಗೆ ಆಧಾರವಾಗಿರುವ ಮಿದುಳು ಈ ರೀತಿ ಬೆಳೆದರೆ ಮಾನವನ ಭವಿಷ್ಯ ಏನಾದಿತು? ಹೇಗಾದಿತು? ಎನ್ನುವ ಊಹಾಪೋಹದ ಸ್ಥೂಲ ಪರಿಚಯವನ್ನು 'ಮಾನವನ ಯಂತ್ರಕ್ಕೆ ಆಳಾಗುವನೇ?' ಎನ್ನುವ ಲೇಖನದಲ್ಲಿ ಪಾ.ವೆಂ. ಚರ್ಚಿಸುತ್ತಾರೆ. ಮುಂದೊಂದು ದಿನ ಮಾನವ ತಯಾರಿಸಿದ ಯಂತ್ರಗಳು ನಮ್ಮನ್ನು ಸಾಕು ಪ್ರಾಣಿಯಂತೆ ಇಟ್ಟುಕೊಂಡರೆ....? ಎನ್ನುವ ಕಳವಳವನ್ನು ವ್ಯಕ್ತಿಪಡಿಸುತ್ತಾರೆ. 'ಪ್ರತಿ ವಿಶ್ವ ಇರಬಹುದೇ?' 'ಮಾನವ ಮತ್ತು ಹವಾಮಾನ' ಎನ್ನುವ ಲೇಖನದಲ್ಲಿ ವ್ಯಕ್ತಪಡಿಸುವ ಪರಿಸರ ಪ್ರಜ್ಞೆ ವಿಶಿಷ್ಟವಾಗಿದೆ. ಪ್ರಕೃತಿ ದತ್ತವಾದ ಹವಾಮಾನವನ್ನು ಮನುಷ್ಯ ಬದಲಾಯಿಸಿ ವಿಲಕ್ಷಣ ಹವಾಮಾನಗಳಿಗೆ ಕಾರಣವಾಗುವ ಮನುಷ್ಯನ ವಿಪರೀತ ಬುದ್ಧಿಯನ್ನು ಇಲ್ಲಿ ವಿಮರ್ಶಿಸುತ್ತಾರೆ. ಆರೋಗ್ಯ ವರ್ಧನೆಗೆ ಸಂಬಂಧಿಸಿದ 'ಆಸ್ಪರಿನ್ನಿಂದ ಹೊಸ ಆಸೆ', 'ಕುಷ್ಠ ರೋಗಕ್ಕೆ ಭಯ ಪಡಬೇಡಿ?', 'ಮಧುಮೇಹ ಮತ್ತು ಆಯುರ್ವೇದ' ಹೀಗೆ ನೂರಾರು ಮಾನವಿಕ ರೋಗ ರುಜಿನಗಳ ಬಗ್ಗೆ ಕೂಲಂಕುಶ ಅಧ್ಯಯನ ಮಾಡಿ ರೋಗದ ಬಗ್ಗೆ ಔಷಧಿಯ ಬಗ್ಗೆ ಎಚ್ಚರಿಕೆ ನೀಡುತ್ತಿದ್ದರು. ಮಹೋನ್ನತ ದೃಶ್ಯವನ್ನು ಕಾಣುವಂತೆ ಆಧುನಿಕತೆಯ ತಂತ್ರವನ್ನು ಪಾ.ವೆಂ. ಅಧ್ಯಯನದಿಮದ ಅರಿತಿದ್ದರು. ಜೊತೆಗೆ ಆಧುನಿಕ ನಾಗರಿಕತೆಯ ಪ್ರಸಕ್ತಮಾರ್ಗದಲ್ಲಿ ಮನುಷ್ಯನು ಸ್ವಲ್ಪಕಾಲ ಇನ್ನೂ ನಡೆದನಾದರೆ ನಿಶ್ಚಿತವಾಗಿಯೂ ನಷ್ಟವಾಗುವನೆಂದೂ ಜಡವಸ್ತು ವಿಜ್ಞಾನದ ಮಾಯೆಗೆ ಸಿಲುಕಿ ನೈಸರ್ಗಿಕ ನಿಯಮಗಳ ಉಲ್ಲಂಘನೆಯಿಂದ ಬರುವ ದುಷ್ಫಲವನ್ನು ಲೆಕ್ಕಿಸದೆ ಮುಂದುವರೆಯುತ್ತಿದ್ದರೆ ಮನುಷ್ಯನಿಗೆ ಸತ್ಫಲ ದೊರೆಯಲು ಸಾಧ್ಯವಿಲ್ಲ ಎನ್ನುವ ಎಚ್ಚರಿಕೆಯನ್ನು ಪಾ.ವೆಂ. ಸಾಮಾನ್ಯ ವಿಜ್ಞಾನ, ಖಗೋಳಜ್ಞಾನ, ಭೂ ಭೌತಿಕ ವಿಜ್ಞಾನ, ಸಸ್ಯಲೋಕ, ಪ್ರಾಣಿಲೋಕ, ವೈದ್ಯಕೀಯ, ಮನೋವಿಜ್ಞಾನ, ಅನ್ವಯಿಕ ವಿಜ್ಞಾನ ಈ ಎಲ್ಲ ವಿಜ್ಞಾನ ಕ್ಷೇತ್ರಗಳ ವಿಭಾಗದ ಲೇಖನಗಳನ್ನು ಬರೆಯುವಾಗ ಪಾ.ವೆಂ. ಉದ್ದೇಶವು ಇದೇ ಆಗಿತ್ತು. ವಿಶ್ವಕ್ಕೂ ಮಾನವನಿಗೂ ಇರುವ ಸಂಬಂಧದಲ್ಲಿ ವ್ಯತಿರಿಕ್ತ ಬರಬಾರದೆಂದೂ,

ನಾಗರೀಕತೆಯ ಸೌಂಧರ್ಯ ಚ್ಯುತವಾಗಕೂಡದೆಂದು, ಭೌತ ವಿಶ್ವದ ಸೌಂಧರ್ಯ ಕಲುಷಿತವಾಗಬಾರದು ಎನ್ನುವ ಜಾಗೃತಿಯಿಂದಲೇ ಪಾ.ವೆಂ. ಇಂತಹ ಲೇಖನವನ್ನು ಓದುಗರಿಗೆ ಮನದಟ್ಟು ಮಾಡುತ್ತಿದ್ದರು. ವಿಶ್ವದ ಎಲ್ಲ ದೇಶಗಳ ಸಮಸ್ಯೆಯು ಇಂದು ಸಾಮಾನ್ಯತರವಾಗಿ ಒಂದೇ ಆಗಿರುವುದರಿಂದ ನಿರ್ಜೀವ ಯಂತ್ರದ ಪ್ರಭುತ್ವಕ್ಕೆ ಗುಲಾಮನಾಗದೆ ವ್ಯಕ್ತಿಯ ಅಧ್ಯಾತ್ಮಿಕ ಬೆಂಬಲಕೋರಿ ನ್ಯೂಟನ್, ಐನ್‌ಸ್ಟೀನ್‌ರ ಸ್ಫೂರ್ತಿಗೆ ಮೂಲವಾದ ಆತ್ಮದ ಕಡೆಗೆ ದೈಹಿಕ ಮಾನಸಿಕ ಪ್ರಕ್ರಿಯೆಗಳ ಕಡೆಗೆ ಆಕರ್ಷಿತನಾಗಬೇಕು ಎಂಬುದು ಸಂಪಾದಕರಾದ ಪಾವೆಂ. ಅವರ ನಿಲುವು.

೧೩. ಜಾತಿ, ಮತ, ಧರ್ಮ, ನಂಬಿಕೆ ಸಂಪ್ರದಾಯಗಳ ಕುರಿತು ಪರಿಚಯ ಮತ್ತು ವಿವೇಚನೆ ಚಿಂತನಶೀಲ ವಾಚಕ ವೃಂದಕ್ಕೆ ಪಾ.ವೆಂ. ಅವರ ಪಾಂಡಿತ್ಯ ಪೂರ್ಣ ಬರಹಗಳು ಅನಿವಾರ್ಯವೆನಿಸಿದೆ. ಇಲ್ಲಿ ಶಾಸ್ತ್ರ ಸಿದ್ಧಾಂತಕ್ಕಿಂತಲೂ ಸನಾತನ ವೈಚಾರಿಕ ದೃಷ್ಟಿಯ ತಳಸ್ಪರ್ಶಿಯಾದ ಅಧ್ಯಯನ ಮಾಡಿದ್ದಾರೆ. ಈ ವರೆಗೆ ನಾವು ಕಂಡಿರದ ಸತ್ಯ ಸೃಷ್ಟಿಯನ್ನು ಅರ್ಥೈಸುವ ಪ್ರಯತ್ನ ಇಲ್ಲಿದೆ. ರಾಜಕೀಯದ ಅನುಕೂಲ ಸಿಂಧೂ ಎನಿಸುವ **ಜಾತಿ ಪದ್ಧತಿ**, ಹರಿಜನರ ಅನಿಷ್ಟ ಸಮಸ್ಯೆಗಳು, ಬ್ರಾಹ್ಮಣರ ಒಳಜಂಬ, ದಲಿತರ ಆರ್ಭಟವೇ ಇರಲಿ ಅವುಗಳಿಗೆ ಪಾ.ವೆಂ. ನೀಡುವ ವಿಶ್ಲೇಷಣೆಯನ್ನು ಓದಿದಾಗ ಸತ್ಯದ ಸ್ವರೂಪ ದರ್ಶನವಾಗುತ್ತದೆ. ಒಬ್ಬ ವ್ಯಕ್ತಿಯನ್ನು ನೋಯಿಸದೆ, ಆಕ್ಷೇಪಣೆಗೆ ಒಡ್ಡದೆ ದೋಷವನ್ನು ಎತ್ತಿತೋರಿಸುವ ರೀತಿ ಮೆಚ್ಚುವಂತಿದೆ. ಉದಾಹರಣೆಗೆ ಅನಂತಮೂರ್ತಿಯವರು ೧೯೭೧ರಲ್ಲಿ 'ಪ್ರಜ್ಞೆ ಮತ್ತು ಪರಿಸರ' ವಿಚಾರ ಪ್ರಬಂಧಗಳನ್ನು ಪ್ರಕಟಿಸಿ ಶೂದ್ರ ಪ್ರಜ್ಞೆ ಮತ್ತು ಬ್ರಾಹ್ಮಣ ಪ್ರಜ್ಞೆ ಪರಿಕಲ್ಪನೆಗಳನ್ನು ಸಾಹಿತ್ಯ ಚರ್ಚೆಗೆ ಒಡ್ಡಿದರು. ಈ ಚರ್ಚೆಗೆ ಕಸ್ತೂರಿ ಡೈಜಸ್ಟನ್ನು ವೇದಿಕೆಯಾಗಿ ಬಳಸಿಕೊಂಡರು.

ಉದಾಹರಣೆ (೨) ೧೯೭೨ರಲ್ಲಿ ಮೇ ವಸಂತ ಸಂಚಿಕೆಯಲ್ಲಿ ಕೆ. ಪೂರ್ಣಚಂದ್ರ ತೇಜಸ್ವಿಯವರು ಆಧುನಿಕ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಒಲವುಗಳ ಬಗ್ಗೆ ಕೆಲ ಪ್ರಚೋದಕರ ಅಭಿಪ್ರಾಯಗಳನ್ನು ಪ್ರಕಟಿಸಿದ್ದರು. 'ಮಣ್ಣಿನ ವಾಸನೆ ಸಮಕಾಲಿನ ಪ್ರಜ್ಞೆ' ಎಂಬ ಪರಿಕಲ್ಪನೆಗಳನ್ನು ಸಾಹಿತ್ಯ ಚರ್ಚೆಗೆ ಒಡ್ಡಿ ಹೆಸರಾಂತ ಸಾಹಿತಿಗಳಾದ ಯು. ಆರ್. ಅನಂತಮೂರ್ತಿ ಚಂದ್ರಶೇಖರ ಪಾಟೀಲ್, ದೇಶಪಾಂಡೆ ಸುಬ್ಬರಾಯ ವ್ಯಕ್ತಿಪಡಿಸಿದ ಪ್ರತಿಕ್ರಿಯೆಗಳನ್ನು ಓದುಗರ ಗಮನಕ್ಕೆ ತರುತ್ತಾರೆ.

೧೯೭೨ರಲ್ಲಿ ಮಿಂಚಿನ ಬಳ್ಳಿಯ ಗ್ರಂಥ ಮಾಲೆಯಿಂದ ಬಂದ **ಮಂಜೂಷ** ಪುಸ್ತಕದಲ್ಲಿಯ ಹನ್ನೆರಡು ಪ್ರಬಂಧಗಳು ಕಸ್ತೂರಿಯ ಬಿಡಿ ಬಿಡಿ ಲೇಖನದ ಸಂಗ್ರಹವಾಗಿದೆ. 'ಬುದ್ಧಿಜೀವಿ-ಸಮಾಜ' ಮತ್ತು ಸಾಹಿತ್ಯ, ಜಾತಿಪದ್ಧತಿ ಒಂದು ಐತಿಹಾಸಿಕ ವಿಶ್ಲೇಷಣೆ. ಹರಿಜನ ಸಮಸ್ಯೆಯ ಅನಿಷ್ಟ ಲಕ್ಷಣಗಳು ಪಾ.ವೆಂ. ವರು ಈ ಪ್ರಬಂಧಗಳು ಸ್ವತಂತ್ರ್ಯ ನಿರ್ಭಿತ ನಿಷ್ಪಕ್ಷಪಾತ ವಿಚಾರ ಧೋರಣೆಯ ಪ್ರತಿಫಲವಾಗಿದೆ. 'ಬ್ರಾಹ್ಮಣರೇನು ಮಾಡಬೇಕು' ಎನ್ನುವ ಲೇಖನ ಸಮಕಾಲೀನ ಸಮಾಜದ ಸಂಚಲನಗಳ ಕುರಿತು ಪಾ.ವೆಂ. ಅವರಿಗಿರುವ

ಸಮಧಾನಕರ ಕಳಕಳಿ, ಕಾಳಜಿಗಳ ಮುಕ್ತ ವಿವೇಚನೆಯಾಗಿದೆ. ಇಲ್ಲಿಯ ವಿಚಾರ ವಸ್ತುಗಳಲ್ಲಿ ಧರ್ಮ, ಮತ ಮತ್ತು ಜಾತಿ ವ್ಯವಸ್ಥೆಯ ಪರಿಣಾಮಗಳ ಬಗ್ಗೆ ಐತಿಹಾಸಿಕ ಹಿನ್ನಲೆಯಿಂದ ವಿಶ್ಲೇಷಿಸುವ ಪ್ರಯತ್ನವಿದೆ. ವರ್ಣ, ವರ್ಗ, ಜಾತಿ, ಮತ, ಪಂಥ ಇವುಗಳ ಹುಟ್ಟು, ವಿಕಾಸ ಮತ್ತು ರಾಜಕೀಯ ಸಂಬಂಧಗಳಿಂದಾಗಿ ಕಾಲಕಾಲಕ್ಕೆ ಉಂಟಾಗುವ ಪರಿಸ್ಥಿತಿಯ ಸಮಾಲೋಚನೆಯನ್ನು ಪಾ.ವೆಂ. ಓದುಗರ ಮನಸೆಳೆಯುವಂತೆ ನಿರ್ವಹಿಸುತ್ತಾರೆ.

೧೪. ಸಾಹಿತಿ ಮತ್ತು ಸಾಹಿತ್ಯ ಕೃತಿಗಳ ಅವಲೋಕನ ಹಾಗೂ ಕೃತಿಸಂಗ್ರಹ ಕಸ್ತೂರಿ ಪತ್ರಿಕೆಯ ಪುಸ್ತಕ ವಿಭಾಗದಲ್ಲಿ ನೀಳ್ಗತೆ, ಕಾದಂಬರಿಗಳ ಸಂಗ್ರಹರೂಪ ಪ್ರಕಟಗೊಳ್ಳುತ್ತಿತ್ತು. ಮೂವತ್ತೈದು ಪುಟಕ್ಕೆ ಕತೆ, ಕಾದಂಬರಿ ಸಂಕ್ಷಿಪ್ತಗೊಳ್ಳುತ್ತಿತ್ತು. ಇದು ಫ್ರೆಂಚ್, ಇಂಗ್ಲೀಷ್, ತಮಿಳು, ಬಂಗಾಳಿ, ಮಲೆಯಾಳಿ, ಮರಾಠಿ ಕತೆ ಕಾದಂಬರಿಯ ಸಂಕ್ಷಿಪ್ತ ಸಂಗ್ರಹವಾಗಿರುತ್ತಿತ್ತು. ಕನ್ನಡದ ಕತೆ ಕಾದಂಬರಿ, ಸಂಸ್ಕೃತ ಕಾದಂಬರಿಯು ಇರುತ್ತಿತ್ತು. ವೈವಿಧ್ಯಮಯವಾದ ರೋಮಾಂಚಕ ಸಾಮಾಜಿಕ, ರಾಜಕೀಯ ಕತೆಗಳು ಕೂಡ ಇಲ್ಲಿ ಪ್ರಕಟವಾಗುತ್ತಿತ್ತು. ಉದಾಹರಣೆಗೆ ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿ ಮೇಲ್ನೋಟಕ್ಕೆ ಒಬ್ಬ ಸಾಂಪ್ರದಾಯಿಕ ಬ್ರಾಹ್ಮಣನ ಅಥವಾ ಬ್ರಾಹ್ಮಣಿಕೆಯ ಪೊಳ್ಳುತನವನ್ನು ತೋರಿಸುವ ವಾಸ್ತವವಾದಿ ಕಾದಂಬರಿಯಾಗಿ ಕಾಣುತ್ತದೆ ಆದರೆ ಕಾದಂಬರಿಯ ಶೈಲಿ ಕಥನ ತಂತ್ರ ಒಟ್ಟಿನಲ್ಲಿ ಕಲಾತ್ಮಕ ಮೌಲ್ಯಗಳನ್ನು ಅನ್ವಯಿಸಿ ಓದಿದಾಗ ಸಂಸ್ಕಾರ ಶಬ್ದದ ಅರ್ಥವಿಸ್ತಾರ ಸಾಧ್ಯವಾದುದು ಅರಿವಿಗೆ ಬರುತ್ತದೆ. ಪಾ.ವೆಂ. ಇದನ್ನು ೧೯೬೯ರ **ಕಸ್ತೂರಿ** ಸಂಚಿಕೆಯಲ್ಲಿ ಸಂಕ್ಷಿಪ್ತಗೊಳಿಸಿ ಬರೆದಿದ್ದಾರೆ.

೧೯೭೦ರಲ್ಲಿ ಸಂಸ್ಕಾರ ಚಲನಚಿತ್ರವಾದಾಗ ಕರ್ನಾಟಕದ ಸಾಂಪ್ರದಾಯಿಕ ಸಮುದಾಯ ಅದನ್ನು ನಿಷೇಧಿಸಲು ಮುಂದಾಯಿತು. ಆಗ ಕಾದಂಬರಿ ಮತ್ತು ಸಿನಿಮಾ ಇದನ್ನು ಸಮರ್ಥಿಸಿ ಅವು ಬ್ರಾಹ್ಮಣ್ಯದ ವಿರುದ್ಧ ಅಲ್ಲ ಎಂದು ವಾದಿಸಿ ಸಮರ್ಥ ವಿಚಾರವನ್ನು ವಾದಿಸಿದವರಲ್ಲಿ ಆಚಾರ್ಯರು ಮುಖ್ಯರಾಗಿದ್ದರು.

ಪುಸ್ತಕದ ಅಂಕಣದಲ್ಲಿ ೧೯೬೦-೬೫-೧೯೬೭ ವರ್ಷಗಳ ಡೋಂಜಭೋಡಿನಿಯ ಆತ್ಮ ವೃತ್ತಾಂತ, ಕಾಮೋಝು ಬಂಧುಗಳು, ನೆಪೋರಿಯನ್ ಮತ್ತು ಸೆಂಟ್ ಹೆತಿನಾ ರಂಗವಿಲಾಸದ ಹತ್ಯಾಕಾಂಡ, ಮದಾಂಬಾವರಿ ವುದರಿಂಗ್ ಹೈಟ್ಸ್‌ಜಿನ, ವಜ್ಡೇನ್ ಪಿಗ್ಮಿಗಳೊಡನೆ ಎಂಟುದಿನ, ಕಿಂಗ್ ಕಾಂಗ್‌ನ ಆತ್ಮಕತೆ, ಮಾವಿನ ತೋಪು, ಕಾಕಾಶ ಮಂಡಿಕಂಡ ಜಗತ್ತು ಮುಂತಾದ ಅಪರೂಪದ ಲೇಖನಗಳನ್ನು ಹಲವು ಬಾರಿ ಓದಿದರೂ ಮನದಣಿಯುವುದಿಲ್ಲ.

ಕಸ್ತೂರಿಯೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸ ಲೇಖಕರ ಹೊಸ ಪಡೆಯನ್ನೇ ಸೃಷ್ಟಿಸಿದೆ. ಮಹಾನ್ ಲೇಖಕರ, ಸಾಹಿತಿಗಳ ವ್ಯಕ್ತಿ ಕೃತಿಗಳ ಪರಿಚಯವನ್ನು **ಕಸ್ತೂರಿ** ಕನ್ನಡ ಜನತೆಗೆ ಒದಗಿಸಿದೆ. ಪ್ರಥಮ ಸಂಚಿಕೆಯ ಪುಸ್ತಕ ವಿಭಾಗಕ್ಕೆ ವಿ.ಸಿ.ಯವರ

ಪಂಪಾಯಾತ್ರೆಯನ್ನು ಸಂಗ್ರಹಿಸಿಕೊಟ್ಟ ಡಾ.ಶ್ರೀನಿವಾಸ ಹಾವನೂರರು, ಜಾಗತಿಕ ವಿಭಾಗಕ್ಕೆ ಮೇರುಕೃತಿಗಳನ್ನು **ಕಸ್ತೂರಿ**ಗೆ ಸಂಗ್ರಹರೂಪದಲ್ಲಿ ಒದಗಿಸಿದ ಪ್ರೊ. ಎಂ.ಎಂ. ಇನಾಮ್‌ದಾರ ಹಾಗೂ ಕಸ್ತೂರಿಗೆ ಅನೇಕ ಮೌಲಿಕ ಲೇಖನಗಳನ್ನು ಕೊಡುಗೆ ನೀಡಿದ ಕುಲಮರ್ವ ಬಾಲಕೃಷ್ಣ, ಸಂತೋಷಕುಮಾರ್ ಗುಲ್ವಾಡಿ, ಆರ್.ಬಿ.ಕುಲಕರ್ಣಿ, ಕೀರ್ತಿನಾಥ ಕುರ್ತಕೋಟಿ, ಜಯಸುದರ್ಶನ, ಎಂ.ಕೆ. ಇಂದಿರಾ, ಎಂ.ಕೆ. ಜಯಲಕ್ಷ್ಮೀ, ಕೃಷ್ಣಕೊಲ್ಲಾರ ಕುಲಕರ್ಣಿ, ಗೌರೀಶ ಕಾಯ್ಕಿಣಿ, ವೆಂ.ಮು.ಜೋಶಿ, ಬಳ್ಕೂರು ಸುಬ್ರಾಯ ಅಡಿಗ, ದ.ಬಾ.ಕುಲಕರ್ಣಿ, ದ.ಲಾ.ಕೆರೂರು, ಕೌಜಲಗಿ, ಹನುಮಂತರಾಯರು.

ಹೀಗೆ ಕನ್ನಡದಲ್ಲಿ ಹೊಸ ಬರಹಗಾರರೂ ಬೆಳಕಿಗೆ ಬಂದರು. ಅನುಭವ ಲೇಖಕ– ರಿಂದ ಕಥೆ ಅಥವಾ ಕಾದಂಬರಿಗಳನ್ನು ಸಂಕ್ಷಿಪ್ತ ರೂಪದಲ್ಲಿ ಪಾ.ವೆಂ. ಬರೆಸುತ್ತಿದ್ದರು. ಕೆಲವೊಮ್ಮೆ ತಾವೇ ಸ್ವತಃ ಅನುವಾದಿಸಿ ಸಂಗ್ರಹಿಸಿ ಬರೆಯುತ್ತಿದ್ದರು. ತಮ್ಮ ಹೆಸರಿನ ಬದಲು ಗುಪ್ತನಾಮಗಳಿಂದ ಬರೆಯುತ್ತಿದ್ದರು.

೧೫. ಓದುಗರಲ್ಲಿ ಸದಭಿರುಚಿಯ ಹವ್ಯಾಸಗಳ ಬೆಳವಣಿಗೆಗಾಗಿ ರಂಜನೆಯ ಜೊತೆಗೆ ಜಾಗೃತಿಯನ್ನು ಉಂಟುಮಾಡುವ ಹಾಸ್ಯಲೇಖನ, ವಿಡಂಬನೆ, ವ್ಯಂಗ್ಯಚಿತ್ರ (cartoon)ಗಳ ಪ್ರಕಟಣೆ ಹೀಗೆ ಕಸ್ತೂರಿಯ ತಿಂಗಳ ತಿರುಳು ಓದುಗನ ಪಾಲಿಗೆ ಪರಿಮಳದ ಅನುಭವ ಕೊಡುವ ಸಂಚಿಕೆಯಾಗಿ ರೂಪಿಸುವ ಕಲಾತ್ಮಕತೆ ಯುಕ್ತಿಗಳಿಂದ ರುಚಿಗೊಂಡು ಒಬ್ಬ ಓದುಗನನ್ನು, ಒಬ್ಬ ಪ್ರಜ್ಞಾವಂತ ಕ್ರೀಯಾಶೀಲ ನಾಗರೀಕರನ್ನಾಗಿ ರೂಪಿಸುವ ಕೃತಿ ಪ್ರತಿ ಸಂಚಿಕೆಯಾಗಿರಬೇಕೆಂಬುದು ಪಿ.ವಿ. ಆಚಾರ್ಯರ ಗುರಿ–ಯಾಗಿತ್ತು. ಅದಕ್ಕಾಗಿ ಅವರು ವಹಿಸಿದ ಕಾಳಜಿ ಅನನ್ಯವಾದುದು.

ಹರಟೆ ಮತ್ತು ವಿನೋದ ವಿಭಾಗ: ಲಾಂಗೂಲಾಚಾರ್ಯರೆಂದು ಓದುಗರ ವೃಂದಕ್ಕೆ ಗೋಚರಿಸಿಕೊಂಡ ಪಾ.ವೆಂ. ಅವರ ಬರಹದ ಅಧಿಕ ಮೊತ್ತ ಹರಟೆ ಮತ್ತು ವಿನೋದ ವಿಭಾಗಕ್ಕೆ ಸಲ್ಲುತ್ತದೆ. ಇಲ್ಲಿ ಕಾಣಬರುವ ಲೇಖನಗಳಿಗೆ ಮನರಂಜನೆಯ ಮೌಲ್ಯವಿದೆ. ಕಸ್ತೂರಿ ಸುರಿಸುವ ಜ್ಞಾನವಾಹಿನಿ ಮನರಂಜನೆಯ ಮೂಲಕ ತಾನೇ ಹಾಸ್ಯ ವಿಡಂಬನೆ ನೋವಾಗದ ಹಾಗೆ ಚುಚ್ಚುವ ತಂತ್ರಗಾರಿಕೆ ಈ ಲೇಖನಗಳಾಗಿರುತ್ತದೆ. ಉದಾಹರಣೆಗೆ ಸಂಚಿಕೆ ೫೦ರಲ್ಲಿ ಇಳಂತೋಡಿ ರಾಮಕೃಷ್ಣ ಭಟ್ ಬರೆದ ಒಂದು ಹಸಿಹರಟೆ 'ನಿದ್ರಾಭಂಗಿಗಳು' ಇದಕ್ಕೆ ಸಂಪಾದಕರು ಎಂಟು ಅಡಿ ಟಿಪ್ಪಣೆಗಳನ್ನು ಹಾಕಿ ಲೇಖಕರ ಹಾಸ್ಯ ಪ್ರಜ್ಞೆಗೆ ಜುಗಲ್–ಬಂದಿ ಬಾರಿಸುತ್ತಾರೆ. ಇದರಿಂದ ಲೇಖಕನ ಹಾಸ್ಯ ಪೂರ್ಣವಾಗಿದೆ. ಇದು ಹರಟೆ ಹೊಡೆಯುವವನ ಜೊತೆ ಅಡ್ಡ ಹರಟೆ ಹೊಡೆದಂತಿದೆ. ಓದುಗನಿಗೆ ಡಬಲ್ ಮನರಂಜನೆ ನೀಡುತ್ತದೆ.

ಪಾ.ವೆಂ. ಶುದ್ಧ ಕನ್ನಡದಲ್ಲಿ ಬರೆಯುತ್ತಾ ನವಿರಾದ ಹಾಸ್ಯಗಳನ್ನು ಲೇಪಿಸುತ್ತಾ ಬರೆದ ಬರವಣಿಗೆ ವಾಚಕರ ಹೃದಯ ಮುಟ್ಟಿದೆ. ಪಾ.ವೆಂ. ಹರಟೆ ಲೊಕದಲ್ಲಿ ಮುಟ್ಟದ ವಿಷಯವಿಲ್ಲ. ಕನ್ನಡದ ಖ್ಯಾತ ಹರಟೆಗಾರರಾದ ಬಿ.ಜಿಯಲ್ ಸ್ವಾಮಿ ಸಸ್ಯ ಶಾಸ್ತ್ರಜ್ಞ ಕನ್ನಡದ ಹಾಸ್ಯ ಸಾಹಿತ್ಯವನ್ನು ಬೇರೊಂದು ದಿಕ್ಕಿನಲ್ಲಿ ಕರೆದೊಯ್ದರು. ಆದರೆ

ಪಾ.ವೆಂ. ಅವರು ಹಿರಿಯ, ಕಿರಿಯ ಹಾಸ್ಯ ಸಾಹಿತಿಗಳಿಗೆ ಕಸ್ತೂರಿಯ ಬರವಣಿಗೆಗೆ ಆಹ್ವಾನವಿತ್ತು. ಹಾಸ್ಯ ಲೇಖನಗಳನ್ನು ಬರೆಸುತ್ತಿದ್ದರು. ನೈಸರ್ಗಿಕವಾದ ನಗೆಯನ್ನು ಸಾವಿರಾರು ಜನರ ಮೊಗದಲ್ಲಿ, ಮನದಲ್ಲಿ ಅರಳಿಸುತ್ತಿದ್ದರು.

ವ್ಯಂಗ್ಯಚಿತ್ರಗಳು: ಹಾಸ್ಯ ಸಾಹಿತ್ಯದ ಅವಿಭಾಜ್ಯ ಅಂಗ ಈ ವ್ಯಂಗ್ಯಚಿತ್ರಗಳು, ಚುಟುಕುಗಳು, ಕವನಗಳು, ವ್ಯಂಗ್ಯೋಕ್ತಿ, ಅಣಕವಾಡು ಎಲ್ಲ ರೀತಿಯ ಹಾಸ್ಯಗಳನ್ನು ಕಸ್ತೂರಿಯ ಮಧ್ಯ-ಮಧ್ಯ ಪುಟಗಳ ಕೊನೆಯಲ್ಲಿ ಪುಟಗಳ ಎಡ ಅಥವಾ ಬಲ ಬದಿಯಲ್ಲಿ ಕಾಣುತ್ತೇವೆ. ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಜಾನಪದ ಭಾಷೆಗಳಲ್ಲಿ ಜನರ ಸಂಸ್ಕೃತಿಯ ಮನೋಧರ್ಮಕ್ಕೆ ವಿಶಿಷ್ಟವಾದ ಹಾಸ್ಯ ವಿನೋಧಗಳ ಸನ್ನಿವೇಶಗಳನ್ನು ಕಸ್ತೂರಿಯಲ್ಲಿ ಕಾಣುತ್ತೇವೆ.

ಬರಹದ ನಡುವಿನ ಕೊನೆಯ ಲೇಖನ: ಪುಟದ ನಡುವಿನ ಭಾಗದಲ್ಲಿ ಪ್ರಧಾನ ಲೇಖನದ ಕೆಳಗೆ ಲೇಖನಗಳಿಗೆ ಸಂಬಂಧಿಸಿದ ಅಣಿಮುತ್ತುಗಳು, ಸುಭಾಷಿತಗಳು, ನೀತಿಕತೆಗಳು, ಕವಿವಾಣಿ ರಾಜಕೀಯ ಘಟನೆಗಳು, ಹಾಸ್ಯ ವಿಡಂಬನಾ ಕತೆ, ಸಣ್ಣಪುಟ್ಟ ಸಂವಾದಗಳು ಒಟ್ಟಿನಲ್ಲಿ ಆಕರ್ಷಕವಾದ ಸರಳ ಭಾಷೆಯಲ್ಲಿ ಅಸಾಮಾನ್ಯ ಸ್ವರೂಪವನ್ನು ತಿಳಿಸುವ ಬರಹಗಳು ದಾರ್ಶನಿಕರು, ತತ್ತ್ವಜ್ಞಾನಿಗಳ ಮಹಾತ್ಮರ ವಿಚಾರವಾಣಿಯೂ ಆಗಿರುತ್ತಿತ್ತು. ಈ ಎಲ್ಲ ಸ್ವರೂಪಗಳು ಸಂಪಾದಕನ ಬರಹದ ಸಂಗ್ರಹದ ಕೌಶಲವನ್ನು ವ್ಯಕ್ತಪಡಿಸುತ್ತದೆ.

ಭಾರತದಲ್ಲಿ ಬಡತನದ ಮುಖ ಎನ್ನುವ ರಾಜಕೀಯ ಲೇಖನದ ಕೊನೆಯ ಭಾಗದಲ್ಲಿ ಬರುವ ಬಡತನದ ಬಗೆಗಿನ ಅಣಿಮುತ್ತುಗಳ, ಕವಿವಾಣಿಯನ್ನು ಉದಾಹರಣೆಯಾಗಿ ನೊಡಬಹುದು.

ಮನುಷ್ಯ ಬಡತನದಿಂದಿರುವುದು ಅಸಾಮಾನ್ಯವೇನಲ್ಲ; ಆದರೆ ಅದು ಅವನಿಗೆ ಭಾರಿ ಅನಾನುಕೂಲವೆಂಬುದು ಮಾತ್ರ ನಿಜ. –ರೆ. ಸಿಡ್ನೆ ಸ್ಮಿತ್

"ಉತ್ಪಾದ್ಯಂತೆ ವಿಲೀಯಂತೆ ದರಿದ್ರಾಣಾಂ ಮನೋರಥಾಃ"–ಸಂಸ್ಕೃತ ಸುಭಾಷಿತ

ಬಡವರ ಮನೋರಥಗಳು ಹುಟ್ಟು ಹುಟ್ಟುತ್ತಲೇ ಸತ್ತು ಹೋಗುತ್ತವೆ. (ಕ.ಜೂ.೧೯೭೨)

೧೬. ಓದುಗರ ಭಾಷಾವೃದ್ಧಿ ಮತ್ತು ಸಾಮಾನ್ಯಜ್ಞಾನ ವೃದ್ಧಿಗಾಗಿ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಪದಾರ್ಥ ಚಿಂತಾಮಣಿ ಎಂಬ ಅಂಕಣಗಳ ರಚನೆಗೆ ಇಂಗ್ಲಿಷ್‌ನ Readers Digestನ ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಆಚಾರ್ಯರು ಕಸ್ತೂರಿಯ ಹೊಳಪನ್ನು ಹಾಕಿದ್ದರು. ಯಾವ ಸಂಚಿಕೆಯು ನಕಲು ಎನಿಸಿದಂತೆ ರೂಪಿಸಿದರೆಂಬುದು ಅವರ ಶ್ರಮ ಸಾಧನೆಯ ಹಿರಿಮೆ. ಕಸ್ತೂರಿಯು ಕನ್ನಡದ ವಾಸನೆ, ಕನ್ನಡಿಗರ ಉಸಿರು, ಕರ್ನಾಟಕದ ಮಣ್ಣಿನಲ್ಲಿ ಬೆಳೆದ ಪದಾರ್ಥ ಎಂಬುದನ್ನು ಆಚಾರ್ಯರು ಓದುಗರ ಗಮನಕ್ಕೆ ಬರುವಂತೆ ಎಚ್ಚರವಹಿಸಿದರು. ಕಸ್ತೂರಿಯನ್ನು ಅನನ್ಯ ಸಂಚಿಕೆಯನ್ನಾಗಿ ರೂಪಿಸುತ್ತಾ ಅದು ಕ್ರಮವಾಗಿ ಬೆಳೆಯಲಿ ಪಿ.ವಿ. ಆಚಾರ್ಯರು ಕೈಗೊಂಡ ಕ್ರಮಗಳು ಗಮನಿಸತಕ್ಕ ಅಂಶಗಳಾಗಿವೆ.

೩ಖ. ಕಸ್ತೂರಿಯ ಸಂಚಿಕೆಯನ್ನು ರೂಪಿಸಲು ಪಾ.ವೆಂ. ಅನುಸರಿಸಿದ ಕ್ರಮಗಳು:

೧. **ಮುದ್ರಣ ವಿನ್ಯಾಸ:** ಅಕ್ಷರ ದೋಷಗಳಲ್ಲದೆ ಮುದ್ರಿಸಿರುವುದು ಕಸ್ತೂರಿಯ ಪ್ರಮುಖ ಲಕ್ಷಣ ಇದಕ್ಕೆ ಪಾ.ವೆಂ. ಅವರ ಪಾಂಡಿತ್ಯದ ಲೇಪನ, ಕಸ್ತೂರಿ ಸಂಪಾದಕನಾಗಿ ಭರಿಸಿದ ಜವಾಬ್ದಾರಿಯನ್ನು ಇಲ್ಲಿ ನಾವು ಗಮನಿಸಬಹುದು. ಅಕ್ಷರ, ಶಬ್ದ ಅಥವಾ ಯಾವುದೇ ವಿಷಯ ದೋಷಗಳಿದ್ದರು ಮರುಸಂಚಿಕೆಯಲ್ಲಿ ವಿನಯದಿಂದ ಓದಗರಲ್ಲಿ ಕ್ಷಮೆಯಾಚಿಸಿ ತಪ್ಪನ್ನು ಸರಿಪಡಿಸುತ್ತಿದ್ದರು. 'ಸಹಚಿಂತನ' ವಿಭಾಗದಲ್ಲಿ ನಾವು ಇದನ್ನು ಗುರುತಿಸುತ್ತೇವೆ. 'ಪ್ರತಿ ತಿಂಗಳ' **ಕಸ್ತೂರಿ** ಆಯಾ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುತ್ತಿತ್ತು. ಸಂಚಿಕೆಯ ಪುಟ ಪುಟಗಳಲ್ಲಿ ವಿಷಯಕ್ಕೆ ತಕ್ಕಂತೆ 'ಸಶಕ್ತವಾದ ಶೀರ್ಷಿಕೆ' ಉಪ ಶೀರ್ಷಿಕೆ, ವಿಷಯಕ್ಕೆ ತಕ್ಕಂತೆ ರೇಖಾಚಿತ್ರಗಳು, ಛಾಯಾಚಿತ್ರಗಳು ಸಂದರ್ಭ, ಔಚಿತ್ಯಕ್ಕೆ ತಕ್ಕಂತೆ ಮುದ್ರಿಸಿ ಕಸ್ತೂರಿಯ ಸೌಂಧರ್ಯವನ್ನು ಮೆರೆದಿದ್ದಾರೆ. ಅಷ್ಟೇ ಅಲ್ಲದೆ ವಿಶೇಷ ರೀತಿಯ ಮುಖಪುಟಗಳ ವಿನ್ಯಾಸ, ಹೊರಗಿನ ಚಿತ್ರ ಮತ್ತು ಒಳಗಿನ ವಿಷಯಗಳಿಗೆ ಯಾವುದೋ ರೀತಿಯ ಆಂತರಿಕ ಸಂಬಂಧದಂತೆ ಕಸ್ತೂರಿಯ ಮುಖಪುಟ ಸಿದ್ಧಗೊಳ್ಳುತ್ತಿತ್ತು.

ಬರಹದ ನಡುವಿನ ಲೇಖನಗಳು: ಪುಟದ ನಡುವಿನ ಭಾಗದಲ್ಲಿ ಪ್ರಧಾನ ಲೇಖನದ ಕೆಳಗೆ ಲೇಖನಗಳಿಗೆ ಸಂಬಂಧಿಸಿದ ಅಣಿಮುತ್ತುಗಳು ಸುಭಾಷಿತಗಳು, ನೀತಿಕತೆಗಳು, ಕವಿವಾಣಿ, ರಾಜಕೀಯ ಘಟನೆಗಳು, ಹಾಸ್ಯ ವಿಡಂಬನಾ ಕಥೆ, ಸಣ್ಣ ಪುಟ್ಟ ಸಂವಾದಗಳು ಒಟ್ಟಿನಲ್ಲಿ ಆಕರ್ಷಕವಾದ ಲಘುವಾದ ಭಾಷೆಯಲ್ಲಿ ಅಸಾಮಾನ್ಯ ಸ್ವರೂಪವನ್ನು ತಿಳಿಸುವ ಬರಹಗಳು ದಾರ್ಶನಿಕರ, ತತ್ವಜ್ಞಾನಿಗಳ ಮಹಾತ್ಮರ ವಿಚಾರವಾಣಿಯು ಆಗಿರುತ್ತಿತ್ತು. ಈ ಎಲ್ಲ ಸ್ವರೂಪಗಳು ಸಂಪಾದಕನ ಬರಹದ ಸಂಗ್ರಹದ ಕೌಶಲ್ಯವನ್ನು ವ್ಯಕ್ತಪಡಿಸುತ್ತದೆ.

೨. ಸಂಪಾದಕನಾದುದರಿಂದ ವಿವಿಧ ವಿಷಯಗಳನ್ನು ಬರೆದು ಪ್ರಕಟಿಸುವ ಸಂದರ್ಭವಿದ್ದಾಗ ಗುಪ್ತನಾಮಗಳಿಂದ (pseudonym) ಲೇಖನಗಳನ್ನು ಬರೆದು ಪತ್ರಿಕೆಯ ಗುಣಧರ್ಮವನ್ನು ಕಾಪಾಡಿದ್ದಾರೆ.

೩. ವರ್ಷಕ್ಕೊಮ್ಮೆ ವಿಶೇಷ ಸಂಚಿಕೆ ರೂಪಿಸಿ ಡೈಜೆಸ್ಟ್‌ನ ಸ್ವರೂಪವನ್ನು ಮೀರಿ ಹೊಸತನವನ್ನು ಮೆರೆದಿದ್ದಾರೆ. ಉದಾಹರಣೆಗಾಗಿ ೧೦೦ನೇ ಸಂಚಿಕೆ, ವಸಂತ ಸಂಚಿಕೆಗಳು, ಕಿರಿಯರಿಗಾಗಿ **ಕಸ್ತೂರಿ** ಹೀಗೆ ಹೆಚ್ಚಿನ ಪುಟಗಳ ಸೇರ್ಪಡೆ **ಕಸ್ತೂರಿ**ಯಲ್ಲಿ ಆಗುತ್ತಿತ್ತು. ಇದರ ಉದ್ದೇಶ ಏಕತಾನತೆಯನ್ನು ಅಥವಾ ಯಾಂತ್ರಿಕತೆಯನ್ನು ನಿವಾರಿಸುವುದು ಓದುಗರು ಕಸ್ತೂರಿಯಲ್ಲಿ ಪಾಲ್ಗೊಳ್ಳುವಂತೆ 'ಇದುವೆ ಜೀವ ಇದು ಜೀವನ' ಎಂಬ ಎರಡು ಸ್ವಾನುಭವದ ನಿವೇದನೆಯ ಅವಕಾಶವನ್ನು ಕಲ್ಪಿಸಿದರು. 'ನಗೆ ಮಲ್ಲಿಗೆ' ಸ್ಥಿರ ಶೀರ್ಷಿಕೆಯಲ್ಲಿ ವಿನೋದವಾದ ಸಣ್ಣ ಘಟನೆಗಳು ನಗೆ ಚಟಾಕಿಗಳು ಜನರ ಮನೋಧರ್ಮಕ್ಕೆ ವಿಶಿಷ್ಟವಾದ ನಗೆ ಸನ್ನಿವೇಶಗಳನ್ನು ಇಲ್ಲಿ ಕಾಣುತ್ತೇವೆ. 'ಸಹಚಿಂತನ'ದ ಕಾಲಂನ್ನು ಓದುಗರಿಂದ ಬರುವ ಪ್ರತಿಕ್ರಿಯೆಗಳಿಗೆ ಮೀಸಲಿಟ್ಟಿದ್ದರು. ಓದುಗರಿಗೆ ಮುಕ್ತ

ವೇದಿಕೆಯಾಗಿತ್ತು. ಕಸ್ತೂರಿಯ ಸಹಚಿಂತನ ವಿಭಾಗ ವಿಷಯ, ವೈಶಿಷ್ಟ್ಯದಿಂದ ಕೂಡಿದ್ದು ಉಳಿದ ಸಂಚಿಕೆಗಳಂತೆ ವ್ಯಾಪಾರಿ ಉದ್ದೇಶವಲ್ಲ. ಇಲ್ಲಿ ಓದುಗರ ಪ್ರಶ್ನೆಗಳಿಗೆ ಸಾವಕಾಶವಾಗಿ ಉತ್ತರಿಸುತ್ತಾರೆ. ಮುಂದಿನ ಲೇಖನಗಳಿಗೆ ಬರೆದ ಮುನ್ನುಡಿ, ಎಚ್ಚರಿಕೆಯ ವಿವೇಕದ ಮಾತುಗಳಾಗಿರುತ್ತದೆ. ಕಸ್ತೂರಿಯ ತಪ್ಪು ಒಪ್ಪುಗಳೂ ಕೂಡ ಮುಂದಿನ ಬೆಳವಣಿಗೆಗೆ ಪೂರಕವಾದಂತಿತ್ತು. ಸಹಸಂಪಾದಕರೂ ಕೂಡ ತಪ್ಪುಗಳಿದ್ದರೆ ವಿಷಾದಿಸಿ ಸರಿಯಾದ ಅಂಶಗಳನ್ನು ಸ್ಪಷ್ಟೀಕರಿಸಿ ಅನೇಕ ಉದಾಹರಣೆಗಳಿವೆ.

೪. ಕನ್ನಡ ಸಾಹಿತ್ಯದ ಸಮಕಾಲೀನ ಪ್ರವೃತ್ತಿಗಳಿಗೆ ಮುಖ್ಯವಾಗಿ (ನಮ್ಮ ಸಾಹಿತ್ಯ ಪ್ರವೃತ್ತಿಗೆ) ಸ್ಪಂದಿಸುವುದಕ್ಕಾಗಿ ಪ್ರಮುಖ ಲೇಖಕರ ಕತೆ, ಕಾವ್ಯ, ಕಾದಂಬರಿ (ಸಂಗ್ರಹ) ವಿಮರ್ಶಾ ಲೇಖನ ಸಂದರ್ಶನಗಳ ಪ್ರಕಟಣೆ ಇವೆಲ್ಲವೂ **ಕಸ್ತೂರಿ**ಯ ಲಕ್ಷಣಗಳೇ ಆಗಿದ್ದವು.

ಎ. ಕಸ್ತೂರಿ ಸಂಪಾದಕನ ವಿಲಕ್ಷಣಗಳು:

ಕಸ್ತೂರಿಯನ್ನು ರೂಪಿಸುವುದರಲ್ಲಿ ಮತ್ತು ಬೆಳೆಸುವುದರಲ್ಲಿ ಸೃಜನಶೀಲತೆಯನ್ನು ತಮ್ಮ ತನುಮನದನಗಳಲ್ಲಿ ಪಾ.ವೆಂ. ವಿನಿಯೋಗಿಸಿದರು. ಅವರದು ಸೃಜನಶೀಲ ಪ್ರವೃತ್ತಿ. ಯೋಜನೆಯನ್ನು ರೂಪಿಸುವಾಗ ಪಾ.ವೆಂ. ಸಾಕಷ್ಟು ವ್ಯವಹಾರಿಕ ಅಂಶಗಳನ್ನು ಅಳವಡಿಸುತ್ತಾರೆ. ಅದರಿಂದ ಒಂದು ಚೌಕಟ್ಟು ಪತ್ರಿಕೆಗೆ ಲಭಿಸುತ್ತದೆ. ಆದರೆ ಈ ಚೌಕಟ್ಟು ಒಂದು ನಿರ್ಬಂಧವಾಗಿರದೆ ಅದೊಂದು ಸೃಜನಶೀಲ ಕ್ರೀಡೆಯಾಗುವಂತೆ ಅವರು ವರ್ತಿಸುತ್ತಿದ್ದರು. ಇದರಿಂದ ಇದರಿಂದ ಕಸ್ತೂರಿಯ ಲಕ್ಷಣಗಳ ಜೊತೆಗೆ ವಿಲಕ್ಷಣಗಳು ಲಭಿಸಿದವು.

ವಿಲಕ್ಷಣ ೧: ಡೈಜಸ್ಟ್ ಅನ್ನವುದು ಒಂದು ಪಚನ ಮಾಡಿಕೊಳ್ಳುವ ಪತ್ರಿಕೆ ವಿಷಯ ವಸ್ತು ಎಂಬ ಆಹಾರವನ್ನು ರುಚಿಕರವೂ ವಾಚಕವೂ ಆಗಿ ಮಾಡುವುದೇ ಸಂಪಾದಕನ ಮೊದಲ ಕೆಲಸ. ಇದರಲ್ಲಿ ಪಾ.ವೆಂ. ಕುಶಲ ಹಸ್ತರು. ಪ್ರತಿ ಸಂದರ್ಭವನ್ನು ಗಮನಿಸುವ ಅವರು ತಡಮಾಡದೆ ಆಯಾಕಾಲದ ಮಹತ್ವದ ವಿದ್ಯಾಮಾನವನ್ನು ಅನೇಕ ಮೂಲಗಳಿಂದ ಗ್ರಹಿಸಿ, ಸಂಗ್ರಹಿಸಿ ಸಂಕ್ಷಿಪ್ತಗೊಳಿಸಿ ಪ್ರಕಟಿಸುತ್ತಿದ್ದರು. ಇಂತಲ್ಲಿ ಅವರ ಸೃಜನಶೀಲ ಲಕ್ಷಣಗಳಾದ ನೆನಪಿನ ಶಕ್ತಿ, ಬಿಡಿ ಬಿಡಿಯಾದುದನ್ನು ಸ್ವಾರಸ್ಯಕರವಾಗಿ ಸಂಯೋಜಿಸಿ ಮೊನಚಾದ ಶೈಲಿ ಅನುಸರಿಸಿ ಬರೆಯಬಲ್ಲ ಕೌಶಲ ಪ್ರಕಟವಾಗುತ್ತದೆ. ಉದಾಹರಣೆಗೆ ೧೯೫೮ ಸೆಪ್ಟೆಂಬರ್ ಸಂಚಿಕೆಯಲ್ಲಿ ಪಾಂ. ಹೆಸರಿನಿಂದ ಬರೆಯಲಾದ ಲೇಖನ 'ಜೀವದಾನಿ ಜಯಪ್ರಕಾಶ್' ಸಶಸ್ತ್ರ ಕ್ರಾಂತಿಯಿಂದ ಭೂದಾನ ಚಳವಳಿಗೆ ಜೀವದಾನ ಮಾಡಿದವರು. ವ್ಯಕ್ತಿ ಚಿತ್ರಣದೊಂದಿಗೆ ಅವರ ಜೀವನಧ್ಯೇಯವನ್ನು ಮೀಸಲಿರಿಸಿದ ಸಾಧನೆಯನ್ನು ವಿವರಿಸಲಾಗಿದೆ. ಜೊತೆಗೆ ನೆಹರು ನಂತರ ಯಾರು? ಎನ್ನುವ ಪ್ರಶ್ನೆಗೆ ಸಮರ್ಪಕ ಉತ್ತರ ಬರೆಯುವರಿದ್ದಾರೆ ಎಂಬ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ವಿಲಕ್ಷಣ ೨: ಹಾಸ್ಯ ಪ್ರಜ್ಞೆಯ ಪಾ.ವೆಂ. ಅನೇಕ ನಗೆಹನಿಗಳನ್ನು ಸೃಷ್ಟಿಸಿ ಅಲ್ಲಲ್ಲಿ ಓದಿದ್ದನ್ನು ಒಟ್ಟು ಸ್ವಾರಸ್ಯಕ್ಕೆ ಕಳೆಬರುವಂತೆ ತಮ್ಮದೇ ನುಡಿಗಟ್ಟಿನಲ್ಲಿ ಬರೆದು ಕೊಳ್ಳುತ್ತಿದ್ದರು. ಅದಕ್ಕೆ ಸಿಗುವ ಸ್ಪರ್ಶ ಅವರ ಸೃಜನಶೀಲ ನುಡಿಗಟ್ಟಿನದೇ ಆಗಿರುತ್ತಿತ್ತು. ೧೯೫೦ ಡಿಸೆಂಬರ್ ಸಂಚಿಕೆಯಲ್ಲಿ ಇಳಂತೋಡಿ ರಾಮಕೃಷ್ಣ ಭಟ್ ಬರೆದ ಒಂದು ಹಸಿಹರಟೆ 'ನಿದ್ರಾಭಂಗಿಗಳು' ಇದಕ್ಕೆ ಸಂಪಾದಕರು ಎಂಟು ಅಡಿ ಟಿಪ್ಪಣಿಗಳನ್ನು ಬರೆದು ಹಾಕಿ ಲೇಖಕರ ಹಾಸ್ಯ ಪ್ರಜ್ಞೆಗೆ ಜುಗಲ್ ಬಂದಿ ಭಾರಿಸುತ್ತಾರೆ. ಇದರಿಂದ ಲೇಖನ ಹಾಸ್ಯ ಪೂರ್ಣವಾಗಿದೆ. ಇದು ಹರಟೆಹೊಡೆಯುವವನ ಜೊತೆ ಅಡ್ಡ ಹರಟೆ ಹೊಡೆದಂತಿದೆ. ಓದುಗರಿಗೆ ಡಬಲ್ ಮನರಂಜನೆ.

ವಿಲಕ್ಷಣ ೩: ಲೇಖಕರಿಂದ ತಾಂತ್ರಿಕ ಭಾಷೆಯಲ್ಲಿ ಲೇಖನ ಬರೆಯಲು ಸೂಚಿಸಿ, ಸಾಮಗ್ರಿ ಒದಗಿಸಿ ಬರೆಯಿಸುತ್ತಾರೆ. ಹಾಗೆ ಬಂದ ಲೇಖನ ಅಪೂರ್ಣವೋ ಅರೆಕೊರೆಯೊ ಆಗಿದ್ದರೆ ಲೇಖಕರಿಂದ ಮತ್ತೆ ಬರೆಸುತ್ತಾರೆ. ಆಗಲು ಅದು ತೃಪ್ತಿಕರವಾಗಿ ಬಾರದಿದ್ದರೆ ತಾವೇ ಅಂತಹಲೇಖನಕ್ಕೆ ಅವಶ್ಯವಿರುವ ಮಾಹಿತಿ ಅಥವಾ ಉದಾಹರಣೆ ತುಂಬಿ ಸರಿಯಾದ ಪರಭಾಷೆಗೆ ಅದನ್ನು ತಿದ್ದಿ ಪ್ರಕಟಿಸುವ ತುರ್ತನ್ನು ಪಾ.ವೆಂ. ನೆರವೇರಿಸಿಬಿಡುತ್ತಾರೆ. ಉದಾಹರಣೆಗೆ 'ಆ ಯಾಂತ್ರಿಕ ಮಿದುಳುಗಳು' ಎಂಬ ಆಧುನಿಕ ಎಲೆಕ್ಟ್ರಾನಿಕ್ (ವಿದ್ಯುನ್‌ಯಾನ) ವಿದ್ಯೆಯ ಒಂದು ಅದ್ಭುತ ಮಾಹಿತಿ ಲೇಖನವನ್ನು ಚಂದ್ರಶೇಖರ ಎಂಬ ಲೇಖಕರಿಂದ ತರಿಸುತ್ತಾರೆ. ಅದರ ಆದಾರದ ಮೇಲೆ ಅಪೂರ್ಣವನ್ನು ಪೂರ್ಣಗೊಳಿಸುತ್ತಾರೆ. ೧೯೫೯ ಮೇ ಅದೇ ಸಂಚಿಕೆಯಲ್ಲಿ 'ಚೀನಿಯರ ಆಹಾರ ಸಮಸ್ಯೆ ಬಗೆಹರಿಸಿದೆಂತು?' ಎಂಬ ವಿವೇಚನಾತ್ಮಕ ಲೇಖನವಿದೆ. ಇದನ್ನು ಪಾ.ವೆಂ. ಡಾ.ಎಸ್.ಚಂದ್ರಶೇಖರ ಎಂಬ ಪ್ರಸಿದ್ಧ ಸಮಾಜ ವಿಜ್ಞಾನಿಯ ಲೇಖನದ ಆಧಾರದ ಮೇಲೆ ವಿವರಿಸಿ ಬರೆಯುತ್ತಾರೆ.

ವಿಲಕ್ಷಣ ೪: ಡೈಜಸ್ಟಿನ ಮುಖ್ಯ ಲಕ್ಷಣವೆಂದರೆ ಜನಸಾಮಾನ್ಯರಿಗೆ ಉಪಯುಕ್ತವಾದ ಮಾಹಿತಿ ಪೂರ್ಣವಾದ ವಿಷಯಗಳನ್ನು ಬೇರೆ ಪುಸ್ತಕ ಪತ್ರಿಕೆಗಳಿಂದ ಆಯ್ದು ಸಂಗ್ರಹಿಸಿ ಒಂದು ಒಪ್ಪ ಓರಣದಿಂದ ನಿರೂಪಿಸುವುದು. ಉದಾಹರಣೆಗೆ 'ಕ್ಷಯ ರೋಗದ ವಿರುದ್ಧ ಆಯುಧ' ಸಂಚಿಕೆ–೨೯ರಲ್ಲಿ ಬಂದ ಲೇಖನ ಯಾವುದು ಕನ್ನಡ ಪತ್ರಿಕೆಯ ಮೌಲಿಖ ಲೇಖನ ಇದನ್ನು ಮರುಪ್ರಕಟಿಸುತ್ತಾರೆ. ವಿವಿಧ ಮೂಲಗಳಿಂದ ಎಂದು ನಮೂದಿಸಿ ಬರೆದ ಲೇಖನಗಳು ಉದಾಹರಣೆಗೆ 'ಗಿಡಗಳು ಅವರೊಂದಿಗೆ ಮಾತಾಡಿದ್ದವು. ಸಂಚಿಕೆ ೨೯.

ವಿಲಕ್ಷಣ ೫: ಪ್ರಕಟಿತ ಲೇಖನದ ಬಗ್ಗೆ (ಅದು ತಮ್ಮದೇ ಆಗಿರಬಹುದು) ತತ್‌ಕ್ಷಣವೇ ಪ್ರಕಟಿಸುವುದು ಮಾಸಿಕದ ಧರ್ಮ ಪ್ರಜ್ಞಾ ಓದುಗರಿಂದ ಅದು ನಿಗದಿತ ಸಮಯದಲ್ಲಿ ಬಂದರೆ ಸರಿ, ಬಾರಾದಿದ್ದಾಗ ಪಾ.ವೆಂ. ತಾವೇ ಬರೆದು ಸಂವಾದಕ್ಕೆ ಆಸ್ಪದ ಕೊಡುತ್ತಿದ್ದರು. ಇದು ಯಾವುದೇ ಜಿಜ್ಞಾಸುವಿನ ಸಹಜ ಪ್ರವೃತ್ತಿ ತನಗೆ ತಾನೇ ಪ್ರಶ್ನೆ ಹಾಕಿಕೊಳ್ಳುವ (ಉದಾ: ಬ್ರಾಹ್ಮರೇನು ಮಾಡಬೇಕು? ಎಂಬಂತೇ ಇಲ್ಲವೇ

ಸಂದೇಹವನ್ನೆ ಎತ್ತಿಕೊಂಡು ಸಮಧಾನಕರ ರೀತಿಯಲ್ಲಿ ವಿಚಾರವನ್ನು ಸಮಾರೋಪಗೊಳಿಸುವುದು. ಉದಾಹರಣೆಗೆ ಶ್ರೀ ನರಸಿಂಹಗುಡಿಯವರು ೧೯೭೩ರ ಫೆಬ್ರವರಿ ಸಂಚಿಕೆಯಲ್ಲಿ ಬರೆದ 'ಶಿಕ್ಷಣವನ್ನು ಶಿಕ್ಷಕನಿಗೆ ಬಿಡಿ' ಎನ್ನುವ ಲೇಖನದಲ್ಲಿ ಅನೇಕರ ಈ ಲೇಖನಕ್ಕೆ ಸಹಮತವನ್ನು ವ್ಯಕ್ತಿಪಡಿಸಿದರೆ ಕೂಡ್ಲಗಿಯ ಅನಂತೇಶರಾವ್ ಎನ್ನುವ ಗುಪ್ತನಾಮದಿಂದ ಬರೆದು Birds of a feather flock together ತನ್ನಿಮಿತ್ತ ಈ ಕಕ್ಷಗಳಲ್ಲಿ ಸಮ ವಯಸ್ಕ ಶಿಷ್ಯವೃಂದಗಳು ಯೋಗ್ಯ ಎನ್ನುವ ಪರಿಹಾರಪೂರ್ಣ ಮತವನ್ನು ಮಂಡಿಸುತ್ತಾರೆ.

ವಿಲಕ್ಷಣ ೬: 'ಇದುವೇ ಜೀವ ಇದು ಜೀವನ' ಈ ಅಂಕಣದಲ್ಲಿ ಓದುಗರು ತಮ್ಮ ಜೀವನದ ನೆನಪಿನಲ್ಲಿ ಉಳಿಯುವ ಘಟನೆಗಳನ್ನು ನಿರೂಪಿಸುತ್ತದೆ. ಇಲ್ಲಿ ಮಾನವೀಯ ಸಂಬಂಧಗಳ ವೈಶಿಷ್ಟ್ಯ ಅಥವಾ ವಿಲಕ್ಷಣ ರೀತಿನೀತಿಗಳು ದೃಷ್ಟಾಂತ ವ್ಯಕ್ತವಾಗಿರುತ್ತದೆ.

ಉದಾಹರಣೆಗೆ ೧೯೬೪ಳ ಆಗಸ್ಟ್ ಸಂಚಿಕೆಯಲ್ಲಿ (ಪುಟ ೫೭) ಎಂ.ಕೆ. ಸುಬ್ಬರಾವ್ ಬಸ್ಸಿನೊಳಗೆ ನಡೆಯುವ ಕ್ಷುಲ್ಲಕ ವ್ಯಾಜ್ಯದ ಪರಿಣಾಮವನ್ನು ಬರೆಯುತ್ತಾರೆ. 'ಜೂನ್ ೮, ೧೯೬೪ಳ ನಾನು ನನ್ನ ಸ್ನೇಹಿತರೂ ಖಾಸಗಿ ಬಸ್ಸೊಂದರಲ್ಲಿ ಪ್ರಯಾಣ ಮಾಡುತ್ತಿದ್ದೆವು. ಬಸ್ಸಿನೊಳಗೆ ಹಳ್ಳಿಗರೊಬ್ಬರು ಯಾವುದೊ ಕ್ಷುಲ್ಲಕ ಕಾರಣಕ್ಕಾಗಿ ವ್ಯಾಜ್ಯ ತೆಗೆದು ತಮ್ಮ ಅವ್ಯಾಹಕ ಅವಾಚ್ಯ ವಾಕ್ ಪ್ರವಾಹದಿಂದ ಇತರ ಪ್ರಯಾಣಿಕರ ಸಂಯಮವನ್ನು ಕೆರಳಿಸಿದರು. ತಟ್ಟನೆ ಬಸ್ಸು ನಿಂತಿತು. ಡ್ರೈವರ್ ಕೆಳಗಿಳಿದ ಅವನು ಇವರಿಬ್ಬರನ್ನೂ ತರಾಟೆಗೆ ತೆಗೆದುಕೊಳ್ಳಬಹುದೆಂದು ಎಲ್ಲರೂ ಯೋಚಿಸಿದ್ದರು. ಆದರೆ ನಡೆದುದೇ ಬೇರೆ. ಬಸ್ಸಿನ ಎದುರಿಗೆ ಯಾವುದೋ ಹರಿಜನ ಸಂಘದವರು ಎತ್ತಿನಗಾಡಿಯಮೇಲೆ ದಿವಂಗತ ನೆಹರೂರವರ ಭಾವಚಿತ್ರವನ್ನು ಅಲಂಕರಿಸಿ ಮೆರವಣಿಗೆ ಹೊರಟಿದ್ದರು. ಚಿತ್ರದಲ್ಲಿದ್ದ ವಿಶಾಲ ನಗೆಯ ಅಲಂಕರಿಸಿ ಮೆರವಣಿಗೆ ಹೊರಟಿದ್ದರು. ಚಿತ್ರದಲ್ಲಿದ್ದ ವಿಶಾಲನಗೆಯ ನಾಯಕ ನಮನ್ನಗಲಿದ್ದಾರೆಂದು ನಂಬುವುದಕ್ಕೆ ಕಷ್ಟವಾಗುತ್ತಿತ್ತು. ಡ್ರೈವರ್ ಕೆಳಗಿಳಿದವನೇ ಮೌನವಾಗಿ ತಲೆತಗ್ಗಿಸಿ ನಿಂತು ನಾಯಕನ ಆತ್ಮಕ್ಕೆ ತನ್ನ ಗೌರವವನ್ನು ಸಲ್ಲಿಸಿದ. ಅವನನ್ನು ನೋಡಿದ ಮೇಲೆ ಬಾಕಿಯವರು ಒಡನೆ ಬಸ್ಸಿನಿಂದ ಇಳಿದು ಅವನ ರೀತಿಯನ್ನೇ ಅನುಸರಿಸಿದರು. ಮೆರವಣಿಗೆ ಪೂರ್ತಿಯಾಗಿ ಮುಂದೆ ಹೋಗುವ ವೇಳೆಗೆ ಅವ್ಯಕ್ತ ಅಪಾರವೇದನೆಯೊಂದು ಇತರ ಭಿನ್ನಭಾವಗಳನ್ನೆಲ್ಲಾ ಚದುರಿಸಿ ಎಲ್ಲರ ಮನಸ್ಸನ್ನು ಆವರಿಸಿ ಎಲ್ಲರ ಕಣ್ಣಿನಲ್ಲೂ ನೀರು ಚದುರಿಸಿ ಎಲ್ಲರ ಮನಸ್ಸನ್ನು ಆವರಿಸಿ ಎಲ್ಲರ ಕಣ್ಣಿನಲ್ಲೂ ನೀರು ತರಿಸಿತ್ತು. ಪುನಃ ಬಸ್ಸಿನೊಳಗೆ ಕುಳಿತುಕೊಳ್ಳುವ ವೇಳೆಗೆ ಜಗಳಗಂಟರಾದಿಯಾಗಿ ಎಲ್ಲರೂ ಮೂಕರಾಗಿದ್ದರು.

ಮಹಿಳೆಯರಿಂದ ಲೇಖನಗಳಲ್ಲಿ ಗೀತಾದೇಸಾಯಿ, ಸುಶೀಲಕೊಪ್ಪರ್ ಬಿಕ್ಕಟ್ಟಿನ ಮಧ್ಯಮ ವರ್ಗದ ಕುಟುಂಬಕ್ಕೆ, **ಗೃಹಿಣಿಯರಿಗಾಗಿ ಪಂಚಶೀಲಾ** ಗೀತಾ ಗೋವಿಂದ

ಮೂರ್ತಿದೇಸಾಯಿ, **ಭೂಟಾಟಿಕೆಯ ವೆಚ್ಚ ನಿಲ್ಲಿಸೋಣ**, ತಾರಾ ರಾಘವೇಂದ್ರರಾವ್ ಈ ಮೂರು ಲೇಖನಗಳನ್ನು ಬರೆದವರು ಮಧ್ಯಮ ವರ್ಗಕ್ಕೆ ಸೇರಿದ ಗೃಹಣಿಯರು ಕುಟುಂಬದ ಅರ್ಥವ್ಯವಸ್ಥೆ ಮತ್ತು ಬಾಂಧವ್ಯಗಳನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬುದರ ವಿವೇಚನೆ ಈ ಲೇಖನದಲ್ಲಿದೆ. ಉಳಿತಾಯ ಮಾಡುವ ಬಗೆ ಗಂಡು ಮಕ್ಕಳ ಆರೋಗ್ಯ ಹವ್ಯಾಸಗಳನ್ನು ಸ್ವಸ್ಥರೂಪದಲ್ಲಿ ಬೆಳೆಸುವ ವಿಚಾರ ಯಾವುದೇ ಸಾಮಾಜಿಕ ಮೌಲ್ಯ ಅರ್ಥಪೂರ್ಣವಾಗಿ ಬೆಳೆಯಬೇಕಾದರೆ ಮನೆಯಲ್ಲಿಯ ರೀತಿ, ನೀತಿ, ನಡತೆ ಮತ್ತು ಅನುಷ್ಠಾನಗಳೇ ಮೂಲ. ಕುಟುಂಬದ ಸ್ವಾಸ್ಥ್ಯ ಮತ್ತು ಅರ್ಥಪೂರ್ಣ ಬೆಳವಣಿಗೆ ಸಮಾಜ ಮತ್ತು ರಾಷ್ಟ್ರದ ಪ್ರಭಾವ ಬೀರುವುದು ಅಗಾದವಾದುದು ಎಂಬುದು ಈ ಗೃಹಿಣಿ ಲೇಖಕಿಯರ ಅನುಭವ ಮತ್ತು ಬೋಧನೆ. ಕಸ್ತೂರಿ ಒಂದು ಕುಟುಂಬ ಮಾರ್ಗದರ್ಶ ಪತ್ರಿಕೆಯಾಗುವುದಕ್ಕೆ ಪಾ.ವೆಂ. ವಹಿಸಿದ ಕಾಳಜಿ ಗಮನಾರ್ಹವಾದುದು.

ಬಡತನದೊಂದಿಗೆ ಹೋರಾಡಿದ ಅಕ್ಷರ ಸಂಸ್ಕೃತಿಯ ಜ್ಞಾನವನ್ನು ಸ್ವಾಧ್ಯಾಯದಿಂದ ಅಳವಡಿಸಿಕೊಂಡಿದ್ದು, ಪಾಡಿಗಾರು ವೆಂಕಟರಮಣ ಆಚಾರ್ಯರು ತಮ್ಮ ಬರಹ ಲೋಕದಲ್ಲಿ ಹೊಸ ಹೊಸ ಆಯಾಮಗಳನ್ನು ಹಾಕುತ್ತ ಓದುಗರೊಂದಿಗೆ ತಾದ್ಯಾತ್ಮ ಸಾಧಿಸಿದ ಕೆಲವೇ ಲೇಖಕರಲ್ಲಿ ಪ್ರಮುಖರು. ಪಾ.ವೆಂ ಅವರ ವಾಚನಾಸಕ್ತಿಯ ಪ್ರಮುಖ ಭಾಗವೇ ಕಸ್ತೂರಿಯಲ್ಲಿ ಪ್ರಾರಂಭವಾದ ಹೊಸ ಹೊಸ ಅಂಕಣಗಳು. ಹೊಸ ಹೊಸ ಶಬ್ದಗಳ– ಅರ್ಥಗಳ ಹೂರಣ, ಅನಾವರಣದಿಂದ ಇಂತಿಂಥ ಬರಹಕ್ಕೆ ಇಂತಿಥ ಭಾಷೆ, ಶೈಲಿಯೇ ಇರಬೇಕೆಂದು ನಂಬಿದ ಅವರು ಪಂಡಿತ–ಪಾಮರರಿಬ್ಬರ ಜ್ಞಾನದ ತೃಷೆಯನ್ನು ತಣಿಸಿದವರು. ಪಾ.ವೆಂ. **ಕಸ್ತೂರಿ** ಭಾಷಾಭ್ಯಾಸದ ಖಣಜವಾಗಿ ಅಗತ್ಯ ಶಬ್ದಗಳ ಅರ್ಥಕೋಶವಾಗಿ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ನವ ಮನ್ವಂತರವನ್ನು ಸ್ಥಾಪಿಸಿದೆ. ಪತ್ರಕರ್ತ ಮತ್ತು ಸಾಹಿತಿಯ ಪರಿಮಿತಿಯನ್ನು ಮಾರಿ ನಿಂತಿದೆ. ಈ ಕಾರಣಕ್ಕಾಗಿ ಪಾ.ವೆಂ. ಎರಡು ಕ್ಷೇತ್ರಗಳಲ್ಲಿ ತಜ್ಞ ಶಿಕ್ಷಕರಾಗಿ ಹೊರಹೊಮ್ಮಿದ್ದಾರೆ. ಇಂತಹ ನುರಿತ ಶಿಕ್ಷಕನ ಕೈಕೆಳಗೆ ತಜ್ಞರಾದ ಹವ್ಯಾಸಿ ಲೇಖಕರು ಲೇಖನಗಳನ್ನು ಬರೆಯುತ್ತಿದ್ದರು. ಹೆಚ್ಚಾಗಿ ಕನ್ನಡದ ಸಾಹಿತಿಗಳು, ರಾಜಕೀಯ ಧುರೀಣರು, ವೈದ್ಯರು, ವಕೀಲರು, ಸಂಗೀತ, ನೃತ್ಯ, ಕ್ರೀಡಾರಂಗದ ಅನುಭವಿಕರು. ಸಾಂಸ್ಕೃತಿಕ ರಂಗ, ಪ್ರಚಲಿತ ವಿದ್ಯಾಮಾನಗಳು, ವಿಜ್ಞಾನ ಲೇಖಕರು, ಮಹನೀಯರು **ಕಸ್ತೂರಿ**ಯ ಅಂಕಣದಲ್ಲಿ ವಿದ್ವತ್ ಪೂರ್ಣವಾದ ಲೇಖನಗಳನ್ನು ಬರೆದಿದ್ದಾರೆ.

ಜ್ಞಾನ ಮತ್ತು ಮನರಂಜನೆ ಒಟ್ಟೊಟ್ಟಿಗೆ ಸಾಗಬೇಕೆಂಬ ಆಕಾಂಕ್ಷೆಯಿಂದ ಪಾ.ವೆಂ. **ಕಸ್ತೂರಿ**ಗೆ ತಮ್ಮದೇ ಆದ ನೀಲನಕ್ಷೆಯನ್ನು ತೊಡಿಸಿ ಕನ್ನಡ ವಾಚಕರ ಕೈಗೆ ಕೊಟ್ಟರು. ಇದು **ಕಸ್ತೂರಿ**ಯ ಅಪೂರ್ವವಾದೊಂದು ಪ್ರಯೋಗವಾಗಿದೆ. ೧೯೬೬ರಿಂದ ೧೯೭೭ ರವರೆಗಿನ 'ವಸಂತ ಸಂಚಿಕೆ'ಯ ವಿಭಾಗದಲ್ಲಿ ಕಾಣುತ್ತೇವೆ. ಅಚ್ಚಳಿಯದ ಪುಟಗಳು, ಹಿರಿಯರ ಬದುಕು, ಬಿಂದು, ಕಂಡು ಕಾಣದ ಕರುಣ ಕಥೆಗಳು, ಇತಿಹಾಸದ ಪುಟಗಳಿಂದ

ಎಂಬ ಹೊಸ ಅಂಕಣಗಳು ಜೀವನ, ಸಾಹಿತ್ಯ, ಸಮಾಜ ಇತಿಹಾಸದ ಬಗ್ಗೆ ಹೊಸ ಅರಿವನ್ನು ಮೂಡಿಸುತ್ತದೆ. 'ಕಿರಿಯರ ಕಸ್ತೂರಿ' ಎಂಬ ವಿಶೇಷ ಅಂಕಣ ಮಕ್ಕಳ ಓದಿಗೆ ಸೀಮಿತವಾಗಿತ್ತು. ಕಿರಿಯರು ಕೂಡ ಕನ್ನಡ ಕಸ್ತೂರಿಯ ಮೌಲ್ಯವನ್ನು ತಿಳಿಯಲಿ ಎಂದೇ ನೀತಿಕತೆ, ವಿಜ್ಞಾನ, ಸಮಾಜ ಮಕ್ಕಳ ಆಸಕ್ತಿ ವಿಷಯವನ್ನು ಕಸ್ತೂರಿ ಮುಖ್ಯವಾಗಿಟ್ಟು ಕೊಂಡಿದೆ. ಹೀಗೆ ಹೊಸ ಹೊಸ ಅಂಕಣಗಳಲ್ಲಿ ಯಾವುದೇ ಒಂದು ವಿಷಯವನ್ನು ಅನುಭವದಿಂದಲೋ ನೆನೆಪಿನಾಳದಿಂದಲೋ, ಯಾವುದೋ ಕೃತಿ ಪತ್ರಿಕೆಯಿಂದಲೋ ರೋಚಕ ಸಂಗತಿಗಳನ್ನು ಅಗೆದು ತೆಗೆದು ಬರಹಗಳನ್ನು ವಿಶಿಷ್ಟ ಸ್ವಚ್ಛ ಹಾಗೂ ಶುದ್ಧಗನ್ನಡದಲ್ಲಿ ಬರೆದು ಅಭಿಮಾನಿ ಓದುಗರಿಗೆ ಒದಗಿಸಿದ್ದಾರೆ. ಸರಳ ಭಾಷೆಯು **ಕಸ್ತೂರಿ** ಎಲ್ಲರಿಗೂ ಕೈದೀವಿಗೆಯಾಗಿತ್ತು. ಒಬ್ಬ ನುರಿತ ಪತ್ರಕರ್ತ ಸಮಾಜಕ್ಕೆ ಒಬ್ಬ ಸಮರ್ಥ ಶಿಕ್ಷಕನಾಗಿ ಹೇಗೆ ಉಪಯೋಗವಾಗಬಲ್ಲ ಎಂಬುದಕ್ಕೆ ಆಚಾರ್ಯರೇ ಸ್ಪಷ್ಟ ನಿದರ್ಶನ.

ಪ್ರಜಾತಂತ್ರ ರಾಜ್ಯಾಡಳಿದಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆಗೆ ನಾಲ್ಕನೆಯ ಸ್ತಂಭವಾಗಿ 'ಪತ್ತಿಕಾ ಸ್ವಾತಂತ್ರ್ಯ' ಎಂಬುದಿದೆ. ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಇದು ಒಂದು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಇನ್ನೊಂದು ಶೋಷಣೆಯ ವಿರುದ್ಧ ಹೋರಾಡುವ ಹಕ್ಕು–ಇವು ಪತ್ರಿಕಾ ಸ್ವಾತಂತ್ರ್ಯಕ್ಕೆ ಆಧಾರ ಸ್ತಂಭವಾಗಿದೆ. ವ್ಯಕ್ತಿ ಪ್ರತಿಭೆಯ ಹಕ್ಕುಗಳು. 'ಸಮಾನತೆಯ ಹಕ್ಕು' ಜಾತ್ಯಾತೀತ ಮತ್ತು ಸಮಾಜವಾದೀ ಸಮಾಜ ನಿರ್ಮಾಣದ ಆದರ್ಶಗಳಿಗೂ ಉಪಾದೇಯವಾಗಿದೆ. ಪತ್ರಿಕೆ(ಪ್ರೆಸ್)ಯ ಪ್ರಕಟನೆ ಒಂದು ಬಂಡವಾಳ ವ್ಯವಸ್ಥೆಯ ಉತ್ಪಾದನೆಯಾಗಿದ್ದು 'ಪತ್ರಿಕೋದ್ಯಮ'ವಾಗಿ ವಿಸ್ತರಿಸಿದೆ. ಇಲ್ಲಿ ಸ್ವಾತಂತ್ರ್ಯವೆಂಬುದು, ಸರ್ವಸಮಾನತೆ ಎಂಬುದು ಸಮಾಜವಾದ ನೀತಿರೂಪಿಸುವ ಹಂಬಲವಾಗಿದೆ. ಬಂಡವಾಳ ಶಾಹಿ ವ್ಯವಸ್ಥೆಯ ಪಟ್ಟಭದ್ರ ಹಿತಾಸಕ್ತಿಗಳ ಎದುರು ಹೋರಾಟ ಮಾಡಿ, ಜನಜಾಗೃತಿಯನ್ನು ಸಾಧಿಸಬೇಕಾಗುತ್ತದೆ. ಈ ವ್ಯವಸ್ಥೆಯಲ್ಲಿ ಪತ್ರಿಕಾ ಸಂಪಾದಕನ ವ್ಯಕ್ತಿತ್ವ ಹಿರಿಮೆಗೆ ಒಳಗಾಗಿ, ಅಗ್ನಿದಿವ್ಯಗಳನ್ನು ಪಾರುಮಾಡುವ ಬೌದ್ಧಿಕತೆಯನ್ನು ಪ್ರದರ್ಶಿಸಬೇಕಾಗುತ್ತದೆ. ಸ್ವಾತಂತ್ರ್ಯ ಚಳುವಳಿಯಲ್ಲಿದ್ದಾಗ ತಿಲಕರು, ಗಾಂಧೀಜಿ, ಡಿ.ವಿ.ಜಿಯಂತಹ ಧೀಮಂತರು ಪತ್ರಕರ್ತನ ಪಾತ್ರವಹಿಸಿ– ಸೀಮಿತ ಸುಶಿಕ್ಷಿತ ವರ್ಗದ ಅಭಿಪ್ರಾಯಗಳನ್ನು ಕಲೆಹಾಕಿ ಸಮರಕ್ಕೆ ನೆರವಾದರು. **ಸಂಯುಕ್ತ ಕರ್ನಾಟಕ, ಕರ್ಮವೀರ** ಪತ್ರಿಕೆಗಳನ್ನು ಮುಂಬಾಯಿ ಕರ್ನಾಟಕದಲ್ಲಿ ಪ್ರಚುರಗೊಳಿಸಿದ **ಲೋಕಶಿಕ್ಷಣ ಟ್ರಸ್ಟ್, ಪತ್ರಿಕಾ ಸ್ವಾತಂತ್ರ್ಯ**ದ ಸಂಪೂರ್ಣ ಉಪಯೋಗವನ್ನು ಉಪಯೋಗಿಸಿತು. ಸ್ವಾತಂತ್ರದ ಹಂಬಲಕ್ಕೆ ಮೂಲ ಸಾಮಾನ್ಯಜ್ಞಾನಗಳಿಂದ, ಇತಿಹಾಸ ಪ್ರಜ್ಞೆ ತರ್ಕಸಮ್ಮತ, ವಿಚಾರವಂತಿಕೆಗಳ ವ್ಯವಸಾಯ ಇದನ್ನು ಪಾ.ವೆಂ. ಅವರು ವೃತ್ತಿ ಪ್ರವೃತ್ತಿಗಳನ್ನಾಗಿ ರೂಪಿಸಿಕೊಂಡರು. ಅವರು ಜನ್ಮತ: ಆಲೋಚನ ವೃತ್ತಿಯವರು. ಆಲೋಚನೆಯನ್ನು ಪ್ರೇರೆಪಿಸುವ ವಿವೇಚನಾಶೀಲ ಮನೋವೃತ್ತಿಯವರು. ಪಾ.ವೆಂ.

ಅವರಿಗೆ ಕಸ್ತೂರಿಗಿಂತ ಹೆಚ್ಚು ಪರಿಣಾಮಕಾರಿಯಾದ ಮಾಧ್ಯಮ ಬೇರೊಂದಿರಲಿಲ್ಲ. ಕಸ್ತೂರಿಯಿಂದ ಪರಿಣಾಮಕಾರಿ ಮಾಧ್ಯಮಕ್ಕೆ ಪಾ.ವೆಂ. ಅವರಿಗಿಂತ ಶ್ರೇಷ್ಠವಾದ ಮಾರ್ಗನುಯಾಯಿ ಇನ್ನೊಬ್ಬರಿರಲಿಲ್ಲ. ಈ ವರ್ಗದಲ್ಲಿ ಪಾ.ವೆಂ. ಓರ್ವ ಒಂಟಿಸಲಗ. ಪಾ.ವೆಂ. ಆರಂಭದ ದಿನಗಳಲ್ಲಿ ಕವಿಯಾಗಿ, ಕತೆಗಾರನಾಗಿ ಗುರುತಿಸಿಕೊಂಡಿರಬಹುದು. ಆದರೆ ಅವರು ಬರವಣಿಗೆಯ ಮೂಲ ಮಾಧ್ಯಮಕ್ಕೆ ಒಲಿದು ಬಂದುದು 'ಲಾಂಗೂಲಾಚಾರ್ಯ' ಎಂಬ ಅಂಕಿತದ ಹರಟೆಗಳಿಂದ.. ಕಸ್ತೂರಿಗಿಂತ ಮೊದಲು ಕರ್ಮವೀರದಲ್ಲಿ ರಾಜ್ಯ, ರಾಷ್ಟ್ರ, ರಾಜಕೀಯ ಸಂಗತಿಗಳ ಬಗೆಗೆ ಬರೆಯುತ್ತಿದ್ದ ವಿಶ್ಲೇಷಣೆ, ವಿಮರ್ಶೆ ವ್ಯಾಖ್ಯಾನಗಳು ಪೂರ್ಣ ರೂಪವನ್ನು ಕಂಡುಕೊಂಡದ್ದು **ಕಸ್ತೂರಿ**ಯ ಡೈಜೆಸ್ಟ್‌ನಲ್ಲಿ. ಆದರೆ ವಿಡಂಬನೆ ಮಾತ್ರ ಬದುಕು–ಬರೆಹ ಎರಡರಲ್ಲೂ ಹಾಸುಹೊಕ್ಕಾಗಿ ಹೆಣೆದುಕೊಂಡಿತು.

ಕರ್ಮವೀರದಲ್ಲಿ 'ಲಾಂಗೂಲಾಚಾರ್ಯ' ಎಂಬ ಅಂಕಿತನಾಮದಿಂದ ಬರೆಯಲು ಪ್ರಾರಂಬಿಸಿದ ಪಾ.ವೆಂ. ಅವರ ಹರಟೆ ಲೇಖನಗಳು ಸಮಕಾಲೀನ ಪತಿಸ್ಥಿತಿಗೆ ಹಿಡಿದ ಕನ್ನಡಿಯಾಗಿವೆ. ತಮ್ಮ ಸುತ್ತಲಿನ ಸಮಾಜ ಮತ್ತು ಅದರಲ್ಲಾಗುತ್ತಾ ಬಂದ ಸ್ಥಿತಿ–ಗತಿ–ಪರಿಸ್ಥಿತಿಗಳ ಬದಲಾವಣೆಗಳನ್ನು ಆಳುವ ವರ್ಗದ ಆಷಾಢಭೂತಿತನವನ್ನು ಅವರು ತಮ್ಮ ವಿಡಂಬನಾ ಪ್ರಬಂಧಗಳಲ್ಲಿ ಮೊನಚಾಗಿ, ನಯವಾಗಿ ಚಿತ್ರಿಸಿದರು. ಇಲ್ಲಿ ಯಾರನ್ನು ಘಾಸಿಗೊಳಿಸದೆ, ಹರಿತ ಭಾಷೆಗಳ ಬಳಕೆಯಿಲ್ಲದೆ ಗೂಡಾರ್ಥದ ಅಗೋಚರ ಅಸ್ತ್ರದಿಂದಲೇ ಗಾಸಿಗೊಳಿಸುವ ಪ್ರಹಾರ ನೀಡುವ ಗುಣದಲ್ಲಿ ಪಾ.ವೆಂ. ಸಿದ್ಧಹಸ್ತರು. **ಕಸ್ತೂರಿ**ಯ ಬರಹಗಳು ಪ್ರೌಢಓದುಗ ಸಮೂಹಕ್ಕೆ ಸೀಮಿತ ಅನ್ನಿಸಿದುಂಟು. ಆದರೆ ಅದನ್ನು ಅರ್ಥೈಸಿಕೊಂಡ ಓದುಗರಿಗೆ ಪಾ.ವೆಂ. ರೋಚಕ ಅನುಭವ ಕಟ್ಟಿಕೊಟ್ಟದಂತೂ ಅಂದಿಗೂ ಇಂದಿಗೂ ಸತ್ಯ. ತಮಗೆ ತಾವೇ ಸಾಟಿ, ತಮಗೆ ತಾವೇ ವೈದ್ಯನಾಗಿ ಓದುಗರ ಚಿಕಿತ್ಸಕ ಬುದ್ದಿಗೆ ಕಿಡಿಹಚ್ಚಿದರು.

ಪಾ.ವೆಂ. ಅವರ ಪ್ರಸಂಗಕ್ಕೆ ಬೇಕಾದಂತೆ ಹದವಾದ ಮೊನಚಾದ, ಬೌದ್ಧಿಕ ನಳಪಾಕಗೊಳಿಸಿದ ಭಾಷೆ, ಆಚಾರ್ಯರನ್ನು ಯಾವ ಬರಹಗಾರರ ವರ್ಗಕ್ಕೆ ಸೇರಿಸಿದರೂ ಅವರು ಆ ವರ್ಗದ ಇತಿ–ಮಿತಿಯನ್ನು ಮೀರಿ ನಿಲ್ಲುತ್ತಾರೆ. ತಮ್ಮ ಸೃಜನಶೀಲತೆಯ ಅಂಕಿತ ಪಾಡುತ್ತಾರೆ. **ಕಸ್ತೂರಿ**ಯ ರೂವಾರಿಯಾಗಿ ಮತ್ತು ಪತ್ರಿಕೋಧ್ಯಮದ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಂತು ಮೌಲ್ಯಯುತವಾದುದನ್ನೆ ಬರೆದರು. ಅದಕ್ಕೆ ತಕ್ಕುದಾದುದನ್ನೇ ತಮಗೆ ಗೊತ್ತಿಲ್ಲದ ಸಂದರ್ಭದಲ್ಲಿ ಆಳ ಅಧ್ಯಯನ ಮಾಡಿ ಜ್ಞಾನ ಸಮೃದ್ಧ ಪಾಠಗಳನ್ನು ಬರೆದರು. ಆಚಾರ್ಯರು ತಾವೇ ಮುಂದೆ ಬಂದು ಗುರುವಿನ ವೇಶವನ್ನು ಹಾಕಿ ಯಾರನ್ನು ಪ್ರಭಾವಿತಗೊಳಿಸಲಿಲ್ಲ. ಯಾರನ್ನು ಕರೆದು ಕಲಿಸಲಿಲ್ಲ. ಆದರೆ ತಾವಾಗಿ ಕಲಿಯಲು ತನ್ನ ಬಳಿ ಬಂದವನ್ನು ನಿರಾಶೆಗೊಳಿಸಲಿಲ್ಲ. ಮಾತೃವಾತ್ಸಲ್ಯದಿಂದ ಅವರನ್ನು ಸಲಹಿ ಅವರ ಭೌದ್ಧಿಕ ಮಟ್ಟವನ್ನು ಎತ್ತರಿಸಿದರು. **ಕಸ್ತೂರಿ**ಗೆ ಬರೆದು ಅದರಿಂದ

ತಿದ್ದಲ್ಪಟ್ಟು, ಬೋಧಿಸಲ್ಪಟ್ಟು ಬರಹಗಾರಿಕೆಯ ಉತ್ತಮಾಂಶಗಳನ್ನು ಕಲಿತುಕೊಂಡ ಮಾಧವ ಮಹಿಷಿ ಶ್ರೀನಿವಾಸ ಕುಲಕರ್ಣಿ, ರಾಘೂಸಮಾರಮಠ, ಗೋಪಾಲವಾಜಪೇಯಿ, ರವಿಬೆಳಗೆರೆ, ಕಲಾವಿದರಾಗಿ ಪಳಗಿದ ಟಿ.ಕೆ.ರಾಮ, ಕೆ.ಬಿ.ಕುಲಕರ್ಣಿ, ಪಿ.ಆರ್. ಪಾಟೀಲರು ಪಾ.ವೆಂ. ಗರಡಿಯಲ್ಲಿ ಪಳಗಿ ಬೆಳಗಿದವರು. ಇದಕ್ಕಾಗಿ ಪಾ.ವೆಂ. ಅವರು ಬರಹಗಾರರ ದೊಡ್ಡ ಬಳಗವನ್ನೇ ತಮ್ಮ ಆತ್ಮೀಯತೆಯಿಂದ ನಿರ್ಮಿಸಿದ್ದರು. ಮುಂದಿನ ಸಂಪಾದಕರು ಪಾ.ವೆಂ. ಅವರ ಬರಹದ ಮಾದರಿಯನ್ನು ಅನುಸರಿಸಿದರು. ಮುಂದಿನ ಸಂಪಾದಕರಿಗೆ, ಬರಹಗಾರರಿಗೆ, ಕಸ್ತೂರಿಯ ಮಾರ್ಗವು ಭದ್ರ ಬುನಾದಿಯನ್ನೇ ರೂಪಿಸಿದೆ. **ತುಷಾರ, ತರಂಗ**ದಂತ ಪತ್ರಿಕೆಗಳು ಸುಗುಣಮಾಲ ನಂತರದ ಪತ್ರಿಕೆಗಳು ಪಾ.ವೆಂ. ಅವರ ಸಲಹೆ ಸೂಚನೆಗಳನ್ನು ಕೇಳಿ ಅನುಸರಿಸುತ್ತಾ ಬದುಕುವ ಮಾರ್ಗವನ್ನು ಕಸ್ತೂರಿಇತರ ಪತ್ರಿಕೆಗಳಿಗೂ ನೀಡಿತ್ತು.

ಕಸ್ತೂರಿಯ ಕಂಪು ಅದನ್ನು ಸೃಷ್ಟಿಸಿದ ಪಾ.ವೆಂ. ಅವರಲ್ಲಿ ಇತ್ತು. ಕನ್ನಡ ಸಾರಸ್ವತ ಲೋಕವನ್ನು ಆವರಿಸಿದ ಬೀರಿದ ಕಂಪು ಇದು ಕನ್ನಡಕ್ಕೆ ಆಚಾರ್ಯರ ಅಮೂಲ್ಯ ಕಾಣಿಕೆ. ಪಾ.ವೆಂ. **ಕರ್ಮವೀರ ಮತ್ತು ಕಸ್ತೂರಿ**ಗೆ ಪರಿಮಿತಗೊಳ್ಳದಿದ್ದರೇ ಯಾವುದೋ ಪ್ರಬುದ್ಧ ಪತ್ರಿಕೆಗೆ ಸಮರ್ಥ ಸಂಪಾದಕರಾಗಿ ಬೆಳಗಬಹುದಿತ್ತು. ಆದರೆ **ಸಂಯುಕ್ತ ಕರ್ನಾಟಕ** ಪಾ.ವೆಂ. ಅವರ ಅನುಭವ, ಪಾಂಡಿತ್ಯ ಮತ್ತು ಪ್ರತಿಭೆಯನ್ನು ಗುರುತಿಸಲಿಲ್ಲ ಉಪಯೋಗಿಸಿಕೊಳ್ಳಲೇ ಇಲ್ಲ. ನಿವೃತ್ತಿಗಿಂತ ಸ್ವಯಂ ನಿವೃತ್ತಿಯೇ ಸಾಕು ಎಂದು ಪಾ.ವೆಂ. ೧೯೭೪ರಲ್ಲಿ ತಾವೇ ಸಂಪಾದಕ ವೃತ್ತಿಯಿಂದ ನಿರ್ಗಮಿಸುತ್ತಾರೆ. ಆದರೂ ಬರಹವನ್ನು ಅಷ್ಟಕ್ಕೆ ನಿಲ್ಲಿಸದೇ ಅದೊಂದು ಪ್ರವೃತ್ತಿಯಾಗಿ ಅವರನ್ನು ಆವರಿಸುತ್ತು. ಅವರನ್ನು ಬರಹಗಾರರ ಯಾವುದೇ ವರ್ಗಕ್ಕೆ ಕಟ್ಟಿಹಾಕುವಂತೆಯೇ ಇಲ್ಲ. ಇದಕ್ಕೆ ಪಾ.ವೆಂ. ಬರೆದಿರುವ ವೈವಿಧ್ಯಮಯ ಬರಹಗಳೇ ಸಾಕ್ಷಿ. ಪಾ.ವೆಂ. ಜೀವನ ಪಯಣದಲ್ಲಿ ವೃತ್ತಿಯ ಅನೇಕ ಮಜಲುಗಳನ್ನು ಏರಿಬಂದು ವೃತ್ತಿಯ ಭದ್ರ ನೆಲೆ ಕಂಡುಕೊಂಡದ್ದು ಪತ್ರಿಕೋಧ್ಯಮದಲ್ಲಿ. ಕನ್ನಡ ಪತ್ರಿಕೋದ್ಯಮ ಕ್ಷೇತ್ರಕ್ಕೆ **ಕಸ್ತೂರಿ**ಯ ಸಂಪಾದಕರಾಗಿ ನೆಲೆ ಮತ್ತು ಬೆಲೆ ದೊರಕಿಸಿಕೊಟ್ಟರು. ಪತ್ರಿಕೋದ್ಯಮ ವೃತ್ತಿ ಪಾ.ವೆಂ. ಅವರಿಗೆ ಪ್ರಿಯವು ಆಗಿತ್ತು, ಆಗಿಸಿಕೊಂಡರು, ಇದು ಸಾಹಿತ್ಯ ಸೃಷ್ಟಿಗೆ ಪೂರಕವೂ ಆಯಿತು. ಜ್ಞಾನ ಮತ್ತು ಮನರಂಜನೆಯ ಸೊಬಗು **ಕಸ್ತೂರಿ**ಯಲ್ಲಿ ಪ್ರಾಪ್ತವಾದದ್ದು ಪಾ.ವೆಂ. ಅವರ ಸೃಜನಶೀಲ ದೃಷ್ಟಿ ಮತ್ತು ಅಪಾರ ಪಾಂಡಿತ್ಯದ ಅವಿರತ ಶ್ರಮದ ಫಲ. **ಕಸ್ತೂರಿ** ಡೈಜಸ್ಟ್ ಪತ್ರಿಕೆ ಬಿಡಿ ಬಿಡಿ ಲೇಖನಗಳ ವೈವಿಧ್ಯಮಯವಾದ ಸಂಗ್ರಹವಾಗಿದ್ದರೂ ಅದಕ್ಕೆ ಸಾಹಿತ್ತಿಕವಾದ ರೋಚಕತೆ, ರೋಮಾಂಚಕತೆ ಆಕರ್ಷಣೆ ಮತ್ತು ರಚನಾತ್ಮಕ ಸ್ಪರ್ಶ ಮೂಡಿ ಬಂದದ್ದು ಪಾ.ವೆಂ. ಅವರ ಒಳತುಡಿತದಿಂದ ಕಸ್ತೂರಿ ಪಾ.ವೆಂ. ಜೀವನಾನುಭವಕ್ಕೆ ಪಳಗಿತು. ಪಾ.ವೆಂ. ಇಲ್ಲದ ಕಸ್ತೂರಿಯನ್ನು ಕಲ್ಪಿಸಲೂ ಸಾಧ್ಯವಾಗದಿದ್ದ ಆ ಕಾಲದಲ್ಲಿ ರಾಜಕೀಯ ವಾತಾವರಣದಿಂದ ಅನಿವಾರ್ಯವಾಗಿ ನಿವೃತ್ತಿಯಾದರೂ ಪತ್ರಿಕೆಗೆ ಇದು

ಮಾರಕವಾಯಿತು. **ಕಸ್ತೂರಿ** ಇಂದಿನವರೆಗೆ ಉಸಿರಾಡುತ್ತಿದ್ದರೆ ಅದು ಪಾ.ವೆಂ. ಅವರ ನೈಜ ಸತ್ವದಿಂದ ಪಾ.ವೆಂ. **ಕಸ್ತೂರಿ**ಯ ಜೀವಾಳದಂತಿದ್ದರು. ಜ್ಞಾನದ ಕಣಜವನ್ನಾಗಿ ರೂಪಿಸಿದರು. ಇದು ಪತ್ರಕರ್ತನೋರ್ವನ ನೀರಿಕ್ಷಿತ ಮಟ್ಟದ ಎತ್ತರದ ಸಾಧನೆ. ಈ ಸಾಧನೆ ಪರಿಪಕ್ವಗೊಳ್ಳದೆ ಹೋದರೆ ಅವನೊಬ್ಬ ಸಾಮಾನ್ಯ ಹಾಗೂ ಸಂಬಳದ ನೌಕರಿ ಸಂತೃಪ್ತ ಬರಹಗಾರನಾಗಿ ಕೊನೆಗೊಳ್ಳುತ್ತಾನೆ. ಪಾ.ವೆಂ. ತನ್ನ ಚಿಂತನಶೀಲತೆಯನ್ನು ಆತ್ಮೀಯ ಓದುಗನ ಸಂವೇದನೆಗೆ ಚುಚ್ಚಿ ಅದರಲ್ಲಿ ಭೌದ್ಧಿಕತೆಯ ಕಿಡಿ ಹೊತ್ತಿಸಿಹೋದ ಸ್ಮರಣೀಯರು.

ಅಧ್ಯಾಯ–೭

ಭಾಷಾಧ್ಯಯನದ ಪಾ.ವೆಂ.

ಅ. ಪದಾರ್ಥ ಚಿಂತಾಮಣಿ, ಶಬ್ದವ್ಯುತ್ಪತ್ತಿಯ ಬಗೆ

ಆ. ಇತರ ಕೃತಿಗಳಲ್ಲಿ ಭಾಷಾವಿಚಾರ

ಇ. ತುಳು ಕನ್ನಡ ಮತ್ತು ಸಂಸ್ಕೃತ ಶಬ್ದ ವಿಹಾರ

ಅ. ಪದಾರ್ಥ ಚಿಂತಾಮಣಿ, ಶಬ್ದವ್ಯುತ್ಪತ್ತಿಯ ಬಗೆ:

ಪತ್ರಿಕೋದ್ಯಮ ಪ್ರಪಂಚದ ಅಪೂರ್ವ ವ್ಯಕ್ತಿತ್ವ ಪಾ.ವೆಂ. ಯಾವುದೇ ಉದ್ಯೋಗಕ್ಕೆ ತಕ್ಕಷ್ಟು ಮಾತ್ರ ಜ್ಞಾನ ಕುತೂಹಲಿಗಳಾಗಿರುವುದು ನಮ್ಮ ಸಾಮಾನ್ಯ ಸಂಗತಿ. ಜೀವನೋಪಾಯಕೆಷ್ಟು ಬೇಕು ಅಷ್ಟು ಮಾತ್ರ ವಿದ್ವತ್ತು ಸಾಕು. ಉಳಿದಿದ್ದಕ್ಕೆ ಕೈ ಚಾಚುವ ಮನಸ್ಸು ಹರಿಸುವುದು ಅನಗತ್ಯ ಇದು ಪ್ರಚಲಿತ ತೀರ್ಪು. ಪಾ.ವೆಂ. ಅಂಥವರು ತಮ್ಮ ಉದ್ಯೋಗವನ್ನು ಗಂಭೀರವಾಗಿ ಪರಿಗಣಿಸಿದಷ್ಟು ಉಳಿದವರು ಪರಿಗಣಿಸುವುದಿಲ್ಲ. ಪಾ.ವೆಂ. ಸ್ವಾಧ್ಯಾಯಮುಖೇನ ಕಲಿತವರಾದ್ದರಿಂದ ಯಾವ ಕಾಲೇಜಿಗೂ ಹೋಗದೆ ಇದ್ದುದರಿಂದಲೇ ಅವರು ಶಾಶ್ವತ ಕುತೂಹಲಿಗಳಾಗಿ ಬೆಳೆದಿರಬೇಕು. ಜೀವನದ ಬಹುಕಾಲವನ್ನು ದಮ್ಮುಪೀಡಿತರಾಗಿ ಅನಾರೋಗ್ಯದಲ್ಲೇ ಕಾಲಕಳೆದರೂ ಬೌದ್ಧಿಕ ಜೀವನದ ಲವಲವಿಕೆಯನ್ನು ಕಳೆದುಕೊಳ್ಳಲಿಲ್ಲ. ಆರೋಗ್ಯ ಇರುವವರಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಉತ್ಸಾಹವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದು ಭಾರತೀಯ ಪತ್ರಿಕಾ ಜಗತ್ತಿನಲ್ಲಿಯೇ ಅಭೂತಪೂರ್ವ ವಿದ್ಯಮಾನ ಎನ್ನಬಹುದು. ಅವರ ಪತ್ರಿಕಾ ಬರಹಗಳ ತಳಹದಿಯಲ್ಲಿ ಎರಡು ಮೂಲಭೂತ ಪ್ರವೃತ್ತಿಗಳು ಪ್ರವರ್ತಿಸಿದ್ದವು. ಒಂದು ಅವರು ಸರ್ವಂಕಶ ಕುತೂಹಲ. ಎರಡು ಅವರ ವಿಸ್ತಾರವಾದ ಓದುಗಾರಿಕೆ, ಇವೆರಡು ಗುಣಗಳ ಪಾಂಡಿತ್ಯದ ಹಾಗೂ ಸಂಶೋಧಕ ಬುದ್ಧಿಯ ಪಾರ್ಶ್ವ ನೋಟವನ್ನು ಪಾ.ವೆಂ. ಅವರ **ಪದಾರ್ಥ ಚಿಂತಾಮಣಿ**ಯ ಸಂಪುಟಗಳಲ್ಲಿ ಕಾಣುತ್ತೇವೆ. ಪತ್ರಿಕೋದ್ಯಮದಿಂದ ನಿವೃತ್ತರಾದ ಬಳಿಕ ಬರೇ ಆತ್ಮ ಸಂತೋಷಕ್ಕಾಗಿ ಅವರು ಸಿದ್ಧಪಡಿಸಿದ ಕೃತಿ **ಪದಾರ್ಥ ಚಿಂತಾಮಣಿ,** ಸಾಮಾನ್ಯ ವ್ಯಕ್ತಿ ತಮ್ಮ ಶೇಷ ಜೀವನದಲ್ಲಿ ಲವಲವಿಕೆಯನ್ನು, ಆಸಕ್ತಿಯನ್ನು ಕಳೆದುಕೊಂಡು ಚರ್ವಿತ, ಚರ್ವಣಗಳನ್ನೆ ತಮ್ಮ ವಶಕ್ಕೆ ಬರುವ ಪೀಳಿಗೆಗೆ ಉಣಿಸಿ ಕೈ ತೊಳೆದುಕೊಳ್ಳುತ್ತಾರೆ. ವಿಶ್ವವಿದ್ಯಾಲಯದ ಅಧ್ಯಾಪನ ಪ್ರಪಂಚ, ಪತ್ರಿಕಾ ಪ್ರಪಂಚದಲ್ಲಾದರೂ ಹೆಚ್ಚಿನ ಜ್ಞಾನಾರ್ಜನೆಯ ಗೋಜಿಗೆ ಹೋಗುವುದಿಲ್ಲ. ಪಾ.ವೆಂ. ಇದಕ್ಕೆ ಅಪವಾದದಂತೆ ಬೆಳೆದರು. ಆಚಾರ್ಯರ ಈ ಬಹುಜ್ಞಾನ ಎಲ್ಲ ತರಹದ ಸಾಹಿತ್ಯಾಭ್ಯಾಸ, ಕನ್ನಡ ಆಡುಭಾಷೆಯ ಪರಿಚಯ ಮತ್ತು ಅನೇಕ ಪ್ರಾಚೀನ ಅರ್ವಾಚೀನ ಶಾಸ್ತ್ರಗಳ ಪರಿಜ್ಞಾನ ಇಲ್ಲಿ ಹೆಪ್ಪುಗಟ್ಟಿ ನಿಂತಿವೆ.

ಭಾಷೆಯ ಸಂದರ್ಭದಲ್ಲಿ 'ಪದ' ಎಂದು ಹೇಳುವುದಕ್ಕೆ ಎರಡು ಮುಖಗಳಿವೆ. ಒಂದೇ ನಾಣ್ಯದ ಎರಡು ಮುಖಗಳಂತೆ. ಒಂದು ಅದರ ರೂಪ, ಇನ್ನೊಂದು ಅದರ

ಪದ ಅರ್ಥಗಳ ಸಂಬಂಧ ಭಾಷಾವಿಜ್ಞಾನದ ಆಚೆಗೂ ಹೋಗಿದೆ. ತಾನೇ ಒಂದು ಶಾಸ್ತ್ರವಾಗಿ ಬೆಳೆದು ನಿಂತಿದೆ. ಇತರ ಶಾಸ್ತ್ರಗಳೊಡನೆ ನಿಕಟ ಸಂಬಂಧ ಬೆಳೆಸಿದೆ. ಪದ ಅರ್ಥಗಳು ತತ್ವಶಾಸ್ತ್ರ ಮತ್ತು ಮನಶಾಸ್ತ್ರಗಳೊಡನೆ ನಿಕಟ ಸಂಬಂಧ ಹೊಂದಿದೆ. ತರ್ಕಶಾಸ್ತ್ರ, ಸಮಾಜಶಾಸ್ತ್ರ ಮಾನವಶಾಸ್ತ್ರ, ಇತಿಹಾಸ ಮೊದಲಾದವೂ ಈ ಸಂದರ್ಭದಲ್ಲಿ ಇದರ ಜೊತೆಗಿರುತ್ತದೆ.

ಭಾಷೆ ಎಂಬುದು ನಿರಂತರವಾಗಿ ಪ್ರವಹಿಸುತ್ತಾ ಇರುವಂತದ್ದು, ಹಾಗೆಯೇ ಪದಗಳ ರೂಪಗಳು, ಅರ್ಥಗಳು ಖಚಿತವಾಗಿ ನಿಂತಿರದೆ ಅವು ವ್ಯತ್ಯಾಸವಾಗುತ್ತವೆ. ಒಂದು ಭಾಷೆಯೊಡನೆ ಇನ್ನೊಂದು ಭಾಷೆಯ ಸಂಬಂಧ ಮೊದಲಿನಿಂದಲೂ ಏರ್ಪಟ್ಟುಕೊಂಡೇ ಬಂದಿದೆ. ಸಂಪರ್ಕದ ಮಾಧ್ಯಮಗಳು ಕಡಿಮೆ ಇದ್ದಾಗ ಭಾಷೆಯ ಸಂಬಂಧ ತೆಳುವಾಗಿತ್ತು. ಸಾಧ್ಯತೆಗಳು ಹೆಚ್ಚುತ್ತಾ ಬಂದಂತೆ ಸಂಬಂಧ ಗಟ್ಟಿಯಾಗುತ್ತಾ ಬಂತು. ಭಾಷೆ ಒಂದು ಸಾಮಾಜಿಕ ವ್ಯವಸ್ಥೆಯಾಗಿರುವುದರಿಂದ ಅದು ಒಂದೇ ಕಡೆ ಜೀವಿಸುವುದಿಲ್ಲ. ಸಾಮಾಜಿಕ ಸಂಬಂಧ ಪ್ರಭಾವಗಳಂತೆಯೇ ಭಾಷೆಯ ಸಂಬಂಧ ಪ್ರಭಾವಗಳೂ ಬೆಳೆಯುತ್ತದೆ. ಒಂದು ಭಾಷೆ ಇನ್ನೊಂದು ಭಾಷೆಯಿಂದ ತೆಗೆದುಕೊಳ್ಳುತ್ತದೆ. ಮತ್ತೊಂದು ಭಾಷೆಗೆ ಕೊಡುತ್ತದೆ. ವ್ಯಾಕರಣ ವಿಜ್ಞಾನದಲ್ಲೂ ಇದನ್ನು ಗಮನಿಸುತ್ತೇವೆ.

ಭಾಷೆಯ ಪ್ರತಿಯೊಂದು ಪದಕ್ಕೂ ತನ್ನದೇ ಆದ ಚರಿತ್ರೆ ಇರುತ್ತದೆ, ಕಥೆ ಇರುತ್ತದೆ. ಭಾಷೆಯ ಚರಿತ್ರೆಗೆ ಅದರ ಪದಗಳ ಸ್ವರೂಪದಿಂದಾಗಿ ಸ್ವಾರಸ್ಯ ಬರುತ್ತದೆ. ಪದಗಳ ಬದುಕು ಭಾಷೆಗೆ ಸಾಕಷ್ಟು ಸೊಗಸನ್ನು ತರುತ್ತದೆ. ಪದಗಳ ಬದುಕು ಎಂದರೆ ಮನುಷ್ಯನ ಬದುಕಿನಂತೆಯೇ ಅದು ಹುಟ್ಟುತ್ತದೆ, ಹೋರಾಡುತ್ತದೆ ಸಾಯುತ್ತದೆ. ಭಾಷೆಯ ಚರಿತ್ರೆಯಲ್ಲಿ ಅರ್ಥಮೀಮಾಂಸೆಯ ಅಧ್ಯಯನದಲ್ಲಿ ಇದಕ್ಕೆ ಬೇಕಾದಷ್ಟು ಪುರಾವೆಗಳಿವೆ. ಇಂಗ್ಲೀಷ್‌ನಲ್ಲಿ ಈ ರೀತಿಯ ಅಧ್ಯಯನ ಸಾಕಷ್ಟು ನಡೆದಿದೆ. ಟ್ರಂಚ್, ಮೇಂಡ್ರೆಸ್, ಟಕ್ಕರ್, ಬ್ರಿಲ್, ಕಿಟ್ಟರಿಜ್, ಗ್ರೀನಫ್, ಅರ್ನೆಸ್ಟ್‌ವೀಕ್ಲಿ, ಪಿಫರ್ ಬ್ರೌನ್ ಈ ದಿಕ್ಕಿನಲ್ಲಿ ತಮ್ಮ ಶ್ರಮವನ್ನು ಸಾಕಷ್ಟು ಹರಿಸಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಈ 'ಪದಾರ್ಥಚಿಂತಾಮಣಿಯ ಅಧ್ಯಯನ' 'ವರ್ಡಲೋರ್' (worldlore ಪದಪರಂಪರೆ) ಎಂಬ ಹೆಸರಿನಲ್ಲಿ ಪತ್ಯೇಕ ಸ್ಥಾನವನ್ನೇ ಗಳಿಸಿವೆ.

ಭಾರತೀಯ ಭಾಷೆಯಲ್ಲಿ ಈ ಕೆಲಸ ವಿರಳವಾಗಿ ನಡೆದಿದೆ. ಇಂಗ್ಲೀಷ್ ಭಾಷೆಯಲ್ಲಿ ಅಧ್ಯಯನಕ್ಕೆ ಅಗತ್ಯವಾದ ಸಾಮಗ್ರಿ ಸಿದ್ದಗೊಂಡಿದೆ. ಬಗೆ ಬಗೆಯ ನಿಘಂಟುಗಳು ಅಲ್ಲಿ ಸಿದ್ಧವಾಗಿದೆ. ಪದ ಭಾಷೆಯ ಬಗೆಗೆ, ಕಾಲಕಾಲಕ್ಕೆ ಬದಲಾದ ಸಂದರ್ಭಗಳಿಗೆ ಆಧಾರಗಳು ಸುಲಭವಾಗಿ ದೊರೆಯುತ್ತದೆ. ಭಾರತೀಯ ಭಾಷೆಗೆ ಬಂದಾಗ ಸಂಪೂರ್ಣವಾಗಿ ವಿರುದ್ಧ ಪರಿಸ್ಥಿತಿ. ಇಲ್ಲಿ ಅಧಿಕೃತವಾದ ನಿಘಂಟುಗಳು ಲಭ್ಯವಿಲ್ಲ. ಈ ರೀತಿಯ ಪರಿಸ್ಥಿತಿಯೊಳಗೆ ಯಾವ ನಿಘಂಟುಗಳನ್ನು ನೀರಿಕ್ಷಿಸಲು ಸಾಧ್ಯವಿಲ್ಲ. ಪ್ರಾಚೀನ ಗ್ರಂಥಗಳು ಎಲ್ಲವೂ ಅಚ್ಚಾಗಿಲ್ಲ. ಉಪಭಾಷಾ ಸಮೀಕ್ಷೆಗಳು ನಡೆಯದೆ ಆಡುನುಡಿಯಲ್ಲಿ ಉಳಿದುಹೋಗಿರುವ, ಕಳೆದುಹೋಗಿರುವ, ಅಳಿದುಹೋಗಿರುವ

ಪದಸಂಪತ್ತು ಬಳಕೆಗೆ ಸಿಕ್ಕುತ್ತಿಲ್ಲ. ಬಹುಬಾಷಾ ವಿದ್ವಾಂಸರೂ ಅಷ್ಟಾಗಿ ಇಲ್ಲ. ಈ ಎಲ್ಲ ಕಾರಣಗಳಿಂದ ನಮ್ಮಲ್ಲಿ 'ವರ್ಡ್‌ಲೋರ್' ಅಧ್ಯಯನ ನಡೆದಿಲ್ಲ. ಇದೊಂದು ಕೃಷಿಯೇ ಆಗದ ಭೂಮಿ. ಇದಕ್ಕೆ ಪ್ರತಿಯೊಬ್ಬನು ತನ್ನದೇ ಆದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕು.

ತಮಿಳು ಭಾಷೆಗೆ ಸಂಬಂಧಿಸಿದಂತೆ ಡಾ.ಆರ್.ಪಿ. ಸೇತುಪಿಳ್ಳೆಯವರು ಈ ರೀತಿಯಾಗಿ ಹೇಳುತ್ತಾರೆ.[*೧] 'ತಮಿಳಿನಲ್ಲಿ ಯಾವುದೇ ಅಧ್ಯಯನ ಸಾಮಾಗ್ರಿಗಳಿಲ್ಲ. ಯಾರೊಬ್ಬರು ಇಲ್ಲಿ ಪದಗಳ ಬಗ್ಗೆ ಅಧ್ಯಯನ ನಡೆಸಿಲ್ಲವೆನ್ನುತ್ತಾರೆ'. ಕನ್ನಡ ಭಾಷೆಯಲ್ಲು ಪದಪರಂಪರೆಯ ಕೆಲಸವೇನು ನಡೆದಿಲ್ಲ. ತಮಗೊಡ್ಡಿದ ಕೆಲವು ಪದಗಳ ಇತಿಹಾಸವನ್ನು ಕೆದಕಲು ಅದರ ನಿಜರೂಪವನ್ನು ತಿಳಿಯಲು ಡಿ.ಯಲ್.ನರಸಿಂಹಚಾರ್, ತೀನಂಶ್ರೀ ಕಂಠಯ್ಯ, ಸೇಡಿಯಾಪು ಕೃಷ್ಣಭಟ್ಟರಂಥ ವಿದ್ವಾಂಸರು ಬಿಡಿಲೇಖನಗಳನ್ನು ಬರೆದರು. ನರಸಿಂಹಚಾರ್ಯರು 'ಶಬ್ದವಿಹಾರ' ಎಂಬ ಒಂದು ಚಿಕ್ಕ ಪುಸ್ತಕವನ್ನು (೧೯೫೬) ಪ್ರಕಟಿಸಿದ್ದರು.

ತುಳುಮನೆಮಾತಿನ ಪಾ.ವೆಂ. ಮನೆಯಲ್ಲಿ ತಂದೆಯವರ ಒಡನಾಟದಿಂದ ಮತ್ತು ಉಡುಪಿಯ ಧಾರ್ಮಿಕ ಪರಿಸರದಿಂದಾಗಿ ಸಂಸ್ಕೃತವನ್ನು ಸಹಜವಾಗಿ ಅಳವಡಿಸಿಕೊಂಡರು. ಕನ್ನಡ ಹಾಗೂ ಇಂಗ್ಲೀಷ್ ಅವರ ಶಾಲಾ ಕಲಿಕೆಯ ಭಾಷೆಗಳು ಹಾಗೂ ಹರೆಯದ ಹೊತ್ತಿಗೆ ಮದ್ರಾಸಿನಲ್ಲಿ ಇರಬೇಕಾದಾಗ ತಮಿಳನ್ನವರು ತಮ್ಮದನ್ನಾಗಿ ಮಾಡಿಕೊಂಡರು. ಆಕಸ್ಮಿಕವಾಗಿ ತಮ್ಮ ಒಲವಿನಿಂದ ಬಂಗಾಳಿಭಾಷೆಯನ್ನು ಕಲಿತರು. ಹೈಸ್ಕೂಲ್‌ನಲ್ಲಿ ಇದ್ದಾಗ ಹಿಂದೀ ಪರೀಕ್ಷೆ ಪಾಸಾದರು. ಹೀಗೆ ಅವರಿಗೆ ಮಲೆಯಾಳಂ ತೆಲುಗು, ಕೊಂಕಣಿ, ಮರಾಠಿ ಭಾಷೆಗಳು ಕ್ರಮೇಣ ಕರಗತವಾಗಿದ್ದವು. ಈ ಬಹುಭಾಷಾ ಜ್ಞಾನದ ಫಲವಾಗಿ **ಕಸ್ತೂರಿ ಡೈಜೆಸ್ಟ್** ವೈವಿಧ್ಯಮಯವಾಗಿ ಕಳೆಗಟ್ಟಿತು.

ಪಾ.ವೆಂ. ಸಹಜವಾಗಿ ಭಾಷಾ ಪ್ರಾವಿಣ್ಯ ಹೊಂದಿದ್ದರಿಂದ ಪದಗಳ ಜಗತ್ತಿನಲ್ಲಿ ವಿಹರಿಸುವ ವೃತ್ತಿಯನ್ನು ಬೆಳೆಸಿಕೊಂಡರು. ಆಚಾರ್ಯರಿಗಿದ್ದ ಆಸಕ್ತಿ ಕುತೂಹಲಗಳ ಸ್ವಭಾವದಿಂದಾಗಿ ಭಾಷಾಭ್ಯಾಸದ ಪ್ರವೃತ್ತಿ ಸಾಕಷ್ಟುಬೆಳೆದು ೧೯೧ರಲ್ಲಿ ಒಂದು ಪುಸ್ತಕ ರೂಪದಲ್ಲಿ ಪ್ರಕಟವಾಯಿತು. **ಪದಾರ್ಥಚಿಂತಾಮಣಿ** ಈ ಕೃತಿ ಪಾ.ವೆಂ. ಅವರ ಉಳಿದೆಲ್ಲ ಕೃತಿಗಳಿಗಿಂತ ಭಿನ್ನವೂ, ವಿಶೇಷವೂ ಆಗಿದೆ. ಈ ಕೃತಿ ಪ್ರಕಟವಾಗುವ ಮುಂಚೆ ಇಲ್ಲಿ ನಮೂದಾಗಿರುವ ಪದ-ಪದಾರ್ಥಗಳು ಕಸ್ತೂರಿ ಪತ್ರಿಕೆಯ ನೂರಾ ಐವತ್ತಾರು ಸಂಚಿಕೆಗಳಲ್ಲಿ **ಪದಾರ್ಥಚಿಂತಾಮಣಿ** ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದ್ದವು. ಅವು ಓದುಗರನ್ನು, ವಿಶೇಷವಾಗಿ ಭಾಷಾತಜ್ಞರನ್ನು ಆಕರ್ಷಿಸಿದ ಅಂಕಣ ಬರಹಗಳು. **ಪದಾರ್ಥಚಿಂತಾಮಣಿ** ಕೃತಿಗೆ ಮುನ್ನುಡಿನವನ್ನು ಬರೆದ ಭಾಷಾವಿಜ್ಞಾನಿ ಹಾ.ಮಾ.ನಾಯಕರು ಆಚಾರ್ಯರ ಈ ಅಧ್ಯಯನಕ್ಕೆ **ಪದಪರಂಪರೆ** (wordlore) ಎಂದು ನಾಮಕರಣ ಮಾಡಿದ್ದಾರೆ. ಆಚಾರ್ಯರ ಈ ಅಧ್ಯಯನ ಕನ್ನಡದ

ಮೊಟ್ಟಮೊದಲನೆಯ ಜನಪ್ರಿಯ ಪ್ರಯತ್ನ. ಈ ಮುಂಚೆ ಡಿ.ಯಲ್.ಎನ್. (ಶಬ್ದ ವಿಹಾರ) ತೀ.ನಂ.ಶ್ರೀ, ಸೇಡಿಯಾಪು ಕೃಷ್ಣಭಟ್ಟ ಶಂಬಾ ಜೋಶಿ, ಎಂ.ಎಂ. ಕಲ್ಬುರ್ಗಿ, ಎಂ ಚಿದಾನಂದ ಮೂರ್ತಿ, ವೆಂಕಟಾಚಲ ಶಾಸ್ತ್ರಿ, ಕೆ. ರಘುಪತಿ ಭಟ್ಟ ಮುಂತಾದವರು ಹಲವು ಹಳೆಗನ್ನಡ ಪದಗಳ ಕುರಿತು ನಾಮವಾಚಿಕೆಗಳ ಕುರಿತು ಅಧ್ಯಯನ ಮಾಡಿದ್ದುಂಟು. ಆಚಾರ್ಯರು ಇವರೆಲ್ಲರಿಗಿಂತ ತುಸು ಮುಂದೆ ಹೋಗಿ ಸುಮಾರು ಎಂಟುನೂರು ಪದಗಳ ಚರಿತೆಯನ್ನು ಪರಿಶೀಲಿಸಿದ್ದಾರೆ. ಈ ಪದಚರಿತೆಯ ವಿಶೇಷವೆಂದರೆ ಹೊಸಗನ್ನಡದ ಸಾಹಿತ್ಯಕೃತಿಗಳಲ್ಲಿ, ಪತ್ರಿಕಾವರದಿ ಮತ್ತು ಲೇಖನಗಳಲ್ಲಿ ಪ್ರಯೋಗಗೊಂಡ ಅಚ್ಚಗನ್ನಡದ ಪದಗಳು, ಅನ್ಯದೇಶೀಯ ಪದಗಳು, ಸಂಸ್ಕೃತ–ಪ್ರಾಕೃತ ಪದಗಳು, ಕನ್ನಡೇತರ ದ್ರಾವಿಡ ಪದಗಳು ಹೇಗೆ ಬಳಕೆಯಾಗುತ್ತವೆ ಎಂಬುದರ ಪ್ರಾಮಾಣಿಕ ವಿವೇಚನೆ. ಈಗ ಬಳಕೆಯಲ್ಲಿರುವ ಪದಗಳ ಉಚ್ಚಾರಣಾ ರೀತಿ ಅಂದರೆ ಅದರ ಧ್ವನಿಸ್ವರೂಪ, ಲಿಪಿರೂಪಗಳ ರೀತಿಗಳನ್ನು ಆಚಾರ್ಯರು ಗಮನಿಸಿ ಪದಗಳ ಸಂದರ್ಭವನ್ನು ಉಲ್ಲೇಖಿಸಿ ಅವುಗಳ ಮೂಲರೂಪ ಏನಿರಬೇಕು, ಹೇಗಿರಬೇಕೆಂಬುದನ್ನು ಊಹಿಸುತ್ತಾರೆ. ಇದು ಪದ ನಿಷ್ಪತ್ತಿಯ (Etymology) ಕ್ರಮ. ನಮ್ಮಲ್ಲಿ ಪ್ರಾಚೀನಕಾಲಕ್ಕೆ **ಯಾಸ್ಕ** ಎಂಬ ಭಾಷಾ ತಜ್ಞ ನಿರುಕ್ತಿ (Etymology) ಪದ್ಧತಿಯನ್ನು ಆರಂಭಿಸಿ ಪ್ರತಿಪದದ ಅಥವಾ ಉಕ್ತಿಯ ಮೂಲರೂಪವನ್ನು ಅಗೆದು ತೆಗೆಯುವ ಅಧ್ಯಯನವನ್ನು ಮಾಡಿದ್ದನು. ನಿರುಕ್ತ ಶಬ್ದವ್ಯುತ್ಪತ್ತಿ (Derivation) ಶಾಸ್ತ್ರವಾಗಿ ಬೆಳೆದು ಬಂದಿತು. ಆಚಾರ್ಯರು ಈ ಶಾಸ್ತ್ರವನ್ನು ತಮ್ಮ ಗಮನದಲ್ಲಿಟ್ಟುಕೊಂಡು, ಮುಂದುವರಿದು ಇಂದಿನ ಭಾಷಾಸ್ವರೂಪದ ನೆಲೆಯ ಮೇಲೆ ನಿಂತು ಪದನಿಷ್ಪತ್ತಿಯನ್ನು ಮಾಡುತ್ತಾರೆ. ಈ ಕೆಲಸಕ್ಕೆ ಬೇಕಾದ ಇತಿಹಾಸಜ್ಞಾನ, ವ್ಯವಹಾರ ಜ್ಞಾನ, ಕನ್ನಡ ಜಾಯಮಾನದ ಪರಿಚಯ ಆಚಾರ್ಯರಿಗೆ ಯಥೇಚ್ಛವಾಗಿದೆ. **ನಾನೇನೂ ಭಾಷಾಪಂಡಿತನಲ್ಲ** ಎಂದು ಆಚಾರ್ಯರು ವಿನಯದಿಂದ ಹೇಳಿಕೊಂಡಿದ್ದರೂ ಅವರ ಪದಪರಂಪರೆಯ ಜಾಡುಹಿಡಿಯುವ ರೀತಿಯಲ್ಲಿ ನಮಗೆ ಅವರ ವಿದ್ವತ್ತಿನ ಹೇರಳ ಸುಳುಹುಗಳು ಗೋಚರಿಸುತ್ತವೆ. ಶಾಸ್ತ್ರೀಯವಾಗಿ ನಿರೂಪಿಸುವಾಗ ಪಾರಿಭಾಷಿಕ ಪದಬಳಕೆ ಅನಿವಾರ್ಯ ಆದರೆ ಆಚಾರ್ಯರು ಪಾರಿಭಾಷಿಕ ನಿರೂಪಣೆಗೆ ಹೊರತಾಗಿ ಜನಪ್ರಿಯ ಶೈಲಿಯ ಪ್ರತಿಯೊಂದು ಪದದ ಕತೆಯನ್ನು ಹೇಳುತ್ತಾರೆ. ಇಲ್ಲಿರುವ ಸ್ವಾರಸ್ಯವೇ ಅದು. ಸಾಮಾನ್ಯ ಭಾಷಾ ಪ್ರೇಮಿಗೂ ನುಡಿರಹಸ್ಯವನ್ನು ತಿಳಿಯಪಡಿಸುತ್ತ ಅವನಲ್ಲಿ ಭಾಷಾಶಕ್ತಿ ಹೆಚ್ಚುವಂತೆ ಮಾಡುವುದೇ **ಪದಾರ್ಥಚಿಂತಾಮಣಿ**ಯ ಉದ್ದೇಶ.

ಶಬ್ದವ್ಯುತ್ಪತ್ತಿಯ ಬಗೆ: ನಿರುಕ್ತವೆಂದರೆ ಶಬ್ದ ವ್ಯುತ್ಪತ್ತಿಯ ವಿಧಾನ ಇದು. ಶಬ್ದದ ಇತಿಹಾಸವನ್ನು ಶೋಧಿಸುವ ಕ್ರಮ. ಶಬ್ದದಲ್ಲಿಯ ಧ್ವನಿ ಮತ್ತು ಬಳಕೆಯಾಗುವ ಕ್ರಮ ಅಥವಾ ಮೂಲಾರ್ಥ ಬದಲಾಗುವ ರೀತಿಯನ್ನು ಕಂಡುಹಿಡುಯುವುದೇ ನಿಷ್ಪತ್ತಿ ವಿಧಾನ. ಶಬ್ದಗಳು ಕಾಲಾಂತರದಲ್ಲಿ, ದೇಶಾಂತರಗಳಲ್ಲಿ ಉಚ್ಚಾರಣೆ ಮತ್ತು ಅರ್ಥವನ್ನು

ಬದಲಿಸಿಕೊಳ್ಳುತ್ತಾ ಹೋಗುತ್ತದೆ. ಇದು ಮಾನವ ಸ್ವಭಾವ, ವ್ಯವಹಾರದ ನೀತಿ ಇವುಗಳಿಗೆ ಅನುಗುಣವಾಗಿ ಆಗುವ ಕ್ರಿಯೆಗಳು.

ಭಾಷೆ, ಧ್ವನಿ ಉಚ್ಛಾರಣೆ ಸ್ವರೂಪದಲ್ಲಿ ವ್ಯಕ್ತವಾಗುತ್ತದೆ (ಮೌಖಿಕ) ಮತ್ತು ಲಿಪಿರೂಪದಿಂದ ಕಣ್ಣಿಗೆ ಕಂಡು (ಚಾಕ್ಷುಷ) ಓದಲಾಗುತ್ತದೆ ಅಥವಾ ಬರೆಯಲಾಗುತ್ತದೆ. ಭಾಷೆಯ ಸ್ವಭಾವ ಸಂಚಾರದ್ದು ಅದು ಬಾಯಿಯಿಂದ ಕಿವಿಗೆ, ಕಿವಿಯಿಂದ ಮತ್ತೊಂದು ಬಾಯಿಗೆ ಅಥವಾ ಬರಹಗಳಿಗೆ ಸಂಚಾರ ಮಾಡುತ್ತಾ ಕಾಲದೇಶಗಳನ್ನು ಧಾಟಿ ಬೆಳೆಯುತ್ತಾ ಹೋಗುತ್ತದೆ. ಶಬ್ದಗಳು ಒಂದು ಅರ್ಥದಿಂದ ಬೇರೆ ಬೇರೆ ಸಂದರ್ಭಗಳಿಗೆ, ಬೇರೊಂದು ಅರ್ಥದಿಂದ ಬದಲಾಗಿ ಸಂಚಾರ ಮುಂದುವರೆಸುತ್ತವೆ. ಹೀಗೆ ಬದಲಾದಾಗ ಮೂಲ ಧ್ವನಿರೂಪ ಮತ್ತು ಅರ್ಥ ಬದಲಾಗುತ್ತಾ ಅದರ ಸ್ವರೂಪ ಮೂಲದಿಂದ ಎಷ್ಟೋ ದೂರ ಸಾಗಿ ಬಿಡುತ್ತದೆ.

ಶಬ್ದಶಾಸ್ತ್ರಕಾರರು ವ್ಯಾಕರಣ, ನಿಘಂಟುಗಳ ಮೇಲೆ ಅವಲಂಬಿತರಾಗಿ ಭಾಷಾ-ಸ್ವರೂಪವನ್ನು ನಿರ್ಧಿಷ್ಟ ಪಡಿಸುವ ಮತ್ತು ಬದಲಾವಣೆಗಳನ್ನು ಗುರುತಿಸುವ ಕೆಲಸಗಳನ್ನು ಮಾಡುತ್ತಾರೆ. ಯಾಸ್ಕನ 'ನಿರುಕ್ತ' ಕೃತಿ ಇದನ್ನು ಆರಂಭಿಸಿ ಆಧುನಿಕಕಾಲದಲ್ಲಿ ಭಾಷಾ ಶಾಸ್ತ್ರಜ್ಞರು ಭಾಷೆಯ ವರ್ಣನೆಯನ್ನು ವಿಶ್ಲೇಷಣೆಯನ್ನು ಮಾಡುವಾಗ ಶಬ್ದವ್ಯುತ್ಪತ್ತಿ ಅಥವಾ ನಿರ್ವಚನ (Derivation) ಅನುಸರಿಸಿದ್ದು ಯಾಸ್ಕನ ನಿರುಕ್ತ ಪದ್ಧತಿಯ ಮೇಲೆ ಸಾಂಪ್ರದಾಯಿಕ ಶಬ್ದಕೋಶಗಳು ಬರಹದಲ್ಲಿ ಪ್ರಕಟವಾಗುವ ಶಬ್ದಗಳನ್ನು ಅಕಾರಾದಿ ಕ್ರಮದಲ್ಲಿ ಸಂಗ್ರಹಿಸುತ್ತಾರೆ.

ಶಬ್ದಕೋಶಗಳು ಒಂದೇ ಭಾಷೆಯ ಶಬ್ದಾರ್ಥಗಳ ಸಂಗ್ರಹವಾಗಿರುತ್ತದೆ. ಹಾಗಿದ್ದಾಗಲು ಪರಭಾಷೆಯ ಪ್ರಭಾವದಿಂದ ಪರಕೀಯ ಶಬ್ದಗಳು ಸೇರಿರುವುದುಂಟು. ಇದಕ್ಕೆ ಅಪವಾದವೆಂದರೆ ಸಂಸ್ಕೃತ ಭಾಷೆ, ಸಂಸ್ಕೃತ ಶಬ್ದಕೋಶಗಳು ಸ್ವಭಾಷೆಯ ಶಬ್ದಗಳಿಗೆ ಇರುವ ಸಮಾನಾರ್ಥಕಗಳನ್ನು ವಿವರಣೆಯನ್ನು ಕೊಡುತ್ತವೆ. ಇದು ಪ್ರಾಚೀನ, ಲ್ಯಾಟೀನ್, ಗ್ರೀಕ್ ಭಾಷೆಗಳಿಗೂ ಅನ್ವಯಿಸುವ ವಿಧಾನ. ಒಂದು ಶಬ್ದಕ್ಕಿರುವ ಅನೇಕ ಅರ್ಥಗಳನ್ನು ಕೊಡುವಂತೆ ಒಂದೇ ಅರ್ಥಕೊಡುವ ಅನೇಕ ಶಬ್ದಗಳು ಇವೆ ಎಂಬುದನ್ನು ಆರನೇ ಶತಮಾನದ ಅಮರಕೋಶ ಖಚಿತಪಡಿಸುತ್ತದೆ. ಸಂಸ್ಕೃತ ಭಾಷಾಭ್ಯಾಸಿಗಳಿಗೆ ಇದು ಪಠ್ಯವಾಗಿದೆ. ಕಾತ್ಯಾಯನ ಸಂಹಿತೆ ಇನ್ನೊಂದು 'ಪದಕೋಶ ಅಮರಸಿಂಹನ ನಾಗಲಿಂಗಾನು ಶಾಸನ'.

ಪಾ.ವೆಂ. ಆಚಾರ್ಯರು ಸ್ವಭಾವ ಸಹಜವಾಗಿ ಶಬ್ದಾರ್ಥ ಶೋಧನ ಪ್ರವೃತ್ತಿಯ ಲೇಖಕರು. ಅವರು ಸಂಸ್ಕೃತ ಪದಕೋಶಗಳ ಬಗ್ಗೆ ಬಾಲ್ಯದಲ್ಲಿಯೇ ಮನೆಯಲ್ಲಿ ಆಸ್ಥೆ ತಳೆದು ಸಾಂಪ್ರದಾಯಿಕವಾಗಿ 'ಅಮರಕೋಶ'ವನ್ನು ಆತ್ಮೀಕರಿಸಿಕೊಂಡವರು. ಅದರ ಮುಖ್ಯ ಪ್ರವೃತ್ತಿಯೆಂದರೆ ರೂಢಿ ಮತ್ತು ಸಂಪ್ರದಾಯದಿಂದ ಬಂದುದನ್ನು ಇತರ ಆಧುನಿಕ ಆಕರ-ಪರಿಕರಗಳೊಂದಿಗೆ ಬೆಳೆಸುವುದು. ಭಾಷಾ ವಿಜ್ಞಾನಿಗಳಾದ ಸುನೀತ್

ಕುಮಾರ್ ಚಟರ್ಜಿ, ಶಬ್ದ ಸಂಗ್ರಹಕಾರರಾದ ಮೋನಿಯರ್ ವಿಲಿಯವರ್ಸ್, ರೆವರೆಂಡ್, ಎಫ್.ಕಿಟಲ್, ದ್ರವಿಡಿಯನ್ ಭಾಷೆಗಳ ಜ್ಞಾತಿ ಶಬ್ದಗಳನ್ನು ಸಂಗ್ರಹಿಸಿಕೊಟ್ಟಿರುವ ಟಿ.ಬರೊ. ಎಂ.ಬಿ. ಎಮಿನೋ ದ್ರಾವಿಡ ಭಾಷೆಗಳ ಜ್ಞಾತಿ ಪದಕೋಶಗಳನ್ನು ಇವರ ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ಆಚಾರ್ಯರು ತಮ್ಮ ಶಬ್ದ ಸಂಚಾರ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಕಸ್ತೂರಿಯ ಆರಂಭದಿಂದಲೇ ಅವರು 'ನಿಮ್ಮ ಶಬ್ದ ಭಂಡಾರವನ್ನು ಬೆಳೆಸಿಕೊಳ್ಳಿ' ಎಂಬ ೨ ಪುಟಗಳ ಶಬ್ದಕೋಶವನ್ನು ಪ್ರಕಟಿಸಲಾರಂಭಿಸಿದರು. ೧೨ ಕನ್ನಡ ಪದಗಳನ್ನು ಉಲ್ಲೇಖಿಸಿ ಒಂದೊಂದಕ್ಕೂ ೪ ಹತ್ತಿರದ ಅರ್ಥಗಳನ್ನು ಕೊಟ್ಟು ಅವುಗಳಲ್ಲಿಯ ಒಂದು ಶಬ್ದಕ್ಕಿರುವ ಸರಿಯಾದ ಅರ್ಥವನ್ನು ಗುರುತಿಸುವಂತೆ ಓದುಗರಿಗೆ ಕೊಡುವುದು. ಇದು ಓದುಗನ ಶಬ್ದ ಗ್ರಹಣ ಶಕ್ತಿಯ ಪರೀಕ್ಷೆ ಅಥವಾ ಪದಗಳ ಆಟ. ತಮ್ಮ ಹವ್ಯಾಸವನ್ನು ಆಚಾರ್ಯರು ವ್ಯವಸ್ಥಿತ ರೀತಿಯಲ್ಲಿ ಬೆಳೆಸಿಕೊಂಡು ಕನ್ನಡದಲ್ಲಿ ಅಪರೂಪವಾದ ಶಬ್ದವ್ಯುತ್ಪತ್ತಿ ವಿಧಾನವನ್ನು ಅನುಸರಿಸಿ **ಪದಾರ್ಥಚಿಂತಾಮಣಿ** ಕೋಶವನ್ನು ರಚಿಸಿದರು (೧೯೯೧). ಈ ಕೃತಿಯಲ್ಲಿ ನಮೂದಾದ ಪದಾರ್ಥಗಳ ಸಂಖ್ಯೆ ೮೮ ನಂತರ ಎರಡನೇ ಆವೃತ್ತಿ ೧೯೯೮ರಲ್ಲಿ ಪ್ರಕಟವಾದಾಗ ೧೫೬ ಸಂಖ್ಯೆಯಲ್ಲಿ ನಮೂದಾಗಿದೆ. ಸುಮಾರು ೧೫ ವರ್ಷಗಳ ಕಾಲ ಪಾ.ವೆಂ. ಅವರು ಕಸ್ತೂರಿ ಮತ್ತು ಇತರ ಪತ್ರಿಕೆಗಳಲ್ಲಿ ಶಬ್ದೋತ್ಪತ್ತಿಯ ಲೇಖನಗಳನ್ನು ಬರೆಯುತ್ತಾ ಬಂದು ಸಾವಿರಕ್ಕೂ ಮಿಕ್ಕಿದ ಪದಾರ್ಥಗಳನ್ನು ಪರಿಚಯಿಸಿದ್ದಾರೆ. ಕಸ್ತೂರಿಯ ಸಂಚಿಕೆ ೧೯೭ (೧೯೭೩) ಸಂಚಿಕೆಯಲ್ಲಿ ಯಾರು ಈ ಪಾಟೀಲರು ಎಂಬ ನಾಲ್ಕು ಪುಟದ ಲೇಖನ 'ಶ್ರೀನಿವಾಸಪ್ಪ' ಎಂಬ ಲೇಖನ ನಾಮದಿಂದ ಪ್ರಕಟವಾಗಿದ್ದು, ಪಾ.ವೆಂ. ಅವರ ಶಬ್ದ ಜಿಜ್ಞಾಸೆಯ ಆರಂಭ ಅಲ್ಲಿಂದ ಆಗಿದೆ.

ಕರ್ನಾಟಕದ ಬಹುತೇಕ ಕಡೆಗಳಲ್ಲಿ ವ್ಯಕ್ತಿನಾಮಕ್ಕೆ ಅಂಟಿಕೊಂಡು ಅಡ್ಡ ಹೆಸರು ಬರೆಯಲಾಗುತ್ತದೆ. ಇವು ಈ ಅಡ್ಡ ಹೆಸರುಗಳು (sur name) ಕೊಡುವ ಅರ್ಥ ನಾನ ತೆರನಾಗಿದೆ. ನಾಮ ವಿಜ್ಞಾನ (onimasties) ನಾಮ ವಿಜ್ಞಾನದ ಪ್ರಕಾರ ಈ ಅಡ್ಡ ಹೆಸರುಗಳನ್ನು ಪರಿಶೀಲಿಸಿದಾಗ ಸ್ವಾರಸ್ಯಕರ ಅಂಶಗಳು ಹೊರಬರುತ್ತವೆ. ಪಾ.ವೆಂ. ನಾಮವಿಜ್ಞಾನದ ಜಾಡನ್ನು ಹಿಡಿದು 'ಪಾಟೀಲ್' ಎಂಬ ಅಡ್ಡ ಹೆಸರನ್ನು ವಿಶ್ಲೇಷಣೆಗೆ ಗುರಿಮಾಡಿ ತಮ್ಮ ತಿಳುವಳಿಕೆಯನ್ನು ವಿವರಿಸುತ್ತಾರೆ. ಈ ಲೇಖನವನ್ನು ಅವರು ಕಾದಂಬನಿ (ಹಿಂದಿ ಡೈಜಸ್ಟ್)ಯ ಆಧಾರದಿಂದ ಬರೆದಿದ್ದಾರೆ. 'ಪಾಟೀಲ್' ಎಂಬ ಅಡ್ಡ ಹೆಸರು ಮನೆತನದ ಹೆಸರೂ ಹೌದು. ಕೆಲವು ಕಡೆ ಕನ್ನಡ ಮರಾಠಗಳಲ್ಲಿಯ ಪಾಟೀಲ್ ಗುಜರಾತ್‌ದಲ್ಲಿ ಪಟೇಲ ಆಗಿ ಬಳಕೆಯಲ್ಲಿದೆ. ಒಡಿಯಾದಲ್ಲಿ ಪಟನಾಯಕ (ಪಾಟ್‌ನಾಯಕ್) ಎಂದಿದೆ. ಈ ಪದದ ಮೂಲರೂಪವನ್ನು ಊಹಿಸುತ್ತಾ ಆಚಾರ್ಯರು ಹೇಳುವುದಿಷ್ಟು:

'ಪಟ್ಟಕೀಲ' ಎಂಬುದು ಮೂಲ ರೂಪ. ಉಜ್ಜಯಿನಿಯಲ್ಲಿ ದೊರೆತ ೨ ಸಾವಿರ ವರುಷದ ಹಿಂದಿನ ಶಾಸನದಲ್ಲಿ ಕಂಡಿದೆ. 'ಪಟ್ಟ' ಎಂಬುದು ಗ್ರಾಮಾಧಿಕಾರಿಗಿದ್ದ ಅಧಿಕಾರ. ಇತನನ್ನು ಗ್ರಾಮ ಮುಖಂಡ, ಗ್ರಾಮ ಪ್ರಮುಖ ಗ್ರಾಮಣಿ, ಗ್ರಾಮಿಕ ಎಂದು ಮೊದಲಾದ ಹೆಸರುಗಳಿಂದ ಗುರುತಿಸಲಾಗುತ್ತಿತ್ತು. ಕನ್ನಡದಲ್ಲಿ 'ಗೌಡ' ಎಂಬುದು ಈಗಲೂ ಪ್ರಚಲಿತವಿದೆ. ಈ ಗೌಡ ಪದದ ಮೂಲ ಗ್ರಾಮ ಮುಖಂಡ ಅಥವಾ ಗ್ರಾಮಕೂಟ. ಹಳೆಗನ್ನಡದಲ್ಲಿ ಗಾವೂಂಡ ಪದ ಬಂದಿದೆ. ಗ್ರಾಮ ಮುಖಂಡ ಆಡುಮಾತಿನಲ್ಲಿ ಗಾವುಂಡ ಎಂದಾಗಿ ಕ್ರಮೇಣ ಗಾವುಡ, ಗಾವಡ, ಗೌವುಡ, ಗೌಡ ಆಗಿದೆ. ಗೌಡ ಪದವಿಯೇ ಪಟ್ಟಕೀಲ ಆಗಿ ಪಟ್ಟಲಿಕವಾಗಿ ಮಾರ್ಪಟ್ಟು ಪಟೀಲ, ಪಾಟೀಲ ಆಗಿ ಬೆಳೆದಿದೆ. ಮದ್ಯಯುಗದಲ್ಲಿ ಪಟ್ಟಕೀಲ ಹೆಚ್ಚು ಬಳಕೆಯಲ್ಲಿತ್ತು. ಆಗಿನ ಶಿಲಾಶಾಸನ, ತಾಮ್ರಶಾಸನಗಳಲ್ಲಿ ಮುಖ್ಯವಾಗಿ ಮರಾಠಿ ನುಡಿಯಲ್ಲಿ ಪಟಕೀಲ, ಪಾಟಿಲ, ಪಾಟ್ಕಿಲು ಮುಂತಾದ ರೂಪಗಳನ್ನು ತಾಳುತ್ತಾ ಬಂದಿರುವುದು ಕಾಣುತ್ತದೆ. ಸಂಸ್ಕೃತದ ಪಟ್ಟಕೀಲ ಪ್ರಾಕೃತದಲ್ಲಿ ಪಟಕೀಲ, ಪಟ್ಟಲ, ಪಟ್ಟ ಇಲ ರೂಪವನ್ನು ತಾಳುತ್ತಾ ಮರಾಠಿಯಲ್ಲಿ ಪಾಟೀಲವಾಗಿ ಕೊನೆಗೊಂಡಿದೆ. ಇದೊಂದು ರೀತಿಯ ನಿಷ್ಪತ್ತಿರೂಪವಾದರೆ ಶಂ.ಬಾ.ಜೋಶಿಯವರು ಪಾಕೃತ ಮತ್ತು ಮರಾಠಿ ಹಿನ್ನೆಲೆಗೆ ಹೊರತಾಗಿ ಸಂಸ್ಕೃತದ ಮೂಲಕ್ಕೆ ಹೋಗುವುದು ಸಮರ್ಪಕ ಎಂದೆನ್ನುತ್ತಾರೆ.

ಪಟ್ಟಣ ಪತ್ತಿನ ಸಂಸ್ಕೃತ ಪದಗಳು ನಗರ ಸೂಚಕ ಪದಗಳಾಗಿವೆ. ಇಲ್ಲಿ ಪಟ್ಟಿ ಎಂದರೆ ವಸತಿಪ್ರದೇಶ ಪಟ್ಟಿ. ದ್ರಾವಿಡ ಶಬ್ದವಾಗಿದ್ದು, ಪಶುಪಾಲಕರ ವಸತಿಯನ್ನು ಸೂಚಿಸುತ್ತದೆ. ಕನ್ನಡದಲ್ಲಿ ಹಟ್ಟಿ ಪದ ದನಕಾಯುವವನ ಸ್ಥಳ ಆಗಿದೆ. ಪಟ್ಟಿಇಲ ಎಂಬುದು ಪಟ್ಟಿಕೀಲ ಎಂಬ ಉಚ್ಚಾರದಲ್ಲಿ ದನಗಾಯಿಗಳ ಮುಖಂಡನ ಜನಸೂಚಕ ಪದವಾಗುತ್ತದೆ. ಪತಿ ಪತ್ತಿಜನ ಎಂಬ ಯಜುರ್ವೆದದ ಪದ ಗ್ರಾಮಾಂತರ ದನಗಾಯಿಗಳ ಸೂಚನೆಯಾಗಿದೆ. ಈ ಪದ ಪತ್ತಿಜನವೇ ಹಟ್ಟಿಕಾರರು ಕೃಷಿ ಮತ್ತು ಪಶುಪಾಲನೆ ಮಾಡುತ್ತಿದ್ದ ಹಟ್ಟಿ ಕಾರರು ತಮ್ಮ ಗ್ರಾಮದ ಮುಖಂಡರೇ ಆಗಿದ್ದರು. ಹೀಗೆ ಪಟ್ಟಕಾರ, ಪಟ್ಟಇಲ ಪದಗಳು ಗ್ರಾಮಮುಖಂಡರ ಅರ್ಥಾತ್ ಗೌಡರ ಸಮಾನಾರ್ಥಕ ಪದಗಳಾಗಿ ಪ್ರಯೋಗಗೊಂಡು ಪಟೀಲ್, ಪಾಟೀಲ್ ಆಗಿವೆ. ಮಹಾರಾಷ್ಟ್ರದ ಈ ಪ್ರಭಾವದಿಂದ ಕನ್ನಡಕ್ಕೆ ಪಾಟೀಲ್ ಪದ ಬಂದಿದೆ. ಹೀಗೆ ಪಾಟೀಲ್ ಎಂಬುದು ಗ್ರಾಮ ಮುಖಂಡರಿಗೆ ಅವನ ವೃತ್ತಿ ಸೂಚಕ ಪದವಾಗಿ ಬಂದಿದ್ದು, ಬ್ರಿಟೀಷರಕಾಲದಲ್ಲಿ ಪಾಟೀಲರು ವಂಶಪರಂಪರಗತವಾಗಿ ತಮ್ಮ ಮನೆತನದ ಅಡ್ಡ ಹೆಸರಾಗಿ ಬಳಸತೊಡಗಿದರು. ಈಗ ಅದು ವೃತ್ತಿ ಸೂಚಕ ಪದವಾಗಿಲ್ಲ. ಕೇವಲ ಮನೆತನದ ಹೆಸರುಮಾತ್ರ.

ಪಾ.ವೆಂ. ಅವರು 'ಶ್ರೀನಿವಾಸಪ್ಪ'ನಾಗಿ ಬರೆದ ಯಾರು ಈ ಪಾಟೀಲರು..? ಎಂಬ ಶೋಧನೆಯನ್ನು ಮಾಡುತ್ತಾ ನಾಮವಿಜ್ಞಾನದ ಅನ್ವಯಿಕ ಲೇಖನವನ್ನು ಬರೆಯಲಾರಂಬಿಸಿ ತಮ್ಮ **ಪದಾರ್ಥಚಿಂತಾಮಣಿ** ಅಧ್ಯಯನ ಸಾಹಸವನ್ನು

ಮುಂದುವರಿಸಿದರು. ಪಾ.ವೆಂ. ಅವರು **ಪದಾರ್ಥಚಿಂತಾಮಣಿ**ಗೆ ಬರೆದ ಎರಡು ಮಾತುಗಳಲ್ಲಿ ತಮ್ಮ ಪದನಿರುಕ್ತ ಅಥವಾ ಪದಪರಂಪರೆಯ ಅಭ್ಯಾಸಕ್ಕೆ ಇರುವ ಮಿತಿಗಳನ್ನು ಸ್ಪಷ್ಟಪಡಿಸಿದ್ದಾರೆ. ಮೊದಲನೆಯದಾಗಿ ಇದು ಶಾಸ್ತ್ರಿಯ ಹಿನ್ನೆಲೆಯ ಅಧ್ಯಯನವಾಗಿರದೆ. ಒಬ್ಬ ಪದಸ್ವಾರಸ್ಯದ ಕುತೂಹಲಿಗನಾಗಿ ಪದಗಳಿಗೂ ಅರ್ಥಗಳಿಗೂ ಇರುವ ಸಂಬಂಧವನ್ನು ಹಿಂಜಿನೋಡುವ ಹವ್ಯಾಸ ತಮ್ಮದೆಂದು ಹೇಳಿಕೊಂಡು ತಮ್ಮ ಮನೋಲಹರಿಯನ್ನು ಉತ್ತೇಜಿಸಿದ ಹಲವಾರು ಪದಗಳನ್ನು ಬೆಂಬತ್ತಿ ನಿಘಂಟು ಕೋಶ, ಇತಿಹಾಸ, ಲಕ್ಷಣ ಮುಂತಾದ ಗ್ರಂಥಗಳ ಸಹಾಯದಿಂದ ಪದಗಳ ಜಾತಕವನ್ನು ಸಾಮಗ್ರಿ ಸಹಿತ ಹುಡುಕಿದ್ದಾರೆ. ಪ್ರತಿಯೊಂದು ಪದದ ಮೂಲವನ್ನು ಹುಡುಕುತ್ತಾ ಅದರ ಮೂಲರೂಪ (ಧ್ವನಿ ಉಚ್ಚಾರಣೆಗೆ ಅನುಗುಣವಾದ ಲಿಪಿರೂಪ) ವನ್ನು ನಿರ್ಣಯಿಸುತ್ತಾರೆ. ಮೂಲರೂಪದಿಂದ ಒಂದು ಪದ ಇನ್ನೊಂದಕ್ಕೆ ರೂಪಾಂತರ, ಭಾಷಾಂತರ, ದೇಶಾಂತರಗೊಂಡು ತನ್ನ ಅರ್ಥಾಂತರಕ್ಕೆ ಕಾರಣವಾಗುತ್ತದೆ. ಈ ಅಂತರಗಳನ್ನು ಗುರುತಿಸುವಾಗ ಪಾ.ವೆಂ. ಅವರ ಬಹುಭಾಷಾ ಜ್ಞಾನ, ಸ್ಮೃತಿ, ತರ್ಕ ಮತ್ತು ವ್ಯವಹಾರಜ್ಞಾನ ಪರಸ್ಪರ ಸಹಕಾರದಿಂದ ವರ್ತಿಸುತ್ತದೆ. ಪಾ.ವೆಂ. ಅವರಿಗಿದ್ದ ಇತಿಹಾಸಜ್ಞಾನ ಭೂಗೋಳಜ್ಞಾನ, ಬೇರೆ ಬೇರೆ ಶಾಸ್ತ್ರಗಳ ಮಾನವೀಯ ನಡೆನುಡಿಗಳ ಮತ್ತು ಮುಖ್ಯವಾಗಿ ಮನೋವಿಜ್ಞಾನದ ಸಂಪರ್ಕ ನೆರವಿಗೆ ಬರುತ್ತದೆ. ಹೊಸ ಗನ್ನಡದಲ್ಲಿ ಪದಪರಂಪರೆಯ ಅಭ್ಯಾಸ ಮಾಡುತ್ತಾ ಬಂದ ಶಂ.ಬಾ.ಜೋಶಿ, ಸೇಡಿಯಾಪು ಕೃಷ್ಣ ಭಟ್ಟ, ಡಿ.ಎಲ್. ನರಸಿಂಹಚಾರ್, ಆರ್.ವಿ. ಜಾಗೀರ್‌ದಾರ್, ಶಂಕರ ಕೆದಿಲಾಯ, ಟಿ.ವಿ. ವೆಂಕಟಚಲಶಾಸ್ತ್ರಿ, ಎಂ. ಎಂ. ಕಲ್ಬುರ್ಗಿ, ಹಾಮಾನಾಯಕ, ಯು.ಪಿ. ಉಪಾಧ್ಯಾಯ, ಹಂ.ಪಾ.ನಾ, ಚಿದಾನಂದಮೂರ್ತಿ, ಗೋವಿಂದ ಪೈ, ಟಿ.ಬರೊ, ಎಮಿನೊ, ಗೌರೀಶ್ ಕಾಯ್ಕಿಣಿ, ಬನ್ನಂಜೆ ಗೋವಿಂದಾಚಾರ್ಯ ಇವರೆಲ್ಲ ಪದನಿರುಕ್ತಿ ಪದ್ಧತಿಗಳನ್ನು ತಮ್ಮ ಗಮನದಲ್ಲಿಟ್ಟುಕೊಂಡಿದ್ದಾರೆ. ಇದೆಲ್ಲಕ್ಕೂ ಮುಖ್ಯವಾಗಿ ಪಾ.ವೆಂ. ಅವರ ಜಿಜ್ಞಾಸೆ ಪ್ರವೃತ್ತಿ ಪ್ರತಿ ಪದದ ಇಂದಿನ ಅರ್ಥದ ಹುಡುಕಾಟಕ್ಕೆ ಬೆನ್ನಲುಬಾಗಿದೆ.

ಪಾ.ವೆಂ. ಅವರ ಪದ ನಿರ್ವಚನಕ್ಕೆ ಯಾವುದೇ ಒಂದು ನಿರ್ಧಿಷ್ಟ ಪದ್ಧತಿ ಅಥವಾ ವಿಧಾನವಿಲ್ಲ. ತಮಗೆ ಹೊಳೆದ ಅಥವಾ ಗಮನಕ್ಕೆ ಬಂದು ಕಾಡಿಸಿದ ಪದ–ಅರ್ಥದ ಬಗ್ಗೆ ಅವರು ಭಾಷಿಕ ನೆಲೆಯನ್ನು ಮೊದಲು ಅವಲಂಬಿಸಿ ಸಮಾನಾರ್ಥಕ ಪದಗಳ ಪಟ್ಟಿ ಮಾಡುತ್ತಾರೆ. ಆಅರ್ಥಗಳಿಗೆ ಬೇರೆ ಬೇರೆ ಭಾಷೆಗಳಲ್ಲಿ ಇರುವ ಪದಗಳನ್ನು ಹುಡುಕುತ್ತಾರೆ. ರೂಪಾಂತರಗೊಂಡ ಪದ ಯಾವ ಸಂದರ್ಭಕ್ಕೆ ತನ್ನನ್ನು ಕೊಟ್ಟುಕೊಂಡಿದೆ ಎಂಬುದನ್ನು ಗುರುತಿಸುತ್ತಾರೆ. ಪದಗಳ ವಿನಿಮಯದಲ್ಲಿ ಉಂಟಾಗುವ ಸ್ವಾರಸ್ಯವನ್ನು ಅರ್ಥದ ವಿಸ್ತರಣೆಯನ್ನು ಗಮನಿಸುತ್ತಾರೆ. ಪದಗಳ ಸಂಚಾರದಲ್ಲಿ ಕಾಣಿಸುವ ಮಾನವ ಪ್ರವೃತ್ತಿಗಳನ್ನು ಸ್ವಾರಸ್ಯಕರ ಅಂಶಗಳನ್ನು ಗಮನಿಸುತ್ತಾರೆ. ಒಂದು ಪದ ಅದೇ ಭಾಷೆಯಲ್ಲಿ ಬೇರೆ ಸಂದರ್ಭಕ್ಕೆ ಚಲಿಸಿ ಪಡೆಯುವ ಹೊಸ ಅರ್ಥವನ್ನು ಹೊಳೆಯಿಸುತ್ತಾರೆ.

ಹೀಗೆ ಭಾಷಾ ಪ್ರವೃತ್ತಿಯನ್ನು ವಿಶ್ಲೇಶಿಸುವುದು. ಪಾ.ವೆಂ. ಅದರ ಪದಪರಂಪರೆಯ ಮಾರ್ಗ ಇವರಿಗೆ ತುಳು, ಕೊಂಕಣಿ, ಮರಾಠಿ, ತೆಲುಗು, ತಮಿಳು, ಭಾಷೆಗಳ ಸಂಪರ್ಕವಿದ್ದುದರಿಂದ ಕನ್ನಡ ಪದಗಳಿಗೆ ಒದಗಿಬಂದ ರೂಪ ಮತ್ತು ಅರ್ಥಗಳನ್ನು ಬಲು ಸುಲಭವಾಗಿ ಗುರುತಿಸುತ್ತಾರೆ. ಇವೆಲ್ಲವು ಕನ್ನಡದ ನೆರೆಹೊರೆಯ ಭಾಷೆಗಳೆಂಬುದು ಗಮನಾರ್ಹ. ಇಂಗ್ಲೀಷ್ ಮೂಲಕ ಪಾ.ವೆಂ. ಅವರಿಗೆ ಜಾಗತಿಕ ಭಾಷೆಗಳ (ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಪೋರ್ಚುಗೀಸ್) ಪದಗಳ ಸಂಪರ್ಕವು ಇದ್ದುದು ಸ್ಪಷ್ಟ. ಕನ್ನಡದ ಆಡುನುಡಿ ರೂಪ ಗ್ರಂಥ ರೂಪ ಹಳಗನ್ನಡ, ನಡುಗನ್ನಡ ರೂಪಗಳು ಇವರ ಸೂಕ್ಷ್ಮ ಗಮನದಲ್ಲಿ ಇದ್ದೆ ಇದೆ. ಕನ್ನಡದ ಮೇಲೆ ಹಿಂದಿನಿಂದಲೂ ಇರುವ ಸಂಸ್ಕೃತದ ಪ್ರಭಾವ ಮತ್ತು ಆನಂತರದಲ್ಲಿ ಉಂಟಾದ ಇಂಗ್ಲೀಷ್, ಪೋರ್ಚುಗೀಸ್ ಪ್ರಭಾವ ಪಾ.ವೆಂ. ಅವರ ಗಮನದಲ್ಲಿ ಸದಾ ಇದ್ದೆ ಇದೆ. ಇದರ ಜೊತೆಗೆ ಕನ್ನಡ ಆಡುನುಡಿಸಿರುವ ಪ್ರಾದೇಶಿಕ ವೈವಿಧ್ಯಗಳ ತಿಳುವಳಿಕೆಯೂ ಇದೆ. ಇದರ ಒಟ್ಟು ಫಲಿತಾಂಶವೆಂದರೆ ಪದಪರಂಪರೆಯನ್ನು ವಿಶ್ಲೇಷಿಸುವಾಗ ಪಾ.ವೆಂ. ಅವರಿಗೆ ಅನೇಕ ಅರ್ಥಸಾಧ್ಯತೆಗಳು ಗೋಚರಿಸುವುದು.

'ಕಥೆ' ಎಂಬ ಪದದ ರೂಪ ಮತ್ತು ಅರ್ಥಗಳನ್ನು ವಿವೇಚಿಸುವ ೧೨೦ನೇಯ (ಪು. ೨೪೧) ನಮೂದನ್ನು ಇಲ್ಲಿ ವಿಶ್ಲೇಷಿಸಬಹುದು. ಮೊದಲಿಗೆ ಕಥೆ ಪದದ ಮೂಲವನ್ನು 'ಹೇಳಿಕೆ' ಎಂದು ವಿವರಿಸಿ ಕಥಾ ಎಂಬುದರ ಮೂಲ ಅರ್ಥ ಸಂಸ್ಕೃತದಲ್ಲಿ 'ಹೇಳಿಕೆ' ಎಂದು ಸೂಚಿಸಿ ಅದು ಕನ್ನಡದ 'ಕಥೆ' ಆದಾಗ ವಿಶೇಷವಾಗಿ ನಡೆದದ್ದನ್ನು ಇನ್ನೊಬ್ಬರಿಗೆ ವಿವರವಾಗಿ ಹೇಳುವುದು ಎಂದು ಅರ್ಥವನ್ನು ಕೊಡುತ್ತದೆ. ಜೊತೆಗೆ ಸಾಹಿತ್ಯದ ಒಂದು ಪ್ರಕಾರವಾಗಿ (short story) ಗದ್ಯ ಕೃತಿಯಾಗಿ ಅದಕ್ಕೆ ಅರ್ಥವಿಸ್ತರಣೆ ಇದೆ. ಮೂಲತಃ ಇಂಗ್ಲೀಷ್‌ನ Tale ಎಂಬುದು Tell (=ಹೇಳು) ಪದದಿಂದ ಹುಟ್ಟಿದ್ದನ್ನು ಸೂಚಿಸುತ್ತಾರೆ. ಇದರ ನಂತರ ಪಾ.ವೆಂ. ಅವರು ಕಥೆಯ ಬೇರೆ ಬೇರೆ ಪ್ರಯೋಗಗಳನ್ನು ನಮೂದಿಸಿ ಅದು ಪಡೆಯುವ ವಿವಿಧ ಕಲ್ಪನೆಗಳಿಗೂ ಆ ಕಲ್ಪನೆಗಳು ಸೂಚಿಸುವ ಬೇರೆ ಬೇರೆ ಪದ ನಿರ್ಮಾಣಕ್ಕೂ ಒಯ್ಯುತ್ತಾರೆ. ಹೀಗೆ ವಾಚ್ಯಾರ್ಥವನ್ನು ಕೊಡುವ ಒಂದು ಭಾಷೆಯ ಪದ ತನ್ನ ಕಲ್ಪನೆಯನ್ನು ಮತ್ತೊಂದು ಭಾಷೆಗೆ ಚಲಿಸಿದಾಗ ಲಕ್ಷ್ಯಾರ್ಥದ ವ್ಯಾಪ್ತಿಯನ್ನು ಪಡೆಯುತ್ತದೆ. ಅದೇ ಪ್ರಕಾರ ಚರಿತ್ರಾ, ಇತಿಹಾಸ, ಚರಿತ್ರೆ, ಐತಿಹ್ಯ, ವದಂತಿ, ಕಿಂ ವದಂತಿ ಪದಗಳ ಸಂಬಂಧ ಭಿನ್ನತೆಗಳಕಥೆಯನ್ನು ವಿಸ್ತರಿಸುತ್ತಾರೆ. ಪದದ ಅರ್ಥ ಒಂದೇ ಮಟ್ಟದಲ್ಲಿ ಇರುವುದಿಲ್ಲ. ಪದ ಬಳಸುವವನ ಇಂಗಿತ (ಒಳ ಉದ್ದೇಶ) ಪದಬಳಕೆಯ ಸಂದರ್ಭ ಮತ್ತು ಕೇಳುವವನ ಗ್ರಹಣಶಕ್ತಿ ಇವುಗಳಿಗೆ ಅನುಗುಣವಾಗಿ ಪದ ಪ್ರಯೋಗ ರೂಪಾಂತರವನ್ನು ಅರ್ಥಾಂತರವನ್ನು ಪಡೆಯುತ್ತಾ ಬೆಳೆಯುತ್ತದೆ. ಕವಿಗಳಂತು ಶ್ಲೇಷಾರ್ಥ (pun) ಪ್ರವೀಣರು ಜನ ಸಾಮಾನ್ಯರು ಬಳಸುವ ನುಡಿಗುಟ್ಟುಗಳು (ldiom) ಮತ್ತು ಗಾದೆ ಮಾತುಗಳು ಪದಗಳ ಚರಿತ್ರೆಯನ್ನು ಬದಲಿಸುತ್ತವೆ ಬೆಳೆಸುತ್ತವೆ.

ನಿರುಕ್ತಿ ಅಥವಾ ನಿಷ್ಪತ್ತಿಜ್ಞಾನ ಪಾ.ವೆಂ. ಅವರಲ್ಲಿ ಪ್ರಕರವಾಗಿದೆ. ಅವರು ಯಾಸ್ಕನ 'ಶಬ್ದನಿರುಕ್ತ' ಸಂಸ್ಕೃತ ಪದ್ಧತಿಯನ್ನು ಪ್ರಭಾವಿತನಾಗಿ ತಮ್ಮ ಸತತ ಶೋಧನಾತ್ಮಕ ಪ್ರವೃತ್ತಿಯಿಂದ ಸಾಕಷ್ಟು ವೈವಿಧ್ಯಮಯವಾಗಿ ಬೆಳೆಸಿಕೊಂಡಿದ್ದಾರೆ. ಒಂದು ಪದದ ಮೂಲ ರೂಪ ಸಾಮಾಜಿಕ ಅಥವಾ ಧಾರ್ಮಿಕ ಸಂದರ್ಭದಲ್ಲಿ ರೂಪದಲ್ಲಿ ಆ ಭಾಷೆಯಲ್ಲಿ ನೆಲೆಗೊಂಡು ಕೊಡುವ ಅರ್ಥವಾಚ್ಯವಾಗಿದ್ದು, ಮತ್ತೊಂದು ಭಾಷೆಗೆ ಅದು ಹೋದಾಗ ಲಕ್ಷ್ಯಾರ್ಥಕ್ಕೂ ಧ್ವನ್ಯಾರ್ಥಕ್ಕೂ ಬೆಳೆಯುತ್ತದೆ. ಹೀಗೆ ಭಾಷೆ ಎಂಬುದು ಪರಭಾಷೆಗಳಿಂದ ಕೊಡುವ – ಪಡೆಯುವ ವ್ಯವಹಾರದಲ್ಲಿ ನಿರತವಾಗಿ ಜೀವಂತಿಕೆ ಪಡೆಯುತ್ತದೆ.

'ಶಬ್ದಗಳನ್ನು ನಾವು, ಅಭಿಪ್ರೇತವಾದ ಅರ್ಥವನ್ನು ನಮ್ಮೆದುರಿಗಿರುವವನ ಪ್ರತೀತಿಗೆ ತರಲು ಬಳಸುತ್ತೇವೆ' ಇದು ಸಾಮಾನ್ಯ ಸಂವಹನ ಕ್ರಿಯೆ. ಇದನ್ನು ಸಾಧಿಸಿದ ಮೇಲೆ ಅದರ ಬಗ್ಗೆ ಹೆಚ್ಚೇನನ್ನು ಹೇಳುವುದಿಲ್ಲ. ಆದರೆ ಆಲೋಚಿಸುವವರಿಗೆ (ಜಿಜ್ಞಾಸುಗಳಿಗೆ) ಶಬ್ದಗಳು ಕೇವಲ ಅರ್ಥ ವ್ಯವಂಜನೆಯನ್ನು ಮೀರಿದ ಸಂಗತಿಗಳನ್ನು ಉದ್ಬೋಧಿಸಬಲ್ಲದು. ಸಾಮಾನ್ಯವೆನಿಸುವ ಶಬ್ದಗಳೂ ಕೂಡ ತಮ್ಮ ಚರಿತ್ರೆಯ ಬಗ್ಗೆ ಆಶ್ಚರ್ಯಕರ ತಥ್ಯಗಳನ್ನು (ಹುರುಳನ್ನು) ತೋರಿಸುತ್ತವೆ ಎಂದು ವ್ಯಾಖ್ಯಾನಿಸುವ ಪಾ.ವೆಂ. (ನಮೂದು ೯೦ ಪು.೧೭೬) ಶರೀರದ ಅಂಗಾಂಗಳ ನಾಮ ಪದಗಳು ಯಾವುದೊಂದು ಭಾಷೆಯ ಅತ್ಯಂತ ಪುರಾತನ (ಮೂಲ ಪದಗಳು) ಪದಗಳು ಅವುಗಳಲ್ಲಿ ಯಾವುದೊಂದನ್ನು ಉದಾಹರಣೆಗೆ ತೆಗೆದುಕೊಂಡರೂ ಸ್ವಾರಸ್ಯಕರ ಅಂಶಗಳು ಗಮನಕ್ಕೆ ಬರುತ್ತವೆ ಎಂದು ವಿವರಿಸಿ ಸಂಸ್ಕೃತದ 'ಪಾದ'ಕ್ಕೆ ಸಮಾನಾರ್ಥಕ ಪದ ಚರಣ, ಅಂಘ್ರಿ, ಕ್ರಮ ಮುಂತಾದ ಶಬ್ದಗಳು ದ್ರಾವಿಡದ 'ಅಡಿ'ಪದಕ್ಕೆ ಸಮಾನವಾಗಿವೆ. ಈ ಪದಗಳು ಮಾನವನ ನೀತಿ–ರೀತಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೇಗೆ ಬಳಕೆಯಾಗುತ್ತದೆ. ಅವುಗಳಲ್ಲಿಯ ಸಾಮ್ಯವೈಶಮ್ಯಗಳು ಹೀಗೆ ಕಾಣಿಸುತ್ತವೆ. ಎಂಬುದಕ್ಕೆ ಸಂಸ್ಕೃತ, ಪರ್ಶಿಯನ್, ಬಂಗಾಲಿ, ಕನ್ನಡ ಪದಗಳನ್ನು ಉದಾಹರಿಸುತ್ತಾರೆ. ಸಾಮಾನ್ಯ ಪದವೊಂದು ಅಲಂಕಾರಿಕೆ ಪದವಾಗಿ ಮಾರ್ಪಟ್ಟಾಗ, ನುಡಿಗಟ್ಟಾಗಿ ಬಳಕೆಯಾದಾಗ ವ್ಯಕ್ತಪಡಿಸುವ ಮನೋವೃತ್ತಿ ಹೇಗೆ ಅರ್ಥವಿಸ್ತಾರವನ್ನು ಪಡೆಯುತ್ತದೆ ಎಂಬುದಕ್ಕೆ ಉದಾಹರಣೆ ಕೊಡುತ್ತಾರೆ. ೬೯ನೇಯ ನಮೂದು ಪುಟ ೧೩೨ 'ಸರ್' ಶಬ್ದದ ವಿವೇಚನೆಯನ್ನು ಸ್ವಾರಸ್ಯಕರವಾಗಿ ಮಾಡಿದೆ. Sir ಶಬ್ದ ವಿದ್ಯಾಥಿಗಳ ಬಾಯಲ್ಲಿ ಸದಾ ಇರುವ ಸಂಭೋಧನಾರ್ಥಕ ಪದ. ಅದು 'ಗುರು' ಅರ್ಥ ಪಡೆದಿದೆ. 'ಗುರು' ಎಂದರೆ ಹಿರಿಯ, ದೊಡ್ಡದು ಎಂದು ಆಗುತ್ತದೆ. ಸರ್ ಶಬ್ದದ ಮೂಲ serrior ಎಂದು ಲ್ಯಾಟಿನ್ ಮೂಲವಾಗಿದೆ. ಲ್ಯಾಟಿನ್‌ದಲ್ಲಿಯೂ ಅದು 'ಹಿರಿಯ' ಕನ್ನಡದಲ್ಲಿ ಸರ್ ನಾಮಪದ 'ಸ್ವಾಮಿ' ಎಂದಾಗಬಹುದು. ಉತ್ತರ ಕರ್ನಾಟಕದಲ್ಲಿ 'ರಾಯರ' ಎಂದು ಆಗತ್ತದೆ. ಪಾರ್ಸಿಯಲ್ಲಿ ಸರ್ ಅರ್ಥವನ್ನೆ ಕೊಡುವ 'ಸರ್‌ದಾರ್' ಪದವಿದೆ. ಆದರೆ 'ಸರ್‌ದಾರ್' ಗೆ ಇರುವ ಮೂಲ ಅರ್ಥವೇ ಬೇರೆ.

ಇಲ್ಲಿ ಸರ್ ಸಂಸ್ಕೃತದ 'ಶಿರಸ್ಪ್' ಅಂದರೆ ತಲೆ ಇದಕ್ಕೆ ತಗುಲಿದ ದಾರ್ ಎಂದರೆ ಉಳ್ಳವ ಎಂಬ ಪ್ರತ್ಯಯ. ಹೀಗೆ ಸರದಾರ್ ಒಂದು ಸೈನ್ಯದ ಹಿರಿಯ ಎಂಬ ಬಾವ ಕೊಡುತ್ತದೆ. ಇದನ್ನೇ ಅನುಸರಿಸಿ ಕನ್ನಡದಲ್ಲಿ 'ಸರಕಾರ್' ಪದ ರೂಢಿಯಲ್ಲಿದೆ. ಇಲ್ಲಿ ಪಾ.ವೆಂ. ಅವರು ಹಿರಿಯ ಅಥವಾ ಮುಂದಾಳು ಅರ್ಥಕೊಡುವ ಬೇರೆ ಬೇರೆ ಭಾಷೆಯ ಪದಗಳನ್ನು ಪ್ರಸ್ತುತಪಡಿಸುತ್ತಾರೆ.

೧. ತಲಯುವನ್ (ತಮಿಳು) ೨. ತಲೆಯಾಳು (ಕನ್ನಡ) – ಬಿಯಂಶ್ರೀ
೩. ಮುಂದಾಳು (ಕನ್ನಡ) ೪. ನಾಯಕ (ಸಂಸ್ಕೃತ)
೫. ಪುಡಾರಿ (ಮರಾಠಿ) ೬. ಪುರೋಹಿತ (ಸಂಸ್ಕೃತ) ಇತ್ಯಾದಿ.

ಇಲ್ಲಿ ಮರಾಠೆ 'ಪುಢಾರಿ' ಬಗ್ಗೆ ಅವರು ಕೊಡುವ ಗಮನ ಹೀಗಿದೆ. ರಾಜಕೀಯದಲ್ಲಿ 'ಪುಢಾರಿ' ಎಂಬುದು ಕನ್ನಡದ ಪ್ರಕಾರ ಅವಹೇಳನದ ಅರ್ಥಕೊಡುತ್ತವೆ. ನಮ್ಮಲ್ಲಿ ಉಪದ್ವ್ಯಾಪಿಯಾದ ರಾಜಕಾರಣಿಗೆ 'ಪುಢಾರಿ' ಎಂದು ಬಿಡುತ್ತೇವೆ. ಆದರೆ ಮೂಲತಃ ಮರಾಠೆಯಲ್ಲಿ 'ಪುಢೆ' ಎಂದರೆ ಜನಗಳ ಮುಂದೆ ಇರುವವ 'ಪುಢಾರಿ' – ಹೀಗೆ ಒಂದು ಭಾಷೆಯಲ್ಲಿ ಅರ್ಥಗೌರವವುಳ್ಳ ಪದ ಮತ್ತೊಂದು ಭಾಷೆಗೆ ಹೋದಾಗ ಅಪಮೌಲ್ಯಗೊಳ್ಳುವ ಒಂದು ಪ್ರವೃತ್ತಿ ಇದ್ದೇ ಇದೆ. ಉರ್ದುಭಾಷೆಯ 'ಸಾಹೇಬ್ ಬೇರೆ ಬೇರೆ ಭಾಷೆಗಳಿಗೆ ಹೋದಾಗ ತನ್ನ ಮೂಲಾರ್ಥಕ್ಕೆ ಭಿನ್ನವಾಗಿ ಬಳಕೆಯಾಗುವುದನ್ನು ಉದಾಹರಿಸುತ್ತಾರೆ. ಕನ್ನಡದ 'ಮಹಾರಾಯ', 'ಮಹಾರಾಜನ್' ಸಂಸ್ಕೃತದ ತದ್ಭವ ಇದನ್ನು ಸಾಮಾನ್ಯೀಕರಿಸಿ 'ಮಹಾರಾಯರ', 'ಮಹರಾಯ', 'ಮಾರಾಯ' ಎಂದು ಹಗುರಗೊಳಿಸಿ ಉಪಯೋಗಿಸಲಾಗುತ್ತದೆ. ಸಲುಗೆಯ ಮಾತಾಗಿ 'ಮಾರಾಯ' ಕೊಡುವ ಅರ್ಥ ಅರ್ಥದ ಬೆಲೆ ವಿವರಿಸಬೇಕಾಗಿಲ್ಲ.

ರೂಪಾಯಿ (ನಮೂದು ೪೧) ರೂಪಾಯಿ ಎಂಬ ಬೆಳ್ಳಿ ನಾಣ್ಯವನ್ನು ಮೊದಲು ಟಂಕ ಹೊಡೆದು ಬಳಕೆಗೆ ತಂದವನು ಶೇರ್‌ಶಾಹ್ (೧೫೪೨) ನಂತರ ಇದು ಪೂರ್ವದೇಶಗಳಲ್ಲಿ ಬಳಕೆಗೆ ಬಂದವು. ಇಂದು ಸಿಂಹಳ, ಪಾಕಿಸ್ತಾನ, ನೇಪಾಳಿ, ಇಂಡೋನೇಶಿಯ, ಮಾರಿಶಸ್‌ಗಳಲ್ಲಿ ಇದೇ ಹೆಸರಿನ ನಾಣ್ಯ ಚಲವಣೆಯಲ್ಲಿದೆ.

'ರೂಪಾಯಿ' ಎಂಬುದು 'ಮಾನಕ ನಾಣ್ಯ' ಹೆಸರು ಮಾತ್ರ ಬಲು ಪುರಾತನವಾದದ್ದು, ಈ ಪದದ ಮೂಲ ಸಂಸ್ಕೃತ ರೂಪ 'ರೂಪಕ' 'ರೂಪ್ಯ' ಎಂದಿತ್ತು. ಪಂಚತಂತ್ರದಲ್ಲಿ (೫ನೇ ಶತಮಾನ) ಕಾಶ್ಮೀರ ಕವಿ ಕ್ಷೇಮೆಂದ್ರ (೧೧ ಶತಮಾನ) ಮೊದಲಾದವರ ಗ್ರಂಥಗಳಲ್ಲಿ ಕಾಣುತ್ತೇವೆ. ಶೇರ್‌ಶಾಹನ ಪರ್ಯಂತ ಒಟ್ಟಾರೆ 'ಟಂಕಿಸಿದ ನಾಣ್ಯ' ಎಂದಷ್ಟೇ ಅರ್ಥ, ಎರಕಹೊಯ್ದದ್ದು ಎಂಬ ತಾತ್ಪಾರ್ಯ.

ದಶಾಂಶ-ಶತಾಂಶ ಪದ್ಧತಿ ಜಾರಿಗೆ ಬಂದ ನಂತರ 'ಆಣೆ, ಪೈಗಳ' ಹೆಸರು ಮರೆಯಾಗಿದೆ. ರೂಪಾಯಿಗೆ ೧೬ ಆಣೆ, ಆಣೆಗೆ ೧೨ ಪೈ ಇದು ಮೊದಲು ಜಾರಿಯಲ್ಲಿದ್ದ ಮಾನಕಗಳು. ಅಚ್ಚರಿ ಪಡಬೇಕಾದ ವಿಷಯವೆಂದರೆ 'ಆಣೆ' ಎಂಬ ನಾಣ್ಯ ಮೊದಲು

ಇರಲ್ಲಿಲ್ಲ. ೧೬ನೇ ಅಂಶವೆಂಬುದು ಕಾಲ್ಪನಿಕ 'ಮಾನ'ವಾಗಿತ್ತು. ಮುಂದೆ ನಿಕ್ಕಲ್ಲಿ ಟಂಕಿಸಿದರು. ಈ ಹದಿನಾರರ ಅಂಶ ಭಾರತೀಯರಿಗೆ ಬಲುಪ್ರಿಯವಾದದಿತ್ತು. ೧೬ರ ಅಂಶಕ್ಕೆ ಕಲಾ ಎಂಬ ಹೆಸರು ಋಗ್ವೇದ ತೈತ್ತಿರೀಯ ಸಂಹಿತೆ ಮುಂತಾದವುಗಳಲ್ಲಿ ಕಾಣುತ್ತದೆ. ವೇದೋತ್ತರ ಕಾಲದಲ್ಲಿಯ ನಾಣ್ಯಗಳಲ್ಲಿ ಒಂದಾಗಿದ್ದ ಕಾರ್ಷವನ್ನು ೧೬ ಮಾಷ (ಚಿನ್ನ) ಮತ್ತು ಪಣ (ಬೆಳ್ಳಿ)ಯಾಗಿ ವಿಂಗಡಿಸಿದ್ದರು.

'ಪೈ' ಎಂಬುದು ಪರ್ಶಿಯಾನ್ ಭಾಷೆಯ ಪಾಯಿ (ಸಂಸ್ಕೃತದ ಪಾದಿ = ನಾಲ್ಕನೆಯ ಅಂಶ) ಎಂಬುದರ ರೂಪಾಂತರ. ಹಿಂದಿನವರಲ್ಲಿ ಮೂರು ದುಡ್ಡು, ನಾಲ್ಕು ದುಡ್ಡು ಎಂಬ ಮಾತು ಇತ್ತು. ಹೀಗೆ ದುಡ್ಡಿನ ನಾಲ್ಕರ ಅಂಶವಾದ್ದರಿಂದ ಪಾಯ್ ಆಗಿರಬಹುದು. ಪೈಸಾ ಎಂದು ಉತ್ತರ ಭಾರತದಲ್ಲಿ (ಒಂದಾಣೆ–೪ ಪೈಸಾ) ಮುಂದೆ ದಕ್ಷಿಣದಲ್ಲಿ ದುಡ್ಡು ಪಾವಾಣೆ, ಕಾಲಾಣೆ ಇತ್ಯಾದಿಯಾಗಿ ಹೆಸರಾಯಿತು. ಆದರೆ ಈಗ ಯಾವ ಅಂಶವಿಲ್ಲದಿದ್ದರೂ ನಾಣ್ಯಕ್ಕೆ ಹಳೇ ನಾಮಕರಣವೇ ಇದೆ. ಆಣೆ ಎಲ್ಲಿಂದ ಬಂತು? ೪–೫ನೇ ಶತಮಾನದ ಮೃಚ್ಛಕಟಿಕ ನಾಟಕದಲ್ಲಿ ನಾಟಕ ಎಂಬ ರೂಪದಲ್ಲಿ ಕಾಣಿಸಿಕೊಂಡಿದ್ದರೂ ಇದು ಅಸೀರಿಯನ್, ಬೆಬಿಲೋನಿಯನ್ ಮಾತ್ರ ನನಾ ದೇವತೆಗಳಿಂದ ಬಂದದ್ದು. ದೇವತೆಗಳಿಗೂ ನಾಣ್ಯ ಟಂಕನಕ್ಕೂ ಮೊದಲಿನಿಂದ ಬಾಂಧವ್ಯವಿದೆ. ಇದು ಉತ್ತರ ಭಾರತಕ್ಕೂ ಇದರ ಪ್ರಭಾವವಿತ್ತು. ದೇವತೆಯ ಆಶ್ರಯದಲ್ಲಿ ನಾಣ್ಯ ಟಂಕಿಸುವುದು ಪ್ರಾಚೀನ ರೋಮಿನಲ್ಲಿತ್ತು. ಹಣಕ್ಕೆ ಇಂಗ್ಲೀಷ್ ಹೆಸರಾದ ಮನಿ ರೋಮನ್ ದೇವಿ ಮೊನೇತಾಳಿಂದ ಬಂದದ್ದಲ್ಲವೇ? ಅವರ ಗುಡಿಯೇ ಟಂಕಸಾಲೆಯಾಗಿತ್ತು ಎನ್ನುವುದು ಮುಖ್ಯ.

(ನಮೂದ ೩೫) ಟಪಾಲಿಗೆ ಕನ್ನಡದಲ್ಲಿ ಅಂಚೆ ಎನ್ನುತ್ತಾರೆ. ಹಂಸಕ್ಕೆ ಕನ್ನಡದ ತದ್ಭವ ಪದ ಅಂಚೆ ನಳದಮಯಂತಿಯರ ಕಥೆಯಲ್ಲಿ ಪ್ರೇಮ ಸಂದೇಶ ವಿನಿಮಯ ಮಾಡುವುದು ಒಂದು ಹಂಸ. ಪತ್ರ ಸಾಗಿಸುವ ಹಳೇಕಾಲದ ವಿಧಾನಕ್ಕೆ ಸಾಕ್ಷಿಯಾದುದು. ಅಂಚೆ ಪದದ ಅರ್ಥ ಪ್ರಯಾಣದ ಮಜಲು ಈ ಅರ್ಥದಲ್ಲಿ ಮಲೆಯಾಳಿ, ತಮಿಳಿನಲ್ಲಿ (ಅಂಚಲ್) ಮತ್ತು ತೆಲುಗಲ್ಲಿ (ಅಂಚಲು) ಜಾತಿ ಪದಗಳಿವೆ. ಸುದ್ದಿಗಳನ್ನು ಅಜ್ಞಾತ ಪತ್ರಗಳನ್ನು ದೂರ ಪ್ರಾಂತಗಳಿಗೆ ಕಳುಹಿಸಲು ಆಳರಸರು ಬಳಸುತ್ತಿದ್ದ ರೀತಿ. ಪತ್ರವಹನ ಮಾಡುವವರಿಗೆ ತಮಿಳಿನಲ್ಲಿ ಅಂಚಲ್‌ಕಾರನ್ ಎಂದು ಹೆಸರಿತ್ತು. ನಾವು ಅಂಚೆಯಾಳು ಎನ್ನುತ್ತೇವೆ'.

ಟಪ್ಪಾಲು: ಇದೊಂದು ಪದ ಮರಾಠಿಯಿಂದ ಬಂದದ್ದು. 'ಟಪ್ಪಾ' ಅಂದರೆ ಹಿಂದಿ ಮತ್ತು ಮರಾಠಿಯಲ್ಲಿ ಮಜಲು ಎಂದರ್ಥ. ಹಿಂದಿಯ 'ಟಪ್ಪಾ' ಪ್ರಯಾಣದ ಡೋಲಿ ಹೊರುವವರನ್ನು ಬದಲಿಸುವ ಸ್ಥಳ. ಒಂದು ನಿಶ್ಚಿತದೂತ ಇತ್ಯಾದಿ – ಇದು ಪತ್ರವಹನ ವ್ಯವಸ್ಥೆಯನ್ನೇ ಸೂಚಿಸುತ್ತದೆ.

ಇಂಗ್ಲೀಷ್‌ನ post ಮಜಲು ಎಂಬುದಾಗಿಯೇ ಇದೆ. ಪ್ರಯಾಣದಲ್ಲಿ ಕುದುರೆಗಳ ಬದಲಾವಣೆಯ ನಿಶ್ಚಿತ ಸ್ಥಾನ, ಸೈನಿಕರ ಶಿಬಿರ ಇತ್ಯಾದಿ. ಇದು ಪತ್ರಾದಿ ಸಾಗಾಟಗಳ ಹಳೇ ಕಾಲದ ಸೂಚಕ. ಇದರ ಧಾತ್ವಾರ್ಥ ಲ್ಯಾಟಿನ್‌ನಲ್ಲಿ (postis) ಇಡುವಿಕೆ ಇಕ್ಕೆ ಎಂದು ಹಿಂದಿಯ 'ಡಾಕ್' ಕೂಡ ಇದೆ ಅರ್ಥ.

ಈ ಪದಗಳು ಈ ಅರ್ಥದಲ್ಲಿ ಬಳಕೆಗೆ ಬಂದ ಕಾಲವೂ ಗಮನಾರ್ಹವಾಗಿದೆ. ಕನ್ನಡದಲ್ಲಿ ಅಂಚೆ ಮತ್ತು ಮಾರ್ಗ ಎಂಬರ್ಥದಲ್ಲಿ ೧೨ನೇ ಶತಮಾನದಲ್ಲೇ ಪ್ರಯೋಗದಲ್ಲಿತ್ತು. ಮೋಳಿಗೆ ಮಾರಯ್ಯನ ವಚನದಿಂದ ತಿಳಿದರೂ 'ಟಪಾಲು' ಎಂದರ್ಥದಲ್ಲಿ ೧೬ನೇ ಶತಮಾತದಲ್ಲಿ ಪ್ರಯೋಗ ಕಾಣಿಸುತ್ತದೆ. ಇಂಗ್ಲೀಷ್‌ನ post ಇದೇ ಸಮಯಕ್ಕೆ ಬಳಕೆಯಾಗಿದೆ ಅಂದರೆ ಸುಮಾರು ೧೮ನೇ ಶತಮಾನದ ಕೊನೆಗೆ ಪ್ರವೇಶವಾಗಿದೆ. ಮರಾಠಿಯಲ್ಲಿ ಎಂದು ತಲೆಹಾಕಿದೆಯೋ ತಿಳಿಯದು ಎನ್ನುತ್ತಾರೆ ಪಾ.ವೆಂ.

ನಮೂದು ೫೧ ವಚನ ವಿವಕ್ಷೆ: ಅಧಿಕಾಂಶ ಭಾಷೆಗಳ ಒಂದು ಲಕ್ಷಣ. ಒಂದು ಇದ್ದದ್ದನ್ನು ಹೆಚ್ಚು ಇದ್ದದ್ದರಿಂದ ಬೇರ್ಪಡಿಸಿ ಹೇಳುವ ಭಾಷಿಕ ಉಪಕರಣವೇ ವಚನ ವಿವಕ್ಷೆ. ಗ್ರೀಕ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಒಂದಕ್ಕೆ, ಎರಡಕ್ಕೆ ಮತ್ತು ಮೂರಕ್ಕೆ ಪ್ರತ್ಯೇಕ ವಚನ ವ್ಯವಸ್ಥೆಗಳಿವೆ. ಇದಕ್ಕಿಂತ ಹೆಚ್ಚು ವಚನಗಳ ನಿಯಮ ಇರುವ ಭಾಷೆಗಳು ಇವೆ. ನಾನು–ನಾವು, ನೀನು–ನೀವು, ಅವನು–ಅವಳು–ಅವರು ಇತ್ಯಾದಿ. ಉದಾಹರಣೆಗೆ: ನೀವು ಒಬ್ಬರೇ ಬಂದರೇ, ಸಾಹೇಬರೇ?' 'ಹೌದು ನಾವೊಬ್ಬರೇ ಬಂದೆವು' ನೋಡಪ್ಪಾ– ಸಂವಾದದಲ್ಲಿ ಒಬ್ಬನೇ ಇರುವವ ಹಲವರು ಹೇಗಾದರು ಎಂದು ಆಶ್ಚರ್ಯವಾದರೆ ಇದು ನಿತ್ಯ ವ್ಯಾಪಾರ ಮತ್ತು 'ಗೌರವಾರ್ಥಕ' ಬಹುವಚನವೆಂದು ಸುಮ್ಮನಾಗುತ್ತೇವೆ. ಆದರೆ ಆಚಾರ್ಯರ ಪ್ರಶ್ನೆ ಬಹುವಚನದಲ್ಲಿ ಹೇಳಿದರೆ ಗೌರವ ಹೇಗೆ ಬರುತ್ತದೆ? ಯಾರಿಗೂ ಗೊತ್ತಿಲ್ಲ. ಆದರೆ ಗೌರವಾರ್ಥಕ ಬಹುವಚನಗಳು ಬಹಳ ಕಾಲದಿಂದಲೂ ಇದೆ. ಕನ್ನಡದಲ್ಲಿ ಲಿಖಿತ ರೂಪದಲ್ಲಿಯೂ (ವಡ್ಡರಾದನೆ) ದೊರೆಯುತ್ತದೆ. ಸಂಸ್ಕೃತದಲ್ಲಿ ಅತೀ ಪ್ರಾಚೀನದಿಂದ ಏಕವಚನಾರ್ಥದಲ್ಲಿ ಬಹುವಚನ ಇದೆ. ಉದಾಹರಣೆಗೆ 'ಶಂಕರಾಚಾರ್ಯ', ಶ್ರೀ ಮದ್ವಾಚಾರ್ಯ ಬಂಗಾಳಿಯಲ್ಲಿ ತುಇ, ತುಮಿ (ನೀನು, ನೀವು) ಕೊಂಕಣಿಯಲ್ಲಿ ತೂಂ, ಯುಮಿ, ತಮಿಳಿನಲ್ಲಿ ನೀ ನೀಂಗಳ್ ಇತ್ಯಾದಿ ಮದ್ಯಮ ಪುರುಷದ ದೃಷ್ಟಾಂತಗಳು. ಸಂಸ್ಕೃತದಲ್ಲಿ 'ಭವಾನ್' ಎನ್ನುವ ಗೌರವ ಸೂಚಕ ಪದ ಬಹಳ ಹಿಂದಿನಿಂದಲೂ ಇದೆ. ಇದಕ್ಕೆ ಪಾ.ವೆಂ. ಅವರು ಆಧಾರವಾಗಿ ಕೌಶಿಕ ಧರ್ಮ ಸೂತ್ರದಲ್ಲಿ ಬರುವ 'ಭವತಿ' ಭಿಕ್ಷಾಂ ದೇಹಿ ಎಂದು ಉಪನಯನವಾದ ವಟು ತಾಯಿಯಿಂದ ಮೊದಲು ಭಿಕ್ಷೆ ಕೇಳುತ್ತಾನೆ ಎನ್ನುವುದನ್ನು ಉದಾಹರಿಸುತ್ತಾರೆ.

ಪಾ.ವೆಂ. ಶಬ್ದ ಅರ್ಥದೊಳಗೆ ಭಾರತದಿಂದ ಹೊರಗೆ ಹೋಗಿ ಇಂಗ್ಲೀಷ್‌ನಲ್ಲಿರುವ you ಎನ್ನುವ ಪದಕ್ಕೆ ಬರುತ್ತಾರೆ. you–ನೀನು ೧೪ನೇ ಶತಮಾನದಲ್ಲಿ

ಬಹುವಚನವಾಗಿಯೇ (ನೀವು) ಪ್ರಯೋಗಿಸಲ್ಪಡುತ್ತಿತ್ತು. ನೀನು ಎನ್ನುವುದಕ್ಕೆ thou ಎಂಬ ಶಬ್ದ ಇತ್ತು. ಫ್ರೆಂಚ್‌ನಲ್ಲಿ tu ಮತ್ತು vous (ನೀನು–ನೀವು)ಗಳಲ್ಲಿ 'vous' ಎಂಬುದು ಗೌರವ ಪದವಾಗಿ ಉಪಯೋಗಿಸಲ್ಪಡುತ್ತದೆ. ಇಂಗ್ಲೀಷ್‌ನಲ್ಲಿ ತೀರ ಸಲಿಗೆಗೋಸ್ಕರ ಅಥವಾ ಕೆಳಸ್ತರದ ಜನರ ಸಂಬೋಧನೆಗಾಗಿ thou ಅನೇಕ ಕಾಲ ಬಳಸಿದ್ದಾರೆ. ಈಗ ಯಾವುದೇ ಬೇದವಿಲ್ಲದೆ you ಬಹುವಚನಾರ್ಥಕ ಬಳಕೆಗೆ ಬಂದು ಏಕವಚನಾರ್ಥಕ thou ಮರೆಯಾಗಿದೆ.

ಭಾರತೀಯ ಭಾಷೆಗಳಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿದೆ. ಕನ್ನಡದಲ್ಲಿ 'ನೀನು' ಎನ್ನುವಲ್ಲಿ 'ನೀವು' ಸಾಲದೆಂದೂ 'ತಾವು' ಬಂದಿದೆ. ತಾವು ಎಂಬುದು ತಾನುವಿನ ಬಹುವಚನ. ತಾನು ಸಂಸ್ಕೃತದ 'ಆತ್ಮ' ಶಬ್ದಕ್ಕೆ ಪರ್ಯಾಯವಾದದ್ದು, ಹಿಂದಿಯಲ್ಲಿ 'ತೂ, ತುಮ್, ಆಪ್' ಎಂಬ ಮೂರು ವಿಧಗಳಿವೆ. 'ಆಪ್' ಆತ್ಮ ಶಬ್ದದ ತದ್ಭವ. ಆತ್ಮಾರ್ಥಕವಾದ ಈ ಶಬ್ದಗಳು ಅತಿ ಗೌರವಾರ್ಥಕ ಆಗಿರುವುದು. ಭಾಷಾತರ್ಕದ ಪ್ರಶ್ನೆ ಗೌರವಾರ್ಥಕ 'ನೀವು', 'ತಾವು' ಲಿಖಿತ ದ್ರಾವಿಡ ಭಾಷೆಗಳಲ್ಲಿವೆ.

'ನೀನು', 'ನೀವು' ಆಗಿ 'ನಾನು' 'ನಾವು' ಆಗಿ ಅನೇಕ ಭಾಷೆಗಳಲ್ಲಿ ಇದು ದೃಡವಾಗಿದೆ. ರಾಜರು, ಗುರುಗಳು ಒಟ್ಟಿನಲ್ಲಿ ಅಧಿಕಾರ ಚಲಾಯಿಸುವವರು ನಾವು ಆಗಿದ್ದಾರೆ. ಸಮಾಜದಲ್ಲಿ ವರ್ಗಭೇದದಿಂದ ಶ್ರೇಷ್ಟ–ಕನಿಷ್ಟ ಶಾಸಕ–ಶಾಸ್ಯ, ಶಿಷ್ಯವರ್ಗ ದಿಂದ ದೂರವಿಟ್ಟುಕೊಳ್ಳಲು ಗೌರವಾರ್ಥಕ ಬಹುವಚನ ಬಳಕೆಗೆ ಬಂದಂತಿದೆ. 'ಅತಿಪರಿಚಯಾದವಜ್ಞಾ' – ಬಹಳ ಸಲಿಗೆಯಿಂದ ಅಲಕ್ಷ್ಯ ಹುಟ್ಟುತ್ತದೆ ಎಂಬ ವಾಕ್ಯ ಇದನ್ನು ಸಮರ್ಥಿಸುತ್ತದೆ. ನಿರಂಕುಶರಾಜರು ನಾವು ಎಂಬ ಪದ ಬಳಸಿಲ್ಲ. ಪ್ರಜಾಸತಾತ್ಮಕ ರೋಮಿನ ರಾಜ ಸಿಸಿರೋ (೧ನೇ ಶತಮಾನ) 'ನಾವು ನಿಮ್ಮನ್ನು ಕಾಪಾಡಿದ್ದೇವೆ', ಎಂದು ಆತ್ಮ ಪ್ರತಿಷ್ಟೆಯ ಬಹುವಚನದಲ್ಲಿ ಹೇಳಿಕೊಂಡಿದ್ದಾನೆ. ಉಪನಿಷತ್ತಿನಲ್ಲಿ 'ನಾವು' ಎನ್ನುವುದಕ್ಕೆ ಆಧಾರವಿದೆ. ಋಗ್‌ವೇದದಲ್ಲಿಯೂ ಏಕವಚನ ವಯಂ (ನಾವು) ಪ್ರಯೋಗ ಸಿಗುತ್ತದೆ.

ಈ ಗೌರವಾರ್ಥ ಬಹುವಚನಗಳು ಶ್ರೇಷ್ಟ–ಕನಿಷ್ಟ ಭಾವನೆಯಿಂದ ಹುಟ್ಟಿ ಭಾಷೆಯ ಪ್ರಯೋಗದಲ್ಲಿ ಬಲವಾಗಿ ಬೇರೂರಿದೆ. ನೀನು ಅನ್ನುವುದು ಅಸೌಜನ್ಯ, ಧಾರ್ಷ್ಟ್ಯ, ಅವಮಾನದ ವರ್ತನೆ ಎನ್ನುವುದನ್ನು ಸ್ಪಷ್ಟೀಕರಿಸುತ್ತಾ ಪಾ.ವೆಂ. ಹಿಂದಿ, ಬಂಗಾಳಿ, ಕನ್ನಡ, ಇಂಗ್ಲೀಷ್ ಎಲ್ಲ ಭಾಷೆಯ ವಚನಗಳನ್ನು ನಿರೂಪಿಸುತ್ತಾ ಸಮಾಜವಾದಿ ಚಳವಳಿಗಳು ಈ ಅಸಮಾಜವಾದಿ ಭಾಷಾ ವಿಶೇಷವನ್ನು ಉಚ್ಚಾಟಿಸಲು ಅಸಮರ್ಥವಾಗಿದೆ. ಇದು ಉಚ್ಚ ಮತ್ತು ನೀಚ ಭಾವನೆಯ ಬಲವಾದ ಬೇರನ್ನು ಸೂಚಿಸದೆ ನಮ್ಮ ಸುತ್ತಲವರೆಲ್ಲರಲ್ಲಿ ಅತಿ ಸಲಿಗೆ ಬೇಡವೆಂಬ ಮನುಷ್ಯ ಭಾವನೆಯು ಇದಕ್ಕೆ ಕಾರಣವಿರಬಹುದು.

ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ಈ ಗೌರವಾರ್ಥಕ ಬಹುವಚನಗಳು ಹೆಚ್ಚುಮಟ್ಟಿಗೆ ಉತ್ತಮ ಪುರುಷ (ನಾನು, ನಾವು) ಮಧ್ಯಮ ಪುರುಷ (ನೀನು ನೀವುಗಳಿಗೆ) ಮಾತ್ರ ಸೀಮಿತವಾಗಿದೆ. ಭಾರತೀಯ ಭಾಷೆಗಳಲ್ಲಿ ಹಾಗಲ್ಲ ಪ್ರಥಮ ಪುರಷಕ್ಕೂ ಗೌರವಾರ್ಥಕ ಬಹುವಚನ ಇಲ್ಲಿದೆ. 'ಅವರು/ಇವರು ಬಂದರು' ಇತ್ಯಾದಿ ನಾವು ಎದುರಲ್ಲಿರುವವರಿಗೆ ಮಾತ್ರ ಗೌರವ ಕೊಟ್ಟು ಮಾತಾಡುವವರಲ್ಲ. ಆವರ ಬೆನ್ನ ಹಿಂದೆ ಕೂಡ ಹಾಗೇ ಮಾತನಾಡುವರು! ಗೌರವಾರ್ಥ 'ನೀವು' ಭಾರತದಲ್ಲಿ ಎಲ್ಲ ಭಾಷೆಗಳಲ್ಲಿದ್ದರೂ ಅವುಗಳ ಬಳಕೆಯಲ್ಲಿ ಭಾಷೆಯಿಂದ ಭಾಷೆಗೆ ಸ್ಥಳದಿಂದ ಸ್ಥಳಕ್ಕೆ ಸಾಕಷ್ಟು ಅಂತರವಿದೆ. ದಕ್ಷಿಣ ಕನ್ನಡದಲ್ಲಿ ಬಹುತರವಾಗಿ ತಂದೆಯನ್ನು 'ನೀವು' ಎಂದು, ತಾಯಿಯನ್ನು ನೀನು ಎನ್ನುವುದು ಸಂಪ್ರದಾಯ ಉತ್ತರ ಕನ್ನಡ ಮತ್ತು ಉತ್ತರ ಕರ್ನಾಟಕದಲ್ಲಿ ಮಕ್ಕಳು, ತಂದೆಯನ್ನು 'ನೀವು' ಎಂದು ತಾಯಿಯನ್ನು ನೀನು ಎನ್ನುವುದು ಸಂಪ್ರದಾಯ ಉತ್ತರ ಕನ್ನಡ ಮತ್ತು ಉತ್ತರ ಕರ್ನಾಟಕದಲ್ಲಿ ಮಕ್ಕಳು ತಂದೆ ಅಜ್ಜ ಎಲ್ಲ ಹಿರಿಯ ಸಂಬಂಧಿಕರಿಗೂ ಏಕವಚನವನ್ನೇ ಬಳಸುತ್ತಾರೆ. ಇಲ್ಲಿ ಪಾ.ವೆಂ. ಅವರು ವಚನ ಅವಸ್ಥೆಯ ಇತಿಹಾಸವನ್ನೇ ತೆರೆದಿಡುತ್ತಾರೆ. 'ರೋಮಿಗೆ ಹೋದಾಗ ರೋಮನ್ನರಂತೆ ವರ್ತಿಸು' ಎಂಬ ಗಾದೆಯಂತೆ ಶಬ್ದಗಳು ಭಾಷೆಯಿಂದ ಭಾಷೆಗೆ ಹೋದಾಗ ಹೊಸ ಅವತಾರಗಳನ್ನು ಇಲ್ಲಿ ತಾಳುತ್ತದೆ ಎಂಬುದನ್ನು ಸ್ಪಷ್ಟ ಪಡಿಸುತ್ತಾರೆ.

ಪಾ.ವೆಂ. ಅವರು ಶಬ್ದಗಳ ಭವಾವಳಿಯನ್ನು ಶೋಧಿಸುತ್ತಾ ಸಂಸ್ಕೃತ ಪ್ರಾಕೃತ, ಮರಾಠಿ, ತಮಿಳು, ಬಂಗಾಳಿ, ಹಿಂದಿ, ಉರ್ದು ಪರ್ಶಿಯನ್ ಅರಬ್ಬಿ ಇಂಗ್ಲೀಷ್, ಪೋರ್ಚುಗೀಸ್ ಶಬ್ದಗಳನ್ನು ತನಿಖೆ ಮಾಡುತ್ತಾರೆ. ಈ ಶಬ್ದ ಜಿಜ್ಞಾಸೆಯವೊಳಗೆ ಸ್ವಾರಸ್ಯಕರ ಮಾಹಿತಿಗಳು ತಿಳಿಯುತ್ತದೆ.

'ರಿಕ್ಷಾ' ಜಪಾನಿ ಮೂಲದ ಪದ ಶಬ್ದ ಜಿನ್‌ರಿಕಿಷಾ (ಜಿನ್-ಮನುಷ್ಯ, ರಿಕು-ಶಕ್ತಿ, ಷಾ-ವಾಹನ) ಸಂಸ್ಕೃತದ ಪೃಥುಕ (ಹೊಸ ಪ್ರಾಯದ ಪ್ರಾಣಿ) ಪ್ರಾಕೃತದಲ್ಲಿ 'ಹುಡುಅ' ಆಗಿ ಕನ್ನಡದ ಹುಡುಗನಾಗುತ್ತಾನೆ.

ಭಾಷೆ ಮೌಖಿಕವಾಗಿ ರೂಪುಗೊಳ್ಳುವಾಗ ಮೊದಲಿಗೆ ಹುಟ್ಟುವುದು ಧಾತು ರೂಪ, ಈ ಮೂಲ ಉಚ್ಚಾರಣೆ ವಾಕ್ಯ ರೂಪದಲ್ಲಿ ಪ್ರಯೋಗಕ್ಕೆ ಸೇರುವಾಗ ಪದವಾಗಿ ಮಾರ್ಪಡುತ್ತದೆ. ಪದದ ಉಚ್ಚಾರಣೆಯ ರೀತಿ ಅಕ್ಕಪಕ್ಕದ ಪದಗಳಿಂದ ಪ್ರಭಾವಿತವಾಗಿ ಮಾರ್ಪಡುತ್ತದೆ. ಪದ ಸ್ವತಂತ್ರವಲ್ಲ ಅದು ಉಚ್ಚಾರಣೆಯ ರೀತಿಯಿಂದ ಸಂದರ್ಭದ ಅನಿವಾರ್ಯ ಅಭಿವ್ಯಕ್ತಿಯಿಂದ ಅರ್ಥಛಾಯೆಗಳೊಂದಿಗೆ ಹಿಗ್ಗುತ್ತದೆ, ಕುಗ್ಗಿಸುತ್ತದೆ. ಭಾಷೆಯ ಶುದ್ಧಿಯನ್ನು ಅಥವಾ ರೂಪದ ಚೌಕಟ್ಟನ್ನು ವ್ಯಾಕರಣ ನಿಯಮಗಳಿಂದ ಕಟ್ಟುಪಾಡಿಗೆ ಒಳಪಡಿಸಬಹುದಾದರೂ ಪ್ರಭಾವಶಾಲಿ ವ್ಯಕ್ತಿಯ ಅಥವಾ ಕವಿಗಳಂತಹ ಪ್ರತಿಭಾಶಾಲಿಯ ಪ್ರಯೋಗದಿಂದ ಶಬ್ದ ಉಚ್ಚಾರಣೆ ಅರ್ಥ ಇವು ವ್ಯತ್ಯಾಸವನ್ನು

ಹೊಂದುತ್ತದೆ. ಅಂದರೆ ಮೂಲಧಾತುವಿನ ರೂಪ ವ್ಯತ್ಯಾಸವಾಗುತ್ತಾ ಹೋಗುವುದಲ್ಲದೆ ವ್ಯತ್ಯಾಸಗೊಂಡ ಪದವು ತನ್ನ ರೂಪ ಮತ್ತು ಅರ್ಥಗಳಲ್ಲಿ ಗುರುತು ಹಿಡಿಯಲಾರದಷ್ಟು ವ್ಯತ್ಯಾಸ ತಾಳುತ್ತವೆ. ಕಾಲಾಂತರದಲ್ಲಿ, ದೇಶಾಂತರದಲ್ಲಿ ಪದದ ಸ್ವರೂಪ, ಅರ್ಥ ಮತ್ತು ಅದರ ಮೌಲ್ಯ ಮೂಲಕ್ಕಿಂತ ಎಷ್ಟೋ ಪಟ್ಟು ದೂರಸಾಗುತ್ತದೆ. ಇದನ್ನೇ ಪದಪರಂಪರೆ ಅನ್ನಬಹುದು. ಶಬ್ದ ವ್ಯಾಪಾರ ಈ ವ್ಯವಹಾರ ಅಥವಾ ಸಂವಹನದ ಪರಿಗಳನ್ನು ಅನೇಕ ವಿಧದಲ್ಲಿ ವರ್ಗೀಕರಿಸಬಹುದು: ೧. ತದ್ಭವಗಳು ೨. ಅಪಭ್ರಂಶಗಳು ೩. ಎರವಲು ಪದಗಳು ೪. ಭಾಷಾಂತರಗಳು

೧. ತದ್ಭವಗಳು: ತತ್–ಭವ = ತದ್ಭವ, ಅದರಿಂದ ಹುಟ್ಟಿದ್ದು ಮೂಲ ಭಾಷೆ ಪ್ರಬಲವಿದ್ದಾಗ ಇನ್ನೊಂದು ಭಾಷೆ ಅಲ್ಲಿಯ ಪದಗಳನ್ನು ತನ್ನ ಉಚ್ಚಾರಣಾ ಪದ್ಧತಿಗನುಗುಣವಾಗಿ ಧ್ವನಿ ಮಾರ್ಪಾಟಿನೊಂದಿಗೆ ಸ್ವೀಕರಿಸುತ್ತದೆ. ಕನ್ನಡ ಭಾಷೆ ಸಂಸ್ಕೃತಕ್ಕೆ ಅಧೀನವಾದದ್ದು ಐತಿಹಾಸಿಕ ಸತ್ಯ. ಕನ್ನಡ ಪದಕೋಶದಲ್ಲಿ ಸಂಸ್ಕೃತದ ಪದಗಳು ಸಮಸಂಸ್ಕೃತವಾಗಿ ತತ್ಸಮರೂಪದಲ್ಲಿ ಸೇರಿಕೊಂಡಿವೆ. ಜೊತೆಗೆ ಉಚ್ಚರಿಸಲು ಕಷ್ಟವಿರುವ, ಧ್ವನಿಸಾಮ್ಯತೆಯ ಅಭಾವದಿಂದಾಗಿ ಸಹಸ್ರಾರು ಸಂಸ್ಕೃತ ಪದಗಳು ಕನ್ನಡ ಉಚ್ಚಾರಣೆಯೊಂದಿಗೆ ಮರುರೂಪ ತಾಳಿವೆ. ಕನ್ನಡ ಧ್ವನಿ ವ್ಯವಸ್ಥೆಯಲ್ಲಿ

ಅ. ಮಹಾಪ್ರಾಣಗಳು ವಿರಳ

ಬ. ವಿಜಾತಿ ಒತ್ತಕ್ಷರಗಳ ಬಳಕೆ ಇಲ್ಲ.

ಕ. ಯಾವುದೇ ಪದದ ಆರಂಭಕ್ಕೆ ಕನ್ನಡದಲ್ಲಿ ಒತ್ತಕ್ಷರಗಳಿಲ್ಲ. ಈ ಕಾರಣದಿಂದ ಸಂಸ್ಕೃತದ ಪದಗಳು ಸ್ವೀಕಾರವಾಗುವಾಗ ತದ್ಭವವಾಗಿ ಮಾರ್ಪಡುತ್ತವೆ. ಹಾಗೆ ನೋಡಿದರೆ ಪ್ರಾಕೃತ ಭಾಷೆಗಳು ಸಂಸ್ಕೃತದ ತದ್ಭವಗಳೇ ಆಗಿವೆ.

೨. ಅಪಭ್ರಂಶ: ಇವು ತದ್ಭವಗಳೇ ಅನಿಸುತ್ತವೆ. ಇಲ್ಲಿ ಧ್ವನಿ ಉಚ್ಚಾರಣೆ ಶುದ್ಧಿಯನ್ನು ಕಳೆದುಕೊಳ್ಳುತ್ತದೆ. ಕನ್ನಡದ ಅನೇಕ ನಾಮವಾಚಕಗಳು ಇಂಗ್ಲೀಷ್‌ನಲ್ಲಿ ಅಪಭ್ರಂಶಗೊಂಡಿದೆ. ವಿಚಿತ್ರವೆಂದರೆ ಇಂಗ್ಲೀಷ್‌ನ ಈ ವಿಕೃತ ರೂಪಗಳನ್ನು ಕನ್ನಡಿಗರು ಸಹಜರೂಪಗಳೆಂದು ಭ್ರಮಿಸಿ ತಮ್ಮ ನುಡಿಯನ್ನೇ ಅಪಭ್ರಂಶಗೊಳಿಸುತ್ತಿದ್ದಾರೆ. ಇದು ಭಾಷೆ ಅಳಿಯುವುದರ ಲಕ್ಷಣವೇ ಆಗಿದೆ.

೩. ಎರವಲು ಪದಗಳು: ಎರವಲು ಪದಗಳು ಯಾವುದೇ ಭಾಷೆಯ ಬೆಳವಣಿಗೆ ಸಹಾಯವಾಗುವ ಪ್ರಕ್ರಿಯೆ. ಮೂಲರೂಪದಲ್ಲೂ ಭಾಷಾಂತರವಾಗಿಯೂ ಇವು ಬರುತ್ತವೆ. ಹೀಗೆ ಬಂದವು ಹೀನಾರ್ಥವನ್ನು ಕೊಡಬಹುದು. ಉತ್ತಮಾರ್ಥವನ್ನು ನೀಡಬಹುದು. ಉದಾಹರಣೆಗೆ ಬ್ರಾಹ್ಮಣರನ್ನು 'ಹಾರುವ' ಎಂದು ಕರೆಯುತ್ತಿದ್ದರು. 'ಹಾರುವ' ಶಬ್ದದ ಪ್ರಾಚೀನ ರೂಪ 'ಪಾರ್ವನ್' ಈ ಪಾರ್ವ ಅಂದರೆ ಹಾರುವವನಿಗೆ ಒಳ್ಳೆಯ ಅರ್ಥ ಇದ್ದಾಗ 'ಹೆಬ್ಬಾರ' ಎಂದರೆ ಅಗ್ರಹಾರದ ಹಿರಿಯನಿಗೆ 'ಹೆಬ್ಬಾರ' ಎಂದು ಅಭಿದಾನ,

ಅಡಿಯ ಅಡಿಗ ಎಂದರೆ ಸೇವಕ. ಹೀಗೆ ದೇವ ಪೂಜೆ ಮಾಡುವನ ಪೂಜಾರಿಗಳು, ಅರ್ಚಕರು ಅಡಿಗರಾದರು.

ಇಂಗ್ಲೀಷ್‌ನ Juggernaut (ಜಗರ್ನಾಟ) ಪುರಿಯ ಜಗನ್ನಾಥನ ಅಪಭ್ರಂಶ. ಹರಕೆ ಹೊತ್ತ ಭಕ್ತರು ಜಗನ್ನಾಥನ ರಥದ ಗಾಲಿಗಳಡಿ ಬೀಳುತ್ತಿದ್ದ ಅಮಾನುಷ ಐತಿಹ್ಯದಿಂದಾಗಿ ಇಂಗ್ಲೀಷಿನ 'ಜಗರ್ನಾಟ್' ಹುಟ್ಟಿಕೊಂಡಿತೆಂದೂ ಇದು ದೇಶಕ್ಕೆ ಒಳ್ಳೆ ಕೀರ್ತಿ ತರುವಂಥದಲ್ಲವೆಂದೂ ಪಾ.ವೆಂ. ಅಭಿಮತ.

ಅಡಿಕೆ ನಮಗೆಲ್ಲ ಪರಿಚಿತ. ಬಂಗಾಳಿ, ಮರಾಠಿ ಭಾಷೆಯಲ್ಲಿ ಸುಪಾರಿ ಎಂದು ಕರೆಯುತ್ತಾರೆ. ಕರ್ನಾಟಕ, ಕೇರಳ ಅಡಿಕೆ ಬೆಳೆಯುವ ಪ್ರಧಾನ ಕೇಂದ್ರಗಳಾಗಿದ್ದು, ಇದು ಸೋಪಾರ ಎಂಬ ಬಂದರಿನ ಮೂಲಕ ಉತ್ತರ ಭಾರತವನ್ನು ತಲುಪುತ್ತಿದ್ದರಿಂದ ಸ್ಥಳನಾಮ ಅಂಟಿಕೊಂಡು ಅಡಿಕೆ ಇಲ್ಲಿ 'ಸುಪಾರಿ' ಆಗಿದೆ. ಈಗ 'ಸುಪಾರಿ'ಗೆ ಕೊಲೆಯ ಅರ್ಥವೂ ಅಂಟಿಕೊಂಡಿದೆ. 'ಸುಪಾರಿ' ಸ್ವೀಕರಿಸಿದನ್ನು ನಮ್ಮಲ್ಲಿ 'ಬಾಡಿಗೆ ಹಂತಕ' ಎಂದೇ ಗುರುತಿಸಲಾಗುತ್ತದೆ. ಇದೇನು ಹೊಸ ಕಲ್ಪನೆಯಲ್ಲ ಹಿಂದೆ ಮಹಾರಾಜರ ಕಾಲದಲ್ಲಿ ರಣವೀಳ್ಯ ಕೊಡುವ ಪದ್ಧತಿಯು ಇದು ಆದರೆ ಅರ್ಥ-ಉದ್ದೇಶಗಳಲ್ಲಿ ಪಲ್ಲಟದ ರೀತಿ ಭಿನ್ನವಾಗಿದೆ.

ನಿರುಕ್ತಿ ಶಾಸ್ತ್ರವು ಶಬ್ದಗಳು ಅವುಗಳ ಪ್ರಸ್ತುತ ರೂಪ ತಾಳಲು ಏನೆಲ್ಲ ಬದಲಾವಣೆಗಳಿಗೆ, ಅರ್ಥಾಂತರಗಳಿಗೆ ಒಳಗಾದವು ಎನ್ನವುದನ್ನು ದರ್ಶಿಸುವುದಷ್ಟೇ ಅಲ್ಲದೆ ಆ ಭಾಷೆಯನ್ನಾಡುವವರ ಸಾಂಸ್ಕೃತಿಕ ಇತಿಹಾಸದ ಮಿಂಚುನೋಟಗಳನ್ನೂ ಕೊಡುತ್ತದೆ. ಸಾಂಸ್ಕೃತಿಕ ಒಳನೋಟಗಳು ೨ ರೀತಿಯಲ್ಲಿ ಗುರುತಿಸಬಹುದು.

೧. ಶಬ್ದಗಳ ಮೂಲಕ ನೋಡುತ್ತಾ ಪ್ರಾಚೀನರ ಚಿಂತನಕ್ರಮ, ಜ್ಞಾನಪರಿಣತಿ, ಸಂಸ್ಕೃತಿ ಮತ್ತು ಜೀವನ ಕ್ರಮಗಳನ್ನು ತಿಳಿಯುವ ರೀತಿ ಉದಾಹರಣೆ ಪಾ.ವೆಂ ಅವರು ಪ್ರಾಚೀನ ಅಂಗರಚನಾ ಶಾಸ್ತ್ರದಲ್ಲಿಯ ನೈಪುಣ್ಯತೆಯನ್ನು ವಿಶ್ಲೇಶಿಸುತ್ತಾರೆ. ನಮೂದು ೧೦೦ 'ಹೃದಯ' ವೆಂಬ ಗುಂಡಿಗೆ ರಕ್ತಾಭಿಸರಣದ ಕೇಂದ್ರವೆಂಬುದು ಖಂಡಿತವಾಗಿಯೂ ಮತ್ತು ತಲೆ ಹಾಗೂ ಅದರೊಳಗಿನ ಮಿದುಳು ಆಲೋಚನೆಗಳ ಕೇಂದ್ರವೆಂಬುದು ಊಹನಾತ್ಮಕವಾಗಿಯೂ ಅವರಿಗೆ ತಿಳಿದಿತು. ಆದರೆ ಸಾಮಾನ್ಯವಾಗಿ ಭಾಷೆಯಲ್ಲಿ ಮನಸ್ಸಿನ ಅಧಿಸ್ಥಾನ ಎದೆಯಲ್ಲಿಯೋ ಮೆದುಳಿನಲ್ಲಿಯೋ ಎನ್ನುವ ಗೊಂದಲವನ್ನು ಪಾ.ವೆಂ ಈ ರೀತಿ ಸ್ಪಷ್ಟಿಪಡಿಸುತ್ತಾರೆ. 'ಚಿತ್ತ' ಎಂಬುದು ಮನಸ್ಸಿನ ವ್ಯಾಪಾರವೆಂದು ಸ್ವೀಕೃತವಾಗಿದೆ. 'ಮಸ್ತಿಷ್ಕ' ಎಂದರೆ ವೇದಕಾಲದಲ್ಲಿ ಮಿದುಳು ಎಂಬರ್ಥವಿತ್ತು. ಅದೇ ಮಿದುಳಿನ ಮೇಲೆ ಪ್ರಭಾವ ಮಾಡುವ ಔಷದಕ್ಕೂ ಈ ಪದ ಬಳಕೆಯಾಗಿತ್ತಿತ್ತು. ಆದ್ದರಿಂದ ಮಿದುಳಿನ ಕ್ರಿಯೆಯ ಬಗ್ಗೆ ಅರಿವು ಪ್ರಾಚೀನರಿಗೆ ಸ್ಪಷ್ಟವಾಗಿತ್ತು. ಕನ್ನಡದಲ್ಲಿ 'ಮದ ತಲೆಗೇರು', ತಲೆಗೆಡು' ಮುಂತಾದ ನುಡಿಗಟ್ಟುಗಳಿಗೆ 'ಬುದ್ಧಿಭ್ರಮಣೆಯಾಗುವುದು ತಲೆಯೊಳಗಿನ ಅಸ್ವಸ್ಥತೆಯೆಂಬ ಅರಿವು ಇದ್ದುದನ್ನು

ತೋರಿಸುತ್ತದೆ. ಭಾವನೆಗಳ ಅದಿಸ್ಥಾನ ಹೃದಯದೊಳಗೆವೆಯೆಂಬ ಗುಂಡಿಗೆ ಎಂಬುದು ಸಾರ್ವತ್ರಿಕ ತಿಳುವಳಿಕೆಯಾಗಿತ್ತು. ಧೈರ್ಯ ಕೂಡ ಹೃದಯದ ವ್ಯಾಪರವೆಂಬ ನಂಬಿಕೆಗೆ 'ಎದೆಗೆಡು', 'ಎದೆಗುಂದು' 'ಗುಂಡಿಗೆ ಒಡೆ' ಮೊದಲಾದ ನುಡಿಗಟ್ಟುಗಳನ್ನು ಪಾ.ವೆಂ ಕೊಡುತ್ತಾರೆ. ಇದೇ ರೀತಿಯ ಇಂಗ್ಲೀಷನಲ್ಲಿ ಗೊಂದಲಗಳಿವೆ. 'ಹಾರ್ಟ' (=ಸಂಸ್ಕೃತ ಹೃದಯ) ಭಾವನೆಗಳ ಅಧಿಷ್ಟಾನವೆಂದು ಭಾವಿಸಲ್ಪಟ್ಟಿದೆ. Hearty Greetings (ಹೃತ್ಪೂರ್ವಕ ಅಭಿನಂದನೆಗಳು) heartlessman (ಹೃದಯ ಹೀನ, ಕಲ್ಲೆದೆಯ ಮನುಷ್ಯ) ಇತ್ಯಾದಿ ನುಡಿಗಟ್ಟುಗಳಿವೆ. ಪಾ.ವೆಂ ಅವರು ಇಷ್ಟಕ್ಕೆ ಉದಾಹರಿಸದೆ ಮನುಷ್ಯನ ಅನುಭವಗಳ ಮೂಲಕ 'ಹೃದಯ'ಕ್ಕೆ ಖಚಿತತೆ ನೀಡುತ್ತಾರೆ. ಭಾವನೆಗಳ ಏರುಪೇರುಗಳು ನಮ್ಮ ಎದೆಬಡಿತ ವೇಗದ ಅಂತರದಲ್ಲಿ ಪ್ರತಿಬಿಂಬಿಸುತ್ತದೆ. 'ಉದ್ವೇಗ', ಆವೇಗ' ಇತ್ಯಾದಿಗಳು ಇದು ಆಧುನಿಕ ವಿಜ್ಞಾನದ ಸಂಶೋಧನೆಯೆಂದು ಧೃಢೀಕೃತವಾಗಿದೆ.

೨. ರೀತಿ ಸಮಾನಾರ್ಥ ಶಬ್ದಗಳೆಂದು ತಿಳಿಯಲ್ಪಡುವ ಬೇರೆ ಬೇರೆ ಭಾಷೆಗಳ ಶಬ್ದಗಳ ವ್ಯತ್ಯಾಸಗಳನ್ನು ಗುರುತಿಸುತ್ತಾ ಸಾಂಸ್ಕೃತಿಕ ವ್ಯತ್ಯಾಸಗಳನ್ನು ತೆರೆದಿಡುವುದು. ಉದಾಹರಣೆ ಸಂಸ್ಕೃತಿ ಭಿನ್ನತೆ ಶಿಷ್ಟಾಚಾರದ ಭಿನ್ನತೆಗಳನ್ನು ಉಂಟುಮಾಡುತ್ತದೆ. ಇಂಗ್ಲೀಷ್‌ನಲ್ಲಿ ಬಳಸುವ Please ಎಲ್ಲ ಕಡೆ ಬಳಸಿ ಸವಕಲಾಗಿರುವ ಭಾಷೆ. 'ಸ್ವಲ್ಪ' ತುಸು ದಯವಿಟ್ಟು ಹಿಂದಿಯ ಕೃಪಯಾ ಅಥವಾ ಮೆಹರ್‌ಬಾನೀ ಕರಕೇ ಸೌಜನ್ಯ ಅಥವಾ ಉಪಕಾರವನ್ನು ಮೆರೆಯುವ ಪದಗಳ ರೂಪಗಳನ್ನು ಇಲ್ಲಿ ಹೇಳುತ್ತಾ ಇಂಗ್ಲೀಷ್ ಭಾಷೆಯಲ್ಲಿನ a little ಎಂದು ಭಾರತೀಯರು ಎಲ್ಲಾದರೂ ಬಳಸುತ್ತಾರೋ ಏನೋ. ಆದರೆ ಬ್ರಿಟೀಷರು ಬಳಸುವುದಿಲ್ಲ. do ಇಲ್ಲಿ ಪ್ರಯೋಗವಿದೆ. do come for the marriage (ಮದುವೆಗೆ ಮುದ್ದಾಂ ಬನ್ನಿ) ಆದರೆ ಅರ್ಥದಲ್ಲಿ ಇದು 'ಸ್ವಲ್ಪ'ಕ್ಕಿಂತ ಮಾತ್ರವಲ್ಲ. Pleaseಗಿಂತಲೂ ಭಾರ. ಭಾರತೀಯನಾಗಿ ನಾನು ಸ್ವಲ್ಪದ ನವಿರನ್ನು ಮೆಚ್ಚುತ್ತೇನೆ. ಎನ್ನುವ ಮಾತುಗಳು ಪಾ.ವೆಂ. ಅವರ ಶಬ್ದಶೋಧನೆಯಲ್ಲಿ ಶಬ್ದಗಳ ಇತಿಹಾಸ ಮತ್ತು ಸಾಂಸ್ಕೃತಿಕ ಒಳನೋಟಗಳನ್ನು ಕಾಣುತ್ತೇವೆ.

ಪಾ.ವೆಂ. ಅವರ ಪದಾರ್ಥ ಚಿಂತಾಮಣಿಯಲ್ಲಿ ಕುತೂಹಲಕರ, ಸ್ವಾರಸ್ಯಕರ ಮಾಹಿತಿಗಳಿವೆ. ನಮೂದು ೪೬ರಲ್ಲಿ ಇದಕ್ಕೊಂದು ಉದಾಹರಣೆಯೆಂದರೆ ಪಾ.ವೆಂ. ಅವರು ತಾಯಿಯಿಂದ ತಿಂದ ಬೈಗುಳದ ಒಂದು ಶಬ್ದ 'ನಿರ್ಗಂಟಿಕ' ಎಂಬುದು ಆದರೆ ನಿಂದೆಯ ಮಾತಾಗಿ ದಕ್ಷಿಣ ಕನ್ನಡದ ಬ್ರಾಹ್ಮರಲ್ಲಿ ಇದೆ. ಅರ್ಥ ನಿಷ್ಕರುಣಿ, ದಯೆ, ಮಾಯೆ, ಮರುಕ, ಮಮತೆ ಇಲ್ಲದ ಭಾವಶೂನ್ಯ ಎಂದರ್ಥ. ಆದರೆ ಪಾ.ವೆಂ. ಅವರಿಗೆ ಪದದ ಇತಿಹಾಸದ ಬಗ್ಗೆ ತಿಳಿದಿರಲಿಲ್ಲ. ಅವರ ಕುತೂಹಲ ಬುದ್ಧಿ ಅದನ್ನು ಕೆದಕುತ್ತದೆ. ಅಮರಕೋಶದಲ್ಲಿ 'ನಿರ್ಗ್ರಂಥನ' ಅಂದರೆ ಕೊಲೆ ಎಂದಿದೆ. 'ನಿರ್ಗಂಟಿಕ' ಅದರ ಅಪಭ್ರಂಶವಿರಬಹುದು. ಮುಂದೆ ಜೈನ ಸಾಹಿತ್ಯವನ್ನು ಅವಲೋಕಿಸುತ್ತಾರೆ. ಜೈನರಲ್ಲಿ ನಿರ್ಗ್ರಂಥ ಎಂದರೆ ದಿಗಂಬರ ಸನ್ಯಾಸಿ. ಎಲ್ಲ ಮಮತೆಗಳನ್ನು ತೊರೆದು,

ದ್ವೇಶಗಳನ್ನು ತ್ಯಜಿಸಿ ಅಂದರೆ ಪ್ರಾಪಂಚಿಕ ಸಂಬಂಧದ ಎಲ್ಲ ಗ್ರಂಥಗಳನ್ನು ಕಡಿದು ಅವಧೂತನಾದವನು. ನಿರ್ಗ್ರಂಥ ಅಥವಾ ನಿಗ್ರಂಥಕ. ಜೈನರ ಪ್ರಭಾವ ಬೆಳೆದು ವೈದಿಕ ಧರ್ಮವನ್ನು ಅದು ಒತ್ತುತ್ತಿದ್ದಾಗ ಜೈನ ಸಾಧು ನಿರ್ಗ್ರಂಥಕ, ಇದು ವೈದಿಕರಲ್ಲಿ ನಿಂದಾಪದವಾಗಿ ಮಮತೆ ಇಲ್ಲದವನೆಂಬ ಕೆಟ್ಟ ಅರ್ಥದಲ್ಲಿ ನಿರ್ಗಂಟಿಕನಾಗಿ ಬಳಕೆ ಪಡೆದಿರಬಹುದು. ಇದು ಜೈನರ ಮೇಲೆ ಕ್ರೋಧವನ್ನು ತೋರಿಸುವ ಒಂದು ದಾರಿ ಇರಬಹುದೆಂದು ಬೈಗುಳದ ಮಾತುಗಳನ್ನು ವಿಶ್ಲೇಷಿಸಿದರೆ ಆಯಾ ಭಾಷೆಯನ್ನಾಡುವ ಜನಾಂಗದ ಸಾಂಸ್ಕೃತಿಕ, ನೈತಿಕ, ಐತಿಹಾಸಿಕ ಹಿನ್ನಲೆಯ ಮೇಲೆ ಅರ್ಥಪೂರ್ಣ ಬೆಳಕು ಬೀಳಬಲ್ಲದು. ಅವು ನಮ್ಮ ಪೂರ್ವಜರ ಪೂರ್ವಾಗ್ರಹಗಳನ್ನು ತೆರೆದಿಡಬಲ್ಲವು. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡದಲ್ಲಿ ಬಳಕೆಯಲ್ಲಿರುವ ಗಪ್ಲಾಸ್, ಬೊಜ್ಜ, ನಂಬ್ರ, ಅಂಬ್ರ, ಸಂಕ, ಶಿಮ ಇತ್ಯಾದಿ ಶಬ್ದಗಳ ಚಿದಂಬರ ರಹಸ್ಯವನ್ನು ಪತ್ತೆ ಮಾಡಲು ಪಾ.ವೆಂ. ಯತ್ನಿಸಿದ್ದಾರೆ.

ಸಂಸ್ಕೃತಿ, ಸಂಸ್ಕಾರ, ಸಂಸ್ಕೃತ: ಜಿಜ್ಞಾಸು ಪಾ.ವೆಂ. ಸಂಸ್ಕೃತಿ, ವಿಚಾರ, ಸಾಹಿತ್ಯ ಇವುಗಳ ಕುರಿತು ಟಿಪ್ಪಣಿರೂಪದಲ್ಲಿ ಬರೆದ ಅಂಶಗಳು 'ಸುಗಣಮೂಲ' ಪತ್ರಿಕೆ ಹಾಗೂ 'ಸಾಕ್ಷಿ' ಪತ್ರಿಕೆಗಳ ಸಂಚಿಕೆಗಳಲ್ಲಿ ವ್ಯಕ್ತವಾಗಿವೆ. ಶ್ರೀ ಗೌರೀಶ್ ಕಾಯ್ಕಿಣಿಯವರು 'ಸುಗುಣಮಾಲ ಪ್ರಭಾತ' ಸಂಚಿಕೆಯಲ್ಲಿ ಸಂಸ್ಕೃತಿ, ಸಂಸ್ಕೃತ, ಸಂಸ್ಕಾರ ಈ ೩ ಪದಗಳನ್ನು ಕುರಿತು ಬರೆದಿದ್ದ ನಿಷ್ಪತ್ತಿಗಳ ಕುರಿತು (Etymologicol Meaning) ಪ್ರತಿಕ್ರಿಯೆಯನ್ನು ಪಾ.ವೆಂ. ಹೀಗೆ ಬರೆದಿದ್ದಾರೆ.

೧. ಸಂಸ್ಕೃತಿ, ಸಂಸ್ಕಾರ: ಸಂಸ್ಕೃತಿ ಪದದ ಈಗೀನ ಅರ್ಥಛಾಯೆ ಪುರಾತನವಲ್ಲ ೧೯ನೇ ಶತಮಾನದ ವರೆಗಿನ 'ಆಪ್ಟೆ ಸಂಸ್ಕತ ಕೋಶ' ಬಂಗಾಲಿಕೋಶಗಳಲ್ಲಿ ನಮುದಾಗಿರದ ಪದವಿಯ ಮೋನಿಯರ್ ವಿಲಿಯಮ್ಸ್ ಕೋಶದಲ್ಲಿ ಸಂಸ್ಕೃತಿ ಪದದ ಅರ್ಥ ಅಣಿಗೊಳಿಸುವುದು, ರೂಪುಗೊಳಿಸುವುದು, ಧಾರ್ಮಿಕ ವಿಧಿಯಿಂದ ಪವಿತ್ರಗೊಳಿಸುವುದು–ಹೀಗೆ ಅರ್ಥಗಳಿವೆ. ಬಹುಶಃ ಪಶ್ಚಿಮದ ಸಂಪರ್ಕ ಬಂದ ಮೇಲೆ ೧೯೩೦ರ ಸುಮಾರಿಗೆ ಇಂಗ್ಲೀಷನ cultureಗೆ ಸಮಾನವಾಗಿ ಸಂಸ್ಕೃತಿ ಪದ ಪ್ರಚುರವಾದಂತೆ ಕಾಣುತ್ತದೆ. ಇದು ಒಂದು ಜನಾಂಗದ ವಿಸ್ತಾರವಾದ ಧಾರ್ಮಿಕ – ಲೌಕಿಕ ನಂಬಿಕೆ ವಿಧಿವಿಧಾನ, ತಾತ್ವಿಕ ಕಲ್ಪನೆ, ಕಲೆ–ಸಾಹಿತ್ಯ ಮುಂತಾದವುಗಳನ್ನು ಒಳಗೊಂಡ ನಡೆನುಡಿಗಳ ಒಂದು ಮೊತ್ತವಾಗಿ ಸಂಸ್ಕೃತಿ ಬಳಕೆಯಾಗುತ್ತಿದೆ. ಸಂಸ್ಕಾರ ಎಂಬ ಪದ cultureದ ಅರ್ಥಗಳನ್ನು ಅರ್ಥಗಳನ್ನು ಒಳಗೊಂಡರೂ ಅದು ವೈಯಕ್ತಿಕವಾದ ಧಾರ್ಮಿಕ ಸ್ತರದಲ್ಲಿ ವರ್ತಿಸುತಿತ್ತೇ ಹೊರತು ಸಾಮೂಹಿಕ ಲೌಕಿಕ ರಂಗದಲ್ಲಿ ಅಲ್ಲ.

ಸಂಸ್ಕೃತ ಇದು ಭಾಷಾವಾಚಕ ಪದ ಇದರ ನಿಷ್ಪತ್ತಿಯನ್ನು ಪಾವೆಂ. 'ಸುಡಾಗಮ' ಎಂಬ ಪಾಣೀನಿಯ (ಅಷ್ಟಾಧ್ಯಾಯಿ) ನಿಯಮವನ್ನು ಅನುಸರಿಸಿ ಹೀಗೆ ಹೇಳಬಹುದು

ಎಂದು ತಿಳಿಸುತ್ತಾರೆ. ಸಮ್ ಎಂಬ ಉಪಸರ್ಗಕ್ಕೆ 'ಸ' ವ್ಯಂಜನ–ಕಾರ–ಕ್ಕತ್ ಎಂದು ಪದ ಸಿದ್ಧಿ ಮಾಡಬಹುದು. 'ಸುಡಾಗಮ' ವಿಲ್ಲದ ಸಮ್–ಕಾರವಾಗಿಯೂ ಮಾಡಬಹುದು. ಹೀಗೆ ಮಾಡಿದಾಗ 'ಕೃ' ಧಾತುವಿಗೆ ' ಸ್ಕ' ವೆಂಬ ರೂಪ ಬರುವುದನ್ನು ಗಮನಿಸಬೇಕು ಆಗ ಸಮ್–ಕೃತ ಎಂದಾಗುತ್ತದೆ. ಈ ಕೂಡಿ ಕೊಳ್ಳುವುದೆಂದರೇನು? ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಪಾ.ವೆಂ. ಅವರು ಸಂಸ್ಕೃತದ ಹಿನ್ನಲೆಯನ್ನು ಹೀಗೆ ಸ್ಪಷ್ಟಿಪಡಿಸುತ್ತಾರೆ.

೧. ಪಾಣೀನಿಯ ಕಾಲದಲ್ಲಿ ಈ ಭಾಷೆಗೆ ಸಂಸ್ಕೃತವೆಂಬ ಹೆಸರಿರಲಿಲ್ಲ. ಇದನ್ನು 'ಭಾಷಾ' ಎಂದು ಪಾಣೀನಿ ಕರೆಯುತ್ತಾನೆ. ಭಾಷಾ ಎಂದರೆ ಸಾಮಾನ್ಯರು ಆಡುವ ಬಳಸುವ, ವ್ಯವಹಾರ ನುಡಿ. ಅಂದರೆ ವೇದಾದಿಗಳ ಧಾರ್ಮಿಕ ಭಾಷೆಗಿಂತ ಭಿನ್ನವಾದದ್ದು. ಆಗಿನ ಗ್ರಂಥಗಳಲ್ಲಿ 'ಲೋಕವೇದಯೋಃ' ಎಂಬ ಪದವನ್ನು ಬಳಸಲಾಗಿದ್ದು, ಲೋಕನುಡಿ ಎಂಬರ್ಥವನ್ನು ಕೊಡುತ್ತದೆ. ಇದನ್ನೇ ಗಮನಿಸಿ ಶ್ರೀ ಗೌರಿಶ್ ಕಾಯ್ಕಿಣಿಯವರು ಸಂಸ್ಕೃತ ಪದವೂ ಮುಂದೆ ಪ್ರಾಕೃತಿ ಮೊದಲಾದ ಜನಭಾಷೆಗೆ ಪ್ರತಿಯಾಗಿ ಸಂಸ್ಕೃತವನ್ನು ರೂಪಿಸಲಾಯಿತೆಂದು ಭಾವಿಸಿದ್ದಾರೆ. ಇದರರ್ಥ ಸಂಸ್ಕೃತವೂ ಕೃತಕ ಭಾಷೆಯೆಂದಾಗುತ್ತದೆ. ಈ ಭಾಷೆಯ ವ್ಯಾಕರಣ ನಿಯಮಗಳು 'ಅಷ್ಟಾಧ್ಯಾಯಿ'ಯ ನಂತರ ಖಚಿತ ಮತ್ತು ಬಿಗಿಯಾಗಿರುವುದರಿಂದ ಇದನ್ನು ಕೃತಕ ಎಂದು ನಂಬಲಾಗಿದೆ. ಪಾ.ವೆಂ. ಈ ಸಂಚಿಕೆಯನ್ನು ವಿಶ್ಲೇಷಿಸುತ್ತಾ 'ಸಂಸ್ಕೃತ' ಕೃತಕ ಭಾಷೆಯಲ್ಲ, ಅದು ಸಹಜವಾದ ಗ್ರಾಂಥಿಕ ಭಾಷೆಯೆಂದು ಸಮರ್ಥಿಸುತ್ತಾರೆ.

೨. ಪಾಣೀನಿ ಹೇಳುವ 'ಭಾಷಾ': ಆಡುನುಡಿಯೇ ಆಗಿದೆ. ಕೇವಲ ಗ್ರಾಂಥಿಕವಲ್ಲ. ಇಂದಿಗೂ ಉತ್ತರ ಪ್ರದೇಶಗಳಲ್ಲಿ ವಿದ್ವಾಂಸರು 'ಭಾಷಾ' ಪದವನ್ನು ಆಡುನುಡಿಗಳಿಗಾಗಿ ಬಳಸುತ್ತಾರೆ.

೩. ಪ್ರಾಕೃತ ಭಾಷೆಯ ವ್ಯಾಕರಣಕಾರ ಹೇಮಚಂದ್ರನು 'ಪ್ರಕೃತಿ' ಎಂದರೆ ಮೂಲದಲ್ಲಿದ್ದ, ಸಹಜವಾಗಿರುವ ಸಂಸ್ಕೃತವೇ 'ಪ್ರಕೃತಿ' ಎನ್ನುತ್ತಾನೆ. ಈ 'ಪ್ರಕೃತಿ'ಯಿಂದ ಹುಟ್ಟಿದ್ದು 'ಪಾಕೃತ್' ಎನ್ನುತ್ತಾನೆ. ಈಗ ನಮಗೆ ತಿಳಿದಿರುವಂತೆ 'ಪಾಕೃತ' ಭಾಷೆಗಳು ಸಂಸ್ಕೃತದ 'ಪ್ರಕೃತಿ'ಯಿಂದ ಹುಟ್ಟಿವೆ.

೪. ಪಾಣೀನಿಯ 'ಸಂಸ್ಕೃತ' ಭಾಷಾ ಎಂಬುದಾಗಿದ್ದು, ವೇದಭಾಷೆಯಾಗಿಯೂ ಬಳಕೆಯಾಗಿದೆ. ಮುಂದೆ ಅಭಿಜಾತ ಸಂಸ್ಕೃತ ಸಾಹಿತ್ಯದ ಭಾಷೆಯಾಗಿಯೂ ಬಳಕೆಯಾಗಿದೆ. ಹೀಗೆ 'ಭಾಷಾ' (ಸಂಸ್ಕೃತ) ಒಂದು ಸ್ವತಂತ್ರ ವ್ಯವಹಾರ ನುಡಿ, ಗ್ರಾಂಥಿಕ ನುಡಿಯಾಗಿ ಬೆಳೆದಿದೆ. ಈ ಭಾಷಾ ಸಹಜವಾಗಿಯೇ ಏಕರೂಪವಾಗಿಲ್ಲ. ಅದು ಉಚ್ಚಾರ ಮಾಡುವವರ ಪ್ರಾದೇಶಿಕ ಭಿನ್ನತೆಗಳಿಂದ ವೈವಿಧ್ಯಮಯವಾಗಿದೆ. ಆರ್ಯ ಜನಾಂಗದವರ ಸಹಜ 'ಭಾಷಾ' ಆಗಿದ್ದ ಇದು ಪ್ರಭೇಧಗಳನ್ನು ಹೊಂದಿತ್ತು. ಇದನ್ನು ಪಾಣೀನಿ ಒಂದು ವ್ಯವಸ್ಥಿತ ಭಾಷೆಯಾಗಿ ರೂಡಿಸಿದ. ಕಾಲಕ್ರಮೇಣ ಈ ಭಾಷಾ, ಆರ್ಯೇತರರ ಭಾಷೆಯೊಡನೆ ಕಲಬೆರಕೆಯಾಗಿ, ಅವಿದ್ಯಾವಂತರ ಮಾತುಗಳೊಡನೆ ಸೇರಿ ಭಾಷಾ

ಪ್ರಭೇಧಗಳಿಗೆ ಅವಕಾಶಕೊಟ್ಟಿತು. ಇದರ ಫಲವಾಗಿ ಪಾಲಿ, ಮಾಗಧಿ ಮೊದಲಾದ ಪ್ರಾಕೃತಗಳು ಬಂದವು. ಆಗ 'ಭಾಷಾ' ವಿದ್ಯಾವಂತರಿಗೆ ಮಾತ್ರ ಮೀಸಲಾಯಿತು. ಸಂಸ್ಕಾರವಿಲ್ಲದ ಪಾಕೃತಗಳಿಗಿಂತ ಈ ಭಾಷಾ ವಿದ್ಯಾವಂತರಿಂದ ಕಟ್ಟುಪಾಡುಗಳನ್ನು ಹೊಂದು ಶುದ್ಧ 'ಭಾಷಾ' ಆಗುವ ಹಂತಕ್ಕೇರಿತು. ಹೀಗೆ ಪ್ರಕೃತಿಯಿಂದ ಸಂಸ್ಕಾರಗಳನ್ನು ಹೊಂದುತ್ತಾ 'ಭಾಷಾ' ಸಂಸ್ಕೃತವಾಗಿದೆ. ಮುಂದೆ ಅನೇಕ ಕಾಲ ಇದು ವಿದ್ಯಾವಂತರ, ಕವಿಗಳ, ಭಾಷೆಯಾಗಿ ಗ್ರಂಥಲೋಕವನ್ನು ಬೆಳಗಿತು.

ಆ. ಇತರ ಕೃತಿಗಳಲ್ಲಿ ಭಾಷಾವಿಚಾರ:

ಪಾ.ವೆಂ. ಅವರು ಪದಾರ್ಥ ಚಿಂತಮಣಿಯ ಕೃತಿಗೆ ಹೊರತಾಗಿ 'ಹೊಸಗನ್ನಡದ ಹಿರಿಯರು' (೨೦೦೩) ಭಾಷಾವಿಭಾಗದಲ್ಲಿ ಆಶ್ಚರ್ಯಕರವಾದ ವಿಷಯಗಳನ್ನು ಮಂಡಿಸುತ್ತಾರೆ. 'ವಿವಿಧ ಭಾಷೆಗಳ ಗತಿ'–ಲೇಖನದಲ್ಲಿ ಪ್ರಸ್ತಾಪಿಸಿರುವ ಅಸ್ಟ್ರೇಲಿಯಾದ 'ಅರಂಟಾ ಭಾಷೆ' ಅಂಡಮಾನದ 'ನಿಗ್ರೀಟೊ' ಭಾಷೆ ಇವನ್ನು ಯಾರು ಕೇಳದೆ ಇದ್ದರೂ ಪ್ರಸಂಗಾನುಸಾರವಾಗಿ ಅವುಗಳ ವೈಶಿಷ್ಟ್ಯವನ್ನು ವಿವರಿಸುತ್ತಾರೆ. ಮನುಷ್ಯ ಭಾವನೆಗಳನ್ನು ಪ್ರಕಟಿಸಲು ೬೦೦ ಶಬ್ದಗಳು ಬೇಕೆಂದು ಹೇಳುತ್ತಾರೆ. ಆಸ್ಟ್ರೇಲಿಯಾದ 'ಅರಂಟಾ' ಭಾಷೆಯಲ್ಲಿ ನಾಲ್ಕು–ಐದು ನೂರು ಶಬ್ದಗಳಿವೆ. ಆದರೆ ಈ ಜನಾಂಗ ಜಗತ್ತಿನ ಯಾವುದೇ ಜನಾಂಗಕ್ಕೂ ಸರಿಮಿಗಿಲೆನಿಸಿದ್ದಾರೆ. ಮಲಯಿ ಭಾಷೆಯಲ್ಲಿ ಹೊಡೆಯುವುದಕ್ಕೆ –ಅಂದರೆ ಪೆಟ್ಟು ಕೊಡಲಿಕ್ಕೆ ೧೫ ಪ್ರತ್ಯೇಕ ಶಬ್ದಗಳಿವೆಯಂತೆ– ಹೀಗೆ ಪಾ.ವೆಂ. ಅವರು ಪದ ಅರ್ಥಗಳ ಹುಡುಕಾಟದ ಜೊತೆ ಭಾಷೆಯನ್ನು ಜನಾಂಗವನ್ನು ಪರಿಚಯಿಸುತ್ತಾರೆ. ಜೊತೆಗೆ ವಿಲಕ್ಷಣ ಗತಿಯನ್ನು ಅರಸುತ್ತಾ ಸಾಗುತ್ತಾರೆ.

ಭಾಷೆ ಮತ್ತು ಅವಯವಗಳು: ಲೇಖನದಲ್ಲಿ ನಮ್ಮ ದೇಹಾಂಗಗಳ ಕನ್ನಡ ಶಬ್ದ ಒಂದೊಂದನ್ನು (ಕಣ್ಣು, ಹುಬ್ಬು, ಮೂಗು, ಕೊರಳು) ಎತ್ತಿಕೊಂಡು ಅವುಗಳಿಗೆ ಉತ್ತರ ಪದವಾಗಿ ಶಬ್ದ ಜೋಡಿಸಿ ಆ ಶಬ್ದ ಪುಂಜದಿಂದ ಶಿಖೆ, ತಲೆಕೂದಲಗಂಟು ಕೂದಲು ಸೀಳುವುದು, ಕೂದಲಿನಿಂದ ಕೊರಳು ಕೊಯ್ಯುವುದು. ಹೀಗೆ ಚಾಣಕ್ಯನ ಬಿಚ್ಚಿದ ಜಡೆ, ದ್ರೌಪದಿಯ ಬಿಚ್ಚಿದ ತುರುಬು ಹೀಗೆ ವೈವಿಧ್ಯಮಯವಾದ ಅರ್ಥ ನಿಷ್ಪತ್ತಿಯನ್ನು ಹೊರಡುವ ರೀತಿಯನ್ನು ವಿವರಿಸಿದ್ದಾರೆ.

'ರಾಮ' ಶಬ್ದದ ವಿಚಾರ ಲಹರಿ: 'ರಾಮಯಣ'ದಿ ಪರಿಚಿತವಾದ ಹೆಸರು 'ರಮ್' ಎಂಬ ಧಾತುವಿನಿಂದ ಹುಟ್ಟಿತು. ಎಂಬುದು ಒಪ್ಪಿತವಾದ ಮಾತು. ರಮಾ ಕ್ರೀಡಾಯಂ ಧಾತು ಪಾಠ. ಪ್ರಾಚೀನ ಭಾಷೆಯಲ್ಲಿ ಇಂಡೋ ಯುರೋಪಿಯನ್ ಧಾತು ಪಾಠ, ಪ್ರಾಚೀನ ಭಾಷೆಯಲ್ಲಿ ಇಂಡೋ ಯುರೋಪಿಯನ್ ಧಾತು, ಪ್ರಾಚೀನ ಇರಾಣದ ಜೆಂದ್, ಯುರೋಪಿನ ಗ್ರೀಕ್, ಲಿತುವೇನಿಯನ್, ಗ್ರಾಫಿಕ್ ಭಾಷೆಗಳಲ್ಲಿ 'ರಮ್' ಧಾತುವನ್ನು ರೂಪದಲ್ಲಿಯೂ ಅರ್ಥದಲ್ಲಿಯು ಹೋಲುವ ಧಾತುಗಳಿವೆ.

ಇದರಿಂದ ಹುಟ್ಟಿದ ಅರಾಮ (ವಿಶ್ರಾಂತಿ ಯೋಗ್ಯವಾದ ಉಪದನ) ವಿರಾಮ, ಅಭಿರಾಮ ರಮಣೀಯ ರಮ್ಯರಮಣ, ರಮಣಿ, ರತ, ರತಿ ಹೀಗೆ ನಿತ್ಯೋಪಯೋಗದಲ್ಲಿ ಅನೇಕ ಶಬ್ದಗಳಿವೆ. ಸಂಸ್ಕೃತದಲ್ಲಿ, ಪರ್ಶಿಯನ್ ಭಾಷೆಯಲ್ಲಿ ಇದೇ ಅರ್ಥಸೂಚಿಸುತ್ತದೆ. 'ರಾಮ'ನನ್ನು ನೀಲ ಬಣದಲ್ಲಿ ಚಿತ್ರಿಸುವುದು ಸಂಪ್ರದಾಯ. 'ರಾಮ ಶಂಕುಂತಿ' ಎಂದರೆ ಕಪ್ಪು ಹಕ್ಕಿ ರಾತ್ರಿಗೆ ಕಪ್ಪು ಎಂದು ಹೇಳುವುದು ಇದೆ (ಕಪ್ಪಾಯಿತು, ಕತ್ತಲಾಯಿತು) ಬೆಳಕಿನಲ್ಲಿ ಇದ್ದು ಇದ್ದು ರಾತ್ರಿ ಕಣ್ಣಿಗೆ ವಿಶ್ರಾಂತಿ ಕೊಡುತ್ತದೆ ಎಂಬ ತಾತ್ಪಾರ್ಯ. 'ರಾಮ' – ಬಿಳಿ ಎಂಬರ್ಥವನ್ನು ಕೊಡುತ್ತದೆ. ಕೋಶಗಳು, ಬಲರಾಮನ ಮೈ ಬಣ್ಣ ಬಿಳಿ. ಕಪ್ಪು ಮತ್ತು ಬಿಳಿ ಎಂಬ ರೇ ಅರ್ಥವ್ಯಾ ಮಿಶ್ರಣ 'ರಾಮ' ಶಬ್ದಕ್ಕೆ ಸೀಮಿತವಾದುದಲ್ಲ. ಶ್ಯಾಮ ಶಬ್ದವು ಕಪ್ಪು ಬಿಳಿ ವಿರುದ್ಧಾರ್ಥವನ್ನು ಕೊಡುತ್ತದೆ. ರಾಮತ್ವ–ಶಾಮತ್ವದಲ್ಲಿರಬಹುದಾದ ಬೆಳ್ಪು ಯುರೋಪಿಯನ್ನರ ಬೆಳ್ಪಲ್ಲವೆಂದು ಎಚ್ಚರಿಸಿ ಪಾ.ವೆಂ. ಅಚ್ಚಬಿಳಿಯನ್ನು ಸಹ್ಯವಾಗಿ ಮಾಡುವ ನಸುಗಪ್ಪುತನ ಕದಳೀಗರ್ಭದಲ್ಲಿ ಕೂಡ ಇಲ್ಲವೇ? ಎಂದು ಪ್ರಶ್ನಿಸುತ್ತಾರೆ.

ಇ. ತುಳು ಕನ್ನಡ ಮತ್ತು ಸಂಸ್ಕೃತ ಶಬ್ದ ವಿಹಾರ:

ಉಡುಪಿ ಪರಿಸರದಲ್ಲಿ (೨೦೦೨)ಕೃತಿಯಲ್ಲಿ ಹಲವಾರು ತುಳುಪದಗಳ ನಿರುಕ್ತಿಯನ್ನು ಉಲ್ಲೇಖಿಸಿದ್ದಾರೆ. ಪಾ.ವೆಂ. ಅವರ ಸೋಪಜ್ಞತೆ ತುಳು–ಕನ್ನಡ ಶಬ್ದಶೋಧನೆಯಲ್ಲಿ ವ್ಯಕ್ತವಾಗುತ್ತದೆ. ಈ ವಿಭಾಗದ ಮೊದಲ ಲೇಖನವಾದ 'ಸಾಮಾನ್ಯ ತುಳು ಬ್ರಾಹ್ಮಣ ತುಳು' ಎರಡು ಭಾಷೆಯ ಹೋಲಿಸುತ್ತಾರೆ. ಕಾಲಕ್ರಮೇಣ ಆದ ಬದಲಾವಣೆಯನ್ನು ಸೋದಾಹರಣವಾಗಿ ವಿವರಿಸುತ್ತಾರೆ. ತುಳುವಿನಲ್ಲಿ ಬ್ರಾಹ್ಮಣರು 'ಅರ್ಥ'ರೂಪ (arehaie–ಆರ್ಕಯಿಕ್) ಉಳಿಸಿ ಕೊಂಡಿದ್ದಕ್ಕೆ ಎದ್ದು ಕಾಣುವ ಉದಾರಣೆ ಎಂದರೆ ಸ್ವರಾದಿದ್ರಾವಿಡ ಪದಗಳು ಬ್ರಾಹ್ಮಣ ತುಳುವಿನಲ್ಲಿ ಹಾಗೇ ಉಳಿದೆ. ಸಾಮಾನ್ಯ ತುಳು ಪ್ರಥಮ ಹ್ರಸ್ವ ಸ್ವರವನ್ನು ಕಳೆದುಕೊಂಡು ತೃತೀಯಾಕ್ಷರಕ್ಕೆ ಒತ್ತು ತಂದು ಕೊಟ್ಟದ್ದು ಉದಾಹರಣೆ

ಬ್ರಾಹ್ಮಣತುಳು	ಸಾಮಾನ್ಯತುಳು	ಕನ್ನಡ
ಅಡಕ್	ದಕ್ಕ್	ಬಿಸಾಡು
ಅಡಪು	ದಪ್ಪು	ಉಳು
ಅಳಪು	ಲಪ್ಪು	ಅಳತೆಮಾಡು
ಉಗಿಪು	ಗುಪ್ಪು	ಚೆಲ್ಲು
ಒಳೆಪು	ಲೆಪ್ಪು	ಕರೆ

ತುಳುಭಾಷೆಯ ಪ್ರಥಮ ಮಹಾಕಾವ್ಯವಾದ 'ಶ್ರೀಭಾಗವತೊ' ಎಲ್ಲ ಓದುಗರಿಗೂ

ಅರ್ಥವಾಗುವುದು ಕಷ್ಟ. ಕಬ್ಬಿಣದ ಕಡಲೆಯಂತಿರುವ ಈ ಕಾವ್ಯವನ್ನು ಪಾ.ವೆಂ. ಇಡಿಯಾಗಿ ಅಭ್ಯಸಿಸಿದ ಕೆಲವು ಪ್ರಾಜ್ಞರಲ್ಲಿ ಒಬ್ಬರಾಗಿದ್ದಾರೆ. ಅದರಲ್ಲಿ ಬರುವ 'ಸ್ಟ' ಎಂಬ ಧ್ವನಿಮಾವನ್ನು ಭಾಷಾವಿಜ್ಞಾನದ ನೆಲೆಯಲ್ಲಿ ವಿವೇಚಿಸಿದ್ದಾರೆ. ಅದರಂತೆ ಪುತ್ತೂರು, ಶಿವಳ್ಳಿ, ಶಿವರೂಪ್ಯ ಈ ಸ್ಥಳನಾಮಗಳ ಮೂಲವನ್ನು ಹುಡುಕಾಡಿದ್ದಾರೆ. ಸ್ಥಳನಾಮ ವಿಜ್ಞಾನದಲ್ಲಿ ಪರಿಣತರು ಎಂಬ ಅಂಶ ಇಲ್ಲಿ ವ್ಯಕ್ತವಾಗಿದೆ.

ಇತಿಹಾಸ ಕಾಲದಲ್ಲಿ ಉಡುಪಿ ತೀರ ಚಿಕ್ಕ ಪ್ರದೇಶವಾಗಿದ್ದೀತು. ಈಗ ವಿಶಾಲ ಉಡುಪಿಗೆ ಹಿಂದೆ ಇದ್ದ ಹೆಸರು ಶಿವಳ್ಳಿ. ಇದರ ಮೂಲರೂಪ ಶಿವ-ವಳ್ಳಿ, ತುಳುವಿನಲ್ಲಿ ಶಿವೊಳ್ಳಿ, ಶಿವವೊಳ್ಳಿ, ಇಲ್ಲಿ ಬೊಳ್ಳಿ (ಬೆಳ್ಳಿ) ಕ್ರಮೇಣ ಸಂಸ್ಕೃತದ 'ರಜತ'ವಾಗಿ ರಜತಪೀಠವಾಗಿ ನಾಮಾಂತರವಾಯಿತು. 'ಶಿವರೂಪ್ಯ' ಎಂಬ ಶಬ್ದ ಆಗಮನ ಹೀಗಾಯಿತು? 'ರೂಪ್ಯ' ಎನ್ನುವ ಉತ್ತರ ಪದವುಳ್ಳ ಗ್ರಾಮಗಳು ಉತ್ತರ ಭಾರತದಲ್ಲಿವೆ ಎಂಬುದನ್ನು ಸೂಚಿಸುತ್ತಾ 'ರೂಪ್ಯ' ಎನ್ನುವುದಕ್ಕೆ ಸಂಸ್ಕೃತದಲ್ಲಿ 'ಇದಕ್ಕೆ ಸಂಬಂಧಿಸಿದ್ದು' ಎಂಬ ಅರ್ಥವಿದೆಯೆಂದು ಹೇಳಿ 'ಶಿವನಿಗೆ ಸಂಬಂಧಿಸಿದ ಊರು' ಶಿವರೂಪ್ಯ ಎಂಬ ನಿಲುಮೆಗೆ ಬರುತ್ತಾರೆ.

ದಕ್ಷಿಣಕನ್ನಡ ಶಬ್ದ ಭಂಡಾರವನ್ನು ಉರ್ದು-ಪರ್ಶಿಯನ್ ಶಬ್ದಗಳು ಸೇರಿದ ಬಗೆಯನ್ನು 'ಖಾವಂದ'ರಿಂದ ಬಿರ್ಕಡ್ ಜೋತ್'ರವರೆಗೆ ಎಂಬ ಲೇಖನದಲ್ಲಿ ಹೇಳುತ್ತಾರೆ. ಧರ್ಮಸ್ಥಳದ ಹೆಗ್ಗಡೆಯವರನ್ನು 'ಕಾವಂದರು' ಎಂದು ಸಂಬೋಧಿಸುತ್ತಾರೆ. ಖಾವಿಂದ-ಒಡೆಯ, ಪರ್ಶಿಯ ಶಬ್ದ ಬಿಜಾಪುರ ಸುಲ್ತಾನರ ಆಳ್ವಿಕೆಯಲ್ಲಿ ಈ ಶಬ್ದ ಸೇರಿಕೊಂಡಿದೆ. ಮಹತೋಭಾರ ಶ್ರೀಮದ್........... (ಭಾರಿತೂಕ) ಮಾತ್‌ಬಾರ್ ಉರ್ದು ಪದದ ಮೂಲ ಅರಬ್ಬಿ ಮುಅತಬರ್ ರೂಪಾಂತರವಾಗಿದೆ. ದೇವಾಲಯದ ಮೊಕ್ತೇಸರರು ಮುಕ್ತೇಶ್ವರ ಎಂದು ಸಂಸ್ಕೃತಿಕವಾದಂತೆ.

ಬೈಗಳ ಪದಗಳಿಗೆ ಉರ್ದು ಜನಪ್ರಿಯ ಆಕರ. ಬಿರ್ಕಡ್‌ಚೋತ್ ತುಳು ಕನ್ನಡದಲ್ಲಿದೆ. ಇಲ್ಲಿ ಅವ್ಯವಸ್ಥಿತ ಚಿತ್ರ ಸ್ವೇಚ್ಚಾರಿಚಾರಿ ಎಂಬ ಅರ್ಥವಿದೆ. **ಬಿರ್ಕಡ್** ಎಂಬುದು ತುಳುವಿನ ಹಾಗೆ ಕಾಣುತ್ತದೆ. ಚೆಲ್ಲಿದ್ದು ವಿಕ್ಷಿಪ್ತ ಎಂಬಂರ್ಥವನ್ನು ಹೇಳಲು ಸಾಧ್ಯ **ಬಿಕ್ಕ** ಎಂದರೆ ಅರಬ್ಬಿಯಲ್ಲಿ ಕನ್ಯತ್ವ ಎಂದರ್ಥ. ಬಿಕ್ಕತೋಡ್ ಎಂದರೆ **ಕನ್ಯತ್ವದ ಅಪಹಾರ**. ಉರ್ದುವಿನಲ್ಲಿ ಕೆಟ್ಟ ಅರ್ಥವೇನಿಲ್ಲ. ಆದರೂ ಬಲವಂತದಿಂದ ಹುಡುಗಿಯರನ್ನು ಕೆಡಿಸುವ ಎಂಬಂರ್ಥದಲ್ಲಿ ಪ್ರಯೋಗವಾಗಿ, ಬೈಗಳ ಪದವಾಗಿರಲೂ ಬಹುದು. ಕಾಲಾಂತರದಲ್ಲಿ ಮೂಲಅರ್ಥ ಮರೆತಿರಬೇಕು. ಹೀಗೆ ತುಳುಕನ್ನಡ ಶಬ್ದ ವಿಹಾರದಲ್ಲಿ ಪಾ.ವೆಂ. ಅವರ ಚಿಕಿತ್ಸಕ ಮನೋಬಾವ ವಿಹರಿಸಿರುವ ರೀತಿಯನ್ನು ಕಾಣಬಹುದು.

ಇದಕ್ಕೂ ಮುಂಚೆ 'ಕಾಮಾರ್ಥಕೋಶ' ಎಂಬ ಅಂಕಣವನ್ನು 'ರತಿವಿಜ್ಞಾನ ಧರ್ಪಣ' ಪತ್ರಿಕೆಯಲ್ಲಿ ಕೊಡುತ್ತಿದ್ದರು. ಇಲ್ಲಿ ಬಳಸಲಾದ ಪದಗಳು ಲೈಂಗಿಕ ಶಿಕ್ಷಣಕ್ಕೆ

ಪೂರಕವಾಗುವ ಪಾರಿಭಾಷಿಕ ಪದಗಳು. ಆಚಾರ್ಯರೊಬ್ಬರೆ ಕನ್ನಡದಲ್ಲಿ ಈ ಪ್ರಯತ್ನವನ್ನು ಮಾಡಿರುವುದನ್ನು ಕಾಣುತ್ತೇವೆ.

ಭಾಷಾಭ್ಯಾಸದಲ್ಲಿ ವ್ಯಾಕರಣ ಒಂದು ಸಾಂಪ್ರದಾಯಿಕ ಅಧ್ಯಯನ. ಭಾಷಾವಿಜ್ಞಾನ ಆಧುನಿಕ ಇದರಿಂದ 'ವಿಶ್ವಭಾಷಾ' ಪರಿವಾರದ ಅರಿವು ಮೂಡಿತು. ಐತಿಹಾಸಿಕ ಕಾಲ್ಪನಿಕ ಪರಿಕಲ್ಪನೆಗಳು ಒಡಮೂಡಿದವು. ಈ ಶಬ್ದಗಳ ಮಹತ್ವವೆಂದರೆ ಹೆಚ್ಚಿನ ಸಂದರ್ಭದಲ್ಲಿ ಇವು ಪೂರ್ಣ ನಾಶವಾಗದೆ ಮತ್ತೆ ಮತ್ತೆ ಜನಿಸುತ್ತದೆ. ಹಳೆಯ ಹುಟ್ಟಿನೊಂದಿಗೆ ಹೊಸ ಹುಟ್ಟು ಉಳಿಯುತ್ತದೆ. ನಾವು ಬಳಸುವ ಯಾವ ಶಬ್ದವನ್ನು ಚುಚ್ಚಿದರೂ ತನ್ನ ಗತಕಾಲದ ಲೋಕವನ್ನು ತೆರೆದಿಡುತ್ತದೆ. ನಷ್ಟ ನಾಗರೀಕತೆಗಳೆಲ್ಲವೂ ತಮ್ಮ ಅನ್ಯೋನ್ಯ ಕೊಳು ಕೊಡುಗೆಗಳಲ್ಲಿ ವಹಿಸಿದ ಪಾತ್ರಗಳು ಕಣ್ಣೆದುರು ತೆರೆದುಕೊಳ್ಳುತ್ತದೆ. ಶಬ್ದಗಳ ಸಾಮಾನ್ಯತೆ ಒಂದು ಮಾಯೆ. ಈ ಅನ್ವೇಷಣೆ ಈ ಮಾಯೆಯ ತೆರೆಯನ್ನು ತೆರೆಸಿದರೆ ಅವುಗಳ ಅಸಮಾನ್ಯತೆಯ ಅರಿವು ತಮ್ಮನ್ನು ಚಿಂತನೆಗೆ ಒಳಪಡಿಸಿ ಬೆರಗುಗೊಳಿಸುತ್ತದೆ.

ಶಬ್ದಗಳ ತಳಸ್ಪರ್ಶಿ ಅಧ್ಯಯನವಷ್ಟೆ **ಪದಾರ್ಥಚಿಂತಾಮಣಿ**ಯ ಪಾ.ವೆಂ. ಅವರ ಉದ್ದೇಶವಲ್ಲ. ಅನೇಕ ದೃಷ್ಟಿಗಳಿಂದ ಶಬ್ದಗಳನ್ನು ನೋಡಿದ್ದಾರೆ. ಶಬ್ದ ಮೂಲವನ್ನು ಶೋಧಿಸುವುದರಿಂದ ಪಾ.ವೆಂ. ತೃಪ್ತರಾದಂತಿಲ್ಲ. ಅವು ವಿವಿಧ ಐತಿಹಾಸಿಕ, ಮನುವಂಶ ಚರಿತ್ರೆಯ, ಅರ್ಥವ್ಯವಸ್ಥೆಯ, ಸಂಸ್ಕೃತಿ ಸಂಪ್ರದಾಯಗಳ, ಜನಾಂಗ ವಲಸೆಯ ಬಗ್ಗೆ ತಿಳಿಸುತ್ತದೆ. ಮನುಷ್ಯನ ವಿಚಾರ ರೀತಿಯಲ್ಲಿರುವ ಸಾಮ್ಯ ವೈಷಮ್ಯಗಳನ್ನು ಬೇರೆ ಭಾರತೀಯ, ವಿದೇಶಿಯ ಭಾಷೆಗಳ ಪದಗಳ ವಿಕಾಸದೊಡನೆ ಹೋಲಿಸಿರುವುದು ಇಲ್ಲಿ ಮಹತ್ವದ ಅಂಶ. ಪದಾರ್ಥ ಚಿಂತಾಮಣಿಯ ಭಾಷೆ ಶುಷ್ಕ ಶಾಸ್ತ್ರವಾಗಿಲ್ಲ ಪದಪರಂಪರೆಯ ಕುರಿತು ಜನಸಾಮಾನ್ಯರಿಗೂ ಅರ್ಥವಾಗುವಂತೆ ಬರೆದಿರುವುದು ಇಲ್ಲಿಯ ಅಗ್ಗಳಿಕೆ. ಬರಹದೊಂದಿಗೆ ಅಲ್ಲಲ್ಲಿ 'ಲಾಂಗೂಲಾಚಾರ್ಯರ' ಹಾಸ್ಯ ವಿಡಂಬನೆಗಳು ಮಿಂಚುತ್ತವೆ. ೮೦೦ ಪದಗಳ ಬಗ್ಗೆ ವಿದ್ವತ್ ಪೂರ್ಣವಾಗಿಯೂ, ಸ್ವಾರಸ್ಯವಾಗಿಯೂ ವ್ಯುತ್ಪತ್ತಿಯ ಅರ್ಥಾಂತರ ವಿವಕ್ಷೆಯನ್ನು ಕನ್ನಡದಲ್ಲಿ ನೀಡುವ ಪ್ರಥಮ ಪ್ರಯತ್ನವಿದು. ಕನ್ನಡದ ಪದಪರಂಪರೆಯ ಕ್ಷೇತ್ರಕ್ಕೆ ನಾಂದಿ ಹಾಡಿದವರು. ಶಬ್ದಗಳು ಚಿರಂಜೀವಿ, ಕಾಮರೂಪಿ, ವಿಶ್ವಸಂಚಾರಿ, ನಿರಾಳವನ್ನು ಬಣ್ಣಿಸಲಾರದೆ ಅಲ್ಲಮ ಪ್ರಭು, ಅಕಟಕಟಾ ಶಬ್ದದ ಲಜ್ಜೆಯ ನೋಡ! ಎನ್ನುತ್ತಾನೆ. ಪಾ.ವೆಂ. ಶಬ್ದದ ಲಜ್ಜೆಯನ್ನು ನೋಡುತ್ತಾ ನಿಲ್ಲದೆ ಇನ್ನು ಮುಂದೆ ಹೋಗಿ ಶಬ್ದದ ಅವತಾರಗಳನ್ನು ಅನಾವರಣಗೊಳಿಸುತ್ತಾ ಸಾಂಸ್ಕೃತಿಕ ಚಿಂತನೆಯನ್ನು ಇಲ್ಲಿ ಬೆಳೆಸಿದ್ದಾರೆ. ಯಾಸ್ಕನ ಪರಂಪರೆಯಲ್ಲಿ ಮುನ್ನಡೆದ ಪಾ.ವೆಂ. ಕನ್ನಡದ ಮಹತ್ತ್ವದ ಚಿಂತಾಮಣಿ ಎಂದು ಗುರುತಿಸಿಕೊಂಡವರು.

ಅಧ್ಯಾಯ–೮

ಸಮಾರೋಪ

ಫಲಿತಗಳು

ಪಾ.ವೆಂ. ಆಚಾರ್ಯ ೧೯೧೫ – ೧೯೯೨:

ಪಾ.ವೆಂ. ಅವರನ್ನು ಪ್ರತ್ಯಕ್ಷ ಕಾಣುವ ಅವಕಾಶ ನನಗೆ ಸಿಕ್ಕಿಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ **ಕಸ್ತೂರಿ**ಯ ಓದುಗಳಾಗಿದ್ದೆ ಮುಂದೆ ನಾನು ಹುಬ್ಬಳ್ಳಿಗೆ ಮದುವೆಯಾಗಿ (೧೯೯೬)ವೃತ್ತಿ ಮಾಡುವ ಹೊತ್ತಿಗೆ ಅವರು ಗತಿಸಿದ್ದರು. ಆದರೆ ಉಡುಪಿಯ ಪರಿಸರದ, ತುಳುಸಮೂದಾಯದ ವ್ಯಕ್ತಿಯಾಗಿ ನಾನು ಪಾ.ವೆಂ. ಆಚಾರ್ಯರ ಬಗ್ಗೆ ಹೊಂದಿದ್ದ ಅಭಿಮಾನ, ಗೌರವ, ಅವರ ಬಗ್ಗೆ ತಿಳಿಯುತ್ತಾ ಬಂದಂತೆ. ಪಾ.ವೆಂ. ಆಚಾರ್ಯರ ಬದುಕು ಬರಹ ಅಧ್ಯಯನ ಮಾಡಬೇಕೆಂದು ಕೊಂಡಾಗ ನನಗೆ ದೂರದಿಂದ ಅವರ ಬಗ್ಗೆ ಮೂಡಿದ ಭಾವನೆ ಅಥವಾ ಕಲ್ಪನೆ ಹೀಗಿತ್ತು. ಆಚಾರ್ಯರು **ಕಸ್ತೂರಿ**ಯ ಸಂಪಾದಕರಾಗಿ ಗಳಿಸಿದ ಜನಪ್ರಿಯತೆ ಮತ್ತು **ಪದಾರ್ಥಚಿಂತಾಮಣಿ**ಯಿಂದ ಅವರು ಪಡೆದ ವಿದ್ವತ್‌ಲೋಕದ ಮನ್ನಣೆ ಇವೆರಡು ಅಸಾಧಾರಣವಾದ ಒಬ್ಬ ವ್ಯಕ್ತಿಯ ಸಾಧನೆ. ಪಾ.ವೆಂ. ಅವರು ನೋಡಲು ತೀರ ಸಾಮಾನ್ಯ ವ್ಯಕ್ತಿಯಾಗಿದ್ದರು. ಪ್ರತಿಭೆ ಮತ್ತು ಪ್ರಾಮಾಣಿಕ ಪರಿಶ್ರಮದಿಂದ ಇವರೊಬ್ಬ ಸಾಧಕ ವ್ಯಕ್ತಿ ಆಗಿದ್ದಾರೆ. ಈ ಕಲ್ಪನೆಯ ವಿಸ್ತಾರ ರೂಪವೇ ಅಧ್ಯಯನದ ವಸ್ತು ಅಥವಾ ಗುರಿ ಎಂದು ನಾನು ಭಾವಿಸಿದೆ. ಅವರ ಬಗ್ಗೆ ಅದಾಗಲೇ ಅವರ ಆಪ್ತರು ಮಿತ್ರರು ಅಭಿಮಾನಿಗಳು ಕೆಲವು ಸಂದರ್ಭಗಳಲ್ಲಿ ಅಭಿನಂದನ ಪೂರ್ವಕ ಲೇಖನಗಳನ್ನು, ಪುಸ್ತಕಗಳನ್ನು ಪ್ರಕಟಿಸಿದ್ದರು. ಅವುಗಳನ್ನು ಗಮನಿಸಿದಾಗ ಪಾ.ವೆಂ. ನಾನಿಗಾಗಲೇ ತಿಳಿದುಕೊಂಡಷ್ಟು ಸ್ಥೂಲವಾಗಿ ಅಸಾಧಾರಣ ಸಾಧಕ ಮಾತ್ರ ಅಲ್ಲ. ಈ ವ್ಯಕ್ತಿಯ ಬದುಕು ವ್ಯಕ್ತಿ ಬರೆಹದಲ್ಲಿ ಅನ್ಯೋನ್ಯವಾದ ಏನೋ ಒಂದು ಸಂಬಂಧವಿದೆ. ಬರಹಕ್ಕಾಗಿಯೇ ಹುಟ್ಟಿ ಬಂದಿರುವಷ್ಟು ಪ್ರತಿಭೆ ಇವರಲ್ಲಿ ಇದೆ. ಇದನ್ನು ಅಭಿಜಾತ ಪ್ರತಿಭೆ ಅನ್ನಬಹುದೆಂದು ಕೊಂಡೆ. ಅವರ ಕೃತಿಗಳನ್ನು ಒಂದೊಂದಾಗಿ ಓದುತ್ತಾ ಹೋದಂತೆ ಮತ್ತು ಕಸ್ತೂರಿಯ ಸಂಪಾದಕನಾಗಿ ಅವರು ಮಾಡಿದ ಕೆಲಸಗಳನ್ನು ಅರ್ಥಮಾಡಿಕೊಳ್ಳುತ್ತಾ ಹೋದಂತೆ ಪಾ.ವೆಂ. ಅವರ ಅಭಿಜಾತತೆ ಅಗಾಧವೂ ಕನ್ನಡದ ಮಟ್ಟಿಗೆ ವಿಶಿಷ್ಟವೂ ಆಗಿ ಕಾಣತೊಡಗಿದವು.

ಪಾ.ವೆಂ. ಏಕಕಾಲಕ್ಕೆ ಒಬ್ಬ ಚಿಂತನ ಶೀಲರಾಗಿ ಗಂಭಿರರು ಆಗಿ ವ್ಯಕ್ತವಾಗುವಂತೆ ವಿಡಂಬಕನಾಗಿ, ವಿನೋದಿಯೂ ಆಗಿ ಬರೆಯುತ್ತಾರೆ. ಇವೆರಡೂ ಅವರ ಇಮ್ಮುಖಗಳಲ್ಲ. ಬರಹದ ಶೈಲಿಯಷ್ಟೆ ವಿಭಿನ್ನನೆಲೆಯದು. ಅಂದರೆ ಪಾ.ವೆಂ. ಚಿಂತನಶೀಲರಾಗಿ, ಗಂಭೀರ ಮನುಷ್ಯನೆಂದು ವೃತ್ತಿಯಲ್ಲಿ, ಸಮಾಜದಲ್ಲಿ, ಸಂಸ್ಕೃತಿಯಲ್ಲಿ ಕಾಣಿಸಿಕೊಂಡ ಒಬ್ಬ ನಾಗರಿಕ. ಆಧುನಿಕ ಜೀವನದ ಮೌಲ್ಯಗಳಾದ ಸ್ವಾತಂತ್ರ ಪ್ರಜಾತಂತ್ರವಾದ ಜಾತ್ಯತೀತತೆ ಈ ಗುಣಗಳನ್ನು ಸ್ವಯಂ ಪ್ರೇರಣೆಯಿಂದ ಅಳವಡಿಸಿಕೊಂಡ ವ್ಯಕ್ತಿತ್ವ ಅವರದು. ಇದರ ಫಲವಾಗಿ ಸಾಹಿತ್ಯ ಸಂಸ್ಕೃತಿ, ರಾಜಕೀಯಗಳನ್ನು ಅವರು ಕಾಣುತ್ತಾರೆ ಮತ್ತು ರೂಪಿಸಲು ಹವಣಿಸುತ್ತಾರೆ. ಬರಹದಲ್ಲಿ ಅವರು ಮಾಡಿದ ಪ್ರಯೋಗಗಳು ಪ್ರತಿಭೆಯ ಬೇರೆ ಬೇರೆ ಆಶಯ ಅಭಿರುಚಿಗಳನ್ನು ತೋರಿಸುತ್ತಾರೆ. ತಾವು ಬರಹದಲ್ಲಿ ಸಾಧಿಸಿದ ಈ ವಿಶಿಷ್ಟತೆಯನ್ನು ಅವರು ತಮ್ಮ ಬದುಕು ಕೌಟುಂಬಿಕ ಬದುಕು ಮತ್ತು ಸಾಮಾಜಿಕ ಬದುಕಿನಲ್ಲಿ ಬಿಂಬಿಸಿದ್ದಾರೆಯೇ ಎಂಬುದು ಕುತೂಹಲಕರ ದೃಷ್ಟಿಕೋನ. ಇದಕ್ಕಾಗಿ ನಾನು ಅವರ ಹುಟ್ಟಿನಿಂದ ಹಿಡಿದು ಮರಣದವರೆಗಿನ ಬದುಕಿನ ರೂಪರೇಷಗಳನ್ನು ಶೋಧಿಸುತ್ತಾ ನಡೆದೆ. ಅದರ ಫಲವಾಗಿ ಅವರ ಬದುಕು ಗಂಭೀರವೂ ವಿನೋದಶೀಲವೂ ಆಗಿದ್ದುದನ್ನು ಮನಗಂಡೆ.

ಆಧುನಿಕ ಗದ್ಯಸಾಹಿತ್ಯವು ಮೂಲವಾಗಿ ಹುಟ್ಟಿದ್ದು ಪತ್ರಿಕಾ ಸಾಹಿತ್ಯವಾಗಿಯೇ ಅದೂ ಉಡುಪಿ ಮಂಗಳೂರು ಭಾಗಗಳಲ್ಲಿ ಮುದ್ರಣಾಲಯದ ಸೌಕರ್ಯ ಹೆಚ್ಚಾದಾಗಿನಿಂದ ಪತ್ರಿಕಾ ಸಾಹಿತ್ಯ ರಚನೆಯೊಂದಿಗೆ ತಮ್ಮನ್ನು ಲೇಖಕರನ್ನಾಗಿ ಬೆಳೆಸಿಕೊಂಡ ಪಾ.ವೆಂ. ಆಚಾರ್ಯರು ಓದುಗರ ಲೋಕಜ್ಞಾನ, ವಿಮರ್ಶ ಪ್ರವೃತ್ತಿ, ಸಾಂಸ್ಕೃತಿಕ ಪ್ರಜ್ಞೆಗಳು ವಿಕಸಿಸುವ ರೀತಿಯಲ್ಲಿ ನಿತ್ಯವೂ ಬರೆದು ಪ್ರಕಟಿಸತೊಡಗಿದರು. ಕನ್ನಡಕ್ಕೆ ವೈಚಾರಿಕ ಸಾಹಿತ್ಯ ತರುವಲ್ಲಿ ಪಾ.ವೆಂ. ವಹಿಸಿದ ಪಾತ್ರವೂ ಗಮನಾರ್ಹವಾಗಿದೆ. ಸಾಹಿತ್ಯ ಮತ್ತು ಜೀವನದ ಸ್ಥಿತಿಗತಿಗಳು ಬದಲಾಗುವುದನ್ನು ಗುರುತಿಸಿ ವ್ಯಾಖ್ಯಾನ ಮಾಡಬಲ್ಲ ಚಿಂತಕರೂ ಅವರಾಗಿದ್ದರು. ಅನ್ಯ ಭಾಷೆಗಳಲ್ಲಿ ಅವರಿಗಿದ್ದ ಜ್ಞಾನ ವಿಜ್ಞಾನ, ಕಲೆ, ಮೀಮಾಂಸೆ ಸಂಶೋಧನೆಗಳನ್ನು ಮೂಲದಲ್ಲಿ ಓದಿ ಕನ್ನಡಕ್ಕೆ ಸಾರವತ್ತಾಗಿ ರೂಪಾಂತರಿಸುವ ಕಲೆ ಪಾ.ವೆಂ. ಅವರಿಗೆ ಸಾಧಿಸಿದ್ದರಿಂದಲೇ 'ಕಸ್ತೂರಿ ಡೈಜೆಸ್ಟ್' ಕನ್ನಡದ ಏಕೈಕ ಸರ್ವಾಂಗ ಸುಂದರ ಮಾಸಿಕವಾಗಿ ಬರುತ್ತಿತ್ತು. ಜನಸಾಮಾನ್ಯರೂ ಸಾಹಿತ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕೆಂಬ ಅಕಾಂಕ್ಷೆ ಪಾ.ವೆಂ. ಅವರಿಗಿದ್ದುದು ಅವರ ಬರೆಹಗಳ ತಿಳಿಶೈಲಿ ಸರ್ವವನ್ನು ಅಡಕುಗೊಳಿಸಿ ತರ್ಕಬದ್ಧವಾಗಿ ಬರೆಯುವ ಅದರ ರೀತಿಯಿಂದ ತಿಳಿದು ಬರುತ್ತದೆ.

ಪಾಡಿಗಾರು ವೆಂಕಟರಮಣ ಆಚಾರ್ಯರು ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯ ಮತ್ತು ಪತ್ರಿಕಾ ವ್ಯವಸಾಯ ಕ್ಷೇತ್ರಗಳಲ್ಲಿ ಎದ್ದುಕಾಣುವ ಹೆಸರು. ಕವಿಯಾಗಿ ಅವರು ನವೋದಯ ಸಂಪ್ರದಾಯ, ನವ್ಯ ಸಂಪ್ರದಾಯ ಎರಡರಲ್ಲೂ ತಮ್ಮನ್ನು

ಗುರುತಿಸಿಕೊಳ್ಳುವ ಸಹಜ ಪ್ರಯತ್ನವನ್ನು ಮಾಡಿದ್ದಾರೆ. ನವನೀರದ (೧೯೫೨) ಹೆಸರೇ ಹೇಳುವಂತೆ ಕವಿಯ ತಾರುಣ್ಯದ ಆಸೆ ಆಕಾಂಕ್ಷೆ, ಕಲ್ಪನೆಗಳ ಹೊಸತನವನ್ನು ತೋರಿಸುವ ದೃಷ್ಟಿಯಿದೆ. ಭಾವಗೀತೆಯ ಗುಣಗಳನ್ನು ಹೊಂದಿದ ಕೆಲವು ಕವಿತೆಗಳಲ್ಲಿ ಪಾ.ವೆಂ. ಅವರ ನವೀನ ದೃಷ್ಟಿ ಇದೆ. ಸ್ವಭಾವತಃ ಚಿಕಿತ್ಸಕ ನೋಟವುಳ್ಳ ಅವರು ಪ್ರಕೃತಿಯನ್ನು ಮತ್ತು ವಾಸ್ತವವನ್ನು ಪ್ರಶ್ನಿಸುವ ಕಣ್ಣಿನಿಂದ ನೋಡುತ್ತಾರೆ. ಇವೆಲ್ಲ ಸಾಹಿತ್ಯ ಗುಣಗಳನ್ನು ಕಟ್ಟಿಕೊಂಡ ನೀರದ (ಮೋಡ) ಪಾ.ವೆಂ. ಅವರ ಪ್ರಜ್ಞೆ ಅನುಮಾನವನ್ನು ಸೇರಿಸಿ ಸತ್ಯವನ್ನು ಪರಿಶೀಲಿಸುತ್ತಾರೆ. ಇದಕ್ಕೆ ತಕ್ಕಂತಹ ಶಬ್ದಲಯಗಳ ಬರಹದ ಮಳೆ ನಿರಂತರ ಸುರಿಯುವ ಸೃಷ್ಟಿಯು ಅವರಿಂದ ಸಾಧ್ಯವಾಗಿದೆ ಮತ್ತು ಸಾರ್ವಜನಿಕ ಜೀವನವನ್ನು ನೋಡುವ ತಿದ್ದುವ ಬರಹಗಳಾಗಿವೆ. ಅವರ ನವೋದಯ ಮಾದರಿಯ ಕವಿತೆಗಳಲ್ಲಿ ವೈಚಾರಿಕತೆಯ ಅಂಶಗಳಿವೆ. ವೈಚಾರಿಕತೆಯನ್ನು ಪದ್ಯ ಮಾಡುವಾಗ ಕವಿ ವ್ಯಂಗ್ಯ (Irony) ಧಾಟಿಗೆ ತನ್ನನ್ನು ಅಳವಡಿಸಿಕೊಳ್ಳಬೇಕು. ಅದನ್ನವರು ಪ್ರಯತ್ನಿಸಿದ್ದಾದರೂ ಹೇಳಿಕೊಳ್ಳುವಂತಹ ಕೃತಿ ರಚನೆ ಸಾಧ್ಯವಾಗಿಲ್ಲ. ಮುಂದೆ ಆಚಾರ್ಯರು ಆತ್ಮವಿಮರ್ಶೆಯನ್ನೇ ಮುಖ್ಯವಾಗಿಟ್ಟುಕೊಂಡು ಬರೆದ ಗದ್ಯಲಯದ ಕವಿತೆಗಳಲ್ಲಿ ವ್ಯಂಗದೃಷ್ಟಿಯ ಸಫಲ ಕವನಗಳು ಹೊರಬಂದಿದೆ. ಇದನ್ನು ಗುರುತಿಸಿಯೇ ನವ್ಯ ಕವಿ ಪಿ. ಲಂಕೇಶ ಪಾ.ವೆಂ, ಅವರ ಮೂರು ಪದ್ಯಗಳನ್ನು ತಮ್ಮ 'ಅಕ್ಷರ ಹೊಸ ಕಾವ್ಯ'ಕ್ಕೆ (೧೯೭೦) ಆರಿಸಿಕೊಂಡಿದ್ದಾರೆ. ಹಾಗೆ ಆರಿಸಿಕೊಂಡು ಆಚಾರ್ಯರನ್ನು ನವ್ಯ ಕವಿ ಎಂದು ಗುರುತಿಸಿದ್ದಾರೆ. ಭಾವನೆ ಅಥವಾ ಅನಿಸಿಕೆಯನ್ನು ಮುಗ್ಧವಾಗಿ ಒಮ್ಮುಖವಾಗಿ ಅಥವಾ ಯಾಂತ್ರಿಕವಾಗಿ ವರ್ಣಿಸಿ ಆತ್ಮತೃಪ್ತಿಗೆ ಸೀಮಿತಗೊಳಿಸುವ ಪದ್ಯಗಾರಿಕೆ ಪಾ.ವೆಂ. ಅವರದಲ್ಲ. ತನ್ನನ್ನು ವಿಮರ್ಶಿಸಿಕೊಳ್ಳುತ್ತಾ ನಿಜದ ನೆಲೆಯನ್ನು ಶೋಧಿಸಿದಾಗ ವ್ಯಂಗ್ಯ, ವಿಡಂಬನೆ ಸಹಜವಾಗುತ್ತದೆ. ಪಂಡಿತ ಬುದ್ಧಿಯ ಪಾ.ವೆಂ. ಇಂತಹ ಮನೋಧರ್ಮವನ್ನು ಹೊಂದಿರುವುದು ಅವರ ಪ್ರತಿಭೆಯ ವಿಸ್ತಾರವೆನಿಸುತ್ತದೆ.

ಆ ಹೊತ್ತಿಗೆ ಎಚ್. ಎಸ್. ಬಿಳಿಗಿರಿಯವರ **ಸೋಮಾರಿ, ಕಾಮ್ರೇಡ್ ವಿಮರ್ಶಕ** ಎಂಬ ಪದ್ಯಗಳು ಹಾಗೂ ವಿ.ಜಿ. ಭಟ್ಟರ **ತುಂಟನ ಪದಗಳು** ಮತ್ತು **ಆತ್ಮ ಶೋಧನೆ** ಕವಿತೆಗಳು ವ್ಯಂಗ್ಯಕ್ಕಿರುವ ಅರ್ಥವಲಯವನ್ನು ಪ್ರಕಟಿಸಿದವರು. ಪಾ.ವೆಂ. ಸ್ವಭಾವತಃ ಹಾಸ್ಯ ಪ್ರಜ್ಞೆಯುಳ್ಳ ವ್ಯಕ್ತಿ ಅವರ ಅಸಲಿ ಧ್ವನಿ **ಕೆಲವು ಪದ್ಯಗಳು** (೧೯೭೮) ಸಂಕಲನದಲ್ಲಿ ಹೇರಳವಾಗಿ ಕಾಣುತ್ತವೆ. ಇಂತಹ ಕವನಗಳ ಬಗ್ಗೆ ಲಂಕೇಶರು ಹೇಳುವ ಮಾತುಗಳು ಗಮನಾರ್ಹವಾಗಿದೆ. ಮನುಷ್ಯನ ಬುದ್ಧಿವಂತಿಕೆ ತುಂಟತನ, ಒಳ್ಳೆಯತನ, ಸಣ್ಣತನ ಇವೆಲ್ಲವನ್ನು ಒಳಗೊಂಡು ತೆಳುವಾದರು ವಾಸ್ತವತೆಗೆ ಹೊಂದಿಕೊಂಡ 'ಕವನ' ಇವಾಗಿದೆ. ಅಂದರೆ 'ನವನೀರದ'ದಲ್ಲಿ ರೊಮ್ಯಾಂಟಿಕ್ ಕಾವ್ಯ ಮಾದರಿಯನ್ನು ಅನುಸರಿಸಿ ವೆಂಕಟರಮಣಚಾರ್ಯರು ಕಾಲೋಚಿತವಾಗಿ ಬದಲಾಗಿ ಬೆಳೆದು ಕೃತಕ ಗಾಂಭೀರ್ಯಕ್ಕೆ ಹೊರತಾದ, ಮುಕ್ತ ಸಂವೇದನೆಯ ಹಗುರಾದ ಕವನಗಳನ್ನು ಬರೆದು ಆಧುನಿಕತೆಗೆ

ಮುಖಾಮುಖಿಯಾದರು. ಇದೊಂದು ಅವರ ಕವಿವ್ಯಕ್ತಿತ್ವದ ಸಹಜ ಬೆಳವಣಿಗೆ, ಪತ್ರಿಕಾ ವ್ಯವಸಾಯದ ಅವಸರ ಯಾಂತ್ರಿಕತೆ ಮತ್ತು ಗದ್ಯಬರಹದ ನಡುವೆಯ ಆಚಾರ್ಯರ ಕವಿಯ ಏಕಾಂತವನ್ನು ನವಿರು ನೋಟವನ್ನು ವಿಶಿಷ್ಟ ಅಭಿವ್ಯಕ್ತಿ ಧಾಟಿಯನ್ನು ಕಾಪಾಡಿಕೊಂಡಿದ್ದರು. ಇದೊಂದು ಉಲ್ಲೇಖನೀಯ ಸಾಧನೆ.

ಲಾಂಗೂಲಾಚಾರ್ಯರ ಸಾಹಿತ್ಯ: ಪತ್ರಕರ್ತ ಪಿ.ವಿ. ಆಚಾರ್ಯರು ಸಂಯುಕ್ತ ಕರ್ನಾಟಕ ಪತ್ರಪ್ರಪಂಚವನ್ನು ಪ್ರವೇಶಿಸಿದ್ದು (೧೯೪೨) ಮುದ್ರಣಾಲಯದ ಮ್ಯಾನೇಜರ್ ಆಗಿ. ಅದು ಅವರ ಹುದ್ದೆ ಮಾತ್ರವಾಗಿತ್ತು. ಅವರೊಳಗಿದ್ದ ಕವಿ–ಲೇಖಕ ಅವರಿಂದ **ಕರ್ಮವೀರ**ಕ್ಕಾಗಿ ಬರೆಸಿದ್ದು. ಪುಸ್ತಕ ಅವಲೋಕನ, ಹರಟೆ ಮತ್ತು ಸಂದರ್ಭೋಚಿತ ಲೇಖನಗಳು ಬಹುಮಟ್ಟಿಗೆ ಇವು ಯಾವುವು ಅವರ ಸ್ವಂತ ಹೆಸರಿನಲ್ಲಿ ಇರಲಿಲ್ಲ. ಆಗ ಪ್ರತಿ ಸೋಮವಾರಕ್ಕೊಮ್ಮೆ **ಕರ್ಮವೀರ** ಹೆಸರಿನಿಂದ **ಸಂಯುಕ್ತ ಕರ್ನಾಟಕ** ಬರುತ್ತಿತ್ತು. ಪಿ.ವಿ. ಆಚಾರ್ಯರ ಸಹಾಕರ, ಸಹಯೋಗ **ಕರ್ಮವೀರ** ಕ್ಕೆ ಅನಿವಾರ್ಯವಾಗಿತ್ತು ಮುಂದೆ ೧೯೪೩ರಲ್ಲಿ ಅವರ ಮೊದಲ ಪುಸ್ತಕ **ರಷ್ಯಾದ ರಾಜ್ಯಕ್ರಾಂತಿ** ಮಿಂಚಿನ ಬಳ್ಳಿಯಿಂದ ಬೆಳಕು ಕಂಡಾಗ ಆಚಾರ್ಯರ ಲೆಕ್ಕಣಿಕೆಯ ಮಹತ್ವ ಅವರ ಸಹದ್ಯೋಗಿಗಳ ಗಮನಕ್ಕೆ ಬಂದಿರಬೇಕು. ಆದರೆ ಅವರು ಬೆಳೆಸಿಕೊಂಡ ವಿನೋದ ಪ್ರಜ್ಞೆಯನ್ನು **ಕರ್ಮವೀರ** ಬಳಸಿಕೊಂಡಿತು. 'ಓದುಗರೊಡನೆ' ಹರಟೆ ಅಂಕಣವನ್ನು ಅವರು ಬರೆಯತೊಡಗಿದ್ದು 'ಲಾಂಗೂಲಾಚಾರ್ಯ' ಎಂಬ ಗುಪ್ತನಾಮದಿಂದ (Pseudonym) 'ಲಾಂಗೂಲ' ಎಂದರೆ ಬಾಲ. ಬಾಲವನ್ನು ಅಲ್ಲಾಡಿಸುವುದು ಒಂದು ಮಾರ್ಮಿಕ ಕ್ರಿಯೆ. ಬಾಲ ಅಲ್ಲಾಡಿಸುವುದು ಈ ನುಡಿಗಟ್ಟಿನ ಗಂಭೀರವಾದುದಕ್ಕೆ ಅಥವಾ ವಾಸ್ತವವಾದುದಕ್ಕೆ ಕೊಡುವ ಹಗುರವಾದ ಪ್ರತಿಕ್ರಿಯೆ ಎನ್ನಬಹುದು. ಆಚಾರ್ಯರು ವ್ಯವಹಾರ ಲೋಕದ ಆಗುಹೋಗುಗಳನ್ನು ಸುದ್ದಿಮಾಧ್ಯಮಗಳ ಮೂಲಕ ಓದುತ್ತಾರೆ. ಸಾಮಾನ್ಯ ಓದುಗರು ಓದುವ ಸುದ್ದಿಗಳು ಕೆಲಕಾಲ ಮಾತ್ರ ಓದುಗರ ಮನಸ್ಸಿನಲ್ಲಿ ಉಳಿದು ಮರೆಯಾಗಿ ಹೋಗುತ್ತವೆ. ಹೊಸ ಸುದ್ದಿ ಬಂದೊಡನೆ ಹಿಂದಿನ ಸುದ್ದಿ ಹಳೆಯದಾಗುತ್ತದೆ. ಸುದ್ದಿಯ ಮೇಲ್‌ಸ್ತರವನ್ನಷ್ಟೇ ನೋಡಿ ಆ ಕ್ಷಣಕ್ಕೆ ತಮ್ಮ ತಿಳುವಳಿಕೆಯ ಮಟ್ಟದಲ್ಲಿ ಪ್ರತಿಕ್ರಿಯಿಸಿ ಮರೆತುಬಿಡುವ ಸಾಮಾನ್ಯರಂತಲ್ಲ ಈ ಆಚಾರ್ಯರು. ಇವರು ಸುದ್ದಿಯ ಅಥವಾ ಘಟನೆಯ ಬಾಲವನ್ನು ಟ್ವಿಸ್ಟ್ (twist=ಮುರಿಯುವಿಕೆ) ಮಾಡಿ ಅದರ ಹಕೀಕತ್ತನ್ನು ತಿಳಿಯುತ್ತಾರೆ. ಪ್ರತಿಯೊಂದು ವರದಿ ಮನುಷ್ಯ ಪ್ರಾಣಿ ವಿಕ್ಷಿಪ್ತತೆಯನ್ನೋ ಅಸಂಬದ್ಧತೆಯನ್ನೋ ಧ್ವನಿಸುತ್ತದೆ. ಆಚಾರ್ಯರಿಗೆ ಆ ಧ್ವನಿಯೇ ವಿಡಂಬನೆಗೆ ಈಡುಮಾಡುವ ಮೂಲ ಮುದ್ದೆ. ಆಯಾ ವಾರದ ಹಿಂದಿನ ದಿನಗಳಲ್ಲಿ ಪ್ರಕಟವಾದ ಸುದ್ದಿ ಅಥವಾ ತಿಳಿದು ಬಂದ ಸ್ವಾರಸ್ಯಕರ ವಿದ್ಯಮಾನವನ್ನು ಲಾಂಗೂಲಾಚಾರ್ಯರು ವಕ್ರದೃಷ್ಟಿಯಿಂದ ನೋಡುತ್ತಾ ಅದರ ಸ್ವಾರಸ್ಯವನ್ನು ಇನ್ನಷ್ಟು ಹೆಚ್ಚಿಸುವ ಮಾತುಗಳನ್ನು ಓದುಗರೆದುರು ಆಡುತ್ತಾರೆ. ಇದೇ ಅವರ ಹರಟೆ. ನಮ್ಮಲ್ಲಿ ಲಲಿತ ಪ್ರಬಂಧ

(Personal essay) ಪ್ರಕಾರ ಹರಟೆಯಾಗಿಯೂ ಮರುರೂಪವನ್ನು ಧರಿಸಿ ಹಾಸ್ಯ ಸಾಹಿತ್ಯಕ್ಕೆ ವಿಶಿಷ್ಟ ಮೆರಗು ಕೊಟ್ಟಿದೆ. ಆಚಾರ್ಯರ ಹಾಸ್ಯ ಸಾಹಿತ್ಯ ಪ್ರಮುಖವಾಗಿ ಪ್ರಕಟವಾದದ್ದು ಅವರ 'ಓದುಗರೊಡನೆ ಹರಟೆ' ಅಂಕಣಗಳಿಂದ.

ಗಂಭೀರ ವಿಷಯವೊಂದನ್ನು ಓದುಗನೆಂದು ಪ್ರಸ್ತಾಪಿಸುತ್ತಾ ಅದು ಒಳಗೊಂಡ ವಿಚಿತ್ರ ವಿಕ್ಷಿಪ್ತ ಅಂಶಗಳನ್ನು ನಾಟಕೀಯ ರೀತಿಯಲ್ಲಿ ತೋರಿಸುತ್ತಾ ದಿಟ ಯಾವುದು ಸಟೆಯಾವುದು ಎಂಬುದನ್ನು ಧ್ವನಿಸುತ್ತಾ ವಿವರಿಸುವುದು ವಿಡಂಬನೆಯ ರೀತಿ. ಇಲ್ಲಿ ಲೇಖಕನ ವಕ್ರದೃಷ್ಟಿಯಿಂದ ರೂಪುಗೊಳ್ಳುವ ಭಾಷೆ ಮತ್ತು ಸನ್ನಿವೇಶದ ನಿರ್ಮಾಣ ನಗೆಯನ್ನಲ್ಲ ಅದಕ್ಕಿಂತ ಮೇಲ್ಮಟ್ಟದಲ್ಲಿರುವ ಬೌದ್ಧಿಕ ಸಂವೇದನೆಗೆ ತಗಲುವ ಅಂಶ ವ್ಯಕ್ತವಾಗುತ್ತದೆ. ಅದೇ ತಿಣ. ಅಂದರೆ ವಿಡಂಬನೆ ಮೇಲ್ನೋಟಕ್ಕೆ ಗಂಭೀರವಾದದ್ದರ ಒಳಗಿರುವ ಗಟ್ಟಿಯೇನು ಟೊಳ್ಳೇನು ಎಂಬುದು ಧ್ವನಿತವಾಗುತ್ತದೆ.

ಕೈಲಾಸಂ, ಶ್ರೀರಂಗ, ನಾ.ಕಸ್ತೂರಿ, ಬಿ.ಜಿ.ಯಲ್ ಸ್ವಾಮಿ, ರಾಶಿ, ಪ್ರಭುಶಂಕರ, ಬೀchi ಇವರ ನಾಟಕ, ಪ್ರಬಂಧ ಕತೆಗಳಲ್ಲಿ ಹೇರಳವಾಗಿ ಕಾಣುವ ಗುಣ wit ಅಥವಾ ವಿಡಂಬನೆ. ಪಾ.ವೆಂ. ಅವರು ವಿಡಂಬನಾ ಶೈಲಿಯನ್ನು ಅಳವಡಿಸಿಕೊಂಡ ಸಹಜ ಬರಹಗಾರರು. wit ಎಂಬುದು ಜಾಣರಿಗೆ ಕೊಡುವ ಮಾತಿನ ಲತ್ತೆ ಪೆಟ್ಟು ಅನ್ನಬಹುದು. ಲಾಂಗೂಲಾಚಾರ್ಯರ ಒಂದು ಸಂಕಲನದ ಹೆಸರೇ ಪ್ರಹಾರ (೧೯೬೫) ಇನ್ನೊಂದು ಲೋಕದ ಡೊಂಕು (೧೯೭೬) ಮತ್ತೊಂದು ವಿಪರೀತ (೧೯೭೭) ಮಗದೊಂದು ವಕ್ರದೃಷ್ಟಿ (೧೯೯೦) ಇಲ್ಲಿರುವ ನೂರಕ್ಕು ಮಿಕ್ಕಿದ ಹರಟೆ ಪ್ರಬಂಧಗಳಲ್ಲಿ ಲಾಂಗೂಲಾಚಾರ್ಯರು ಓದುಗರಿಗೆ 'ಮಾತಿನ ಪೆಟ್ಟು' ಕೊಟ್ಟಿದ್ದಾರೆ. ಮನೋಜ್ಞ ಓದುಗನಿಗೆ ಇದು ತಾಗಿದೆ. ನೈತಿಕ ಪ್ರಜ್ಞೆ, ರಾಜನೀತಿಯ ಪ್ರಜ್ಞೆ ಉಳ್ಳವನೇ ಮನೋಜ್ಞ ಓದುಗ ಅದನ್ನು ಜಾಗೃತಗೊಳಿಸಿ ಅವನಲ್ಲಿ ಅದನ್ನು ಗಟ್ಟಿಗೊಳಿಸುವ ಉಪಾಯ ವೇದಾಂತವೇ ವಿಡಂಬನ ಸಾಹಿತ್ಯ. ಲಾಂಗೂಲಾಚಾರ್ಯರ ವಿಷಯ ವ್ಯಾಪ್ತಿ ಕೇವಲ ಸುದ್ದಿಗೆ ಗುದ್ದು ಕೊಡುವ ತತ್ಕಾಲೀನ ಸಂಗತಿಗಳ ಮೇಲಲ್ಲ. ಲೋಕದ ಡೊಂಕನ್ನು ನೋಡುತ್ತ ಸಾಗುವ ಅವರಿಗೆ ಸಾಮಾನ್ಯ ಜನರ ಹವ್ಯಾಸಗಳು, ಗಣ್ಯಮಾನ್ಯರೆಂದು ಹೆಸರಾದವರ ವಿಪರೀತ ಬುದ್ಧಿವಂತರು. ವರ್ತನೆಗಳು, ಸ್ವತಂತ್ರ ಭಾರತದ ರಾಜಕಾರಣಿಗಳೂ ಅವರ ಚುನಾವಣಾ ಸ್ಟಂಟ್‌ಗಳು ಲಾಂಗೂಲಾಚಾರ್ಯರ ಮುಖದ ಮೇಲೆ ಮಂದಾಹಾಸ ಮೂಡಿಸಿ ಬರಹದ ಮೂಲಕ ಓದುಗರನ್ನು ತಲುಪಿಸಿ ನಗೆಯನ್ನು ಉಕ್ಕಿಸುತ್ತವೆ. ಲಾಂಗೂಲಾಚಾರ್ಯರ ವಕ್ರದೃಷ್ಟಿ ಮರ್ತ್ಯ ಲೋಕವನ್ನಷ್ಟೇ ಅಲ್ಲ ದೇವಲೋಕದ ಮೇಲು ಬೀಳುತ್ತದೆ. ಹಿಂದಿನ ಕಾಲದಲ್ಲಿ ರಾಜಮಹಾರಾಜರ ಓಡ್ಡೋಲಗದಲ್ಲಿ ವಿದೂಷಕ ಕವಿ ಅಥವಾ ವಿಕಟಕವಿ ತನ್ನ ವಾಕ್‌ಚಾತುರ್ಯದಿಂದ ಸಮಯಾವಧಾನದ ಚಮತ್ಕೃತಿಯಿಂದ ಗಂಭೀರ ವಾತಾವರಣವನ್ನು ನಗೆಗೆ ಈಡು ಮಾಡ ಬಲ್ಲವನಾಗಿದ್ದಾರೆ, ಅಕ್ಬರ್ ಚಕ್ರವರ್ತಿಯ ಮಗ್ಗುಲಲ್ಲಿ ಇರುತ್ತಿದ್ದ ಬೀರಬಲ್ಲ,

ಕೃಷ್ಣದೇವರಾಯನ ಸುತ್ತ ಸುಳಿದಾಡುತ್ತಿದ್ದ. ತೆನಾಲಿ ರಾಮಕೃಷ್ಣನಂತ ವಿದೂಷಕರು ಇವರು ವಿಚಿತ್ರ ಅಥವಾ ವಿಶಿಷ್ಟ ದೂಷಕರು ಅಂದರೆ ಪ್ರತಿಯೊಂದನ್ನು ಟೀಕಿಸಿ ನಿಜಸುಳ್ಳುಗಳ ವ್ಯತ್ಯಾಸವನ್ನು ಅರಿವಿಗೆ ತಂದುಕೊಡುವವರು. ಮನುಷ್ಯ ಲೋಕದಲ್ಲಿ ಕ್ರೂರವಾದ ಗಾಂಭೀರ್ಯವೂ ಇದೆ. ಮನಸ್ಸು ಕರಗಿಸ ಬಲ್ಲ ಹಾಸ್ಯವೂ ಇದೆ. ಲೋಕವನ್ನು ಹಗೂರ ದೃಷ್ಟಿಯಿಂದ ನೋಡಿದ್ದಷ್ಟಕ್ಕೆ ವಿಡಂಬನೆ ಹುಟ್ಟುವುದಿಲ್ಲ. ಇದಕ್ಕೆ ಒಳನೋಟಗಳು ಮತ್ತು ಚಾತುರ್ಯದ ಕಲ್ಪನೆಗಳು, ಇದನ್ನು ಪ್ರಕಟ ಪಡಿಸುವ ಸಮಯ ಪ್ರಜ್ಞೆ ಹಾಗೂ ಭಾಷಾ ಪ್ರಜ್ಞೆಯ ಸಹಾಯಕಾರಿ ಗುಣಗಳು, ವಿಧೂಷಕ ಬುದ್ಧಿ ಲಾಂಗೂಲಾಚಾರ್ಯರ ಪ್ರತಿಭೆಯ ಅಂತರ್ಗತ ಅಂಶವಾಗಿದೆ. 'ಲಾಂಗೂಲಾಚಾರ್ಯ' ಎಂಬ ಈ ವಿದೂಷಕ ಹಿಂದಿನ ಕಾಲದ ರಾಜದರ್ಬಾರಿನಲ್ಲಿದ್ದ ವಿದೂಷಿಕನಲ್ಲ. ದೇಶದ ಪ್ರಜಾತಾಂತ್ರಿಕ ವ್ಯವಸ್ಥೆ ಇರುವ ದೇಶದ ರಾಜಕೀಯ ರಂಗವನ್ನು ಗಮನಿಸುತ್ತಿರುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಉಚ್ಚಮಟ್ಟವನ್ನು ಟೀಕಿಸುವ ಆಧುನಿಕ ಟೀಕಾಕಾರನಾಗಿದ್ದಾನೆ. 'ಲಾಂಗೂಲಾಚಾರ್ಯರ' ವಿಡಂಬನೆ ಸಾರ್ವಜನಿಕ ಜೀವನವನ್ನು ನೋಡುವ, ತಿದ್ದುವ ಬರಹಗಳಾಗಿವೆ.

ಪಾ.ವೆಂ. ಆಚಾರ್ಯರು ಸಾಂಪ್ರದಾಯಿಕ ವಿದ್ಯಾಭ್ಯಾಸದಿಂದ ದೂರ ಉಳಿದವರು ಜಾತಿಯಿಂದ ಬರಬಹುದಾದ ಆಚಾರ್ಯವೃತ್ತಿ ಮತ್ತು ಅದನ್ನು ವಿಸ್ತರಿಸುವ ಸಂಸ್ಕೃತ ವಿದ್ಯಾಭ್ಯಾಸವನ್ನು ಅವರು ಕೈಗೊಳ್ಳಲಿಲ್ಲ. ಉಡುಪಿಯಲ್ಲೆ ಇದನ್ನು ಕೈಗೊಳ್ಳುವುದಿದ್ದರೆ ಯಾವುದೊಂದು ಮಠದ ಶಿಷ್ಯನಾಗಿ, ವೈದಿಕ ಪದ್ಧತಿಯಲ್ಲಿ ಸಂಸ್ಕೃತ ಕಲಿಯ ಬಹುದಾಗಿತ್ತು. ಅದನ್ನು ಪಾ.ವೆಂ. ಮಾಡಲಿಲ್ಲ. ಮೆಟ್ರಿಕ್‌ವರೆಗಿನ ಇಂಗ್ಲೀಷ್ ಶಿಕ್ಷಣ ಕಲಿತ ಪಾ.ವೆಂ. ಇಂಗ್ಲೀಷ್ ಭಾಷೆಯನ್ನು ಕಾವ್ಯ ಮತ್ತು ಸಾಹಿತ್ಯದೊಂದಿಗೆ ಅಭ್ಯಾಸ ಮಾಡಿದರು. 'ಇಂಗ್ಲೀಷ್ ವಿಶ್ವ ಜ್ಞಾನಕ್ಕೆ ತೆರೆದ ಕಿಟಕಿ' (English is a window to world knowledge) ಎಂಬಂತೆ ಅವರು ಭಾಷೆಯನ್ನು ರೂಪಿಸಿಕೊಂಡರು. ಸಂಸ್ಕೃತವನ್ನು ಅವರು ಅಭ್ಯಾಸ ಮಾಡಿದ್ದು ಹೀಗೆಯೇ. ಲೌಕಿಕ ಜ್ಞಾನ ಮತ್ತು ಸಾಹಿತ್ಯಾನುಭವದ ನೆಲೆಯಿಂದ ಸಂಸ್ಕೃತ ಅವರಿಗೆ ಕೈವಶವಾಯಿತು. ಇವೆರಡನ್ನು ಪಾ.ವೆಂ. ಅವರು ಬೆಳೆಸಿಕೊಂಡು ಇಂಗ್ಲೀಷ್ ಮತ್ತು ಸಂಸ್ಕೃತಗಳಲ್ಲಿಯ ವೈಚಾರಿಕ ಸಾಹಿತ್ಯವನ್ನು ಮನದಣಿಯುವಷ್ಟು, ಮನತಣಿಯುವಷ್ಟು ಓದಿಕೊಂಡರು. ಇದರಿಂದ ಅದರಲ್ಲಿ ತರ್ಕಮಾಡುವ ಮನೋಬಲ ಊಹೆ ಮತ್ತು ಕಲ್ಪನೆ ಮಾಡಿ ಇತಿಹಾಸವನ್ನು ಗ್ರಹಿಸುವಂತೆ ತಿಳುವಳಿಕೆ ಬಂದಿತ್ತು. ಆದರೆ ಜ್ಞಾನದ ವಿವಿಧ ಶಿಸ್ತುಗಳನ್ನು ಅಳವಡಿಸಿಕೊಳ್ಳುವಂತಹ ಶಕ್ತಿ ಮತ್ತು ಅದನ್ನು ಅಭಿವ್ಯಕ್ತಿಗೊಳಿಸುವಂತಹ ಯುಕ್ತಿ, ಯುಕ್ತ ಸಾಧನೆ. ಪಾ.ವೆಂ. ಅವರಿಗೆ ಕೈವಶವಾಯಿತು. ಇದು ಪಾ.ವೆಂ. ಅವರ ಸ್ವಾಧ್ಯಾಯ ಸಾಧನೆ.

ಇದರಿಂದ ಸಾಧ್ಯವಾದ ಪಾ.ವೆಂ. ಬರಹಗಾರಿಕೆ ಸದಾ ಚಲನಶೀಲವಾಗಿ ವರ್ತಿಸುವಂತದ್ದಾಗಿದೆ. ಅವರ ಚಿಂತನ ಮಂಥನ ಪ್ರವೃತ್ತಿ ಸ್ಥಳೀಯ ಮತ್ತು ತಾತ್ಕಾಲಿಕ ಸ್ಥಿತಿಗಳಿಂದ ಹಿಡಿದು ವಿಶ್ವದ ಮತ್ತು ಸಮಕಾಲೀನ ವಿದ್ಯಮಾನಗಳವರೆಗೆ ಹರಿದಾಡುತ್ತದೆ.

ಸಮಸ್ಯೆಯ ಬಗ್ಗೆ ಸಂಪೂರ್ಣವಾದ ಮಾಹಿತಿ, ಹಿನ್ನೆಲೆ, ಇತಿಹಾಸದ ಅಂಶಗಳು ಅವರ ಗಮನದಲ್ಲಿರುತ್ತದೆ. ಸಮಸ್ಯೆಯ ಮಗ್ಗುಲುಗಳನ್ನು ಹೊರಳಿಸಿ ನೋಡುವ ದೃಷ್ಟಿಯೂ ಅವರಿಗಿತ್ತು. ಪರವಿರೋಧ ಅಂಶಗಳನ್ನು ಚಿಂತನೆಯ ಕ್ರಮದಲ್ಲಿ ಅಳವಡಿಸಿಕೊಂಡು ಅನ್ವಯಿಸುವ ಬುದ್ಧಿ ಮತ್ತೆಯು ಪಾ.ವೆಂ. ಅವರಿಗೆ ನೆರವಿಗೆ ಬರುತ್ತದೆ. ಇವೆಲ್ಲ ಸಂಪನ್ಮೂಲಗಳನ್ನು ಕ್ರೋಡಿಕರಣಗೊಂಡು ಅದರಲ್ಲಿ ವಿಷಯದ ಬಗ್ಗೆ ಒಳನೋಟಗಳನ್ನು ನೀಡಲು ಸಾಧ್ಯವಾಗುತ್ತದೆ.

ಪಾ.ವೆಂ. ಅವರ ಗದ್ಯ ಸಾಹಿತ್ಯದ ಇನ್ನೊಂದು ಮಗ್ಗಲು ಗಂಭೀರ ಚಿಂತನ ಮತ್ತು ಅಧ್ಯಯನಶೀಲ ಬರಹಗಳು. ಪತ್ರಕರ್ತರಾದ್ದರಿಂದ **ಕಸ್ತೂರಿ**ಗಾಗಿ ಆಗಾಗ ಬಿಡಿಬಿಡಿಯಾಗಿ ಬರೆದ ಗಂಭೀರವಾದ ಲೇಖನಗಳು ಸಮಕಾಲೀನ ಸನ್ನಿವೇಶ–ಸಂದರ್ಭದ ನೆಲೆಯಿಂದ ವಿಚಾರ ಪೂರ್ಣವಾಗಿದೆ. ಪಾ.ವೆಂ. ಅವರಿಗೆ ವಿಚಾರವಂತಿಕೆಯಿಂದ, ತರ್ಕಬದ್ಧವಾಗಿ ವಿಶ್ಲೇಷಿಸುವ ಮತ್ತು ಮಂಡನೆ ಮಾಡುವ ಕಲೆ ಜನ್ಮಜಾತವಾಗಿತ್ತು. ವಸ್ತು ನಿಷ್ಠವಾಗಿ, ಸಮತೂಕದಿಂದ ವಿವೇಚಿಸುವ ದೃಷ್ಟಿಕೋನ ಅವರಲ್ಲಿತ್ತು. ಇದಕ್ಕೆಲ್ಲ ಮೂಲವಾದದ್ದು ಅದರಲ್ಲಿಯ ಚಿಂತನಪರ ಪ್ರತಿಭೆ.

ಚಿಂತನಪರ ಅಧ್ಯಾಯದಲ್ಲಿ ಸಮಕಾಲೀನ ವ್ಯಕ್ತಿಜೀವನಗಳು ಸಾಮಾಜಿಕ ಜೀವನ, ಸಂಸ್ಕೃತಿ, ಧರ್ಮ ಸಾಹಿತ್ಯ ಶಿಕ್ಷಣ ಜೀವನವನ್ನು ಸ್ಪಷ್ಟೀಕರಿಸಲು ಪಾ.ವೆಂ. ಮಂಡಿಸುವ ಪ್ರಮೇಯಗಳು ಚರ್ಚೆಗೆ ಇಡುವ ವಾದಗಳು ಮನೋಜ್ಞವಾಗಿ ಇಲ್ಲಿ ಬಿಂಬಿತವಾಗಿದೆ.

ಚಿಂತನಪರ ಕೃತಿಗಳಾದ 'ಬ್ರಾಹ್ಮಣರೇನು ಮಾಡಬೇಕು?', 'ಮಂಜೂಷ' ಈ ಕೃತಿಗಳಲ್ಲಿ ವಿಚಾರ ಸಾಹಿತ್ಯದ ಸ್ವರೂಪವನ್ನು ಕಾಣುತ್ತೇವೆ. ಧಾರ್ಮಿಕ ನೆಲೆ, ಚಿಂತನಪರ ದೃಷ್ಟಿ, ಬ್ರಾಹ್ಮಣ್ಯ, ವೈಚಾರಿಕತೆ, ಶೈಕ್ಷಣಿಕ ಚಿಂತನ ಈ ನೆಲೆಗಳಲ್ಲಿ ಇಲ್ಲಿಯ ಲೇಖನಗಳನ್ನು ಚರ್ಚೆ ಮಾಡಿದ್ದಾರೆ. ಬ್ರಾಹ್ಮಣರೇನು ಮಾಡಬೇಕು? ಲೇಖನ ವಿವೇಚನ ರಹಿತವಾದ ಪೂರ್ವಗ್ರಹಪೀಡಿತವಾದ ದೋಷಾರೋಪಣೆಗಳಿಂದ ಬ್ರಾಹ್ಮಣ ವಿಚಲಿತನಾಗಬೇಕಿಲ್ಲ. ನಿಜವಾದ ಬ್ರಾಹ್ಮಣ ತನ್ನ ಪ್ರತಿಭೆ, ಪರಿಶ್ರಮ, ವೃತ್ತಿಯಿಂದ ಸಮಾಜದಲ್ಲಿ ತಲೆಯೆತ್ತಿ ನಿಲ್ಲಬಲ್ಲ ಎಂಬ ವಿಶ್ವಾಸವನ್ನು ಇಲ್ಲಿ ಸೂಚಿಸಿದ್ದಾರೆ. ಜಾತಿ ಬ್ರಾಹ್ಮಣರೆನಿಸಿಕೊಂಡ ವರ್ಗದವರಿಗೆ ಕೊಟ್ಟ ವಿಚಾರವಾದದ ಕರೆಯಾಗಿದೆ.

ಮಂಜೂಷದಲ್ಲಿನ ಜಾತಿಪದ್ಧತಿ ಒಂದು ಐತಿಹಾಸಿಕ ವಿಶ್ಲೇಷಣೆ ಹಾಗೂ ಹರಿಜನರ ಸಮಸ್ಯೆ ಕೆಲ ಅನಿಷ್ಟ ಲಕ್ಷಣಗಳು ಎಂಬೆರಡು ಲೇಖನಗಳಲ್ಲಿ ಭಾರತೀಯ ಸಮಾಜ ವ್ಯವಸ್ಥೆಯ ಅಡಿಗಲ್ಲನ್ನು ಪರೀಕ್ಷಿಸುವ ಲೇಖನಗಳಾಗಿವೆ. ಈ ಸಮಸ್ಯೆಗಳಿಗೆ ಭೀಕರ ರೂಪ ತಳೆದಿರುವುದು ರಾಜಕೀಯ, ಆರ್ಥಿಕ ಆಯಾಮಗಳಿಂದ. ಈ ಆಯಾಮಗಳಿಂದ ದೇಶದ ಪ್ರಜಾತಾಂತ್ರಿಕ ನೆಲೆ ಮತ್ತು ದೇಶದ ಸ್ವಾತಂತ್ರ್ಯಗಳ ನೆಲೆಯಲ್ಲಿಯೆ ಪರಿಹಾರಗಳನ್ನು ಕಂಡು ಕೊಳ್ಳಬೇಕಾಗಿದೆ. ಆದರೆ ಸ್ವಾತಂತ್ರ್ಯವನ್ನು ಅನುಭವಿಸುವ ವ್ಯಕ್ತಿಗಳು ಹಾಗೂ ಪ್ರಜಾತಾಂತ್ರಿಕ ಅನುಕೂಲತೆಗಳನ್ನು ಅಧಿಕಾರದ ಆಧಾರದ ನೆಲೆಯಲ್ಲಿ ಅನುಭವಿಸುವವರು

ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕುರುಡರಾಗಿದ್ದಾರೆ. ಡಾ.ಅಂಬೇಡ್ಕರ್, ರಾಮಮನೋಹರ ಲೋಹಿಯ ಸಮಸ್ಯೆಗಳ ನೆಲೆಯನ್ನು ಪರಿಹರಿಸುವಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಪಾ.ವೆಂ. ತಮ್ಮ ವಿಶ್ಲೇಷಣೆಗೆ ಹೆಚ್ಚಿನ ಅಂಶವನ್ನು ಸೇರಿಸಿದ್ದಾರೆ. ರಾಜಕಾರಣ ಮತ್ತು ಧರ್ಮಕಾರಣ ಒಂದರೊಳಗೊಂದು ಸೇರಿಕೊಂಡು ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾತಾಂತ್ರಿಕ ಬದಲಾವಣೆಗೂ ಎದುರಾಳಿಯಾಗಿದೆ. ಈ ಐತಿಹಾಸಿಕ ವಾಸ್ತವವನ್ನು ಅಂಬೇಡ್ಕರ್-ಲೋಹಿಯಾ ಅವರು ಗುರುತಿಸಿದನ್ನು ಉಲ್ಲೇಖಿಸಿ ವಿಚಾರವಾದದ ವ್ಯಾಪಕತೆಯೊಂದೆ ಇಂತಹ ಜ್ವಲಂತ ಸಮಸ್ಯೆಗಳ ನಿವಾರಣೆಗೆ ಪರಿಹಾರವೆಂದು ಪಾ.ವೆಂ. ಆಶೀಸುತ್ತಾರೆ. ಸಮತೂಕದ ದೃಷ್ಟಿಯಿಂದ ನೋಡುವ ಹೃದಯವಂತಿಕೆ, ನಿರ್ಮಮತೆಯ ಸ್ವಾರ್ಥದ ಕಾರ್ಯಕರ್ತರು ಮುಂದಾಳುಗಳಾಗಬೇಕು, ಸಿದ್ಧರಾಗಬೇಕು ಇಂತಹ ಸಿದ್ಧತೆಗೆ ಪಾ.ವೆಂ. ಓದುಗರನ್ನು ತಯಾರಿಸುವಂತಿದೆ ಈ ಲೇಖನಗಳು.

ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಗತಿ-ಸ್ಥಿತಿ ಪರಿಸ್ಥಿತಿಗಳ ಐತಿಹಾಸಿಕ ನೆಲೆಯಿಂದ ಅಧ್ಯಯನ ಮಾಡಿ ರಚಿಸಿದ ಕೃತಿ **ರಷ್ಯಾದ ರಾಜ್ಯಕ್ರಾಂತಿ** ಮತ್ತು **ಸ್ವತಂತ್ರ ಭಾರತ** ಇಲ್ಲಿ ಭಾರತದ ಸುಧೀರ್ಘ ಇತಿಹಾಸ, ಅದರ ಗತ ಇತಿಹಾಸದ ಅನುಭವಗಳು, ಅಲ್ಲಿಯ ಸಮಸ್ಯೆಗಳು, ಶಕ್ತಿಯ ಇತಿ-ಮಿತಿ ಇವೆಲ್ಲವುಗಳ ಸಮಗ್ರ ಪರಿಶೀಲನಾತ್ಮಕ ನೋಟವನ್ನು ಈ ಕೃತಿ ತೆರೆದಿಡುತ್ತದೆ.

ಮಾನವನ ಪ್ರವೃತ್ತಿ ಮತ್ತು ಮೌಲ್ಯಗಳ ಬಗ್ಗೆ ಮಾನವ ಮನಸ್ಥಿತಿಯ ಬಗ್ಗೆ ಮನೋವೈಜ್ಞಾನಿಕ ನೆಲೆಯಿಂದ ಚಿಂತನೆ ಮಾಡಿದ್ದಾರೆ. ಈ ಚಿಂತನೆ ಮನುಷ್ಯನ ವ್ಯಕ್ತಿಗತ, ಕೌಟುಂಬಿಕ ಸಾಮಾಜಿಕ ಅಂಶಗಳನ್ನು ಪರಿಶೀಲಿಸುವುದರಿಂದ ಆರಂಭಿಸಿ ಮಾನವನ ಆಸೆ ಆಕಾಂಕ್ಷೆ, ಆದರ್ಶ ಅಥವಾ ಸಾಂಸ್ಕೃತಿಕ ನೆಲೆಯನ್ನು ಸಾಧಿಸುವ ಮಹತ್ವಾಕಾಂಕ್ಷೆಯ ಅಂಶಗಳನ್ನು ಗ್ರಹಿಸಿ ನಿರ್ವಚನಗೊಳಿಸುವಷ್ಟು ವ್ಯಾಪ್ತಿಯನ್ನು ಪಡೆದಿದೆ **'ಮಾನವ ಪ್ರವೃತ್ತಿ ಮೌಲ್ಯಗಳು'**.

ಬಹುಮುಖ ಪ್ರತಿಭಾ ಸಂಪನ್ನರಾದ ಕಾದಂಬರಿಕಾರ ಕೋಟ ಶಿವರಾಮ ಕಾರಂತರ ಕಾದಂಬರಿಗಳಲ್ಲಿಯ ತಾತ್ವಿಕ ವಿಚಾರಗಳ ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಶಂಬಾ ಜೋಶಿಯವರು ಸಮಕಾಲೀನ ಸಮಾಜದ ನಡೆನುಡಿಗಳ ಕುರಿತು ಮಾಡಿದ ವಿಚಾರಗಳನ್ನು ವಿಶ್ಲೇಷಿಸಿ ಸತ್ಯ-ಮಿಥ್ಯಗಳನ್ನು ಸ್ವರೂಪವನ್ನು ಪಾ.ವೆಂ. ಮನೋಜ್ಞವಾಗಿ ಬಿಂಬಿಸಿದ್ದಾರೆ. ಪಾ.ವೆಂ. ಪತ್ರಿಕೋಧ್ಯಮಿಯಾಗಿ ಅವರ ಕಾಲದಲ್ಲಿ ಪ್ರಕಟವಾದ ಎಲ್ಲ ಮಹತ್ವದ ಕನ್ನಡ ಸಾಹಿತ್ಯದ ಕೃತಿಗಳಿಗೂ ಪ್ರತಿಸ್ಪಂದಿಸಿದ್ದಾರೆ. ಬೇಂದ್ರೆ, ಕುವೆಂಪು, ಕಾರಂತ, ಮಾಸ್ತಿ, ಶಂ.ಬಾ. ಜೋಷಿ, ಗೋಪಾಲಕೃಷ್ಣ ಅಡಿಗ, ಬೈರಪ್ಪ, ಅನಂತಮೂರ್ತಿ ಇವರೆಲ್ಲರ ಬಗೆಗೂ ಅವರು ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಪಾ.ವೆಂ. ಅವರ ಸಾಹಿತ್ಯ ವಿಮರ್ಶೆಯಲ್ಲಿ ಸಾಮಾನ್ಯವಾಗಿ ಇತರಕಡೆ ಕಾಣಸಿಗದ ಒಂದು ವಿಶೇಷತೆ ಇದೆ. ರಮ್ಯ ಪ್ರಗತಿಶೀಲ, ನವ್ಯ ದಲಿತ ಬಂಡಾಯ ಮುಂತಾದ ಸಾಹಿತ್ಯ ಪಂಥದ

ಪ್ರಚಾರಕ ಪರಭಾಷೆಯಿಂದ ಪಾ.ವೆಂ. ವಿಚಲಿತರಾಗಲಿಲ್ಲ. ಪತ್ರಿಕೋದ್ಯಮಿಯಾಗಿ ಅವರು ಎಲ್ಲ ಸಮಕಾಲೀನ ಸಾಹಿತ್ಯ ಚರ್ಚೆಗಳ ರಸಭಾಗವನ್ನು ಸ್ವೀಕರಿಸುತ್ತಿದ್ದರು. ಆದರೆ ಸಾಹಿತ್ಯದ ಸಮಕಾಲೀನ ಪ್ರವಾಹವನ್ನಾಗಲೀ ಅವರ ಕಡೆಗಣಿಸಿ ಬರೆದುದಿಲ್ಲ. ಪಾ.ವೆಂ. ಅವರ ಸಾಹಿತ್ಯ ವಿಮರ್ಶೆಯಲ್ಲಿ ಸಾಕಲ್ಯದ ದೃಷ್ಟಿಯಿದೆ ಮತ್ತು ಸಮತೂಕದ ಮೌಲ್ಯಮಾಪನವಿದೆ. ಈ ರೀತಿಯ ಸಾಹಿತಿಯ ಒಟ್ಟಂದದ ಜೀವನದರ್ಶನವನ್ನು ಪಾ.ವೆಂ. ಅವರು ಸಮತೂಕದಿಂದ ವಾಚಕರಿಗೆ ಮನಗಾಣಿಸಬಲ್ಲರು.

ಹಿರಿಯ ಸಾಹಿತಿ, ಪತ್ರಕರ್ತರ ಬಗ್ಗೆ ಮನನೀಯವಾದ ವ್ಯಕ್ತಿಚಿತ್ರಗಳನ್ನು ಕೊಟ್ಟಿದ್ದಾರೆ. ಪತ್ರಕರ್ತರಾಗಿ ಪಾ.ವೆಂ. ಅವರು ಒಟ್ಟು ಪರಿಸ್ಥಿತಿಯ ಚಿತ್ರಣವನ್ನು ಕೊಟ್ಟು ಬದಲಾವಣೆಗೆ ಚಿಂತಿಸಿದರೆ ಸಾಲದು, ಕ್ರಿಯಾತ್ಮಕವಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನ ಕಾರ್ಯಕ್ಷೇತ್ರದಲ್ಲಿ ತನುಮನ–ಧನಗಳಿಂದ ವಿಚಾರವಾದವನ್ನು ತನ್ನದನ್ನಾಗಿ ಮಾಡಿಕೊಂಡು ಕ್ರಿಯಾಶೀಲನಾಗಬೇಕು. ಅಂತಹ ಅನೇಕ ವ್ಯಕ್ತಿಗಳನ್ನು ಪಾ.ವೆಂ. ಕಂಡಿದ್ದಾರೆ, ಬೇಟಿಯಾಗಿದ್ದಾರೆ. ನೂರಕ್ಕೂ ಹೆಚ್ಚು ವ್ಯಕ್ತಿಚಿತ್ರಣಗಳನ್ನು ಬರೆದ ಪಾ.ವೆಂ. ಅಲ್ಲಿಯ ವ್ಯಕ್ತಿಯ–ಶಕ್ತಿಸಾಧನೆಯ ಜೀವನ ಯಶಸ್ಸಿನ ಮರ್ಮವನ್ನು ಇಲ್ಲಿ ವಿವರಿಸಿದ್ದಾರೆ.

ವಿಜ್ಞಾನ ಕ್ಷೇತ್ರವಲ್ಲದೆ ವಿಜ್ಞಾನದ ಬರಹಗಾರರಾಗಿ ಬಂದವರು ಪಾ.ವೆಂ. ಕಸ್ತೂರಿ ಪತ್ರಿಕೆಯ ಮೂಲಕ ವಿಜ್ಞಾನ ಸಾಹಿತ್ಯವನ್ನು ಜನಪ್ರಿಯಗೊಳಿಸಿದರು. ಕಸ್ತೂರಿಯಂಥ ಡೈಜಸ್ಟ್ ಪತ್ರಿಕೆಯಲ್ಲಿ ಪ್ರತಿ ಸಂಚಿಕೆಯಲ್ಲೂ ವಿಜ್ಞಾನದ ಲೇಖನಗಳನ್ನು ಬರೆಯಿಸಬೇಕೆಂಬ ಹಂಬಲ ಪಾ.ವೆಂ. ಅವರದು. ಸಮರ್ಪಕವಾದ ಬರಹಗಾರರುಬೇಕು. ಆದರೆ ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯುವವರು ಯಾರು? ಸಾಕಷ್ಟು ವಿಜ್ಞಾನ ಪದವೀಧರರು ಸಿಗುತ್ತಾರೆ. ಆದರೆ ಶುದ್ಧ ಸರಳ ಭಾಷೆಯಲ್ಲಿ ಬರೆಯುವ ಅವಶ್ಯಕತೆ ಬಂದಾಗ ಸ್ವತಃ ಪಾ.ವೆಂ. ಅವರೇ ಈ ಕೆಲಸಕ್ಕೆ ಬದ್ಧರಾಗುತ್ತಾರೆ. ಎಸ್.ಎಸ್.ಎಲ್.ಸಿ.ಯವರೆಗೆ ವಿಜ್ಞಾನದ ಪಾಠಗಳನ್ನು ಓದಿದ ಪಾ.ವೆಂ. ಈ ಕೆಲಸವನ್ನು 'ಓನಾಮದಿಂದ' ಪ್ರಾರಂಭಿಸುತ್ತಾರೆ. ಇಂಗ್ಲೀಷ್‌ನಲ್ಲಿ ಬಂದ ಲೇಖನಗಳನ್ನು ಸಂಪೂರ್ಣವಾಗಿ ಓದಿದರು. ತಿಳಿಯದಿದ್ದ ಅಂಶಗಳನ್ನು ವಿಷಯ ತಜ್ಞರಿಂದ ಕೇಳಿ ವಿಷಯ ಸಂಗ್ರಹಮಾಡುತ್ತಿದ್ದರು. ಪಾ.ವೆಂ. ಅವರ ಶ್ರಮ ಇಷ್ಟಕ್ಕೆ ಮುಗಿಯಲಿಲ್ಲ. ಕನ್ನಡದ ಪಾರಿಭಾಷಿಕ ಪದಗಳನ್ನು ಸೃಷ್ಟಿಸಬೇಕು. ಈ ವಿಷಯದಲ್ಲಿ ಬಾಲ್ಯದಿಂದಲೂ ಸಂಸ್ಕೃತ ಪರಿಣಿತರಾಗಿದ್ದ ಪಾ.ವೆಂ. ಅವರು ಸಂಸ್ಕೃತ ಪರಿಜ್ಞಾನ ಪೂರ್ಣ ನೆರವಿಗೆ ಬಂದಿತು. ಇದೊಂದು ತಪಸ್ಸು ಎನ್ನುವಂತೆ ಒಂದೊಂದು ವಿಜ್ಞಾನದ ವಿಷಯಗಳನ್ನು ಆರಿಸಿ, ಬರೆಯುತ್ತಾ, ಇಂತಹ ವಿಷಯ ಪರಿಣಿತರಿಂದ ಬರೆಸುತ್ತಾ ಕಸ್ತೂರಿಯಿಂದ ನಿವೃತ್ತರಾಗುವಷ್ಟರಲ್ಲಿ ಕನ್ನಡದ ಗಣ್ಯ ವಿಜ್ಞಾನ ಲೇಖಕರಾಗಿದ್ದರು. ಕನ್ನಡದಲ್ಲಿ ವಿಜ್ಞಾನದ ಇತಿಹಾಸವನ್ನು ಬರೆಯಲು ಹೊರಟವರಲ್ಲಿ ಪಾ.ವೆಂ. ಅವರು ಪ್ರಮುಖರು. ಬರಹ ಮತ್ತು ಗುಣಗಳೆರಡರ ದೃಷ್ಟಿಯಿಂದ ಇಲ್ಲಿ ವಿಜ್ಞಾನ ಲೇಖನಗಳು ಮಹತ್ತರವೆನಿಸಿದೆ.

ಖಗೋಳಶಾಸ್ತ್ರ, ಪದಾರ್ಥವಿಜ್ಞಾನ, ಭೂ ಭೌತಿಕ ವಿಜ್ಞಾನ, ಸಸ್ಯಲೋಕ, ಪ್ರಾಣಿಲೋಕ, ವೈದ್ಯಕೀಯ ಮನೋವಿಜ್ಞಾನ, ಅನ್ವಯಿಕ ವಿಜ್ಞಾನ– ವಿಜ್ಞಾನಿಗಳು ಈ ಎಲ್ಲ ವಿಷಯವನ್ನು ಒಳಗೊಂಡಿದೆ. ಇಲ್ಲಿಯ ಲೇಖನಗಳು ಹೆಚ್ಚು ಭಾಗ ವೈದ್ಯಕೀಯ ವಿಭಾಗಕ್ಕೆ ಸಂದಿವೆ. ಜನರ ಅರೆಬರೆಜ್ಞಾನ, ಅಜ್ಞಾನ ಇವುಗಳನ್ನು ಹೋಗಲಾಡಿಸುವುದು ಮತ್ತು ರೋಗಗಳ ಸ್ವರೂಪವನ್ನು ಜನ ತಿಳಿದು ಆರೋಗ್ಯವಂತರಾಗಲಿ ಎನ್ನುವ ಆಶಯ ಇಲ್ಲಿದೆ. ತಾನು ಅರ್ಧ ಶತಮಾನಕ್ಕಿಂತಲೂ ದೀರ್ಘಕಾಲ ಅಸ್ತಾಮವನ್ನು ತನ್ನ ಆತ್ಮ ಬಂಧುವಿನಂತೆ ಕಂಡವರು. ಇದರಿಂದಲೇ ಪಾ.ವೆಂ. ಅವರು ವೈದ್ಯ ವಿಜ್ಞಾನಕ್ಕೆ ಹೆಚ್ಚು ಒತ್ತುಕೊಟ್ಟಂತಿದೆ. ಸಾಂಪ್ರದಾಯಿಕ ಪರಂಪರೆ, ವೈದಿಕ ಜ್ಞಾನವನ್ನು ಆರಿಸಿಕೊಂಡು ಆಧುನಿಕ ಸಂಸ್ಕೃತಿಯತ್ತ ಸಂಶೋಧನಾ ರೀತಿಯ ಲೇಖನಗಳನ್ನು ಇಲ್ಲಿ ಕಾಣುತ್ತೇವೆ. ವಿಜ್ಞಾನದ ಎಲ್ಲ ವಿಭಾಗಗಳನ್ನು ಅವುಗಳ ವೈಶಿಷ್ಟ್ಯವನ್ನು ಸತ್ಪರಿಣಾಮ ದುಷ್ಪರಿಣಾಮಗಳನ್ನು, 'ವಿಜ್ಞಾನ ವಿಸ್ಮಯ' ಕೃತಿಯ ಕೊನೆಯ ಭಾಗದಲ್ಲಿ ಬರುವ ಜಗತ್ಪ್ರಖ್ಯಾತರಾದ ವಿಜ್ಞಾನಿಗಳ ಚರಿತ್ರೆ, ಸಾಧನೆಗಳನ್ನು ಅಭ್ಯಾಸ ಮಾಡಿದಾಗ 'ವಿಶ್ವಕೋಶ'ದ ವ್ಯಕ್ತಿತ್ವ ಇಲ್ಲಿ ದರ್ಶನವಾಗುತ್ತದೆ. ಪಾ.ವೆಂ. ಅವರು ತಮ್ಮ ವೃತ್ತಿಯ ಮೂಲಕ ತಮ್ಮ ಪ್ರವೃತ್ತಿಗಳನ್ನು ತಣಿಸಿಕೊಂಡು 'ಪತ್ರಿಕಾ'ಸಂಸ್ಕೃತಿಯನ್ನು ನಿರೂಪಿಸಿದರು. ೨೦ನೇ ಶತಮಾನದ ಒಬ್ಬ 'ಬ್ರಾಹ್ಮಣ' ಆಚಾರ್ಯನಾಗಿ ನಿರ್ವಹಿಸಬೇಕಾದ ಕರ್ತವ್ಯವನ್ನು ಉಡುಪಿಯಿಂದ ಹುಬ್ಬಳ್ಳಿಯವರೆಗೆ ಬಂದು ನಿರ್ವಹಿಸಿದ್ದರು. ಪಾ.ವೆಂ. ಅವರ ಬರಹ ಬದುಕನ್ನು ಕಟ್ಟಿಕೊಡುವ ವಿವೇಕವನ್ನು ಹೆಚ್ಚಿಸುವ ಯುವ ಪೀಳಿಗೆಯನ್ನು ಎಚ್ಚರಿಸುವ ಕರೆಗಂಟೆಯಂತಿದೆ. ಕಸ್ತೂರಿಯಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಲು ಸಾಧ್ಯವಿದೆಯೆಂದು ವೈಜ್ಞಾನಿಕ ಲೇಖನಗಳ ಮೂಲಕ ಪಾ.ವೆಂ. ಅವರ ನಾಡಿಗೆ ಸ್ಪಷ್ಟೀಕರಿಸಿದ್ದಾರೆ.

ಚಿತ್ರ ವಿಚಿತ್ರ ಈ ಜಗತ್ತು: ಮಾನವಾಸಕ್ತಿಯ ಕುತೂಹಲದ ಬರಹಗಳು ಇಲ್ಲಿ ಪ್ರಧಾನವಾಗಿದೆ. ಇಲ್ಲಿಯ ವಿಸ್ಮಯಕರ ಘಟನೆಗಳನ್ನು ಓದುವಾಗ ಅದನ್ನು ಎಲ್ಲಿಂದ ಸಂಗ್ರಹಿಸಿದರೆಂಬುದು ವಿಸ್ಮಯಕರ ಅಂಶವೆನಿಸುತ್ತದೆ.

ಕಾಮಾರ್ಥಕೋಶ ಎಂಬ ಅಂಕಣ ಬರಹಗಳಿಂದ ಕನ್ನಡ ರತಿವಿಜ್ಞಾನ ಸಾಹಿತ್ಯಕ್ಕೆ ಪ್ರಬುದ್ಧವಿಚಾರಗಳನ್ನು ತುಂಬಿದ್ದಾರೆ. ಲೈಂಗಿಕತೆ ಎನ್ನುವುದು ಬಂದು ವಿಜ್ಞಾನ ಅದನ್ನು ವಸ್ತು ನಿಷ್ಠವಾಗಿ ಅಭ್ಯಸಿಸಿ ಅಲ್ಲಿಯ ತೊಡಕು ತೊಂದರೆಗಳನ್ನು ನಿವಾರಿಸಿ ಗಂಡು ಹೆಣ್ಣಿಗೆ ಮಾರ್ಗದರ್ಶನ ಮಾಡಬೇಕು. ಮಡಿವಂತಿಕೆಯ ಮುಸುಕಿನಲ್ಲಿ ಆಗುವ ಅಪರಾದ, ಅನಾರೋಗ್ಯ ವೈಶಮ್ಯಗಳನ್ನು ತಡೆಗಟ್ಟಬಹುದೆಂಬ ಪ್ರತಿಪಾದನೆ ಇಲ್ಲಿಯ ಮುಖ್ಯ ಉದ್ದೇಶ, ಲೈಂಗಿಕ ಜೀವನದ ವಿವರಗಳನ್ನು ಓದುವುದರಿಂದ ಮನಸ್ಸು ಪ್ರಬುದ್ಧವಾಗುತ್ತದೆ. ಪ್ರಬುದ್ಧತೆಯಿಂದ ಜವಾಬ್ದಾರಿಯಿಂದ ಕೂಡಿದ ಸುಖಾನುಭವನ ತಿಳುವಳಿಕೆ ಹೆಚ್ಚುತ್ತದೆ. ಆಲಕ್ಷಿತವಾದ ಒಂದು ಲೌಕಿಕ ವಿಷಯದ ಮೇಲೆ ಬೆಳಕನ್ನು ಇಲ್ಲಿಯ ಲೇಖನಗಳು ನೀಡುತ್ತದೆ. ಆದ್ದರಿಂದ ಇದೊಂದು ಉನ್ನತಮಟ್ಟದ ಅಪೇಕ್ಷಣೀಯವಾದ ಲೇಖನ ಸರಣಿ ಎನಿಸುತ್ತದೆ.

ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟ್ **ಸಂಯುಕ್ತ ಕರ್ನಾಟಕ** ದಿನಪತ್ರಿಕೆ ಮತ್ತು **ಕರ್ಮವೀರ**ಗಳನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿ ಅಂದಿನ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಸ್ಥಿರತೆಯನ್ನು ಸ್ಥಾಪಿಸಿದ್ದಲ್ಲದೆ ಕನ್ನಡಿಗರ ಆಶೋತ್ತರಗಳಿಗೆ ಸಂದಿಸುವಂತೆ ಇನ್ನಷ್ಟು ವಿಸ್ತರಣೆಯನ್ನು ಮಾಡುವ ಹಂತದಲ್ಲಿತ್ತು. ಮುದ್ರಿತ ಅಕ್ಷರ ಜಗತ್ತಿನ ಮೂಲಕ ಅವರ ದೈನಂದಿನ ಜೀವನದ ವಿದ್ಯೆ ಸಂಸ್ಕೃತಿಗಳಿಂದ ಜಾಗೃತಗೊಳಿಸುವುದು ಮತ್ತು ಬೆಳೆಸುವುದು. ಇದನ್ನು ಪೂರೈಸಲು ಲೋಕಶಿಕ್ಷಣ ಟ್ರಸ್ಟ್ ೧೯೫೬ ಮಾಸ ಪತ್ರಿಕೆಯನ್ನು ರೂಪಿಸಿತು. ಕನ್ನಡದಲ್ಲಿ ಆಗ ಜನಪ್ರಿಯವಾದ ಯಾವ ಪತ್ರಿಕೆಯೂ ಇರಲಿಲ್ಲ. ನಾಡಿನ ವಿದ್ಯಾವಂತರಿಗೆ, ಶಿಕ್ಷಕರಿಗೆ, ಪ್ರೌಢ ವಿದ್ಯಾರ್ಥಿಗಳಿಗೆ ಮತ್ತು ಉತ್ತಮ ಅಭಿರುಚಿಯುಳ್ಳ ಸಾಮಾನ್ಯರಿಗೆ ಹಿಡಿಸುವಂತಹ ಪತ್ರಿಕೆ ಅಗತ್ಯವಿರುವ ಕಾಲ ಅದು. ಭಾಷಾವಾರು ಪ್ರಾಂತ್ಯರಚನೆಯ ಪರಿಣಾಮವಾಗಿ ರಾಜ್ಯದ ಏಕೀಕರಣವು ಸನ್ನಿಹಿತವಾದ ಪರಿಸ್ಥಿತಿ ಅದು. ಲೋಕಶಿಕ್ಷಣ ಟ್ರಸ್ಟ್ ಧ್ಯೇಯವಾಕ್ಯ 'ಕರಿಶ್ಯೇವಚನಂತವಃ' (ನಿನಗೆ ಕೊಟ್ಟ ಮಾತನ್ನು ನೇರವೇರಿಸುವ) ಈಡೇರುವ ಸಮಯ ಅದು. ರಂಗನಾಥ ದಿವಾಕರ್, ಹ.ರಾ. ಪುರೋಹಿತ ಇವೆರಲ್ಲರೂ ಸೇರಿ ಕನ್ನಡದಲ್ಲಿ ಡೈಜಸ್ಟ್ ಮಾದರಿಯ ಮಾಸಿಕ ಪತ್ರಿಕೆಯನ್ನು ತರಬೇಕೆಂದು ಯೋಚಿಸಿದರು. ಕರ್ಮವೀರದಲ್ಲಿ ತಮ್ಮೊಡನೆ ೧೪ ವರ್ಷಗಳಿಂದ ಇದ್ದ ಪಾ.ವೆಂ. ಆಚಾರ್ಯರಿಗೆ ಇದರ ಸಂಪಾದಕತ್ವದ ಜವಾಬ್ದಾರಿಯನ್ನು ವಹಿಸಿದರು. ಪಾ.ವೆಂ. ಅವರ ಈ ಡೈಜಸ್ಟ್‌ನ ರೂಪರೇಷಗಳನ್ನು ತಮ್ಮ ಮನಸ್ಸಿನಲ್ಲಿ ಆಗಲೆ ಮೂಡಿಸಿಕೊಂಡಿದ್ದರು. ಡೈಜಸ್ಟ್ ಪತ್ರಿಕೆಗೆ ಅವಶ್ಯವಿದ್ದ ವಸ್ತು ವಿಷಯ ಎಲ್ಲ ಸಾಮಾಗ್ರಿಗಳನ್ನು ಅವರು ಸಂಗ್ರಹಿಸಿದ್ದರು. ೧೯೫೬ ಸೆಪ್ಟೆಂಬರ್ ಮೊದಲ ದಿನ **ಕಸ್ತೂರಿ**ಯ ಸಂಚಿಕೆ ಪ್ರಕಟವಾಗಿ ಹಿರಿಯ ಕನ್ನಡಿಗರ ಕೈಸೇರಿತು.

ಕಸ್ತೂರಿ ಒಂದು ಜಿಂಕೆ ಜಾತಿಯ ಮೃಗದ ಹೆಸರು **ಕಸ್ತೂರಿ** ಮೃಗದ ವಿಶೇಷತೆ ಆಚಾರ್ಯರ ಪತ್ರಿಕೆಯ ಆಶಯ ಮತ್ತು ಅಭಿವ್ಯಕ್ತಿಯ ರೂಪಕವೇ ಆಗಿದೆ. ೧೯೫೬ ರಿಂದ ೧೯೭೫ರ ವರೆಗಿನ ೨೨೦ ಸಂಚಿಕೆಗಳ ಕನ್ನಡದ ಕಸ್ತೂರಿಯನ್ನು ನಾಡಿನ ತುಂಬ ಪರಿಮಳ ಸೂಸುವಂತೆ ರೂಪಿಸಿದರು, ಬೆಳೆಸಿದರು. ಕನ್ನಡಿಗರು ಇತರ ರಾಜ್ಯಗಳಲ್ಲೂ, ವಿದೇಶದಲ್ಲೂ ಈ ಪತ್ರಿಕೆಯನ್ನು ತರಿಸಿ ಓದುತ್ತಿದ್ದರೆಂಬುದು ಇದರ ಜನಪ್ರಿಯತೆಯ ಕುರುಹು. ವಿದೇಶದಿಂದಲೇ ಕನ್ನಡ ಲೇಖಕರು ಕಸ್ತೂರಿಗಾಗಿ ಬರೆಯುತ್ತಿದ್ದರು. ಪಾ.ವೆಂ. ಅವರ ಮುಖ್ಯ ಕೃಷಿಯೇ **ಕಸ್ತೂರಿ** ಪತ್ರಿಕೆಯ ಸಂಪಾದನೆ. ಇದಕ್ಕೋಸ್ಕರ ತನ್ನೆಲ್ಲ ಸಂಪನ್ಮೂಲ ಶಕ್ತಿಯನ್ನು ವಿನಿಯೋಗಿಸಿದರು.

ಪಾ.ವೆಂ. ಆಚಾರ್ಯರು ಬರೆದುದೆಲ್ಲವೂ ಬಿಡಿ ಬಿಡಿ ಲೇಖನ. ಟಿಪ್ಪಣಿ ರೂಪದಲ್ಲೇ ಕಸ್ತೂರಿ ಕರ್ಮವೀರಕ್ಕಾಗಿ ಅನುದಿನವೂ ಬರೆಯಬೇಕಾಗುತ್ತಿತ್ತು. ವರದಿ (Report) ಅನ್ನಿಸದಂತೆ; ಮಾಹಿತಿ ಪ್ರಧಾನವಾದರೂ ಪರಿಚಯ ಅನ್ನಿಸದಂತೆ; ಸಾಂದರ್ಭಿಕ (Contextual) ಅನ್ನಿಸದಂತೆ ವಿಷಯ ಅಥವಾ ಸನ್ನಿವೇಶವನ್ನು ಅದರ

ಎಲ್ಲ ಮಗ್ಗುಲುಗಳನ್ನು ತತ್ಸಂಬಂಧಿ ಅಂಶಗಳನ್ನು ಸಂಗ್ರಹಿಸಿ ಸಾರಾಂಶ ರೂಪದಲ್ಲಿ ಲೇಖನ ಸಿದ್ಧಪಡಿಸುವ ಸಂಪಾದಕನ ಕಲೆ ಪಾ.ವೆಂ. ಅವರಿಗೆ ಸಾಧಿಸಿತ್ತು. ಓದುಗನಿಗೆ ಲೇಖನ ಓದಿದ ನಂತರವೂ ಇನ್ನು ಏನೋ ಇದೆ, ಅದನ್ನು ತಾನು ತಿಳಿಯಲಿ ಇನ್ನಷ್ಟು ಬೇರೆ ಬೇರೆ ಓದಬೇಕು ಅಥವಾ ವಿಚಾರಕ್ಕೆ ತೊಡಗಬೇಕು ಎನ್ನಿಸುವ ಶೈಲಿ ಪಾ.ವೆಂ.ಅವರದು. ಡೈಜಸ್ಟ್ ಅನ್ನುವುದೇ ಒಂದು ಪಚನ ಮಾಡಿಕೊಳ್ಳುವ ಪತ್ರಿಕೆ. ವಿಷಯ ವಸ್ತು ಆಹಾರವನ್ನು ರುಚಿಕರವೂ, ವಾಚಕವೂ ಆಗಿ ಮಾಡುವುದೇ ಸಂಪಾದಕನ ಮೊದಲ ಕೆಲಸ. ಇದರಲ್ಲಿ ಪಾ.ವೆಂ. ಕುಶಲಹಸ್ತರು. ಪ್ರತಿಸಂದರ್ಭವನ್ನು ಗಮನಿಸುವ ಅವರು ತಡಮಾಡದೆ ಆಯಾಕಾಲದ ಮಹತ್ವದ ವಿದ್ಯಮಾನವನ್ನು ಅನೇಕ ಮೂಲಗಳಿಂದ ಗ್ರಹಿಸಿ, ಸಂಗ್ರಹಿಸಿ ಸಂಕ್ಷಿಪ್ತಗೊಳಿಸಿ ಪ್ರಕಟಿಸುತ್ತಿದ್ದರೆ. ಇದರಲ್ಲಿ ಅವರ ಸೃಜನಶೀಲ ಗುಣಗಳಾದ ನೆನಪಿನ ಶಕ್ತಿ, ಬಿಡಿ ಬಿಡಿಯಾದುದನ್ನು ಸ್ವಾರಸ್ಯಕರವಾಗಿ ಸಂಯೋಜಿಸಿ ಮೊನಚಿನ ಶೈಲಿ ಅನುಸರಿಸಿ ಬರೆಯಬಲ್ಲ ಕೌಶಲ **ಕಸ್ತೂರಿ**ಯಲ್ಲಿ ಪ್ರಕಟವಾಗಿದೆ. ಹದಿನೆಂಟು ವರ್ಷಗಳ ಈ ೨೨೦ ಸಂಚಿಕೆಗಳನ್ನು ಅಧ್ಯಯನ ಮಾಡಿದಾಗ ಆಚಾರ್ಯರ ಸಂಪಾದನ ಕಲೆ, ಸಂಪಾದಕ ಕಚೇರಿಯ ದಕ್ಷನಿರ್ವಹಣೆ, ಪ್ರಸಾರದ ನಿರಂತರ ಬೆಳವಣಿಗೆಗಾಗಿ ಅನುಸರಿಸಿದ ಪ್ರಯೋಗಶೀಲತೆ ಮತ್ತು ವಿವಿಧ ನಾಮಾವಳಿಗಳಿಂದ (ಮುರಳೀಧರ, ರಾಧಾಕೃಷ್ಣ, ವಿಚಾರಿ, ಪರಶುರಾಮ...) ತಾವೇ ಬರೆದು ಸರ್ವಾಂಗ ಸುಂದರ, ವಾಚನೀಯವೂ ಆಗಿ ರೂಪಿಸುವಂತೆ ಸಾಧಿಸಿದ ಸಾಧನೆ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಅಪೂರ್ವವಾದುದು. ಓದುಗರನ್ನು ಒಲಿಸುವುದು, ಆಸಕ್ತಿಯನ್ನು ನಿರಂತರಗೊಳಿಸುವುದು. ಓದುಗರ ಅಭಿರುಚಿ ತಿದ್ದಿ ಬೆಳೆಸುವುದು ಓದುಗರನ್ನು ವಿಚಾರವಂತರನ್ನಾಗಿ ಮಾಡುವುದು ಇಲ್ಲಿಯ ಉದ್ದೇಶವಾಗಿತ್ತು. ಲೋಪ, ದೋಷ, ತಪ್ಪು ಅಥವಾ ಓದುಗರ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕಸ್ತೂರಿಯ ಸಹಸ್ಪಂದನ ವಿಭಾಗ ಕಸ್ತೂರಿಯ ತೆರೆದ ವೇದಿಕೆಯಂತಿತ್ತು. ಎಲ್ಲ ವಾಚಕರ ಪ್ರಶ್ನೆಗೆ, ಸಹಮತಕ್ಕೆ ಸಂಪಾದಕರ ಸ್ಪಂದನೆಯ ಉತ್ತರವಿತ್ತು. ಸಂಪಾದಕನ ಸಮರ್ಥ ಜವಾಬ್ದಾರಿಗೆ ಇದು ಸಾಕ್ಷಿಯಾದಂತಿದೆ. ಓದುಗರ ಸಂಶಯಗಳನ್ನು ನಿವಾರಿಸಲು ಪತ್ರ ಮುಖೇನ ನೆರವಾಗುತ್ತಿತ್ತು. ಉದಾಹರಣೆಗೆ: ಸಂತಾನಹರಣ ಶಸ್ತ್ರಕ್ರಿಯೆಗೆ ಸಂಬಂಧಿಸಿದ ಒಂದು ಲೇಖನ ಪ್ರಕಟವಾಗಿತ್ತು. ಇಬ್ಬರು ಮಕ್ಕಳು ಸಾಕು ಎಂಬ ಪರೋಕ್ಷ ಸೂಚನೆಯೂ ಇತ್ತು. ಒಬ್ಬ ಓದುಗರು ಎರಡು ಮಕ್ಕಳೂ ಹುಟ್ಟಿದ ಮೇಲೆ ಶಸ್ತ್ರಕ್ರಿಯೆ ಮಾಡಿಕೊಂಡರು. ದುರ್ದೈವಕ್ಕೆ ಮಕ್ಕಳೆರಡು ತೀರಿಕೊಳ್ಳುತ್ತವೆ. ಅವರು ಈ ಲೇಕನ ಓದಿ ಪಾ.ವೆಂ. ಅವರಿಗೆ ಆರ್ತವಾಗಿ ಪತ್ರ ಬರೆದರು. ಆಗ ಪಾ.ವೆಂ. ಅವರು ಸಂತಾನಹರಣದ ಶಸ್ತ್ರಕ್ರಿಯೆಯ ತಜ್ಞರನ್ನು ವಿಚಾರಿಸಿ ಹೊಸದಾಗಿ ರೂಪಿಸಲಾಗಿದ್ದ ವೀರ್ಯನಾಳದ ಪುನರ್ಜೋಡಣೆಯ ವಿವರಗಳನ್ನು ತಿಳಿದು ಓದುಗಮಿತ್ರರಿಗೆ ತಿಳಿಸಿದರಂತೆ ಪಾ.ವೆಂ. ತಿಳಿಸಿದಂತೆ ಶಸ್ತ್ರಕ್ರಿಯೆ ಮಾಡಿಕೊಂಡು ಮತ್ತೊಂದು ಮಗವನ್ನು ಪಡೆದುದಾಗಿ

ಸಂಪಾದಕರಿಗೆ ಕೃತಜ್ಞತೆಯ ಪತ್ರ ಬರೆದರಂತೆ. ಹೀಗೆ ಓದುಗರೊಡನೆ ಪಾ.ವೆಂ. ಸಂಬಂಧ ಒಂದು ವಿನೂತನ ವಿಶಿಷ್ಟತೆಯ ರೀತಿಯಲ್ಲಿತ್ತು.

ಪಾ.ವೆಂ. ಲೇಖಕರೊಡನೆಯೂ ಪಾ.ವೆಂ. ಆಳವಾದ ಸಂಪರ್ಕ ಇಟ್ಟುಕೊಂಡಿದ್ದರು. ಹೊಸ ಹೊಸ ಲೇಖಕರನ್ನು ಸೃಷ್ಟಿಸಿದರು. ಕೆಲವರು ಹಿರಿಯ ಲೇಖಕರ ಸಾಲಿನಲ್ಲಿ ನಿಲ್ಲುವವರು. ಹೊಸಬರಲ್ಲಿ ಅವಿತಿದ್ದ ವೈಚಾರಿಕ ಶಕ್ತಿಯನ್ನು ಮತ್ತು ಬರವಣಿಗೆಯ ಸಾಮರ್ಥ್ಯವನ್ನು ಕಂಡುಹಿಡಿಯಬಲ್ಲ ಗುಣ ಗ್ರಾಹಕತೆ ಪಾ.ವೆಂ. ಅವರಲ್ಲಿತ್ತು. ಈ ನಿಟ್ಟಿನಲ್ಲಿ ಕಸ್ತೂರಿಯ ಪ್ರೋತ್ಸಾಹ ಒಳ್ಳೆಯ ಅವಕಾಶವಾಯಿತು ಎಂದವರು. ಪ್ರೊ. ಕು.ಶಿ. ಹರಿದಾಸ ಭಟ್ಟ, ಜಿ.ಟಿ. ನಾರಾಯಣರಾವ್, ಕೆ.ಟಿ. ವೇಣುಗೋಪಾಲ, ಸಂತೋಷ ಕುಮಾರ್ ಗುಲ್ವಾಡಿ ಇನ್ನೂ ಹಲವರಿದ್ದಾರೆ. ಪಾ.ವೆಂ. ಅವರು ಲೇಖಕರ ವಿಷಯದಲ್ಲಿ ಗುಣೈಕ ಪಕ್ಷಪಾತಿಗಳು ಮತ್ತು ನಿರ್ಭಿಡೆಯಿಂದ ತಮ್ಮ ವಿಧಾಯಕ ಸೂಚನೆಕೊಡುತ್ತಿದ್ದರು. ಇಂಗ್ಲೀಷ್ ಭಾಷೆಯ ಶಬ್ದಗಳನ್ನು ಕನ್ನಡ ಪರಿಭಾಷೆಯಲ್ಲಿ ಟಂಕಿಸಿದುದು. ಉದಾಹರಣೆಗೆ ಕ್ಯಾನ್ಸರ್: ಕರ್ಕ (ಅರ್ಬುದ) ಎಂದು ಕರೆದರೆ ೧೯೬೩ರ ಡಿಸೆಂಬರ್ ಸಂಚಿಕೆಯಲ್ಲಿ ಡಿ.ಯಸ್. ಶಿವಪ್ಪ ಅವರ ಲೇಖನದಲ್ಲಿ 'ಏಡಿಗಂತಿ' ಎನ್ನುವ ಪದ ಬಳಕೆಯಾಗಿದೆ. ಹೀಗೆ ವಿಜ್ಞಾನದ ಕಹಿಗುಳಿಗೆ, ಉಕ್ಕಿನ ಕಡಲೆ ಏನೇ ಇದ್ದರೂ ಇದನ್ನು ಮೃದುವಾಗಿಸಿ ಕಸ್ತೂರಿಯ ವಾಚಕರಿಗೆ ಉಣಬಡಿಸಿದ್ದಾರೆ. ಪಾ.ವೆಂ. ಮರಣೋತ್ತರದಲ್ಲಿ ನವಕರ್ನಾಟಕದವರು ಪ್ರಕಟಿಸಿದ 'ವಿಜ್ಞಾನ ವಿಸ್ಮಯ'ವು ಮೂರು ವರ್ಷಗಳಲ್ಲಿ ಮೂರು ಆವೃತ್ತಿಯನ್ನು ಕಂಡಿದೆ. ಇದು ಆಚಾರ್ಯರ ಬರವಣಿಗೆಯ ಸುಭಗತೆಯನ್ನು ಸಾರುತ್ತದೆ.

ಲಾಂಗೂಲಾಚಾರ್ಯರಾಗಿ ಕಾಲುಶತಮಾನಗಳವರೆಗೆ ಗುರುತಿಸಿಕೊಂಡವರು **ಪದಾರ್ಥಚಿಂತಾಮಣಿ**ಯಿಂದ ಪಾ.ವೆಂ. ಆಚಾರ್ಯರೆಂದು ವಿದ್ವಾನ್ ಮಣಿಗಳು ಗುರುತಿಸತೊಡಗಿದರು. ಪಾ.ವೆಂ. ಬಹುಭಾಷಾ ಪ್ರಾವಿಣ್ಯ ಹೊಂದಿದ್ದರಿಂದ ಪದಗಳ ಪ್ರಪಂಚದಲ್ಲಿ ವಿಹರಿಸುವ ವೃತ್ತಿಯನ್ನು ಬೆಳೆಸಿಕೊಂಡರು. ಆಚಾರ್ಯರಿಗಿದ್ದ ತಳಸ್ಪರ್ಶಿ ಅಧ್ಯಯನ, ಕುತೂಹಲಗಳ ಸ್ವಭಾವದಿಂದಾಗಿ ಭಾಷಾಭ್ಯಾಸದ ಪ್ರವೃತ್ತಿ ಸಾಕಷ್ಟು ಬೆಳೆದು ೧೯೯೧ರಲ್ಲಿ ಕೃತಿರೂಪದಲ್ಲಿ **ಪದಾರ್ಥಚಿಂತಾಮಣಿ** ಪ್ರಕಟಗೊಂಡಿತು. ಉಳಿದೆಲ್ಲ ಕೃತಿಗಳಿಗಿಂತ ಇದು ಭಿನ್ನ ಮತ್ತು ವಿಶೇಷವೂ ಆಗಿದೆ. ಭಾಷಾವಿಜ್ಞಾನಿ ಹಾಮಾ ನಾಯಕರು ಈ ಅಧ್ಯಯನಕ್ಕೆ 'ಪದಪರಂಪರೆ' (Worldlore) ಎಂದು ನಾಮಕರಣ ಮಾಡಿದ್ದಾರೆ. ಇಲ್ಲಿಯ ಪದರಚನೆಯ ವಿಶೇಷವೆಂದರೆ ಹೊಸಗನ್ನಡದ ಸಾಹಿತ್ಯ ಕೃತಿಗಳಲ್ಲಿ, ಪತ್ರಿಕಾವರದಿ ಮತ್ತು ಲೇಖನಗಳಲ್ಲಿ ಪ್ರಯೋಗಗೊಂಡ ಅಚ್ಚಗನ್ನಡದ ಪದಗಳು, ಕನ್ನಡೇತರ ದ್ರಾವಿಡ ಪದಗಳು ಹೇಗೆ ಬಳಕೆಯಾಗುತ್ತದೆಂಬ ಪ್ರಾಮಾಣಿಕ ವಿವೇಚನೆ ಇಲ್ಲಿದೆ. ಇದು ಪದನಿಷ್ಪತ್ತಿ (Etymology) ಕ್ರಮ.

ಆಚಾರ್ಯರು ಪದಪರಂಪರೆಯ ಜಾಡು ಹಿಡಿಯುವ ರೀತಿಯಿಂದ ಪಾ.ವೆಂ.ಅದರ ವಿದ್ವತ್ತಿನ ಹೇರಳ ಸುಳುಹು ಇಲ್ಲಿ ಗೋಚರಿಸುತ್ತದೆ. ಆಚಾರ್ಯರು ಇಲ್ಲಿ ಜನಪ್ರಿಯ ಶೈಲಿಯ ಪ್ರತಿಯೊಂದು ಪದದ ಕತೆಯನ್ನು ವಿವರಿಸುತ್ತಾರೆ. ಇಲ್ಲಿರುವ ಸ್ವಾರಸ್ಯವೇ ಅದು. ಸಾಮಾನ್ಯ ಭಾಷಾಪ್ರೇಮಿಗೂ ನುಡಿರಹಸ್ಯವನ್ನು ತಿಳಿಯಪಡಿಸುತ್ತಾ ಅವನಲ್ಲಿ ಭಾಷಾಶಕ್ತಿ ಹೆಚ್ಚುವಂತೆ ಮಾಡುವುದೇ **ಪದಾರ್ಥಚಿಂತಾಮಣಿ**ಯ ಉದ್ದೇಶ.

ಪದಾರ್ಥ ಚಿಂತಾಮಣಿಗೆ ಹೊರತಾಗಿ 'ಹೊಸಗನ್ನಡದ ಹಿರಿಯರು' ಕೃತಿಯಲ್ಲಿ ಭಾಷಾ ವಿಚಾರದ ಬಗ್ಗೆ, ಉಡುಪಿಯ ಪರಿಸರದಲ್ಲಿ ಕೃತಿಯಲ್ಲಿ ಹಲವಾರು ತುಳುಪದಗಳ ನಿರುಕ್ತಿಯನ್ನು ಉಲ್ಲೇಖಿಸಿದ್ದಾರೆ. 'ಕಾಮಾರ್ಥ ಕೋಶ' ಎಂಬ ಅಂಕಣವನ್ನು **ರತಿ ವಿಜ್ಞಾನ ಧರ್ಪಣ** ಪತ್ರಿಕೆಗೆ ಕೊಡುತ್ತಿದ್ದರು. ಇಲ್ಲಿ ಬಳಸಲಾದ ಪದಗಳು ಲೈಂಗಿಕ ಶಿಕ್ಷಣಕ್ಕೆ ಪೂರಕವಾಗುವ ಪಾರಿಭಾಷಿಕ ಪದಗಳು. ಆಚಾರ್ಯರೊಬ್ಬರೆ ಕನ್ನಡದಲ್ಲಿ ಈ ಪ್ರಯತ್ನವನ್ನು ಮಾಡಿರುವುದನ್ನು ಕಾಣುತ್ತೇವೆ.

ಕಸ್ತೂರಿಯಲ್ಲಿ ಓದುಗರಿಗೆ ಆಚಾರ್ಯರು ಮೊದಲು ಪರಿಚಯಿಸಿದ ಅಂಕಣ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' – ಇದು ಓದುಗರ ಶಬ್ದಶಕ್ತಿಯನ್ನು ಅಳೆದುಕೊಳ್ಳಲು ಇದೊಂದು ಉತ್ತಮ ಮಾರ್ಗದಂತಿತ್ತು. ಪತ್ರಕರ್ತರಾಗಿ, ಕವಿಯಾಗಿ, ಭಾಷಾ ಶಾಸ್ತ್ರಜ್ಞರಾಗಿ, ವಿಚಾರವಂತರಾಗಿ ಪಾ.ವೆಂ. ಕನ್ನಡಿಗರ ಜ್ಞಾನ ತೃಷೆಯನ್ನು ತಣಿಸಲು ಸುಮಾರು ೫೦ ವರ್ಷಗಳಿಂದ ನಿರತರಾದ ಕಸ್ತೂರಿಯ ಆಚಾರ್ಯ ಪುರುಷರಾಗಿದ್ದಾರೆ. ಬದುಕಿನ ಕೊನೆಯ ಕ್ಷಣದವರೆಗೂ ಹೊಸಹಾದಿಯನ್ನರಸುತ್ತಾ ನಡೆದವರು. ಹೊಸತನ್ನು ಹುಡುಕಿದರು. ಹೊಸತನ್ನು ಕೊಟ್ಟರು. ಯಾರು ಸಾಧಿಸದಿರುವುದನ್ನು ಸಾಧಿಸುವುದು ಅವರ ಅಭಿಜಾತ ಗುಣವಾಗಿತ್ತು.

'ಪದಾರ್ಥ ಚಿಂತಾಮಣಿಯೇ' ಇದಕ್ಕೊಂದು ನಿದರ್ಶನ. ತಲಸ್ಪರ್ಶಿಯಾದ ಚಿಂತನೆ, ಸೂಕ್ಷ್ಮಾತಿ ಸೂಕ್ಷ್ಮವನ್ನು ಗ್ರಹಿಸಬಲ್ಲ ಗರುಡದೃಷ್ಟಿ, ನಿಶಿತವಾದ ತಾರ್ಕಿಕ ಪ್ರಜ್ಞೆ ಮತ್ತು ನಿಸ್ಪೃಹ ನಿರೂಪಣೆ ಇವು ಪಾ.ವೆಂ. ಅವರ ವೈದುಷ್ಯದ ಮೂಲ ಸೆಲೆಗಳು. ಅವರ ಬರವಣಿಗೆ ಯುದ್ಧಕ್ಕೂ ಈ ವೈಶಿಷ್ಯವನ್ನು ನಾವಿಲ್ಲಿ ಗುರುತಿಸಬಹುದು. ಬರವಣಿಗೆಯೊಳಗೆ ಪಾ.ವೆಂ. ಅವರ ಬದುಕು ಅಂತರ್ಗತವಾಗಿದೆ. ಪಾ.ವೆಂ. ಅವರು ಕತೆಗಾರ, ಕವಿಯಾಗಿ ವೈವಿಧ್ಯಮಯ ಲೇಖನಗಳನ್ನು ಬರೆದಿರಬಹುದು. ಆದರೆ ಅವರ ಪಾಂಡಿತ್ಯ ಪೂರ್ಣ, ಘನವಾದ ಬರವಣಿಗೆ ಮೂಲ ಮಾಧ್ಯಮಕ್ಕೆ ಒಲಿದು ಬಂದುದು ವಿಡಂಬನೆ, ಹರಟೆ ಸಾಹಿತ್ಯದ ಮೂಲಕ **ಕಸ್ತೂರಿ**ಗಿಂತ ಮೊದಲು **ಕರ್ಮ**ವೀರದಲ್ಲಿ ಬರೆಯುತ್ತಿದ್ದರು. ಅವರ ವಿಶ್ಲೇಷಣೆ ಹಾಗೂ ವ್ಯಾಖ್ಯಾನಗಳು ಪೂರ್ಣಸ್ವರೂಪ ಪಡೆದದ್ದು ಕಸ್ತೂರಿಯಲ್ಲಿ ಪಾ.ವೆಂ. ಅವರನ್ನು ಯಾವುದೇ ನಿರ್ಧಿಷ್ಟ ಬರಹಗಾರರ ವರ್ಗಕ್ಕೆ ಸೇರಿಸಲು ಸಾದ್ಯವಿಲ್ಲ. ಸನ್ನಿವೇಶ ಸಂದರ್ಭಕ್ಕೆ ತಕ್ಕಂತೆ ಪಕ್ವಗೊಂಡ ಅವರ ಭಾಷೆ ಬರಹಗಾರರ ಯಾವ ವರ್ಗ ಸೇರಿಸಿದರೂ ಆ ವರ್ಗದ ಮಿತಿಯನ್ನು ಮೀರಿ ಪಾ.ವೆಂ. ನಿಲ್ಲುತ್ತಾರೆ.

ಪಾ.ವೆಂ. ಅವರ ಬರೆಹಗಳನ್ನು ಓದುವ ಅಧ್ಯಯನ ಮಾಡುವ ಅಂದರೆ ಸಂವಾದ ಮಾಡುವ ಅಗತ್ಯ ಒಂದು ಸಾಂಸ್ಕೃತಿಕ ಕ್ರಿಯೆ ಎಂದು ಮನಗೊಂಡಿದ್ದೇನೆ. ಅವರ ಬರೆಹಗಳನ್ನು ಓದುತ್ತಾ, ಅವರ ಜೀವನದ ವಿವರಗಳನ್ನು ಅವರನ್ನು ಬಲ್ಲವರಿಂದ ತಿಳಿಯುತ್ತ ಬಂದಂತೆ ನನಗೆ ಪಾ.ವೆಂ. ಬದುಕು-ಬರೆಹ ಎರಡನ್ನು ಸಮತೂಕದಿಂದ ನಿರ್ವಹಿಸಿದ ಒಬ್ಬ ಸಮಕಾಲೀನ ಪ್ರಜ್ಞೆಯ ವಿದ್ವಾಂಸ ಎಂಬ ತಿಳುವಳಿಕೆ ಬಲವಾಗುತ್ತಾ ಬಂತು. ಸಾಮಾನ್ಯವಾಗಿ ಲೇಖಕರು ಪತ್ರಿಕೋದ್ಯೋಗಿಗಳು ತಮ್ಮ ಕೆಲಸಗಳಲ್ಲಿ ಸಮಯ ಸಾಧಕತೆ ಅಥವಾ ಜನಪ್ರಿಯತೆಗಳಿಸಲು ಮಾತು ಕೃತಿಗಳಲ್ಲಿ ಹೊಂದಾಣಿಕೆಯನ್ನು ವಿರೋಧಾಬಾಸಗಳನ್ನು ಉಂಟುಮಾಡಿಕೊಳ್ಳುತ್ತಾರೆ. ಇತ್ತೀಚೆಗೆ ಪದವಿ ಪುರಸ್ಕಾರ ಪ್ರಶಸ್ತಿ ಮುಂತಾದವುಗಳನ್ನು ಪಡೆಯಲು ಅಥವಾ ಗಿಟ್ಟಿಸಲು ಲೇಖಕ ಪತ್ರಿಕೊದ್ಯೋಗಿ ಆದವರು ತಮ್ಮ ಬರೆಹ-ಬದುಕುಗಳಲ್ಲಿ ವಿರೋಧಬಾಸದ ರೀತಿನೀತಿಗಳನ್ನು ಅನಿವಾರ್ಯವೆಂಬಂತೆ ತೋರಿಸುತ್ತಾರೆ. ಇಂತಹ ಹಾದಿಯನ್ನು ಪಾ.ವೆಂ. ಅಪ್ಪಿತಪ್ಪಿಯು ಹಿಡಿದವರಲ್ಲ ಅವರಿಗೆ ಅಂತಹ ಯಾವುದೇ ಬಾಹ್ಯ ಮನ್ನಣೆ, ಹಣಗಳಿಕೆ ಅವಶ್ಯ ಅನ್ನಿಸಲೇ ಇಲ್ಲ. ತನಗೆ ವಂಚನೆಯಾಗಿದೆಯೆಂಬ ನೋವು ಇಲ್ಲ. ಅವರ ಈ ಸಹಜ ನಿಸ್ಪೃಹತೆ ಅವರ ಬರಹಕ್ಕೆ ಧೀಮಂತಿಕೆಯನ್ನು ತಂದುಕೊಟ್ಟಿದೆ 'ಬುದ್ಧಿ ಜೀವಿಗಳು ಯಾರು' ಎಂಬ ಅವರ ಪ್ರಬಂಧದಲ್ಲಿ ಒಂದು ರೀತಿಯ ಆತ್ಮಾವಲೋಕನವಿದೆ. ಪಾ.ವೆಂ. ಎಂದು ತಮ್ಮ ಸಾಧನೆಗಾಗಿ ಅಹಂಕಾರ ಪಡಲಿಲ್ಲ.

ಜ್ಞಾನ ಮತ್ತು ಮನರಂಜನೆಗಾಗಿ ತಮ್ಮದೇ ಆದ ನೀಲನಕ್ಷೆಯ ಕಕ್ಷೆಯನ್ನು **ಕಸ್ತೂರಿ**ಗೆ ತೊಡಿಸಿ ಅದನ್ನು ಪ್ರಾಜ್ಞಾ ಕನ್ನಡಿಗರ ಕೈಗೆ ನೀಡಿದರು. ಇದು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಯಶಸ್ವೀ ಪ್ರಯೋಗ. ಓರ್ವ ನುರಿತ ಪತ್ರಕೋದ್ಯಮಿ, ಸಮಾಜಕ್ಕೆ ಒಬ್ಬ ಆದರ್ಶ, ಸಮರ್ಥ ಶಿಕ್ಷಕನಾಗಿ ನಿಲ್ಲಬಲ್ಲ ಎಂಬುದಕ್ಕೆ ಪಾ.ವೆಂ. ಆಚಾರ್ಯರೇ ನಿದರ್ಶನ.

ಫಲಿತಗಳು:

ಪಾಡಿಗಾರು ವೆಂಕಟರಮಣ ಆಚಾರ್ಯರು. ೧೯೧೫ರಲ್ಲಿ ಫೆಬ್ರವರಿ ೨ರಂದು ಉಡುಪಿಯ ಕುಂಜಿಬೆಟ್ಟುವಿನಲ್ಲಿ ಜನಸಿದರು. ಸಾಂಪ್ರದಾಯಿಕ ವಿದ್ಯಾಭ್ಯಾಸದಿಂದ ದೂರ ಉಳಿದವರು. ಜಾತಿಯಿಂದ ಬರಬಹುದಾದ ಆಚಾರ್ಯವೃತ್ತಿ ಮತ್ತು ಅದನ್ನು ವಿಸ್ತರಿಸುವ ಸಂಸ್ಕೃತ ವಿದ್ಯಾಭ್ಯಾಸವನ್ನು ಕೈಗೊಳ್ಳಲಿಲ್ಲ.

ಮೆಟ್ರಿಕ್‌ವರೆಗೆ ಇಂಗ್ಲೀಷ್ ಶಿಕ್ಷಣ ಕಲಿತ ಪಾ.ವೆಂ. ಇಂಗ್ಲೀಷ್ ಭಾಷೆಯನ್ನು ಕಾವ್ಯ ಮತ್ತು ಸಾಹಿತ್ಯ ಭಾಷೆಯೊಂದಿಗೆ ಅಭ್ಯಾಸ ಮಾಡಿದರು. 'ವಿಶ್ವಜ್ಞಾನಕ್ಕೆ ತೆರೆದ ಕಿಟಕಿ'ಯಂತಿದ್ದ ಇಂಗ್ಲೀಷ್‌ನ್ನು ತನ್ನ ಜ್ಞಾನದೊಡನೆ ರೂಪಿಸಿಕೊಂಡರು. ಲೌಕಿಕಜ್ಞಾನ ಮತ್ತು ಸಾಹಿತ್ಯಾನುಭವದ ನೆಲೆಯಿಂದ ಸಂಸ್ಕೃತಗಳಲ್ಲಿಯ ವೈಚಾರಿಕ ಅಂಶವನ್ನು ಓದಿಕೊಂಡರು. ಜೊತೆಗೆ ಆಸಕ್ತಿಯಿಂದ ಬಂಗಾಳಿ, ಮರಾಠಿ, ತಮಿಳು, ತೆಲುಗು,

ಮಲಿಯಾಳಿ ಎಲ್ಲ ಭಾಷೆಗಳ ಪಾಂಡಿತ್ಯವನ್ನು ಅರಗಿಸಿಕೊಂಡರು. ಇದರಿಂದ ತರ್ಕಮಾಡುವ ಮನೋಬಲ, ಊಹೆ, ಕಲ್ಪನೆ, ಇತಿಹಾಸವನ್ನು ಗ್ರಹಿಸುವ ತಿಳುವಳಿಕೆ ಅವರಲ್ಲಿ ಗಟ್ಟಿಯಾಗಿತ್ತು. ಜ್ಞಾನದ ಶಕ್ತಿ ಮತ್ತು ಯುಕ್ತಿಗಳನ್ನು ಅಭಿವ್ಯಕ್ತಿಗೊಳಿಸುವಂತ ಯುಕ್ತಿ ರೀತಿ ಪಾ.ವೆಂ. ಅವರಿಗೆ ಕೈವಶವಾಗಿತ್ತು. ಕನ್ನಡಿಗರಿಗಾಗಿ ಕಸ್ತೂರಿಯ ಮೂಲಕ ಪಾ.ವೆಂ. ನೀಡಿದ ಕೊಡುಗೆ ಇದು.

ಉಡುಪಿಯಲ್ಲಿ ಜೀವನ ಪ್ರಾರಂಭದಲ್ಲಿ ಕಡುಬಡತನದ ಬದುಕು ಈ ಬದುಕಿನಲ್ಲಿ ಆಚಾರ್ಯರು ಸದಾ ಇದ್ದುದರ ಜೊತೆಗೆ ಇಲ್ಲದುದರೆಡೆಗೆ ತುಡಿಯುವ ಸ್ವಭಾವ ಮನುಷ್ಯ ಪ್ರಯತ್ನಕ್ಕೆ ಯಾವುದೂ ಸಾಧ್ಯ ಎಂಬ ಸಿದ್ಧಾಂತ ಅವರದು. ಬಡತನ ಸ್ವಾವಲಂಬಿಯಾಗಲು ಕಲಿಸಿದರೆ ಸ್ವಾವಲಂಬನೆ ಅವರಲ್ಲಿ ಅದಮ್ಯ ಚೈತನ್ಯವನ್ನು ತುಂಬಿತು.

ಮೆಟ್ರಿಕ್ ಮುಗಿದ ಮೇಲೆ ಮಾಸ್ತರಿಕೆ, ಹೋಟೆಲಿನ ಲೆಕ್ಕ ಪತ್ರಿಕೆ, ಕಾರಕೂನ, ಮುದ್ರಣಾಲಯದ ವ್ಯವಸ್ಥಾಪಕರಾಗಿ ಉದರಂಭರಣ ದಾರಿಯನ್ನು ಕಂಡುಕೊಂಡರೂ ಬೌದ್ಧಿಕಹಸಿಯನ್ನು ನೀಗಿಕೊಳ್ಳಲು ತಮ್ಮದೇ ಆದ ರೀತಿಯೊಂದನ್ನು ಬೆಳೆಸಿಕೊಂಡು ಮೈಯೆಲ್ಲಾ ಕಿವಿಯಾಗಿ ಕಣ್ಣಾಗಿ ಜ್ಞಾನದ ಅನ್ವೇಷಣೆ ನಡೆಸಿದರು ತಮ್ಮ ಜೀವನದ ಕೊನೆಯವರೆಗೂ ಈ ಅನ್ವೇಷಣೆಯನ್ನು ಮುನ್ನಡೆಸಿದರು ಆಧುನಿಕ ಶಿಕ್ಷಣದತ್ತ ಮುಖ ಮಾಡಿ ನಿಂತರು. ಈ ಶಿಕ್ಷಣ ಫಲವನ್ನು ಓದುಗ ವರ್ಗಕ್ಕೂ ಉಣಬಡಿಸಿದರು.

ಪಾಡಿಗಾರು ವೆಂಕಟರಮಣ ಆಚಾರ್ಯರು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಮತ್ತು ಪತ್ರಿಕಾವ್ಯವಸಾಯ ಭೂಮಿಯಲ್ಲಿ ಎದ್ದು ಕಾಣುವ ಹೆಸರು, ಕವಿಯಾಗಿ ಅವರು ನವೋದಯ ಸಂಪ್ರದಾಯ, ನವ್ಯ ಸಂಪ್ರದಾಯ ಎರಡರಲ್ಲಿ ತಮ್ಮನ್ನು ಗುರುತಿಸಿಕೊಂಡವರು. ಇದರ ಫಲವೇ **ನವನೀರದ** (೧೯೫೨)ರಲ್ಲಿ ಕವನ ಸಂಕಲನ ಬಿಡುಗಡೆಗೊಂಡಿತು. ಇದಕ್ಕೆ ಮುಂಬಾಯಿ ರಾಜ್ಯ ಸಾಹಿತ್ಯ ಆಕ್ಯಾಡಮಿ ಪುರಸ್ಕಾರವು ಬಂದಿದೆ. ೧೯೭೫ರಲ್ಲಿ ಕೆಲವು ಪದ್ಯಗಳು ಎರಡನೇ ಸಂಕಲನ ಬಂದಿತು. **ಬಯ್ಯಮಲ್ಲಿಗೆ** ೧೯೮೧ರಲ್ಲಿ ಪ್ರಕಟವಾಗಿದೆ. ಪಾ.ವೆಂ. ಅವರ ಆಡುಭಾಷೆ ತುಳುವಿನ ವಿಚಾರಪ್ರಧಾನ ಮತ್ತು ಹೃದ್ಯಭಾವಜೀವನದ ಪ್ರತಿಕ್ರಿಯೆಗಳಾಗಿ ಈ ಪದ್ಯಗಳಿವೆ. ಆಡುಮಾತನ್ನು ಬಳಸುವ ಸುಂದರ, ಸಹಜ ದೇಸಿ ಪ್ರಯೋಗವಾಗಿದೆ. ಇದು ತುಳು ಸಾಹಿತ್ಯಕ್ಕೆ ನೀಡಿದ ಕೊಡುಗೆಯೂ ಹೌದು.

ಮರಣೋತ್ತರವಾಗಿ ಪ್ರಕಟವಾದ **ಹೌಸಿಂಗ್ ಕಾಲೋನಿ** (೨೦೦೪) ಸಮಸ್ತ ಪದ್ಯಗಳು ಈ ಸಂಗ್ರಹದಲ್ಲಿದೆ. ಇದು ಪದ್ಯಗಾರಿಕೆಯ ವಿಶೇಷತೆಯನ್ನು ವ್ಯಕ್ತಿತ್ವದೊಂದಿಗೆ ತಳುಕು ಹಾಕಿದ ರೀತಿ ಇಲ್ಲಿದೆ. ಪಾ.ವೆಂ. ಅಂತರಂಗದಲ್ಲಿ ಓರ್ವ ಕವಿಯಾಗಿದ್ದರು. ಆದರೆ ಬದುಕಿಗೋಸ್ಕರ ಪತ್ರಿಕೋದ್ಯಮಿ ಮಾರ್ಗವನ್ನು ಅನುಸರಿಸಿದವರು.

೧೯೪೨ರಲ್ಲಿ ಪಾ.ವೆಂ. ಆಚಾರ್ಯರು **ಸಂಯುಕ್ತ ಕರ್ನಾಟಕ** ಪ್ರಪಂಚವನ್ನು ಪ್ರವೇಶಿಸಿದ್ದು ಮುದ್ರಣಾಲಯದ ಮ್ಯಾನೇಜರ್ ಹುದ್ದೆಗೆ. ಅವರೊಳಗಿದ್ದ ಕವಿ-ಲೇಖಕ ಕರ್ಮವೀರಕ್ಕಾಗಿ ಬರೆಯುವಂತೆ ಮಾಡಿತು. ಪುಸ್ತಕ ಅವಲೋಕನ, ಹರಟೆ ಮತ್ತು

ಸಂದರ್ಭೋಚಿತ ಲೇಖನಗಳ ಬರವಣಿಗೆಯಿಂದ 'ಓದುಗರೊಡನೆ ಹರಟೆ' ಎನ್ನುವ ಅಂಕಣದಿಂದ 'ಲಾಂಗೂಲಾಚಾರ್ಯ' ಎನ್ನುವ ಹೆಸರಿನಿಂದ ಖ್ಯಾತರಾದರು ಜೊತೆಗೆ ಕನ್ನಡ ನಾಡಿನಲ್ಲಿ ಜನಪ್ರಿಯರಾದರು.

ಪಾ.ವೆಂ. ಅವರು 'ಕರ್ಮವೀರ'ದಲ್ಲಿ ತಮ್ಮ ಲಾಂಗೂಲ ಚಾಲನೆ ಮಾಡಿದರು. ಈ ಲಾಂಗೂಲದ ಸೆಳೆತಕ್ಕೆ ರಾಜಕಾರಣಿಗಳು, ಮಂತ್ರಿಗಳು, ಪೀಠಾದಿಪತಿಗಳು, ಅಧಿಕಾರಿಗಳು ಭ್ರಷ್ಟರು ಎಲ್ಲರೂ ಸಿಕ್ಕಿಬಿದ್ದರು. ಇವರ ಲಾಂಗೂಲ್ಯದ ಹರಿತ ವಿಡಂಬನೆ, ಹಾಸ್ಯ, ಕಟಕಿಗಳು ಕರ್ನಾಟಕದ ಸಾಹಿತ್ಯ ಪ್ರಕಾರದಲ್ಲಿ ನವಯುಗವನ್ನು ಉಂಟುಮಾಡಿತು. ಕರ್ಮವೀರವು ಬೆಳೆಯಿತು. ಪಾ.ವೆಂ. ಅವರ ಹಾಸ್ಯ ಪ್ರಬಂದದಲ್ಲಿ ಮನುಷ್ಯನ ವಿಕ್ಷಿಪ್ತಗುಣವನ್ನು ಲೇವಡಿ ಮಾಡಿ ಅದನ್ನು ಸರಿಪಡಿಸುವ ಮನೋಧರ್ಮವಿದೆ. ಪಾ.ವೆಂ. ಅವರಿಗೆ ಇತರ ಲಘು ಪ್ರಬಂಧ ಬರೆದವರಿಗೂ ಇರುವ ವ್ಯತ್ಯಾಸವೇ ಇದು. ಪಾ.ವೆಂ. ಅವರ ಲಘು ಪ್ರಬಂಧಗಳು ಉದ್ದೇಶ ವಿನೋದದಲ್ಲಿ ಕೊನೆಯಾದರೂ ಜೊತೆಗೆ ಮನುಷ್ಯನನ್ನು ತಿದ್ದುವ ಹೆಚ್ಚು ಉತ್ತಮನನ್ನಾಗಿ ಮಾಡುವ ಉದ್ದೇಶವಿದೆ. ಇದರಿಂದಲೇ ಪಾ.ವೆಂ. ಅವರಿಗೆ ಹರಟೆ ಪ್ರಬಂಧ ಸಾಹಿತ್ಯ ಪ್ರಕಾರಕ್ಕೆ ಹೊಸ ತೇಜಸ್ಸನ್ನು ತಂದುಕೊಡುವುದು ಸಾಧ್ಯವಾಗಿದೆ. ಪಾ.ವೆಂ. ಅವರು ಬರೆದ ಸಾವಿರಕ್ಕೂ ಹೆಚ್ಚು ಹರಟೆಗಳು ಒಂದೆಡೆ ಸಂಗ್ರಹವಾಗಿಲ್ಲ. ಇದು ಒಂದೆಡೆ ಸಂಗ್ರಹಿಸಿ ಪ್ರಕಟಿಸಿದರೆ ಆಧುನಿಕ ಪ್ರಬಂಧ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ಸಲ್ಲಿಸಿದಂತಾಗುತ್ತದೆ. ಸಂಶೋಧನಕಾರರಿಗೂ ಹೆಚ್ಚು ಅನುಕೂಲ ಸಿಗಬಹುದು.

ಪಾ.ವೆಂ. ಅವರ ಗದ್ಯ ಸಾಹಿತ್ಯದ ಇನ್ನೊಂದು ಮಗ್ಗಲು ಗಂಭೀರ ಚಿಂತನ ಮತ್ತು ಅಧ್ಯಯನಶೀಲ ಬರಹಗಳು. ಪತ್ರಕರ್ತರಾದ್ದರಿಂದ ಕಸ್ತೂರಿಗಾಗಿ ಆಗಾಗ ಬಿಡಿ ಬಿಡಿಯಾದ ಗಂಭೀರ ಲೇಖನಗಳನ್ನು ಬರೆದಿದ್ದಾರೆ. ಪಾ.ವೆಂ. ಅವರಲ್ಲಿಯ ಚಿಂತನ ಶೀಲ ಪ್ರತಿಭೆಯಿಂದ ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ವಿಚಾರವಂತಿಕೆಯಿಂದ, ತರ್ಕಬದ್ಧವಾಗಿ ವಿಶ್ಲೇಷಿಸುವ ಮಂಡನೆ ಮಾಡುವ ಕಲೆ ಅವರಲ್ಲಿ ಜನ್ಮಜಾತವಾಗಿತ್ತು.

ಚಿಂತನ ಪರ ಅಧ್ಯಾಯಗಳಲ್ಲಿ ಸಮಕಾಲೀನ ವೃತ್ತಿಜೀವನಗಳು ಸಾಮಾಜಿಕ ಜೀವನ, ಸಂಸ್ಕೃತಿ, ಧರ್ಮ, ಸಾಹಿತ್ಯ, ಶಿಕ್ಷಣ ಜೀವನವನ್ನು ಸ್ಪಷ್ಟೀಕರಿಸಲು ಪಾ.ವೆಂ. ಮಂಡಿಸುವ ಪ್ರಮೇಯಗಳು, ಚರ್ಚೆಗೆ ಇಡುವ ವಾದಗಳು ಮನೋಜ್ಞವಾಗಿ ಇಲ್ಲಿ ಹರಿದುಬಂದಿದೆ. ಇದನ್ನು ಪಾ.ವೆಂ. ತನ್ನ ಸೃಜನಶೀಲ ಬರವಣಿಗೆಯ ಮೂಲಕ ಸಾಭೀತು ಪಡಿಸಿದ್ದಾರೆ.

ರಷ್ಯಾದ ರಾಜ್ಯಕ್ರಾಂತಿ, ಸ್ವತಂತ್ರಭಾರತ ಕೃತಿಗಳು ಇತರ ಬಿಡಿ ಬಿಡಿಯಾದ ರಾಜಕೀಯ ಲೇಖನಗಳು ರಾಜ್ಯ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಗತಿ-ಸ್ಥಿತಿಗಳ-ಪರಿಸ್ಥಿತಿಗಳ ಐತಿಹಾಸಿಕ ನೆಲೆಯಿಂದ ಅಧ್ಯಯನ ಮಾಡಿದ ಕೃತಿಗಳು. ಇವು ಬಿಡಿಯಾಗಿಯೇ ಉಳಿದಿದೆ. ಇವು ಯಾವುದು ಕೃತಿರೂಪದಲ್ಲಿ ಪ್ರಕಟಗೊಂಡಿಲ್ಲ. ಈ ಎಲ್ಲ ಲೇಖನಗಳು

ಇಡಿಯಾಗಿ ಸಂಗ್ರಹವಾಗಿ ಕೃತಿರೂಪದಲ್ಲಿ ಪ್ರಕಟಗೊಂಡರೆ ಹೆಚ್ಚಿನ ಓದಿಗೆ ಅನುಕೂಲವಾಗಬಹುದು.

ಡಾ.ಶಂ.ಬಾ. ಪಾ.ವೆಂ. ಕಂಡಂತೆ (೧೯೮೫) ಕಾರಂತರ ಸಾಹಿತ್ಯ ದರ್ಶನ (೧೯೮೦) ಅಡಿಗರ ಮಾನವ ಕಾಳಜಿ (೧೯೭೬) ಆತ್ಮತೇಜಸ್ಸಿನ ಮಾರ್ಗಗಳು (ಅಲೆಕ್ಸಿಸ್ ಕೆರಲ್ ೧೯೬೮) ಇವು ಅವರ ಪ್ರಭುತ್ವ ವಿಮರ್ಶಾ ಕೃತಿಗಳು.

ಆಧುನಿಕ ಜೀವನದ ಮೌಲ್ಯಗಳಾದ ಸ್ವಾತಂತ್ರ್ಯ, ಪ್ರಜಾತಂತ್ರವಾದ ಜಾತ್ಯತೀತ ಗುಣಗಳನ್ನು ಸ್ವಯಂ ಪ್ರೇರಣೆಯಿಂದ ಅಳವಡಿಸಿಕೊಂಡ ವ್ಯಕ್ತಿತ್ವ ಪಾ.ವೆಂ. ಅವರದು. ಇದನ್ನು ಬರಹದ ಮೂಲಕ ರೂಪಿಸಿದ್ದಾರೆ. ಇದರ ಫಲವಾಗಿಯೇ ಧರ್ಮ, ಸಾಹಿತ್ಯ, ಸಂಸ್ಕೃತಿ, ರಾಜಕೀಯ, ವೈಜ್ಞಾನಿಕ ಬರಹಗಳು ಸೃಷ್ಟಿಯಾದವು. ಉಳಿದ ಲೇಖಕರಿಗೂ ವಿಷಯವನ್ನು ಕೊಟ್ಟು ಬರೆಯುವಂತೆ ಪ್ರಚೋದಿಸಿದರು.

ಆಧುನಿಕ ಗದ್ಯ ಸಾಹಿತ್ಯವು ಮೂಲವಾಗಿ ಹುಟ್ಟಿದ್ದು ಪತ್ರಿಕಾ ಸಾಹಿತ್ಯದ ಮೂಲಕ ಅದು ಉಡುಪಿ, ಮಂಗಳೂರು ಭಾಗಗಳಲ್ಲಿ ಮುದ್ರಣಾಲಯದ ಪ್ರಗತಿಯಿಂದ ಪತ್ರಿಕಾ ರಚನೆಯೊಂದಿಗೆ ತಮ್ಮನ್ನು ಲೇಖಕರನ್ನಾಗಿ ಬೆಳೆಸಿಕೊಂಡ ಪಾ.ವೆಂ. ಓದುಗರ ಲೋಕಜ್ಞಾನ, ವಿಮರ್ಶಾಪ್ರವೃತ್ತಿ ಸಾಂಸ್ಕೃತಿಕ ಪ್ರಜ್ಞೆಗಳು ವಿಕಸಿಸುವ ರೀತಿಯಲ್ಲಿ ನಿತ್ಯವು ಬರೆದು ಪ್ರಕಟಿಸಿದ್ದಾರೆ. ಈ ರೀತಿಯ ಪ್ರಕಟಗಳೆಲ್ಲವೂ ಕೃತಿರೂಪದಲ್ಲಿ ಬರಲು ಸಾಧ್ಯವಾಗಿಲ್ಲ ಇವೆಲ್ಲವನ್ನು ಪರಿಷ್ಕರಿಸಿ ಕೃತಿರೂಪದಲ್ಲಿ ಪ್ರಕಟಿಸಿದರೆ ಈ ವಿಷಯದ ಮೇಲೆ ಹೆಚ್ಚಿನ ಸಂಶೋಧಕರಿಗೆ ಅವಕಾಶವಿದೆ.

ಪಾಂಡಿತ್ಯವನ್ನು ಸುಲಭ ಸರಳ ಶೈಲಿಯಲ್ಲೂ ಪಾ.ವೆಂ. ಮೇಳೈಸಿರುವುದು **ಪದಾರ್ಥಚಿಂತಾಮಣಿ** ಎಂಬ ಕೃತಿಯಲ್ಲಿ. ಒಂದು ಪದದ ಇತಿಹಾಸದ ಮೂಲಕ ಇಡೀ ಸಂಸ್ಕೃತಿಯ ಇತಿಹಾಸವನ್ನೇ ಪಾ.ವೆಂ. ಸೃಷ್ಟಿಸುತ್ತಾರೆ. ಸಾಮಾನ್ಯ ಶಬ್ದಗಳು ನಮ್ಮ ಇತಿಹಾಸದ ಬಗ್ಗೆ ಸಂಸ್ಕೃತಿಯ ಬಗ್ಗೆ ಆಶ್ಚರ್ಯವೆನಿಸುವ ತತ್ವಗಳನ್ನು ತೆರೆದಿಡುತ್ತದೆ ಎನ್ನುವ ನಂಬಿಕೆ ಈ ಕೃತಿಯ ಒಳಗೆ ಕೆಲಸಮಾಡಿದೆ. ಇದು ಕೇವಲ ೮೦೦ ಪದಗಳ ನಿಷ್ಪತ್ತಿ, ಇತಿಹಾಸಕ್ಕೆ ಮೀಸಲಿಡದೆ ಇನ್ನೂ ಇದೇ ರೀತಿಯ ಪದಗಳ ಚಿಂತನೆ ಮಾಡಲು ಸಾಧ್ಯವಿದೆ ಮತ್ತು ಸಂಸ್ಕೃತ ಇಂಗ್ಲೀಷನಲ್ಲಿ ಮಾತ್ರ ಪದಪರಂಪರೆ ಸಾಧ್ಯವಾಗಿದೆ. ಈಗ ಕನ್ನಡದಲ್ಲೂ ಪದಪರಂಪರೆ ಬೆಳೆಯಲು ಸಾಧ್ಯವಿದೆ ಎನ್ನುವುದಕ್ಕೆ **ಪದಾರ್ಥಚಿಂತಾಮಣಿ** ಮುನ್ನುಡಿಯಾಗಿದೆ.

ಹದಿನೆಂಟು ವರ್ಷಗಳ ಇನ್ನೂರ ಇಪ್ಪತ್ತು ಸಂಚಿಕೆಗಳಲ್ಲಿ ಪಾ.ವೆಂ. ಅವರ ಸಂಪಾದನ ಕಲೆ, ಸಂಪಾದಕ ಕಚೇರಿಯ ಸಮರ್ಥ ನಿರ್ವಹಣೆ ಪ್ರಸಾರದ ಸತತ ಪ್ರಗತಿಗಾಗಿ ಅನುಸರಿಸಿದ ಪ್ರಯೋಗಶೀಲತೆ ಮತ್ತು ವಿವಿಧ ಹೆಸರುಗಳಿಂದ ತಾವೇ ಲೇಖನವನ್ನು ಬರೆದು ಕಸ್ತೂರಿಯನ್ನು ಸುಂದರವಾಗಿ ರೂಪಿಸುವ ಸಾಧನೆ ಪತ್ರಿಕಾ ವ್ಯವಸಾಯದಲ್ಲಿ ಅಪೂರ್ವವಾದದು.

ಬೇರೆ ಬೇರೆ ಭಾಷೆಗಳಿಂದ ಪತ್ರಿಕಾಲೇಖನಗಳ ಅನುವಾದ ಮತ್ತು ಸಂಕ್ಷಿಪ್ತ ಭಾಗಗಳ ಪ್ರಕಟಣೆ ಇದು ಡೈಜಸ್ಟ್‌ನ ಮುಖ್ಯ ಲಕ್ಷಣ. ಈ ಓದಿದ ಎಲ್ಲ ಜ್ಞಾನವನ್ನು ಕಸ್ತೂರಿಯಲ್ಲಿ ನಿರೂಪಿಸಿದರು. ಕಸ್ತೂರಿಗಾಗಿ ಒಂದು ಲೇಖಕರ ಪಡೆಯನ್ನೇ ಪಾ.ವೆಂ. ಸಿದ್ಧ ಪಡಿಸಿದರು. ವಿವಿಧ ಜ್ಞಾನ ಕ್ಷೇತ್ರಗಳಿಂದ ಮಾಹಿತಿಯನ್ನು ಆಯ್ದು ಅಚ್ಚಕನ್ನಡದಲ್ಲಿ ಸ್ವಚ್ಛವಾಗಿ ಬರೆಯಿಸಿ, ಬರೆದು ಓದುಗ ವರ್ಗಕ್ಕೆ ಜ್ಞಾನ ಆಹಾರ ನೀಡಿದರು.

ಓದುಗರ ಭಾಷಾಭಿವೃದ್ಧಿ ಮತ್ತು ಸಾಮಾನ್ಯ ಜ್ಞಾನ ವೃದ್ಧಿಗಾಗಿ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಮತ್ತು 'ಪದಾರ್ಥ ಚಿಂತಾಮಣಿಯಂಥ' ಅಂಕಣಗಳ ರಚನೆಗೆ ಇಂಗ್ಲೀಷ್‌ನ Readers Digestನ Improve your world power ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಆಚಾರ್ಯರು **ಕಸ್ತೂರಿ**ಯನ್ನು ಹೊಳಹನ್ನು ಹಾಕಿದರು.

ಕಸ್ತೂರಿಸಂಚಿಕೆಯು ಅನುಕರಣ ಅಥವಾ ನಕಲು ಎನಿಸಿದಂತೆ ರೂಪಿಸಿರುವುದು ಪಾ.ವೆಂ. ಅವರ ಶ್ರಮ, ಸಾಧನೆಯ ಹೆಗ್ಗಳಿಕೆ. ಕಸ್ತೂರಿಯು ಕನ್ನಡದ ವಾಸನೆ, ಕನ್ನಡಿಗರ ಉಸಿರು, ಕರ್ನಾಟಕದ ಮಣ್ಣಿನಲ್ಲಿ ಬೆಳೆದ ಪದಾರ್ಥವೆಂಬುದನ್ನು ಆಚಾರ್ಯರು ಪ್ರಜ್ಞಾವಂತ ಓದುಗರ ಅನುಭವಕ್ಕೆ ನೀಡಿದ್ದಾರೆ.

ಒಟ್ಟಿನಲ್ಲಿ ಪಾ.ವೆಂ. ಜೀವನ ವಿವರಗಳ ಹಾಗೂ ಕೃತಿವಿವರಗಳ ಬಿಡಿ ಬಿಡಿ ಭಾಗಗಳನ್ನು ಇಡಿಗೊಳಿಸಿ ನೀಡಿದ ಸಮಗ್ರ ಚಿತ್ರಣವಿದು. ಕಸ್ತೂರಿ, ಕರ್ಮವೀರ ಪತ್ರಿಕೆಗಳಲ್ಲಿ ಪ್ರಕಟಗೊಂಡ ಬಿಡಿ ಲೇಖನಗಳು, ಅವರನ್ನು ಕುರಿತು ಬಂದ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು, ಸ್ನೇಹಿತ ಬಳಗದವರೊಡನೆ ಒಡನಾಡಿದ ಪತ್ರಗಳು, ಪಾ.ವೆಂ. ಅವರು ಲೇಖನದ ಆದಾರಕ್ಕಾಗಿ ಹೆಚ್ಚಿನ ಓದು ಮತ್ತು ಅಧ್ಯಯನಕ್ಕಾಗಿ ಉಪಯೋಗಿಸಿದ ಇತರ ಭಾಷೆಯ ಪತ್ರಿಕೆಗಳು, ಪುಸ್ತಕಗಳನ್ನು ಸಂಗ್ರಹಿಸಿದ್ದೇನೆ. ಇವೆಲ್ಲವೂಗಳನ್ನು ಒಂದೆಡೆ ಸಂಗ್ರಹಿಸಿ ಸಂಶೋಧಕರಿಗೆ ಪ್ರಾಜ್ಞ ಓದುಗರಿಗೆ ಅದರ ಮಹತ್ವ ಅಗತ್ಯಗಳ ಅವಕಾಶಗಳನ್ನು ಒದಗಿಸಬೇಕು.

ಪಾ.ವೆಂ. ಅವರು ೧೮ ವರ್ಷಗಳ ಕಾಲ ಕಸ್ತೂರಿಯ ಸಂಪಾದಕರಾಗಿ ಪ್ರಕಟಿಸಿದ ಸಂಚಿಕೆಗಳು ನಾಶವಾಗದಂತೆ ಕಾಯ್ದಿರಿಸಬೇಕು. ಪಾ.ವೆಂ. ವಿಶ್ವಸ್ಥ ಸಮಿತಿ ಪಾ.ವೆಂ. ಅವರ ಹೆಸರಿನಲ್ಲಿ ೨೦೦೩ರಲ್ಲಿ ಸ್ಥಾಪಿತವಾಗಿದ್ದು, ಕೆಲವು ಪಾ.ವೆಂ. ಅವರ ಕೃತಿಗಳನ್ನು ಬಿಡುಗಡೆಮಾಡಿದ್ದು, ಆದರೆ ಮುಂದೆ ಕ್ರಿಯಾಶೀಲವಾಗಿ ಕಾರ್ಯಮುಂದುವರಿಸಿಲ್ಲ ಇದು ಆಗಬೇಕಾಗಿದೆ.

ಪಾ.ವೆಂ. ಅವರಲ್ಲಿ ಇದ್ದ ಪತ್ರಿಕೆಗೆ ಬೇಕಾದ ಸಂಪನ್ಮೂಲ ವ್ಯಕ್ತಿತ್ವ ಇಂದಿನ ಎಲ್ಲ ಪತ್ರಿಕೋದ್ಯೋಗಿಗಳಿಗೂ ಹಾಗೂ ಆಸಕ್ತ ಓದುಗರಿಗೂ ಅದು ಪಾಠದಂತೆ ಲಭ್ಯವಾಗಬೇಕು. ಪಾ.ವೆಂ. ಅವರು ಮಹತ್ವದ ಲೇಖಕರೆಂದು ವಿಮರ್ಶಕರು ಓದುಗವೃಂದ ಗುರುತಿಸಿದ್ದರೂ ಅವರ ಬದುಕು ಬರಹಗಳ ಬಗ್ಗೆ ಪೂರ್ಣ ಪ್ರಮಾಣದ ಅಧ್ಯಯನ ಈವರೆಗೆ ನಡೆದಿಲ್ಲ. ಆ ಕೊರತೆಯನ್ನು ನಿವಾರಿಸಲು ಶ್ರಮಿಸಿದ ಒಂದು ನಮ್ರ ಪ್ರಯತ್ನ ನನ್ನದಾಗಿದೆ. ಇನ್ನೂ ಅನೇಕ ಮುಖಗಳಿಂದ ಈ ಲೇಖಕರ ಬರಹದ ಬಗ್ಗೆ ಹೆಚ್ಚಿನ ಓದು ಸಾಧ್ಯವಿದೆ.

ಅನುಬಂಧ

೧. ಪಾ. ವೆಂ. ಆಚಾರ್ಯ ವಂಶಬಂಧ

ಉಡುಪಿ ನಾರಾಯಣ ಆಚಾರ್ಯ (ಕೋಲ್ಯದಿಂದ ಬಂದವರು)

- ಶ್ರೀ ಮಧ್ವರಾಯ ಆಚಾರ್ಯ/ಶ್ರೀದೇವಿ ಆಚಾರ್ಯ
  - ಶ್ರೀ ರಾಘವೇಂದ್ರ ಆಚಾರ್ಯ / ಸೌ ಭಾಗೀರಥಿ
    - ಶ್ರೀ ವೆಂಕಟರಮಣ ಆಚಾರ್ಯ/ಸ ೩೧೩ ಗಂಗಮ್ಮ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು
      - ಮೂವರು ಗಂಡು ಮಕ್ಕು, ಮೂವರು ಹೆಣ್ಣು ಮಕ್ಕಳು
- ಶ್ರೀ ರಾಜ ಆಚಾರ್ಯ (ಪುತ್ತೂರು)
  - ಶ್ರೀ ಲಕ್ಷ್ಮೀನಾರಾಯಣ ಆಚಾರ್ಯ / ಸೌ. ಸೀತಮ್ಮ
    1. ವೆಂಕಟ ಲಕ್ಷ್ಮಮ್ಮ– ರಾಮಕೃಷ್ಣ ಉಪಾಧ್ಯಾಯ
    2. ಸತ್ಯಭಾಮ –ಆನಂದ ಆಚಾರ್ಯ
    3. ನೇತ್ರಾವತಿ – ನಾರಾಯಣ ಆಚಾರ್ಯ
    4. ಲಕ್ಷ್ಮೀ–ವಾಸುದೇವ ಕುಂಡಂತಾಯ
    5. **ವೆಂಕಟರಮಣ ಆಚಾರ್ಯ – ಲಕ್ಷ್ಮೀ** (ಮದುವೆ– ೧೯೩೩)
       - ಶ್ರೀ ಮುರಳೀಧರ / ಸೌ ಶೋಭಾ → ಮೂವರು ಗಂಡುಮಕ್ಕಳು
       - ಶ್ರೀ ರಾಧಾಕೃಷ್ಣ / ಸೌ ಸತ್ಯವತಿ → ಮೂವರು ಹೆಣ್ಣುಮಕು ಒಬ್ಬ ಗಂಡುಮಗ
       - ಶ್ರೀ ಸೌ. ಸುಕನ್ಯ / ಶ್ರೀ ಕೃಷ್ಣಮೂರ್ತಿ → ಈರ್ವರು ಹೆಣ್ಣುಮಕ್ಕಳು
       - ಶ್ರೀ ರಾಘವೇಂದ್ರ / ಸೌ.ಉಷಾ → ಈರ್ವರು ಹೆಣ್ಣುಮಕ್ಕಳು
       - ಶ್ರೀ ರಮಾನಂದ / ಸೌ.ವಿಜಯಾ → ಈರ್ವರು ಹೆಣ್ಣು ಮಗಳು ಒಬ್ಬ ಗಂಡು
       - ಸೌ. ಅನುಸೂಯಾ / ಶ್ರೀ ಗುರರಾಜ → ಒಂದು ಹೆಣ್ಣು ಈರ್ವ ಗಂಡು
       - ಸೌ. ಅಹಲ್ಯಾ / ಶ್ರೀ ಕೃಷ್ಣಕುಮಾರ್ → --
       - ಡಾ. ಶ್ರೀನಿವಾಸ / ಸೌ. ಉಮಾ → ಈರ್ವರು ಮಕ್ಕಳು

೨. ಪಾ.ವೆಂ. ಅವರ ಜೀವನದ ಮಹತ್ವ ಘಟನೆಗಳು:

೧೯೧೫	ಫೆಬ್ರುವರಿ ೬ ಜನನ, ಕುಂಜುಬೆಟ್ಟು, ಉಡುಪಿ
೧೯೧೬	ಸ್ಥಾನಪಲ್ಲಟ ಸೋದೆಗೆ, ಶಿರಸಿ ತಾಲ್ಲೂಕು ಉತ್ತರ ಕನ್ನಡ
೧೯೧೯	ನವೆಂಬರ್ ತಂದೆಯ ಮರಣ, ಸೋದೆಯಲ್ಲಿ
೧೯೨೦	ಅಕ್ಷರಾಭ್ಯಾಸ ಆರಂಭ
೧೯೨೨	ಇಂಗ್ಲಿಷ್ ಅಕ್ಷರಾಭ್ಯಾಸ
೧೯೨೩	ಉಡುಪಿಗೆ ಸ್ಥಾನಪಲ್ಲಟ, ಕುಂಜುಬೆಟ್ಟಿನಲ್ಲಿ ವಸತಿ
೧೯೨೩	ಜೂನ್ ಶಾಲಾರಂಭ, ಉಡುಪಿ ಅನಂತೇಶ್ವರ ಎಲಿಮೆಂಟರಿ ಶಾಲೆ
೧೯೨೬	ಮೊದಲ ಪದ್ಯರಚನೆ (ಷಟ್ಪದಿ)
೧೯೨೬	ಜೂನ್ ಹೈಸ್ಕೂಲ್ ಸೇರ್ಪಡೆ, ಉಡುಪಿ ಬೋರ್ಡ್ ಹೈಸ್ಕೂಲ್
೧೯೩೧	ಬಂಗಾಳೀ ಅಭ್ಯಾಸ, ಸ್ವಯಂ ಅಧ್ಯಯನ
೧೯೩೨	ಮೇಎಸ್.ಎಸ್.ಎಲ್.ಸಿ.ತೇರ್ಗಡೆ, ಶಾಲೆಗೆ ಪ್ರಥಮ
೧೯೩೨	ಜೂನ್ ಉಪಾಧ್ಯಾಯವೃತ್ತಿ, ಉಡುಪಿಯ ಕಡಿಯಾಳಿ ಶಾಲೆಯಲ್ಲಿ
೧೯೩೨	ರವೀಂದ್ರರ ಪ್ರಭಾವದಲ್ಲಿ ಕವನ ರಚನಾರಂಭ
೧೯೩೩	ಮೇ'ಜಯ ಕರ್ನಾಟಕ'ದಲ್ಲಿ ಪ್ರಥಮ ಕವನ ಉದ್ಗಾರದ ಪ್ರಕಟನೆ
೧೯೩೩	ಉಪಾಧ್ಯಾಯವೃತ್ತಿ ತ್ಯಾಗ, ಅಂಗಡಿ ಗುಮಾಸ್ತೆಯಾದದ್ದು,ಉಡುಪಿ: ಎಸ್.ಯು.ಪಣಿಯಾಡಿಯವರ ಅಂಗಡಿ, ಮುದ್ರಣಾಲಯಗಳಲ್ಲಿ
೧೯೩೩	ವಾಣಿಜ್ಯ ಲೆಕ್ಕದ ಸ್ವಯಂ ಕಲಿಕೆ
೧೯೩೫	ತುಳುನಾಡ್ ಪ್ರೆಸ್ : ಉಡುಪಿಯಲ್ಲಿ ಲೆಕ್ಕಿಗ, ಮುದ್ರಕ
೧೯೩೫	ಕೆ. ಹೊನ್ನಯ್ಯ ಶೆಟ್ಟಿರೊಡನೆ ಕನ್ನಡ ಪ್ರಾತಿನಿಧಿಕ ಕಥಾಸಂಗ್ರಹ, 'ಮಧುವನ' ಸಂಪಾದನೆ
೧೯೩೭	ಪಣಿಯಾಡಿಯವರ ಮಣಿಪಾಲ ಪವರ್ ಪ್ರೆಸ್ಸಿನ ಮೆನೇಜರ್
೧೯೩೭	ಪಣಿಯಾಡಿಯವರ 'ಅಂತರಂಗ' ಮಾಸಪತ್ರಿಕೆಯ ಸಂಪಾದಕ ಬಳಗದಲ್ಲಿ ಸೇರಿದ್ದು
೧೯೩೭	'ಅಂತರಂಗ'ದಲ್ಲಿ ಪ್ರಥಮ ಸ್ವತಂತ್ರ ಹಾಸ್ಯಕಥೆ ಪ್ರಕಟನೆ
೧೯೩೭	ಮೇ ೩೦ ಮದುವೆ, ಕಿದಿಯೂರು, ಉಡುಪಿ–ಶ್ರೀಮತಿ ಲಕ್ಷ್ಮೀಯವರೊಂದಿಗೆ
೧೯೩೮	ಜುಲೈ ೨, ಪ್ರಥಮ ಪುತ್ರನ ಜನನ
೧೯೩೮	'ಅಂತರಂಗ' ಪತ್ರಿಕೆಯಲ್ಲಿ ಸಂಪಾದಕೀಯ ಕೆಲಸ
೧೯೪೦–೪೧	ಮದ್ರಾಸಿಗೆ ಪ್ರಯಾಣ, ಹೋಟೇಲ್‌ನಲ್ಲಿ ಬಿಲ್‌ರೈಟರ್

೧೯೪೨ ಧಾರವಾಡ ರೆಸ್ಟೋರೆಂಟ್‌ನಲ್ಲಿ ಬಿಲ್‌ರೈಟರ್

೧೯೪೨ 'ಸಂಯುಕ್ತ ಕರ್ನಾಟಕ' ಪ್ರೆಸ್‌ನ ಜಾಬ್‌ವಿಭಾಗದಲ್ಲಿ ಮೇಲ್ವಿಚಾರಣೆಯ ಕೆಲಸ.

೧೯೪೪ 'ಕರ್ಮವೀರ'ದಲ್ಲಿ ಪುರವಾಣಿ ಉಡುಪಿ ಕೃಷ್ಣಮಠದ ಪರ್ಯಾಯೋತ್ಸವದ ಲೇಖನ ಪ್ರಕಟ.

೧೯೪೪ ಹುಬ್ಬಳ್ಳಿಯಲ್ಲಿ ಸಂಸಾರ ಜೀವನ ಆರಂಭ: ರಾಮಭಟ್ಟರ ಚಾಳ, ದೇಶಪಾಂಡೆ ನಗರ

೧೯೪೭ 'ಕರ್ಮವೀರ'ದಲ್ಲಿ ಕೆಲಸ.

೧೯೫೦ 'ಕರ್ಮವೀರ'ದಲ್ಲಿ 'ಲಾಂಗೂಲಾಚಾರ್ಯ' ಹೆಸರಿನಲ್ಲಿ ಓದುಗರೊಡನೆ 'ಹರಟೆ' ಬರವಣಿಗೆ ಪ್ರಾರಂಭಿಸಿದ್ದು. ೨೭೫

೧೯೫೬ ಜುಲೈನಲ್ಲಿ 'ಲೋಕಶಿಕ್ಷಣ ಟ್ರಸ್ಟ್'ನಂದ ಡೈಜೆಸ್ಟ್ ಮಾಸಪತ್ರಿಕೆಯ ಆಲೋಚನೆ

೧೯೫೬ ಸೆಪ್ಟೆಂಬರ್ ಕಸ್ತೂರಿಯ ಪ್ರಥಮ ಸಂಚಿಕೆ: ಸಹಸಂಪಾದಕ ವೃತ್ತಿ

೧೯೫೯ ದಕ್ಷಿಣ ಭಾರತದ ಪತ್ರಿಕೋದ್ಯೋಗಿಗಳೊಡನೆ ಉತ್ತರಭಾರತ ಸಂಚಾರ

೧೯೭೪ ಅಕ್ಟೋಬರ್ ೩೧ ಕಛೇರಿಯಲ್ಲಿ ರಕ್ತವಾಂತಿಯಾಗಿ ಉದರ ಶಸ್ತ್ರಕ್ರಿಯೆ

೧೯೭೫ ಜನವರಿ ೧೫ ಕಸ್ತೂರಿ ಸಂಪಾದಕತ್ವದಿಂದ ಲೋಕಶಿಕ್ಷಣ ಸಂಸ್ಥೆಯಿಂದ ನಿವೃತ್ತಿ

೧೯೭೭ ಪಾಡಿಗಾರು ವೆಂಕಟರಮಣ ಆಚಾರ್ಯರಿಗೆ ಸನ್ಮಾನ ಮೈಸೂರು ಗೆಳೆಯರ ಬಳಗದಿಂದ

೧೯೯೨ ಬಿ.ಡಿ. ಗೋಯೆಂಕಾ ಪ್ರಶಸ್ತಿ ಪ್ರದಾನ (೧ ಲಕ್ಷ ರೂ) ಪ್ರಕಟನೆ

೧೯೯೨ ಮೇ ೫ ಪಾ.ವೆಂ. ಅವರ ಅಂತ್ಯ

೩. ಸನ್ಮಾನ-ಪ್ರಶಸ್ತಿಗಳು:

೧೯೭೫ ಹುಬ್ಬಳ್ಳಿಯ ಮೂರು ಸಾವಿರ ಮಠದಿಂದ ವಿಶೇಷ ಸನ್ಮಾನ.

೧೯೭೭ ಏಪ್ರಿಲ್ - ಕನ್ನಡ ಸಾಹಿತ್ಯ ಪರಿಷತ್ತಿನಂದ ವಜ್ರಮಹೋತ್ಸವ ಪದಕ.

೧೯೭೭ ಮೇ - ಪಿ.ಆರ್. ರಾಮಯ್ಯ ಪ್ರಶಸ್ತಿ; ಮಂಗಳೂರಲ್ಲಿ ನೆರೆದ ಅಖಿಲ ಕರ್ನಾಟಕ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ.

೧೯೭೭ ಸೆಪ್ಟೆಂಬರ್ ೧೦-ಮೈಸೂರಿಲ್ಲಿ ಸಾರ್ವಜನಿಕ ಸನ್ಮಾನ ಹಾಗೂ 'ಪಾ.ವೆಂ. ಕಸ್ತೂರಿ' ಎಂಬ ಸಂಭಾವನಾ ಗ್ರಂಥದ ಸಮರ್ಪಣೆ. (ಸನ್ಮಾನ ಸಮಿತಿಯಲ್ಲಿ ಇದ್ದವರು; ಸರ್ವಶ್ರೀ ಜಿ.ಟಿ. ನಾರಾಯಣರಾವ್, ಯು.ಆರ್. ಅನಂತಮೂರ್ತಿ, ಎಚ್. ಜಯದೇವ, ಜಿ.ಎಸ್. ಭಟ್ಟ, ಎಚ್ಚೆಸ್ ಕೃಷ್ಣಮೂರ್ತಿ, ಎಚ್. ಜಯದೇವ, ಜಿ.ಎಸ್. ಭಟ್ಟ, ಎಚ್ಚೆಸ್ ಕೃಷ್ಣಸ್ವಾಮಿ, ಎಸ್.ಎಲ್. ಭೈರಪ್ಪ ಮುಂತಾದವರು)

೧೯೮೧ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ.

೧೯೮೧ ಮೂಡಬಿದಿರೆಯ ವರ್ಧಮಾನ ಪ್ರಶಸ್ತಿ ಪೀಠದಿಂದ ಪ್ರಶಸ್ತಿ.

೧೯೮೭ ಜನವರಿ ಮೂಲ್ಕಿಯಲ್ಲಿ ದ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೮೬ ನವೆಂಬರ್ ೧–ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.

೧೯೯೨ ಪತ್ರಿಕೋದ್ಯಮದ ಅನುಪಮಸೇವೆಗಾಗಿ ಅಖಿಲ ಭಾರತ ಮಟ್ಟದ ಬಿ.ಡಿ. ಗೋಯೆಂಕಾ ಪ್ರಶಸ್ತಿ (ಮುಂಬಯಿ) (ಮೊದಲ ಬಾರಿ ಕನ್ನಡಿಗನಗೆ)

೪. **ಪಾ.ವೆಂ. ಅವರ ಉಪಲಬ್ಧ ಕೃತಿಗಳು:**

೧. **ಕೆಲವು ಪದ್ಯಗಳು,** ಪುಸ್ತಕ ಪ್ರಕಾಶನ ಧಾರವಾಡ, ವರ್ಷ ೧೯೭೮

೨. **ನವನೀರದ**–ಕವನ ಸಂಗ್ರಹ, ಮನೋಹರ ಗ್ರಂಥ ಭಾಂಡಾರ, ವರ್ಷ: ೧೯೫೨

೩. **ಪ್ರಹಾರ**–ನಗೆಬರಹಗಳು, ಸಂಯುಕ್ತ ಕರ್ನಾಟಕ ಕಾರ್ಯಾಲಯ, ವರ್ಷ: ೧೯೬೫

೪. **ಪದಾರ್ಥಚಿಂತಾಮಣಿ,** ಪ್ರಮತಿ ಪ್ರಕಾಶನ, ಸುಬ್ರಮಣ್ಯ, ದ.ಕ. ಜಿಲ್ಲೆ ವರ್ಷ : ೧೯೯೧

೫. **ಬಯ್ಯಮಲ್ಲಿಗೆ**–ತುಳು ಕವನ ಸಂಕಲನ, ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ವರ್ಷ: ೧೯೮೧, ಮರುಮುದ್ರಣ ೨೦೦೨

೬. **ಮಂಜುಷಾ,** ಮಿಂಚಿನ ಬಳ್ಳಿ ಪ್ರಕಾಶನ, ಧಾರವಾಡ, ವರ್ಷ : ೧೯೯೨

೭. **ಮಾನವ ಪ್ರವೃತ್ತಿ ಮತ್ತು ಮೌಲ್ಯಗಳು,** ಗಣೇಶ ಪ್ರಿಂಟರ್ಸ್, ಕೋರ್ಟುರಸ್ತೆ, ಉಡುಪಿ, ವರ್ಷ ೧೯೮೦

೮. **ರಷ್ಯಾದ ರಾಜ್ಯ ಕ್ರಾಂತಿ,** ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ, ವರ್ಷ: ೧೯೪೨

೯. **ಲೋಕದ ಡೊಂಕು** – ನಗೆಬರಹಗಳು, ವರ್ಷ : ೧೯೯೦

೧೦. **ವಕ್ರದೃಷ್ಟಿ** – ನಗೆಬರಹಗಳು, ಪ್ರತಿಭಾಗ್ರಂಥಮಾಲೆ, ಧಾರವಾಡ, ವರ್ಷ: ೧೯೯೦

೧೧. **ವಾಸನಾ :** ಬನಪೂಲರ ಆಧಾರಿತ ಕಾದಂಬರಿ, ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ, ವರ್ಷ: ೧೯೫೦

೧೨. **ವಿಪರೀತ** – ನಗೆಬರಹ, ಜ್ಯೋತಿ ಸ್ಮತಿ ಪ್ರಕಾಶನ, ಅಜ್ಜರ ಕಾಡು, ಉಡುಪಿ, ವರ್ಷ: ೧೯೭೭

೧೩. **ಡಾ. ಶಂ.ಬಾ. ಪಾ.ವೆಂ. ಕಂಡಂತೆ,** ಮಾನವಧರ್ಮ ಪ್ರತಿಷ್ಠಾನ (ರಿ), ಬೆಳಗಾವಿ, ವರ್ಷ: ೧೯೮೫

೧೪. **ಸುಭಾಷಿತ ಚಮತ್ಕಾರ** : ಅನುವಾದ, ಸಾಹಿತ್ಯ ಭಂಡಾರ, ಧಾರವಾಡ, ವರ್ಷ: ೧೯೮೬

೧೫. **ಸ್ವತಂತ್ರ ಭಾರತ,** ಮಿಂಚಿನಬಳ್ಳಿ ಪ್ರಕಾಶನ ಧಾರವಾಡ, ವರ್ಷ: ೧೯೭೨

೫. **ಇತರರು ಸಂಪಾದಿಸಿದ ಕೃತಿಗಳು:**

೧. ಆ.ರಾ.ಮಿತ್ರ, ಶ್ರೀನಿವಾಸ ಹಾವನೂರ, **ಆಯ್ದ ಲಲಿತ ಪ್ರಬಂಧಗಳು**, ಪ್ರಿಸಂ ಬುಕ್ಸ್ ಬೆಂಗಳೂರು, ವರ್ಷ: ೨೦೦೦

೨. ಶ್ರೀನಿವಾಸ ಹಾವನೂರ, ಆ.ರಾ. ಮಿತ್ರ, **ಆಯ್ದ ನಗೆಬರಹಗಳು,** ಪ್ರಿಸಂ ಬುಕ್ಸ್ , ಬೆಂಗಳೂರು, ವರ್ಷ: ೨೦೦೦

೩. ಶ್ರೀನಿವಾಸ ಹಾವನೂರ, ಎಸ್.ಎಲ್. ಶ್ರೀನಿವಾಸಮೂರ್ತಿ, **ಇವರೇ ಲಾಂಗೂಲಾಚಾರ್ಯರು!**, ಗೋವಿಂದ ಪೈ, ಸಂಶೋಧನಾ ಕೇಂದ್ರ, ಉಡುಪಿ, ವರ್ಷ: ೨೦೦೨

೪. ಶ್ರೀನಿವಾಸ ಹಾವನೂರ, **ಉಡುಪಿ ಪರಿಸರದಲ್ಲಿ ಪಾ.ವೆಂ.**, ಪ್ರಸಾಧನ ಪ್ರಕಾಶನ ಮಂಗಳೂರು, ವರ್ಷ: ೨೦೦೦

೫. ಶ್ರೀನಿವಾಸ ಹಾವನೂರ, **ಓದುಗರೊಡನೆ ಹರಟೆಗಳು,** ಲೋಕಶಿಕ್ಷಣ ಟ್ರಸ್ಟ್ ಹುಬ್ಬಳ್ಳಿ, ವರ್ಷ: ೨೦೦೩

೬. ಶ್ರೀನಿವಾಸ ಹಾವನೂರ, **ಖ್ಯಾತಿವೆತ್ತ ಭಾರತೀಯರು,** ಪಾ.ವೆ. ವಿಶ್ವಸ್ತ ಸಮಿತಿ ಹುಬ್ಬಳ್ಳಿ, ವರ್ಷ: ೨೦೦೩

೭. ಶ್ರೀನಿವಾಸ ಹಾವನೂರು, **ಜಗದ್ವಿಖ್ಯಾತರು,** ಪಾ.ವೆಂ ವಿಶ್ವಸ್ಥ ಸಮಿತಿ ಹುಬ್ಬಳ್ಳಿ. ವರ್ಷ: ೨೦೦೩

೮. ಶ್ರೀನಿವಾಸಮೂರ್ತಿ ಎಸ್.ಎಲ್., **ಪಾ.ವೆಂ. ಕಂಡಂತೆ ಚಿತ್ರ ವಿಚಿತ್ರ ಜಗತ್ತು,** ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ವರ್ಷ: ೨೦೦೨

೯. ಶ್ರೀನಿವಾಸ ಹಾವನೂರು, **ಬ್ರಾಹ್ಮಣರೇನು ಮಾಡಬೇಕು?** ಹಾಗೂ **ಇತರ ಚಿಂತನಪರ ಪ್ರಬಂಧಗಳು**, ಅಂಕಿತ ಪುಸ್ತಕ ಬೆಂಗಳೂರು, ವರ್ಷ: ೨೦೦೨

೧೦. ನವಕರ್ನಾಟಕ ಪಬ್ಲಿಕೇಶನ್ ಬೆಂಗಳೂರು, **ವಿಜ್ಞಾನ ವಿಸ್ಮಯ**, ವರ್ಷ ೨೦೦೨

೧೧. ಶ್ರೀನಿವಾಸ ಹಾವನೂರು, **ಹೊಸಗನ್ನಡದ ಹಿರಿಯರು,** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ವರ್ಷ: ೨೦೦೩

೧೨. ಎಸ್.ಎಲ್. ಶ್ರೀನಿವಾಸಮೂರ್ತಿ **ಹೌಸಿಂಗ್ ಕಾಲೋನಿ ಸಮಗ್ರ ಕವಿತೆಗಳು**, ಪಾ.ವೆಂ. ವಿಶ್ವಸ್ತ ಸಮಿತಿ. ಹುಬ್ಬಳ್ಳಿ, ವರ್ಷ: ೨೦೦೪

೧೩. ಶ್ರೀನಿವಾಸ ಹಾವನೂರ, **ಹಿಂದೂ ಮುಸ್ಲಿಂ ಮತ್ತು ಇತರ ಕತೆಗಳು**, ಸುಮಂತ ಪ್ರಕಾಶನ ಉಪ್ಪಿನಕೋಟೆ, ಬ್ರಹ್ಮಾವರ, ವರ್ಷ: ೨೦೦೨

೭. ವಿವಿಧ ನಾಮಗಳಿಂದ ಪಾ.ವೆಂ. ಬರೆದ ಕಸ್ತೂರಿಯ ಲೇಖನ ಸೂಚಿ

ಅ.ಸಂ.	ವರ್ಷ	ಸಂಚಿಕೆ–ಮಾಸ	ಲೇಖನ ಶೀರ್ಷಿಕೆ	ವಿಷಯ ವರ್ಗೀಕರಣ	ಬಳಸಿದ ಹೆಸರು	ಉಲ್ಲೇಖನೀಯ
	೧೯೫೬	ಸೆಪ್ಟಂಬರ್–೦೧				
೧			ವೆಂಕಟಾಧ್ವರಿ ಕಂಡ ದಕ್ಷಿಣ ಭಾರತ	ವ್ಯಕ್ತಿ ಕೃತಿ ಪರಿಚಯ	ಪಿ. ವೆಂಕಟರಮಣಾಚಾರ್ಯ	ನಾಡಿನ ವರ್ಣನೆಯ ಔಚಿತ್ಯ
೨			ಬೀದಿಯ ಕಾಮ್ಮಣ್ಣರನ್ನು ಏನು ಮಾಡಬೇಕು?	ಹರಟೆ	ಶ್ರೀನಿವಾಸ	ಅನಾಗರೀಕ ವರ್ತನೆ
೩			ಕಸ್ತೂರಿ	ಪ್ರಾಣಿಲೋಕ	ಪಾ.ವೆಂ.	ಪತ್ರಿಕೆಯ ಹೆಸರಿನ ಔಚಿತ್ಯ ಆರಂಭ ಸಂಚಿಕೆ.
೪			ಜೀವದಾನಿ ಜಯಪ್ರಕಾಶ	ವ್ಯಕ್ತಿ ಪರಿಚಯ	ಪಾ.ವೆಂ.	ಭೂಧಾನ ಚಳುವಳಿ
	೧೯೫೬	ಅಕ್ಟೋಬರ್–೦೨				
೫			ಗಾಂಧೀಜಿಯ ಕೊನೆಯ ಉಪವಾಸಗಳು	ಘಟನಾತ್ಮಕ ನೆನಪು	ಪಾ.ವೆಂ.	ನೆನಪಿನ ಸುರುಳಿ
	೧೯೫೬	ನವೆಂಬರ್–೦೩				
೬			ಮಂಗಳ ಲೋಕಕ್ಕೆ ಹೋದರೆ	ಖಗೋಳ ಜ್ಞಾನ	ಪಾ.ವೆಂ.	ವೈಜ್ಞಾನಿಕ, ತಾಂತ್ರಿಕ ಊಹೆ
	೧೯೫೬	ಡಿಸೆಂಬರ್–೦೪				
೭			ಕ್ರೈಸ್ತ ಧರ್ಮದ ಅದ್ಭುತ ವಿಸ್ತರಣೆ	ವಿವೇಚನೆ	ಪಿ. ವೆಂಕಟರಮಣಾಚಾರ್ಯ	ಕ್ರೈಸ್ತ ಧರ್ಮದ ಪ್ರಾರಂಭ
೮			ಪಾಪ : ನಿಮ್ಮ ಪಾದ!	ವಿವೇಚನೆ	ಪಾ.ವೆಂ.	
	೧೯೫೭	ಜನವರಿ–೦೫				
೯			ಅಂಬೇಡ್ಕರರು ಹಾಗೇಕಾದರು!	ಘಟನಾತ್ಮಕ ನೆನಪು	ಪಿ. ವೆಂಕಟರಮಣಾಚಾರ್ಯ	ಸಾಂದರ್ಭಿಕ
೧೦			ಅಪಾಯಕಾರಿ ಮಿತ್ರ ಮಿಂಚು	ಖಗೋಳಜ್ಞಾನ	ಪಾ.ವೆಂ.ಆ.	ಪ್ರಕೃತಿ ವಿಸ್ಮಯ
೧೧			ಚಿನ್ನದ ಶೋಧ	ಶೋಧನಾ ಪರಿಚಯ	'ಪರಶುರಾಮ'	
	೧೯೫೭	ಫೆಬ್ರುವರಿ–೦೬				
೧೨			ನಾವು ತಿನ್ನುವ ಉಪ್ಪು	ಆಹಾರ ವಿಶ್ಲೇಷಣೆ	ಪಾ.ವೆಂ.	
೧೩			ಬಡವರ ರೇಶ್ಮೆ ರೇಯಾನ್	ಅನ್ವಯಿಕ ವಿಜ್ಞಾನ	ಪಾ.ವೆಂ.ಆಚಾರ್ಯ	ರೇಯಾನ್ ಬೆಳೆಯ ಔಚಿತ್ಯ
	೧೯೫೭	ಮಾರ್ಚ್–೦೭				
೧೪			ಮೆಟ್ರಿಕ್ ತೂಕ – ಅಳತೆಗಳ ಕಥೆ	ದಶಮಾನ ಪದ್ಧತಿಯ ಪರಿಚಯ	ಪಾ.ವೆಂ.	ಭಾರತದಲ್ಲಿ ಜಾರಿಗೆ ಬಂದ ಪದ್ಧತಿಯ ಸಂದರ್ಭ.
೧೫			ಇರುವೆ ಮತ್ತು ಇಣಚಿ	ಸಣ್ಣ ಕಥೆ	'ಶ್ರೀಶ'	
	೧೯೫೭	ಎಪ್ರಿಲ್–೦೮				
೧೬			ಬ್ರಿಟಿಷ್ ಹಡಗು ಮುಳುಗುತ್ತಿದ್ದರೆ	ಘಟನಾತ್ಮಕ ನೆನಪು	ಶ್ರೀನಿವಾಸ ರಾವ್	ವಿಸ್ಮಯ

೧೭			ಇಂದಿನ ಹೆಂಡಂದಿರ ಸ್ವರೂಪ	ಹರಟೆ	'ಶ್ರೀಶ'	
೧೮			ನಮ್ಮ ಸುತ್ತಣ ವಾತಾವರಣ	ಪರಿಸರ ಪರಿಚಯ	'ವಿಜ್ಞಾನ ಭಕ್ತ'	
೧೯			ಆನಂದ ಮಠ (ಪುಸ್ತಕ ವಿಭಾಗ)	ಬಂಗಾಳಿ ಕಾದಂಬರಿ ಅನುವಾದ ಮೂಲ ಬಂಕಿಮ ಚಂದ್ರ ಚಟರ್ಜಿ	'ಶ್ರೀಶ'	'ವಂದೇ ಮಾತರಂ' ಗೀತೆಯ ಪ್ರಸಂಗ-ಮಹತ್ವ
	೧೯೫೭	ಜೂನ್-೧೦				
೨೦			ನಾನು ಸಹಕಾರಿ ಅಂಗಡಿ ತೆರೆದೆ	ವ್ಯವಹಾರ ಜೀವನ ವಿವರ	'ಪರಶುರಾಮ'	ಸ್ವಾನುಭವ ಘಟನೆ
೨೧			ಧೂಮಕೇತುಗಳು	ಖಗೋಳ ಜ್ಞಾನ	'ಆಕಾಶ ನಿರೀಕ್ಷಕ'	
೨೨			ಶಂಕರನ್ ನಂಬೂದ್ರಿಪಾದ ಯಾರು? (ಕೇರಳದ ಪ್ರಥಮ ಮುಖ್ಯಮಂತ್ರಿ ಕಮ್ಯುನಿಷ್ಟರು)	ವ್ಯಕ್ತಿ ಪರಿಚಯ- ರಾಜಕೀಯ ವಿಶ್ಲೇಷಣೆ	ಪಾ.ವೆಂ. ಆಚಾರ್ಯ	'ಕಮ್ಯುನಿಸ್ಟ್ ಪಾರ್ಟಿ' ಆಡಳಿತಕ್ಕೆ ಬಂದ ಸಂದರ್ಭ.
	೧೯೫೭	ಜುಲೈ-೧೧				
೨೩			ವಿದ್ಯಾರ್ಥಿ: ರಾಜೇಂದ್ರಪ್ರಸಾದರು	ಘಟನಾತ್ಮಕ ನೆನಪು	'ಓರ್ವ ಬಂಗಾಳಿ ಮಿತ್ರ'	ಪ್ರಥಮ ರಾಷ್ಟ್ರಪತಿಯ ಜೀವನ ನೆನಪು.
	೧೯೫೭	ಆಗಸ್-೧೨				
೨೪			ದುಂದುಗಾರ ರಾಜ-ಮಿಯಾಂ ಸಾಹೇಬ್ (ಕೇರಳ)	ಘಟನಾತ್ಮಕ ನೆನಪು	ಪಾ.ವೆಂ.	
	೧೯೫೭	ಸೆಪ್ಟೆಂಬರ್-೧೩				
೨೫			ಬರ್ಟ್ರಂಡ್ ರಸೆಲ್	ವ್ಯಕ್ತಿ ಪರಿಚಯ	'ಮುರಳೀಧರ'	ತತ್ವಜ್ಞಾನಿ
೨೬			ನೇತ್ರದಾನಿ ಡಾ. ಮೋದಿಯವರು	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	
	೧೯೫೭	ಅಕ್ಟೋಬರ್-೧೪				
೨೭			ನಿಮ್ಮ ವ್ಯವಹಾರ ಜ್ಞಾನ ಎಷ್ಟಿದೆ	ವಿವೇಚನೆ	'ಮಾನವ ಶಾಸ್ತ್ರದ ಅಭ್ಯಾಸಿ'	
೨೮			ಟ್ರಾಟ್‌ಸ್ಕಿಗೆ ಮೃತ್ಯುಂಜಯ	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	ಭೀಕರ ರಾಜಕೀಯ ಹತ್ಯೆಯ ಕಥೆ
೨೯			ನಾಲಿಗೆ ಹೇಳುವ ರುಚಿ	ವಿವೇಚನೆ	ಪಿ. ಮುರಳೀಧರ	ಶರೀರಾಂಗದ ವಿವರ
	೧೯೫೭	ನವೆಂಬರ್-೧೫				
೩೦			ಕೃತಕ ಚಂದ್ರವನ್ನು ಹೇಗೆ ಹಾರಿಸಬೇಕು?	ಖಗೋಳಜ್ಞಾನ	'ವಿಜ್ಞಾನ ಭಕ್ತ'	ಉಪಗ್ರಹ ಉಡಾವಣೆ ತಂತ್ರ
೩೧			'ಶೂನ್ಯ' ಸಂಪಾದನೆ	ಸಾಮಾನ್ಯ ವಿಜ್ಞಾನ	ಪಾ.ವೆಂ.ಆಚಾರ್ಯ	ಸಂಖ್ಯಾಶಾಸ್ತ್ರದ ಕಲ್ಪನೆ
೩೨			ಮಹಾವೀರ ತ್ಯಾಗಿ	ವ್ಯಕ್ತಿ ಚಿತ್ರ	'ಸರ್ವೇಕ್ಷಣ'	

೩೩			ಪ್ರಾಣಿಯ ಸ್ವಭಾವವು ಮಾನವ ಸ್ವಭಾವದಂತೆಯೇ	ಮನೋವರ್ತನಾಜ್ಞಾನ	ಪಾ.ವೆಂ.	
೩೪			ರಂಟಿಯಿಂದ ಮೋಟಾರ್: ಕಿರ್ಲೋಸ್ಕರ್ ನಡೆದುಬಂದದಾರಿ	ಸಾಧನೆ ಪರಿಚಯ	ಪಾ.ವೆಂ. ಆಚಾರ್ಯ	
	೧೯೫೮	ಜನವರಿ-೧೭				
೩೫			ವಿಚಾರಶಕ್ತಿಯನ್ನು ಹೇಗೆ ಬೆಳೆಸಿಕೊಳ್ಳಬೇಕು	ವಿವೇಚನೆ	ಪಾ.ವೆಂ..	
೩೬			ಚೀನಾದ ದೊಡ್ಡ ಗೋಡೆ	ವಿಸ್ಮಯ: ಪರಿಚಯ	'ಶ್ರೀಧರ'	
	೧೯೫೮	ಫೆಬ್ರವರಿ-೧೮				
೩೭			ಬರಲಿವೆ: 'ದೈತ್ಯ' ಸಸ್ಯಗಳು	ಶೋಧನೆ: ಸಸ್ಯ ವಿಜ್ಞಾನ	ಪಾ.ವೆಂ.	ತೆಂಗಿನ ಮರದ ಬಗ್ಗೆ ರೋಗ ನಿವಾರಕ ಶಕ್ತಿ.
೩೮			ಉಸ್ತಾದ್ ಅಲ್ಲಾವುದ್ದೀನ್ ಖಾನರ ಸಂಗೀತ ತಪಸ್ಸು	ಸಾಧನೆ ಪರಿಚಯ	ಪಾ.ವೆಂ. ಆಚಾರ್ಯ	
೩೯			ಅಪಘಾನಿಸ್ಥಾನ	ದೇಶ ಪರಿಚಯ	ಪಾ.ವೆಂ.	
೪೦			ಜಹಾಂಗೀರ ಟಾಟಾ	ವೃತ್ತಿ ಮತ್ತು ಸಾಧನೆ ಪರಿಚಯ	ಪಾ.ವೆಂ.	ಭಾರತದ ಉದ್ಯೋಗ ಚಕ್ರವರ್ತಿ
	೧೯೫೮	ಮಾರ್ಚ್-೧೯				
೪೧			ಜಲ ಚಿಕಿತ್ಸಾ ಪ್ರವೀಣ: ಗೌಳಿಗ	ಹರಟೆ	ಲಾಂಗೂಲಾಚಾರ್ಯ	
	೧೯೫೮	ಎಪ್ರಿಲ್-೨೦				
೪೨			ಭೂ ನಂದನವನ ಲಂಕೆ	ನಗರ ಪರಿಚಯ	ಪಾ.ವೆಂ.	
೪೩			ಕೆಂಪು ತಲೆಯವರ ಕೂಟ	ಪುಸ್ತಕ ವಿಭಾಗ	'ಶ್ರೀಶ'	
	೧೯೫೮	ಮೇ-೨೧				
೪೪			ಡಾ. ರಾಮ ಮನೋಹರ ಲೋಹಿಯಾ	ವ್ಯಕ್ತಿ ಪರಿಚಯ	ಪಾ.ವೆಂ.	ಭಾರತೀಯ ರಾಜಕಾರಣದ ಸಿಡಿಲ ಮರಿ.
	೧೯೫೮	ಜೂನ್-೨೨				
೪೫			ಡಾ. ಸಿ.ವಿ. ರಾಮನ್	ವ್ಯಕ್ತಿ ಪರಿಚಯ	ಪಾ.ವೆಂ.	ಖ್ಯಾತ ವಿಜ್ಞಾನಿ
೪೬			ಬೆಕ್ಕು ಎಷ್ಟು ಜಾಣ ಪ್ರಾಣಿ?	ಪ್ರಾಣಿ ವಿಸ್ಮಯ	ಪಾ.ವೆಂ.	
೪೭			ನಾ ಕಂಡ ಕತ್ತೆ	ಹರಟೆ	ಲಾಂಗೂಲಾಚಾರ್ಯ	
೪೮			ಭಾಷೆಗಳ ವಿಲಕ್ಷಣ ಗತಿ	ಭಾಷಾಭ್ಯಾಸ	'ಭಾಷಾಭ್ಯಾಸಿ'	

				ವ್ಯಕ್ತಿ ಪರಿಚಯ	ಸಂಪಾದಕ	ತವರೂರು ಹುಬ್ಬಳ್ಳಿಯ ಕಲಾವಿದೆ ಬಗ್ಗೆ ಅಭಿಮಾನದ ಪರಿಚಯ.
	೧೯೫೮	ಜುಲೈ-೨೩				
೫೦			ಸ್ವರ್ಣದ್ವೀಪ ಬರ್ಮಾ	ದೇಶ ಪರಿಚಯ	ಪಾ.ವೆಂ. ಆಚಾರ್ಯ	ಜಗತ್ತಿನ ಅತ್ಯಂತ ಸುಖಿ ಜನಾಂಗ
೫೧			'ನಾನೇ ಫ್ರಾನ್ಸ್' ಎಂದ ಧೀರ: ಚಾರ್ಲ್ಸ್ ಡಿ. ಗಾಲೆ	ಸಾಹಸ ಪರಿಚಯ	ಪಾ.ವೆಂ.	ಹಿಟ್ಲರ್ ನಂತರದ ನಾಯಕ
೫೨			ಫೋಟೋಗ್ರಾಫಿಯ ಪಿತಾಮಹ ಲೂಯಿ ದಗೇರ	ವ್ಯಕ್ತಿ ಪರಿಚಯ	....	ಫೋಟೊ ತೆಗೆಯುವ ಸಾಹಸಿ
೫೩			ವಾದಗಳಲ್ಲಿ ಹೇಗೆ ಗೆಲ್ಲಬೇಕು	ವಿವೇಚನೆ	ಪಾ.ವೆಂ.	ಮನೋವಿಜ್ಞಾನದ ೬ ಉಪಾಯಗಳು
	೧೯೫೮	ಆಗಸ್ಟ್-೨೪				
೫೪			ಇರಾಕ್‌ನಾಡು: ಜನ ಮತ್ತು ರಾಜಕಾರಣಿಗಳು	ದೇಶ ಪರಿಚಯ	ಪಾ.ವೆಂ. ಆಚಾರ್ಯ	
೫೫			ಸಾಗರಗಳ ಹುಟ್ಟು ಬದುಕು	ಪ್ರಕೃತಿ ಪರಿಚಯ	'ಮರಳೀಧರ'	ಸಂಶೋಧನೆ
೫೬			ರಶಿಯಾದಲ್ಲಿ ಶಿಕ್ಷಣ	ಪರಿಸ್ಥಿತಿ ಪರಿಚಯ	ಪಾ.ವೆಂ.	
	೧೯೫೮	ಸೆಪ್ಟೆಂಬರ್-೨೫				
೫೭			ಕೇರಳದಲ್ಲಿ ಕಮ್ಯುನಿಷ್ಟರು ಸಾಧಿಸಿದ್ದೇನು?	ರಾಜಕೀಯ ವಿಶ್ಲೇಷಣೆ	....	
೫೮			ಡಾ. ರಾಮಮನೋಹರ ಲೋಹಿಯಾ	ವ್ಯಕ್ತಿ ಪರಿಚಯ	ಪಾ.ವೆಂ.	ಭಾರತೀಯ ಸಮಾಜವಾದಿಯ ವ್ಯಕ್ತಿತ್ವ
	೧೯೫೮	ಅಕ್ಟೋಬರ್-೨೬				
೫೯			ಸುಂದರ ಫೋರ್ಮೋಸಾ	ದೇಶ ಪರಿಚಯ	'ಶ್ರೀಶ'	ದ್ವೀಪರಾಷ್ಟ್ರದ ಬಗ್ಗೆ
೬೦			ಕಾಶ್ಮೀರ ಪ್ರಧಾನಿ ಬಕ್ಷಿ ಸಾಹೇಬರು	ವ್ಯಕ್ತಿ ಪರಿಚಯ	ಪಾ.ವೆಂ.	ಕೀರ್ತನಕಾರರು
೬೧			ಗಾಂಧೀಜಿಯ ಪೂರ್ಣಾಹುತಿ ಮೂಲ ಪ್ಯಾರೇಲಾಲರ: ಪುಸ್ತಕ ವಿಭಾಗ (Mahatma Gandhi-The Last Phase)	ಘಟನಾತ್ಮಕ ನೆನಪು	ಪಾ.ವೆಂ.	ನೆನಪಿನ ಸುರುಳಿ
	೧೯೫೮	ನವೆಂಬರ್-೨೭				
೬೨			ಜಗತ್ತಿನ ಅತಿ ಚಿಕ್ಕ ಸ್ವತಂತ್ರರಾಷ್ಟ್ರ: ವೈಟಿಕನ್	ನಗರ ಪರಿಚಯ	ಪಾ.ವೆಂ.	
೬೩			ಅಮೇರಿಕಾವನ್ನು ಕಂಡು ಹಿಡಿದ ಭಾರತೀಯ ವ್ಯಕ್ತಿ ಹುಯ್ ಶೇನ.	ಸಾಹಸ ಪರಿಚಯ	ಪಾ.ವೆಂ.	ಭಾರತೀಯ ಬೌದ್ಧ ಬಿಕ್ಷುಕ
	೧೯೫೮	ಡಿಸೆಂಬರ್-೨೮				
೬೪			ಸ್ವಲ್ಪ ಅವಿವೇಕವಿರಲಿ	ಹರಟೆ	ಲಾಂಗೂಲಾಚಾರ್ಯ	
೬೫			ಪಾಸ್ಟರ್ ನಾಕ್ ಮತ್ತು ಅವರ ಕಾದಂಬರಿ	ಸಾಹಿತ್ಯಾಕೃತಿ	ಪಿ.ವೆಂಕಟರಮಣಾಚಾರ್ಯ	ಡಾಖಿವ್ಯಾಗೊ-ನೋಬೆಲ್ ಪಾರಿತೋಷಕ ಪಡೆದ ಸಂದರ್ಭ.

			ವಿಶ್ವ ಪ್ರಪಂಚದ ಧೂರ್ತ ಕೋಗಿಲೆ	ಪಕ್ಷಿಜ್ಞಾನ ಪರಿಚಯ	'ಮುರಳೀಧರ'	ನಿಜ ಚರಿತ್ರೆ
೬೭			ಜಗತ್ತಿನ ಕೊನೆ ಎಂದು?	ವಿವೇಚನೆ	'ಶ್ರೀಶ'	
೬೮			ಪ್ರಪಂಚದ ಆದಿಮ ಚಿತ್ರಕಾರರು	ಕಲೆ–ಇತಿಹಾಸ ಪರಿಚಯ	ಪಾ.ವೆಂ.	ಗುಹಾಮಾನವನ ಚಿತ್ರಗಳು ಕಾಲ ೧೦,೦೦೦ ವರ್ಷ ಹಿಂದಿನದು.
	೧೯೫೯	ಜನವರಿ–೨೯				
೬೯			ಮಾವೋ ತ್ಸೆ ತುಂಗ್	ವ್ಯಕ್ತಿ ಪರಿಚಯ	ಪಾ.ವೆಂ.ಆಚಾರ್ಯ	ಚೀನಾದ ಕ್ರಾಂತಿಕಾರಿ
೭೦			ವಿಶ್ವಭಾಷೆ ಎಸ್ಪರೇಂಟೊ	ಭಾಷಾಜ್ಞಾನ ಪರಿಚಯ	'ರಾಧಾಕೃಷ್ಣ'	ವಿಶ್ವಕ್ಕೆ ಒಂದೇ ಭಾಷೆ ಇರಲಿ ಎಂಬ ಆಶಯ–ವಿವರಣೆ.
೭೧			ಆಗಾಖಾನರು	ವ್ಯಕ್ತಿ ಪರಿಚಯ	'ಮುರಳೀಧರ'	೨,೦೦,೦೦,೦೦೦ ಇಸ್ಮಾಯಿಲಿಗಳ ಧರ್ಮಗುರು.
	೧೯೫೯	ಫೆಬ್ರವರಿ–೩೦				
೭೨			ನೆಹರು ನಂತರ ಯಾರು?	ರಾಜಕೀಯ ಚರ್ಚೆ	ಪಾ.ವೆಂ.	
	೧೯೫೯	ಮಾರ್ಚ್–೩೧				
೭೩			ನೌಕರಶಾಹಿ ಹೇಗೆ ಬೆಳೆಯುತ್ತದೆ?	ವಿವೇಚನೆ	ಪಿ.ವಿ.ಆಚಾರ್ಯ	ಡಾ. ಪಾರ್ಕಿನ್‌ಸನ್ನರ ಸಂಶೋಧನೆ
೭೪			ನೀವು ವಿಮೆ ಇಳಿಸಿದಾಗ	ಸಾಮಾನ್ಯ	ಪಾ.ವೆಂ.	ವಿಮಾದಾರರ ಬಗ್ಗೆ ತಿಳಿದಿರಬೇಕಾದ ವಿಷಯ.
೭೫			ಸ್ವಪ್ನ ಲೋಕದ ನಕಾಶೆ	ಮನೋವಿಶ್ಲೇಷಣೆ ಶೋಧನೆ	ಪಾ.ವೆಂ.	ಕನಸಿನ ಶೋಧನೆ
	೧೯೫೯	ಎಪ್ರಿಲ್–೩೨				
೭೬			ಆರ್ಯಭಾಷೆಗಳ ಮೂಲ ಪುರುಷರು	ಭಾಷಾಜ್ಞಾನ ಪರಿಚಯ	'ಭಾಷಾಬ್ಯಾಸಿ'	ಭಾಷೆಯ ಪ್ರಾಚೀನತೆ
೭೭			ತೆಪ್ಪದಲ್ಲಿ ಸಮುದ್ರ ದಾಟಿದರು	ಸಾಹಸ	ಪಾ.ವೆಂ.	
	೧೯೫೯	ಮೇ–೩೩				
೭೮			ರಹಸ್ಯಗಳ ನಾಡು ಟಿಬೇಟ್	ದೇಶ ಪರಿಚಯ	ಪಾ.ವೆಂ.	ವಿವಾದಾತ್ಮಕ ದೇಶ
	೧೯೫೯	ಜೂನ್–೩೪				
೭೯			ಫತೇ ಪುರ ಸಿಕ್ರಿ: ಅಕ್ಬರನ ಒಡೆದ ಕನಸ್ಸು	ಇತಿಹಾಸ ನೆನಪು	ಪಾ.ವೆಂ.	ಹಿಂದೂ, ಮುಸ್ಲಿಂ ಶಿಲ್ಪದ ಸಂಗಮ
೮೦			ರೇಖಾಚರಿತ್ರೆ–ಟಿ.ಕೆ. ರಾವ್	ವ್ಯಕ್ತಿ ಪರಿಚಯ	ಪಾ.ವೆಂ.	ಕಸ್ತೂರಿಯ ಮುಖಪುಟ ಚಿತ್ರಕಾರ
೮೧			ಬಿದಿರು ಬಂಗಾರವಾಗುತ್ತದೆ	ಅರಣ್ಯ ಆರ್ಥಿಕ ಜ್ಞಾನ ಪರಿಚಯ	ರಾಧಾಕೃಷ್ಣರಾವ್	
೮೨			ಈ ರಾಜ್ಯಕ್ಕೆ (ಕುವೈಟ್)ಸಂಪತ್ತಿನಿಂದ ಅಜೀರ್ಣವಾಗುತ್ತದೆ	ಆರ್ಥಿಕ ವಿಶ್ಲೇಷಣೆ	ರಾಧಾಕೃಷ್ಣರಾವ್	ಜಗತ್ತಿನ ಶ್ರೀಮಂತ ರಾಷ್ಟ್ರ

		[illegible]	[illegible]	....	ಜೀವಶಾಸ್ತ್ರದ ಶೋಧಗಳು
೮೪	೧೯೫೯ ಜುಲೈ-೨೫	ಜೀವಶಾಸ್ತ್ರ ವಿಚಾರ	ಜ್ಞಾನ ಪರಿಚಯ	'ಮುರಳೀಧರ'	
೮೫		ಆಚಾರ್ಯ ಕಾಕಾ ಕಾಲೇಲಕರ	ವ್ಯಕ್ತಿ ಪರಿಚಯ	....	ಅಹಿಂಸೆಯಲ್ಲಿ ಸತ್ಯ ಕಂಡವರು
೮೬		ಇಬ್ಭಾಗವಾದ ಬರ್ಲಿನ್	ರಾಜಕೀಯ ವಿಶ್ಲೇಷಣೆ	ಪಾ.ವೆಂ.	ಜರ್ಮನರ ಶೋಚನೀಯ ಸ್ಥಿತಿ
೮೭		ಸೋಮಾ ಸೇತುವೆಯಲ್ಲಿ (೧೯೩೦ ಹೈದ್ರಾಬಾದ್)	ನಿಜ ಘಟನೆ	'ಲೇಖಕ'	ರೈಲ್ವೆ ದುರಂತ ತಪ್ಪಿಸಿದ್ದು
೮೮		ದಡ್ಡರೇ ಧನ್ಯರು	ಹಾಸ್ಯ ಲೇಖನ	'ರಾಧಾಕೃಷ್ಣರಾವ್'	
	೧೯೫೯ ಆಗಸ್ಟ್-೨೬				
೮೯		ಪಾವಟೆಯವರಿಗೆ ೬೦ ತುಂಬಿತು	ವ್ಯಕ್ತಿ ಪರಿಚಯ	ಪಾ.ವೆಂ.	ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳ ಸಾಧನೆಯ ವಿವರ.
೯೦		ಚಂದ್ರ ಮತ್ತು ನೀವು	ಖಗೋಳ ಜ್ಞಾನ ಪರಿಚಯ	'ರಾಧಾಕೃಷ್ಣರಾವ್'	ಮಾನವ ಮನಸ್ಸಿನ ಮೇಲಿನ ಪರಿಣಾಮ.
೯೧		ಸುಳಿಗಾಳಿಯ ಹುಚ್ಚಾಟಗಳು	ಪ್ರಕೃತಿ ವಿಸ್ಮಯ ಪರಿಚಯ	'ಮುರಳೀಧರರಾವ್'	
೯೨		ಒಂದೊಂದು ಮಗುವಿನಲ್ಲಿ ಒಂದೊಂದು ಹಿರಿಮೆ	ವಿವೇಚನೆ	'ನಿವೃತ್ತ ಶಿಕ್ಷಕ'	ಸ್ವಾನುಭವದ ವಿವರ
	೧೯೫೯ ಸೆಪ್ಟೆಂಬರ್-೨೭				
೯೩		ಸೌದಿ ಅರೇಬಿಯಾ	ಪರಿಚಯ	'ರಾಧಾಕೃಷ್ಣರಾವ್'	
೯೪		ಸಸ್ಯಗಳಿಗೆ ಸಂಗೀತ ಮೆಚ್ಚುತ್ತದೆಯೇ?	ಸಂಶೋಧನಾ ವಿಚಾರ	'ರಾಧಾಕೃಷ್ಣರಾವ್'	
೯೫		ಎಚ್ಚರಿಕೆ : ಪೆನ್ಸಲಿನ್	ವೈದ್ಯಕೀಯ ವಿಚಾರ	ಪಾ.ವೆಂ.	ಆರೋಗ್ಯಕ್ಕೆ ಸಂದೇಶ
	೧೯೫೯ ಅಕ್ಟೋಬರ್-೨೮				
೯೬		ಎರಡು ತಲೆಯ ನಾಯಿಗಳು	ಪ್ರಾಣಿ ಪರಿಚಯ ಶೋಧನೆ	'ಮುರಳೀಧರ'	
೯೭		ಭೂತಾನಕ್ಕೆ ಆಧುನಿಕತೆ ಬರುತ್ತಿದೆ	ಐತಿಹಾಸಿಕ ನೆನಪು	ಪಾ.ವೆಂ.	ಪ್ರಶ್ಯಾನ್ನರ ಹೊಸ ಪ್ರಯೋಗ
	೧೯೫೯ ನವೆಂಬರ್-೨೯				
೯೮		ಮನ್ನಾಥ ಪದ್ಮನಾಭನ್	ವ್ಯಕ್ತಿ ಪರಿಚಯ	ಪಾ.ವೆಂ.	ಕೇರಳದಲ್ಲಿ ಕಮ್ಯುನಿಸ್ಟರನ್ನು ಸೋಲಿಸಿದ ವೃದ್ಧ ನಾಯಕ.
೯೯		ಗಣಪತಿದಾಸಂ	ಹರಟೆ	ಲಾಂಗೂಲಾಚಾರ್ಯ	
೧೦೦		ಜೀವಂತ ಬ್ಯಾಟರಿ : ವಿದ್ಯುತ್ ಈಲ್	ವಿಜ್ಞಾನ ಶೋಧ	'ಮುರಳೀಧರ'	
೧೦೧		ನಯಾಗಾರದ ದುಸ್ಸಾಹಸಿ	ಸಾಹಸ ಪರಿಚಯ	'ಮುರಳೀಧರ'	

			ರಷ್ಯಾ ಮತ್ತು ಚೀನಾ ಮಿತ್ರರೇ ಪ್ರತಿಸ್ಪರ್ಧಿಗಳೇ?	ರಾಜಕೀಯ ವಿಶ್ಲೇಷಣೆ	ಪಾ.ವೆಂ.	ಎರಡು ಕಮ್ಯುನಿಸ್ಟ್ ರಾಷ್ಟ್ರಗಳ ಅಸೂಯೆ.
	೧೯೫೯	ಡಿಸೆಂಬರ್-೪೦				
೧೦೩			ವಿಮಾನದಿಂದ ಜಿಗಿದ ಮಹಿಳೆ: ಡಾ.ಗೀತಾ ಚಂದಳ	ಸಾಹಸ ಪರಿಚಯ	'ಮುರಳೀಧರ'	೨೪ ವರ್ಷದ ಬಂಗಾಳಿ ಮಹಿಳೆ ತನ್ನನ್ನು ಪ್ರಯೋಗಕ್ಕೆ ಒಳಪಡಿಸಿದ್ದು
೧೦೪			ಡಾ.ವರ್ನರ್ ಫೋರ್ಸಮನ್ ಹೃದಯದ ಮನುಷ್ಯ	ವೈದ್ಯಕೀಯ ಪರಿಚಯ	ರಾಧಾಕೃಷ್ಣರಾವ್	ಉಜ್ವಲ ಜೀವನದ ಏಳುಬೀಳು
೧೦೫			ಸಿ.ಪಿ. ರಾಮಸ್ವಾಮಿ ಅಯ್ಯರ್	ವ್ಯಕ್ತಿ ಪರಿಚಯ	ಪಾ.ವೆಂ.	
೧೦೬			ಹೆಂಗಸರನ್ನು ಹೇಗೆ ಅರ್ಥಮಾಡಿಕೊಳ್ಳಬೇಕು	ಹರಟೆ	ಲಾಂಗೂಲಾಚಾರ್ಯ	
೧೦೭			ಕಳೆದು ಹೋದ ಗ್ರಹ	ಖಗೋಳ ಜ್ಞಾನ ಪರಿಚಯ	'ವಿಜ್ಞಾನಪ್ರಿಯ'	
೧೦೮			ಡಾ. ಆಲ್ಬರ್ಟ್ ಶ್ವೈತ್ಸರ್	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	ಜೀವ ದಯಾಧರ್ಮದ ಕೈವಾರಿ
	೧೯೬೦	ಜನವರಿ-೪೧				
೧೦೯			ಫಿನ್‌ಲ್ಯಾಂಡ್ ಚರಿತ್ರೆವಂತರ ನಾಡು	ದೇಶ ಪರಿಚಯ	'ಮುರಳೀಧರ'	
೧೧೦			ಹೌದಿನಿಯ ಅಪ್ರತಿಮ ಜಾದು	ಸಾಹಸ	'ರಾಧಾಕೃಷ್ಣರಾವ್'	ಜಗತ್ತಿನ ಪ್ರಸಿದ್ಧ ಜಾದುಗಾರ
	೧೯೬೦	ಫೆಬ್ರುವರಿ-೪೨				
೧೧೧			ನಿಮ್ಮ ಚೇಷ್ಟೆಗಳು ನಿಮ್ಮ ಗುಟ್ಟನ್ನು ಹೊರಗೆಡಹುತ್ತವೆ	ಮನೋವಿಜ್ಞಾನ	'ಮನೋವಿಜ್ಞಾನಿ'	
೧೧೨			ಡಿನೋಸಾರಗಳ ಅದ್ಭುತ ಪ್ರಪಂಚ	ಪ್ರಾಣಿಲೋಕ-ವಿಸ್ಮಯ	'ರಾಧಾಕೃಷ್ಣರಾವ್'	
೧೧೩			ಅಮರುಕನ ಶೃಂಗಾರ ಸೌರಭ	ಕಾವ್ಯ ಕೃತಿ ಪರಿಚಯ	ಪಾ.ವೆಂ.	ದಾಂಪತ್ಯ ಜೀವನದ ಬಗ್ಗೆ
೧೧೪			ಜಗದ್ಗುರುವಾಗಲೊಲ್ಲದ ಜೆ. ಕೃಷ್ಣಮೂರ್ತಿ	ವ್ಯಕ್ತಿ ಚಿತ್ರ	ಪಾ.ವೆಂ.	ಭಾರತೀಯ ತತ್ವಜ್ಞಾನಿಯ ಜೀವನ
	೧೯೬೦	ಮಾರ್ಚ್-೪೩				
೧೧೫			ಬರ್ಮಾದ ದೊಡ್ಡ ಉ.ನು.	ವ್ಯಕ್ತಿ ಪರಿಚಯ	ಪಿ.ವಿ. ಆಚಾರ್ಯ	ನಾಟಕಕಾರ ಪ್ರಧಾನಿಯಾದ ಪ್ರಸಂಗ
೧೧೬			ಸ್ವಲ್ಪ ಅಸ್ವಸ್ಥವಾಗಿದೆಯೇ? ಆದರೂ ಶುಭ	ವೈದ್ಯಕೀಯ ವಿಚಾರ	'ರಾಧಾಕೃಷ್ಣ'	
೧೧೭			ಇಸ್ಲಾಂ ಧರ್ಮದ ಕಥೆ	ಧರ್ಮ ಪರಿಚಯ	ಪಾ.ವೆಂ.	ಇಸ್ಲಾಂ ಧರ್ಮದ ಧ್ಯೇಯದ ಬಗ್ಗೆ
೧೧೮			ಆರ್ಥಿಕ ಭೂತಲ ಸ್ವರ್ಗ: ಸ್ವೀಡನ್	ದೇಶ ಪರಿಚಯ	'ರಾಧಾಕೃಷ್ಣರಾವ್'	ಕಲ್ಯಾಣ ರಾಜ್ಯಪರಿಪೂರ್ಣವಸ್ಥೆ ಮುಟ್ಟಿದೆ.
	೧೯೬೦	ಎಪ್ರಿಲ್-೪೪				
೧೧೯			ಬಿಳಿಯ ಕನ್ನಡಿಗ : ಎ.ಸಿ. ಫ್ಯಾರನ್	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	ಕರ್ನಾಟಕ ಕಾಲೇಜಿನ ವಿದೇಶೀ ಪ್ರಾಚಾರ್ಯರ ಹೃದಯವಂತಿಕೆ.

೧೨೧			ಕಾಲರಾಯನ ಕುಟಿಲತನ	ಕಾಲಮಾನ ಆಧುನಿಕ ಪರಿಚಯ	'ಮುರಳೀಧರ'	
೧೨೨			ಮಧುಮೇಹ ರೋಗ	ವೈದ್ಯಕೀಯ ವಿವರಣೆ	ಪಾ.ವೆಂ.	ಆರೋಗ್ಯ ಸಂದೇಶ
	೧೯೬೦	ಮೇ-೪೫				
೧೨೩			ಟೈಪ್‌ರೈಟರ್ ನಿರ್ಮಿಸಿದ ಕಟ್ಟಿಯವರು	ವ್ಯಕ್ತಿ ಪರಿಚಯ	ಪಿ. ವೆಂಕಟರಮಣ ಆಚಾರ್ಯ	ಕನ್ನಡಿಗನ ತಂತ್ರಜ್ಞಾನಿಯ ವ್ಯಕ್ತಿತ್ವ
೧೨೪			ರಷ್ಯಾದ ಅದ್ಭುತ ಹವಾಯೋಜನೆ	ಸಂಶೋಧನ ಪರಿಚಯ	'ಮುರಳೀಧರ'	
೧೨೫			ನಾನು ಕವಿತೆ ಬರೆಯ ತೊಡಗಿದ್ದು	ಹಾಸ್ಯ ಲೇಖನ	ಲಾಂಗೂಲಾಚಾರ್ಯ	
೧೨೬			ಬಿ.ಸಿ.ಜಿ. ಎಂದರೇನು?	ವೈದ್ಯಕೀಯ ವಿಶ್ಲೇಷಣೆ	'ರಾಧಾಕೃಷ್ಣರಾವ್'	ಚಚ್ಚುಮದ್ದಿನ ವಿವರಣೆ
೧೨೭			ದಕ್ಷಿಣ ಆಫ್ರಿಕಾದಲ್ಲಿ ಕೋಲಾಹಲ	ರಾಜಕೀಯ ವಿಶ್ಲೇಷಣೆ	ಪಾ.ವೆಂ. ಆಚಾರ್ಯ	ಚೌತುರ್ವರ್ಣ್ಯ ಪದ್ಧತಿ ಬಗ್ಗೆ
	೧೯೬೦	ಜೂನ್-೪೬				
೧೨೮			ಕೇನ್ಯಾದ ಟಾಂ. ಬೋಯ	ವ್ಯಕ್ತಿ ಪರಿಚಯ	'ಮುರಳೀಧರ'	
೧೨೯			'ಕೊಡೆ ಎಂಬರ್ ಆತಪತ್ರವನ್'	ಹರಟೆ	ಲಾಂಗೂಲಾಚಾರ್ಯ	ಹಳಗನ್ನಡ ನುಡಿ ಚಾತುರ್ಯ ವಿವರಣೆ
೧೩೦			ಬೆಟ್ಟಗೇರಿ ಕೃಷ್ಣಶರ್ಮರು	ವ್ಯಕ್ತಿ ಪರಿಚಯ	'ಅಜ್ಞಾತ'	ಆನಂದಕಂದರ ಸಾಧನೆ-ವ್ಯಕ್ತಿತ್ವ
೧೩೧			ಮಕ್ಕಳ ಕಥೆಗಳ ರಾಜ : ಹ್ಯಾಂಗ್ಸ್ ಅಂಡರ್‌ಸನ್	ಸಾಹಸ ಪರಿಚಯ	ಪಾ.ವೆಂ.	ಯಕ್ಷಿಣಿ ಕಥೆಗಾರ
೧೩೨			ಅಟ್ಲಾಂಟೀಸ್ ಮುಳುಗಿ ಹೋದ ಸಾಮ್ರಾಜ್ಯ	ವಿದ್ಯಮಾನ ಪರಿಚಯ	'ಮುರಳೀಧರ'	
೧೩೩			ಬಾಲಿದ್ವೀಪದ ಮಹಾನೃತ್ಯ ಬಲಿ	ವಿಸ್ಮಯ	'ರಾಧಾಕೃಷ್ಣರಾವ್'	
೧೩೪			ಕಾರಿಲ್ ಚಸ್ಮನ್ನನ ವಿಚಿತ್ರ ಪ್ರಕರಣ	ಘಟನಾತ್ಮಕ ಪರಿಚಯ	ಪಿ.ವಿ. ಆಚಾರ್ಯ	೧೮ ವರ್ಷಗಳವರೆಗೆ ಮರಣ ದಂಡನೆ ತಪ್ಪಿಸಿದ ಕೈದಿಯ ವೃತ್ತಾಂತ.
	೧೯೬೦	ಜುಲೈ-೪೭				
೧೩೫			ತುರ್ಕಿ: ಪೂರ್ವ ಪಶ್ಚಿಮಗಳ ಸಂಧಿ	ದೇಶ ಪರಿಚಯ	ಪಿ.ವಿ. ಆಚಾರ್ಯ	
೧೩೬			ಎಕಟರಿನಾ ಪುರ್ಟ ಸೇವಾ:ರಶಿಯಾದ ಪ್ರಬಲ ಮಹಿಳೆ	ವ್ಯಕ್ತಿ ಪರಿಚಯ	ಪಾ.ವೆಂ.	ರಷ್ಯಾದ ವರಿಷ್ಠ ಮಂಡಳಿಯ ಸ್ಥಾನ
೧೩೭			ಸೀರೆ ಮತ್ತು ಮಹಾಭಾರತ	ಒಂದು ಹಸಿ ಹರಟೆ	ಲಾಂಗೂಲಾಚಾರ್ಯ	
೧೩೮			ಸಿದ್ಧವಾಗಿದೆ ಭೀಕರವಾದ ಹೊಸ ಅಸ್ತ್ರ	ತಂತ್ರಜ್ಞಾನ ಪರಿಚಯ	ರಾಧಾಕೃಷ್ಣರಾವ್	ಅಣುಬಾಂಬುವಿನ ಬಗ್ಗೆ
	೧೯೬೦	ಆಗಸ್ಟ್-೪೮				
೧೩೯			ನಿರಾಶ್ರಿತರ ಆಶ್ರಯ ಧಾತ : ಪಾದರ್‌ಫಿಯರ್	ವ್ಯಕ್ತಿ ಪರಿಚಯ	ಪಾ.ವೆಂ.	ಹರಿಜನ ಸಮಸ್ಯೆಯ ನಿವಾರಕರು
೧೪೦			ಕಗ್ಗಲ್ಲ ಕನಸು ಮಹಾಬಲಿಪುರಂ	ಶಿಲ್ಪಕಲಾ ಪರಿಚಯ	ರಾಧಾಕೃಷ್ಣರಾವ್	ಶಿಲ್ಪಿಗಳ ಸಾಧನೆ
೧೪೧			ನಿಸರ್ಗದ ಜೀವಂತ ಬೈರಿಗೆ : ಮರಕುಟಿಗ	ಪಕ್ಷಿಜ್ಞಾನ	'ಮುರಳೀಧರ'	

			[illegible]	ರಾಜಕೀಯ ವಿಶ್ಲೇಷಣೆ	ಪಾ.ವೆಂ.	ಕಮ್ಯುನಿಸ್ಟ್ ಆಡಳಿತ ವೈಖರಿ
	೧೯೬೦	ಸೆಪ್ಟೆಂಬರ್-೨೯				
೧೪೩			ಬಾಲ್ಜಾಕ್	ವ್ಯಕ್ತಿ ಪರಿಚಯ	ಪಾ.ವೆಂ.	ಜಗತ್ತಿನ ಶ್ರೇಷ್ಠ ಕಾದಂಬರಿಗಾರ
೧೪೪			ಕಾಂಗೋ-ನಾಡು-ಜನ ಮತ್ತು ರಾಜಕಾರಣ	ದೇಶ ಪರಿಚಯ	ಪಾ.ವೆಂ.	
೧೪೫			ನವೀನ ಕಾಯಕಲ್ಪ	ಶೋಧ	'ರಾಧಾಕೃಷ್ಣ'	
೧೪೬			ಯುರೋಪಿನ ಕುಂಭಕರ್ಣ: ವಿಜು ವಿಯಸ್ (ಇಟಲಿ)	ಪರ್ವತ ಪರಿಚಯ	'ಮುರಳೀಧರ'	ಜ್ವಾಲಾಮುಖಿ
೧೪೭			ನೀವು ಬುದ್ಧಿಶಾಲಿಗಳೇ ಆಗಬೇಕೆಂದಿಲ್ಲ	ಮಾನವಿಕ ವಿವೇಚನೆ	ಪಾ.ವೆಂ.	ಮನುಷ್ಯ ಗುಣಗಳ ಬಗ್ಗೆ
	೧೯೬೦	ಅಕ್ಟೋಬರ್-೩೦				
೧೪೮			ಭಾರತರತ್ನ ವಿಶ್ವೇಶ್ವರಯ್ಯನವರು	ವ್ಯಕ್ತಿ ಪರಿಚಯ	ಪಿ.ವಿ. ಆಚಾರ್ಯ	ಕರ್ನಾಟಕ ಅಭಿವೃದ್ಧಿಯ ಶಿಲ್ಪಿ
೧೪೯			ಸಂಗೀತದ ಬಾಲಾದ್ಭುತ ಮೋಜಾರ್ಟ್	ವ್ಯಕ್ತಿ ಪರಿಚಯ	ಪಿ.ವಿ. ಆಚಾರ್ಯ	
೧೫೦			ಇಡ್ಲಿ ಶಾಸ್ತ್ರ	ಹರಟೆ	'ಮುರಳೀಧರ'	
೧೫೧			ಭೂಕಂಪಗಳು	ವಿಶ್ವ ವಿದ್ಯಮಾನ ಪರಿಚಯ	'ಮುರಳೀಧರ'	
೧೫೨			ವಿಶ್ವಶಾಂತಿ ದೂತ ಫಾದರ್ ರಾಲ್ಫ್ ಬುಂಚ್	ವ್ಯಕ್ತಿ ಪರಿಚಯ	ಪಾ.ವೆಂ.	ಶಾಂತಿ ಪ್ರತಿಪಾದಕ
		ನವೆಂಬರ್-೩೧				
೧೫೩	೧೯೬೦		ಶ್ರೀಮತಿ ವಿಜಯಲಕ್ಷ್ಮೀ ಪಂಡಿತ	ವ್ಯಕ್ತಿ ಪರಿಚಯ	ಪಾ.ವೆಂ.	ಜಗತ್ತಿನ ಶ್ರೇಷ್ಠ ಮಹಿಳೆ
	೧೯೬೦	ಡಿಸೆಂಬರ್-೩೨				
೧೫೪			ಅಮೇರಿಕಾದ ಅಧ್ಯಕ್ಷ ಜಾನ್ ಕೆನಡಿ	ವ್ಯಕ್ತಿ ಪರಿಚಯ	ಪಾ.ವೆಂ.	ಡೆಮಾಕ್ರಟಿಕ್ ಪಕ್ಷದ ತರುಣ ರಾಜಕಾರಣಿಯ ವ್ಯಕ್ತಿತ್ವ
೧೫೫			ಸಂಗೀತ ಪಂಡಿತ ಭೀಮಸೇನ ಜೋಶಿ	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	'ಮಹಾರಾಷ್ಟ್ರೀಯ'ನಾದ ಕನ್ನಡ ಕಲಾವಿದನ ಜೀವನಯಾನ.
೧೫೬			ನೀವು ನಿದ್ದೆಯಲ್ಲಿ ನಡೆಯುತ್ತೀರಾ?	ಮನೋವಿಶ್ಲೇಷಣೆ	ರಾಧಾಕೃಷ್ಣರಾವ್	
೧೫೭			ಬರಲಿವೆ ಮಾತನಾಡುವ ಕಾಗದಗಳು	ಶೋಧನಾ ವಿಸ್ಮಯ	'ಸಾಯಿನ್ಸ್ ಡೈಜಸ್ಟ್'	
೧೫೮			ನಕ್ಕು ಆರೋಗ್ಯವಂತರಾಗಿರಿ	ಮನೋದೈಹಿಕ ಜ್ಞಾನ	'ಸೈಕಾಲಜಿ'	
೧೫೯			ಇವರು ವಿಚಿತ್ರ ಮನುಷ್ಯರು	ವಿಸ್ಮಯ	'ಸೈಕಾಲಜಿ'	
	೧೯೬೧	ಜನವರಿ-೩೩				
೧೬೦			ಸಸ್ಯಗಳು ಮಾನವೀಯವಾಗಿವೆ	ಪ್ರಕೃತಿ ವಿಸ್ಮಯ	'ಮುರಳೀಧರ'	
೧೬೧			ಹವಳದ ಮಹಾಶಿಲ್ಪ	ಅನ್ವಯಿಕ ವಿಜ್ಞಾನ	ಪಾ.ವೆಂ.	

	೧೯೬೧	ಫೆಬ್ರವರಿ-೫೪			
೧೬೨			ಚಕ್ರವರ್ತಿ ರಾಜಗೋಪಾಲಚಾರ್ಯ	ವ್ಯಕ್ತಿ ಪರಿಚಯ	ರಾಧಾಕೃಷ್ಣರಾವ್	ಲೇಖಕ-ಚಿಂತಕ-ರಾಜನೀತಿಜ್ಞ ವ್ಯಕ್ತಿ
೧೬೩			ಚಿಂತಾರೋಗಕ್ಕೊಂದು ರಾಮಬಾಣ	ಮನೋದೈಹಿಕ ಜ್ಞಾನ	'ಶಶಿ ಬಂದುಭ'	
	೧೯೬೧	ಮಾರ್ಚ್-೫೫				
೧೬೪			ಸಕ್ಕರೆಯ ದ್ವೀಪ	ದೇಶ ಪರಿಚಯ	'ಮುರಳೀಧರ'	
೧೬೫			ಶುಕ್ರಗ್ರಹ ಹೇಗೆ ಹುಟ್ಟಿತು?	ಖಗೋಳ ಜ್ಞಾನ	ಪಾ.ವೆಂ.	
	೧೯೬೧	ಎಪ್ರಿಲ್-೫೬				
೧೬೬			ಐನ್‌ಸ್ಟನ್ ಚರ್ಚಿಲ್ಲರು	ವ್ಯಕ್ತಿ ಪರಿಚಯ	ಪಾ.ವೆಂ.	ಬ್ರಿಟನಿನ ಕಾರ್ಮಿಕ ಪ್ರಧಾನ ಮಂತ್ರಿಯ ಜೀವನ ಕಥೆ.
೧೬೭			ಪದ್ಮಶ್ರೀ ಸರದಾರ ವೀರನ ಗೌಡರು	ವ್ಯಕ್ತಿ ಪರಿಚಯ	ಪಿ.ವಿ. ಆಚಾರ್ಯ	ಹರಿಜನ ಕೈವಾರಿ
೧೬೮			ಕಾನ್‌ಸ್ಟಂಟೀನ್ ಝಿಯೋಲ್ಕೋವಸ್ಕಿ	ವಿಸ್ಮಯ	'ರಾಧಾಕೃಷ್ಣರಾವ್'	ಗ್ರಹಾಂತರ ಯಾನದ ಪಿತಾಮಯ
೧೬೯			ಸ್ತ್ರೀ ರಾಸಾಯನ ಶಾಸ್ತ್ರ	ಹರಟೆ	ಲಾಂಗೂಲಾಚಾರ್ಯ	
೧೭೦			ಕ್ಲೆಮೆಂಟ್ ಅಟ್ಲಿ	ವ್ಯಕ್ತಿ ಪರಿಚಯ	ಪಾ.ವೆಂ.	ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಬ್ರಿಟನ್‌ನ ಪ್ರಧಾನಿ-ಲೇಬರ್ ಪಾರ್ಟಿ ಮುಖಂಡ.
	೧೯೬೧	ಮೇ-೫೭				
೧೭೧			ಮೇಪ್ಲೈ: ಒಂದು ದಿನದ ಬೆಡಗು	ಸಸ್ಯಜ್ಞಾನ ಪರಿಚಯ	'ಮುರಳೀಧರ'	
೧೭೨			ನಾಮಾಂತರಕರಣ	ಹರಟೆ	ಲಾಂಗೂಲಾಚಾರ್ಯ	
	೧೯೬೧	ಜೂನ್-೫೮				
೧೭೩			ಇಟಲಿಯ ಗಾಂಧಿ ದಾನಿಲೊ ಡೋಲ್ಸಿ	ವ್ಯಕ್ತಿ ಪರಿಚಯ	'ಮುರಳೀಧರ'	
೧೭೪			ರಿಡರ್ಸ್ ಡೈಜಸ್ಟ್‌ನ ಕಥೆ	ಪತ್ರಿಕಾ ಸಾಧನೆ ಪರಿಚಯ	ಪಾ.ವೆಂ.	ತನ್ನ ಪತ್ರಿಕಾ ವ್ಯವಸಾಯಕ್ಕೆ ಪ್ರೇರಕವಾದ ಪತ್ರಿಕೆ ಕುರಿತು ಅವಲೋಕನ.
	೧೯೬೧	ಜುಲೈ-೫೯				
೧೭೫			ಡಾ. ಎಸ್. ರಾಧಾಕೃಷ್ಣನ್	ವ್ಯಕ್ತಿ ಪರಿಚಯ	ಪಾ.ವೆಂ.	
೧೭೬			ಅನ್ಯಲೋಕದಲ್ಲಿ ಜೀವಿಗಳಿಗಾಗಿ ಶೋಧ	ಖಗೋಳ ಶೋಧನೆ	ರಾಧಾಕೃಷ್ಣರಾವ್	

೧೭೭			ಶ್ರೀ ಮಲ್ಲಿಕಾರ್ಜುನ ಮನ್ಸೂರರು	ವ್ಯಕ್ತಿ ಪರಿಚಯ	‘ಕಸ್ತೂರಿ ಪ್ರತಿನಿಧಿ’	ಸಂಗೀತ ಸಾಧಕ
೧೭೮			ಭಾರತೀಯನಾದ ಬ್ರಿಟಿಷ್ ವಿಜ್ಞಾನಿ: ಜೆ.ಬಿ.ಎಸ್. ಹ್ಯಾಲ್ಡನ್.	ವ್ಯಕ್ತಿ ಪರಿಚಯ	ಪಾ.ವೆಂ.	ಇಂಗ್ಲೇಂಡನ್ನು ಖಂಡಿಸಿದವನು
೧೭೯			ಸ್ನಾಯುಗಳು ಮತ್ತು ನೀವು	ದೇಹ ವಿಜ್ಞಾನ ಪರಿಚಯ	‘ಮುರಳೀಧರ’	
೧೮೦			ಎರಡಾಣೆ	ಸಣ್ಣ ಕಥೆ	‘ಶೀನ’	
	೧೯೬೧	ಸೆಪ್ಟೆಂಬರ್–೬೧				
೧೮೧			ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ	ವ್ಯಕ್ತಿ ಪರಿಚಯ	ಪಾ.ವೆಂ.	
೧೮೨			ವರಟೀ ಹಕ್ಕಿಗಳ ಸಾಮಾಜಿಕ ಜೀವನ	ಪಕ್ಷಿಲೋಕ	ರಾಧಾಕೃಷ್ಣರಾವ್	
೧೮೩			ಕನಸು ಕಾಣದಿದ್ದರೆ ಹುಚ್ಚು ಹಿಡಿದೀತು	ಮನೋವಿಜ್ಞಾನ	‘ಅನುವಾದ’	ಆಧುನಿಕ ಶೋಧಗಳ ವರದಿ
	೧೯೬೧	ಅಕ್ಟೋಬರ್–೬೨				
೧೮೪			ಹೃದಯ ಸ್ತಂಭನವಾದಾಗ ಸಹಾಯಹಸ್ತ	ಸಾಮಾನ್ಯಜ್ಞಾನ ಪರಿಚಯ	‘ರೀಡರ್ಸ್ ಡೈಜಸ್ಟ್’	ಆರೋಗ್ಯ ಸಂದೇಶ
೧೮೫			ಸಸ್ಯಗಳು ನಿದ್ರಿಸುತ್ತವೆ	ಸಸ್ಯಜ್ಞಾನ ಪರಿಚಯ	‘ಸರಸ್ವತಿಯಿಂದ’	
೧೮೬			ಮಹಾದೇಶ ಭಕ್ತ ಗ್ಯಾರಿಬಾಲ್ಡಿ	ವ್ಯಕ್ತಿ ಪರಿಚಯ	ಪಾ.ವೆಂ.	ಇಟಲಿ ದೇಶದ ಹೋರಾಟಗಾರ
	೧೯೬೧	ನವೆಂಬರ್–೬೩				
೧೮೭			ಆದರ್ಶ ರೈತ ಚೆನ್ನಮಲ್ಲಪ್ಪ ಅಸುಂಡಿಯವರು	ವ್ಯಕ್ತಿ ಸಾಧನೆ ಪರಿಚಯ	ಪಾ.ವೆಂ.	ಧಾರವಾಡದ ಅತಿದೊಡ್ಡ ರೈತ
	೧೯೬೧	ಡಿಸೆಂಬರ್–೬೪				
೧೮೮			ವಾಚಾಳಿಗಳ ನಾಡು ಅಯರ್ಲಂಡ್	ದೇಶ ಪರಿಚಯ	‘ಮುರಳೀಧರ’	
೧೮೯			ಆತ ನಿಜವಾಗಿ ಮಗುವನ್ನು ಕೊಂದನೆ?	ಘಟನಾತ್ಮಕ ಪರಿಚಯ	ಪಾ.ವೆಂ.	ವಿಸ್ಮಯ
	೧೯೬೨	ಜನವರಿ–೬೫				
೧೯೦			ಚೀನಾದಲ್ಲಿ ಬರಗಾಲ	ದೇಶ ಸ್ಥಿತಿ–ಗತಿ ಪರಿಚಯ	....	
೧೯೧			ಪತ್ತೆದಾರ ಸರದಾರನಾದ ಕಳ್ಳ	ಘಟನಾತ್ಮಕ ಪರಿಚಯ	‘ಮುರಳೀಧರ’	
೧೯೨			ಅವರು ಕಾಲ ಪ್ರವಾಹದಲ್ಲಿ ೧೧೨ ವರ್ಷ ಹಿಂದೆ ಜಾರಿದರು.	ಕೌತುಕ	ಪಾ.ವೆಂ.	
೧೯೩			ನನ್ನ ಹೆಂಡತಿ	ಹರಟೆ	ಲಾಂಗೂಲಾಚಾರ್ಯ	

೧೯೪			ಶಿರಾಸಂದ ಅವಳಿಗಳ ಶಸ್ತ್ರಕ್ರಿಯೆ	ವೈದ್ಯಲೋಕದ ಸಾಧನೆ ಪರಿಚಯ	ಪಾ.ವೆಂ.	
೧೯೫			ಆ ನಿರುದ್ಯೋಗಿಯ ಕಥೆ	ಸಣ್ಣ ಕಥೆ	ಪಿ. ವೆಂಕಟರಮಣಚಾರ್ಯ	
೧೯೬			ಇಸ್ರೇಲ್ : ಯಹೂದ್ಯರ ನನಸಾದ ಕನಸು	ದೇಶ ಪರಿಚಯ	'ಮುರಳೀಧರ'	
	೧೯೬೨	ಮಾರ್ಚ್-೬೭				
೧೯೭			ಯವನಿಯನ್ನು ವರಿಸಿದ ಬ್ರಾಹ್ಮಣ ಕವಿ: ಜಗನ್ನಾಥ ಪಂಡಿತ.	ಸಂಸ್ಕೃತ ಪಂಡಿತ ಕವಿ ಪರಿಚಯ	ಪಾ.ವೆಂ. ಆಚಾರ್ಯ	ದುರಂತ ಜೀವನದ ಕಥೆ
	೧೯೬೨	ಏಪ್ರಿಲ್-೬೮				
೧೯೮			ಜ್ಯೋತಿಷ್ಯ: ಮಿಥ್ಯವೋ-ಮೋಸವೋ-ಸತ್ಯವೋ	ಜ್ಞಾನ ವಿಶ್ಲೇಷಣೆ	ಪಾ.ವೆಂ.	
	೧೯೬೨	ಮೇ-೬೯				
೧೯೯			ಮಾತೆಯರಿಗೆ ಮಂಗನಿಂದ ಕಿವಿಮಾತು	ವಿವೇಚನೆ	ಪಾ.ವೆಂ.	
೨೦೦			ಶ್ರೀಮದ್ರಾಮಾಯಣ ದರ್ಶನಂ	ಹರಟೆ	ಲಾಂಗೂಲಾಚಾರ್ಯ	
	೧೯೬೨	ಜೂನ್-೭೦				
	೧೯೬೨	ಜುಲೈ-೭೧				
೨೦೧			ಶರೀರ ವಿಜ್ಞಾನಿ ಪೌಲೋವ್	ವ್ಯಕ್ತಿ ಪರಿಚಯ	ಪಾ.ವೆಂ.	ರಶಿಯನ್ ದೇಶದವನು
	೧೯೬೨	ಆಗಸ್ಟ್-೭೨				
೨೦೨			ಕಡಲಿನ ಬುದ್ಧಿವಂತ ಡಾಲ್ಫಿನ್	ಪ್ರಾಣಿಲೋಕ ಪರಿಚಯ	'ರಾಧಾಕೃಷ್ಣರಾವ್'	
೨೦೩			ದಾರಿ ತಪ್ಪಿದ ಮಗ	ಸಣ್ಣ ಕಥೆ	'ರಾಧಾಕೃಷ್ಣರಾವ್'	ಅಮೇರಿಕಾದಲ್ಲಿ ನಡೆದ ಸತ್ಯಘಟನೆ
೨೦೪			ಮಂಗ ಮತ್ತು ಮಾನವ	ಸಣ್ಣ ಕಥೆ	'ವಿದ್ಯಾರ್ಥಿ'	
	೧೯೬೨	ಸೆಪ್ಟೆಂಬರ್-೭೩				
೨೦೫			ಶ್ರೀಮತಿ ರೂಜ್‌ವೆಲ್ಟ್	ವ್ಯಕ್ತಿ ಪರಿಚಯ	ಪಾಂ.	ಮಹಾಪುರುಷನ ಮಹಾಪತ್ನಿ
೨೦೬			೫ ರೂಪಾಯಿ ಕೊಟ್ಟರೆ ವಜ್ರ	ವಿಸ್ಮಯ ಘಟನೆ	'ರಾಧಾಕೃಷ್ಣರಾವ್'	
೨೦೭			ಪ್ರಯೋಗ ನಳಿಕೆಯಲ್ಲಿ ಶಿಶು	ಪ್ರಜನನ ವೈದ್ಯಕೀಯ ಶೋಧ	'ಮುರಳೀಧರ'	ಪ್ರನಾಳ ಶಿಶು
	೧೯೬೨	ಅಕ್ಟೋಬರ್-೭೪				
೨೦೮			ಬುಂಗಾ ಬುಂಗಾ ಮತ್ತು ಬ್ರಿಟೀಷ ನೌಕಾಪಡೆ	ವಿಸ್ಮಯ	'ಮುರಳೀಧರ'	
೨೦೯			ಈ ನೊರಜು ಅತ್ಯಂತ ಉಪಕಾರಿ	ಕೀಟ ಜ್ಞಾನ ಪರಿಚಯ	'ರಾಧಾಕೃಷ್ಣರಾವ್'	

೨೧೦			ಶ್ರೀ ತೋನ್ಸೆ ಅನಂತ ಪೈ	ವ್ಯಕ್ತಿ ಪರಿಚಯ	ಪಾ.ವೆಂ.	ಕೇಂದ್ರ ಸಚಿವನಾದ ಕನ್ನಡಿಗ
೨೧೧			ಥಲಿಡೋನೈಡ್ ಬಗ್ಗೆ ಎಚ್ಚರಿಕೆ	ವಿಜ್ಞಾನ	'ಮುರಳೀಧರ'	
	೧೯೬೨	ಡಿಸೆಂಬರ್-೭೬				
೨೧೨			ಭೂ ಪ್ರದಕ್ಷಿಣೆ ಮಾಡಿದ ಜೇಮ್ಸ್ ಕುಕ್	ಸಾಹಸ ಪರಿಚಯ	'ರಾದಾಕೃಷ್ಣರಾವ್'	
೨೧೩			ಟೂರ್-ದಿ-ಫ್ರಾನ್ಸ್	ನಗರ ಪರಿಚಯ	'ಮುರಳೀಧರ'	
	೧೯೬೩	ಜನವರಿ -೭೭				
೨೧೪			ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ	ವಿಚಾರ	'ರಾದಾಕೃಷ್ಣರಾವ್'	
೨೧೫			ಹಿಡಿದ ಪಟ್ಟು ಬಿಡದ ದಂಡನ್	....	'ಮುರಳೀಧರ'	
	೧೯೬೩	ಫೆಬ್ರವರಿ-೭೮				
೨೧೬			ಬೆಳ್ಳುಳ್ಳಿ ಕುಷ್ಠರೋಗ ನಿವಾರಕವೇ	ಆರೋಗ್ಯ ವಿಚಾರ	'ವಿಜ್ಞಾನಪ್ರಿಯ'	
೨೧೭			ಬಂಗಾರದ ಆದ್ಯಂತ	ಮಾಹಿತಿ ವಿವರ	'ರಾಧಾಕೃಷ್ಣರಾವ್'	
೨೧೮			ತಾಹಿತಿ : ಅಪ್ಸರ ಲೋಕ	ದೇಶ ಪರಿಚಯ	ಪಾ.ವೆಂ.	
	೧೯೬೩	ಮಾರ್ಚ್-೭೯				
೨೧೯			ಟ್ರಸ್ಟನ ಡ ಕುನ್ಹಾದ	ವಿಚಿತ್ರ ಕಥೆ	'ರಾಧಾಕೃಷ್ಣರಾವ್'	
೨೨೦			ನಮ್ಮ ರಾಷ್ಟ್ರೀಯ ಹಕ್ಕಿ ನವಿಲು	ಪಕ್ಷಿ ಪರಿಚಯ	'ಮುರಳೀಧರ'	
೨೨೧			ರಾಜದೂತರಿದ್ದಾರೆ ಎಚ್ಚರಿಕೆ	ವಿಚಾರ	ಪಾ.ವೆಂ.	
	೧೯೬೩	ಎಪ್ರಿಲ್-೮೦				
೨೨೨			ಶ್ರದ್ಧೆಯಿಂದ ರೋಗ ವಾಸಿಯಾಗುತ್ತದೆಯೇ?	ಮನೋ-ದೈಹಿಕ ವಿಚಾರ	'ಮುರಳೀಧರ'	
೨೨೩			ನಿಮ್ಮ ಜೀವಕಣಗಳ ಮಾಯಾಲೋಕ	ಆರೋಗ್ಯ ಪರಿಚಯ	....	
	೧೯೬೩	ಮೇ-೮೧				
೨೨೪			ಇಷ್ಟೇಕೆ ಭೂಕಂಪಗಳು?	ವಿಜ್ಞಾನ ವಿಸ್ಮಯ	'ರಾಧಾಕೃಷ್ಣರಾವ್'	
೨೨೫			ಯುರೋಪಿನ ಕ್ರಾಂತಿದೂತ ರೂಸೋ	ವ್ಯಕ್ತಿ ಪರಿಚಯ	ಪಾ.ವೆಂ.	
	೧೯೬೩	ಜೂನ್-೮೨				
೨೨೬			ಹೆಲಿಕಾಪ್ಟರಿನ ಜನ್ಮದಾತ : ಕೋರ್ಸಿ	ಶೋಧಕನ ಪರಿಚಯ	ಪಾ.ವೆಂ.	
೨೨೭			ಮಾನವ ಮತ್ತು ಹವಾಮಾನ	ಪರಿಸರ ಪರಿಚಯ	'ಮುರಳೀಧರ'	

೨೨೮			ನೊಣದ ಮಹಿಮೆ	ಕೀಟ ಪ್ರಪಂಚ ಪರಿಚಯ	'ರಾಧಾಕೃಷ್ಣರಾವ್'	
೨೨೯			ಮುಸುರೆಯಾಳಿನಿಂದ ಪ್ರಧಾನಮಂತ್ರಿ	ಅಸಾಧರಣ ವ್ಯಕ್ತಿಯ ಪರಿಚಯ	'ಮುರಳೀಧರ'	
	೧೯೬೩	ಆಗಸ್ಟ್-೮೪				
೨೩೦			ಕೆ.ಯಂ.ಮುನಶಿ : ಒಂದು ಅಘಟಿತ ಘಟನೆ	ಘಟನಾತ್ಮಕ ಪರಿಚಯ	ಪಾ.ವೆಂ.ಆಚಾರ್ಯ	
೨೩೧			ನಿಮ್ಮ ರಕ್ತದಲ್ಲಿ ನಿಮ್ಮ ಜಾತಕವಿದೆ	ಶೋಧ ಪರಿಚಯ	'ಮುರಳೀಧರ'	ರಕ್ತ ಕಣಗಳ ಪರಿಚಯ
೨೩೨			ಅವಳು ಪ್ರೇಮಿಕನನ್ನು ಕೊಂದಳೆ	ವಿಸ್ಮಯ	ಪಾ.ವೆಂ.	
	೧೯೬೩	ಸೆಪ್ಟೆಂಬರ-೮೫				
೨೩೩			ದ.ಬಾ.ಕುಲಕರ್ಣಿ	ವ್ಯಕ್ತಿ ಪರಿಚಯ	ಪಾ.ವೆಂ.	ಅಕಾಲಿಕ ನಿಧನ ಹೊಂದಿದ ಗೆಳೆಯ ಲೇಖಕನಿಗೆ ಶ್ರದ್ಧಾಂಜಲಿ.
೨೩೪			ಗ್ರೀಸಿನ ದೇಣಿಗೆ	ದೇಶ ಪರಿಚಯ	ಪಾ.ವೆಂ.	
೨೩೫			ನಿಮ್ಮ ಗ್ರಂಥಿಗಳನ್ನು ಅರಿತಿರುವಿರಾ?	ಆರೋಗ್ಯ ಪರಿಚಯ	'ರಾಧಾಕೃಷ್ಣರಾವ್'	
೨೩೬			ಮೃಗತೃಷ್ಣೆಯ ಮಾಯಾಜಾಲ	ಪ್ರಕೃತಿ ಪರಿಚಯ	'ವಿಜ್ಞಾನ ಪ್ರಿಯ'	ಮರಿಚಿಕೆ
	೧೯೬೩	ಅಕ್ಟೋಬರ್-೮೬				
೨೩೭			ದ.ವಿಂಚಿಯ ಸರ್ವತೋಮುಖ ಪ್ರತಿಭೆ	ವ್ಯಕ್ತಿ ಸಾಧನೆ	ಪಾ.ವೆಂ.ಆ.	ಚಿತ್ರ ಕಲೆಯ ಸಾಧನೆ
೨೩೮			ಕ್ರುಶ್ಚೇವರನ್ನು ಧಿಕ್ಕರಿಸುವ ಅಲ್ಬೇನಿಯ	ದೇಶ ರಾಜಕೀಯ ವಿಶ್ಲೇಷಣೆ	'ರಾಧಾಕೃಷ್ಣರಾವ್'	
	೧೯೬೩	ನವೆಂಬರ್-೮೭				
೨೩೯			ಸುಚೇತ ಕೃಪಲಾನಿ	ವ್ಯಕ್ತಿ ಪರಿಚಯ	ಪಾ.ವೆಂ.	ಗಣರಾಜ್ಯ (ಉ.ಪ್ರ.)ವೊಂದರ ಪ್ರಥಮ ಮಹಿಳಾ ಮುಖ್ಯಮಂತ್ರಿಯ ವ್ಯಕ್ತಿತ್ವ
೨೪೦			ಕ್ವಿಮಾಯ್ ದ್ವೀಪದ ಅಗ್ನಿಪರೀಕ್ಷೆ	ರಾಜಕೀಯ ವಿಶ್ಲೇಷಣೆ	ಪಾ.ವೆಂ.	
೨೪೧			ಅವರು ಫೋಟೋ ತೆಗೆದುಕೊಳ್ಳಲು ಜೀವತೆತ್ತಾರು	ವ್ಯಕ್ತಿ ಸಾಧನೆ ಪರಿಚಯ	'ಮುರಳೀಧರ'	
	೧೯೬೩	ಡಿಸೆಂಬರ್-೮೮				
೨೪೨			ಪ್ರವಾಸ ಸಾಮ್ರಾಟರು	ಸಾಹಸ ಸಾಧನೆಯ ಪರಿಚಯ	'ರಾಧಾಕೃಷ್ಣರಾವ್'	
೨೪೩			ಮಡಿಕೇರಿಯಲ್ಲಿ ಸಹಕಾರ	ಘಟನಾತ್ಮಕ ಪರಿಚಯ	'ಪ್ರತ್ಯಕ್ಷದರ್ಶಿ'	
೨೪೪			ಆಚಾರ್ಯ ಕೃಪಲಾನಿ	ವ್ಯಕ್ತಿ ಪರಿಚಯ	ಪಾ.ವೆಂ.	ಬೆಂಕಿ ನವಾಬ, ಗಾಂಧಿಭಕ್ತ

೨೪೫			ಸುಂದರರಾಜ್ ಅಯ್ಯಂಗಾರ್	ವ್ಯಕ್ತಿ ಪರಿಚಯ	ಪಾ.ವೆಂ.	ಪಶ್ಚಿಮಕ್ಕೆ ಯೋಗ ಮಾರ್ಗ ಕಲಸಿದವರು.
೨೪೬			ವಿಲಿಯಂ ಶೇಕ್‌ಸ್ಪೀಯರ್	ಕವಿಕಾವ್ಯ ಪರಿಚಯ	ಪಾ.ವೆಂ.	೪ನೇ ಜನ್ಮಶತಾಬ್ಧಿಯ ನೆನಪು
೨೪೭			ತಾರೀಖುಗಳ ತಾರುಮಾರು	ಖಗೋಳ ಜ್ಞಾನ	'ರಾಧಾಕೃಷ್ಣರಾವ್'	
	೧೯೬೪	ಫೆಬ್ರವರಿ-೯೦				
೨೪೮			ಏಕಾಗ್ರತೆಯನ್ನು ಹೇಗೆ ಸಾಧಿಸಬೇಕು	ಮನೋವೈಜ್ಞಾನಿಕ	'ರಾಧಾಕೃಷ್ಣರಾವ್'	
೨೪೯			ದೇವರ ತಮಾಷೆ - ಕಾಂಗರೂ	ಪ್ರಾಣಿ ಪರಿಚಯ	'ರಾಧಾಕೃಷ್ಣರಾವ್'	
೨೫೦			ಆಧುನಿಕ ಕುಬೇರರು	ವಿಚಾರ	'ಮುರಳೀಧರ'	
	೧೯೬೪	ಮಾರ್ಚ್-೯೧				
೨೫೧			ಲಾಲ್‌ಬಹದ್ದೂರ ಶಾಸ್ತ್ರಿ	ವ್ಯಕ್ತಿ ಪರಿಚಯ	ಪಾ.ವೆಂ.	
೨೫೨			ಉಡಾಳ ಹುಡುಗ ಶ್ರೇಷ್ಠ ಸಾಹಿತಿಯಾದ	ವ್ಯಕ್ತಿ ಪರಿಚಯ	'ಮುರಳೀಧರ'	
	೧೯೬೪	ಏಪ್ರಿಲ್-೯೨				
೨೫೩			ಪ್ರತಿಭಾಶಾಲಿ ಗಾಗಿನ್	ವ್ಯಕ್ತಿ ಪರಿಚಯ	ಪಾ.ವೆಂ.	ಪ್ರಸಿದ್ಧ ವರ್ಣ ಚಿತ್ರಕಾರ
೨೫೪			ಚಕ್ರವಿಲ್ಲದ ಗಾಡಿಗಳು	ಶೋಧನೆ ಪರಿಚಯ	'ರಾಧಾಕೃಷ್ಣರಾವ್'	
	೧೯೬೪	ಮೇ-೯೩				
೨೫೫			ಸೈಪ್ರಸ್: ಅಶಾಂತ ದೇಶ	ದೇಶ ಪರಿಚಯ	ಪಿ.ವಿ. ಆಚಾರ್ಯ	
	೧೯೬೪	ಜೂನ್-೯೪				
೨೫೬			ಸೈಪ್ರಸ್ ಅಶಾಂತ ದೇಶ	ನಗರ ಪರಿಚಯ	ಪಿ.ವಿ. ಆಚಾರ್ಯ	
೨೫೭			ಜಗತ್ತನ್ನು ಬದಲಿಸಬಲ್ಲ ತಂತ್ರ	ವಿಜ್ಞಾನ ಸಾಧನೆ	ಪಾ.ವೆಂ.	
೨೫೮			ಅಪಾರ ಆತ್ಮಬಲದ ಜಗದೀಶನ್	ವ್ಯಕ್ತಿ ಪರಿಚಯ	ಪಾ.ವೆಂ.	ಕುಷ್ಠರೋಗಿಗಳ ಆಶಾಕಿರಣ.
೨೫೯			ನನ್ನ ಮುದ್ದು ಕುಸುಮ	ಕಥೆ	'ಘನಶ್ಯಾಮ'	ಸ್ವಾನುಭವ ವಿವರ
	೧೯೬೪	ಜುಲೈ-೯೫				
೨೬೦			ಚರ್ಮದಿಂದ ನೋಡಬಹುದೇ?	ವಿಜ್ಞಾನ	'ಮುರಳೀಧರ'	
೨೬೧			ಕ್ಯಾನ್ಸರ್ ತಡೆಗಟ್ಟಲು ಸಾಧ್ಯವೇ?	ವೈದ್ಯಕೀಯ	'ರಾಧಾಕೃಷ್ಣರಾವ್'	
೨೬೨			ಬ್ರಹ್ಮರ್ಷಿ ದೈವರಾತರು	ವ್ಯಕ್ತಿ ಪರಿಚಯ	ಪಾ.ವೆಂ.	ವೇದ ಮಂತ್ರ ದ್ರಷ್ಟಾರಾಗಿದ್ದರು

೨೬೩			ಬಲಿ : ಮುಸ್ಲಿಂ ಸಾಗರದಲ್ಲಿ ಹಿಂದೂ ದ್ವೀಪ	ವಿಸ್ಮಯ ಘಟನೆ	'ಮುರಳೀಧರ'	ಸಮಾನತೆ, ಸಹಬಾಳ್ವೆಯ ದ್ಯೋತಕ
೨೬೪			ಕಲಾಬ್ರಹ್ಮ ಮೈಕಲೇಂಜಲೊ	ವ್ಯಕ್ತಿ ಪರಿಚಯ	ಪಾ.ವೆಂ.	
೨೬೫			ನಿಮ್ಮ ಮಗು ಮತ್ತು ನೀವು	ಆರೋಗ್ಯ ವಿಶ್ಲೇಷಣೆ	'ರಾಧಾಕೃಷ್ಣರಾವ್'	ಗರ್ಭಿಣಿಯರ ಬಗ್ಗೆ
	೧೯೬೪	ಸೆಪ್ಟೆಂಬರ್-೯೭				
೨೬೬			ಬ್ರೀಟಿಶ್ ಗಯಾನದ ಕೊನೆಯಿರದ ಬಿಕ್ಕಟ್ಟು	ದೇಶ ರಾಜಕೀಯ ವಿಶ್ಲೇಷಣೆ	'ಮುರಳೀಧರ'	
೨೬೭			ಜಾಂಬವಂತನ ವಂಶದವರು	ಪ್ರಾಣಿ ಲೋಕ	'ರಾಧಾಕೃಷ್ಣರಾವ್'	
೨೬೮			ಸಿಗರೇಟು ಬಿಡುವ ಗುಟ್ಟು	ಹರಟೆ	ಲಾಂಗೂಲಾಚಾರ್ಯ	
	೧೯೬೪	ಅಕ್ಟೋಬರ್-೯೮				
೨೬೯			ಊಟವಿಲ್ಲದೆ ಬದುಕಬಹುದೇ?	ವಿವಿಧ ಆಹಾರ	'ರಾಧಾಕೃಷ್ಣರಾವ್'	
	೧೯೬೪	ನವೆಂಬರ್-೯೯				
೨೭೦			ಕಾಂಗ್ರೆಸಿನ ಅಧ್ಯಕ್ಷರು ಕಾಮರಾಜರು	ವ್ಯಕ್ತಿ ಪರಿಚಯ	ಪಿ.ವಿ.ಆಚಾರ್ಯ	
೨೭೧			"ದೈತ್ಯ" ಮಾನವ ದುರಂತ ಜೀವನ	ವಿಸ್ಮಯ	'ರಾಧಾಕೃಷ್ಣರಾವ್'	
೨೭೨			ಪ್ರಿನೋಜೌಃ ಪಾಶ್ಚಾತ್ಯ ತತ್ವಜ್ಞಾನಿ ಶ್ರೇಷ್ಠ	ವ್ಯಕ್ತಿ ಪರಿಚಯ	ಪಾ.ವೆಂ.	ದಾರ್ಶನಿಕ
೨೭೩			ಹವೆ ಮತ್ತು ನಿಮ್ಮ ಪ್ರಕೃತಿ	ಆರೋಗ್ಯ ವಿಶ್ಲೇಷಣೆ	'ಮುರಳೀಧರ'	
	೧೯೬೪	ಡಿಸೆಂಬರ್-೧೦೦				
೨೭೪			ಮಾನವ ಮನಸ್ಸಿನ ಅಜ್ಞಾನ ಶಕ್ತಿ	ವಿಜ್ಞಾನ	'ರಾಧಾಕೃಷ್ಣರಾವ್'	
೨೭೫			ನಮ್ಮ ವ್ಯಕ್ತಿತ್ವ ನಿಮ್ಮ ಹೊಟ್ಟೆಯಲ್ಲಿದೆ	ವಿವೇಚನೆ	ಪಾ.ವೆಂ.	
	೧೯೬೫	ಜನವರಿ- ೧೦೧				
೨೭೬			ಕುಶ್ಚೇವ್ ಹೇಗೆ ಅಧಿಕಾರಕ್ಕೆ ಬಂದ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	
೨೭೭			ಅಕ್ಕಿಯ ಕಥೆ	ಕಥೆ	ಪಾ.ವೆಂ.	
	೧೯೬೫	ಫೆಬ್ರವರಿ-೧೦೨				
೨೭೮			ಇರುವೆಯ ಹಿರಿಮೆ	ಪ್ರಾಣಿಜಗತ್ತು	'ರಾಧಾಕೃಷ್ಣರಾವ್'	
೨೭೯			ಸಾವನ್ನು ಗೆಲ್ಲುವ ಪುಟ್ಟಯಂತ್ರ	ವಿಚಾರ	'ಮುರಳೀಧರ'	
೨೮೦			ಅಮೇರಿಕಾದಲ್ಲಿ ಕಪ್ಪು ಮುಸ್ಲಿಂಮರು	ಜನಾಂಗ ಪರಿಚಯ	....	

	೧೯೬೫	ಮಾರ್ಚ್-೧೦೩				
೨೮೧			ನಿಸರ್ಗದ ಎಂಜನೀಯರ್ : ಬೀದರ್	ಪರಿಚಯ	'ರಾಧಾಕೃಷ್ಣರಾವ್'	
೨೮೨			ಅಸಾಧಾರಣ ವಿಜ್ಞಾನಿ ಡಾ. ಹೋಮಿ ಭಾಭಾ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ಅಣು ವಿಜ್ಞಾನಿ
೨೮೩			ಔರಂಗಜೇಬನ ಪಶ್ಚಾತ್ತಾಪ	ಘಟನಾತ್ಮಕ ವಿವರ	'ರಾಧಾಕೃಷ್ಣರಾವ್'	
	೧೯೬೫	ಎಪ್ರಿಲ್-೧೦೪				
೨೮೪			ಹಿಂದಿ ಬಗ್ಗೆ ಗೊಂದಲವೇಕೆ?	ಭಾಷೆ	ಪಾ.ವೆಂ.	
೨೮೫			ಮಾನವ ಪ್ರಯೋಗದ ಪಶುಗಳು	ವಿಜ್ಞಾನ	'ರಾಧಾಕೃಷ್ಣರಾವ್'	
೨೮೬			ಅಂಟಾರ್ಕ್ಟಿಕಾ ವಿರುದ್ಧ ಮೂವರು	ಸಾಹಸ	'ಮುರಳೀಧರ'	
೨೮೭			ಔದಾರ್ಯ ಎಂಬ ಅಪರಂಜಿ ಗುಣ	ವಿಚಾರ	'ಪಿ.ಲಕ್ಷ್ಮೀಬಾಯಿ'	ಪತ್ನಿಯ ಗುಣದ ಬಗ್ಗೆ
	೧೯೬೫	ಮೇ-೧೦೫				
೨೮೮			ರಹಸ್ಯಮಯ ಔಷದ DMSO	ವೈದ್ಯಕೀಯ	ವಿವಿಧ ಮೂಲಗಳಿಂದ	
	೧೯೬೫	ಜೂನ್-೧೦೬				
೨೮೯			ಜಪಾನಿನ ಅದ್ಬುತ ಆರ್ಥಿಕ ಪ್ರಗತಿ	ಸ್ಥಿತಿಗತಿ	ಪಾ.ವೆಂ.	
೨೯೦			ಶತಕೋಟಿ ದಾನಿ ಆಂಡ್ರೂ ಕಾರ್ನೆಜಿ	ವ್ಯಕ್ತಿ ಪರಿಚಯ	ಪಾ.ವೆಂ.	ಜಗತ್ತಿನ ದಾನಶೂರ
	೧೯೬೫	ಜುಲೈ-೧೦೭				
೨೯೧			ಇದ್ದ ಬುದ್ಧಿಯನ್ನು ಹೆಚ್ಚು ಬಳಸಿಕೊಳ್ಳಿರಿ	ವಿವೇಚನೆ	ಪಾ.ವೆಂ.	
	೧೯೬೫	ಆಗಸ್ಟ್-೧೦೮				
೨೯೨			ಹಿಮಶಿಖರ ಜರಿಯಿತು	ವಿಸ್ಮಯ	'ರಾಧಾಕೃಷ್ಣರಾವ್'	
೨೯೩			ಇದಕ್ಕೇನನ್ನಬೇಕು ಎಕ್ಸ್‌ಪ್ರೆಸ್ ಗಾಡಿ	ಯಂತ್ರ-ತಂತ್ರ	'ಮುರಳೀಧರ'	
	೧೯೬೫	ಸೆಪ್ಟೆಂಬರ್-೧೦೯				
೨೯೪			ಹೋ.ಚಿ.ಮಿನ್	ವ್ಯಕ್ತಿ ಚಿತ್ರ	ಪಾ.ವೆಂ.	
೨೯೫			ಕಾಪೆನ್ ಹೆಗನ್ ಅದ್ಭುತ ಗಡಿಯಾರ	ಮಾನವಿಕ ವಿಸ್ಮಯ	'ರಾಧಾಕೃಷ್ಣರಾವ್'	
	೧೯೬೫	ಅಕ್ಟೋಬರ್-೧೧೦				
೨೯೬			ಕಾಶ್ಮೀರದಲ್ಲಿ ನಾವೇಕೆ ಹೋರಾಡುತ್ತಿದ್ದೇವೆ?	ರಾಷ್ಟ್ರೀಯ ರಾಜಕೀಯ	ಪಾ.ವೆಂ.	ವಿವಾದಾತ್ಮಕ ಪ್ರದೇಶ
೨೯೭			ಚಂದ್ರಬಲದಿಂದ ವಿದ್ಯುತ್‌ಶ್ಚಕ್ತಿ !	ತಂತ್ರಜ್ಞಾನ	'ರಾಧಾಕೃಷ್ಣರಾವ್'	ಆಧುನಿಕ ಸಂಶೋಧನೆ
೨೯೮			ನಿಮಗೆ ಸಿಟ್ಟು ಬರುತ್ತದೆಯೇ?	ಮಾನಸಿಕ ಆರೋಗ್ಯ	'ರಾಧಾಕೃಷ್ಣರಾವ್'	

೨೯೯			ಜ್ಞಾನಿಗಳ ದೃಷ್ಟಿ	ವಿಚಾರ	....	
	೧೯೬೫	ನವೆಂಬರ್-೧೧೧				
೩೦೦			ಮೀರ ಮಹಬಲ್ ಶೇರ್ವಾನಿ	ವ್ಯಕ್ತಿ ಸಾಧನೆ ಪರಿಚಯ	'ರಾಧಾಕೃಷ್ಣರಾವ್'	ಜಾತ್ಯಾತೀತ ತತ್ವಕ್ಕಾಗಿ ಹುತಾತ್ಮನಾದ
೩೦೧			ಹಿಮದೊಡನೆ ಒಕ್ಕೈ ಹೋರಾಟ	ವಿಸ್ಮಯ	'ಮುರಳೀಧರ'	
೩೦೨			ನೀರು, ನೀರಡಿಕೆ ಮತ್ತು ಆರೋಗ್ಯ	ಆರೋಗ್ಯ	....	ಆರೋಗ್ಯ ಸಂದೇಶ
	೧೯೬೫	ಡಿಸೆಂಬರ್-೧೧೨				
೩೦೩			ಕೃತಜ್ಞತೆ ಎಂಬ ಸದ್ಗುಣ	ಮಾನವಿಕ ವಿಚಾರ	'ಮುರಳೀಧರ'	
೩೦೪			ಕುಕ್ಲಕ್ಸ್‌ಕ್ಲಾನ್	ಜನಾಂಗ ಪ್ರವೃತ್ತಿ ಪರಿಚಯ	'ಮುರಳೀಧರ	
೩೦೫			ಸಾಕ್ರೇಟಿಸನ ಕೊನೆಯ ದಿನಗಳು	ಪುಸ್ತಕ ವಿಭಾಗ	'ಸಂಗ್ರಹ'	ಘಟನಾತ್ಮಕ ನೆನಪು
	೧೯೬೬	ಜನವರಿ-೧೧೩				
೩೦೬			ಆರ್.ಎಸ್.ಎಸ್.ಸಂಸ್ಥಾಪಕ ಹೆಡಗೇವಾರ್	ವ್ಯಕ್ತಿ ಪರಿಚಯ	ಪಾ.ವೆಂ.	ಸಂಘ ಜೀವನದ ದ್ರಷ್ಟಾರ
೩೦೭			ಆತ್ಮ ರಕ್ಷಣೆಗಾಗಿ ಜುಡೊ	ಕ್ರೀಡೆ	'ಮುರಳೀಧರ'	
	೧೯೬೬	ಫೆಬ್ರವರಿ-೧೧೪				
೩೦೮			ಶಾಸ್ತ್ರಿಗಳು ಇನ್ನಿಲ್ಲ	ಶ್ರದ್ಧಾಂಜಲಿ ಲೇಖನ	ಪಾ.ವೆಂ.	
೩೦೯			ಡಾ. ಮೇರಿ ವರ್ಗೀಸ್	ವ್ಯಕ್ತಿ ಪರಿಚಯ	'ಮುರಳೀಧರರಾವ್'	ಅದೃಷ್ಟದ ವಿರುದ್ಧ ಧೈರ್ಯದ ವಿಜಯ
೩೧೦			ಮಧುಮೇಹವೊ ಅಲ್ಲವೋ?	ಆರೋಗ್ಯ	ಪಾ.ವೆಂ.	
೩೧೧			ನಾವು ಅಷ್ಟು ಕೆಟ್ಟವರೇ?	ಮನೋವೈಜ್ಞಾನಿಕ	'ರಾಧಾಕೃಷ್ಣರಾವ್'	
	೧೯೬೬	ಮಾರ್ಚ್-೧೧೫				
೩೧೨			ಸಮರ್ಸೆಟ್ ಮಾಮ್: ಕೋಟ್ಯದೀಶ ಸಾಹಿತಿ	ವ್ಯಕ್ತಿ ಚಿತ್ರ	ಪಾ.ವೆಂ.	ಈ ಶತಮಾನದ ಜನಪ್ರಿಯ ಇಂಗ್ಲೀಷ ಶಿಲ್ಪಿಯ ಕಥೆ.
೩೧೩			ಮುರಾರಜಿ ದೇಸಾಯಿ	ವ್ಯಕ್ತಿ ಚಿತ್ರ	ಪಾ.ವೆಂ.	ವೆಲ್ಸ್ ಹ್ಯಾಂಗೆನ್‌ರ ಲೇಖನದಲ್ಲಿ ಗುರುತಿಸಿದ ವ್ಯಕ್ತಿ.
೩೧೪			ಸೈಬಿರಿಯಾದ ಆನೆಗಳ ರಹಸ್ಯ	ಪ್ರಾಣಿ ಪ್ರಪಂಚ	'ರಾಧಾಕೃಷ್ಣರಾವ್'	
೩೧೫			ರಾಮದಾಸರು ಗಂಟು ಬಿಚ್ಚಿದರು	ಸಣ್ಣ ಕಥೆ-ಸ್ವಂತ	'ರಮಾತನಯ'	
	೧೯೬೬	ಎಪ್ರಿಲ್-೧೧೬				
೩೧೬			ರಷ್ಯಾ ಚೀನಾದಲ್ಲಿ ಯುದ್ಧವಾದೀತೆ?	ಮಾನವ ರಾಜಕೀಯ	'ಆದಾರ'	

೩೧೭			ಪೆಟ್ಟಿಗೆಯಲ್ಲಿ ೧೦,೦೦೦ ಮೈಲು ಸವಾರಿ	ಸಾಹಸ	'ಮುರಳೀಧರ'	
	೧೯೬೬	ಮೇ-೧೧೭				
೩೧೮			ಶ್ರೀ ಮಂಜುನಾಥ ಹೆಗಡೆ ಮತ್ತು ಕ್ಯಾನ್ಸರ್	ಆರೋಗ್ಯ ಪರಿಚಯ	ಪಾ.ವೆಂ.	ಕ್ಯಾನ್ಸರ್ ರೋಗದ ವಿವರ
	೧೯೬೬	ಜೂನ್-೧೧೮				
೩೧೯			ಈ ವಿಚಿತ್ರಗಳ ಅರ್ಥವೇನು?	ಕೌತುಕ	ಪಾ.ವೆಂ.	
	೧೯೬೬	ಜುಲೈ-೧೧೯				
೩೨೦			ಗಡಿಗಳಿಗೆ ಗಂಡಾಂತರ	ರಾಜಕೀಯ ವಿಶ್ಲೇಷಣೆ	ಪಾ.ವೆಂ.	
೩೨೧			ಕಳೆದ ಬಾಂಬಿನ ಕೋಲಾಹಲ	ವಿವೇಚನಾತ್ಮಕ ನೆನಪು	'ಮುರಳೀಧರ'	ಹೈಡ್ರೋಜನ್ ಬಾಂಬಿನ ಭಯಪ್ರದ ಇತಿಹಾಸ.
೩೨೨			ಸ್ಪಂಜ್ ಒಂದು ಪ್ರಾಣಿ	ಪ್ರಾಣಿ ಪರಿಚಯ	'ರಾಧಾಕೃಷ್ಣರಾವ್'	
೩೨೩			ಗೋ ಸಮಾಜದಲ್ಲಿ ಉಚ್ಚ ನೀಚ ಬೇಧವಿದೆ	ವಿವೇಚನೆ	....	
	೧೯೬೬	ಆಗಸ್ಟ್-೧೨೦				
೩೨೪			ಗಡಿತಂಟೆ ಏನು ಏಕೆ?	ರಾಜಕೀಯ ವಿಶ್ಲೇಷಣೆ	'ರಾಧಾಕೃಷ್ಣರಾವ್'	
೩೨೫			ಸತ್ತವರ ದಿಬ್ಬದ ನಾಗರೀಕತೆಯ ವೃತ್ತಾಂತ	ಐತಿಹಾಸಿಕ ಘಟನೆ	ಪಾ.ವೆಂ.	ಮೊಹೇಂಜದಾರೊ
	೧೯೬೬	ಸೆಪ್ಟೆಂಬರ್-೧೨೧				
೩೨೬			ನೀವು ಪ್ರತಿಭಾಶಾಲಿಗಳೇ ಆಗಿರಬೇಕಿಲ್ಲ	ವಿವೇಚನೆ	'ಮುರಳೀಧರ'	
೩೨೭			ಶೆಟ್ಟಿ ದೇವರನ್ನು ಕಂಡಾಗ	ಅನುವಾದ: ಸಣ್ಣ ಕಥೆ	'ರಮಣ ಅಂಬಲಪಾಡಿ'	
	೧೯೬೬	ಅಕ್ಟೋಬರ್-೧೨೩				
೩೨೮			ಕಾಲೇಜಿಗೆ ಹೆಣಗಳು ಬೇಕೆ?	ವೈದ್ಯಕೀಯ ವಿಸ್ಮಯ	'ರಾಧಾಕೃಷ್ಣರಾವ್'	
	೧೯೬೬	ನವೆಂಬರ್-೧೨೩				
೩೨೯			ಪ್ರಾಚೀನ ಭಾರತದಲ್ಲಿ ಆಸ್ಪತ್ರೆಗಳು	ಆರೋಗ್ಯ	ಪಾ.ವೆಂ.	ಆರೋಗ್ಯ ಶಾಲೆಯ ಪರಿಚಯ
೩೩೦			ಪಂಡಿತ ಸಾತವಳೇಕರ	ವ್ಯಕ್ತಿ ಪರಿಚಯ	ಪಾ.ವೆಂ.	ವೇದವಿದ್ಯೆ ಬ್ರಹ್ಮರ್ಷಿ ಶತಾಬ್ಧಿ ಆಚರಿಸುವ ಸಂದರ್ಭ.
	೧೯೬೬	ಡಿಸೆಂಬರ್-೧೨೪				
೩೩೧			ಸಂಶೋಧನ ತಪಸ್ವಿ ಶಂಬಾ ಜೋಶಿ	ಸಾಹಿತ್ಯ ಮತ್ತು ವ್ಯಕ್ತಿ ಪರಿಚಯ	ಪಾ.ವೆಂ.	ಸಾರಸ್ವತ ಲೋಕದ ಸಲಗ
೩೩೨			ಕಾಸರಗೊಡು : ಕೇರಳದಲ್ಲಿ ತೊಳಲುವ	ರಾಜಕೀಯ ಘಟನಾತ್ಮಕ ಪರಿಚಯ	ವಿವಿಧ ಮೂಲಗಳಿಂದ	ಕನ್ನಡ ರಾಜ್ಯದ ವಿವಾದ

			ಕನ್ನಡಭೂಮಿ.			
	೧೯೬೭	ಜನವರಿ-೧೨೫				
೩೩೩			ಎಸ್.ಕೆ. ಪಾಟೀಲರು	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	
೩೩೪			ಬರಲಿವೆ : ನೆನಪಿನ ಗುಳಿಗೆಗಳು	ಆರೋಗ್ಯ ಸಾಧನೆ ಪರಿಚಯ	ಪಾ.ವೆಂ.	ಆಧುನಿಕ ಶೋಧನೆ
೩೩೫			ಆದರ್ಶ ಪ್ರಜಾಪ್ರಭುತ್ವದ ಕೋಲಾಹಲ	ರಾಜಕೀಯ ವಿಶ್ಲೇಷಣೆ	'ಮುರಳೀಧರ'	
೩೩೬			ಈ ಸಮಸ್ಯೆ ಬಿಡಿಸಬಲ್ಲಿರಾ?	ಗಣಿತ	ಪಾ.ವೆಂ.	
	೧೯೬೭	ಫೆಬ್ರುವರಿ-೧೨೬				
೩೩೭			ನೀರು ಕುಡಿದು ಆರೋಗ್ಯವಂತರಾಗಿರಿ	ಆರೋಗ್ಯ ಚಿಂತನೆ	ಪಾ.ವೆಂ. ಆಚಾರ್ಯ	
೩೩೮			ಈ ಹಡಗಿನ ಜನ ಏನಾದರು?	ವಿಸ್ಮಯ	ಪಾ.ವೆಂ.	
೩೩೯			ಕಲಾವಿದ ಮೊದಲ್ಯಾನೀ	ವ್ಯಕ್ತಿ ಪರಿಚಯ	ಪಾ.ವೆಂ.	
	೧೯೬೭	ಮಾರ್ಚ್-೧೨೭				
೩೪೦			ನ್ಯೂಬಿಯಾದ ನಿಧಿ ಪಾರಾಯಿತು	ಪವಿತ್ರ	ಪಾ.ವೆಂ.	
೩೪೧			ವಾಯಿ ಬ್ರೇಲ್ ಕುರುಡರಿಗೆ ಬೆಳಕು ನೀಡಿದ	ವ್ಯಕ್ತಿ ಪರಿಚಯ	ಪಾ.ವೆಂ.	ಅಂಧವ್ಯಕ್ತಿಗಳ ಆಶಾಕಿರಣ
	೧೯೬೭	ಎಪ್ರಿಲ್-೧೨೮				
೩೪೨			ಮಿಕಕ್ಕೆ ಸಿಂಹ ಹೆದರುತ್ತದೆಯೇ	ಸುಭಾಷಿತ	'ರಾಧಾಕೃಷ್ಣರಾವ್'	
೩೪೩			ಥೆರೆಸಾ ತಾಯಿ	ವ್ಯಕ್ತಿ ಪರಿಚಯ	'ಮುರಳೀಧರ'	
೩೪೪			ಕ್ಯಾನ್ಸರಿಗೊಂದು ಚುಚ್ಚು ಮದ್ದು?	ಆರೋಗ್ಯ ಪರಿಚಯ	ವಿವಿಧ ಮೂಲ	
	೧೯೬೭	ಮೇ-೧೨೯				
೩೪೫			ಕನಸ್ಸು	ಕಥೆ	'ಸಾಗರತನಯೆ'	
೩೪೬			ಪ್ರೇಮ : ಮಕ್ಕಳು ಕಂಡಂತೆ	ಮಕ್ಕಳ ವಿಚಾರ	'ರಾಧಾಕೃಷ್ಣರಾವ್'	
	೧೯೬೭	ಜೂನ್-೧೩೦				
೩೪೭			ನಮ್ಮ ರಾಷ್ಟ್ರಪತಿ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ಬಾಬು ರಾಜೇಂದ್ರ ಪ್ರಸಾದರು
೩೪೮			ಮನಸ್ಸು ಮನಸ್ಸಿನೊಡನೆ ಮಾತನಾಡಬಹುದೆ	ವಿಚಾರ	ಪಾ.ವೆಂ.	
೩೪೯			ಸ್ವಾಮಿ ಚಿನ್ಮಯಾನಂದಜಿಯೊಡನೆ ಮಾತುಕತೆ	ವ್ಯಕ್ತಿ ಪರಿಚಯ	'ಮುರಳೀಧರ'	
	೧೯೬೭	ಜುಲೈ-೧೩೧				
೩೫೦			ನಮ್ಮ ಉಪರಾಷ್ಟ್ರಪತಿ	ವ್ಯಕ್ತಿ ಪರಿಚಯ	'ಮುರಳೀಧರ'	

೩೫೧			ಇಲಿ : ಚೋಟುದ್ದದ ದೈತ್ಯ	ಪ್ರಾಣಿಲೋಕ	'ರಾಧಾಕೃಷ್ಣರಾವ್'	
	೧೯೬೭	ಆಗಸ್ಟ್-೧೩೨				
೩೫೨			ಹಕ್ಕಿಗಳ ಕಲಾಕೌಶಲ	ಪಕ್ಷಿಲೋಕ	'ಮುರಳೀಧರ'	
೩೫೩			ದಕ್ಷಿಣಧ್ರುವದಲ್ಲಿ ಹೆಸರು ಕೆತ್ತಿಸಿದ ಭಾರತೀಯ	ವಿಸ್ಮಯ	'ರಾಧಾಕೃಷ್ಣರಾವ್'	
೩೫೪			ನಾನು ನಿಜವಾಗಿ ಕೆಟ್ಟಿದ್ದೇನೆ	ಹರಟೆ	ಲಾಂಗೂಲಾಚಾರ್ಯ	
	೧೯೬೭	ಸೆಪ್ಟೆಂಬರ್-೧೩೩				
೩೫೫			ಗಲ್ಲಿಗೇರಿ ಬದುಕಿದ: ಜಾನ್ ರ್‍ಯಾನ್ ಆಯರ್ಲೆಂಡ್	ವಿಸ್ಮಯ	'ರಾಧಾಕೃಷ್ಣರಾವ್'	
೩೫೬			ಗಣಿತ ಪ್ರಚಂಡ ರಾಮಾನುಜಮ್	ವ್ಯಕ್ತಿ ಪರಿಚಯ	'ಮುರಳೀಧರ'	ಗಣಿತ ಪರಿಚಯ
೩೫೭			ಪ್ರಾಣಿಗಳು ಕುಟುಂಬದ ಯೋಜನೆ ಮಾಡುತ್ತವೆ	ಪ್ರಾಣಿ ಪ್ರಪಂಚದ ಪರಿಚಯ	ಪಾ.ವೆಂ.	ಪ್ರಕೃತಿ ಪಾಠ
	೧೯೬೭	ಅಕ್ಟೋಬರ್-೧೩೪				
೩೫೮			ಜಗಜೀವನರಾಮ	ವ್ಯಕ್ತಿ ಪರಿಚಯ	ಪಾ.ವೆಂ.	
೩೫೯			ಫಿಲಿಫೈನ್ಸ್ ಹಲವು ಬಣ್ಣದ ನಾಡು	ನಗರ ಪರಿಚಯ	'ರಾಧಾಕೃಷ್ಣರಾವ್'	
೩೬೦			ಇವಳು ತಂದೆಯಿಲ್ಲದೆನೇ ಹುಟ್ಟಿದಳೇ	ವಿಚಿತ್ರ	'ರಾಧಾಕೃಷ್ಣರಾವ್'	ಆದುನಿಕ ಸಂಶೋಧನೆ
	೧೯೬೭	ನವೆಂಬರ್-೧೩೫				
೩೬೧			ಗಾಂಧೀಜಿ ನನಗೇನು ಮಾಡಿದರು?	ನೆನಪು	'ಒಬ್ಬ ಸಾಮಾನ್ಯ'	ಪ್ರೇರಣೆ
೩೬೨			ಉದ್ವೇಗವನ್ನು ಉಪಯೋಗಕ್ಕೆ ಹಚ್ಚಿರಿ	ಮಾನವಿಕ ಆರೋಗ್ಯ	'ಮುರಳೀಧರ'	
	೧೯೬೭	ಡಿಸೆಂಬರ್-೧೩೬				
೩೬೩			ಯುರೋಪಿನ ಮುದುಕ: ಪೋರ್ತುಗಾಲ	ದೇಶ ಪರಿಚಯ	'ರಾಧಾಕೃಷ್ಣರಾವ್'	ಗತವೈಭವದ ಭ್ರಾಂತಿಯಲ್ಲಿ ಬಾಳುತ್ತಿದೆ.
	೧೯೬೮	ಜನವರಿ-೧೩೭				
೩೬೪			ಭೂಕಂಪದಿಂದ ಬದುಕಿ ಬಂದೆ! ಪಾರಾಗಿ ಬಂದವರೊಬ್ಬರು'ಕಸ್ತೂರಿ'ಗೆ ಹೇಳಿದಂತೆ.	ಘಟನಾತ್ಮಕ ಪರಿಚಯ	'ಕಸ್ತೂರಿ ಪ್ರತಿನಿಧಿ'	
	೧೯೬೮	ಫೆಬ್ರುವರಿ-೧೩೮				
೩೬೫			ಸುಖಬೇಕಾದರೆ ಪ್ರೀತಿಸಬೇಕು	ಹರಟೆ	ಪಾ.ವೆಂ.	ಬರ್ಟ್ರಂಡ್ ರಸೆಲ್ಲರ ವಿಚಾರಗಳನ್ನುನುಸರಿಸಿ.
	೧೯೬೮	ಮಾರ್ಚ್-೧೩೯				
೩೬೬			ಬೊಜ್ಜು, ಹೃದಯರೋಗ ಮತ್ತು ವ್ಯಾಯಾಮ	ಆರೋಗ್ಯ ವಿವರ	ಪಾ.ವೆಂ.	ಆರೋಗ್ಯ ಸಂದೇಶ

೩೬೭			ಕಮಲಾ ನೆಹರೂ	ವ್ಯಕ್ತಿ ಪರಿಚಯ	'ಮುರಳೀದರ'	ಮಹಾಪುರುಷನ ಪತ್ನಿಯ ಜೀವನಚರಿತ್ರೆ.
೩೬೮			ಬೀಟಲ್ಸ್ ನಿಮಗೆ ಗೊತ್ತೇ?	ವಿಸ್ಮಯ	'ರಾಧಾಕೃಷ್ಣರಾವ್'	ಸಂಪ್ರದಾಯ ವಿರೋಧಿ ವಿಚಿತ್ರ ತಂಡ.
	೧೯೬೮	ಏಪ್ರಿಲ್-೧೪೦				
೩೬೯			ನಮ್ಮ ಮಕ್ಕಳನ್ನು ನಾವು ಹೀಗೆ ಬಿಡಬೇಕೆ?	ಚಿಂತನ	'ವಿಚಾರಿ'	
೩೭೦			ಬಾಷಾ ಸಮಸ್ಯೆ ಏನು?	ವಿಶ್ಲೇಷಣಾತ್ಮಕ ವಿವರ	ಪಾ.ವೆಂ.	ಭಾಷೆಯ ಔಚಿತ್ಯ
೩೭೧			ಆನಂದ ಕುಮಾರಸ್ವಾಮಿ	ವ್ಯಕ್ತಿ ಪರಿಚಯ	'ಮುರಳೀಧರ'	ಭಾರತೀಯ ಕಲೆಗೆ ಜಗತ್ತಿನಲ್ಲಿ ಸ್ಥಾನ ದೊರಕಿಸಿಕೊಟ್ಟ ಮಹಾಪುರುಷ.
೩೭೨			ಕೊಲ್ಲುವ ಹಾವು ಬದುಕಿಸಲು ಬಹುದು	ಪ್ರಾಣಿಲೋಕ	ವಿವಿಧ ಮೂಲಗಳಿಂದ	
೩೭೩			ಹವಾಯಿ ದ್ವೀಪಗಳು	ನಗರ ಪರಿಚಯ	'ರಾಧಾಕೃಷ್ಣರಾವ್'	
೩೭೪			ಬೊಗಸೆಗೆ ಬಂದ ಮಿನು	ಸಣ್ಣ ಕಥೆ	'ರಾಮ'	ಸ್ವಾನುಭವದ ವಿವರ
	೧೯೬೮	ಮೇ-೧೪೧				
	೧೯೬೮	ಜೂನ್-೧೪೨				ಪ್ರಥಮ ವಸಂತ ಸಂಚಿಕೆ ಪ್ರಕಟ
೩೭೫			ನಡೆಯುತ್ತದೆ	ಹರಟೆ	'ವಿಚಾರಿ'	ಉತ್ಕೃಷ್ಟತೆಯ ಔಚಿತ್ಯ
೩೭೬			ಕಲಾಗುರು ಜಿ.ಎನ್. ದಂಡಾವತಿ ಮಠ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ಶಿಲ್ಪಕಲಾಕಾರರು ಧಾರವಾಡದವರು
೩೭೭			ಸುಳ್ಳು ನೋಟುಗಳ ಕಾಟ	ಘಟನಾತ್ಮಕ ವಿವರ	'ರಾಧಾಕೃಷ್ಣರಾವ್'	
೩೭೮			ಗಗನಯುಗದಲ್ಲಿ ಜೋತಿಷ್ಯ	ನಗೆ ಲೇಖನ	ಪಾ.ವೆಂ. ಆಚಾರ್ಯ	
೩೭೯			ಪೆರುವಿನ ಪ್ರಮೀಳಾ ರಾಜ್ಯ	ವ್ಯಕ್ತಿ ಪರಿಚಯ	'ಮುರಳೀಧರ'	ಅಂತಃಪುರದ ರಾಣಿಯರ ಬದುಕು
೩೮೦			ಎಕ್ಸ್-ರೇ ತೆಗೆಯುದುದೆಂದರೇನು?	ವೈದ್ಯಕೀಯ ವಿಜ್ಞಾನ	ಪಾ.ವೆಂ.	
	೧೯೬೮	ಜುಲೈ-೧೪೩				
೩೮೧			ಮೆಕ್ಸಿಕೋ	ನಗರ ಪರಿಚಯ	ಪಾ.ವೆಂ.	ಒಲಂಪಿಕ್ ಪಂದ್ಯ ನಡೆಯಲಿದೆ
೩೮೨			ಸಾಗರದ ಬಯಲಲ್ಲಿ ಏಳುದಿನ: ಸ್ವಾನ್ಲಿ ಹಾಸ್ನರ್	ಸಾಹಸ ಘಟನೆ	'ಮುರಳೀಧರ'	
೩೮೩			ಇರುವೆಗಳು ಮುನುಷ್ಯನಂತೆಯೇ	ಕೀಟಲೋಕ	'ರಾಧಾಕೃಷ್ಣರಾವ್'	'ಗುಲಾಮ ಪದ್ಧತಿ'
	೧೯೬೮	ಆಗಸ್ಟ್-೧೪೪				
೩೮೪			ವಿಶ್ವಸೃಷ್ಟಿ ಹೇಗಾಯಿತು?	ಖಗೋಳ ವಿವರ	'ಮುರಳೀಧರ'	ಸಂಶೋಧನೆ

೩೮೫			ಪ್ಲಾಟಿಪಸ್ ಎಂಬ ವಿಚಿತ್ರ ಪ್ರಾಣಿ	ಜೀವ ವಿಜ್ಞಾನ	'ರಾಧಾಕೃಷ್ಣರಾವ್'	
	೧೯೬೮	ಸೆಪ್ಟೆಂಬರ್-೧೪೫				
೩೮೬			ಮಾಂಡಲೇ	ನಗರ ಪರಿಚಯ	'ಮುರಳೀಧರ'	ಭಾರತೀಯರಿಗೊಂದು ಬರ್ಮಾ ತೀರ್ಥ ಸ್ಥಳ.
೩೮೭			ನಿರೀಕ್ಷಣೆ	ಕಥೆ	'ಶ್ರೀನಿವಾಸರಾವ್'	
೩೮೮			ನಮ್ಮ ದೇಶ ಅಷ್ಟು ಕೆಟ್ಟದೆಯೇ?	ರಾಜಕೀಯ ವಿಶ್ಲೇಷಣೆ	'ವಿಚಾರಿ'	
೩೮೯			ಥರ್ಮೊಗ್ರಾಫ್	ವಿಜ್ಞಾನ ಪರಿಚಯ	'ರಾಧಾಕೃಷ್ಣರಾವ್'	
	೧೯೬೮	ಅಕ್ಟೋಬರ್-೧೪೬				
೩೯೦			ಝೆಕೊಸ್ಲೊವಾಕಿಯ	ನಗರ ಪರಿಚಯ	ಪಾ.ವೆಂ.	
೩೯೧			ಆತ್ಮ ತೇಜಸ್ಸಿನ ಮಾರ್ಗಗಳು: ಡಾ. ಅಲೆಕ್ಸಿಸ್‌ಕೆರೆಲ್	ಮಾನವಿಕ ವಿಜ್ಞಾನ	ಪಾ.ವೆಂ.ಆಚಾರ್ಯ	ನೈತಿಕ, ಬೌದ್ಧಿಕ, ಕಲಾತ್ಮಕ ನಿಲುವುಗಳ ಗಟ್ಟಿತನ.
	೧೯೬೮	ನವೆಂಬರ್-೧೪೭				
೩೯೨			ಗ್ರೀನ್‌ವಿಚ್ ವೇಳೆ ಏನು ಹೇಳುತ್ತದೆ?	ಖಗೋಳ ಜ್ಞಾನ	'ಮುರುಳೀಧರ'	ಎಲ್ಲ ಸಮಯಗಳು ಒಂದೇ
	೧೯೬೮	ಡಿಸೆಂಬರ್-೧೪೮				
೩೯೩			ಸರೋಜಿನೀ ದೇವಿ : ಭಾರತದ ಕೋಗಿಲೆ	ವ್ಯಕ್ತಿ ಪರಿಚಯ	'ಮುರುಳೀಧರ	ರಾಜಕಾರಣದಲ್ಲಿ ತೊಡಗಿದ ಕವಯಿತ್ರಿ
೩೯೪			ಮರಳಿದವರು ಹದಿಮೂರು	ವಿಚಿತ್ರ	'ರಾಧಾಕೃಷ್ಣರಾವ್'	
೩೯೫			ಶ್ರೀ ಅಯ್ಯನ ದೇವ ಅಂಗಡಿ	ವ್ಯಕ್ತಿ ಚಿತ್ರ	ಪಾ.ವೆಂ.	ವಿದೇಶಗಳಲ್ಲಿ ಭಾರತದ ಕಲೆಗಳನ್ನು ಜನಪ್ರಿಯಗೊಳಿಸಿದವರು.
	೧೯೬೯	ಜನೇವರಿ-೧೪೯				
೩೯೬			ಹರಗೋವಿಂದ ಖೊರಾನಾ ಮತ್ತು ಪ್ರತಿಭಾಪಲಾಯನ.	ವ್ಯಕ್ತಿ ಚಿತ್ರ	ಪಾ.ವೆಂ.	ಸಿಖ್‌ರ ಧರ್ಮದ ವಿವರಗಳು
	೧೯೬೯	ಫೆಬ್ರುವರಿ-೧೫೦				
೩೯೭			ಕೈ ಬಿಗಿ ಬೇಡ, ಲಘು ಇರಲಿ	ಸ್ವಾನುಭವ ನಿರೂಪಣೆ	'ರಾಧಾಕೃಷ್ಣರಾವ್'	ಮಾನವ ಸಂಬಂಧಗಳ ವಿವೇಕ
೩೯೮			ಲಾಂಗೂಲಾ ವಚನಮಂಜರಿ	ಹರಟೆ	ಲಾಂಗೂಲಾಚಾರ್ಯ	
	೧೯೬೯	ಮಾರ್ಚ್-೧೫೧				
೩೯೯			ಅಫಘಾನಿಸ್ಥಾನ ಬದಲಾಗುತ್ತಿದೆ	ದೇಶ ಪರಿಚಯ	'ಮುರಳೀಧರ್'	
೪೦೦			ಈ ಸಮುದ್ರದಲ್ಲಿ ನೀವು ಮುಳುಗಲಾರಿರಿ	ವಿಸ್ಮಯ ಮಾಹಿತಿ	'ರಾಧಾಕೃಷ್ಣರಾವ್'	

೪೦೧			ಪಾರಿವಾಳ : ಶಾಂತಿಯಲ್ಲಿ, ಯುದ್ಧದಲ್ಲಿ	ವಿಚಾರ	ಪಾ.ವೆಂ.	ಸಂದೇಶ ವಾಹಕ
	೧೯೬೯	ಎಪ್ರಿಲ್-೧೫೨				
೪೦೨			ಹತ್ತು ವರ್ಷಗಳ ಹೆರಿಗೆ ಸ್ಪರ್ಧೆ	ವಿಸ್ಮಯ ಮಾಹಿತಿ	'ರಾಧಾಕೃಷ್ಣರಾವ್'	
೪೦೩			ನ್ಯೂಗಿನಿಯಾ ಆದಿವಾಸಿಗಳು	ದೇಶ ಪರಿಚಯ	'ಮುರಳೀಧರ'	ಜನಾಂಗದ ವಿವರ
	೧೯೬೯	ಮೇ-೧೫೩				
೪೦೪			ಸತ್ಯ, ನಾನು ಮತ್ತು ಹರಿಶ್ಚಂದ್ರ	ಹರಟೆ	ಲಾಂಗೂಲಾಚಾರ್ಯ	
	೧೯೬೯	ಜೂನ್-೧೫೪				
೪೦೫			ಎಷ್ಟು ಕರ್ನಾಟಕ ?	ಹರಟೆ	ಲಾಂಗೂಲಾಚಾರ್ಯ	
೪೦೬			ಕಾರ್ಬನ್-೧೪ರಿಂದ ಕಾಲನಿರ್ಣಯ	ಅನ್ವಯಿಕ ವಿಜ್ಞಾನ	'ರಾಧಾಕೃಷ್ಣರಾವ್'	
	೧೯೬೯	ಜುಲೈ-೧೫೫				
೪೦೭			ನಮ್ಮ ಹೊಸ ಮುಖ್ಯ ಸೇನಾಪತಿ: ಮಾಣಿಕ್ ಶಾ	ವ್ಯಕ್ತಿ ಪರಿಚಯ	'ಮುರಳೀಧರ'	
೪೦೮			ವಾನರಾಯಣ	ಹರಟೆ	ಲಾಂಗೂಲಾಚಾರ್ಯ	
	೧೯೬೯	ಆಗಸ್ಟ -೧೫೬				
೪೦೯			ವೀಣೆ ಶೇಷಣ್ಣ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ಜಗದ್ವಿಖ್ಯಾತ ಕಲಾಗಾರ.
೪೧೦			ಜಗನಾಥಪುರಿ	ನಗರ ಪರಿಚಯ	ಪಾ.ವೆಂ.	ಇಲ್ಲಿ ಜಾತೀಯತೆ ಇಲ್ಲ.
೪೧೧			ಈ ನ್ಯಾಯಗಳೇ ಬೇರೆ	ವಿವೇಚನೆ	'ಮುರಳೀಧರ'	ನಾನಾ ರೀತಿಯ ನ್ಯಾಯಗಳು.
	೧೯೬೯	ಸೆಪ್ಟೆಂಬರ್-೧೫೭				
೪೧೨			ಚಂದ್ರ ನಮಗೇನು ಮಾಡುತ್ತಾನೆ	ಖಗೋಳ ಜ್ಞಾನ	'ರಾಧಾಕೃಷ್ಣರಾವ್'	
	೧೯೬೯	ಅಕ್ಟೋಬರ್-೧೫೮				
೪೧೩			ಸೇವಕರೇ ಎಲ್ಲ	ಹರಟೆ	ಲಾಂಗೂಲಾಚಾರ್ಯ	
೪೧೪			ಗಾಂಧೀಜಿಯ ಅಗ್ನಿ ಪರೀಕ್ಷೆ	ಘಟನಾತ್ಮಕ ಮಾಹಿತಿ	ಪಾ.ವೆಂ.	ನೌಕರಿಯಲ್ಲಿ ಗಾಂಧಿ ಯಾತ್ರೆಯ ಕಥೆ.
	೧೯೬೯	ನವೆಂಬರ್-೧೫೯				
೪೧೫			ಸೌದಿ ಅರಸರ ಅದ್ಭುತ ಕೊಡುಗೆ	ಮಾಹಿತಿ	'ರಾಧಾಕೃಷ್ಣರಾವ್'	ವೈಭವಯುತ ರಾಜ್ಯ.
೪೧೬			ಸ್ಥಾವರ ವಿದ್ಯುತ್ ವಿಕಟವಿಲಾಸ	ಘಟನಾತ್ಮಕ ನೆನಪು	'ಮುರಳೀಧರ'	ವಿದ್ಯುತ್ ಶಕ್ತಿಯ ಪರಿಣಾಮ
೪೧೭			ನಿಂದಕರಿರಬೇಕು	ಹರಟೆ	ಲಾಂಗೂಲಾಚಾರ್ಯ	

	೧೯೬೯	ಡಿಸೆಂಬರ್–೧೬೦				
೪೧೮			ಬ್ರಹ್ಮಗುಪ್ತ: ಭಾರತದ ಮಹಾಗಣಕ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ಗಣಿತ ಶಾಸ್ತ್ರದ ಆಸಕ್ತಿ
	೧೯೭೦	ಜನವರಿ–೧೬೧				
೪೧೯			ಚೀನಾದ ಮುಖದ ಮೇಲೊಂದು ಮೊಡವೆ	ದೇಶ ಪರಿಚಯ	'ಮುರಳೀಧರ'	
೪೨೦			ಹ.ರಾ. ಪುರೋಹಿತರು	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	೩೫ ವರ್ಷಗಳಿಂದ ಆತ್ಮೀಯರು
೪೨೧			ಕಶ್ಯಪ ಮಾತಂಗ	ವ್ಯಕ್ತಿ ಚಿತ್ರ	'ರಾಧಾಕೃಷ್ಣರಾವ್'	ಧರ್ಮ ಪ್ರಚಾರಕ್ಕಾಗಿ ಚೀನಾಕ್ಕೆ ಹೋದ ಪ್ರಥಮ ಭಾರತೀಯ.
	೧೯೭೦	ಫೆಬ್ರುವರಿ–೧೬೨				
೪೨೨			ಶ್ರೀ ಎಂ. ಮಧ್ವರಾಜರು	ವ್ಯಕ್ತಿ ಪರಿಚಯ	ಪಾ.ವೆಂ.	ಮತ್ಸೋದ್ಯಮಿ (ಉಡುಪಿ)
೪೨೩			ಜಾತಿಯ ಪ್ರಶ್ನೆ : ಅರ್ಥ ಮತ್ತು ಅನರ್ಥ	ರಾಜಕೀಯ ವಿಶ್ಲೇಷಣೆ	'ವಿಚಾರಿ'	ಐತಿಹಾಸಿಕ ಆಧಾರ
೪೨೪			ಬಿರುಗಾಳಿ ಹುಟ್ಟಿ ಕೊಳ್ಳುವುದು ಹೇಗೆ?	ವಾತಾವರಣ ಜ್ಞಾನ	'ಮುರಳೀಧರ'	
	೧೯೭೦	ಮಾರ್ಚ–೧೬೩				
೪೨೫			ನನ್ನ ಗುರು ಸವಾಯಿ ಗಂಧರ್ವ	ವ್ಯಕ್ತಿ ಪರಿಚಯ	'ಕಸ್ತೂರಿ ಪ್ರತಿನಿಧಿ'	ಗಂಗೂಬಾಯಿ ಹಾನಗಲ್‌ರ ಸಾಧನೆ
೪೨೬			ಬರ್ನಾಡ್ ಡೆವ್ಲಿನ್	ವ್ಯಕ್ತಿ ಪರಿಚಯ	'ಮುರಳೀಧರ'	
೪೨೭			ಬರಲಿದೆ ಬುದ್ಧಿಶಾಲಿಗಳ ಸುಗ್ಗಿ	ವಿವೇಚನೆ	'ರಾಧಾಕೃಷ್ಣರಾವ್'	
೪೨೮			ಗಡಿಸಮಸ್ಯೆ: ವಿವೇಕ ಮತ್ತು ಅವಿವೇಕ	ರಾಜಕೀಯ ವಿಶ್ಲೇಷಣೆ	'ವಿಚಾರಿ'	
೪೨೯			ಪ್ರಶಂಸೆಯ ಪ್ರಶಂಸೆ	ಚಿಂತನ	ಪಾ.ವೆಂ.	
	೧೯೭೦	ಏಪ್ರಿಲ್–೧೬೪				
೪೩೦			ತ್ಯಾಗದಿಂದ ನಮ್ಮನ್ನುಳಿಸಿ	ಹರಟೆ	ಲಾಂಗೂಲಾಚಾರ್ಯ	
೪೩೧			ಅನಂದಿಬಾಯಿ ಜೋಶಿ	ವ್ಯಕ್ತಿ ಪರಿಚಯ	'ಮುರಳೀಧರ'	ವಿದೇಶದಲ್ಲಿ ವೈದ್ಯಕೀಯ ಪದವಿ ಪಡೆದ ಭಾರತೀಯ 'ಸ್ತ್ರೀ'.
೪೩೨			ಬಿರ್ಲಾ ತಾರಾಮಂಡಲಕ್ಕೆ ಬನ್ನಿ	ಖಗೋಳ ಪರಿಚಯ	'ರಾಧಾಕೃಷ್ಣರಾವ್'	ಬಿರ್ಲಾ ಮನೆತನದ 'ವಿಶ್ವಾಮಿತ್ರ ಸೃಷ್ಟಿ'
	೧೯೭೦	ಮೇ–೧೬೫				
	೧೯೭೦	ಜೂನ್–೧೬೬				
೪೩೩			ಹಿಂದೂ ಬುದ್ಧಿ ದ್ವಂದ್ವ ಬುದ್ಧಿ (ನೀರದ ಚೌದರಿ)	ರಾಜಕೀಯ ವಿಶ್ಲೇಷಣೆ	'ವಿಚಾರಿ'	
೪೩೪			ಎಡ್ವರ್ಡ್ ಕೆನ್ನೆಡಿ ಅಮೇರಿಕಾದ ಅಧ್ಯಕ್ಷರಾಗಬಹುದೇ?	ರಾಜಕೀಯ ವಿಶ್ಲೇಷಣೆ	ಪಾ.ವೆಂ.	
೪೩೫			ದಕ್ಷಿಣೇಶ್ವರನ ಕಥೆ	ಐತಿಹ್ಯ	'ಮುರಳೀಧರ'	ಶ್ರೀ ರಾಮಕೃಷ್ಣರ ತಪೋಭೂಮಿ

೪೩೬			ಪೋಷಣೆ ಮತ್ತು ಬುದ್ಧಿ ಶಕ್ತಿ	ಆಹಾರದ ವಿಶ್ಲೇಷಣೆ	'ಮುರಳೀಧರ'	ಗರ್ಭಿಣಿ ಮತ್ತು ಮಗು
	೧೯೭೦	ಜುಲೈ-೧೬೭				
೪೩೭			ಅಮೇರಿಕಾದ ಪತ್ರಿಕಾ ಚಕ್ರವರ್ತಿ: ಹೆನ್ರಿ ಲೂಸ್	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ಪತ್ರಿಕೋದ್ಯಮಿಯ ಮಹತ್ವ
	೧೯೭೦	ಆಗಸ್ಟ್-೧೬೮				
೪೩೮			ಫ್ಲಾರೆನ್ಸಿ : ಯುರೋಪಿನ ನವಯುಗದ ಹರಿಕಾರ	ವ್ಯಕ್ತಿ ಪರಿಚಯ	'ಮುರಳೀಧರ'	
೪೩೯			ಕೃತಕ ಮನುಷ್ಯ ಸೃಷ್ಟಿಯೇ?	ವಿಜ್ಞಾನ ವಿಚಾರ	'ರಾಧಾಕೃಷ್ಣರಾವ್'	ಆಧುನಿಕ ಸಂಶೋಧನೆ
೪೪೦			ಗೊಣಗಿ ಗೊಣಗಿ ಕ್ರಾಂತಿ ತಪ್ಪಿಸಿ	ಹರಟೆ	ಲಾಂಗೂಲಾಚಾರ್ಯ	
	೧೯೭೦	ಸೆಪ್ಟೆಂಬರ್-೧೬೯				
೪೪೧			ಮಾನವೀ ಸಮಸ್ಯೆ	ಹರಟೆ	ಲಾಂಗೂಲಾಚಾರ್ಯ	
೪೪೨			ಯುಗ ಪುರಷ ಲೆನಿನ್	ವ್ಯಕ್ತಿ ಪರಿಚಯ	ಪಾ.ವೆಂ.	ಕಾರ್ಮಿಕ ಕ್ರಾಂತಿಯ ಕನಸುಗಾರ
೪೪೩			ಜಾಕಲೀನ್ ಕೆನ್ನಡಿ : ಅಭಿಶಪ್ತ ದೇವತೆ	ವ್ಯಕ್ತಿ ಪರಿಚಯ	'ಮುರಳೀಧರ'	
೪೪೪			ಪ್ರಾಣಿಗಳಲ್ಲಿ ಶಿಶುಪಾಲನೆ	ಪ್ರಾಣಿಜ್ಞಾನ	'ರಾಧಾಕೃಷ್ಣರಾವ್'	
	೧೯೭೦	ಅಕ್ಟೋಬರ್-೧೭೦				
೪೪೫			ಆತ್ಮಸಾಕ್ಷಿಗೆ ಕೈಪಿಡಿ	ಹರಟೆ	ಲಾಂಗೂಲಾಚಾರ್ಯ	
೪೪೬			ನಾಟ್ಯಚಾರ್ಯ ಶ್ರೀನಿವಾಸ ಕುಲಕರ್ಣಿ	ವ್ಯಕ್ತಿ ಪರಿಚಯ	ಪಾ.ವೆಂ.	ನಾಟ್ಯವೇ ಅವರ ಜೀವನ
೪೪೭			ಕಪ್ಪು ಮೃತ್ಯು	ಆರೋಗ್ಯ ವಿವರ	'ರಾಧಾಕೃಷ್ಣರಾವ್'	ಜಗತ್ತಿನ ಪ್ಲೇಗ್ ಹಾವಳಿಯ ಬಗ್ಗೆ
೪೪೮			ಎರಡು ಧ್ರುವಗಳ ನಡುವೆ ಲೆಬನಾನ್	ದೇಶ ಪರಿಚಯ	'ಶ್ರೀನಿಧಿರಾವ್'	
೪೪೯			ಹಸಿದ ಜಗತ್ತಿಗೆ ಹೊಸ ಆಹಾರಗಳು	ಆಧುನಿಕ ಆಹಾರದ ವಿವರ	'ಮುರಳೀಧರ'	
	೧೯೭೦	ನವೆಂಬರ್-೧೭೧				
೪೫೦			ಡಾ.ಡ್ಯಾನ್ ಹೃದಯ ಶಸ್ತ್ರಕ್ರಿಯೆಯ ಮೊದಲಿಗ	ವ್ಯಕ್ತಿ ಸಾಧನೆಯ ಪರಿಚಯ	'ರಾಧಾಕೃಷ್ಣರಾವ್'	ತನ್ನ ದೇಹವನ್ನೇ ಮೊದಲು ಪ್ರಯೋಗಿಸಿದ್ದು.
	೧೯೭೦	ಡಿಸೆಂಬರ್-೧೭೨				
೪೫೧			ಮಂಗಳಕ್ಕೆ ಮಾನವ ಯಾತ್ರೆ	ಖಗೋಳ	ಪಾ.ವೆಂ.	
೪೫೨			ದ್ರೌಪತಿಯ ವಸ್ತ್ರಾಪಹರಣ	ಹರಟೆ	ಲಾಂಗೂಲಾಚಾರ್ಯ	
	೧೯೭೧	ಜನವರಿ-೧೭೩				
೪೫೩			ಈ ಶಬ್ದಕ್ಕೆ ನಾನು ಅಂಜುತ್ತೇನೆ	ಹರಟೆ	ಲಾಂಗೂಲಾಚಾರ್ಯ	
೪೫೪			ಆಸ್ಪಾರಿನ್ ನಿರುಪದ್ರವಿಯೇ	ಆರೋಗ್ಯ	ಪಾ.ವೆಂ.	

[illegible]			ನ್ಯಾಯಮೂರ್ತಿ ಮೇಹರಚಂದ ಮಹಾಜನ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ದೇಶ ಕಂಡ ಪ್ರಸಿದ್ಧ ನ್ಯಾಯಮೂರ್ತಿ
೪೫೬			ರಾಣಿ ಕೆರೋಲನ್ನಳ ವಿಚಾರಣೆ	ಘಟನಾತ್ಮಕ ಪರಿಚಯ	'ಮುರಳೀಧರ'	ಜರ್ಮನ್‌ನ ರಾಜಕುಮಾರಿ
	೧೯೭೧	ಫೆಬ್ರುವರಿ-೧೭೪				
೪೫೭			ಶಾಸ್ತ್ರವನ್ನೇಕೆ ಪಾಲಿಸಬೇಕು	ಹರಟೆ	'ವಿಚಾರಿ'	
೪೫೮			ಮನೋರಂಜನೆಯಲ್ಲಿ ಲೈಂಗಿಕ ಸ್ವಾತಂತ್ರ್ಯ	ವಿವೇಚನೆ	'ರಮಾರಮಣ'	
೪೫೯			ಉತ್ತರ ತುದಿ : ಲ್ಯಾಪ್ ಲ್ಯಾಂಡ್	ದೇಶ ಪರಿಚಯ	'ಮುರಳೀಧರ'	ನಾಗರೀಕತೆಯ ಉದಯ
	೧೯೭೧	ಮಾರ್ಚ್-೧೭೫				
೪೬೦			ಪ್ರಜ್ಞಾವಾದ : ದಿಟ ಮತ್ತು ಸಟೆ	ರಾಜಕೀಯ ವಿಶ್ಲೇಷಣೆ	'ವಿಚಾರಿ'	ಸ್ವತಂತ್ರ ಭಾರತದ ಕಲ್ಪನೆ
೪೬೧			ಹಿಂದೂ ಸಾಗರದಲ್ಲಿ ಏನದು ಗಲಿಬಿಲಿ?	ಘಟನಾತ್ಮಕ ವಿಶ್ಲೇಷಣೆ	'ರಮಾರಮಣ'	
೪೬೨			ಅನ್ಯೋಕ್ತಿ	ಸುಭಾಷಿತ	ಮುರಳೀಧರ	ಸಂಸ್ಕೃತದಿಂದ ಅನುವಾದ
	೧೯೭೧	ಎಪ್ರಿಲ್-೧೭೬				
೪೬೩			ಇಂದಿರಾ ಜನತೆಯ ಆಯ್ಕೆ	ಪ್ರಚಲಿತ ರಾಜಕೀಯ ವಿಶ್ಲೇಷಣೆ	'ರಮಾರಮಣ'	ಕಾಂಗ್ರೇಸ್ಸಿನ ಗೆಲುವು
೪೬೪			ಪ್ರಜಾಸತ್ತೆಯ ದೇಖಾವೆ	ಹರಟೆ	ಲಾಂಗೂಲಾಚಾರ್ಯ	
೪೬೫			ಇವರಿಗೆ ಗುಪ್ತಗಾಮಿನಿಯ ಮೋಹ	ಸಾಧನೆಯ ವಿವರ	'ರಾಧಾಕೃಷ್ಣರಾವ್'	ನದಿಗಳ ಶೋಧನೆ
೪೬೬			ಕ್ಯಾನ್ಸರ್ ಸಂಶೋಧನೆಯಲ್ಲಿ ಹೊಸಹೆಜ್ಜೆಗಳು	ಆರೋಗ್ಯ ವಿವರ	ಪಾ.ವೆಂ.	
೪೬೭			ಮರೆಯಲು ಕಲಿಯಿರಿ	ಆರೋಗ್ಯ ವಿವೇಚನೆ	'ಮುರಳೀಧರ'	ಸಂದೇಶ
	೧೯೭೧	ಮೇ-೧೭೭				
	೧೯೭೧	ಜೂನ-೧೭೮				
೪೬೮			ಬಾಂಗ್ಲಾದೇಶ: ಒಂದು ಹಿನ್ನೋಟ	ದೇಶ ರಾಜಕೀಯ ಪರಿಚಯ	'ರಮಾರಮಣ'	ವಿವಾದಾಸ್ಪದ ದೇಶ
೪೬೯			ಟೈಟಾನಿಕ್ ದುರಂತ	ಘಟನಾತ್ಮಕ ವಿವರ	'ಮುರಳೀಧರ'	
	೧೯೭೧	ಜುಲೈ-೧೭೯				
೪೭೦			ತೆರಿಗೆಗಳು ಮತ್ತು ಪಾರ್ಕಿನ್‌ಸನ್‌ನ ಎರಡನೇ ಸೂತ್ರ	ರಾಜಕೀಯ ವಿಶ್ಲೇಷಣೆ	'ಮುರಳೀಧರ'	
೪೭೧			ಮನುಷ್ಯನ ಮನಸ್ಸಿನ ಮೇಲೆ ಪ್ರಭುತ್ವ ಸ್ಥಾಪಿಸುವರೇ?	ವಿಜ್ಞಾನ	'ಶ್ರೀನಿವಾಸಪ್ಪ'	
	೧೯೭೧	ಆಗಸ್ಟ್-೧೮೦				
೪೭೨			ಜೋನ್ ಮರಿಯಮ್ಮಳ ಮಹಾಯಾತ್ರೆ	ವ್ಯಕ್ತಿ ಪರಿಚಯ ಮತ್ತು ವಿಸ್ಮಯ	'ಮುರಳೀಧರ'	ಒಂಟಿಯಾಗಿ ವಿಮಾನ ಯಾನ ಮಾಡಿದ ಮಹಿಳೆ ೧೯೩೭.
೪೭೩			ವಂಚಕ ಶಿಖಾಮಣಿ ಕ್ರೂಗರ್	ವ್ಯಕ್ತಿ ಪರಿಚಯ ಮತ್ತು ವಿಸ್ಮಯ	'ರಾಧಾಕೃಷ್ಣರಾವ್'	

೪೭೪			ಚಂದ್ರಲೋಕದಲ್ಲಿ ಮನುಷ್ಯ ವಸತಿಯೇ?	ಖಗೋಳ ವಿಜ್ಞಾನ	ಪಾ.ವೆಂ.	
	೧೯೭೧	ಸೆಪ್ಟೆಂಬರ್-೧೮೧				
೪೭೫			ಬಂಗ್ಲಾ ಸಮಸ್ಯೆಯಲ್ಲಿ ನಮಗುಳಿದ ದಾರಿಯೇನು?	ಪ್ರಚಲಿತ ರಾಜಕೀಯ ವಿಶ್ಲೇಷಣೆ	'ರಮಾರಮಣ'	ಪರಿಹಾರ
೪೭೬			ರಾಜಕಾರಣವೂ "ವೃತ್ತಿ"ಯಾಗಬೇಕೆ	ರಾಜಕೀಯ ವಿಶ್ಲೇಷಣೆ	'ಮುರಳೀಧರ'	
೪೭೭			ನಿಮ್ಮ ಸಂವತ್ಸರ ಫಲ ಹೇಗಿದೆ?	ವಿವೇಚನೆ	'ರಾಧಾಕೃಷ್ಣರಾವ್'	
	೧೯೭೧	ಅಕ್ಟೋಬರ್-೧೮೨				
೪೭೮			ಪ್ರತಿ ವಿಶ್ವ ಇರಬಹುದೆ?	ವಿಸ್ಮಯ ಶೋಧನಾತ್ಮಕ	'ರಾಧಾಕೃಷ್ಣರಾವ್'	
೪೭೯			ನ್ಯೂಜಿಲ್ಯಾಂಡ್ ಕಲ್ಯಾಣ ರಾಜ್ಯದ ಸ್ವರ್ಗ	ದೇಶ ಪರಿಚಯ	'ಮುರಳೀಧರ'	
	೧೯೭೧	ನವೆಂಬರ್-೧೮೩				
೪೮೦			"ನಾನು ಹೋದರೆ ಸ್ವರ್ಗಕ್ಕೆ ಹೋಗಬಹುದು"	ಚಿಂತನ	'ರಾಧಾಕೃಷ್ಣರಾವ್'	ಗೀತೆಯ ಪ್ರಾಮುಖ್ಯತೆ.
೪೮೧			ಶ್ರೀ ಪೇಜಾವರ ಸ್ವಾಮಿಗಳು	ವ್ಯಕ್ತಿ ಪರಿಚಯ	ಪಾ.ವೆಂ. ಆಚಾರ್ಯ	ಮಠಾಧಿಪತಿಗಳ ಸಾಮಾಜಿಕ ಕರ್ತವ್ಯದ ಬಗ್ಗೆ.
೪೮೨			ನಿಕಿತಾ ಕ್ರುಶ್ಚೇವ್	ವಿಖ್ಯಾತ ವ್ಯಕ್ತಿ ಪರಿಚಯ	'ಮುರಳೀಧರ'	ರಶಿಯಾದ ಮಹಾ ಮುತ್ಸದ್ದಿ
	೧೯೭೧	ಡಿಸೆಂಬರ್-೧೮೪				
೪೮೩			ಚೋಟುದ್ದದ ವಾನರ ಮಾನವ	ಜೀವ ವಿಜ್ಞಾನ	'ಮುರಳೀಧರ'	
೪೮೪			ಧ್ಯೇಯವಾದಿ ಸಾಹಿತಿ ಅಂದ್ರೆ ಮಾಲ್ರಾ	ವ್ಯಕ್ತಿ ಪರಿಚಯ	ಪಾ.ವೆಂ.	ಬಂಗ್ಲಾ ವಿಮುಕ್ತಿಗಾಗಿ ಹೋರಾಟ ನಡೆಸಿದವರು.
	೧೯೭೨	ಜನವರಿ-೧೮೫				
೪೮೫			ಶ್ರೀ ಅರವಿಂದರು	ವ್ಯಕ್ತಿ ಪರಿಚಯ	'ಮುರಳೀಧರ'	ಮಹಾಯೋಗಿಯ ಜನ್ಮಶತಾಬ್ದಿ ವರ್ಷ
೪೮೬			ಪಾಬ್ಲೊ ನೇರುದ ಚಿಲಿ ದೇಶದ ಮಹಾಕವಿ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ನೋಬೆಲ್ ಪಾರಿತೋಷಕ ಪಡೆದ ಸಂದರ್ಭ.
	೧೯೭೨	ಫೆಬ್ರುವರಿ-೧೮೬				
೪೮೭			ಕನಸು ಮತ್ತು ಭವಿಷ್ಯ	ಮನೋವಿಜ್ಞಾನ ವಿಶ್ಲೇಷಣೆ	'ಹನುಮಪ್ಪ'	
೪೮೮			ದೃಷ್ಟಿಚಕ್ರ	ಕವನ	'ರಘು'	
೪೮೯			ಪಾಕ್ "ಭಾಗ್ಯವಿಧಾತ" ಭುಟ್ಟೊ	ವ್ಯಕ್ತಿ ಪರಿಚಯ	'ರಮಾರಮಣ'	ಭಾರತದ್ವೇಶಿ?
೪೯೦			ಝುಂಝು ಬಾರನಲ್ಲಿ ಹೊಸಗಾಳಿ	ದೇಶ ಪರಿಚಯ	'ಮುರಳಿಧರ'	ಕಪ್ಪು ಸಮಾಜವಾದ

	೧೯೭೨	ಮಾರ್ಚ್–೧೮೭				
೪೯೧			ಯುಗಾದಿಯ ಕಥೆ	ವಿವೇಚನೆ (ಖಗೋಳ)	'ರಾಧಾಕೃಷ್ಣ'	ಆ ಕಾಲಮಾನದ ರೀತಿ
೪೯೨			ನಿಕ್ಸನ್ನರೊಡನೆ ನಾವು	ಹರಟೆ	ಲಾಂಗೂಲಾಚಾರ್ಯ	
	೧೯೭೨	ಏಪ್ರಿಲ್–೧೮೮				
೪೯೩			'ಇಂದಿರಾ ಗಾಳಿ'	ವ್ಯಕ್ತಿ ಪರಿಚಯ	'ರಮಾರಮಣ'	ಕಾಂಗ್ರೆಸ್ ಪಕ್ಷದ ಗೆಲುವು
	೧೯೭೨	ಮೇ–೧೮೯				
೪೯೪			ಮೂರು ಸಾವಿರ ಮಠದ ಜಗದ್ಗುರುಗಳು	ವ್ಯಕ್ತಿ ಪರಿಚಯ	ಪಾ.ವೆಂ.	
೪೯೫			ನನ್ನ ಗಣಿತದ ಸಮಸ್ಯೆಗಳು	ಹರಟೆ	ಲಾಂಗೂಲಾಚಾರ್ಯ	
೪೯೬			ಆಜ್ಞಾಪಾಲನೆ ಮನುಷ್ಯ ಸ್ವಭಾವವೇ?	ವಿವೇಚನೆ	'ರಾಧಾಕೃಷ್ಣರಾವ್'	ಘೋರ ಕೃತ್ಯಗಳ ಬಗ್ಗೆ
೪೯೭			ಮುದಿ ರಾಣಿಯ ತರುಣ ಪ್ರಿಯಕರ– ಬ್ರಿಟನ್ನಿನ ರಾಣಿ ಎಲಜಬೆತ್.	ಕೌತುಕ ಘಟನೆ	'ಮುರಳೀಧರ'	ಅಧಿಕಾರದ ದುರಪಯೋಗ
	೧೯೭೨	ಜೂನ್–೧೯೦				
೪೯೮			ಭಾರತದಲ್ಲಿ ಬಡತನದ ಮುಖ	ಆರ್ಥಿಕ ವಿಶ್ಲೇಷಣೆ	ಪಾ.ವೆಂ.	ಇಂದಿರಾಗಾಂಧಿಯ ಘೋಷಣೆ 'ಗರಿಬಿ ಹಟಾವೋ'.
	೧೯೭೨	ಜುಲೈ–೧೯೧				
೪೯೯			ಭಾರತದಲ್ಲಿ ಭೂ ಸುಧಾರಣೆಯ ಮಹಾಭಾರತ	ರಾಜಕೀಯ ವಿಶ್ಲೇಷಣೆ	'ರಾಧಾಕೃಷ್ಣರಾವ್'	
೫೦೦			ಅಂಟಾರ್ಕ್ಟಿಕಾದಲ್ಲಿ ವಿಜ್ಞಾನಿಗಳು ಏನು ಮಾಡುತ್ತಿದ್ದಾರೆ?	ಪ್ರಚಲಿತ ಶೋಧನೆ	'ರಾಧಾಕೃಷ್ಣರಾವ್'	ಶಾಂತಿ–ಜ್ಞಾನಾಭಿವೃದ್ಧಿಯ ಕೇಂದ್ರ
೫೦೧			ನಾನು ನಾನಲ್ಲವೆ?	ಹರಟೆ	ಲಾಂಗೂಲಾಚಾರ್ಯ	
೫೦೨			ಹಾರ್ಮೋನುಗಳ ಅದ್ಭುತ ಪ್ರಪಂಚ	ಶರೀರ ಜ್ಞಾನ ಮಾಹಿತಿ	'ಕೃಷ್ಣಮೂರ್ತಿ'	ವಯಸ್ಸಿನ ಬದಲಾವಣೆ
	೧೯೭೨	ಆಗಸ್ಟ್–೧೯೨				
೫೦೩			ಶ್ವಸನ ಯಂತ್ರ ಪುಪ್ಪುಸ	ಶರೀರ ಜ್ಞಾನ ಮಾಹಿತಿ	'ಮುರಳೀಧರ'	
೫೦೪			ಮಹಾದಾರ್ಶನಿಕ ಪ್ಲೇಟೊ	ವ್ಯಕ್ತಿ ಪರಿಚಯ	'ಮುರಳೀಧರ'	ತತ್ತ್ವಜ್ಞಾನಿಯ ಪ್ರಯಾಣ
	೧೯೭೨	ಸೆಪ್ಟೆಂಬರ್–೧೯೩				
೫೦೫			'ದ್ವೀಪದಲ್ಲಿ ಧರ್ಮಯುದ್ಧ'	ದೇಶ ಪರಿಚಯ	'ಮುರಳೀಧರ'	
೫೦೬			ಆರ್‌ಹೆಚ್ ಶಿಶುಗಳಿಗೊಂದು ಆಶಾಕಿರಣ	ಶರೀರ ಸ್ವಾಸ್ಥ್ಯ ಮಾಹಿತಿ	'ರಾಧಾಕೃಷ್ಣರಾವ್'	
೫೦೭			ದೂರಲೋಕದಲ್ಲಿ 'ಮನುಷ್ಯರಿಗಾಗಿ' ಹುಡುಕಾಟ	ಖಗೋಳ ಮಾಹಿತಿ	'ಶ್ರೀನಿವಾಸರಾವ್'	ಆಧುನಿಕ ಸಂಶೋದನೆ

	೧೯೭೨	ಅಕ್ಟೋಬರ್-೧೮೪				
೫೦೮			ಬಾಬಿ ಫಿಷರ್	ವ್ಯಕ್ತಿ ಪರಿಚಯ	'ರಮಾರಮಣ'	ಚದುರಂಗದ ಚಕ್ರವರ್ತಿ
೫೦೯			ಸಿದ್ಧವಾಗಿದೆ ಮೃತ್ಯುಕಿರಣ	ವಿಜ್ಞಾನ ವಿವರ	'ರಾಧಾಕೃಷ್ಣರಾವ್'	ಲೇಸರ್ ಪ್ರಕಾಶ ಭೀಕರ ಅಸ್ತ್ರ
೫೧೦			ನಿಮ್ಮ ಹೆಸರೇನು	ಕಥೆ	'ಕೃಷ್ಣಮೂರ್ತಿ'	
	೧೯೭೨	ನವೆಂಬರ್-೧೮೫				
೫೧೧			ಹಾರಿಹೋದ ನೆನಪು ಮರಳಿ ಬಂತು	ಮನೋವೈದ್ಯಕೀಯ ವಿದ್ಯಮಾನ	'ಕಸ್ತೂರಿ ಪ್ರತಿನಿಧಿ'	
೫೧೨			ನಾನು ಆಸ್ಟ್ರಾ ಅರ್ಧ ಷಷ್ಠ್ಯಬ್ದಿ ಆಚರಿಸಲಿದ್ದೇನೆ	ಹರಟೆ	ಲಾಂಗೂಲಾಚಾರ್ಯ	
೫೧೩			ಅಮೇರಿಕಾದ ಅಧ್ಯಕ್ಷ	ಹುದ್ದೆ ಪರಿಚಯ	'ರಮಾರಮಣ'	ಅಧ್ಯಕ್ಷ ಹುದ್ದೆಯ ಚರ್ಚೆ
	೧೯೭೨	ಡಿಸೆಂಬರ್-೧೮೬				
೫೧೪			ವಿಜ್ಞಾನ ಪ್ರಗತಿಗೆ ಈ ಬೆಲೆ ತೆರಬೇಕೆ?	ವಿವೇಚನೆ	'ಮುರಳೀಧರ'	
೫೧೫			ಅವನು ಮತ್ತೊಬ್ಬನ ಆತ್ಮಚರಿತ್ರೆಯನ್ನು ಬರೆದ-ಹಾವರ್ಡ್ ಹ್ಯೂಸ್	ಸತ್ಯ ಘಟನೆ	'ಕೃಷ್ಣಮೂರ್ತಿ'	ಘಟನಾತ್ಮಕ ನೆನಪು
	೧೯೭೩	ಜನವರಿ-೧೮೭				
೫೧೬			ಗಾಂಧೀಜಿಯ ಅಂತರ್ವಾಣಿ	ಘಟನಾತ್ಮಕ ವಿವರ	'ಮುರಳೀಧರ'	ಆಗಂತುಕನ ನುಡಿ
೫೧೭			ಯಾರು ಈ ಪಾಟೀಲರು?	ಕುಲನಾಮದ ಪರಿಚಯ	'ಶ್ರೀನಿವಾಸಪ್ಪ'	ಭಾಷಾ ವಿಜ್ಞಾನ
೫೧೮			ಕೇಳಿದ್ದೀರಾ-ವಾರಕ್ಕೆ ನಾಲ್ಕೇದಿನ ಕೆಲಸ	ವಿವೇಚನೆ	'ರಾಧಾಕೃಷ್ಣರಾವ್'	ಕಾರ್ಮಿಕರಿಗೆ ರಜೆ ನೀಡುವ ವಿವರ
೫೧೯			ಕೊಂದವರ ಯಾರು?	ನಿಗೂಢ ಶೋಧನೆ	ಶ್ರೀನಿಧಿರಾವ್	
	೧೯೭೩	ಫೆಬ್ರುವರಿ-೧೮೮				
೫೨೦			ನಕ್ಕು ಆಯುಷ್ಯ ಹೆಚ್ಚಿಸಿಕೊಳ್ಳಿ	ಮನೋವೈಜ್ಞಾನಿಕ	'ಮುರಳೀಧರ'	ವ್ಯಾಯಾಮ
೫೨೧			ಸತ್ತರೂ ಅವಳ ಶವಕ್ಕೆ ಸಾವಿಲ್ಲ	ನಿಗೂಢ ಶೋಧ ಘಟನಾತ್ಮಕ	'ರಾಧಾಕೃಷ್ಣರಾವ್'	ಅರ್ಜೆಂಟಾನಾದ ಅಧ್ಯಕ್ಷೆ ಫೆರಾವ (ಸಂಸ್ಕಾರವಾಗದ ಹೆಣ)
೫೨೨			ಅಳಿಯುತ್ತಿರುವ ಉರಗ ಮೊಸಳೆ	ಪ್ರಾಣಿಲೋಕದ ಮಾಹಿತಿ	'ಕೃಷ್ಣಮೂರ್ತಿ'	
	೧೯೭೩	ಮಾರ್ಚ್-೧೮೯				
೫೨೩			ಸ್ಮರಣಶಕ್ತಿಯನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು	ಮನೋವೈಜ್ಞಾನಿಕ ಸಲಹೆ	'ರಾಧಾಕೃಷ್ಣರಾವ್'	ಅಮೇರಿಕಾದ ತಜ್ಞರ ಉಪಾಯಗಳು
	೧೯೭೩	ಎಪ್ರಿಲ್-೨೦೦				
೫೨೪			ಆಂಧ್ರದಲ್ಲಿ ನಡೆದಿರುವುದೇನು?	ಪ್ರಚಲಿತ ವಿದ್ಯಮಾನ ವಿಶ್ಲೇಷಣೆ	'ಮುರಳೀಧರ'	ಕಾಣದ ಕೈಯ ಕೈವಾಡ

೩೨೫			ಕಲ್ಯಾಣರಾಜ್ಯ ಕಲ್ಯಾಣ ತಂದೀತೆ?	ವಿವೇಚನೆ	'ವಿಚಾರಿ'	ಸ್ವತಂತ್ರ ಭಾರತದ ಔಚಿತ್ಯ
೩೨೬			ಮಹರ್ಷಿ ಮಹೇಶಯೋಗಿಗಳ ಕ್ರಾಂತ ಧ್ಯಾನದ ಆಶ್ಚರ್ಯಗಳು	ಪರಿಚಯ ಮಾಹಿತಿ	'ರಾಧಾಕೃಷ್ಣರಾವ್'	ಆಧುನಿಕ ಯುಗಕ್ಕೆ ವರ
	೧೯೭೩	ಮೇ-೨೦೧				
೩೨೭			ಸಮಾಜವಾದ ಮತ್ತು ರಾಜಕೀಯ ಪಕ್ಷಗಳು	ರಾಜಕೀಯ	'ವಿಚಾರಿ'	
೩೨೮			ಪ್ರಾಮಾಣಿಕತೆಯಲ್ಲಿ ಸುಖವಿದೆ	ಮಾನವೀಯ ವರ್ತನೆ-ವಿವೇಚನೆ	'ಮುರಳೀಧರ'	
	೧೯೭೩	ಜೂನ್-೨೦೨				
೩೨೯			ನ್ಯಾಯಾಂಗ ಕಾರ್ಯಾಂಗಗಳ ತಿಕ್ಕಾಟಕ್ಕೆ ಕಾರಣವೇನು?	ರಾಜಕೀಯ ವಿಶ್ಲೇಷಣೆ	'ರಮಾರಮಣ'	ರಾಜಕೀಯ ಕಾಳಜಿ
೩೩೦			ಮನುಷ್ಯರಿಗೂ ವಾಸನೆಯುಂಟೇ	ಮಾನವೀಯವರ್ತನೆ ವಿವೇಚನೆ	'ರಾಧಾಕೃಷ್ಣರಾವ್'	
೩೩೧			ಐನ್‌ಸ್ಟೀನ್ ಶಾಲೆಯಲ್ಲಿ ದಡ್ಡನಾಗಿದ್ದರು	ಮಾಹಿತಿ	'ಮುರಳೀಧರ'	ಸಾಧಕನ ಪರಿಚಯ
೩೩೨			ಪೋಲಿಸು ನೀತಿಯಲ್ಲಿ ಬದಲಾವಣೆ ಬೇಕೆ?	ಆಡಳಿತ ವಿವೇಚನೆ	'ಕೃಷ್ಣಮೂರ್ತಿ'	ದೇಶದ ಪೋಲಿಸು ವ್ಯವಸ್ಥೆ
	೧೯೭೩	ಜುಲೈ-೨೦೩				
೩೩೩			ಕೆಂಪು ಚೀನ ಸಾಧಿಸಿದ್ದೇನು?	ವಿದೇಶ ರಾಜಕೀಯ ವಿವೇಚನೆ	'ಮುರಳೀಧರ'	ಕಮ್ಯುನಿಸ್ಟ್ ಕ್ರಾಂತಿಯ ಬಗ್ಗೆ
೩೩೪			ವಾಟರ್‌ಗೇಟ್ : ನಿಕ್ಸನ್ ಮತ್ತು ರಾಜಕಾರಣ	ಹಗರಣ ತನಿಖೆ ವಿಶ್ಲೇಷಣೆ	'ರಮಾರಮಣ'	
೩೩೫			ರಾಮಾಯಣ ಬರೆದ ಗಣಿತ ಶಾಸ್ತ್ರಿ: ಸಿ.ಎಸ್.ಎಸ್.	ವ್ಯಕ್ತಿ ಪರಿಚಯ	'ರಘುಸುತ'	
	೧೯೭೩	ಆಗಸ್ಟ್-೨೦೪				
೩೩೬			ಕೇಂದ್ರ ಮತ್ತು ರಾಜ್ಯ ರಾಜಕೀಯಗಳು: ಅಧಿಕಾರ ಪರಿಸೀಮನ ಉಳಿದಿದೆಯೇ?	ರಾಜಕೀಯ ವಿಶ್ಲೇಷಣೆ	'ರಮಾರಮಣ'	ಸಂವಿಧಾನ ಉಳಿಸುವ ಬಗ್ಗೆ
೩೩೭			ಗೋಹತ್ಯೆ ಮಾಡಿರಿ	ವಿಡಂಬನೆ	ಲಾಂಗೂಲಾಚಾರ್ಯ	ಹರಟೆ
೩೩೮			ನೂರಿಸ್ಥಾನ: ಪ್ರಾಚೀನಾತಮ ಆರ್ಯನಾಡು	ವಿದೇಶ ಪರಿಚಯ	'ರಾಧಾಕೃಷ್ಣರಾವ್'	ಕಾಫಿರಿ ಜನಾಂಗದ ಬಗ್ಗೆ
	೧೯೭೩	ಸೆಪ್ಟೆಂಬರ್-೨೦೫				
೩೩೯			ವಿಜ್ಞಾನ ಯುಗಪುರುಷ ಕೋಪರ್ನಿಕಸ್	ವ್ಯಕ್ತಿ ಪರಿಚಯ	'ರಾಜಕೀಯ'	
೩೪೦			ಪ್ರಬಲ ಶಕ್ತಿಯಾಗುವ ಹವಣಿಕೆಯಲ್ಲಿ ಇರಾನ್	ದೇಶ ಪರಿಚಯ	'ಮುರಳೀಧರ'	
೩೪೧			ಹರಿಜನರ ಸಮಸ್ಯೆ : ಕೆಲ ಅನಿಷ್ಟ ಲಕ್ಷಣಗಳು	ಇತಿಹಾಸ ವಿವೇಚನೆ	ಪಾ.ವೆಂ.	ಜಾತಿ ಪದ್ಧತಿ
೩೪೨			ಕೃತಕಗೊಬ್ಬರವೊ ನೈಸರ್ಗಿಕ ಗೊಬ್ಬರವೊ?	ಕೃಷಿ ವೃತ್ತಿ ವಿವೇಚನೆ	'ಮುರಳೀದರ'	ಪರಿಸರ ಕಾಳಜಿ

	೧೯೭೩	ಅಕ್ಟೋಬರ್-೨೦೬				
೫೪೩			ಹಸಿರುಕ್ರಾಂತಿಯ ಜನಕ	ಕೃಷಿ ವಿಜ್ಞಾನಿಯ ಪರಿಚಯ	'ಶ್ರೀನಿವಾಸಪ್ಪ'	ಡಾ.ನಾರ್ಮನ ಬೋರ್ಲ್ಯಾಗರ
೫೪೪			ಯುವಕರೇನು ಮಾಡಬೇಕು?	ಚಿಂತನ	'ವಿಚಾರಿ'	ಜಗತ್ತಿನಲ್ಲಿ ಯುವಕರ ಪಾತ್ರ
೫೪೫			ಹೆಗ್ಗಳಿಕೆಗಾಗಿ ಕೊಲೆಮಾಡಿದ ಪೀಟರ್ ಮ್ಯಾನ್ಯುವೇಲ್	ಘಟನಾತ್ಮಕ ಮಾಹಿತಿ	'ರಾದಾಕೃಷ್ಣರಾವ್'	
೫೪೬			ಭೂಮಧ್ಯ ಸಮುದ್ರ ಮರುಭೂಮಿಯಾಗಿತ್ತು	ಭೂಗರ್ಭ ಶಾಸ್ತ್ರ	'ಮುರಳೀಧರ'	ಸಮುದ್ರ ಒಣಗಿದ ರೀತಿ
	೧೯೭೩	ನವೆಂಬರ್-೨೦೭				
೫೪೭			ಸೆರೆಮನೆಗಳಿಗೆ ಇಲ್ಲಿ ದ್ವಾರವೇ ಇಲ್ಲ	ವಿಚಿತ್ರ ವಿದ್ಯಮಾನ	'ಮುರಳೀಧರ'	
೫೪೮			ವ್ಯಕ್ತಿ, ಪ್ರಜಾಪ್ರಭುತ್ವ, ನೈತಿಕತೆ ಇತ್ಯಾದಿ	ರಾಜಕೀಯ ವಿಶ್ಲೇಷಣೆ	'ರಮಾರಮಣ'	ವಿಚಾರ ಮಂಥನ
	೧೯೭೩	ಡಿಸೆಂಬರ್-೨೦೮				
೫೪೯			ಎಣ್ಣೆ ರಾಜಕಾರಣ : ಹಿಂದೂ ಮುಂದು	ಆರ್ಥಿಕ ರಾಜಕಾರಣ ವಿಶ್ಲೇಷಣೆ	'ರಮಾರಮಣ'	ಪೆಟ್ರೋಲಿಯಂ ವಿವಾದ
	೧೯೭೪	ಜನವರಿ-೨೦೯				
೫೫೦			ಬ್ರಿಟಿಷ್ ಪಾರ್ಲಿಮೆಂಟಿಗೆ ನಿಂತ ಭಾರತೀಯ	ಇತಿಹಾಸ ಪರಿಚಯ	'ರಾಧಾಕೃಷ್ಣರಾವ್'	
೫೫೧			ವಿದ್ಯಾರ್ಥಿಗಳು ಯೋಚಿಸಬೇಕು	ವಿವೇಚನೆ	'ವಿಚಾರಿ'	ವಿದ್ಯಾರ್ಥಿಗಳ ಭವಿಷ್ಯ
	೧೯೭೪	ಫೆಬ್ರುವರಿ-೨೧೦				
೫೫೨			ಮತ್ತೆ ಗಡಿತಂಟೆ	ರಾಜ್ಯ ರಾಜಕೀಯ ವಿಶ್ಲೇಷಣೆ	'ವಿಚಾರಿ'	
೫೫೩			ಬಿ.ಎಚ್. ಶ್ರೀಧರರು ವ್ಯಕ್ತಿ ಮತ್ತು ವಿಚಾರ	ಆರ್ಥಿಕ ವಿಶ್ಲೇಷಣೆ	ಪಾ.ವೆಂ.	ಪಾ.ವೆಂ.ರ ಆತ್ಮೀಯ ಮಿತ್ರ
೫೫೪			ಬೆಲೆ ಏರಿಕೆ : ಅಧ ಪತನಕ್ಕೆ ಆಮಂತ್ರಣ?	ಸ್ಥಿತಿಗತಿ	'ರಮಾರಮಣ'	ಜನತೆಯ ಬದುಕು
೫೫೫			ಸಂಮೋಹಿನಿಯಿಂದ ಕೊಲೆ ಮಾಡಿಸಬಹುದೆ?	ಶೋಧನೆ ಮಾಹಿತಿ	ಮುರಳೀಧರ	
	೧೯೭೪	ಮಾರ್ಚ್-೨೧೧				
೫೫೬			ಗಲಭೆಗಳು, ಅಧಿಕಾರದಾಹ, ಪ್ರಜಾತಂತ್ರ ಇತ್ಯಾದಿ	ಸಾರ್ವಜನಿಕ ಜೀವನ	'ರಮರಮಣ'	ಸ್ವತಂತ್ರ ಭಾರತದ ಕಲ್ಪನೆ
೫೫೭			ದಾರ್ಶನಿಕ ವಿಜ್ಞಾನಿ ಸತ್ಯೇನ್ ಬೋಸ್	ವ್ಯಕ್ತಿ ಪರಿಚಯ	'ಪಾ.ವೆಂ.	ನೋಬೆಲ್ ಮಟ್ಟದ ಮಿದುಳಿನವರು
೫೫೮			ನಿಮ್ಮ ಬದುಕು ಲಯಬದ್ಧವಾಗಿದೆ	ಆರೋಗ್ಯ ಚಿಂತನ	'ರಾಧಾಕೃಷ್ಣರಾವ್'	
೫೫೯			ಶ್ರೀ, ಶ್ರೀಮತಿ, ಕುಮಾರಿ ಇತ್ಯಾದಿ	ಸಂವಹನ ವರ್ತನೆ	'ಮುರಳೀಧರ'	ಬಳಸುವ ಔಚಿತ್ಯ
	೧೯೭೪	ಏಪ್ರಿಲ್-೨೧೨				
೫೬೦			ಕನಸುಗಾರ ಜಿ.ಬಿ.	ವ್ಯಕ್ತಿ ಪರಿಚಯ	ಪಾ.ವೆಂ.	ಮನೋಹರ ಗ್ರಂಥಮಾಲೆಯ ರೂವಾರಿ.
೫೬೧			ಜ್ಯೋತಿಷ್ಯಕೆ ವೈಜ್ಞಾನಿಕ ಆಧಾರ ಉಂಟೆ?	ವಿವೇಚನೆ	'ಮುರಳೀಧರ'	

೫೬೨			ಆನಂದ ಸಂವತ್ಸರ ಭವಿಷ್ಯವು	ವಿಡಂಬನೆ	ಜೋತಿರ್ಮಾತಾಂಡ ಲಾಂಗೂಲಪಂಡಿತರು	
	೧೯೭೪	ಮೇ-೨೧೩				
೫೬೩			ಉಚ್ಚವಲಯಗಳಲ್ಲಿ ಭ್ರಷ್ಟಾಚಾರ	ವಿಶ್ಲೇಷಣೆ	ಶ್ರೀನಿಧಿರಾವ್	
೫೬೪			ಜಾನ್ ಬಾರ್ಡನ್:ಇಮ್ಮಡಿ ಬಹುಮಾನಗಳಿಸಿದ ವಿಜ್ಞಾನಿ	ವ್ಯಕ್ತಿ ಪರಿಚಯ	'ರಾಧಾಕೃಷ್ಣರಾವ್'	ವಿಜ್ಞಾನದ ಅಪ್ರತಿಮ ಸಾಧಕ
	೧೯೭೪	ಜೂನ್-೨೧೪				
೫೬೫			ಇಸ್ತಾಂಬೂಲ್ : ತುರ್ಕಿದೇಶ	ನಗರ ಪರಿಚಯ	'ರಮಾರಮಣ'	
೫೬೬			ಚಳವಳಿ ಮತ್ತು ದಬ್ಬಾಳಿಕೆ	ರಾಜಕೀಯ ವಿಶ್ಲೇಷಣೆ	ಪಾ.ವೆಂ.	
೫೬೭			ದ್ರೋಣಾಚಾರ್ಯರೊಡನೆ ಇಂಟರ್‌ವ್ಯೂ	ಹರಟೆ	ಲಾಂಗೂಲಾಚಾರ್ಯ	
೫೬೮			ಸೈಪ್ರಸ್ಸನಲ್ಲಿ ಮದುವೆ	ಘಟನಾತ್ಮಕ ವಿಸ್ಮಯ	'ಮುರಳೀಧರ'	ಸ್ತ್ರೀಯರಿಗೆ ಹೆಚ್ಚು ಮಹತ್ವ
೫೬೯			ಸಮುದ್ರ ಯಾರಿಗೆ ಸೇರಿದ್ದು?	ಭೌಗೋಳಿಕ ರಾಜಕೀಯ ವಿಶ್ಲೇಷಣೆ	'ರಾಧಾಕೃಷ್ಣರಾವ್'	
	೧೯೭೪	ಜುಲೈ-೨೧೫				
೫೭೦			ವಿಲಿ ಬ್ರಾಂಟ್	ವ್ಯಕ್ತಿ ಪರಿಚಯ	'ರಮಾರಮಣ'	
	೧೯೭೪	ಆಗಸ್ಟ್-೨೧೬				
೫೭೧			ಡಾನ್ ಕ್ವಿಕ್ಸೋಟ್‌ನ ಜನಕ ಸರಾಂಟೀಸ	ಸಾಹಿತಿ, ಕೃತಿ ಪರಿಚಯ	ರಾಧಾಕೃಷ್ಣರಾವ್	ಜಗತ್ತಿನ ಜನಪ್ರಿಯ ಕೃತಿ ರಚನೆ
೫೭೨			ಪರಮಾಣು ಬಾಂಬನ್ನು ಯಾರೂ ಮಾಡಬಹುದೆ?	ತಂತ್ರಜ್ಞಾನ ಮಾಹಿತಿ	'ಮುರಳೀದರ'	
	೧೯೭೪	ಸೆಪ್ಟೆಂಬರ್-೨೧೭				
೫೭೩			ಸುಗ್ರೀವಾಜ್ಞೆಗಳು : ಹಾಲು ಬೆಲ್ಲ ಬಿಟ್ಟು ಕಣ್ಣೀರು ಹಾಕುವುದು.	ರಾಜಕೀಯವಿಶ್ಲೇಷಣೆ	'ವಿಚಾರಿ'	
೫೭೪			ಆಗಲಿಲ್ಲ ಬಾವಲಿ ಯುದ್ಧ	ಪ್ರಕೃತಿ ವೈಚಿತ್ರ್ಯ	'ರಾಧಾಕೃಷ್ಣರಾವ್'	
೫೭೫			ಮತ್ಸ್ಯಯುದ್ಧದ ಮೋಜು	ಪ್ರಕೃತಿ ವೈಚಿತ್ರ್ಯ	'ಮುರಳೀದರ'	
	೧೯೭೪	ಅಕ್ಟೋಬರ್-೨೧೮				
			ಗಾಂಧೀಜಿ ಇನ್ನೂ ಬದುಕಿದ್ದಾರೆ	ಹರಟೆ	ಲಾಂಗೂಲಾಚಾರ್ಯ	
೫೭೬			ಭಾರತದಲ್ಲಿ ಜನಸಂಖ್ಯಾ ಸ್ಫೋಟ	ಆರ್ಥಿಕ ವಿವೇಚನೆ	'ವಿಚಾರಿ'	
	೧೯೭೪	ನವೆಂಬರ್-೨೧೯				
೫೭೭			ಮಧುಮೇಹ ಮತ್ತು ಆಯುರ್ವೇದ	ಆರೋಗ್ಯ	'ಸಂಪಾದಕರಿಂದ'	
೫೭೮			ಭಾರತದಲ್ಲಿ ಕಳ್ಳ ಸಾಗಾಟ	ಆರ್ಥಿಕ ವ್ಯವಹಾರ ಮಾಹಿತಿ	'ರಮಾರಮಣ'	

೫೭೯ ೫೮೦	೧೯೭೪ ೧೯೭೫ ೧೯೭೫	ಡಿಸೆಂಬರ್-೨೨೦ ಜನವರಿ -೨೨೧ ಪೆಬ್ರುವರಿ-೨೨೨	ಹೋಕುಸಾಯಿ : ಜಪಾನಿನ ವಿಕ್ಷಿಪ್ತ ಕಲಾವಿದ ಆಸ್ಪಿರಿನ್‌ನಿಂದ ಹೊಸ ಆಸೆ	ಪ್ರತಿಭಾ ಪರಿಚಯ ಆರೋಗ್ಯ ವಿಚಾರ	'ಮುರಳೀಧರ' 'ರಾಧಾಕೃಷ್ಣರಾವ್'	

೭. ಪರಾಮರ್ಶನ ಗ್ರಂಥಗಳು

೧. ಅನಂತಮೂರ್ತಿ ಯು.ಆರ್., ರುಜುವಾತು, ಸಂಚಿಕೆ ೯, ಜನವರಿ–ಮಾರ್ಚ ೧೯೮೩.

೨. ಕೇಶವಮೂರ್ತಿ ಎಚ್.ಎಲ್., ಕನ್ನಡದಲ್ಲಿ ವಿನೋದ ಸಾಹಿತ್ಯ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಳ್ಳಿಹಬ್ಬದ ಪ್ರಕಟಣೆ, ೧೯೮೯.

೩. ಗೋಪಾಲಕೃಷ್ಣ ಅಡಿಗರು, ಸಾಕ್ಷಿ, ಸಂಚಿಕೆ ೩೮, ಏಪ್ರಿಲ್ ೧೯೭೮.

೪. ಗೌರೀಶ ಕಾಯ್ಕಿಣಿ, ವಿಚಾರವಾದ (ಉಪನ್ಯಾಸ ಗ್ರಂಥಮಾಲೆ ೧೪), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.

೫. ಜನಾರ್ಧನ ಭಟ್ ಬಿ., ಕುಂಡಂತಾಯ ಕೆ. ಯಲ್., ನಾ. ಮೊಗಸಾಲೆ, ಕೊಪ್ಪರಿಗೆ, ಮೊಗಸಾಲೆ ಪ್ರಕಾಶನ, ಮಂಗಳೂರು ದ.ಕ., ೨೦೧೩.

೬. Burrow T., Emeneau M.B., Dravidian Etymological Dictionary, Oxford University, 1984.

೭. ನಂಜುಂಡಸ್ವಾಮಿ ಎಚ್.ಕೆ. ಮತ್ತು ರಾಜಗೋಪಾಲ ಎಚ್.ವೈ., ನಗೆಗನ್ನಡಂ ಗೆಲ್ಗೆ!, ಆಧುನಿಕ ಕನ್ನಡದಲ್ಲಿ ಹಾಸ್ಯ, ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಅಭಿನವ, ಬೆಂಗಳೂರು, ೨೦೦೭.

೮. ನರಸಿಂಹಮೂರ್ತಿ ಕೆ., ಸಮ್ಮುಕ ಸಾಹಿತ್ಯಿಕ ವಿವೇಚನೆಗಳು, ವಸಂತ ಪ್ರಕಾಶನ, ಬೆಂಗಳೂರು, ೨೦೦೨.

೯. ನಾಗೇಶ ಎಚ್.ವಿ., ಶ್ಯಾಮಸುಂದರ ಬಿದರಕುಂದಿ, ನಾಡಕರ್ಣಿ ಜೆ.ಡಿ., ಪ್ರಬಂಧ ಪ್ರಪಂಚ, ಧಾರವಾಡಕರ ರಾ.ಯ. ಸನ್ಮಾನ ಸಮಿತಿ, ಧಾರವಾಡ, ೧೯೯೦.

೧೦. ನಾಗರಾಜರಾವ ಎಚ್.ವಿ., ವೇದ–ವೇದಾಂಗ, ಪ್ರ. ಭವನದ ಗಾಂಧಿ ಕೇಂದ್ರ, ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪಾಠ, ಬೆಂಗಳೂರು, ೨೦೦೨

೧೧. ನಾಗಭೂಷಣ ಓ.ಎಲ್., ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು, ೧೯೮೩.

೧೨. ಪಾರ್ವತೀಶ, Some ಪದ, ಕನ್ನಡದಲ್ಲಿ ಅನ್ಯ ಭಾಷಾ ಪದಗಳ ಪ್ರವಾಸ ಕಥನ, ಚಾರು ಪ್ರಕಾಶನ, ೨೦೦೯.

೧೩. ಪ್ರಭುಶಂಕರ, ಮಂದಹಾಸ ಮೀಮಾಂಸೆ, ಸಮಗ್ರ ಲಲಿತ ಪ್ರಬಂಧ, ೨೦೦೨.

೧೪. ಪ್ರಸಂಗೋಚಿತ, ವಿಮರ್ಶ ಪ್ರಬಂಧಗಳ ಸಂಕಲನ, ಪ್ರಕಾಶನ ಸ್ವಾಗತ ಸಮಿತಿ, ೭೪ನೇಯ ಅ.ಭಾ.ಕ.ಸಾ.ಸ., ಉಡುಪಿ, ೨೦೦೭.

೧೫. ಮುರಳೀಧರ ಉಪಾಧ್ಯಾಯ, ಪೂರ್ಣಪ್ರಜ್ಞ ಸಂಜೆ ಕಾಲೇಜು ಮ್ಯಾಗಜಿನ್, ಹಿರಿಯಡ್ಕ–ಉಡುಪಿ, ೧೯೯೨–೯೩.

೧೬. ಮಿತ್ರ ಆ.ರಾ., ಮಿತ್ರಾವಲೋಕನ, ಸಂಕೀರ್ಣ ಬರಹಗಳು, ವಸಂತ ಪ್ರಕಾಶನ ಬೆಂಗಳೂರು, ೨೦೦೯.

೧೭. ಮುರಳೀಧರ ಉಪಾಧ್ಯಾಯ, ಮದಪ್ಪಯೆರಾವಂದಿ ತುಳುವೆರ್, ಎಸ್.ಯು. ಪಣಿಯಾಡಿ, ಕರ್ನಾಟಕ ತುಳು ಸಾಹಿತ್ಯ ಆಕಾಡೆಮಿ, ೧೯೯೬.

೧೮. ಮುರಳೀಧರ ಉಪಾಧ್ಯಾಯ, ಅನಕೇತನ, ಸಂ. ೧೨, ಸಂ. ೩, ಹಿರಿಯಡ್ಕ, ಉಡುಪಿ, ೨೦೦೧.

೧೯. ಮೂರ್ತಿರಾವ್ ಎ.ಎನ್., ವಿಮರ್ಶಾತ್ಮಕ ಪ್ರಬಂಧಗಳು, ಡಿ.ವಿ.ಕೆ. ಮೂರ್ತಿ ಮೈಸೂರು, ೧೯೭೦.

೨೦. ರಮಾಕಾಂತ ಜೋಶಿ, ಮಾಧವ ಕುಲಕರ್ಣಿ, ದ.ಬಾ. ಕುಲಕರ್ಣಿ ಸಮಗ್ರ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧.

೨೧. ರಂಗನಾಥರಾವ ಜಿ.ಎನ್., ಅನ್ಯೋನ್ಯ, ಸಾಹಿತ್ಯ ವಿಮರ್ಶೆಯ, ಬೆಂಗಳೂರು, ೨೦೦೮.

೨೨. ರಾಜಪುರೋಹಿತ ಬಿ.ವಿ., ಔದುಂಬರಗಾಥೆ: ದ.ರಾ. ಬೇಂದ್ರೆ, ಸಮಗ್ರ ಕಾವ್ಯನಿಘಂಟು, ವರಕವಿ ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆ, ೨೦೧೦.

೨೩. ರಾಘವ ನಂಬಿಯಾರ ಕೆ.ಎಂ., ದ್ರಾವಿಡ ನಾಡುನುಡಿ, ದ್ರಾವಿಡ ಭಾಷೆ ಸಂಸ್ಕೃತಿಗಳ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ೨೦೧೨.

೨೪. ರಾಮಚಂದ್ರದೇವ, ಮಾತುಕತೆ, ಕರ್ನಾಟಕ ಸಂಘ, ಪುತ್ತೂರು, ದ.ಕ., ೧೯೯೪-೯೭.

೨೫. ರಾಜೇಂದ್ರ ಡಿ.ಕೆ., ನಸುನಗೆಯ ಅಲೆಗಳು, ಲಲಿತ ಪ್ರಬಂಧಗಳ ಸಂಕಲನ, ಪ್ರ ಸಿರಾ ಪಬ್ಲಿಶಿಂಗ್ ಹೌಸ್, ಮೈಸೂರು, ೨೦೦೯.

೨೬. ಲೂಯಿ ರೈಸ್ ಸಂ., ಅಮರಸಿಂಹನ ಅಮರಕೋಶ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ೧೯೭೦.

೨೭. ವಿವೇಕರೈ ಬಿ.ಎ., ತುಳುಸಾಹಿತ್ಯ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೮. ಸೇಡಿಯಾಪು ಕೃಷ್ಣಭಟ್, ನಾರಾಯಣ ಪಿ.ಕೆ., ಕಯ್ಯಾರು ಕಿಂಞಣ್ಣರೈ, ಕೆ. ಶ್ರೀನಿವಾಸ ಶರ್ಮ (ಸಂ.), ತೆಂಕಣನಾಡು, ಸ್ವಾಗತ ಸಮಿತಿ, ೩೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು, ದ.ಕ. ೧೯೪೭.

೨೯. ಸುಜನಾ-ಬನ್ನಂಜೆ, ಗೋ.ಆಚಾರ್ಯ-ಪಾ.ವೆಂ. ಆಚಾರ್ಯ (ಲೇ), ಜ್ಞಾನಪೀಠ ಪ್ರಶಸ್ತಿ ವಿಜೇತ, ಕುವೆಂಪು-ಬೇಂದ್ರೆ-ಕಾರಂತ ಕೃತಿ ಪರಿಚಯ, ರಾ.ಗೋ.ಪೈ. ಸಂ.ಕೇಂದ್ರ ಉಡುಪಿ, ೧೯೮೦.


೩೦. ಸುಗುಣಮಾಲ, ಸುಗುಣ ಪ್ರೆಸ್, ಉಡುಪಿ, ಪೆಬ್ರವರಿ ೧೯೮೬.

೩೧. ಶಿವಾನಂದ ಜೋಶಿ, 'ಪ್ರಪಂಚದ ಪಾಪು' 'ಕಸ್ತೂರಿಯ ಪಾವೆಂ', ಚಿಂತನ ಪ್ರಕಾಶನ, ಹುಬ್ಬಳ್ಳಿ, ವ. ೨೦೧೦.

೩೨. ಶ್ರೀನಿವಾಸ ಹಾವನೂರ, ಪತ್ರಕರ್ತರ ಆಚಾರ್ಯ ಪಾ.ವೆಂ., ಕಾಂತಾವರ ಕನ್ನಡ ಸಂಘ, ದ.ಕ. ಜಿಲ್ಲೆ, ವ. ೨೦೦೮.



ತರುಣ ವಯದ ಪಾ.ವೆಂ.
ಗುರು ಎಸ್.ಯು. ಪಣಿಯಾಡಿಯೊಡನೆ



ಪ್ರೊ. ಗೋಪಾಲಕೃಷ್ಣ ಅಡಿಗ ಹಾಗೂ ಜಿ.ಟಿ. ನಾರಾಯಣ ರಾಯರೊಡನೆ
ಪಾ.ವೆಂ. ದಂಪತಿಗಳು



ಪಾ.ವೆಂ. ಆಚಾರ್ಯ ಮತ್ತು ಶ್ರೀಮತಿ ಲಕ್ಷ್ಮೀಬಾಯಿ



ಬರೆವಣಿಗೆಯಲ್ಲಿ ಮಗ್ನರಾಗಿರುವ ಪಾ.ವೆಂ.



ಮುಂಬೈಗೆ ಗೊಯೆಂಕಾ ಪ್ರಶಸ್ತಿ (೧೯೮೨) ಸ್ವೀಕರಿಸಲು
ಹೊರಟಾಗ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಮಿತ್ರ ಕೆ.ವಿ. ಪೈ ಯವರು
ಅಭಿನಂದಿಸುತ್ತಿರುವುದು